ಸಮಗ್ರ ನೋಟ



ಬಿ.ಜೆ. ಬಣಕಾರ

ಸಮಗ್ರ ನೋಟ

ಜನಪ್ರಿಯ ಮಾಲೆ

ಸಮಗ್ರ ನೋಟ

ಆಡಳಿತಾಂಗ, ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ
ಕುರಿತ ಚಿಂತನಪರ ಲೇಖನಗಳು

ಬಿ.ಜಿ. ಬಣಕಾರ

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು - ೫೬೦ ೦೧೮

SAMAGRA NOTA

A Collection of Articles on Administration, Legislation, Executive and Judiciary

Writer

B.G. Banakar, B.A., LL.B., Advocate.
Ex-Minister, Government of Karnataka
Ex-Speaker, Karnataka Legislative Assembly
Hirekerur - 581 111.
Haveri Dist.
Phone : 08376 - 22500

Publisher

Administrative Officer
Kannada Pustaka Pradhikara
Kannada Book Authority
Chamarajapet, Bangalore - 560 018

First Impression : 2003

Pages : xvi + 580
Price : 200/-

ISBN No. 181-7713-151-6

Printed at :
Sathyasri Printers Pvt. Ltd.,
164 5th Main, Chamarajapet
Bangalore - 560 018. **Phone : 6525 736**

ಅಕ್ಷರಸೂರ್ಯನಿಗೆ ನಮನ

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ
ಅಧ್ಯಕ್ಷರು

ಕನ್ನಡ ಪುಸ್ತಕ ಪ್ರಾಧಿಕಾರವು ನಾಡಿನ ಎಲ್ಲ ಬಗೆಯ ಜ್ಞಾನಸಂಪತ್ತನ್ನು ಉಳಿಸಿ ಬೆಳೆಸುವ ತುಂಬು ಹಂಬಲವನ್ನು ಹೊತ್ತಿದೆ. ಇದು ಒಂದು ಬಗೆಯಲ್ಲಿ ಲೇಖಕ, ಪ್ರಕಾಶಕ, ಓದುಗ ಈ ಮೂವರ ಜತೆ ಸುಸಂಬದ್ಧವಾದ ಅಂತರ್ ಜಾಲವನ್ನು ಪೋಷಿಸುವ ಸಾಂಸ್ಕೃತಿಕ ಚೈತನ್ಯದ ಸಂಸ್ಥೆಯಾಗಿದೆ. ನಮ್ಮ ನಾಡಿನ ಜ್ಞಾನಸಂಪತ್ತು ಅಕ್ಷಯವಾದುದು. ನಾವು ಬಗೆದಷ್ಟು ಮುಗಿಯದ ತವನಿಧಿ. ಈ ನಿಧಿಯ ರಕ್ಷಣೆ ಪಾಲನೆ ಮತ್ತು ಪೋಷಣೆ ಎಂದೆಂದೂ ನಮಗೆ ಬೇಕು. ಅಕ್ಷರನಿಧಿಯು ಎಂದೆಂದೂ ಅಳಿಯುವುದಿಲ್ಲ. ಈ ನಿಧಿಗೆ ಒಡೆಯರಾದವರು ನಮ್ಮ ಓದುಗರು. ಪಾರಂಪರಿಕ ಜ್ಞಾನಕ್ಕೂ ಆಧುನಿಕ ಕಾಲದ ಜ್ಞಾನಕ್ಕೂ ಓದುಗರೇ ವಾರಸುದಾರರು. ಈ ವಾರಸುದಾರರಿಗೆ ನಿಧಿಯ ಮೌಲ್ಯವನ್ನೂ, ಮಹತ್ವವನ್ನೂ ತೆರೆದು ತೋರಿಸುವುದು ಪುಸ್ತಕ ಪ್ರಾಧಿಕಾರದ ಕರ್ತವ್ಯಗಳಲ್ಲಿ ಒಂದೆಂದು ನಾನು ತಿಳಿದಿದ್ದೇನೆ. ನಮ್ಮ ಕರ್ತವ್ಯವನ್ನು ನಾವು ಮಾಡುವುದು ಬೇಡವೇ? ಕರ್ತವ್ಯಕ್ಕೆ ಹಲವು ದಾರಿಗಳಿವೆ. ಕೇವಲ ಪ್ರಕಟಣೆ ಮಾತ್ರ ನಮ್ಮ ಏಕೋದ್ದೇಶ್ಯವಲ್ಲ. ಪ್ರಕಟಣೆಯ ಜೊತೆಗೆ ಅಕ್ಷರ ಸಂಸ್ಕೃತಿ ದೀಪಗಳನ್ನು ಕತ್ತಲೆಯ ಮೂಲೆಮುಡುಕುಗಳಲ್ಲಿ ಇಡುವುದು ನಮ್ಮ ಕರ್ತವ್ಯದ ಭಾಗವೇ ಆಗಿದೆ. ಪ್ರತಿಯೊಂದು ತಾಲ್ಲೂಕುಗಳನ್ನು ಇಂಥ ದೀಪಗಳಿಂದ ಬೆಳಗಿಸಬೇಕಾಗಿದೆ. ನಗರ, ಪಟ್ಟಣ ಪ್ರದೇಶಗಳು ಅಕ್ಷರ ಬೆಳಕಿನಿಂದ ಬೆಳಗಿವೆ. ಆದರೆ, ದೂರ ದೂರದ ಕತ್ತಲೆಯ ಜಾಗಗಳೂ ಅಜ್ಞಾತ ವಲಯಗಳೂ ಬೆಳಗುವುದು ಪ್ರಜಾಪ್ರಭುತ್ವದ ಕಾಲದಲ್ಲಿ ಅತಿಮುಖ್ಯವಲ್ಲವೆ? ಈಗ ನಮ್ಮೆಲ್ಲರ ಕಣ್ಣು ಮತ್ತು ಮನಸ್ಸು ಗ್ರಾಮ ಗ್ರಾಮಾಂತರಗಳಿಗೂ ತಾಲ್ಲೂಕು ತಾಲ್ಲೂಕಾಂತರಗಳ ಕಡೆಗೂ ಚಾಚಬೇಕಾಗಿದೆ. ಅಲ್ಲಿರುವ ಸಹಸ್ರಾರು ಜ್ಞಾನದಾಹಿಗಳ ಮನಸ್ಸನ್ನು ತಿಳಿಯಾಗಿಸುವ, ಅಕ್ಷರ ಲೋಕಕ್ಕೆ ಕರೆದೊಯ್ಯುವ ಕೆಲಸ ಮಾಡಬೇಕಾಗಿದೆ. ಇದಕ್ಕಾಗಿ ಪುಸ್ತಕ ಪ್ರಕಟಣೆಯ ಜತೆಗೆ, ಪುಸ್ತಕ ಮೇಳ, ಪುಸ್ತಕ ಜಾತ್ರೆ ಆಗುವುದು ಅಗತ್ಯ. ಇದು ನೆರವೇರಿದಾಗ ಕನ್ನಡ ಪುಸ್ತಕ ಪ್ರಾಧಿಕಾರ ಎಂಬ ಮಾತಿಗೆ ಬೆಲೆ ಬರುತ್ತದೆ, ಅದಕ್ಕೊಂದು ಸಾಂಸ್ಕೃತಿಕ ಮೌಲ್ಯ ಪ್ರಾಪ್ತವಾಗುತ್ತದೆಂಬ ನಂಬುಗೆ ನನ್ನದು.

ಜ್ಞಾನದ ಹಂಬಲ ಪ್ರತಿಯೊಬ್ಬರಿಗೂ ಉಂಟು. ಈ ಜ್ಞಾನವು ಹಲವು ರೂಪಗಳಲ್ಲಿ ತೋರುತ್ತದೆ. 'ಜ್ಞಾನದ ಬಲದಿಂದ ಅಜ್ಞಾನದ ಕೇಡು' ಎಂದು ಬಸವಣ್ಣನವರು ಹೇಳಿದ್ದುಂಟು.

ಇದು ಆಧುನಿಕ ಜ್ಞಾನಕ್ಕೂ ಅವಲಂಬಿಸುತ್ತದೆ. ಇಪ್ಪತ್ತನೆಯ ಶತಮಾನ ಕಳೆದು ಹೊಸ ಸಹಸ್ರಮಾನದಲ್ಲಿರುವ ನಮಗೆ ಹಲವು ಬಗೆಯ ತೊಡಕುಗಳು ಮತ್ತು ಸಂಕಟಗಳು ಉಂಟು. ಒಂದು ಕಡೆ ಇಪ್ಪತ್ತನೆಯ ಶತಮಾನ ಸಾಹಿತ್ಯಕವಾಗಿ ಸಮೃದ್ಧವಾದ ಕಾಲವೇನೋ ನಿಜ. ಮೂಲಜ್ಞಾನದ ಬೇರುಗಳು ಹೊರಹೊಮ್ಮಿ ಹಲವು ಬಗೆಯ ವೈವಿಧ್ಯಗಳಿಂದ ವಿರಾಜಮಾನದ ಕಾಲವೂ ಆಗಿದೆ. ಸಾಹಿತ್ಯಕವಾಗಿ ಎಷ್ಟು ಸಮೃದ್ಧವೋ ಸಾಂಸ್ಕೃತಿಕವಾಗಿಯೂ ಅಷ್ಟೇ ಬಗೆಯ ವಾಗ್ವಾದ ಮತ್ತು ಸಂವಾದಗಳಿಂದ ಕೂಡಿದ ಕಾಲವಾಗಿದೆ. ಅನೇಕ ತಳವರ್ಗದ ಜನಸ್ಥಾನಗಳು ಮೊದಲ ಬಾರಿಗೆ ಅಕ್ಷರ ಸೂರ್ಯನಿಗೆ ನಮಸ್ಕರಿಸಿದ್ದುಂಟಷ್ಟೆ. ಜ್ಞಾನಾರ್ಜನೆ ಎಂಬುದು ಒಂದು ಶೈಕ್ಷಣಿಕ ಶಿಸ್ತಾಗಿದೆ. ಆದರೆ, ಇದು ಸಮಾಜದ ಅವಿರತ ಹಾಗೂ ಸದಾಕಾಲ ಹಂಬಲಿಸುವ ಆಶಯ ಆಗಬೇಕು. ಆ ಆಶಯ, ಹಂಬಲ ಹಲವು ಬಗೆಯ ಸಂಕೇತಗಳಲ್ಲೊ, ರೂಪಕಗಳಲ್ಲೊ ಕಾಣಿಸುತ್ತದೆ. ಪಾರಂಪರಿಕ ಜ್ಞಾನ ಮತ್ತು ಆಧುನಿಕ ಜ್ಞಾನ ಇವೆರಡು ಬೇರುಗಳನ್ನು ಕಸಿ ಹಾಕುವ ಅಗತ್ಯ ನಮ್ಮ ಮುಂದಿದೆ. ಪಾರಂಪರಿಕ ಜ್ಞಾನವು ಕೇವಲ ಸಾಹಿತ್ಯಕ ಸಮೃದ್ಧತೆಯ ಕಡೆಗೆ ಮಾತ್ರ ಬೊಟ್ಟು ಮಾಡಿ ತೋರಿಸುತ್ತಿದೆಯೆಂದು ನಾವು ತಿಳಿಯುವಂತಿಲ್ಲ. ಸಮಾಜ - ಸಮುದಾಯಗಳಿಗೆ ಬೇಕಾದ ಹಲವು ಬಗೆಯ ಜ್ಞಾನದ ಕೌಶಲ್ಯಗಳು ನಮ್ಮಲ್ಲಿ ಹಿಂದೆ ಇದ್ದವು. 1820ರಲ್ಲಿ ಅತ್ಯುತ್ತಮ ತಾಂತ್ರಿಕ ಜ್ಞಾನ ನಮ್ಮಲ್ಲಿದ್ದುದನ್ನು ಹೇಗೋ ಈಗ ಉಳಿದುಕೊಂಡಿರುವ ವಿಲಿಯಂ ಆ್ಯಡಂ ವರದಿಗಳು ತಿಳಿಸುತ್ತವೆ. ಆದರೆ, ನಾವಿಂದು ಈ ಬಗೆಯ ಸ್ಮೃತಿಗಳಿಂದ ಹೊರಗುಳಿದಿದ್ದೇವೆ. ನಮ್ಮ ನಮ್ಮ ಸಂಸ್ಕೃತಿ ಸಮುದಾಯಗಳು ಪಡೆದಿರುವ ಜ್ಞಾನ ಕೌಶಲ್ಯ, ಜ್ಞಾನ ಸಂಪತ್ತನ್ನು - ಈ ಕಾಲದ ಅಗತ್ಯಗಳಿಗೆ ತಕ್ಕಂತೆ ಮರುಜೋಡಣೆ ಮಾಡುವ ಅಗತ್ಯವಿದೆ. ಇಲ್ಲದೆ ಹೋದರೆ ಕಳೆದುಹೋದ ಕಾಲವು ನಿರ್ವಾತವಾಗಿತ್ತೆಂದೂ ಬರುವ ಕಾಲ ಈ ನಿರ್ವಾತವನ್ನು ತುಂಬುವ ಹಂಬಲವನ್ನು ಹೊತ್ತಿರುವುದೆಂದೂ ತಿಳಿಯುವ ಕ್ಲೈಬ್ಯದಲ್ಲಿ ನಾವು ಮುಳುಗಬೇಕಾಗುತ್ತದೆ! ಈ ಅಜ್ಞಾನದಿಂದ ನಾವು ಎಚ್ಚರಗೊಳ್ಳಬೇಕಾಗಿದೆ. ಹೀಗೆ ಎಚ್ಚರಿಸುವ ಕಾರ್ಯವನ್ನು ನಾಡಿನ ಹಲವಾರು ಸಾಂಸ್ಕೃತಿಕ ಸಂಸ್ಥೆಗಳು ಮಾಡುತ್ತಿವೆ. ಆದರೆ, ಕನ್ನಡ ಪುಸ್ತಕ ಪ್ರಾಧಿಕಾರವು ತನ್ನದೇ ಆದ ಕೆಲವು ನಿರ್ದಿಷ್ಟ ಯೋಜನೆ ಮತ್ತು ಪ್ರಕಟಣ ನೀತಿಸಂಹಿತೆಯಿಂದ ಹೊಸ ಆಕಾರವನ್ನು ಪಡೆಯುವ ಹಂಬಲವನ್ನು ಹೊತ್ತಿದೆ.

ಈ ಹಿನ್ನೆಲೆಯಲ್ಲಿ ಹಲವು ಬಗೆಯ ಮಾಲೆಗಳನ್ನು ಹಿಂದಿನ ವರ್ಷಗಳಿಂದ ಕನ್ನಡ ಪುಸ್ತಕ ಪ್ರಾಧಿಕಾರವು ನಡೆಸಿಕೊಂಡು ಬರುತ್ತಿದೆ. ಹೊಸ ಹೊಸ ಮಾಲೆಗಳು ಈಗೀಗ ಅಸ್ತಿತ್ವಕ್ಕೆ ಬರುತ್ತಿವೆ. ಈ ಮಾಲೆಗಳಲ್ಲಿ ಜನಪ್ರಿಯ ಮಾಲೆಯೂ ಒಂದು. ನಮ್ಮ ಹೊಸ ಓದು, ಹೊಸ ನುಡಿಗಟ್ಟು, ಹೊಸ ಸಂವೇದನೆಗಳು ಸಹಸ್ರಮಾನದ ಉದಯಕ್ಕೆ ಸಜ್ಜುಗೊಳ್ಳುವ ಅಗತ್ಯವಿದೆಯೆಂದು ಪುಸ್ತಕ ಪ್ರಾಧಿಕಾರವು ತಿಳಿಯುತ್ತದೆ.

ಹಿರಿಯರಾದ ಶ್ರೀ ಬಿ.ಜಿ. ಬಣಕಾರ ಅವರ ಆಯ್ದ ಲೇಖನಗಳ ಒಂದು ಸಂಪುಟವನ್ನು ಓದುಗರಿಗೆ ಕೊಡ ಮಾಡುತ್ತಿದ್ದೇವೆ. ಈ ಪುಸ್ತಕವು ಕರ್ನಾಟಕ ಅಭಿವೃದ್ಧಿ ಮೀಮಾಂಸೆಯನ್ನು ಕುರಿತಿದೆ. ಕರ್ನಾಟಕವು ಕೇವಲ ಬರಡು ನೆಲ ಅಲ್ಲ. ಈ ನೆಲಕ್ಕೆ ಸಹಸ್ರಾರು ವರ್ಷಗಳ ಸಾಂಸ್ಕೃತಿಕ ನೆಲೆ ಇದೆ. ಈ ನೆಲೆಯ ಮೇಲೆ ಅಭಿವೃದ್ಧಿ ಕರ್ನಾಟಕ ನಿಂತಿದೆ. ಈ ಕರ್ನಾಟಕವು ಸ್ವಾತಂತ್ರ್ಯ ಪೂರ್ವದಲ್ಲಿ ಪಡೆದ ಅಸ್ವಾತಂತ್ರ್ಯಕ ನೆಲೆಗಳಿಗೂ ಸ್ವಾತಂತ್ರ್ಯನಂತರ ಪಡೆದ ಸ್ವಾತಂತ್ರ್ಯಕ ನೆಲೆಗಳಿಗೂ ಎಷ್ಟೋ ಬದಲಾವಣೆಗಳನ್ನು ಪಡೆದಿದೆ. ಈ ಬದಲಾವಣೆಗಳು ಅಭಿವೃದ್ಧಿಗೆ ಪೂರಕವೊ ಅಥವ ಅಭಿವೃದ್ಧಿಗೆ ತಕ್ಕ ನೆಲೆಯನ್ನು ಹುಡುಕಿಕೊಳ್ಳುವ ತವಕದಲ್ಲಿದೆಯೊ ಎಂಬುದು ಮುಖ್ಯ ಪ್ರಶ್ನೆಯಾಗಿದೆ.

'ಸಮಗ್ರನೋಟ' ಎಂಬ ಹೆಸರಿನ ಈ ಪುಸ್ತಕದ ಆಶಯವು ಶಾಸಕಾಂಗ, ನ್ಯಾಯಾಂಗ, ಕಾರ್ಯಾಂಗ, ಆಡಳಿತಾಂಗ ಎಂಬ ಚತುರ್ಮುಖ ನೆಲೆಗಳಲ್ಲಿ ಅಡಕಗೊಂಡಿದೆ. ಆಡಳಿತಾಂಗ, ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳ ಕ್ರಿಯಾಕಲಾಪಗಳನ್ನು ಅದು ಸಾಗಬೇಕಾದ ದಾರಿಗಳನ್ನು ಕುರಿತು ಆಳವಾಗಿ ಚಿಂತಿಸುತ್ತದೆ. ಈ ಬಗೆಯ ಪುಸ್ತಕ ಕನ್ನಡದಲ್ಲಿ ಅಪರೂಪ. ಈ ಕೃತಿಯು ಕರ್ನಾಟಕ ಅಭಿವೃದ್ಧಿ ಹಿತಚಿಂತನೆ ಮತ್ತು ಅಭಿವೃದ್ಧಿ ಮೀಮಾಂಸೆಯ ಗತಿತರ್ಕವನ್ನು ಸೂಕ್ಷ್ಮವಾಗಿ ಕನ್ನಡಿ ಹಿಡಿಯುತ್ತದೆ. ನಾಡು ಮುಂದುವರೆದು ಏಳ್ಗೆ ಹೊಂದಬೇಕಾದರೆ ಈ ಬಗೆಯ ಬರೆಹಗಳನ್ನು ಎಲ್ಲ ಬಗೆಯ ಜನರು ಓದಬೇಕಾದದ್ದು ಅಗತ್ಯ. ನಮ್ಮ ಜನದ ಕಣ್ಣಿಗೆ ಇದು ಬೀಳಲಿ. ನಾಡು ಅಭಿವೃದ್ಧಿ ಹೊಂದಲೆಂಬ ಸದಾಶಯ ಹಿರಿಯರಾದ ಶ್ರೀ ಬಿ.ಜಿ. ಬಣಕಾರ ಅವರ ಪ್ರಧಾನೋದ್ದೇಶವಾಗಿದೆ. ಈ ಪುಸ್ತಕವನ್ನು ಪ್ರಾಧಿಕಾರದ ಮೂಲಕ ಪ್ರಕಟಿಸಲು ಒಪ್ಪಿಗೆ ನೀಡಿದ ಆ ಹಿರಿಯರಿಗೂ ನನ್ನೊಡನೆ ಒತ್ತಾಸೆಯಾಗಿ ನಿಂತಿರುವ ಸದಸ್ಯರಿಗೂ ಪುಸ್ತಕವನ್ನು ಅಂದವಾಗಿ ಮುದ್ರಿಸಿಕೊಟ್ಟ ಮುದ್ರಕ ಗೆಳೆಯರಿಗೂ ಪ್ರಾಧಿಕಾರದ ಕೃತಜ್ಞತೆಗಳು ಸಲ್ಲುತ್ತವೆ.

**

ಲೇಖಕನ ಮಾತು

ವಿದ್ಯಾರ್ಥಿಯಾಗಿದ್ದಾಗಲೆ ಲೇಖನ, ಕವನ ಬರೆಯುವ ಹವ್ಯಾಸನನಗಿತ್ತು. ಕೆಲವು ಕವನಗಳು ಬೆಳಗಾವಿ ಆರ್.ಎಲ್.ಲಾ, ಕಾಲೇಜಿನಲ್ಲಿದ್ದಾಗಲೇ ಪ್ರಜಾಮತ ಪತ್ರಿಕೆಯಲ್ಲಿ ಪ್ರಕಟಗೊಂಡಿದ್ದವು. ಕರ್ನಾಟಕ ಕಾಲೇಜು, ಕೆ.ಇ. ಬೋರ್ಡ್ ಕಾಲೇಜು, ಆರ್.ಎಲ್.ಲಾ, ಕಾಲೇಜುಗಳಲ್ಲಿ ಅಭ್ಯಾಸ ಮಾಡುತ್ತಿರುವಾಗಲಿ ಕನ್ನಡ ಕರ್ನಾಟಕ ಸಾಹಿತ್ಯ ಸಂಘ, ಸಾಮಾಜಿಕ ಸಂಘ, ವಿದ್ಯಾರ್ಥಿ ಸಾಹಿತ್ಯ ಗೋಷ್ಠಿ, ರಾಷ್ಟ್ರೀಯ ವಿದ್ಯಾರ್ಥಿ ಒಕ್ಕೂಟ ಇತ್ಯಾದಿ ಸಂಘಟನೆಗಳಲ್ಲಿ ಪದಾಧಿಕಾರಿಯಾಗಿ ವಿದ್ಯಾರ್ಥಿ ಮುಖಂಡನಾಗಿ ಕೆಲಸ ಮಾಡುವ ಅವಕಾಶವು ದೊರಕಿತ್ತು. ಕಲೆ ಹಾಗೂ ಕಾನೂನು ಪದವೀಧರನಾಗಿ ನನ್ನ ಗ್ರಾಮ ಚಿಕ್ಕೋಣತಿಗೆ ಬಂದು ವಕ್ಕಲುತನ ಹಾಗೂ ವಕೀಲಕಿ ಮಾಡುತ್ತಿರುವಾಗಲೇ 1956-59ರ ಅವಧಿಯಲ್ಲಿ ಚಿಕ್ಕೋಣತಿ - ಹಿರೇಕೋಣತಿ ಗ್ರಾಮ ಪಂಚಾಯತಿ, ಗ್ರಾಮ ಸಹಕಾರ ಸಂಘ, ಹಂಸಭಾವಿ ಮೃತ್ಯುಂಜಯ ವಿದ್ಯಾಪೀಠ, ಹಿರೇಕೆರೂರ ಬಾರ್ ಅಸೋಸಿಯೇಶನ್, ಹಿರೇಕೆರೂರ ಟಿ.ಎ.ಪಿ.ಸಿ.ಎಂ.ಎಸ್. ಇತ್ಯಾದಿ ಸಂಸ್ಥೆಗಳ ಪದಾಧಿಕಾರಿಯಾಗುವ ಅವಕಾಶವನ್ನು ಅಲ್ಲಿಯ ಮುಖಂಡರು ನನಗೆ ಮಾಡಿಕೊಟ್ಟು ಸಾರ್ವಜನಿಕ ಕ್ಷೇತ್ರದಲ್ಲಿ ಸೇವೆಮಾಡಲು ಅವಕಾಶ ಮಾಡಿಕೊಟ್ಟಿದ್ದರು. ಈ ಅವಕಾಶಗಳೊಂದಿಗೆ 1964ರ ಹೊತ್ತಿಗೆ ಕರ್ನಾಟಕ ರಾಜ್ಯ ಪಂಚಾಯತ್ ಪರಿಷತ್ ಉಪಾಧ್ಯಕ್ಷನಾಗಿ, ಕರ್ನಾಟಕ ರಾಜ್ಯ ಸಹಕಾರಿ ಮಾರಾಟ ಮಹಾ ಮಂಡಳಿ ಉಪಾಧ್ಯಕ್ಷನಾಗಿ ಇನ್ನೂ ಅನೇಕ ಸಂಘ ಸಂಸ್ಥೆಗಳ ಪದಾಧಿಕಾರಿಯಾಗಿ ಕಾರ್ಯನಿರ್ವಹಿಸುವ ಸುಯೋಗ ದೊರಕಿತ್ತು. ಈ ಹಿನ್ನೆಲೆಯಲ್ಲಿ 1964 ರಿಂದ 1972ರಲ್ಲಿ ನಾನು ಕರ್ನಾಟಕ ವಿಧಾನ ಸಭೆಯ ಸದಸ್ಯನಾಗುವವರೆಗೆ ನನ್ನ ವ್ಯವಸಾಯ, ವಕೀಲಿ ಹಾಗೂ ಸಾರ್ವಜನಿಕ ಸೇವೆಯೊಂದಿಗೆ ಪಂಚಾಯತಿರಾಜ್, ಸಹಕಾರ, ಪ್ರಜಾತಂತ್ರ ವ್ಯವಸ್ಥೆ, ಕನ್ನಡಿಗರು, ಬರಗಾಲ, ಆಹಾರ, ಗಡಿರಕ್ಷಣೆ, ಅಧಿಕಾರದ ವಿಕೇಂದ್ರೀಕರಣ, ಶಿಕ್ಷಣ, ಆರ್ಥಿಕ - ಸಾಮಾಜಿಕ ಕ್ಷೇತ್ರ, ವ್ಯವಸಾಯ, ಬಸ್ ರಾಷ್ಟ್ರೀಕರಣ, ಮಾರಾಟ ವ್ಯವಸ್ಥೆ, ಆರ್ಬಿಟ್ರೇಟರ್, ಪತ್ರಿಕೆಗಳು, ಮಹಾಜನ ವರದಿ ಪೊಲೀಸರ ಕರ್ತವ್ಯ, ಸಹಕಾರಿ ಬ್ಯಾಂಕುಗಳು, ನ್ಯಾಯಾಂಗ, ಭೂಸುಧಾರಣೆ ಇತ್ಯಾದಿ ವಿಷಯಗಳ ಬಗ್ಗೆ ಹಲವಾರು ಲೇಖನಗಳನ್ನು ಬರೆದು ಅವೆಲ್ಲಾ ಪ್ರಪಂಚ, ಸಹಕಾರ ಪತ್ರಿಕೆ, ವಿಶ್ವವಾಣಿ, ವಿಶಾಲ ಕರ್ನಾಟಕ, ಸಂಯುಕ್ತ ಕರ್ನಾಟಕ, ಚಿತ್ರಗುಪ್ತ, ಉಣ್ಣೆ ಉದ್ಯೋಗ, ಕನ್ನಡ ಪ್ರಭ, ಜನಮತ, ನಂದಾದೀಪ, ವ್ಯವಸಾಯ ಪತ್ರಿಕೆಗಳಲ್ಲಿ ಪ್ರಕಟವಾದವು. 1972 ರಿಂದ 1989ರ ವರೆಗೆ ಲೇಖನಗಳನ್ನು ಬರೆಯಲು ನನಗೆ ಬಿಡುವು ಅವಕಾಶವಿಲ್ಲದ್ದರಿಂದ ಮುಂದೆ 1991 ರಿಂಧ ಈ ಪುಸ್ತಕ

ಪ್ರಕಟಗೊಳ್ಳುವ ವರೆಗೆ ಲೇಖನಗಳನ್ನು ಬರೆಯುವುದನ್ನು ಮುಂದುವರೆಸಿ, 1957 - 1959 ರಿಂದ ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಯಾಗಿ, ಶಾಸಕನಾಗಿ, ಮಂತ್ರಿಯಾಗಿ, ಕರ್ನಾಟಕ ವಿಧಾನ ಸಭೆಯ ಅಧ್ಯಕ್ಷನಾಗಿ ಹೀಗೆ ಪಂಚಾಯತಿ ಅಧ್ಯಕ್ಷ ಸ್ಥಾನದಿಂದ ವಿಧಾನ ಸಭೆಯ ಅಧ್ಯಕ್ಷ ಸ್ಥಾನದವರೆಗೆ 5 ಸಂಸ್ಥೆಗಳ ಪ್ರಮೋಟರರಾಗಿ, ಗೌರವ ಅರ್ಬಿಟ್ರೇಟರರಾಗಿ, ಕಾನೂನು ಸಲಹೆಗಾರನಾಗಿ, 48 ಸಂಸ್ಥೆಗಳ ಕಮಿಟಿ ಸದಸ್ಯನಾಗಿ, 10 ಸಂಸ್ಥೆಗಳ ನಿರ್ದೇಶಕನಾಗಿ, 3 ಸಂಸ್ಥೆಗಳ ಕೋಶಾಧ್ಯಕ್ಷನಾಗಿ, 9 ಸಂಸ್ಥೆಗಳ ಉಪಾಧ್ಯಕ್ಷನಾಗಿ, 55 ಸಂಸ್ಥೆಗಳ ಅಧ್ಯಕ್ಷನಾಗಿ ಕಾರ್ಯ ನಿರ್ವಹಣೆಯಲ್ಲಿ ಪಡೆದ ಅನುಭವದ ಹಾಗೂ ವಿವಿಧ ಮೂಲಗಳಿಂದ ಪಡೆದ ಅಧಿಕೃತ ಮಾಹಿತಿ ಅಂಕಿ ಸಂಖ್ಯೆಗಳ ಹಿನ್ನೆಲೆಯಲ್ಲಿ ಆಡಳಿತಾಂಗ, ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ, ಪತ್ರಿಕಾಂಗ, ಧಾರ್ಮಿಕ, ನೀರಾವರಿ, ಪರಿಶಿಷ್ಟ, ಮಹಿಳೆ ಮತ್ತು ಮಕ್ಕಳು, ಕೃಷಿ ಪಂಚಾಯತ್ ರಾಜ್, ಅಭಿವೃದ್ಧಿ, ಸಹಕಾರ, ಶಿಕ್ಷಣ, ಸಾಹಿತ್ಯ, ರಾಜಕಾರಣ, ಧರ್ಮಕಾರಣ, ಗಡಿನಾಡು ಭಾಷೆ, ಸ್ವಾತಂತ್ರ್ಯ, ಪ್ರಜಾತಂತ್ರ, ಸಾರ್ವಜನಿಕ ಹಿತಾಸಕ್ತಿ, ಇತ್ಯಾದಿ ವಿಷಯಗಳ ಬಗ್ಗೆ ಸುಮಾರು 500 ಲೇಖನಗಳನ್ನು ಬರೆದಿದ್ದು. ಅವೆಲ್ಲಾ ಒಂದಿಲ್ಲೊಂದು ಪತ್ರಿಕೆ ಸಂಯುಕ್ತ ಕರ್ನಾಟಕ, ಪ್ರಜಾವಾಣಿ, ಕನ್ನಡ ಪ್ರಭ, ಉದಯವಾಣಿ, ಜನವಾಣಿ, ಹೊಸದಿಗಂತ, ವಿಜಯ ಕರ್ನಾಟಕ, ಉತ್ತರ ಕರ್ನಾಟಕ, ವಿಶಾಲ ಕರ್ನಾಟಕ, ವಿಶ್ವವಾಣಿ, ಮೂಡಣ, ಹಸಿರು ಕ್ರಾಂತಿ, ಕನ್ನಡಮ್ಮ ಪ್ರಪಂಚ, ವಾರಪತ್ರಿಕೆ, ಜಾಗೃತವಾಣಿ, ಜ್ವಾಲಾಮುಖಿ, ಸಹಕಾರ, ಗೋಧೂಳಿ, ಸಂಜೆವಾಣಿ, ಜನತಾವಾಣಿ, ಸೊಗಡು, ಚಿತ್ರಗುಪ್ತ, ಜನಮತ, ನಂದಾದೀಪ, ವ್ಯವಸಾಯ ಪತ್ರಿಕೆ, ವಿಕ್ರಮ, ಕನ್ನಡಿಗ, ತರಂಗ, ವಾಣಿಜ್ಯ, ಸಮತೋಲನ, ಅರ್ಬನ್ ಬ್ಯಾಂಕ್ ವಾರ್ತಾಪತ್ರಿಕೆ, ನ್ಯಾಯವಾದಿ, ಪಂಚಾಯತ್ ರಾಜ್ ವಾರ್ತಾ ಪತ್ರಿಕೆ, ಶಾಸಕಾಂಗ ವಾರ್ತಾ ಪತ್ರಿಕೆ, ನಾಡಜ್ಯೋತಿ, ನ್ಯಾಯ ಪ್ರತಿಭೆ, ಬಸವಪದ, ಶಿಡ್ಲು, ಸರ್ವಜ್ಞ, ಜೀವನದಿ, ಉಣ್ಣೆ ಉದ್ಯೋಗ, ಸಹಕಾರ ಜ್ಯೋತಿ, ಬಿಜೆಪಿ ಸಮಾಚಾರ, ಸ್ವಯಂ ಪ್ರಭೆ, ಸಂಕ್ಷಿಪ್ತ ಸಮಾಚಾರ ಇತ್ಯಾದಿ ಸುಮಾರು 47 ಪತ್ರಿಕೆಗಳಲ್ಲಿ ಪ್ರಕಟವಾಗಿವೆ ಹಾಗೂ ಇಂದಿಗೂ ಪ್ರಕಟವಾಗುತ್ತಲಿವೆ. ಕೆಲವು ಪತ್ರಿಕೆಗಳು ನನ್ನ ಲೇಖನಗಳಿಗೆ ಗೌರವ - ಸಂಭಾವನೆಯನ್ನು ಕೂಡ ಕೊಟ್ಟಿದ್ದು ಆ ಎಲ್ಲಾ ಹಣವನ್ನು ನಾನು ಸ್ವಂತಕ್ಕೆ ಬಳಸದೆ ಪ್ರತಿಭೆ ಹಾಗೂ ಸೇವೆಗಾಗಿ ರಚಿತಗೊಂಡ "ಮಾಜಿ ವಿಧಾನ ಸಭಾಧ್ಯಕ್ಷ ಬಿ.ಜಿ. ಬಣಕಾರ ಪ್ರತಿಷ್ಠಾನ ಟ್ರಸ್ಟ್" ಗೆ ನೀಡಿದ್ದೇನೆ. ಈ ಎಲ್ಲ ಲೇಖನಗಳನ್ನು ಬರೆಯಲು ಓದಿ ಸದಭಿಪ್ರಾಯ ಮೆಚ್ಚುಗೆ ವ್ಯಕ್ತಪಡಿಸಿದ ಓದುಗರಿಗೆ ನಾನು ಕೃತಜ್ಞನಾಗಿದ್ದೇನೆ. ಪತ್ರಿಕೆಗಳ ಮೆಚ್ಚುಗೆ, ಸಾರ್ವಜನಿಕ ಹಾಗೂ ರಾಜಕೀಯ ಪ್ರಜಾ ಪ್ರತಿನಿಧಿಗಳ ಪ್ರಶಂಸೆ, ಪ್ರೋತ್ಸಾಹವೂ ಇನ್ನೊಂದು ಬಗೆಯಲ್ಲಿ ಕಾರಣವೆಂದು ಹೇಳಲು ನನಗೆ ಸಂತೋಷವಾಗುತ್ತದೆ.

ಬಹಳ ದಿನಗಳಿಂದ ನನ್ನ ಲೇಖನಗಳನ್ನು ಪುಸ್ತಕ ರೂಪದಲ್ಲಿ ಹೊರತಲು ಅನೇಕ ನನ್ನ ಸ್ನೇಹಿತರು ಸಾರ್ವಜನಿಕರು ನನ್ನನ್ನು ಕೋರುತ್ತಿರುವಾಗಲೇ "ನೂರು ಲೇಖಕರ ಕೃತಿ ಪ್ರಕಟಣೆಗೆ

ಪುಸ್ತಕ ಪ್ರಾಧಿಕಾರದ ಯೋಜನೆ" ಯೆಂಬ ತಲೆಬರಹದ ಸಮಾಚಾರವನ್ನು 15-06-2002ರ ಸಂಯುಕ್ತ ಕರ್ನಾಟಕದಲ್ಲಿ ಓದಿದಾಗ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್‌ರವರ ಅಧ್ಯಕ್ಷತೆಯಲ್ಲಿಯ ಕನ್ನಡ ಪುಸ್ತಕ ಪ್ರಾಧಿಕಾರ ಲೇಖಕರ ಲೇಖನಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಲು ಮುಂದಾದ ಯೋಜನೆಯ ಉತ್ತಮ ಪ್ರಯೋಜನಕಾರಿ ಸತ್ಕಾರ್ಯವನ್ನು ಅರಿತು ಸಂತೋಷಗೊಂಡು ನನ್ನ ಲೇಖನಗಳ ವಿವರಗಳನ್ನೊಳಗೊಂಡ ಪತ್ರವನ್ನು ತಾರೀಖು 22-06-2002 ರಂದು ಪ್ರೊ. ಮಲ್ಲೇಪುರಂ ವೆಂಕಟೇಶರವರಿಗೆ ಬರೆದು ನನ್ನ ಲೇಖನಗಳನ್ನು ಪ್ರಕಟಿಸಲು ಕೋರಿಕೊಂಡೆನು. ಆಗ ಕನ್ನಡ ಪುಸ್ತಕ ಪ್ರಾಧಿಕಾರವು ಆಡಳಿತಾಂಗ, ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಇವುಗಳಿಗೆ ಸಂಬಂಧಿಸಿದ ಆಯ್ದ ಲೇಖನಗಳನ್ನು ಪುಸ್ತಕರೂಪದಲ್ಲಿ ಪ್ರಕಟಿಸಲು ನಿರ್ಧರಿಸಿರುವುದಾಗಿ ತಿಳಿಸಿದರು. ಪುಸ್ತಕ ಹೊರ ಬರುವವರೆಗೆ ಅವರು ತೋರಿಸಿರುವ ಅವ್ಯಾಜ ಪ್ರೀತಿಗೆ ನಾನು ಕೃತಜ್ಞನಾಗಿದ್ದೇನೆ ಹಾಗೂ ಆ ಹಿನ್ನೆಲೆಯಲ್ಲಿ ಪುಸ್ತಕವನ್ನು ಪ್ರಕಟಿಸುತ್ತಿರುವುದು ನನಗೆ ತುಂಬಾ ಸಂತೋಷ ತಂದಿದೆ. ಇಲ್ಲಿಯ ಲೇಖನಗಳನ್ನು ಪ್ರಕಟಿಸಿದ ಪತ್ರಿಕಾ ಸಂಪಾದಕರಿಗೆ, ಕನ್ನಡ ಪುಸ್ತಕ ಪ್ರಾಧಿಕಾರದ ಸದಸ್ಯರಿಗೆ, ಅಂದವಾಗಿ ಮುದ್ರಿಸಿದ ಮುದ್ರಣಕಾರರಿಗೆ, ಲೇಖನಗಳನ್ನು ಪ್ರಕಟಿಸಿದ ಪತ್ರಿಕೆಗಳ ಸಂಪಾದಕರಿಗೆ ನನ್ನ ಅನಂತ ಧನ್ಯವಾದಗಳನ್ನು ಅರ್ಪಿಸುವುದು ನನ್ನ ಕರ್ತವ್ಯವೆಂದು ಭಾವಿಸಿದ್ದೇನೆ. ನನ್ನ ಲೇಖನಗಳ ಉದ್ದೇಶ ಸಾರ್ವಜನಿಕ - ಹಿತಾಸಕ್ತಿ, ವಾಸ್ತವಿಕ ಅಂಶಗಳನ್ನು ತಿಳಿಸುವುದು, ಜನಜಾಗೃತಿ ಮಾಡುವುದು, ಸರ್ಕಾರ - ಮಂತ್ರಿಗಳು - ಶಾಸಕರು - ಅಧಿಕಾರಿಗಳು ಅದಿಯಾಗಿ ವಿವಿಧ ಎಲ್ಲಾ ಹಂತದ ಜನ ಪ್ರತಿನಿಧಿಗಳು ಹಾಗೂ ಜನತೆಯನ್ನು ಜಾಗೃತಗೊಳಿಸಿ, ಸ್ವತಂತ್ರ ರಾಷ್ಟ್ರದಲ್ಲಿ ಪ್ರಜಾತಂತ್ರ ವ್ಯವಸ್ಥೆ ಸುವ್ಯವಸ್ಥಿತವಾಗಿ ನಡೆದು ಎಲ್ಲಾ ಹಂತದ ಆಡಳಿತ ಅಭಿವೃದ್ಧಿಯ ನಿರೀಕ್ಷಿತ ಗುರಿ ಮುಟ್ಟಲೆಂಬುದೆ ಆಗಿರುವುದರಿಂದ ಅದು ಯಶಸ್ವಿಯಾಗಲೆಂದು ಹಾರೈಸುತ್ತೇನೆ. ಈ ಪುಸ್ತಕವನ್ನು ಅತ್ಯಾದರದಿಂದ ಓದುಗರು ಸ್ವಾಗತಿಸಬೇಕೆಂದು ಬೇಡುತ್ತೇನೆ.

ಹಿರೇಕೆರೂರ - 581 111
ಹಾವೇರಿ ಜಿಲ್ಲೆ

ಬಿ.ಜಿ. ಬಣಕಾರ

ಪರಿವಿಡಿ

ಶಾಸಕಾಂಗ

ಕಾರ್ಯಾಂಗ

ನ್ಯಾಯಾಂಗ

ಆಡಳಿತಾಂಗ

ಪ್ರಜಾಪ್ರಭುತ್ವದ ಯಶಸ್ಸು ಹೇಗೆ ಸಾಧ್ಯ?

ಇತಿಹಾಸದ ಪುಟಗಳನ್ನು ತಿರುವುತ್ತ ನೋಡಿದರೆ ಮೆಚ್ಚುಗೆಯ ಹಾಗೂ ಒಳ್ಳೆಯ ಆಡಳಿತ ಮಾಡಿದ ರಾಮರಾಜ್ಯ, ವಿಜಯನಗರ ರಾಜ್ಯ, ಮೈಸೂರು ಅರಸರ ರಾಜ್ಯ ಇತ್ಯಾದಿ ಅನೇಕರ ಆಡಳಿತವು ಜನತೆಯ ಪ್ರೀತಿ ವಿಶ್ವಾಸ ಹಾಗೂ ಮೆಚ್ಚುಗೆಯನ್ನು ಪಡೆದಿದೆ. ಇದಕ್ಕೆ ತದ್ವಿರುದ್ಧವಾಗಿ ದುರಾಡಳಿತ ಮಾಡಿದ ರಾವಣ ರಾಜ್ಯ, ತುಗಲಖ ರಾಜ್ಯ, ಔರಂಗಜೇಬ ರಾಜ್ಯ, ಪೇಶ್ವೆ ದರಬಾರಿ ರಾಜ್ಯ, ನಿಜಾಮ ರಾಜ್ಯ ಇತ್ಯಾದಿ ಅನೇಕರ ಆಡಳಿತವು ಜನತೆಯ ಟೀಕೆಗೆ ಹಾಗೂ ಪರಿಹಾಸಕ್ಕೆ ಗುರಿಯಾಗಿವೆ. ಇಂತಹ ಸುಆಡಳಿತ ಕುಆಡಳಿತಗಳ ಇತಿಹಾಸದ ನೆನಪನ್ನು ತಂದು ತಿಳಿದುಕೊಂಡು ರಾಮರಾಜ್ಯಗಳಂತೆ ಒಳ್ಳೇ ರಾಜ್ಯಗಳನ್ನೇ ಕಟ್ಟುವಂತಹ ಕಾಲವನ್ನು ಸ್ವತಂತ್ರ ಭಾರತದ ಪ್ರಜಾಪ್ರತಿನಿಧಿಗಳಾದ ಪಂಚಾಯತ್ ಸದಸ್ಯ ಸ್ಥಾನದಿಂದ ಹಿಡಿದು ಪಾರ್ಲಿಮೆಂಟ್ ಸದಸ್ಯ ಸ್ಥಾನದವರೆಗೆ ಇರುವ ಪ್ರತಿಯೊಬ್ಬ ಪ್ರಜಾಪ್ರತಿನಿಧಿಗಳು, ಗ್ರಾಮ ಸರಕಾರವೇ ಇರಲಿ ತಾಲೂಕು ಸರಕಾರವೇ ಇರಲಿ, ಜಿಲ್ಲಾ ಸರಕಾರವೇ ಇರಲಿ, ರಾಜ್ಯ ಸರಕಾರವೇ ಇರಲಿ, ಭಾರತದ ಸರಕಾರವೇ ಇರಲಿ, ಅಥವಾ ಸರಕಾರ ಮಾಡತಕ್ಕ ತತ್ಸಮ ಕಾರ್ಯವನ್ನೂ ಮಾಡುವ ಯಾವುದೇ ಸಂಸ್ಥೆಯಿರಲಿ, ಅಲ್ಲಿ ತಮ್ಮ ತಮ್ಮ ಪಾಲಿನ ಕರ್ತವ್ಯಗಳನ್ನು ಸಮಂಜಸವಾಗಿ ಮಾಡಿದರೆ ಮಾತ್ರ ಆ ಸರಕಾರ ಸರಿಯಾಗಿ ನಡೆಯಬಲ್ಲದು ಹಾಗೂ ಒಳ್ಳೆಯ ಹೆಸರನ್ನೂ ಕೂಡ ತೆಗೆದುಕೊಳ್ಳಬಲ್ಲದು.

ಭಾರತವು ಸ್ವತಂತ್ರವಾಗಿ ಹದಿನೇಳು ವರ್ಷಗಳಾಗಿ ನಮ್ಮ ಈ ಭಾರತದಲ್ಲಿ ನಮ್ಮವರನ್ನೇ ನಾವು ಆರಿಸಿಕೊಂಡು ಗ್ರಾಮ ಸರಕಾರದಿಂದ ಕೇಂದ್ರ ಸರಕಾರವರೆಗೂ ಅನೇಕ ಸರಕಾರಗಳನ್ನು ನಾವು ರಚಿಸಿಕೊಂಡು ನಮ್ಮ ಭಾರತೀಯರನ್ನು ಆಡಳಿತ ಸಿಬ್ಬಂದಿಯಲ್ಲಿ ನಿಯಮಿಸಿಕೊಂಡು ನಾವು ಈಗ ಆಡಳಿತ ನಡೆಸುತ್ತೇವೇನೋ ನಿಜ. ಆದರೆ ಈ ನಮ್ಮ ಆಡಳಿತ ಹಾಗೂ ಆಡಳಿತ ಯಂತ್ರ ಸರಿಯಾಗಿ ಸುಗಮವಾಗಿ ನಡೆದಿದೆಯೇ? ಎಂದು ನಮ್ಮನ್ನೂ ನಾವು ಪ್ರಶ್ನಿಸಿಕೊಂಡರೆ ಆದಕ್ಕೆ 'ಇ' ವೆಂಬ ಉತ್ತರ ಎದುರಿಗೆ ನಿಲ್ಲುತ್ತದೆ. ನಮ್ಮ ಈಗಿನ ಆಡಳಿತ ಸಾರ್ವಜನಿಕರ ಟೀಕೆಗೆ ದೊಡ್ಡ ಪ್ರಮಾಣದಲ್ಲಿ ಗುರಿಯಾಗಿದೆ ಇಷ್ಟೇ ಇಲ್ಲ; ಪ್ರಜೆಗಳ ನಂಬಿಕೆ ಕೂಡ ಪ್ರಜಾಪ್ರಭುತ್ವದಲ್ಲಿ

ಕಡಿಮೆಯಾಗುತ್ತ ನಡೆದಿರುವದು ಎದ್ದು ಕಾಣುತ್ತದೆ. ಇದಕ್ಕೂ ಮೇಲಾಗಿ ಜುಡಿಸಿಯಲ್ ಮುನ್ಸಿಫ್ ಕೋರ್ಟು, ಜಿಲ್ಲಾ ಕೋರ್ಟು, ಹೈಕೋರ್ಟು ಮತ್ತು ಸುಪ್ರೀಮ್ ಕೋರ್ಟುಗಳಲ್ಲಿ ಕೂಡ ಆಡಳಿತ ಉಗ್ರಟೀಕೆಗೆ ಗುರಿಯಾದದ್ದು ಕಂಡು ಬರುತ್ತದೆ. ಸಾರ್ವಜನಿಕರ ಹಾಗೂ ನ್ಯಾಯಾಲಯಗಳ ಇಂತಹ ಟೀಕೆಗೆ ನಾವು ಮಹತ್ವ ಕೊಡದೆ ಅವುಗಳನ್ನು ಲೆಕ್ಕಿಸದೆ ತನ್ನನ್ನೂ ಯಾರೂ ನೋಡುವುದಿಲ್ಲವೆಂದು ಬೆಕ್ಕು ಕಣ್ಣು ಮುಚ್ಚಿ ಹಾಲು ಕುಡಿದಂತೆ ನಾವು ಆಡಳಿತ ನಡೆಸಿಕೊಂಡು ಹೋದರೆ ಪ್ರಜಾರಾಜ್ಯದ ಅಂತ್ಯವು ನಮ್ಮ ಮೈಮೇಲೆ ಏರಿರುವ ಕನಿಷ್ಠ ಕಾಲವನ್ನು ನಾವು ಎದುರಿಸಬೇಕಾಗಬಹುದು. ಎಲ್ಲಿ ನೋಡಿದರಲ್ಲಿ ಆಡಳಿತೆಯ ಶಿಥಿಲತೆ ತಾಂಡವವಾಡುತ್ತಿದೆ. ಆಡಳಿತೆಯ ಯಂತ್ರವಾದ ನೌಕರರ ವರ್ಗದಲ್ಲಿ ಅಶಾಂತಿ, ಅಪಾತ್ರತೆ, ಅಲಕ್ಷತೆ, ಅದಕ್ಷತೆ. ನಿಸ್ತೇಜ ನಿರಾಶೆ ಮೊದಲಾದ ಅನಿಷ್ಟಗಳು ತಲೆದೋರಿವೆ. ಈ ಅನಿಷ್ಟಗಳಿಗೆ ಹಿನ್ನೆಲೆ ಇಲ್ಲದೆ ಇಲ್ಲ. ಈ ಹಿನ್ನೆಲೆ ಏನು ಎಂಬುದನ್ನು ಎಲ್ಲಾ ಮಟ್ಟದ ಪ್ರಜಾಪ್ರತಿನಿಧಿಗಳು ಅರಿತುಕೊಳ್ಳಬೇಕು ಹಾಗೂ ಇವುಗಳಿಗೆ ಸೂಕ್ತ ಪರಿಹಾರ ಕೊಟ್ಟು ಆಡಳಿತ ಸಿಬ್ಬಂದಿಯಿಂದ ಒಳ್ಳೆಯ ಕಾರ್ಯವನ್ನು ತೆಗೆದುಕೊಂಡು ಆಡಳಿತವನ್ನು ಸುಧಾರಿಸಬೇಕು.

ರೆವಿನ್ಯೂ ವಿದ್ಯಾ, ಅಬಕಾರಿ, ಅರಣ್ಯ ಸಹಕಾರ ಪಂಚಾಯಿತ್ ಲೋಕೋಪಯೋಗಿ, ಆಹಾರ, ಆರೋಗ್ಯ, ಆದಾಯ ಪೋಲೀಸು ಅಭಿವೃದ್ಧಿ ಆದಾಯ, ಮಾರಾಟ ಟಪಾಲು, ರೈಲ್ವೇ, ಸಾರಿಗೆ ಇತ್ಯಾದಿ ಇನ್ನೂ ಅನೇಕ ಖಾತೆಗಳಲ್ಲಿ ಈ ಅನಿಷ್ಟಗಳು ತಲೆದೋರಿ ಕನಿಷ್ಠ ದರ್ಜೆಯಿಂದ ಪ್ರಥಮ ದರ್ಜೆಯ ನೌಕರರವರೆಗೂ ಪ್ರತಿಯೊಬ್ಬ ನೌಕರರಿಂದ ಇಚ್ಛಿತ ಹಾಗೂ ದಕ್ಷ ಕಾರ್ಯವನ್ನು ಪರಿಣಾಮಕಾರಿಯಾಗಿ ಕಾರ್ಯಗತ ಮಾಡಿಸಿಕೊಳ್ಳದಂತಹ ಕಹಿಪ್ರಸಂಗ ತಲೆದೋರಿದೆ. ಅಂತೆಯೇ ನೇಮಕ ಮುಂಬಡ್ತಿ, ಹಿಂಬಡ್ತಿ ವರ್ಗಾವರ್ಗೀ ಡಿಸ್ಚಾರ್ಜು, ಡಿಸ್‌ಮಿಸ್, ಪಗಾರ, ಛೀಮಾರಿ; ನಡವಳಿಕೆಯು ಕ್ರಮ ಇತ್ಯಾದಿ ನಿಯಮಗಳನ್ನು ಸಮಂಜಸವಾಗಿ ನಿರ್ಮಿಸದೆ, ನಿರ್ಮಿಸಿದರೂ ಅವುಗಳನ್ನು ಸರಿಯಾಗಿ ಪಾಲಿಸದೆ ಇರುವ ಬಗ್ಗೆ ಎಲ್ಲಾ ಖಾತೆಯ ನೌಕರ ವರ್ಗಗಳಲ್ಲಿ ಅತೃಪ್ತಿ. ಅಸಂತೋಷ ಇತ್ಯಾದಿ ಅನಿಷ್ಟಗಳು ಉಂಟಾಗಿ ಬೇಸರಗೊಂಡು ನ್ಯಾಯಾಪಾಲನೆಗಾಗಿ ನ್ಯಾಯಾಲಯಗಳ ಮೊರೆಹೋಗುವ ಪ್ರಸಂಗಗಳೇ ಹೆಚ್ಚಾಗಿವೆ. ಇಷ್ಟೇ ಅಲ್ಲದೆ ನ್ಯಾಯಾಲಯಗಳಲ್ಲಿ ಅವರು ನ್ಯಾಯವಾದುದನ್ನು ಪಡೆದರೂ ಕೂಡ ಅದರ ಪ್ರತ್ಯಕ್ಷ ಪ್ರತಿಫಲ ದೊರಕದೆ ಇರುವದೂ ಕೂಡ ಕಂಡು ಬರುವುತ್ತಿದ್ದದ್ದರಿಂದಲೇ ನೌಕರ ವರ್ಗವು ಪರಿಣಾಮಕಾರಿಯಾಗಿ ತಾವು ಮಾಡಬೇಕಾದ ಕಾರ್ಯವನ್ನು ಮಾಡುವುದಿಲ್ಲ ವಾದುದರಿಂದಲೇ ಆಡಳಿತ ಯಂತ್ರದಲ್ಲಿ ಶಿಥಿಲತೆ ಉಂಟಾಗಲು ಕಾರಣವೆಂದರೆ ತಪ್ಪಗಲಾರದು. ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ ಆಡಳಿತ ಯಂತ್ರದಲ್ಲಿ ಶಿಥಿಲತೆಯುಂಟಾಗಬಾರದು. ಇದು ಯಾವಾಗಲೂ ಸುವ್ಯವಸ್ಥೆಯಲ್ಲಿರಲೇಬೇಕು. ಅಧಿಕಾರೇತರರಾದ ಪ್ರಜಾಪ್ರತಿನಿಧಿಗಳಷ್ಟೆ ಸಮಭಾರ ಹಾಗೂ ಜವಾಬ್ದಾರಿಯುತ

ಅಧಿಕಾರಿಗಳಾದ ನೌಕರ ವರ್ಗದ ಮೇಲೆ ಇದೆಯೆಂಬ ಅರಿವು ಪ್ರಜಾಪ್ರತಿನಿಧಿಗಳಿಗೆ ಆಗಬೇಕು.

ಅಧಿಕಾರೇತರರಾದ ಪ್ರಜಾಪ್ರತಿನಿಧಿಗಳು ಧೋರಣಾಕರ್ತೃ (Policy makers) ಗಳಾಗಿದ್ದರೆ ಅಧಿಕಾರಿಗಳಾದ ನೌಕರವರ್ಗವು ಧೋರಣೆಯನ್ನು ಪರಿಣಾಮಕಾರಿಯಾಗಿ ಕಾರ್ಯರೂಪದಲ್ಲಿ ತರುವ ಮಹಾ ಜವಾಬ್ದಾರಿಗಳಾಗಿದ್ದಾರೆ. ಪ್ರಜ್ಞಾಪ್ರಭುತ್ವದ ರಥವು ಸರಿಯಾಗಿ ಸಾಗಬೇಕಾದ ಅಧಿಕಾರಗಳಾದ ನೌಕರವರ್ಗ ಹಾಗೂ ಅಧಿಕಾರೇತರರಾದ ಪ್ರಜಾಪ್ರತಿನಿಧಿಗಳ ವರ್ಗ ಎಂಬ ಈ ಎರಡು ಎತ್ತುಗಳು ತಮ್ಮ ತಮ್ಮ ಹೆಗಲ ಮೇಲೆ ಈ ರಥದ ನೊಗವನ್ನು ಹೊತ್ತು ಸಮಂಜಸವಾಗಿ, ಸಮತೋಲನದಿಂದ, ತೃಪ್ತಿಯಿಂದ ಜಗ್ಗಿಕೊಂಡು ಸುಮಾರ್ಗದಲ್ಲಿ ನಡೆದರೆ ಮಾತ್ರ ಪ್ರಜಾಪ್ರಭುತ್ವ ತಾನು ಮುಟ್ಟಬೇಕಾದ ಗುರಿಯನ್ನು ಸುಸೂತ್ರವಾಗಿ ಮುಟ್ಟಬಲ್ಲುದು.

ಪ್ರಜಾಪ್ರತಿನಿಧಿಗಳು ಕೆಲ ನೌಕರರ ಸಿಬ್ಬಂದಿಗೆ ಅರ್ಹತೆ ಇಲ್ಲದಿದ್ದರೂ ಅವರವರ ಇಷ್ಟಾರ್ಥಸಿದ್ಧಿಯನ್ನು ಮಾಡಿಕೊಡುವ ಹಾಗೂ ಇನ್ನೂ ಕೆಲ ನೌಕರ ಸಿಬ್ಬಂದಿಗೆ ಅರ್ಹತೆ ಯೋಗ್ಯತೆಗಳಿದ್ದರೂ ಕೂಡ ಅವರ ಅವರ ಹಕ್ಕು ಭಾದ್ಯತೆಗಳನ್ನು ಹತ್ತಿಕ್ಕಿ ಅವರಿಗೆ ತಕ್ಕ ಅನುಕೂಲತೆಗಳನ್ನು ಮಾಡಿ ಕೊಡದೆ ಅವರ ಕರ್ತವ್ಯದಲ್ಲಿ ಹಸಕ್ಷೇಪ ಮಾಡಿ ಸ್ವೇಚ್ಛೆಯ ಪ್ರಕಾರ ನೇಮಕಾತಿ ವರ್ಗಾವರ್ಗಿ, ಮುಂಬಡತಿ, ಹಿಂಬಡತಿ, ಇತ್ಯಾದಿ ನೀತಿನಿಯಮ ಗಳನ್ನು ಗಾಳಿಗೆ ತೂರಿಡುವ ಒಣ ಹವ್ಯಾಸವನ್ನು ಬಿಟ್ಟು ಅಚ್ಚುಕಟ್ಟಾದ ನ್ಯಾಯದ ಚೌಕಟ್ಟಿನಲ್ಲಿರುವ ನೀತಿ ನಿಯಮಗಳ ಪಥದಲ್ಲಿ ಬೇಧ - ಭಾವನೆಗಳನ್ನು ಮರೆತು, ಹಸ್ತಕ್ಷೇಪ ನೀತಿಯನ್ನು ಬಿಟ್ಟು ನ್ಯಾಯಾಲಯದ ಆದೇಶ ಹಾಗೂ ತೀರ್ಪುಗಳಿಗೆ ತಲೆಬಾಗಿ ನಡೆದು ಆಡಳಿತ ಸಿಬ್ಬಂದಿಯಿಂದ ಸರಿಯಾದ ಕಾರ್ಯ ನಿರೀಕ್ಷಿಸಿ ಆಡಳಿತ ಯಂತ್ರವನ್ನು ಸುಧಾರಿಸಿ ಪ್ರಜಾರಾಜ್ಯದ ಅನೇಕ ಹಂತಗಳಲ್ಲಿಯ ಸರಕಾರಗಳನ್ನು ಸರಿಯಾದ ಜನಪ್ರಿಯ ಹಾಗೂ ನ್ಯಾಯಪ್ರಿಯಗಳುಳ್ಳವುಗಳನ್ನಾಗಿ ಮಾಡಿ ಇತಿಹಾಸದ ಸುವರ್ಣ ಪುಟದಲ್ಲಿ ಅಚ್ಚಾಗುವಂತೆ ಭಾವೀ ಪ್ರಜೆಗಳು ಮೆಚ್ಚುವಂತೆ ಒಂದು ಮಹಾ ಸಾಹಸವನ್ನು ಮಾಡಲೇಬೇಕು ಅಂದ ಮಾತ್ರಕ್ಕೆ ಅದು ನಿರಂತರ ಪ್ರಜಾಪ್ರಭುತ್ವಕ್ಕೆ ಬುನಾದಿ.

❑

ದೇಶದ ಮುಂದಿರುವ ಭೀಕರ ಬರಗಾಲ

ಪ್ರತಿಯೊಬ್ಬ ಪ್ರಜೆಯ ಹೊಣೆಗಾರಿಕೆ

ದೇಶದ ಗತಕಾಲದ ಇತಿಹಾಸವನ್ನು ಸ್ಮರಿಸಿಕೊಂಡರೆ ಡವಗಿಬರ, ಡೊಕ್ಕಿಬರ, ಬಂಗಾಲಬರ ಇತ್ಯಾದಿ ಅನೇಕ ಬರಗಾಲಗಳು ಭರದಿಂದ ಬೆಳೆಯುತ್ತಿದ್ದು ಜನ ಸಂಖ್ಯೆಗೆ ಮಾರಕವಾಗಿ ಅನ್ನ ಸಿಗದೆ ಅಂಗಲಾಚಿದ ಲಕ್ಷಾಂತರ ಜನರ ಜೀವನವನ್ನು ಬಲಿಯಾಗಿ ತೆಗೆದುಕೊಂಡಿವೆ.

ಇಂತಹ ಬರಗಾಲಗಳನ್ನು ಆಗಿಂದಾಗ್ಗೆ ಭಾರತೀಯರು ಎದುರಿಸುತ್ತಲೇ ಬಂದಿದ್ದಾರೆ. ಆದರೆ 1966ರಲ್ಲಿ ನಾವು ಎದುರಿಸಬೇಕಾಗಿ ಬಂದಿರುವ ಬರಗಾಲ ಭಾರತ ಇತಿಹಾಸ ದಲ್ಲಿಯೇ ತನ್ನ ಕೆಂಪು ಬಾವುಟ ತೋರಿಸಿ ಕೋಟ್ಯಾಂತರ ಜನರನ್ನು ತನಗೆ ಬಲಿತೆಗೆದು ಕೊಳ್ಳುವ ಭೀಕರ ಕಾಲವೆಂದರೆ ತಪ್ಪಾಗದು.

ಬರಲಿರುವ ಈ ಬರಗಾಲವನ್ನು ಬಹಳ ದಕ್ಷತೆಯಿಂದ ಎದುರಿಸಿ ಜನತೆಯನ್ನು ಈ ಬವಣೆಯಿಂದ ಬದುಕಿಸುವದು ಪ್ರತಿಯೊಬ್ಬರ ಅದ್ಯ ಕರ್ತವ್ಯ.

ಭಾರತ ಕೃಷಿ ಪ್ರಧಾನ ದೇಶ. ಜನಸಂಖ್ಯೆ ದಿನೆ ದಿನೆ ಬೆಳೆದಂತೆ ಭೂಮಿ ಬೆಳೆಯಲಾರದು. ಇದ್ದುದರಲ್ಲಿಯೇ 'ಹಾಸುಗೆ ಇದ್ದನ್ನು ಕಾಲುಚಾಚು' ಎಂಬಂತೆ ನಾವಿಂದು ಸುಧಾರಿಸಿಕೊಂಡು ಜನಕೋಟಿಯ ಜೀವ ಬದುಕಿಸಲೇಬೇಕು. ಭಾರತದಲ್ಲಿ ಇತ್ತೀಚಿಗೆ ಹೆಚ್ಚಿನ ಪ್ರಮಾಣದಲ್ಲಿ ಆಹಾರ ಧಾನ್ಯ ಬೆಳೆಯದೆ ಧನ - ಧಾನ್ಯವನ್ನು ಹೆಚ್ಚು ಬೆಳೆಯುವ ಪ್ರವೃತ್ತಿ ಕಂಡು ಬರುತ್ತದೆ.

ಇದಕ್ಕೆ ತಡೆಹಾಕಿ ಆಹಾರ ಧಾನ್ಯವನ್ನು ಹೆಚ್ಚು ಬೆಳೆಯಬೇಕು. ಧನ ಧಾನ್ಯ ಬೆಳೆಯುವ ಪ್ರವೃತ್ತಿ ಒಕ್ಕಲಿಗರಲ್ಲಿ ಬಂದಿರುವುದು ಈ ಧಾನ್ಯಕ್ಕೆ ಸಿಗುತ್ತಿರುವ ಉತ್ತಮ ಹಾಗೂ ಹೆಚ್ಚಿನ ಬೆಲೆಯೇ ಕಾರಣವಾಗಿದೆ. ಇದನ್ನು ತಡೆಯಬೇಕಾದರೆ ರೈತರು ಬೆಳೆಯುತ್ತಿರುವ ಆಹಾರ ಧಾನ್ಯದ ಬೆಲೆಯುಧನಧಾನ್ಯದ ಬೆಲೆಗೆ ತತ್ಸಮ ಅಥವಾ

ಅದಕ್ಕಿಂತ ಹೆಚ್ಚು ಸಿಗುವಂತೆ ಸರಕಾರ ಜವಾಬ್ದಾರಿ ವಹಿಸಬೇಕು. ಅಂದರೆ ಮಾತ್ರ ರೈತರು ಸ್ವಾಭಾವಿಕವಾಗಿ ಆಹಾರ ಧಾನ್ಯವನ್ನು ಹೆಚ್ಚು ಬೆಳೆಯುವ ಪ್ರವೃತ್ತಿಯವರಾಗುವುದು.

ಆಹಾರಧಾನ್ಯ ಕಡಿಮೆ ಬೆಳೆದು ಪರದೇಶಕ್ಕೆ ಕೈಯೊಡ್ಡುವದೂ ಬೇಡ, ಅಂತೆಯೇ ಧನ - ಧಾನ್ಯ ಹೆಚ್ಚು ಬೆಳೆದು ಪರದೇಶಕ್ಕೆ ಕೈಮಾಡುವುದೂ ಬೇಡ. ಅಂದರೆ ಮಾತ್ರ ನಮ್ಮ ಕಾಲ ಮೇಲೆ ನಾವು ನಿಲ್ಲಬಲ್ಲೆವು. ಇದಕ್ಕೆ ತಪ್ಪಿದರೆ ಆಹಾರ, ಧಾನ್ಯಕ್ಕಾಗಿ ಪರದೇಶಕ್ಕೆ ಮೊರೆ ಹೋಗುವುದು ನಮಗೆ ತಪ್ಪಿದ್ದಲ್ಲ. ಕಾರಣ ನಾವಿಂದು ಆಹಾರ, ಧಾನ್ಯ ಬೆಳೆಯುವಲ್ಲಿ ಅಗ್ರಸ್ಥಾನ ಗಳಿಸಬೇಕಾಗಿದೆ.

ಇತ್ತೀಚೆಗೆ ನಮ್ಮ ದೇಶದಲ್ಲಿ ಬಡವರ ಹಾಗೂ ಬಂಡವಾಳಗಾರರ ವರ್ಗ ಹೆಚ್ಚುತ್ತ ನಡೆದಿದೆ. ಬಂಡವಾಳದಾರರು ತಮ್ಮಲ್ಲಿರುವ ಬಂಡಳವಾಳದಿಂದ ಸುಗ್ಗಿಯ ಕಾಲದಲ್ಲಿ ಸರಕಾರ ನಿರ್ಧಿಷ್ಟಪಡಿಸಿದ ದರಕ್ಕಿಂತ ದುಪ್ಪಟ್ಟು ಕೊಟ್ಟು ಅಹಾರ ಧಾನ್ಯವನ್ನು ಖರೀದಿ ಮಾಡಿ. ದಾಸ್ತಾನು ಮಾಡಿ ಮನಸ್ಸಿಗೆ ಬಂದಂತೆ ಹೆಚ್ಚಿನ ಬೆಲೆಗೆ ಮಾರುವ ಅನಿಷ್ಠ ಪದ್ಧತಿ ಅನುಸರಿಸಿದ್ದಾರೆ.

ಗಗನಕ್ಕೇರಿದ ಈ ಬೆಲೆಯ ಪರಿಣಾಮವಾಗಿ ಕೂಲಿಗಾರರು ಕಡಿಮೆ ಆದಾಯದ ನೌಕರರು ಜೀವನ ಮಾಡುವುದೇ ಕಷ್ಟವಾಗಿದೆ. ಈ ಸುಗ್ಗಿ ಮುಗಿದ ಮೇಲೆ ಮಳೆಗಾಲದ ಮುನ್ನ ಅನ್ನಕ್ಕಾಗಿ ಬಹುಜನರು ಜೀವತೆತ್ತುವರನ್ನು ನಾವು ಕಾಣಬಹುದು. ಇಂತಹ ದುರ್ಭಿಕ್ಷ ಕಾಲದಲ್ಲಿ ದೊಡ್ಡ ರೈತರು, ಬಂಡವಾಳದಾರರು ಹಾಗೂ ಸರಕಾರ ಅನ್ನಕ್ಕಾಗಿ ಜನತೆ ಹಾಹಾಕಾರ ಪಡದಂತೆ ಜಾಗ್ರತೆ ವಹಿಸಬೇಕು. ಇದಕ್ಕೆ ತಪ್ಪಿದರೆ ಬುಭುಕ್ಷಿತಃ ಕ್ಲಿಂ ನಕರೋತಿ ಪಾಪಂ (ಹಸಿದ ಮನುಷ್ಯ ಯಾವ ಪಾಪವನ್ನು ಮಾಡದಿರಲಾರ) ಎಂಬಂತೆ ಹಸಿದ ಜನತೆ ಅನ್ನಕ್ಕಾಗಿ ಕಳವು, ದರೋಡೆ, ಕೊಲೆ, ಸುಲಿಗೆ ಇತ್ಯಾದಿ ಪಾಪದ ಕೃತ್ಯಕ್ಕೆ ಕೈ ಹಾಕಿ ಎಬ್ಬಿಸಬಹುದಾದ ಗಂಡಾಂಡತರವನ್ನು ನಾವು ಎದುರಿಸಬೇಕಾದೀತು.

ನಮ್ಮ ದೇಶದ ಅಸಂಖ್ಯಾತರನ್ನು ಬರಗಾಲ ಬವಣೆಯಿಂದ ರಕ್ಷಿಸುವ ಭಾರ ನೇಗಿಲಯೋಗಿಗಳಾದ ರೈತರ ಮೇಲೆ ಬಹುಮಟ್ಟಿಗೆ ಇದೆಯೆಂಬುದನ್ನು ಯಾರೂ ಮರೆಯಲಾಗದು. ಬೆಂಗಳೂರು - ದಿಲ್ಲಿ ಮೊದಲಾದ ನಗರಗಳಲ್ಲಿಯ ಜನರನ್ನು ಬದುಕಿಸುವ ಹೊಣೆ ಕೂಡ ಗ್ರಾಮಾಂತರ ದೇಶದ ರೈತರ ಮೇಲೆಯೇ ಇದೆ.

ಇದನ್ನರಿತು ರೈತರು ಮುಕ್ತಹಸ್ತದಿಂದ ಮುಂದೆ ಬಂದು ತಮ್ಮಿಂದಾದಷ್ಟು ಶಕ್ತಿಮೀರಿ ಆಹಾರ ಅಭಾವದ ವರ್ಗವಾದ ನಗರ ನಿವಾಸಿ ಕೂಲಿಕಾರ ಹಾಗೂ ನೌಕರರಿಗೆ ವಿತರಣೆ ಮಾಡಲು ಹಾಗೂ ಅವರನ್ನು ರಕ್ಷಿಸಲು ಕೊಡುಗೈ ದೊರೆಗಳಾಗಲೆಬೇಕು.

ಸರಕಾರ ಕೂಡ ರೈತರ ಸಂಕಷ್ಟಗಳನ್ನು ಚೆನ್ನಾಗಿ ಅರಿತು ಹೆಚ್ಚಿನ ಪ್ರಮಾಣದಲ್ಲಿ ಅನುಕೂಲತೆಗಳನ್ನೊಗಿಸಬೇಕು. ಭಾರತದ ಪ್ರತಿಯೊಬ್ಬ ನಾಗರೀಕನೂ ಕೂಡ ಮಿತ

ಆಹಾರವನ್ನು ಸೇವಿಸಿ ಉಪವಾಸ ವ್ರತಗಳನ್ನು ಕೈಕೊಂಡು ಆಹಾರ ಉಳಿತಾಯ ಮಾಡಲೇಬೇಕು.

ಪ್ರಸ್ತುತ ಪರಿಸ್ಥಿತಿಯಲ್ಲಿ ನಾವು ಪರದೇಶದಿಂದ ಆಹಾರ ಧಾನ್ಯ ತರಿಸುವದು ಕೀಳು ಹಾಗೂ ಪರದಾಸ್ಯ ಮನೋವೃತ್ತಿಯೆಂದು ಯಾರೂ ತಿಳಿಯಬಾರದು. ಇಲ್ಲಿಯವರೆಗೆ ಪರದೇಶದಿಂದ ಒಪ್ಪಂದ ಮಾಡಿಕೊಂಡಂತೆ ಆಹಾರಧಾನ್ಯ ತರಿಸಿ ಜನತೆಗೆ ಕೊಡುವುದನ್ನು ಬಿಟ್ಟಿದ್ದರೆ ಅದೆಷ್ಟು ಹಾಹಾಕಾರವಾಗುತ್ತಿತ್ತೆಂಬುದನ್ನು ಊಹಿಸಬೇಕು. ನಾವಿಂದು ಆಹಾರಧಾನ್ಯ ಉತ್ಪಾದನೆಯಲ್ಲಿ ಸ್ವಾವಲಂಬಿಗಳಾಗದೆ ಪರಾವಲಂಬಿಗಳಾಗಿದ್ದೇವೆ. ಅಂದ ಮೇಲೆ ನಮ್ಮ ದೇಶ ಈ ಕಠಿಣ ಕಾಲದಲ್ಲಿ ಪರದೇಶಗಳಿಂದ ಆಹಾರ ಧಾನ್ಯವನ್ನು ಯಾವುದೇ ರೀತಿಯಿಂದ ತಂದು ಹಸಿವೆಯಿಂದ ಬಳಲುವ ಜನತೆಗೆ ಕೊಟ್ಟು ದಾಹವನ್ನು ನೀಗಿಸುತ್ತಿರುವಾಗ ಈ ಧೋರಣೆಯನ್ನು ಬೆಂಬಲಿಸಬೇಕೇ ಹೊರತು ಟೀಕಿಸಬಾರದು.

ಆಹಾರ ಧಾನ್ಯವನ್ನು ಅಧಿಕವಾಗಿ ಬೆಳೆಯದಿರಲು ಗೇಣಿ ಕಾನೂನುಗಳು ಕೂಡಾ ಕೆಲಮಟ್ಟಿಗೆ ಮಾರಕವಾಗಿವೆಯೆಂದರೆ ತಪ್ಪಾಗಲಾರದು. ಜಮೀನು ಮಾಲೀಕರು ತಮ್ಮ ಜಮೀನುಗಳು ರೈತರ ಕೈಯಲ್ಲಿ ಸಿಕ್ಕರೆ ತಿರುಗಿ ಬರಲಿಕ್ಕಿಲ್ಲವೆಂಬ ಕಾರಣದಿಂದ ತಮ್ಮಿಂದ ಸಾಗುಮಾಡುವುದು ಆಗದಿದ್ದರೂ ಕೂಡಾ ಆದಷ್ಟು ಬೆಳೆಯುವ ಅಥವಾ ಬೀಳುಹಾಕುತ್ತಿದ್ದಾರೆ.

ಅಂತೆಯೇ ರೈತರು ಪರರ ಜಮೀನುಗಳು ತಮಗೆ ದಕ್ಕುವವೊ ಎಂಬ ಸಂಶಯದಿಂದ ಕೈಲಾದಷ್ಟು ಬೆಳೆಯುವ ಅಥವಾ ಬೀಳು ಹಾಕುತ್ತಿದ್ದಾರೆ. ಈ ಅನಿಷ್ಟವನ್ನು ಪರಿಹರಿಸಿ ಜಮೀನುಗಳನ್ನು ಮಾಲಿಕನೇ ಆಗಲಿ ರೈತನೇ ಆಗಲಿ ಅವರು ಉತ್ತಮ ರೀತಿಯಲ್ಲಿ ಅಧಿಕ ಫಸಲು ಬೆಳೆಯುವಂತೆ ಪರಿಹಾರ ಕಂಡು ಹಿಡಿಯಲೇಬೇಕು.

ಆಹಾರಧಾನ್ಯ ಹೆಚ್ಚು ಬೆಳೆಯಬೇಕೆಂಬು ಉದ್ದೇಶದಿಂದಲೇ ಬೀಳು ಜಮೀನುಗಳನ್ನು ಜನತೆಗೆ ಸಾಗು ಮಾಡಲು ಸರಕಾರ ಕೊಟ್ಟಿದೆ ಹಾಗೂ ಕೊಡುತ್ತಲೇ ಇದೆ. ಇಂತಹ ಜಮೀನುಗಳು ಎಷ್ಟರಮಟ್ಟಿಗೆ ಸಾಗಾಗಿವೆ ಹಾಗೂ ಫಸಲು ಕೊಡುತ್ತಿವೆಯೆಂಬುದನ್ನು ಸಮೀಕ್ಷೆ ಮಾಡಿ ನೋಡಿದರೆ ಪರಿಣಾಮ ಬಹಳ ನಿರಾಶಾದಾಯಕವಾಗಿರುತ್ತದೆ. ಜಮೀನು ತೆಗೆದುಕೊಂಡವರು ಹರಿಜನ, ಗಿರಿಜನ ಹಿಂದುಳಿದ ಜನಾಂಗ, ಬಡವ, ರಾಜಕೀಯ ಸಂತ್ರಸ್ತ ಮೊದಲಾದ ವರ್ಗದವರಿದ್ದಾರೆ. ಆದರೆ ಇವರಲ್ಲಿ ಬಹುಭಾಗ ಜಮೀನು ಪಡೆಕೊಂಡರೇ ಹೊರತು ಸಾಗು ಮಾಡುವಲ್ಲಿ ಹಾಗೂ ಫಸಲು ತೆಗೆಯುವಲ್ಲಿ ಯಶಸ್ವಿಯಾಗಿಲ್ಲ. ಇದಕ್ಕೆ ಕಾರಣ ಈ ವರ್ಗದಲ್ಲಿ ಬೀಜ, ಗೊಬ್ಬರ, ದನ, ಮನೆ, ಎತ್ತುಗಳೇ ಮೊದಲಾದ ಒಕ್ಕಲುತನ ಅವಶ್ಯಕ. ಸಾಹಿತ್ಯ ಸಾಮಗ್ರಿಗಳನ್ನು ಪಡೆಯಲು ಆರ್ಥಿಕ ಸಾಮರ್ಥ್ಯವಿಲ್ಲೆಂಬುದನ್ನು ಸರಕಾರ ಅರಿತು ತಕ್ಕ ಉಪಾಯ ಕೈಕೊಳ್ಳಲೇಬೇಕು.

ಭಾಕ್ರಾನಾಂಗಲ್, ರಾಜಸ್ತಾನ್ ಕಾಲುವೆ, ದಾಮೋದರ ಕೊಳ್ಳ, ಹಿರಾಕೂಡ. ತುಂಗಭದ್ರಾ ಮೊದಲಾದ ಕೋಟ್ಯಂತರ ವೆಚ್ಚದ ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಂಡು ಆಹಾರಧಾನ್ಯ ಬೆಳೆಯುವ ನೀರಾವರಿ ಕ್ಷೇತ್ರ ಹೆಚ್ಚಿಸಲಾಗಿದೆ.

ಇಂತಹ ಯೋಜನೆಗಳನ್ನು ದೇಶಾದ್ಯಂತ ಮಾಡುವ ನೈಸರ್ಗಿಕದ ಅನಾನುಕೂಲತೆಯಿಂದ ಸಾಧ್ಯವಿಲ್ಲ.

ದೇಶದಲ್ಲಿ ನೀರಾವತಿ ಕ್ಷೇತ್ರ ಇನ್ನೂ ಹೆಚ್ಚಿಸುವ ಮುಂದಿನ ತ್ವರಿತ ಉಪಾಯ ಕ್ರಮವೆಂದರೆ ದೇಶದಲ್ಲಿಯ ಪುರಾತನ ಕಾಲದ ಲಕ್ಷಾಂತರ ಹುಗಿದು ಹೋದ ಕೆರೆ, ಕಟ್ಟೆ, ಬಂದಾರಗಳನ್ನೂ ಭದ್ರಮಾಡಿ ಅವುಗಳ ಒಡಲನ್ನು ತೋಡಿಸಿ ಹೆಚ್ಚಿನ ಮಳೆ ನೀರನ್ನು ಸಂಗ್ರಹವಾಗುವಂತೆ ಮಾಡಿ ಒಂದು ಬೆಳೆ ಬೆಳೆಯುವ ಬದಲು ಎರಡು ಬೆಳೆಗಳನ್ನು ಬೆಳೆಯುವುದಕ್ಕೆ ಸಾಧ್ಯ ಮಾಡುವ ಸಾಮೂಹಿಕ ಯೋಜನೆಯೊಂದಿದೆ.

ದೇಶದಲ್ಲಿ ಇಂತಹ ಸಾಮೂಹಿಕ ಸಾರ್ವಜನಿಕ ಅಭಿವೃದ್ಧಿ ಕಾರ್ಯಗಳು ತ್ವರಿತದಲ್ಲಿ ನಡೆಯಬೇಕೆ ಹೊರತು ಎತ್ತು, ಎಮ್ಮೆ ಆಕಳು, ಕುರಿ, ಹಂದಿ, ಕೋಳಿ, ಚಕ್ಕಡಿ, ಮನೆ, ಹಂಚು, ಕಟ್ಟಿಗೆ, ಆಯುಧ ಇತ್ಯಾದಿಗಳನ್ನು ವಿಶಿಷ್ಟ ವ್ಯಕ್ತಿಗಳಿಗೆ ಕೊಟ್ಟು ಅಥವಾ ಕೊಡಿಸಿ ಅವುಗಳನ್ನು ಅವರಿಂದ ಕೆಲವೇ ದಿನಗಳಲ್ಲಿ ಮಾಯವಾಗುವ ಮಾಯಾಜಾಲದ ಕೋಟ್ಯಂತರ ಹಣ ಹರಣ ಮಾಡುವ ವೈಯಕ್ತಿಕ ಅಡಕ ಅಭಿವೃದ್ಧಿ ಯೋಜನೆಗಳನ್ನು ಕೈ ಬಿಟ್ಟು ಬಿಡಬೇಕು.

❑

ದೇಶದಾದ್ಯಂತ ಶಾಂತಿ ಪರಿಪಾಲನೆ

ಐವತ್ತು ನಾಲ್ಕು ಕೋಟಿ ಭಾರತೀಯರನ್ನು ಪಡೆದಿರುವ ಭಾರತವನ್ನು ಪರಕೀಯ ದಾಳಿಯಿಂದ ತಪ್ಪಿಸಿ ಪರಕೀಯರನ್ನು ಹಿಮ್ಮೆಟ್ಟಿ ಭಾರತವನ್ನು ರಕ್ಷಿಸುವದು ಹಾಗೂ ಭಾರತೀಯರೆಲ್ಲರ ಮಾನ, ಆಸ್ತಿ, ಜೀವಗಳೆಲ್ಲವನ್ನು ಅಂತರಿಕ ಜಗಳಗಳಿಂದ ಉಳಿಸಿ ಬಾಳುವಂತೆ ಮಾಡಿ ದೇಶಾದ್ಯಂತ ಶಾಂತಿ ಸೌಹಾರ್ದತೆಗಳು ನೆಲೆಸುವಂತೆ ಮಾಡುವ ಉನ್ನತ ಹೊಣೆಗಾರಿಕೆ ದೇಶದಲ್ಲಿಯ ಚತುರ್ಪಡೆಗಳಾದ ವಾಯುಪಡೆ, ನೌಕಾಪಡೆ, ಸೇನಾಪಡೆ ಹಾಗೂ ಪೊಲೀಸಪಡೆಗಳನ್ನೇ ಅವಲಂಬಿಸಿದೆ. ಅಂತೆಯೇ ಇಂದು ನಮ್ಮ ದೇಶದ ವಾಯುಪಡೆ, ನೌಕಾಪಡೆ ಹಾಗೂ ಸೇನಾಪಡೆಗಳು ಸಮರ್ಥ ರೀತಿಯಿಂದ ಭಾರತವನ್ನು ನಾಲ್ಕೂ ದಿಕ್ಕಿನಲ್ಲಿ ಅಷ್ಟ ದಿಕ್ಪಾಲಕರಂತೆ ರಕ್ಷಿಸಿ ಪರಕೀಯ ದಾಳಿಯನ್ನು ಎದುರಿಸಿ ಅವರನ್ನು ಹಿಮ್ಮೆಟ್ಟಿಸಿ ಭಾರತದ ಘನತೆ ಗೌರವದೊಂದಿಗೆ ತಮ್ಮ ಘನತೆ ಗೌರವಗಳನ್ನು ಹೆಚ್ಚಿಸಿಕೊಂಡಿವೆ.

ದೇಶದ ಗಡಿರಕ್ಷಣೆ ಮಾಡಿ ದಾಳಿಯನ್ನು ಎದುರಿಸಿದರೆ ಮಾತ್ರ ಪಡೆಗಳ ಕಾರ್ಯ ಮುಗಿಯಲಿಲ್ಲ. ಇದಕ್ಕೂ ಹೆಚ್ಚಾಗಿ ಭಾರತದ ಒಳಗಿನ ವಿಶಾಲದ 12,68,900 ಚೌರಸ ಮೈಲು ಕ್ಷೇತ್ರದಲ್ಲಿಯ 54 ಕೋಟಿ ಜನರ ಜೀವನ, ಸೊತ್ತು, ಮಾನಗಳನ್ನು ಆಗಿಂದಾಗ್ಗೆ ಏಳುತ್ತಿರುವ ವ್ಯಕ್ತಿ, ಕೋಮುವಾದ, ದ್ವೇಷ, ಅಸೂಯೆ, ಅಧಿಕಾರದಾಹ, ಬಡತನ ಭಾಷಾವಾರು ಗಲಭೆಗಳಿಂದ ರಕ್ಷಿಸಿ ಕಾಪಾಡುವ ಹೊಣೆ ನಮ್ಮ ದೇಶದಲ್ಲಿಯೇ ಪೊಲೀಸ ಪಡೆಗಳ ಹಾಗೂ ಅವಶ್ಯ ಬಿದ್ದಾಗ ಸೇನಾಪಡೆಗಳ ಪಾಲಿಗೆ ಇರುತ್ತದೆ. ಇಂತಹ ಪೊಲೀಸ್ ಹಾಗೂ ಸೇನಾ ಪಡೆಗಳ ಕಾರ್ಯ ಬಹುಮಟ್ಟಿಗೆ ಪ್ರಶಂಸೆಗೆ ಅರ್ಹವಾಗಿದ್ದರೂ ಕೂಡ ಉಗ್ರವಾದ ಟೀಕೆಗೆ ಆಗಿಂದಾಗ್ಗೆ ಬಲಿಯಾಗುತ್ತಲೇ ಇದೆ.

ದೇಶದಲ್ಲಿಯ ಪೊಲೀಸ್ ಪಡೆಗಳು ಒಂದು ಕಡೆಗೆ ಯಾವುದೇ ಪಕ್ಷ ಪಂಗಡ, ಗುಂಪು ಹಾಗೂ ಪಕ್ಷಪಾತಿ ಸರ್ಕಾರಗಳ ಕೈಗೊಂಬೆಯಾಗದಂತೆ ಅವರ ಸ್ವಾರ್ಥಪರವಾದ ಆದೇಶಕ್ಕೆ ಮಾರುಹೋಗದೆ ಅನ್ಯಾಯಕ್ಕೆ ಆಸ್ಪದ ಕೊಡದಂತೆ ಯಾವುದೇ ಗುಂಪನ್ನು ಅನ್ಯಾಯವಾಗಿ ತುಳಿಯದೆ ಯಾವುದೇ ಗುಂಪನ್ನು ಪಕ್ಷಪಾತಿಯಾಗಿ ಪ್ರೇರೇಪಿಸದೆ

ನಿಷ್ಪಕ್ಷಪಾತಿಯಿಂದ ದುಷ್ಟ ಶಿಕ್ಷ ಶಿಷ್ಟ ಪರಿಪಾಲನೆ ಎಂಬಂತೆ ದೇಶದಲ್ಲಿ ಶಾಂತಿ ನೆಮ್ಮದಿ ನೆಲೆಸುವಂತೆ ನಿರ್ವಹಿಸುತ್ತವೆ.

ಇದಕ್ಕೆ ತದ್ವಿರುದ್ಧವಾಗಿ ಕೆಲ ಪೊಲೀಸ್ ಪಡೆಗಳು ಸರ್ಕಾರ ಹಾಗೂ ಸಮಾಜದಲ್ಲಿ ಹೊಣೆಗಾರ ಸ್ಥಾನದಲ್ಲಿರುವ ಬೇಜವಾಬ್ದಾರಿ ವ್ಯಕ್ತಿಗಳ ಕೈವಾಡ ಹಾಗೂ ಕಪಿಮುಷ್ಟಿಯಲ್ಲಿ ಸಿಕ್ಕು ಅವರ ಸ್ವಜನ ರಕ್ಷಣೆಗಾಗಿ ಪರಜನರ ಶಮನಕ್ಕಾಗಿ ನ್ಯಾಯವನ್ನು ಬದಿಗೊತ್ತಿ ನಿರಪರಾಧಿ ಬಲಹೀನ ಹಾಗೂ ಅವರ ಆಸ್ತಿ, ಹಕ್ಕು, ಮಾನ ಹಾಗೂ ಜೀವನವನ್ನು ಅಪಾಯದ ಅಂಚಿನಲ್ಲಿ ದೂಡಿ ದೇಶದಲ್ಲಿ ಅಶಾಂತಿ, ಕೋಲಾಹಲ, ಗಲಭೆ ರಕ್ತಪಾತ ಇತ್ಯಾದಿ ಅರಾಜಕತೆಯ ಮೂಲಗಳನ್ನು ತಪ್ಪಿಸುವುದು ಒಂದು ಕಡೆಗೆ ಅಲ್ಲಲ್ಲಿಯ ಸರ್ಕಾರ ಹಾಗೂ ಪ್ರಭಾವಶಾಲಿಗಳ ಕರ್ತವ್ಯವಾಗಿದ್ದರೆ ಮತ್ತೊಂದು ಕಡೆಗೆ ಕರ್ತವ್ಯನಿಷ್ಠ ನಿಷ್ಪಕ್ಷಪಾತಿ ಪೊಲೀಸ್ ಪಡೆಗಳ ಕರ್ತವ್ಯವೂ ಆಗಿದೆ.

ದೇಶದಲ್ಲಿಯ ಪಂಚಾಯತಿಯಿಂದ ಹಿಡಿದು ಪಾರ್ಲಿಮೆಂಟಿನ ವರೆಗಿನ ಪ್ರತಿ ಯೊಂದು ಸ್ಥಾನಿಕ ಪ್ರಜಾಸತ್ತಾತ್ಮಕ ಸಂಸ್ಥೆಗಳಲ್ಲಿಯ ಅಧಿಕಾರಾರೂಢ ಸದಸ್ಯರು ಹಾಗೂ ಪದಾಧಿಕಾರಿಗಳಾದ ಕಾರ್ಯಾಧ್ಯಕ್ಷ, ಅಧ್ಯಕ್ಷ, ಮಂತ್ರಿ ಮೊದಲಾದವರು ತಾವು ಯಾವುದೇ ರಾಜಕೀಯ ಪಕ್ಷದ ಆಧಾರದ ಮೇಲೆ ಕೆಲವೇ ಕೆಲವು ಜನರಿಂದ ಚುನಾಯಿತರಾಗಿ ಅಧಿಕಾರಕ್ಕೆ ಬಂದಿದ್ದರೂ ಕೂಡ ತಾವು ಸಕಲ ಜನಸಾಮಾನ್ಯರ ಪ್ರತಿನಿಧಿಗಳೆಂಬ ಸದ್ಭಾವನೆಯಿಂದ ದೇಶದಲ್ಲಿಯ ಪೊಲೀಸ್ ಪಡೆಗಳು ಪ್ರತಿಯೊಬ್ಬ ಜನಸಾಮಾನ್ಯರನ್ನು ಹಾಗೂ ಪ್ರತಿಯೊಬ್ಬರ ಮೂಲಭೂತ ಹಕ್ಕುಗಳನ್ನು ರಕ್ಷಿಸಲು ಹಾಗೂ ಪ್ರತಿಯೊಬ್ಬರು ಮತ್ತೊಬ್ಬರ ಹಕ್ಕುಬಾಧ್ಯತೆಗಳನ್ನು ಆಕ್ರಮಿಸದಂತೆ ನೋಡಿಕೊಂಡು ಅಶಾಂತಿಗೆ ಅಸ್ಪದ ಕೊಡದಂತೆ ದಕ್ಷತೆ ವಹಿಸಿ ಕಾರ್ಯಪ್ರವರ್ತರಾಗಬೇಕು.

ಪೊಲೀಸ್‌ಪಡೆಗಳೂ ಸಹತ ಪ್ರತಿಯೊಬ್ಬ ಜನಸಾಮಾನ್ಯ ರಕ್ಷಕನೆಂಬ ಭಾವನೆ ಯಿಂದ ಸಮಾಜದಲ್ಲಿಯ ಯಾವುದೇ ಹಿತಾಸಕ್ತಿಗಳ ಹಸ್ತಕ್ಷೇಪಕ್ಕೆ ಮಾರು ಹೋಗದೇ ಅಶಾಂತಿ ಹಾಗೂ ಅಕ್ರಮಗಳ ಕಿಡಿಗಳೆದ್ದಲ್ಲಿ ದಕ್ಷತೆಯಿಂದ ಅವುಗಳನ್ನು ನಂದಿಸಿ, ಶಾಂತಿ ಸುವ್ಯವಸ್ಥೆಗಳ ಪರಿಪಾಲನೆಯನ್ನು ಮಾಡಬೇಕೇ ಹೊರತು ಕರ್ತವ್ಯ ಹಾಗೂ ನ್ಯಾಯಭ್ರಷ್ಟರಾಗಿ ದುಷ್ಟಶಕ್ತಿ ಧುರೀಣರ ಪ್ರಭಾವಕ್ಕೆ ಒಳಗಾಗಿ ನಿರಪರಾಧಿಗಳನ್ನು ಅಪರಾಧಿಗಳನ್ನಾಗಿ ಮಾಡುವುದು, ಅಪರಾಧಿಗಳನ್ನು ನಿರಪರಾಧಿಗಳನ್ನಾಗಿ ಮಾಡುವುದು, ಶಿಷ್ಟರನ್ನು ದುಷ್ಟರಂತೆ ಕಾಣುವುದು, ದುಷ್ಟರನ್ನು ಶಿಷ್ಟರಂತೆ ಕಾಣುವುದು, ರಕ್ಷಕರನ್ನು ಭಕ್ಷಕರಂತೆ, ಭಕ್ಷಕರನ್ನು ರಕ್ಷಕರಂತೆ ಕಾಣುವುದು. ಅಶಾಂತಿಯನ್ನು ಶಾಂತಿಯನ್ನಾಗಿ ಶಾಂತಿಯನ್ನು ಅಶಾಂತಿಯನ್ನಾಗಿ ಕಾಣುವುದು. ನ್ಯಾಯವನ್ನು ಅನ್ಯಾಯವನ್ನಾಗಿ, ಕಾಣುವುದು, ಅನ್ಯಾಯವನ್ನು ನ್ಯಾಯವನ್ನಾಗಿ ಕಾಣುವುದು ಇವೆಲ್ಲ ಗಲಭೆಗಳ ಉಗಮ

ಸ್ಥಾನಗಳಿಗೆ ಪ್ರೋತ್ಸಾಹ ಕೊಡದೆ ದೇಶದಲ್ಲಿ ನ್ಯಾಯ ನೆಮ್ಮದಿ, ಶಾಂತಿ ಹಾಗೂ ತೃಪ್ತಿಗಳನ್ನು ನೆಲೆಗೊಳ್ಳುವಂತೆ ಕಾರ್ಯಪ್ರವೃತ್ತರಾಗಲೇಬೇಕು.

ದೇಶದಲ್ಲಿಯ ಒಬ್ಬ ಮಾಲಿಯಿಂದ ಹಿಡಿದು ಮಂತ್ರಿಯ ಮಟ್ಟದ ವರೆಗಿನ ಪ್ರತಿಯೊಬ್ಬ ಜನಸಾಮಾನ್ಯರನ್ನು ರಕ್ಷಿಸುವ ಹೊಣೆ ಪೊಲೀಸ್ ಪಡೆಯಲ್ಲಿಯ ಕೆಳದರ್ಜೆಯ ಮಾಲಿನ ಕಾನ್‌ಸ್ಟೇಬಲನಿಂದ ಹಿಡಿದು ಮೇಲದರ್ಜೆಯ ಪೊಲೀಸ್ ಇನ್‌ಸ್ಪೆಕ್ಟರ್ ಜನರಲರ ವರೆಗಿನ ಪ್ರತಿಯೊಬ್ಬ ಪೊಲೀಸ್ ಅಧಿಕಾರಿಗಳ ಪವಿತ್ರ ಕರ್ತವ್ಯವಾಗಿರುವುದರಿಂದ ಯಾವುದೇ ಆಶೆ ಆಮಿಷ ಹಸ್ತಕ್ಷೇಪಗಳಿಗೆ ಆಸ್ಪದ ಕೊಡದೆ ಅರಾಜಕತೆಯ ಹಾಗೂ ಸ್ವಾತಂತ್ರ್ಯ ದುರುಪಯೋಗ ದುಷ್ಟಶಕ್ತಿಯ ಪ್ರವೃತ್ತಿಗಳನ್ನು ನಿರ್ಧಾಕ್ಷಿಣ್ಯವಾಗಿ ತಡೆಗಟ್ಟಿ, ದೇಶಾದ್ಯಂತ ಅಲ್ಲಲ್ಲಿ ನಡೆದಿರುವ ಕೊಲೆ, ಸುಲಿಗೆ, ಮಾನಹಾನಿ, ಮಾನಭಂಗ, ದರೋಡೆ, ಕೋಮುವಾರು ಗಲಭೆ, ಸ್ತ್ರೀಭಂಗ ಇತ್ಯಾದಿ ಅನಿಷ್ಟಗಳನ್ನು ಸದೆಬಡಿದು ಶಾಂತಿ ಸಮಾಧಾನಗಳು ನೆಲೆಸುವಂತೆ ಮಾಡಲು ಕಂಕಣಬದ್ಧರಾಗಲೇಬೇಕು. ಇದಕ್ಕೆ ತಪ್ಪಿದರೆ ದೇಶದಲ್ಲಿ ಅರಾಜಕತೆ ಹೆಚ್ಚಾಗಿ ಪಾಳೆಗಾರಿಕೆಯನ್ನು ಕಾಣುವ ಕಾಲ ಬಂದೀತು.

ದೇಶದಲ್ಲಿಯ ಸರ್ಕಾರಗಳಾದರೂ ಕೂಡ ಪೊಲೀಸ್ ಖಾತೆಗಳಿಂದ ದಕ್ಷ ಹಾಗೂ ಸಮರ್ಥರಾದ ಕಾರ್ಯ-ಕರ್ತವ್ಯಗಳನ್ನು ನಿರೀಕ್ಷಿಸಿ ಅದರಿಂದ ದೇಶದಲ್ಲಿ ಶಾಂತಿ ಸುವ್ಯವಸ್ಥೆಗಳನ್ನು ಕಾಪಾಡಿಸಿಕೊಳ್ಳಬೇಕಾಗಿದ್ದಲ್ಲಿ ಪೊಲೀಸ್ ಖಾತೆಗೆ ತಕ್ಕ ಸಂಬಳ, ಅನುಕೂಲತೆಗಳನ್ನು ಒದಗಿಸಲೇಬೇಕು. ದೇಶದ ಕೆಲವು ರಾಜ್ಯಗಳಲ್ಲಿಯ ಕೆಳದರ್ಜೆಯ ಪೊಲೀಸ್ ಕನ್‌ಸ್ಟೇಬಲರಿಗೆ ಕೊಡುತ್ತಿರುವ ಸಂಬಳದ ಸ್ಕೇಲುಗಳನ್ನು ನೋಡಿದರೆ ಅವರು ಜೀವನವನ್ನು ಸಾಗಿಸುವುದು ಅಸಾಧ್ಯವಾಗಿ ಅವರು ಅನಿವಾರ್ಯವಾಗಿ ತಮ್ಮ ಜೀವನವನ್ನು ಸಾಗಿಸಲು ಪಿ.ಸಿ. ಮಾಮೂಲಿ ಪಸ್ಗಿ ಇತ್ಯಾದಿ ಲಂಚದ ಮೂಲಗಳಿಗೆ ಮಾರುಹೋಗಿ ತಮ್ಮ ಕರ್ತವ್ಯಗಳನ್ನೇ ಅಲಕ್ಷಿಸಿ ಶಿಥಿಲತೆಯನ್ನೇ ಸೃಷ್ಟಿಸುತ್ತಿದ್ದಾರೆ. ಹಾಗೂ ಶಾಂತಿ ಅನ್ಯಾಯ ಅಶಾಂತಿಗೆ ಪರೋಕ್ಷವಾಗಿ ಕಾರಣರಾಗುತ್ತಿದ್ದಾರೆ.

ಪೊಲೀಸ್ ಸಿಬ್ಬಂದಿಗೆ ಇರುವ ಮಾನ್ಯತೆ ಕೊರತೆ, ಬೇಡಿಕೆ ಹಾಗೂ ಅವಶ್ಯಕತೆಗಳನ್ನು ಸರ್ಕಾರ ಅರಿತುಕೊಂಡು ಅವರಿಗೆ ಒದಗಬಹುದಾದ ಅವಶ್ಯಕತೆಗಳನ್ನು ಸರಿಯಾಗಿ ಒದಗಿಸಿ ಅವರಲ್ಲಿ ಅಶಾಂತಿ ಹಾಗೂ ಅತೃಪ್ತಿಯ ವಾತಾವರಣ ಹುಟ್ಟದಂತೆ ನೋಡಿಕೊಂಡು ಅವರಿಂದ ಸಮರ್ಥ ರೀತಿಯಿಂದ ಕಾರ್ಯ-ಕರ್ತವ್ಯಗಳನ್ನು ತೆಗೆದುಕೊಂಡು ದೇಶದಲ್ಲಿ ಅಲ್ಲಲ್ಲಿ ಕಂಡು ಬರುತ್ತಿರುವ ಅಶಾಂತಿ ಹಾಗೂ ಅರಾಜಕತೆಯ ದುಷ್ಟ ಕರ್ತವ್ಯಗಳಿಗೆ ಪರದೆಯನ್ನು ಎಳೆದು ಸರ್ವ ಜನಸಾಮಾನ್ಯರನ್ನು ಹಾಗೂ ಅವರ ಹಕ್ಕು ಬಾಧ್ಯತೆಗಳನ್ನು ರಕ್ಷಿಸಿ, ಶಾಂತಿ ಸುವ್ಯವಸ್ಥೆಗಳನ್ನು ನೆಲೆಗೊಳಿಸಬೇಕು. ಅಂದರೆ ಮಾತ್ರ ವ್ಯಕ್ತಿ ಹಾಗೂ ದೇಶದ ಸ್ವಾತಂತ್ರ್ಯ ಸುಗಮವಾದೀತು.

❑

'ಕರ' ಕೊಡುವ ಪ್ರವೃತ್ತಿ ಬೆಳೆದುಬರಬೇಕು

ಕೇಂದ್ರ ಸರಕಾರ - ರಾಜ್ಯ ಸರಕಾರ, ಗ್ರಾಮ ಪಂಚಾಯತಿ, ನಗರ ಪಂಚಾಯತಿ ಕಂಟೋನಮೆಂಟ ಬೋರ್ಡ್, ಸ್ಯಾನಿಟರಿ ಬೋರ್ಡ್, ನಗರಸಭೆ ಹಾಗೂ ನಗರ ಪಾಲಿಕೆಗಳು ತಮ್ಮ ತಮ್ಮ ಕಾರ್ಯಕ್ಷೇತ್ರಗಳಲ್ಲಿಯ ಜನತೆಗೆ ಸಾರಿಗೆ ಸಂಪರ್ಕ. ಒಕ್ಕಲುತನ, ಕೈಗಾರಿಕೋದ್ಯಮ ಹಾಗೂ ಕುಡಿಯುವದಕ್ಕೆ ನೀರು ಸರಬರಾಜು, ವಿದ್ಯುತ್ ಸರಬರಾಜು ಜನಾರೋಗ್ಯ, ನೈರ್ಮಲ್ಯ ಇತ್ಯಾದಿ ಇತ್ಯಾದಿ ಕಾರ್ಯಗಳನ್ನು ಅತ್ಯುತ್ತಮವಾಗಿ ಒದಗಿಸಿಕೊಟ್ಟು ಜನತೆಯ ಹಾಗೂ ದೇಶದ ಒಕ್ಕಲುತನ, ವ್ಯಾಪಾರ. ಕೈಗಾರಿಕೆ ಆರ್ಥಿಕ ಉದ್ಯಮಗಳು ಬೆಳೆಯುವಂತೆ ಮಾಡಿ ದೇಶಾದ್ಯಂತ ವಿವಿಧ ರೀತಿಯಲ್ಲಿ ಆಡಳಿತ ನಡೆಸುತ್ತಿವೆ. ಈ ಪ್ರಜಾಸತ್ತಾತ್ಮಕ ಸರಕಾರ ಹಾಗೂ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಾದ ಆಡಳಿತ ಘಟಕಗಳು ದೇಶಾದ್ಯಂತ ತೃಪ್ತಿಕರವಾಗಿ ಕಾರ್ಯನಿರ್ವಹಿಸಬೇಕಾಗಿದ್ದರೆ ಅವುಗಳಿಗೆ ಸಾಕಷ್ಟು ಉತ್ಪನ್ನ ಬಾಬುಗಳು ವೆಚ್ಚಕ್ಕಾಗಿ ಬೇಕೆಬೇಕು. ಈ ಉತ್ಪನ್ನ ಬಾಬುಗಳ ಮೂಲಗಳಾದ ಆದಾಯ ಕರ, ಮಾರಾಟ ಕರ, ಆಮದು ಕರ, ನಿರ್ಯಾತ ಕರ, ವೃತ್ತಿ ಕರ, ಅಬಕಾರಿ ಕರ ಖನಿಜ ಕರ, ಮನೋರಂಜನೆ ಕರ, ಒಟ್ಟು ವ್ಯವಹಾರ ಕರ, ಆಸ್ತಿ ಕರ, ಭೂಕಂದಾಯ ಮನೆಕಂದಾಯ, ಜಕಾತಿ ಕರ, ಉತ್ಪಾದನಾ ಕರ ಇತ್ಯಾದಿ ಕಂದಾಯಗಳು ಆಯಾ ಘಟಕಗಳಿಗೆ ಸಂಬಂಧಿಸಿದಂತೆ ಎಲ್ಲಿಯೂ ಯಾವ ಹಂತದಲ್ಲಿಯೂ ಸೋರದಂತೆ ಯೋಗ್ಯ ರೀತಿಯಲ್ಲಿ ಗೊತ್ತು ಪಡಿಸಿದಂತೆ ಸರಿಪೂರ್ಣವಾಗಿ ಸಂದಾಯವಾಗಲೇಬೇಕು. ಹೀಗೆ ಸಂಪೂರ್ಣವಾಗಿ ಕರ - ಕಂದಾಯಗಳು ವಸೂಲು ಆಗಬೇಕಾದಲ್ಲಿ ಅಲ್ಲಲ್ಲಿಯ ವಸೂಲಿ ಅಧಿಕಾರಿಗಳು ಯಾವುದೇ ಭಿನ್ನಭಾವಗಳಿಲ್ಲದೆ ತಾತ್ಸಾರವಿಲ್ಲದೆ ಮೀನ ಮೇಷ ಮಾಡದೆ ಸತ್ತ್ವಾದಿಂದ ಸಕಾಲದಲ್ಲಿ ವಸೂಲಿ ಮಾಡಿ ಆಯಾ ಘಟಕಗಳ ಖಜಾನೆಗೆ ಸಂದಾಯ ಮಾಡಿದರೆ ಮಾತ್ರ ಸರಕಾರ ಹಾಗೂ ಸಂಸ್ಥೆಗಳು ನಿರಾತಂಕವಾಗಿ ಯಾವುದೇ ಕೊರತೆಯಿಲ್ಲದೆ ಸಮರ್ಥರೀತಿಯಲ್ಲಿ ವಿವಿಧ ಕಾರ್ಯಗಳನ್ನು ಮಾಡಬಲ್ಲವು ಹಾಗೂ ಅವುಗಳಿಗೆ ತಕ್ಕ ವೆಚ್ಚವನ್ನು ಕೂಡ ಮಾಡಬಲ್ಲವು.

'ಕರ' ವಿಧಾನ

ದೇಶದಲ್ಲಿಯ ಸಹಕಾರ ಹಾಗೂ ಸಂಸ್ಥೆಗಳಾದ ಎಲ್ಲಾ ಹಂತದಲ್ಲಿಯ ಈ ಆಡಳಿತ ಘಟಕಗಳಿಗೆ ಸಂದಾಯವಾಗಲು ಗೊತ್ತುಪಡಿಸುವ ಕರ ಕಂದಾಯದ ಮೊತ್ತ ಹಾಗೂ ವಿಧಾನಗಳು ಬಹುಮಟ್ಟಿಗೆ ದೇಶಾದ್ಯಂತ ಟೀಕೆಗೆ ಗುರಿಯಾಗುತ್ತಲೇ ಇದೆ. ಗ್ರಾಮ ಪಂಚಾಯತಿ, ನಗರ ಪಂಚಾಯತಿ, ನಗರಸಭೆ, ನಗರ ಪಾಲಿಕೆ, ಕಂಟೋನಮೆಂಟ್ ಬೋರ್ಡ್, ಸಾನೆಟರಿ ಬೋರ್ಡ್ ಇತ್ಯಾದಿ ಸಂಸ್ಥೆಗಳ ಕಕ್ಷೆಯಲ್ಲಿ ಮನಿಕರಗಳನ್ನು ಗೊತ್ತುಪಡಿಸುವಾಗ ಅಲ್ಲಲ್ಲಿಯ ಅಧಿಕಾರರೂಢರ ಪಕ್ಷ ಪಂಗಡಗಳ ಹಸ್ತಕ್ಷೇಪಕ್ಕೆ ಹಾಗೂ ಸೆಳವಿಗೆ ಸಿಕ್ಕ ಅಧಿಕಾರಿಗಳು ಅಲ್ಲಲ್ಲಿ ಪಕ್ಷಪಾತಿಗಳಾಗಿ ಸ್ವಜನರ ಸೊತ್ತಿಗೆ ಕಡಿಮೆ ಕರವನ್ನು ಪರಜನರ ಬೇಡಿಕೆಗೆ ಹೆಚ್ಚಿಗೆ ಕರವನ್ನು ಆಕರಣೆ ಮಾಡಿರುವುದು ಕಂಡು ಬರುತ್ತದೆ. ಇದಾದ ಮೇಲೂ ಸ್ಥಳೀಯ ಅಧಿಕಾರಿಗಳು ಅಧಿಕಾರಾರೂಢ ಪಕ್ಷದ ಸ್ವಜನರು. ಕೊಡತಕ್ಕ ಕರ ಕಂದಾಯವನ್ನು ಸತ್ತಾದಿಂದ ವಸೂಲಮಾಡದೆ ಅನೇಕ ವರ್ಷಗಳವರೆಗೆ ಸೂಸಿ ಜಾಕಿಯನ್ನಾಗಿ ಮಾಡುವದು ಹಾಗೂ ಪರಜನ ಅಥವಾ ವಿರೋಧಿಗಳು ಕೊಡತಕ್ಕ ಕರ ಕಂದಾಯವನ್ನು ಸತ್ತಾದಿಂದ ನಿಂತ ಕಾಲ ಮೇಲೆ ವಸೂಲ ಮಾಡುವ ಪರಿಪಾಠವೂ ಇದೆ. ಅಲ್ಲದೆ ಕರ ಕೊಡಬೇಕಾದ ಇನ್ನೂ ಹಲವರು ತಾವು ಕೊಡಬೇಕಾದ ಕರ ಕಂದಾಯ ಯೋಗ್ಯವಿದ್ದರೂ ಕೂಡ ತಮ್ಮ ಮನೆಗಂದಾಯ ಕೊಡದ ಮಾನಿಗಳೂ ಮಹನೀಯರೂ ಹಾಗೂ ಮಂತ್ರಿಗಳೂ ಇದ್ದಾರೆ. ಇಂತಹ ಅನಿಷ್ಟ ಪರಿಪಾಠ ಹೋಗಲೇಬೇಕು.

ತಪ್ಪಿಸುವಿಕೆ

ಆದಾಯ ಕರ, ಮಾರಾಟ ಕರ ಆಮದು ಕರ, ನಿರ್ಯಾತ ಕರ, ಅಬಕಾರಿ ಕರ, ಖನಿಜಕರ ಇವುಗಳನ್ನು ಕೂಡ ಆಕರಣೆ ಮಾಡುವಲ್ಲಿ ಅಧಿಕಾರಿಗಳು ಅಲ್ಲಲ್ಲಿ ಸಮಂಜಸವಾಗಿ ಆಕರಣೆ ಮಾಡದ ಉದಾಹರಣೆ ದೇಶದಲ್ಲಿ ಬೇಕಾದಷ್ಟು ಇವೆ. ಅಧಿಕಾರಿಗಳ ಕೃಪೆಗೆ ಪಾತ್ರರಾದವರು ಅನೇಕ ಕರಗಳನ್ನು ಸಾಕಷ್ಟು ತಪ್ಪಿಸಿ ಅಥವಾ ಕಡಿಮೆ ಆಕರಣೆ ಮಾಡಿಸಿಕೊಂಡು ಹಾಗೂ ಕಡಿಮೆ ಮಾಡಿಸಿಕೊಂಡ ಮೊತ್ತವನ್ನು ಹಂತಹಂತವಾಗಿ ಕೊಟ್ಟು ಲಕ್ಷಾಪತಿಗಳಾಗಿಯೇ ಮುಂದುವರೆಯುತ್ತಿದ್ದಾರೆ. ಇದಕ್ಕೆ ಪ್ರತಿಯಾಗಿ ಅಧಿಕಾರಿಗಳ ಕೃಪೆಗೆ ಅಪಾತ್ರರಾದವರು. ಅವರ ಸಾಮರ್ಥ್ಯಕ್ಕೂ ಹೆಚ್ಚಿಗೆ ಮೊತ್ತ ನಿರ್ದಿಷ್ಟಪಡಲು ಕಾರಣರಾಗಿ ಹಾಗೂ ನಿರ್ದಿಷ್ಟವಾದ ಮೊತ್ತವನ್ನು ಒಮ್ಮಿಂದೊಮ್ಮೆಲೆ ಸಂದಾಯ ಮಾಡಲು ಕಾರಣ ಭೂತರಾಗಿ ಭಿಕ್ಷಾಪತಿಗಳೂ ಅನೇಕರಾಗಿದ್ದಾರೆ. ಅಲ್ಲದೆ ಇನ್ನೂ ಕೆಲ ಕರಕೊಡತಕ್ಕ ಲಕ್ಷಾಧೀಶರು ಅಧಿಕಾರಿಗಳನ್ನು ಬೆದರಿಸಿ ಸರಕಾರವನ್ನು ಜೇಬಿನಲ್ಲಿಟ್ಟುಕೊಂಡು ಲಕ್ಷಾಂತರ ಹಣ ಕರವನ್ನು ಸರಕಾರಕ್ಕೆ ಸಲ್ಲಿಸದೆಯೇ ಹಾಗೆಯೇ ಸಾಗಿದ್ದಾರೆ. ಈ ಅನಿಷ್ಟಗಳನ್ನು ತೊಲಗಿಸಿ ಯೋಗ್ಯ ಕರ ಆಕರಣೆಯೋಗ್ಯ ಕರ ಸಂದಾಯವಾಗಲೇಬೇಕು.

ಸ್ಥಾನಿಕ ಸಂಸ್ಥೆಗಳ ಸುಂಕದ ಕಟ್ಟೆಗಳಲ್ಲಿಯೂ ನಡೆಯುವ ಹಗರಣ ದೇಶದಾದ್ಯಂತ ಅಲ್ಲಲ್ಲಿ ಕಂಡು ಬರುತ್ತದೆ ಹಾಗೂ ಕೇಳಿ ಬರುತ್ತದೆ. ಅದೆಷ್ಟೋ ಚುನಾಯಿತ ಸದಸ್ಯರು ತಾವು ವರ್ತಕರಾಗಿ ತಮ್ಮ ಅಂಗಡಿಗೆ ಮಾರಾಟಕ್ಕೆ ಬರುವ ಸರಕನ್ನು ಜಕಾತಿ ಕಟ್ಟೆಗಳಲ್ಲಿ ಅಧಿಕಾರಿಗಳನ್ನು ಒಳಗೆ ಮಾಡಿಕೊಂಡು ಜಕಾತಿ ಕೊಡದೆ ಈ ಸಂಸ್ಥೆಗಳ ಭಾರಿ ಉತ್ಪನ್ನಕ್ಕೆ ಕನ್ನ ಹಾಕುವುದು ಅಲ್ಲಲ್ಲಿ ಕಂಡು ಬರುತ್ತಿದೆ. ಹಾಗೂ ಹೀಗೂ ಒಳಗೆ ತರದ ಸುಂಕ ಕೊಡದ ಸರಕನ್ನು ಕರ ಪಾವತಿ ಇಲ್ಲದೆ ಮಾರಾಟ ಮಾಡುತ್ತಿರುವುದರಿಂದ ಅಂಥವರ ಮೇಲೆ ಸುಂಕದ ಬಗ್ಗೆ ಹಾಗೂ ಮಾರಾಟದ ಬಗ್ಗೆ ಮತ್ತು ಆದಾಯದ ಬಗ್ಗೆ ಯಾವುದೇ ಕ್ರಮ ತೆಗೆದುಕೊಳ್ಳಲು ಯಾರಿಂದಲೂ ಸಾಧ್ಯವಿಲ್ಲ. ಈ ಅನೀತಿ ಕ್ರಮಗಳನ್ನು ತಡೆದು ಉತ್ತಮವಾದ ಉತ್ಪನ್ನವನ್ನು ಪಡೆಯಬೇಕಾದಲ್ಲಿ ಸ್ಥಳೀಯ ಸಂಸ್ಥೆಯ ಕಕ್ಷೆಯಲ್ಲಿಯ ಪ್ರತಿಯೊಬ್ಬ ವರ್ತಕ ಸಣ್ಣವರೇ ಇರಲಿ, ದೊಡ್ಡವರೇ ಇರಲಿ ತಾನು ಮಾರಾಟ ಮಾಡಿದ ಸರಕಿಗೆ ಪಾವತಿಕೊಡುವ ಕರವು ತಾನು ಮಾರಿದ ಪ್ರತಿಯೊಂದು ಸರಕಿನ ಒಟ್ಟು ಪ್ರಮಾಣವನ್ನು ಗೊತ್ತುಪಡಿಸಿ ಅವರಿಗೆ ಆಗಿಂದಾಗ್ಗೆ ಆಯಾ ಘಟಕಕ್ಕೆ ಕಳಿಸಲೇಬೇಕೆಂಬ ಕಡ್ಡಾಯವಿದ್ದರೆ ಮಾತ್ರ ಸಾಧ್ಯವಾಗುವುದು. ಉತ್ಪಾದನೆ ಹಾಗೂ ಅಬಕಾರೀ ಕರಗಳನ್ನು ಕೂಡ ತಪ್ಪಿಸಲು ಸಕ್ಕರೆ ಇತ್ಯಾದಿ ಕಾರಖಾನೆಗಳಲ್ಲಿ ಅಲ್ಲಲ್ಲಿ ತಾವು ಉತ್ಪಾದಿಸುವ ಸಂಖ್ಯಾ ಪ್ರಮಾಣಕ್ಕಿಂತಲೂ ಕಡಿಮೆ ಸಂಖ್ಯೆ ಪ್ರಮಾಣ ತೋರಿಸಿ ಸರಕಾರವನ್ನು ವಂಚಿಸುವ ಪ್ರವೃತ್ತಿ ಅಲ್ಲಲ್ಲಿ ಕಂಡು ಬರುತ್ತಿದೆ. ಇದಕ್ಕೂ ಸರಕಾರ ತಡೆ ಹಾಕಬೇಕು.

ಶಾಸನ ಅಗತ್ಯ

ಒಟ್ಟಿನ ಮೇಲೆ ಸರಕಾರಗಳಿಗೆ ಹಾಗೂ ಸ್ಥಾನಿಕ ಸಂಸ್ಥೆಗಳಿಗೆ ತಾವು ಸಮರ್ಥ ರೀತಿಯಲ್ಲಿ ಕೆಲಸ ಮಾಡಬೇಕಾದಲ್ಲಿ ತಮ್ಮ ತಮ್ಮ ಉತ್ಪನ್ನ ಮೂಲಗಳಾದ ವಿವಿಧ ಕರಗಳನ್ನು ಸರಿಯಾಗಿ ಸಮಂಜಸ ರೀತಿಯಲ್ಲಿ ಆಕರಣೆ ಮಾಡಬೇಕು. ಆಕರಣೆ ಮಾಡಿದ ಮೇಲೆ ಆ ಕರಗಳು ಭೇದ - ಭಾವವಿಲ್ಲದೆ ಸಕಾಲದಲ್ಲಿ ಸಕ್ರಮವಾಗಿ ಎಲ್ಲಿಯೂ ಸೋರದಂತೆ ವಸೂಲು ಆಗಿ ಆಯಾ ಘಟಕಗಳ ಖಜಾನೆಗೆ ಸಂದಾಯವಾಗಲೇಬೇಕು. ಬುದ್ಧಿಪೂರ್ವಕವಾಗಿ ದುರುದ್ದೇಶದಿಂದ ಕರ ಕೊಡಲು ಕಣ್ಣು ತಪ್ಪಿಸುವ ಕರಗಳ್ಳರಿಗೆ ನಿರ್ದಾಕ್ಷಿಣ್ಯವಾಗಿ ತಕ್ಕ ಶಾಸವನ್ನು ಸರಕಾರ ಹಾಗೂ ಸ್ಥಳೀಯ ಸಂಸ್ಥೆಗಳು ಮಾಡಲೇ ಬೇಕು. ಅಂದರೆ ಮಾತ್ರ ಈ ಘಟಕಗಳು ಸರಿಯಾದ ಸಾಕಷ್ಟು ಉತ್ಪನ್ನವನ್ನು ಹೊಂದಿ ತಾವು ಮಾಡಲೇಬೇಕಾದ ವಿವಿಧ ಅಭಿವೃದ್ಧಿ ಹಾಗೂ ಇತರ ಕಾರ್ಯಗಳನ್ನು ಸರಿಯಾಗಿ ಮಾಡಬಲ್ಲವು. ಇದಕ್ಕೆ ತಪ್ಪಿದರೆ ಉತ್ಪನ್ನ ಬಾಬು ಸುಸ್ಥಿಯಾಗಿ ಕಾರ್ಯ ಕುಂಠಿತವಾದೀತು ಹಾಗೂ ಸಾಲದ ಹೊರೆ ಹೊರಲಾರದ ಗಂಟು ಆದೀತು.

❑

ಕಾನೂನು ಹಾಗೂ ರೈತ

1961ರ ಮೈಸೂರು ಭೂ ಸುಧಾರಣಾ ಕಾನೂನನ್ನು ಮೈಸೂರು ಸರ್ಕಾರವು ಅನೇಕ ವರ್ಷಗಳಿಂದ ರಾಜ್ಯಾದ್ಯಂತ ಜಾರಿಗೆ ತಂದಿದ್ದರೂ ಕೂಡ ಅವರ ಕಾರ್ಯಾಚರಣೆ ಸಮರ್ಪಕವಾಗಿ ಆಗದೆ ಇರುವುದು ಸರ್ಕಾರದ ಅನಾಸ್ಥೆಯನ್ನು ಎತ್ತಿ ತೋರಿಸುತ್ತದೆಂದು ವಿಮರ್ಶಕರಿಂದು ವಿಷಾದದಿಂದ ಹೇಳಬೇಕಾಗಿದೆ. ಭೂ ಸುಧಾರಣಾ ಕಾನೂನು, ಭೂ ಸುಧಾರಣೆ, ಭೂವಡೆಯುದ ಸುಧಾರಣೆ, ರೈತನ ಸುಧಾರಣೆ, ಭೂ ಹಿಡುವಳಿ ಸುಧಾರಣೆಗಳನ್ನು ಮಾಡುವಲ್ಲಿ ಉಪಯುಕ್ತವಾಗುವ ಬದಲು ಪರಿಸ್ಥಿತಿಯನ್ನು ವಿಪರ್ಯಾಸಗೊಳಿಸುತ್ತ ನಡೆದಿದೆ.

ಜಮೀನುದಾರರು ರೈತನಿಂದ ಮನಸ್ಸಿಗೆ ತೋಚಿದಾಗ ಸಾಗುವಳಿಗೆ ಕೊಟ್ಟು ತಮ್ಮ ಜಮೀನುಗಳನ್ನು ಕಸಿದುಕೊಂಡಾರೆಂಬ ಶಂಕೆ, ಭಯ - ಭೀತಿಯಿಂದ ರೈತರು ಪರಿಣಾಮ ಕಾರಿಯಾಗಿ ತಮ್ಮ ತಾಬೆಯಲ್ಲಿಯ ಜಮೀನನ್ನು ಸರಿಯಾಗಿ ಪರಿಣಾಮಕಾರಿಯಾಗಿ ಸಾಗುಮಾಡಿ ಅಧಿಕ ಪ್ರಮಾಣದಲ್ಲಿ ಫಸಲನ್ನು ಬೆಳೆಯಲಿಕ್ಕಾಗುತ್ತಿಲ್ಲವಾದ್ದರಿಂದ ಹಾಗೂ ರೈತರಿಗೆ ತಮ್ಮ ಜಮೀನುಗಳನ್ನು ಸಾಗುಮಾಡಲು ಕೊಟ್ಟರೆ ಅವರು ಬಿಡಲಕ್ಕಿಲ್ಲವೆಂಬ ಜಮೀನುದಾರರ ಮನಃಪ್ರವೃತ್ತಿಯ ಪರಿಣಾಮದಿಂದ ಜಮಿನುದಾರರ ಭೂಮಿ ಸಾಗುಮಾಡಲ್ಪಡುತ್ತಿದ್ದಲ್ಲವಾದ್ದರಿಂದ ಹಾಗೂ ಜಮೀನುದಾರರ ಮತ್ತು ರೈತರ ಮಧ್ಯೆ ಕಂಡು ಬರುತ್ತಿದ್ದ ವೈಷಮ್ಯ ಹಾಗೂ ತಂಟೆಗಳ ಕಾರಣದಿಂದ ದೇಶದಲ್ಲಿಯ ಒಕ್ಕಲುತನ ಹಾಗೂ ಒಕ್ಕಲುತನ ಉತ್ಪತ್ತಿಗೆ ಭಾರೀ ಪೆಟ್ಟು ಬೀಳುತ್ತಿದ್ದರಿಂದ ದೇಶದಲ್ಲಿಯ ರಾಜ್ಯ ಸರಕಾರಗಳು ಅಲ್ಲಲ್ಲಿಯ ಜಮೀನ್ನುದಾರ ಹಾಗೂ ರೈತರ ಹಿತಸಂಬಂಧಗಳನ್ನು ಸರಸವಾಗಿಡುವ ಸಲುವಾಗಿ ಭೂಮಿಯಲ್ಲಿ ಉತ್ತಮ ಹಾಗೂ ಅಧಿಕ ಫಸಲು ಬೆಳೆಯುವ ಸಲುವಾಗಿ ಹಾಗೂ ಒಕ್ಕಲಿಗರ ಆರ್ಥಿಕ ಹಾಗೂ ಸಾಮಾಜಿಕ ದರ್ಜೆಯನ್ನು ಉತ್ತಮ

ಗೊಳಿಸುವ ಸಲುವಾಗಿ ಭೂಸುಧಾರಣೆ ಕಾನೂನನ್ನು ರಾಜ್ಯಾದ್ಯಂತ ವಿಸ್ತರಿಸಿ ಜಾರಿಯಲ್ಲಿ ತರಲಾಗಿದೆ ಹಾಗೂ ತಂದು ಅನೇಕ ವರ್ಷಗಳಾಗಿವೆ.

ಒಂದು ಎಕರೆಯಿಂದ ಹಿಡಿದು ಸಹಸ್ರಾರು ಎಕರೆ ಪಡೆದ ಸಣ್ಣ ಹಾಗೂ ಭಾರೀ ಭೂ ಮಾಲೀಕರೆಂಬವರೆಲ್ಲ ಭೂ ಪಡೆಯುರು ಭೂ ಸುಧಾರಣಾ ಕಾನೂನಿನ ಅಸಮರ್ಪಕವಾದ ಕಾರ್ಯಾಚರಣೆಯಿಂದ ಅಂದು ಶ್ರೀಮಂತರಾಗಿದ್ದವರು ಇಂದು ಬಡವರಾಗಿ ಪರಿವರ್ತನೆಗೊಳ್ಳುತ್ತಿದ್ದಾರೆ. ಇವರಿಗೆ ಅನೇಕ ವರ್ಷಗಳಿಂದ ಭೂಮಿಯೂ ಮರಳಿ ಸಿಕ್ಕಿಲ್ಲ ಹಾಗೂ ಭೂ ಲಾವಣಿಯೂ ದೊರೆತಿಲ್ಲ. ಅಂತೆಯೇ ಒಂದು ಎಕರೆಯಿಂದ ನೂರು ಎಕರೆಗಳವರೆಗೆ ಪರರ ಭೂಮಿಯನ್ನು ಲಾವಣಿಯಿಂದ ಮಾಡುತ್ತಿರುವ ರೈತರಾದರೂ ಕೂಡ ತಮ್ಮಲ್ಲಿರುವ ಭೂಮಿ ಎಂದು ಯಾವ ವೇಳೆಗೆ ಜಮೀನುದಾರರಿಗೆ ಮರಳಿ ಹೋಗುವವೊ ಎಂಬ ಸಂಶಯ ಹಾಗೂ ದುಗುಡದಿಂದ ಈ ಜಮೀನುಗಳನ್ನು ಉತ್ತಮ ರೀತಿಯಾಗಿ ಸಾಗು ಮಾಡಿದ ಹಾಗೂ ಅಧಿಕ ಫಸಲು ಬೆಳೆಯದ ಮನೋವೃತ್ತಿ ಹಾಗೂ ಪ್ರವೃತ್ತಿ ಬೆಳೆದು ಬಂದು ಅನೇಕ ಕಡೆ ಅಂತಹ ಗೇಣೀ ಜಮೀನು ಬೀಳುಬಿದ್ದ ದೃಶ್ಯಗಳೂ ಅಲ್ಲಲ್ಲಿ ಕಂಡುಬರುತ್ತಿವೆ. ಅಲ್ಲದೆ ಅಂತಹ ರೈತರು ಗೇಣೀ ಭೂಮಿಯಲ್ಲಿ ಉತ್ಪನ್ನ ಮಾಡಿಕೊಳ್ಳದೆ ಭೂ ಮಾಲೀಕರಿಗೆ ಅನೇಕ ದಶಕಗಳವರೆಗೆ ಲಾವಣಿಯನ್ನು ಕೊಡದೆ ಇರುವದು ಸಹ ಅನೇಕ ಕಡೆ ಕಂಡು ಬರುತ್ತದೆ. ಭೂಮಿ, ಪಡೆಯ ಹಾಗೂ ರೈತ ಇವರ ಸಂಬಂಧ ಸರಸವಾಗುವ ಬದಲು ವಿರಸವಾಗುತ್ತಲೇ ನಡೆದಿದ್ದು ಇದಕ್ಕೆ ಸರಕಾರ ಪರಿಣಾಮಕಾರಿಯಾದ ರೀತಿಯಲ್ಲಿ ಕಾರ್ಯೋನ್ಮು ಮುಖವಾಗಲೇಬೇಕು.

ಭೂ ಸುಧಾರಣಾ ಕಾನೂನಿನ ಕಾರ್ಯಾಚರಣೆಯಲ್ಲಿ ವಿಳಂಬವಾಗುತ್ತಿರುವ ಕಾರಣದಿಂದ ಭೂಮಿಯ ಮಾಲೀಕರು ಹಾಗೂ ರೈತರು ತಮ್ಮ ತಮ್ಮಲ್ಲಿಯೇ ಖಾಸಗಿಯಾಗಿ ಕೆಲ ಹೊಂದಾಣಿಕೆ ಮಾಡಿಕೊಂಡು ರೆವಿನ್ಯೂ ದಾಖಲೆಗಳಲ್ಲಿ ಭೂ ಒಡೆಯರು ರೈತರಿಗೆ ಕೊಟ್ಟ ಜಮೀನುಗಳನ್ನು ಖುದ್ದಾಗಿ ಸಾಗಿಗೆಂದು ಬರೆಯಿಸಿಕೊಂಡು ಕೆಲಕಾಲ ರೈತರಿಗೆ ಸಾಗುಮಾಡಲು ಬಿಟ್ಟು, ನಂತರ ಬಲಾತ್ಕಾರದಿಂದ ರೈತರನ್ನು ಹೊರದೂಡಿ ಸ್ವತಃ ಸಾಗುಮಾಡಿದ್ದುದು ಅಲ್ಲಲ್ಲಿ ಕಂಡುಬಂದಿದ್ದು ಅಥವಾ ವಂಚಿಸಿ ಸಾಗುವಳಿಯಿಂದ ಹೊರದಬ್ಬಿದ ಉದಾಹರಣೆಗಳೂ ಅಲ್ಲಲ್ಲಿ ಕಂಡು ಬಂದಿದೆ. ಇದಕ್ಕೆ ಪ್ರತಿಯಾಗಿ ರೈತ ತನಗೆ ಸಾಗುಮಾಡಲಿಕ್ಕೆ ಆಗದೇ ಸ್ವೇಚ್ಛೆಯಿಂದ ಜಮೀನನ್ನು ಮಾಲೀಕರಿಗೆ ಮರಳಿ ಬಿಟ್ಟು ಮಾಲೀಕರು ಸ್ವತಃ ಮಾಡಹತ್ತಿದ. ಬಹುವರ್ಷ ಕಾಲದ

ನಂತರ ತನ್ನ ಹೆಸರು ದಾಖಲೆಯಲ್ಲಿ ಉಳಿದುದರ ದುರ್ಲಾಭ ಪಡೆದು ಗ್ರಾಮಾಂತರ ಪಕ್ಷ ಪಂಗಡದ ಕಿವಿಮಾತಿಗೆ ಬಾಗಿ ಕೈಜೋರಿನಿಂದ ಭೂ ಪ್ರದೇಶ ಮಾಡಿ ಮಾಲೀಕರಿಗೆ ಕೈಕೊಟ್ಟ ರೈತರು ಅಲ್ಲಲ್ಲಿ ಕಂಡು ಬಂದಿದ್ದಾರೆ. ಭೂ ಮಾಲೀಕರನ್ನು ಹಾಗೂ ಕಾನೂನು ನೀತಿ, ನಿಯಮಗಳಿಗೆ ವಿರೋಧವಾಗಿ ರಿಕಾರ್ಡುಗಳಲ್ಲಿ ವ್ಯತಿರಿಕ್ತವಾದ ದಾಖಲೆಗಳನ್ನು ನಿರ್ಮಿಸಿ ತಂಟೆ ತಕರಾರುಗಳಿಗೆ ಆಸ್ಪದ ಮಾಡಿಕೊಡುವ ಗ್ರಾಮಾಧಿಕಾರಿಗಳೂ ಅನೇಕರು ಅಲ್ಲಲ್ಲಿ ಇದ್ದಾರೆ.

ಭೂಸುಧಾರಣೆ ಕಾನೂನಿನ ಪರಿಣಾಮವಾಗಿ ರಾಜ್ಯದಲ್ಲಿ ಟ್ರಿಬ್ಯೂನಲ್ಲುಗಳು ನಂತರ ಮುನಸೀಫ್ ಕೋರ್ಟುಗಳು ಕೂಡ ಅಸ್ತಿತ್ವದಲ್ಲಿ ಬಂದು ಈ ಕೋರ್ಟುಗಳಲ್ಲಿ (1) ಭೂಮಿ ಪಡೆಯುವ, ಸಲುವಾಗಿ, (2) ಲಾವಣಿ ಪಡೆಯುವ ಸಲುವಾಗಿ, (3) ಭೂಮಿ ಬಿಡಿಸುವ ಸಲುವಾಗಿ, (4) ಭೂಮಿ ಸ್ವಾಧೀನ ಕೊಡುವ ಸಲುವಾಗಿ ಹಾಗೂ (5) ಇತರ ಪರಿಹಾರಗಳ ಸಲುವಾಗಿ ಸಹಸ್ರಾರು ಅರ್ಜಿಗಳನ್ನು ಜಮೀನುದಾರರು, ರೈತರು ಹಾಗೂ ಇತರ ಹಿತಾಸಕ್ತಿಗಳು ಸಲ್ಲಿಸಿದ್ದಾರೆ. ಹಾಗೂ ಈ ಅರ್ಜಿಗಳ ಮುಖಾಂತರ ನ್ಯಾಯಾಲಯಗಳಿಂದ ನ್ಯಾಯವನ್ನು ಬಯಸಿದ್ದಾದರೂ ಹೀಗೆ ಬಯಿಸಿಕೊಟ್ಟ ಬಹುಪಾಲು ಅರ್ಜಿಗಳು ಅನೇಕ ವರ್ಷಗಳಿಂದ ಅಲ್ಲಲ್ಲಿ ನಿಕಾಲಿ ಆಗದೇ, ಹಾಗೆಯೇ ಉಳಿದಿವೆ. ಹಾಗೂ ಅರ್ಜಿದಾರರು ನ್ಯಾಯಾಲಯಗಳಿಗೆ ಓಡಾಡುತ್ತಲೇ ಇದ್ದಾರೆ. ಅವರಿಗೆ ಸಿಗಬೇಕಾದ ನ್ಯಾಯ ಸಿಕ್ಕೇ ಇಲ್ಲ. ಇದಕ್ಕೆ ಕಾರಣ ನ್ಯಾಯಾಲಯವಲ್ಲ ಹಾಗೂ ನ್ಯಾಯಾಲಯದ ನ್ಯಾಯಾಧೀಶರು ಅಲ್ಲ ಹಾಗೂ ಅವರ ಸಿಬ್ಬಂದಿಯೂ ಅಲ್ಲ. ಇರತಕ್ಕ ಮೂಲಕಾರಣ ಸರ್ಕಾರದ ಅನಾಸ್ಥೆ ಅಂದರೆ ತಪ್ಪೇನಲ್ಲ. ರಾಜ್ಯದ ಹಲವು ಕಡೆ ಹಲವಾರು ತಿಂಗಳಿಂದ, ಹಲವು ಕಡೆ ಹಲವಾರು ವರ್ಷಗಳಿಂದ ಭೂ ಸುಧಾರಣೆ ಕಾನೂನಿನ ಪ್ರಕಾರ ನಡೆಯಬೇಕಾದ ಅರ್ಜಿಗಳನ್ನು ಇತ್ಯರ್ಥಪಡಿಸಲು ಕೆಲವು ಕಡೆ ಸಾಕಷ್ಟು ನ್ಯಾಯಾಲಯಗಳೂ ಇಲ್ಲ. ಇನ್ನು ಕೆಲವು ಕಡೆ ನ್ಯಾಯಾಲಯಗಳಿದ್ದರೂ ನ್ಯಾಯಾಧೀಶರೂ ಇಲ್ಲ. ಈ ಬಗ್ಗೆ ಸರ್ಕಾರ ನ್ಯಾಯಾಧೀಶರನ್ನು ನೇಮಿಸಿಯೂ ಇಲ್ಲ. ಸರ್ಕಾರ ಮನಸ್ಸು ಮಾಡಿದರೆ ಏನು ಬೇಕಾದರೂ ಮಾಡಬಲ್ಲದು. ಸರ್ಕಾರದ ಹಲವು ಇಲಾಖೆಗಳಲ್ಲಿ ಅಲ್ಲಲ್ಲಿ ಅನಾವಶ್ಯಕವಾಗಿ ಅಧಿಕಾರಿಗಳನ್ನು ನೇಮಿಸಿ ಅವರಿಗೆ ತಕ್ಕ ಹಾಗೂ ಸಾಕಷ್ಟು ಕೆಲಸ ಕೊಡದೆ ಅಥವಾ ಅವರಿಂದ ಕೆಲಸ ತೆಗೆದುಕೊಳ್ಳದೇ ಸಂಬಳ ಕೊಟ್ಟು ಸರ್ಕಾರದ ಹಣವನ್ನು ವ್ಯರ್ಥವಾಗಿ ಖರ್ಚು ಮಾಡುತ್ತಿರುವ ನಿದರ್ಶನಗಳು ಅನೇಕ ಇರುತ್ತಿರುವಾಗ ದೇಶದಲ್ಲಿಯ ರೈತರ, ಭೂ ಮಾಲೀಕರ ಹಾಗೂ ಕೃಷಿ ಕ್ರಾಂತಿಯ

ಸಂಬಂಧವನ್ನು ಸರಸವಾಗಿ ಮಾಡಿ ಜನತೆಯ ಆರ್ಥಿಕ ಸಾಮಾಜಿಕ ದರ್ಜೆಯನ್ನು ಊರ್ಜಿತಗೊಳಿಸುವುದಕ್ಕಾಗಿ ಹಾಗೂ ದೇಶದಲ್ಲಿಯ ಒಕ್ಕಲುತನ ಅಭಿವೃದ್ಧಿಗಾಗಿ ಎಲ್ಲಾ ಭೂಮಿಯನ್ನು ಉತ್ತಮ, ಅಧಿಕ, ಪ್ರಶಸ್ತ ಹಾಗೂ ಪರಿಶ್ರಮಪೂರ್ವಕವಾದ ಸಾಗುವಳಿ ಮಾಡಲು ಅತ್ಯವಶ್ಯಕವಾಗಿ ಬೇಕಾಗಿರುವ ಎಲ್ಲಾ ವಿಧಿ ವಿಧಾನಗಳನ್ನು ಪರಿಣಾಮಕಾರಿಯಾದ ಕಾರ್ಯಾಚರಣೆಯಲ್ಲಿ ಸರ್ಕಾರ ಶೀಘ್ರವಾಗಿ ತಾತ್ಸಾರ ಮಾಡದೆ ತರಲೇಬೇಕು ಅಂದರೆ ಮಾತ್ರ ಭೂ ಮಾಲೀಕರ, ರೈತರ ಹಾಗೂ ಇತರರ ಮಧುರ ಬಾಂಧವ್ಯ ಸರಸವಾಗಿ ಒಕ್ಕಲುತನ ಸುಧಾರಣೆ ಪರಿಣಾಮಕಾರಿಯಾಗಿ ಆದೀತು, ಹಾಗೂ ಕೃಷಿ ಕ್ರಾಂತಿ ಯಶಸ್ವಿಯಾಗಿ ಭಾರತದ ಒಕ್ಕಲುತನ ಹಾಗೂ ಜನತೆಯ ಆರ್ಥಿಕ ಅಭಿವೃದ್ಧಿಗೆ ತಾರಕವಾದೀತು.

❑

ಭ್ರಷ್ಟಾಚಾರ ಮತ್ತು ದೇಶ ಕ್ಷೇಮ

ಬೇಲಿಯೇ ಎದ್ದು ಹೊಲ ಮೇದರೆ, ಕೇಳುವವರಾರು, ತಾಯಿಯ ಹಾಲೇ ಹಾಲಾಹಲವಾದಾಗ ಮಗು ಬದುಕುವದೆಂತು, ನೆರಳು ನೀಡಬೇಕಾಗಿದ್ದ ಮರವೇ ಮೈಮೇಲೆ ಬಿದ್ದರೆ ಉಳಿಯಲಿಕ್ಕೆ ಸಾಧ್ಯವೆ, ಬಾಯಾರಿಕೆಗೆ ನೀರು ನೀಡಬೇಕಿದ್ದ ಜಲಾಶಯ ಬತ್ತಿದ ಮೇಲೆ ನೀರಡಿಕೆ ಹಿಂಗುವದಾದರೂ ಹೇಗೆ, ನೆಚ್ಚಿದ ಆಕಳು ಕಂದನ್ನು ಹಾಕಿದರೆ ಹಾಲು ಸಿಗುವದೆಂತು, ಕಾಯುವವನೇ ಕೊಲೆಗಾರನಾದರೆ, ಜೀವ ಉಳಿಯುವದೆಂತು, ರಕ್ಷಕನೇ ಭಕ್ಷಕನಾದರೆ ಬದುಕುವದೆಂತು, ಹೊಳೆಯಲ್ಲಿ ಹೆಂಡವಾದರೆ, ಕುಡಿಯುವ ನೀರೆಲ್ಲಿ ಎಂಬಂತಾಗಿದೆ. ಇದೇ ಪ್ರಸ್ತುತ ಪ್ರಜಾಪ್ರಭುತ್ವದಲ್ಲಿ ಕೇಂದ್ರ ಹಾಗೂ ರಾಜ್ಯ ಸರಕಾರಗಳ ಆಡಳಿತ ವೈಖರಿಯಿಂದಾದ ಜನಜೀವನದ ಗತಿ. ಇದಕ್ಕೆ ಪರಿಹಾರವೇನು? ಈ ಬಗ್ಗೆ ಯಾರು ಚಿಂತಿಸಬೇಕು? ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೇ ಪ್ರಭುಗಳು, ನಮ್ಮೀ ಪ್ರಜಾಪ್ರಭುತ್ವದಲ್ಲಿ ಪ್ರಜೆಗಳು ಪ್ರಜೆಗಳಾಗದೆ ಗುಲಾಮರಾಗಿರುವದು ನಮ್ಮ ಪ್ರಜಾಪ್ರಭುತ್ವದ ದುರ್ದೈವ. ಪ್ರಜಾಪ್ರಭುಗಳ ಪ್ರತಿನಿಧಿಯಾಗಿ ಈ ದೇಶದ ಆಡಳಿತ ಚುಕ್ಕಾಣಿ ಹಿಡಿದು ಅಧಿಕಾರಿಗಳ ಮುಖಾಂತರ ಆಡಳಿತ ನಡೆಸಬೇಕಾದ ಪ್ರಜಾಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಗ್ರಾಮ ಮಟ್ಟದಿಂದ ರಾಜಧಾನಿ ಮಟ್ಟದವರೆಗೆ ನಿರಂಕುಶ ಪ್ರಭುಗಳಂತೆ ವರ್ತಿಸುತ್ತಿದ್ದಾರೆ. ಪ್ರಜೆಗಳ ಪರಿಸ್ಥಿತಿ ಗುಲಾಮರ ಪರಿಸ್ಥಿತಿಯಾಗಿದೆ.

ದೇಶಾದ್ಯಂತ ಬಡತನ, ದುರಾಡಳಿತ, ದುರಹಂಕಾರ, ದಾಕ್ಷಿಣ್ಯಪರ, ಅದಕ್ಷತೆ, ಸ್ವಾರ್ಥ, ಅಕ್ರಮ ಹೇರಳ ಹಣಗಳಿಕೆ, ಭ್ರಷ್ಟಾಚಾರ, ಪಕ್ಷಪಾತ, ಸ್ವಜನ ಪಕ್ಷಪಾತ, ಅಧಿಕಾರ ದುರುಪಯೋಗ, ಶೋಷಣೆ, ದೌರ್ಜನ್ಯ, ಅನ್ಯಾಯ, ಅನೀತಿ, ಅತ್ಯಾಚಾರ ಇತ್ಯಾದಿ ಅನಿಷ್ಟಗಳ ಸಾಮಾಜಿಕ ಮಹಾರೋಗವಿಂದು ಅವರಿಸಿಕೊಂಡಿದೆ. ಈ ಮಹಾರೋಗದ ನಿವಾರಣೆ ಹೇಗೆ? ಸಮಾಜ ಇದರಿಂದ ಗುಣಮುಖ ಹೇಗಾಗಬೇಕು? ಎಂಬುದನ್ನು ಮತಿವಂತ, ಪ್ರಜ್ಞಾವಂತ ಬುದ್ಧಿ ಜೀವಿಗಳು ಹಾಗೂ ಮತದಾರರು ಆಳವಾಗಿ ಚಿಂತಿಸಿ ಮಾರ್ಗವನ್ನು ಕಂಡು ಹಿಡಿಯಬೇಕಾಗಿದೆ. ಇಲ್ಲದೆ ಹೋದರೆ ಮಹಾತ್ಮಾ ಗಾಂಧಿಯವರ ದುರೀಣತ್ವದಲ್ಲಿ ದೊರಕಿಸಿದ ಸ್ವಾತಂತ್ರ್ಯ ಹಾಗೂ ಗಣತಂತ್ರ ಗಂಡಾಂಡರಕ್ಕೀಡಾಗುವುದರಲ್ಲಿ ಸಂಶಯವೇ ಇಲ್ಲ. ಕಾನೂನದಲ್ಲಿ ಕಣೆಗೆಯೇ ಲೇಸು

(Might is right in Jungle) ಭುಕ್ಷಿತಃ ಕಿಂ ನ ಕರೋತಿ ಪಾಪಂ (ಹಸಿದ ಮನುಷ್ಯ ಯಾವ ಪಾಪವನ್ನು ಮಾಡಲಿಕ್ಕೆ ಹೇಸುವದಿಲ್ಲ) ಎಂಬಂತೆ ನಮ್ಮ ದೇಶದ ಪರಿಸ್ಥಿತಿಯಾದೀತೆಂಬುದನ್ನು ಈಗಲೇ ಗಮನಿಸಿದರೆ ಒಳ್ಳೆಯದು.

ಕಾನೂನಿನ ಮುಂದೆ ಎಲ್ಲರೂ ಒಂದೇ, ಆನೆ ಕದ್ದರೂ ಕಳ್ಳನೇ ಅಡಿಕೆ ಕದ್ದರೂ ಕಳ್ಳನೇ. ಇಬ್ಬರಿಗೂ ಶಿಕ್ಷೆಯಾಗಲೇಬೇಕು. ಅಪ್ಪ ಅಧಿಕಾರಿಯಾದರೆ, ಅಪರಾಧ ಯಾರದು, ಎಂಬ ಬ್ರಿಟಿಷ ಸರಕಾರದ ಕಾಲದ ಗಾದೆಯಿದೆ. ಮಾಡಿದ್ದನ್ನು ಉಂಣೋ ಮಹಾರಾಯವೆಂಬಂತೆ, ದೊಡ್ಡವರೆ ಇರಲೀ ಸಣ್ಣವರೇ ಇರಲೀ ಅವರು ಮಾಡಿದ ತಪ್ಪಿಗಾಗಿ ತಕ್ಕ ಶಿಕ್ಷೆಯನ್ನು ಅನುಭವಿಸಲೇಬೇಕು. ಕಾಸೂ ಇಲ್ಲದೆ ಕುಡಿಯಲಿಕ್ಕೆ ಗಂಜಿಯೂ ಇಲ್ಲದ ಬಡವ ತಪ್ಪು ಮಾಡಿದರೆ ಅವನನ್ನು ನಾವಿಂದು ಶಿಕ್ಷಿಸುತ್ತೇವೆ. ಆದರೆ ದೊಡ್ಡ, ದೊಡ್ಡ ರಾಜಕೀಯ ಮುಖಂಡರು ಹಾಗೂ ದೊಡ್ಡ ದೊಡ್ಡ ಅಧಿಕಾರಿಗಳೂ ಗುಡ್ಡದಂತಹ ತಪ್ಪುಗಳನ್ನು ಮಾಡಿದರೂ ಅವರು ಆ ತಪ್ಪಿನಿಂದ ಪಾರಾಗುವಂತಹ ಸನ್ನಿವೇಶಗಳನ್ನುಂಟು ಮಾಡಿಕೊಂಡು ಪಾರಾಗುತ್ತಿದ್ದಾರೆ.

ಪರರಾಷ್ಟ್ರಗಳಲ್ಲಿ ಸಾಮಾಜಿಕ ಕಳ್ಳರು ಅಪಹರಣಕಾರರು ಜನ ವಿರೋಧಿ ಅಪರಾಧ ಮಾಡಿದವರು, ಭ್ರಷ್ಟರು ತಮ್ಮ ಸಂಪನ್ಮೂಲಕ್ಕಿಂತ, ಹೆಚ್ಚು ಹೇರಳ ಹಣ ಆಸ್ತಿ ಗಳಿಸಿದವರು, ಪಕ್ಷಪಾತಿಗಳು, ಸ್ವಜನ ಪಕ್ಷಪಾತಿಗಳು, ಅಧಿಕಾರ ದುರುಪಯೋಗ ಮಾಡಿದವರು ಮೊದಲಾದ ಸಮಾಜ ಘಾತಕ ಮುಖಂಡರನ್ನು ಸಾರ್ವಜನಿಕವಾಗಿ ಅಲ್ಲಿಯ ಸರಕಾರಗಳು ಗಲ್ಲಿಗೇರಿಸುತ್ತವೆ, ಇಲ್ಲವೆ ಉಗ್ರಶಿಕ್ಷೆಗೆ ಗುರಿ ಮಾಡುತ್ತಿವೆ. ಹೀಗೆ ಶಿಕ್ಷೆಗೆ ಗುರಿಯಾಗಲ್ಪಟ್ಟವರಲ್ಲಿ ರಾಷ್ಟ್ರೀಯ ಮುಖಂಡರು ಕೂಡಾ ಸೇರಿದ್ದಾರೆ. ಬಾಂಗ್ಲಾ ದೇಶದ ಮಾಜಿ ರಾಷ್ಟ್ರಾಧ್ಯಕ್ಷ ಜನರಲ್ ಏರ್ಷಾದ ಅವರು ಬಾಂಗ್ಲಾದಲ್ಲಿ ಅಪರಾಧಿಯಾಗಿ 13 ವರ್ಷ ಜೇಲುವಾಸ ಶಿಕ್ಷೆ ಅನುಭವಿಸುತ್ತಿದ್ದಾರೆ. ಆದರೆ ನಮ್ಮ ದೇಶದಲ್ಲಿ ಇಂತಹ ಅಪರಾಧಗಳನ್ನು ಮಾಡಿದ ಅನೇಕ ರಾಜಕೀಯ ಹಾಗೂ ಅಧಿಕಾರ ಮುಖಂಡರಿದ್ದರೂ ಅವರನ್ನು ಯಾವುದೇ ಸರಕಾರ ವಿಚಾರಣೆಗೆ ಗುರಿಮಾಡಿ ಉಗ್ರಶಿಕ್ಷೆ ಕೊಡಲು ಮುಂದೆ ಬಾರದೇ ಹಿಂದೇಟು ಹಾಕುತ್ತಿರುವದು ಹಾಗೂ ಲೋಪದೋಷದಿಂದ ಕೂಡಿದ ಕಾನೂನುಗಳನ್ನು ಹೊಂದಿರುವದು ದೇಶದ ದುರ್ದೈವ. ಇದಕ್ಕೆ ಕಾರಣ ವಿವಿಧ ಕೆಲವು ರಾಜಕೀಯ ಪಕ್ಷಗಳ ಸರಕಾರಗಳ ಹಾಗೂ ವಿರೋಧ ಪಕ್ಷಗಳ ನಡುವೆ ಇರುವ ಅನೈತಿಕ ಸಹಕಾರ ಇಲ್ಲವೆ ಮಿಲಾಫಿ ಹಾಗೂ ರಾಜಕೀಯ ಪಕ್ಷಗಳ ಸರಕಾರದಲ್ಲಿರುವ ಬಹುತೇಕ ಅಪರಾಧಿ ರಾಜಕೀಯ ಕೆಲವು ಮುಖಂಡರು.

ಭ್ರಷ್ಟಾಚಾರ ನಿರೋಧ ಕಾಯ್ದೆಗಳನೇಕ ನಮ್ಮ ದೇಶದಲ್ಲಿದೆ. ಈ ಕಾಯ್ದೆಯ ಚೌಕಟ್ಟಿನಲ್ಲಿ ಪಾರಾಗಲಿಕ್ಕೆ ಬರುವ ಕೆಲವೊಂದು ನ್ಯೂನತೆಯ ರಂಧ್ರಗಳಿದ್ದು, ಈ ರಂಧ್ರಗಳ ಮುಖಾಂತರ ಅನೇಕಾನೇಕ ರಾಜಕೀಯ ಮುಖಂಡ ಅಪರಾಧಿಗಳು ನುಸುಳಿ ಹೋಗುತ್ತಿದ್ದಾರೆ. ಅಂತಹ ನ್ಯೂನತೆಗಳನ್ನು ಸರಿಪಡಿಸುವ ತಿದ್ದುಪಡಿಗಳನ್ನು ಸಹ

ಸರಕಾರಗಳು ಮಾಡಲಿಕ್ಕೆ ಹಿಂದೇಟು ಹಾಕಿ ಅಪರೋಕ್ಷವಾಗಿ ಭ್ರಷ್ಟ ರಾಜಕಾರಣಿಗಳಿಗೆ ಹಾಗೂ ಅಧಿಕಾರಿಗಳಿಗೆ ರಕ್ಷಣೆ ಕೊಡಲಾಗುತ್ತದೆ. ಇದಕ್ಕೆ ಉದಾಹರಣೆಯಾಗಿ ನಮ್ಮ ಕರ್ನಾಟಕ ರಾಜ್ಯದ ಲೋಕಾಯುಕ್ತ ಕಾನೂನನ್ನೇ ಕೊಡಬಹುದಾಗಿದೆ. ನಮ್ಮ ದೇಶದ ಶಾಸಕರಿಗೆ, ಸಂಸದರಿಗೆ, ಮಂತ್ರಿಗಳಿಗೆ, ಅವರಿಗಿರುವ ಆಸ್ತಿ, ಆಸ್ತಿ ಉತ್ಪನ್ನ, ಪಡೆದ ಪಗಾರ, ಪಡೆದ ಭತ್ತೆ ಎಷ್ಟು, ಅವರು ಮಾಡಿದ ಖರ್ಚು ಎಷ್ಟು ಅವರ ಹೆಸರಿನಲ್ಲಿ ಅವರ ಹೆಂಡಿರು ಮಕ್ಕಳ ಹೆಸರಿನಲ್ಲಿ ಇತರ ಅವರ ಸಂಬಂಧಿಗಳ ಹೆಸರಿನಲ್ಲಿ ಗಳಿಸಿರುವ ಆಸ್ತಿ, ಹಣ ಹಾಗೂ ಬೆಳ್ಳಿ - ಬಂಗಾರ ವ ದಾಗೀನಗಳೆಷ್ಟು ಹಾಗೂ ಅವರ ಆಡಂಬರ ಜೀವನದ ದುಂದುವೆಚ್ಚ ಎಷ್ಟು ಎಂಬುದನ್ನು ಪತ್ತೆಹಚ್ಚಿ ಅವರ ನಿಶ್ಚಿತ ಉತ್ಪನ್ನಕ್ಕಿಂತ ಹೆಚ್ಚು ಹೇರಳ ಗಳಿಕೆ ಮಾಡಿದವರನ್ನು ಉಗ್ರಶಿಕ್ಷೆಗೆ ಗುರಿಮಾಡಿದರೆ ಮಾತ್ರ ಕಳಂಕರಹಿತ ಸರಕಾರ ನಮ್ಮ ದೇಶದಲ್ಲಿ ಉಳಿಯ ಬಲ್ಲುದು. ನಮ್ಮ ದೇಶದಲ್ಲಿ ಅಧಿಕಾರಿಗಳು ಭ್ರಷ್ಟರಾಗಲಿಕ್ಕೆ ಮೂಲ ಕಾರಣ ಅನೇಕ ಪ್ರಜಾಪ್ರತಿನಿಧಿಗಳೇ ಎಂದರೆ ತಪ್ಪಾಗಲಾರದು. ಪ್ರಜಾಪ್ರತಿನಿಧಿಗಳು ಪ್ರಾಮಾಣಿಕವಾಗಿ ತಮ್ಮ ಕರ್ತವ್ಯವನ್ನು ನಿರ್ವಹಿಸಿದರೆ, ದೇಶದಲ್ಲಿ ಪ್ರಜಾಪ್ರಭುತ್ವ ಸುಭದ್ರವಾಗಿ ನಡೆಯುಬಲ್ಲುದು ಹಾಗೂ ಅಧಿಕಾರಿಗಳು ಸಹ ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸಬಲ್ಲರು. ಭ್ರಷ್ಟ ರಾಜಕಾರಿಣಿಗಳಿಗೆ ಉಗ್ರ ಶಿಕ್ಷೆಯಾಗಿದ್ದರೆ ಜೈಲಿನಲ್ಲಿರಬೇಕಾಗಿದ್ದ ಅನೇಕ ರಾಜಕೀಯ ಮುಖಂಡರು ಇಂದು ಸರಕಾರದ ಹೊಣೆಗಾರ ಸ್ಥಾನದಲ್ಲಿ ಇರುತ್ತಿರಲಿಲ್ಲ.

ಪ್ರಜಾಪ್ರತಿನಿಧಿಗಳ ಅಧಿಕಾರ ಅವಧಿ 5 ವರ್ಷ. ಆದರೆ ಅಧಿಕಾರಿಗಳ ಅವಧಿ ನಾಲ್ಕೂರು ಪಟ್ಟು ಹೆಚ್ಚು. ಈ ಪರಿಸ್ಥಿತಿಯಲ್ಲಿ ಜಾಗೃತ ದಳದ ಅಧಿಕಾರಿಗಳು ಯಾರ ದಾಕ್ಷಿಣ್ಯಕ್ಕೂ ಒಳಗಾಗದೆ "ದುಷ್ಟ ಶಿಕ್ಷಂ ಶಿಷ್ಟ ರಕ್ಷಂ" ಎನ್ನುವಂತೆ ಶಾಸಕರೇ ಇರಲೀ, ಮಂತ್ರಿಯೇ ಇರಲೀ, ಮಹಾಮಂತ್ರಿ ಇರಲೀ, ಅವರೆಲ್ಲರೂ ಕಾನೂನಿನ ಎದುರಿಗೆ ಒಬ್ಬ ಬಡವನಿಗೂ ಸರಿಸಮಾನವೆಂದು ತಿಳಿದು ನಿರ್ದಾಕ್ಷಿಣ್ಯವಾಗಿ ತನಿಖೆ ಮಾಡಿ ಉಗ್ರ ಶಿಕ್ಷೆಗೆ ಗುರಿ ಮಾಡುವ ಕ್ರಮ ತೆಗೆದುಕೊಂಡರೆ ಮಾತ್ರ ಅನಿಷ್ಟಗಳ ಸಾಮಾಜಿಕ ಮಹಾರೋಗ ವಾಸಿಯಾಗಬಲ್ಲುದು, ಹಾಗೂ ಸ್ವಚ್ಛ ಹಾಗೂ ಪರಿಶುದ್ಧವಾದ ಆಡಳಿತ ನಮ್ಮ ದೇಶದಲ್ಲಿ ನೆಲೆಗೊಳ್ಳಬಹುದು. ಆಡಳಿತ ಹಾಗೂ ವಿರೋಧ ಪಕ್ಷಗಳೆರಡರಲ್ಲಿಯೂ ಅಯೋಗ್ಯ ಹಾಗೂ ಭ್ರಷ್ಟರಾದ ಅನೇಕ ಮುಖಂಡರುಗಳಿದ್ದು ಎರಡೂ ಪಕ್ಷದವರು ಮಿಲಾಫಿಯಾಗಿ ಇಲ್ಲವೆ ಅಪರೋಕ್ಷ ಹೊಂದಾಣಿಕೆ ಮಾಡಿಕೊಂಡು ಅವರ ತಪ್ಪನ್ನು ಇವರು ಇವರ ತಪ್ಪನ್ನು ಅವರು ವಿಧಾನ ಮಂಡಳ ಹಾಗೂ ಸಂಸತ್ತುಗಳಲ್ಲಿ ಸಮರ್ಪಕವಾಗಿ ಎತ್ತಿ ತೋರಿಸದೆ ಪರಸ್ಪರವಾದ ಅನೈತಿಕ ಹಾಗೂ ಅಪರೋಕ್ಷವಾದ ತಿಳುವಳಿಕೆಯಿಂದ ನಡೆಸಿಕೊಂಡು ಈ ದೇಶದ ಪ್ರಜಾಪ್ರಭುಗವನ್ನು ಸಂಸತ್ತು, ವಿಧಾನ ಮಂಡಲ ಹಾಗೂ ಸಾರ್ವಜನಿಕರನ್ನೂ, ಕೆಲವು ರಾಜ್ಯಗಳಲ್ಲಿ ವಂಚಿಸುತ್ತಿರುವದು ಪ್ರಜಾಪ್ರಭುತ್ವದ ದುರ್ದೈವ. ನಾಚಿಕೆ, ಮಾನ, ಮರ್ಯಾದೆ ಮೂರೂ ತೊರೆದು ಅಪಾರ ಅಕ್ರಮ ಸಂಪತ್ತನ್ನು ಸಂಪಾದಿಸುವದೇ ಭ್ರಷ್ಟ ರಾಜಕಾರಿಣಿಗಳ ಕಸಬು ಆಗಿ, ದೇಶದ ಹಾಗೂ ಸಮಾಜದ

ಸುಲಿಗೆ ಹಾಗೂ ಶೋಷಣೆಯಾಗಿ ಸಾಮಾನ್ಯ ಜನಜೀವನ ಗಂಡಾಂತರದ ರೇಖೆ ಮುಟ್ಟಿದರೆ ಭಯೋತ್ಪಾದನೆ ಹೆಚ್ಚಾಗಿ ಕ್ರಾಂತಿಯಾದೀತೆಂಬುದನ್ನು ದುರಹಂಕಾಗಿ ಭ್ರಷ್ಟ ರಾಜಕೀಯ ಮುಖಂಡರು ಸಾರ್ವಜನಿಕ ಹಿತದೃಷ್ಟಿಯಿಂದ ಅರಿತರೆ ಎಲ್ಲರಿಗೂ ಹಿತಕರ. ಶೈಕ್ಷಣಿಕ ವರ್ಗಗಳ ಹೊರಗಡೆ ಸಾರ್ವಜನಿಕರಿಗೆ ಮತಿವಂತ ಹಾಗೂ ಪ್ರಜ್ಞಾವಂತರಾಗಿ ಚುನಾವಣೆಗಳಲ್ಲಿ ಮತನೀಡಲು ತಿಳಿವಳಿಕೆ ಕೊಡುವಲ್ಲಿ ಅಥವಾ ಶಿಕ್ಷಣ ಕೊಡುವಲ್ಲಿ ಗ್ರಾಮಾಂತರ ಪ್ರದೇಶದ ಪ್ರಾಥಮಿಕ ಶಾಲಾ ಶಿಕ್ಷಕರಿಂದ ಹಿಡಿದು ಮಾಧ್ಯಮಿಕ, ಕಾಲೇಜು ಹಾಗೂ ವಿಶ್ವವಿದ್ಯಾಲಯಗಳ ಶಿಕ್ಷಕರ ವರೆಗಿನ ಎಲ್ಲರೂ ಮುಂದಾದರೆ ನಮ್ಮ ರಾಷ್ಟ್ರದ ಉದ್ಧಾರವಾಗಬಲ್ಲುದು ಹಾಗೂ ಶಿಕ್ಷಕರ ಪಾತ್ರ ಸಾರ್ಥಕವಾಗಬಲ್ಲುದು.

❑

ಸಾರಿಗೆ ಸಂಸ್ಥೆಯ ಸುವ್ಯವಸ್ಥೆ

ಕರ್ನಾಟಕ ರಾಜ್ಯ ಸಾರಿಗೆ ನಿಗಮ ರಾಜ್ಯದ ಜನತೆಗೆ ಅನುಕೂಲವಾಗುವ ಪ್ರಯಾಣ ವ್ಯವಸ್ಥೆ ಮಾಡಿ ಕಡಿಮೆ ಹಾಗೂ ಯೋಗ್ಯ ಪ್ರಯಾಣ ದರವನ್ನು ಆಕರಣೆ ಮಾಡಬೇಕೇ ಹೊರತು ಆಗಿಂದಾಗ್ಗೆ ಸಕಾರಣವಿಲ್ಲದೆ ಏರಿಸಿ ಪ್ರಯಾಣಿಕರಿಗೆ ತೊಂದರೆ ಕೊಡತಕ್ಕಂಥಾದ್ದು ಆಗಬಾರದು. ಈ ನಿಗಮ ಅದಕ್ಷತೆ, ಅಶಿಸ್ತು, ಅವ್ಯವಸ್ಥೆ, ಅಂದಾದುಂದಿ, ಅಸಮರ್ಥತೆ, ಬೇಜವಾಬ್ದಾರಿ, ಕಾರ್ಯಚ್ಯುತಿ ಮೊದಲಾದ ಅನಿಷ್ಟಗಳ, ಅಕ್ರಮಗಳ ಕೂಟವಾಗಿದ್ದು, "ಹೇಳೋರು, ಕೇಳೋರು ಯಾರೂ ಇಲ್ಲ" "ದಾದ ನೈ ಪೂಕಾರ ನೈ" ಅನ್ನುವಂತಗ ಪರಿಸ್ಥಿತಿ ಉಂಟಾಗಿ ಸಾರ್ವಜನಿಕರಿಗೆ ಅತೀವ ತೊಂದರೆಯುಂಟಾಗಿ ಅನುಕೂಲವೆಂಬುದೇ ಇಲ್ಲವಾಗಿರುವುದು ದುರ್ದೈವ. ಇಲ್ಲಿ ಆಡಳಿತ ಮಂಡಳಿ ಹಾಗೂ ಸರಕಾರದ ಹಿಡಿತವೇ ಕೈತಪ್ಪಿ ಹೋಗಿದೆ.

ನಿರ್ವಾಹಕರ ಹಾಗೂ ಇತರರ ದುರ್ವಿನಿಯೋಗ ಮತ್ತು ಭ್ರಷ್ಟಾಚಾರ, ನಿರ್ವಾಹಕರ ಹಾಗೂ ಚಾಲಕರ ಅಕ್ರಮ ಪ್ರಕರಣ, ಸಾರಿಗೆ ಕ್ರಮಬಾಹಿರತೆ, ಸಂಸ್ಥೆಯ ಸ್ವತ್ತಿಗಾದ ಹಾನಿ ಮತ್ತು ನಷ್ಟ, ನಿಗಮದ ಆಸ್ತಿ ಕಳವು, ಸಂಸ್ಥೆಯ ಸ್ವತ್ತು ಹಾಗೂ ವಾಹನಗಳ ದುರುಪಯೋಗ, ಅಸಭ್ಯವರ್ತನೆ, ದರ್ಪ, ಪಹರೆ ಮತ್ತು ಕಾವಲು ಸಿಬ್ಬಂದಿಯವರ ಕರ್ತವ್ಯಲೋಪ ಇತ್ಯಾದಿ ಪ್ರಕರಣಗಳು 89-90ರಲ್ಲಿ 2500 ಇದ್ದರೆ 90-91ರಲ್ಲಿ 5203ಕ್ಕೇರಿದೆ. 1990-91 ರಲ್ಲಿ ಕಂಡಕ್ಟರ್ ಹಾಗೂ ಇತರ ಸಿಬ್ಬಂದಿ ಮೇಲಿನ ಡಿಫಾಲ್ಟ ಕೇಸುಗಳ ಸಂಖ್ಯೆ 54590 ಇದ್ದು, ಈಗ ಅತಿಯಾಗಿ ಏರಿದ್ದು, 90-91ರ ಕೊನೆಗೆ ಇತ್ಯರ್ಥವಾಗದೆ ಬಾಕಿ ಇರುವ ಕೇಸುಗಳ ಸಂಖ್ಯೆ 15724 ಇದ್ದು, ಈ ಸಂಸ್ಥೆ ಅಕ್ರಮಗಳ ಆಗರವೆಂದರೆ ತಪ್ಪಾಗಲಾರದು. ಸಣ್ಣಪುಟ್ಟ ಕ್ಷುಲ್ಲಕ ಕಾರಣಗಳಿಗಾಗಿ ಅನೇಕ ನೌಕರರನ್ನು ಶಿಕ್ಷಿಸಿದ್ದು ಅಥವಾ ನೌಕರಿಯಿಂದ ತೆಗೆದು ಹಾಕಿದ್ದು ಅನೇಕ ಗಂಭೀರ ಸ್ವರೂಪದ ತಪ್ಪುಗಳನ್ನು ಎಸಗಿದ ಅನೇಕರಿಗೆ ರಕ್ಷಣೆ ಕೂಡ ಈ ಸಂಸ್ಥೆಯಲ್ಲಿದೆ. ಅನೇಕ ಅಕ್ರಮಗಳನ್ನು ಸಂಸ್ಥೆಯ ನೌಕರರ ಯೂನಿಯನ್‌ದವರೇ ಎತ್ತಿ ತೋರಿಸಿ ಉತ್ತಮ ಸಲಹೆ ಸೂಚನೆ ಕೊಟ್ಟಿದ್ದರೂ ಅವುಗಳನ್ನು ಆಡಳಿತ ಮಂಡಳಿ ಹಾಗೂ ಸರ್ಕಾರ ಗಮನಿಸಿಲ್ಲ. ವಿಧಾನ ಮಂಡಳದ ಸಮಿತಿಗಳು ಕೊಟ್ಟ ಸೂಚನೆಗಳನ್ನು ಈ ಸಂಸ್ಥೆ ಗಮನಿಸಿಲ್ಲ. ಅನೇಕ

ಲೋಪ - ದೋಷ ಎತ್ತಿ ತೋರಿಸಿ ಉತ್ತಮ ಸಲಹೆ ಸೂಚನೆಗಳನ್ನು ಕೊಟ್ಟ ಮಾಜಿ ಶಾಸಕ ಶ್ರೀ ಸಿ.ಎಂ. ಅರ್‌ಮುಗಂ ಸಮಿತಿಯ ವರದಿಯನ್ನು ಬೆಳಕಿಗೆ ತಾರದೆ ಬಚ್ಚಿಟ್ಟದ್ದು, ಸಂಸ್ಥೆಯ ಅಕ್ಷಮ್ಯ ಅಪರಾಧವಾಗಿದೆ. ಪಕ್ಷಪಾತ ಸ್ವಜನ ಪಕ್ಷಪಾತ ಹಾಗೂ ಭ್ರಷ್ಟಾಚಾರದಿಂದ ತತ್ತರಿಸಿ ಹೋದ ಈ ಸಂಸ್ಥೆಯಲ್ಲಿ ಉತ್ತಮ ಹಾಗೂ ಪ್ರಾಮಾಣಿಕ ನೌಕರರಿಗೆ ಉತ್ತಮ ಉತ್ತೇಜನವೂ ಇಲ್ಲ, ರಕ್ಷಣೆಯೂ ಇಲ್ಲ, ತಪ್ಪಿಸ್ಥರಿಗೆ ಉಗ್ರ ಶಿಕ್ಷೆಯೂ ಇಲ್ಲ. ತೋರಿಕೆಯ ಉತ್ತೇಜನ ಹಾಗೂ ಶಿಕ್ಷೆ ಮಾತ್ರ ಇಲ್ಲಿದೆ.

ಈ ಸಂಸ್ಥೆಯ ಪರಿಸ್ಥಿತಿ ಒಡೆದು ಸೋರುವ ಗಡಿಗೆಯಂತಾಗಿದೆ. ಈ ಸಂಸ್ಥೆಗೆ ಎಷ್ಟೇ ಆದಾಯ ಬಂದರೂ ಬಹುಪಾಲು ಸೋರಿ ಹೋಗುತ್ತದೆ. ಹೇಗೆ ಸೋರಿ ಹೋಗುತ್ತದೆ ಎಂಬುದನ್ನು ಅಲ್ಲಿಯ ನೌಕರರು, ಶಾಸನ ಸಮಿತಿಯವರು ಹಾಗೂ ಸಾರ್ವಜನಿಕರು, ಎತ್ತಿ ತೋರಿಸಿದರೂ ಆಡಳಿತ ಮಂಡಳಿ ಹಾಗೂ ಸರ್ಕಾರ ಉದಾಸೀನರಾಗಿರುವದನ್ನು ನೋಡಿದರೆ ದೊಡ್ಡ ದೊಡ್ಡ ಅಕ್ರಮಗಳಲ್ಲಿ ಆಡಳಿತ ಮಂಡಳಿ ಹಾಗೂ ಸರ್ಕಾರ ಸಾಮೀಲಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಈ ಸಂಸ್ಥೆಯ ಕಾರ್ಯಾಚರಣೆ ವೆಚ್ಚ 86-87ರಲ್ಲಿ 90.27 ಕೋಟಿ ರೂಪಾಯಿ ಆಗಿದ್ದರೆ, 90-91 ರಲ್ಲಿ 178.66 ಕೋಟಿ ರೂಪಾಯಿಗಳಿಗೆ ಏರಿದ್ದು ಕೇವಲ ಮೂರು ವರ್ಷ ದಾಟುವದರಲ್ಲೇ 38.39 ಕೋಟಿ ರೂಪಾಯಿ ಹೆಚ್ಚಾದರೆ ಈ ಸಂಸ್ಥೆ ಉಳಿಯುವುದಾದರೂ ಹೇಗೆ. 1990-91ರ ಕೊನೆಗೆ ಈ ಸಂಸ್ಥೆಯು ಕೂಡಿ ಬಿದ್ದ ಹಾನಿ 194.44 ಕೋಟಿ. ವಾಸ್ತವಿಕವಾಗಿ, 1990-91 ರಲ್ಲಿ ಸಹ ಹಿಂದಿನಂತೆ ಈ ಸಂಸ್ಥೆ ಹಾನಿಗೊಳಗಾಗುತ್ತಿದ್ದರೂ. ನಿಜಾಂಶ ಬಜೆಟ್ಟು 130.44 ಲಕ್ಷ ಲಾಭವೆಂದು ಲೆಕ್ಕಪತ್ರಗಳನ್ನು ತಿರುಚಿ ತೋರಿಸಿದ್ದಾರೆ. ಅಟೋ ಸ್ಪೇರ್‌ಪಾರ್ಟ ಕೊರತೆ ಸಾಕಷ್ಟಿದ್ದರೂ 89-90 ರಲ್ಲಿ 16.02 ಕೋಟಿ ಕಿಮ್ಮತ್ತಿನದನ್ನು ಖರೀದಿ ಮಾಡಿದ್ದು, 90-91ರಲ್ಲಿ ಹೆಚ್ಚು ಖರೀದಿ ಮಾಡುವದು ಅವಶ್ಯವಿದ್ದಿದ್ದರೂ 15.71 ಕೋಟಿ ಕಿಮ್ಮತ್ತಿನದನ್ನು ಖರೀದಿ ಮಾಡಿದ್ದಾರೆ. ಟ್ಯೂಬು - ಟಾಯರುಗಳ ಕೊರತೆ ಸಾಕಷ್ಟು ಇದ್ದರೂ 88-89ರಲ್ಲಿ 29.53 ಕೋಟಿ ಕಿಮ್ಮತ್ತಿನ ಖರೀದಿ ಮಾಡಿದ್ದರೂ 90-91 ರಲ್ಲಿ 30.22 ಕೋಟಿ ಕಿಮ್ಮತ್ತಿನದನ್ನು ಖರೀದಿ ಮಾಡಿ ಸ್ಪೇರ್‌ಪಾರ್ಟ ಹಾಗೂ ಟ್ಯೂಬ್ - ಟಾಯರ್ ಕೊರತೆಯನ್ನು ಮುಂದವರಿಸಿದ್ದಾರೆ, ಖರೀದಿ ಹಾಗೂ ಇತರ ವ್ಯವಹಾರಗಳಲ್ಲಿ ಅಕ್ರಮ ಹಾಗೂ ಭ್ರಷ್ಟಾಚಾರಗಳು ಎಸಗಿ ಸಂಸ್ಥೆಯ ಹಣವು ಸೋರಿ ಭ್ರಷ್ಟ ಅಧಿಕಾರಿಗಳೆಂಬ ಹದ್ದುಗಳಿಗೆ ಸೋರುತ್ತದೆಂದು ಹಾಗೂ ಇತ್ಯಾದಿ ಆರೋಪಗಳನ್ನು ಸಾರಿಗೆ ಸಂಸ್ಥೆಯ ಸಿಬ್ಬಂದಿ ಹಾಗೂ ಕೆಲಸಗಾರರ ಯೂನಿಯನ್ ಮಾಡಿ, ಸಿ.ಬಿ.ಐ. ತನಿಖೆ ನಡೆಸಲು ಸರಕಾರವನ್ನು ಕೇಳಿರುವುದು ಸಹ ಸೂಕ್ತವಾಗಿದೆ. 1989-90 ರಲ್ಲಿ ಒಟ್ಟು ಆದಾಯ 41906.18 ಲಕ್ಷವಾದದ್ದು, 1990-91ರಲ್ಲಿ 53048.42 ಲಕ್ಷಕ್ಕೆ ಏರಿ, ಈ ವರ್ಷದಲ್ಲಿ ಹಿಂದಿನ ವರ್ಷಕ್ಕಿಂತ 11142.24 ಲಕ್ಷ ಹೆಚ್ಚಿನ ಆದಾಯ ಬಂದಿದೆ. 89-90 ರಲ್ಲಿ 45676.30 ಲಕ್ಷ ಒಟ್ಟು ಖರ್ಚು ಆಗಿದ್ದರೂ 90-91ರಲ್ಲಿ 52917.98 ಲಕ್ಷ ಒಟ್ಟು ಖರ್ಚು ಮಾಡಲಾಗಿದೆ. ಈ

ವರ್ಷದಲ್ಲಿ ಹಿಂದಿನ ವರ್ಷಕ್ಕಿಂತ 7241.68 ಲಕ್ಷ ಹೆಚ್ಚಿನ ಖರ್ಚು ಮಾಡಲಾಗಿದೆ. 86-87 ರಲ್ಲಿ 31.26 ಕೋಟಿ, 87-88 ರಲ್ಲಿ 40.47 ಕೋಟಿ, 88-89 ರಲ್ಲಿ 45.13 ಕೋಟಿ, 89-90 ರಲ್ಲಿ 48.13 ಕೋಟಿ ಸವಕಳಿಯನ್ನು ತೆಗೆದಿದ್ದರೂ 90-91ರಲ್ಲಿ ಅಜಮಾಸ 51.00 ಕೋಟಿ ಸವಕಳಿ ತೆಗೆಯಬೇಕಾಗಿತ್ತಾದರೂ 47.87 ಕೋಟಿ ತೆಗೆದು, ಅಂದರೆ ಬುದ್ಧಿಪೂರ್ವಕ ಕಡಿಮೆ ಸವಕಳಿ ತೆಗೆದು 130.44 ಲಕ್ಷ ತೋರಿಕೆ ಲಾಭ ತೋರಿಸಿ ಈ ಸಂಸ್ಥೆ ಎಲ್ಲರನ್ನು ವಂಚಿಸಿದೆ. 88-99 ರಲ್ಲಿ ಪಡೆದ ಆದಾಯಕ್ಕಿಂತ 111.42 ಕೋಟಿ ಹೆಚ್ಚಿನ ಆದಾಯ ಪಡೆದು 90-91 ರಲ್ಲಿ ಒಟ್ಟು 530.48 ಕೋಟಿ ಆದಾಯ ಪಡೆದಿದ್ದರೂ 90-91 ರಲ್ಲಿ ಒಟ್ಟು ಖರ್ಚು 52917.98 ಲಕ್ಷ ರೂ. ಆಗಿದ್ದು, ಖರ್ಚು ಮಿತಿಮೀರಿ ಆಗಿ ಈ ಸಂಸ್ಥೆ ಯಾವುದೇ ಸಂದರ್ಭದಲ್ಲಿ ಸಾರ್ವಜನಿಕರಿಗೆ ಅನುಕೂಲವಾಗದೆ ದುಂದುಗಾರಿಕೆ ವೆಚ್ಚವನ್ನು ಭರಿಸಲು ಜನಸಾಮಾನ್ಯ ಪ್ರಯಾಣಿಕರ ಮೇಲೆ ಪ್ರಮಾಣದ ದರ ಹೆಚ್ಚಳವನ್ನು ಹೇರುತ್ತಿರುವುದು ಸರಕಾರ ಹಾಗೂ ಆಡಳಿತ ಮಂಡಳಿಯ ಹೇಯ ಕೆಲಸವಾಗಿದೆ.

ಇಷ್ಟೆಲ್ಲ ಆದರೂ ಬಹುತೇಕ ಡಿಪೋಗಳಲ್ಲಿ ಅನೇಕ ಕಂಡಕ್ಟರರಿದ್ದರೆ, ಡ್ರೈವರ್ ಇಲ್ಲ, ಇಬ್ಬರೂ ಇದ್ದರೆ ಗಾಡಿ ಇಲ್ಲ. ಮೂರು ಇದ್ದರೆ ಸ್ಪೆಷನಿಗಾಲಿ ಇಲ್ಲ, ನಾಲ್ಕು ಇದ್ದರೆ ಜಾಕ್ ಇಲ್ಲ. ಐದು ಇದ್ದರೆ ಗೊತ್ತು ಪಡಿಸಿದ ವೇಳೆ ಇಲ್ಲ. ಆರು ಇದ್ದರೆ ರಸ್ತೆ ಸರಿಯಾಗಿಲ್ಲ, ಏಳೂ ಇದ್ದರೆ ಬಸ್ಸಿನ ಟಾಸಿನ ಮೇಲೆ ಹತ್ತಲೂ ಜಾಗ ಇಲ್ಲ, ಎಂಟೂ ಇದ್ದರೆ ಪ್ರಾಮಾಣಿಕ ಸುರಕ್ಷಿತವಾಗಿ ಸಕಾಲದಲ್ಲಿ ತನ್ನ ಠಿಕಾಣಿ ಮುಟ್ಟುವದಂತೂ ಕಷ್ಟ. ಇಂತಹ ಧಾರುಣ ಪರಿಸ್ಥಿತಿಯನ್ನು ಸುಧಾರಿಸಲು ಆಡಳಿತ ಮಂಡಳಿ ಹಾಗೂ ಸರ್ಕಾರ ಯಾವುದೇ ಪ್ರಾಮಾಣಿಕ ಪ್ರಯತ್ನ ಮಾಡದೇ ಇರುವುದು ನಾಚಿಕೆಗೇಡು. ಅನೇಕ ಬಸ್ ಸ್ಟ್ಯಾಂಡ್ ಹಾಗೂ ಡಿಪೋಗಳಲ್ಲಿ ಇದ್ದ ಅನೇಕ ಕ್ಯಾಂಟೀನ್‌ಗಳನ್ನು ಬಾಡಿಗೆ ಕೊಡದೆ ಬಂದ್ ಇಟ್ಟಿರುವುದು ಹಾಗೂ ಅಲ್ಲಲ್ಲಿ ಅವಶ್ಯಕವಾದ ಮಲ - ಮೂತ್ರ ಖಾನೆಗಳನ್ನು ಕಟ್ಟದೇ ಇರುವುದು. ಒಡೆದು ಬೀಳುತ್ತಿರುವ ಕಟ್ಟಡ, ಕಾಂಪೌಂಡ್ ಗೋಡೆ, ಗೇಟುಗಳನ್ನು ದುರಸ್ತಿ ಮಾಡದೇ ಇರುವುದು ಇಂಜಿನಿಯರಿಂಗ್ ವಿಭಾಗದ ಹಾಗೂ ಆಡಳಿತ ಮಂಡಳಿಯ ಅಧಿಕಾರಿಗಳ ಆಡಳಿತ ಮಂಡಳಿಯ ಹಾಗೂ ಸರಕಾರದ ಅಸಮರ್ಥತೆ, ಅದಕ್ಷತೆ, ಅಮಾನವೀಯತೆಯ ಲಕ್ಷಣಗಳಾಗಿದ್ದು, ಪ್ರಜೆಗಳ, ಪ್ರಯಾಣಿಕರ ಹಾಗೂ ಪ್ರಾಮಾಣಿಕ ನೌಕರರ ಸಲಹೆ ಸೂಚನೆಗಳಿಗೆ ಗಮನಕೊಟ್ಟು ಪರಿಸ್ಥಿತಿಗೆ ಸುಧಾರಿಸಿದರೆ, ಆಡಳಿತ ಮಂಡಳಿ ಹಾಗೂ ಸರ್ಕಾರಕ್ಕೆ ಮಾನವೀಯತೆಯ ಲಕ್ಷಣ ಬಂದೀತು ಹಾಗೂ ಕರ್ತವ್ಯಲೋಪದ ಆರೋಪದಿಂದ ಮುಕ್ತವಾದೀತು. ರಾಜ್ಯ ಸರ್ಕಾರದಿಂದ ಪ್ರತಿವರ್ಷ ಹೆಚ್ಚು, ಹೆಚ್ಚಾಗಿ ಪೇರುಹಣವನ್ನು ಈ ಸಂಸ್ಥೆಗೆ ಕೊಡಲಾಗಿದ್ದು, 90-91ರ ಕೊನೆಗೆ ಕೊಟ್ಟ ಹಣ ಒಟ್ಟು 17,324.39 ಲಕ್ಷ ರೂಪಾಯಿ ಆಗಿದ್ದು ಈ ಹಣ ಸಂಪೂರ್ಣವಾಗಿ ತೋರಿಕೆ ನಷ್ಟದ ಹಣ 19,443.98 ಲಕ್ಷದಲ್ಲಿ ಮುಳಗಿ ಹೋಗಿದೆ. ಸಾರ್ವಜನಿಕರು ಹಾಗೂ ಸರ್ಕಾರದಿಂದ ಪಡೆದ ಸಾಲ, ರಾಜ್ಯ ಹಾಗೂ ಕೇಂದ್ರ ಸರ್ಕಾರಗಳಿಂದ ಪಡೆದ

ಷೇರು ಹಣ ಇತ್ಯಾದಿ ಒಟ್ಟು ಸಂಪನ್ಮೂಲ 675.46 ಕೋಟಿ ಮೀರಿದ್ದು, ಈ ಮೊತ್ತ ಈ ಸಂಸ್ಥೆಯು ಕೈಯಲ್ಲಿ ಗಂಡಾಂತರದಲ್ಲಿದೆ ಎಂದರೆ ತಪ್ಪಾಗಲಾರದು. ಐ.ಎ.ಎಸ್. ಅಧಿಕಾರಿಗಳೇ ಬಹಳ ಬುದ್ಧಿವಂತರೆಂದು ನಂಬಿ ಇವರ ಕೈಯಲ್ಲಿ ಆಡಳಿತ ಕೊಟ್ಟಿರುವುದೇ ಒಂದು ಬಹು ದೊಡ್ಡ ತಪ್ಪಾಗಿದೆ. ವ್ಯವಹಾರ ಮಾಡುವವರು ಇವರೇ, ಅಪರಾಧ ಮಾಡುವವರು, ಅವ್ಯವಹಾರ, ಅಕ್ರಮಗಳನ್ನು ಮಾಡುವವರು ಇವರೇ, ತನಿಖೆ ಮಾಡುವವರು ಇವರೇ, ನಿರ್ಣಯ ಕೊಡುವವರು ಇವರೇ, ಇವರ ಮಾತಿಗೆ ಮಣಿದು ತಲೆ ಹಾಕುವವರು ಮಾತ್ರ ಸರಕಾರ ಹಾಗೂ ಸರ್ಕಾರದಲ್ಲಿಯ ಪಂಡಿತ ಮಂತ್ರಿಗಳು, ಇದನ್ನೆಲ್ಲ ಮೂಕಪ್ರೇಕ್ಷಕರಾಗಿ ಅನಿವಾರ್ಯವಾಗಿ ನೋಡುವವರು ಪ್ರಜಾಪ್ರಭುಗಳಾದ ಸಾರ್ವಜನಿಕರು. ಇದಕ್ಕೆ ಕೊನೆಯೆಂತು? ಉಪಾಯವೇನು? ಈ ಎಲ್ಲಾ ಸಮಸ್ಯೆಗಳನ್ನು ಯಾರು ಬಗೆಹರಿಸಬೇಕು?

❑

ಆಡಳಿತಗಾರರು ಮತ್ತು ಆರ್ಥಿಕ ಪ್ರಶ್ನೆ

"ನಾನು ನವೆಂಬರ್ 20 ರಂದು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ದಿನ ಸರಕಾರ 100 ಕೋಟಿ ರೂಪಾಯಿ ಬಿಲ್ ಬಾಕಿ ಕೊಡಬೇಕಿತ್ತು. ಖಜಾನೆಯಲ್ಲಿ 5 ಕೋಟಿ ರೂ. ಮಾತ್ರ ಹಣವಿತ್ತು" ಎಂದು ಪ್ರಾಮಾಣಿಕವಾಗಿ ಪ್ರಾಂಜಲಮನಸ್ಸಿನಿಂದ ಮುಚ್ಚುಮರೆಯಿಲ್ಲದೆ ಬಿಚ್ಚುಮನಸ್ಸಿನಿಂದ ಈ ರಾಜ್ಯದ 4.61 ಕೋಟಿ ಜನತೆಯ ಪ್ರತಿನಿಧಿಗಳಾದ 224 ಚುನಾಯಿತ ಸದಸ್ಯರಿಂದ ತುಂಬಿದ ವಿಧಾನಸಭೆಯಲ್ಲಿ ಜನವರಿ 6 ರಂದು ಈ ರಾಜ್ಯದ ಮುಖ್ಯಮಂತ್ರಿ ಶ್ರೀ ಎಂ. ವೀರಪ್ಪ ಮೊಯಿಲಿಯವರು ವಾಸ್ತವಿಕ ಸತ್ಯಸಂಗತಿ ಹೇಳಿ, ಹಿಂದೆ ಯಾವ ಮುಖ್ಯಮಂತ್ರಿಗಳೂ ನಿಜ ಸ್ಥಿತಿ ಹೇಳದ್ದನ್ನು ಹೇಳಿದ್ದಾರೆ. ಈ ಚಿಂತಾಜನಕ ದಿವಾಳಿತನದ ರಾಜ್ಯದ ಆರ್ಥಿಕ ಪರಿಸ್ಥಿತಿಯ ಚಿಂತನೆಯನ್ನು ಮಂತ್ರಿಗಳು, ಶಾಸಕರು, ಸಂಸದರು, ಪ್ರಜ್ಞಾವಂತರು, ಬುದ್ಧಿಜೀವಿಗಳು ರಾಜಕೀಯ, ಸಮಾಜಕೀಯ ಹಾಗೂ ಧಾರ್ಮಿಕ ಮುಖಂಡರು, ಚಿಂತಿಸಿ ವಿಮರ್ಶಿಸಿ ಸೂಕ್ತ ಸಲಹೆ ಸೂಚನೆಗಳನ್ನು ಸರಕಾರಕ್ಕೆ ಕೊಟ್ಟು ಸರಕಾರವನ್ನು ಆರ್ಥಿಕ ದಿವಾಳಿ ಅಂಚಿನಿಂದ ಪಾರು ಮಾಡಬೇಕಾಗಿದೆ. ಇಲ್ಲದೇ ಹೋದರೆ ಆರ್ಥಿಕ ದಿವಾಳಿ ಅಂಚಿನಲ್ಲಿರುವ ಸಾಮಾನ್ಯ ಪ್ರಜೆಗಳು ಹಾಗೂ ಸರಕಾರವನ್ನು ರಕ್ಷಿಸಲಿಕ್ಕೆ ಯಾರಿಂದಲೂ ಸಾಧ್ಯವಾಗದೆ ಯಾವುದೇ ಅಭಿವೃದ್ಧಿ ಕೆಲಸವಾಗದೆ ಜನರಲ್ಲಿ ಹಾಹಾಕಾರವಾಗಿ ಆರ್ಥಿಕ ಕ್ರಾಂತಿಯನ್ನು ನೋಡುವ ಕೆಟ್ಟ ಕಾಲ ಬಂದೀತು.

ರಾಜ್ಯದ ಪ್ರಜಾಪ್ರಭುಗಳಿಂದ 89-90 ರಲ್ಲಿ 2629.15 ಕೋಟಿ, 90-91ರಲ್ಲಿ 3052.37 ಕೋಟಿ ರೂ. ತೆರಿಗೆ ಹಾಗೂ ತೆರಿಗೆ ರಹಿತ ಆದಾಯವನ್ನು ರಾಜ್ಯ ಸರಕಾರ ವಾಸ್ತವಿಕವಾಗಿ ವಸೂಲು ಮಾಡಿಕೊಂಡಿದೆ. 91-92ರ ವಾಸ್ತವಿಕ ಅಂಕಿ ಸಂಖ್ಯೆ ಈಗ ಯಾರಿಗೂ ಲಭ್ಯವಿಲ್ಲ. 1992-93 ಅಂದರೆ ಈ ವರ್ಷದ ಚಾಲೂ ಸಾಲಿನಲ್ಲಿ 4463.37 ಕೋಟಿ ರೂ. ತೆರಿಗೆಯನ್ನು ವಸೂಲು ಮಾಡುವ ಅಂದಾಜಿತ ಗುರಿ ಇದೆ. ಅಂದರೆ 90-91 ರಲ್ಲಿ ಜನತೆ ತೆತ್ತ ತೆರಿಗೆಗಿಂತ 1411.00 ಕೋಟಿ ರೂ ಹೆಚ್ಚಿನ ತೆರಿಗೆಯನ್ನು 92-93 ರಲ್ಲಿ ತೆತ್ತ ಬೇಕಾಗುತ್ತದೆ. ಪ್ರತಿವರ್ಷ ಹೀಗೆ ಹೆಚ್ಚಿನ ತೆರಿಗೆಯನ್ನು ಬಿಟ್ಟುಬಿಡದೆ ವಸೂಲು ಮಾಡಿದರೂ ರಾಜ್ಯದ ಅಭಿವೃದ್ಧಿ ಹಾಗೂ ನೀರಾವರಿ ಮೊದಲಾದ

ಕಾರ್ಯಕ್ರಮಗಳು ತೃಪ್ತಿಕರವಾಗಿ ನಡೆಯದೆ ಹಣದ ಮುಗಟ್ಟಿನಿಂದ ಕುಂಠಿತಗೊಂಡಿವೆ. ರಾಜ್ಯದಲ್ಲಿ ನೂರಕ್ಕೆ 85 ಜನರು ರೈತರೇ ಇದ್ದಾರೆ. ಇವರು ಸಾಲದ ಶೂಲಕ್ಕೆ ಸಿಕ್ಕು ನರಳುತ್ತಿದ್ದಾರೆ. ದೊಡ್ಡವರಿಗೆ ದೊಡ್ಡ ಸಾಲ, ಸಣ್ಣನವರಿಗೆ ಸಣ್ಣಸಾಲ, ಬಂಗಾರ ಅಡವಿಟ್ಟು 150 ರೂ. ಸಾಲ ತೆಗೆದುಕೊಂಡವರನೇಕರು, ಸಾಲ ಬಡ್ಡಿ ಕೊಡದ ಕಾರಣ ಅನೇಕ ಬ್ಯಾಂಕುಗಳು ಅಡವಿಟ್ಟ ಬಂಗಾರವನ್ನು ಮುಟ್ಟುಗೋಲು ಹಾಕಿಗೊಳ್ಳುವದು ನಡದೆ ಇದೆ. ಈ ದೇಶದ ವ್ಯವಸಾಯ ಉದ್ಯಮ ದಿವಾಳಿ ಎದ್ದಿದೆ. ರೈತ ದಿವಾಳಿಯಾಗಿದ್ದಾನೆ. ಇಂತಹ ಪರಿಸ್ಥಿತಿಯುಲ್ಲಿ ಪ್ರತಿವರ್ಷ ತೆರಿಗೆ ಏರಿಸುತ್ತ ಹೋದರೆ ಮುಂದೇನು? ಗ್ರಾಮಾಂತರ ಪ್ರದೇಶದಲ್ಲಿಯು ಗ್ರಾಮ ಸಹಾಯಕ - ವಾಲಿಕಾರ, ಮಂಡಳ ಪಂಚಾಯಿತಿ, ಸಹಕಾರ ಸಂಘ, ಅಂಗನವಾಡಿಯ ನೌಕರರಿಗೆ ಕನಿಷ್ಠ ವೇತನ ಕಾನೂನು ಪ್ರಕಾರವಾದರೂ ಸಂಬಳವಿಲ್ಲ. ಇವರೆಲ್ಲರನ್ನೂ ಸರಕಾರಿ ನೌಕರರೆಂದು ಪರಿಗಣಿಸುವದು ಅತ್ಯವಶ್ಯವಿದ್ದರೂ ಇವರ ಕೂಗು ಶಾಸಕರ ಹಾಗೂ ಸರಕಾರದ ಮುಂದೆ ಅರಣ್ಯರೋದನೆ ಯಾಗಿದೆ.

ಸರಕಾರಿ ಹಾಗೂ ಜಿಲ್ಲಾ ಪರಿಷತ್ ನೌಕರರಿಗೆ ಕೈತುಂಬಾ ಸಂಬಳ ಕೊಟ್ಟು ಹಳ್ಳಿಯ ಗ್ರಾಮಾಂತರ ನೌಕರರನ್ನು ಸರಕಾರಿ ನೌಕರರನ್ನಾಗಿ ಪರಿಗಣಿಸಿ ಅವರಿಗೂ ಸರಕಾರಿ ಸ್ಕೇಲಿನಂತೆ ಪಗಾರ ಕೊಡದೇ ಇರುವದನ್ನು ನೋಡಿದರೆ ಸರಕಾರಕ್ಕೆ ಮಾನವೀಯತೆಯೇ ಇಲ್ಲವೆಂಬುದು ಸುಸ್ಪಷ್ಟವಾಗುತ್ತದೆ. ಸರಕಾರಿ ಹಾಗೂ ಜಿಲ್ಲಾ ಪರಿಷತ್ ನೌಕರರಿಗೆ ಹಾಗೂ ನಿವೃತ್ತರಿಗೆ 90-91ರಲ್ಲಿ ವಾಸ್ತವಿಕವಾಗಿ 1590-83 ಕೋಟಿ ರೂ. ಸಂಭಾವನೆ ಹಾಗೂ ನಿವೃತ್ತ ವೇತನ ಕೋಡಲಾಗಿದೆ. ಅಂದರೆ ಪ್ರತಿ ತಿಂಗಳಿಗೆ 132.56 ಕೋಟಿ ರೂ. ಕೊಡಲಾಗಿದೆ. ಇದು ಅನಿವಾರ್ಯ. 92-93 ಅಂದರೆ ಚಾಲೂ ಸಾಲಿನಲ್ಲಿ ಸರಕಾರಿ ಅಂದಾಜಿನ ಪ್ರಕಾರ 2231.47 ಕೋಟಿ ರೂ ಕೊಡಬೇಕಾಗುತ್ತದೆ. ಅಂದರೆ ಪ್ರತಿ ತಿಂಗಳಿಗೆ 185.95 ಕೋಟಿ ರೂ ಸಂಭಾವನೆ ಕೊಡಲೇಬೇಕಾಗುತ್ತದೆ ಹಾಗೂ ಕೊಡಲಾಗುತ್ತಿದೆ. ನೌಕರರ ಸಂಭಾವನೆ, ವೇಜ್, ಸ್ಟಾಯಫಂಡ್, ಆಫೀಸ್ ಖರ್ಚು, ಇತರೆ ಖರ್ಚು, ಪ್ರಯಾಣ ಖರ್ಚು, ಸರಕಾರಿ ವಾಹನ ಹಾಗೂ ಚಲಾವಣೆ ಬಾಡಿಗೆ ಇತ್ಯಾದಿ ಹಾಗೂ ಪೆನ್ಷನ್ ಹೀಗೆ ಅನಿವಾರ್ಯವಾದ 11 ಬಾಬುಗಳಿಗೆ ವಾಸ್ತವಿಕವಾಗಿ 90-91ರಲ್ಲಿ 2381.35 ಖರ್ಚು ಮಾಡಿದ್ದು, ತಿಂಗಳಿಗೆ 198.44 ಕೋಟಿ ರೂ. ಖರ್ಚು ಮಾಡಲಾಗಿದೆ. ಇದು ಕೂಡ ದೈನಂದಿನ ಆಡಳಿತ ದೃಷ್ಟಿಯಿಂದ ಸರಕಾರಕ್ಕೆ ಅನಿವಾರ್ಯ 82-93 ಚಾಲೂ ಸಾಲಿನಲ್ಲಿ ಸರಕಾರಿ ಅಂದಾಜಿನ ಪ್ರಕಾರ 2464.41 ಕೋಟಿ ರೂ. ಖರ್ಚು ಮಾಡಲಾಗುತ್ತಿದ್ದು, ತಿಂಗಳಿಗೆ 205.36 ಕೋಟಿ ರೂ. ಖರ್ಚು ಮಾಡಲೇಬೇಕಾಗುತ್ತದೆ. ಹೀಗೆ ಪ್ರತಿ ವರ್ಷ ಲಂಗುಲಗಾಮ ಇಲ್ಲದೆ ಕರ ತೆರಿಗೆಯನ್ನು ಏರಿಸಿ ಆಡಳಿತ ಖರ್ಚನ್ನು ಹೆಚ್ಚಿಸುತ್ತ ಹೋದರೆ ಈ ರಾಜ್ಯದ ಹಾಗೂ ರಾಷ್ಟ್ರದ ಆಡಳಿತ ಹೊಣೆ ಹೊತ್ತವರಿಗೆ ಆರ್ಥಿಕ ಪ್ರಜ್ಞೆಯೇ ಇಲ್ಲವೆಂಬ ಮಾತನ್ನು ಅನಿವಾರ್ಯವಾಗಿ ಹೇಳಬೇಕಾಗುತ್ತದೆ. ರಾಜ್ಯ ಸರಕಾರದ ವಿವಿಧ ಮೂಲದ ಸಾಲ (ಲಯಾಬಿಲಿಟಿ) ಸಹ

ಪ್ರತಿ ವರ್ಷ ಹೆಚ್ಚುತ್ತಲೇ ಬಂದಿದ್ದು ಅದು 31-3-91ಕ್ಕೆ 5762.71 ಕೋಟಿ ರೂ. ವಾಸ್ತವಿಕವಾಗಿದ್ದು ಅದು 31-3-93ಕ್ಕೆ ಅಂದಾಜಿನ ಪ್ರಕಾರ 7367.50 ಕೋಟಿ ರೂ. ಆಗಲಿದೆ. ಸಾಲಕ್ಕೆ 31-3-93ಕ್ಕೆ 587.09 ಕೋಟಿ ರೂ. ಬಡ್ಡಿಯನ್ನು ರಾಜ್ಯ ಸರಕಾರ ತೆತ್ತಬೇಕಾಗುತ್ತದೆ. ಕೇಂದ್ರ ಸರಕಾರದ ವಿದೇಶೀ ಸಾಲವೇ 1992ರ ಸಪ್ಟೆಂಬರ್ ಹೊತ್ತಿಗೆ 171310.00 ಕೋಟಿ ರೂ. ಇದ್ದು 92-93 ರಲ್ಲಿ ಕೇಂದ್ರ ಸರಕಾರ ವಿದೇಶಿ ಸಾಲದ ಮೇಲೆ 7763.00 ಕೋಟಿ ರೂ. ಬಡ್ಡಿ ಕೊಟ್ಟಿದೆ. ಇದಲ್ಲದೆ ಕೇಂದ್ರ ಸ್ವದೇಶೀ ಸಾಲ ಹಾಗೂ ಬಡ್ಡಿ ಬೇರೆ, ರೈತರ ಹಾಗೂ ಕೇಂದ್ರ ಸರಕಾರದ ಸಾಲದಂತೆ ರಾಜ್ಯ ಸರಕಾರದ ಸಾಲವೂ ಕೂಡ ಪ್ರತಿವರ್ಷ ಏರುತ್ತಿರುವುದು ಹಾಗೂ ಈ ದೇಶದ ಸಾಹುಕಾರರ ಹಾಗೂ ವಿಶ್ವ ಬ್ಯಾಂಕಿನ ಗುಲಾಮನಾಗುತ್ತಿರುವದು ಜನತೆಯ ದುರ್ದೈವ. ನೌಕರಶಾಹಿ ಸಂಭಾವನೆ, ಪೆನ್ಶನ್ ಇತ್ಯಾದಿ ಆಡಳಿತ ಖರ್ಚು ಪ್ರತಿವರ್ಷ ಬಜೆಟ್ ಮೀರಿ, ಮಿತಿ ಮೀರಿ ಏರುತ್ತ ಹೋಗುತ್ತಿರುವುದರಿಂದ ಖಜಾನೆಯಲ್ಲಿ ಹಣವಿಲ್ಲದ್ದರಿಂದ, ಪ್ರಜಾಶಾಹಿ ಅಭಿವೃದ್ಧಿ ಇತ್ಯಾದಿ ಕೆಲಸಗಳನ್ನು ಹಣವಿಲ್ಲದರಿಂದ ಬಜೆಟ್‌ಗಿಂತ ಕಡಿಮೆ ಖರ್ಚು ಮಾಡಲಾಗುತ್ತದೆ. ಬಜೆಟಿಗಿಂತ ಕಡಿಮೆ ಖರ್ಚು ಮಾಡಿ ಖರ್ಚು ಮಾಡದಿರುವ ಈ ಹಣ 87-88ರಲ್ಲಿ 116.03 ಕೋಟಿ, 88-89 ರಲ್ಲಿ 307.47 ಕೋಟಿ. 89-90 ರಲ್ಲಿ 209.30 ಕೋಟಿ 90-91ರಲ್ಲಿ 520.85 ಕೋಟಿ ರೂ ಇರುತ್ತದೆ. ಈ ದುಸ್ಥಿಗೆ ಯಾರು ಹೊಣೆಗಾರರು? ಇದನ್ನು ಅರಿಯಬೇಕಾದ ಆರ್ಥಿಕ ಪ್ರಜ್ಞೆ ಯಾರಿಗೆ ಇರಬೇಕು? ಇದರಲ್ಲಿ ಆರ್ಥಿಕ ಹಾಗೂ ಮುಖ್ಯಮಂತ್ರಿಯ ಪಾತ್ರವೇನು?

ಪ್ರಾಥಮಿಕ, ಮಾಧ್ಯಮಿಕ ಉಚ್ಚ ಶಿಕ್ಷಣ ಇತ್ಯಾದಿ ಸಂಸ್ಕೃತಿಗೆ ಸಹ ಪ್ರತಿವರ್ಷ ಕೋಟ್ಯಂತರ ಹಣ ಖರ್ಚು ಮಾಡುತ್ತಿದ್ದು, 90-91ರಲ್ಲಿ 802.09 ಕೋಟಿ ರೂ. ವಾಸ್ತವಿಕ ಖರ್ಚಾಗಿದ್ದು 92-93ರಲ್ಲಿ 1218.80 ಕೋಟಿ ಅಂದಾಜು ಖರ್ಚುಮಾಡುತ್ತಿದ್ದರೂ ಸಹಸ್ರಾರು ಅನುದಾನ ರಹಿತ ಶಾಲಾ ಕಾಲೇಜುಗಳಲ್ಲಿ ನಿರುದ್ಯೋಗಿ ವಿದ್ಯಾವಂತರು ಸಹಸ್ರಾರು ಲಕ್ಷಾಂತರ ರೂ. ದೇಣಿಗೆಯನ್ನು ಅನೇಕ ಭ್ರಷ್ಟ ವಿದ್ಯಾ ಸಂಸ್ಥೆಗಳಿಗೆ ಕೊಟ್ಟು ಯಾವುದೇ ಸಂಭಾವನೆ ಇಲ್ಲದೆ ಮುಂದೆ ನೌಕರಿ ಶಾಶ್ವತ ಆದಿತೆಂಬ ಜಲಗುದುರೆಯನ್ನು ಬೆಂಬತ್ತಿ ಬೇಸತ್ತು ಬದುಕಿದ್ದರೂ ಅವರ ಬಗ್ಗೆ ಸರಕಾರಕ್ಕೆ ಕನಿಕರ ಬರದಿರುವದು ಖಂಡನೀಯ, ರಸ್ತೆ ಸುಧಾರಣೆ, ಆಸ್ಪತ್ರೆ ಸುಧಾರಣೆ, ಸುವ್ಯವಸ್ಥಿತ ಸಂಚಾರ, ನೀರಾವರಿ, ಯೋಜನೆಗಳ ಅಭಿವೃದ್ಧಿ ಹರಿಜನ ಗಿರಿಜನ ಇತ್ಯಾದಿ ಹಿಂದುಳಿದ ವರ್ಗಗಳ ಕಲ್ಯಾಣ. ಮಹಿಳೆಯರ ಕಲ್ಯಾಣ, ಅಲ್ಪಸಂಖ್ಯಾತರ ಕಲ್ಯಾಣ, ಸಣ್ಣ ಅತೀ ಸಣ್ಣ ರೈತರ ಕಲ್ಯಾಣ, ಇತ್ಯಾದಿ ಸರ್ವಾಂಗೀಣ ಅಭಿವೃದ್ಧಿಯತ್ತ ಗಮನಕೊಡದೆ ವಾಸ್ತವಿಕವಾಗಿ ಹಣ ಖರ್ಚು ಮಾಡದೇ ಕಾಗದದಲ್ಲಿ ಪ್ರಗತಿ ತೋರಿಸಿ ಸಾರ್ವಜನಿಕ, ಹಣವನ್ನು ಲಪಟಾಯಿಸಿ ಲತ್ತೆ ಹೊಡೆದ ಸಹಸ್ರಾರು ಪ್ರಕರಣಗಳನ್ನು ಇತ್ಯರ್ಥ ಮಾಡದೆ ಭ್ರಷ್ಟ ಅಧಿಕಾರಿಗಳನ್ನು ಶಿಕ್ಷೆಗೆ ಗುರಿ ಮಾಡದೆ ತಮ್ಮ ನಿಗದಿತ ಆದಾಯಕ್ಕಿಂತ ಮಿತಿಮೀರಿ ಆಸ್ತಿ ಮಾಡಿದ ಭ್ರಷ್ಟ ಅಧಿಕಾರಿಗಳನ್ನು ಹಾಗೂ ರಾಜ್ಯಕಾರಣಿಗಳನ್ನು ಶಿಕ್ಷಿಸದೆ, ಭ್ರಷ್ಟಾಚಾರ

ಹಾಗೂ ದುರಾಡಳಿತಕ್ಕೆ ಮುಕ್ತಮಾರ್ಗ ತೆರೆದಿರುವದು ಸಲ್ಲದ ಕೃತ್ಯ. ಇನ್ನದರೂ ಕಾಲಮಿಂಚಿಲ್ಲ, ರಾಜ್ಯದ ಆರ್ಥಿಕ ಪರಿಸ್ಥಿತಿಯ ಪ್ರಜ್ಞೆ ಪಡೆದು ಮುನ್ನಡೆದು ಆಯವ್ಯಯದ ನೈಜಚಿತ್ರವನ್ನು ಅರಿತು ಕಾರ್ಯನಿರ್ವಹಿಸಿದರೆ ಮಾತ್ರ ಮುಖ್ಯಮಂತ್ರಿ, ಮಂತ್ರಿ, ಶಾಸಕರು ಹಾಗೂ ಸಂಸದರಿಗೆ ಭೂಷಣ. ಇಲ್ಲದೇ ಹೋದರೆ ಪ್ರಜಾಸತ್ತೆಗೆ ಮಾರಕ, ಅವಹೇಳನ.

❑

ವಿದ್ಯುಚ್ಛಕ್ತಿ ಮಂಡಳಿಯ ಕಾರ್ಯ ವೈಖರಿ

ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ತನ್ನ ಸ್ವಂತ ಉತ್ಪಾದನಾ ಘಟಕಗಳಿಂದ, ವಿದ್ಯುತ್ ನಿಗಮದಿಂದ ಹಾಗೂ ಕೇಂದ್ರ ಯೋಜನೆ ಇತ್ಯಾದಿ ಮೂಲಗಳಿಂದ ವಿದ್ಯುತ್ ಪಡೆದು ರಾಜ್ಯಾದ್ಯಂತ ಗೃಹ ಬಳಕೆ, ವಾಣಿಜ್ಯ, ಕೈಗಾರಿಕೆ, ನೀರಾವರಿ ಪಂಪಸೆಟ್ ಮೊದಲಾದ ಸುಮಾರು 55 ಲಕ್ಷ ಮೇಲ್ಪಟ್ಟು ಗ್ರಾಹಕರಿಗೆ ವಿದ್ಯುತ್ ಪೂರೈಸುತ್ತದೆ. ಪೂರೈಕೆ ತೃಪ್ತಿಕರವಾಗಿಲ್ಲ. ಬೇಡಿಕೆ ಪ್ರಮಾಣ ಸುಮಾರು 53 ದಶಲಕ್ಷ ಯೂನಿಟ್‌ಗಿಂತ ಹೆಚ್ಚಿಗೆ ಇದ್ದರೂ ಉತ್ಪಾದನೆ ಕೇವಲ 40 ದಶ ಲಕ್ಷ ಯೂನಿಟ್ ಇರುತ್ತದೆ. ಈ ಕೊರತೆ ತುಂಬಲು ಮಂಡಳಿ ಅಥವಾ ಸರಕಾರ ಪ್ರಾಮಾಣಿಕ ಪ್ರಯತ್ನ ಮಾಡಿರುವುದಿಲ್ಲ, ಬೇಡಿಕೆಯ ಕನಸು ಕನಸಾಗಿದೆಯೇ ಹೊರತು ನನಸಾಗಿಲ್ಲ. ರಾಜ್ಯದಲ್ಲಿ ಕೆಲವು ಸಂಘ ಸಂಸ್ಥೆಗಳಾದ ಖಾಸಗಿಯವರು ವಿದ್ಯುತ್ ಉತ್ಪಾದಿಸಲು ಮುಂದೆ ಬಂದಿದ್ದರೂ ಅದು ಸಂಪೂರ್ಣವಾಗಿ ಯಶಸ್ವಿಯಾಗಿಲ್ಲ. ರಾಜ್ಯದಲ್ಲಿ ಅಲ್ಲಲ್ಲಿ ಸುಮಾರು 166 ಸ್ಥಳಗಳಲ್ಲಿ ಸಣ್ಣ ಜಲವಿದ್ಯುತ್ ಯೋಜನೆಗಳನ್ನು ಸ್ಥಾಪಿಸಲು ಸರಕಾರ ಈಗಾಗಲೇ ಗುರುತಿಸಲಾಗಿದ್ದರೂ ಈ ದಿಶೆಯಲ್ಲಿ ಸಹ ಯಾವುದೇ ಪ್ರಾಮಾಣಿಕ ಪ್ರಯತ್ನ ಮುಂದುವರಿಸಿಲ್ಲ ಹಾಗೂ ಈ ಯೋಜನೆಗಳನ್ನು ಯಶಸ್ವಿಗೊಳಿಸಿ ಹೆಚ್ಚಿನ ವಿದ್ಯುತ್ ಉತ್ಪಾದನೆಗೆ ಆಸ್ಪದ ಮಾಡಿಲ್ಲ. ಗ್ರಾಹಕರ ಬೇಡಿಕೆಗಳನ್ನು ಈಡೇರಿಸಿಕೊಂಡದೆ ಪೂರೈಕೆ ಮಾಡುತ್ತಿರುವ ವಿದ್ಯುತನ್ನು ಕೂಡಾ ಸರಿಯಾಗಿ ಸಕಾಲದಲ್ಲಿ ಪೂರೈಸದೆ ಯದ್ವಾತದ್ವ ಪೂರೈಸಿ ಗ್ರಾಹಕರಿಗೆ ಅನಾವಶ್ಯಕ ತೊಂದರೆ, ಲುಕ್ಸಾನ್ ಮಾಡಿ, ಗ್ರಾಹಕರಿಗೆ ಈ ಮಂಡಳಿ ತಾರಕವಾಗದೆ ಮಾರಕವಾಗುತ್ತಿರುವುದು ದೈನಂದಿನ ತಂತ್ರವಾಗಿದೆ. ಈ ಕಾರಣದಿಂದಲೇ ಅನೇಕ ಗ್ರಾಹಕರು ಅಲ್ಲಲ್ಲಿ ಮಂಡಳಿಯ ಕಾರ್ಯಾಲಯಕ್ಕೆ ನುಗ್ಗಿ ಅಸಂತೋಷ ವ್ಯಕ್ತಪಡಿಸುತ್ತಿರುವುದು ಎದ್ದು ಕಾಣುತ್ತಿದೆ. ಈ ದಿಶೆಯಲ್ಲಿ ಸರಕಾರ ಹಾಗೂ ಮಂಡಳಿಯು ದೀರ್ಘವಾಗಿ ಆಲೋಚಿಸಿ ವಿದ್ಯುತ್ ಬೇಡಿಕೆ ಪೂರೈಸುವಲ್ಲಿ ಹಾಗೂ ಹೆಚ್ಚಿನ ಉತ್ಪಾದನೆ ದೊರಕಿಸುವಲ್ಲಿ ಪ್ರಯತ್ನ ಪಡುವುದು ಅವಶ್ಯ ಹಾಗೂ ಅತ್ಯಗತ್ಯ.

ಕರ್ನಾಟಕ ವಿದ್ಯುತ್ ನಿಗಮ, ವಿದ್ಯುಚ್ಛಕ್ತಿ ಮಂಡಳಿಗೆ ವಿದ್ಯುತ್ತನ್ನು ಪೂರೈಸುತ್ತಿದೆ. ಈ ನಿಗಮ ಮಂಡಳಿಗೆ ಮಾರಾಟ ಮಾಡುವ ವಿದ್ಯುತ್ತಿಗೆ ಅತಿ ಹೆಚ್ಚಿನ ದರವನ್ನು ಆಕರಣೆ ಮಾಡಿ ಹೆಚ್ಚಿನ ಲಾಭ ಪಡೆದು ತನ್ನ ದುಬ್ಬವ ತಾನೇ ಚಪ್ಪರಿಸಿಕೊಳ್ಳುತ್ತದೆ. ಈ ನಿಗಮ 89-90ರಲ್ಲಿ ಸುಮಾರು 31.17 ಕೋಟಿ ನಿವ್ವಳ ಲಾಭ ಗಳಿದ್ದರೆ, 1990-91 ರಲ್ಲಿ ಸುಮಾರು 84.32ರಲ್ಲಿ 84.32 ಕೋಟಿ ನಿವ್ವಳ ಲಾಭ ಗಳಿಸಿದೆ. ವಿದ್ಯುಚ್ಛಕ್ತಿ ಮಂಡಳಿ ಗ್ರಾಹಕರಿಂದ ಅತಿ ಹೆಚ್ಚಿನ ದರವನ್ನು ಸುಲಿದು ನಿಗಮಕ್ಕೇ ಹಣವನ್ನು ತೆತ್ತುತ್ತದೆ. ಗ್ರಾಹಕರ ವಿದ್ಯುತ್ ಮೀಟರ್ ಓದಿ ಬರೆಯುವಲ್ಲಿ, ಬಿಲ್ ಬರೆಯುವಲ್ಲಿ, ಲೆಕ್ಕಪತ್ರ ಇಡುವಲ್ಲಿ ಬೇಡಿಕೆ ಹಾಗೂ ಬಾಕಿ ವಸೂಲಿ ಮಾಡುವಲ್ಲಿ ಕಂಡು ಬರುತ್ತಿರುವ ಸಾರ್ವಜನಿಕ ಟೀಕೆ ಸಾಕಷ್ಟು ಇದ್ದು ವಿದ್ಯುತ್ ಪೂರೈಸುವಲ್ಲಿ ಹಾಗೂ ದರ ವಸೂಲಿ ಮಾಡುವಲ್ಲಿ ಖರೀದಿ ವ್ಯವಹಾರದಲ್ಲಿ ಸಹ ಪಕ್ಷಪಾತ, ಸ್ವಜನ ಪಕ್ಷಪಾತ ಹಾಗೂ ಭ್ರಷ್ಟಾಚಾರದ ಅಪಾದನೆಗಳು ಕೂಡ ಈ ಮಂಡಳಿಯ ಮೇಲೆ ಸಾಕಷ್ಟು ಇವೆ. ಕೆಲವು ಗ್ರಾಹಕರಿಗೆ ಹೆಚ್ಚಿನ ಮೊತ್ತವನ್ನು ಕೆಲವರಿಗೆ ಕಡಿಮೆ ಮೊತ್ತವನ್ನು ಮೀಟರ್ ಹೆಚ್ಚು ಕಡಿಮೆ ಮಾಡಿ ಅನುಚಿತವಾಗಿ ಬಿಲ್ ಬರೆದು ವಸೂಲಿ ಮಾಡುವ ಹಾಗೂ ವಸೂಲಿ ಮಾಡದಿರುವ ಉದಾಹರಣೆಗೆ ಸಾಕಷ್ಟು ಇದೆಯೆಂಬ ಕೂಗು ಸಹ ಇದೆ. ರಾಜ್ಯದಲ್ಲಿ ಸುಮಾರು 8.00 ಲಕ್ಷ ಭಾಗ್ಯಜ್ಯೋತಿ ದೀಪಗಳನ್ನು ಸಮಾಜದಲ್ಲಿ ದುರ್ಬಲರಲ್ಲಿ ಅತಿದುರ್ಬಲರಾದವರಿಗೆ ಕೊಡಲಾಗಿದೆ. ಈ ಯೋಜನೆಯಲ್ಲಿ ದೀಪಗಳು ಇನ್ನೂ ಅನೇಕರಿಗೆ ಸಿಕ್ಕಿಲ್ಲ. ಕೆಲವು ಜಿಲ್ಲೆಗಳಲ್ಲಿ ತೃಪ್ತಿಕರವಾಗಿದ್ದು. ಕೆಲವು ಜಿಲ್ಲೆಗಳಲ್ಲಿ ತೃಪ್ತಿಕರವಾಗದಿರುವುದು ಕಂಡು ಬಂದಿದೆ. ಭಾಗ್ಯ ಜ್ಯೋತಿ ಹೊಂದಿದ ಬಡವರ ಜ್ಯೋತಿಯ ಮೀಟರ್ ತೆಗೆದು ಹಾಕಿದ ಮಂಡಳಿಯ ನಿದರ್ಶನಗಳು ರಾಜ್ಯದಲ್ಲಿ ಸಾಕಷ್ಟು ಇವೆ. ಬಾಕಿ ಇರುವ ಭಾಗ್ಯಜ್ಯೋತಿ ಗ್ರಾಹಕರು ಚಾಲ್ತಿ ಬಿಲ್ಲಿನ ಮೊತ್ತದ ಜೊತೆಗೆ ಬಾಕಿ ತಿಂಗಳೊಂದಕ್ಕೆ 10 ರೂ.ಗಿಂತ ಕಡಿಮೆ ಇಲ್ಲದೆ ತೀರಿಸಲು ಒಪ್ಪಿಗೆ ಕೊಟ್ಟು ಮಂಡಳಿಗೆ ಹತ್ತು ರೂಪಾಯಿ ಜಮಾ ಮಾಡಿ ಲಿಖಿತ ಅರ್ಜಿ ಕೊಡುವ ಭಾಗ್ಯಜ್ಯೋತಿ ಫಲಾನುಭವಿಗಳಿಗೆ ಮತ್ತೆ ವಿದ್ಯುತ್ ಸಂಪರ್ಕ ಕಲ್ಪಿಸಿ ಕೊಡಲಾಗುತ್ತಿದೆ. ಇದಕ್ಕೆ ವ್ಯತಿಕ್ತವಾಗಿ ಕೋಟ್ಯಾಧೀಶ ಉದ್ಯಮಶೀಲ ಗ್ರಾಹಕರನೇಕರು ವಿದ್ಯುತ್ ಮಂಡಳಿಗೆ ಸಹಸ್ರಾರು, ಲಕ್ಷಾಂತರ, ಕೋಟ್ಯಾಂತರ ರೂ. ಬಾಕಿಯನ್ನು ಕೊಡಬೇಕಾಗಿದ್ದರೂ ಅದರ ಬಾಕಿ ಬೆಳೆಯುತ್ತಲೇ ಇದ್ದರೂ, ಅಂತಹವರ ವಿದ್ಯುತ್ ಪೂರೈಕೆ ಬಂದ್ ಮಾಡದೆ ಪೂರೈಕೆ ಹಾಗೂ ಬಾಕಿ ಪುಷ್ಟೀಕರಿಸುತ್ತಿರುವುದು ಯಾವ ನ್ಯಾಯ? ಅಶೋಕ ಐರನ್ ವರ್ಕ್ಸ್ ಇಂಡಲ್ ಬೆಳಗಾವಿ - 7.38 ಕೋಟಿ, ವಾಣಿ ವಿಲಾಸ ವಾಟರ್ ವರ್ಕ್ಸ್ ಮೈಸೂರು - 14.38 ಕೋಟಿ, ಶ್ರೀ ಓರ್ ಲಿಮಿಟೆಡ್ ಹೊಸಪೇಟೆ - 16.93 ಕೋಟಿ, ಕೆ.ಐ.ಓ.ಸಿ. ಮಂಗಳೂರು - 38.02 ಕೋಟಿ, ಎಸ್.ಐ.ಎಲ್. ಶಿವಮೊಗ್ಗ - 55.87 ಕೋಟಿ. ಕೆ.ಐ.ಓ.ಸಿ. ಮಲ್ಲೇಶ್ವರ - 94.54

ಕೋಟಿ ಕೊಡತಕ್ಕ ಬಾಕಿ ಇದ್ದರೂ ಈ ಬಾಕಿಯನ್ನು ವಸೂಲಿ ಮಾಡದೆ ಅವರಿಗೆ ಪ್ರೋತ್ಸಾಹ ಕೊಡುವುದು, ರೈತರ ಯಾತ ನೀರಾವತಿ ಯೋಜನೆಗಳಿಗೆ ಸಂಬಂಧಿಸಿದ ವಿದ್ಯುತ್ ಬಾಕಿಯನ್ನು ಸರಕಾರಿ ಇಂಜಿನಿಯರರು ಕಟ್ಟದಿದ್ದಾಗ ವಿದ್ಯುತ್ ಪೂರೈಕೆ ಬಂದ್ ಮಾಡಿ ರೈತರ ಫಸಲನ್ನು ಹಾಳು ಮಾಡುವುದು, ಬಿಕ್ಷಾಧೀಶ ಬಡವನ ಭಾಗ್ಯಜ್ಯೋತಿ ಬಾಕಿ ಕೊಡದಿದ್ದಾಗ ಅವನ ಜ್ಯೋತಿ ನಂದಿಸಿ ಅವನನ್ನು ಕತ್ತಲ ಕೂಡ್ರಿಸುವುದು, ಮಂಡಳಿಗೆ ಹಾಗೂ ಸರಕಾರಕ್ಕೆ ಸಲ್ಲದ ಹೇಯ ಕೆಲಸ. 1988 ರಲ್ಲಿ ಮೆಸರ್ಸ್ ಎಸ್.ಎಂ. ಆ್ಯಂಡ್ ಐ.ಓ. ಲಿಮಿಟೆಡ್ ಇದರ ಬಾಕಿ 4.95 ಕೋಟಿ ಇದ್ದದ್ದು, ಇದೇ ಕಂಪನಿ 1991ರಲ್ಲಿ ಸಂಡೂರ ಮ್ಯಾಂಗನೀಜ್ ಆ್ಯಂಡ್ ಆಯರ್ನ ಓರ್ ಲಿಮಿಟೆಡ್ 13.37 ಕೋಟಿ, ಇದೇ ಕಂಪನಿ ಮುಂದೆ 1992 ರ ಪ್ರಾರಂಭಕ್ಕೆ 15.93 ಕೋಟಿ ರೂಪಾಯಿ ಮೊತ್ತ ಮಂಡಳಿಗೆ ಬಾಕಿ ಕೊಡಬೇಕಾದ್ದು ಇದೆ. ಈ ಕಂಪನಿ ಹಾಗೂ ಇತರ ಖಾಸಗಿ ಮತ್ತು ಸಾರ್ವಜನಿಕ ದೊಡ್ಡ ಉದ್ದಿಮೆದಾರರು 90-91ರಲ್ಲಿ ಸುಮಾರು 2852 ಮಿಲಿಟನ್ ಯೂನಿಟ್ ವಿದ್ಯುಚ್ಛಕ್ತಿ ಬಳಸಿದ್ದು ಇವರೆಲ್ಲರಿಂದ 1992ರ ಪ್ರಾರಂಭಕ್ಕೆ 364.60 ಕೋಟಿ ರೂ. ಬರುವ ಬಾಕಿ ಇದ್ದರೂ ಇವರನ್ನು ಪ್ರೋತ್ಸಾಹಿಸುವ ಧೋರಣೆ ಸರಕಾರಕ್ಕೆ ಹಾಗೂ ಮಂಡಳಿಗೆ ಭೂಷಣವಲ್ಲ. 1991ರ ಮಾರ್ಚ್ ಅಂತ್ಯದವರೆಗೆ ಮಾರ್ಚ್ ಬೇಡಿಕೆ ಸೇರಿ 433.94 ಕೋಟಿ ಬಾಕಿ ಇರುತ್ತದೆಂದು ತಿಳಿದಿದೆ. ರೈತರ ಸಾಲ ಮನ್ನಾ ಮಾಡದ ಸರಕಾರ ಈ ಮಂಡಳಿಗೆ 89.90, 90-91ರಲ್ಲಿ 203.81 ಕೋಟಿ ರೂ. ಸಹಾಯ ಧನವನ್ನು ನೀಡಿದೆ. ಮಂಡಳಿಯು ರೈತರಿಂದ ಬಾಕಿ ಮೇಲೆ ಶೇಕಡಾ 24 ರೂಪಾಯಿ ಬಡ್ಡಿ ವಸೂಲಿ ಮಾಡುತ್ತಿದೆ. 31-3-91ಕ್ಕೆ 248.00 ಕೋಟಿ ರೂಪಾಯಿ ಕೂಡಿ ಬಿದ್ದ ನಷ್ಟದಲ್ಲಿರುವ ಮಂಡಳಿ ಹಾಗೂ ಸರಕಾರ, ಆಗಿಂದಾಗ್ಗೆ ಅನಾವಶ್ಯಕವಾಗಿ ವಿದ್ಯುತ್ ದರ ಏರಿಸಿ ಗ್ರಾಹಕರನ್ನು ಸುಲಿದು ತಿಂಗಳಿಗೆ ಸರಾಸರಿ ಸುಮಾರು 3268 ರೂಪಾಯಿ ಸಂಬಳ ಪಡೆವ 47109 ಜನ ಸಿಬ್ಬಂದಿ ಹಾಗೂ ಆಡಳಿತ ಮಂಡಳಿ ಇರುವ ಮಂಡಳಿಯ ಜವಾಬ್ದಾರಿಯೇನು? ಸರಕಾರದ ಜವಾಬ್ದಾರಿಯೇನು? ಮಾಜಿ ಆರ್ಥಿಕ ಸಚಿವ ಹಾಗೂ ಸಧ್ಯದ ಸಚಿವ ಶ್ರೀ ಘೋರ್ಪಡೆ ಹಾಗೂ ಇತರೆ ಮಂತ್ರಿ ಹಾಗೂ ಮುಖ್ಯಮಂತ್ರಿಯ ಜವಾಬ್ದಾರಿಯೇನು? ರಾಜ್ಯದ ಶಾಸಕರ ಹಾಗೂ ಸಂಸದರ ಜವಾಬ್ದಾರಿಯೇನು? ಈ ಎಲ್ಲ ಸಮಸ್ಯೆಗಳನ್ನು ಇವರೆಲ್ಲರೂ ಅರಿತು ಸೂಕ್ತ ಕ್ರಮ ತೆಗೆದುಕೊಂಡು ಗ್ರಾಹಕರಿಗೆ ಆಡಳಿತ ಮಾರಕವಾಗದೆ ತಾರಕವಾದರೆ ಲೇಸು.

❑

ಬಜೆಟ್ - ಒಂದು ಚಿಂತನೆ

ರಾಜ್ಯ ಸರಕಾರ ಪ್ರತಿವರ್ಷ ಪ್ರಜೆಗಳಿಂದ ಹಾಗು ವಿವಿಧ ಮೂಲಗಳಿಂದ ಕರ, ಕಂದಾಯ ಸಾಲ, ಬಡ್ಡಿ ಇತ್ಯಾದಿ ವಿವಿಧ ಬಾಬುಗಳಿಂದ ಆದಾಯವನ್ನು ಹೆಚ್ಚಿಸಿಕೊಳ್ಳುತ್ತಲೇ ಇದೆ. ಈ ಹಣದಲ್ಲಿ ಯೋಜನೆ ಹಾಗೂ ಯೋಜನೇತರ ಬಾಬುಗಳಿಗೆ ಖರ್ಚು ಮಾಡುತ್ತಿದೆ. ಹೀಗೆ ಖರ್ಚು ಮಾಡುವಾಗ ಬಜೆಟ್‌ದಲ್ಲಿ ನಿಗದಿಪಡಿಸಿದ ಮೊತ್ತದಲ್ಲಿ ಯೋಜನಾ ಕಾರ್ಯಕ್ರಮಗಳಿಗೆ ಕಡಿಮೆ ಖರ್ಚು ಹಾಗೂ ಯೋಜನೇತರ ಕಾರ್ಯಕ್ರಮಗಳಿಗೆ ಹೆಚ್ಚಿನ ಖರ್ಚನ್ನು ಮಾಡಿ ಯೋಜನಾ ಕಾರ್ಯಕ್ರಮಗಳಿಗೆ ಆಯಾ ವರ್ಷದಲ್ಲಿ ನಿಗದಿಪಡಿಸಿದ ಮೊತ್ತಕ್ಕಿಂತ ಕಡಿಮೆ ಖರ್ಚು ಮಾಡಿ, ಖರ್ಚು ಮಾಡದೆ ಉಳಿದಿರುವ ಹಣ 1988-89ರಲ್ಲಿ 308.46 ಕೋಟಿ, 1989-90ರಲ್ಲಿ 209.28 ಕೋಟಿ, 1990-91ರಲ್ಲಿ 520.85 ಕೋಟಿ, 1991-92 ರಲ್ಲಿ 348.49 ಕೋಟಿ ಖರ್ಚು ಮಾಡದೆ ಉಳಿಸಿರುವ ಈ ಕೋಟ್ಯಾಂತರ ಮೊತ್ತವನ್ನು ಅಭಿವೃದ್ಧಿ ಕಾರ್ಯಗಳಿಗೆಯೇ ಬಹುತೇಕ ಖರ್ಚು ಮಾಡಬೇಕಾಗಿತ್ತು. ಆದರೆ ಮಾಡಿಲ್ಲ. ಇದನ್ನು ಗಮನಿಸಬೇಕಾದವರು ಯಾರೂ ಇಲ್ಲವೆ? ಈ ಅನಿಷ್ಠ ಪದ್ಧತಿ ಹೀಗೆ ಮುಂದುವರೆದರೆ ಅಭಿವೃದ್ಧಿ ಕಾರ್ಯಗಳ ಗತಿ ಏನು?

ಯೋಜನೆಗಳಿಗೆ ಖರ್ಚು ಮಾಡುವ ಹಣ ಕಡಿಮೆ. ಯೋಜನೇತರ ಬಾಬುಗಳಿಗೆ ಖರ್ಚು ಮಾಡುವ ಹಣ ಅತೀ ಹೆಚ್ಚು. ಇದು ಸಹ ಪ್ರತಿವರ್ಷ ಹೆಚ್ಚುತ್ತಲೇ ಇದೆ. 1989-90ರಲ್ಲಿ ಯೋಜನೆಗಳಿಗೆ 1235.38 ಕೋಟಿ ಖರ್ಚಾಗಿದ್ದರೆ ಯೋಜನೇತರಗಳಿಗೆ 3740.12 ಕೋಟಿ ಖರ್ಚಾಗಿದೆ. 1990-91ರಲ್ಲಿ ಯೋಜನೆಗಳಿಗೆ 1637.27 ಕೋಟಿ ಖರ್ಚು ಆಗಿದ್ದರೆ ಯೋಜನೇತರಗಳಿಗೆ 3509.96 ಕೋಟಿ ಖರ್ಚಾಗಿದೆ. 1991-92ರಲ್ಲಿ ಯೋಜನೆಗಳಿಗೆ 1985.67 ಕೋಟಿ ಖರ್ಚಾಗಿದ್ದರೆ ಯೋಜನೇತರಗಳಿಗೆ 4262.56 ಕೋಟಿ ಖರ್ಚಾಗಿದೆ. ಯೋಜನೇತರ ವೆಚ್ಚ ಕಡಿಮೆ ಮಾಡದಿದ್ದರೆ ಯೋಜನೆಗಳು ಹೇಗೆ ಯಶಸ್ವಿಯಾಗಬೇಕು? ರಾಜ್ಯದ ನೀರಾವರಿ ವಿಶೇಷ ಘಟಕ, ಸಮಾಜ ಕಲ್ಯಾಣ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಇತ್ಯಾದಿ ಯೋಜನೆಗಳ ಅಭಿವೃದ್ಧಿ ಹೇಗಾಗಬೇಕು. ಗ್ರಾಮಾಂತರ ವಿವಿಧ ಅಭಿವೃದ್ಧಿ ಯೋಜನೆಗಳು ಬರೀ ಕಾಗದದಲ್ಲಿ ಉಳಿದು

ವಾಸ್ತವಿಕವಾಗಿ ಕಾರ್ಯಗತವಾಗದೆ ಇರುವದು ಗ್ರಾಮಾಂತರ ಜನರ ದುರ್ದೈವ. ಈ ಬಗ್ಗೆ ಚಿಂತಿಸುವವರಾರು?

ಜಿಲ್ಲಾ ಪರಿಷತ್ತು, ಮಂಡಳ ಪಂಚಾಯತಿಗಳ ಮುಂಖಾತರ ಆಗಬೇಕಾಗಿದ್ದ ಅಭಿವೃದ್ಧಿ ಕಾರ್ಯಗಳು ಸಹ ತೃಪ್ತಿಕರವಾಗುತ್ತಿಲ್ಲ. ರಾಜ್ಯದ ಎಲ್ಲ ಜಿಲ್ಲಾ ಪರಿಷತ್ತುಗಳಿಗೆ 1992-93ರಲ್ಲಿ ರಾಜ್ಯ ಸರಕಾರ ನಿಗದಿಪಡಿಸಿದ ಒಟ್ಟು ಮೊತ್ತ 1642 ಕೋಟಿ. ಪ್ರತಿ ಮೂರು ತಿಂಗಳಿಗೆ ಈ ಹಣವನ್ನು ಕಂತುಗಳಲ್ಲಿ ಬಿಡುಗಡೆ ಮಾಡಬೇಕಾಗಿತ್ತು. ಮೊದಲು ಮೂರು ತ್ರೈಮಾಸಿಕ ಅವಧಿಗೆ ಅಂದರೆ 1-4-92 ರಿಂದ 31-12-92ರ ಅವಧಿಯಲ್ಲಿ 1232 ಕೋಟಿ ಹಣವನ್ನು ಸರಕಾರ ಬಿಡುಗಡೆ ಮಾಡಬೇಕಾಗಿತ್ತು. ದುರ್ದೈವರಿಂದ 1-4-92 ರಿಂ 31-12-92ರ ಅವಧಿಯಲ್ಲಿ ಬಿಡುಗಡೆ ಮಾಡಿದ ಹಣ 1098.15 ಕೋಟಿ. ಅಂದರೆ 133.85 ಕೋಟಿ ಕಡಿಮೆ ಕೊಟ್ಟಿದ್ದಾರೆ. ಕಡಿಮೆ ಮಾಡಿ ಕೊಟ್ಟ ಹಣದಲ್ಲಿಯೇ ಎಲ್ಲಾ ಜಿಲ್ಲಾ ಪರಿಷತ್ತುಗಳು ಈ ತಿಂಗಳ ಅವಧಿಯೊಳಗಾಗಿ 133.85 ಕೋಟಿ ಖರ್ಚು ಮಾಡದೆ 31-12-92ಕ್ಕೆ ಉಳಿಕೊಂಡಿವೆ. ಜಿಲ್ಲಾ ಪರಿಷತ್ತುಗಳಿಗೆ ನಿಗದಿಪಡಿಸಿದ ಹಣದಲ್ಲಿ ಬಿಡುಗಡೆ ಮಾಡಿದ ಮೊತ್ತ ಕಡಿಮೆ ಇದ್ದರೂ ಈ ಹಣದಲ್ಲಿ ಸಹ (1) ಶಿಕ್ಷಣ (2) ಆರೋಗ್ಯ, (3) ಸಣ್ಣ ನೀರಾವರಿ, (3) ರೇಶ್ಮೆ (5) ರಸ್ತೆ ಹಾಗು ಸೇತುವೆ, (6) ಸಮಾಜ ಕಲ್ಯಾಣ, (7) ಪೌಷ್ಠಿಕ ಆಹಾರ, (8) ವ್ಯವಸಾಯ, (9) ಮೀನುಗಾರಿಕೆ, (10) ಅರಣ್ಯ, (11) ಡ್ವಾಕ್ರಾ, (12) ಗ್ರಾಮೀಣ ಅಭಿವೃದ್ಧಿ ವಿಶೇಷ ಕಾರ್ಯಕ್ರಮ, (13) ಗ್ರಾಮೀಣ ಸಣ್ಣ ಕೈಗಾರಿಕೆ, (14) ಜವಾಹರ ರೋಜಗಾರ ಯೋಜನೆ ಮೊದಲಾದ ಗ್ರಾಮಾಂತರ ಬಡವರ ಪರವಾದ ಯೋಜನೆಗಳಿಗೆ ಶೇಕಡಾ 50 ಕ್ಕಿಂತ ಕಡಿಮೆ ಖರ್ಚು ಮಾಡಿರುವದು ಸಂಬಂಧಿಸಿದ ಅಬಕಾರಿಗಳು ಗ್ರಾಮಾಂತರ ಅಭಿವೃದ್ಧಿಗೆ ತೋರಿಸುತ್ತಿರುವ ತಾತ್ಸಾರ, ಅದಕ್ಷತೆ ಹಾಗು ಬೇಜವಾಬ್ದಾರಿ ಸುಸ್ಪಷ್ಟವಾಗಿದೆ. ಜಿಲ್ಲಾ ಪರಿಷತ್ತುಗಳು ಪ್ರಾರಂಭವಾದ ಕಾಲದಿಂದಲೂ ಪ್ರತಿವರ್ಷ ಕೊಟ್ಟ ಹಣ ಖರ್ಚು ಮಾಡದೆ ಕೋಟ್ಯಾಂತರ ಹಣವನ್ನು ಉಳಿಸಿರುವದು ಒಂದು ಕೆಟ್ಟ ಸಂಪ್ರದಾಯವಾಗಿದೆ. ವಿಶೇಷ ಘಟಕ ಯೋಜನೆಗಳಿಗೆ 1991-92ರಲ್ಲಿ 153.16 ಕೋಟಿ ಬಿಡುಗಡೆಯಾಗಿದ್ದರೂ 124.78 ಕೋಟಿ ಮಾತ್ರ ಖರ್ಚುಮಾಡಿ ಸುಮಾರು 28.37 ಕೋಟಿ ಖರ್ಚು ಮಾಡದೆ ಉಳಿಸಿ ಐ.ಆರ್.ಡಿ.ಪಿ. ಸಣ್ಣ ಹಾಗೂ ಅತೀಸಣ್ಣ ರೈತರು, ಜನತಾ ಮನೆ, ರೋಜಗಾರ, ಸಮಾಜ ಕಲ್ಯಾಣ ಮಹಿಳಾ ಹಾಗೂ ಮಕ್ಕಳ ಕಲ್ಯಾಣ, ಜನತಾ ಬಟ್ಟೆ, ಕಾಡಾ ಮೊದಲಾದ ಯೋಜನೆಗಳನ್ನು ಕುಂಠಿತಗೊಳಿಸಿರುವದು ನಾಚಿಕೆಗೇಡು. ಈ ತರಹ ಕುಂಠಿತ, ಕೆಟ್ಟ ಪರಿಪಾಠ ಅನೇಕ ವರ್ಷಗಳಿಂದ ನಿರಾತಂಕವಾಗಿ ನಡೆದು ಬರುತ್ತಿದೆ. ಇನ್ನು ಮುಂದಾದರೂ ನೌಕರಶಾಹಿ ತನ್ನ ಜವಾಬ್ದಾರಿ ಹಾಗೂ ಕರ್ತವ್ಯವನ್ನು ಅರಿತು ಬಜೆಟ್ ಪ್ರಕಾರ ಕೊಟ್ಟ ಅಭಿವೃದ್ಧಿ

ಯೋಜನಾ ವೆಚ್ಚಮಾಡಿ ಈ ರಾಜ್ಯದ ಅಭಿವೃದ್ಧಿಗೆ ಆಸಕ್ತಿವಹಿಸಿ ಅನುಷ್ಠಾನಗೊಳಿಸಿದರೆ ಒಳ್ಳೆಯದು.

ಬಹುತೇಕ ಚುನಾಯಿತ ಪ್ರತಿನಿಧಿಗಳು ಮಂತ್ರಿಗಳನ್ನೊಳಗೊಂಡು ಯೋಜನೆಗಳಿಗೆ ನಿಗಧಿಪಡಿಸಿ ಹಣ, ಬಿಡುಗಡೆ ಮಾಡಿದ ಹಣ, ಖರ್ಚು ಮಾಡಿದ ಹಣ, ಖರ್ಚು ಮಾಡದೇ ಉಳಿಸಿರುವ ಹಣ, ಯೋಜನೆಗಳ ಅನುಷ್ಠಾನ, ಕುಂಠಿಕ, ಹಣದ ದುರುಪಯೋಗ ಇತ್ಯಾದಿ ಬಗ್ಗೆ ತಲೆ ಹಾಕದಿರುವದು ಜನತೆಯ ದುರ್ದೈವ. ಇದರಿಂದ ಜನಪರ ಧೋರಣೆ ಜಲಗುದುರೆಯಂತಾಗಿದೆ. ರಾಜ್ಯದಲ್ಲಿ ಸುಮಾರು 262 ಐ.ಎ.ಎಸ್. ಅಧಿಕಾರಿಗಳಿದ್ದಾರೆ. ಇವರಿಗೆ ಸುಮಾರು 18 ಲಕ್ಷ ಹಣ ಮಾಸಿಕ ವೇತನ ಭತ್ಯೆ ಕೊಡಲಾಗುತ್ತಿದೆ. ರಾಜ್ಯ ಸರಕಾರಿ ನೌಕರರ ಸಂಖ್ಯೆ ಪ್ರತಿವರ್ಷ ಹೆಚ್ಚುತ್ತಲೇ ಇದ್ದು ಈಗ ನಾಲ್ಕೂ ದರ್ಜೆಗಳ ನೌಕರರ ಸಂಖ್ಯೆ 5.63 ಲಕ್ಷ ಮೀರಿರುತ್ತದೆ. ಇವರೆಲ್ಲರ ಜೀವನ ಮಟ್ಟ ಈ ದೇಶದ ಶೇಕಡಾ 80ರಷ್ಟು ಇರುವ ಗ್ರಾಮಾಂತರ ಜನರ ಜೀವನದ ಆರ್ಥಿಕ ಮಟ್ಟಕ್ಕಿಂತ ಮೇಲಿದೆ. ಇವರೆಲ್ಲರ ಸಲುವಾಗಿ ಸರಕಾರ ಕೊಡುತ್ತಿರುವ ವೇತನ, ವಿಶ್ರಾಂತಿಗಾಗಿ ಪ್ರತಿವರ್ಷ ಕೋಟ್ಯಂತರ ಹಣವನ್ನು ಹೆಚ್ಚು ಹೆಚ್ಚಾಗಿ ಕೊಡುತ್ತಲೇ ಬಂದಿದ್ದು, ಈ ವರ್ಷ 1993-94ನೇ ವರ್ಷದಲ್ಲಿ 2432.32 ಕೋಟಿ ಮೊತ್ತವನ್ನು ಖರ್ಚು ಮಾಡಲಿದೆ. ಅಂದರೆ ತಿಂಗಳಿಗ 202.69 ಕೋಟಿ ಖರ್ಚು ಮಾಡುತ್ತಲಿದೆ. ಇದು ಅನಿವಾರ್ಯ. ಇದು ಇನ್ನೂ ಹೆಚ್ಚಾದರೂ ಯಾರೊಬ್ಬರ ತಕರಾರು ಅಥವಾ ಅಸೂಯೆಯೇ ಇರಲಾರದು. ಪ್ರಜಾಪ್ರತಿನಿಧಿಗಳು ಬರಬಹುದು, ಹೋಗಬಹುದು, ಅವರ ಅವಧಿ ಕೇವಲ ಅಲ್ಪ. ಅವರಿಂದ ಈ ದೇಶದ ಹಿತರಕ್ಷಣೆ ಜನತೆಯ ಅಭಿವೃದ್ಧಿ ಯೋಜನೆಗಳ ಪರಿಣಾಮಕಾರಿ ಅನುಷ್ಠಾನ ನಿರೀಕ್ಷಿಸುವದು ಕಷ್ಟಸಾಧ್ಯವಾಗುತ್ತಿದೆ. ಇಂತಹ ಸನ್ನಿವೇಶದಲ್ಲಿ ನೌಕರಶಾಹಿಗಳು ಈ ದೇಶದ ಜನಸಾಮಾನ್ಯ ಪ್ರಜೆಗಳ ಮಕ್ಕಳೆಂಬ ಅಭಿಮಾನದಿಂದಾಗಲೀ ಕನಿಕರಪಟ್ಟು ಜನತೆ ಕೊಟ್ಟ ಕರ ಕಂದಾಯದ ಪಾಲಿನಲ್ಲಿ ಅವರಿಗೆ ಸಲ್ಲಬೇಕಾದ ಅಭಿವೃದ್ಧಿ ಕಾರ್ಯಗಳ ಬಗ್ಗೆ ಆಸಕ್ತಿವಹಿಸಿ ಬಜೆಟ್ ಪ್ರಕಾರ ತಪ್ಪದೆ ಪ್ರತಿ ತಿಂಗಳ ವೇತನ-ವಿಶ್ರಾಂತಿಗೆ ಖರ್ಚು ಮಾಡುವಂತೆ ಬಜೆಟ್ ಪ್ರಕಾರ ಪ್ರತಿ ತಿಂಗಳ ಅಭಿವೃದ್ಧಿಗೆ ನಿಗಧಿಪಡಿಸಿದ ಹಣ ಖರ್ಚುಮಾಡಿ ಅಭಿವೃದ್ಧಿ ಯೋಜನೆಗಳನ್ನು ಸಂಪೂರ್ಣವಾಗಿ ಅನುಷ್ಠಾನಗೊಳಿಸಿದರೆ ಹಾಗೂ ಈ ಬಗ್ಗೆ ಮುತುವರ್ಜಿ ವಹಿಸಿದರೆ ಜನತೆ ನೌಕರಶಾಹಿಗೆ ಚಿರಋಣಿ. ಪರ ರಾಷ್ಟ್ರಗಳಲ್ಲಿ ಕರ್ತವ್ಯಚ್ಯುತಿ, ಭ್ರಷ್ಟಾಚಾರ ಅಧಿಕಾರ ದುರುಪಯೋಗ, ಪಕ್ಷಪಾತ, ಸ್ವಜನಪಕ್ಷಪಾತ, ಹಣದುರುಪಯೋಗ ಮೊದಲಾದ ಅಪರಾಧಗಳಿಗೆ, ಕಠಿಣ ಶಿಕ್ಷೆ ಇದ್ದರೂ ನಮ್ಮ ದೇಶದಲ್ಲಿ ಈ ಅಪರಾಧಗಳಿಗೆ ತಪ್ಪಿತಸ್ಥ ಅಧಿಕಾರಿ ಹಾಗೂ ರಾಜಕಾರಣಿಗಳನ್ನು ಕಟ್ಟುನಿಟ್ಟಾಗಿ ಗುರಿ ಮಾಡದೆ ಅವರನ್ನು ಪಾರು ಮಾಡಿ ರಕ್ಷಿಸುವ ಅನಿಷ್ಟ ಪದ್ಧತಿ ಇರುವುದೇ ದೇಶದಲ್ಲಿ ಸ್ವಚ್ಛ ಹಾಗು ಸುಭದ್ರ ಆಡಳಿತಕ್ಕೆ ಮಾರಕವಾಗಿದೆ. ಈ ಬಗ್ಗೆ ತೀವ್ರ ಗಮನವನ್ನು ಆಡಳಿತ ಸೂತ್ರಧಾರಿಗಳು ಹರಿಸುವಲ್ಲಿ ಮುಂದಾದರೆ ಒಳ್ಳೆಯದು. ❑

ಸಾರ್ವಜನಿಕ ಸರಕಾರಿ ಉದ್ಯಮಗಳು

ರಾಜ್ಯದ ಸಾರ್ವಜನಿಕರಿಗೆ ಸರ್ವತೋಮುಖ ಸರ್ವಾಂಗೀಣ ಅಭಿವೃದ್ಧಿಗೆ ಅನುಕೂಲವಾಗಲೆಂದು ಸುಮಾರು ಅರವತ್ತೆಂಟು ಸಾರ್ವಜನಿಕ ಸರಕಾರಿ ಉದ್ಯಮಗಳಿವೆ. ಇವೆಲ್ಲವೂ ಸರಿಯಾಗಿ ಸಮರ್ಥ ರೀತಿಯಿಂದ ಕಾರ್ಯಪ್ರವೃತ್ತವಾಗಿ ತೃಪ್ತಿಕರವಾಗಿ ಕೆಲಸ ಮಾಡಿದರೆ ಎಲ್ಲರಿಗೂ ಒಳಿತಾಗುವದು. ಆದರೆ ದುರ್ದೈವದಿಂದ ಬಹುಪಾಲು ಉದ್ಯಮಗಳು ಸರಿಯಾಗಿ ಕಾರ್ಯನಿರ್ವಹಿಸದೆ ದಿವಾಳಿ ಹಾದಿಯನ್ನು ಹಿಡಿದಿರುವದು ಇನ್ನೂ ಕೆಲವು ಉದ್ಯಮಗಳು ಮಾರವಾಡಿಗಳಂತೆ ಉದ್ಯಮಿಗಳಿಂದ ಹೆಚ್ಚಿನ ಬಡ್ಡಿ ಪಡೆದು ಉತ್ಪಾದಿತ ಮಾಲುಗಳ ಮೇಲೆ ಖಾಸಗಿ ಉದ್ಯಮಿಗಳಿಗಿಂತ ಹೆಚ್ಚಿನ ಲಾಭಾಂಶ ಪಡೆದು, ಪಡೆದ ಲಾಭಾಂಶದಲ್ಲಿ ಅಂಡಾದುಂದಿ ಖರ್ಚು ಮಾಡಿ ಕನಿಷ್ಠ ಲಾಭ ತೋರಿಸಿ ಕಾರ್ಯನಿರ್ವಹಿಸುತ್ತಿವೆ. ಬಹುತೇಕ ಉದ್ಯಮಗಳಿಗೆ ಐ.ಎ.ಎಸ್. ಮತ್ತು ಕೆ.ಎ.ಎಸ್. ಅಧಿಕಾರಿಗಳೇ ಆಡಳಿತ ಮಂಡಳಿಗಳಲ್ಲಿದ್ದರೂ ಇವರ ಕಾರ್ಯ ಹಾಗೂ ಉದ್ಯಮಗಳ ಕಾರ್ಯ ಸಮಾಧಾನಕರವಾಗದೇ ಇರುವದು ಕಂಡು ಬಂದಿದೆ.

ವಾಣಿಜ್ಯ ಹಾಗೂ ವಾಣಿಜ್ಯೇತರ ಅಭಿವೃದ್ಧಿಶೀಲ, ಸಾರ್ವಜನಿಕ ಉಪಯುಕ್ತತೆ, ತಯಾರಿಕಾ, ಹಣಕಾಸು, ಸೇವೆ, ಮಾರುಕಟ್ಟೆ ಹಾಗೂ ಜಾಹೀರಾತು ಹೀಗೆ ವಿವಿಧ ಉದ್ದೇಶಗಳ ಉದ್ಯಮಗಳಿರುತ್ತವೆ. ಈ ಎಲ್ಲ ಉದ್ಯಮಗಳನ್ನು ಹದ್ದುಬಸ್ತಿನಲ್ಲಿಡಲು ಮಾರ್ಗದರ್ಶನ ಮಾಡಲು ತಪಾಸಣೆ ಹಾಗೂ ತನಿಖೆ ಮಾಡಲು ಲೆಕ್ಕಪತ್ರಗಳನ್ನು ಸುವ್ಯವಸ್ಥೆಯಲ್ಲಿಡಲು ಕರ್ನಾಟಕ ರಾಜ್ಯ ಸಾರ್ವಜನಿಕ ಉದ್ಯಮಗಳ ಮಹೋದ್ಯಮವೆಂಬ ಸಂಸ್ಥೆ ಕೂಡ ರಾಜ್ಯ ಮೇಲ್ಮಟ್ಟದಲ್ಲಿದೆ. ಈ ಮೇಲ್ವಿಚಾರಣಾ ಮಂಡಳಿಗೆ ಸರಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹಿರಿಯ ಐ.ಎ.ಎಸ್. ಅಧಿಕಾರಿಯೇ ಅಧ್ಯಕ್ಷರಾಗಿರುತ್ತಾರೆ. ಆದರೂ ಎಲ್ಲಾ ಉದ್ಯಮಗಳು ಸಕಾಲಕ್ಕೆ ಸರಕಾರಕ್ಕೆ ಹಾಗೂ ವಿಧಾನ ಮಂಡಳಕ್ಕೆ ತಮ್ಮ ಲೆಕ್ಕಪತ್ರ ವರದಿ ಹಾಗೂ ಮಾಹಿತಿಯನ್ನು ಕೊಡದೇ ಈ ಉದ್ಯಮಗಳ ಬಗ್ಗೆ ಸರಕಾರವು ವಿಧಾನ ಮಂಡಲ ಹಾಗೂ ಸಾರ್ವಜನಿಕರನ್ನು ಅಂಧಕಾರದಲ್ಲಿಡುತ್ತಾರೆ. ಕೆಲವೊಂದು ಉದ್ಯಮಗಳು 1986, 87ರಿಂದಲೇ ಲೆಕ್ಕಪತ್ರಗಳನ್ನು

ಕೊಟ್ಟಿಲ್ಲ. ಮಹೋದ್ಯಮ ಕೂಡ ಸರಿಯಾದ ವಾಸ್ತವಿಕ ಅಂಕಿ ಸಂಖ್ಯೆ ಕೊಡುತ್ತಿರುವದಿಲ್ಲ. ಈ ಎಲ್ಲ ಉದ್ಯಮಗಳಲ್ಲಿ ಸುಮಾರು 5887.00 ಕೋಟಿ ಹಣವನ್ನು ಸರಕಾರ ಬಂಡವಾಳವನ್ನಾಗಿ ನೀಡಿದೆ. 92-93 ರಲ್ಲಿ 80.26 ಕೋಟಿ ಸಬ್ಸಿಡಿಯನ್ನು ಇವುಗಳಿಗೆ ಸರಕಾರ ಕೊಟ್ಟಿದೆ. ಇಷ್ಟೊಂದು ಉತ್ತೇಜನ ಪ್ರೋತ್ಸಾಹ ಈ ನಿಗಮಗಳಿಗಿದೆ. ಎಲ್ಲಾ ಉದ್ಯಮಗಳ ಕೂಡಿ ಬಿದ್ದ ಹಾನಿ 1990-92ರ ಕೊನೆಗೆ 662.79 ಕೋಟಿ, 91-92ರ ಕೊನೆಗೆ 674.49 ಕೋಟಿ, 92-93 ಕೊನೆಗೆ 748.91 ಕೋಟಿ ಹೀಗೆ ಹಾನಿಯಾಗುತ್ತಲೇ ಇದೆ. ಇವುಗಳಲ್ಲಿ 1992-93ಕ್ಕೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ - 274.83 ಕೋಟಿ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ - 191.87 ಕೋಟಿ, ಸಾಬೂನು ಕಾರ್ಖಾನೆ - 91-09 ಕೋಟಿ, ಕೂಡಿಬಿದ್ದ ಹಾನಿ ಸೇರಿದ್ದು ಈ ಮೂರು ಸಂಸ್ಥೆ ಪ್ರತಿವರ್ಷ ನಷ್ಟದಲ್ಲಿ ಮುಂದುವರೆದಿದೆ. ಒಟ್ಟಿನ ಮೇಲೆ ಹೇಳುವದಾದರೆ ಒಟ್ಟಾರೆ ನಿಗಮಗಳ ಆರ್ಥಿಕ ಪರಿಸ್ಥಿತಿ ದಿವಾಳಿ ಅಂಚಿನಲ್ಲಿ 1992-93 ರಲ್ಲಿ ಲೆಕ್ಕ ಕೊಟ್ಟಿರುವ 63 ಉದ್ಯಮಗಳ ಪೈಕಿ 29 ಉದ್ಯಮಗಳು 66.23 ಕೋಟಿ ಲಾಭಗಳಿಸಿದ್ದರೆ 34 ಉದ್ಯಮಗಳು 124.36 ಕೋಟಿ ನಷ್ಟ ಹೊಂದಿದ್ದು ಒಟ್ಟಾರೆ 63 ಉದ್ಯಮಗಳು 31-3-93ಕ್ಕೆ ಒಟ್ಟು ನಿವ್ವಳ 58.13 ಕೋಟಿ ನಷ್ಟ ಹೊಂದಿವೆ. ಬೇಡಾದವರ ಯಾವದೇ ಸಂಘ ಸಂಸ್ಥೆ ನಷ್ಟ ಹೊಂದಿದರೆ ಅದನ್ನು ಸರಕಾರ ತನ್ನ ಲಾಭ ತೆಗೆದುಕೊಳ್ಳುತ್ತಾರೆ. ಆದರೆ ತಿಂಗಳಿಗೆ 15000-00 ವರೆಗೆ ಪಗಾರ ಪಡೆವ ಅಧಿಕಾರಿಗಳನ್ನೊಳಗೊಂಡ ಸರಕಾರವೇ ಈ ನಿಗಮಗಳನ್ನು ನಡೆಸಿ ಕೆಲವು ನಿಗಮಗಳು ಸಾರ್ವಜನಿಕರನ್ನು ಸುಲಿದು ಲಾಭಮಾಡಿ, ಕೆಲ ನಿಗಮಗಳು ಸಾರ್ವಜನಿಕರಿಗೆ ಸುಲಿಗೆ ಶೋಷಣೆ ಮಾಡಿಯೂ ನಷ್ಟ ಮಾಡಿ ದುರಾಡಳಿತ ಮಾಡುತ್ತಿರುವಾಗ ಇವರ ಮೇಲೆ ಯಾರು ಯಾವ, ಏನು, ಕ್ರಮ ತೆಗೆದುಕೊಳ್ಳಬೇಕೆಂಬುದೇ ಯಾರಿಗೂ ತಿಳಿಯದಾಗಿದೆ. ಈ ನಿಗಮಗಳು ಅನೇಕ ಐ.ಎ.ಎಸ್., ಕೆ.ಎ.ಎಸ್. ಮೊದಲಾದ ಅಧಿಕಾರಿಗಳಿಗೆ ಹಾಗೂ ಭ್ರಷ್ಟ ರಾಜಕಾರಣಿಗಳಿಗೆ ತಂಗುದಾಣ ಹಾಗೂ ಹುಲ್ಲುಗಾವಲು ಹಾಗೂ ಅನ್ನಛತ್ರಗಳಾಗಿವೆ. ಇತ್ತೀಚಿನ ಸರಕಾರಿ ವರದಿಯ ಪ್ರಕಾರ ಸುಮಾರು 29 ಸಾರ್ವಜನಿಕ ಉದ್ಯಮಗಳು ಸಕಾಲದಲ್ಲಿ ತಮ್ಮ ಲೆಕ್ಕ ಪತ್ರಗಳನ್ನೆ ಒದಗಿಸಿರುವುದಿಲ್ಲ. ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ 7 ವರ್ಷ, ರಾಜ್ಯ ಪ್ರವಾಸೋದ್ಯಮ ಸಂಸ್ಥೆ 6 ವರ್ಷ, ರಾಜ್ಯ ಟೆಕ್ಸ್‌ಟಾಯಿಲ್ 5 ವರ್ಷ, ಮೀನು ಅಭಿವೃದ್ಧಿ ನಿಗಮ 5 ವರ್ಷ, ಹೈನು ಉತ್ಪಾದನಾ ಸಂಸ್ಥೆ 5 ವರ್ಷ, ಭೂ ಸೇವಾ ನಿಗಮ 4 ವರ್ಷ, ಕೃಷ್ಣಾ ಕೊಳ್ಳ ನೀರಾವರಿ ನಿಗಮಗಳು 3 ವರ್ಷ, ಲಿಡ್ಕರ್, ಕಾವೇರಿ ಕೊಳ್ಳ ನೀರಾವರಿ ನಿಗಮ ಮೊದಲಾದ 9 ನಿಗಮಗಳು 2 ವರ್ಷ, ಕರ್ನಾಟಕ ವಿದ್ಯುತ್ ನಿಗಮ, ಕರ್ನಾಟಕ ರಚನಾ ನಿಗಮ ಮೊದಲಾದ 13 ನಿಗಮಗಳು 1 ವರ್ಷ ಅವಧಿಯ ಲೆಕ್ಕ ಪತ್ರ ಕೊಡದೇ ಬಾಕಿ ಉಳಿಸಿಕೊಂಡಿದ್ದು ಸರಕಾರ ಕೊಟ್ಟಿರುವ ಅಂಕಿ ಅಂಶಗಳು

ಕೂಡ ನಿಜವಾಗಿರದೇ ಯದ್ವಾತದ್ವಾ ಅಜಮಾಸಿನ ಅಂಕಿ ಸಂಖ್ಯೆಗಳೆಂದರೆ ತಪ್ಪಾಗಲಾರದು.

ಬಹುತೇಕ ಈ ನಿಗಮಗಳಲ್ಲಿ ಕಾಣಬಹುದಾದ ಕರ್ತವ್ಯ ಲೋಪ, ದುಂದುಗಾರಿಕೆ. ಸಾರ್ವಜನಿಕರ ಶೋಷಣೆ, ಸುಲಿಗೆ, ಮಿತಿಮೀರಿದ ಆಡಳಿತ ಖರ್ಚು, ದುರಾಡಳಿತ, ಹಣ ಸೋರುವಿಕೆ, ಭ್ರಷ್ಟಾಚಾರ ಪಕ್ಷಪಾತ, ಸ್ವಜನ ಪಕ್ಷಪಾತ, ಕಚ್ಚಾಮಾಲು ಖರೀದಿ ಮಾಡುವಲ್ಲಿ ಹಾಗೂ ಪಕ್ಕಾ ಮಾಲು ಮಾರಾಟ ಮಾಡವಲ್ಲಿ ಅವ್ಯವಹಾರ, ಬೇಕಾದವರಿಗೆ ಎಜೆನ್ಸಿ ಕೊಡುವದು, ಹೆಚ್ಚಿನ ಕಮೀಶನ್ ಪಡೆಯುವದು, ಉದ್ರಿ ಕೊಡುವದು ಹಾಗೂ ಬಾಕಿ ವಸೂಲ ಮಾಡದಿರುವದು, ಕಾರ್ಯ ಸಾಮರ್ಥ್ಯ ಉಪಯೋಗಿಸದಿರುವದು, ಅನಾವಶ್ಯಕ ಹೆಚ್ಚಿನ ಸಿಬ್ಬಂದಿ ನೇಮಕ, ಸಿಬ್ಬಂದಿ ವೆಚ್ಚದಲ್ಲಿ ಹೆಚ್ಚಳ, ನಷ್ಟವಾಗಿದ್ದರೂ ಲೆಕ್ಕಪತ್ರಗಳನ್ನು ತಿರುಚಿ ಲಾಭ ತೋರಿಸುವದು, ತಪ್ಪಿತಸ್ಥರ ಮೇಲೆ ಸೂಕ್ತವಾದ ಕಟ್ಟು ನಿಟ್ಟಾದ ಕ್ರಮ ತೆಗೆದುಕೊಳ್ಳದೇ ಇರುವದು, ಹೆಚ್ಚು ಹುದ್ದೆಗಳ ನಿರ್ಮಾಣ, ಅಂದಾದುಂದಿ ಖರ್ಚು, ಸರಿಯಾದ ಲೆಕ್ಕಪತ್ರಗಳ ನಿರ್ವಹಣೆ ಲೋಪ, ವಿಧಾನ ಮಂಡಳ ಶಾಸಕರ ಸಾರ್ವಜನಿಕ ಉದ್ಯಮ ಸಮಿತಿ ವರದಿಗಳ ಬಗ್ಗೆ ಗಮನ ಹರಿಸದೇ ಇರುವದು, ಕಂಟ್ರೋಲರ್ ಮತ್ತು ಅಡಿಟರ್ ಜನರಲ್‌ರವರ ವರದಿ ಬಗ್ಗೆ ಗಮನ ಹರಿಸದೇ ಇರುವದು, ನಿಗಮಗಳಲ್ಲಿದ್ದು ತಪ್ಪುಗಳನ್ನು ಮಾಡಿದ ಅಧಿಕಾರಿಗಳೇ ಸರಕಾರದ ಜವಾಬ್ದಾರಿ ಸ್ಥಾನದಲ್ಲಿರುವ ಅದಕ್ಷರೂ ಆಡಳಿತ ಪ್ರಜ್ಞೆ ಇಲ್ಲದವರೂ ಸ್ವಜನ ಪಕ್ಷಪಾತಿಗಳೂ ಆಗಿರುವ ಮಂತ್ರಿಗಳೇ ನಿಗಮಗಳಿಗೆ ಸಂಬಂಧಿಸಿದವರಿರುವುದರಿಂದ ಯಾವುದೇ ನಿಗಮಗಳನ್ನು ಹದ್ದುಬಸ್ತಿನಲ್ಲಿಟ್ಟು ಆಡಳಿತ ಸುಧಾರಿಸಿ ಈ ನಿಗಮಗಳ ಪ್ರಾಮಾಣಿಕ ಸೇವೆ ಸಾರ್ವಜನಿಕರಿಗೆ ಸಿಗದಂತಾಗಿದೆ. ಇಷ್ಟೇ ಅಲ್ಲ, ಸರಕಾರ ಈ ನಿಗಮಗಳಲ್ಲಿ ತೊಡಗಿಸಿದ್ದ ಮೊತ್ತಕ್ಕೆ ಸರಿಯಾದ ಪ್ರತಿಫಲ ಸಿಗದೇ ಈ ನಿಗಮಗಳು ಸಾರ್ವಜನಿಕರಿಗೆ ತಾರಕವಾಗದೇ ಮಾರಕವಾಗಿ ಸಾರ್ವಜನಿಕ ದುಡ್ಡಿನ ದುರಂತ ಇಲ್ಲಿ ನಡೆದಿದೆ. ಈ ಬಗ್ಗೆ ಯಾರು ಚಿಂತಿಸಬೇಕು? ಏನು ಕ್ರಮ ತೆಗೆದುಕೊಳ್ಳಬೇಕು.

❑

ಲೋಕಾಯುಕ್ತ ಅಧಿನಿಯಮ

ಸಾರ್ವಜನಿಕ ನೌಕರನಾದ ಮುಖ್ಯಮಂತ್ರಿ, ಮಾಜಿ ಮುಖ್ಯಮಂತ್ರಿ, ಮಂತ್ರಿ, ಮಾಜಿ ಮಂತ್ರಿ, ಶಾಸಕ, ಸರಕಾರಿ ನೌಕರ, ಮಾಜಿ ಸರಕಾರಿ ನೌಕರ, ಯಾವುದೇ ಸಹಕಾರಿ ಸಂಘ, ಕಂಪೆನಿ, ನಿಗಮ, ಮಂಡಳಿ, ಶಾಸನಬದ್ಧ ಪ್ರಾಧಿಕಾರ ಮಂಡಳಿ, ನಿಗಮಗಳ ಅಧ್ಯಕ್ಷ, ಉಪಾಧ್ಯಕ್ಷ, ಸದಸ್ಯ, ವಿಶ್ವವಿದ್ಯಾನಿಲಯ, ಯಾವುದೇ ನೋಂದಾದ ಸಂಘ, ಯಾವುದೇ, ಸ್ಥಾನಿಕ ಸಂಸ್ಥೆಗಳಾದ ಪಂಚಾಯತಿ, ಪುರಸಭೆ, ನಗರ ಸಭೆ, ಕಾರ್ಪೊರೇಷನ್‌ಗಳ ನೌಕರ, ಛೇರ್‌ಮನ್ ಮತ್ತು ಉಪಛೇರ್‌ಮನ್, ತನಗೆ ಅಥವಾ ಇತರ ಯಾವೊಬ್ಬ ವ್ಯಕ್ತಿಗೆ ಯಾವುದೇ ಲಾಭ ಅಥವಾ ಅನುಕೂಲ ದೊರಕಿಸಿಕೊಳ್ಳಲು ಅಥವಾ ಇತರ ಯಾವೊಬ್ಬ ವ್ಯಕ್ತಿಗೆ ಅನುಚಿತ ಹಾನಿ ಅಥವಾ ತೊಂದರೆಯನ್ನುಂಟು ಮಾಡಲು ತನ್ನ ಅಧಿಕಾರ ಸ್ಥಾನವನ್ನು ದುರುಪಯೋಗಪಡಿಸಿಕೊಂಡಂತ, ತನ್ನ ಕರ್ತವ್ಯ ನಿರ್ವಹಿಸುವಲ್ಲಿ ವೈಯಕ್ತಿಕ ಹಿತಾಸಕ್ತಿಗಳಿಂದ ಅನುಚಿತ ಅಥವಾ ಭ್ರಷ್ಟ ಪ್ರೇರಣೆಯಿಂದ ಪ್ರಚೋದಿತರಾದಂತ, ತನ್ನ ಅಧಿಕಾರ ಸ್ಥಾನದಲ್ಲಿ ಬ್ರಷ್ಟಾಚಾರ, ಪಕ್ಷಪಾತ, ಸ್ವಜನ ಪಕ್ಷಪಾತ ಅಥವಾ ನೀತಿ ನಿಷ್ಠೆಯ ಕೊರತೆಯಿಂದ ದೋಷಿಯಾದಂಥ, ತಾನು ಯಾವ ವರ್ಗಕ್ಕೆ ಸೇರಿದವನೋ ಆ ವರ್ಗದ ಸಾರ್ವಜನಿಕ ನೌಕರನು ಅನುಸರಿಸಲೇಬೇಕಾದ ನೀತಿ - ನಿಷ್ಠೆಯು ಮತ್ತು ನಡತೆಗಳ ಸೂತ್ರ ಪ್ರಮಾಣಗಳಿಗೆ ಅನುಸಾರವಾಗಿ ಕಾರ್ಯನಿರ್ವಹಿಸಲು ತಪ್ಪಿದಂತಹ ಆಪಾದನೆಗಳಿಗೊಳಗಾದರೆ ಅಥವಾ ಆಡಳಿತ ಪ್ರಕಾರ್ಯಗಳನ್ನು ಜಾರಿಮಾಡುವಲ್ಲಿ ಕೈಗೊಂಡ ಕ್ರಮ ಅಥವಾ ಕೈಗೊಂಡಿರುವುದಾಗಿ ತಾತ್ಪರ್ಯವಾಗುವ ಕ್ರಮ ಅಥವಾ ಅಂತಹ ಕ್ರಮಕ್ಕೆ ಸಂಬಂಧಿಸಿದ ಆಡಳಿತ ವಿಧಾನ ಅಥವಾ ಅಂತಹ ಕ್ರಮವನ್ನು ನಿಯಂತ್ರಿಸುವ ಪದ್ಧತಿ ಅಸಮಂಜಸವಾಗಿದ್ದರೆ, ನ್ಯಾಯಪೂರ್ಣವಾಗಿಲ್ಲದಿದ್ದರೆ, ದಬ್ಬಾಳಿಕೆಯಿಂದ ಕೂಡಿದ್ದರೆ, ಅನುಚಿತ ತಾರತಮ್ಯ ತೋರಿಸಿದ್ದರೆ, ಅಂತಹ ಕ್ರಮವನ್ನು ಕೈಗೊಳ್ಳವಲ್ಲಿ ಉದ್ದೇಶಪೂರ್ವಕವಾಗಿ ನಿರ್ಲಕ್ಷ್ಯ ಅಥವಾ ಅನುಚಿತ ವಿಳಂಬವಾಗಿದ್ದರೆ, ಅಥವಾ ಅಂತಹ ಕ್ರಮವನ್ನು ನಿಯಂತ್ರಿಸುವ ಆಡಳಿತ ವಿಧಾನ ಅಥವಾ ಪದ್ಧತಿ ಅನುಚಿತ ವಿಳಂಬದಿಂದ ಕೂಡಿದ್ದರೆ ಅಂತಹ

ದುರಾಡಳಿತದ ಪರಿಣಾಮವಾಗಿ ಯಾರು ಅನ್ಯಾಯ ಅನುಚಿತ ತೊಂದರೆ ಗೊಳಗಾಗಿ ದ್ದಾರೋ ಅಂಥಹವರು ಅಂತಹ ಯಾವುದೇ ನಿರ್ಧಾರ ಅಥವಾ ಶಿಫಾರಸು. ನಿರ್ಣಯರೂಪದಲ್ಲಿ ಅಥವಾ ಇತರೇ ಯಾವುದೇ ರೀತಿಯಲ್ಲಿ ಕೈಗೊಂಡ ಆಡಳಿತಾತ್ಮಕ ಕ್ರಮ ಮತ್ತು ಕ್ರಮಕೈಗೊಳ್ಳಲು ಉದ್ದೇಶಪೂರ್ವಕವಾಗಿ ತಪ್ಪಿದ ಅಥವಾ ಲೋಪಮಾಡಿದ ಬಗ್ಗೆ ಆ ಸಾರ್ವಜನಿಕ ನೌಕರನ ಮೇಲೆ ರಾಜ್ಯದ ಲೋಕಾಯುಕ್ತ ಅಥವಾ ಉಪಲೋಕಾ ಯುಕ್ತರಿಗೆ ದೂರನ್ನು 1984ರ ಕರ್ನಾಟಕ ಕಾನೂನು ಪ್ರಕಾರ ಕೊಡಿಸಬಹುದಾಗಿದೆ.

ಈ ಕಾನೂನು 16-1-1986 ರಿಂದ ಜಾರಿಯಲ್ಲಿ ಬಂದಿದ್ದು ಅಲ್ಲಿಂದ ಇಲ್ಲಿಯವರೆಗಿನ ಅವಧಿಯಲ್ಲಿ ಮೇಲ್ಕಂಡ ಅಪರಾಧಗಳು ರಾಜ್ಯದಲ್ಲಿ ಮಹಾರೋಗವಾಗಿ ಪರಿಣಮಿಸಿ ಪ್ರಜೆಗಳು ತತ್ತರಿಸಿಹೋಗಿದ್ದಾರೆ. ಹಾಗೂ ಈ ಮಹಾ ಪಿಡುಗಿನಿಂದ ಗುಣಮುಖರಾಗದ ಪರಿಸ್ಥಿತಿಯಲ್ಲಿದ್ದಾರೆ. ಈ ರೋಗದಿಂದ ಪ್ರಜೆಗಳು ಗುಣಮುಖರಾಗಲು ಉಪಾಯ ಕಂಡುಹಿಡಿಯದಿದ್ದರೆ. ಪ್ರಜಾಶಕ್ತಿಗೆ ಗಂಡಾಂತರ ತಪ್ಪಿದ್ದಲ್ಲ. ಈ ಗಂಡಾಂತರ ವನ್ನು ತಪ್ಪಿಸಲೇಬೇಕಾಗಿದೆ. ಲೋಕಾಯುಕ್ತ ಕಾನೂನು ಪ್ರಕಾರ ಎಷ್ಟು ಜನ ಸಾರ್ವಜನಿಕರು, ಎಷ್ಟು ಜನ ಸಾರ್ವಜನಿಕ ನೌಕರರ ಮೇಲೆ ದೂರುಗಳನ್ನು ಸಲ್ಲಿಸಿದ್ದಾರೆ, ಎಷ್ಟು ದೂರುಗಳು ಇಲ್ಲಿಯವರೆಗೆ ಚೌಕಸಿಯಾಗಿದೆ, ಎಷ್ಟು ಜನ ಸಾರ್ವಜನಿಕ ನೌಕರರಾದವರ ಮೇಲೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಲಾಗಿದೆ, ಈ ದಿಸೆಯಲ್ಲಿ ಸರಕಾರ ಈ ಕಾನೂನು ಪರಿಣಾಮಕಾರಿಯಾಗಿ ಜಾರಿ ಕೊಡುವಲ್ಲಿ ಹಾಗೂ ತಪ್ಪಿತಸ್ಥರಿಗೆ ಶಿಕ್ಷೆಕೊಡುವಲ್ಲಿ ಅಥವಾ ಕೊಡಿಸುವಲ್ಲಿ ಎಷ್ಟರಮಟ್ಟಿಗೆ ಆಸಕ್ತಿ ವಹಿಸಿದೆ ಎಂಬುದಾಗಿ ಅವಲೋಕನ ಮಾಡಿದರೆ ಪರಿಣಾಮ ಅತೃಪ್ತಿಕರ, ಅಷ್ಟೇ ಅಲ್ಲ ಸರಕಾರಗಳು ಈ ಕಾರ್ಯವನ್ನು ನಿಷ್ಫಲ ಹಾಗೂ ನಿಷ್ಕ್ರಿಯಗೊಳಿಸುವಲ್ಲಿ ಸಂಪೂರ್ಣವಾಗಿ ಯಶಸ್ವಿಯಾಗಿ ಭ್ರಷ್ಟಾಚಾರ, ಪಕ್ಷಪಾತ, ಸ್ವಜನ ಪಕ್ಷಪಾತ, ದುರಾಡಳಿತ ಹಾಗೂ ಅಧಿಕಾರ ದುರುಪಯೋಗಗಳಿಗೆ ಕುಮ್ಮಕ್ಕು ಕೊಟ್ಟು ಸಾರ್ವಜನಿಕರನ್ನು ಈ ಅನಾಚಾರಗಳ ಕೂಪಕ್ಕೆ, ತಳ್ಳಿ ಅವರನ್ನು ವಂಚಿಸಿದೆ ಎಂದು ಹೇಳಿದರೆ ತಪ್ಪಾಗಲಾರದು.

ಲೋಕಾಯುಕ್ತ ಕಾನೂನು ಪ್ರಕಾರ ಸರಕಾರಿ ನೌಕರರನ್ನು ಹೊರತುಪಡಿಸಿ ಮುಖ್ಯಮಂತ್ರಿ, ಮಂತ್ರಿ ಅಥವಾ ಕಾರ್ಯದರ್ಶಿ, ಶಾಸಕರು ಅಥವಾ ಸರಕಾರದಿಂದ ಪ್ರಕಟಿಸಿದ ಇತರ ಯಾವತ್ತೂ ಸಾರ್ವಜನಿಕ ನೌಕರರು ತನ್ನ ಹಾಗೂ ತನ್ನನ್ನು ಅವಲಂಬಿಸಿದ ಚಿಕ್ಕಮಕ್ಕಳು ಮತ್ತು ತಂದೆ-ತಾಯಿಗಳ ಹೆಸರಿನಲ್ಲಿರುವ ಹಣ, ಠೇವಣಿ, ಚರಾಸ್ತಿ, ಸ್ಥಿರಾಸ್ತಿ, ಇತ್ಯಾದಿ ಸಕಲ ಸೊತ್ತುಗಳ ವಿವರಗಳನ್ನು ಹಿಂದಿನ ಆರ್ಥಿಕ ವರ್ಷಕ್ಕೆ ಬಾಬತ್ತು ಪ್ರತಿ ಜೂನ್ ತಿಂಗಳ ಕೊನೆಯ ಒಳಗಾಗಿ ಲೋಕಾಯುಕ್ತರಿಗೆ ನಿರ್ಧಿಷ್ಟಪಡಿಸಿದ ನಮೂನೆಯಲ್ಲಿ ಪ್ರತಿವರ್ಷ ಕಡ್ಡಾಯವಾಗಿ ಕಳುಹಿಸಲೇಬೇಕಾಗುತ್ತದೆ. ಬೇರೆ ಬೇರೆ ಪ್ರತ್ಯೇಕವಾದ ಮಕ್ಕಳ ಹಾಗೂ ತಂದೆ-ತಾಯಿಗಳ ಹೆಸರಿನಲ್ಲಿರುವ

ಸಾಲತೊತ್ತನ್ನು ಕಳಿಸಬೇಕಾಗಿಲ್ಲ. ಅನೇಕ ಮಂತ್ರಿ ಹಾಗೂ ಶಾಸಕರು ತಮ್ಮ ಸಾಲ ಜಿಂದಗಿಯ ವಿವರಗಳನ್ನು ಕಳುಹಿಸದೇ ಈ ಕಾನೂನನ್ನೇ ಉದ್ದಟತನದಿಂದ ಉಲ್ಲಂಘಿಸುತ್ತಿದ್ದಾರೆ. ಇಂಥಹ ಶಾಸಕರು ಹಾಗೂ ಮಂತ್ರಿಗಳು, ನಾಚಿಕೆಪಡಬೇಕು. ಅನೇಕ ಮಂತ್ರಿಗಳು ಹಾಗೂ ಶಾಸಕರು ತಾವು ಭ್ರಷ್ಟರಾಗಿ ಹೇರಳವಾದ ಆಸ್ತಿಯನ್ನು ತನ್ನ ಹೆಸರಿಗೆ, ತಮ್ಮ ಬೇರೆಯಾದ ಸಹೋದರರು, ಮಕ್ಕಳು, ಸೊಸೆಯಂದಿರು, ಅಳಿಯಂದಿರ ಹೆಸರಿನಲ್ಲಿ ಮಾಡಿರುವ ಹಾಗೂ ಗಳಿಸಿರುವ ಸೊತ್ತು ಹೇರಳವಾಗಿದ್ದರೂ ಅದನ್ನು ಕಾನೂನು ಪ್ರಕಾರ ಲೋಕಾಯುಕ್ತರಿಗೆ ಕಳುಹಿಸಬೇಕಾಗಿಲ್ಲದಿದ್ದರೂ ತಮ್ಮ ಹೆಸರಿಗೆ ಹಾಗೂ ಅವಲಂಬಿತ ಮಕ್ಕಳು ಹಾಗೂ ತಂದೆ-ತಾಯಿಗಳ ಹೆಸರಿನಲ್ಲಿಯ ಸಾಲ ಜಿಂದಗಿಯನ್ನಾದರೂ ಕಾನೂನು ಪ್ರಕಾರ ಕಡ್ಡಾಯವಾಗಿ ಕಳುಹಿಸಬೇಕಾಗಿದ್ದರೂ ಅದನ್ನು ಕಳುಹಿಸದೇ ಇರುವುದನ್ನು ನೋಡಿದರೆ, ಅವನು ಅಕ್ರಮವಾಗಿ ಗಳಿಸಿರುವ ಜಿಂದಗಿ ಸಾರ್ವಜನಿಕರಿಗೆ ಗೊತ್ತಾಗಬಹುದು ಅಥವಾ ಈ ಬಗ್ಗೆ ಯಾರಾದರೂ ಪ್ರಾಮಾಣಿಕ ಶಾಸಕರು ಹಾಗೂ ವಿಧಾನಸಭೆ ಹಾಗೂ ವಿಧಾನಪರಿಷತ್ತಿನ ಅಧಿವೇಶದಲ್ಲಿ ಪ್ರಶ್ನೆಗಳನ್ನು ಹಾಕಿದರೆ ಅದು ಬಹಿರಂಗವಾಗಬಹುದೆಂಬ ಭಯದಿಂದ ಲೋಕಾಯಕ್ತರಿಗೆ ನಿರ್ದಿಷ್ಟ ನಮೂನೆಯನ್ನು ತುಂಬಿ ಕಳುಹಿಸದೆ ಇರುವುದು ಎದ್ದು ಕಾಣುತ್ತದೆ. ಕಮಿಶನರನ್ನಾಗಿ ಹಾಲಿ ಹೈಕೋರ್ಟ್ ನ್ಯಾಯಾಧೀಶರನ್ನು ಹೊಂದಿದ ಹಿಂದಿನ ವಿಜಿಲೆನ್ಸ್ ಕಮೀಶನ್ನು ಬಹುಮಟ್ಟಿಗೆ ಪರಿಣಾಮಕಾರಿಯಾಗಿದ್ದರೂ ಅನುಭವಿ ಮಾಜಿ ನ್ಯಾಯಾಧೀಶರನ್ನು ಲೋಕಾಯುಕ್ತ ಕಾನೂನು ಹೊಂದಿದೆ. ಸರಕಾರಗಳ ಉದ್ದೇಶಿತ ನಿರುತ್ಸಾಹ ಭ್ರಷ್ಟ ಮಂತ್ರಿಗಳು ಹಾಗೂ ಗ್ರಾಹಕರ ರಕ್ಷಣೆ ಹಾಗೂ ಪೋಷಣೆಯ ದುರುದ್ದೇಶವೇ ಈ ಲೋಕಾಯುಕ್ತ ಕಾನೂನು ಪರಿಣಾಮಕಾರಿಯಾಗಿ ಕಾರ್ಯಗತವಾಗದಿರಲು ಹಾಗೂ ರಾಜ್ಯದಲ್ಲಿ ಭ್ರಷ್ಟಾಚಾರ ಹಾಗೂ ಪಕ್ಷಪಾತಿ, ಸ್ವಜನ ಪಕ್ಷಪಾತಿ, ದುರಾಡಳಿತ, ದಿನೇ ದಿನೇ ಹೆಚ್ಚಾಗುತ್ತಿರಲು ಕಾರಣವಾಗಿದೆ. ಬೆದರುಗೊಂಬೆಯಾಗಿರುವ ಈ ಕಾನೂನನ್ನು ಸೂಕ್ತ ತಿದ್ದುಪಡಿಮಾಡಿ ಒಂದು ಬ್ರಹ್ಮಾಸ್ತ್ರವನ್ನಾಗಿ ಮಾಡಿ ಜಾರಿತಂದರೆ ಈ ರಾಜ್ಯದಲ್ಲಿ ಪ್ರಾಮಾಣಿಕ ಹಾಗೂ ಚೊಕ್ಕ ಆಡಳಿತ ಬಂದು ಜನಜೀವನ ಹಸನಾದೀತು ಹಾಗೂ ಆಡಳಿತ ಸುಧಾರಣೆ ಯಾದೀತು.

❑

ಪಾನ ನಿರೋಧ ಮತ್ತು ಮಹಾತ್ಮಾಜಿ ಕನಸು

ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರು ನಮ್ಮ ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟರು. ಈ ಸ್ವಾತಂತ್ರ್ಯ ಎಷ್ಟರ ಮಟ್ಟಿಗೆ ಯಶಸ್ವಿಯಾಗಿದೆ? ನಮ್ಮ ದೇಶದಲ್ಲಿ ಗ್ರಾಮ ರಾಜ್ಯ ಸ್ಥಾಪನೆಯಾಗಿ ರಾಮರಾಜ್ಯದ ಕಲ್ಪನೆಯುಳ್ಳ ಗ್ರಾಮಗಳೇ ಆಡಳಿತ ಕೇಂದ್ರವಾಗಬಲ್ಲ ಗ್ರಾಮ ಪಂಚಾಯತ ರಾಜ್ಯ ಸ್ಥಾಪನೆಯಾಗಬೇಕೆಂದರು, ಈ ರಾಷ್ಟ್ರದಲ್ಲಿ ಪ್ರತಿಯೊಂದು ರಾಜ್ಯದಲ್ಲಿ ಗ್ರಾಮಪಂಚಾಯತಿಗಳು ಮಹಾತ್ಮಾಜಿಯವರ ಕಲ್ಪನೆಯ ಗ್ರಾಮ ಪಂಚಾಯತಿಗಳು ಎಷ್ಟರ ಮಟ್ಟಿಗೆ ಯಶಸ್ವಿಯಾಗಿ ಕಾರ್ಯಾಚರಣೆ ಮಾಡಿ ಸರ್ವತೋಮುಖ ಅಭಿವೃದ್ಧಿ ಶಾಂತಿ ಸಮಗ್ರತೆ, ಏಕತೆಯನ್ನು ಸಾಧಿಸಿವೆ? ಮಹಾತ್ಮಾಜಿಯವರು ನಮ್ಮ ರಾಷ್ಟ್ರದಲ್ಲಿ ಖಾದಿ ಗ್ರಾಮೋದ್ಯೋಗ ಯಶಸ್ವಿಯಾಗಿ ಖಾದಿ ಗ್ರಾಮೋದ್ಯೋಗ ಬಟ್ಟೆಗಳನ್ನೇ ತಯಾರಿಸಿ, ಗ್ರಾಮಾಂತರ ಜನರಿಗೆ ನಿರುದ್ಯೋಗ ನಿವಾರಣೆಯ ದಿಶೆಯಲ್ಲಿ ಉದ್ಯೋಗವನ್ನು ಕಲ್ಪಿಸಿ, ರಾಷ್ಟ್ರದ ಜನತೆ ಖಾದಿ ಬಟ್ಟೆಯನ್ನೇ ಉಡಬೇಕು - ತೊಡಬೇಕು, ವಿದೇಶಿ ಬಟ್ಟೆಯನ್ನು ಹಾಗೂ ಇತರ ಬಟ್ಟೆಯನ್ನು ತೊಡಬಾರದೆಂದರು. ಇದೆಷ್ಟರ ಮಟ್ಟಿಗೆ ಕಾರ್ಯಗತವಾಗಿದೆ? ಮಹಾತ್ಮಾಜಿಯವರು ಶೇಂದಿ ಸರಾಯಿ ಕುಡಿಯಬಾರದೆಂದು ಶೇಂದಿ (ಈಚಲ ಗಿಡಗಳನ್ನೇ ಕಡಿಸಿದರು. ಸರಾಯಿ ಅಂಗಡಿಗಳನ್ನೇ ಸುಡಿಸಿದರು, ಜನರು ಕುಡಿತಕ್ಕೆ ಸಿಕ್ಕು ಮನೆ ಮಾರು ಉದ್ದಿಮೆಯನ್ನು ಹಾಳು ಮಾಡಿಕೊಳ್ಳಬಾರದೆಂದು ಕುಡಿತದ ದುಷ್ಪರಿಣಾಮವನ್ನು ಹಳ್ಳಿ ಹಳ್ಳಿಗೆ ಕಾಂಗ್ರೆಸ್ ಕಾರ್ಯಕರ್ತರ ತಂಡಗಳ ಮುಖಾಂತರ ಪ್ರಚಾರ ಮಾಡಿದರು. ಪಾನ ಪ್ರತಿಬಂಧಕ್ಕೆ ಪ್ರೋತ್ಸಾಹಿಸಿದರು. ಇದೆಷ್ಟರ ಮಟ್ಟಿಗೆ ಯಶಸ್ವಿಯಾಗಿದೆ? ಅಥವಾ ಎಷ್ಟರ ಮಟ್ಟಿಗೆ ಮಹಾತ್ಮಾಜಿಯವರ ಪಾನನಿರೋಧ ಕನಸು ನನಸಾಗಿದೆ? ನನಸಾಗುವುದಿರಲಿ, ಅವರ ಕನಸು ಅವರ ಗುರಿ ನುಚ್ಚುನೂರಾಗಿ ಗಾಂಧೀಜಿಯವರು ಸಾಧಿಸಬೇಕಾಗಿದ್ದ ಈ ಗುರಿಯನ್ನು ಬಿಸಾಕಿ, ಅವರ ಆಸೆ ಆಕಾಂಕ್ಷೆಗಳಿಗೆ ತಿಲಾಂಜಲಿಯನ್ನಿತ್ತು ಗಾಂಧೀಜಿಯವರ ತತ್ವದ ತದ್ವಿರುದ್ಧ, ಪಾನ ಪ್ರತಿಬಂಧದ ಬದಲು ಪಾನ ಪ್ರತಿಷ್ಠಾನ, ಪಾನ ಪ್ರೋತ್ಸಾಹವನ್ನು ಸರಕಾರ ಹುಲುಸಾಗಿ ಬೆಳೆಸಿದೆ. ರಾಜ್ಯದಲ್ಲಿ ಸರಕಾರಿ ಅಧೀಕೃತ ಸರಾಯಿ, ಅನಧೀಕೃತ ಸರಾಯಿ, ಗ್ರಾಮಾಂತರ ಭಟ್ಟಿಸರಾಯಿ ಉದ್ಯಮಗಳಿಗೆ ಕುಮ್ಮಕ್ಕು

ಕೊಟ್ಟು ಸರಕಾರ ಈ ಅಬಕಾರಿಯಿಂದ ಸಾಕಷ್ಟು ಉತ್ಪನ್ನ ಪಡೆದು ಜನತೆಯ ಆರೋಗ್ಯ, ಶಾಂತಿ ಕಾಪಾಡುವ ಬದಲು ಅನಾರೋಗ್ಯ ಅಶಾಂತಿಗಳಿಗೆ ಸರಕಾರ ಅನೇಕ ದಶಕಗಳಿಂದ ಅಧಿಕೃತವಾಗಿ ಪ್ರೋತ್ಸಾಹವನ್ನು ಕೊಟ್ಟಿದೆ. ಅಬಕಾರಿ ಇಲಾಖೆ ಸರಕಾರಕ್ಕೆ ಭಾರೀ ಹಾಲನ್ನು ಕೊಡುವ ಎಮ್ಮೆಯಾಗಿದೆ. ಇದುವರೆಗೂ ಈ ಅಬಕಾರಿ ಎಮ್ಮೆಯನ್ನು ಬೆಳೆಯಿಸಿ ಅದರಿಂದ ಸಾಕಷ್ಟು ಹಾಲನ್ನು ಉತ್ಪನ್ನವನ್ನು ತೆಗೆದುಕೊಂಡು ಸರಕಾರದ ಬಹುದೊಡ್ಡ ಆರ್ಥಿಕ ಸಂಪನ್ಮೂಲವನ್ನಾಗಿ ಮಾಡಿಕೊಂಡು ಈಗ ಏಕಾಏಕಿಯಾಗಿ ಯಾವುದೇ ಸಮಿತಿ ನೇಮಿಸದೇ ಅಥವಾ ಅಭಿಪ್ರಾಯ ಪಡೆಯದೆ ಅಥವಾ ವಿಧಾನ ಮಂಡಲದಲ್ಲಿ ಚರ್ಚಿಸಿ ಘೋಷಣೆ ಮಾಡದೆ ಈ ಬಗ್ಗೆ ಆಯವ್ಯಯದಲ್ಲಿ ಯಾವ ಮಾರ್ಪಾಡನ್ನು ಮಾಡದೆ 1995 ಜೂನ್ ನಿಂದ ಪಾನನಿರೋಧ ಮಾಡಲಾಗುವ ದೆಂದು ಸರಕಾರ ಹೇಳಿರುವದು ಇದನ್ನು ಎಷ್ಟರ ಮಟ್ಟಿಗೆ ನಂಬಬೇಕೋ ತಿಳಿಯದಗಿದೆ.

ರಾಜ್ಯದಲ್ಲಿ ಕುಡುಕರ ಸಂಖ್ಯೆ ಹೆಚ್ಚಾಗಿದೆ. ಅದರ ದುಷ್ಪರಿಣಾಮ ಹೆಚ್ಚಾಗಿದೆ. ಅಬಕಾರಿ ಉತ್ಪನ್ನ ಸರಕಾರಕ್ಕೆ ಪ್ರತಿವರ್ಷ ಹೆಚ್ಚುತ್ತಾ ಇದೆ. ಹಳ್ಳಿಯ ಒಬ್ಬ ಭಿಕ್ಷುಕನ ಮೂಲೆಯಿಂದ ಹಿಡಿದು ಶಾಸಕ ಮಂತ್ರಿಗಳ-ನೇಕಾರ, ಆದಿಯಾಗಿ ಬಡವ, ಶ್ರೀಮಂತ ಪಾಮರ ಅಕ್ಷರಿ ನಿರಕ್ಷರಿ ಆದಿಯಾಗಿ ಅನೇಕರು ಕುಡಿತಕ್ಕೆ ಒಳಗಾಗಿ ಹೆಂಡರು ಮಕ್ಕಳು ಮರಿಗಳಿಗೆ ಮಾರಿಯಾಗಿದ್ದಾರೆ. ಈಗ ಪಾನನಿರೋಧವನ್ನು ಜಾರಿಗೆ ತಂದರೆ ಸರಕಾರ ಸರಾಯಿಯನ್ನು ಬಂದ್ ಮಾಡಬಹುದು. ಆದರೆ, ಗ್ರಾಮಾಂತರದಲ್ಲಿ ಈಗಲೂ ಜಾರಿ ಇರುವ ಕಳ್ಳಭಟ್ಟಿ ಸರಾಯಿ ಉದ್ಯಮವನ್ನು ಬಂದ್ ಮಾಡಲಿಕ್ಕೆ ಹಾಗೂ ಕಳ್ಳಭಟ್ಟಿ ಸರಾಯಿ ಕುಡಿತವನ್ನು ಬಂದ್ ಮಾಡಲಿಕ್ಕೆ ಅದು ಹೇಗೆ ಸಾಧ್ಯವಿದೆಯೆಂಬುದನ್ನು ಯೋಚಿಸಿದರೆ ಒಳ್ಳೆಯದು. ಸರಕಾರಕ್ಕೆ ಬರುತ್ತಿರುವ ನಿರಂತರ ಅಬಕಾರಿ ಆದಾಯ ಬಂದ್ ಆದರೆ ಸರಕಾರಕ್ಕೆ ಬದಲಿ ಉತ್ಪನ್ನದ ಮೂಲಗಳೇನು ಮತ್ತು ವಿವಿಧ ಕರ ಕಂದಾಯವನ್ನು ಅನಿವಾರ್ಯವಾಗಿ ಹೆಚ್ಚಿಸದೆ ಉಪಾಯವೇ ಇಲ್ಲವೆಂಬುದನ್ನು ಸರಕಾರ ಅರಿತರೆ ಒಳ್ಳೆಯದು, ಸುದೀರ್ಘವಾಗಿ ವಿಚಾರಿಸದೆ, ಚಿಂತಿಸದೆ, ಸಾಧಕ ಭಾದಕಗಳನ್ನು ಅರಿಯದೆ ಧಿಡೀರ್ ತಿರ್ಮಾನವನ್ನು ಸರಕಾರ ತೆಗೆದುಕೊಂಡಿರುವುದು ಎಷ್ಟರ ಮಟ್ಟಿಗೆ ಯಾವ ಪರಿಣಾಮ ಬೀರಿತೆಂಬುದನ್ನು ಗಣನೆಗೆ ವಿಚಾರವಂತರು ತೆಗೆದುಕೊಳ್ಳಬೇಕು.

ಅಬಕಾರಿ ಇಲಾಖೆಯಿಂದ 1990-91ರಲ್ಲಿ 429.70 ಕೋಟಿ, 1991-92ರಲ್ಲಿ 510.31 ಕೋಟಿ, 1992-93ರಲ್ಲಿ 515.35 ಕೋಟಿ ವಾಸ್ತವಿಕವಾಗಿ ಸರಕಾರಿ ಖಜಾನೆಗೆ ಆದಾಯವಾಗಿರುತ್ತದೆ. 1993-94ರಲ್ಲಿ 701.67 ಕೋಟಿ, 1994-95ರಲ್ಲಿ 806.92 ಕೋಟಿ ಅಂದಾಜು ಆದಾಯವಾಗಲಿದೆ. ಅಬಕಾರಿ ಇಲಾಖೆಯಿಂದ ಮೊದಲಿನಿಂದಲೂ ಪ್ರತಿವರ್ಷ ಆದಾಯ ಹೆಚ್ಚುತ್ತಲೇ ಇದೆ. ರಾಜ್ಯದ ತೆರಿಗೆ ಆದಾಯದ ಒಟ್ಟು ಮೊತ್ತದಲ್ಲೂ ಅತಿ ದೊಡ್ಡ ಆದಾಯ ಸಂಪನ್ಮೂಲ ಮಾರಾಟ ತೆರಿಗೆ ಇದ್ದು ಎರಡನೇ ಅತಿ ದೊಡ್ಡ ಆದಾಯ ಸಂಪನ್ಮೂಲ, ರಾಜ್ಯ ಅಬಕಾರಿ ಆದಾಯವಾಗಿದೆ. ಗಾಂಧೀಜಿ

ತತ್ವಕ್ಕೆ ತಿಲಾಂಜಲಿಯನ್ನಿತ್ತು ಸಮಾಜದ ಮೇಲೆ ದುಷ್ಪರಿಣಾಮವನ್ನು ಬೀರಿ, ಕುಡುಕತನ ವನ್ನು ಹೆಚ್ಚಿಸಿ, ಮಾನವೀಯ ಮೌಲ್ಯಗಳನ್ನೇ ಮಾಯಮಾಡಿ ಸರಕಾರಕ್ಕೆ ಅತಿ ದೊಡ್ಡ ಆದಾಯ ಸಂಪನ್ಮೂಲವಾಗಿರುವ ಅಬಕಾರಿ ಇಲಾಖೆಯ ಸರಾಯಿ ಉತ್ಪಾದನೆ, ಹಾಗೂ ಮಾರಾಟವನ್ನು ಸಂಪೂರ್ಣವಾಗಿ ರದ್ದುಪಡಿಸಿ ಅಪರೋಕ್ಷವಾಗಿ ಕಳ್ಳಬಟ್ಟಿ ಸಾರಾಯಿ ಉತ್ಪಾದನೆ ಹಾಗೂ ಮಾರಾಟಕ್ಕೆ ಅನುಕೂಲಮಾಡಿಕೊಟ್ಟು ಸರಕಾರಿ ಸರಾಯಿ ಬದಲು ಕಳ್ಳಬಟ್ಟಿ ಸರಾಯಿ ಕುಡಿಯಲು ಆಸ್ಪದ ಮಾಡಿಕೊಟ್ಟು ಕುಡುಕರ ಆರೋಗ್ಯವನ್ನು ಮತ್ತಷ್ಟು ಕೆಡಿಸಲು ಹಾಗೂ ಈಗಾಗಲೇ, ಕೆಟ್ಟು ಹಾಳಾಗಿರುವ ಸರಕಾರಿ ಆರ್ಥಿಕ ಆರೋಗ್ಯವನ್ನು ಮತ್ತಿಷ್ಟು ಕೆಡಿಸಲು, ಹಾಗೂ 1994-95ರಲ್ಲಿ ಸಂದಾಯವಾಗಲಿರುವ ಸುಮಾರು 806.92 ಕೋಟಿ ರೂಪಾಯಿ ಅಂದಾಜು ಆದಾಯವನ್ನು ಕೈಬಿಡುವ, ಹೊರಹೋಗಲಿರುವ ಸರಕಾರದ ಪ್ರಕಟಣೆ ನೋಡಿದರೆ ಹೊಣೆಗಾರ ಮಂತ್ರಿಮಂಡಲದ ತೀರ್ಮಾನವೋ ಅಥವಾ ಹುಚ್ಚರ ಸಂತೆಯ ಹೊತ್ಕಾರವೆ ಎಂದು ಪ್ರಶ್ನಿಸಬೇಕಾಗುತ್ತದೆ. ಒಂದು ವೇಳೆ ಮುಂಬರುವ ಯಾವುದೇ ಸರಕಾರ ಸರಾಯಿಯ ಉತ್ಪಾದನೆ ಹಾಗೂ ಮಾರಾಟವನ್ನು ರದ್ದುಮಾಡಿ ಇದರಿಂದ ಬರುವ ಸುಮಾರು 806.92 ಕೋಟಿ ಆದಾಯವನ್ನು ಕಳೆದುಕೊಂಡರೆ ಸರಕಾರದ ಈ ಖೋತಾ ಮೊತ್ತವನ್ನು ತುಂಬಲು ಇನ್ನಾರನ್ನು ಸುಲಿದು ಈ ಹಣ ಪಡೆಯಬೇಕಾಗುತ್ತದೆ ಎಂಬುದನ್ನು ಹಾಗೂ ಕಳ್ಳಭಟ್ಟಿ ಸರಾಯಿ ಉತ್ಪಾದನೆ, ಮಾರಾಟ ಹಾಗೂ ಕುಡಿತದ ದುಷ್ಪ ಪರಿಣಾಮವನ್ನು ಹೇಗೆ ತಡೆಗಟ್ಟಲಾಗುವುದೆಂಬುದನ್ನು ಈ ರಾಜ್ಯದ ಹೊಣೆಗಾರರು ದೀರ್ಘವಾಗಿ ಯೋಚಿಸಬೇಕಾಗುತ್ತದೆ. ಮುಂದಾಲೋಚನೆ ಮಾಡದೆ ತೀರ್ಮಾನದಿಂದಾಗಬಹುದಾದ ಆರ್ಥಿಕ ಹಾಗೂ ಸಾಮಾಜಿಕ ಅನಾಹುತದ ಬಗ್ಗೆ ಯೋಚಿಸಿದರೆ ಒಳ್ಳೆಯದು, ಇಲ್ಲವಾದರೆ ಗಣಪತಿ ಮಾಡಲು ಹೋಗಿ ಮಂಗನನ್ನು ಮಾಡಿದಂತಾದೀತು.

❑

ರಾಜ್ಯ ಹಣಕಾಸು ದುಃಸ್ಥಿತಿ

ಯಾವುದೇ ಜಲಾಶಯಕ್ಕೆ ಮೇಲಿನ ನೀರಿನ ಹರಿಯುವಿಕೆಂದಾಗಲೀ ಅಥವಾ ಮಳೆಯಿಂದಾಗಲೀ ನೀರು ಸತತವಾಗಿ ಬಂದ್ರೆ ಮಾತ್ರ, ಆ ನೀರಾಗಲೀ ಅಥವಾ ಸಂಗ್ರಹಿಸಿದ ನೀರಾಗಲೀ ಜಮೀನುಗಳಿಗೆ ಬಿಟ್ಟುಕೊಂಡು ಫಸಲನ್ನು ಬೆಳೆಯಬಹುದು. ಇಲ್ಲವಾದರೆ ಫಸಲು ತೆಗೆಯಲಿಕ್ಕೆ ಸಾಧ್ಯವೇ ಇಲ್ಲ. ಹೀಗಾಗಿದೆ ನಮ್ಮ ಸರಕಾರದ ಖಜಾನೆ. ಖಜಾನೆಗೆ ಪ್ರತಿ ತಿಂಗಳು ವಿವಿಧ ಆರ್ಥಿಕ ಸಂಪನ್ಮೂಲಗಳಿಂದ ಹಣ ಆಯವ್ಯಯ ಪ್ರಕಾರ ತಪ್ಪದೆ ಬರಲೇಬೇಕು. ಅಂದರೆ ಮಾತ್ರ ಆಡಳಿತ ಹಾಗೂ ಅಭಿವೃದ್ಧಿಗೆ ಹಣ ಖರ್ಚು ಮಾಡಲು ಸಾಧ್ಯ. ಇಲ್ಲವಾದರೆ ಅಭಿವೃದ್ಧಿ ಕಾರ್ಯಗಳಿಗೂ ಹಣವಿಲ್ಲದೆ ಸ್ಥಗಿತಗೊಂಡು ಆಡಳಿತ ಸಿಬ್ಬಂದಿಗೆ ಪಗಾರಕ್ಕೆ ಹಣಕೊಡಲು ಅಸಾಧ್ಯವಾಗುತ್ತದೆ. ಇಂತಹ ಬಿಕ್ಕಟ್ಟನ್ನು ರಾಜ್ಯದ ಸರಕಾರಗಳು ಎದುರಿಸುತ್ತಲೇ ಬಂದಿವೆ.

91-92ರಲ್ಲಿ 7028.90 ಕೋಟಿ ಹಣವನ್ನು ವಿವಿಧ ತೆರಿಗೆ ಹಾಗೂ ಬಂಡವಾಳದ ಮೂಲಕ ಶೇಖರಿಸಬೇಕಾಗಿತ್ತು. ಆದರೆ ವಾಸ್ತವಿಕವಾಗಿ ಶೇಖರಿಸಿದ್ದು 6207.72 ಕೋಟಿ ಮಾತ್ರ. ಅಂದರೆ 821.18 ಕೋಟಿ ಕಡಿಮೆ ಆದಾಯವಾಯಿತು. 92-93ರಲ್ಲಿ 7649.54 ಕೋಟಿ ಮೊತ್ತವನ್ನು ಶೇಖರಿಸಬೇಕಾಗಿತ್ತು. ಇದರಲ್ಲಿ ವಾಸ್ತವಿಕವಾಗಿ ಶೇಖರಿಸಿದ ಹಣ 7401.90 ಕೋಟಿ, ಅಂದರೆ 247.66 ಕೋಟಿ ಕಡಿಮೆ ಆದಾಯವಾಯಿತು. ಹೀಗೆ ಆಯವ್ಯಯದ ಆದಾಯದಲ್ಲಿ ಪ್ರತಿವರ್ಷ ಕಡಿಮೆ ಶೇಖರಿಸುವ ಅನಿಷ್ಟ ಪದ್ಧತಿ ಅಥವಾ ಹಣಕಾಸು ಇಲಾಖೆಯ ಬೇಜವಾಬ್ದಾರಿ ಅವ್ಯಾಹತವಾಗಿ ನಡೆದುಬಂದಿದೆ. ಶೇಖರಿಸಿದ ಹಣದಲ್ಲಿ ಸರಕಾರಿ ಹಾಗೂ ಜಿಲ್ಲಾ ಪರಿಷತ್ ಸಿಬ್ಬಂದಿ ಭತ್ಯೆ, ಪಿಂಚಣಿ, ಕೂಲಿ, ವೇತನ, ಪ್ರಯಾಣದ ಖರ್ಚು, ಕಛೇರಿ ಖರ್ಚು, ಇತರ ವೆಚ್ಚ, ಮೋಟಾರು ವಾಹನ, ನಿರ್ವಹಣೆ, ಯಂತ್ರ ಸಾಧನ ಸಲಕರಣೆ, ಸಾಮಗ್ರಿ ಖರೀದಿ, ಬಾಡಿಗೆ ಕರ, ಸಹಾಯಾನುದಾನ, ಸಹಾಯಧನ, ವಿದ್ಯಾರ್ಥಿ ವೇತನ ಇತ್ಯಾದಿಗಳಿಗೆ 91-92ರಲ್ಲಿ ಆಯವ್ಯಯದಲ್ಲಿ 2828.36 ಕೋಟಿ ಇದ್ದರೆ ವಾಸ್ತವಿಕವಾಗಿ ಖರ್ಚು ಮಾಡಿರುವುದು 3000.48 ಕೋಟಿ. ಈ ಸಾಲಿನಲ್ಲಿ ಬಜೆಟ್‌ಗಿಂತ 172.12 ಕೋಟಿ ಹೆಚ್ಚು ವೆಚ್ಚ ಮಾಡಲಾಗಿದೆ. 92-93ರ ಆಯವ್ಯಯದಲ್ಲಿ 3124.11 ಕೋಟಿ ಇದ್ದರೆ, ವಾಸ್ತವಿಕ

ಖರ್ಚು ಮಾಡಿರುವುದು 3368.73 ಕೋಟಿಯಾಗಿದ್ದು, ಇಲ್ಲಿ ಆಯವ್ಯಯದ ಮಿತಿಮೀರಿ ಖರ್ಚು ಮಾಡಲಾಗಿದೆ. ಈ ಸಾಲಿನಲ್ಲಿ ಬಜೆಟ್‌ಗಿಂತ 244.62 ಕೋಟಿ ಹೆಚ್ಚು ಖರ್ಚು ಮಾಡಲಾಗಿದೆ. ಆಸ್ಪತ್ರೆಗಳಲ್ಲಿ ಬಡರೋಗಿಗಳಿಗೆ ಊಟೋಪಚಾರ ಹಾಗೂ ಔಷಧಿಗಾಗಿ 91-92ರಲ್ಲಿ ಆಯವ್ಯಯದಲ್ಲಿ 33.23 ಕೋಟಿ ನಿಗದಿಮಾಡಿದ ಹಣದಲ್ಲಿ ವಾಸ್ತವಿಕವಾಗಿ 20.88 ಕೋಟಿ ಮಾತ್ರ ವೆಚ್ಚ ಮಾಡಲಾಗಿದೆ. ಅಂದರೆ ಈ ವರ್ಷದಲ್ಲಿ ಬಜೆಟ್ ಪ್ರಕಾರ 12.35 ಕೋಟಿ ಖರ್ಚು ಮಾಡಿಲ್ಲ. ಆಂತೆಯೇ 92-93ರಲ್ಲಿಯ ಆಯವ್ಯಯದಲ್ಲಿ 34.84 ಕೋಟಿ ನಿಗದಿಪಡಿಸಿದ್ದರೂ, 27.10 ಕೋಟಿ ಮಾತ್ರ ವಾಸ್ತವಿಕವಾಗಿ ಖರ್ಚು ಮಾಡಲಾಗಿದೆ. ಅಂದರೆ ಈ ವರ್ಷ ಬಜೆಟ್‌ನಲ್ಲಿ 7.74 ಕೋಟಿ ಖರ್ಚು ಮಾಡಿಲ್ಲ. ರಾಜ್ಯ ಯೋಜನೆ, ಕೇಂದ್ರ ಪರಿಷ್ಕೃತ ಕಾರ್ಯಕ್ರಮ, ಕೇಂದ್ರ ಯೋಜನೆ, ಯೋಜನೇತರ ಕಾರ್ಯಕ್ರಮ, ಕಾಮಗಾರಿ ಹಾಗೂ ಜಿಲ್ಲಾ ಪರಿಷತ್ ಯೋಜನೆಗಳಿಗಾಗಿ 92-92ರ ಆಯವ್ಯಯದಲ್ಲಿ 1961.86 ಕೋಟಿ ನಿಗದಿಪಡಿಸಿದ್ದರೂ ವಾಸ್ತವಿಕವಾಗಿ ಖರ್ಚು ಮಾಡಿದ ಹಣ 1961.86 ಕೋಟಿ. ಅಂದರೆ ಈ ಅಭಿವೃದ್ಧಿಗಾಗಿ ನಿಗದಿಪಡಿಸಿದ ಹಣದಲ್ಲಿ 146.27 ಕೋಟಿ ಮೊತ್ತವನ್ನು ಖರ್ಚು ಮಾಡಿಲ್ಲ. ಅಂತೆಯೇ 92-93ರಲ್ಲಿ ಈ ಅಭಿವೃದ್ಧಿಗಾಗಿ ನಿಗದಿಪಡಿಸಿದ ಬಜೆಟ್ ಮೊತ್ತ 2636.12 ಕೋಟಿ ಇದ್ದು, ಇದರಲ್ಲಿ ವಾಸ್ತವಿಕವಾಗಿ 2080.70 ಕೋಟಿ ಮಾತ್ರ ಖರ್ಚು ಮಾಡಿದ್ದು, ಈ ವರ್ಷದಲ್ಲಿ ಸಹ 555.42 ಕೋಟಿ ಮೊತ್ತವನ್ನು ಖರ್ಚು ಮಾಡಿಯೇ ಇಲ್ಲ. ಬಂಡವಾಳ ಹೂಡಿಕೆ, ಪಡೆದ ಸಾಲ ಪರತ್ ಮಾಡುವುದು, ಸರಕಾರಕ್ಕೆ ಹಣ ಕೊಟ್ಟವರಿಗೆ ಬಡ್ಡಿ, ಡಿವಿಡೆಂಡ್ ಕೊಡುವ ಬಗ್ಗೆ 91-92ರಲ್ಲಿ ಆಯವ್ಯಯದಲ್ಲಿ 2281.70 ಕೋಟಿ ನಿಗಡಿಪಡಿಸಿದ್ದರೂ ವೆಚ್ಚಮಾಡಿದ ವಾಸ್ತವಿಕ ಮೊತ್ತ 1492.46 ಕೋಟಿ ಇದ್ದು, ಈ ವರ್ಷದಲ್ಲೇ 789.24 ಕೋಟಿ ಮೊತ್ತವನ್ನು ವೆಚ್ಚ ಮಾಡಿರುವುದಿಲ್ಲ. 92-93ರಲ್ಲಿ ಸಹ ಆಯವ್ಯಯದಲ್ಲಿ ನಿಗದಿಪಡಿಸಿದ ಹಣ 2139.93 ಕೋಟಿ ಇದ್ದು, ಇದರಲ್ಲಿ 2082.53 ಕೋಟಿ ವಾಸ್ತವಿಕ ವೆಚ್ಚ ಮಾಡಿದ್ದು, ಈ ವರ್ಷ ಸಹ 57.40 ಕೋಟಿ ಮೊತ್ತವನ್ನು ವೆಚ್ಚ ಮಾಡಿರುವುದಿಲ್ಲ.

ಸರಕಾರದ ಎಲ್ಲಾ ಇಲಾಖೆಗಳ ಮುಖಾಂತರ ವಿವಿಧ ಅಭಿವೃದ್ಧಿ ಹಾಗೂ ಅಭಿವೃದ್ಧಿಯೇತರ ಉತ್ಪಾದಕ ಹಾಗೂ ಅನುತ್ಪಾದಕ ಯೋಜನೆಗಳಿಗೆ 1991-92ರಲ್ಲಿ ಆಯವ್ಯಯದಲ್ಲಿ ಗೊತ್ತುಪಡಿಸಿದ ಪ್ರಕಾರ 7105.17 ಕೋಟಿ ಮೊತ್ತವನ್ನು ಸರಕಾರ ಖರ್ಚು ಮಾಡಬೇಕಾಗಿತ್ತು. ಈ ಮೊತ್ತದಲ್ಲಿ ವಾಸ್ತವಿಕವಾಗಿ ಖಚುಮಾಡಿರುವ ಮೊತ್ತ 6329.42 ಕೋಟಿ ಮಾತ್ರ ಅಂದರೆ 775.75 ಕೋಟಿ ಹಣವನ್ನು ಖರ್ಚು ಮಾಡಿರುವುದಿಲ್ಲ. ಅಂತೆಯೇ 1992-93ರಲ್ಲಿಯ ಆಯವ್ಯಯದಲ್ಲಿ ನಿಗದಿಗೊಳಿಸಿದ ಮೊತ್ತ 7935.01 ಕೋಟಿ. ಈ ಮೊತ್ತದಲ್ಲಿ ವಾಸ್ತವಿಕವಾಗಿ ಖರ್ಚು ಮಾಡಿರುವ ಮೊತ್ತ 7559.07 ಕೋಟಿ ಅಂದರೆ ಈ ವರ್ಷದಲ್ಲಿಯೂ ಸಹ 395.94 ಕೋಟಿ ಹಣವನ್ನು ಖರ್ಚು ಮಾಡಿಯೇ ಇಲ್ಲ. ಈ ಅನಿಷ್ಟ ಹಾಗೂ ಬೇಜವಾಬ್ದಾರಿ ಅವ್ಯಾಹತವಾಗಿ ಹಿಂದಿನಿಂದಲೇ ನಡೆದುಬಂದಿದ್ದು, 88-89ರಲ್ಲಿ 307.47 ಕೋಟಿ, 89-90ರಲ್ಲಿ 209.30

ಕೋಟಿ, 90-91ರಲ್ಲಿ 520.86 ಕೋಟಿ ಮೊತ್ತವನ್ನು ಬಜೆಟ್ ಪ್ರಕಾರ ವೆಚ್ಚ ಮಾಡಿರುವುದಿಲ್ಲ. ಈ ಅನಿಷ್ಟ ಪದ್ಧತಿ ಈಗಲ್ಲೇ ಮುಂದುವರಿದಿದ್ದು ಇದನ್ನು ಅರಿಯಲು ವಾರ್ಷಿಕ ಅವಧಿ ಕೊನೆಗೊಂಡ ನಂತರ ಒಂದೆರಡು ವರ್ಷಗಳೇ ಬೇಕು. ಸರಕಾರ ಬರಬೇಕಾದ ಆದಾಯವನ್ನು ಸರಿಯಾಗಿ ಶೇಖರಿಸದೆ ಇರುವುದು, ಆದಾಯ ಮೂಲಗಳನ್ನು ಸೃಷ್ಟಿಸದೇ ಇರುವುದು, ಅಭಿವೃದ್ಧಿ ಹಾಗೂ ಜನಪರ ಯೋಜನೆಗಳಿಗೆ ಹೆಚ್ಚಿನ ಹಣವನ್ನು ನಿಗದಿಪಡಿಸದೆ ಇರುವುದು, ಇದ್ದ ನಿಗದಿ ಪಡಿಸಿದ ಹಣವನ್ನು ಸಂಪೂರ್ಣವಾಗಿ ಖರ್ಚು ಮಾಡದೆ ಇರುವುದು, ಅನುತ್ಪಾದಕ ಹಾಗೂ ಆಡಳಿತ ಖರ್ಚು ನಿಗದಿಪಡಿಸಿದ ಹಣಕ್ಕಿಂತಲೂ ಹೆಚ್ಚು ಖರ್ಚು ಮಾಡುವುದು, ಪ್ರತಿ ಮಾರ್ಚ್ ಕೊನೆಗೆ ಸಿಕ್ಕಾಪಟ್ಟೆ ಖೋಟಾ ಲೆಟರೆಹೆಡ್ ಕಂಪನಿಗಳಿಗೆ ಹಣ ನೀಡುವುದು. ಅಕ್ರಮ ಅವ್ಯವಹಾರಗಳು ಕಂಡುಬಂದಲ್ಲಿ ಸರಿಯಾಗಿ ತನಿಖೆ ಮಾಡದಿರುವುದು, ತನಿಖೆ ಮಾಡಿದಲ್ಲಿ ಉಗ್ರಶಿಕ್ಷೆ ವಿಧಿಸದಿರುವುದು, ಆಗಿಂದಾಗ್ಗೆ ಸರಕಾರಿ ಖಜಾನೆ ಖಾಲಿಯಾಗಿ ನೌಕರರ ಪಗಾರ, ವೃದ್ಧಾಪ್ಯವೇತನ, ವಿಧವಾ ವೇತನ, ಅಂಗವಿಕಲರ ವೇತನ, ಹೆರಿಗೆ ಭತ್ಯೆ, ಸಹಾಯಧನ, ಜನತಾ ಮನೆ ಕಟ್ಟಿದವರಿಗೆ ಬಾಕಿ ಹಣ, ಕಾಮಗಾರಿ ಮಾಡಿದ ಗುತ್ತಿಗೆದಾರರಿಗೆ ಬಾಕಿ, ಸರಕಾರಿ ವಾಹನಗಳಿಗೆ ಉದ್ರಿ ಪೆಟ್ರೋಲ್, ಡೀಜಲ್ ಕೊಟ್ಟ ಬಂಕ್‌ನವರಿಗೆ ಬಾಕಿ ಕೊಡದೆ ಸಾರ್ವಜನಿಕ ಸರಕಾರದ ಮರ್ಯಾದೆಯನ್ನು ಹರಾಜ್‌ಗೆ ಹಾಕುವುದು ಸಾಧುವೂ ಅಲ್ಲ; ಸಮಂಜಸವೂ ಅಲ್ಲ.

ಸರಕಾರವು ಬರಬರುತ್ತಾ, ರಾಯರ ಕುದುರೆಯಾಗಿರದೆ, ಶಾಸಕರಿಗೆ ವಿಧಾನಮಂಡಲಕ್ಕೆ ತನ್ನ ಯಾವತ್ತೂ ಇಲಾಖೆಗಳ ವರದಿಗಳನ್ನು ಒಂದು ವರ್ಷ ಅವಧಿಗೆ ಪೂರ್ಣಗೊಳಿಸಿ ಸಾದರಪಡಿಸದೆ, ಪ್ರತಿವರ್ಷ ಕೇವಲ ಒಂಬತ್ತು ತಿಂಗಳ ಅಪೂರ್ಣವಾದ ವರದಿಯನ್ನು ಮಾತ್ರ ಸಲ್ಲಿಸಿ ನಿಜವಾದ ಆರ್ಥಿಕ ಹಾಗೂ ಅಭಿವೃದ್ಧಿಯ ಚಿತ್ರವನ್ನು ಬಚ್ಚಿಟ್ಟು ಶಾಸಕಾಂಗವನ್ನು ಕತ್ತಲೆಯಲ್ಲಿಡುವದು ಯಾವ ಸರಕಾರಕ್ಕೂ ಭೂಷಣವಲ್ಲ. ಕೋಟ್ಯಂತರ ಸಾರ್ವಜನಿಕ ಹಣವನ್ನು ತೊಡಗಿಸಲ್ಪಟ್ಟಿರುವ ಬಹುಪಾಲು ಸಾರ್ವಜನಿಕ ಸರಕಾರ ಉದ್ಯಮಗಳು ಸಹ ತಮ್ಮ ವಾರ್ಷಿಕ ವರದಿಗಳನ್ನು ಸಕಾಲದಲ್ಲಿ ವಿಧಾನ ಮಂಡಲಕ್ಕೆ ಶಾಸಕರಿಗೆ ಸಲ್ಲಿಸದೆ ಈ ಉದ್ಯಮಗಳ ನಿಜವಾದ ಚಿತ್ರ ಯಾರಿಗೂ ತಿಳಿಯದೆ ಮಿತಿಮೀರಿದ ನಷ್ಟದಲ್ಲಿ ಮುಳುಗಿದೆ. ಆಗಿಂದಾಗ್ಗೆ ಸರಕಾರದಿಂದ ಹೊರಡುವ ಸರಕಾರಿ ಆಜ್ಞೆ, ಅಧಿಕೃತ ಜ್ಞಾಪನ, ಅಧಿಸೂಚನೆ ಮುಂತಾದವುಗಳನ್ನು ಶಾಸಕರಿಗೆ ಸರಕಾರ ಒದಗಿಸಿ, ಅವುಗಳ ಸಾರ್ವಜನಿಕ ಹಾಗೂ ಆಡಳಿತ ಮಹತ್ವವನ್ನು ಅರಿಯುವಂತೆ ಮಾಡುವಲ್ಲಿ ಸಹ ಸರಕಾರ ಹಿಂದೆ ಬೀಳುವುದು ಸರಿಯಲ್ಲ.

ಸರಕಾರದ ವಾಸ್ತವಿಕ ಉತ್ಪನ್ನ ಕರ ಆದಾಯ, ಕರೇತರ ಆದಾಯ, ಕೇಂದ್ರ ಕರಪಾಲುಗಳೇ ಹೊರತು ಕೇಂದ್ರದ ಸಹಾಯ ಹಾಗೂ ಸಾರ್ವಜನಿಕರಿಂದ ಪಡೆದ ಸಾಲ ಸರಕಾರದ ಉತ್ಪನ್ನವಾಗಲಾರದು. ಹೀಗೆ ಉತ್ಪನ್ನ ಈ ವರ್ಷ 94-95ರಲ್ಲಿ ಆಯವ್ಯಯದ

ಪ್ರಕಾರ 7053.29 ಕೋಟಿಯಾಗಲಿದ್ದು, ಇದರಲ್ಲಿ ಸರಕಾರಿ ಜಿಲ್ಲಾ ಪರಿಷತ್ ಸಿಬ್ಬಂದಿ ಪಗಾರ ಭತ್ಯೆ, ಪಿಂಚಣಿ ಬಾಬ್ತು 94-95ರಲ್ಲಿ ಆಯವ್ಯಯದ ಪ್ರಕಾರ 3032.51 ಕೋಟಿ ಯಾಗಲಿದೆ. ಇದು ಅನಿವಾರ್ಯ. ಈ ದಿಸೆಯಲ್ಲಿ ಹಳ್ಳಿಯ ಒಬ್ಬ ಗ್ರಾಮಸಹಾಯಕ ನಿಂದ ಹಿಡಿದು, ರಾಜ್ಯದ ಮುಖ್ಯಕಾರ್ಯದರ್ಶಿಯವರಿಗೆ ಎಲ್ಲರೂ ಪ್ರಾಮಾಣಿಕರಾಗಿ ತಮ್ಮ ಪಾಲಿನ ಕರ್ತವ್ಯವನ್ನು ತಾವು ಪಾಲಿಸಿದರೆ, ಶಾಸಕರು ಹಾಗೂ ಸಚಿವರು ಸಹ ಈ ಸರಕಾರವನ್ನು ಹಾಗೂ ಸರಕಾರಿ ಆಡಳಿತವನ್ನು ಸರಿಯಾಗಿ ಮುನ್ನಡೆಸಿದರೆ ಒಳ್ಳೆಯದು.

❑

1995-96ರ ತೆರಿಗೆ ತಾರಕವಾಗದೆ ಮಾರಕವಾಗಬಾರದು

ವಾರಾಟ, ಅಬಕಾರಿ, ಮುದ್ರಾಂಕ, ನೋಂದಣಿ, ವರಮಾನ, ಭೂ ಕಂದಾಯ, ವಾಹನ ಸರಕು, ಪ್ರಯಾಣ, ವಿದ್ಯುಚ್ಛಕ್ತಿ ಇತ್ಯಾದಿ ತೆರಿಗೆ ಹಾಗೂ ವಿವಿಧ ಸೇವೆ, ಬಡ್ಡಿ ಇತ್ಯಾದಿ ತೆರಿಗೆಯೇತರ ಕರ 1994-95 ರಲ್ಲಿ 5845.18 ಕೋಟಿ 1995-96ರಲ್ಲಿ 6758.18 ಕೋಟಿಗೆ ಏರಲಿದೆ. ಕರದಾತ ಪ್ರಜೆಗಳು ವಾಸ್ತವಿಕವಾಗಿ 1991-92ರಲ್ಲಿ 3773.13 ಕೋಟಿ, 1992-93ರಲ್ಲಿ 4198.93 ಕೋಟಿ, 1993-94ರಲ್ಲಿ 4929.07 ಕೋಟಿ ಮೊತ್ತವನ್ನು ರಾಜ್ಯ ಸರಕಾರಕ್ಕೆ ಸಲ್ಲಿಸಿದ್ದಾರೆ. ಕರ್ನಾಟಕ ರಾಜ್ಯವನ್ನೊಳಗೊಂಡ ಭಾರತೀಯ ಕರದಾತ ಪ್ರಜೆಗಳು ಸಹ ಕೇಂದ್ರ ಸರಕಾರಕ್ಕೆ ತೆರಿಗೆ ಹಾಗೂ ತೆರಿಗೆಯೇತರ ಕರ 1994-95 ರಲ್ಲಿ 88,770.00 ಕೋಟಿ, 1995-96ರಲ್ಲಿ, 1,00,787.00 ಕೋಟಿ ರೂಪಾಯಿಗಳನ್ನು ಕೊಡಬೇಕಾಗುತ್ತದೆ. ವಾಸ್ತವಿಕವಾಗಿ ಕೇಂದ್ರ ಸರಕಾರಕ್ಕೆ ಭಾರತೀಯರು 1993-94 ರಲ್ಲಿ 75,453.00 ಕೋಟಿ ಮೊತ್ತ ಕೊಟ್ಟಿದ್ದಾರೆ. ಪ್ರತಿವರ್ಷ ಶರವೇಗದಲ್ಲಿ ಹೆಚ್ಚುತ್ತಿರುವ ಸರಕಾರಗಳ ಆದಾಯ ಜನತೆಗೆ ತಾರಕವಾಗಬೇಕೇ ಹೊರತು ಮಾರಕವಾಗಬಾರದು. ಕೇಂದ್ರ ಹಾಗೂ ರಾಜ್ಯ ಸರಕಾರಗಳು ಇಷ್ಟೊಂದು ಆದಾಯ ಪಡೆಯುತ್ತಿದ್ದರೂ ಪ್ರತಿ ವರ್ಷ ಹೆಚ್ಚು ಪ್ರಮಾಣದಲ್ಲಿ ಸಾಲ ಮಾಡುತ್ತ, ಸಾಲವನ್ನು ತೀರಿಸದೆ, ಸಾಲ ತೀರಿಸುವ ಸಾಮರ್ಥ್ಯ ಕಳೆದುಕೊಂಡು ಹೇರಳವಾದ ಬಡ್ಡಿಯನ್ನು ತೆತ್ತುತ್ತಾ ಸಾಲದ ಹೊರೆಯಿಂದ ತತ್ತರಿಸಿ ಆರ್ಥಿಕ ಗುಲಾಮರುಗಳಾಗಿದ್ದಾರೆ. ಅಂತೆಯೇ ಜನಸಾಮಾನ್ಯರಾದ ರೈತರು ಕಾರ್ಮಿಕರು, ಹಿಂದುಳಿದ ವರ್ಗದವರು, ಅಲ್ಪಸಂಖ್ಯಾತರು ವಿವಿಧ ಸಾಲಗಳಿಗೆ ಮಾರುಹೋಗಿ ಸಾಲ ಮರುಪಾವತಿ ಮಾಡದೆ ಬಡ್ಡಿಯನ್ನು ಸಹಾ ಕೊಡಲಿಕ್ಕಾಗದೆ ಅವರೂ ಸಹ ಇಂದು ಆರ್ಥಿಕ ಗುಲಾಮರಾಗಿದ್ದಾರೆ.

ಪ್ರತಿವರ್ಷ ರಾಜ್ಯ ಸರಕಾರ ಪಡೆಯುತ್ತಿರುವ ಆದಾಯದ ಪಾಲು ಬಹುತೇಕವಾಗಿ ನೌಕರರ ವೇತನ, ಭತ್ಯೆ, ಕೂಲಿ, ಸ್ಟೈಫಂಡ್, ವಿಶ್ರಾಂತಿ ವೇತನ, ಜನರಿಗೆ ಸಿಗದ ಸಬ್ಸಿಡಿ, ಶಿಕ್ಷಣ, ಇತರ ವೆಚ್ಚ, ಕಛೇರಿ, ವೆಚ್ಚ, ಪ್ರಯಾಣ ವೆಚ್ಚ, ಕಿರುಕುಳ ವೆಚ್ಚ,

ಮೋಟಾರು ವಾಹನ ಹಾಗೂ ನಿರ್ವಹಣೆ, ಯಂತ್ರ, ಸಾಧನೆ, ಸಲಕರಣೆ, ಸಾಮಗ್ರಿ, ಆಡಳಿತ, ಬಡ್ಡಿ, ರಾಜ್ಯ ಲಾಟರಿ, ಸಾರ್ವಜನಿಕ ಉದ್ಯಮಗಳಿಗೆ ಸಹಾಯ, ಹಿಂದುಳಿದ ವರ್ಗಗಳಿಗೆ ಸಹಾಯ ಮಾಡಿದ ಸ್ಥಳೀಯ ಸಂಸ್ಥೆ, ನಗರಸಭೆ, ನಗರಪಾಲಿಕೆಗಳಿಗೆ ಸಹಾಯ, ಬಾಡಿಗೆ ಇತ್ಯಾದಿಗಳಿಗೆ ಖರ್ಚಾಗುತ್ತಿದ್ದು, ಇದು ಸಹ ಭಾರಿ ಪ್ರಮಾಣದಲ್ಲಿ ಹೆಚ್ಚುತ್ತಲೇ ಇದೆ. ಈ ಬಾಬ್ತು ವಾಸ್ತವಿಕ ವೆಚ್ಚ 1991-92ರಲ್ಲಿ 2534.97 ಕೋಟಿ, 1992-93ರಲ್ಲಿ 3039.84 ಕೋಟಿ ಇದ್ದು, ಆಯವ್ಯಯ ಪ್ರಕಾರ 93-94ರಲ್ಲಿ 3224.05 ಕೋಟಿ. 94-95ರಲ್ಲಿ 4046.50 ಕೋಟಿಯಾಗಲಿದ್ದು, 95-96 ರಲ್ಲಿ ಕಾದು ನೋಡಬೇಕಾಗಿದೆ. ಕೇವಲ ವಿಶ್ರಾಂತಿ ವೇತನದ ಬಗ್ಗೆ ಹೇಳಬೇಕಾದರೆ ಸರಕಾರದ ಒಂದು ಅಧಿಕೃತ ಪ್ರಕಟಣೆಯ ಪ್ರಕಾರ ವಾಸ್ತವಿಕವಾಗಿ 92-93ರಲ್ಲಿ 439.98 ಕೋಟಿ ವೆಚ್ಚವಾಗಿದ್ದು ಅಂದಾಜಿನ ಪ್ರಕಾರ 93-94ರಲ್ಲಿ 504.76 ಕೋಟಿ 94-95ರಲ್ಲಿ 585.16 ಕೋಟಿಯಾಗಲಿದ್ದು, 95-96 ರಲ್ಲಿ ಕಾದುನೋಡಬೇಕಾಗಿದೆ. ಮತ್ತೊಂದು ಅಧಿಕೃತ ಪ್ರಕಟಣೆಯ ಪ್ರಕಾರ ವಾಸ್ತವಿಕವಾಗಿ 92-93ರಲ್ಲಿ 348.61 ಕೋಟಿ, 93-94 ರಲ್ಲಿ 410.28 ಕೋಟಿ, ವೆಚ್ಚವಾಗಿದ್ದು, ಅಂದಾಜಿನ ಪ್ರಕಾರ 94-95ರಲ್ಲಿ 473.00 ಕೋಟಿ, 95-96ರಲ್ಲಿ 552.24 ಕೋಟಿಯಾಗಿದೆ. ಈ ತರಹದ ಅಭಿವೃದ್ಧಿಯೇತರ ವೆಚ್ಚ ಹೆಚ್ಚುತ್ತಿರುವದು ದಿನವಹಿ ಆಡಳಿತ ನಡೆಸಲು ಸರಕಾರಿ ಸಿಬ್ಬಂದಿಗೆ ಮಾತ್ರ ತಾರಕವಾಗಿದೆ.

ಕರದಾತ ರಾಜ್ಯದ ಪ್ರಜೆಗಳಿಗೆ ಉಪಯುಕ್ತ ಯೋಜನೆಗಳಾದ ನೀರು ಸರಬರಾಜು, ನೀರಾವರಿ, ವಿದ್ಯುಚ್ಛಕ್ತಿ, ಕೃಷಿ, ತೋಟಗಾರಿಕೆ, ಮೀನುಗಾರಿಕೆ, ಪಶುಸಂಗೋಪನೆ, ಗ್ರಾಮೋದ್ಯೋಗ, ಪ್ರಾಥಮಿಕ ಶಿಕ್ಷಣ, ಪೌಷ್ಠಿಕ ಆಹಾರ, ವಸತಿ, ನಗರಾಭಿವೃದ್ಧಿ ಸಣ್ಣ ಕೈಗಾರಿಕೆ, ಗ್ರಾಮೀಣ ಅಭಿವೃದ್ಧಿ, ವಿಶೇಷ ಕಾರ್ಯಕ್ರಮ, ನೈಸರ್ಗಿ ವಿಕೋಪಗಳಿಗೆ ಪರಿಹಾರ, ಹೈನಾಭಿವೃದ್ಧಿ, ಸಹಕಾರ, ಪ್ರವಾಸೋದ್ಯಮ, ಕ್ರೀಡೆ ಯುವಜನ ಸೇವೆ, ಆಹಾರ ಮತ್ತು ನಾಗರೀಕ ಸರಬರಾಜು, ಅಗ್ನಿಶಾಮಕ, ನ್ಯಾಯಾಡಳಿತ, ಕಟ್ಟಡ, ಧಾರ್ಮಿಕ ದತ್ತಿ, ಮಾರುಕಟ್ಟೆ, ಸಮಗ್ರ ಗ್ರಾಮೀಣ ಅಭಿವೃದ್ಧಿ, ಮಹಿಳೆ ಮತ್ತು ಮಕ್ಕಳ ಕಲ್ಯಾಣ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇತ್ಯಾದಿ ಕಾರ್ಯಕ್ರಮಗಳಿಗೆ ಅತಿ ಹೆಚ್ಚು ಹಣವು ಪ್ರತಿ ವರ್ಷ ಆಯವ್ಯಯದಲ್ಲಿ ಹೆಚ್ಚಿಸಿ ವೆಚ್ಚ ಮಾಡಬೇಕಾದುದು ಅತ್ಯವಶ್ಯಕ. ಪ್ರತಿವರ್ಷ ಈ ಯೋಜನೆಗಳಿಗೆ ಆಯವ್ಯಯದಲ್ಲಿ ನಿಗದಿಪಡಿಸಿದ ಹಣವನ್ನೇ ಪೂರ್ತಿಯಾಗಿ ವೆಚ್ಚ ಮಾಡದೆ, ಪ್ರತಿವರ್ಷ ಕೋಟ್ಯಂತರ ಹಣವನ್ನು ಉಳಿಸುತ್ತಿರುವುದು ನಿರಾತಂಕವಾಗಿ ನಡೆದಿದೆ. 1992-93 ರಲ್ಲಿ ಜನಪವಾದ ಈ ಕೆಲವು ಯೋಜನೆಗಳಿಗೆ ನಿಗದಿಪಡಿಸಿದ ಹಣದಲ್ಲಿ ಸುಮಾರು· 708.25 ಕೋಟಿ ಹಣವನ್ನು ವೆಚ್ಚಮಾಡದೆ ಅಧಿಕಾರಿಗಳು ಉಳಿಸಿರುವುದು ಕಂಡು ಬಂದಿದೆ. ಈ ಪದ್ಧತಿ ಮುಂದುವರಿದೇ ಇದೆ, ಹೀಗಾಗಬಾರದು. ಇನ್ನೂ ಕೆಲವು ಯೋಜನೆಗಳಿಗೆ ಪ್ರತಿ ತಿಂಗಳು ವೆಚ್ಚಮಾಡದೆ 1992-93ರಲ್ಲಿ ಮೊದಲ ಹನ್ನೊಂದು ತಿಂಗಳಲ್ಲಿ ನಿಗದಿಪಡಿಸಿದ ಹಣದಲ್ಲಿ 82.17 ಕೋಟಿ ರೂ. ವೆಚ್ಚ ಮಾಡಿ

ಕೊನೆಯ ಮಾರ್ಚ್ ತಿಂಗಳೊಂದರಲ್ಲಿಯೇ 49.25 ಕೋಟಿ ವೆಚ್ಚ ತೋರಿಸಲಾಗಿದೆ. ಅನೇಕ ಅಭಿವೃದ್ಧಿ ಕಾರ್ಯಗಳನ್ನು ಮಾಡದೆ ಪ್ರತಿವರ್ಷ ಮಾರ್ಚ್ ಕೊನೆಗೆ ಖರ್ಚು ಹಾಕಿ, ಹಣ ಎತ್ತಿ ಹಾಕುವುದು, ಯಾರಾದರೂ ತಕರಾರು ಮಾಡಿದರೆ, ಬೇಕಾದರೆ ನಂತರ ಕೆಲಸ ಮಾಡುವುದು, ಸಿಕ್ಕಿಬಿದ್ದರೆ ಹೇಗಾದರೂ ಮಾಡಿ ಉಳಿದುಕೊಳ್ಳುವುದು, ತಪ್ಪಿತಸ್ಥರಾದರೆ ಸರಕಾರದ ಕೃಪೆಯಿಂದ ಪಾರಾಗುವುದು ಹಿಂದಿನಿಂದಲೂ ನಡೆದು ಬಂದಿರುವ ಸಹಸ್ರಾರು ಉದಾಹರಣೆಗಳಿವೆ, ಇದು ನಿಲ್ಲಬೇಕು. ಶಾಸಕಾಂಗದ ವಿವಿಧ ಸಮಿತಿಗಳ ವರದಿ, ಲೆಕ್ಕಪತ್ರ ತಪಾಸಿಗರ ವರದಿ, ಭಾರತದ ಕಂಟ್ರೋಲ್ ಮತ್ತು ಆಡಿಟರ್ ಜನರಲ್‌ರವರ ವರದಿ, ಸರಕಾರದ ವಿವಿಧ ತನಿಖಾ ಸಮಿತಿಗಳ ವರದಿಗಳಲ್ಲಿಯ ಸಲಹೆ, ಸೂಚನೆ ಲೋಪ ಇತ್ಯಾದಿಗಳನ್ನು ಹಲವಾರು ದಶಕಗಳವರೆಗೆ ಕೆಲಸ ನಿರ್ವಹಿಸುವ ಸರಕಾರಿ ಅಧಿಕಾರಿಗಳು ಅನೇಕಸಾರೆ ಮುಗ್ಧ ಮಂತ್ರಿ, ಮುಖ್ಯಮಂತ್ರಿಗಳನ್ನೇ ಮಿಲಾಷಿ ಮಾಡಿಕೊಂಡು ಗಾಳಿಗೆ ತೂರಿರುವುದು ಸರಿಯಲ್ಲ. ಶಾಸಕರು, ಮಂತ್ರಿಗಳು ಇನ್ನಾದರೂ ತಮ್ಮ ಮೇಲಿನ ಹೊಣೆ, ಜವಾಬ್ದಾರಿಯನ್ನು ಅರಿತು ಸರಕಾರದ ಆಯವ್ಯಯ ಹಾಗೂ ಸರಕಾರಕ್ಕೆ ಬಂದ ವಿವಿಧ ವರದಿಗಳನ್ನು ಅಭ್ಯಾಸ ಹಾಗೂ ಅಧ್ಯಯನ ಮಾಡಿ, ತಮ್ಮ ಅಮೂಲ್ಯ ವೇಳೆಯ ಮಹತ್ವವನ್ನರಿತು ಕಾರ್ಯ ಪ್ರವೃತ್ತರಾದರೆ ಮಾತ್ರ ಪ್ರತಿವರ್ಷದ ಆಯವ್ಯಯ ಎಲ್ಲರಿಗೂ ತಾರಕವಾಗಬಲ್ಲದು. ಇಲ್ಲವಾದರೆ ಸರಕಾರಿ ಸಿಬ್ಬಂದಿಗೆ ತಾರಕ. ಕರದಾತ ಪ್ರಜೆಗಳಿಗೆ ಮಾರಕವೆಂದು ಹೇಳುವುದು ಅನಿವಾರ್ಯ.

❑

ಸುಧಾರಣೆ ಸಾಧಿಸದ ಸಾರಿಗೆ ಸಂಸ್ಥೆ

ರಾಜ್ಯ ಸಾರಿಗೆ ಸಂಸ್ಥೆಯ ಆಡಳಿತವನ್ನು ಸುಧಾರಿಸುತ್ತೇವೆಂದು ಸರಕಾರ ಮೇಲಿನಿಂದ ಮೇಲೆ ಹೇಳುತ್ತಿದ್ದರೂ, ಯಾವುದೇ ಸುಧಾರಣೆಯಾಗದೆ ಪ್ರಯಾಣಿಕರ ಸಂಖ್ಯೆಗೆ ಅನುಗುಣವಾಗಿ ಹೆಚ್ಚೆಚ್ಚು ಬಸ್ಸುಗಳನ್ನು ಓಡಿಸದೆ ಇರುವದು, ಇದ್ದ ಬಸ್ಸುಗಳ ಸಂಚಾರ ರದ್ದುಪಡಿಸುವದು, ತಡವಾಗಿ ಬಿಡುವದು, ಹೊರಟ ಬಸ್ಸುಗಳು ಮುಟ್ಟಿ ಬರಬೇಕಾದ ಊರಗಳನ್ನು ಮುಟ್ಟದೆ ನಡುಮಧ್ಯದಿಂದಲೇ ಹಿಂದಕ್ಕೆ ಬರುವದು, ಜನ ಸಾಮಾನ್ಯ ಹಾಗೂ ವಿದ್ಯಾರ್ಥಿ ಪ್ರಯಾಣಿಕರಿಗೆ ಅನಾನುಕೂಲ ಹಾಗೂ ತೊಂದರೆಯನ್ನುಂಟು ಮಾಡುವದು, ಸಿಬ್ಬಂದಿಯ ಗೈರುಹಾಜರಿ ಹೆಚ್ಚಾಗುತ್ತಿರುವದು, ಬಸ್ಸುಗಳ ಸಂಚಾರಿ ಆದಾಯ ಕಡಿಮೆಯಾಗುತ್ತಿರುವದು, ಬಂದ್ ಆದ ಕ್ಯಾಂಟೀನುಗಳನ್ನು ಪ್ರಾರಂಭಿಸದೆ ಇರುವದು, ಸಾರ್ವಜನಿಕ, ಪತ್ರಿಕೆಗಳ ಹಾಗೂ ಶಾಸಕಾಂಗದ ಸಲಹೆ ಸೂಚನೆಗಳನ್ನು ಗಾಳಿಗೆ ತೂರುತ್ತಿರುವದು, ಅವಿಧೇಯ ಹಾಗೂ ಗೈರುಹಾಜರಿ ಸಿಬ್ಬಂದಿ ಮೇಲೆ ಕಟ್ಟುನಿಟ್ಟಾದ ಶಿಸ್ತಿನ ಕ್ರಮ ತೆಗೆದುಕೊಳ್ಳದೇ ಇರುವದು, ಘಟಕ ಹಾಗೂ ವಿಭಾಗಗಳಿಗೆ ಸಾರ್ವಜನಿಕರ ಸಲಹಾ ಸಮಿತಿಯನ್ನು ರಚಿಸದೆ ಇರುವದು, ಇವೆಲ್ಲವುಗಳ ಒಟ್ಟಾರೆ ಪರಿಣಾಮವಾಗಿ ಸಾರಿಗೆ ಸಂಸ್ಥೆಯು ನಷ್ಟ ದಿನದಿಂದ ದಿನಕ್ಕೆ ಮುಂದುವರೆಯುತ್ತಿರುವುದು ಯಥಾಪ್ರಕಾರ ನಿರಾತಂಕವಾಗಿ ರಾಜ್ಯಾದ್ಯಂತ ಸಾಗಿದೆ. ಹಾಗೂ ಸರಕಾರದ ವೈಫಲ್ಯ ಮುಂದುವರೆದಿದೆ. ಈ ದಿಶೆಯಲ್ಲಿ ಸರಕಾರವೇ ಅಧಿಕೃತವಾಗಿ ಕೊಟ್ಟಿರುವ ಕೆಲವು ಸ್ಯಾಂಪಲ್ ಉದಾಹರಣೆ ಹೀಗಿದೆ.

1. "ಹಿರೇಕೆರೂರ ಡಿಪೋದಲ್ಲಿ ತಾ: 25-5-95 ರಂದು ಎಂಟು ಅನುಸೂಚಿ ಸಂಚಾರಗಳು ರದ್ದಾಗಿದ್ದುದರಿಂದ 2131 ಕಿ.ಮೀ. ಸಂಚಾರ ರದ್ದಾಗಿದ್ದು ಇದರಿಂದ 22,652.00 ರೂ.ಗಳ ಸಂಚಾರಿ ಆದಾಯ ನಷ್ಟವಾಗಿದೆ. 1-6-95 ರಿಂದ 30-6-95ರ ವರೆಗೆ ಈ ಜೂನ್ ತಿಂಗಳ ಅವಧಿಯಲ್ಲಿ ಹಿರೇಕೆರೂರ - ಬೆಳಗಾಂವ ಅನುಸೂಚಿ ಬಸ್ಸು 39 ಇದನ್ನು ಎರಡು ದಿವಸ ರದ್ದು ಮಾಡಲಾಗಿದೆ. ಹತ್ತು ದಿವಸ ತಡವಾಗಿ ಬಿಡಲಾಗಿದೆ. ಒಂದು ದಿವಸ ಹುಬ್ಬಳ್ಳಿವರೆಗೆ ಎರಡು

ದಿವಸ ಬ್ಯಾಡಗಿವರೆಗೆ, ಒಂದು ದಿವಸ ಧಾರವಾಡದವರೆಗೆ ಹೋಗಿ ಹಿಂದಕ್ಕೆ ಬರಲಾಗಿದೆ. ಈ ಬಸ್ಸಿನಿಂದ ತಾ : 26-6-95 ರಂದು 5410-00 ರೂ.ಗಳ ಗರಿಷ್ಠ ಆದಾಯ ಗಳಿಕೆಯಾಗಿದೆ. 13-6-95 ರಂದು 10 ಗಂಟೆಗೆ ಹೊರಡುವ ಬಸ್ಸು ಎಂಟುವರೆ ತಾಸು ತಡವಾಗಿ ಹೊರಟಿದೆ. 13-6-95 ರಂದು ಮೂರು ಬಸ್ಸುಗಳು ರದ್ದಾಗಿದ್ದು, ಮೂರು ಬಸ್ಸುಗಳು ತಡವಾಗಿ ಹೊರಟಿವೆ. 13-6-95 ರಂದು 10-00 ಗಂಟೆಗೆ ಹೊರಡುವ ಹಿರೇಕೆರೂರ - ಬೆಳಗಾಂವ ಬಸ್ಸು ಬ್ಯಾಡಗಿ ವರೆಗೆ ಹೋಗಿ ಹಿಂದಕ್ಕೆ ಬಂದಿದೆ. 25-6-95ರಂದು ಒಂದು ಅನುಸೂಚಿ ಸಂಚಾರ ರದ್ದಾಗಿದ್ದು, ಇದರಿಂದ 7400-00 ರೂ ನಷ್ಟವಾಗಿದೆ. ಹಿರೇಕೆರೂರ ಹಾನಗಲ್ ಬಸ್ಸನ್ನು ಜೂನ್ ತಿಂಗಳಲ್ಲಿ ಒಂದು ದಿವಸ ರದ್ದು ಮಾಡಲಾಗಿತ್ತು. ಹನ್ನೆರಡು ದಿವಸ ತಡವಾಗಿ ಬಿಟ್ಟಿತ್ತು. ಎರಡು ಸಾರಿ ಹಾನಗಲ್ಲಿಗೆ ಹೋಗದೆ ಅಕ್ಕಿ ಆಲೂರಿನಿಂದ ಹಿಂದಕ್ಕೆ ಬಂದಿದೆ. ಜೂನ್ ತಿಂಗಳಲ್ಲಿ ಈ ಹಾನಗಲ್ ಹೀರೆಕೆರೂರ ಬಸ್ಸಿನ ಸಂಚಾರಿ ಆದಾಯ 32630-00 ರೂ."

2. "ಹಿರೇಕೆರೂರ ಡಿಪೋದಲ್ಲಿ ಮೂರು ಪಾಳಿದಲ್ಲಿ, ಕಾರ್ಯ ನಿರ್ವಹಿಸಬೇಕಾಗಿದ್ದ ಜುಲೈ ತಿಂಗಳಲ್ಲಿಯ ತಾಂತ್ರಿಕ ಸಿಬ್ಬಂದಿ ಸಂಖ್ಯೆ 62. ಇವರನ್ನು ಪ್ರತಿ ದಿವಸ ಮೂರು ಪಾಳಿ ಮಾಡಿ ಕೆಲಸ ಮಾಡಲು ನಿಯೋಜಿಸಲಾಗಿತ್ತು. ಈ ಮೂರು ಪಾಳಿಯಲ್ಲಿ ಪ್ರತಿದಿನ ಒಟ್ಟು ಗೈರು ಹಾಜರವುಳಿದವರ ಸಂಖ್ಯೆ ಕನಿಷ್ಠ 12 ರಿಂದ ಗರಿಷ್ಠ 39 ಏರಿದೆ. ಜುಲೈ 95 ಈ ತಿಂಗಳಲ್ಲಿ 31 ದಿವಸಗಳಲ್ಲಿ 1992 ಮಾನವ ಕರ್ತವ್ಯ ದಿನಗಳು, ಈ ದಿನಗಳಲ್ಲಿ ಗೈರಹಾಜರಿ ಆಗಿರುವ ತಾಂತ್ರಿಕ ಸಿಬ್ಬಂದಿಯ ಕರ್ತವ್ಯಗಳು 795. ಈ ತಿಂಗಳಲ್ಲಿ 19 ದಿವಸ 31 ಅನುಸೂಚಿ ಬಸ್ಸುಗಳು, ರದ್ದಾಗಿವೆ. ಇದರಿಂದ 10470 ಕಿಲೋಮೀಟರ್ ಸಂಚಾರ ರದ್ದಾಗಿದೆ. ಈ ತಿಂಗಳಲ್ಲಿ 1829 ಅನುಸೂಚಿ ಬಸ್ಸುಗಳ ಪೈಕಿ 362 ಅನುಸೂಚಿ ಬಸ್ಸುಗಳ ಸಂಚಾರಗಳು ತಡವಾಗಿ ಹೊರಟಿವೆ. ಇದರಿಂದಾಗಿ 22391 ಕಿ.ಮೀ. ಸಂಚಾರ ರದ್ದಾಗಿದೆ. ತಾ : 23-7-95 ರಂದು ಹನ್ನೊಂದು ಬಸ್ಸುಗಳು ಕನಿಷ್ಠ ಅರ್ಧ ತಾಸಿನಿಂದ ಗರಿಷ್ಠ 6 ತಾಸುಗಳ ವರೆಗೆ ತಡವಾಗಿ ಹೊರಟಿವೆ. ಜುಲೈ 23, 24, 25, 26 ಈ ನಾಲ್ಕು ದಿನಗಳಲ್ಲಿ 65 ಬಸ್ಸುಗಳು ತಡವಾಗಿ ಹೊರಟಿವೆ. 4 ಬಸ್ಸುಗಳ ಸಂಚಾರ ರದ್ದಾಗಿದೆ. ಈ ನಾಲ್ಕು ದಿವಸಗಳಲ್ಲಿ ಬರಬೇಕಾಗಿದ್ದ ವರಮಾನ 6,00,000-00 ರೂ. ಆದರೆ ಬಂದ ವರಮಾನ 5,71,336-00 ರೂ. ಚಾಲಕರ ಹಾಗೂ ನಿರ್ವಾಹಕರ ಗೈರು ಹಾಜರಿ, ಅನಿರೀಕ್ಷಿತ ದುರಸ್ತಿ ಕಾರ್ಯಗಳಿಂದ ಬಸ್ಸುಗಳು ತಡವಾಗಿ ಹೊರಟಿವೆ."

3. "1-8-95 ರಿಂದ 5-8-95ರ ವರೆಗೆ ಹಿರೇಕೆರೂರ ಘಟಕದಲ್ಲಿ ಪ್ರತಿ ದಿವಸ ಸರಾಸರಿ 3075 ಕಿ.ಮೀ.ಗಳ ಸಂಚಾರ ರದ್ದಾಗಿದ್ದು ಇದು ಶೇಕಡಾ 12.34

ರಷ್ಟಾಗುವದು, ಈ ರದ್ಧತಿಯು ಪ್ರಮುಖವಾಗಿ ಸಿಬ್ಬಂದಿಯ ಗೈರು ಹಾಜರಿಯಿಂದ ಉಂಟಾಗಿದೆ. ಈ ಘಟಕಕ್ಕೆ ತಾಂತ್ರಿಕ ಸಿಬ್ಬಂದಿ 81 ಜನ ಹಾಗೂ 12 ತಾಂತ್ರಿಕ ಅಪ್ರೆಂಟಿಸ್‌ಗಳು ಕೆಲಸ ಮಾಡುತ್ತಿದ್ದಾರೆ. 144 ಚಾಲಕರು, 140 ನಿರ್ವಾಹಕರು ಕೆಲಸ ಮಾಡುತ್ತಿದ್ದಾರೆ. ತಾ ః 2-9-95 ರಂದು ಹಿರೇಕೆರೂರ ಡಿಪೋದಲ್ಲಿಯ ಬಸ್ಸುಗಳು ಸಂಖ್ಯೆ 82 ಗೈರುಹಾಜರಿ ಆಗುವ ಸಿಬ್ಬಂದಿ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳಲಾಗುವದು, ಹಿರೇಕೆರೂರ ಡಿಪೋದ ಒಂದು ವಾಹನದ ಸರಾಸರಿ ದೈನಂದಿನ ಆದಾಯ 90-91ರಲ್ಲಿ 1757-00 ರೂ, 91-92ರಲ್ಲಿ 1832-00 ರೂ, 92-93ರಲ್ಲಿ 1908 ರೂ, 93-94ರಲ್ಲಿ 2022 ರೂ. 94-95ರಲ್ಲಿ 2195 ರೂ. 92-96ರಲ್ಲಿ 1-4-95 ರಿಂದ 31-7-95ರ ವರೆಗೆ ನಾಲ್ಕು ತಿಂಗಳಲ್ಲಿ 2380-00 ರೂ. ಆಗಿದೆ. 1-4-95 ರಿಂದ ಮೊದಲ ಹನ್ನೊಂದು ತಿಂಗಳಲ್ಲಿ ಹುಬ್ಬಳ್ಳಿ ವಿಭಾಗದಲ್ಲಿಯು ಆರು ಘಟಕಗಳು ಒಟ್ಟು 659-75 ಲಕ್ಷ ನಷ್ಟವನ್ನು ಅನುಭವಿಸಿದ್ದು, 94-95 ಇಡೀ ವರ್ಷದಲ್ಲಿ ಹುಬ್ಬಳ್ಳಿಯ ನಗರ ಡಿಪೋ 247.78 ಲಕ್ಷ, ಧಾರವಾಡ ನಗರ ಡಿಪೋ 163.64 ಲಕ್ಷ ನಷ್ಟಕ್ಕೊಳಗಾಗಿದೆ. 1-4-92 ರಿಂದ 30-6-95 ರ ವರೆಗಿನ ಅವಧಿಯಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್‌ಗಳ ಟಾಪಿನ ಮೇಲಿಂದ ಬಿದ್ದ ಸತ್ತವರ ಸಂಖ್ಯೆ 58 ಇದ್ದು, ಗಾಯಗೊಂಡವರ ಸಂಖ್ಯೆ 156 ಇರುತ್ತದೆ.''

4. ''1-4-91 ರಿಂದ 31-7-95ರ ವರೆಗಿನ ಅವಧಿಯಲ್ಲಿ ಸ್ಪೇರ್ ಪಾರ್ಟ್ಸ್, ಡೀಜಲ್, ಟ್ಯೂಬು ಟಾಯರ ಇತ್ಯಾದಿ ವಸ್ತುಗಳನ್ನು ಕಳವು ಮಾಡಿದ ಪ್ರಕರಣಗಳ ಸಂಖ್ಯೆ 164 ಇದೆ. ಭಾಲ್ಕಿ ಉಪ್ಪಾರಪೇಟೆ, ಕೊಪ್ಪಳ, ಗುಲ್ಬರ್ಗಾ, ಬೀದರ್, ಬಿಜಾಪೂರ, ಬಾಗಲಕೋಟೆ ಭಾಗಗಳಲ್ಲಿ ನಕಲಿ ಟಿಕೇಟುಗಳನ್ನು ಚಲಾವಣೆ ಮಾಡಿದ ಬಗ್ಗೆ ಸಂಬಂಧಿಸಿದವರ ಮೇಲೆ ಮೊಕದ್ದೆಮೆ ಹೂಡಲಾಗಿದೆ. 31-7-95ರ ಅಖೈರಿಗೆ ಸಾರಿಗೆ ಸಂಸ್ಥೆಯ ಒಟ್ಟು 15356 ಸಿಬ್ಬಂದಿಗಳು ವಿವಿಧ ಆರೋಪಗಳನ್ನು ಎದುರಿಸುತ್ತಿದ್ದಾರೆ. ತಾ ః 31-7-95 ರ ಅಖೈರಿಗೆ ರಾಜ್ಯ ಸಾರಿಗೆ ಸಂಸ್ಥೆಯಲ್ಲಿ 10,001 ಬಸ್ಸುಗಳಿವೆ. ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಸಲಹಾ ಸಮಿತಿಯನ್ನು ರಚಿಸುವ ವಿಚಾರ ಪರಿಶೀಲನೆಯಲ್ಲಿದೆ.''

ಮೇಲ್ಕಂಡ 4 ಪ್ಯಾರಾಗಳಲ್ಲಿಯು ಅಧಿಕೃತ ಹೇಳಿಕ ಸಾರಿಗೆ ಸಚಿವ ಶ್ರೀ ಬೀಳಗಿಯವರು ವಿಧಾನ ಸಭೆಯಲ್ಲಿ ಹೇಳಿದ್ದು ಇರುತ್ತದೆ. ಸಾರಿಗೆ ಸಂಸ್ಥೆಯ ಎಲ್ಲಾ ಡಿಪೋಗಳಲ್ಲಿ ಈ ದುಸ್ಥಿತಿ ಇದ್ದು ಮುಂದುವರೆಯುತ್ತಿದೆ. ನೂರಕ್ಕೆ 80ರಷ್ಟು ಸಿಬ್ಬಂದಿ ಪ್ರಾಮಾಣಿಕ ಹಾಗೂ ದಕ್ಷತೆಯುಳ್ಳವರಿದ್ದು, ನೂರಕ್ಕೆ 20 ರಷ್ಟು ಸಿಬ್ಬಂದಿ ಮಾತ್ರ ಗೈರು ಹಾಜರ ಉಳಿಯುವರು. ಇವರು ಸಾರಿಗೆ ಸಂಸ್ಥೆಗೆ, ಸಿಬ್ಬಂದಿಗೆ, ಸರಕಾರಕ್ಕೆ ಹಾಗೂ ನೌಕರ ಸಂಘಕ್ಕೆ ಕಳಂಕ ತರುವವರಿದ್ದು, ಇವರ ಕರ್ತವ್ಯಚ್ಯುತಿಯಿಂದಲೇ ರಾಜ್ಯಾದ್ಯಂತ

ಬಸ್ಸುಗಳು ರದ್ದಾಗುವದು, ತಡವಾಗುವದು ತಲುಪಬೇಕಾಗಿದ್ದ ಊರಿಗೆ ತಲುಪದೇ ಹಿಂದಿರುಗುವದು, ಪ್ರಯಾಣಿಕರಿಗೆ ತೊಂದರೆ, ಅನಾನುಕೂಲಮಾಡುವದು, ಸಂಚಾರಿ ಆದಾಯ ಕಡಿಮೆಯಾಗಿ ಸಂಸ್ಥೆಗೆ ನಷ್ಟವನ್ನು ಉಂಟುಮಾಡುವದು ಇಂದಿಗೂ ಮುಂದುವರೆದಿದೆ. ಗೈರುಹಾಜರಿ ಸಿಬ್ಬಂದಿಯೇ ಸಂಸ್ಥೆಯ ನಷ್ಟಕ್ಕೆ ಕಾರಣವೆಂದರೆ ತಪ್ಪಾಗಲಾರದು. ಸಿಬ್ಬಂದಿ ಗೈರು, ಹಾಜರಿ ದುಷ್ಟ ಪರಿಣಾಮ ಪ್ರತಿ ದಿವಸ ಪ್ರತಿಯೊಂದು ಘಟಕಗಳಲ್ಲಿ, ನಡೆದಿರುವದು ಸರ್ಕಾರದ ಅಂಕಿ - ಅಂಶಗಳಿಂದ ಸುಸ್ಪಷ್ಟವಾಗಿದೆ. ಸರಕಾರ ಈ ದಿಶೆಯಲ್ಲಿ ಇನ್ನಾದರೂ ವೈಫಲ್ಯವನ್ನು ಅರಿತು ಸಾಫಲ್ಯದತ್ತ ದಾಪುಗಾಲು ಹಾಕಿದರೆ ಒಳ್ಳೆಯದು.

❑

ಸಂಪರ್ಕ ಸುಧಾರಣೆಗೆ - ಸರ್ಕಾರದ ಕ್ರಮಗಳು

ರಸ್ತೆಗಳು ರಾಜ್ಯದ ಜನತೆಯ ಸುರಕ್ಷಿತ ಹಾಗೂ ಸುವ್ಯವಸ್ಥಿತ ಸಂಚಾರಕ್ಕೆ ಉತ್ತಮ ಸಾಧನ. ಈ ರಸ್ತೆ ಸಾಧನ ಜನತೆಗೆ ತಾರಕವಾಗಬೇಕೇ ಹೊರತು ಮಾರಕವಾಗಬಾರದು. ರಸ್ತೆಯ ದುರಸ್ತಿ ಹಾಗೂ ನಿರ್ವಹಣೆಯನ್ನು ಪ್ರತಿವರ್ಷ ಸರ್ಕಾರ ಕಾರ್ಯಗತಮಾಡಿ ಜನತೆಯ ಪ್ರಯಾಣದ ಸಂಚಾರಕ್ಕೆ ಅನೂಕೂಲ ಮಾಡಿಕೊಡಬೇಕು. ಸ್ವಾತಂತ್ರ್ಯ ಸಿಕ್ಕು ಪ್ರಜಾರಾಜ್ಯ ಅಸ್ತಿತ್ವಕ್ಕೆ ಬಂದು ಅನೇಕ ದಶಕಗಳೇ ದಾಟಿದ್ದರೂ ರಾಜ್ಯಾದ್ಯಂತ ಪ್ರತಿ ಹಳ್ಳಿಯಿಂದ ಹಳ್ಳಿಗೆ ಇನ್ನೂ ರಸ್ತೆಗಳ ರಚನೆ, ದುರಸ್ತಿ ಹಾಗೂ ನಿರ್ವಹಣೆಯೇ ಸಂಪೂರ್ಣವಾಗಿಲ್ಲ. ಇದ್ದ ರಸ್ತೆಗಳ ದುರಸ್ತಿ ಹಾಗೂ ನಿರ್ವಹಣೆ ಸಮರ್ಪಕವಾಗಿ ಆಗಿಲ್ಲ. ಆಗುತ್ತಿಲ್ಲ. ಈ ಬಗ್ಗೆ ಸರ್ಕಾರ ಗಮನ ಹರಿಸದೇ ಇರುವದು ಸರಿಯಲ್ಲ, ಸಾಧುವೂ ಅಲ್ಲ. ರಸ್ತೆಗಳ ದುರಸ್ತಿ ಹಾಗೂ ನಿರ್ವಹಣೆಗೆ ಆಯವ್ಯಯದಲ್ಲಿ ಕಡಿಮೆ ಹಣ ನಿಗದಿ ಮಾಡುವದು, ಕಡಿಮೆ ಹಣ ಬಿಡುಗಡೆ ಮಾಡುವದು, ಕಡಿಮೆ ಹಣ ವೆಚ್ಚ ಮಾಡುವದು, ಪ್ರತಿ ವರ್ಷ ಮುಂದುವರೆದಿದೆ. ಇದಕ್ಕೆ ಕಾರಣ ಚುನಾಯಿತ ಪ್ರತಿನಿಧಿ ಮಂತ್ರಿಯಾದ ಮೇಲೆ ತನ್ನ ಜವಾಬ್ದಾರಿಯನ್ನರಿತು ತನ್ನ ಕರ್ತವ್ಯವನ್ನು ತಾವು ನಿರ್ವಹಿಸದೇ ಇರುವದು ಎಂದು ಹೇಳದೇ ಗತ್ಯಂತರವಿಲ್ಲ.

ರಾಜ್ಯದಲ್ಲಿ ರಾಜ್ಯ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ರಾಷ್ಟ್ರೀಯ ಹೆದ್ದಾರಿ 1997 ಕಿ.ಮೀ. ರಾಜ್ಯ ಹೆದ್ದಾರಿ 11288 ಕಿ.ಮೀ. ಮುಖ್ಯ ಜಿಲ್ಲಾ ರಸ್ತೆ 17997 ಕಿ.ಮೀ. ಹೀಗೆ ಒಟ್ಟು 29285 ಕಿ.ಮೀ. ಗಿಂತ ಹೆಚ್ಚು ರಸ್ತೆ ಬರುತ್ತದೆ. ಲೋಕೋಪಯೋಗಿ ಇಲಾಖೆ ತಮ್ಮ ವ್ಯಾಪ್ತಿಗೆ ತೆಗೆದುಕೊಳ್ಳಬೇಕಾದ ಹಾಗೂ ರಚನೆ, ದುರಸ್ತಿ, ನಿರ್ವಹಣೆ ಮಾಡಬೇಕಾದ ರಸ್ತೆ ಭಾರೀ ಪ್ರಮಾಣದಲ್ಲಿ ಇದೆ. ಲೋಕೋಪಯೋಗಿ ಇಲಾಖೆ 90-91 ರಲ್ಲಿ ರಾಷ್ಟ್ರೀಯ ಹೆದ್ದಾರಿಗೆ 8.83 ಕೋಟಿ ರೂ. ವೆಚ್ಚ, ರಾಜ್ಯ ಹೆದ್ದಾರಿ ಹಾಗೂ ಮುಖ್ಯ ಜಿಲ್ಲಾ ರಸ್ತೆಗಳಿಗೆ 48.82 ಕೋಟಿ ಮೊತ್ತ ವೆಚ್ಚ ಮಾಡಲಾಗಿದೆ. ಈ ಇಲಾಖೆಯ ವ್ಯಾಪ್ತಿಯಲ್ಲಿಯ ರಸ್ತೆಗಳಿಗೆ 92-93 ರಲ್ಲಿ 70.26 ಕೋಟಿ ರೂ. 93-94 ರಲ್ಲಿ 61.98 ಕೋಟಿ, 94-95 ರಲ್ಲಿ ಹನ್ನೊಂದು ತಿಂಗಳ ಅವಧಿಗೆ 43.49 ಕೋಟಿ, 12 ತಿಂಗಳಿಗೆ 52.57 ಕೋಟಿ ರೂ. ವೆಚ್ಚ ಮಾಡಿದ್ದು

95-96 ನೇ ಸಾಲಿಗೆ 49.33 ಕೋಟಿ ಅನುದಾನ ನಿಗದಿಗೊಳಿಸಲಾಗಿದೆ. ದುರಸ್ತಿ ಹಾಗೂ ನಿರ್ವಹಣೆಗೆ ಪ್ರತಿವರ್ಷ ಕಡಿಮೆ ವೆಚ್ಚ ಮಾಡುತ್ತಾ ಬಂದಿರುವದು ಮಣ್ಣಿನ ಮಕ್ಕಳ ದುರ್ದೈವ, ಲೋಕೋಪಯೋಗಿ ಇಲಾಖೆ ತಮ್ಮ ವ್ಯಾಪ್ತಿಯಲ್ಲಿಯ ರಸ್ತೆಗಳಿಗೆ 1-12-94 ರಿಂದ 31-3-95ರ ವರೆಗಿನ 4 ತಿಂಗಳ ಅವಧಿಯಲ್ಲಿ 25.07 ಕೋಟಿ ವೆಚ್ಚ, 1-4-95 ರಿಂದ 31-7-95ರ ವರೆಗಿನ 4 ತಿಂಗಳ ಅವಧಿಯಲ್ಲಿ ಸರ್ಕಾರ ಬಿಡುಗಡೆ ಮಾಡಿದ ಹಣ 17.74 ಕೋಟಿ, ವಾಸ್ತವಿಕ ವೆಚ್ಚ 13.141 ಕೋಟಿ, ಹೀಗೆ ಮಳೆಗಾಲವಲ್ಲದ ಬೇಸಿಗೆ ಕಾಲವಾದ 1-12-94 ರಿಂದ 31-7-95 (ಈ ವರ್ಷ ಜೂನ್-ಜುಲೈ ತಿಂಗಳಲ್ಲಿ ಮಳೆ ಬಾರದೇ ಬೇಸಿಗೆ ಕಾಲವಾಗಿ ಪರಿಣಮಿಸಿದೆ.) ರ ವರೆಗಿನ ಎಂಟು ತಿಂಗಳ ಅವಧಿಯಲ್ಲಿ ಕೇವಲ 38.48 ಕೋಟಿ ರೂ. ವೆಚ್ಚ ಮಾಡಲಾಗಿದ್ದು, ಲೋಕೋಪಯೋಗಿ ಇಲಾಖೆಯ ರಸ್ತೆಗಳ ಭಾರೀ ಪ್ರಮಾಣದಲ್ಲಿ ನಾದುರಸ್ತೆ ಇದ್ದು ಸುಖಕರ ಸಾರಿಗೆಗೆ ತೊಂದರೆಯಾದ ಬಗ್ಗೆ ಹಾಗೂ ಅನಾಹುತಗಳಾದ ಬಗ್ಗೆ ವಿವಿಧ ಪತ್ರಿಕೆಗಳಲ್ಲಿ ಸಾರ್ವಜನಿಕರ ಕುಂದುಕೊರತೆಗಳು ಮೂಡಿಬಂದಿದ್ದರೂ ಮಂತ್ರಿಗಳು ಹಾಗೂ ಅಧಿಕಾರಿಗಳು ರಸ್ತೆ ದುರಸ್ತಿಗಾಗಿ ಪ್ರತಿವರ್ಷ ಹೆಚ್ಚೆಚ್ಚು ಹಣವು ಆಯವ್ಯಯದಲ್ಲಿ ನಿಗದಿಗೊಳಿಸದೇ, ನಿಗದಿಗೊಳಿಸಿದ ಹಣವನ್ನು ಸಂಪೂರ್ಣವಾಗಿ ಬಿಡುಗಡೆ ಮಾಡದೆ, ಹಣವನ್ನು ಸಂಪೂರ್ಣವಾಗಿ ವೆಚ್ಚ ಮಾಡದೇ ಇರುವದನ್ನು ನೋಡಿದರೆ ಇವರಿಗೆ ಸಾಮಾಜಿಕ ಪ್ರಜ್ಞೆಯೇ ಇಲ್ಲವೆಂದು ಅನಿವಾರ್ಯವಾಗಿ ಹೇಳಬೇಕಾಗುತ್ತದೆ.

1-12-94 ರಿಂದ 31-3-95ರ ವರೆಗಿನ ನಾಲ್ಕು ತಿಂಗಳ ಅವಧಿಯಲ್ಲಿ ಈ ಲೋಕೋಪಯೋಗಿ ಇಲಾಖೆಯಲ್ಲಿ 2335 ಕಿ.ಮೀ. ರಸ್ತೆ ಇರುವ ಬಿಜಾಪುರ ಜಿಲ್ಲೆಯಲ್ಲಿ 1.66 ಕೋಟಿ 2162 ಕಿ.ಮೀ. ರಸ್ತೆ ಇರುವ ಬೆಳಗಾಂವ ಜಿಲ್ಲೆಯಲ್ಲಿ 1.40 ಕೋಟಿ 1790 ಕಿ.ಮೀ. ರಸ್ತೆ ಇರುವ ಧಾರವಾಡ ಜಿಲ್ಲೆಯಲ್ಲಿ 2.12 ಕೋಟಿ 1712 ಕಿ.ಮೀ. ರಸ್ತೆ ಗುಲ್ಬರ್ಗಾ ಜಿಲ್ಲೆಯಲ್ಲಿ 1.33 ಕೋಟಿ ರೂ. ಹೀಗೆ ವೆಚ್ಚ ಮಾಡಿದ್ದು ಹಾಸನ ಜಿಲ್ಲೆಯನ್ನೊಂದು ಬಿಟ್ಟು ಎಲ್ಲಾ ಜಿಲ್ಲಾಗಳಲ್ಲಿ ರಸ್ತೆಗಳ ದುರಸ್ತಿ ಹಾಗೂ ನಿರ್ವಹಣೆಗೆ ಅತೀ ಕಡಿಮೆ ಹಾಗೂ ಕನಿಷ್ಠ ಹಣವನ್ನು ವೆಚ್ಚ ಮಾಡಲಾಗಿದೆ. ಇದಕ್ಕೆ ವ್ಯತಿರಿಕ್ತವಾಗಿ - ಈ ನಾಲ್ಕು ತಿಂಗಳ ಅವಧಿಯಲ್ಲಿ ಚಿಕ್ಕ ಜಿಲ್ಲೆಯಾದರೂ ಅತೀ ಹೆಚ್ಚು 1741 ಕಿ.ಮೀ. ರಸ್ತೆಯಿರುವ ಹಾಸನ ಜಿಲ್ಲೆಯ ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಹೆಚ್ಚು 2.32 ಕೋಟಿ ಹಣವನ್ನು ವೆಚ್ಚ ಮಾಡಲಾಗಿದೆ. ಹಾಸನ ಜಿಲ್ಲೆಯಲ್ಲಿಯಂತೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಲೋಕೋಪಯೋಗಿ ರಸ್ತೆ ಹೆಚ್ಚಿಸಿದರೆ ಹಾಗೂ ದುರಸ್ತಿಗಾಗಿ ಹೆಚ್ಚು ಹಣ ವೆಚ್ಚ ಮಾಡಿದರೆ ರಾಜ್ಯದ ಎಲ್ಲರಿಗೂ ಸಂತೋಷ.

1-4-95 ರಿಂದ 31-7-95ರ ಅವಧಿಯ ಈ ನಾಲ್ಕು ತಿಂಗಳ ಅವಧಿಯಲ್ಲಿ ಶಿವಮೊಗ್ಗ ಜಿಲ್ಲೆಗೆ ಬಿಡುಗಡೆ ಮಾಡಿದ ಹಣ 1.58 ಕೋಟಿ, ವೆಚ್ಚ ಮಾಡಿದ ಹಣ

0.91 ಕೋಟಿ, ಚಿತ್ರದುರ್ಗ ಜಿಲ್ಲೆಗೆ ಬಿಡುಗಡೆ ಮಾಡಿದ ಹಣ 1.71 ಕೋಟಿ, ವೆಚ್ಚ ಮಾಡಿದ ಹಣ 0.50 ಕೋಟಿ. ಬೆಂಗಳೂರು ಜಿಲ್ಲೆಗೆ ಬಿಡುಗಡೆ ಮಾಡಿದ ಹಣ 2.06 ಕೋಟಿ ವೆಚ್ಚ ಮಾಡಿದ ಹಣ 0.78 ಕೋಟಿ. ಮಂಗಳೂರು ಜಿಲ್ಲೆಗೆ ಬಿಡುಗಡೆ ಮಾಡಿದ ಹಣ 1.24 ಕೋಟಿ, ವೆಚ್ಚ ಮಾಡಿದ ಹಣ 0.14 ಕೋಟಿ. ಮಂಡ್ಯ ಜಿಲ್ಲೆಗೆ ಬಿಡುಗಡೆ ಮಾಡಿದ ಹಣ 1.46 ಕೋಟಿ, ವೆಚ್ಚ ಮಾಡಿದ ಹಣ 0.33 ಕೋಟಿ. ಮೈಸೂರು ಜಿಲ್ಲೆಗೆ ಬಿಡುಗಡೆ ಮಾಡಿದ ಹಣ 1.96 ಕೋಟಿ, ವೆಚ್ಚ ಮಾಡಿದ ಹಣ 0.80 ಕೋಟಿ, ತುಮಕೂರು ಜಿಲ್ಲೆಗೆ ಬಿಡುಗಡೆ ಮಾಡಿದ ಹಣ 1.33 ಕೋಟಿ, ವೆಚ್ಚ ಮಾಡಿದ ಹಣ 0.36 ಕೋಟಿ. ಈ ಜಿಲ್ಲೆಗಳಿಗೆ ಹಣ ಬಿಡುಗಡೆ ಮಾಡಿದ್ದರೂ ವೆಚ್ಚ ಅತೀ ಕಡಿಮೆಯಾಗಿ ರಸ್ತೆಗಳು ದುರಂತಕ್ಕೆ ದಾರಿಯಾಗಿವೆ. ಇದಕ್ಕೆ ವ್ಯತಿರಿಕ್ತವಾಗಿ ಹಾಸನ ಜಿಲ್ಲೆಗೆ ಬಿಡುಗಡೆ ಮಾಡಿರುವ ಹಣ 1.14 ಕೋಟಿ, ವೆಚ್ಚ ಮಾಡಿದ ಹಣ 1.14 ಕೋಟಿ. ಅತೀ ಹೆಚ್ಚು 2335 ಕಿ.ಮೀ. ರಸ್ತೆ ಇರುವ ಬಿಜಾಪುರ ಜಿಲ್ಲೆಗೆ 0.52 ಕೋಟಿ, 2162 ಕಿ.ಮೀ. ರಸ್ತೆ ಇರುವ ಬೆಳಗಾಂವ ಜಿಲ್ಲೆಗೆ 0.67 ಕೋಟಿ, 1790 ಕಿ.ಮೀ. ರಸ್ತೆ ಇರುವ ಧಾರವಾಡ ಜಿಲ್ಲೆಗೆ 0.70 ಕೋಟಿ ಮೊತ್ತವನ್ನು ಮಾಡಿರುವದು ಸಮರ್ಥನೀಯವಲ್ಲ. ಲೋಕೋಪಯೋಗಿ ಇಲಾಖೆ ವ್ಯಾಪ್ತಿಗೆ ಪ್ರತಿ ಜಿಲ್ಲೆಗಳಲ್ಲಿ ಸಮಂಜಸ ಹಾಗೂ ಹೆಚ್ಚಿಗೆ ರಸ್ತೆ ಸೇರಿಸಿಕೊಳ್ಳುವಲ್ಲಿ, ವ್ಯಾಪ್ತಿಗೆ ಬಂದಿರುವ ರಸ್ತೆಗಳ ದುರಸ್ತಿ ನಿರ್ವಹಣೆಗೆ ಹಣ ನಿಗದಿ ಪಡಿಸುವಲ್ಲಿ, ಹಣ ಬಿಡುಗಡೆ ಮಾಡುವಲ್ಲಿ, ಹಣ ವೆಚ್ಚ ಮಾಡುವಲ್ಲಿ ಪಕ್ಷಪಾತ, ಸ್ವಜನ ಪಕ್ಷಪಾತ, ಅಲಕ್ಷ್ಯ, ನಿರ್ಲಕ್ಷ್ಯ, ಅಸಮರ್ಥತೆ, ಅಯೋಗ್ಯತೆ, ದುರಾಡಳಿತ ಸುಸ್ಪಷ್ಟವಾಗಿರವದು ಮೇಲಿನ ಸರಕಾರಿ ಅಧಿಕೃತ ಅಂಕಿಸಂಖ್ಯೆಗಳಿಂದ ಸುಸ್ಪಷ್ಟವಾಗಿದೆ. ಇದರಲ್ಲಿ ಯಾರದೇ ಕೈವಾಡವಿರಲಿ ಅದು ಇನ್ನು ಮುಂದೆ ನಿಲ್ಲಲೇಬೇಕು. ಈ ರಾಜ್ಯದ ಮಂತ್ರಿಗಳು, ಶಾಸಕರು ಹಾಗೂ ಸರಕಾರವು ಈ ಲೋಕೋಪಯೋಗಿ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ದರ್ಜೆಯ 9472 ಕ್ಕಿಂತ ಹೆಚ್ಚಿಗೆ ಇರುವ ಇಂಜನೀಯರರನ್ನು ಸಾಕಲು ಮಾತ್ರ ಇಲ್ಲ. ಲೋಕೋಪಯೋಗಿ ರಾಷ್ಟ್ರೀಯ ಹೆದ್ದಾರಿ, ಸಂಪರ್ಕ ಮತ್ತು ಕಟ್ಟಡ, ಇಲಾಖೆಯ ಮುಖ್ಯ ಇಂಜನೀಯರರ ಅಧೀನ ಸಿಬ್ಬಂದಿ ವೆಚ್ಚ 92-93 ರಲ್ಲಿ 47.86 ಕೋಟಿ, 93-94 ರಲ್ಲಿ 57.11 ಕೋಟಿ, 94-95ರಲ್ಲಿ 67.76 ಕೋಟಿ ಹೀಗೆ ಏರುತ್ತಲೇ ಇದೆ. ಈ ಇಲಾಖೆಯ ಮಹದುದ್ದೇಶ ರಾಜ್ಯಾದ್ಯಂತ ಸುರಕ್ಷಿತ ಹಾಗೂ ಸುರಳೀತವಾದ ಸಂಪರ್ಕಸಾಧನೆಯನ್ನು ಅಧಿಕಾರಿಗಳ ಮುಖಾಂತರ ಜನತೆಗೆ ಒದಗಿಸುವದು ಮಹತ್ವವೆಂಬುದನ್ನು ಸರಕಾರ ಮನಗಾಣಬೇಕು.

❑

ಅದಕ್ಷ ಅಧಿಕಾರಿಗಳ ಮೇಲೆ ಜಿಲ್ಲಾ ಪಂಚಾಯತಿ ಕ್ರಮ

ರಾಜ್ಯಾದ್ಯಂತ ಮಹಾತ್ಮಾ ಗಾಂಧೀಜಿಯವರ "ಗ್ರಾಮ ರಾಜ್ಯ ರಾಮರಾಜ್ಯ"ದ ಕನಸನ್ನು ನನಸಾಗಿ ಮಾಡಲು ಕೇಂದ್ರ ಹಾಗೂ ರಾಜ್ಯ ಸರಕಾಗಳು ಆಸಕ್ತಿ ವಹಿಸಿ ಆದರ್ಶ ಪಂಚಾಯತಿ ಅಧಿನಿಯಮಗಳನ್ನು ಜಾರಿಯಲ್ಲಿ ತಂದಿವೆ ಹಾಗೂ ಸಾಕಷ್ಟು ಹಣವನ್ನು ಗ್ರಾಮಾಂತರ ಹಾಗೂ ಗ್ರಾಮಾಂತರ ಬಡಜನರ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರ, ಹಿಂದುಳಿದ ವರ್ಗದವರ, ಮಹಿಳೆ ಮತ್ತು ಮಕ್ಕಳ ಕಲ್ಯಾಣ, ವಸತಿ ಯೋಜನೆ, ರೋಜಗಾರ ಯೋಜನೆ, ವಿಶೇಷ ಘಟಕ, ಕೃಷಿ, ಚಿಕ್ಕ ನೀರಾವರಿ, ಸಮಗ್ರ ಗ್ರಾಮೀಣ, ಸಹಕಾರ, ಹೈನಾಭಿವೃದ್ಧಿ ಶಿಕ್ಷಣ, ಸಣ್ಣ ಪ್ರಮಾಣದ ಕೈಗಾರಿಕೆ ಇತ್ಯಾದಿ ಅನೇಕ ಯೋಜನೆಗಳಿಗೆ ಆಯವ್ಯಯದಲ್ಲಿ ಹಣವನ್ನು ನಿಗದಿಗೊಳಿಸಿ ವೆಚ್ಚ ಮಾಡಲು ಪಂಚಾಯತಿಗಳಿಗೆ ಪ್ರೋತ್ಸಾಹ ನೀಡಿ ದೇಶಾದ್ಯಂತ ಮುಂದಾಗಿವೆ. ಕೆಲವು ರಾಜ್ಯಗಳಲ್ಲಿ ಈ ಪಂಚಾಯತ್ ರಾಜ್ಯ ಯೋಜನೆ ಬಹುಪಾಲು ಯಶಸ್ವಿಯಾಗುತ್ತಲಿದೆ.

ಕರ್ನಾಟಕ ರಾಜ್ಯದಲ್ಲಿ ಕೂಡ ಮೂರು ಹಂತದ ಪಂಚಾಯತಿಗಳುಳ್ಳ ಪಂಚಾಯತ ರಾಜ್ ಅಧಿನಿಯಮ ಜಾರಿಯಲ್ಲಿದೆ. ಗ್ರಾಮ ಮಟ್ಟದ, ತಾಲ್ಲೂಕ ಮಟ್ಟದ ಹಾಗೂ ಜಿಲ್ಲಾ ಮಟ್ಟದ ಪಂಚಾಯತಿಗಳು ರಾಜ್ಯಾದ್ಯಂತ ಅಸ್ತಿತ್ವದಲ್ಲಿ ಬಂದಿವೆ. ಜಿಲ್ಲಾ ಪರಿಷತ್ತಿನ ಬದಲಾಗಿ ಜಿಲ್ಲಾ ಪಂಚಾಯತಿಗಳು ಕಾರ್ಯ ಮಾಡುತ್ತಿವೆ. ರಾಜ್ಯದಲ್ಲಿಯ ಹಿಂದಿನ ಬಹುತೇಕ ಜಿಲ್ಲಾ ಪರಿಷತ್ತುಗಳು ಪರಿಣಾಮಕಾರಿಯಾಗಿ ಯೋಜನೆಗಳನ್ನು ಯಶಸ್ವಿಯಾಗಿ ಅನುಷ್ಠಾನ ಮಾಡದ ಹಾದಿಯಲ್ಲಿಯೇ ಜಿಲ್ಲಾ ಪಂಚಾಯತಿಗಳು ಹೊರಟಿರುವದು ಸಾಧುವಲ್ಲ. 1991-92, 92-93, 93-94, 94-95 ಈ ನಾಲ್ಕು ವರ್ಷಗಳ ಅವಧಿಯಲ್ಲಿ ಜಿಲ್ಲಾ ಪರಿಷತ್ತು / ಪಂಚಾಯತಿಗಳಿಗೆ ಸರಕಾರ ಆಯವ್ಯಯದಲ್ಲಿ 3039.75 ಕೋಟಿ ಯೋಜನಾ ಮೊತ್ತವನ್ನು ನಿಗದಿಗೊಳಿಸಿದ್ದರೂ ಅದರಲ್ಲಿ 2928.23 ಕೋಟಿ ರೂ. ಮೊತ್ತವನ್ನು ಮಾತ್ರ ವೆಚ್ಚ ಮಾಡಿ 111.51 ಕೋಟಿ ಹಣವನ್ನು ವೆಚ್ಚ ಮಾಡದೆ ರಾಜ್ಯಾದ್ಯಂತ ಅಭಿವೃದ್ಧಿಯನ್ನು ಕುಂಠಿತಗೊಳಿಸಲಾಗಿದೆ. ಇದಕ್ಕೆ ಅಧಕ್ಷ, ಅಸಮರ್ಥ

ಹಾಗೂ ಹೊಣೆಗೇಡಿ ಅಧಿಕಾರಿಗಳೇ ಕಾರಣವೆಂದು ಅನಿವಾರ್ಯವಾಗಿ ಹೇಳದೆ ಗತ್ಯಂತರವಿಲ್ಲ. ಪ್ರತಿವರ್ಷ ವಿವಿಧ ಯೋಜನೆಗಳ ಯಶಸ್ವಿ ಅನುಷ್ಠಾನಕ್ಕಾಗಿ ಸರಕಾರ ಜಿಲ್ಲಾ ಪಂಚಾಯತಿಗಳಿಗೆ ಹಣ ನೀಡುತ್ತಿದ್ದರೂ ಈ ಹಣವನ್ನು ವೆಚ್ಚ ಮಾಡಿ ಜಿಲ್ಲಾದ್ಯಂತ ಸರ್ವಾಂಗೀಣ ಅಭಿವೃದ್ಧಿ ಸಾಧಿಸಲು ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯತಿ, ಜಿಲ್ಲಾ ಪಂಚಾಯಿತಿ ಸದಸ್ಯರು, ವಿಧಾನ ಸಭೆ, ವಿಧಾನ ಪರಿಷತ್ ಸದಸ್ಯರು, ಲೋಕಸಭೆ, ರಾಜ್ಯ ಸಭೆ ಸದಸ್ಯರು ಅನುಷ್ಠಾನ ಮಾಡುವ ಅಧಿಕಾರಿಗಳಿಗೆ ಸಲಹೆ, ಸೂಚನೆ, ಆದೇಶ ನಿರ್ದೇಶನಗಳನ್ನು ಸಾರ್ವಜನಿಕ ದೃಷ್ಟಿಯಿಂದ ಕೊಡುತ್ತಿದ್ದರೂ ಅವುಗಳನ್ನು ಕಡೆಗಣಿಸಿ ಅಭಿವೃದ್ಧಿ ಕಾರ್ಯಗಳನ್ನು ಕುಂಠಿತಗೊಳಿಸಿ, ವಿಫಲಗೊಳಿಸಿ ನಿಗದಿತ ಹಣವನ್ನು ಸಂಪೂರ್ಣವಾಗಿ ವೆಚ್ಚ ಮಾಡದೆ ಈ ಅಧಿಕಾರಿಗಳು ತಮ್ಮ ಕರ್ತವ್ಯಚ್ಯುತಿ ಹಾಗೂ ಅಸಮರ್ಥತೆಯನ್ನು ಪ್ರದರ್ಶಿಸಿ ಪ್ರಜಾಭಿವೃದ್ಧಿಗೆ ಮಾರಕವಾಗಿರುವ ದೃಷ್ಟಾಂತ ರಾಜ್ಯಾದ್ಯಂತ ಇವೆ. ಇಂಥಹ ಅಸಮರ್ಥ ಆರೋಗ್ಯ ಹೊಣೆಗೇಡಿ ಅನುಷ್ಠಾನ ಅಧಿಕಾರಿಗಳ ಮೇಲೆ ಕಟ್ಟುನಿಟ್ಟಾದ ಶಿಸ್ತಿನ ಕ್ರಮವನ್ನು ತೆಗೆದುಕೊಂಡು ಅವರನ್ನು ಶಿಕ್ಷಿಸದೆ ಹೋದರೆ ಗ್ರಾಮೀಣ ಅಭಿವೃದ್ಧಿ ಕನಸು ನನಸಾಗಲಿಕ್ಕೆ ಸಾಧ್ಯವೇ ಇಲ್ಲ. ಜಿಲ್ಲಾ ಪಂಚಾಯತಿ , ತಾಲ್ಲೂಕು ಪಂಚಾಯತ್, ಗ್ರಾಮ ಪಂಚಾಯತಿಗಳು ಜನತೆಯ ಹಾಗೂ ಜನತೆಯ ಪ್ರಜಾ ಪಂಚಾಯಿತಿಗಳಾಗಬೇಕೇ ಹೊರತು ಸರ್ಕಾರಿ ಅಧಿಕಾರಿಗಳ ಆರ್ಥಿಕ ಅನುಕೂಲದ ಹಾಗೂ ತಂಗುದಾಣದ ಪಂಚಾಯತಿಗಳಾಗಬಾರದು. ಈ ದಿಶೆಯಲ್ಲಿ ಪ್ರಜಾಪ್ರತಿನಿಧಿಗಳು ಕರ್ತವ್ಯಲೋಪಕ್ಕೆ ಗುರಿಯಾದ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಂಡು ಪಂಚಾಯತಿಗಳ ಕಾರ್ಯ ಯಶಸ್ವಿಯಾಗುವಂತೆ ನಿಗಾ ವಹಿಸುವದು ಅಗತ್ಯ. ರಾಜ್ಯದ ಎಲ್ಲಾ ಪಂಚಾಯತಿಗಳ ಉದಾಹರಣೆಯನ್ನು ಕೊಡದೆ ಧಾರವಾಡ ಜಿಲ್ಲಾ ಪಂಚಾಯತಿಯ ಉದಾಹರಣೆಯ ಸ್ಯಾಂಪಲ್ ಹೇಳುವದಾದರೆ, ಜಿಲ್ಲೆಯಲ್ಲಿಯ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ, ವಯಸ್ಕರ ಶಿಕ್ಷಣ, ವೈದ್ಯಕೀಯ ಜನಾರೋಗ್ಯ, ಕುಟುಂಬ ಕಲ್ಯಾಣ, ಕುಡಿಯುವ ನೀರು ಪೂರೈಕೆ, ಹರಿಜರ - ಗಿರಿಜನ ಸಮಾಜ ಕಲ್ಯಾಣ, ವಿಶೇಷ ಘಟಕ ಯೋಜನೆ, ಹಿಂದುಳಿದ ವರ್ಗದ ಕಲ್ಯಾಣ, ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ, ವ್ಯವಸಾಯ, ತೋಟಗಾರಿಕೆ, ಮೀನುಗಾರಿಕೆ, ಸಹಕಾರ, ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ, ಜವಾಹರ ರೋಜಗಾರ ಯೋಜನೆ ಸಣ್ಣ ನೀರಾವರಿ ರಸ್ತೆ ಸುಧಾರಣೆ, ಗ್ರಾಮೋದ್ಯೋಗ ಉದ್ಯಮ, ವಿಶೇಷ ಘಟಕ, ಸಮಗ್ರ ಗ್ರಾಮೀಣ ಅಭಿವೃದ್ಧಿ ಇತ್ಯಾದಿ ಸುಮಾರು 30 ಕ್ಕಿಂತ ಹೆಚ್ಚು ಅಭಿವೃದ್ಧಿ ಯೋಜನೆಗಳ ಅನುಷ್ಠಾನ ಸಲುವಾಗಿ ಸರಕಾರದವರು ನಿಗದಿಗೊಳಿಸಿದ ಯೋಜನಾ ಮೊತ್ತವನ್ನು ಸಂಪೂರ್ಣವಾಗಿ ವೆಚ್ಚ ಮಾಡದೆ 92-93ರಲ್ಲಿ 11.69 ಕೋಟಿ, 93-94ರಲ್ಲಿ 35.52 ಕೋಟಿ 94-95 ರಲ್ಲಿ 18.22 ಕೋಟಿ ರೂ. ಮೊತ್ತವನ್ನು ವೆಚ್ಚ ಮಾಡದೆ ಅನುಷ್ಠಾನ ಅಧಿಕಾರಿಗಳು ಯೋಜನೆಗಳನ್ನು ವಿಫಲಗೊಳಿಸಿ ಜನತೆಗೆ ಸಿಗತಕ್ಕ ಸೌಲಭ್ಯಗಳನ್ನು ಸಿಗದಂತೆ ಮಾಡಿದ್ದಾರೆ. 1995-96ರಲ್ಲಿ ಧಾರವಾಡ ಜಿಲ್ಲೆಗೆ 79.96 ಕೋಟಿ ಯೋಜನಾ ಮೊತ್ತವನ್ನು

ನಿಗದಿಗೊಳಿಸಿದ್ದಾರೆ. ಜಿಲ್ಲಾ ಪಂಚಾಯತಿ ಅಧಿಕಾರಿಗಳ ಪ್ರಕಾರ ಈ ಜಿಲ್ಲೆಗೆ ನಿಗದಿಗೊಳಿಸಿದ ಯೋಜನಾ ಮೊತ್ತ 61.20 ಕೋಟಿ ಮಾತ್ರ. 31-12-95ಕ್ಕೆ 95-96ನೇ ವರ್ಷದ ಒಂಬತ್ತು ತಿಂಗಳುಗಳು ಗತಿಸಿವೆ. ಈ ಅವಧಿಯಲ್ಲಿ ಶೇಕಡಾ 75ರಷ್ಟು ಅಂದರೆ 46.15 ಕೋಟಿ ರೂ. ಮೊತ್ತವನ್ನು ವೆಚ್ಚ ಮಾಡಲೇಬೇಕಾಗಿತ್ತು. ಆದರೆ ವಾಸ್ತವಿಕವಾಗಿ ವೆಚ್ಚ ಮಾಡಿರುವದು ಕೇವಲ 28.98 ಕೋಟಿ ಮಾತ್ರ ಅಂದರೆ ಕೇವಲ ಶೇಕಡಾ 47.35 ಮಾತ್ರ ಹಿಂದುಳಿದ ಜನಾಂಗದ ಅಭಿವೃದ್ಧಿಗೆ ಮೀಸಲಾದ ವಿಶೇಷ ಘಟಕ ಯೋಜನೆಯಲ್ಲಿ ಶೇಕಡಾ 22ರಷ್ಟು ವ್ಯವಸಾಯಗಾರರ ಅಭಿವೃದ್ಧಿಗೆ ಮೀಸಲಾದ ವ್ಯವಸಾಯ ಕಾರ್ಯಕ್ರಮಗಳಿಗೆ ಸಹ ಶೇಕಡಾ 15ರಷ್ಟು ಮೊತ್ತ 1995-96ರ ಪೂರ್ತಿಗೊಂಡ ಒಂಬತ್ತು ತಿಂಗಳ ಅವಧಿಯಲ್ಲಿ ವೆಚ್ಚವಾಗಿರುವದನ್ನು ನೋಡಿದರೆ ಅನುಷ್ಠಾನ ಅಧಿಕಾರಿಗಳು, ಗ್ರಾಮಾಂತರ ಅಭಿವೃದ್ಧಿ ಬಗ್ಗೆ ಎಷ್ಟೊಂದು ನಿರುತ್ಸಾಹ ತೋರಿಸುತ್ತಾರೆಂಬುದು ಸ್ಪಷ್ಟವಾಗಿದೆ. ಇದೆ ರೀತಿ ತಾಲ್ಲೂಕು ಪಂಚಾಯತಿ, ಗ್ರಾಮ ಪಂಚಾಯತಿ ಕಾರ್ಯಗಳು ಸಹಿತ ಕುಂಟುತ್ತ ಕುಂಠಿತಗೊಂಡಿವೆ. ಈ ದಿಶೆಯಲ್ಲಿ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ, ಜಿಲ್ಲಾ ಪಂಚಾಯತಿ ಸದಸ್ಯರು, ಶಾಸಕರು, ಸಂಸದರು ಎಲ್ಲರೂ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ, ಜಿಲ್ಲಾ ಪಂಚಾಯತಿಗೆ 95-96ರ ನಿಗದಿ ಮೊತ್ತವೆಷ್ಟು ಹಾಗೂ ಪ್ರತಿ ತಿಂಗಳು ನಿಗದಿತ ಗುರಿ ಹಾಗೂ ಆ ಗುರಿಗೆ ಮೊತ್ತವೆಷ್ಟು ಹಾಗೂ ಖರ್ಚಾದ ವಾಸ್ತವಿಕವಾದ ಮೊತ್ತವೆಷ್ಟು ಎಂಬುದನ್ನು ಗಮನಿಸಿ 1995-96ರಲ್ಲಿ ಜಿಲ್ಲೆಗೆ ನಿಗದಿತ ಮೊತ್ತದಲ್ಲಿ ಯಾವುದೇ ಪಂಚಾಯತಿಗಳಲ್ಲಿ 31-3-96ಕ್ಕೆ ಹಣದ ಶಿಲ್ಕು ಹಿಂದಿನ ವರ್ಷಗಳಲ್ಲಿ ಉಳಿದಂತೆ, ಉಳಿಯದಂತೆ ಸಂಪೂರ್ಣವಾಗಿ ವೆಚ್ಚ ಮಾಡಲು ಅಧಿಕಾರಿಗಳಿಗೆ ಕಟ್ಟು ನಿಟ್ಟಾದ ಆದೇಶ ಕೊಟ್ಟು ಜಿಲ್ಲಾಭಿವೃದ್ಧಿ ಗುರಿ ಸಾಧಿಸಬೇಕು. ಗುರಿಸಾಧಿಸದೆ ಅಸಮರ್ಥ ಅದಕ್ಷ ಅಧಿಕಾರಿಗಳ ಮೇಲೆ ನಿರ್ದಾಕ್ಷಿಣ್ಯವಾಗಿ ಶಿಸ್ತಿನ ಕ್ರಮತೆಗೆದುಕೊಳ್ಳುವುದು ಸಾರ್ವಜನಿಕ ಹಿತದೃಷ್ಟಿಯಿಂದ ಹಾಗೂ ಜಿಲ್ಲೆಯ ಹಿತದೃಷ್ಟಿಯಿಂದ ತಾರಕವಾಗಬಲ್ಲುದು.

❑

ಪಾನನಿಷೇಧ ಮತ್ತು ಪಾನಪ್ರೋತ್ಸಾಹ

ಪಾನನಿಷೇಧ ಮಹಾತ್ಮಾಗಾಂಧೀಜಿಯವರ ಹಾಗೂ ಸ್ವಾತಂತ್ರ್ಯ ಪೂರ್ವ ಕಾಂಗ್ರೆಸ್ಸಿನ ಧ್ಯೇಯ ಧೋರಣೆಯಾಗಿದ್ದರೂ ಸ್ವಾತಂತ್ರ್ಯಾನಂತರ ಅಸ್ತಿತ್ವದಲ್ಲಿ ಬಂದ ಕಾಂಗ್ರೆಸ್ ಸರ್ಕಾರಗಳೇ ರಾಜ್ಯದಲ್ಲಿಯ ಪಾನನಿಷೇಧವನ್ನು ತೆಗೆದು ಗಾಂಧೀಜಿ ಹಾಗೂ ಕಾಂಗ್ರೆಸ್ಸಿನ ತತ್ವಕ್ಕೆ ತಿಲಾಂಜಲಿಯನ್ನಿತ್ತು ರಾಜ್ಯಾದ್ಯಂತ ಪಾನ ಪ್ರೋತ್ಸಾಹಕ್ಕೆ ವಿವಿಧ ರೀತಿಯ ಸಹಾಯ ಸವಲತ್ತುಗಳನ್ನು ನೀಡಿ ಪಾನ ಪ್ರೋತ್ಸಾಹದ ಅಬಕಾರಿ ಇಲಾಖೆ ರಾಜ್ಯ ಸರ್ಕಾರದ ಎರಡನೇ ಮಹಾ ಆದಾಯದ ಮೂಲವಾಗಿ ಪ್ರತಿವರ್ಷ ಪಾನಸೇವನೆ ಹಾಗೂ ಪಾನ ಉತ್ಪಾದನಾ ಕಾರ್ಖಾನೆಗಳು ಹೆಚ್ಚುತ್ತಲೇ ಇವೆ. ಅಬಕಾರಿ ಇಲಾಖೆ ಸರ್ಕಾರದ ಭಾರೀ ಆದಾಯ ಸಂಪನ್ಮೂಲ ಖಣಿ ಆಗಿದೆ. ಕಾಕಂಬಿಯನ್ನು ಉತ್ಪಾದಿಸುವ ಸಕ್ಕರೆ ಕಾರ್ಖಾನೆಗಳು ಸರಾಯಿ ಕಾರ್ಖಾನೆಗಳಿಗೆ ಪೂರಕವಾಗಿವೆ. ಮದ್ಯಸಾರ ಹಾಗೂ ಮದ್ಯಪಾನೀಯಗಳಾದ ವಿಸ್ಕಿ, ಬ್ರಾಂಡಿ, ರಮ್, ಜಿನ್, ಫೆನ್ನಿ ಇತ್ಯಾದಿ ಉತ್ಪಾದಿಸುವ ಕಾರ್ಖಾನೆಗಳ ಸಂಖ್ಯೆ ಭಾರೀ ಏರಿದೆ. ಅಲ್ಲದೇ ಇನ್ನೂ ಅನೇಕ ಕಾರ್ಖಾನೆಗಳಿಗೆ ಮದ್ಯಸಾರ, ಮದ್ಯೆ ಪೆನ್ನಿ ಉತ್ಪಾದಿಸಲು ಸರ್ಕಾರ ಪರವಾನಗಿ ಕೊಟ್ಟಿದೆ. ಈ ವಿವಿಧ ಪಾನೀಯ ಕಾರ್ಖಾನೆಗಳಿಂದ ಉತ್ಪಾದಿತವಾದಂತ ಮಾಲು ರಾಜ್ಯದಲ್ಲಿ ಸಾಕಷ್ಟು ವಿತರಣೆಯಾಗಿ ಹೊರರಾಜ್ಯಗಳಿಗೂ ಹೋಗುತ್ತದೆ. ಮದ್ಯ ತಯಾರಿಕೆಗೆ ಬೇಕಾಗುವ ಕಚ್ಚಾ ವಸ್ತುಗಳಾದ ತೆಂಗಿನ ಶೇಂದಿ, ಗೇರುಹಣ್ಣು, ಅನಾನಸ್, ಮರಗೆಣಸು, ಸಹಿಗೆಣಸು, ದ್ರಾಕ್ಷಾರಸ ಇತ್ಯಾದಿ ಅಧಿಕೃತ ವಸ್ತುಗಳು ಕೂಡ ಸಾಕಷ್ಟು ಪ್ರಮಾಣದಲ್ಲಿ ದೊರೆಯುತ್ತಿದ್ದು ಈ ಎಲ್ಲಾ ವಸ್ತುಗಳಿಂದ ಮಧ್ಯ ತಯಾರಿಸಲು ಕಾರ್ಖಾನೆಗಳ ಸಂಖ್ಯೆ ದಿನೇ ದಿನೇ ಬೆಳೆಯುತ್ತಲೇ ಇದೆ. ಹಾಗೂ ಈ ಕಾರ್ಖಾನೆಗಳಿಗೆ ಮದ್ಯ ತಯಾರಕರು ತೊಡಗಿಸಿದ ಬಂಡವಾಳ ಕೂಡ ಭಾರೀ ಪ್ರಮಾಣದ ಕೋಟ್ಯಂತರ ಹಣವಿದೆ. ಲಕ್ಷಾಂತರ ಜನರು ಈ ಮದ್ಯ ಉದ್ಯಮದಲ್ಲಿ ತೊಡಗಿದ್ದಾರೆ,. ಈ ಉದ್ಯಮದಿಂದ ಕಾಕುಂಬಿ ಉತ್ಪಾದಿಸುವ ಸಕ್ಕರೆ ಕಾರ್ಖಾನೆ, ಮದ್ಯ ಉತ್ಪಾದಿಸುವ ಉದ್ಯಮಿಗಳು, ಈ ಉದ್ಯಮಗಳಲ್ಲಿ ತೊಡಗಿರುವ ಕಾರ್ಮಿಕರು, ಮದ್ಯೋದ್ಯಮ ಕಾರ್ಖಾನೆಗಳು ಹಾಗೂ ರಾಜ್ಯ ಸರ್ಕಾರ ಭಾರೀ ಪ್ರಮಾಣದಲ್ಲಿ ಸಂಪತ್ ಸುಖಿಗಳಾಗಿದ್ದಾರೆ. ಈ ಮಧ್ಯದ ಬೇರೆ ಬೇರೆ ಸರ್ಕಾರಿ

ಸಾರ್ವಜನಿಕ ಹಾಗೂ ಖಾಸಗೀ ಉದ್ಯಮಗಳಂತೆ ಕುಂಟದೆ ದಿವಾಳಿಯಾಗದೆ ಲಾಭದಾಯಕವಾಗಿ ಮುಂದುವರೆದಿದೆ. ಈ ಅಬಕಾರಿ ಇಲಾಖೆಯಲ್ಲಿ ಸುಮಾರು 4600 ಕ್ಕಿಂತ ಹೆಚ್ಚು ಎ.ಬಿ.ಸಿ.ಡಿ. ವರ್ಗದ ನೌಕರರಿದ್ದಾರೆ. ರಾಜ್ಯದಲ್ಲಿ ಗ್ರಾಮಾಂತರ ಕಳ್ಳಬಟ್ಟಿ ಸರಾಯಿ ಭಾರೀ ಪ್ರಮಾಣದಲ್ಲಿದ್ದರೂ ಈ ಭಟ್ಟಿ ಸರಾಯಿ ತಯಾರಿಕೆಗೆ ಅಧಿಕೃತ ಸರಾಯಿ ಗುತ್ತೆದಾರರು ಅವರಿಗೆ ಪ್ರತಿ ತಿಂಗಳು ಲಕ್ಷಾಂತರ ಮೊತ್ತದ ಮಾಮೂಲಿ ಕೊಟ್ಟು ಭಟ್ಟಿ ಸರಾಯಿ ಮಾಡದಂತೆ ಹಾಗೂ ಕುಡಿಯದಂತೆ ಮನವೊಲಿಸಿ ಗ್ರಾಮಾಂತರ ಪ್ರದೇಶದಲ್ಲಿ ಸಹಸ್ರಾರು ಅಧಿಕೃತ ಹಾಗೂ ಅನಧಿಕೃತ ಲೈಸೆನ್ಸ್ ಅಂಗಡಿಗಳಿದ್ದರೂ ಗ್ರಾಮಾಂತರ ಪ್ರದೇಶದಲ್ಲಿ ಕಳ್ಳಬಟ್ಟಿ ಸರಾಯಿ ತಯಾರಿಕೆ ಹಾಗೂ ಕುಡಿಯುವಿಕೆ ನಿರಾತಂಕವಾಗಿ ನಡೆದು ಸಾಮಾಜಿಕ ಪೀಡೆಗಳಿಗೆ ಹೆದ್ದಾರಿ ಮಾಡಿಕೊಡಲಾಗಿದೆ.'

ರಾಜ್ಯ ಸರ್ಕಾರಕ್ಕೆ ಪ್ರತಿವರ್ಷ ಆದಾಯ ತರಬಲ್ಲ ಅನೇಕ ಸಂಪನ್ಮೂಲಗಳಲ್ಲಿ ಅಬಕಾರಿ ಇಲಾಖೆ ಮಾರಾಟ ಕರದ ಸಂಪನ್ಮೂಲದ ನಂತರ ಎರಡನೇ ಮಹಾ ಸಂಪನ್ಮೂಲದ ಮಹಾಸಾಗರ. ಅಬಕಾರಿ ಉದ್ಯಮ ಪ್ರತಿವರ್ಷ ಅಭಿವೃದ್ಧಿ ಹಾಗೂ ಲಾಭದಾಯಕವಾಗಿ ಬೆಳೆಯುವಂತೆ ಸರ್ಕಾರಕ್ಕೆ ಅಬಕಾರಿ ಆದಾಯ ಸಹಿತ ಪ್ರತಿವರ್ಷ ಹೆಚ್ಚುತ್ತಲೇ ಇದೆ. ಸರ್ಕಾರಕ್ಕೆ ಭಾರಿ ಪ್ರಮಾಣದ ಆದಾಯ ಪಡೆವ ಮಹದುದ್ದೇಶ ದಿಂದಲೇ ಪಾನಪ್ರೋತ್ಸಾಹ ಅಬಕಾರಿ ಅಧಿನಿಯಮವನ್ನು ಕಾಂಗ್ರೆಸ್ ಸರ್ಕಾರ ಜಾರಿಯಲ್ಲಿ ತಂದು ಕೆಲವರಿಗೆ ತಾರಕ, ಕೆಲವರಿಗೆ ಮಾರಕವನ್ನುಂಟುಮಾಡಿದೆ. ಸರ್ಕಾರಕ್ಕೆ ಅಬಕಾರಿ ಆದಾಯ 1991-92ರಲ್ಲಿ 510.32 ಕೋಟಿ, 92-93 ರಲ್ಲಿ 5151.33 ಕೋಟಿ, 93-94ರಲ್ಲಿ 639.07 ಕೋಟಿ, 94-95ರಲ್ಲಿ 713.46 ಕೋಟಿ ವಾಸ್ತವಿಕವಾಗಿ ಬಂದಿದ್ದು 95-96ರಲ್ಲಿ 830.00 ಕೋಟಿ, 96-97ರಲ್ಲಿ 860.00 ಕೋಟಿಗೆ ಏರಲಿದೆ. ಪ್ರತಿವರ್ಷ ಹೆಚ್ಚಿದ ಹಾಗೂ ಹೆಚ್ಚುತ್ತಿರುವ ಅಬಕಾರಿ ಆದಾಯ ಸರ್ಕಾರದ ಅಧಿಕೃತ 1996-97ರ ಆಯ-ವ್ಯಯ ಪತ್ರದ ವರೆವಿಗೂ ಸಾಗಿಬಂದಿದೆ. 1995-96 ನೇ ವರ್ಷಕ್ಕಿಂತ 1996-97ನೇ ಸಾಲಿಗೆ ಹೆಚ್ಚಿನ ಆದಾಯ ಪಡೆಯಲು ಉದ್ದೇಶಿಸಿರುವದನ್ನು ನೋಡಿದರೆ ರಾಜ್ಯಾದ್ಯಂತವಾಗಲೀ ಅಥವಾ ಕೆಲವು ಜಿಲ್ಲೆಯಾದ್ಯಂತವಾಗಲೀ 96-97ನೇ ವರ್ಷದಲ್ಲಿ ಪಾನನಿಷೇಧವನ್ನು ಜಾರಿಮಾಡುವುದಿಲ್ಲ ಹಾಗೂ ಮಾಡಲಿಕ್ಕೆ ಸಾಧ್ಯವೂ ಇಲ್ಲವೆಂಬುದು ಸುಸ್ಪಷ್ಟ.

ರಾಜ್ಯ ಸರ್ಕಾರದ ಆರ್ಥಿಕ ಪರಿಸ್ಥಿತಿ ಹದಗೆಟ್ಟು 94-95ರಲ್ಲಿ ಆಯ-ವ್ಯಯ ಪ್ರಕಾರ ನಿಗದಿತ ಆದಾಯದಲ್ಲಿ 1199.95 ಕೋಟಿ ಪಡೆಯದೆ, ನಿಗದಿತ ವೆಚ್ಚದಲ್ಲಿ ಸಹ 896.21 ಕೋಟಿ ಮೊತ್ತವನ್ನು ಆರ್ಥಿಕ, ಸಾಮಾಜಿಕ ಹಾಗೂ ಸಾಮಾನ್ಯ ಯೋಜನೆಗಳಿಗೆ ವೆಚ್ಚಮಾಡಲಿಕ್ಕೆ ಸಾಧ್ಯವಾಗಿಲ್ಲ. ವಸ್ತುಸ್ಥಿತಿ ಹೀಗಿರುವಾಗ ಸರ್ಕಾರದ ಪ್ರಮುಖ ಆದಾಯದ ಮೂಲವಾದ ಅಬಕಾರಿ ಇಲಾಖೆಯನ್ನು ಮುಚ್ಚಿ ಅಬಕಾರಿ ಮದ್ಯ ಉದ್ಯಮಗಳನ್ನು ಮುಚ್ಚಿ ಆದರಿಂದಾಗಬಹುದಾದ ಉದ್ಯಮಿಗಳ ಹಾನಿ, ದಿವಾಳಿ, ಅವಲಂಬಿತರ ಬೀದಿಪಾಲು

ಇತ್ಯಾದಿ ದುಷ್ಪರಿಣಾಮಗಳನ್ನು ಸರ್ಕಾರ ಎದುರಿಸಬೇಕಾದ ದುಷ್ಟ ಪ್ರಸಂಗ ಹಾಗೂ ದುಷ್ಪರಿಣಾಮಗಳನ್ನು ಎದುರಿಸುವರು ಹಾಗೂ ಪಾನ ಪ್ರೋತ್ಸಾಹ ಜಾರಿಯಲ್ಲಿ ಮುಂದುವರೆಯುವುದರಿಂದ ಆಗುವ ಸಾಮಾಜಿಕ ಹಾನಿ, ವಿಪತ್ತು, ಕೆಟ್ಟ ಪರಿಣಾಮ ಇತ್ಯಾದಿ ಮಾರಕಗಳು ಸರ್ಕಾರಕ್ಕೆ "ಅತ್ತ-ದರಿ ಅತ್ತ-ಪುಲಿ" ಯಂತಾಗಿ ನುಂಗಲಾರದ ತುತ್ತಾಗುತ್ತದೆ. ಸರ್ಕಾರಕ್ಕೆ ಎದುರಿಸಬೇಕಾದ ಕಠಿಣ ಪ್ರಸಂಗದ ಪ್ರಜ್ಞೆ, ಅರಿವು ಹಾಗೂ ದೂರಲೋಚನೆಯಿದ್ದರೂ ರಾಜಕೀಯ ಮುಖಂಡರನ್ನು, ಧಾರ್ಮಿಕ ಮುಖಂಡರನ್ನು ಮುಗ್ಧ ಜನತೆಯನ್ನು ಹಾಗೂ ವಿಧಾನಸಭೆಯನ್ನು ವಂಚಿಸುವ ಹಾಗೂ ದಾರಿತಪ್ಪಿಸುವ ಹೇಳಿಕೆಯಾದ ಸರಾಯಿ ಪಾನ ನಿಷೇಧವನ್ನು ಜಾರಿಯಲ್ಲಿ ತರುವದಾಗಿ ಸರ್ಕಾರ ಹೇಳಿರುವುದು ಖಂಡನೀಯ ಹಾಗೂ ಪ್ರಜಾಸತ್ತೆಯ ಅವಹೇಳವನೆಂದು ಹೇಳಬೇಕಾಗುವುದು ಅನಿವಾರ್ಯವಾಗಿದೆ. ರಾಜ್ಯಾದ್ಯಂತ ಸರಾಯಿ ಪಾನ ನಿಷೇಧ ಎಷ್ಟು ಗಂಡಾಂತರಕಾರಿ ಹಾಗೂ ಅಪಾಯಕಾರಿಯಾಗಿದೆಯೋ ಅಷ್ಟೇ ಗಂಡಾಂತರಕಾರಿ ಹಾಗೂ ಅಪಾಯಕಾರಿ ಪಾನ ಪ್ರೋತ್ಸಾಹವೂ ಆಗಿದೆಯೆಂಬ ಅರಿವು, ಪ್ರಜ್ಞೆ ಸರ್ಕಾರಕ್ಕೆ ಇದ್ದರೆ ಒಳ್ಳೆಯದು. ಇದನ್ನು ಬಿಟ್ಟು ಅಗ್ಗದ ಶಹಬಾಶಗಿರಿಗಾಗಿ ಮುಂದಾಲೋಚನೆ ಇಲ್ಲದೆ ಏನೇನೋ ಹೇಳುವುದಕ್ಕಿಂತ ಮೊದಲು ಸಾಧಕ ಬಾಧಕಗಳನ್ನು ಗಮನಕ್ಕೆ ತೆಗೆದುಕೊಂಡು ಯಾವುದೇ ಒಂದು ನಿರ್ದಿಷ್ಟ ತೀರ್ಮಾನಕ್ಕೆ ಬರತಕ್ಕದ್ದು ಸರ್ಕಾರದ ಕರ್ತವ್ಯವಿರುವುದರಿಂದ ಈ ಬಗ್ಗೆ ಸರ್ಕಾರ ಯಾವುದೇ ಅಂತಿಮ ತೀರ್ಮಾನ ತೆಗೆದುಕೊಳ್ಳುವುದು ಲೇಸು. ಇಲ್ಲವಾದರೆ ಈ ಧೋರಣೆ ಘೋರಿ ಮಹಮ್ಮದ್‌ನ ಧೋರಣೆಯನ್ನು ಮೀರಿಸಿದಂತಾಗುತ್ತದೆ.

❑

ವಿನಾಶದತ್ತ ವಿಶ್ವೇಶ್ವರಯ್ಯ ಕಾರ್ಖಾನೆ

ರಾಜ್ಯದ ಹಾಗೂ ರಾಷ್ಟ್ರದ ಸರ್ವಾಂಗೀಣ ಅಭಿವೃದ್ಧಿಗೆ ಅನೇಕ ಯೋಜನೆಗಳನ್ನು ರೂಪಿಸಿ ಕಾರ್ಯಗತ ಮಾಡಿ ಎಂದೂ ಮರೆಯದ ಎಂ. ವಿಶ್ವೇಶ್ವರಯ್ಯನವರನ್ನು ಯಾರೂ ಎಂದೂ ಮರೆಯದ ಮಹಾಪವಾಡ ಪುರುಷರಾಗಿದ್ದಾರೆ. ಅವರತಂಹ ಆದರ್ಶ, ಕರ್ತವ್ಯ ನಿರತ, ಪ್ರಾಮಾಣಿಕ, ದಕ್ಷ, ಸಾರ್ವಜನಿಕ ಹಿತಾಸಕ್ತಿಯ ಪುರುಷರು ಸಿಕ್ಕುವುದೇ ಕಡಿಮೆ. ಅವರು ಕಟ್ಟಿ ಬೆಳೆಸಿದ ಅನೇಕ ಯೋಜನೆ ಹಾಗೂ ಸಂಸ್ಥೆಗಳಲ್ಲಿ ಒಂದಾದ ಭದ್ರಾವತಿಯ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ ಈಗ ಸಮರ್ಥರೀತಿಯಲ್ಲಿ ಕಾರ್ಯಮಾಡದೆ ನಷ್ಟದಲ್ಲಿ ತೇಲಾಡುತ್ತಿರುವದು ಈ ರಾಜ್ಯದ ರಾಷ್ಟ್ರದ ರೈತರ ಹಾಗೂ ಸಾರ್ವಜನಿಕರ ದುರ್ದೈವ.

ರಾಜ್ಯದಲ್ಲಿ ಮನೆ ಕಟ್ಟುವ ಹಾಗೂ ಹೊಲ ಹೊಡೆಯುವ ರೈತ ಹಾಗೂ ಜನ ಸಾಮಾನ್ಯರಿಗೆ ಬೇಕಾದ ವಿವಿಧ ರೀತಿಯ ಕಬ್ಬಿಣ ಉಕ್ಕು ಸಾಮಗ್ರಿಗಳು ಸುಲಭ ಬೆಲೆಯಲ್ಲಿ ಸಾಕಷ್ಟು, ಸಕಾಲದಲ್ಲಿ ಒದಗಿಸುವ ಹಾಗೂ ಹೊರಗಡೆ ಕಳುಹಿಸಬಹುದಾದ ಉಕ್ಕು ಕಬ್ಬಿಣ ಉತ್ಪಾದನೆಯನ್ನು ಉತ್ಪಾದಿಸಿ, ಒದಗಿಸಿ ಜನರ ಪ್ರೀತಿಗೆ ಪಾತ್ರವಾಗಿ ಲಾಭದಾಯಕವಾಗಿ ನಡೆಯುತ್ತ ಬಂದ ಈ ಕಾರ್ಖಾನೆ ಐ.ಎ.ಎಸ್. ಅಧಿಕಾರಿಗಳ ದಂಡಿನ ಆಡಳಿತ ಹಿಡಿತದಲ್ಲಿದ್ದರೂ ಪ್ರತಿ ವರ್ಷ ನಷ್ಟ ಹೊಂದುತ್ತಾ ಸಾಗಿ 94-95ರ ಅಂತ್ಯಕ್ಕೆ 111.56 ಕೋಟಿ. ಕೂಡಿ ಬಿದ್ದ ಹಾನಿಯಲ್ಲಿ ಒದ್ದಾಡುತ್ತ ಮುಂದವರಿದಿರುವದು ದಿ|| ಮೋಕ್ಷಗುಂಡಂ ವಿಶ್ವೇಶ್ವರಯ್ಯ ಹಾಗೂ ಜನತೆಗೆ ಅಪಚಾರ ಮಾಡಿದಂತಾಗಿದೆ. ಈ ಕಾರ್ಖಾನೆಯ ಸಾಲ ಜಿಂದಿಗೆಯ ಮೊತ್ತ 111.56 ಕೋಟಿ. ಕೂಡಿ ಬಿದ್ದ ಹಾನಿಯ ನ್ನೊಳಗೊಂಡು 520.06 ಕೋಟಿ ಇದೆ.

ವಿಶೇಷ ಉಕ್ಕು, ಮೆದು ಉಕ್ಕು, ವಿಶೇಷ ಹಾಗೂ ಮೆದು ಉಕ್ಕಿನ ಗಡ್ಡಿ, ಬೀಡು ಕಬ್ಬಿಣ, ವಿವಿಧ ಕ್ಯಾಸ್ಟಿಂಗ್ಸ್, ಫರೋಸಿಲಿಕಾನ ಮತ್ತು ಕ್ರೋಮ್, ಇತರ ಫೆರೋ ಅಲ್ಲಾಯ್ಡ್ ಇತ್ಯಾದಿ ವಿವಿಧ ಉಕ್ಕು ಕಬ್ಬಿಣ, ಉತ್ಪಾದನೆಯನ್ನು ಈ ಕಾರ್ಖಾನೆ ತಯಾರಿಸಬೇಕಾಗಿರುವ ಈ ಕಾರ್ಖಾನೆಯ ಸ್ಥಾಪಿತ ಉತ್ಪಾದನಾ ಸಾಮರ್ಥ್ಯ 5,36,500

ಟನ್ ಇದ್ದರೂ 94-95ರಲ್ಲಿ ಕೇವಲ 1,66,677 ಟನ್ ಪ್ರಮಾಣದ ಉತ್ಪಾದನೆಯನ್ನು ಮಾಡಿದೆ. 93-94ರಲ್ಲಿ 202.38 ಕೋಟಿ ಕಿಮ್ಮತ್ತಿನ 1,17,885 ಟನ್ ಪ್ರಮಾಣದ ಉತ್ಪಾದನೆಯನ್ನು ಮಾರಾಟ ಮಾಡಿದ್ದು 94-95ರಲ್ಲಿ 208.99 ಕೋಟಿ ಕಿಮ್ಮತ್ತಿನ 92,61,547 ಟನ್ ಪ್ರಮಾಣದ ಉತ್ಪಾದನೆಯನ್ನು ಮಾರಾಟ ಮಾಡಿ ಮಾರಾಟದಲ್ಲಿ ಭಾರೀ ಕುಸಿದು ಹಾಗೂ ಮಾರಾಟದ ಬೆಲೆಯಲ್ಲಿ ಹೆಚ್ಚಳ ತೋರಿಸಲಾಗಿದೆ. 31-3-95ಕ್ಕೆ ವಿವಿಧ ಉತ್ಪಾದನೆಗಳ ದಾಸ್ತಾನು 96.574 ಟನ್ನು ಪ್ರಮಾಣವಿದ್ದು ಪ್ರತಿವರ್ಷ ಗಣನೀಯವಾಗಿ ಮಾರಾಟವನ್ನು ಹೆಚ್ಚಿಸದೆ ವ್ಯವಹಾರವನ್ನು ಕುದುರಿಸಿರುವದು ಸಾಧುವಲ್ಲ. ಉತ್ಪಾದನೆಯಲ್ಲಿ ಗಣನೀಯ ಹಿಂದೇಟು ಆಗಿದ್ದರೂ ಮಾರಾಟ ಹೆಚ್ಚಿಸುವಲ್ಲಿ ಆಡಳಿತ ವರ್ಗ ವಿಫಲವಾಗಿದೆ. ವಿಶೇಷ ಉಕ್ಕಿನ ಉತ್ಪಾದನೆ 90-91ರಲ್ಲಿ 58,829 ಟನ್ ಆಗಿದ್ದು, 94-95ರಲ್ಲಿ 57,686 ಟನ್ ಆಗಿದೆ. ಮೆದುಉಕ್ಕು 91-92ರಲ್ಲಿ 42,912 ಟನ್ನು ಉತ್ಪಾದನೆಯಾಗಿದ್ದು, 94-95ರಲ್ಲಿ ಕೇವಲ 343 ಟನ್ ಆಗಿದೆ. ಫೆರೋಸಿಲಿಕಾನ್ 92-93ರಲ್ಲಿ 18,655 ಟನ್ ಉತ್ಪಾದನೆಯಾಗಿದ್ದು, 94-95ರಲ್ಲಿ 14,319 ಟನ್ನು ಆಗಿದೆ. ಬೀಡು ಕಬ್ಬಿಣ ಉತ್ಪಾದನೆ 91-92ರಲ್ಲಿ 52,311 ಟನ್ನು ಆಗಿದ್ದು, 94-94ರಲ್ಲಿ ಕೇವಲ 4,647 ಟನ್ ಆಗಿದೆ. ಉಕ್ಕಿನ ಗಟ್ಟಿಗಳ ಉತ್ಪಾದನೆ 88-90ರಲ್ಲಿ 83,864 ಟನ್ ಆಗಿದ್ದು, 95-96ರಲ್ಲಿ 80,323 ಟನ್ನು ಆಗಿದೆ. ಇಟ್ಟಿಗೆಗಳ ಉತ್ಪಾದನೆ 92-93ರಲ್ಲಿ 5421 ಟನ್ ಆಗಿದ್ದು, 94-95 ರಲ್ಲಿ 4123 ಟನ್ ಆಗಿದೆ. ಫೆರೋಕ್ರೋಮ್ ಉತ್ಪಾದನೆ 88-89ರಲ್ಲಿ 5723 ಟನ್ ಆಗಿದ್ದು, 94-95ರಲ್ಲಿ ಕೇವಲ 75 ಟನ್ ಆಗಿದೆ. ಹೀಗೆ ಕಾರ್ಖಾನೆಯ ಸಂಪೂರ್ಣ ಸಾಮರ್ಥ್ಯವನ್ನು ಬಳಸದೇ ಕಡಿಮೆ ಉತ್ಪಾದನೆ ಮಾಡಿ ಈ ಉತ್ಪಾದನೆಯನ್ನು ಸಹ ಸಂಪೂರ್ಣವಾಗಿ ಅಥವಾ ಹೆಚ್ಚು ಹೆಚ್ಚಾಗಿ ಮಾರಾಟ ಮಾಡದೇ ಮಾರಾಟ ಮಾಡಿದ ಉತ್ಪಾದನೆಗೆ ಖಾಸಗೀ ಕಾರ್ಖಾನೆಗಳಿಗಿಂತ ಹೆಚ್ಚಿನ ಬೆಲೆ ದರವನ್ನು ಹಾಕಿ ಮಾರಾಟ ಕುಸಿದು ಕಾರ್ಖಾನೆಗೆ ಭಾರಿ ಹಾನಿ ಮಾಡುತ್ತಾ ಹೊರಟಿರುವದು ಐ.ಎ.ಎಸ್. ಅಧಿಕಾರಿಗಳ ತಂಡಕ್ಕೆ ಭೂಷಣವಲ್ಲ. ಪ್ರತಿವರ್ಷ ಆದಾಯಕ್ಕಿಂತ ವೆಚ್ಚವೇ ಹೆಚ್ಚಾಗುತ್ತ ಕೂಡಿಬಿದ್ದ ಹಾನಿ ಬೆಳೆಯುತ್ತ ಹೋಗುತ್ತಿರುವದು ಸರಿಯಲ್ಲ 93-93ರಲ್ಲಿ 229.86 ಕೋಟಿ ಆದಾಯವಾಗಿದ್ದು 94-95ರಲ್ಲಿ 231.54 ಕೋಟಿ ಆದಾಯವಾಗಿದ್ದು ಈ 94-95ರ ಆದಾಯದಲ್ಲಿ 4.00 ಕೋಟಿ ಬಡ್ಡಿ ಹಾಗೂ ಆದಾಯ ಸೇರಿದ್ದು 94.95ರ ಆದಾಯದಲ್ಲಿ 8.17 ಕೋಟಿ ಬಡ್ಡಿ ಹಾಗೂ ಇದರ ಆದಾಯ ಸೇರಿದ್ದು ನಿಜವಾದ ಆದಾಯ ಹಿಂದಿನ ವರ್ಷಕ್ಕಿಂತ ಕಡಿಮೆಯಾಗಿರುವದು ಸುಸ್ಪಷ್ಟವಾಗಿದೆ. ರಾಜ್ಯ ಸರ್ಕಾರದ ಸಹಾಯ ದೇಣಿಗೆ ರಿಯಾಯಿತಿ, ಬ್ಯಾಂಕುಗಳ ಬಡ್ಡಿ ರಿಯಾಯಿತಿ ಉಕ್ಕು ಪ್ರಾಧಿಕಾರದ ಬಡ್ಡಿ ರಿಯಾಯಿತಿ ಇತ್ಯಾದಿಗಳಿಂದ ಸುಮಾರು 12.06 ಕೋಟಿ ರಿಯಾಯಿತಿ ಸಿಕ್ಕಿರುವದಲ್ಲದೆ ಈ ಕಾರ್ಖಾನೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಕೊಡಬೇಕಾಗಿದ್ದ 31-3-95ಕ್ಕೆ ಬಾಕಿ 82.09 ಕೋಟಿಯಲ್ಲಿ ಕರ್ನಾಟಕ ಸರ್ಕಾರ 65.05 ಕೋಟಿ ಬಾಕಿಯುನ್ನು ಮನ್ನಾ ಮಾಡಿ ಕಾರ್ಖಾನೆಗೆ ಸಾಕಷ್ಟು ಸಹಾಯ ಮಾಡಿ ಇನ್ನು

ಮಾಡುತ್ತಿದ್ದರೂ ಈ ಕಾರ್ಖಾನೆಯ ಆಡಳಿತ ಹದಗೆಟ್ಟಿದೆ. ಸಿಕ್ಕಾಪಟ್ಟೆ ಉತ್ಪಾದನಾ ವೆಚ್ಚವನ್ನು ಪ್ರತಿವರ್ಷ ಹೆಚ್ಚಿಸುತ್ತಾ ಉತ್ಪಾದನಾ ಮೇಲಿನ ಬೆಲೆಯನ್ನು ಹೆಚ್ಚಿಸುತ್ತಾ ಹೋದರೆ ಪೇಟೆಯಲ್ಲಿ ಈ ಕಾರ್ಖಾನೆಯ ಉತ್ಪಾದನೆ ಮಾಲು ಮಾರಾಟ ಹಾಗೂ ಖರ್ಚಾಗುವದಾದರೂ ಹೇಗೆ? ಭದ್ರಾವತಿಯಲ್ಲಿ ಕೇಂದ್ರ ಕಾರ್ಯಾಲಯವಿದ್ದು ಬೆಂಗಳೂರು, ಮುಂಬಾಯಿ, ಕಲಕತ್ತಾ, ಮದ್ರಾಸ್, ದೆಹಲಿ, ನಾಗಪುರ, ರೂರಕೇಲಾ, ಕೊಯಿಮತ್ತೂರ ಸಿಕಂದರಬಾದ್, ಪುನಾ ಮೊದಲಾದ ನಗರಗಳಲ್ಲಿ ವ್ಯವಹಾರಿಕ ಕೇಂದ್ರಗಳಿದ್ದು ರಾಜ್ಯ ಸರಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳನ್ನೊಗೊಂಡ ಅನೇಕ ಐ.ಎ.ಎಸ್. ಅಧಿಕಾರಿಗಳ ದಂಡು ಇದ್ದರೂ ಈ ಕಾರ್ಖಾನೆಯಿಂದ ರಾಜ್ಯದ ರೈತರ ಹಾಗೂ ನಾಗರೀಕರಿಗೆ ಬೇಕಾದ ಕಬ್ಬಿಣ - ಉಕ್ಕು ಸಾಮಗ್ರಿಗಳು ಕಡಿಮೆ ಹಾಗೂ ಯೋಗ್ಯ ಬೆಲೆಗೆ ಒದಗಿಸದೆ, ಉತ್ಪಾದನೆ ಸಾಮರ್ಥ್ಯವನ್ನು ಬಳಸಿಕೊಳ್ಳದೇ ಉತ್ಪಾದಿಸಿದ ಮಾಲನ್ನು ರಾಜ್ಯದಲ್ಲಿ, ಹೊರ ರಾಜ್ಯದಲ್ಲಿ, ಪರರಾಷ್ಟ್ರದಲ್ಲಿ ಗಣನೀಯ ಪ್ರಮಾಣದಲ್ಲಿ ಮಾರಾಟ ಮಾಡದೆ, ಪ್ರತಿವರ್ಷ ಸಿಬ್ಬಂದಿ ಸಂಖ್ಯೆ ಕಡಿಮೆಯಾಗುತ್ತಿದ್ದರೂ ಗಣನೀಯವಾಗಿ ಸಿಬ್ಬಂದಿ ವೆಚ್ಚ ಹೆಚ್ಚುತ್ತಿರುವದು 31-3-95ಕ್ಕೆ ಸಣ್ಣಪುಟ್ಟ ಸಾಲಗಾರರಿಂದ ಉತ್ತಮ ಹಾಗೂ ಸಂಶಯಾಸ್ಪದವಾದ ಬರತಕ್ಕ ಬಾಕಿ 54.28 ಕೋಟಿ ಇರುವದು, ಕೂಡಿಬಿದ್ದ ಹಾನಿ 31-3-93ಕ್ಕೆ 66.31 ಕೋಟಿ, 31-3-94ಕ್ಕೆ 84.51 ಕೋಟಿ, 31-3-95ಕ್ಕೆ 111.56 ಕೋಟಿ, ಹೀಗೆ ಗಣನೀಯವಾಗಿ ಏರುತ್ತಿರುವದು ಈ ಕಾರ್ಖಾನೆಗೆ ಹಾಗೂ ಈ ಕಾರ್ಖಾನೆಯ ಮಾತೃಸಂಸ್ಥೆಯಾದ ಭಾರತೀಯ ಉಕ್ಕು ಪ್ರಾಧಿಕಾರಕ್ಕೆ, ರಾಜ್ಯ ಸರ್ಕಾರಕ್ಕೆ ಕೇಂದ್ರ ಸರಕಾರಕ್ಕೆ ಹಾಗೂ ಐ.ಎ.ಎಸ್. ಅಧಿಕಾರಿಗಳಿಗೆ ಭೂಷಣವಲ್ಲ.

❑

ರೋಗಗ್ರಸ್ತ ಎನ್.ಜಿ.ಇ.ಎಫ್. ಕಾರ್ಖಾನೆ

ಎನ್.ಜಿ.ಇ.ಎಫ್. ಈ ಸಂಸ್ಥೆ ರೈತರಿಗೆ, ಉದ್ಯಮಿಗಳಿಗೆ, ಕೆ.ಇ.ಬಿ.ಗೆ ಹಾಗೂ ಇನ್ನು ಅನೇಕ ವ್ಯಕ್ತಿ, ಸಂಸ್ಥೆಗಳಿಗೆ ಇಡೀ ರಾಷ್ಟ್ರಾದ್ಯಂತ ಉಪಯುಕ್ತವಾದದ್ದೆಂದು ಹೆಸರುಗಳಿಸಿದ ಸಂಸ್ಥೆ. ಈ ಕಾರ್ಖಾನೆಯಲ್ಲಿ ಸರಕಾರ ಹಾಗೂ ಇತರರಿಂದ ಪಡೆದ ಶೇರು ಹಾಗೂ ಸಾಲದ ಒಟ್ಟು ಮೊತ್ತ 173.42 ಕೋಟಿಯನ್ನು ಮೀರಿದೆ. ನಷ್ಟದಲ್ಲಿರುವದರಿಂದ ಡಿವಿಡೆಂಡ್ ಕೊಡುತ್ತಾ ಇಲ್ಲ. 94-95ನೇ ಸಾಲಿನಲ್ಲಿ 29.45 ಕೋಟಿ ಬಡ್ಡಿ ತೆತ್ತಿದೆ. ನಷ್ಟದ ಮೊತ್ತದವನ್ನೊಳಗೊಂಡ ಸಾಲಜಿಂದಗಿ ಮೊತ್ತ 31-3-95ಕ್ಕೆ 324.79 ಕೋಟಿ ಇದೆ. ಈ ಸಂಸ್ಥೆ ಪ್ರಾರಂಭದಲ್ಲಿ ತಯಾರಿಸಿದ್ದ ವಿದ್ಯುತ್ ಸಾಮಗ್ರಿ ಗಳಾದ ಟ್ರಾನ್ಸ್‌ಫಾರ್ಮಗಳು, ವಿದ್ಯುತ್ ಮೋಟಾರುಗಳು, ಸ್ವಿಚ್ ಗೇರುಗಳು, ಮೊದಲಾದವುಗಳು ಒಳ್ಳೆಯ ಗುಣಮಟ್ಟ, ಯೋಗ್ಯ ಹಾಗೂ ಕಡಿಮೆ ದರ, ಸಕಾಲದಲ್ಲಿ ಲಭ್ಯವಾಗಿ ಸಿಗುತ್ತಿದ್ದವು. ಮಾರಾಟಕ್ಕೆ ಮಧ್ಯವರ್ತಿಗಳಿಲ್ಲದೆ ಅಥವಾ ಮಧ್ಯವರ್ತಿಗಳ ಏಜೆಂಟರಿದ್ದರೆ ಅತೀ ಕಡಿಮೆ ಕಮೀಷನ್ ಪಡೆದು ಮಾರಾಟ ಮಾಡಲಾಗುತ್ತದೆ. ರಫ್ತು ಹಾಗೂ ಈ ಸಾಮಗ್ರಿಗಳಿಗೆ ಸಾಕಷ್ಟು ಬೇಡಿಕೆ ಇದೇ ದೇಶಾದ್ಯಂತ ಇತ್ತು. ನಮ್ಮ ರಾಜ್ಯದಲ್ಲಿಯಂತೂ ಈ ಸಂಸ್ಥೆಯಲ್ಲಿ ತಯಾರಾದ ಸಾಮಾಗ್ರಿಗಳಿಗೆ ಭಾರೀ ಬೇಡಿಕೆ ಸಹ ಇತ್ತು. ಈ ಸಂಸ್ಥೆ ತನಗಿರುವ ಸ್ಥಾಪಿತ ಉತ್ಪಾದನಾ ಸಾಮರ್ಥ್ಯವನ್ನು ಸಂಪೂರ್ಣವಾಗಿ ಬಳಸದೇ ವಾಸ್ತವಿಕ ಉತ್ಪಾದನೆಯನ್ನು ಕಡಿತಗೊಳಿಸಿರುವುದು, ಉತ್ಪಾದಿತ ಸಾಮಗ್ರಿಗಳ ಉತ್ಪಾದನಾ ವೆಚ್ಚ ಕಡಿಮೆಯಾಗಿರುವದು, ಮಾರಾಟಮಾಡುವ ಕಮೀಶನ್ ಏಜೆಂಟರು, ಮಾರಾಟವಾಗುವ ಸಾಮಗ್ರಿಗಳ ಮೇಲೆ ಅತಿ ಹೆಚ್ಚಿನ ಕಮೀಷನ್ ಹಾಕಿ ಸಾಮಗ್ರಿಗಳ ಏರಿಕೆಯಾಗಿರುವದು ಇತ್ಯಾದಿ ಅನೇಕ ನ್ಯೂನತೆಗಳಿಂದ ಆ ಕಾರ್ಖಾನೆ ಇಂದು ತತ್ತರಿಸಿ ಸಮರ್ಪಕವಾಗಿ ಉತ್ಪಾದನೆ ಹಾಗೂ ಮಾರಾಟಮಾಡದೇ ಅಸಮರ್ಪಕ ಆಡಳಿತ ಹಾಗೂ ದುಂದುವೆಚ್ಚದ ಪರಿಣಾಮವಾಗಿ ಭಾರೀ ನಷ್ಟದಲ್ಲಿ ನಡೆದಿದೆ. ಜರ್ಮನ್ ಸರಕಾರದ ಈ ಕಂಪನಿಯ ಸಹಯೋಗವನ್ನು ಹೊಂದಿದ ಎ.ಇ.ಜಿ. ಗೆ ರಫ್ತು ಅಪ್ಪಣೆಯನ್ನು ನೀಡದೇ ಇರುವದು ಸಹ ಈ

ಸಂಸ್ಥೆಯ ಅಭಿವೃದ್ಧಿಗೆ ಪೂರಕವಾಗಿದೆ. ಯಾವುದೇ ಒಂದು ಉದ್ಯಮ ಉತ್ಪಾದಕವಾಗಬೇಕಾದರೆ ಅದರ ವ್ಯವಹಾರ ಪ್ರತೀವರ್ಷ ಹೆಚ್ಚು ಹೆಚ್ಚು ಆಗುತ್ತಾ ಸಾಮರ್ಥ್ಯವನ್ನು ಬೆಳೆಸಿಕೊಳ್ಳಬೇಕೇ ವಿನಹ ಅದರ ವ್ಯವಹಾರ ಕುಂಠಿತಗೊಳ್ಳ ಬಾರದು. ಆದರೆ ಈ ಕಾರ್ಖಾನೆಯ ವ್ಯವಹಾರ ಬೆಳೆಯದೆ ಹಿಂದೆ ಬಿದ್ದಿರುವದು ಹಾಗೂ ರೋಗಗ್ರಸ್ಥ ಕಾರ್ಖಾನೆಯಾಗಿರುವುದು ಜನತೆಯ ಹಾಗೂ ಸರಕಾರದ ದುರ್ದೈವ.

ವಿವಿಧ ಮೂಲಗಳಿಂದ ಪ್ರತಿವರ್ಷ ಹೆಚ್ಚು ಹೆಚ್ಚಾಗಿ ವಿವಿಧ ಸಾಲಗಳನ್ನು ಪಡೆಯುತ್ತಾ, ಪಡೆದ ಸಾಲದ ಮೇಲೆ ಪ್ರತೀವರ್ಷ ಹೆಚ್ಚು ಹೆಚ್ಚಾಗಿ ಬಡ್ಡಿ ಕೊಡುತ್ತಾ, ವ್ಯಾಪಾರೀ ಲಾಭ ಕಡಿಮೆಯಾಗುತ್ತಾ ಆಡಳಿತದ ದುಂದುವೆಚ್ಚ ಹೆಚ್ಚಾಗುತ್ತಾ ಹೊರಟರೆ ಈ ಕಾರ್ಖಾನೆ ಉಳಿಯುವದೆಂತ? ಈ ಕಾರ್ಖಾನೆಯ ಆಡಳಿತ ಮಂಡಳಿಯಲ್ಲಿ ಸಹ ಅನೇಕ ಹಿರಿಯ ಐ.ಎ.ಎಸ್. ಅಧಿಕಾರಿಗಳಿದ್ದರೂ ಸಹ ಅವರಾರೂ ಈ ಕಾರ್ಖಾನೆಯ ಅಭಿವೃದ್ಧಿಯ ಬಗ್ಗೆ ಚಿಂತಿಸದೆ ಇರುವದು ಅವರಿಗೆ ಭೂಷಣವಲ್ಲ. ಶಾಸಕಾಂಗದ ಸಾರ್ವಜನಿಕ ಉದ್ಯಮಗಳ ಸಮಿತಿಯ ವರದಿ ಹಾಗೂ ಸಿ.ಎ.ಜಿ. ವರದಿಗಳಲ್ಲಿ ಎತ್ತಿತೋರಿಸಿದ ಲೋಪ, ದೋಷ, ನ್ಯೂನ್ಯತೆ, ಸಲಹೆ ಹಾಗೂ ಸೂಚನೆಗಳನ್ನು ಗಣನೆಗೆ ತೆಗೆದುಕೊಳ್ಳದೇ ಅವುಗಳನ್ನು ಗಾಳಿಗೆ ತೂರಿ ಈ ಕಾರ್ಖಾನೆಯ ವ್ಯವಹಾರವನ್ನು ದಹಗೆಡಿಸುತ್ತಿರುವದು. ಐ.ಎ.ಎಸ್. ಅಧಿಕಾರಿಗಳ ಆಡಳಿತ ಮಂಡಳಿಗೆ ಭೂಷಣವಲ್ಲ. ಸಾರ್ವಜನಿಕ ಉದ್ಯಮಗಳಿಗೆ ಸಂಬಂಧಿಸಿದ ಮಂತ್ರಿಗಳೂ ಸಹ ಗಮನಹರಿಸದೇ ಇರುವದು ಈ ಹಾಗೂ ಇಂಥಹ ಉದ್ಯಮಗಳ ದುರ್ದೈವ. ಈ ಕಾರ್ಖಾನೆಗೆ ಆಗಿರುವ ನಿವ್ವಳ ನಷ್ಟ 91-92ರಲ್ಲಿ 6.79 ಕೋಟಿ, 92-93ರಲ್ಲಿ 20.90 ಕೋಟಿ, 93-94ರಲ್ಲಿ 25.50 ಕೋಟಿ, 94-95ರಲ್ಲಿ 39.63 ಕೋಟಿ ಹೀಗೆ ಪ್ರತಿವರ್ಷ ನಷ್ಟ ಹೆಚ್ಚುತ್ತಲೇ ಹೋಗುತ್ತಿದೆ. ಬೇಕುಬೇಕಾದವರಿಗೆ ಸಾಮಗ್ರಿಗಳನ್ನು ಉದ್ರಿಕೊಟ್ಟು ಬಾಕೀ ಹಣವನ್ನು ವಸೂಲು ಮಾಡದೇ ಕೊನೆಗೆ ಆ ಬಾಕಿಯನ್ನು ಮನ್ನಾಮಾಡುವ ಸ್ವಜನ ಸಹಾಯ ಸಂಪ್ರಾದಾಯ ಸಮಂಜಸವಲ್ಲ. ಆಸಾಮಿಗಳಿಂದ ಬರತಕ್ಕೆ ಬಾಕಿ 31-3-95ಕ್ಕೆ 79.95 ಕೋಟಿ ಇರುವದನ್ನು ನೋಡಿದರೆ ಆಡಳಿಗಾರರ ಪ್ರಾಮಾಣಿಕತೆಯನ್ನೇ ಪ್ರಶ್ನಿಸಬೇಕಾಗುತ್ತದೆ. ಹುಬ್ಬಳ್ಳಿಯಲ್ಲಿಯ ಎನ್.ಜಿ.ಇ.ಎಫ್. ಕೂಡ ತೃಪ್ತಿಕರವಾಗಿ ವ್ಯವಹಾರ ಮಾಡದೇ ನಷ್ಟದಲ್ಲಿದ್ದು ಬೆಂಗಳೂರಿನ ಕಾರ್ಖಾನೆಯ ಹಾದಿಯನ್ನು ಹಿಡಿದಿದೆ. ಈ ಕಾರ್ಖಾನೆಗೆ ಆಡಳಿತ ಮಂಡಳಿಯಲ್ಲಿ ಅನೇಕ ಜನ ಹಿರಿಯ ಐ.ಎ.ಎಸ್. ಅಧಿಕಾರಿಗಳು ಎ.ಇ.ಜಿ ಪ್ರತಿನಿಧಿಗಳು, ಬಿ.ಆರ್.ಎಫ್.ಆರ್. ಪ್ರತಿನಿಧಿ ಮೊದಲಾದವರಿದ್ದು ಸುಮಾರು 5,800 ನೌಕರರಿದ್ದು, ಡಾಯರೆಕ್ಟರ್, ಮ್ಯಾನೇಜಿಂಗ್ ಡೈರೆಕ್ಟರ್ ಛೇರ್‌ಮನ್ ಇವರಿಗೆ 94-95ರಲ್ಲಿ 5,99,996 ಸಾವಿರ ರೂಪಾಯಿಗಳ ಸಂಬಳ ಸೌಲಭ್ಯ ಕೊಟ್ಟಿದ್ದರೂ ಸಹ

ಈ ಕಾರ್ಖಾನೆ ದುರುಂತಕ್ಕೊಳಗಾಗಿ ಈ ಆಡಳಿತವನ್ನು ಸರಕಾರವೇ ವಹಿಸಿಕೊಂಡು ಪುನರ್‌ಜ್ಜೀವನ ಗೊಳಿಸಲು ಇತ್ತೀಚಿಗೆ ಸರಕಾರ ತೀರ್ಮಾನ ತೆಗೆದು ಕೊಂಡಿದ್ದು ಸರಕಾರ ಹೇಗೆ ಇನ್ನೊಬ್ಬರ ಮೂಖಾಂತರ ಆಡಳಿತ ನಡೆಸಿ ಈ ರೋಗಗ್ರಸ್ಥ ಕಾರ್ಖಾನೆಯನ್ನು ತೇಲಿಸುವುದೋ, ಮುಳಿಗಿಸುವುದೋ ಅಥವಾ ಸ್ವಜನರಿಗೆ ಹಸ್ತಾತಂತರ ಮಾಡುವದೋ ಕಾದುನೋಡಬೇಕಾಗಿದೆ.

❑

೨

ಹುಬ್ಬಳ್ಳಿ ಕೆ.ಎಸ್.ಆರ್.ಟಿ.ಸಿ. ಕಾರ್ಯವೈಖರಿ ಸುಧಾರಣೆ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಸಾರ್ವಜನಿಕರಿಗೆ ಉಪಯುಕ್ತವಾಗಬೇಕಾದ ಸಂಸ್ಥೆ. ಈ ಸಂಸ್ಥೆಯಲ್ಲಿ ಆರು ಪ್ರಾದೇಶಿಕ ಕಾರ್ಯಾಲಯುಗಳು, ಹತ್ತೊಂಭತ್ತು ವಿಭಾಗಗಳು ಹಾಗೂ ಸುಮಾರು ತೊಂಭತ್ತೈದಕ್ಕೂ ಮೀರಿ ಡಿಪೋಗಳು ಇರುತ್ತವೆ. 19 ವಿಭಾಗಗಳಲ್ಲಿ ಹುಬ್ಬಳ್ಳಿ, ವಿಭಾಗ ರಾಜ್ಯದ ರಾಜಧಾನಿ ಬೆಂಗಳೂರು ನಂತರ ಹಿರಿಮೆಪಡೆದ, ಹುಬ್ಬಳ್ಳಿ ಮಹಾ ನಗರದಲ್ಲಿರುವ ದೊಡ್ಡ ವಿಭಾಗ. ಈ ಹುಬ್ಬಳ್ಳಿ ವಿಭಾಗದಲ್ಲಿ (1) ಹುಬ್ಬಳ್ಳಿ ನಗರ, (2) ಹುಬ್ಬಳ್ಳಿ ಗ್ರಾಮಾಂತರ, (3) ಧಾರವಾಡ, (4) ಹಾವೇರಿ, (5) ಹಿರೇಕೆರೂರು, (6) ರಾಣೆಬೆನ್ನೂರು ಹೀಗೆ ಆರು ಡಿಪೋಗಳು ಬರುತ್ತವೆ. ಹುಬ್ಬಳ್ಳಿ ವಿಭಾಗ ಈ ಹಿಂದೆ ಅತ್ಯುತ್ತಮವಾದ ಸಂಚಾರ ವ್ಯವಸ್ಥೆಯನ್ನು ಈ ಭಾಗದ ಪ್ರಮಾಣಿಕರಿಗೆ ಒದಗಿಸಿ ಜನರ ಪ್ರೀತಿಗೆ ಪಾತ್ರವಾಗಿ ಲಾಭದಾಯಕವಾಗಿಯೂ ನಡೆದು ಬಂದಿತ್ತು. ಮೇಸ್ತ್ರಿ, ಚಾಲಕ, ನಿರ್ವಾಹಕರು, ಶಿಸ್ತಿನಿಂದ ಕಾರ್ಯ ಮಾಡುತ್ತಿದ್ದರು. ಈ ಸಿಬ್ಬಂದಿ ಮೇಲೆ ಮೇಲ್ವಿಚಾರಕ, ಆಡಳಿತ ಸಿಬ್ಬಂದಿ ಕೂಡಾ ನೌಕರರನ್ನು ಹದ್ದುಬಸ್ತಿನಲ್ಲಿಟ್ಟು ತಪ್ಪಿತಸ್ಥರನ್ನು ಶಿಕ್ಷಿಸುತ್ತಿತ್ತು. ವೇಳೆಗೆ ಸರಿಯಾಗಿ ಬಸ್ಸುಗಳು ಹೊರಡುತ್ತಿದ್ದವು, ಬರುತ್ತಿದ್ದವು. ಪ್ರಯಾಣಿಕರ ಸಂಖ್ಯೆಗೆ ಅನುಗುಣವಾಗಿ, ಬೇಡಿಕೆಗಳಿಗನುಗಣವಾಗಿ ಹೆಚ್ಚು ಬಸ್ಸುಗಳನ್ನು ಒದಗಿಸಲಾಗುತ್ತಿತ್ತು. ಬಹುತೇಕ ಡಿಪೋಗಳು ಲಾಭದಲ್ಲಿಯೇ ಇರುತ್ತಿದ್ದವು. ಆದರೆ ಪರಿಸ್ಥಿತಿ ಈಗ ತಿರುವು ಮುರುವುವಾಗಿದೆ. ಗ್ರಾಮಾಂತರ ಪ್ರದೇಶದಲ್ಲಿ ಅಡ್ಡಾಡುವ ಬಸ್ಸುಗಳೂ ಬಹುತೇಕ ವೇಳೆಗೆ ಸರಿಯಾಗಿ ಹೊರಡುವುದಿಲ್ಲ ಬರುವದಿಲ್ಲ, ಹೊರಟರೆ ತಲುಪಿ ವಾಪಸ್ಸು ಬರಬೇಕಾದ ಬಸ್ಸುಗಳು ನಡುಮಧ್ಯದ ಊರಿಗೆ ಮಾತ್ರ ಹೋಗಿ ತಿರುಗಿ ಬರುತ್ತವೆ. ಅನೇಕ ಶೆಡ್ಯೂಲಗಳನ್ನು ರದ್ದುಪಡಿಸಲಾಗಿದೆ. ಅನೇಕ ಬಸ್ಸುಗಳು ಹೊರಡದೆ ರದ್ದಾಗುತ್ತವೆ. ಅನೇಕ ಡ್ರೈವರುರವರು, ಕಂಡಕ್ಟರರು ಡ್ಯೂಟಿಗೆ ಹಾಜರ ಆಗದೆ ಅನೇಕ ಬಸ್ಸುಗಳು ಹೊರಡುವದೇ ಇಲ್ಲ. ಚಾಲಕ, ನಿರ್ವಾಹಕ, ಮೇಸ್ತ್ರಿಗಳು ಡ್ಯೂಟಿಗೆ ಬಾರದೇ ಅನಧಿಕೃತವಾಗಿ ಗೈರುಹಾಜರ್ ಇರುತ್ತಾರೆ. ಇವರ ಗೈರು ಹಾಜರಿಯ ಬಗ್ಗೆ ಅನೇಕ ಡಿಪೋ ಮ್ಯಾನೇಜರರು ರಿಪೋರ್ಟ್ ಮಾಡುವುದಿಲ್ಲ. ರಿಪೋರ್ಟ್ ಮಾಡಿದರೆ

ವಿಭಾಗೀಯ ಕಂಟ್ರೋಲರರು ಕಟ್ಟುನಿಟ್ಟಿದ ಕ್ರಮ ತೆಗೆದುಕೊಳ್ಳುವುದಿಲ್ಲ. ಕಟ್ಟುನಿಟ್ಟಾಗಿ ರಿಪೋರ್ಟು ಮಾಡುವ ಮ್ಯಾನೇಜರರ ಮೇಲೆ ಗೈರುಹಾಜರ ಇರುವ ಅನೇಕ ಚಾಲಕ ನಿರ್ವಾಹಕ ಹಾಗೂ ಮೇಸ್ತ್ರಿಗಳು ದಾಂಡಗ್ಯೆ ಮಾಡುತ್ತಾರೆ. ಸಿಬ್ಬಂದಿಯು ಗೈರು ಹಾಜರಿಯಿಂದಾಗಿ ಬಸ್ಸುಗಳು ಹೊರಡದೆ ಪ್ರಮಾಣಿಕರಿಗೆ ಆಗುವ ತೊಂದರೆ ಆವರ್ಣನೀಯ, ಸಂಚರಿಸುವ ಬಸ್ಸುಗಳು ಒಳಗೆ, ಹೊರಗೆ, ಮೇಲೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರಮಾಣಿಕರು ಹತ್ತುವದರಿಂದ ಅನೇಕ ತೊಂದರೆ, ಕಿಸೆಕತ್ತಿರಿಸುವ ದುರಂತಗಳು ದಿನೇ ದಿನೇ ಹೆಚ್ಚುತ್ತಿವೆ. ಇದು ಹುಬ್ಬಳ್ಳಿ ವಿಭಾಗದಲ್ಲಿ ನಿರಂತರವಾಗಿ ನಡೆದಿದೆ. ಚಾಲಕ, ನಿರ್ವಾಹಕ ಮೇಸ್ತ್ರಿಗಳ ಮೇಲೆ ಮೇಲ್ವಿಚಾರಕ ಸಿಬ್ಬಂದಿ ಸ್ಥಳೀಯ ಕಂಟ್ರೂಲರರಿಂದ ಹಿಡಿದು ವಿಭಾಗೀಯ ಅಧಿಕಾರಿಗಳವರೆಗೆ ಸಾಕಷ್ಟು ಇದ್ದರೂ ಪ್ರಯಾಣಿಕರ ಪ್ರಯಾಣ ಸುಖಕರವಾಗಿಲ್ಲ, ಅನುಕೂಲಕರವಾಗಿಲ್ಲ, ತೃಪ್ತಿಕರವೂ ಆಗದೆ ತೊಂದರೆದಾಯಕವೇ ಆಗಿದೆ. ಪ್ರಯಾಣಿಕರ ಅನುಕೂಲಕ್ಕಾಗಿ ಕ್ಯಾಂಟೀನುಗಳನ್ನು ಕಟ್ಟಿಸಿದ್ದು ಅನೇಕ ಕ್ಯಾಂಟಿನುಗಳು ಅಧಿಕಾರಿಗಳ ಬೇಜವಾಬ್ದಾರಿಯಿಂದ ಸುಮಾರು ಐದು ವರ್ಷಗಳಿಂದ ಚಾಲು ಇರದೇ ಕೀಲಿಜಡಿಯಲಾಗಿದೆ. ಈ ರೀತಿಯ ದುರಾಡಳಿತ ಸಾರ್ವಜನಿಕ ಹಿತಿದೃಷ್ಟಿಯಿಂದ ಸುಧಾರಿಸಲೇಬೇಕು.

ಹುಬ್ಬಳ್ಳಿ ವಿಭಾಗದ ಎಲ್ಲಾ ಆರೂ ಘಟಕಗಳ ಆರ್ಥಿಕ ಪರಿಸ್ಥಿತಿ ಚಿಂತಾಜನಕ ವಾಗಿ, ಎಲ್ಲಾ ಘಟಕಗಳು ನಷ್ಟದ ಹಾದಿಯಲ್ಲಿ ಸ್ಪರ್ಧೆಯಲ್ಲಿವೆ. ಈ ಆರು ಡಿಪೋಗಳಲ್ಲಿ 602, ಬಸ್ಸುಗಳು 567, ಶೆಡ್ಯೂಲುಗಳು, 1401 ಚಾಲಕರು, 1418 ಕಂಡಕ್ಟರರು, 512 ಮೇಸ್ತ್ರಿಗಳು ಹಾಗೂ ಮೆಕ್ಯಾನಿಕ್‌ರು ಹಾಗೂ ಇವರೆಲ್ಲರ ಮೇಲೆ ಸ್ಟ್ಯಾಂಡ ಕಂಟ್ರೋಲರರು, ಸುಪರವಾಯಸರರು, ಡಿಪೋ ಮ್ಯಾನೇಜರರು ಸಾಕಷ್ಟು ಇದ್ದು ಇವರೆಲ್ಲರ ಮೇಲೆ ವಿಭಾಗೀಯ ಕಂಟ್ರೋಲರರೊಬ್ಬರು ಇದ್ದು ಇವರೆಲ್ಲನೇಕರ ಬೇವಾಬ್ದಾರಿ ಕರ್ತವ್ಯ ಫಲಶೃತಿ ಸಾರ್ವಜನಿಕರಿಗೆ ತೊಂದರೆ ಹಾಗೂ ಅನಾನುಕೂಲವಾದ ಪ್ರಯಾಣ ಹಾಗೂ ಹುಬ್ಬಳ್ಳಿ ವಿಭಾಗದ ಆರು ಡಿಪೋಗಳ 1994-95ರ 4 ಏಪ್ರಿಲ್‌ದಿಂದ ಹಿಡಿದು 95 ಫೆಬ್ರವರಿ ಸೇರಿ ಹನ್ನೊಂದು ತಿಂಗಳ ಅವಧಿಗೆ 6.60 ಕೋಟಿ ರೂ. ನಷ್ಟ. ಹಿಂದೆ ಲಾಭದ್ದದಲ್ಲಿ ಅನೇಕ ಡಿಪೋಗಳು ನಷ್ಟಕ್ಕೆ ಬಂದಿವೆ. ಈ ಹನ್ನೊಂದು ತಿಂಗಳ ಅವಧಿಯಲ್ಲಿ (1) ಹುಬ್ಬಳ್ಳಿ ಗ್ರಾಮೀಣ 0.39 ಕೋಟಿ, (2) ಹುಬ್ಬಳ್ಳಿ ನಗರ 2.23 ಕೋಟಿ, (3) ಧಾರವಾಡ 1.51 ಕೋಟಿ, (4) ಹಾವೇರಿ 1.18 ಕೋಟಿ, (5) ಹಿರೇಕೆರೂರು 0.79 ಕೋಟಿ, (6) ರಾಣೆಬೆನ್ನೂರು 0.53 ಕೋಟಿ, ಹೀಗೆ ಒಟ್ಟು 6.60 ಕೋಟಿ ನಷ್ಟ ಹೊಂದಿದ್ದು ಮಾರ್ಚ್ ತಿಂಗಳ ಕೊನೆಗೆ ಈ ನಷ್ಟ 7.00 ಕೋಟಿ ಮೀರಬಹುದಾಗಿದೆ.

ಹುಬ್ಬಳ್ಳಿ ವಿಭಾಗದ ಆರ್ಥಿಕ ಹಾಗೂ ಪ್ರಯಾಣಿಕರ ದುಸ್ಥಿತಿಯಂತೆ ರಾಜ್ಯದ ಕೆ.ಎಸ್.ಆರ್.ಟಿ.ಸಿ. ಎಲ್ಲ ವಿಭಾಗಗಳಲ್ಲಿಯೂ ಇದೆ. ಈ ಸಂಸ್ಥೆಯು ಒಟ್ಟಾರೆ

ಕಾರ್ಯಾಚರಣೆ ಅಸಮರ್ಪಕ, ಅಸಮರ್ಥ ಹಾಗೂ ಶೋಚನೀಯವಾಗಿದೆ. ರಾಜ್ಯ ಸಂಸ್ಥೆ ಸತತವಾಗಿ ನಷ್ಟದಲ್ಲಿದ್ದು 31-3-94 ಕ್ಕೆ ಈ ಸಂಸ್ಥೆಯು ಕೂಡಿಬಿದ್ದ ಹಾನಿ 367.55 ಕೋಟಿಯಾಗಿದ್ದು 31-3-95ಕ್ಕೆ 400 ಕೋಟಿ ನಷ್ಟಕ್ಕೆ ಏರಬಹುದಾಗಿದೆ. ಈ ಸಾರಿಗೆ ಸಂಸ್ಥೆಯು ಅಸಮರ್ಪಕ ಕಾರ್ಯಾಚರಣೆ, ನಿರಾತಂಕವಾಗಿ ಹೆಚ್ಚುತ್ತಿರುವ ನಷ್ಟ, ಮೇಲಾಧಿಕಾರಿಗಳ ಕರ್ತವ್ಯಚ್ಯುತಿ, ಬೇಜವಾಬ್ದಾರಿ, ದುರಾಡಳಿತವೇ ಕಾರಣವಿರುವರಿಂದ ಇವರೆಲ್ಲರ ಮೇಲೆ ಶಾಸಕರು, ಮಂತ್ರಿಗಳು ಹಾಗೂ ಮುಖ್ಯಮಂತ್ರಿಗಳು, ಕಟ್ಟನಿಟ್ಟಾದ ಕ್ರಮತೆಗೆದುಕೊಳ್ಳಲು ಮುಂದಾಗಬೇಕು. ಹಾಗೂ ಈ ದಿಸೆಯಲ್ಲಿ ತಮ್ಮ ಅವಶ್ಯಕವಾದ ಕರ್ತವ್ಯಗಳನ್ನು ನಿರ್ವಹಿಸಿದರೆ ಮಾತ್ರ ಸಾರಿಗೆ ಸಂಸ್ಥೆ ಒಂದು ಉತ್ತಮ ಲಾಭದಾಯಕ ಸಾರ್ವಜನಿಕ ಹಿತಾಶಕ್ತಿ ಸಂಸ್ಥೆಯಾದೀತು.

ಕೆ.ಎಸ್.ಆರ್.ಟಿ.ಸಿ. ಸುಧಾರಿಸಬೇಕಾಗಿದ್ದಲ್ಲಿ ಈ ಬಗ್ಗೆ ಸರಕಾರಕ್ಕೆ ಆಸಕ್ತಿ ಇದ್ದರೆ ಅಸಮರ್ಥ ಹಾಗೂ ಬೇಜವಾಬ್ದಾರಿ ಅಧಿಕಾರಿಗಳನ್ನು ನಿರ್ದಾಕ್ಷಿಣ್ಯವಾಗಿ ಕಡ್ಡಾಯ ನಿವೃತ್ತಿಗೊಳಿಸಬೇಕು ಇಲ್ಲವಾದಲ್ಲಿ ಅಂಥವರಿಗೆ ಬಂಗಾರದ ಪದಕ ಹಾಗೂ ರಾಷ್ಟ್ರೀಯ ಪ್ರಶಸ್ತಿಗಳನ್ನು ಕೊಡಿಸಿ ಈ ದಿವಾಳಿಯಾಗಿರುವ ಸಂಸ್ಥೆಗೆ 400 ಕೋಟಿ ಹಾನಿ ತುಂಬಿಕೊಟ್ಟು ಪ್ರತಿವರ್ಷ ಕನಿಷ್ಠ ಒಂದು ನೂರು ಕೋಟಿ ಹಣವನ್ನು ಕೊಡುತ್ತ ಸಾರ್ವಜನಿಕರಿಗೆ ಇನ್ನಷ್ಟು ಮಾರಕವಾಗುವಂತೆ ಮಾಡಬೇಕು.

❑

ವ್ಯವಸ್ಥಿತ ಗ್ರಾಮಾಡಳಿತ ಮತ್ತು ರಾಜ್ಯಾಭಿವೃದ್ಧಿ

ಕರ್ನಾಟಕ ರಾಜ್ಯ ಸುಮಾರು ಮೂವತ್ತು ಸಾವಿರ ಗ್ರಾಮಗಳಿಂದ ಆವರಿಸಲ್ಪಟ್ಟ ವಿಶಾಲವಾದ ಸರ, ಜನಸಂಖ್ಯೆ ಹೆಚ್ಚಾದಂತೆ ಗ್ರಾಮಗಳು ನಗರಗಳಾಗಿ ಪರಿವರ್ತನೆ ಗೊಳ್ಳುತ್ತಲೇ ಇದೆ. ಗ್ರಾಮಗಳ ಆಡಳಿತ ಅಭಿವೃದ್ಧಿ ವ್ಯವಸ್ಥಿತ ಹಾಗೂ ಪರಿಣಾಮಕಾರಿ ಯಾಗಿಲೆಂದೇ, ಮೊದಮೊದಲು ಹಳ್ಳಿಗೊಂದು ಅಥವಾ ಹದಿನೈದು ನೂರು ಜನಸಂಖ್ಯೆಯ ಗುಂಪು ಗ್ರಾಮಗಳಿಗೊಂದು ಗ್ರಾಮ ಪಂಚಾಯತಿಗಳನ್ನು ಹಿಂದಿನ ಸರಕಾರಗಳು ಸ್ಥಾಪಿಸಿದ್ದವು. ಈ ಜನಸಂಖ್ಯೆ ಏರುತ್ತಾಹೋಗಿ ಈಗ ಪ್ರತಿ 2500 ಜನಸಂಖ್ಯೆಗಿಂತ ಕಡಿಮೆ ಇಲ್ಲದ ಜನಸಂಖ್ಯೆಯುಳ್ಳ ಗ್ರಾಮ ಅಥವಾ ಗ್ರಾಮಗಳ ಗುಂಪಿಗೊಂದು ಗ್ರಾಮ ಪಂಚಾಯತಿಗಳಾಗಿವೆ. ಈ ಗಾತ್ರದ ಪಂಚಾಯತಿಗಳನ್ನು ಇನ್ನೂ ಹೆಚ್ಚಿಗೆ ಮಾಡಲಿಕ್ಕೆ ಸಾಧ್ಯವಿದ್ದು ಗ್ರಾಮನಾಗರಿಕರ ಸಾಕಷ್ಟು ಬೇಡಿಕೆ ಇದ್ದರೂ, ಇನ್ನೂ ಹೆಚ್ಚಿನ ಸಂಖ್ಯೆಯ ಗ್ರಾಮ ಪಂಚಾಯತಿಗಳನ್ನು ಸ್ಥಾಪಿಸಲು ಸರಕಾರಕ್ಕೆ ಆಗಿಲ್ಲ. ಈಗಾದರೂ ಇದ್ದ ಪರಿಮಿತಿಯಲ್ಲಿಯೇ ಇನ್ನೂ ಹೆಚ್ಚಿನ ಗ್ರಾಮ ಪಂಚಾಯತಿಗಳನ್ನು ಸರಕಾರ ರಚಿಸುವದು ಅತ್ಯವಶ್ಯವಿದೆ. ಪ್ರತಿ ಗ್ರಾಮ ಪಂಚಾಯತಿಗೊಂದು ಗ್ರಾಮ ವ್ಯವಸಾಯ ಸಹಕಾರ ಸಂಘವನ್ನು ಸ್ಥಾಪಿಸುವದು ಅವಶ್ಯ ಹಾಗೂ ಅಗತ್ಯವಿದ್ದರೂ ಅವುಗಳನ್ನು ಸ್ಥಾಪಿಸಲು ಸರಕಾರ ಹಿಂದೇಟು ಹಾಕುತ್ತಿದೆ. ಅದು ಸರಿಯಲ್ಲ. ಪ್ರತಿಯೊಂದು ಗ್ರಾಮ ಪಂಚಾಯತಿಗೆ ಸಮರ್ಪಕವಾದ ಹಾಗೂ ನೇರವಾದ ವೇತನ, ಭತ್ಯೆ ಪಡೆದ ಕಾರ್ಯದರ್ಶಿ ಸರಕಾರದಿಂದ ನೇಮಿಸಲ್ಪಟ್ಟಿದ್ದರೂ ಬಹುತೇಕ ಕಾರ್ಯದರ್ಶಿಗಳು ಪಂಚಾಯತಿಯ ಕೇಂದ್ರ ಸ್ಥಳಗಳಲ್ಲಿರದೆ ಸಾರ್ವಜನಿಕರಿಂದ ಹಾಗೂ ಪಂಚಾಯತಿ ಸದಸ್ಯರಿಂದ, ಈ ಬಗ್ಗೆ ತಕರಾರು ಇದ್ದರೂ ಆ ಕಾರ್ಯದರ್ಶಿಗಳು ಕೇಂದ್ರ ಸ್ಥಳಗಳಲ್ಲಿದ್ದು ಕಾರ್ಯನಿರ್ವಹಿಸಲು ಕಟ್ಟುನಿಟ್ಟಾದ ಕ್ರಮತೆಗೆದುಕೊಳ್ಳಲು ಮೇಲಾಧಿಕಾರಿಗಳು ಕರ್ತವ್ಯಚ್ಯುತಿ ಗೈಯುತ್ತಿದ್ದಾರೆ. ಇದು ಸರಿಯಲ್ಲ. ಆಯಾ ಗ್ರಾಮಗಳಲ್ಲಿರಬೇಕಾದ ಪಂಚಾಯತಿ ಕಾರ್ಯದರ್ಶಿಯಾಗಲೀ, ತಲಾಠಿಯಾಗಲೀ, ಸಹಕಾರಿ ಸಂಘದ ಕಾರ್ಯದರ್ಶಿಯಾಗಲಿ, ಕೃಷಿ ಸಹಾಯಕನಾಗಲೀ, ಕೆ.ಇ.ಬಿ. ಲೈನ್‌ಮನ್‌ನಾಗಲಿ ಎ.ಎನ್.ಎಂ. ಆಗಲೀ, ಆರೋಗ್ಯ ಮಾರ್ಗದರ್ಶಿಯಾಗಲೀ, ಕಿರಿಯ ಅಥವಾ

ಸಹಾಯಕ ಇಂಜನೀಯರನಾಗಲೀ, ವೆಟರಿನರಿ ಲಾಯ್ವಸ್ಟಾಕ್ ಇನ್‌ಸ್ಪೆಕ್ಟರನಾಗಲೀ ಫಾರೆಸ್ಟ ಗಾರ್ಡನಾಗಲೀ, ಮೈಲಕೂಲಿಯಾಗಲೀ ಅಥವಾ ಇನ್ನಾರೇಯಾಗಲೀ ಬಹುತೇಕ ಅವರಾರು ಅಲ್ಲಿ ವಾಸಲಾಗಿರದೆ ಅವರ ಕಾರ್ಯ ತೃಪ್ತಿಕರವಾಗಿರದೆ ಅವರ ಸೇವೆ ಆಯಾ ಗ್ರಾಮದ ಜನತೆಗೆ ಸಿಗದಂತಾಗಿದೆ. ಇದು ನಿಲ್ಲಬೇಕು.

ನಿವೇಶನ ಯೋಜನೆ, ವಿವಿಧ ವಸತಿ ಯೋಜನೆ, ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ, ರೋಜಗಾರ ಯೋಜನೆ, ಉದ್ಯೋಗ ಭರವಸೆ ಯೋಜನೆ, ಬರಗಾಲ ಯೋಜನೆ, ಬೆಳೆ ವಿಮಾ ಯೋಜನೆ, ಕುಡಿಯುವ ನೀರಿನ ಯೋಜನೆ, ಸವಲತ್ತು, ಸಹಾಯ ಸಬಸ್ಸಿಡಿ, ಉತ್ತೇಜನ ಇತ್ಯಾದಿ ಬಡವರ ಪ್ರೋತ್ಸಾಹ ಯೋಜನೆ, ಪೌಷ್ಠಿಕ ಆಹಾರ ಯೋಜನೆ, ಸ್ಕಾಲರಶಿಫ್ ಯೋಜನೆ, ನೀರಾವರಿ, ರಸ್ತೆ ಯೋಜನೆ. ಸಾರಿಗೆ ಸಂಪರ್ಕ ಯೋಜನೆ, ಜನ, ಜಾನುವಾರ ಆರೋಗ್ಯ ಯೋಜನೆ, ಬೆಳೆರೋಗ ನಿವಾರಣೆ ಯೋಜನೆ, ಭೂಸಾರ ಸಂರಕ್ಷಣಾ ಯೋಜನೆ, ಇತರೆ ಹಿಂದುಳಿದ ವರ್ಗಗಳ ಅಭಿವೃದ್ಧಿ ಯೋಜನೆ, ಮಹಿಳಾ ಮತ್ತು ಮಕ್ಕಳ ಯೋಜನೆ, ಸಾಕ್ಷರತಾ ಯೋಜನೆ, ಬೆಳೆ ಸಾಲ ವಿತರಣಾ ಯೋಜನೆ, ಶಾಲಾ ಮಕ್ಕಳ ಹಾಜರಾತಿಯ ಯೋಜನೆ, ಮಧ್ಯಾಹ್ನ ಉಪಹಾರ ಯೋಜನೆ, ಕಪ್ಪುಹಲಗೆ ಯೋಜನೆ, ಬರಗಾಲ ವೈದ್ಯರ ಯೋಜನೆ, ಆರೋಗ್ಯ ಮಾರ್ಗದರ್ಶಿ ಯೋಜನೆ, ನೆರಳುಭಾಗ್ಯ ಯೋಜನೆ, ಭಾಗ್ಯಜ್ಯೋತಿ ಯೋಜನೆ, ನೂರುಭಾವಿ - ದಶಲಕ್ಷ ಬಾವಿ ಯೋಜನೆ, ಶೌಚಾಲಯ ಯೋಜನೆ, ಆಸ್ತ್ರವಲೆ ಯೋಜನೆ, ಡ್ವಾಕ್ರಾಯೋಜನೆ, ಅಗ್ಗದರದ ಧೋತಿ ಸೀರೆ ಯೋಜನೆ, ಹಸಿರು ಕಾರ್ಡು ಯೋಜನೆ, ಸಾರ್ವಜನಿಕ ಪಡಿತರ ಯೋಜನೆ, ಗ್ರಾಮರಕ್ಷಕ ದಳ - ದಳಪತಿ ಯೋಜನೆ, ಪ್ರದೇಶ ಅಭಿವೃದ್ಧಿ ಯೋಜನೆ, ಗ್ರಾಮದ ಏಕತೆ, ಸಮಗ್ರತೆ ಸೌಹಾರ್ದತೆ, ಶಾಂತಿಸ್ಥಾಪನೆ ಯೋಜನೆ, ಗ್ರಾಮದ ನೈರ್ಮಲ್ಯ ಯೋಜನೆ, ವೃದ್ಧಾಶ್ರಮ ಯೋಜನೆ, ದನ - ಕರು, ಕುರಿ ಮೇಯುವ ಹುಲ್ಲುಗಾವಲು, ಗೋಮಾಳ ರಕ್ಷಣೆ ಯೋಜನೆ, ಜನಪದ ಸಾಹಿತ್ಯ, ಕಲೆ, ಸಂಗೀತ, ನಾಟ್ಯ, ಪ್ರೋತ್ಸಾಹ ಯೋಜನೆ, ಕರಕುಶಲ ಕೈಗಾರಿಕೆ ಪ್ರೋತ್ಸಾಹ ಯೋಜನೆ, ಸಸ್ಯ ಸಂರಕ್ಷಣೆ ಯೋಜನೆ, ಪಶುಸಂಗೋಪನಾ ಯೋಜನೆ, ವಿದ್ಯಾರ್ಥಿ ವೇತನ ಯೋಜನೆ, ಶಿಶುಮಿತ್ರ ಆಸ್ಪತ್ರೆ ಯೋಜನೆ, ಆರಾಧನಾ ಯೋಜನೆ, ವಿಶ್ವಯೋಜನೆ ಇತ್ಯಾದಿ ಇತ್ಯಾದಿ ಇನ್ನೂ ಅನೇಕ ಯೋಜನೆಗಳು ಕೇಂದ್ರ ಹಾಗೂ ರಾಜ್ಯ ಸರಕಾರಗಳ ಪುರಸ್ಕೃತ ಉತ್ತಮ ಯೋಜನೆಗಳಾಗಿದ್ದು, ಅವೆಲ್ಲ ಯೋಜನೆಗಳು ಪರಿಣಾಮಕಾರಿಯಾಗಿ ಅನುಷ್ಠಾನವಾಗಿ ಅವುಗಳಿಗೆ ನಿಗದಿ ಮಾಡಿದ ಹಣ ಎಷ್ಟೇ ಇರಲಿ ಅದೆಲ್ಲವೂ ವಾಸ್ತವಿಕ ಹಾಗೂ ಪ್ರತ್ಯಕ್ಷವಾಗಿ ವೆಚ್ಚ ಮಾಡಲ್ಪಟ್ಟು ಈ ಎಲ್ಲ ಯೋಜನೆಗಳು ಯಶಸ್ವಿಯಾದರೆ ಗ್ರಾಮದ ಸರ್ವಾಂಗೀಣ ಹಾಗೂ ಸರ್ವತೋಮುಖ ಅಭಿವೃದ್ಧಿಯಾಗುವಲ್ಲಿ ಯಾವದೇ ಸಂಶಯವಿಲ್ಲ. ಆದರೆ ಬಹುತೇಕ ಯೋಜನೆಗಳು ಯಶಸ್ವಿಯಾಗಿ ಕಾರ್ಯಗತವಾಗುತ್ತಿಲ್ಲ. ನಿಗದಿಗೊಳಿಸಿದ ಸಹಸ್ರಾರು ಕೋಟಿ ಹಣ

ಪ್ರತಿವರ್ಷ ವೆಚ್ಚವಾಗದೆ ಇರುವದು, ಖರ್ಚಾದ ಹಣ ಕಾಗದದಲ್ಲಿ ಮಾತ್ರ ಕಂಡು ಬಂದ್ದು ವಾಸ್ತವಿಕವಾಗಿ ವೆಚ್ಚವಾಗದ ದುರುಪಯೋಗ ಮಾಡಿರುವದು, ಎತ್ತಿ ಹಾಕಿರುವದು ಕೊಳ್ಳೆ ಅಥವಾ ದರೋಡೆ ಮಾಡಿರುವ ಇತ್ಯಾದಿ ಹಗರಣಗಳು, ವಿಧಾನ ಮಂಡಳ, ಸಂಸತ್ತು, ಮಂತ್ರಿ ಮಂಡಳ ಶಾಸಕರು, ಸಾರ್ವಜನಿಕರಿಂದ, ಪತ್ರಿಕೆಗಳಿಂದ ಸಿ.ಎ.ಜಿ.ಯವರಿಂದ ಸುಸ್ಪಷ್ಟವಾಗಿ ಕಂಡು ಬಂದಿವೆ, ಹಾಗೂ ತಪ್ಪಿತಸ್ಥರನೇಕರು ಹೇಗಾದರೂ ಮಾಡಿ ಪಾರಾಗುವ ಉದಾಹರಣೆಗಳು ಕೂಡ ಕಂಡುಬಂದಿವೆ. ಹೀಗಾದರೆ ಹೇಗೆ? ಇವುಗಳಿಗೆ ಕೊನೆಯೆಂದು? ಎಷ್ಟೋ ಯೋಜನೆಗಳು ಕಾಗದಗಳಲ್ಲಿಯೇ ಇದ್ದು ಸಾರ್ವಜನಿಕರಿಗೆ ಹಾಗೂ ಪ್ರಯೋಜನಕಾರರಿಗೆಯೇ ಗೊತ್ತಿಲ್ಲದೆ ಪ್ರಯೋಜನವಾಗುತ್ತಿಲ್ಲ. ಹಗರಣಗಳಲ್ಲಿ ತೊಡಗಿದರನೇಕರು ಪಂಚಾಯತಿ, ವಿಧಾನ ಮಂಡಳ, ಸಂಸತ್ತಿನ ಸದಸ್ಯರನೇಕರಾದಿಯಾಗಿ ಪಂಚಾಯತಿ ಪ್ರಧಾನರಿಂದ ಹಿಡಿದು ವಿವಿಧ ಹಂತದ ಅಧ್ಯಕ್ಷರಾದಿಯಾಗಿ ಮಂತ್ರಿ, ಮುಖ್ಯಮಂತ್ರಿ, ಪ್ರಧಾನಮಂತ್ರಿಯವರೆಗೇ, ಈ ದೇಶದ ಅನೇಕರು ಹಾಗೂ ಗ್ರಾಮಟ್ಟದ, ಕಾರ್ಯದರ್ಶಿ ತಲಾಠಿ ಆದಿಯಾಗಿ ಎಲ್ಲಾ ಮಟ್ಟದ ಅಧಿಕಾರಿಗಳಿಂದ ಹಿಡಿದು ಸರಕಾರಗಳ ಕಾರ್ಯದರ್ಶಿ ಮುಖ್ಯ ಕಾರ್ಯದರ್ಶಿಗಳವರೆಗೆ ಈ ದೇಶದ ಅನೇಕ ಅಧಿಕಾರಿಗಳು ಪಕ್ಷಪಾತ ಸ್ವಜನ ಪಕ್ಷಪಾತ, ಕರ್ತವ್ಯಚ್ಯುತಿ, ದುರಾಡಳಿತ, ಭ್ರಷ್ಟಾಚಾರ, ಸಂಚು, ಮೋಸ ವಂಚನೆ, ಹಣ ದುರುಪಯೋಗ, ಖೊಟ್ಟಿ ಲೆಕ್ಕಪತ್ರ ತಯಾರಿಕೆ ಇತ್ಯಾದಿ ಅನೇಕ ಆರೋಪಗಳಿಗೆ ಗುರಿಯಾಗ ತನಿಖೆ ನಡೆದು ಅವರ ಮೇಲೆ ಕೇಸುಗಳು ಹಾಕಲ್ಪಟ್ಟು ಇಲಾಖಾ ತನಿಖೆಯಾಗಿ ನ್ಯಾಯಾಲಯಗಳ ಮೆಟ್ಟಲು ಹತ್ತಿದರೂ, ಸಹ ಕಾರ್ಯಾಂಗದ ಅನೇಕ ಲೋಪ, ನ್ಯೂನತೆಗಳಿಂದ ಕೇಸುಗಳಲ್ಲಿ ನಿರ್ದೋಷಿಯಾಗಿ ಹೊರಬಂದ ಹಾಗೂ ಲೋಕಾಯುಕ್ತ ಇತ್ಯಾದಿ ಇಲಾಖೆಗಳಿಂದ ತಪಿತಸ್ಥನೆಂದು ಗೊತ್ತುಮಾಡಲ್ಪಟ್ಟಿದ್ದರೂ ಅಂಥಾ ನೌಕರರನ್ನು, ದೋಷಮುಕ್ತರನ್ನಾಗಿ ಮಾಡಿ ಸರಕಾರಗಳ ಆಜ್ಞೆ ಹೊರಡಿಸಿದ ಹಾಗೂ ಇಲಾಖಾ ತನಿಖೆಯಾಗಿ ನೌಕರಿಯಿಂದ ವಜಾ ಮಾಡಲ್ಪಟ್ಟನೇಕರು ಪುನಃ ನೌಕರಿಗೆ ತೆಗೆದುಕೊಳ್ಳಲ್ಪಟ್ಟು ಹಿಂದಿನಿಂದ ಹೇರಳವಾದ ಪಗಾರ ಬಾಕಿಯನ್ನು ಪಡೆದ ಅನೇಕ ಉದಾಹರಣೆಗಳು ಸಾಕಷ್ಟು ಇವೆ. ಈ ಎಲ್ಲ ದುರ್ಘಟನೆಗಳು ಈ ರಾಜ್ಯದ ಈ ದೇಶದ ಗ್ರಾಮಾಂತರ ಆಡಳಿತ ಹಾಗೂ ಅಭಿವೃದ್ಧಿ ವ್ಯವಸ್ಥೆಗೆ ಮಾರಕವಾಗಿವೆ. ಮಾರಕವಾದ ಈ ಅವ್ಯವಸ್ಥೆಯ ಸಾಮಾಜಿಕ ಅನಾಹುತಗಳಿಗೆ ಕೊನೆ ಉಂಟುಮಾಡಿ ಎಲ್ಲಾ ಹಂತದ ಆಡಳಿತ ವ್ಯವಸ್ಥೆಯನ್ನು ಸುವ್ಯವಸ್ಥೆಗೊಳಿಸಿ ಎಲ್ಲಾ ಹಂತದ ವಿವಿಧ ಅಭಿವೃದ್ಧಿ ಕಾರ್ಯ, ಯೋಜನೆಗಳನ್ನು ಯಥಾವತ್ತಾಗಿ ಚಾಚೂತಪ್ಪದೆ ಅನುಷ್ಠಾನಗೊಳಿಸಿದರೆ ಮಾತ್ರ ನಮಗೆ ಸಿಕ್ಕ ಸ್ವಾತಂತ್ರ್ಯ ಸಫಲವಾಗಿ ನಾವೇ ಸೃಷ್ಟಿಸಿಕೊಂಡ ಪ್ರಜಾತಂತ್ರ ವ್ಯವಸ್ಥೆ ಯಶಸ್ವಿಯಾಗಿ ಗ್ರಾಮಾಂತರ ಜೀವನ ಹಸನಾಗಿ ಗ್ರಾಮಾಂತರ ಪ್ರದೇಶ ಬಹುಮುಖ ಅಭಿವೃದ್ಧಿಯಾದೀತು.

❑

ನಿರ್ಮಲ ಯೋಜನೆ

ನಿರ್ಮಲ ಯೋಜನೆ - ನಿರ್ಮಲ ಕರ್ನಾಟಕವನ್ನು ನಿರ್ಮಾಣ ಮಾಡುವ ಒಂದು ಅತ್ಯಂತ ಮಹತ್ವದ ಯೋಜನೆ. ಗ್ರಾಮಾಂತರ ಪ್ರದೇಶದಲ್ಲಿಯ ಮನೆಗಳ ನೈರ್ಮಲ್ಯ, ಕೊಳವೆ ನೀರಿನ ವಿಲೇವಾರಿ, ಜನಮಲದ ವಿಲೇವಾರಿ, ಕಸಕಡ್ಡಿ - ಸಗಣಿಯ ವಿಲೇವಾರಿ, ಗಟಾರ-ಚರಂಡಿಗಳಲ್ಲಿಯ ಗಲೀಜು ನಿರ್ಮೂಲನ ಇತ್ಯಾದಿ ಹೊಲಸುಗಳನ್ನು ತೆಗೆದುಹಾಕಿ ಗ್ರಾಮದ ವೈಯ್ಯಕ್ತಿಕ ಹಾಗೂ ಸಾಮೂಹಿಕ ಆರೋಗ್ಯಕರ ವಾತಾವರಣವನ್ನು ನಿರ್ಮಿಸುವದೇ ಆಗಿರುತ್ತದೆ. ಈ ದಿಶೆಯಲ್ಲಿ ರಾಜ್ಯ ಸರಕಾರ ನಿರ್ಮಲ ಕರ್ನಾಟಕ ಯೋಜನೆಯನ್ನು ಹಾಕಿಕೊಂಡಿದ್ದು ಅದು ಯಶಸ್ವಿಯಾಗಲೇಬೇಕು. ಸ್ವಾತಂತ್ರ್ಯ ಸಿಕ್ಕು ಅನೇಕ ದಶಕಗಳು ದಾಟಿ ಶಾಲೆ - ಕಾಲೇಜು, ವಿಶ್ವವಿದ್ಯಾಲಯಗಳಿಂದ ಹಳ್ಳಿಗರನೇಕರು ವಿದ್ಯಾವಂತರಾಗಿ ಹೊರಬರುತ್ತಿದ್ದರೂ ಗ್ರಾಮಗಳಲ್ಲಿಯ ಪ್ರತಿಷನೆಗೆ ಒಂದರಂತೆ ಶೌಚಕೂಪ ಅಥವಾ ಶೌಚಗುಂಡಿ ಅಥವಾ ಪಾಯಖಾನೆಗಳಾಗಲೀ, ಪ್ರತಿಗ್ರಾಮಕ್ಕೆ ಅಲ್ಲಲ್ಲಿಯ ಅಗಸಿಗಳಲ್ಲಿ ಸಾಮೂಹಿಕ ಶೌಚಕೂಪಗಳಾಗಲಿ ರಚನೆಯಾಗದೇ ಹಳ್ಳಿಗರು ಸಾರ್ವಜನಿಕ ಜಾಗದಲ್ಲಿ ಬಹಿರ್ದೆಶೆಗೆ ಹೋಗುವ ಹಾಗೂ ಗಲೀಜು ಮಾಡುವ ಕೆಟ್ಟ ಸಂಪ್ರದಾಯ ನಡೆದೇ ಇದೆ. ಈ ಕೆಟ್ಟ ಸಂಪ್ರದಾಯ ಹೋಗಬೇಕಾದರೆ ಹಾಗೂ ಗ್ರಾಮಾಂತರ ಪರಿಸರ ಉತ್ತಮವಾಗಬೇಕಾದರೆ ಸರಕಾರದ ಶೌಚಕೂಪ (ಶೌಚಾಲಯ ಶಬ್ದಸಾಧುವಾದುದಲ್ಲ) ನಿರ್ಮಾಣ ಯೋಜನೆ ಯಶಸ್ವಿಯಾಗಲೇಬೇಕು. ಈ ಯೋಜನೆ ಯಶಸ್ವಿಯಾಗಬೇಕಾದರೆ ಪ್ರತಿಗ್ರಾಮದ ಪಂಚಾಯತಿ ಕಾರ್ಯದರ್ಶಿಯವರಿಂದ ಹಿಡಿದು ತಾಲೂಕು, ಜಿಲ್ಲಾ ಹಾಗೂ ರಾಜ್ಯಮಟ್ಟದ ಸಂಬಂಧಿಸಿದ ಕಾರ್ಯದರ್ಶಿಯವರ ಹಾಗೂ ಮುಖ್ಯ ಕಾರ್ಯದರ್ಶಿವರೆಗಿನ ಎಲ್ಲಾ ಅಧಿಕಾರಿಗಳು ಹಾಗೂ ಪ್ರತಿ ಪಂಚಾಯತಿ, ವಿಧಾನಸಭೆ ಲೋಕಸಭೆ ಸದಸ್ಯರಾದಿಯಾಗಿ ರಾಜ್ಯದ ಮಂತ್ರಿ ಮುಖ್ಯ ಮಂತ್ರಿಯವರೆಗೆ ಎಲ್ಲರೂ ಜವಾಬ್ದಾರಿ ವಹಿಸಿ ಈ ಯೋಜನೆಯನ್ನು ಯಶಸ್ವಿಗೊಳಿಸ ಬೇಕು. ಆದರೆ ದುರ್ದೈವದಿಂದ ಇವರೆಲ್ಲರ ಅನಾಸಕ್ತಿ, ಕಾರ್ಯ ವೈಫಲ್ಯ ಬೇಜವಾಬ್ದಾರಿ ಯಿಂದ ಈ ಯೋಜನೆ ಕುಂಟುತ್ತ ನಡೆದು ವೈಫಲ್ಯದ ಹಾದಿ ಹಿಡಿದಿರುವದು ಯಾರಿಗೂ ಭೂಷಣವಲ್ಲ. ಜನತೆಯ ಸೇವಕರಾದ ನೌಕರರು ಹಾಗೂ ಜನತೆಯ ಪ್ರತಿನಿಧಿಗಳಾದ

ಚುನಾಯಿತರು ಇನ್ನಾದರೂ ಜಾಗ್ರತರಾಗಿ ಗ್ರಾಮಾಂತರ ನೈರ್ಮಲ್ಯ ಹಾಗೂ ಸ್ವಚ್ಛತೆಯನ್ನು ಕಾಪಾಡಲೇಬೇಕು ಹಾಗೂ ತಮ್ಮ ಹೊಣೆಗಾರಿಕೆಯನ್ನು ಅರಿತು ನಡೆಯಲೇಬೇಕು.

ರಾಜ್ಯದ ಎಲ್ಲಾ ಜಿಲ್ಲೆಗಳ ರಾಜ್ಯಾದ್ಯಂತ 95-96ರಲ್ಲಿ ಸರಕಾರದಿಂದ ಮಂಜೂರಾದ ನಿಗದಿಪಡಿಸಿದ ನಿರ್ಮಾಣಮಾಡಬೇಕಾಗಿದ್ದ ಶೌಚಕೂಪಗಳ ಸಂಖ್ಯೆ 4,71,522. ಪ್ರತಿ ಗ್ರಾಮಪಂಚಾಯತಿ ಕ್ಷೇತ್ರಗಳಲ್ಲಿ ನಿರ್ಮಿಸಬೇಕಾದ ಶೌಚಕೂಪಗಳು ಒಂದುನೂರು. ರಾಜ್ಯದಲ್ಲಿ ಒಟ್ಟು 5,641 ಗ್ರಾಮಪಂಚಾಯತಿಗಳಿವೆ, 95-96ರಲ್ಲಿ ನಿಗದಿತ ನಿರ್ಮಾಣವಾಗಬೇಕಾದ 4,71,533 ಶೌಚಕೂಪಗಳಲ್ಲಿ 1,32,140 ಶೌಚಕೂಪಗಳು ಮಾತ್ರ ನಿರ್ಮಾಣವಾಗಿದೆ. ಕನಿಷ್ಠ ಗುರಿಸಾಧಿಸಲಾಗಿವೆ. ಸರಕಾರದಿಂದ ಬಿಡುಗಡೆಯಾಗಬೇಕಾದ ಅನುದಾನದ ಮೊತ್ತ 78.52 ಕೋಟಿ ಇದ್ದರೂ ಇದರಲ್ಲಿ ಕೇವಲ 20.52 ಕೋಟಿ ಬಿಡುಗಡೆಯಾಗಿದೆ. ವಾಸ್ತವಿಕ ವೆಚ್ಚ ಗೊತ್ತಾಗಿಲ್ಲ.

ಈ ಯೋಜನೆಯ ಯಶಸ್ವಿಗಾಗಿ ಪ್ರತಿ ಜಿಲ್ಲೆಯಲ್ಲಿ ಜಿಲ್ಲಾ ಪಂಚಾಯತಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ 9 ಅಥವಾ ಹೆಚ್ಚು ಹೊಣೆಗಾರರ ಸಮಿತಿಯನ್ನು ರಚಿಸಲಾಗಿದೆ. ಪ್ರತಿ ಗ್ರಾಮ ಪಂಚಾಯತಿಯಲ್ಲೂ ಸಹ ನಿರ್ಮಲಯೋಜನಾ ಅನುಷ್ಠಾನ ಸಮಿತಿಯನ್ನು ರಚಿಸಬೇಕೆಂದಿದೆ. ಈ ಸಮಿತಿಗಳು ರಚಿತವಾಗಿದೆಯೇ? ಆಗಿದ್ದರೆ ಕಾರ್ಯನಿರ್ವಹಿಸು ತ್ತಿದೆಯೇ? ರಾಜ್ಯದಲ್ಲಿಯ 5,640 ಗ್ರಾಮಾಪಂಚಾಯತಿಗಳ ವ್ಯಾಪ್ತಿಯಲ್ಲಿ ಪ್ರತಿ ವರ್ಷ ಸರಸಾರಿ ಒಂದನೂರು ಕೌಟುಂಬಿಕ ಶೌಚಕೂಪಗಳನ್ನು ನಿರ್ಮಿಸುವ ಗುರಿ ಇದೆ. ಬಡತನ ರೇಖೆಗಿಂತ ಕೆಳಗೆ ಇರುವ ಯಾವದೇ ಜನಾಂಗದ ಫಲಾನುಭವಿಗಳಿಗೆ ಘಟಕವೊಂದಕ್ಕೆ ರೂ. 1650, ಬಡತನ ರೇಖೆಗಿಂತ ಮೇಲಿರುವ ಯಾವದೇ ಜನಾಂಗದ ಫಲಾನುಭವಿ ಗಳಿಗೆ ರೂ. 1,200 ಮೀರದ ಸಹಾಯಧನ ಕೊಡುವ ಯೋಜನೆ ಇದಾಗಿದೆ.

ಸರಕಾರದ ಆದೇಶದ ಪ್ರಕಾರ 2-10-95 ರಿಂದ 2-10-96ರ ವರೆಗಿನ ಒಂದು ವರ್ಷದ ಅವಧಿಯಲ್ಲಿ 5641 ಗ್ರಾಮಪಂಚಾಯತಿಗಳ ವ್ಯಾಪ್ತಿಯಲ್ಲಿ 5,64,100 ಶೌಚಕೂಪ ಘಟಕಗಳನ್ನು ನಿರ್ಮಿಸಬೇಕಾಗಿತ್ತು ಈ ಬಗ್ಗೆ 92.23 ಕೋಟಿ ಮೊತ್ತವನ್ನು ವೆಚ್ಚಮಾಡಲೇಬೇಕಾಗಿತ್ತು. ಇದು ಸರಕಾರದ ಗೊತ್ತು ಗುರಿ. ಆದರೆ ಈ ಗೊತ್ತುಗುರಿ ಗಾಳಿಗೆ ತೂರಲ್ಪಟ್ಟಿದೆ. ಈ ಗೊತ್ತುಗುರಿಯನ್ನು ಅನುಷ್ಠಾನ ಮಾಡಿ ಯಶಸ್ವಿಮಾಡಿ ಗ್ರಾಮಾಂತರ ಕುಟುಂಬಗಳಿಗೆ ಸಿಗಬಹುದಾಗಿದ್ದ ಸರಕಾರದ ಸಾರ್ವಜನಿಕ ಸವಲತ್ತು ಸಹಾಯ ಒದಗಿಸಿಕೊಟ್ಟು ಗ್ರಾಮಾಂತರ ನೈರ್ಮಲ್ಯ ನಿರ್ಮಾಣಕ್ಕೆ ಸಹಾಯಕಾರಿಯನ್ನಾಗಿ ಮಾಡಿ ಎಲ್ಲಾ ಹಂತದ ಚುನಾಯಿತ ಪ್ರತಿನಿಧಿಗಳು ಹಾಗೂ ನೌಕರರು ಶ್ರೇಯಸ್ಸನ್ನು ಪಡೆಯಬೇಕಾಗಿತ್ತು. ಆದರೆ ಇವರೆಲ್ಲರೂ ಸಂಪೂರ್ಣ ವಿಫಲರಾಗಿದ್ದಾರೆ. ಹಾಗೂ ಸರಕಾರದ ಆದೇಶವನ್ನು ಧಿಕ್ಕರಿಸಿ ಗ್ರಾಮಾಂತರ ಜನರಿಗೆ ಮಾರಕವಾಗಿದ್ದಾರೆ. ಇದು ಹೊಣೆಗಾರರಾದ ಇವರೆಲ್ಲರಿಗೂ ಭೂಷಣವಲ್ಲ. ಇದೇ ರೀತಿ ಗ್ರಾಮಾಂತರ ಜನರಿಗೆ ತಲುಪಬೇಕಾದ ಅನೇಕ ಯೋಜನೆಗಳು ಯಶಸ್ವಿಯಾಗಿ ಅನುಷ್ಠಾನವಾಗದೇ ಅವೆಲ್ಲವೂ

ಕಾಗದ - ಕುದುರೆಗಳಾಗಿ ಕಂಡೂ ಕಾಣದವುಗಳಾಗಿವೆ. ವಿವಿಧ ಹಂತದ ಜನತಾ ಪ್ರತಿನಿಧಿಗಳು ಹಾಗ್ಗೂ ನೌಕರರು ಕಾಗದ ಕುದುರೆಗಳ ಯೋಜನಾ ಸವಾರರು ಆಗಬಾರದು. ಇನ್ನಾದರೂ ಇವರು ತಮ್ಮ ತಮ್ಮ ಹೊಣೆಯರಿತು ನಿರ್ಮಲ ಯೋಜನೆ ಹಾಗೂ ಇತರ ಯೋಜನೆಗಳು ನಿರ್ಮೂಲವಾಗದೆ ಯಶಸ್ವಿಯಾಗುವಂತೆ ಜವಾಬ್ದಾರಿ ವಹಿಸಿ ಪ್ರಜಾಸತ್ತೆಗೆ ತಾರಕವಾಗಬೇಕೇ ಹೊರತು ಮಾರಕವಾಗಬಾರದು. ಜನತೆ ಕೂಡ ಎಚ್ಚತ್ತು ಜಾಗ್ರತರಾಗಿ ತಮಗೆ ಸಲ್ಲಬೇಕಾದ ಯೋಜನೆಗಳು ಸಲ್ಲದೇ ವಿಫಲವಾದಾಗ ವೈಫಲ್ಯಕ್ಕೆ ಕಾರಣರಾದ ನೌಕರವರ್ಗ ಹಾಗೂ ಪ್ರತಿನಿಧಿ ವರ್ಗಕ್ಕೆ ತಕ್ಕ ಪಾಠ ಕಲಿಸಬೇಕು ಇಲ್ಲವಾದರೆ ಪ್ರಜಾಪ್ರಭುತ್ವವೇ ವಿಫಲ ಹಾಗೂ ನಿರುಪಯೋಗವಾದೀತು.

❑

ಹೊಸ ಜಿಲ್ಲೆಗಳ ನಿರ್ಮಾಣ : ಕೆಲವು ಚಿಂತನೆ

ರಾಜ್ಯದಲ್ಲಿ ಮುಂಬಯಿ ಕರ್ನಾಟಕದ ಬೆಳಗಾವಿ ಜನಸಂಖ್ಯೆ 35.84 ಲಕ್ಷ, ವಿಸ್ತೀರ್ಣ 134 ಚ.ಕಿ.ಮೀ. ಧಾರವಾಡ ಜನಸಂಖ್ಯೆ 35.03 ಲಕ್ಷ, ವಿಸ್ತೀರ್ಣ 137 ಚ.ಕಿ.ಮೀ. ಬಿಜಾಪೂರ ಜನಸಂಖ್ಯೆ 29.28 ಲಕ್ಷ, ವಿಸ್ತೀರ್ಣ 171 ಚ.ಕಿ.ಮೀ. ಹೈದರಾಬಾದ ಕರ್ನಾಟಕದ ಗುಲಬರ್ಗಾ ಜನಸಂಖ್ಯೆ 25.82 ಲಕ್ಷ, ವಿಸ್ತೀರ್ಣ 162 ಚ.ಕಿ.ಮೀ. ರಾಯಚೂರು ಜನಸಂಖ್ಯೆ 23.10 ಲಕ್ಷ, ವಿಸ್ತೀರ್ಣ 140 ಚ.ಕಿ.ಮೀ. 162 ಚ.ಕಿ.ಮೀ. ರಾಯಚೂರ ಜನಸಂಖ್ಯೆ 23.10 ಲಕ್ಷ, ವಿಸ್ತೀರ್ಣ 140 ಚ.ಕಿ.ಮೀ. ಈ ಐದು ಜಿಲ್ಲೆಗಳು ಉತ್ತರ ಕರ್ನಾಟಕದ ಅತೀ ದೊಡ್ಡ ಜಿಲ್ಲೆಗಳಾಗಿದ್ದು, ವಿಸ್ತೀರ್ಣ ದಲ್ಲಿಯೂ ಸಹ ಇಡೀ ರಾಜ್ಯದಲ್ಲಿ ಈ ಐದು ಜಿಲ್ಲೆಗಳು ಭಾರಿ ವಿಶಾಲವಾದವುಗಳಾಗಿ ಈ ಜಿಲ್ಲೆಗಳ ದೂರದ ತಾಲೂಕುಗಳ ಜನರು ಈಗಿನ ಜಿಲ್ಲಾ ಕೇಂದ್ರ ಸ್ಥಳಗಳಿಗೆ ಬಂದು ಹೋಗಲು ಅತೀವ ಅನಾನುಕೂಲವಾಗಿದ್ದರಿಂದ ಈ ಐದು ಜಿಲ್ಲೆಗಳನ್ನು ವಿಂಗಡಿ, ಆರು ಹೊಸ ಜಿಲ್ಲೆಗಳನ್ನು ರಚಿಸಲು ಈ ಐದು ಜಿಲ್ಲೆಗಳ ಜನರ ಬೇಡಿಕೆ ಬಹುದಿನಗಳಿಂದ ಇದ್ದರೂ ದಕ್ಷಿಣ ಕರ್ನಾಟಕದವರು ರಾಜ್ಯದ ಆಡಳಿತದಲ್ಲಿ ಪ್ರಭಾವಶಾಲಿಗಳಾಗಿರು ವದರಿಂದ ಈ ಉತ್ತರ ಭಾಗದ ಜನತೆಯ ಹಾಗೂ ಜನತಾ ಪ್ರತಿನಿಧಿಗಳು ದೌರ್ಬಲ್ಯದ ದುರುಪಯೋಗ ಹಾಗೂ ದುರ್ಲಾಭ ಮಾಡಿಕೊಂಡು ಕುಂಟುನೆಪಗಳನ್ನು ಮುಂದೆ ಮಾಡಿ ಹೊಸ ಜಿಲ್ಲೆಗಳ ನಿರ್ಮಾಣ ಮಾಡುವಲ್ಲಿ ಸರಕಾರ ಹಾಗೂ ಸರಕಾರದ ಮುಖ್ಯಮಂತ್ರಿಗಳು ಹಿಂದೇಟು ಹಾಕುವದು ಸಮರ್ಥನೀಯವಲ್ಲ.

ಮೊದಲಿನ ಬೆಂಗಳೂರು ಜಿಲ್ಲೆಯ ವಿಸ್ತೀರ್ಣ ಕೇವಲ 80 ಚ.ಕಿ.ಮೀ. ಇದ್ದು ಬೆಂಗಳೂರು ಕೇಂದ್ರಕ್ಕೆ ಕೇವಲ 59 ಕಿ.ಮೀ. ಅಂತರದೊಳಗೆ ಎಲ್ಲಾ ತಾಲೂಕುಗಳಿದ್ದರೂ ಸಹ ಈ ಜಿಲ್ಲೆಯನ್ನು ವಿಂಗಡಿಸಿ ನೇರವಾಗಿ, ಬೆಂಗಳೂರು ಗ್ರಾಮಾಂತರ ಹೊಸ ಜಿಲ್ಲೆಯನ್ನು ಮಾಡಲಾಯಿತು. ಈ ಹೊಸ ಜಿಲ್ಲೆಯ ನಿರ್ಮಾಣ ಅನಾವಶ್ಯಕವಿದ್ದರೂ ಮಾಡಲಾಗಿದೆ. ಸಂತೋಷ, ಆದರೆ ಇದೇ ತತ್ವದ ಮೇಲೆ ಈ ಐದು ಜಿಲ್ಲೆಗಳನ್ನು ಒಡೆದು ಆರು ಹೊಸ ಜಿಲ್ಲೆಗಳನ್ನು, ದಕ್ಷಿಣ ಕನ್ನಡ ಜಿಲ್ಲೆಯನ್ನು ಒಡೆದು ಮತ್ತೊಂದು ಹೆಚ್ಚಿನ ಜಿಲ್ಲೆಯನ್ನು ಮಾಡುವದು ಜನತೆಗೆ ಅನುಕೂಲ ಹಾಗೂ ಆಡಳಿತ

ಹಿತದೃಷ್ಟಿಯಿಂದ ಅತ್ಯವಶ್ಯವಿದ್ದರೂ ಅನಾವಶ್ಯಕವಾದ ತಾಳಮೇಳ ತಳಬುಡಗಳಿಲ್ಲದ ಮೂರು ಸಮಿತಿಗಳನ್ನು ನೇಮಿಸಿ ವರದಿ ತರಿಸಿಕೊಂಡು ಆ ವರದಿಗಳನ್ನು ಮೂಲೆಗೆ ತಳ್ಳಿ ದಿನಮೇಕಮಾಡುತ್ತ ಅನಾವಶ್ಯವಾದ ಗೊಂದಲವನ್ನು ಮಾಡುತ್ತ ಕುಂಟುನೆಪಗಳನ್ನೊಡ್ಡುತ್ತ ಜನತೆಯ ಆಶೆ ಆಕಾಂಕ್ಷೆಗಳಿಗೆ ತಿಲಾಂಜಲಿಯನ್ನಿತ್ತು ಜನತೆಯನ್ನು ಕಂಗೆಡಿಸಿ ಅವರನ್ನು ಕೆರಳಿಸುವದು ಯಾವ ಸರಕಾರಕ್ಕೂ ಭೂಷಣವಲ್ಲ.

ಧಾರವಾಡ ಜಿಲ್ಲಾ ಕೇಂದ್ರದಿಂದ ಹಿರೇಕೆರೂರ ತಾಲೂಕ ಕೇಂದ್ರ 146 ಕಿ.ಮೀ. ರಾಣೆಬೆನ್ನೂರು ತಾಲೂಕು ಕೇಂದ್ರ 126. ಕಿ.ಮೀ. ದೂರ ಇದ್ದು ಜಿಲ್ಲೆಯ ಬಹು ವಿಸ್ತೀರ್ಣದ ಪರಿಣಾಮವಾಗಿ, ಹಾವೇರಿ ಹಾಗೂ ಹಾವೇರಿ ಸುತ್ತಮುತ್ತಲಿನ 7 ತಾಲೂಕುಗಳನ್ನೊಂಡು 12.70 ಲಕ್ಷ ಜನಸಂಖ್ಯೆಯುಳ್ಳ ಹಾವೇರಿ ಜಿಲ್ಲೆಯನ್ನು ನಿರ್ಮಿಸಲು ಈಗಿನ ಹಾಗೂ ಹಿಂದಿನ ಎಲ್ಲಾ ಹಂತದ ಪ್ರಜಾಪ್ರತಿನಿಧಿಗಳು ಎಲ್ಲಾ ರಾಜಕೀಯ ಪಕ್ಷಗಳ ಮುಖಂಡರು, ಸಂಘ ಸಂಸ್ಥೆಗಳು ಮುಖಂಡರು ಯಾವುದೇ ಭಿನ್ನ ಭೇಧ, ಭಿನ್ನಾಭಿಪ್ರಾಯವಿಲ್ಲದೆ ಕೇಳುತ್ತಲೇ ಬಂದಿರುವಾಗ 7 ತಾಲೂಕುಗಳಿಂದ ಸುತ್ತುವರಿದ ಹೊಸ ಹಾವೇರಿ ಜಿಲ್ಲಾ ಕೇಂದ್ರ ಧಾರವಾಡ ಜಿಲ್ಲಾ ಕೇಂದ್ರದಿಂದ 104 ಕಿ.ಮೀ. ದೂರದಲ್ಲಿದ್ದು, ಎಲ್ಲಾ ರೀತಿಯಿಂದಲೂ ವಿವಾದಾಸ್ಪದವಾಗದ ಸೂಚಿತ 9 ಜಿಲ್ಲೆಗಳಲ್ಲಿ ಹಾವೇರಿ ಜಿಲ್ಲಾ ಬೇಡಿಕೆ ಪ್ರಥಮ ಅರ್ಹತೆ ಇದ್ದು, ಹಾವೇರಿ ಜಿಲ್ಲೆಯನ್ನು ನಿರ್ಮಾಣ ಮಾಡುವಲ್ಲಿ ಮೀನ - ಮೇಷ ಮಾಡುವದು ಜನತೆಯನ್ನು ಕೆರಳಿಸಿ ಮುಂದಿನ ಅನಾಹುತಗಳಿಗೆ ಸರಕಾರ ಆಹ್ವಾನ ಕೊಡುತ್ತಿರುವದು ಸರಿಯಲ್ಲ.

ರಾಜ್ಯ ಸರಕಾರ ಹಾವೇರಿ, ಗದಗ, ಬಾಗಲಕೋಟೆ, ಗೋಕಾಕ, ಯಾದಗೀರ, ಕೊಪ್ಪಳ ದಾವಣಗೇರಿ, ಚಾಮರಾಜನಗರ, ಉಡುಪಿ ಹೀಗೆ 9 ಜಿಲ್ಲಾ ನಿರ್ಮಾಣ ಮಾಡುವದಾಗಿ ಹೇಳಿ, ಮಾಡದೆ ಅನೇಕ ಸಮಸ್ಯೆಗಳಿಗೆ ದಾರಿ ಮಾಡುತ್ತ, ಜನರಲ್ಲಿ ತಪ್ಪು ಅಭಿಪ್ರಾಯ ಮೂಡುವಂತೆ ಮಾಡುತ್ತ ಅಪಸ್ವರ ಅನಾವಶ್ಯಕ ತರಕಾರುಗಳಿಗೆ ಅಸ್ಪದ ಮಾಡಿಕೊಡುವುದು ಸಾಧುವಲ್ಲ. ಹೊಸ ಜಿಲ್ಲೆಗಳನ್ನು ನಿರ್ಮಾಣ ಮಾಡುವದಾಗಿ ಪ್ರಕಟಿಸಿ, ನಿರ್ಮಾಣವಾಗಬಹುದಾದ ಜಿಲ್ಲೆಗಳಿಗೆ ಕೂಡಿಸಲು ಯೋಚಿಸಿದ ತಾಲೂಕುಗಳ ಜನತೆಯು ತಕರಾರುಗಳು ಬರುವಂತೆ ವಾತಾವರಣವನ್ನುಂಟು ಮಾಡಿ, ಗೊಂದಲವನ್ನೆಬ್ಬಿಸಲು ಸರಕಾರ ಹೊರಟಿರುವದು ಸರಕಾರಕ್ಕೆ ಭೂಷಣವಲ್ಲ.

ಹಾವೇರಿ ಧಾರವಾಡದಿಂದ 104 ಕಿ.ಮೀ. ದೂರದಲ್ಲಿದ್ದು ಈ ಹಾವೇರಿ ಜಿಲ್ಲಾ ನಿರ್ಮಾಣಕ್ಕೆ ಪ್ರಥಮ ಶ್ರೇಷ್ಟತೆ ಪ್ರಾಶಸ್ತ್ಯಕೊಟ್ಟು ಕರ್ನಾಟಕ ಭೂಕಂದಾಯ ಅಧಿನಿಯಮದ ಕಲಂ 4(4) ಪ್ರಕಾರ ಸರಕಾರ ಅಧಿಕೃತ ಪ್ರಕಟನೆಯನ್ನು ಹೊರಡಿಸಲೇ ಬೇಕು. ಗದಗ, ಧಾರವಾಡದಿಂದ 76 ಕಿ.ಮೀ. ಇದೆಯೆಂದು ಗದಗ ಜಿಲ್ಲೆಯ ನರಗುಂದ, ನವಲಗುಂದ ತಾಲೂಕಿನವರು ಧಾರವಾಡ ಜಿಲ್ಲೆಯಲ್ಲಿರುತ್ತೇವೆಂದು ತರಕಾರು ಇದ್ದರೆ, ಗೋಕಾಕದ ಬದಲು ಚಿಕ್ಕೋಡಿ ಜಿಲ್ಲೆ ಆಗಲೆಂದು ತಕರಾರು ಇದ್ದರೆ,

ಯಾದಗೀರ ಬದಲು ಮಧ್ಯವರ್ತಿ ತಾಲೂಕು, ಶಹಪೂರ ಆಗಲೆಂಬ ತಕರಾರು ಇದ್ದರೆ, ದಾವಣರೆ ಚಿತ್ರದುರ್ಗದಿಂದ 64 ಕಿ.ಮೀ. ಇದೆ ಎಂದು ಹಾಗೂ ಚಿತ್ರದುರ್ಗ ತಾಲೂಕಿಗೆ ಹೊಂದಿಯೇ ಇದೆಯೆಂದು ಚನ್ನಗಿರಿ ತಾಲೂಕ ಹಾಗೂ ಹೊಳಲಕೆರೆ ತಾಲ್ಲೂಕುಗಳು ದಾವಣಗೆರೆ ಕೂಡಲು ತಕರಾರು ಇದ್ದರೆ, ಚಾಮರಾಜನಗರದ ಬದಲು ನಂಜನಗೂಡು ಆಗಲೆಂಬ ತಕರಾರು ಇದ್ದರೆ, ಮಂಗಳೂರಿಂದ 58 ಕಿ.ಮೀ. ಅಂತರದಿಲ್ಲಿಯರುವ ಉಡುಪಿ ಬದಲು ಕಂದಾಪುರ ಅಗಲೆಂಬ ತಕರಾರು ಇದ್ದರೆ ಈ ಬಗ್ಗೆ ಕರಡುಪತ್ರದ ಪ್ರಕಟಣೆ ಹೊರಡಿಸಿ ತಕರಾರುಗಳನ್ನು ಕೇಳಿ ಸೂಕ್ತ ಕ್ರಮ ತೆಗೆದುಕೊಂಡು ಆದಷ್ಟು ಬೇಗ ಹೊಸ ಜಿಲ್ಲೆಗಳನ್ನು ಅಸ್ತಿತ್ವದಲ್ಲಿ ತರುವದು ಒಳ್ಳೆಯದು. ತಕರಾರಿಲ್ಲದಿದ್ದರೂ ಘೋಷಣೆ ಅಗತ್ಯ.

ಈ ರಾಷ್ಟ್ರದಲ್ಲಿ ಅನೇಕರು ಸತ್ಯಾಗ್ರಹಗಳ ಸೋಗಿನಲ್ಲಿ ದುರಾಗ್ರಹಗಳನ್ನು ನಡೆಸುತ್ತಾ ಅಂತಹ ದುರಾಗ್ರಹಗಳಿಗೆ ಸರಕಾರ ಮಣಿದು ಏನೆಲ್ಲಾ ಬಯಕೆಯನ್ನು ಈಡೇರಿಸುತ್ತ ಬಂದಿರುವ ಸಾಕಷ್ಟು ಜೀವಂತ ಉದಾಹರಣೆಗಳಿವೆ. ಹಾವೇರಿ ಜಿಲ್ಲಾ ನಿರ್ಮಾಣದ ಬಗ್ಗೆ ಏಳು ತಾಲೂಕುಗಳ ಯಾವುದೇ ಜನತೆಯ ಯಾವುದೇ ತಕರಾರು ಇರದೆ ಒಮ್ಮತದ ಅಭಿಪ್ರಾಯವಿದ್ದು ಎಲ್ಲಾ ಏಳು ತಾಲೂಕುಗಳ ಮುಖಂಡರ ಸರದಿ, ಸತ್ಯ, ನ್ಯಾಯಸಮ್ಮತ ಹಾಗೂ ಸಮಂಜಸವಾದ ಸತ್ಯಾಗ್ರಹ ಮಾಡುತ್ತ ಸರಕಾರದ ಗಮನವನ್ನು ಸೆಳೆಯುತ್ತಿರುವದನ್ನು ಗಮನಿಸಿ ಈ ಏಳು ತಾಲೂಕುಗಳ ಜನತೆಯ ತಾಳ್ಮೆಗೆ ಸರಕಾರ ತಿಲಾಂಜಲಿಯನ್ನೀಡದೆ ಉದ್ರಿಕ್ತ, ಉಗ್ರಪರಿಸ್ಥಿತಿಗೆ ಆಸ್ಪದ ಕೊಡದೆ ಒಡೆದು ಆಳುವ ನೀತಿಯನ್ನು ಕೃತಿಯಲ್ಲಿ ತಾರದೆ, ಯಾವುದೇ ಸಮಸ್ಯೆಯನ್ನು ಹುಟ್ಟುಹಾಕದೆ ಎಲ್ಲಾ 9 ಜಿಲ್ಲೆಗಳ ಪೈಕಿ ಹಾವೇರಿ ಜಿಲ್ಲೆಯನ್ನು ಪ್ರಪ್ರಥಮವಾಗಿ ನಿರ್ಮಾಣ ಮಾಡಿ 1-4-97 ರಿಂದ ಅಸ್ತಿತ್ವದಲ್ಲಿ ತರುವಂತೆ ಮಾಡುವದು ಸರಕಾರಕ್ಕೆ ತಾರತ ಹಾಗೂ ಆದ್ಯಕರ್ತವ್ಯ, ಇಲ್ಲವಾದರೆ ಸರಕಾರ ಜನತೆಯ ಭಾವನೆಗಳನ್ನು ಕೆರಳಿಸಿ ಅನಾವಶ್ಯಕ ಅನಾಹುತಗಳಿಗೆ ಆಹ್ವಾನ ಕೊಟ್ಟಂತಾದೀತು.

❑

ದಿವಾಳಿ ಸಾರಿಗೆ ಸಂಸ್ಥೆ ಸುಧಾರಣೆ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ರಾಜ್ಯದ ಜನತೆಗಾಗಿ ನಗರ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಉತ್ತಮ ಸಕಾಲಿಕ ಹಾಗೂ ಸುವ್ಯವಸ್ಥಿತವಾದ ಸಂಚಾರಿ ವ್ಯವಸ್ಥೆಯನ್ನು ಮಾಡಿಕೊಡಲು ರಚಿತವಾದ ಆದರ್ಶ ಸಂಸ್ಥೆ, ಈ ಸಂಸ್ಥೆ ಸಮರ್ಪಕವಾಗಿ ಕಾರ್ಯಮಾಡುತ್ತದೆಂಬ ಆಶೆ ಎಲ್ಲರಿಗೂ ಇತ್ತು. ಮೊದಮೊದಲಿನ ಈ ಸಂಸ್ಥೆಯ ಸುವ್ಯಸ್ಥಿತ ಕಾರ್ಯಾಚರಣೆ ಪ್ರಾಮಾಣಿಕರಿಗಾಗುತ್ತಿದ್ದ ಉತ್ತಮ ಅನುಕೂಲತೆ, ಲಾಭದಾಯಕ ಅಂಶ, ನಿಗದಿತ ಸಮಯಕ್ಕನುಸಾರವಾದ ಸಂಚಾರ, ಸಿಬ್ಬಂದಿಗಳಲ್ಲಿಯ ಶಿಸ್ತು, ಕಾರ್ಯಶೀಲತೆ ದಕ್ಷತೆಗಳೆಲ್ಲವನ್ನೂ ನೋಡಿ ಬಸ್ಸುಗಳ ಖಾಸಗಿಕರಣವೇ ಬೇಡ ರಾಜ್ಯಾಂದ್ಯಂತ ಎಲ್ಲಾ ಕಡೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳ ಬಸ್ಸುಗಳಿರಬೇಕೆಂಬ ಉದ್ದೇಶವನ್ನು ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಪತ್ರಿಕಾಂಗ ಹಾಗೂ ಪ್ರತಿಯೊಬ್ಬ ಪ್ರಜೆಯೂ ಹೊಂದಿದ್ದರು. ರಾಜ್ಯದಲ್ಲಿಯ ಬಹುತೇಕ ಸಾರಿಗೆ ಸಂಸ್ಥೆ ಘಟಕಗಳು ಲಾಭಪಡೆಯುತ್ತಿದ್ದವಲ್ಲದೆ ಲಾಭಕ್ಕಾಗಿ ಪೈಪೋಟಿಯನ್ನೇ ನಡೆಸಿದ್ದವು. ರಸ್ತೆ ಸಾರಿಗೆ ಬಸ್ಸುಗಳಲ್ಲಿ ಪ್ರಯಾಣ ಮಾಡುವದೆಂರೆ ಅದೊಂದು ಗೌರವ, ಘನತೆಯುತ ಪ್ರಯಾಣವೇ ಆಗಿತ್ತು. ವೇಳೆಗೆ ಸರಿಯಾಗಿ ಹೊರಟು ವೇಳೆಗೆ ಸರಿಯಾಗಿ ತಲುಪಿ ದೈನಂದಿನ ಕೆಲಸ ಮುಗಿಸಿಕೊಂಡು ವೇಳೆಗೆ ಸರಿಯಾಗಿ ತಮ್ಮ ತಮ್ಮ ಊರಿಗೆ ಪ್ರಯಾಣಿಕರು ಹಿಂದಿರುಗುವ ಪ್ರಯಾಣ ಸುಖಕರವೇ ಆಗಿತ್ತು.

ಆದರೆ ಇಂದು ಎಲ್ಲಾ ತಿರುವು ಮುರುವಾಗಿದೆ. ಸರಕಾರವನ್ನೊಳಗೊಂಡು ಎಲ್ಲಾ ಅಂಗಗಳು ಹಾಗೂ ಸಾರ್ವಜನಿಕರು ರಾಷ್ಟ್ರೀಕರಣದಿಂದ ಖಾಸಗೀಕರಣವತ್ತ ವಾಲುತ್ತಿರುವದು ಕಂಡು ಬರುತ್ತಿದೆ. ಇದು ಅನಿವಾರ್ಯವಾದಂತೆ ತೋರುತ್ತದೆ. ಸಾರಿಗೆ ಸಂಸ್ಥೆಯ ಸಿಬ್ಬಂದಿ ನೂರಕ್ಕೆ 20 ರಿಂದ 30 ರಷ್ಟು ಕರ್ತವ್ಯಕ್ಕೆ ಕೈಕೊಟ್ಟು ಗೈರುಹಾಜರ ಉಳಿದು ಬಸ್ಸುಗಳ ಸಂಚಾರ ಅಸ್ತವ್ಯಸ್ತವಾಗಲಿಕ್ಕೆ ಪ್ರಯಾಣಿಕರು ತೊಂದರೆ ಪಡಲಿಕ್ಕೆ ಕಾರಣರಾಗಿರುವದು. ರಾಜ್ಯದ ಬಹುತೇಕ ಎಲ್ಲಾ ಡಿಪೋಗಳಲ್ಲಿ ನೂರಕ್ಕೆ ಗರಿಷ್ಠ 30ರಷ್ಟು ಮೇಸ್ತ್ರಿಗಳು, ಚಾಲಕರು, ನಿರ್ವಾಹಕರು ಪ್ರತಿದಿವಸ ಗೈರಹಾಜರ ಉಳಿಯುತ್ತಿರುವದು. ಅನೇಕ ಡಿಪೋಗಳಲ್ಲಿ ಪ್ರತಿದಿವಸ, ಗರಿಷ್ಠ 2,700ಕ್ಕೂ ಹೆಚ್ಚು ಕಿಲೋಮೀಟರ್

ಪ್ರಯಾಣ ರದ್ದು ಪಡಿಸುವದು. ಅನೇಕ ಅನುಸೂಚಿ ಬಸ್ಸುಗಳನ್ನು ರದ್ದುಪಡಿಸುವದು. ಪ್ರತಿದಿನ. ಕನಿಷ್ಠ ಹತ್ತು ಹದಿನೈದು ಬಸ್ಸುಗಳನ್ನಾದರೂ ತಡಮಾಡಿಬಿಡುವದು, ಪ್ರತಿದಿವಸ ಅನೇಕ ಬಸ್ಸುಗಳು ಮುಟ್ಟಬೇಕಾದ ಊರನ್ನು ಮುಟ್ಟದೆ ನಡುಮಧ್ಯದಿಂದಲೇ ಮರಳಿ ಬರುವದು ಯಥಾಪ್ರಕಾರ ನಿರಾತಂಕವಾಗಿ ಮುಂದುವರೆದಿರುವದು ಹಾಗೂ ಈ ಕಾರಣದಿಂದ ಭಾರಿ ನಷ್ಟವಾಗುತ್ತಿರುವದು ಶಾಸನ ಸಭೆಗಳಲ್ಲಿ ಸರಕಾರ ಪ್ರಕಟಿಸಿದ ಹೇಳಿಕೆಗಳಿಂದ ಸುಸ್ಪಷ್ಟವಾಗಿದೆ. ಗ್ರಾಮಾಂತರ ದುರಸ್ತಿ ಕಾಣದ ಬಸ್ ನಿಲ್ದಾಣಗಳು ಕೊಂಡವಾಡಿ ತಿಪ್ಪೆಗಳಿಗಿಂತ ಕಡೆಯಾಗಿವೆ. ಕ್ಯಾಂಟೀನ್‌ಗಳು ಅನೇಕ ವರ್ಷಗಳಿಂದ ಬಂದಾಗಿ ಪ್ರಯಾಣಿಕರಿಗೆ ಯಾವುದೇ ತರಹದ ಉಪಯೋಗಕ್ಕಿಲ್ಲದವುಗಳಾಗಿವೆ.

ಗೈರಹಾಜರ ಸಿಬ್ಬಂದಿ ಮೇಲೆ ಹಾಗೂ ಅಶಿಸ್ತಿನ ಕರ್ತವ್ಯಚ್ಯುತಿಯ ಸಿಬ್ಬಂದಿ ಮೇಲೆ ಡಿಪೋ ಕಂಟ್ರೋಲರ್, ಮ್ಯಾನೇಜರ್ ಡಿವಿಜನಲ್ ಕಂಟ್ರೋಲರರ ಹಿಡಿತವೇ ಇಲ್ಲ. ಇಂತಹ ಅಸಮರ್ಥರ ಮೇಲೆ ಯಾವುದೇ ಶಿಸ್ತಿನ ಕ್ರಮ ಅಥವಾ ಅವರ ದೂರದ ಸ್ಥಳಕ್ಕೆ ವರ್ಗಮಾಡುವ ಧೈರ್ಯವೂ ರಾಜ್ಯ ಮಟ್ಟದ ಅಧಿಕಾರಿಗಳಿಗೆ ಅಥವಾ ಸರಕಾರಕ್ಕೆ ಇಲ್ಲವೇ ಇಲ್ಲ, ಪ್ರತಿಯೊಂದು ಬಸ್ಸುಗಳಿಗೆ ಸ್ಟೆಪನಿಗಳೇ ಇಲ್ಲ, ಟೂಲ್ಸಗಳೇ ಇಲ್ಲ, ತಾಡಪಲ್‌ಗಳೇ ಇಲ್ಲ, ಪ್ರಥಮ ಚಿಕಿತ್ಸಾ ಪೆಟ್ಟಿಗೆಗಳೇ ಇಲ್ಲ, ಸಲಹೆ ಸೂಚನೆ ಹಾಕುವ ಪೆಟ್ಟಿಗೆಗಳೇ ಇಲ್ಲ, ಸೈಡ್ - ಮಿರರುಗಳೇ ಇಲ್ಲ, ಸರಿಯಾದ ಸೀಟುಗಳೇ ಇಲ್ಲ, ಬಾಗಿಲುಗಳೇ ಇಲ್ಲ. ಮಾರ್ಗಗಳಲ್ಲಿ ಬಸ್ಸುಗಳು ಆಗಾಗ್ಗೆ ಕೆಟ್ಟು ನಿಂತು ಪ್ರಯಾಣಿಕರಿಗೆ ಯಾತನೆಯನ್ನು ಕೊಡುತ್ತಲೇ ಇವೆ, ಸರಿಯಾದ ವೇಳೆಗೆ ಹೊರಡುವುದಿಲ್ಲ; ಬರುವುದಿಲ್ಲ. ಹೋಗುವ ಸ್ಥಳಕ್ಕೆ ಹೋಗದೆ ನಡುಮಧ್ಯದಿಂದಲೇ ಹಿಂದೆ ತಿರುಗಿದರೆ ಪ್ರಯಾಣಿಕರಿಗಾಗುವ ತೊಂದರೆ ದೇವರೇ ಬಲ್ಲ. ಹೊರಡಬೇಕಾದ ಬಸ್ಸು ಹೊರಡದೆ ರದ್ದಾದರೆ ಮಾರ್ಗದುದ್ದಕ್ಕೂ ಪ್ರಯಾಣಿಕರು ಹಾದಿ ನೋಡಿ ಹೌಹಾರಿ ಹೋಗುವದು ಯಥಾಪ್ರಕಾರ ನಡೆದೇ ಇದೆ. ಹೀಗಾದರೆ ಹೇಗೆ? ಸಾರಿಗೆ ಸಂಸ್ಥೆ ಈಗಾಗಲೇ ದಿವಾಳಿ ಅಂಚನ್ನು ಮುಟ್ಟಿವೆ. ಈ ಸಂಸ್ಥೆ ಲಾಭದಲ್ಲಿಯೇ ನಡೆಯಬೇಕೆಂಬುದು ಯಾರ ಅಭಿಪ್ರಾಯವೂ ಇಲ್ಲ. ಇದರ ಉದ್ದೇಶ ಲಾಭದಾಯಕವಿಲ್ಲದಿದ್ದರೂ ಸೇವಾದಾಯಕವಾಗಿ ಪ್ರಯಾಣಿಕರ ಪ್ರಯಾಣ ಸುಖಕರವಾಗ ಬೇಕೆಂಬುದು ಎಲ್ಲರ ಅಭಿಪ್ರಾಯ. ಪ್ರಜೆಗಳೇ ಇರಲಿ ನೌಕರರೇ ಇರಲಿ ತಮ್ಮ ತಮ್ಮ ಸಮಂಜಸವಾದ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಹಾಗೂ ಸರಕಾರದ ಗಮನ ಸೆಳೆಯಲು ಸತ್ಯಾಗ್ರಹಗಳನ್ನು ಮಾಡಲೇಬೇಕು. ಅದು ಅವರವರ ಹಕ್ಕು, ಸರಕಾರ ಕೂಡ ಸತ್ಯಾಗ್ರಹಗಳತ್ತ ಗಮನ ಹರಿಸಿ ಯೋಗ್ಯ, ಸೂಕ್ತ ಹಾಗೂ ಸಮಂಜಸವಾದ ಬೇಡಿಕೆಗಳನ್ನು ಈಡೇರಿಸಲೇಬೇಕು. ಸತ್ಯಾಗ್ರಹದ ಸೋಗಿನಲ್ಲಿ ಯಾರೇ ದುರಾಗ್ರಹಗಳನ್ನು ಮಾಡಲಿ ಇದು ಖಂಡನೀಯ. ಅಂತಹ ಸತ್ಯಾಗ್ರಹಗಳ ಸೋಗಿನಲ್ಲಿಯ ದುರಾಗ್ರಹಗಳನ್ನು ಸರಕಾರ ತಡೆಗಟ್ಟಲೇಬೇಕು. ಹಾಗೂ ದುರಾಗ್ರಹಿಗಳನ್ನು ಉಗ್ರವಾಗಿ ದಂಡಿಸಬೇಕು. ಸರಕಾರ ಈಗಲಾದರೂ ಸತ್ಯಾಗ್ರಹ (ದುರಾಗ್ರಹ - ಮುಷ್ಕರ) ತಡೆ ಅಧಿನಿಯಮವನ್ನು ಅಧ್ಯಯನ ಮಾಡಬೇಕು. ಸರಕಾರ ಹಾಗೂ ಮೇಲಾಧಿಕಾರಿಗಳು ದಾಕ್ಷಿಣ್ಯಪರರಾಗದೆ

ನ್ಯಾಯನಿಷ್ಠುರಿಗಳಾಗಿ ಆಡಳಿತ ನಡೆಸಬೇಕು. ಅಂದರೆ ಮಾತ್ರ ಎಲ್ಲಾ ತರಹದ ಉತ್ತಮ ಕಟ್ಟುನಿಟ್ಟಿನ ಆಡಳಿತ ಅಸ್ತಿತ್ವದಲ್ಲಿ ಬರಲು ಸಾಧ್ಯ. ಈಗಲಾದರೂ ಕಾಲಮಿಂಚಿಲ್ಲ. ಬೆಟರ್‌ಲೇಟ್ ದಾನ್ಯ ನೇವ್ವರ್ (Bstter Late than never) ಎಂಬಂತೆ ಸಾರಿಗೆ ಸಂಸ್ಥೆಯ ಮೇಲಾಧಿಕಾರಿಗಳು, ಸಾರಿಗೆ ಸಚಿವರು, ಮುಖ್ಯಮಂತ್ರಿಗಳು, ಕಾಲಹರಣ ಮಾಡುವದನ್ನು ಬಿಟ್ಟು ಗಂಭೀರವಾಗಿ ವಿಚಾರಮಾಡಿ ಒಂದಾನೊಂದು ಕಾಲದಲ್ಲಿ ಭಾರತದಲ್ಲಿಯೇ ಆದರ್ಶ ಸಂಸ್ಥೆಯಾಗಿದ್ದ ರಾಜ್ಯ ಸಾರಿಗೆ ಸಂಸ್ಥೆಯನ್ನು ಸರಿಪಡಿಸಿ ಪ್ರಯಾಣಿಕರಿಗೆ ಅನುಕೂಲವಾಗುವಂತೆ ಮಾಡಿ, ಸಾರಿಗೆ ಸಂಸ್ಥೆಯಲ್ಲಿ ಶೇಕಡಾ 70 ರಷ್ಟು ಉತ್ತಮ ಸಿಬ್ಬಂದಿಗೆ, ಅಧಿಕಾರಿಗಳಿಗೆ, ಸಂಸ್ಥೆಗೆ, ಸಾರ್ವಜನಿಕರಿಗೆ, ಸಚಿವರಿಗೆ, ಸರಕಾರಕ್ಕೆ ಹಾಗೂ ರಾಜ್ಯಕ್ಕೆ ಕಳಂಕಬಾರದ ಶ್ರೇಯಸ್ಸು ಬರುವಂತೆ ಮಾಡುವದು ಒಳ್ಳೆಯದು. ಸಾರಿಗೆ ಸಂಸ್ಥೆಯ ಎಲ್ಲಾ ಘಟಕಗಳಿಗೂ ಸಲಹಾಸಮಿತಿಗಳನ್ನು ನೇಮಿಸಿ ಅವರಿಂದ ಸಲಹೆ ಸೂಚನೆ ಪಡೆಯಬೇಕೆಂದಿದ್ದರೂ ಸರಕಾರ ಇದುವರೆಗೂ ಯಾವುದೇ ಕ್ರಮತೆಗೆದುಗೊಳ್ಳದೇ ಪರಿಸ್ಥಿತಿ ಹದಗೆಡಲಿಕ್ಕೆ ಕಾರಣರಾಗಿರುವದು ಭೂಷಣವಲ್ಲ. ಇನ್ನಾದರೂ ತಡಮಾಡದೆ ಸರಕಾರ ತಮ್ಮ ಚೇಲಾಗಿಗಳನ್ನು ನಾಮಕರಣ ಮಾಡದೆ ಸ್ಥಳೀಯ ತಮ್ಮ ರಾಜಕೀಯ ಪಕ್ಷವನ್ನೊಳಗೊಂಡ ಎಲ್ಲಾ ರಾಜಕೀಯ ಪಕ್ಷಗಳ ಅಧ್ಯಕ್ಷರನ್ನು, ಸಲಹಾ ಸಮಿತಿಗೆ ನಾಮಕರಣ ಮಾಡಿ ಅವರಿಂದ ಸಲಹೆ ಸೂಚನೆ ಪಡೆದು ದುರಾಡಳಿತ ಹಾಗೂ ಅವ್ಯವಸ್ಥೆಯಿಂದಾಗುತ್ತಿರುವ ನಷ್ಟವನ್ನು ಕಡಿಮೆಮಾಡಿ ಲಾಭದತ್ತ ತರಲು ಪ್ರಯತ್ನಿಸಬೇಕೆ ಹೊರತು ಪ್ರಯಾಣಿಕರ ಹಾಸಲನ್ನು ಯಾವುದೇ ರೀತಿಯಲ್ಲಿ ಎತ್ತರಿಸಲು ಮುಂದಾಗುವದು ಸಾಧುವಾದುದಲ್ಲ ಸಮಂಜಸವಾದುದಲ್ಲ.

❑

ಮಾರ್ಚ್ ಮಾಸ, ಪ್ರಗತಿಗೆ ಮಾರಕ

ಪ್ರತಿ ವರ್ಷ ಜಿಲ್ಲಾ ಪಂಚಾಯತಿಗಳಿಗೆ ಹಾಗೂ ವಿವಿಧ ಇಲಾಖೆಗಳಿಗೆ ಯಾವ, ಯಾವ ಉದ್ದೇಶಗಳಿಗೆ ಎಷ್ಟೆಷ್ಟು ವೆಚ್ಚ ಮಾಡಿ ಪ್ರಗತಿ ಸಾಧಿಸಬೇಕೆಂದು ವಿಧಾನ ಸಭೆಯ ಬಜೆಟ್ ಅಧಿವೇಶನದಲ್ಲಿ ಚರ್ಚಿಮಾಡಿ ಹಿಂದಿನ ಬಜೆಟ್, ರಿವಾಜ್ಡ್ ಬಜೆಟ್ ವಾಸ್ತವಿಕ ಬಜೆಟ್ ಅಂಕಿ ಸಂಖ್ಯೆಗಳನ್ನು ಹೇಳಿ, ಮುಂದಿನ ವರ್ಷದ ಅಂದಾಜು ಆಯವ್ಯಯವನ್ನು ಮಂಜೂರು ಮಾಡಿಕೊಟ್ಟಂತೆ ಆಯಾ ವರ್ಷದಲ್ಲಿ ಬಜೆಟ್ ಪ್ರಕಾರ ಜಿಲ್ಲಾ ಪಂಚಾಯತಿ ಹಾಗೂ ವಿವಿಧ ಇಲಾಖೆಗಳು ಪ್ರತಿ ತಿಂಗಳು ನಿಗದಿತ ಹಣವನ್ನು ವೆಚ್ಚ ಮಾಡಿ ಪ್ರಗತಿಯನ್ನು ಸಾಧಿಸಬೇಕಾಗುತ್ತದೆ. ಆದರೆ ದುರ್ದೈವದಿಂದ ಪಂಚಾಯತಿಗಳು ಹಾಗೂ ವಿವಿಧ ಸರಕಾರಿ ಇಲಾಖೆಗಳು ನಿಗದಿತ ಹಣವನ್ನು ಪ್ರತಿ ತಿಂಗಳು ವೆಚ್ಚ ಮಾಡದೆ ಮಾರ್ಚ ತಿಂಗಳಲ್ಲಿಯೇ ಭಾರೀ ಮೊತ್ತವನ್ನು ವೆಚ್ಚವೆಂದು ತೋರಿಸಿ, ಭಾರೀ ಹಣವನ್ನು ವೆಚ್ಚ ಮಾಡದೆ ಉಳಿಸುತ್ತಿರುವದು ನಡೆದು ಬಂದಿರುವ ಕೆಟ್ಟ ಸಂಪ್ರದಾಯ. ಹಿಂದಿನ ವರ್ಷಗಳಲ್ಲಾದ ಲೋಪ, ದೋಷ, ಚ್ಯುತಿ, ನ್ಯೂನತೆಗಳನ್ನು ಯಾರೂ ಗಣನೆಗೆ ತೆಗೆದುಕೊಳ್ಳದೆ ಈ ಅನಿಷ್ಟಗಳನ್ನು ಮುಂದುವರಿಸುತ್ತಿರುವದು, ಜನತೆಯ ದುರ್ದೈವ. 1994-95ರಲ್ಲಿ ಸಾಮಾನ್ಯ, ಸಾಮಾಜಿಕ, ಆರ್ಥಿಕ ಸೇವೆಗಳು ಹಾಗೂ ಸಹಾಯಧನ ರೆವಿನ್ಯೂ ವೆಚ್ಚಕ್ಕಾಗಿ ಬಡೆಟ್‌ದಲ್ಲಿ ನಿಗದಿ ಮಾಡಿದ 7948.43 ಕೋಟಿಯಲ್ಲಿ 7264.53 ಕೋಟಿ ವೆಚ್ಚ ಮಾಡಿ 683.90 ಕೋಟಿ ಮೊತ್ತವನ್ನು ವೆಚ್ಚ ಮಾಡದೆ ಸರಕಾರದ ವಿವಿಧ ಇಲಾಖೆಗಳು ಪ್ರಗತಿಯನ್ನು ಕಂಠಿತಗೊಳಿಸಿವೆ. ಅಂತೆಯೇ ರಾಜ್ಯದ ಇಪ್ಪತ್ತು ಜಿಲ್ಲಾ ಪಂಚಾಯತಿಗಳು ತಮಗೆ ನಿಗದಿಗೊಳಿಸಿದ ಹಣವನ್ನು ಸಂಪೂರ್ಣವಾಗಿ ವೆಚ್ಚ ಮಾಡದೆ 3-3-95ಕ್ಕೆ 143.64 ಕೋಟಿ ಮೊತ್ತವನ್ನು ಉಳಿಸಿದೆ. ಅಂತೆಯೇ ತಾಲೂಕು ಪಂಚಾಯತಿ, ಗ್ರಾಮ ಪಂಚಾಯತಿಗಳು ಸಹ ತಮಗೆ ನಿಗದಿಪಡಿಸಿಧ ಹಾಗೂ ಬಿಡುಗಡೆ ಮಾಡಿದ ಹಣವನ್ನು ಸಂಪೂರ್ಣವಾಗಿ ವೆಚ್ಚ ಮಾಡದೆ ಭಾರೀ ಮೊತ್ತದ ಹಣವನ್ನು 31.3.95ಕ್ಕೆ ಉಳಿಸಿವೆ. ಹೀಗೆ ರಾಜ್ಯದ ಗ್ರಾಮ ಪಂಚಾಯತಿ, ತಾಲೂಕು ಪಂಚಾಯಿತಿ,

ಜಿಲ್ಲಾ ಪಂಚಾಯತಿಗಳು ಹಾಗೂ ಸರಕಾರದ ಪ್ರತಿವರ್ಷ ನಿಗದಿತ ಹಣವನ್ನು ಸಂಪೂರ್ಣವಾಗಿ ವೆಚ್ಚ ಮಾಡದೆ ಭಾರೀ ಮೊತ್ತವನ್ನು ಉಳಿಸಿ ಪ್ರಗತಿಯನ್ನು ಕುಂಠಿತಗೊಳಿಸುವದಾದರೆ ಅಧಿಕಾರಿಗಳು ಹಾಗೂ ಈ ಪ್ರಜಾಪ್ರತಿನಿಧಿಗಳಾದರೂ ಇರುವದು ಏತಕೆ ಎಂದು ಪ್ರಶ್ನಿಸಬೇಕಾಗುತ್ತದೆ.

ಮಾರ್ಚ್ ತಿಂಗಳಲ್ಲಿ ಅಂತ್ಯದವರೆಗೆ ವಾಸ್ತವಿಕ ಕಾಮಗಾರಿ ಮಾಡದೆ, ವಾಸ್ತವಿಕವಾಗಿ ಏನನ್ನೂ ಖರೀದಿ ಮಾಡದೆ ಬೋಗಸ್ ಖೊಟ್ಟಿ ರಶೀದಿಗಳನ್ನು ಸೃಷ್ಟಿಸಿ ಭಾರೀ ಮೊತ್ತದ ಹಣವನ್ನು ಎತ್ತಿ ಹೊಡೆದು ನಡೆದುಬಂದ ಸಾಕಷ್ಟು ಜೀವಂತ ಉದಾಹರಣೆಗಳು ಅನೇಕ ಗ್ರಾಮ ಪಂಚಾಯತಿ, ತಾಲ್ಲೂಕ ಪಂಚಾಯತಿ, ಜಿಲ್ಲಾ ಪಂಚಾಯತಿ ವಿವಿಧ ಸರಕಾರ ಇಲಾಖೆಗಳಲ್ಲಿ ಹಳ್ಳಿಯ ಗ್ರಾಮ ಪಂಚಾಯತಿಯಿಂದ ರಾಜಧಾನಿ ಬೆಂಗಳೂರು ಸರಕಾರದವರೆಗೆ ಸಾಕಷ್ಟು ಇರುವದು, ವಿಧಾನ ಸಭೆ, ವಿಧಾನ ಪರಿಷತ್ತುಗಳ ಕಾರ್ಯಕಲಾಪ ಹಾಗೂ ಅಧಿಕೃತ ವರದಿಗಳಿಂದ ಸುಸ್ಪಷ್ಟವಾಗಿ ಕಂಡು ಬರುತ್ತಿವೆ. ಮಾರ್ಚ್ ತಿಂಗಳೊಂದರಲ್ಲಿಯೇ ವರ್ಷದ ಆಯವ್ಯಯದಲ್ಲಿ ಕೆಲವು ನಿಗದಿತ ಮೊತ್ತವನ್ನು ಶೇಕಡಾ 50 ರಿಂದ 100 ವರೆಗೆ ವೆಚ್ಚ ತೋರಿಸಿರುವ ದೃಷ್ಟಾಂತಗಳು ಸಿ.ಎ.ಜಿ. ವರದಿಗಳಿಂದ ಕಂಡು ಬಂದಿವೆ. ಮಾರ್ಚ್ ತಿಂಗಳಲ್ಲಿ ವೆಚ್ಚವೆಂದು ತೋರಿಸಿರುವ ಭಾರೀ ಮೊತ್ತವು ಸಹ ವೆಚ್ಚವಾಗದೆ ವಾಸ್ತವಿಕವಾಗಿ ಗ್ರಾಮ ಪಂಚಾಯಿತಿ, ತಾಲೂಕು ಪಂಚಾಯತಿ, ಜಿಲ್ಲಾ ಪಂಚಾಯತ, ಬ್ಯಾಂಕುಗಳು, ಹಾಗೂ ಸರಕಾರಿ ಖಜಾನೆಗಳಲ್ಲಿ ಶಿಲ್ಕು ಉಳಿದಿರುವ ದೃಷ್ಟಾಂತಗಳು ಕೂಡ ಬೇಕಾದಷ್ಟು ಕಂಡು ಬರುತ್ತಿವೆ. ಮಾರ್ಚ್ ತಿಂಗಳ ಕೊನೆಗೆ ಕೋಟ್ಯಂತರ ಹಣ ಸರಕಾರ ಹಾಗೂ ಪಂಚಾಯತಿಗಳಲ್ಲಿ ಶಿಲ್ಕು ಉಳಿದರೂ ಸಹ ಯಾವುದೇ ಕಾಮಗಾರಿಗೆ ಹಾಗೂ ಖರೀದಿಗೆ ವೆಚ್ಚ ಮಾಡಲು ಹಾಗೂ ಕಾಮಗಾರಿ ಮಾಡಲು ಯಾವುದೇ ನೈಸರ್ಗಿಕ ಅಡೆತಡೆ ಇಲ್ಲದೆ ಏಪ್ರಿಲ್, ಮೇ ತಿಂಗಳುಗಳಲ್ಲಿ ಯಾವುದೇ ಕಾಮಗಾರಿ ಮಾಡದೆ ಕಾರ್ಯನಿರ್ವಹಿಸದೆ ಇರುವದು ಯಥಾಪ್ರಕಾರ ನಡೆದು ಬಂದಿರುವ ಕರ್ತವ್ಯ ಲೋಪ ಅಧಿಕಾರಗಳಿಂದ ಹಾಗೂ ವಿವಿಧ ಹಂತದ ಚುನಾಯಿತ ಪ್ರತಿನಿಧಿಗಳಿಂದ ಮುಂದುವರೆಯುತ್ತಿರುವದು ಒಳಿತಲ್ಲ.

ರಾಜ್ಯದಲ್ಲಿ ಶೇಕಡಾ 70ರಷ್ಟು ವಿವಿಧ ಹಂತದ ಅಧಿಕಾರಿಗಳು ಹಾಗೂ ವಿವಿಧ ಹಂತದ ಪ್ರಜಾಪ್ರತಿನಿಧಿಗಳು ಶುದ್ಧ ಹಸ್ತರೂ, ಪ್ರಾಮಾಣಿಕರೂ ಇದ್ದರೂ ಇನ್ನುಳಿದ ಶೇಕಡಾ 30 ರಷ್ಟು ವಿವಿಧ ಹಂತದ ಅಧಿಕಾರಿಗಳು ಹಾಗೂ ವಿವಿಧ ಹಂತದ ಪ್ರಜಾಪ್ರತಿನಿಧಿಗಳ ಮುಂದೆ ಇವರದು ಏನೂ ನಡೆಯದೆ ನಿಸ್ಸಾಹಯಕರಾಗಿ ವಿವಿಧ ಅಕ್ರಮಗಳಿಗೆ ಅವಕಾಶ, ಆಮಂತ್ರಣ, ಅನುಕೂಲ ಉಂಟಾಗಿ ಇಡೀ ವರ್ಷದಲ್ಲಿ

ಮಾರ್ಚ್ ತಿಂಗಳು ರಾಜ್ಯದ ಜನತೆಗೆ ತಾರಕವಾಗದೆ ಮಾರಕವಾಗಿದೆ. ಪ್ರತಿವರ್ಷ ಮಾರ್ಚ್ ತಿಂಗಳಲ್ಲಿಯೇ ಬಜೆಟ್ ಬಹುತೇಕವಾಗಿ ಮಂಜೂರಾಗುತ್ತಿದ್ದರೂ ಮಾರ್ಚ್ ತಿಂಗಳಲ್ಲಿ ಮಂಜೂರಾದ ಬಜೆಟ್ ಜನತೆಗೆ ಮಾರಕವಾಗುವತ್ತಿರುವದು ಯಾರಿಗೂ ಭೂಷಣವಲ್ಲ.

ರಾಜ್ಯದಲ್ಲಿ ಎಲ್ಲಾ ಜಿಲ್ಲಾ ಪಂಚಾಯತಿಗಳು 31-3-96ಕ್ಕೆ 143.64 ಕೋಟಿ ಮೊತ್ತವನ್ನು ಉಳಿಸಿಕೊಂಡು ಹಾಗೂ 1996-97ರಲ್ಲಿ ನಿಗದಿಪಡಿಸಿದ ಹಣವನ್ನು 96-97ರಲ್ಲಿ ಪ್ರತಿ ತಿಂಗಳು ಸಮಂಜಸವಾಗಿ ವೆಚ್ಚ ಮಾಡದಿರುವುದು ಫೆಬ್ರವರಿ ಕೊನೆಗೆ ಭಾರಿ ಮೊತ್ತವನ್ನು ವೆಚ್ಚ ಮಾಡದೆ ಉಳಿಸಿರುವದು ತಿಳಿದು ಬಂದಿದೆ. ಇದು ಯಾರಿಗೂ ಭೂಷಣವಲ್ಲ. ಉದಾಹರಣೆಗೆ ಧಾರವಾಡ ಜಿಲ್ಲಾ ಪಂಚಾಯತಿಯನ್ನು ಉದಾಹರಿಸುವದಾದರೆ, ಈ ಜಿಲ್ಲಾ ಪಂಚಾಯತಿ., 95-96ರಲ್ಲಿ 13.30 ಕೋಟಿ ಮೊತ್ತವನ್ನು ವೆಚ್ಚ ಮಾಡದೆ ಉಳಿಸಿದೆ. 96-97ರಲ್ಲಿ ಈ ಜಿಲ್ಲೆಗೆ 27 ಇಲಾಖೆಗಳಿಗೆ ನಿಗದಿಪಡಿಸಿದ ಮೊತ್ತ 84.33 ಕೋಟಿ. ಈ ಮೊತ್ತದಲ್ಲಿ ಏಪ್ರಿಲ್‌ದಿಂದ ಫೆಬ್ರವರಿ ವರೆಗೆ ಹನ್ನೊಂದು ತಿಂಗಳಲ್ಲಿ ಮಾಡಿದ ವಾಸ್ತವಿಕ ವೆಚ್ಚ 51.03 ಕೋಟಿ. ಅಂದರೆ ಪ್ರತಿತಿಂಗಳ ವೆಚ್ಚದ ಸರಾಸರಿ 4.64 ಕೋಟಿ. ಈಗ ಮಾರ್ಚ್ ತಿಂಗಳಲ್ಲಿ ವೆಚ್ಚ ಮಾಡಲು ಲಭ್ಯವಿರುವ ಹಣ 33.77 ಕೋಟಿ. ಈ ಹಣ ಹೇಗೆ ಏತಕ್ಕಾಗಿ, ಎಲ್ಲಿ ಎಂದು, ಎಷ್ಟು ವಾಸ್ತವಿಕವಾಗಿ, ಅವಾಸ್ತವಿಕವಾಗಿ ವೆಚ್ಚವಾಗುವದೆಂಬುದನ್ನು ಅಧ್ಯಕ್ಷರಿಲ್ಲದೆ ನಿಷ್ಕ್ರಿಯವಾಗದಿರುವ ಧಾರವಾಡ ಜಿಲ್ಲಾ ಪಂಚಾಯತಿಯ ಅಧಿಕಾರಿಗಳು ಹಾಗೂ ಚುನಾಯಿತ ಸದಸ್ಯರ ಕಾರ್ಯ ವೈಖರಿಯನ್ನು ಕಾದುನೋಡಬೇಕಾಗಿದೆ.

ಈ ಹಿನ್ನೆಲೆಯಲ್ಲಿ ಎಲ್ಲಾ ಮಾರ್ಚ್ ತಿಂಗಳಲ್ಲಿ ಮಂಜೂರಾದ ಆಯವ್ಯಯ, ಪರಿಷ್ಕೃತ ಆಯವ್ಯಯ, ವಾಸ್ತವಿಕ ಆಯವ್ಯಯಗಳನ್ನು ಅಧ್ಯಯನ ಮಾಡಿ ಮಾರ್ಚ್ ತಿಂಗಳಲ್ಲಿ ಖೊಟಾ (ಬೋಗಸ್) ಬಿಲ್ಲುಗಳು ತಯಾರಾಗದಂತೆ ಖೋಟಾ ವೆಚ್ಚ ತೋರಿಸದಂತೆ, ಭಾರೀ ಹಣವೆಚ್ಚವಾಗದೆ ಉಳಿಯದಂತೆ, ಹಿಂದಿನ ಮಾರ್ಚ್ ತಿಂಗಳಲ್ಲಿ ವೆಚ್ಚವಾಗದೆ ಉಳಿದ ಹಣ ಹಾಗೂ ಮುಂದಿನ ವರ್ಷ ನಿಗದಿತ ಹಣವೆಲ್ಲಾ ಸೇರಿದಂತೆ ಏಪ್ರಿಲ್, ಮೇ, ತಿಂಗಳಿಂದಲೇ ಪ್ರತಿ ತಿಂಗಳು ವರ್ಷಕ್ಕೆ ನಿಗದಿತ ಹನ್ನೆರಡರಲ್ಲಿ ಒಂದು ಭಾಗಹಣವನ್ನು ವೆಚ್ಚ ಮಾಡುವಂತೆ ಹಾಗೂ ವಾಸ್ತವಿಕ ಲೆಕ್ಕ, ವಾಸ್ತವಿಕ ಕಾಮಗಾರಿಗೆ ಹಾಗೂ ವಾಸ್ತವಿಕ ಖರೀದಿಗೆ ವೆಚ್ಚವಾಗುವಂತೆ ನೋಡಿಕೊಂಡು ಅಧಿಕಾರ ವಿಕೇಂದ್ರೀಕರಣದ ಜವಾಬ್ದಾರಿ ಹೊತ್ತಿರುವ ವಿವಿಧ ಪಂಚಾಯತಿಗಳ ಅಧಿಕಾರಿಗಳು ಹಾಗೂ ಪ್ರಜಾಪ್ರತಿನಿಧಿಗಳು ಹಾಗೂ ಶಾಸಕರು, ಸಂಸದರು ಹಾಗೂ ಸರಕಾರಿ

ಅಧಿಕಾರಿಗಳು, ನಡೆದರೆ ಕಾರ್ಯಶೀಲ - ಕ್ರಿಯಾಶೀಲರಾದರೆ ಅಧಿಕಾರ ವಿಕೇಂದ್ರೀಕರಣ ಹಾಗೂ ಪ್ರಜಾತಂತ್ರ ವ್ಯವಸ್ಥೆ ಸುವ್ಯವಸ್ಥೆಯಾದೀತು.

1996-97 ನೇ ಸಾಲಿನಲ್ಲಿ ಧಾರವಾಡ ಜಿಲ್ಲಾ ಪಂಚಾಯತ ನಿಗದಿತ ಮೊತ್ತ ಹಾಗೂ ಸಾಧಿಸಿದ ಗುರಿ ಮೊತ್ತ 1996-97

ಕ್ರ ಸಂ	ಇಲಾಖೆ	ಬಜೆಟ್ ಪ್ರಕಾರ ನಿಗದಿ 1996-97	30.11.96ಕ್ಕೆ 8 ತಿಂಗಳ ವಾಸ್ತವಿಕ ಒಟ್ಟು ವೆಚ್ಚ	31.12.96ಕ್ಕೆ 9 ತಿಂಗಳ ವಾಸ್ತವಿಕ ಒಟ್ಟು ವೆಚ್ಚ	28.2.97ಕ್ಕೆ 11 ತಿಂಗಳು ವಾಸ್ತವಿಕ ಒಟ್ಟು ವೆಚ್ಚ
1.	ಸಾಮಾನ್ಯ ಶಿಕ್ಷಣ ಪಿ.ಇ.ಎಸ್.ಇ. 2202, 4203	1086.99	426.19	491.07	646.95
2.	ವಯಸ್ಕರ ಶಿಕ್ಷಣ 2202	7.09	4.40	4.90	5.61
3.	ಕ್ರೀಡಾ ಕಾರ್ಯಕ್ರಮ ಯುವಜನ ಸೇವೆ 2204	11.50	0.00	3.45	5.14
4.	ವೈದ್ಯಕೀಯ, ಜನಾರೋಗ್ಯ 2210, 4210	290.50	93.51	110.08	154.60
5.	ಭಾರತೀಯ ವೈದ್ಯ ಪದ್ಧತಿ 2210	35.00	18.56	20.51	25.74
6.	ಕುಟುಂಬ ಕಲ್ಯಾಣ 2211	437.83	233.98	295.15	308.13
7.	ನೀರು ಪೂರೈಕೆ ನೈರ್ಮಲ್ಯ 2215	1081.71	344.80	395.00	550.15
8.	ಹರಿಜನ, ಗಿರಿಜನ, ಸಮಾಜ ಕಲ್ಯಾಣ 2225	329.25	79.86	132.30	204.09
9.	ವಿಶೇಷ ಘಟಕ ಯೋಜನೆ	258.03	57.74	76.04	119.53
10.	ಹಿಂದುಳಿದ ವರ್ಗ ಕಲ್ಯಾಣ 2225, 4225	103.50	29.53	33.53	40.62
11.	ಮಹಿಳೆಯರ, ಮಕ್ಕಳ ಕಲ್ಯಾಣ 2235, 4225	486.00	229.78	258.65	328.43

ಕ್ರ ಸಂ	ಇಲಾಖೆ	ಬಜೆಟ್ ಪ್ರಕಾರ ನಿಗದಿ 1996-97	30.11.96ಕ್ಕೆ 8 ತಿಂಗಳ ವಾಸ್ತವಿಕ ಒಟ್ಟು ವೆಚ್ಚ	31.12.96ಕ್ಕೆ 9 ತಿಂಗಳ ವಾಸ್ತವಿಕ ಒಟ್ಟು ವೆಚ್ಚ	28.2.97ಕ್ಕೆ 11 ತಿಂಗಳು ವಾಸ್ತವಿಕ ಒಟ್ಟು ವೆಚ್ಚ
12.	ಪೌಷ್ಟಿಕ ಆಹಾರ 2236	230.00	87.77	137.25	181.37
13.	ವ್ಯವಸಾಯ 2401	142.20	14.89	26.54	42.82
14.	ತೋಟಗಾರಿಕೆ 2401	31.00	14.72	18.85	25.29
15.	ಭೂಸಾರ ಸಂರಕ್ಷಣೆ 2402	--	--	--	--
16.	ಪಶುಸಂಗೋಪನೆ 2403	156.50	89.12	100.70	126.42
17.	ಮೀನುಗಾರಿಕೆ, 2405, 4405, 6405	18.50	10.07	10.80	14.97
18.	ಅರಣ್ಯ 2406 ,, 15 ಭೂಪಾರ ಸಂರಕ್ಷಣೆ	93.00	47.12	53.39	67.92
19.	ಸಹರಾಪ 2424, 4425,. 3456, 5475, 2230, 4250, 6250	10.00	0.00	0.44	5.91
20.	ಕಾರ್ಮಿಕ ಉದ್ಯೋಗ ಜೀತದಾಳು ಪುನರ್ವಸತಿ	--	--	--	--
21.	ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ 2515 IRCF. DFAR. JRY. WG	2639.62	882.02	1216.5	1547.9
22.	ಭೂಸುಧಾರಣೆ	--	--	--	--
23.	ಗ್ರಾಮೀಣ ಉದ್ಯೋಗ (ಜೆ.ಆರ್.ವೈಯ್ 2515)	--	--	--	--
24.	ಇತರೆ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ 2515	721.50	222.24	222.24	492.32
25.	ಸಣ್ಣ ನೀರಾವರಿ 2702, 4702	20.00	3.00	3.36	5.22
26.	ಗ್ರಾಮೋದ್ಯೋಗ, ಚಿಕ್ಕಪುಟ್ಟ ಉದ್ಯಮ 2851, 4851, 6851	27.50	12.42	14.65	19.05

ಕ್ರ ಸಂ	ಇಲಾಖೆ	ಬಜೆಟ್ ಪ್ರಕಾರ ನಿಗದಿ 1996-97	30.11.96ಕ್ಕೆ 8 ತಿಂಗಳ ವಾಸ್ತವಿಕ ಒಟ್ಟು ವೆಚ್ಚ	31.12.96ಕ್ಕೆ 9 ತಿಂಗಳ ವಾಸ್ತವಿಕ ಒಟ್ಟು ವೆಚ್ಚ	28.2.97ಕ್ಕೆ 11 ತಿಂಗಳು ವಾಸ್ತವಿಕ ಒಟ್ಟು ವೆಚ್ಚ
27.	ರೇಷ್ಮೆ 2851	11.00	2.71	5.66	19.05
28.	ರಸ್ತೆ ಮತ್ತು ಸೇತುವೆ 3054, 5054	172.50	73.91	79.53	112,29
29.	ಸಚಿವಾಲಯ, ಆರ್ಥಿಕ ಸೇವೆ, ಜಿಲ್ಲಾ ಯೋಜನಾ ಘಟಕ, 3451	5.50	3.33	3.59	4.75
30.	ಗಿರಿಜನ ಉಪಯೋಜನೆ 2225	17.00	0.00	0.00	7.77
31.	ಗ್ರಾಮೋದ್ಯೋಗ ಚಿಕ್ಕಪುಟ್ಟ ಉದ್ಯಮ, ಕೈಮಗ್ಗ 2851	9.70	5.00	5.59	7.11
32.	ವೇತನ	--	1151.95	--	--
33.	ಪಗಾರ ಸೇರಿ	--	2986.70	--	--
	ಒಟ್ಟು ರೂ. ಲಕ್ಷದಲ್ಲಿ	8432.92	2986.70	3684.1	5056.82
	ಸಿ.ಎ.ಓ. ಅವರಿಂದ ಬಿಡುಗಡೆ	--	3515.77	3738.86	5102.11

❑

ಚಿಕ್ಕೋಡಿ - ಗೋಕಾಕ ಎರಡೂ ಜಿಲ್ಲೆ ಅನಿವಾರ್ಯ

ಹೊಸ ಜಿಲ್ಲೆಗಳ ನಿರ್ಮಾಣ ಜನತೆಯ ಅನುಕೂಲ ಹಾಗೂ ಉತ್ತಮ ಆಡಳಿತ ದೃಷ್ಟಿಯಿಂದ ಅತ್ಯಗತ್ಯ ಹಾಗೂ ಅನಿವಾರ್ಯ. ಈ ಹಿನ್ನೆಯಲ್ಲಿಯೇ ರಾಜ್ಯ ಸರಕಾರ ಒಂಭತ್ತು ಹೊಸ ಜಿಲ್ಲೆಗಳನ್ನು ನಿರ್ಮಿಸಲು ತೀರ್ಮಾನಿಸಿದ್ದು ಸಮಯೋಚಿತವಾಗಿದೆ. ಬಹು ದಶಕಗಳಿದ ಇದ್ದ ಹೊಸ ಜಿಲ್ಲಾ ನಿರ್ಮಾಣದ ಬೇಡಿಕೆ ಸಮಂಜಸವಾಗಿದ್ದರೂ ಯಾವುದೇ ಸರಕಾರ ಮೀನ - ಮೇಷ ಮಾಡಿ ತೆಗೆದುಕೊಳ್ಳದೇ ಇದ್ದ ತೀರ್ಮಾನವನ್ನು ರಾಜ್ಯದ ಮುಖ್ಯಮಂತ್ರಿ ಶ್ರೀ ಜೆ.ಎಚ್. ಪಟೇಲರವರು ತೆಗೆದುಕೊಂಡಿದ್ದು ಸ್ತುತ್ಯ ಹಾಗೂ ಅಭಿನಂದನೀಯವಾಗಿದೆ.

ರಾಜ್ಯದಲ್ಲಿಯೇ ಬೆಂಗಳೂರು ನಗರ ಜಿಲ್ಲೆಯ ನಂತರ ಅತೀ ಹೆಚ್ಚಿನ 35,83,606 ಜನಸಂಖ್ಯೆಯುಳ್ಳ ಅತೀ ದೊಡ್ಡ ಜಿಲ್ಲೆ ಬೆಳಗಾಂವ್ ಜಿಲ್ಲೆ. ಈ ಜಿಲ್ಲೆಯ ವಿಸ್ತಾರ 13,410 ಚ.ಕಿ.ಮೀ. ಇದೆ. ಬೆಳಗಾವಿಯಿಂದ ಅಥಣಿ 148 ಕಿ.ಮೀ., ರಾಯಭಾಗ 104. ಕಿ.ಮೀ., ಚಿಕ್ಕೋಡಿ 72 ಕಿ.ಮೀ., ಹುಕ್ಕೇರಿ 51 ಕಿ.ಮೀ. ಗೋಕಾಕ 67 ಕಿ.ಮೀ., ರಾಮದುರ್ಗ 91 ಕಿ.ಮೀ., ಪರಸಗಡ 74 ಕಿ.ಮೀ., ದೂರದಲ್ಲಿದ್ದು ಈ ತಾಲ್ಲೂಕುಗಳ ಜನರಿಗೆ ಅನಾನುಕೂಲ ಹಾಗೂ ತೊಂದರೆಯಾಗುತ್ತದೆ. ಈ ಕಾರಣದಿಂದಲೇ ಅಲ್ಲಿಯ ಜನತೆ ಚಿಕ್ಕೋಡಿ ಹಾಗೂ ಗೋಕಾಕ ಹೊಸ ಜಿಲ್ಲೆಗಳನ್ನು ನಿರ್ಮಿಸಲು ಹೋರಾಟ ಸತ್ಯಾಗ್ರಹ ನಡೆಸಿದ್ದಾರೆ. ಅವರ ಸತ್ಯಾಗ್ರಹ ಸತ್ಯ ಹಾಗೂ ನ್ಯಾಯಕ್ಕಾಗಿಯೇ ಹೊರತು ಸತ್ಯಾಗ್ರಹದ ಸೋಗಿನಲ್ಲಿ ದುರಾಗ್ರಹವಲ್ಲ. ಖಾನಾಪೂರ, ಬೆಳಗಾವಿ, ಹುಕ್ಕೇರಿ, ಚಿಕ್ಕೋಡಿ, ರಾಯಭಾಗ ಹಾಗೂ ಅಥಣಿ ತಾಲ್ಲೂಕುಗಳು ಕರ್ನಾಟಕದ ಗಡಿ ಭಾಗದ ತಾಲ್ಲೂಕುಗಳಿದ್ದು ಈ ಜಿಲ್ಲೆಯಲ್ಲಿ ಕನ್ನಡ ಭಾಷೆಯನ್ನು, ಕನ್ನಡ ಗಡಿಯನ್ನು ಹಾಗೂ ಕನ್ನಡಿಗರನ್ನು ರಕ್ಷಿಸುವುದು ಹಾಗೂ ಎಲ್ಲಾ ರೀತಿಯಲ್ಲಿ ಪ್ರೋತ್ಸಾಹಿಸುವುದು ಅಗತ್ಯವಿದೆ. ದುರ್ದೈವದಿಂದ ಈ ಭಾಗವನ್ನು ಸರಕಾರ ಎಲ್ಲಾ ರೀತಿಯಲ್ಲಿ ನಿರ್ಲಕ್ಷಿಸಿರುತ್ತದೆ. ಇದು ಸರಿಯಲ್ಲ. ಕೇರಳದಲ್ಲಿಯ ಕನ್ನಡ ನಾಡು

ಕಾಸರಗೋಡನ್ನು ಒಂದು ಜಿಲ್ಲೆಯನ್ನಾಗಿ ಕೇರಳ ಸರಕಾರದವರು ಮಾಡಿದ್ದು ಹಾಗೂ ಅಲ್ಲಿಯ ಕನ್ನಡಿಗರಿಗೆ ಪ್ರೋತ್ಸಾಹ ನೀಡಿ ಕರ್ನಾಟಕದತ್ತ ವಾಲದಂತೆ ಮಾಡಿದ್ದು ಜೀವಂತ ಉದಾಹರಣೆಯಾಗಿದೆ. ಗಡಿ ಭಾಗದ ಕನ್ನಡಿಗರು ಹೊಸ ಜಿಲ್ಲೆ ನಿರ್ಮಾಣಿಸಲು ಸರಕಾರಕ್ಕೆ ಮನವಿ ಮಾಡಿದರೂ ಆ ಮನವಿಯನ್ನು ಧಿಕ್ಕರಿಸುವುದು ಸರಿಯಲ್ಲ. ಅವರ ಬೇಡಿಕೆಯು ಯೋಗ್ಯ ಹಾಗೂ ಸಮಂಜಸವಾಗಿರುವುದರಿಂದ ಚಿಕ್ಕೋಡಿ ಹಾಗೂ ಗೋಕಾಕ ಈ ಎರಡೂ ಹೊಸ ಜಿಲ್ಲೆಗಳನ್ನು ನಿರ್ಮಾಣ ಮಾಡಲು ಕೇಳುವುದು ಆ ಭಾಗದ ಜನತೆಯ ನ್ಯಾಯಬದ್ಧ ಹಕ್ಕು, ಅದನ್ನು ಕಾರ್ಯಗತ ಮಾಡುವುದು ಸರಕಾರದ ಆದ್ಯ ಕರ್ತವ್ಯವೆಂಬುದನ್ನು ಸರಕಾರ ಅರಿತು ಬೇಡಿಕೆಯನ್ನು ಕಾರ್ಯಗತ ಮಾಡಬೇಕು.

3,82,222 ಜನಸಂಖ್ಯೆಯ 1996 ಚ.ಕಿ.ಮೀ. ವಿಸ್ತಾರವುಳ್ಳ ಅಥಣಿ ತಾಲೂಕನ್ನು, 2,82,962 ಜನಸಂಖ್ಯೆಯುಳ್ಳ 960 ಚ.ಕಿ.ಮೀ. ವಿಸ್ತಾರದ ರಾಯಭಾಗ ತಾಲ್ಲೂಕನ್ನು, 4.87,633 ಜನಸಂಖ್ಯೆಯುಳ್ಳ 1270 ಚ.ಕಿ.ಮೀ. ವಿಸ್ತಾರವುಳ್ಳ ಚಿಕ್ಕೋಡಿ ತಾಲೂಕನ್ನು ಹೀಗೆ ಈ ಮೂರು ತಾಲೂಕುಗಳನ್ನು ಸೇರಿಸಿ 11,52,817 ಜನಸಂಖ್ಯೆಯುಳ್ಳ 4225 ಚ.ಕಿ.ಮೀ. ವಿಸ್ತಾರವುಳ್ಳ ಚಿಕ್ಕೋಡಿ ಹೊಸ ಜಿಲ್ಲೆಯನ್ನು ನಿರ್ಮಿಸಿ ಗಡಿನಾಡ ಕನ್ನಡಿಗರಿಗೆ ವಿಶೇಷವಾದ ಸವಲತ್ತು ಉತ್ತಮ ಆಡಳಿತ ವ್ಯವಸ್ಥೆ ಮಾಡಿಕೊಡುವುದು ಒಳ್ಳೆಯದು.

3,08,659 ಜನಸಂಖ್ಯೆಯುಳ್ಳ 992, ಚ.ಕಿ.ಮೀ. ವಿಸ್ತಾರವುಳ್ಳ ಹುಕ್ಕೇರಿ ತಾಲೂಕನ್ನು, 2,03,241 ಜನಸಂಖ್ಯೆಯುಳ್ಳ 1216 ಕಿ.ಮೀ. ವಿಸ್ತಾರದ ರಾಯದುರ್ಗ ತಾಲೂಕನ್ನು, 2,74,151 ಜನಸಂಖ್ಯೆಯುಳ್ಳ 1582 ಚ.ಕಿ.ಮೀ. ವಿಸ್ತಾರವುಳ್ಳ ಪರಸಗಡ ತಾಲೂಕನ್ನು, 4,41,339 ಜನಸಂಖ್ಯೆಯುಳ್ಳ 1540 ಚ.ಕಿ.ಮೀ. ಗೋಕಾಕ ತಾಲೂಕನ್ನು, ಹೀಗೆ ಈ ನಾಲ್ಕು ತಾಲೂಕುಗಳನ್ನು ಸೇರಿಸಿ 12,27,390 ಜನಸಂಖ್ಯೆಯುಳ್ಳ 5328 ಚ.ಕಿ.ಮೀ. ವಿಸ್ತಾರವುಳ್ಳ ಗೋಕಾಕ ಹೊಸ ಜಿಲ್ಲೆಯನ್ನು ನಿರ್ಮಿಸಿ ಅಲ್ಲಿಯ ಜನತೆಯ ಭಾವನೆ ಹಾಗೂ ಬೇಡಿಕೆಯಂತೆ ಅವರಿಗೆ ಆಡಳಿತ ಅನುಕೂಲಮಾಡಿ ಕೊಡುವುದು ಅತ್ಯಗತ್ಯ.

12,03,399 ಜನಸಂಖ್ಯೆಯುಳ್ಳ 3909 ಚ.ಕಿ.ಮೀ. ವಿಸ್ತಾರದ ಬೆಳಗಾವಿ, ಸಂಪಗಾವಿ, ಖಾನಾಪೂರ ಈ ಮೂರು ತಾಲೂಕಗಳನ್ನೊಳಗೊಂಡ ಬೆಳಗಾವಿ ಜಿಲ್ಲೆಯನ್ನು ಮುಂದುವರೆಸುವುದು ಹಾಗೂ ಅಲ್ಲಿ ಕನ್ನಡ ಭಾಷೆ ಹಾಗೂ ಕನ್ನಡಿಗರು ಉಳಿಯಲು ಹಾಗೂ ಬೆಳೆಯಲು ಸೂಕ್ತಕ್ರಮಗಳನ್ನು ಸರಕಾರ ತೆಗೆದುಕೊಳ್ಳುವುದು ಸಹ ಅನಿವಾರ್ಯ.

8,000 ಚ.ಕಿ.ಮೀ. ವಿಸ್ತಾರದ ಬೆಂಗಳೂರು ಜಿಲ್ಲೆಯನ್ನು ವಿಂಗಡಿಸಿ ಎರಡು ಜಿಲ್ಲೆಗಳನ್ನು ಮಾಡಿರುವಾಗ 8,400 ಚ.ಕಿ.ಮೀ. ವಿಸ್ತಾರದ ಮಂಗಳೂರು ಜಿಲ್ಲೆಯನ್ನು ವಿಂಗಡಿಸಿ ಎರಡು ಜಿಲ್ಲೆಗಳನ್ನು ಮಾಡಲು ತೀರ್ಮಾನಿಸಿರುವಾಗ, 35,03,150 ಜನಸಂಖ್ಯೆಯುಳ್ಳ ಧಾರವಾಡ ಜಿಲ್ಲೆಯನ್ನು ವಿಂಗಡಿಸಿ ಧಾರವಾಡ ಹಾಗೂ ಹಾವೇರಿ ಹಾಗೂ ಗದಗ ಹೊಸ ಜಿಲ್ಲೆಗಳನ್ನು ನಿರ್ಮಾಣ ಮಾಡಿರುವಾಗ, 4,100 ಚ.ಕಿ.ಮೀ.

ವಿಸ್ತಾರವುಳ್ಳ 4,88,455 ಜನಸಂಖ್ಯೆಯುಳ್ಳ ಕೊಡಗು ಜಿಲ್ಲೆಯು ಅಸ್ತಿತ್ವದಲ್ಲಿರುವಾಗ, 10,17,283 ಜನಸಂಖ್ಯೆಯುಳ್ಳ ಚಿಕ್ಕಮಗಳೂರು ಜಿಲ್ಲೆ ಅಸ್ತಿತ್ವದಲ್ಲಿರುವಾಗ, ಈ ವಿಸ್ತಾರಕ್ಕಿಂತ ಕಡಿಮೆ ವಿಸ್ತಾರವುಳ್ಳ ಹಾಗೂ ಈ ಜನಸಂಖ್ಯೆಗಿಂತ ಕಡಿಮೆ ಜನಸಂಖ್ಯೆಯುಳ್ಳ ಅನೇಕ ಜಿಲ್ಲೆಗಳು ಹೊಸ ರಾಜ್ಯಗಳಲ್ಲಿ ಜನತೆಯ ಅನುಕೂಲ ಹಾಗೂ ಆಡಳಿತ ದೃಷ್ಟಿಯಿಂದ ಅಸ್ತಿತ್ವದಲ್ಲಿರುವ ಈ ಎಲ್ಲಾ ಸಮಂಜಸವಾದ ಜೀವಂತ ಉದಾಹರಣೆಗಳಿರುವಾಗ ಮೇಲೆ ವಿವರಿಸಿದಂತೆ ಕರ್ನಾಟಕ ರಾಜ್ಯದಲ್ಲಿ ಸಾಮಾನ್ಯ ಹಾಗೂ ಗಡಿನಾಡ ಕನ್ನಡಿಗರ ಹಾಗೂ ಕನ್ನಡ ಭಾಷೆಯ ಹಿತದೃಷ್ಟಿಯಿಂದ ಬೆಳಗಾವಿ ಜಿಲ್ಲೆಯನ್ನು ವಿಂಗಡಿಸಿ ಬೆಳಗಾವಿ, ಚಿಕ್ಕೋಡಿ ಹಾಗೂ ಗೋಕಾಕ ಹೀಗೆ ಮೂರು ಸಮತೋಲನದ ಜಿಲ್ಲೆಗಳನ್ನಾಗಿ ನಿರ್ಮಾಣ ಮಾಡಿದರೆ ಸರಕಾರ ಮಾಡಲೇಬೇಕಾದ ತನ್ನ ಕಾಯಕವನ್ನು ಮಾಡಿದಂತಾಗುತ್ತದೆ. ಸ್ವತಂತ್ರ ಭಾರತದ ಪ್ರಜಾತಂತ್ರ ವ್ಯವಸ್ಥೆಯಲ್ಲಿಯ ಪ್ರಜೆಗಳ ಸಮಂಜಸವಾದ ಬೇಡಿಕೆ ಹಾಗೂ ಅಶೋತ್ತರಗಳಿಗೆ ತಕ್ಕ ಬೆಲೆ ಸಿಕ್ಕು, ಅವರ ಅಭಿಪ್ರಾಯಕ್ಕೆ ಸರಕಾರ ಬೆಲೆ ಕೊಟ್ಟಂತಾಗುತ್ತದೆ. ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೇ ಪ್ರಭುಗಳು, ಈ ಪ್ರಭುಗಳದೇ ಆಗಿರುವ ಪ್ರಜಾಸರಕಾರ ಇಂದು ಅಸ್ತಿತ್ವದಲ್ಲಿದೆ. ಜನತೆಯ ಆಶೀರ್ವಾದದಿಂದ ಹಾಗೂ ಅವರ ಪವಾಡಶಕ್ತಿಯ ಅಮೂಲ್ಯವಾದ ಮತಗಳಿಂದ ಆರಿಸಿ ಬಂದು ಪವಾಡ ಹಾಗೂ ಅದ್ಭುತ ಶಕ್ತಿಯನ್ನು ಹೊಂದಿದ ಶಾಸಕ, ಮಂತ್ರಿ ಮುಖ್ಯಮುಂತ್ರಿಗಳು ತಮಗೆ ಜನತೆ ಕೊಟ್ಟಿರುವ ಪವಾಡ ಶಕ್ತಿಯನ್ನು ಸದುಪಯೋಗ, ಪಡಿಸಿಕೊಂಡು ಪವಾಡ ಸದೃಶ್ಯವಾದ ಪ್ರಜೆಗಳ ಬೇಡಿಕೆಯನ್ನು ಮನ್ನಿಸುವುದು ಹಾಗೂ ಪ್ರಜಾಪ್ರಭುಗಳಿಗೆ ಕೊಡುವ ಕಾಣಿಕೆಯೇ ಹೊರತು ಅನ್ಯಥಾವಾಗಲಾರದು. ಈ ಹಿನ್ನೆಯಲ್ಲಿ ಮುಖ್ಯಮಂತ್ರಿ ಹಾಗೂ ಬೆಳಗಾವಿ ಜಿಲ್ಲೆಯ ಮಂತ್ರಿಗಳು ಹಾಗೂ ಶಾಸಕಾಂಗದ ಪದಾಧಿಕಾರಿಗಳು ಗೋಕಾಕ ಹಾಗೂ ಚಿಕ್ಕೋಡಿ ಜನತೆಯ ಸಮಂಜಸವಾದ ಆದೇಶ ಅಥವಾ ಬೇಡಿಕೆಯನ್ನು ಮನ್ನಿಸಿ ಅವಶ್ಯ ಕಂಡಲ್ಲಿ ಸೂಕ್ತ ಬದಲಾವಣೆಯೊಂದಿಗೆ ಗೋಕಾಕ ಹಾಗೂ ಚಿಕ್ಕೋಡಿ ಎರಡೂ ಹೊಸ ಜಿಲ್ಲೆಗಳನ್ನು ಮಾಡುವುದು ಸರಕಾರದ ಆದ್ಯ ಕರ್ತವ್ಯ.

❑

ಗ್ರಾಮರಕ್ಷಕ ಮಂಡಲಿ ಅಧಿನಿಯಮ

ಕರ್ನಾಟಕ ರಾಜ್ಯ ಭಾರೀ ವಿಶಾಲವಾದ 1,91,800 ಚ.ಕಿ.ಮೀ. ವಿಸ್ತಾರವುಳ್ಳ ಭೌಗೋಳಿಕ ವಿಶಾಲ ಕ್ಷೇತ್ರ. ಈ ಕ್ಷೇತ್ರದಲ್ಲಿ ಸುಮಾರು 27,066 ಕ್ಕಿಂತ ಹೆಚ್ಚು ಜನವಸತಿ ಕಂದಾಯ ಗ್ರಾಮಗಳಿವೆ. ಈ ಎಲ್ಲಾ ಗ್ರಾಮಗಳಲ್ಲಿದ್ದ ಪಟೇಲ, ಗೌಡ, ಓಲೇಕಾರ, ತಳವಾರ, ಸೇತಸನದಿ ಮೊದಲಾದ ಗ್ರಾಮಾಧಿಕಾರಿ ಹಾಗೂ ಗ್ರಾಮಚಾಕರರು ಪ್ರತಿಯೊಂದು ಗ್ರಾಮಗಳಲ್ಲಿ ಶಾಂತಿ, ಶಿಸ್ತು, ಕಾನೂನು ವ್ಯವಸ್ಥೆ ಪರಿಪಾಲನೆಯನ್ನು ಆಯಾ ಅಧಿನಿಯಮಗಳ ಪ್ರಕಾರ ಮಾಡುತ್ತ ಗ್ರಾಮಾಡಳಿತ ಸುವ್ಯವಸ್ಥಿತ ರೀತಿಯಲ್ಲಿರುತ್ತಿರುವಾಗಲೇ ಆ ಎಲ್ಲ ಅಧಿನಿಯಮಗಳನ್ನು ಸರಕಾರವು ರದ್ದುಪಡಿಸಿ ಪರಿಣಾಮವಾಗಿ ಇಂದಿನ ಗ್ರಾಮ ಜೀವನ ಅಸ್ತವ್ಯಸ್ತವಾಗಿದೆ. ಗ್ರಾಮಗಳಲ್ಲಿ ಚಿಕ್ಕ ಪುಟ್ಟ ಕಳವು, ನಿರುದ್ಯೋಗ, ಕುಡಿತ, ಕುಡುಕರಿಂದ ಕೂಗಾಟ ಚೀರಾಟ, ವದರಾಟ, ಮುಗ್ಧರ ಮೇಲೆ ಎರಗಾಟ, ಘರ್ಷಣೆ, ಹೊಡೆದಾಟ, ಬಡಿದಾಟ, ಅಶಿಸ್ತು, ಅನೀತಿ, ಅನಾಚಾರ, ಆತ್ಮಹತ್ಯೆ ದೌರ್ಜನ್ಯ, ಮಾನಾಪಹರಣ ಇತ್ಯಾದಿ ಸಾಮಾಜಿಕ ಪೀಡೆಗಳು ಹೆಚ್ಚಾಗಿ ಗ್ರಾಮಾಂತರ ಜನಜೀವನ ಅಸ್ತವ್ಯಸ್ತವಾಗಿದೆ. ಶಾಂತಿ ಕದಡಿದೆ. ಕಾನೂನು ಕಾನನವನ್ನು ಸೇರಿದೆ. ಶಿಸ್ತು ಹುಡುಕಿದರೂ ಸಿಗುವದಿಲ್ಲ. ಹೇಳುವವರು ಕೇಳುವವರು ಯಾರೂ ಇಲ್ಲ. 'ದಾದ ನೈ ಪುಕಾರ ನೈ' ಅನ್ನುವಂತಾಗಿದೆ. ಗ್ರಾಮ ಪಂಚಾಯತಿ ಚುನಾವಣೆಯಲ್ಲಿ ರಾಜಕೀಯ ಪಕ್ಷಗಳು ಕೈ ಹಾಕಿದ ಮೇಲಂತೂ ಪಾರ್ಟಿ ಇಲ್ಲದ ಊರುಗಳಲ್ಲಿ ಪಾರ್ಟಿಗಳಾಗಿವೆ. ಪಂಗಡಗಳಾಗಿವೆ. ವಾತಾವರಣ ವಿಷಮಯವಾಗಿದೆ. ಮನೆ ಮನೆಗಳಲ್ಲಿ ಅಣ್ಣ, ತಮ್ಮ ಗಂಡ, ಹೆಂಡಿರಲ್ಲಿ, ಜಾತಿ ಜಾತಿಗಳ ನಡುವೆ ಏತಕ್ಕೆ ಸಮಗ್ರತೆ ಇದ್ದಲ್ಲಿ ಇತ್ತಂಡ ಭಿನ್ನಾಭಿಪ್ರಾಯ, ಅಸೂಯೆ ದ್ವೇಷ, ವೈಷಮ್ಯ, ವಿರಸ ಉಂಟಾಗಿ ವಾತಾವರಣ ಕಲುಷಿತವಾಗಿದೆ. ಇಂಥಹ ಕೆಟ್ಟ ಪರಿಸ್ಥಿತಿ ಹಾಗೂ ಅದರ ದುಷ್ಟ ಪರಿಣಾಮವನ್ನು ದೂರ ಮಾಡುವಲ್ಲಿ ಹಾಗೂ ಏಕತೆ, ಸಮಗ್ರತೆ ಭಾವೈಕ್ಯತೆ, ಒಡಮೂಡಿಸಿ ಶಾಂತಿ ಸುವ್ಯವಸ್ಥೆಯುನ್ನು ಕಾಪಾಡುವಲ್ಲಿ ಅನೇಕ ದಶಕಗಳು ದಾಟಿದ್ದರೂ ಸರಕಾರ ಸಂಪೂರ್ಣವಾಗಿ ವಿಫಲಗೊಂಡು ಪರಿಸ್ಥಿತಿ ಹದಗೆಡಲು ಹಾಗೂ ಮಾರಕವಾಗಲು ಸರಕಾರಗಳು ಕಾರಣವಾಗಿವೆ. ಸರಕಾರದಲ್ಲಿಯು ಹೊಣೆಗಾರ ಅಧಿಕಾರಿಗಳಾದ

ಐ.ಎ.ಎಸ್. ಅಧಿಕಾರಿಗಳ ಹಿಂಡು ಹಾಗೂ ಐ.ಪಿ.ಎಸ್. ಅಧಿಕಾರಿಗಳ ದಂಡು, ಮುಖ್ಯಮಂತ್ರಿ, ಗೃಹಮಂತ್ರಿ, ಜಿಲ್ಲಾವಾರು ಉಸ್ತುವಾರಿ ಮಂತ್ರಿಗಳು, ಸಂಸದರು, ಶಾಸಕರು, ವಿವಿಧ ಪಂಚಾಯಿತಿ ರಾಜ್ ಜನಪ್ರತಿನಿಧಿಗಳು, ಇವರಾರು ಗ್ರಾಮಗಳ ಸುವ್ಯವಸ್ಥಿತ ಆಡಳಿತ ಶಾಂತಿ ಹಾಗೂ ಕಾನೂನು ಪರಿಪಾಲನೆ ಬಗ್ಗೆ ಚಿಂತಿಸದೆ ಇದ್ದು ಇನ್ನಾದರೂ ಇವರೆಲ್ಲರು ಗಮನಹರಿಸಿ ಹಳ್ಳಿಗರ ಜನಜೀವನ ಹಸನವಾಗುವಂತೆ ನೋಡಿಕೊಳ್ಳುವುದು ಅವರ ಆದ್ಯಕರ್ತವ್ಯವೆಂಬುದನ್ನು ಅರಿತು ಸೂಕ್ತ ಕಾರ್ಯ ಪ್ರವೃತ್ತರಾದರೆ ಒಳ್ಳೆಯದು.

ಗ್ರಾಮಜೀವನ ಮೇಲ್ಕಂಡಂತೆ ಮಾರಕವಾಗಿ ಪರಿಣಮಿಸಿದ ಕಾರಣಕ್ಕಾಗಿಯೇ ಅದನ್ನು ಶಮನಗೊಳಿಸಿ ತಾರಕವಾದ ಗ್ರಾಮಜೀವನವನ್ನು ಹಾಗೂ ಗ್ರಾಮಗಳ ವಾತಾವರಣವನ್ನು ಸುಧಾರಿಸಿ ಶಾಂತಿ ಸುವ್ಯವಸ್ಥೆ ಹಾಗೂ ಕಾನೂನನ್ನು ಪರಿಪಾಲನೆ ಮಾಡುವ ಮಹಾ ಉದ್ದೇಶದಿಂದಲೇ 1964ರಲ್ಲಿ ಕರ್ನಾಟಕ ಗ್ರಾಮರಕ್ಷಕ ಮಂಡಲಿ ಅಧಿನಿಯಮವನ್ನು ವಿಧಾನಸಭೆ ಬಹಳ ಚರ್ವಿತ ಚರ್ವಣದ ನಂತರ ಪಾಸುಮಾಡಿ ಗ್ರಾಮಾಂತರ ಸಾರ್ವಜನಿಕ ಹಿತರಕ್ಷಣೆ ದೃಷ್ಟಿಯಿಂದ ಜಾರಿಗೆ ತರಲಾಗಿದೆ. ಈ ಅಧಿನಿಯಮ ಯಾವ ಮಹಾ ಉದ್ದೇಶಕ್ಕಾಗಿ ಜಾರಿಯಾಯಿತೋ ಆ ಮಹಾ ಉದ್ದೇಶ ಈಡೇರದೆ ಕುಂಟುತ್ತ ನಡೆದಿರುವದು ಗ್ರಾಮಾಂತರ ತಾರಕರ ದುರ್ದೈವ ಹಾಗೂ ಮಾರಕರ ಸುದೈವವಾಗಿ ಪರಿಣಮಿಸಿದೆ. ಈ ಅಧಿನಿಯಮ ಕೆಲವು ಜಿಲ್ಲೆಗಳಲ್ಲಿ ಮಾತ್ರ ಅನುಷ್ಠಾನಗೊಂಡಿದ್ದರೂ ಅದು ನಿರೀಕ್ಷಿಸಿದಷ್ಟು ಪರಿಣಾಮಕಾರಿಯಾಗಿಲ್ಲ. ಅಲ್ಲಿಯ ಗ್ರಾಮ ರಕ್ಷಕ ದಳಕ್ಕೆ ಹಾಗೂ ದಳಪತಿಗಳಿಗೆ ಸಿಗಬೇಕಾದ ಸೌಕರ್ಯ, ಸವಲತ್ತುಗಳು ನಿರೀಕ್ಷಿತ ಮಟ್ಟದಲ್ಲಿ ಸಿಗುತ್ತಿಲ್ಲ. ಇನ್ನೂ ಕೆಲವು ಜಿಲ್ಲೆಗಳಲ್ಲಿ ಅನುಷ್ಠಾನದ ಸುಳಿವೇ ಇಲ್ಲದೆ ಪರಿಸ್ಥಿತಿ ಹದಗೆಡಲು ಹಾಗೂ ಗ್ರಾಮಾಂತರ ಜೀವನ ಅಸ್ತವ್ಯಸ್ತಗೊಳ್ಳಲು ಹೆದ್ದಾರಿ ಮಾಡಿಕೊಡಲಾಗಿದೆ. ರಾಜ್ಯಾದ್ಯಂತ ಎಲ್ಲಾ 20 ಜಿಲ್ಲೆಗಳಲ್ಲಿ ಈ ಅಧಿನಿಯಮದನ್ವಯ ಕ್ರಮತೆಗೆದುಕೊಳ್ಳಲು ಅನೇಕ ಶಾಸಕರು ವಿಧಾನಸಭೆಯಲ್ಲಿ ದಶಕಗಳ ಹಿಂದೆಯೇ ಸರಕಾರದ ಗಮನ ಸೆಳೆದಾಗ ಆದಷ್ಟು ಬೇಗ ಎಲ್ಲಾ ಜಿಲ್ಲೆಗಳಲ್ಲಿ ಈ ಅಧಿನಿಯಮ ದನ್ವಯ ಕಾರ್ಯಕ್ರಮ ಹಾಕಿಕೊಳ್ಳಲಾಗುವದೆಂದು ಸರಕಾರ ಆಶ್ವಾಸನೆ, ಭರವಸೆ ಕೊಟ್ಟರೂ ಈ ಆಶ್ವಾಸನೆ ಭರವಸೆಗಳೆಲ್ಲವೂ ಹುಸಿಯಾಗಿ ಹೋಗಿವೆ. ವಿಧಾನಮಂಡಳ ದಲ್ಲಿ ಶಾಸಕರ ರೋಧನ ಅರಣ್ಯರೋಧನವಾಗಿರುವದು ಪ್ರಜಾಪ್ರಭುತ್ವದ ದುರ್ದೈವ ಹಾಗೂ ಅವಹೇಳನವಾಗಿದೆ.

ಕರ್ನಾಟಕ ಗ್ರಾಮರಕ್ಷಕ ಮಂಡಳಿ ಅಧಿನಿಯಮ ಇದೊಂದು ಗ್ರಾಮ-ಜನ-ಜೀವನ ಹಸನಾಗಿರಲು, ಸುವ್ಯವಸ್ಥಿತವಾಗಿರಲು, ಗ್ರಾಮದಲ್ಲಿ ಶಾಂತಿ ಸುವ್ಯವಸ್ಥೆ ಕಾನೂನು ಪರಿಪಾಲನೆ ನೆಮ್ಮದಿಯಾಗಿರಲು, ಉತ್ತಮ ಸಮರಸ ವಾತಾವರಣ ಕಲ್ಪಿಸಲು, ಆರಾಜಕತೆ ತಡೆಕಟ್ಟಲು, ದೌರ್ಜನ್ಯ ಶಮನಮಾಡಲು ಉಪಯೋಗಿಸಿಕೊಳ್ಳ ಬಹುದಾದ

ಒಂದು ಆದರ್ಶ ಅಸ್ತ್ರ. ಇದೊಂದು ಮಾದರೀಯ ಅಧಿನಿಯಮ, ಗ್ರಾಮಾಂತರ ಜೀವನಕ್ಕೆ ಉತ್ತಮ ಬೆಳಕು ಕೊಡುವ ಮಾಣಿಕ್ಯ. ಆದರೆ ದುರ್ದೈವದಿಂದ ಈ ಮಾಣಿಕ್ಯ ಮಂಗನ ಕೈಯಲ್ಲಿ ಸಿಕ್ಕ ಮಾಣಿಕ್ಯದಂತಾಗಿ ಅದರ ಉಪಯೋಗ ಎಲ್ಲಾ ಜಿಲ್ಲೆಗಳಿಗೂ ಎಲ್ಲ ಗ್ರಾಮಗಳಿಗೂ ಸಿಗದಂತಾಗಿದೆ. ಪ್ರತಿಯೊಂದು ಗ್ರಾಮದಲ್ಲಿ ಅಕ್ರಮಗಳ - ಕೂಟ, ಅತ್ಯಾಚಾರ, ಅಪಹರಣ, ದೊಂಬಿ, ಖೋಟಾನೋಟು ನಾಣ್ಯ ತಯಾರಿಕೆ, ಬಳಕೆ, ಮಾರಾಟ, ಕೊಲೆ, ಕೊಲೆಯತ್ನ, ಕಳವು ದರೋಡೆ, ಹೆದರಿಸಿ, ಬೆದರಿಸಿ ಬಲಾತ್ಕಾರವಾಗಿ ಕಾಗದಪತ್ರ ಬರೆಯಿಸಿಕೊಳ್ಳುವದು, ಅಕ್ರಮವಾಗಿ ಆಸ್ತಿ ಎತ್ತಿ ಹಾಕುವದು, ದರೋಡೆ, ಕೊಲೆ, ದರೋಡೆ, ಕೊಲೆಗೆ ಯತ್ನ, ದರೋಡೆ ಕೂಟ, ಹಾವಳಿ, ಕೇಡು, ಕಿಡಿಗೇಡಿತನ, ಬೆಂಕಿ ಹಚ್ಚುವದು, ಸ್ಫೋಟಗೊಳಿಸುವದು, ಮನೆಗಳ ಅಕ್ರಮ ಪ್ರವೇಶ, ಆಸ್ತಿಗಳ ಅಕ್ರಮ ಪ್ರವೇಶ, ಕನ್ನಹಾಕುವುದು, ಅಕ್ರಮ ತಡೆ, ಅಕ್ರಮ ಬಂಧನ, ಅಕ್ರಮ ಕೂಟ ಮುಂಜಾಗ್ರತ ಕ್ರಮ ತೆಗೆದುಕೊಳ್ಳಲು ಪ್ರತಿಯೊಂದು ಗ್ರಾಮದಲ್ಲಿ ಗ್ರಾಮರಕ್ಷಕ ದಳಗಳನ್ನು ರಚಿಸಿ ಈ ಗ್ರಾಮರಕ್ಷಕ ದಳಕ್ಕೆ ಯಾವುದೇ ರಾಜಕೀಯ ಪಕ್ಷದ ಸೋಂಕು ಇರದೆ ಹಾಗೂ ಯಾವುದೇ ರಾಜಕೀಯ ಪಕ್ಷದ ಕಾರ್ಯಕರ್ತವ್ಯ ಸದಸ್ಯನಲ್ಲದ ಒಬ್ಬ ಉತ್ತಮ ವ್ಯಕ್ತಿಯನ್ನು ದಳಪತಿಯನ್ನಾಗಿ ಸರಕಾರ ನೇಮಿಸಬೇಕಾಗುತ್ತದೆ. ಈ ದಳಪತಿಗೆ ಮತ್ತು ರಕ್ಷಕ ದಳಕ್ಕೆ ಅವಶ್ಯವಿದ್ದ ಅನುಕೂಲತೆ, ವಾತಾವರಣ, ಸವಲತ್ತು, ಸೌಕರ್ಯ ಹಾಗೂ ಕರ್ತವ್ಯಗಳನ್ನು ಸರಕಾರ ಕಲ್ಪಿಸಿಕೊಡಬೇಕಾಗುತ್ತದೆ. ಗ್ರಾಮಗಳಲ್ಲಿ ವ್ಯಕ್ತಿಯ ಆತ್ಮಹತ್ಯೆಯ ಬಗ್ಗೆ ವ್ಯಕ್ತಿಯು ವಾಹನ ಯಂತ್ರ ಪಶು, ವ್ಯಕ್ತಿಯಿಂದ ಕೊಲ್ಲಲ್ಪಟ್ಟ ಬಗ್ಗೆ, ಯಾವುದೇ ಶಾಂತತಾ ಭಂಗದ ಬಗ್ಗೆ ಯಾವುದೇ ಅಪರಾಧದ ಬಗ್ಗೆ ಸುಳಿವು ಅಥವಾ ಮಾಹಿತಿ ಸಿಕ್ಕಲ್ಲಿ ದೊರಕಿದಲ್ಲಿ ಅಂತಹ ಮಾಹಿತಿಯನ್ನು ತಕ್ಷಣ ಸಮೀಪದ ಆರಕ್ಷಕರ ಠಾಣೆಗೆ ತಿಳಿಸಿ ಮುಂದಿನ ಕ್ರಮದ ಬಗ್ಗೆ ಸೂಕ್ತ ಏರ್ಪಾಡು ಮಾಡುವ ಅಧಿಕಾರವುಳ್ಳ ಕರ್ತವ್ಯ ಈ ದಳಪತಿಗಳಿಗೆ ಇರುತ್ತದೆ. ಪೋಲೀಸ ಮೇಲಾಧಿಕಾರಿಗಳ ಆದೇಶ ನಿರ್ದೇಶನದಂತೆ ಈ ದಳಪತಿಯು ಕಾರ್ಯನಿರ್ವಹಿಸಿ ಹಳ್ಳಿಗಳ ಹಿತರಕ್ಷಣೆ ಮಾಡುವ ಮಹಾಕಾರ್ಯ ದಳಪತಿಯದಾಗಿದೆ. ಬೀಟ್ ಹವಾಲದಾರರು ಗ್ರಾಮಕ್ಕೆ ತನ್ನ ಕರ್ತವ್ಯಕ್ಕಾಗಿ ಬಂದಾಗ್ಗೆ, ಅಪರಾಧಗಳ ಬಗ್ಗೆ ಹಾಗೂ ಗ್ರಾಮದ ಶಾಂತ ಹಾಗೂ ಅಶಾಂತ ವಾತಾವರಣದ ಬಗ್ಗೆ ಯಾವತ್ತೂ ಮಾಹಿತಿಯನ್ನು ಸಹ ಈ ದಳಪತಿಯು ಹವಾಲದಾರರಿಗೆ ಪೂರೈಸಬೇಕಾಗುತ್ತದೆ. ಗ್ರಾಮರಕ್ಷಕ ದಳದ ಸದಸ್ಯರೂ ಕೂಡ ಗ್ರಾಮದ ಸಮಗ್ರ ಶಾಂತಿ ಕಾನೂನು ಪರಿಪಾಲನೆ ಬಗ್ಗೆ ಹಾಗೂ ಗ್ರಾಮದ ಜೀವನ ನೆಮ್ಮದಿಯಾಗಿ ಯಾವುದೇ ಅಪರಾಧಗಳು ನಡೆಯದಂತೆ ಈ ಅಧಿನಿಯಮ ದುರುಪಯೋಗವಾಗದಂತೆ ಜವಾಬ್ದಾರಿ ವಹಿಸಬೇಕಾಗುತ್ತದೆ. ಈ ಅಧಿನಿಯಮ, ನಿಯಮ ಆರಕ್ಷಕರು, ದಳಪತಿ ಹಾಗೂ ಗ್ರಾಮರಕ್ಷಕ ದಳದ ಸದಸ್ಯರೆಲ್ಲರೂ ಗ್ರಾಮದ ಜನಜೀವನ ನೆಮ್ಮದಿಯಿಂದ ಇರಲು ತಾರಕಾಸ್ತ್ರಗಳು ಆಗಿದ್ದು ಈ ವ್ಯವಸ್ಥೆ ಒಂದು ಮಾದರೀಯ ಮಹಾ ಸುವ್ಯವಸ್ಥೆ ಯಾಗಿದೆ. ಇಂತಹ ಅತ್ಯುತ್ತಮವಾದ ಅಧಿನಿಯಮ ಗ್ರಾಮದ ಜನತೆಗೆ ಸುಧಾರಕ ಹಾಗೂ

ಸಂರಕ್ಷಕ ಸಂಜೀವಿನಿಯಾಗಿದ್ದು ಈ ಅಧಿನಿಯಮವನ್ನು ಅಸ್ತಿತ್ವಕ್ಕೆ ತಂದ ಆಗಿನ 1964ರ ಸರಕಾರವನ್ನು ಗ್ರಾಮದ ಜನತೆ ಎಷ್ಟೇ ಹೊಗಳಿದರೂ ಅದು ಕಡಿಮೆ. ಆ ಸರಕಾರಕ್ಕೆ ಗ್ರಾಮಾಂತರ ಜನತೆ ಚಿರಋಣಿ. ಇಂತಹ ಅಧಿನಿಯಮವನ್ನು ರಾಜ್ಯದ ಎಲ್ಲಾ ಜಿಲ್ಲೆ, ಎಲ್ಲಾ ತಾಲೂಕುಗಳ ಎಲ್ಲಾ ಗ್ರಾಮಗಳಲ್ಲಿ ಸಮಗ್ರವಾಗಿ ಜಾರಿ ಮಾಡದೇ ಗ್ರಾಮ ರಕ್ಷಕದಳ ಹಾಗೂ ದಳ, ಪತಿಗಳನ್ನು ನೇಮಿಸಿ ಕಾರ್ಯ ನಿರ್ವಹಿಸದೇ ಅನುಷ್ಠಾನಗೊಳಿಸದೆ, ಗ್ರಾಮಜೀವನ ಹದಗೆಟ್ಟು ಅಸ್ತವ್ಯಸ್ತವಾಗಿ ಶಾಂತಿ, ಸುವ್ಯವಸ್ಥೆ ಕಾನೂನು ಪರಿಪಾಲನೆಯಾಗದೆ ಅರಾಜಕತೆಗೆ ಆಸ್ಪದ ಮಾಡಿಕೊಟ್ಟಿರುವ ಹಾಗೂ ಈ ಬಗ್ಗೆ ಕಾರ್ಯಶೀಲರಾಗದ ಸರಕಾರ, ಅಧಿಕಾರಿಗಳು, ಮಂತ್ರಿಗಳು, ಸಂಸದರು ಹಾಗೂ ಶಾಸಕರು ತಲೆತಗ್ಗಿಸಬೇಕು. ಇವರು ಇನ್ನಾದರೂ ಜಾಗ್ರತರಾಗಿ ತಮ್ಮ ಹೊಣೆ ಜವಾಬ್ದಾರಿಯನ್ನು ಅರಿತು ಹಳ್ಳಿಜೀವನ ಹಸನವಾಗಲು ಹಾತೊರೆದರೆ ಜನತಾ ಜನಾರ್ಧನ ಅವರಿಗೆ ಚಿರಋಣಿ.

❑

ಹುಬ್ಬಳ್ಳಿ ಸಾರಿಗೆ : ಕೆಲವು ಮಾತು

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಅವ್ಯವಸ್ಥೆ, ದುರಾಡಳಿತ, ನಷ್ಟ ಹಾಗೂ ಪ್ರಯಾಣಿಕರಿಗಾಗುತ್ತಿರುವ ಅವ್ಯಾಹತ ನಿರಂತರ ಅನಾನುಕೂಲ, ತೊಂದರೆ, ತಾಪತ್ರಯಗಳ ಬಗ್ಗೆ ಸಾರ್ವಜನಿಕರು, ಶಾಸಕರು, ಪತ್ರಿಕೆಯವರು, ಸರಕಾರ ಹಾಗೂ ಸಂಸ್ಥೆಯ ಗಮನವನ್ನು ಸೆಳೆದರೂ ಪ್ರತಿಫಲ ಅರಣ್ಯರೋದನವಾಗಿದೆ. ಭಾರೀ ವೇತನ ಭತ್ತೆ ಪಡೆಯುವ ಡಿಪೋ ಮ್ಯಾನೇಜರ್, ಡಿವಿಜನಲ್ ಕಂಟ್ರೋಲರ್, ರೀಜನಲ್ ಕಂಟ್ರೋಲರ್, ಮ್ಯಾನೇಜಿಂಗ್ ಡೈರಕ್ಟರ್, ಛೇರಮನ್, ಸಾರಿಗೆ ಕಾರ್ಯದರ್ಶಿ ಇವರೆಲ್ಲರಿಗೂ ಜನಪರ ಕಾಳಜಿ, ದಕ್ಷ ಆಡಳಿತ ಬಗ್ಗೆ ಚಿಂತನೆಯೇ ಇಲ್ಲದೆ ನಿಷ್ಪ್ರಯೋಜನವಾದ ದೋರಣೆಗಳಂತೆ ಇದ್ದು ಬೇಜವಾಬ್ದಾರಿ, ಹೊಣೆಗೇಡಿಗಳಾಗಿರುವದು ಜನತೆಯ ದುರ್ದೈವ. ಸಾಕಷ್ಟು ಬಸ್ಸುಗಳಿರದೆ, ಇದ್ದ ಬಸ್ಸುಗಳು ಸುಸಜ್ಜಿತವಾಗದೆ ಸುಸಜ್ಜಿತವಾದ ಬಸ್ಸುಗಳನ್ನು ಸಂಚಾರಕ್ಕೆ ಕಳುಹಿಸದೆ ಮೋಡಕಾ ಬಜಾರದಂತಿರುವ ಡಿಪೋಗಳಲ್ಲಿ ಸಾಲಾಗಿ ನಿಲ್ಲಿಸಿ ಪ್ರತಿದಿನ ರಾಜ್ಯದ ಡಿಪೋಗಳಲ್ಲಿ ಭಾರೀ ಸಂಚಾರವನ್ನು ರದ್ದು ಪಡಿಸುವದ ಅವ್ಯಾಹತವಾಗಿ ನಡದೇ ಇದೆ, ಸಾಕಷ್ಟು ಸಿಬ್ಬಂದಿ ಒದಗಿಸದೆ ಬಿಡಿಭಾಗಗಳನ್ನು ಒದಗಿಸದೆ, ಒದಗಿಸಿದರೆ ಕಳಪೆ ವಸ್ತುಗಳನ್ನು ಪೂರೈಸಿ ಸಂಚಾರಿ ವ್ಯವಸ್ಥೆಯನ್ನು ಅವ್ಯಸ್ಥಿತಗೊಳಿಸುತ್ತಿರುವದು ನಾಚಿಗೆಗೇಡು ಅನ್ನದೆ ಗತ್ಯಂತರವಿಲ್ಲ. ಪ್ರತಿದಿನ ಸಂಚಾರ ರದ್ದುಪಡಿಸಿದ ಸಂಸ್ಥೆಗೆ ಭಾರೀ ನೂರಾರು ಕೋಟಿ ನಷ್ಟವಾಗುತ್ತಿರುವದನ್ನು ಸರಕಾರ ಸಹಿಸಿಕೊಂಡು ಸಂಸ್ಥೆ ದಿವಾಳಿ ದಿಗಂತದಲ್ಲಿದ್ದರೂ ಸರಕಾರಿ ಖಜಾನೆಯಿಂದ ಪ್ರತಿವರ್ಷ ಸಹಾಯಧನ ನೀಡಿ ಬೆಳೆಯುತ್ತಿರುವ ನಷ್ಟವನ್ನು ಕಡಿಮೆ ಮಾಡಬಹುದು. ಆದರೆ ಸಾರ್ವಜನಿಕ ಪ್ರಯಾಣಿಕರಿಗಾಗುವ ತೊಂದರೆಯನ್ನು ತಪ್ಪಿಸುವದು ಹಾಗೂ ಉತ್ತಮ ಸಂಚಾರ ಒದಗಿಸುವದು ಸರಕಾರದ ಜವಾಬ್ದಾರಿ. ಈ ಜವಾಬ್ದಾರಿಯನ್ನು ಸರಕಾರ ಹೊರದಿರುವದು ಪ್ರಜಾ ಸರಕಾದ ಹೊಣೆಗೇಡಿತನ ಹಾಗೂ ವೈಫಲ್ಯವಾಗಿದ್ದುದು ಸಾರಿಗೆ ಸಂಸ್ಥೆಯ ಕಾರ್ಯಚರಣೆಯ ವೈಖರಿ, ಅಂಕಿ - ಸಂಖ್ಯೆ ವರದಿ, ಇತ್ಯಾದಿ ವ್ಯವಹಾರಿಕ ಚಿತ್ರವನ್ನು ನೋಡಿದರೆ ಸುಸ್ಪಷ್ಟವಾಗುತ್ತದೆ. ರಾಜ್ಯಾದ್ಯಂತ ಖಾಸಗಿ ವಾಹನಗಳು ಮಾಮೂಲಿ ಕೊಟ್ಟು ಸಂಚಾರಿ ವ್ಯವಸ್ಥೆಯನ್ನು ಸಾರ್ವಜನಿಕರಿಗೆ

ಒದಗಿಸದಿದ್ದರೆ ಪ್ರಯಾಣಿಕರ ತೊಂದರೆ ಅವರ್ಣನೀಯವಾಗಬಹುದಿತ್ತು. ಸುದೈವದಿಂದ ಕ್ರಮ ಹಾಗೂ ಅಕ್ರಮವಾಗಿ ನಡೆಯಿಸುತ್ತಿರುವ ಖಾಸಗೀ ಬಸ್ಸು, ಮಿನಿ ಬಸ್ಸು ಮೆಟೊಡೋರಗಳ ಸಾರಿಗೆ ಸಂಚಾರ ಪ್ರಯಾಣಿಕರಿಗೆ ಅನುಕೂಲವಾಗಿರುವದು ಹಾಗೂ ಸರಕಾರ ಈ ವ್ಯವಸ್ಥೆಗೆ ಪ್ರೋತ್ಸಾಹ ಕೊಟ್ಟಿರುವದು ಒಳ್ಳೆಯದೆ ಆಗಿದೆ.

ರಾಜ್ಯದ ಎಲ್ಲಾ ವಿಭಾಗಗಳ ಎಲ್ಲಾ ಘಟಕಗಳಲ್ಲಿ ಪ್ರತಿ ದಿವಸ ಏಕಾಏಕಿ ಬಸ್ಸುಗಳ ಸಂಚಾರ ರದ್ದಾಗುವದು, ತಡವಾಗಿ ಹೊರಡುವದು ಹಾಗೂ ಪ್ರಯಾಣಿಕರಿಗೆ ತೊಂದರೆ ಕೊಡುವುದು ಅವ್ಯಾಹತವಾಗಿ ನಡೆದಿದೆ. ಹುಬ್ಬಳ್ಳಿ ವಿಭಾಗದ ಉದಾಹರಣೆಯನ್ನೇ ತೆಗೆದುಕೊಂಡರೆ ವಿಚಿತ್ರವೆನಿಸುತ್ತದೆ. ಹುಬ್ಬಳ್ಳಿ ವಿಭಾಗದಲ್ಲಿ ಎಂಟು ಘಟಕಗಳಿವೆ. ಅಧಿಕೃತ ಮಾಹಿತಿಯ ಪ್ರಕಾರ 1997 ಫೆಬ್ರವರಿ ತಿಂಗಳು 28 ದಿನಗಳ ಅವಧಿಯಲ್ಲಿ (1) ಹುಬ್ಬಳ್ಳಿ (ಎಂ) ಘಟಕ - 1.50 ಲಕ್ಷ, (2) ಹುಬ್ಬಳ್ಳಿ (ಸಿ) ಘಟಕ 1.15 ಲಕ್ಷ, (3) ಸಿ.ಟಿ. (2) ಘಟಕ - 0.28 ಲಕ್ಷ, (4) ಧಾರವಾಡ ಘಟಕ - 0.63 ಲಕ್ಷ, (5) ಹಾವೇರಿ ಘಟಕ - 0.35 ಲಕ್ಷ, (6) ಹಿರೇಕೆರೂರ ಘಟಕ - 0.88 ಲಕ್ಷ, (7) ರಾಣೆಬೆನ್ನೂರ ಘಟಕ - 0.28 ಲಕ್ಷ, (8) ನರಗುಂದ ಘಟಕ - 0.15 ಲಕ್ಷ ಹೀಗೆ ಹುಬ್ಬಳ್ಳಿ ವಿಭಾಗ ಒಟ್ಟು 5.19 ಲಕ್ಷ ಕಿಲೋಮೀಟರ್ ಸಂಚಾರವನ್ನು ರದ್ದು ಪಡಿಸಿತು. ಇದು ಸರಿಯೇ?

1997 ಫೆಬ್ರವರಿ ಈ ತಿಂಗಳಲ್ಲಿ ಪ್ರತಿದಿನ (1) ಹುಬ್ಬಳ್ಳಿ (ಎಂ) ಘಟಕ - ಕನಿಷ್ಠ 1776 ರಿಂದ ಗರಿಷ್ಠ 13,315 ಕಿ.ಮೀ. (2) ಹುಬ್ಬಳ್ಳಿ (ಸಿ) ಘಟಕ - ಕನಿಷ್ಠ 1609 ರಿಂದ ಗರಿಷ್ಠ 6,093 ಕಿ.ಮೀ. (3) ಸಿ.ಟಿ. (2) ಘಟಕ - ಕನಿಷ್ಠ 84 ರಿಂದ ಗರಿಷ್ಠ 2,559 ಕಿ.ಮೀ. (4) ಧಾರವಾಡ ಘಟಕ - ಕನಿಷ್ಠ 732 ರಿಂದ ಗರಿಷ್ಠ 4,581 ಕಿ.ಮೀ. (5) ಹಾವೇರಿ ಘಟಕ - ಕನಿಷ್ಠ 172 ರಿಂದ 7,696 ಕಿ.ಮೀ. (6) ಹಿರೇಕೆರೂರ ಘಟಕ - ಕನಿಷ್ಠ 1,400 ರಿಂದ ಗರಿಷ್ಠ 8,250 ಕಿ.ಮೀ. (7) ರಾಣೆಬೆನ್ನೂರ ಘಟಕ - ಕನಿಷ್ಠ 334 ರಿಂದ ಗರಿಷ್ಠ 4,475 ಕಿ.ಮೀ. (8) ನರಗುಂದ ಘಟಕ - ಕನಿಷ್ಠ 102 ರಿಂದ ಗರಿಷ್ಠ 1,518 ಕಿ.ಮೀ. ಹೀಗೆ ಪ್ರತಿದಿವಸ ಹುಬ್ಬಳ್ಳಿ ವಿಭಾಗದಲ್ಲಿ ಕನಿಷ್ಠ 9,029 ರಿಂದ ಗರಿಷ್ಠ 39,870 ಕಿ.ಮೀ. ಸಂಚಾರ ರದ್ದು ಮಾಡಲ್ಪಟ್ಟಿದೆ. ಇದು ರಾಜ್ಯದ ಎಲ್ಲಾ ಡಿವಿಜನ್ ಘಟಕಗಳಲ್ಲಿ ನಡೆದೇ ಇದೆ.

1997 ಫೆಬ್ರವರಿ ತಿಂಗಳಲ್ಲಿ ಪ್ರತಿದಿವಸ ಹುಬ್ಬಳ್ಳಿ ಘಟಕ - ಕನಿಷ್ಠ 3.43 ಲಕ್ಷದಿಂದ ಗರಿಷ್ಠ 4.91 ಲಕ್ಷ (2) ಹುಬ್ಬಳ್ಳಿ (ಸಿ) ಘಟಕ - ಕನಿಷ್ಠ 1.25 ಲಕ್ಷದಿಂದ ಗರಿಷ್ಠ 2.35 ಲಕ್ಷ (3) ಹುಬ್ಬಳ್ಳಿ ಘಟಕ - ಕನಿಷ್ಠ 0.81 ಲಕ್ಷದಿಂದ ಗರಿಷ್ಠ 1.14 ಲಕ್ಷ (4) ಧಾರವಾಡ ಘಟಕ - ಕನಿಷ್ಠ 1.73 ಲಕ್ಷ ದಿಂದ ಗರಿಷ್ಠ 3.05 ಲಕ್ಷ (5) ಹಾವೇರಿ ಘಟಕ - ಕನಿಷ್ಠ 1.10 ಲಕ್ಷದಿಂದ ಗರಿಷ್ಠ 2.27 ಲಕ್ಷ (6) ಹಿರೇಕೆರೂರ ಘಟಕ ಕನಿಷ್ಠ 1.35 ಲಕ್ಷದಿಂದ ಗರಿಷ್ಠ 3.23 ಲಕ್ಷ (7) ರಾಣೆಬೆನ್ನೂರ ಘಟಕ - ಕನಿಷ್ಠ 0.57 ಲಕ್ಷದಿಂದ ಗರಿಷ್ಠ 0.98 ಲಕ್ಷ ರೂಪಾಯಿ ಹೀಗೆ ಕಡಿಮೆ ಸಂಚಾರ ಆದಾಯ ಬಂದಿದ್ದು

ಈ ತಿಂಗಳ ಹಾಗೂ ಉಳಿದೆಲ್ಲ ತಿಂಗಳುಗಳ ಹಾಗೂ ಉಳಿದೆಲ್ಲ ವರ್ಷಗಳ ಸಂಚಾರಿ ಆದಾಯದ ಅಧ್ಯಯನವನ್ನು ಹೊಣೆಹೊತ್ತ ಅಧಿಕಾರಿಗಳು, ಸರಕಾರ ಹಾಗೂ ಸರಕಾರದ ಹೊಣೆ ಹೊತ್ತಿರುವ ಐ.ಎ.ಎಸ್., ಕೆ.ಎ.ಎಸ್. ಅಧಿಕಾರಿಗಳು, ಮಂತ್ರಿಗಳು ಮಾಡಿ ಮುಂದಿನ ಕ್ರಮ ತೆಗೆದುಕೊಂಡರೆ ಒಳ್ಳೆಯದು. ಇಲ್ಲವಾದರೆ "ಯಾರ ಹೊಟ್ಟೆ ನೊಯ್ವದೆ ಯಾರು ಅಹ್ವಾನ ತಿನ್ನಬೇಕು" ಅನ್ನುವಂತಾದೀತು. ಅಧಿಕಾರಿಗಳ ಕರ್ತವ್ಯಚ್ಯುತಿ ಹಾಗೂ ದುರಾಡಳಿತದಿಂದಾಗುವ ನಷ್ಟವನ್ನು ಅಧಿಕಾರಿಗಳು ಮೇಲೆ ಸರಚಾರ್ಜ್ ಹಾಕಿ ವಸೂಲ ಮಾಡುವದು ಅಗತ್ಯ.

ರಾಜ್ಯದ ಎಲ್ಲಾ ಡಿಪೋವಾರು ಬಸ್ಸುಗಳ ಸಂಖ್ಯೆಯೆಷ್ಟು? ಈ ಬಸ್ಸುಗಳು ಪ್ರತಿದಿನ ಎಷ್ಟು ಕಿ.ಮೀ. ಸಂಚಾರ ಮಾಡಬೇಕಿತ್ತು. ಇ.ಪಿ.ಕೆ.ಎಂ. ಪ್ರಕಾರ ಎಷ್ಟು ಸಂಚಾರ ಆದಾಯ ಬರಬೇಕಾಗಿತ್ತು? ಆದರೆ ಎಷ್ಟು ಕಿ.ಎಂ. ಸಂಚಾರ ಮಾಡಲಾಗಿದೆ ಹಾಗೂ ಅದರಿಂದ ವಾಸ್ತವಿಕವಾಗಿ ಬಂದ ಸಂಚಾರಿ ಆದಾಯವೆಷ್ಟು? ಸಂಚಾರ ರದ್ದತಿಯಿಂದಾದ ನಷ್ಟವೆಷ್ಟು? ತಡವಾಗಿ ಬಿಟ್ಟಿದ್ದರಿಂದಾದ ನಷ್ಟವೇನು? ಈ ಮಾಹಿತಿಯನ್ನು ಅಧಿಕಾರಿಗಳು ಕೊಟ್ಟರೆ ಇವರ ಆಡಳಿತ ಸಾಮರ್ಥ್ಯದ ಮಟ್ಟ ಹಾಗೂ ಇತರೆ ಆಡಳಿತ ವೈಖರಿಯಿಂದ ಆಗುತ್ತಿರುವ ವಾಸ್ತವಿಕ ನಷ್ಟ ಎಷ್ಟೆಂಬುದು ಗೊತ್ತಾಗುತ್ತದೆ. ಆದರೆ ಇದನ್ನು ಕೇಳುವರಾರು? ಅನೇಕ ಆಡಳಿತ ವ್ಯವಸ್ಥಾಪಕ ಅಧಿಕಾರಿಗಳು ಅಸಮರ್ಥ ಕರ್ತವ್ಯಗೇಡಿಗಳು ಇದ್ದು ಇಂಥವರ ಮೇಲೆ ಕಟ್ಟುನಿಟ್ಟಾದ ಶಿಸ್ತಿನ ಕ್ರಮ ತೆಗೆದುಕೊಳ್ಳುವ ಬದಲು ಅವರಿಗೆ ಸರಕಾರವೇ ಶರಣಾಗತವಾದರೆ ಸಂಸ್ಥೆಯ ಹಾಗೂ ಸಾರ್ವಜನಿಕರ ಉದ್ಧಾರವೆಂತು? ಸಂಚಾರಿ ಹಾಗೂ ಸಂಚಾರೇತರ ಇತರೆ ಗಣನೀಯ ಕಡಿಮೆ ಆದಾಯ, ಕಳಪೆ ಬಿಡಿಭಾಗ ಇತ್ಯಾದಿಗಳ ಖರೀದಿ, ಕಾರ್ಮಿಕರ ಸಂಘಗಳು ಕೊಟ್ಟ ಉತ್ತಮ ಆಡಳಿತ ಸುಧಾರಣಾ ಸಲಹೆ,. ವಿಧಾನ ಮಂಡಳ ಸಮಿತಿ ಸಲಹೆ, ಸಾರ್ವಜನಿಕರ ಸಲಹೆ, ಪತ್ರಿಕೆಗಳ ಸಲಹೆ ಇತ್ಯಾದಿಗಳನ್ನು ಗಮನಿಸದೆ ಮಾಡುತ್ತಿರುವ ಅನೇಕ ಅಧಿಕಾರಿಗಳ ದುರಾಡಳಿತವೇ ಸಂಸ್ಥೆಯ ಹಾಗೂ ಸಾರ್ವಜನಿಕ ಹಿತಾಸಕ್ತಿಗೆ ಕಾರಣವೆಂದರೆ ತಪ್ಪಾಗಲಾರದು. ಇನ್ನಾದರೂ ಸರಕಾರ ಗಮನಗಹರಿಸಿದರೆ ಒಳ್ಳೆಯದು.

❑

ಗ್ರಾಮ ಲೆಕ್ಕಾಧಿಕಾರಿಗಳ ಸೇವೆ
ಸಾರ್ಥಕ - ತಾರಕ - ಪೂರಕ

ರಾಜ್ಯ ಮಟ್ಟದ ಯಾವತ್ತೂ ಎಲ್ಲಾ ಕಾರ್ಯಾಲಯಗಳು ಹಾಗೂ ಅವುಗಳ ಅಧಿಕಾರಿಗಳು ರಾಜಧಾನಿಯಲ್ಲೆ ಇರಬೇಕು. ವಿಭಾಗ ಮಟ್ಟದ ಎಲ್ಲಾ ಕಾರ್ಯಾಲಯಗಳ ಹಾಗೂ ಅಧಿಕಾರಿಗಳ ವಿಭಾಗ ಮಟ್ಟ ಕೇಂದ್ರ ಸ್ಥಳದಲ್ಲಿಯೇ ಇರಬೇಕು. ಜಿಲ್ಲಾ ಮಟ್ಟದ ಎಲ್ಲಾ ಕಾರ್ಯಾಲಯಗಳು ಹಾಗೂ ಅಧಿಕಾರಿಗಳು ಜಿಲ್ಲಾ ಕೇಂದ್ರ ಸ್ಥಳದಲ್ಲಿಯೇ ಇರಬೇಕು. ಉಪವಿಭಾಗ ಮಟ್ಟದ ಎಲ್ಲಾ ಕಾರ್ಯಾಲಯಗಳು ಹಾಗೂ ಅಧಿಕಾರಿಗಳು ವಿಭಾಗ ಮಟ್ಟದ ಕೇಂದ್ರ ಸ್ಥಳದಲ್ಲಿಯೇ ಇರಬೇಕು. ತಾಲ್ಲೂಕು ಮಟ್ಟದ ಎಲ್ಲಾ ಕಾರ್ಯಾಲಯಗಳು ಹಾಗೂ ಅಧಿಕಾರಿಗಳು ತಾಲ್ಲೂಕ ಮಟ್ಟದ ಕೇಂದ್ರ ಸ್ಥಳದಲ್ಲಿಯೇ ಇರಬೇಕು. ನಾಡು ಕ್ಷೇತ್ರದ ಕಾರ್ಯಾಲಯ ಹಾಗೂ ಅಧಿಕಾರಿಗಳು ನಾಡುಕ್ಷೇತ್ರದ ಕೇಂದ್ರ ಸ್ಥಳದಲ್ಲಿಯೇ ಇರಬೇಕು. ಅಂತೆಯೇ ಗ್ರಾಮ ಪಂಚಾಯತಿ ಮಟ್ಟದ ಕಾರ್ಯಾಲಯ ಹಾಗೂ ವಿವಿಧ ಅಧಿಕಾರಿಗಳು ಗ್ರಾಮ ಪಂಚಾಯತಿ ಮಟ್ಟದ ಕೇಂದ್ರ ಸ್ಥಳದಲ್ಲಿಯೇ ಇರಬೇಕು. ಅಂದರೆ ಮಾತ್ರ ಗ್ರಾಮದಿಂದ ಹಿಡಿದು ರಾಜ್ಯದ ರಾಜಧಾನಿ ವರೆಗಿನ ಎಲ್ಲಾ ಆಡಳಿತ ಅಭಿವೃದ್ಧಿ ಸೇವೆ ಜನಸಮೂಹಕ್ಕೆ ಸಾರ್ಥಕ, ತಾರಕ ಹಾಗೂ ಪೂರಕವಾಗುತ್ತದೆ. ಗ್ರಾಮಮಟ್ಟದ ಅಥವಾ ಗ್ರಾಮ ಪಂಚಾಯತಿ ಮಟ್ಟದ ವಿವಿಧ ಕಾರ್ಯಾಲಯಗಳ ಹಾಗೂ ಅವುಗಳ ಅಧಿಕಾರಿಗಳ ಸೇವೆಯನ್ನೊಂದು ಬಿಟ್ಟರೆ ಬಹುತೇಕ ಎಲ್ಲಾ ಮಟ್ಟದ ಕಾರ್ಯಾಲಯ ಹಾಗೂ ಅವುಗಳ ಅಧಿಕಾರಿಗಳ ಸೇವೆಗಳು ಕೆಲವೊಂದು ಅಪವಾದಗಳಿಗೆ ಒಳಪಟ್ಟು ಸರಿಯಾಗಿ ಸಮರ್ಪಕವಾಗಿ ತಾರಕವಾಗಿ ಹಾಗೂ ಪೂರಕವಾಗಿ ಸಿಗುತ್ತಲಿದೆ.

ಗ್ರಾಮ ಮಟ್ಟದ ಹಾಗೂ ಗ್ರಾಮ ಪಂಚಾಯತಿ ಮಟ್ಟದ ವಿವಿಧ ಕಾರ್ಯಾಲಯ ಗಳ ಹಾಗೂ ಅವುಗಳ ಅಧಿಕಾರಿಗಳ ಸೇವೆ ಗ್ರಾಮಾಂತರ ಜನರಿಗೆ ಸಮರ್ಥ ಹಾಗೂ ಸರಿಯಾದ ರೀತಿಯಲ್ಲಿ ಸಿಗದೆ ಇರುವದು ಗ್ರಾಮಾಂತರ ಜನತೆಯ ದುರ್ದೈವ. ಈ ನ್ಯೂನತೆಗೆ ಮೇಲ್ಮಟ್ಟದ ಅಧಿಕಾರಿಗಳ, ಶಾಸಕರ, ಸಂಸದರ, ಮೂರು ಹಂತದ ಪಂಚಾಯತ ಪ್ರತಿನಿಧಿಗಳ ಹಾಗೂ ಸರಕಾರದ ಉದಾಸೀನತೆಯು ಕಾರಣವೇ

ಮೂಲವಾಗಿದೆ. ಸಾರ್ವಜನಿಕ ಹಿತಾಸಕ್ತಿಗೆ ಗಮನ ಕೊಡದೆ ಈ ಅಧಿಕಾರಿ ಸೇವಕರ ಹಿತಾಸಕ್ತಿಗೆ ಹೆಚ್ಚಿನ ಗಮನಕೊಡುವದು ಪ್ರತಿನಿಧಿಗಳಿಗೆ ಸಲ್ಲದು. ರಾಜ್ಯ, ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ಇರಬೇಕಾದ ಎಲ್ಲಾ ವಿವಿಧ ಕಾರ್ಯಾಲಯಗಳು ಇದ್ದ ಹಾಗೆ ಪ್ರತಿ ಗ್ರಾಮ ಪಂಚಾಯತಿಯ ಕೇಂದ್ರ ಸ್ಥಳದಲ್ಲಿ (1) ಗ್ರಾಮ ಪಂಚಾಯತ್ ಕಾರ್ಯದರ್ಶಿ, (2) ಗ್ರಾಮ ಲೆಕ್ಕಾಧಿಕಾರಿ, (3) ಕೃಷಿ ಸಹಾಯಕ, (4) ವ್ಯವಸಾಯ ಪತ್ತಿನ ಸೇವಾ ಸಹಕಾರಿ ಸಂಘ ಹಾಗೂ ಅದರ ಕಾರ್ಯದರ್ಶಿ, (5) ಹಾಲು ಉತ್ಪಾದಕರ ಸಹಕಾರ ಸಂಘ ಹಾಗೂ ಅದರ ಕಾರ್ಯದರ್ಶಿ, (6) ವಿದ್ಯುತ್ ಇಲಾಖೆಯ ಲೈನ್‌ಮನ್, (7) ಅಂಚೆ ಕಛೇರಿ, (8) ಆರೋಗ್ಯ ಉಪಕೇಂದ್ರ ಹಾಗೂ ಆರೋಗ್ಯ ಮೇಲ್ವಿಚಾರಕ, (9) ಶಿಶು ಅಭಿವೃದ್ಧಿ ಕೇಂದ್ರ (1) ಗ್ರಾಮರಕ್ಷಕ ದಳ ಹಾಗೂ ಅದರ ದಳಪತಿ ಇತ್ಯಾದಿ ವಿವಿಧ ಇಲಾಖೆಯ ಕಾರ್ಯಾಲಯ ಹಾಗೂ ಆ ಕಾರ್ಯಾಲಯಗಳ ಕಾರ್ಯದರ್ಶಿಗಳು ಗ್ರಾಮದ ಜನತೆಯ ಸರ್ವತೋಮುಖ ಸೇವೆಗಾಗಿ ಇರಲೇಬೇಕು. ಇದು ಸರಕಾರದ ಉದ್ದೇಶ, ಆದೇಶ ಹಾಗೂ ಮಾರ್ಗಸೂಚಿ, ಆದರೆ ದುರ್ದೈವದಿಂದ ಪಂಚಾಯತಿ ಕಾರ್ಯಾಲಯವೊಂದನ್ನು ಹೊರತು ಪಡಿಸಿ ಇನ್ನೂ ಅನೇಕ ಗ್ರಾಮ ಕಾರ್ಯಾಲಯಗಳೇ ಇಲ್ಲ, ಇದ್ದರೆ ಅವುಗಳ ಅಧಿಕಾರಿಗಳೇ ಆಯಾ ಗ್ರಾಮ ಪಂಚಾಯತಿ ಕೇಂದ್ರದಲ್ಲಿ ಇರುವದೇ ಇಲ್ಲ. ಬಹುತೇಕ ಪಂಚಾಯತಿ ಕಾರ್ಯದರ್ಶಿಗಳು ಕೇಂದ್ರದಲ್ಲಿ ವಾಸವಾಗಿಯೇ ಇಲ್ಲ. ಗ್ರಾಮ ಲೆಕ್ಕಾಧಿಕಾರಿಗಳ ಸಜಾ ಪಂಚಾಯತಿ ಕೇಂದ್ರಗಳಲ್ಲೇ ಬಹುತೇಕ ಇಲ್ಲ, ಇದ್ದರೆ. ಅಲ್ಲಿ ಗ್ರಾಮ ಲೆಕ್ಕಾಧಿಕಾರಿಗಳೇ ಇರುವುದಿಲ್ಲ. ಇವರ ಸೇವೆ ಸಮರ್ಪಕವಾಗಿ ಹಳ್ಳಿಗರಿಗೆ ಸಿಗುತ್ತಲೇ ಇಲ್ಲ. ತಂದೆ ಭೂಮಾಲೀಕ ಪೋತಿಯಾಗಿ ದಶಕಗಳು ಕಳೆದಿದ್ದರೂ ಮಕ್ಕಳನ್ನು ವಾರಸಾ ಮಾಡದ ಹಕ್ಕು ಪತ್ರಿಕೆಗಳಲ್ಲಿ ತಿದ್ದುಪಡಿ ಮಾಡದೆ ಇರುವ ಉದಾಹರಣೆಗಳು ಸಾಕಷ್ಟು ಇವೆ. ಗ್ರಾಮಗಳಲ್ಲಿಯ ಪ್ರತಿಯೊಂದು ಜಮೀನಿಗೆ ಹೋಗಿ ಬೆಳೆದ ಬೆಳೆಯನ್ನು ಪ್ರತ್ಯಕ್ಷ ನೋಡಿ ಪೀಕ ಪಹಣಿ ಬರೆಯಬೇಕೆಂದು ನಿಯಮಗಳಿದ್ದರೂ ಜಮೀನಿಗೆ ಹೋಗದೆ ಬೆಳೆಯನ್ನು ನೋಡದೆ ಯದ್ವಾ - ತದ್ವಾ ಪೀಕ ಪಹಣಿಯನ್ನು ಎಲ್ಲೋ ಕೂತು ಮಾಡಿದ ಹಾಗೂ ಮಾಡುತ್ತಿರುವ ವಾಸ್ತವಿಕ ಅಂಶ ಮುಂದವರಿದೇ ಇದೆ. ಪಹಣಿ ಎಂಟ್ರಿಗಳು ವಸ್ತುಸ್ಥಿತಿಗೆ ತದ್ವಿರುದ್ಧವಾದವುಗಳನೇಕ ಇವೆ. ಜೋಳ ಬೆಳೆದರೆ ಹತ್ತಿ, ಹತ್ತಿ ಬೆಳೆದರೆ ಜೋಳ ಹೀಗೆ ಖೊಟ್ಟಿ ಎಂಟ್ರಿ ಬರೆದ ಉದಾಹರಣೆ ಬೇಕಾದಷ್ಟು ಇವೆ. ಹಕ್ಕುಪತ್ರಗಳು ಉತ್ಪನ್ನ ಸರ್ಟಿಫಿಕೇಟುಗಳು, ಜಾತಿ ಸರ್ಟಿಫಿಕೇಟುಗಳು ಇತ್ಯಾದಿ ಕಾಗದ ಪತ್ರಗಳು ಬೇಕಾದರೆ ಹಾಗೂ ಕಂದಾಯ ಬಾಕಿ ಕೊಡುವುದಾದರೆ ಹಳ್ಳಿಗರು ತಲಾಠಿಯನ್ನು ಹುಡುಕುತ್ತಲೇ ಹೋಗಬೇಕು. ಜನನ - ಮರಣ ದಾಖಲೆ ಮಾಡುವ ಅಧಿಕಾರದ ಕರ್ತವ್ಯ ಈ ತಲಾಠಿಗಳಿಗಿವೆ. ದಾಖಲೆಯನ್ನು ಮಾಡದೆ ಇರುವ ಉದಾಹರಣೆ ಸಾಕಷ್ಟು ಇವೆ. ಹೆತ್ತರೆ - ಸತ್ತರೆ ಸಾಜಾದಲ್ಲಿಯೇ ಇರದ ತಲಾಠಿಯನ್ನು ದಾಖಲೆ ಸಲುವಾಗಿ ಸಂಬಂಧಿಸಿದವರು ಹುಡುಕುತ್ತ ಹೋಗಬೇಕು. ಪಂಚಾಯತಿಗಳು ಸ್ಥಾಪನೆಯಾಗಿ ವರ್ಷಗಳು ಸಾಕಷ್ಟು ಗತಿಸಿದರೂ ಮೊದಲಿನ ತಲಾಠಿ

ಸಾಜಾ ಬದಲಿಸಿ ಪಂಚಾಯತಿ ಕೇಂದ್ರ ಸ್ಥಾನಕ್ಕೆ ಬದಲಾವಣೆ ಇಂದಿಗೂ ಆಗದೇ ಇರುವ ಉದಾಹರಣೆ ಸಾಕಷ್ಟು ಇವೆ. ಅಧಿಕೃತವಾಗಿ ಜಮೀನು ಪ್ರತ್ಯಕ್ಷ ಸಾಗುವಳಿದಾರನೇ ಬೇರೆ ಸಾಗುವಳಿ ಮಾಡದೆ ಇರುವವನ ಹೆಸರು ಸಾಗುವಳಿದಾರನೆಂದು ಖೊಟ್ಟಿ ದಾಖಲೆ ಬರೆಯಲ್ಪಟ್ಟ ವ್ಯಕ್ತಿಯೇ ಬೇರೆ, ಸತ್ತವರು ಊರುಬಿಟ್ಟು ನಿರಂತರ ಹೋದವರು ಭೂನ್ಯಾಯ ಮಂಡಳಿಗೆ ಅರ್ಜಿ ಕೊಡದೆ ದಶಕಗಳು ಮೀರಿ ಅವನು ಪೋತಿಯಾಗಿದ್ದರೂ ಆ ಜಮೀನನ್ನು ಮಾಲಿಕರು ಪ್ರಕ್ಯತ್ಷ ಸಾಗುಮಾಡುತ್ತಿದ್ದರೂ ಜಮೀನು ಮಾಲೀಕನ ಹೆಸರು ಪಹಣಿಯಲ್ಲಿ ದಾಖಲಿಸದೆ, ಸತ್ತವನು ಹಾಗೂ ಊರಲ್ಲಿರದವನ ಹೆಸರನ್ನೇ ಹಕ್ಕುಪತ್ರಗಳ ಪಹಣಿ ಇತರ ಹಕ್ಕಿನಲ್ಲಿ ಮುಂದುವರಿಸುತ್ತಿರುವ ಉದಾಹರಣೆ ಕೂಡ ಸಾಕಷ್ಟು ಇವೆ.

ಗ್ರಾಮ ಲೆಕ್ಕಾಧಿಕಾರಿಗಳ ಸೇವೆ ಸರಿಯಾದ ರೀತಿಯಲ್ಲಿ ಕ್ರಮಬದ್ಧವಾಗಿ ತಪ್ಪದೆ ಸಿಗಲಿ, ಅವರಿಗೆ ಸಾಕಷ್ಟು ಕೆಲಸವಿರಲಿ ಎಂಬ ಸದುದ್ದೇಶದಿಂದಲೇ ಹಿಂದಿನ ಗ್ರಾಮ ಪಂಚಾಯತಿ ಅಧಿನಿಯಮ ಪ್ರಕಾರ ತಲಾಠಿಗಳನ್ನು ಗ್ರಾಮ ಪಂಚಾಯತಿಗಳ ಎಕ್ಸ್ ಅಫೀಸಿಯೋ ಕಾರ್ಯದರ್ಶಿಯೆಂದು ನೇಮಕ ಮಾಡಲಾಗಿತ್ತು. ಆಗ್ಗೆ ಗ್ರಾಮ ಲೆಕ್ಕಾಧಿಕಾರಿ ಹಾಗೂ ಗ್ರಾಮ ಪಂಚಾಯತ ಕಾರ್ಯದರ್ಶಿಯ ಸ್ಥಾನ ಒಬ್ಬನಲ್ಲೇ ಇದ್ದುದರಿಂದ ಎರಡೂ ಹುದ್ದೆಗಳ ಕಾರ್ಯ ಸಮರ್ಪಕವಾಗಿ ಸಿಗುತ್ತಿತ್ತು. ದುರ್ದೈವವಶಾತ್ ಈ ವ್ಯವಸ್ಥೆಯನ್ನು ತೆಗೆದು ಹಾಕಿ ಪ್ರತಿ ಪಂಚಾಯತಿಗೊಬ್ಬ ಕಾರ್ಯದರ್ಶಿಗಳನ್ನು ಸೇರಿಸಿದ್ದರೂ ಪಂಚಾಯತಿ ಕಾರ್ಯದರ್ಶಿ ಹಾಗೂ ಗ್ರಾಮ ಲೆಕ್ಕಾಧಿಕಾರಿಗಳ ಸೇವೆ ಹಾಗೂ ಅವರ ವಾಸ್ತವ್ಯ ಗ್ರಾಮ ಪಂಚಾಯತಿ ಕೇಂದ್ರದಲ್ಲಿ ಸಿಗುತ್ತಲೆ ಇಲ್ಲ. ರಾಜ್ಯದಲ್ಲಿ 5,655 ಗ್ರಾಮ ಪಂಚಾಯತಿಗಳು, 254, ಪುರಸಭೆಗಳು, 214 ಪುರಭೆ ವ ಕಾರ್ಪೋರೇಶನ್‌ಗಳು ಹೀಗೆ 6.123 ಇವೆ. ಗ್ರಾಮ ಲೆಕ್ಕಾಧಿಕಾರಿಗಳು ಸಂಖ್ಯೆ 8,718 ಇವೆ. ಹೀಗಿದ್ದರೂ ಪ್ರತಿ ಗ್ರಾಮ ಪಂಚಾಯತಿಗೆ ಕನಿಷ್ಠ ಒಬ್ಬ ಗ್ರಾಮ ಲೆಕ್ಕಾಧಿಕಾರಿಗಳ ಸಾಜಾ ನಿರ್ಮಿಸಿ ಆ ಸಾಜಾಕ್ಕೆ ಒಬ್ಬ ಗ್ರಾಮ ಲೆಕ್ಕಾಧಿಕಾರಿಯನ್ನು ಇದುವರೆಗೂ ಅನೇಕ ಕಡೆ ನೇಮಿಸದೆ ಹಾಗೂ ಅವರು ವಾರದಲ್ಲಿ ಒಂದು ದಿವಸ ವಾಸ್ತವ್ಯ ಪ್ರತಿ ಗ್ರಾಮಗಳಲ್ಲಿ ಜನತೆಗೆ ದೊರಕದೆ ಇರುವದು ಸರಿಯಲ್ಲ. ಪ್ರತಿ ಪಂಚಾಯತಿ ಕ್ಷೇತ್ರಕ್ಕೆ ಒಂದು ಪತ್ತಿನ ವ್ಯವಸಾಯ ಸೇವಾ ಸಹಕಾರಿ ಸಂಘ, ಒಂದು ಹಾಲು ಉತ್ಪಾದಕರ ಸಹಕಾರ ಸಂಘ, ಒಬ್ಬ ಕೃಷಿ ಸಹಾಯಕ, ಒಬ್ಬ ಲೈನ್‌ಮನ್ ಒಂದು ಅಂಚೆ ಕಛೇರಿ, ಒಬ್ಬ ಆರೋಗ್ಯ ಮೇಲ್ವಿಚಾರಕ, ಒಂದು ಗ್ರಾಮ ರಕ್ಷಕದಳ ಹಾಗೂ ದಳಪತಿ ಇತ್ಯಾದಿ ಇರುವದು ಅವಶ್ಯ. ಆ ದಿಶೆಯಲ್ಲಿ ಪಂಚಾಯತಿ ಪ್ರತಿನಿಧಿಗಳು, ಶಾಸಕರು, ಸಂಸದರು, ಮಂತ್ರಿಗಳು ಹಾಗೂ ಅಧಿಕಾರಿಗಳು ಹೊಣೆಯರಿತು ಗ್ರಾಮ ಲೆಕ್ಕಾಧಿಕಾರಿಗಳ ಹಾಗೂ ಗ್ರಾಮಗಳ ಇತರೆ ಸಂಘ, ಸಂಸ್ಥೆ ಹಾಗೂ ಸೇವಾಧಿಕಾರಿಗಳ ಸೇವೆ ಪ್ರತಿಯೊಂದು ಗ್ರಾಮ ಪಂಚಾಯತಿ ಹಾಗೂ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಹಳ್ಳಿಗಳಿಗೆ ಸಿಗುವಂತೆ ಮಾಡುವ ಅವರ ಆದ್ಯ ಕರ್ತವ್ಯ.

❑

ಸುಲಿಗೆ ಮಾರಕಾಸ್ತ್ರ ಅನ್ಯಾಯ - ಜನತೆಗೆ ಅಪಾಯಕಾರಿ

ಸ್ವಾತಂತ್ರ್ಯಪೂರ್ವ ರಾಜ, ಮಹಾರಾಜ, ಸರದಾರ, ಸುಲ್ತಾನ, ನವಾಬ, ಈಸ್ಟ್ ಇಂಡಿಯಾ ಕಂಪನಿ, ಬ್ರಿಟಿಶ್ ಚಕ್ರವರ್ತಿ ಮೊದಲಾದ ಆಳರಸರಿಂದ ನಮ್ಮ ದೇಶದ ಜನತೆಯ ಸುಲಿಗೆ ವಿವಿಧ ರೀತಿಯಲ್ಲಿ ಆಗಿದೆ. ಸ್ವಾತಂತ್ರ್ಯ ಸಿಕ್ಕ ನಂತರವೂ ವರ್ಷದಿಂದ ವರ್ಷಕ್ಕೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಜನತೆಯಿಂದ ಚುನಾಯಿತರಾದ ಪ್ರಜಾ ಸರಕಾರಗಳಿಂದ ಸುಲಿಗೆ ಸಹ ಹಿಂದಿನವರನ್ನು ಮೀರಿಸಿ ಶರವೇಗದಲ್ಲಿ ಹೆಚ್ಚುತ್ತಲೇ ಇದೆ. ಇದು ಪ್ರಜೆಗಳಿಗೆ ಭಾರಿ ಮಾರಕವಾಗುತ್ತಲಿದೆ. ಈ ರಾಷ್ಟ್ರದ ಜನತೆ (1) ಕಾರ್ಪೋರೇಷನ್ ಟ್ಯಾಕ್ಸ್, (2) ಬಡ್ಡಿ ಟ್ಯಾಕ್ಸ್, (3) ಇತರೆ ಟ್ಯಾಕ್ಸ್, (4) ಆಸ್ತಿ ಟ್ಯಾಕ್ಸ್, (5) ಕಸ್ಟಂ ಟ್ಯಾಕ್ಸ್, (6) ಎಕ್ಸಾಯಿಜ್ ಟ್ಯಾಕ್ಸ್, (7) ಸೇವಾ ಟ್ಯಾಕ್ಸ್, (8) ಸಂಪರ್ಕ ಸೇವಾ ಟ್ಯಾಕ್ಸ್ ಇತ್ಯಾದಿ ಇತರೆ ಎಲ್ಲಾ ಕರಗಳಿಗಾಗಿ ಕೇಂದ್ರ ಸರಕಾರಕ್ಕೆ 95-96ರಲ್ಲಿ 99,950-00 ಕೋಟಿ, 96-97 ರಲ್ಲಿ 1,19,121.12 ಕೋಟಿ ಕರವನ್ನು ಕೊಟ್ಟಿದ್ದು 97-98 ರಲ್ಲಿ 1,37,956.81 ಕೋಟಿ ಕರವನ್ನು ಕೇಂದ್ರ ಸರಕಾರಕ್ಕೆ ತೆತ್ತಲಿದ್ದಾರೆ. ಅಂತೆಯೇ ಕೇಂದ್ರ ಸರಕಾರಕ್ಕೆ 95-96ರಲ್ಲಿ 68,620.82 ಕೋಟಿ, 96-97ರಲ್ಲಿ 79,517.99 ಕೋಟಿ ಮೊತ್ತ ನಾನ್ - ಟ್ಯಾಕ್ಸ್ ಕರವನ್ನು ಕೊಟ್ಟಿದ್ದು, 97-98 ರಲ್ಲಿ 93,118.77 ಕೋಟಿ ನಾನ್ - ಟ್ಯಾಕ್ಸ್ ಕರವನ್ನು ಕೊಡುತ್ತಲಿದ್ದಾರೆ.

ಕರ್ನಾಟಕ ರಾಜ್ಯ ಸರಕಾರಕ್ಕೆ ಕೂಡ ರಾಜ್ಯದ ಜನತೆ (1) ಆದಾಯ ವೆಚ್ಚದ ಕರ, (2) ವ್ಯವಸಾಯ ಉತ್ಪನ್ನ ಕರ, (3) ಆಸ್ತಿ ಕರ (4) ಸ್ಟ್ಯಾಂಪ್ ಕರ. (5) ಅಬಕಾರಿ. (6) ಮಾರಾಟ ಕರ, (7) ವಾಹನಕರ, (8) ಸರಕು ಕರ, (9) ವಿದ್ಯುತ್ ಕರ, (10) ಇತರೆ ಕರ, ಇತ್ಯಾದಿ ಒಟ್ಟು ಕರವನ್ನು 96-97ರಲ್ಲಿ 6767.00 ಕೋಟಿ, 97-98ರಲ್ಲಿ 7963.57 ಕೋಟಿ ಕರವನ್ನು ಕೊಡಲಿದ್ದಾರೆ. ಅಂತೆಯೇ 95-96ರಲ್ಲಿ 1,235.43 ಕೋಟಿ, 96-97ರಲ್ಲಿ 1,308.14 ಕೋಟಿ , ನಾನ್ - ಟ್ಯಾಕ್ಸ್ ಕರವನ್ನು ಕೊಟ್ಟಿದ್ದಾರೆ. ಈ ರೀತಿ ರಾಜ್ಯದ ಜನತೆ ಕೇಂದ್ರ ಸರಕಾರಕ್ಕೆ ಹಾಗೂ ರಾಜ್ಯ ಸರಕಾರಕ್ಕೆ ಪ್ರತಿ ವರ್ಷ ಹೆಚ್ಚೆಚ್ಚು

ಪ್ರಮಾಣದಲ್ಲಿ ಕರ ಕಂದಾಯ ಕೊಡುತ್ತಿದ್ದರೂ ಸರಕಾರಗಳು ಜನತೆಯ ಆರ್ಥಿಕ ಅಭಿವೃದ್ಧಿ ಸುಧಾರಿಸದೆ ಹಾಗೂ ಕೇಂದ್ರ - ರಾಜ್ಯ ಸರಕಾರಗಳು ತಮ್ಮ ಆರ್ಥಿಕ ಸಂಪತ್ತನ್ನು ಸುಧಾರಿಸಿಕೊಳ್ಳದೆ ಸಾಲಗಾರರಾಗಿ ಸಾಲದಲ್ಲಿ ಮುಳುಗಿ ಎದ್ದು ಹೇರಳವಾದ ಬಡ್ಡಿಯನ್ನು ಸಹ ಪ್ರತಿ ವರ್ಷ ತನ್ನ ಸಾಹುಕಾರರಿಗೆ ತೆತ್ತಲಿರುತ್ತದೆ. ಕೇಂದ್ರ ಸರಕಾರವು ಆಂತರಿಕ ಸಾಲ, ಮಾರ್ಕೆಟ್ ಸಾಲ ವಿದೇಶ ಸಾಲ, ಇತ್ಯಾದಿಯಿಂದ ಪಡೆದ ಪಬ್ಲಿಕ್ ಡೆಟ್ ಸಾಲ 95-96ರಲ್ಲಿ 18,095.30 ಕೋಟಿ, 96-97 ರಲ್ಲಿ 2,19,967.75 ಕೋಟಿಯಾಗಿದ್ದು ಈ ಸಾಲ 97-98ರಲ್ಲಿ 2,62,772.66 ಕೋಟಿಗೆ ಏರಲಿದೆ. ಕೇಂದ್ರ ಸರಕಾರದ ಬಡ್ಡಿಗೆ 95-96ರಲ್ಲಿ 50,031-20 ಕೋಟಿ, 96-97ರಲ್ಲಿ 58,500-00 ಕೋಟಿ ಮೊತ್ತವನ್ನು ತೆತ್ತಿದ್ದು 97-98ರಲ್ಲಿ 68,000-00 ಕೋಟಿ ಬಡ್ಡಿಯನ್ನು ತೆತ್ತಲಿದೆ. ಅಂತೆಯೇ ಕರ್ನಾಟಕ ಸರಕಾರದ ಅಂತರಿಕ ಹಾಗೂ ಕೇಂದ್ರ ಸರಕಾರದ ಸಾಲ ಇತ್ಯಾದಿ ಪಬ್ಲಿಕ್ ಡೆಟ್ ಸಾಲ 95-96ರಲ್ಲಿ 1,347.11 ಕೋಟಿ, 96-97 ರಲ್ಲಿ 2,549.43 ಕೋಟಿ ಸಾಲ ಪಡೆದಿದ್ದು 97-98ರಲ್ಲಿ 2,852.03 ಕೋಟಿ ಸಾಲ ಪಡೆಯಲಿದೆ. ರಾಜ್ಯ ಸರಕಾರ ಬಡ್ಡಿ ಬಾಬ್ತು 95-96ರಲ್ಲಿ 1,047.56 ಕೋಟಿ, 96-97 ರಲ್ಲಿ 1,214.35 ಕೋಟಿ ಕೊಡಟ್ಟಿದ್ದು, 97-98 ರಲ್ಲಿ 1,599.20 ಕೋಟಿ ಬಡ್ಡಿಯನ್ನು ಕೊಡಲಿದೆ. ರಾಜ್ಯ ಸರಕಾರದ ಒಟ್ಟಾರೆ, ಕೊತಕ್ಕ ಸಾಲ ಲೆಯಾಬಿಲಿಟಿ 31-3-96ಕ್ಕೆ 12,054.99 ಕೋಟಿ, 31-3-97ಕ್ಕೆ 13,358-49 ಕೋಟಿ ಆಗಿದ್ದು, 31-3-98ಕ್ಕೆ 14,871.00 ಕೋಟಿಗೆ ಏರಲಿದೆ. ಹೀಗೆ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಭಾರಿ ಮೊತ್ತದ ಕರಗಳ ಆದಾಯ ಪಡೆಯುವದರ ಜೊತೆಗೆ ಹೇರಳವಾದ ಸಾಲವನ್ನು ಪಡೆಯುತ್ತ, ಹೇರಳವಾದ ಬಡ್ಡಿಯನ್ನು ಕೊಡುತ್ತ ತಾವೆರಡೂ ಆರ್ಥಿಕ ದಿವಾಳಿ ಅಂಚಿನಲ್ಲಿದ್ದಾರೆ - ಈ ದೇಶದ ರೈತರು, ಉದ್ಯಮಿಗಳು ಹಾಗೂ ಜನಸಾಮಾನ್ಯರು ಸಹಿತ ಹೇರಳವಾದ ಸಾಲ ಮಾಡಲಿಕ್ಕೆ ಹಾಗೂ ಬಡ್ಡಿ ಕೊಡಲಿಕ್ಕೆ ಗುರಿಯಾಗಿ ದಿವಾಳಿ ಅಂಚಿನಲ್ಲಿರುವದಕ್ಕೆ ಕೆಟ್ಟ ಆರ್ಥಿಕ ಪರಿಸ್ಥಿತಿಯನ್ನು ಸರಕಾರಗಳು ತಂದೊಡ್ಡಿದ್ದಾವೆ.

ಕರ್ನಾಟಕ ರಾಜ್ಯದಲ್ಲಿ ಜನರ ಸುಲಿಗೆಗೆ ಕಾರಣವಾಗಿದ್ದ ಅಕ್ಟ್ರಾಯ ರದ್ದುಪಡಿಸಲು ಸಾರ್ವಜನಿಕರಿಂದ, ಹೋಣೆಗಾರರಿಂದ ಬೇಡಿಕೆ ಬಂದಿದ್ದರಿಂದ ದೇವರಾಜ್ ಅರಸರ ಸರಕಾರ ವಿಧಾನ ಸಭೆಯಲ್ಲಿ ಸಾಕಷ್ಟು ಸುದೀರ್ಘ ಚರ್ಚೆಯಾದ ನಂತರ ಆಕ್ಟ್ರಾಯ ರದ್ದು ಮಾಡಿ ಅಕ್ಟ್ರಾಯ್ ಬದಲು ಪರ್ಯಾಯವಾಗಿ ಸ್ಥಳೀಯ ಸಂಸ್ಥೆಗಳಿಗೆ ಆಕ್ಟ್ರಾಯ ಪರಿಹಾರ ಕೊಡುತ್ತ ಹೊಸ ಎಂಟ್ರಿ - ಟ್ಯಾಕ್ಸ್ ಅನುಕೂಲತೆ ಮಾಡಿದ್ದು ಎಲ್ಲರ ಮೆಚ್ಚುಗೆಯನ್ನು ಪಡೆದಿದೆ. ಆ ಪ್ರಕಾರ ಎಂಟ್ರಿ ಟ್ಯಾಕ್ಸ್ ವಸೂಲಾಗುತ್ತಿದೆ ಹಾಗೂ ಪ್ರತಿ ವರ್ಷ ಸ್ಥಳೀಯ ಪ್ರಾಧಿಕಾರಗಳಿಗೆ ಹೆಚ್ಚೆಚ್ಚು ಜಕಾತಿ - ವಾಹನ ತೆರಿಗೆ - ಅಭಿವೃದ್ಧಿ ಅನುದಾನಗಳನ್ನು ರಾಜ್ಯ ಸರಕಾರ ಪುರಸಭೆ, ನಗರ ಸಭೆ ಹಾಗೂ ಮಹಾನಗರ ಪಾಲಿಕೆಗಳಿಗೆ ಕೊಡುತ್ತಲೇ ಬಂದಿದೆ. ರಾಜ್ಯದಲ್ಲಿಯ ಬೆಂಗಳೂರು, ಮೈಸೂರು, ಮಂಗಳೂರು, ಬೆಳಗಾವಿ, ಹುಬ್ಬಳ್ಳಿ, ಧಾರವಾಡ, ಗುಲಬರ್ಗಾ ಈ ಆರು ಮಹಾನಗರ

ಪಾಲಿಕೆಗಳಿಗೆ 94-95, 95-96, 96-97ರಲ್ಲಿ ಜಕಾತಿ ಅನುದಾನ 272.63 ಕೋಟಿ, ವಾಹನ ತೆರಿಗೆ ಅನುದಾನ 5.87 ಕೋಟಿ, ಅಭಿವೃದ್ಧಿ ಅನುದಾನ 5.32 ಕೋಟಿ ಹೀಗೆ ಈ ಮೂರು ವರ್ಷದ ಅವಧಿಯಲ್ಲಿ ಈ ಆರು ಮಹಾನಗರ ಪಾಲಿಕೆಗಳಿಗೆ ಒಟ್ಟು 282.82 ಕೋಟಿ ಅನುದಾನವನ್ನು ರಾಜ್ಯ ಸರಕಾರದ ದಯಪಾಲಿಸಿದೆ. ಅಂತೆಯೇ ರಾಜ್ಯದಲ್ಲಿಯ 81 ಪುರಸಭೆಗಳಿಗೆ ಹಾಗೂ 40 ನಗರ ಸಭೆಗಳಿಗೆ ಪ್ರತಿವರ್ಷ ಹೆಚ್ಚೆಚ್ಚು ಅನುದಾನವನ್ನು ನೀಡುತ್ತಲೇ ಇದ್ದು, 1997-98ರಲ್ಲಿ ಈ 81 ಪುರಸಭೆ ಗಳಿಗೆ 11.66 ಕೋಟಿ, 40 ನಗರ ಸಭೆಗಳಿಗೆ ಪ್ರತಿವರ್ಷ ಹೆಚ್ಚೆಚ್ಚು ಅನುದಾನವನ್ನು ನೀಡುತ್ತಲೇ ಇದ್ದು, 1997-98 ರಲ್ಲಿ ಈ 81 ಪುರಸಭೆಗಳಿಗೆ 11.66 ಕೋಟಿ. 40 ನಗರ ಸಭೆಗಳಿಗೆ 20.38 ಕೋಟಿ ಮೊತ್ತದ ಅನುದಾವನ್ನು ನೀಡಲಿದೆ.

ವಸ್ತುಸ್ಥಿತಿ ಹೀಗಿದ್ದು ರಾಜ್ಯ ಸರಕಾರವು ರಾಜ್ಯದಲ್ಲಿ ಪುನಃ ಆಕ್ಟ್ರಾಯ ಜಾರಿ ಮಾಡಲು ಗಂಭೀರವಾಗಿ ಪರಿಶೀಲನೆ ಮಾಡುತ್ತಿರುವದು ಗಂಡಾಂತರಕಾರಿಯಾಗಿ, ಅನಾನುಕೂಲ ಅವ್ಯವಸ್ಥೆ, ಭ್ರಷ್ಟಾಚಾರ, ಪಕ್ಷಪಾತ, ಸ್ವಜನ ಪಕ್ಷಪಾತ, ಅಧಿಕಾರ ದುರುಪಯೋಗ, ದುರಾಡಳಿತ ಇನ್ನೂ ಹೆಚ್ಚಾಗಲಿಕ್ಕೆ ಅನುಕೂಲ ಹಾಗೂ ಅಹ್ವಾನ ಕೊಟ್ಟಂತಾಗುತ್ತದೆ. ಅಕ್ಟ್ರಾಯ ಜಾರಿಯಲ್ಲಿದ್ದಾಗ ಅನೇಕ ಕಡೆ ಜಕಾತಿ ಕಟ್ಟೆ ಕಾರ್ಕೂನರಿಗೆ ಪಗಾರ ಕೊಡಲಾಗದಷ್ಟು ಸಹ ಉತ್ಪನ್ನ ಕಡಿಮೆಯಾಗುತ್ತಿತ್ತೆಂದು, ಬೇಕಾದವರ ಸರಕು ಅಕ್ಟ್ರಾಯ ಕೊಡದೆ ಪ್ರವೇಶಿಸಲಾಗುತ್ತಿತ್ತೆಂದು ದಿನವಿಡೀ ಸರಕುಗಳು ಸಾಲಾಗಿ ನಿಲ್ಲಬೇಕಾಗುತ್ತಿತ್ತೆಂದು, ಸಂತೆ ಪೇಟೆಗೆ ಸರಕು ತಂದು ಮಾರಾಟ ಮಾಡಿ ಹಣದಿಂದ ಸಂತೆ ಮಾಡಿಕೊಂಡು ಹೋಗುವವರಿಗೆ ಜಕಾತ ಕಟ್ಟೆಯಲ್ಲಿ ಹಣ ಕೊಡಲು ಹಣವಿಲ್ಲದೆ ಪರಾದಾಡುತ್ತಿದ್ದರೆಂದು, ಅನೇಕ ಸರಕುದಾರರು ಮಾಮೂಲಿ ಕೊಟ್ಟು ಹಾಗೆಯೇ ಪ್ರವೇಶ ಮಾಡುತ್ತಿದ್ದರೆಂದು ಸಾಕಷ್ಟು ಸರಕು - ಶುಲ್ಕ ಬರಲಿ ಬಿಡಲಿ, ಕೆಲಸ ವಿರಲಿ ಬಿಡಲಿ ಊರಿಗೆ ಬರುವ ಎಲ್ಲಾ ಮಾರ್ಗಗಳ ಕತ್ರೆ ಕೂಟದಲ್ಲಿ ಒಬ್ಬೊಬ್ಬ ಜಕಾತಿ ಕಟ್ಟೆ ಕಾರ್ಕೂನರನ್ನು ಅನಾವಶ್ಯಕವಾಗಿ ನೇಮಿಸಿ ಅವರೆಲ್ಲರಿಗೂ ಅನಾವಶ್ಯಕ ಪಗಾರ ಕೊಡಬೇಕಾಗುತ್ತದೆಯೆಂದು, ಸರಕಾರಕ್ಕೆ ಜನರು ಸಾಕಷ್ಟು ಹೆಚ್ಚಿನ ಕರ ಕಂದಾಯ ಕೊಡುತ್ತಿರುವಾಗ, ಸರಕಾರ ಸಾಕಷ್ಟು ಅನುದಾನಗಳನ್ನು ಕೊಡುತ್ತಿರುವಾಗ ಜನತೆಯಿಂದ ಈ ಅಕ್ಟ್ರಾಯ ಸುಲಿಗೆ ಏಕೆಂದು ಇತ್ಯಾದಿ ಅನೇಕ ಟೀಕೆಗಳು ಸಾರ್ವಜನಿಕರಿಂದ, ಸರಕು ಸಾಗಾಣಿಕೆದಾರರಿಂದ, ಸಂತೆ ಪೇಟೆಗೆ ಹೋಗುವ ರೈತ ವರ್ತಕರಿಂದ ಛೇಂಬರ್ ಆಫ್ ಕಾಮರ್ಸ್, ವಿವಿಧ ರಾಜಕೀಯ ಪಕ್ಷ, ವಿವಿಧ ಸಾರ್ವಜನಿಕ ಸಂಘ ಸಂಸ್ಥೆಗಳಿಗೆ ಸಾಕಷ್ಟು ಟೀಕೆಗಳೇ ಇರುವಾಗ ಅನಾಗರಿಕವಾದ ಸುಲಿಗೆ ಹಾಗೂ ಶೋಷಣೆಯ ಅಕ್ಟ್ರಾಯ ಪುನಃ ಜಾರಿಗೆ ತರುವದು ಹಾಗೂ ತೊಘಲಕ ನೀತಿಯನ್ನು ಅನುಸರಿಸುವದು ಯಾವ ಸರಕಾರಕ್ಕೂ ಸಲ್ಲದು. ಈ ದಿಶೆಯಲ್ಲಿ ಆಕ್ಟ್ರಾಯ ಮರುಮಾತೆತ್ತುವದನ್ನು ಸರಕಾರ ಬಿಟ್ಟು ಬಿಡುವದು ಒಳ್ಳೆಯದು. ❑

ನೆರವಿಲ್ಲದ ನಗರಾಭಿವೃದ್ಧಿ

ರಾಜ್ಯದಲ್ಲಿ ಜನವಸತಿ ಸಹಿತ ಹಾಗೂ ಜನವಸತಿ ರಹಿತ ಗ್ರಾಮಗಳ ಸಂಖ್ಯೆ - 29,193. ಪುರಸಭೆ, ನಗರ ಸಭೆ, ಪಟ್ಟಣ ನಗರ, ಸಮುದಾಯಗಳ ಸಂಖ್ಯೆ, 468. ನಗರ ಪಟ್ಟಣಗಳು ಗ್ರಾಮಾಭಿವೃದ್ಧಿಗೆ ಪೂರಕವಾಗಿದೆ. ವಿವಿಧ ಕಾರ್ಯ ವ್ಯವಹಾರ ಹಾಗೂ ಅಭಿವೃದ್ಧಿಗಾಗಿ ಗ್ರಾಮಾಂತರ ಪ್ರದೇಶ, ನಗರ ಪ್ರದೇಶವನ್ನು ಅನಿವಾರ್ಯವಾಗಿ ಅವಲಂಬಿಸಲೇಬೇಕಾಗುತ್ತದೆ. ನಗರದ ಜನತೆ ಹಾಗೂ ಗ್ರಾಮಾಂತರ ಜನತೆಯ ಅನುಕೂಲತೆಗಾಗಿ ನಗರಗಳಲ್ಲಿ ರಸ್ತೆ, ಸಂಚಾರ, ವ್ಯಾಪಾರ, ಶಿಕ್ಷಣ, ಮಾರುಕಟ್ಟೆ, ಆಡಳಿತ, ಕುಡಿಯುವ ನೀರು, ನೈರ್ಮಲ್ಯ, ವಸತಿ ಇತ್ಯಾದಿ ಎಲ್ಲಾ ತರಹದ ಅನುಕೂಲತೆ ಹಾಗೂ ಸೌಕರ್ಯಗಳ ಅಗತ್ಯತೆ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆ, ರಾಜ್ಯದ ಬೊಕ್ಕಸಕ್ಕೆ ಗ್ರಾಮಾಂತರ ಹಾಗೂ ನಗರಾಂತರ ಜನತೆ ನಗರಗಳ ಘಟಕಗಳ ಮೂಲಕ ಪ್ರತಿವರ್ಷ ಸರಕಾರಕ್ಕೆ ಹೆಚ್ಚೆಚ್ಚು ವಿವಿಧ ಕರಕಂದಾಯ ಕೊಡುತ್ತಲೇ ಇದ್ದಾರೆ. ಕರ ಹಾಗೂ ಕರೇತರ ಆದಾಯ ಸರಕಾರಕ್ಕೆ 94-95ರಲ್ಲಿ 5,558.82 ಕೋಟಿ, 95-96 ರಲ್ಲಿ 7,110.28 ಕೋಟಿ, 96-97ರಲ್ಲಿ 7,832.62 ಕೋಟಿ ಬಂದಿರುತ್ತದೆ,. ಅಂತೆಯೇ ರಾಜ್ಯದ ಜನತೆ ಕೇಂದ್ರ ಸರಕಾರಕ್ಕೆ ವಿವಿಧ ಕರ ಕಂದಾಯ ಕಸ್ಟಮ್ ಇತ್ಯಾಧಿ ಮೊತ್ತವನ್ನು ಪ್ರತಿವರ್ಷ ಕೊಡುತ್ತಿದ್ದು ಈ ಬಾಬ್ತು ಕೇಂದ್ರ ಸರಕಾರದ ಶುಲ್ಕ ಪಾಲು ಹಾಗೂ ಸಹಾಯಧನ ಸಹಿತ ರಾಜ್ಯ ಸರಕಾರಕ್ಕೆ ಪ್ರತಿವರ್ಷ ಹೆಚ್ಚೆಚ್ಚು ಬರುತ್ತಿದ್ದು 94-95ರಲ್ಲಿ 1409.58 ಕೋಟಿ, 95-96ರಲ್ಲಿ 1433.18 ಕೋಟಿ, 96-97ರಲ್ಲಿ 1789.37 ಕೋಟಿ ಬಂದಿದೆ. ಇನ್ನೂ ಬರುತ್ತಲೇ ಇವೆ. ಬರಬೇಕಾಗಿದ್ದ ಬಜೆಟ್ ಹಣದ ಪೈಕಿ ಕರ ಹಾಗೂ ಕರೇತರ ಆದಾಯವನ್ನು ರಾಜ್ಯ ಸರಕಾರ ವಸೂಲ ಮಾಡದೆ 94-95ರಲ್ಲಿ 795.50 ಕೋಟಿ, 96-97ರಲ್ಲಿ 264.40 ಕೋಟಿ ಮೊತ್ತ ಬಿಡಲಾಗಿದೆ. 95-96ರಲ್ಲಿ 36.79 ಕೋಟಿ ಮೊತ್ತವನ್ನು ಬಜೆಟ್ ಮೀರಿ ಹೆಚ್ಚು ವಸೂಲ ಮಾಡಿದೆ. ಕೇಂದ್ರದಿಂದ ಬರಬೇಕಾಗಿದ್ದ ಶುಲ್ಕ ಪಾಲು ಹಾಗೂ ಸಹಾಯಧನವನ್ನು ಸಹ ಬಜೆಟ್ ಪ್ರಕಾರ ಪಡೆಯದೆ 94-95ರಲ್ಲಿ 314.59 ಕೋಟಿ, 95-96ರಲ್ಲಿ 688.63 ಕೋಟಿ, 96-97 ರಲ್ಲಿ 610.49 ಕೋಟಿ ಪಡೆಯುವಲ್ಲಿ ರಾಜ್ಯ ಸಪಕಾರ ವಿಫಲಗೊಂಡಿದೆ. ಇಷ್ಟೆಲ್ಲ

ಕರಕಂದಾಯ ಇತ್ಯಾದಿ ಶುಲ್ಕವನ್ನು ರಾಜ್ಯದ ಜನತೆ ರಾಜ್ಯ ಹಾಗೂ ಕೇಂದ್ರ ಸರಕಾರಕ್ಕೆ ತೆತ್ತುತ್ತಲಿದ್ದರೂ ರಾಜ್ಯ ಸರಕಾರ ಮತ್ತೆ ಇನ್ನೂ ರಾಜ್ಯದ ಜನತೆಯನ್ನು ಸುಲಿದು ಅವರಿಗೆ ಕಿರುಕುಳ ಕೊಡಲು ರಾಜ್ಯಾದ್ಯಂತ ಅಕ್ರಾಯ ಸುಲಿಗೆ ಮಾಡಲಿಕ್ಕೆ ಹೊರಟಿರುವದು ಪ್ರಜಾ ಸರಕಾರದ ನೀತಿಯಾಗದೆ ಪರಕೀಯ ಸರಕಾರಗಳ ಸುಲಿಗೆ ನೀತಿಯಾಗಿದೆಯೆನ್ನದೆ ಗತ್ಯಂತರವಿಲ್ಲ. ರಾಜ್ಯ ಸರಕಾರದ ಈ ಸುಲಿಗೆ ನೀತಿಯನ್ನು ನೋಡಿದರೆ ರಾಜ್ಯ ಸರಕಾರದ ಆರ್ಥಿಕ ದಿವಾಳಿ ಹಾಗೂ ರಾಜ್ಯ ಸರಕಾರದಲ್ಲಿಯ ಆಡಳಿತಗಾರರ ಆಡಳಿತ ಅರಿವಿನ ದಿವಾಳಿಯಾಗಿದೆಯೆಂದರೆ ಅತಿಶಯೋಕ್ತಿಯೇನಲ್ಲ.

ರಾಜ್ಯ ಸರಕಾರದ ರೆವಿನ್ಯೂ ವೆಚ್ಚದಲ್ಲಿ ನಗರಾಭಿವೃದ್ಧಿ ಗ್ರಾಮಾಭಿವೃದ್ಧಿ ಎರಡೂ ಸೇರಿದ್ದು ಈ ವೆಚ್ಚದಲ್ಲಿ 94-95ರಲ್ಲಿ 683.91 ಕೋಟಿ, 95-96ರಲ್ಲಿ 612.46 ಕೋಟಿ, 96-97 ರಲ್ಲಿ 555.02 ಕೋಟಿ ಹಣವನ್ನು ವೆಚ್ಚಮಾಡಲಿಕ್ಕೆ ಸಾಧ್ಯವಾಗಿಲ್ಲ. ಗ್ರಾಮಾಭಿವೃದ್ಧಿಯಂತೆ ನಗರಾಭಿವೃದ್ಧಿಗೆ ಸಹ ಪ್ರತಿವರ್ಷ ರೆವಿನ್ಯೂ ಬಜೆಟ್ ಹಣವನ್ನು ಸಂಪೂರ್ಣವಾಗಿ ವೆಚ್ಚ ಮಾಡದೆ ನಗರಾಭಿವೃದ್ಧಿಯನ್ನು ಬಹುಮಟ್ಟಿಗೆ ಕುಂಠಿತ ಗೊಳಿಸಲಾಗಿದೆ. ನಗರಾಭಿವೃದ್ಧಿಗೆ ತೆಗೆದಿಟ್ಟ ರೆವಿನ್ಯೂ ಬಜೆಟ್ ಹಣವನ್ನು ಸಂಪೂರ್ಣ ವಾಗಿ ವೆಚ್ಚ ಮಾಡದೆ 95-96ರಲ್ಲಿ 8.18 ಕೋಟಿ, 96-97ರಲ್ಲಿ 108.87 ಕೋಟಿ, 97-98 ರಲ್ಲಿ 25.98 ಕೋಟಿ ಮೊತ್ತವನ್ನು ಉಳಿಸಲಾಗಿದೆ, ನಗರಾಭಿವೃದ್ಧಿಗೆ ರೆವಿನ್ಯೂ ಬಜೆಟ್‌ದಲ್ಲಿ ಪ್ರತಿವರ್ಷ ಕಡಿಮೆ ಹಣವನ್ನು ನಿಗದಿಪಡಿಸಲಾಗುತ್ತಿದೆ. 96-97 ರಲ್ಲಿ 208.30 ಕೋಟಿ, 97-98ರಲ್ಲಿ 167.27 ಕೋಟಿ, 98-99 ರಲ್ಲಿ 149.45 ಕೋಟಿ. ಹೀಗೆ ಪ್ರತಿವರ್ಷ ಕಡಿಮೆ ಹಣ ನಿಗದಿ ಮಾಡಲಾಗುತ್ತಿದೆ. ಇದಾವ ನಗರಾಭಿವೃದ್ಧಿ? ರಾಜ್ಯದ ಒಟ್ಟು ಜನಸಂಖ್ಯೆ 4.50 ಕೋಟಿಯಲ್ಲಿ ನಗರಾಂತರ ಜನಸಂಖ್ಯೆ 1.40 ಕೋಟಿ ಅಂದರೆ ಶೇಕಡಾ 31 ರಷ್ಟು ಇದ್ದು ನಗರದ ಜನತೆಯ ಹಾಗೂ ನಗರಗಳ ಸರ್ವಾಂಗೀಣ ಅಭಿವೃದ್ಧಿ ಸಹ ಇಡೀ ರಾಜ್ಯದ ಹಿತದೃಷ್ಟಿಯಿಂದ ಅತಿ ಅವಶ್ಯ ಹಾಗೂ ಅತಿ ಅಗತ್ಯವೆಂಬುದನ್ನು ಸರಕಾರದಲ್ಲಿಯ ಹೊಣೆಗಾರರು ಅರಿತರೆ ಒಳ್ಳೆಯದು. ಅಕ್ರಾಯ ಬದಲಿಗೆ ಪರ್ಯಾಯವಾಗಿ ಪುರಸಭೆ, ನಗರ ಸಭೆ ಮತ್ತು ಪಟ್ಟಣ ಪಂಚಾಯತಿಗಳಿಗೆ ಪ್ರತಿವರ್ಷ ಅಭಿವೃದ್ಧಿ ಅನುದಾನವನ್ನು ಕೊಡಬೇಕಾದುದು ಸರಕಾರದ ಕರ್ತವ್ಯ. ಈ ಕರ್ತವ್ಯದಲ್ಲಿ ಸಹ ಸರಕಾರಿ ಹೀನಾಮಾನವಾಗಿ ತಪ್ಪುತ್ತಿರುವದು ನಗರ ಪಟ್ಟಣಗಳ ಹಾಗೂ ಅಲ್ಲಿಯ ಪುರಪ್ರಭುಗಳ ದುರ್ದೈವ.

ರಾಜ್ಯದಲ್ಲಿಯ ಅನೇಕ ಪುರಸಭೆ, ನಗರ ಸಭೆ ಹಾಗೂ ಪಟ್ಟಣ ಪಂಚಾಯತಿಗಳಿಗೆ ಅಭಿವೃದ್ಧಿ ಅನುದಾನವನ್ನೇ ಕೊಡುತ್ತಿರುವುದಿಲ್ಲ, ಕೆಲವುಗಳಿಗೆ ಕೊಟ್ಟರೂ ಪಕ್ಷಪಾತ ಮಾಡಿ ಹೆಚ್ಚು ಕಡಿಮೆ ಕೊಡಲಾಗುತ್ತಿದೆ. 1995-96ರಲ್ಲಿ 178 ಪುರ ನಗರ ಪಟ್ಟಣಗಳಿಗೆ 28.98 ಕೋಟಿ, 96-97ರಲ್ಲಿ ಕೇವಲ 21 ಪುರ ನಗರ ಪಟ್ಟಣಗಳಿಗೆ 1.07 ಕೋಟಿ, 97-98 ರಲ್ಲಿ ಸಹ ಕೇವಲ 28 ಪುರ ನಗರ ಪಟ್ಟಣಗಳಿಗೆ 1.64 ಕೋಟಿ ಅಭಿವೃದ್ಧಿ

ಅನುದಾನವನ್ನು ಕೊಟ್ಟು ಈ ಘಟಕಗಳಿಗೆ ಗದಾ ಪ್ರಹಾರ ಮಾಡಲಾಗಿದೆ. ಹೀಗಾದರೆ ನಗರಾಭಿವೃದ್ಧಿ ಹೇಗಾದೀತು? 95-96, 96-97 ಮತ್ತು 97-98ರಲ್ಲಿ ಸತತವಾಗಿ ಸರಕಾರ ಕೊಟ್ಟಷ್ಟು ಅಲ್ಪ ಸ್ವಲ್ಪ ಅಭಿವೃದ್ಧಿ ಅನುದಾನ ಪಡೆದವುಗಳೆಂದರೆ (1) ಹೊಸಪೇಟೆ, (2) ಕನಕಪುರ, (3) ಚಿತ್ರದುರ್ಗ, (4) ಬ್ಯಾಡಗಿ, (5) ಹಾವೇರಿ, (6) ಶಹಾಪುರ, (7) ಆಳಂದ, (8) ಗುರುಮಿಟ್‌ಕಲ್ ಈ ಎಂಟು ನಗರಗಳು ಮಾತ್ರ. ಉಳಿದ ನಗರಗಳು ಮಾಡಿರುವ ಪಾಪವಾದರೂ ಸರಕಾರದ ಕಣ್ಣಲ್ಲಿ ಏನು? 95-96ರಲ್ಲಿ ಮಹಾನಗರಗಳಾದ ಬೆಂಗಳೂರಿಗೆ 3.00 ಕೋಟಿ, ಹುಬ್ಬಳ್ಳಿ - ಧಾರವಾಡಗೆ 1.50 ಕೋಟಿ, ಮೈಸೂರಿಗೆ 1.44 ಕೋಟಿ, ಮಂಗಳೂರಿಗೆ 1.00 ಕೋಟಿ, ಬೆಳಗಾವಿಗೆ 1.00 ಕೋಟಿ, ಗುಲಬಾರ್ಗಕ್ಕೆ 1.00 ಕೋಟಿ ಹೀಗೆ ಅಭಿವೃದ್ಧಿ ಅನುದಾನ ಕೊಟ್ಟಿದ್ದು. 96-97ರಲ್ಲಿ ಕೇವಲ ಗುಲಬರ್ಗಾಕ್ಕೆ ಮಾತ್ರ ಕೇವಲ 10.00 ಲಕ್ಷ ಅಭಿವೃದ್ಧಿ ಅನುದಾನ ಕೊಟ್ಟಿದ್ದು. ಉಳಿದ 5 ಮಹಾನಗರಗಳಿಗೆ 96-97ರಲ್ಲಿ ಹಾಗೂ 97-98ರಲ್ಲಿ ಎಷ್ಟೂ ಅನುದಾನವನ್ನೇ ಕೊಟ್ಟಿಲ್ಲ, ಅಲ್ಲಲ್ಲಿಯ ಪ್ರಜಾ ಪಿತಾಮಹಾರಾಗಲೀ ಶಾಸಕ ಸಂಸದರಾಗಲೀ ಏಕೆ ಬಾಯಿ ಮುಚ್ಚಿಕೊಟ್ಟಿದ್ದಾರೆಂಬುದನ್ನು ಪ್ರಶ್ನಿಸಬೇಕಾದುದು ಹೊಣೆಗಾರ ನಾಗರಿಕರ ಕರ್ತವ್ಯ. ಗ್ರಾಮಾಂತರ ಹಾಗೂ ನಗರಾಂತರ ಜನತೆಯ ಹಾಗೂ ಪುರನಗರ ಪಟ್ಟಣಗಳ ಬಗ್ಗೆ ನಿಷ್ಪಕ್ಷಪಾತವಾಗಿ ವರ್ತಿಸುವದು ಗ್ರಾಮಾಭಿವೃದ್ಧಿ ಹಾಗೂ ನಗರಾಭಿವೃದ್ಧಿ ಸಚಿವರ ಕರ್ತವ್ಯವಾಗಿದ್ದು, ಈ ದಿಸೆಯಲ್ಲಿ ಈ ಸಚಿವರು ಹಾಗೂ ಈ ಇಲಾಖೆಗಳ ಕಾರ್ಯದರ್ಶಿ ಕಮೀಷನರ್ ಐ.ಎ.ಎಸ್. ಅಧಿಕಾರಿಗಳ ಕರ್ತವ್ಯಲೋಪ ಜನ ವಿರೋಧಿ ಕ್ರಮವಾಗಿದ್ದು ಇದು ನಾಚಿಕೆಗೇಡು ಎಂದು ಹೇಳದೆ ಗತ್ಯಂತರವಿಲ್ಲ. ನಗರಾಭಿವೃದ್ಧಿ ಇಲಾಖೆ ಹಾಗೂ ಇನ್ನಿತರ ಅಸಂಖ್ಯಾತ ಇಲಾಖೆಗಳು, ಅಸಂಖ್ಯಾತ ಮಂತ್ರಿಗಳ, ಅಸಂಖ್ಯಾತ ಐ.ಎ.ಎಸ್. ಅಧಿಕಾರಿಗಳು ಇರುವದಾದರೂ ಏತಕ್ಕೆ? ಪುರ ನಗರ ಪಟ್ಟಣಗಳ ಸದಸ್ಯರು, ಅಧ್ಯಕ್ಷ - ಉಪಾಧ್ಯಕ್ಷರು ಹಾಗೂ ಕಾರ್ಯದರ್ಶಿ - ಕಮೀಷನರರು ತಮ್ಮ ತಮ್ಮ ಘಟಕಗಳ ಮನೆ ಕಂದಾಯ ವಿದ್ಯುತ್ ಕಂದಾಯ, ನೀರು ಕಂದಾಯ, ಇತ್ಯಾದಿ ವಿವಿಧ ಆದಾಯ ಸಂಪನ್ಮೂಲಗಳೆಲ್ಲವನ್ನು ಪಡೆಯದೆ ಸರಕಾರದಿಂದ ಬಜೆಟ್ ಪ್ರಕಾರ ಬರಬೇಕಾದ ವಿವಿಧ ಅಭಿವೃದ್ಧಿ ಅನುದಾನ ಪಡೆಯುದೆ ನಗರಾಭಿವೃದ್ಧಿಯನ್ನು ಕುಂಠಿತಗೊಳಿಸಿ ಸಾರ್ವಜನಿಕರಿಗೆ ಅನಾನುಕೂಲ, ತೊಂದರೆ ಕೊಡುವದು ಸರಿಯಲ್ಲ. ಸಾರ್ವಜನಿಕ ಹಣದ ದುಂದುವೆಚ್ಚ, ದುರುಪಯೋಗ ದುರ್ವ್ಯವಹಾರಗಳಿಗೆ ಅನೇಕ ಕಡೆ ಆಸ್ಪದ ಕೊಟ್ಟು ತಪ್ಪಿತಸ್ಥರನ್ನು ಶಿಕ್ಷೆಗೆ ಗುರಿ ಮಾಡದೆ ಆಡಳಿತದ ಅರಿವಿಲ್ಲದೆ ಹಣಕಾಸಿನ ಅರಿವಿಲ್ಲದೆ ದೂರಾಲೋಚನೆಯಿಲ್ಲದೆ ಸರಕಾರ ಹಾಗೂ ಪುರ ನಗರ ಪಟ್ಟಣ ಸಭೆಗಳು ಹಣದ ಬಿಕ್ಕಟ್ಟಿನಲ್ಲಿ ಸಿಕ್ಕು ಹಾಕಿಕೊಳ್ಳುವಂತೆ ಮಾಡಿ ಸಿಬ್ಬಂದಿಗೆ ಸಹ ವೇತನ ಭತ್ಯೆ ಸಕಾಲದಲ್ಲಿ ಕೊಡದಂತೆ ದಿವಾಳಿ ಅಂಚಿನಲ್ಲಿ ನಿಂತು ಸುದೀರ್ಘವಾಗಿ ವಿಧಾನ ಮಂಡಳದಲ್ಲಿ ಚರ್ಚೆಯಾಗಿ ಅನಾಗರಿಕ ಕಾಲದ ಆಕ್ಟ್ರಾಯ್ ಸುಂಕವನ್ನು ದೇವರಾಜ ಅರಸರ ಸರಕಾರ ತೆಗೆದುಹಾಕಿದ್ದರೂ ಈಗ ಮತ್ತೆ ಈ

ಮಾರಕವಾದ ದರೋಡೆ ಖೋರರ ಅಕ್ಟ್ರಾಯ ಬೇಕೆಂದು ಹಾತೊರೆಯುತ್ತಿರುವ ಸರಕಾರದ ಹಾಗೂ ಕೆಲವು ಘಟಕಗಳ ಪ್ರವೃತ್ತಿ ಜನತೆಗೆ ಕಿರುಕುಳ, ಮಾರಕ, ಅನಾನುಕೂಲವಲ್ಲದೆ ಭ್ರಷ್ಟಾಚಾರ, ಪಕ್ಷಪಾತ, ಸ್ವಜನ ಪಕ್ಷಪಾತ, ಅಧಿಕಾರ ದುರುಪಯೋಗ ಹಾಗೂ ದುರಾಳಿತಕ್ಕೆ ಆಹ್ವಾನ ಕೊಟ್ಟಂತಾಗುವದರಲ್ಲಿ ಯಾವುದೇ ಸಂಶಯವಿಲ್ಲ. ಆಕ್ಟ್ರಾಯನ್ನು ಮತ್ತೆ ಜಾರಿಗೆ ತರಬೇಕೆಂಬ ಸರಕಾರದ ಧೋರಣೆ ಹೇಯ ಕೃತ್ಯವೆನ್ನದೆ ಗತ್ಯಂತರವಿಲ್ಲ, ಪುರ ನಗರ ಪಟ್ಟಣಗಳಿಗೆ ದಶ ದಿಕ್ಕುಗಳಿಂದ ಮಾರ್ಗಗಳಿವೆ. ಒಂದೊಂದು ಮಾರ್ಗಕ್ಕೆ ದಿನನಿತ್ಯ ರಜಾದಿನ ಸಹಿತವಾಗಿ ಪ್ರತಿದಿನ ಮೂರು ಪಾಳಿಯ ಜಕಾವೆ ಕಟ್ಟೆ ಕಾರ್ಕೂನರು ಬೇಕಾಗುತ್ತಾರೆ. ಅಂದರೆ ಒಂದೊಂದು ಪುರ ನಗರ ಪಟ್ಟಣಗಳಿಗೆ ಅದೆಷ್ಟು ಸಿಬ್ಬಂದಿ ಬೇಕೆಂಬುದು ಅವರೆಲ್ಲರಿಗೆ ಪ್ರತಿ ತಿಂಗಳು ವೇತನ ಭತ್ಯೆ ಎಷ್ಟು ಆದೀತೆಂಬುದು, ಜಕಾತಿ ಕಟ್ಟೆಯ ಮುಂದೆ ಆದೆಷ್ಟು ಬುಟ್ಟಿ ಚೀಲ ಹೊತ್ತವರು ಅದೆಷ್ಟು ಚಕ್ಕಡಿ, ಟಾಯರ ಗಾಡಿ, ಟ್ರಾಕ್ಟರ, ಲಾರಿಗಳ ಸಮಯ ಹಾಳು ಮಾಡಿಕೊಂಡು ನಿಲ್ಲಬೇಕಾಗುತ್ತದೆಂಬುದನ್ನು ಇತ್ಯಾದಿ ಅದೆಷ್ಟು ಅನಾನುಕೂಲತೆಗಳಾಗಬಹುದೆಂಬುದನ್ನು ಸರಕಾರ ತಿಳಿದು ವರ್ತಿಸಿದರೆ ಒಳ್ಳೆಯದು, ಸರಕಾರಿ ಸಾರ್ವಜನಿಕ ಘಟಕಗಳಲ್ಲಿಯ ಖಜಾನೆ ಹಣ ಬಕಾಸುರ ಬಂಡಿಯಲ್ಲಿಯ ಅನ್ನವಾಗಬಾರದೆಂಬುದನ್ನು ಸರಕಾರ ಅರಿಯಬೇಕು.

❑

ದಿವಾಳಿಯಾಗಿರುವ ಕೆ.ಎಸ್.ಆರ್.ಟಿ.ಸಿ.

ರಾಜ್ಯದಲ್ಲಿಯ ಗ್ರಾಮಾಂತರ ಹಾಗೂ ನಗರಾಂತರ ಸಾರ್ವಜನಿಕ ಪ್ರಯಾಣಿಕರಿಗೆ ಸಂಚಾರ ಮಾಡಲು ಅನುಕೂಲಕರವಾದ, ತೊಂದರೆ ರಹಿತ, ಸಾಕಷ್ಟು ಪ್ರಮಾಣದ ಸಾರಿಗೆ ಸೌಲಭ್ಯವನ್ನು ಒದಗಿಸುವ ಗುರಿ ಹೊಂದಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯನ್ನು ಸಾರಿಗೆ ಅಧಿನಿಯುಮದ ಪ್ರಕಾರ ಸ್ಥಾಪಿಸಲಾಗಿದೆ. ಈ ನಿಗಮದ ಉದ್ದೇಶವನ್ನೇ ಖಾಸಗಿ ವ್ಯಕ್ತಿ ಹಾಗೂ ಖಾಸಗಿ ಸಂಸ್ಥೆಗಳು ರಾಷ್ಟ್ರಾದ್ಯಂತ ಸಾಧಿಸುತ್ತ ಸಾರ್ವಜನಿಕ ಸಂಚಾರಕರಿಗೆ ಉತ್ತಮ ಸಂಚಾರ ಅನುಕೂಲಮಾಡಿಕೊಟ್ಟು ತಮಗೊಂದು ಲಾಭದಾಯಕ ಉದ್ಯಮವನ್ನಾಗಿ ಮಾಡಿಕೊಂಡಿದ್ದಾರೆ ಹಾಗೂ ಜನರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿದ್ದಾರೆ. ಸರಕಾರಕ್ಕೆ ರಸ್ತೆ ಕರ, ವಾಹನ ಕರ, ಆದಾಯ ಕರ ಇತ್ಯಾದಿ ಕರಗಳನ್ನು ಕೊಟ್ಟು ಸರಕಾರದ ಆದಾಯ ಹೆಚ್ಚಿಸಲು ಜನತೆ ಕಾರಣರಾಗಿದ್ದಾರೆ. ರಾಜ್ಯ ರಸ್ತೆ ಸಾರಿಗೆ ನಿಗಮ ಲಾಭದಾಯಕವೂ ಇಲ್ಲ, ಅನುಕೂಲಕರವೂ ಇಲ್ಲ ಹಾಗೂ ತೊಂದರೆ ರಹಿತ ಸಾಕಷ್ಟು ಪ್ರಮಾಣದ ಸಾರಿಗೆ ಸೌಲಭ್ಯವನ್ನು ಒದಗಿಸುವದೂ ಇಲ್ಲವೆಂದು ಅನಿವಾರ್ಯವಾಗಿ ಹೇಳದೆ ಗತ್ಯಂತರವಿಲ್ಲ. ಆಗಾಗ್ಗೆ ಬಸ್ ದರವನ್ನು ಹೆಚ್ಚುತ್ತ ಬಂದಿದ್ದರೂ ನಿಗಮ ಪ್ರತಿವರ್ಷ ಸತತ ನಿವ್ವಳ ನಷ್ಟದಲ್ಲಿಯೇ ಮುಂದುವರೆದಿದೆ. ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ, ಜಿಲ್ಲಾ ಹೆದ್ದಾರಿಗಳಲ್ಲಿ ಮಾತ್ರ ಸಾಕಷ್ಟು ಬಸ್ಸುಗಳನ್ನು ಓಡಿಸುತ್ತಾ ಗ್ರಾಮಾಂತರ ಮಟ್ಟದಲ್ಲಿ ಗ್ರಾಮಗಳಿಂದ ಹೋಬಳಿ ಹಾಗೂ ತಾಲೂಕು ಕೇಂದ್ರಗಳಿಗೆ ತಾಲೂಕ ಕೇಂದ್ರದಿಂದ ಬೇರೆ ಬೇರೆ ತಾಲೂಕು ಕೇಂದ್ರಗಳಿಗೆ, ಹಾಗೂ ಮಾರುಕಟ್ಟೆ ಕೇಂದ್ರಗಳಿಗೆ ಸಾಕಷ್ಟು ಬಸ್ಸುಗಳನ್ನು ಓಡಿಸದೆ ಆಗಾಗ್ಗೆ ಬಸ್ಸುಗಳ ಸಂಚಾರವನ್ನೇ ರದ್ದು ಮಾಡುತ್ತ, ಸಿಕ್ಕಾಪಟ್ಟೆ ತಡವಾಗಿ ಬಿಡುತ್ತ ಗ್ರಾಮಾಂತರ ಸಂಚಾರಿ ಪ್ರಯಾಣಿಕರಿಗೆ ಭಾರೀ ತೊಂದರೆ ಹಾಗೂ ಅನಾನುಕೂಲವನ್ನೇ ಸಗಲಾಗುತ್ತಿದೆ. ಇದ್ದ ಬಿದ್ದ ಬಸ್ಸು ನಿಲ್ದಾಣಗಳ ಹಾಗೂ ಕಟ್ಟಡಗಳ ನಿರ್ವಹಣೆ ಮಾಡದೆ ಅನೇಕ ಕಡೆ ಕ್ಯಾಂಟೀನುಗಳಿಗೆ ಬೀಗಹಾಕಿ ಬಂದ್ ಮಾಡಿ ಕಂಟ್ರಾಕ್ಟ ಕೊಡದೆ ನಿಲ್ದಾಣದಲ್ಲಿ ಬರಹೋಗುವ ಪ್ರಯಾಣಿಕರಿಗೆ ನೀರು ಉಪಹಾರ, ಊಟ ಸಿಗದಂತೆ ಸಹ ಮಾಡಲಾಗಿದೆ. ಬಸ್ಸುಗಳಿಗೆ ಸ್ಟೆಪಿನಿ, ಜಾಕ, ತಾಡಪಲ್, ಪ್ರಥಮ ಚಿಕಿತ್ಸೆ ಪಟ್ಟಿಗೆಗಳಿಲ್ಲದ

ಪರಿಣಾಮವಾಗಿ ಪ್ರಯಾಣಿಕರಿಗೆ ಹೇಳತೀರದ ತೊಂದರೆಯಾಗುತ್ತಲೇ ಇದೆ, ಮೇಸ್ತ್ರೀ, ಚಾಲಕ, ನಿರ್ವಾಹಕರ ಹುದ್ದೆ ಖಾಲಿ ಇರುವ ಅಥವಾ ಆ ಸಿಬ್ಬಂದಿಗೆ ಗೈರುಹಾಜರಿ ಇರುವ ಕಾರಣದಿಂದ ಅದೆಷ್ಟೊ ಬಸ್ ಶೆಡ್ಯೂಲಗಳು ರಾಜ್ಯಾದ್ಯಂತ ಇರುವ 108 ಕ್ಕಿಂತ ಹೆಚ್ಚು ಡಿಪೋಗಳಿಂದ ಹೊರಡುವುದಿಲ್ಲ ಹಾಗೂ ಬರುವುದಿಲ್ಲ.

ಆಗಾಗ್ಗೆ ಬಸ್ ಪ್ರಯಾಣದರ ಏರಿ ಸುತ್ತಲಿದ್ದು ಪ್ರತಿವರ್ಷ ನಿಗಮದ ಸಂಚಾರಿ ಆದಾಯ ಏರುತ್ತಿದ್ದರೂ ಕಾರ್ಯಾಚರಣೆ ವೆಚ್ಚ ಗಗನಕ್ಕೇರುತ್ತಲಿದೆ. 94-95, 95-96, 96-97, ಈ ಮೂರು ವರ್ಷದ ಅವಧಿಯಲ್ಲಿ 2,300.45 ಕೋಟಿ ಸಂಚಾರಿ ಆದಾಯ ಬಂದಿದ್ದು ಕಾರ್ಯಾಚರಣೆ ವೆಚ್ಚ 2,676.20 ಕೋಟಿ ಏರಿದೆ, ಅಂದರೆ ಸಂಚಾರ ಆದಾಯಕ್ಕಿಂತ ಕಾರ್ಯಾಚರಣೆ ವೆಚ್ಚ 375.75 ಕೋಟಿ ಹೆಚ್ಚಾಗಿದೆ. ಈ ನಿಗಮದ ನಿವ್ವಳಹಾನಿ 94-95ರಲ್ಲಿ 69.66 ಕೋಟಿ, 95-96ರಲ್ಲಿ 48.01 ಕೋಟಿ, 96-97ರಲ್ಲಿ 84.05 ಕೋಟಿಗೆ ಪ್ರತಿವರ್ಷ ನಷ್ಟ ಹೊಂದುತ್ತಾ ಬಂದು 31-3-97ಕ್ಕೆ ಕೂಡಿಬಿದ್ದ ಹಾನಿ 578.85 ಕೋಟಿಗೆ ಏರಿದೆ, ರಾಜ್ಯದ 76 ನಿಗಮಗಳಲ್ಲಿ ಅತಿ ಹೆಚ್ಚಿನ ನಷ್ಟದ ಪ್ರಥಮ ರ್‍ಯಾಂಕ್ ಈ ನಿಗಮಕ್ಕಿದೆ. ಈ ಬಗ್ಗೆ ರಾಜ್ಯ ಸರಕಾರ, ಸರಕಾರದಲ್ಲಿಯ ಮಂತ್ರಿಗಳು ಹಾಗೂ ಐ.ಎ.ಎಸ್. ಅಧಿಕಾರಿಗಳು ತಲೆತಗ್ಗಿಸಬೇಕು. ಇವರಿಗೆ ಸಾರ್ವಜನಿಕರು, ಪತ್ರಿಕೆಗಳ ಹಾಗೂ ನಿಗಮದ ನೌಕರ ಸಂಘಗಳ, ಶಾಸಕರ ಹಾಗೊ ಇತರರ ಸೂಕ್ತ ಸಲಹೆ, ಸೂಚನೆ, ರಚನಾತ್ಮಕ ಟೀಕೆಗಳನ್ನು ಹಾಗೂ ಶಾಸಕಾಂಗದ ಸಾರ್ವಜನಿಕ ಉದ್ಯಮಗಳ ಸಮಿತಿ ವರದಿ ಹಾಗೂ ಸಿ.ಎ.ಜಿ. ವರದಿಗಳನ್ನು ಕಣ್ತೆರೆದು ನೋಡುವ ಕರ್ತವ್ಯದ ಅರಿವು ಕೂಡ ಇರದೆ ಇರುವದು ಈ ರಾಜ್ಯ ಹಾಗೂ ರಾಜ್ಯ ಸರಕಾರದ ದುರ್ದೈವ. 1997ರಲ್ಲಿ ರಾಜ್ಯದ ಜನತೆಯ ಹಾಗೂ ಎಲ್ಲಾ ರಾಜಕೀಯ ಪಕ್ಷಗಳ ಪ್ರತಿಭಟನೆಯನ್ನು ಲೆಕ್ಕಿಸದೆ ಪ್ರಯಾಣಿಕರ ದರವನ್ನು ಮತ್ತೆ ಹೆಚ್ಚಿಸಲಾಯಿತು. ಆದರೆ ಆದದ್ದೇನು? ಮತ್ತೆ 1997-98ರಲ್ಲಿ ಈ ನಿಗಮವು ಆದಾಯವನ್ನು ಹೆಚ್ಚಿಸಿಕೊಂಡಿದ್ದರೂ ಆದಾಯ ಗಳಿಕೆ ಮೀರಿ ಹೆಚ್ಚಿನ ಖರ್ಚನ್ನು ಮಾಡಿದೆ. ಈ ನಿಗಮದಲ್ಲಿ 18 ವಿಭಾಗಗಳಿವೆ ಬೆಂಗಳೂರು (ಸಿ), ಬೆಂಗಳೂರು (ಆರ್), ಮಂಗಳೂರು ಈ ಮೂರು ವಿಭಾಗಗಳಲ್ಲಿ ಮಾತ್ರ ಖರ್ಚನ್ನು ಕಳೆದು ಉಳಿದಿರುವ ಗಳಿಕೆ 14.54 ಕೋಟಿ. ಇನ್ನುಳಿದ ಗುಲಬರ್ಗಾ, ಬಿ.ಎಂ.ಟಿ.ಸಿ., ಹಾಸನ, ರಾಯಚೂರ, ಹುಬ್ಬಳ್ಳಿ, ಬೆಳಗಾವಿ, ಬಳ್ಳಾರಿ, ಕೋಲಾರ, ಮೈಸೂರು, ಕರವಾರ, ಬೀರದ್ ಮೊದಲಾದ 15 ವಿಭಾಗದಲ್ಲಿ ಬಂದ ಗಳಿಕೆಗಿಂತ 49.05 ಕೋಟಿ ಹೆಚ್ಚು ಮೊತ್ತ ಖರ್ಚಾಗಿದೆ. ಹೀಗೆ ಒಟ್ಟಿನ ಮೇಲೆ ಎಲ್ಲಾ 18 ವಿಭಾಗಗಳ ಕ್ರೋಢೀಕೃತ ಗಳಿಕೆಗಿಂತ 34.52 ಕೋಟಿ ಹೆಚ್ಚು ಮೊತ್ತ ಖರ್ಚಾಗಿದೆ. ಹೀಗಾಗುತ್ತ ಹೋದರೆ ದಿವಾಳಿಯಾಗಿರುವುದೇ ನಿಗಮದ ಭವಿಷ್ಯವೇನು? ವಾಸ್ತವಿಕ ಸತ್ಯಾಂಶವನ್ನು ತಿಳಿದುಕೊಳ್ಳದೆ, ಕಾರ್ಯಾಚರಣೆಯನ್ನು ಸುಧಾರಿಸದೆ, ಸೋರುವಿಕೆಯನ್ನು ತಡೆಯದೆ, ಸೋರುವಿಕೆಗೆ ಕಾರಣರಾದವರ ಮೇಲೆ ಉಗ್ರ ಕ್ರಮ ತೆಗೆದುಕೊಳ್ಳದೆ, ಬಂದ್ ಆದ ಕ್ಯಾಂಟೀನುಗಳನ್ನು ಪ್ರಾರಂಭಿಸದೆ, ಬಸ್ ನಿಲ್ದಾಣ ಹಾಗೂ ಕಟ್ಟಡಗಳ ನಿರ್ವಹಣೆ

ಮಾಡದೆ, ಪ್ರಯಾಣಿಕ ಅನುಕೂಲತೆಗಳ ಬಗ್ಗೆ ಗಮನ ಕೊಡದೆ, ಜನತೆಗೆ ನಿಜಾಂಶ ತಿಳಿಸದೆ, ವ್ಯತಿರಿಕ್ತವಾಗಿ "ಸಂಸ್ಥೆಯ ಬೊಕ್ಕಸಕ್ಕೆ 30.00 ಕೋಟಿ ಉಳಿತಾಯವಾಗಿದೆ ಸಂಸ್ಥೆ ಲಾಭದತ್ತ ಸಾಗುತ್ತಿದೆ" ಎಂದು ಶ್ಲಾಘನೀಯ ಭಾಷಣವನ್ನು ಅಧಿಕಾರಿಗಳು ಕೊಟ್ಟ ತಾತ್ಕಾಲಿಕ ಅಂಕಿ ಸಂಖ್ಯೆಗಳನ್ನು ಆಧರಿಸಿ ಮಾಡುವದು ಮಂತ್ರಿಗಳಿಗೆ ಭೂಷಣವಲ್ಲ. ಇನ್ನಾದರೂ ವಾಸ್ತವಿಕ ನಿಜಾಂಶ ತಿಳಿದು ಸುಧಾರಣ ಕ್ರಮ ತೆಗೆದುಕೊಳ್ಳುವುದು ಮಂತ್ರಿಗಳಿಗೆ ಹಾಗೂ ಅಧಿಕಾರಿಗಳಿಗೆ ಭೂಷಣ.

ಈ ನಿಗಮವದಲ್ಲಿ ಸರಕಾರದ ಶೇರು ಹಣ 359.60 ಕೋಟಿ, ಇತರರ ಶೇರು ಹಣ 49.10 ಕೋಟಿ ಹೀಗೆ ಒಟ್ಟು ಶೇರು ಹಣ 408.70 ಕೋಟಿ ಬಂಡವಾಳ ಇದೆ. ಈ ಬಂಡವಾಳವೆಲ್ಲವನ್ನು ಕೂಡಿಬಿದ್ದ ಹಾನಿ 578.85 ಕೋಟಿ ನುಂಗಿ ಹಾಕಿದೆ. ಸರಕಾರ ಹಾಗೂ ಇತರರಿಗೆ ಕೊಡಬೇಕಾದ ಸಾಲ ಸುಮಾರು 200.00 ಕೋಟಿ ಇದೆ. ಕೇಂದ್ರ ಹಾಗೂ ರಾಜ್ಯ ಸರಕಾರಗಳಿಗೆ 86-97ರ ಅಂತ್ಯಕ್ಕೆ ಕೂಡಬೇಕಾದ ಬಡ್ಡಿಯ ಬಾಕಿ ಸುಮಾರು 34.72 ಕೋಟಿ ಇದೆ. ರಾಜ್ಯದಲ್ಲಿ ರೈತರಿಗೆ ಗ್ರಾಹಕರಿಗೆ, ಹಸಿರು ಕಾರ್ಡುದಾರರಿಗೆ ಜನತಾ ಧೋತರ ಸೀರೆ ಯೋಜನೆ ಇತ್ಯಾದಿಗಳಿಗೆ ಸಬ್ಸಿಡಿ ಹಣವನ್ನು ಸಾಕಷ್ಟು ಕೊಡುತ್ತಿಲ್ಲ. ಆದರೆ ಹದಗೆಟ್ಟು ದಿವಾಳಿಯಾಗಿರುವ ಈ ಸಂಸ್ಥೆಗೆ 94-95ರಲ್ಲಿ 35.00 ಕೋಟಿ, 95-96ರಲ್ಲಿ 42.00 ಕೋಟಿ, 96-97ರಲ್ಲಿ 98.09 ಕೋಟಿ ಮೊತ್ತದ ಸಬ್ಸಿಡಿಯನ್ನು ಕೊಡಲಾಗಿದೆ. ಹಾಗೂ ಅದನ್ನು ಆದಾಯದಲ್ಲಿ ಹಿಡಿಯಲಾಗಿದೆ. ಈ ಸಬ್ಸಿಡಿಗೆ ಅಭ್ಯಂತರವಿಲ್ಲ. ಆದರೆ ಲಾಭದಲ್ಲೇ ನಡೆಯುಬೇಕಾಗಿರುವ ಈ ಸಂಸ್ಥೆ ದುರಾಡಳಿತದ ಪರಿಣಾಮವಾಗಿ ಪ್ರತಿವರ್ಷ ನಿವ್ವಳ ನಷ್ಟ ಹೊಂದುತ್ತಿರುವ ಪ್ರಯಾಣಿಕರಿಗೆ ತಾರಕವಾಗದಿರುವ ಪರಿಸ್ಥಿತಿಯನ್ನು ಹಾಗೂ ದುಸ್ಥಿತಿಯನ್ನು ಅರಿತುಕೊಳ್ಳದೆ ಯಾವುದೇ ಸುಧಾರಣೆ ಕ್ರಮ ತೆಗೆದುಕೊಳ್ಳಲು ತಪ್ಪುತ್ತಿರುವದು ಸರಿಯಲ್ಲ. ಭಾರತೀಯ ನಾಗರಿಕ ಸೇವೆಯಲ್ಲಿ ಇರದೆ ಭಾರತೀಯ ಆಡಳಿತ ಸೇವೆಯಲ್ಲಿಯ ಐ.ಎ.ಎಸ್. ಅಧಿಕಾರಿಗಳ ಆಡಳಿತ ವ್ಯಾಪ್ತಿಯಲ್ಲಿರುವ ಈ ಸಂಸ್ಥೆ ದಿವಾಳಿಯಾಗಿರುವದನ್ನು ನೋಡಿದರೆ ಈ ಸಂಸ್ಥೆಯನ್ನು ಈ ರಾಜ್ಯದಲ್ಲಿಯ ಯಾವುದಾದರೂ ದೊಡ್ಡ ಖಾಸಗೀ ಸಂಸ್ಥೆಗೆ ವಹಿಸಿಕೊಡುವದು ಸರಿಯೇನೋ ಎಂದೆನಿಸುತ್ತದೆ. ಅವಶ್ಯಕ ಮೇಸ್ತ್ರೀ, ಚಾಲಕ, ನಿರ್ವಾಹಕ ಸಿಬ್ಬಂದಿಯನ್ನು ನೇಮಿಸದೆ ಸಿಕ್ಕಾಬಟ್ಟೆ ಆಡಳಿತ ಸಿಬ್ಬಂದಿ ನೇಮಿಸುವುದಾಗಲೀ, ಹೆಚ್ಚಿಸುವದಾಗಲೀ, ಸೃಷ್ಟಿಸುವದಾಗಲೀ ಸರಿಯಲ್ಲ. ರಾಜ್ಯಾದ್ಯಂತ ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳನ್ನು ಬಿಟ್ಟರೆ ಉಳಿದೆಲ್ಲಾ ಗ್ರಾಮಾಂತರ ರಸ್ತೆಗಳು ನಾದುರಸ್ತೆ ಆಗಿ ನಿರ್ವಹಣೆ ಕಾಣದೆ ಬಸ್ಸುಗಳ ಸಂಚಾರಕ್ಕೆ ಅಯೋಗ್ಯವಾಗಿರುವ ಬಗ್ಗೆ ಹಾಗೂ ಆ ಕಾರಣದ ಪರಿಣಾಮವಾಗಿ ಗ್ರಾಮಾಂತರ ಬಸ್ಸುಗಳ ಸಂಚಾರ ಆಗಾಗ್ಗೆ ತೊಂದರೆ ಯಾಗುತ್ತಿರುವ ಬಗ್ಗೆ ಸಹ ಸರಕಾರ ಗಮನಹರಿಸಿ ಪರಿಸ್ಥಿತಿ ಸುಧಾರಿಸುವದು ಎಲ್ಲರಿಗೂ ಹಿತಕರ. ಈ ಎಲ್ಲ ಹಿನ್ನೆಲೆಯಲ್ಲಿ ದೀರ್ಘವಾಗಿ ಯೋಚಿಸಿ ಸಾರಿಗೆ ಸಂಸ್ಥೆಯ ಕಾರ್ಯಾಚರಣೆಯನ್ನು ಸುಧಾರಿಸುವದು ಹೊಣೆಗಾರ ಸರಕಾರ, ಸರಕಾರದಲ್ಲಿಯ ಮಂತ್ರಿ

ಹಾಗೂ ಐ.ಎ.ಎಸ್. ಅಧಿಕಾರಿಗಳ ಆದ್ಯ ಹಾಗೂ ಅಗತ್ಯ ಕರ್ತವ್ಯವೆಂಬುದನ್ನು ಅವರೆಲ್ಲರೂ ತಿಳಿದುಕೊಂಡರೆ ಒಳ್ಳೆಯದು. ಇಲ್ಲವಾದರೆ ಐ.ಎ.ಎಸ್. ಅಧಿಕಾರಿಗಳಲ್ಲಿಯ ಆಡಳಿತ ಅನುಭವ, ನಾಗರಿಕ ಸೇವೆ, ಕರ್ತವ್ಯ, ದಕ್ಷತೆ ಹಾಗೂ ಪ್ರಾಮಾಣಿಕತೆಯನ್ನೇ ಪ್ರಶ್ನಿಸಬೇಕಾದೀತು. ಯಾವದಾದರೂ ಒಂದು ಡಿಪೋ ಅಥವಾ ಡಿವಿಜನ್ ಯಾವುದೇ ಒಂದು ತಿಂಗಳ ಅಥವಾ ಒಂದು ತ್ರೈಮಾಸಿಕ ಅವಧಿಯಲ್ಲಿ ಲಾಭಗಳಿಸಿದರೆ ಸಂಸ್ಥೆ ಲಾಭದಲ್ಲಿ ನಡೆದಿದೆ ಎಂದು ಹೇಳುವುದು ಅವ್ಯವಹಾರಿಕವಾಗುತ್ತದೆ. ಲಾಭ ಅಥವಾ ನಷ್ಟದ ಬಗ್ಗೆ ಹೇಳುವದು ಇಡೀ ಆರ್ಥಿಕ ವರ್ಷದ ಗಳಿಕೆ ಹಾಗೂ ಖರ್ಚನ್ನು ಲೆಕ್ಕ ಹಾಕಿ ಹೇಳಬೇಕಾದುದು ವ್ಯವಹಾರಿಕವೆಂಬುದನ್ನರಿತು ಈ ಸಂಸ್ಥೆಯವರು ಮಾತಾಡುವದು ಸಾರ್ವಜನಿಕ ಹಿತದೃಷ್ಟಿಯಿಂದ ಒಳ್ಳೆಯದು ಹಾಗೂ ಅಗತ್ಯ. ನಿಗಮದ ಎಲ್ಲಾ ಘಟಕಗಳಿಗೆ ಸಲಹಾ ಸಮಿತಿಗಳನ್ನು ನೇಮಿಸಬೇಕೆಂದು ನಿಯಮವಿದ್ದರೂ ಈ ಸಂಸ್ಥೆ ಸಲಹಾ ಸಮಿತಿಗಳನ್ನು ನೇಮಿಸದೇ ಇರುವದನ್ನು ನೋಡಿದರೆ ಇವರಿಗೆ ತಮ್ಮ ಹುಳುಕು ಯಾರಿಗೂ ಗೊತ್ತಾಗಬಾರದು ಹಾಗು ಸಲಹೆ ಸೂಚನೆ ಮೇಲ್ವಿಚಾರ ಬೇಡೆಂಬ ದುರುದ್ದೇಶವಿದೆ ಎಂದು ಹೇಳಬೇಕಾಗುತ್ತದೆ.

❑

ಅಧಿಕಾರ ವಿಕೇಂದ್ರೀಕರಣ

ಗ್ರಾಮಾಂತರ ಪ್ರದೇಶದಲ್ಲಿ ಒಂದನೇ, ಎರಡನೇ ಹಾಗೂ ಮೂರನೇ ದರ್ಜೆಯ ಗ್ರಾಮ ಪಂಚಾಯತಿಗಳನ್ನು ರಚಿಸಿ ಅವುಗಳನ್ನು ಗ್ರಾಮ ಸ್ವರಾಜ್ಯ ಸಂಸ್ಥೆಗಳನ್ನಾಗಿ ಹಳ್ಳಿಗಳ ಆಡಳಿತ ಹಾಗೂ ಅಭಿವೃದ್ಧಿಯನ್ನು ಸಾಧಿಸುವ ಮಹದುದ್ದೇಶವನ್ನು ಗಾಂಧೀಜಿಯವರ ಇಚ್ಛೆಯಂತೆ ಸ್ವಾತಂತ್ರ್ಯ ಪೂರ್ವದಲ್ಲಿ 1933ನೇ ಇಸ್ವಿಯ ಹಿಂದೆ ಮುಂದೆ ಸುಮಾರಿಗೆ ಮುಂಬಯಿ ಮೊದಲಾದ ಪ್ರಾಂತಗಳಲ್ಲಿ ಬ್ರಿಟಿಷ್ ಸರಕಾರವೇ ಗ್ರಾಮ ಪಂಚಾಯತಿ ಕಾನೂನನ್ನು ಜಾರಿಗೆ ತಂದಿತ್ತು. ಆ ಅಧಿನಿಯಮದ ಪ್ರಕಾರ 1,500 ಜನ ಸಂಖ್ಯೆಯಿರುವ ಗ್ರಾಮ ಅಥವಾ ಗ್ರಾಮಗಳ ಗುಂಪಿಗೆ ಗ್ರಾಮ ಪಂಚಾಯತಿಯನ್ನು ರಚಿಸಿ ಮೊದಲನೆ ದರ್ಜೆ ಪಂಚಾಯತಿಗಳಿಗೆ ಮ್ಯಾಟ್ರಿಕ್ ಆದವರನ್ನು, ಎರಡನೇ ದರ್ಜೆ ಪಂಚಾಯತಿಗೆ ಕನ್ನಡ ಏಳನೇ ವರ್ಗದವರೆಗೆ ಅಭ್ಯಾಸ ಮಾಡಿದವರನ್ನು, ಮೂರನೇ ದರ್ಜೆ ಪಂಚಾಯತಿಗೆ ಪ್ರಾಥಮಿಕ ಶಾಲಾ ಶಿಕ್ಷಣ ಅಥವಾ ಸಹಕಾರಿ ಸಂಘದ ಕಾರ್ಯದರ್ಶಿಗಳನ್ನು ಕಾರ್ಯದರ್ಶಿಗಳನ್ನಾಗಿ ನೇಮಿಸಲಾಗುತ್ತಿತ್ತು. ಪ್ರತಿ ತಿಂಗಳಿಗೊಮ್ಮೆ ಪಂಚಾಯತಿ ಮೀಟಿಂಗ್ ಕರೆದು ಜಮಾ-ಖರ್ಚು ಲೆಕ್ಕಪತ್ರ ಅಭಿವೃದ್ಧಿ ವಿಚಾರಗಳ ಬಗ್ಗೆ ಚರ್ಚಿಸಲಾಗುತ್ತ ಮಾರ್ಚ್ ತಿಂಗಳು ಹಾಗೂ ಸಪ್ಟೆಂಬರ್ ತಿಂಗಳು ಮುಗಿದ ಎರಡು ತಿಂಗಳ ಒಳಗಾಗಿ ಗ್ರಾಮ ಸಭೆಗಳನ್ನು ಕರೆದು ಅನೇಕ ವಿಷಯಗಳನ್ನು ಚರ್ಚಿಸಿ ತೀರ್ಮಾನಗಳನ್ನು ತೆಗೆದುಕೊಳ್ಳಲಾಗುತ್ತಿತ್ತು. ತಪ್ಪಿತಸ್ಥ ಕಾರ್ಯದರ್ಶಿಗಳನ್ನು ದಂಡ ಹಾಕಿ, ಸಸ್ಪೆಂಡ್ ಮಾಡಿ, ಡಿಸ್‌ಮಿಸ್ ಮಾಡುವ ಅಧಿಕಾರವೂ ಗ್ರಾಮ ಪಂಚಾಯತಿಗಿತ್ತು. ಅಧಿಕಾರ ವಿಕೇಂದ್ರೀಕರಣ ಹಾಗೂ ಗ್ರಾಮಾಭಿವೃದ್ಧಿಯ ಮೂಲ ಗುರಿ ಬ್ರಿಟಿಷ್ ಸರಕಾರ ಹಾಗೂ ನಂತರದ ಸರಕಾರಗಳದಾಗಿತ್ತು. ನ್ಯಾಯ ಪಂಚಾಯತಿ ಕಮಿಟಿಗಳ ರಚನೆ ಕೂಡ ಆ ಅಧಿನಿಯಮಗಳಲ್ಲಿ ಸೇರಿತ್ತು. ಬ್ರಿಟಿಷ್ ಸರಕಾರದಲ್ಲಿ ರಚಿಸಿ ಮುಂದುವರೆದ ಗ್ರಾಮ ಪಂಚಾಯತಿಗಳೆಲ್ಲ ಹಣಕಾಸು ಆದಾಯದ ಇತಿಮಿತಿಯಲ್ಲಿ ಅತ್ಯುತ್ತಮ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತ ಮುಂದೆ ಸಾಗಿ ಬಂದವು.

ಕರ್ನಾಟಕ ರಾಜ್ಯೋದಯವಾದ ನಂತರ 1959ನೇ ಏಕರೂಪ ಗ್ರಾಮ ಪಂಚಾಯತಿ ಅಧಿನಿಯಮವನ್ನು ಕರ್ನಾಟಕ ರಾಜ್ಯದಲ್ಲಿ ಜಾರಿಯಲ್ಲಿ ತಂದು 1952ರ ಮೈಸೂರ ಕಾಯ್ದೆ, 1933ರ ಮುಂಬಯಿ ಕಾಯ್ದೆ, 1950ರ ಮದ್ರಾಸ್ ಕಾಯ್ದೆ, 1956ರ ಕೂರ್ಗ್ ಕಾಯ್ದೆ, 1923ರ ಮುಂಬಯಿ ಕಾಯ್ದೆ, 1920ರ, ಮದ್ರಾಸ್ ಕಾಯ್ದೆ, ಇತ್ಯಾದಿ ಪಂಚಾಯತ್ ಕಾಯ್ದೆಗಳನ್ನು ರದ್ದುಪಡಿಸಲಾಯಿತು. 1959ರ ಅಧಿನಿಯಮದ ಪ್ರಕಾರ ಕನಿಷ್ಠ 1,500 ರಿಂದ ಗರಿಷ್ಠ 10,000 ಸಾವಿರ ಜನಸಂಖ್ಯೆಯ ಒಳಗಿನ ಗ್ರಾಮ ಅಥವಾ ಗ್ರಾಮಗಳ ಗುಂಪಿಗೆ ಒಂದು ಗ್ರಾಮ ಪಂಚಾಯತಿಯನ್ನು ಹಾಗೂ ವಿಶೇಷ ಸಂದರ್ಭಗಳಲ್ಲಿ 1,500 ಜನಸಂಖ್ಯೆಗಿಂತ ಕಡಿಮೆ ಇರುವ ಗ್ರಾಮ ಅಥವಾ ಗ್ರಾಮಗಳ ಗುಂಪಿಗೆ ಸಹ ಗ್ರಾಮ ಪಂಚಾಯತಿಯನ್ನು ರಚಿಸಿ ಹಿಂದಿನಿಂದ ನಡೆದು ಬಂದ ಅಧಿಕಾರ ವಿಕೇಂದ್ರೀಕರಣವನ್ನು ಹಾಗೂ ಗ್ರಾಮಗಳ ರೈತ ಜನರ ಕೈಯಲ್ಲಿ ಗ್ರಾಮರಾಜ್ಯ ಕಟ್ಟುವ ಜವಾಬ್ದಾರಿಯನ್ನು ವಹಿಸಿಕೊಟ್ಟು ಮುಂದುವರೆಸಲಾಯಿತು. ಈ ಕಾಯ್ದೆ ಪ್ರಕಾರ ಗ್ರಾಮ ಮಟ್ಟದಲ್ಲಿ ಗ್ರಾಮ ಪಂಚಾಯಿತಿ ತಾಲ್ಲೂಕ ಮಟ್ಟದಲ್ಲಿ ತಾಲ್ಲೂಕ ಡೆವಲಪ್‌ಮೆಂಟ್ ಬೋರ್ಡ್, ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಡೆವಲಪ್‌ಮೆಂಟ್ ಕೌನ್ಸಿಲ್ ಹೀಗೆ ಮೂರು ಹಂತದ ಪಂಚಾಯತಿ ರಾಜ್ಯ ಸಂಸ್ಥೆಗಳನ್ನು ಸ್ಥಾಪಿಸಿ ಈ ಮೂರು ಹಂತದ ಪಂಚಾಯತ ರಾಜ್ಯ ಸಂಸ್ಥೆಗಳು ಹಾಗೂ ಈ ಸಂಸ್ಥೆಯ ಸದಸ್ಯ ಪದಾಧಿಕಾರಿಗಳು ಅತ್ಯುತ್ತಮ ಕಾರ್ಯ ಮಾಡಲು ಆಗಿನ ಸರಕಾರ ಸದವಕಾಶವನ್ನು ಮಾಡಿಕೊಡಲಾಯಿತು. ಈ ಸಂಸ್ಥೆಗಳಲ್ಲಿ ಪದಾಧಿಕಾರಿಗಳಾಗಿ ಜನಾನುರಾಗಿಗಳಾಗಿ ಸಾರ್ವಜನಿಕ ಸೇವೆ ಮಾಡಿದವರು ಶಾಸಕರಾಗಿ, ಸಂಸದರಾಗಿ, ಮಂತ್ರಿಗಳಾಗಿ, ಸಂಸದೀಯ ಪದಾಧಿಕಾರಿಗಳಾಗಿ, ರಾಜ್ಯಪಾಲರಾಗಿ, ಉಪರಾಷ್ಟ್ರಪತಿ, ಹಂಗಾಮಿ ರಾಷ್ಟ್ರಪತಿಗಳ ಸ್ಥಾನಗಳಿಗೇರಿದ ಮಹನೀಯರನೇಕರು ಇದ್ದಾರೆ, 1959ರ ಕಾಯ್ದೆ ಪ್ರಕಾರ ಸಹ ಪ್ರತಿತಿಂಗಳು ಕಡ್ಡಾಯವಾಗಿ ಸಭೆಗಳನ್ನು ಕರೆದು ಜಮಾ - ಖರ್ಚು ಲೆಕ್ಕ ಪತ್ರ ವಿವಿಧ ಅಭಿವೃದ್ಧಿ ವಿಚಾರಗಳ ಬಗ್ಗೆ ಚರ್ಚೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುವ ಸತ್‌ಸಂಪ್ರದಾಯ ನಡೆದು ಬಂತು. ಉತ್ತಮ ಆಡಳಿತ ಹಾಗೂ ಅಭಿವೃದ್ಧಿಯ ಬಗ್ಗೆ ಸಾಕಷ್ಟು ಅಧಿಕಾರ ಹಾಗೂ ಕರ್ತವ್ಯ ಕಮಿಟಿ ಹಾಗೂ ಕಮಿಟಿ ಅಧ್ಯಕ್ಷ, ಉಪಾಧ್ಯಕ್ಷ ಹಾಗೂ ಸದಸ್ಯರಿಗಿತ್ತು, ಕೆಲವು ಪಂಚಾಯತಿಗಳಿಗೆ ಸ್ವತಂತ್ರ ಕಾರ್ಯದರ್ಶಿಗಳನ್ನು ನೇಮಿಸುವ ಹಾಗೂ ತೆಗೆದು ಹಾಕುವ ಅಧಿಕಾರ ಪಂಚಾಯತಿಗಿತ್ತು. ಸಣ್ಣ ಸಣ್ಣ ಪಂಚಾಯತಿಗಳಿಗೆ ಗ್ರಾಮ ಲೆಕ್ಕಾಧಿಕಾರಿ ವ ತಲಾಠಿಗಳು ಪದನಿಮಿತ್ತ ಕಾರ್ಯದರ್ಶಿಗಳಾಗಿ ಉತ್ತಮ ಕೆಲಸ ಮಾಡಿದ ಉದಾಹರಣೆ ಕೂಡ ಸಾಕಷ್ಟು ಇವೆ. ಈ ಕಾಯ್ದೆ ಅತ್ಯುತ್ತಮ ಕಾರ್ಯನಿರ್ವಹಿಸುವಲ್ಲಿ ಆಗಿನ ಪಂಚಾಯತರಾಜ್ ಅಭಿವೃದ್ಧಿ ಹಾಗೂ ಸಹಕಾರ ಮಂತ್ರಿಗಳಾದ ಶ್ರೀರಾಮಕೃಷ್ಣ ಹೆಗಡೆ, ಶ್ರೀ ಕೊಂಡಜ್ಜಿ ಬಸಪ್ಪರವರ ಕೊಡುಗೆ ಅಪಾರವಾಗಿತ್ತು.

25 ವರ್ಷಗಳ ಸುದೀರ್ಘ ಅವಧಿಯಲ್ಲಿ ರಾಜ್ಯಾದ್ಯಂತ ಉತ್ತಮ ಆಡಳಿತ ಹಾಗೂ ಅಭಿವೃದ್ಧಿ ಸಾಧಿಸಿ ಬೆಳ್ಳಿ, ಹಬ್ಬವನ್ನಾಚರಿಸಬೇಕಾಗಿದ್ದ ಅಧಿಕಾರವಿಕೇಂದ್ರಿಕರಣದತ್ತ

ಜಾರಿಗೊಂಡ 1959ರ ಈ ಅಧಿನಿಯಮ ದುರ್ದೈದಿಂದ 1983ರ ಮಂಡಳ ಪಂಚಾಯತಿ ಕಾಯ್ದೆ ಹಳ್ಳಿಗಳ ಕೈಯಲ್ಲಿದ್ದ ಅಧಿಕಾರವನ್ನು ಕಸಿದು 10,000 ಜನಸಂಖ್ಯೆಯಿಂದ 15,000 ಜನಸಂಖ್ಯೆ ವರೆಗಿನ ಗುಂಪು ಗ್ರಾಮ ಹಾಗೂ ದೊಡ್ಡ ಗ್ರಾಮಗಳಿಗೆ ಒಂದೊಂದು ಮಂಡಲ ಪಂಚಾಯತಿಗಳನ್ನು ರಚಿಸಿ ಗ್ರಾಮ ಪಂಚಾಯತಿಗಳ ಸಮಾಧಿಯನ್ನೇ ಮಾಡಿತು. ಈ ವಸೂದೆಗೆ ಈ ಲೇಖಕರನ್ನೊಳಗೊಂಡು ಅನೇಕ ಶಾಸಕರು ಪಕ್ಷದ ಶಾಸಕಾಂಗ ಕಾರ್ಯಾಂಗ ಸಭೆಯಲ್ಲಿ ವಿರೋಧ ವ್ಯಕ್ತ, ಪಡಿಸಿದರೂ ಕೇವಲ ನಗರ ಸಭೆಯ ಅಧ್ಯಕ್ಷರಾಗಿ ಪಂಚಾಯತ್ ರಾಜ್ಯ ಪದ್ಧತಿಯ ಗಾಳಿ ಗಂಧದ ಗೊತ್ತಿಲ್ಲದ - ಆಗಿನ ಪಂಚಾಯತ್ ರಾಜ್ ಮಂತ್ರಿ ಆ ಮಸೂದೆಯನ್ನು ಪಾಸುಮಾಡದಿದ್ದರೆ ರಾಜಿನಾಮೆಯನ್ನು ಕೊಡುವ ಬೆದರಿಕೆಯನ್ನು ಹಾಕಿದ್ದರಿಂದ ಆಗಿನ ಮುಖ್ಯಮಂತ್ರಿ ಇಚ್ಛೆಯ ಪ್ರಕಾರ ಆ ಗ್ರಾಮ ಪಂಚಾಯತಿ ವಿರೋಧಿ ಕಾಯ್ದೆಗೆ ಅನಿವಾರ್ಯವಾಗಿ ಮನಸ್ಸಿಲ್ಲದೆ ಮಂಜೂರಿ ಕೊಡಬೇಕಾಯಿತು. ಈ 1983 ಕಾಯ್ದೆ 1985ರಲ್ಲಿ ರಾಜ್ಯಪಾಲರ ಅನುಮತಿ ಪಡೆದು ಜಾರಿಯಲ್ಲಿ ಬಂದ ಮೇಲೆ ಹಳ್ಳಿಗಳಲ್ಲಿ ಅಸಂಖ್ಯಾತ ಕೊಳವೆ ಭಾವಿಗಳನ್ನು ಕೊರೆಯುವದೊಂದನ್ನು ಬಿಟ್ಟರೆ ಮಂಡಲ ಪಂಚಾಯತಿಗಳಲ್ಲಿ ಅವ್ಯವಹಾರ, ಅಕ್ರಮ, ಸಿಕ್ಕಾಪಟ್ಟೆ ಖರ್ಚು ಅಭಿವೃದ್ಧಿ ಕುಂಠಿತ, ದುರಾಡಳಿತವೇ ಹೆಚ್ಚಾಗಿ ಬಹುತೇಕ ಕಾರ್ಯದರ್ಶಿ ಗಳು ಮಂಡಲ ಕೇಂದ್ರಗಳಲ್ಲಿರದೆ ಹಣದ ದುರುಪಯೋಗ, ಅವ್ಯವಹಾರಗಳನ್ನು ಮಾಡಿದ, ಗ್ರಾಮಸಭೆಗಳನ್ನು ಸರಿಯಾಗಿ ಕರೆಯದ, ಗ್ರಾಮದ ಜನತೆಗೆ ನಿಜವಾದ ಉಪಯೋಗ ಸಿಗದ ಉದಾಹರಣೆ ಸಾಕಷ್ಟು ಜೀವಂತ ಇವೆ.

ಸಂವಿಧಾನಬದ್ಧವಾಗಿ ದೇಶಾದ್ಯಂತ ಮೂರು ಹಂತದ ಪಂಚಾಯತ ರಾಜ್ಯ ಪದ್ಧತಿಯನ್ನು ಜಾರಿ ತರುವ ಹಿನ್ನೆಲೆಯಲ್ಲಿ ಕನಿಷ್ಠ 2,500 ಜನಸಂಖ್ಯೆಯಿಂದ ರಾಜ್ಯದಲ್ಲಿ 1993 ರಿಂದ ಗ್ರಾಮ, ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ಚುನಾಯಿತ ಸದಸ್ಯರಿಂದೊಡಗೂಡಿದ ಅಧಿಕಾರ ವಿಕೇಂದ್ರೀಕರಣದತ್ತ ಗುರಿ ಹೊಂದಿದ ಈ ಕಾಯ್ದೆ ಜಾರಿಯಲ್ಲಿದ್ದು ಈ ಮೂರೂ ಹಂತದ ಘಟಕಗಳಿಗೆ ಹೆಚ್ಚಿನ ಹಣ ಕೊಡುವದಾಗಲೀ, ಕೊಟ್ಟ ಹಣದ ಸಂಪೂರ್ಣ ವೆಚ್ಚವಾಗಲೀ, ಗ್ರಾಮ ಸಭೆಗಳನ್ನು ಕರೆಯುವಲ್ಲಿಯಾಗಲೀ, ಸರಕಾರ ವಿಫಲವಾಗಿದ್ದು ಈ ಮೂರು ಹಂತದ ಘಟಕಗಳಿಂದ ಆಡಳಿತ ಅಭಿವೃದ್ಧಿ ಸಾಧಿಸುವಲ್ಲಿ ವಿಫಲವಾಗಿ ಸಾಕಷ್ಟು ಅಕ್ರಮ ಅವ್ಯವಹಾರಗಳು ನಡೆಯುತ್ತಿದ್ದು ಅವುಗಳನ್ನು ತಡೆಗಟ್ಟಲು ಸರಕಾರಕ್ಕೆ ಸಾಧ್ಯವಾಗದೆ ಮತ್ತೆ ಮಂಡಲ ಪಂಚಾಯತಿಗಳತ್ತ ಹೊರಟಿರುವದು ಮತ್ತೆ "ದೌಲತಾಬಾದದಿಂದ ದಿಲ್ಲಿಗೆ" ಹೊರಟಂತಾಗಿದೆ. ಈಗಿನ ಎಲ್ಲಾ 5,623 ಗ್ರಾಮ ಪಂಚಾಯತಿಗೊಬ್ಬ ಕಾರ್ಯದರ್ಶಿ ಇದ್ದಾನೆ, ಪ್ರತಿ ಗ್ರಾಮ ಪಂಚಾಯತಿಗೊಬ್ಬ ಕೃಷಿ ಸಹಾಯಕನಿದ್ದಾನೆ. 80,428 ಚುನಾಯಿತ ಕಾವಲುಗಾರ ಸದಸ್ಯರಿದ್ದಾರೆ. ಕಾರ್ಯದರ್ಶಿಗಳು ಹಾಗೂ ಕೃಷಿ ಸಹಾಯಕರು ಗ್ರಾಮ ಪಂಚಾಯತ ಕೇಂದ್ರದಲ್ಲಿರುವುದೇ ಇಲ್ಲ, ಗ್ರಾಮ ಸಭೆಗಳನ್ನು ತಪ್ಪದೇ ಕರೆದು ನಾಗರಿಕರಿಗೆ ನಿಜವಾದ ಆಡಳಿತ ಅಭಿವೃದ್ಧಿ ಚಿತ್ರವನ್ನೇ ಕೊಡುವುದಿಲ್ಲ. ಅಕ್ರಮ ಅವ್ಯವಹಾರಗಳನ್ನು ಅನೇಕ

ಛೇರಮನ್ ಸದಸ್ಯರು ಹಾಗೂ ಸಾರ್ವಜನಿಕರು ಸರಕಾರಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ಕೊಟ್ಟರೂ ಯಾವುದೇ ತಪ್ಪಿತಸ್ಥರ ಮೇಲೆ ಕ್ರಮವೇ ಇಲ್ಲ. ಈ ಮೂರು ಹಂತದ ಘಟಕಗಳಲ್ಲಿ ಹದಗೆಟ್ಟ ಆಡಳಿತ ಹಾಗೂ ಅಕ್ರಮ ಅವ್ಯವಹಾರವನ್ನು ತಡೆಗಟ್ಟುವ ಬದಲು "ಹುಣ್ಣಾದ ಬೆರಳುಗಳನ್ನು ಗುಣಪಡಿಸುವ ಬದಲು ಕೈಯನ್ನೇ ಕಡಿಯಲು ಹೊರಟಂತೆ ಗ್ರಾಮ ಪಂಚಾಯತಿಗಳಿಗೆ ಬಂದಿರುವ ರೋಗ ನಿವಾರಣೆ ಮಾಡದೆ ಅವುಗಳನ್ನು ಸಮಾಧಿ ಮಾಡಿ ಮತ್ತೆ ಮಂಡಲ ಪಂಚಾಯತಿ ರಚಿಸಲು ಹೊರಟಿರುವದು ವಿವೇಕರಹಿತ ಹಾಗೂ ಸಂವಿಧಾನ ವಿರೋಧಿ ಕ್ರಮವಾಗಿದೆ." ಈ ದಿಶೆಯಲ್ಲಿ ರಾಜ್ಯದ ಜನತೆಯ ಹಾಗೂ ಹೊಣೆಗಾರರ ಚಿಂತನೆ ಯೋಚನೆ ಅಗತ್ಯ.

❑

ಗ್ರಾಮಗಳಲ್ಲಿ ಶಾಂತಿ ಸುವ್ಯವಸ್ಥೆ

ಭಾರತ ದೇಶ ಅಸಂಖ್ಯಾತ ಗ್ರಾಮಗಳಿಂದ ಕೂಡಿರುವ ಮಹಾನ್ ರಾಷ್ಟ್ರ. ಪುರಾತನ ಕಾಲದಿಂದ ಕೊಲೆ, ಸುಲಿಗೆ ಹಾವಳಿ, ದಬ್ಬಾಳಿಕೆಗಳನ್ನೇ ಕಸಬುಗಳನ್ನಾಗಿ ಅನೇಕ ಪಾಳೇಗಾರ ಸುಲ್ತಾನ ಸಾಮ್ರಾಟರು ಮಾಡಿಕೊಂಡು ಸಹಸ್ರಾರು ಅಸಂಖ್ಯಾತರು ಈ ದೇಶವನ್ನಾಳುತ್ತ ಬಂದು ಜನಜೀವನೇ ಬೇಜಾರುಗೊಂಡ ವಿಷಮ ಪರಿಸ್ಥಿತಿಯಲ್ಲಿ ಈಸ್ಟ್ ಇಂಡಿಯಾ ಕಂಪನಿ ಬ್ರಿಟಿಷ್‌ರು ಈ ದೇಶದಲ್ಲಿ ಪ್ರವೇಶ ಮಾಡಿ ಅನೇಕ ಪಾಳೇಯ ಗಾರರನ್ನು ಸದೆಬಡೆದು ದೇಶದಲ್ಲಿ ಅನೇಕ ಪ್ರಾಂತಗಳನ್ನು ರಚಿಸಿ ಅನೇಕ ಸಂಸ್ಥಾವಿಕರನ್ನು ಹದ್ದುಬಸ್ತಿನಲ್ಲಿಟ್ಟು ಕೇಂದ್ರ ಸರಕಾರ ಹಾಗೂ ರಾಜ್ಯ ಸರಕಾರಗಳು ಅನೇಕ ಅಧಿನಿಯಮ ಗಳನ್ನು ರಚಿಸಿ ಆ ಅಧಿನಿಯಮಗಳ ಚೌಕಟ್ಟಿನಲ್ಲಿ ದೇಶಾದ್ಯಂತ ಆಡಳಿತ ಅಭಿವೃದ್ಧಿ ಮಾಡಲು ಶಾಂತಿ ಸುವ್ಯವಸ್ಥೆ ಸ್ಥಾಪಿಸಲು ಬ್ರಿಟಿಷರು ಮುಂದಾದರೂ ಅವರು ರಚಿಸಿದ ಅನೇಕ ಅಧಿನಿಯಮಗಳು ಆಗಾಗ್ಗೆ ಸ್ವಾತಂತ್ರ್ಯ ನಂತರದ ಸರಕಾರಗಳಿಂದ ತಿದ್ದು ಪಡಿಯಾಗಿ ಅಥವಾ ಬದಲಾಗಿ ಇಂದಿಗೂ ಮುಂದುವರೆದಿದೆ. ಬ್ರಿಟಿಷರ ಪೂರ್ವದಲ್ಲಿ ಗ್ರಾಮಗಳ ದೊರೆಗಳೇ ಆಗಿದ್ದ ವಿವಿಧ ಗೌಡ, ಪಟೇಲ, ತಲ್ವಾರರಕೆನ್ನೆ ಹದ್ದು ಬಸ್ತಿನಲ್ಲಿಟ್ಟು ಅವರಿಗಾಗಿಯೇ ಅರಕ್ಷಕ ಅಧಿನಿಯಮ ಪೊಲೀಸ್ ಆಲೆಕ್ಟ್‌ಗಳನ್ನು ರಾಜ್ಯ ಹಾಗೂ ಸಂಸ್ಥಾನಗಳಲ್ಲಿ ಜಾರಿಗೆ ತಂದು ಹಳ್ಳಿಗಳಲ್ಲಿ ಶಾಂತಿ ಸುವ್ಯವಸ್ಥೆ ನಿರ್ಮಾಣವಾಗುವಂತೆ ಕ್ರಮ ತೆಗೆದುಕೊಂಡರು. ಈ ದಿಶೆಯಲ್ಲಿ ಬ್ರಿಟಿಷರ ಕೊಡುಗೆ ಅಪಾರವಾದುದು. ಈ ದೇಶದ ಅನೇಕ ರಾಜ್ಯಗಳಲ್ಲಿರುವಂತೆ ಕರ್ನಾಟಕ ರಾಜ್ಯದಲ್ಲಿ ಕೂಡ ಗ್ರಾಮಗಳಲ್ಲಿ ಶಾಂತಿ ಸುವ್ಯವಸ್ಥೆಗಳ ಸಲುವಾಗಿಯೇ ಇದ್ದ 1816 ಹಾಗೂ 1821ರ ಮದ್ರಾಸ್ ಕಾಯ್ದೆ, ಕೇಂದ್ರದ 1861ರ ಕಾಯ್ದೆ ಏಕರೂಪ 1867ರ ಮುಂಬಯಿ ಕಾಯ್ದೆ, 1908ರ ಮೈಸೂರು ಕಾಯ್ದೆ ಇತ್ಯಾದಿ ಇನ್ನೂ ಅನೇಕ ಕಾಯ್ದೆಗಳನ್ನು ರದ್ದು ಮಾಡಿ 1964ರ ಏಕರೂಪ ಕರ್ನಾಟಕ ಪೊಲೀಸ್ ಅಧಿನಿಯುನವನ್ನು ರಚಿಸಿ ಅದನ್ನು ರಾಜ್ಯಾದ್ಯಂತ ಜಾರಿ ಮಾಡಲಾಗಿದೆ. ಈ ಅಧಿನಿಯಮ ಆದರ್ಶವಾಗಿದ್ದು ಹಳ್ಳಿಯಲ್ಲಿ ಸುವ್ಯವಸ್ಥಿತ ಹಾಗೂ ಸುರಳೀತ ಆಡಳಿತ ಜಾರಿ ಮಾಡಲು ಉದ್ದೇಶಿಸಿದ್ದು ಈ ಕಾಯ್ದೆಯ ನಿಷ್ಕ್ರಿಯ ಜಾರಿಯ ದುಷ್ಪರಿಣಾಮವಾಗಿ ಹಳ್ಳಿಯ ಜನಜೀವನ ಅಸ್ತವ್ಯಸ್ತವಾಗಿದೆ. ಹಳ್ಳಿಗಳಲ್ಲಿಯ

ಜನಜೀವನವನ್ನು ಹದಗೆಡಿಸಬಾರದೆಂಬುದನ್ನು ಸರಕಾರದಲ್ಲಿಯ ಕರ್ನಾಟಕ ಪೊಲೀಸ್ ಅಧಿನಿಯಮವನ್ನು ಸಂಪೂರ್ಣ ಜಾರಿಕೊಡುವದು ಸಾರ್ವಜನಿಕ ಹಿತದೃಷ್ಟಿಯಿಂದ ಒಳ್ಳೆಯದು.

ಕರ್ನಾಟಕ ಪೊಲೀಸ್ ಅಧಿನಿಯಮ 1963 ಇದಕ್ಕೆ ಪೂರಕವಾಗಿ ಗ್ರಾಮ ಜೀವನವನ್ನು ಹಸನಗೊಳಿಸಲು ಸುರಳೀಕೃತಗೊಳಿಸಲು, ಶಾಂತಿ ಸ್ಥಾಪಿಸಲು, ಸುವ್ಯವಸ್ಥೆ ಸ್ಥಾಪಿಸಲು, ಅಪರಾಧಗಳನ್ನು ತಡೆಗಟ್ಟಲು, ನೆಮ್ಮದಿಗೊಳಿಸಲು, ಅರಾಜಕತೆ, ತಪ್ಪಿಸಲು ಮತ್ತೊಂದು ಆದರ್ಶ ಅಧಿನಿಯಮ ಕರ್ನಾಟಕ ಗ್ರಾಮ ರಕ್ಷಕದಳ ಅಧಿನಿಯಮ 1964 ಇದನ್ನು ಆಗಿನ ಸರಕಾರ ರಚಿಸಿ ಅದನ್ನು ಕೂಡ ರಾಜ್ಯಾದ್ಯಂತ ಜಾರಿಕೊಟ್ಟಿದೆ. ಈ ಕಾನೂನು ಬಹುಮಟ್ಟಿಗೆ ಕಾಗದದ ಕುದುರೆಯಾಗಿದೆಯೇ ಹೊರತು ಪ್ರತ್ಯಕ್ಷವಾಗಿ ಪರಿಣಾಮಕಾರಿಯಾಗಿ ಅನುಷ್ಠಾನವಾಗದೆ ಉಳಿದು ಗ್ರಾಮಾಂತರ ಜನಜೀವನ ಹದಗೆಡಲಿಕ್ಕೆ ಹೆದ್ದಾರಿಯಾಗಿದೆ. ಈ ಕಾಯ್ದೆಯ ಮೂಲ ಉದ್ದೇಶ ಕರ್ನಾಟಕ ರಾಜ್ಯದ ಹಳ್ಳಿಗಳಲ್ಲಿ ಶಾಂತಿ ಹಾಗೂ ಸುವ್ಯವಸ್ಥೆ (ಪೀಸ್ ಆಂಡ್ ಆರ್ಡರ್)ಯನ್ನು ಪೋಷಣೆ ಮಾಡಲು ಗ್ರಾಮ ರಕ್ಷಕದಳಗಳನ್ನು ರಚಿಸುವದಾಗಿದೆ. ಈ ಒಂದು ಅತ್ಯುತ್ತಮ ಮಾದರೀಯ ಕಾಯಿದೆ 1-11-1965 ರಿಂದ ರಾಜ್ಯಾದ್ಯಂತ ಜಾರಿಗೆ ಬಂದು ಮೂರು ದಶಕಗಳನ್ನು ದಾಟಿ ಅನೇಕ ಸರಕಾರಗಳು ಬಂದು ಹೋಗಿ ಈಗಿನ ಸರಕಾರದ ಅವಧಿ ಮುಗಿಯಲಿಕ್ಕೆ ಬಂದಿದ್ದರೂ ಈ ಕಾಯ್ದೆಯನ್ನು ಪರಿಪೂರ್ಣವಾಗಿ ಜಾರಿಗೆ ಕೊಡಲು ಅನೇಕ ಶಾಸಕರು, ಹೊಣೆಗಾರ ನಾಗರಿಕರು ಸರಕಾರಕ್ಕೆ ಕೋರಿದ್ದರೂ ಆ ಕೋರಿಕೆ ಅರಣ್ಯರೋಧನವಾಗಿ ಗ್ರಾಮಗಳ ಜನಜೀವನವನ್ನು ತಾರಕಗೊಳಿಸುವ ಬದಲು ಮಾರಗೊಳಿಸುವಲ್ಲಿ ಸರಕಾರ ಮುಂದಾಗಿದೆಯೆಂದು ಅನಿವಾರ್ಯವಾಗಿ ಹೇಳಬೇಕಾಗಿದೆ. ಗ್ರಾಮಗಳಲ್ಲಿ ಅವ್ಯಾಹತವಾಗಿ, ನಿರಾತಂಕವಾಗಿ, ಜನಜೀವನಕ್ಕೆ ನೆಮ್ಮದಿ ತರದೆ ಮಾರಕವಾಗಿರುವ ಬೀದಿಕಾಳಗ, ಅಕ್ರಮಕೂಟ್ಟ ದೊಂಬಿ, ಕಳವು, ಕೊಲೆ, ಸುಲಿಗೆ, ಕಿಡಿಗೇಡಿತನ, ಕೊಳ್ಳಿ ಇಕ್ಕುವದು, ಗಾಯಗೊಳಿಸುವುದು, ದರೋಡೆ, ಅಪಹರಣ, ಅನಾಚಾರ, ಅತ್ಯಾಚಾರ, ಬೆಳೆನಾಶ, ಹಾವಳಿ ಅಕ್ರಮ ಪ್ರವೇಶ, ಅತಿಕ್ರಮಣ, ಗುರುತರ ಅಪರಾಧ, ಹಲ್ಲೆ, ಗುಂಪು ಘರ್ಷಣೆ, ಕುಡುಕರ ಹಾವಳಿ, ಇತ್ಯಾದಿ ಇನ್ನೂ ಅನೇಕ ಅಪರಾಧಗಳನ್ನು ತಡೆಗಟ್ಟಲು ಹಾಗೂ ಜನರನ್ನು ಹಾಗೂ ಆಸ್ತಿಯನ್ನು ರಕ್ಷಿಸಲು ಕಳವಿನ ಮಾಲನ್ನು ಖರೀದಿಸದಿರಲು, ಅಪರಾಧಿಗಳನ್ನು ಪತ್ತೆ ಹಚ್ಚಲು, ಗ್ರಾಮ ರಕ್ಷಣೆ ಮಾಡಲು, ಅಪರಾಧಗಳನ್ನು ತಡೆಗಟ್ಟಲು, ಗ್ರಾಮಗಳಲ್ಲಿ ಗಸ್ತುತಿರುಗಲು, ನಿಸರ್ಗದತ್ತ ಸಾವುಗಳನ್ನು ವರದಿ ಮಾಡಲ, ವರದಕ್ಷಿಣೆ ಪೀಡೆ ತಪ್ಪಿಸಲು, ಆತ್ಮಹತ್ಯೆ ತಪ್ಪಿಸಲು, ಮುಂಜಾಗ್ರತೆ ತೆಗೆದುಕೊಳ್ಳಲು, ಪೊಲೀಸ ಅಧಿಕಾರಿಗಳಿಗೆ ನೆರವಾಗಲು ರಾಜ್ಯಾದ್ಯಂತ ಪ್ರತಿಯೊಂದು ಗ್ರಾಮದಲ್ಲಿ ಗ್ರಾಮ ರಕ್ಷಕದಳಗಳನ್ನು ರಚಿಸಿ, ಆ ಗ್ರಾಮ ರಕ್ಷಕದಳಗಳಿಗೆ ಒಬ್ಬ ದಳಪತಿಗಳನ್ನು ನೇಮಿಸಿ ಗ್ರಾಮ ರಕ್ಷಣೆ, ಗ್ರಾಮಗಳ ಜನ ರಕ್ಷಣೆ, ಆಸ್ತಿ ರಕ್ಷಣೆ, ಸಾರ್ವಜನಿಕ ಸಂರಕ್ಷಣೆಯನ್ನು ಮಾಡಬೇಕೆಂಬ ಮಹಾ ಉದ್ದೇಶವೇ ಈ ಅಧಿನಿಯಮದ ಗುರಿ. ಈ

ಗುರಿಯನ್ನು ಸಂಪೂರ್ಣವಾಗಿ ಸಾಧಿಸಲಾಗಿದೆಯೇ? ಇಲ್ಲ. ಏಕೆ? ಅವರವರ ಇಲಾಖೆಗಳ ಯಾವತ್ತೂ ಎಲ್ಲಾ ಕಾಯ್ದೆಗಳನ್ನು ಓದಿ ತಿಳಿದುಕೊಂಡು ಓದಲಿಕ್ಕೆ ಆಗದಿದ್ದರೆ ಅಧಿಕಾರಿಗಳ ಮುಖಾಂತರ ತಿಳಿದುಕೊಂಡು ತಮ್ಮ ಜವಾಬ್ದಾರಿ ಅರಿತು ನಡೆಯುವದು ಒಳ್ಳೆಯದು. ಹೆಸರಿಗೆ ಮಾತ್ರ ಮಂತ್ರಿಯಾಗಿ ಪರಿಸ್ಥಿತಿ ಹದಗೆಡಿಸುವದು ಯಾರಿಗೂ ಭೂಷಣವಲ್ಲ.

ರಾಜ್ಯದಲ್ಲಿ ಜನವಸತಿ ಇರುವ ಗ್ರಾಮಗಳ ಸಂಖ್ಯೆ 27,066, ಜನವಸತಿ ಇಲ್ಲದ ಗ್ರಾಮಗಳ ಸಂಖ್ಯೆ 2,127, ಪಟ್ಟಣ ನಗರ ಸಮುದಾಯಗಳ ಸಂಖ್ಯೆ 254, ಪುರಸಭೆ ಪಾಲಿಕೆಗಳ ಸಂಖ್ಯೆ 214, ಉಪಗ್ರಾಮಗಳ ಸಂಖ್ಯೆ 2,929. ಇದು ಸರಕಾರಿ ಅಧೀಕೃತ ಸಂಖ್ಯೆ. 10-11-1998ರ ವರೆಗೆ ಮೊದಲಿನ 20 ಹಾಗೂ ಈಗಿನ 27 ಜಿಲ್ಲೆಗಳಲ್ಲಿ ಒಟ್ಟು 15,142 ದಳಪತಿಗಳನ್ನು ಮಾತ್ರವೇ ನೇಮಿಸಿದ್ದು ಅಪೂರ್ಣ ಹಾಗೂ ಅಲಕ್ಷಿತವಾಗಿದೆ. ನೇಮಕವಾದ ಎಲ್ಲಾ ದಳಪತಿಗಳಿಗೂ ಗೌರವಧನ ಕೊಡಬೇಕೆಂಬುದು ಕಾನೂನಿನ ಕಡ್ಡಾಯ. ಈ ಧನವನ್ನು ಸರಕಾರ ಏಕೆ ಕೊಡುತ್ತಾ ಇಲ್ಲಾ? ಹುಚ್ಚು ಹೊಳೆಯಂತೆ ಹಣದ ದುಂದುವೆಚ್ಚ ಮಾಡುತ್ತಿರುವಾಗ ಗ್ರಾಮದ ರಕ್ಷಣಾ ಜವಾಬ್ದಾರಿ ಹೊತ್ತಿರುವ ಈ ದಳಪತಿಗಳ ಬಗ್ಗೆ ಸರಕಾರದ ನಿಷ್ಕಾಳಜಿ ಏಕೆ? ಗುಲಬರ್ಗಾ ಜಿಲ್ಲೆಯ ಹಳ್ಳಿಗಳ ಸಂಖ್ಯೆ 1,295 ಅಲ್ಲಿ ನೇಮಕವಾದ ದಳಪತಿಗಳ ಸಂಖ್ಯೆ 1,365 ಮಂಗಳೂರ ಜಿಲ್ಲೆಯ ಹಳ್ಳಿಗಳ ಸಂಖ್ಯೆ 615, ಮಂಗಳೂರ ಉಡುಪಿ ಸೇರಿ ನೇಮಕವಾದ ದಳಪತಿಗಳ ಸಂಖ್ಯೆ 719 ಬಳ್ಳಾರಿ ಜಿಲ್ಲೆ ಹಳ್ಳಿಗಳ ಸಂಖ್ಯೆ 591. ದಳಪತಿಗಳ ಸಂಖ್ಯೆ 714, ಇಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ದಳಪತಿಗಳನ್ನು ನೇಮಿಸಿರುವದು ಸಾರ್ವಜನಿಕ ಹಿತದೃಷ್ಟಿಯಿಂದ ಒಳ್ಳೆಯದು. ಆದರೆ ಬೇರೆ ಬೇರೆ ಜಿಲ್ಲೆಗಳಲ್ಲಿ ಕನಿಷ್ಠ ಹಳ್ಳಿಗೊಬ್ಬ ದಳಪತಿಗಳನ್ನೆ ನೇಮಿಸಬಾರದು? ಕೋಲಾರ ಜಿಲ್ಲೆ ಹಳ್ಳಿಗಳ ಸಂಖ್ಯೆ 2,889, ದಳಪತಿಗಳ ಸಂಖ್ಯೆ ಜಿಲ್ಲೆಯಲ್ಲಿ 647. ಕೆ.ಜಿ.ಎಫ್.ದಲ್ಲಿ 202, ಕೊಡಗು ಜಿಲ್ಲೆಯ ಹಳ್ಳಿಗಳ ಸಂಖ್ಯೆ 291, ದಳಪತಿಗಳ ಸಂಖ್ಯೆ 127. ಧಾರವಾಡ, ಹಾವೇರಿ, ಗದಗ ಜಿಲ್ಲೆಗಳಲ್ಲಿ ಹಳ್ಳಿಗಳ ಸಂಖ್ಯೆ 1,344, ದಳಪತಿಗಳ ಸಂಖ್ಯೆ 352. ತುಮಕೂರು ಜಿಲ್ಲೆ ಹಳ್ಳಿಗಳ ಸಂಖ್ಯೆ 2,537, ದಳಪತಿ ಸಂಖ್ಯೆ 928. ಮಂಡ್ಯ ಜಿಲ್ಲೆಯ ಹಳ್ಳಿಗಳ ಸಂಖ್ಯೆ 1,365, ದಳಪತಿಗಳ ಸಂಖ್ಯೆ 411. ಇನ್ನುಳಿದ ಜಿಲ್ಲೆಗಳಲ್ಲಿ ಶೇಕಡಾ 50 ರಿಂದ ಅಪೂರ್ಣವಾಗಿ ದಳಪತಿಗಳನ್ನು ನೇಮಿಸಲಾಗಿದೆ. ಮೈಸೂರು ನಗರದಲ್ಲಿ 16, ಕೆ.ಜಿ.ಎಫ್., ನಗದಲ್ಲಿ 202 ಹೀಗೆ ನಗರಗಳಲ್ಲಿ ದಳಪತಿಗಳನ್ನು ನೇಮಿಸಿರುವಾಗ ಅಂತೆಯೇ ಎಲ್ಲಾ ನಗರಗಳಲ್ಲಿ ಹಾಗೂ ಗ್ರಾಮಗಳಲ್ಲಿ ದಳಪತಿಗಳನ್ನು ನೇಮಿಸಬಾರದು?

ಸರಕಾರಿ ಹೇಳಿಕೆಯ ಪ್ರಕಾರ ದಳಪತಿಗಳು ಅವರವರ ಹಳ್ಳಿಯಲ್ಲಿ ಆಗುವ ಅಪರಾಧ, ಅಪರಾಧಗಳ ಬಗ್ಗೆ, ಕಾನೂನು ಸುವ್ಯವಸ್ಥೆಯ ಬಗ್ಗೆ ಪೊಲೀಸರಿಗೆ ನೆರವಾಗುತ್ತಾರೆ. ಇವರು ಪೊಲೀಸ್ ಮತ್ತು ಪ್ರಜೆಗಳ ಮಧ್ಯೆ ಸಂಬಂಧವಿಟ್ಟು

ಕೊಂಡಿರುತ್ತಾರೆ. ಹಳ್ಳಿಯ ಅಪರಾಧಗಳ ಬಗ್ಗೆ ಬಹಳ ಉಪಯುಕ್ತ ಮಾಹಿತಿಯನ್ನು ಒದಗಿಸಿಕೊಡುತ್ತಾರೆ. ಕೆಲವು ಹಳ್ಳಿಗಳಲ್ಲಿ ದಳಪತಿ ಮತ್ತು ಗ್ರಾಮ ರಕ್ಷಣಾದಳಗಳ ಸದಸ್ಯರು (ವಿ.ಡಿ.ಪಿ.)ಗಳು ರಾತ್ರಿ ಗಸ್ತಿಗೆ ನೆರವಾಗುತ್ತಾರೆ. ದಳಪತಿಗಳು ಗೌರವಾರ್ಥ ಕಾರ್ಯ ನಿರ್ವಹಿಸುತ್ತಿದ್ದರೂ ರಾಜ್ಯಾದ್ಯಂತ ಎಲ್ಲಾ ಕಡೆ ಗ್ರಾಮ ರಕ್ಷಕದಳಗಳನ್ನು ಹಾಗೂ ದಳಪತಿಗಳನ್ನು ಇನ್ನೂ ನೇಮಿಸದೆ ಇರುವದು ಹಾಗೂ ನೇಮಕವಾದ ದಳಪತಿಗಳಿಗೆ ಕಡ್ಡಾಯವಾಗಿ ಕಾನೂನು ಪ್ರಕಾರ ಕೊಡಲೇಬೇಕಾದ ಗೌರವಧನ ಕೊಡದೇ ಇರುವದು ಸಾರ್ವಜನಿಕ ಶಾಂತಿ ಸುವ್ಯವಸ್ಥೆ ನಿರ್ವಹಣೆ ದೃಷ್ಟಿಯಿಂದ ಸಾಧುವಾದುದಲ್ಲ. ಈ ಎಲ್ಲಾ ಹಿನ್ನೆಲೆಯಲ್ಲಿ ಸರಕಾರ ತನ್ನ ನಿಷ್ಕ್ರಿಯತೆಯ ಹಾಗೂ ಜವಾಬ್ದಾರಿಯ ಅರಿವನ್ನು ಅರಿತು ಗ್ರಾಮಾಂತರ ಸುಭದ್ರ ಹಾಗೂ ಸಮರ್ಥ ಆಡಳಿತ ಹಿತದೃಷ್ಟಿಯಿಂದ ದಳ ಹಾಗೂ ದಳಪತಿಗಳನ್ನು ನೇಮಿಸಿ ಗ್ರಾಮಾಂತರ ಜನಜೀವನ ಕಲುಷಿತಗೊಳ್ಳದಂತೆ ಹಸನ ಗೊಳಿಸುವದು ಗೃಹ ಇಲಾಖೆಯ ಆದ್ಯ ಅಗತ್ಯ ಕರ್ತವ್ಯ.

❑

ದುರ್ಬಲ ಪ್ರಜಾ ಶಾಹಿಯ ದೌರ್ಬಲ್ಯ ಮತ್ತು ಆರ್ಥಿಕ ದುರಂತ

ರಾಜ್ಯದಲ್ಲಿ ನಿರಂತರ ಹಣದ ಕೊರತೆಯ ಪರಿಣಾಮವಾಗಿ ಆಯವ್ಯಯ ಪತ್ರದಲ್ಲಿ ನಿಗದಿಪಡಿಸಿದ ಪ್ರಕಾರ ವೇತನ ಭತ್ಯೆಯೇತರ ಕಾರ್ಯಕ್ರಮಗಳಿಗೆ 94-95ರಲ್ಲಿ 2,085.11 ಕೋಟಿ, 95-96ರಲ್ಲಿ 2,946.90 ಕೋಟಿ, 96-97ರಲ್ಲಿ 2,082.07 ಕೋಟಿ ಮೊತ್ತವನ್ನು ವೆಚ್ಚಮಾಡಲಿಕ್ಕೆ ಸರಕಾರಕ್ಕೆ ಸಾಧ್ಯವಾಗಿಲ್ಲ. ಸಿ.ಎ.ಟಿ. ವರದಿ ಪ್ರಕಾರ 91-92 ರಿಂದ 96-97ರ ವರೆಗಿನ ಆರು ವರ್ಷಗಳ ಅವಧಿಯಲ್ಲಿ ಬಜೆಟ್ ಮೊತ್ತದಲ್ಲಿ 10,824.42 ಕೋಟಿ ಮೊತ್ತವನ್ನು ವೆಚ್ಚ ಮಾಡಲೇ ಇಲ್ಲ. ನಿಗದಿತ ಹಣ ವೆಚ್ಚ ಮಾಡದೆ ರಾಜ್ಯದ ವಿವಿಧ ಅಭಿವೃದ್ಧಿ ಕಾರ್ಯಗಳನ್ನು ಕುಂಠಿತಗೊಳಿಸಿರುವುದು ಹಾಗೆಯೇ ಮುಂದುವರೆಯುತ್ತಿರುವುದು ಸಂಬಂಧಿಸಿದ ನೌಕರಶಾಹಿಯ ಕರ್ತವ್ಯಚ್ಯುತಿಯಲ್ಲವೇ? ಇಂಥಹ ಪ್ರಮಾದಗಳನ್ನು ಪ್ರತಿವರ್ಷ ಮುಂದವರಿಸಿಕೊಂಡು ಬಂದಿರುವ ಮಾರಕ ಹಾಗೂ ಜನವಿರೋಧಿ ಸಂಪ್ರದಾಯಕ್ಕೆ ಸಂಬಂಧಿಸಿದ ಮಂತ್ರಿಗಳ ಕರ್ತವ್ಯಚ್ಯುತಿ - ವೈಖರಿಯಲ್ಲವೇ? ಜನಸಾಮಾನ್ಯರ ಸರ್ವಾಂಗೀಣ ಅಭಿವೃದ್ಧಿಗೆ ಮೂಲ ಅವಶ್ಯವಾಗಿರುವ ಭಾರೀ ಮತ್ತು ಮಧ್ಯಮ ನೀರಾವರಿ, ವಸತಿ, ಸಣ್ಣ ಕೈಗಾರಿಕೆ, ಹಿಂದುಳಿದ ವರ್ಗಗಳ ಕಲ್ಯಾಣ, ಸಹಕಾರ, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಗ್ರಾಮೀಣಾಭಿವೃದ್ಧಿ, ಪರಿಶಿಷ್ಠ ಜಾತಿ, ಪರಿಶಿಷ್ಟ ಪಂಗಡ ಹಿಂದುಳಿದ ವರ್ಗಗಳ ಕಲ್ಯಾಣ, ಗ್ರಾಮಾಂತರ ನೀರು ಪೂರೈಕೆ ಇತ್ಯಾದಿ ಕಾರ್ಯಕ್ರಮಗಳಿಗೆ 93-94 ರಿಂದ 96-97ರ ನಾಲ್ಕು ವರ್ಷಗಳ ಅವಧಿಯಲ್ಲಿ ನಿಗದಿತ ಮೊತ್ತದಲ್ಲಿ 5,068.39 ಕೋಟಿಯನ್ನು ವೆಚ್ಚ ಮಾಡದೆ ಜನತೆಯನ್ನು ವಂಚಿಸಲಾಗಿದೆ. ಹೀಗೆ ಪ್ರತಿವರ್ಷ ರಾಜ್ಯದ ನೌಕರಶಾಹಿ ಪ್ರಜಾಶಾಹಿಯನ್ನು ವಂಚಿತರನ್ನಾಗಿ ಮಾಡಿ ಅವರ ಅಭಿವೃದ್ಧಿ ಕುಂಠಿಸುತ್ತಾ ಮಂತ್ರಿ ಮಹೋದಯ ಪ್ರಜಾಶಾಹಿಯನ್ನು ಸವಾರಿ ಮಾಡುತ್ತಾ ಮಾತೆತ್ತಿದರೆ ಅವಮಾನಗೊಳಿಸುತ್ತಾ ಪ್ರತಿಕೃತಿಗಳನ್ನು ಸುಡುತ್ತಾ ದೌರ್ಜನ್ಯಗೊಳಿಸುತ್ತಾ ಹೆದರಿಸಿ, ಬೆದರಿಸಿ ಆರ್ಥಿಕವಾಗಿ ಸಬಲವಾಗಿರುವ ನೌಕರಶಾಹಿ ಆರ್ಥಿಕವಾಗಿ ದುರ್ಬಲರಾಗಿರುವ ಜನತೆಯ ಸಂಕಷ್ಟಗಳನ್ನು ಗಣನೆಗೆ ತೆಗೆದುಕೊಳ್ಳದೆ ತಮ್ಮ ಬೇಡಿಕೆಗಳನ್ನೆಲ್ಲಾ ಅವು

ಸಮಂಜಸವಾಗಿರಲಿ ಅಥವಾ ಅಸಮಂಜಸವಾಗಿರಲಿ ಅವನ್ನೆಲ್ಲಾ ಈಡೇರಿಸಿಕೊಳ್ಳುತ್ತಾ ಹೋಗುವುದಾದರೆ ದುರ್ಬಲ ಹಾಗೂ ದಿವಾಳಿಯಾಗಿರುವ, ದೇಶೀ ಹಾಗೂ ವಿದೇಶೀಯರ ಸಾಲಗಾರ ಗುಲಾಮಗಿರಿಯ ಸ್ವತಂತ್ರ ಭಾರತದ ಪ್ರಜಾಸತ್ತೆಯಾದರೂ ನಮಗೇಕೆ ಬೇಕೆಂದು ಪ್ರಶ್ನಿಸಬೇಕಾಗುತ್ತದೆ. ಹಣದ ಕೊರತೆಯಿಂದಾಗಿ ಸ್ಥಳೀಯ ಸಂಸ್ಥೆ, ಪಂಚಾಯತ್, ಪುರಸಭೆ, ನಗರಸಭೆ, ನಗರಪಾಲಿಕೆ, ಅನುದಾನ ರಹಿತ ಶಾಲಾ - ಕಾಲೇಜು ಇತ್ಯಾದಿಗಳಿಗೆ ಸಾಕಷ್ಟು ಅನುದಾನ ಧನ ಸಹಾಯ ಮಾಡದೆ ಅವುಗಳ ಆಡಳಿತ ಅಭಿವೃದ್ಧಿಯ ಪರಿಸ್ಥಿತಿ ಕೂಡ ಹದಗೆಟ್ಟಿದೆ. ಹಳ್ಳಿಗಾಡಿನ ಸಹಕಾರ ಸಂಘಗಳ ಸಿಬ್ಬಂದಿ, ಪಂಚಾಯತ್‌ಗಳ ಸಿಬ್ಬಂದಿ, ಅಂಗನವಾಡಿಗಳ ಸಿಬ್ಬಂದಿ, ಅನುದಾನ ರಹಿತ ಶಾಲಾ ಕಾಲೇಜುಗಳ ಶಿಕ್ಷಕ ಶಿಕ್ಷಕೇತರ ಸಿಬ್ಬಂದಿ, ಗ್ರಾಮಸಹಾಯಕ ಸಿಬ್ಬಂದಿ, ಲಕ್ಷಾಂತರ ನಿರುದ್ಯೋಗಿಗಳು, ಬರಗಾರ ವೈದ್ಯರು, ದಳಪತಿಗಳು, ಸೂಲಗಿತ್ತಿಯರು, ಕೃಷಿ ಕಾರ್ಮಿಕರು, ನೇಕಾರರು, ಕಸಬುದಾರರು ಇತ್ಯಾದಿ ಇವರೆಲ್ಲ ಹದಗೆಟ್ಟಿರುವ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಹಣದ ಮುಗ್ಗಟ್ಟಿನಿಂದ ಸರಕಾರ ದಿಂದ ಸಾಧ್ಯವಾಗದೇ ಇರುವ ಅರಿವನ್ನು ನೌಕರಶಾಹಿ ಸ್ವಲ್ಪ ಅರಿತರೆ ಒಳ್ಳೆಯದು.

ಕೇಂದ್ರ ಸರಕಾರ ಸಿಕ್ಕಾಪಟ್ಟೆ ಸಾಲಮಾಡುವ ಹಾಗೆ ನಮ್ಮ ರಾಜ್ಯ ಸರಕಾರ ಕೂಡ ಕಂಡ ಕಂಡಲ್ಲಿ ರಾಜ್ಯದ ವಿವಿಧ ಮೂಲಗಳಿಂದ, ಕೇಂದ್ರ ಸರಕಾರದಿಂದ, ಪರ ರಾಷ್ಟ್ರಗಳಿಂದ ಮನಬಲ್ಲಂತೆ ಸಾಲವನ್ನು ಮಾಡುತ್ತಾ ಬಂದರೂ ಅದೂ ಸಾಲದ ಅಭಿವೃದ್ಧಿಗೆ ಹಣದ ಭಾರೀ ಕೊರತೆಯುಂಟಾಗಿದೆ. ರಾಜ್ಯ ಸರಕಾರ 31-3-1998ರ ಅಂತ್ಯಕ್ಕೆ 10,471.10 ಕೋಟಿ ಸಾಲ ಪಡೆದಿದೆ. ಸರಕಾರದ ವಿತ್ತನಿರೂಪಣೆ ಪ್ರಕಾರ ರಾಜ್ಯದ ವಿವಿಧ ಸಾಲ ಇತ್ಯಾದಿ ಲೆಯಾಬಿಲಿಟಿ 17,214.96 ಕೋಟಿ, 31-3-1999ಕ್ಕೆ ಏರುತ್ತದೆ. 97-98ರ ಅವಧಿಗೆ 1,113 ಕೋಟಿ ಬಡ್ಡಿ ಹೊಣೆಗಾರಿಕೆ ಇದೆ. ಬಂಡವಾಳ ಆದಾಯದಲ್ಲಿ ಸಾಲದ ಪ್ರಮಾಣ ಶೇಖಡಾ 62.7 ಇದೆ. 98-99ರಲ್ಲಿ 1,679.24 ಕೋಟಿ ಬಡ್ಡಿಯನ್ನು ಸರಕಾರ ಕೊಡಬೇಕಿದೆ. ಪ್ರತಿವರ್ಷ ಜನತೆ ಕೊಡುವ ರಾಜಸ್ವ ತೆರಿಗೆ ಆದಾಯ ಏರುತ್ತಿದ್ದರೂ ಅದು ಸಾಮಾನ್ಯ, ಸಾಮಾಜಿಕ ಹಾಗೂ ಆರ್ಥಿಕ ಸೇವೆಗಳ ಅಭಿವೃದ್ಧಿಗೆ ಸಾಲದೆ ಬಹುಪಾಲು ವೇತನ, ನಿವೃತ್ತಿ ವೇತನ, ಬಡ್ಡಿಗಳಿಗಾಗಿಯೇ ವೆಚ್ಚವಾಗುತ್ತಿದೆ.

ಪ್ರತಿವರ್ಷ ನೌಕರರ ಸಂಖ್ಯೆ ಏರುತ್ತಲೇ ಇದೆ. ನೌಕರರ ಸಂಖ್ಯೆ 93-94ರಲ್ಲಿ 5,75.130 ಇದ್ದುದು ಏರುತ್ತಾ ಬಂದು 96-97ರಲ್ಲಿ 6,71,733ಕ್ಕೆ ಏರಿದ್ದು ಇನ್ನೂ ಏರುತ್ತಲೆ ಇದೆ. ಅನಾವಶ್ಯಕ ಹಾಗೂ ಅನಗತ್ಯ ಹುದ್ದೆಗಳು, ಇಲಾಖೆಗಳು ಹಾಗೂ ನಿಗಮಗಳು ಪ್ರತಿವರ್ಷ ಹೆಚ್ಚೆಚ್ಚು ನಿರ್ಮಾಣವಾಗುತ್ತಲೇ ಇವೆ. ನಿವೃತ್ತರ ಸಂಖ್ಯೆ ಸಹಿತ ಏರುತ್ತಾ ಬಂದು ಈಗ 3,40,289 ಇದೆ. ಮುಖ್ಯಮಂತ್ರಿಗಳ ಇತ್ತೀಚಿಗಿನಾ ಹೇಳಿಕೆ ಪ್ರಕಾರ 6.19 ಲಕ್ಷ ನೌಕರರು, 3.4 ಲಕ್ಷ ನಿವೃತ್ತರು, ಇವರಿಗೆ ಕೊಡುವ ವೇತನ ಭತ್ಯೆ

4,864 ಕೋಟಿ ಮೀರಲಿದೆ. ವೇತನ ಪುನರ್‌ವಿಮರ್ಶೆಯಿಂದ ಆದಾಯದಲ್ಲಿ 5,500 ಕೋಟಿ ಮೀರಲಿದೆ. 98-99ರ ಬಜೆಟ್ ಪ್ರಕಾರ ರೆವಿನ್ಯೂ ತೆರಿಗೆ ಆದಾಯ 8,627.39 ಕೋಟಿ ಇದ್ದು, ಪ್ರತಿವರ್ಷ ಈ ಮೊತ್ತ ಸಂಪೂರ್ಣವಾಗಿ ಜಮೆ ಆಗುವುದೇ ಇಲ್ಲ. ಹೀಗಿರುವಾಗ್ಗೆ ಪ್ರತಿವರ್ಷ ವೇತನ ಭತ್ಯೆ ಏರುತ್ತಲೇ ಹೋದರೆ ನೌಕರರ ಆರ್ಥಿಕ ಪರಿಸ್ಥಿತಿ ಮಾತ್ರ ಎಲ್ಲರಿಗಿಂತ ಹೆಚ್ಚು ಸುಧಾರಿಸುತ್ತ ಹೋಗಿ ಜನಸಾಮಾನ್ಯರ ಹಾಗೂ ರಾಜ್ಯ ಸರ್ಕಾರದ ಆರ್ಥಿಕ ಪರಿಸ್ಥಿತಿ ತೀರಾ ಹದಗೆಡುತ್ತಾ ಹೋಗುವುದಾದರೆ ಈ ಬಗ್ಗೆ ನೌಕರಶಾಹಿ ಚಿಂತಿಸದೆ ಹೋದರೆ ಮಂತ್ರಿಗಳು ನಿಸ್ಸಹಾಯಕರಾಗಿ ಆರ್ಥಿಕ ಅರಿವಿಲ್ಲದೆ ಮುಂದೆ ಸಾಗಿದರೆ ಮುಂದೇನು? ಹೊಸ ವೇತನ ಭತ್ಯೆ ಪ್ರಕಾರ ಕಳೆದರ್ಜೆ ಒಬ್ಬ ಸಿಪಾಯಿ ತಿಂಗಳಿಗೆ ಗರಿಷ್ಠ ವೇತನ ಭತ್ಯೆ 4,466.00 ರೂಪಾಯಿಗಳು ಪಡೆದರೆ, ಮೊದಲನೆ ದರ್ಜೆ ಸಹಾಯಕ ಗುಮಾಸ್ತ 8,178.00 ರೂ ಪಡೆಯುತ್ತಾನೆ. ಹೀಗೆಯೇ ಎಲ್ಲಾ ದರ್ಜೆ ನೌಕರರಿಗೆ ಏರುತ್ತಲೇ ಹೋಗುತ್ತದೆ. ರಾಜ್ಯ ಸರ್ಕಾರದ ನೌಕರರಿಗೆ ಹಾಗೂ ನಿವೃತ್ತರಿಗೆ ಸಲ್ಲುತ್ತಿರುವ ವೇತನ ಭತ್ಯೆ ಮೊತ್ತ ಇದು ನಿವ್ವಳ ಆದಾಯದ ಬಹುಪಾಲು ಇದ್ದು ಈ ಮೊತ್ತ ಕೊಡಬೇಕಾದುದು ಪ್ರಜಾ ಸರ್ಕಾರಕ್ಕೆ ಅನಿವಾರ್ಯ. ನೌಕರಶಾಹಿಯಲ್ಲಿಯ ಒಬ್ಬ ದಲಾಯತನಿಂದ ಹಿಡಿದು ಐ.ಎ.ಎಸ್. ಅಧಿಕಾರಿಯವರೆಗೆ ಎಲ್ಲರಿಗೂ ಹೇಗೆ ಅವರವರ ಆರ್ಥಿಕ ಹಾಗೂ ಆದಾಯದ ಅರಿವು ಇರುತ್ತದೆಯೋ ಹಾಗೆಯೇ ಈ ರಾಜ್ಯದ ಜನಸಾಮಾನ್ಯರ, ರಾಜ್ಯದ ಹಾಗೂ ಸರಕಾರದ ಆರ್ಥಿಕ ಆದಾಯ - ವೆಚ್ಚ ಹಾಗೂ ಸಾಲ ಸೊತ್ತಿನ ಅರಿವು ಪ್ರಜಾಶಾಹಿ ಪ್ರತಿನಿಧಿಗಳಿಗೆ ಇರದೆ ಎಲ್ಲವನ್ನು ಹದಗೆಡಿಸುತ್ತಿರುವುದು ಪ್ರಜಾಸತ್ತೆಯ ದುರ್ದೈವ. ಎಚ್ಚೆತ್ತಿರುವ ಹಾಗೂ ಜಾಗೃತರಾಗಿರುವ ನೌಕರಶಾಹಿಯು ಪ್ರಜಾಶಾಹಿಯ ಸ್ನೇಹ ಸಂಬಂಧಿಗಳೇ ಇರುವುದರಿಂದ ತಮ್ಮ ಆರ್ಥಿಕ ಪ್ರಗತಿಗೆ ಮಾತ್ರ ಚಿಂತಿಸದೆ ಹಾಗೂ ಹೋರಾಟ ಮಾಡದೆ ಜವಾಬ್ದಾರಿಯ ಅರಿವೇ ಇಲ್ಲದ ದುರ್ಬಲ ಪ್ರಜಾಶಾಹಿಯ, ಪ್ರಜಾರಾಜ್ಯದ ಹಾಗೂ ಜನತೆಯ ಆರ್ಥಿಕ ಪರಿಸ್ಥಿತಿಯ ಬಗ್ಗೆ ಚಿಂತಿಸಿ ಮುಂದೇನು ಎಂಬ ಬಗ್ಗೆ ಅವರೇ ಪಾಲಕರಾಗಿ ವರ್ತಿಸಿದರೆ ಒಳ್ಳೆಯದು. ಪ್ರಜಾಶಾಹಿಯ ಸೂತ್ರದಾರಿಗಳಾದ ಮಂತ್ರಿಗಳು ದುರ್ಬಲರಾಗದೆ ತಮ್ಮ ತಮ್ಮ ಆಡಳಿತ ಜವಾಬ್ದಾರಿ ಯನ್ನರಿತು ರಾಜ್ಯದ ಹಾಗೂ ಸರ್ಕಾರದ ಸಾಮಾಜಿದ, ಸಾಮಾನ್ಯ ಹಾಗೂ ಆರ್ಥಿಕ ಸಮಸ್ಯೆಗಳನ್ನು ಅಧ್ಯಯನ ಮಾಡಿ ಪರಿಹರಿಸುವಲ್ಲಿ ಮುಂದಾಗಬೇಕೇ ಹೊರತು ತಮ್ಮ ಅಮೂಲ್ಯವಾದ ವೇಳೆಯನ್ನು ಅನುಚಿತ ಕಾರ್ಯಕ್ರಮಗಳಿಗೆ ಹರಣ ಮಾಡದೆ ನೌಕರಶಾಹಿಯಿಂದ ಸವಾರಿಮಾಡಿಸಿಕೊಳ್ಳದೆ ನೌಕರರನ್ನೊಳಗೊಂಡ ಎಲ್ಲರ ಸಮಸ್ಯೆಗಳನ್ನು ಬಿಡಿಸಿ ಸೂಕ್ತ ಪರಿಹಾರ ಹುಡುಕುವಲ್ಲಿ ಹಾಗೂ ಅವಶ್ಯ ಅನಿವಾರ್ಯ ಕಂಡಲ್ಲಿ ತಪ್ಪಿತಸ್ಥರ ಮೇಲೆ ಎಸ್ಮಾ ಕಾಯ್ದೆ, ಮುಷ್ಕರ ನಿಷೇದ ಕಾಯ್ದೆ, ಲೋಕಾಯುಕ್ತ ಕಾಯ್ದೆ, ಸಿಸಿಎ ರೂಲ್ಸ, ಲಂಚ ನಿರೋಧ ಕಾಯ್ದೆ, ವರ್ಗಾವಣೆ ನಿಯಮ ಇತ್ಯಾದಿಗಳ ಪ್ರಕಾರ ದಾಕ್ಷಿಣ್ಯಪರರಾಗದೆ ನ್ಯಾಯ - ನಿಷ್ಠುರಿಗಳಾಗಿ ಪ್ರಸ್ತುತ ಪರಿಸ್ಥಿತಿಯಲ್ಲಿಯ ಸ್ವಾರ್ಥ, ಪಕ್ಷಪಾತ. ಸ್ವಜನ -

ಪಕ್ಷಪಾತ, ಅಧಿಕಾರ ದುರುಪಯೋಗ, ದುರಾಡಳಿಜತ ಭ್ರಷ್ಟಾಚಾರ ಇತ್ಯಾದಿ ಮಹಾ ರೋಗವನ್ನು ನಿವಾರಿಸುವಲ್ಲಿ ಆಸಕ್ತಿ ವಹಿಸಿದರೆ ನಮಗೆ ಸಿಕ್ಕ ಸ್ವಾತಂತ್ರ್ಯ ಹಾಗೂ ಜನಗಣ ಅಧಿನಾಯಕವೆಂಬ ಪ್ರಜಾಸತ್ತೆ ಸಾರ್ಥಕ, ಇಲ್ಲವಾದರೆ ಎಲ್ಲವೂ ನಿರರ್ಥಕ.

ನಮ್ಮ ರಾಜ್ಯದಲ್ಲಿ ಹಾಗೂ ರಾಷ್ಟ್ರದಲ್ಲಿ ಸಾಕಷ್ಟು ಆರ್ಥಿಕ ತಜ್ಞರು ಇದ್ದಾರೆ. ಅವರೆಲ್ಲರೂ ರಾಜ್ಯಗಳ ಹಾಗೂ ರಾಷ್ಟ್ರದ ಹದಗೆಟ್ಟ ಆರ್ಥಿಕ ಪರಿಸ್ಥಿತಿಯ ಬಗ್ಗೆ, ಆದಾಯವಿಲ್ಲದೆ ಕಂಡಕಂಡಲ್ಲಿ ಸಾಲ ಮಾಡಿ ಹೊಟ್ಟೆಹೊರೆದು, ಆಡಳಿತ ಅಭಿವೃದ್ಧಿ ವಿನಾಶದತ್ತ ಹೋಗುತ್ತಿರುವ ಬಗ್ಗೆ ಮುಂದೇನು ಮಾಡಬೇಕೆಂಬುವ ಬಗ್ಗೆ ರಾಜಕಾರಣಿಗಳಿಗೆ ಹಾಗೂ ನೌಕರಶಾಹಿಗೆ ಮಾರ್ಗದರ್ಶನ ಮಾಡುವುದು ದೇಶದ ಹಿತದೃಷ್ಟಿಯಿಂದ ಅತ್ಯಗತ್ಯ. ನೌಕರಶಾಹಿಗೆ ಅವರು ಕೇಳಿದ್ದನ್ನೆಲ್ಲಾ ಪ್ರಜಾಶಾಹಿ ಕೊಡಲಿ, ಆದರೆ ಪ್ರಜಾಶಾಹಿಯ ಕೊಟ್ಯಾಂತರ ಪ್ರಜೆಗಳ ಹಾಗೂ ಪ್ರಜಾಸರ್ಕಾರಗಳ ಗತಿ ಏನಾಗಬೇಕು? ಈ ಬಗ್ಗೆ ನೌಕರಶಾಹಿ ಚಿಂತಿಸಬಾರದೇಕೆ?

❑

ಆಡಳಿತ ಅಭಿವೃದ್ಧಿ ಅರಿವು

ಅತಿ ಸಣ್ಣ ಗ್ರಾಮದಿಂದ ಹಿಡಿದು ಅತಿ ದೊಡ್ಡ ದೆಹಲಿಯವರೆಗಿನ ಗ್ರಾಮ ಮಟ್ಟ, ತಾಲೂಕ ಮಟ್ಟ, ಜಿಲ್ಲಾ ಮಟ್ಟ, ರಾಜ್ಯ ಮಟ್ಟ ಹಾಗು ರಾಷ್ಟ್ರ ಮಟ್ಟದ ಆಡಳಿತ ಹಾಗೂ ಅಭಿವೃದ್ಧಿ ಸುರಳೀತವಾಗಿ ಸಾಗಿದರೆ ಮಾತ್ರ ಈ ರಾಷ್ಟ್ರಕ್ಕೆ ಹಾಗೂ ರಾಷ್ಟ್ರದ ಜನತೆಗೆ ಶೋಷಣೆ ರಹಿತ ಸಮಾಜ ಹಾಗೂ ಅಭಿವೃದ್ಧಿಶೀಲ ರಾಷ್ಟ್ರ ಕಟ್ಟಲು ಸಾಧ್ಯ. ದೇಶಾದ್ಯಂತ ಗ್ರಾಮ ಪಂಚಾಯತಿ, ತಾಲೂಕ್ ಪಂಚಾಯತಿ, ಜಿಲ್ಲಾ ಪಂಚಾಯತಿ, ಪಟ್ಟಣ ಪಂಚಾಯತಿ, ಪುರಸಭೆ, ನಗರಸಭೆ, ಮಹಾನಗರ ಪಾಲಿಕೆ, ಅಧಿನಿಯಮ ಬದ್ಧ ರಚನೆಯಾದ ಸಂಘ ಸಂಸ್ಥೆ ನಿಗಮಗಳು ಇವೆ. ಇವೆಲ್ಲವುಗಳಿಗೆ ಮೇಲಾಗಿ ವಿಧಾನಸಭೆ, ವಿಧಾನ ಪರಿಷತ್ತು, ರಾಜ್ಯ ಸರ್ಕಾರ, ಲೋಕಸಭೆ, ರಾಜ್ಯಸಭೆ, ಕೇಂದ್ರ ಸರ್ಕಾರಗಳು ಇದ್ದು ಇವುಗಳಿಗೆ ಸಂವಿಧಾನಬದ್ಧ ಅಗ್ರಗಣ್ಯರಾದ ರಾಜ್ಯಪಾಲ, ಉಪರಾಷ್ಟ್ರಪತಿ ಹಾಗೂ ರಾಷ್ಟ್ರಪತಿಗಳೂ ಇದ್ದಾರೆ. ಇವರೆಲ್ಲರಿಗೆ 18 ವರ್ಷದಿಂದ 60 ವರ್ಷಗಳವರೆಗೆ ಅಖಂಡವಾಗಿ ಸುದೀರ್ಘವಾಗಿ 42 ವರ್ಷಗಳವರೆಗೆ ನಿರಂತರ ಸೇವೆ ಮಾಡಲು ಸಿಪಾಯಿಗಳಿಂದ ಹಿಡಿದು ಪದವೀಧರರು ಕೆ.ಎ.ಎಸ್.ದವರು, ಐ.ಎ.ಎಸ್. ದವರಾದಯಾಗಿ ಮುಖ್ಯ ಕಾರ್ಯದರ್ಶಿ ಹುದ್ದೆವರೆಗೆ ಲಕ್ಷಾಂತರ ಸಿಬ್ಬಂದಿ, ನೌಕರ ಅಧಿಕಾರಿಗಳು ದೇಶಾದ್ಯಂತ ಕೋಟ್ಯಂತರ ಇದ್ದಾರೆ. ಇವರೆಲ್ಲರಿಗೂ ತಪ್ಪದೆ ಪ್ರತಿ ತಿಂಗಳು ನಿಗದಿತ ವೇತನ ಭತ್ಯೆಯಲ್ಲಿ ನೂರಕ್ಕೆ ನೂರರಷ್ಟು ಮೊತ್ತವನ್ನು ಬಟವಾಡೆ ಮಾಡಲಾಗುತ್ತದೆ. ಇದು ಅನಿವಾರ್ಯ ಹಾಗೂ ಅಗತ್ಯ. ಈ ರಾಷ್ಟ್ರದಾದ್ಯಂತ ಆಡಳಿತ ಹಾಗೂ ಅಭಿವೃದ್ಧಿ ಇವರೆಲ್ಲರ ಕೈಯಲ್ಲಿ ಬಹುಪಾಲು ಇರುತ್ತದೆ. ಇವರೆಲ್ಲರಲ್ಲಿ ಪ್ರಾಮಾಣಿಕರು, ದಕ್ಷರು, ಸಮರ್ಥರು, ಕರ್ತವ್ಯಶೀಲರು ಜವಾಬ್ದಾರಿಗಳು ಉತ್ತಮ ಸೇವಾ ಭಾವನೆಯುಳ್ಳವರು ಅನೇಕರು ಇದ್ದಾರೆ. ಇದಕ್ಕೆ ವ್ಯತಿರಿಕ್ತವಾಗಿ ಅಪ್ರಮಾಣಿಕರು, ಅದಕ್ಷರು, ಅಸಮರ್ಥರು, ಕರ್ತವ್ಯಗೇಡಿಗಳು, ಬೇಜವಾಬ್ದಾರಿಗಳು, ಉತ್ತಮ ಸೇವಾ ಭಾವನೆ ಇಲ್ಲದವರು, ಸ್ವಾರ್ಥಿಗಳು, ಪಕ್ಷಪಾತಿಗಳು, ಸ್ವಜನ ಪಕ್ಷಪಾತಿಗಳು ಅಧಿಕಾರ ದುರುಪಯೋಗ ಮಾಡುವವರು, ದುರಾಡಳಿತ ಮಾಡುವವರು ಸಹ ಅನೇಕರು ಇದ್ದಾರೆ. ಇಂಥಹ ಅಯೋಗ್ಯರಿಗೆ ಕಟ್ಟುನಿಟ್ಟಾದ ನಿರ್ದಾಕ್ಷಿಣ್ಯವಾದ ಕಡ್ಡಾಯ ನಿವೃತ್ತಿಯೂ ಇಲ್ಲ.

ನೌಕರಿಯಿಂದ ವಜಾ ಇಲ್ಲ. ಶಿಕ್ಷೆಯೂ ಇಲ್ಲ. ಇದಕ್ಕೆ ತೊರಗಾಣಿಕೆಗಾಗಿ ಕ್ರಮ ಹಾಗೂ ಶಿಕ್ಷೆ ಮಾತ್ರ ಅಲ್ಲಲ್ಲಿ ಕಂಡು ಬರುತ್ತದೆ. ಈ ಕ್ರಮದಲ್ಲಿ ಬಲಾಢ್ಯರು ಪಾರಾಗುತ್ತಿರುವ ಹಾಗೂ ದುರ್ಬಲರು ಸಿಕ್ಕಿಹಾಕಿಕೊಳ್ಳುವ ಉದಾಹರಣೆ ಕೂಡ ಇವೆ. ಈ ಕೋಟ್ಯಂತರ ಸಿಬ್ಬಂದಿ ನೌಕರಶಾಹಿಯಲ್ಲಿಯ ಅಧಿಕಾರಿಗಳು ಈ ರಾಷ್ಟ್ರದ ಎಲ್ಲಾ ಹಂತದ ಆಡಳಿದ ಹಾಗೂ ಅಭಿವೃದ್ಧಿಯನ್ನು ಉತ್ತಮ ರೀತಿಯಲ್ಲಿ ಸಾಧಿಸುವಲ್ಲಿ ನಿರಂತರವಾಗಿ ನಿರ್ಲಕ್ಷಿಸಿ ರುವುದು ಹಾಗೂ ಆಡಳಿತ ಅಭಿವೃದ್ಧಿಯನ್ನು ಕುಂಠಿತ ಹಾಗೂ ಹದಗೆಡಿಸುತ್ತಿರುವುದು ನಡೆದೇ ಇದೆ. ಏಕೆ? ಎಲ್ಲಾ ಹಂತದ ಆಡಳಿತದಲ್ಲಿ ಅನೇಕ ಅಧಿಕಾರಿಗಳಿಂದ ಹಾಗೂ ಪ್ರಜಾಪ್ರತಿನಿಧಿಗಳಿಂದ ಕರ್ತವ್ಯಚ್ಯುತಿ. ಸ್ವಾರ್ಥ, ಪಕ್ಷಪಾತ, ಸ್ವಜನಪಕ್ಷಪಾತ, ಅಧಿಕಾರ ದುರುಪಯೋಗ, ದುರಾಡಳಿತ, ಭ್ರಷ್ಟಾಚಾರ ಇತ್ಯಾದಿ ಸಾಮಾಜಿಕ ಪೀಡೆಗಳು ಯಥಾವತ್ತಾಗಿ ನಡೆದೇ ಇವೆ. ಅಭಿವೃದ್ಧಿಯಲ್ಲಿ ನಿಗದಿತ ಗುರಿ ಸಾಧಿಸದೇ ಇರುವುದು, ನಿಗದಿತ ಹಣ ವೆಚ್ಚ ಮಾಡದೇ ಇರುವುದು, ಕಳಪೆ ಕೆಲಸ ಮಾಡುವುದು, ವೆಚ್ಚಕ್ಕೆ ತಕ್ಕಂತೆ ಕಾಮಗಾರಿ ಮಾಡದೇ ಇರುವುದು, ಕಾಮಗಾರಿ ಮಾಡದೇ ಇದ್ದರೂ ಮಾಡಿದ್ದೇವೆಂದು ಕೊಟ್ಟ ಲೆಕ್ಕಪತ್ರ ಸೃಷ್ಟಿಸಿ, ಹಣ ಎತ್ತಿ ಹಾಕುವುದು, ಬಡವರಿಗೆ, ದುರ್ಬಲ ವರ್ಗದವರಿಗೆ, ಪರಿಶಿಷ್ಟ ಜಾತಿಯವರಿಗೆ, ಪರಿಶಿಷ್ಟ ವರ್ಗದವರಿಗೆ ಹಿಂದುಳಿದ ವರ್ಗದವರಿಗೆ, ಅಲ್ಪಸಂಖ್ಯಾತರಿಗೆ, ಮಹಿಳೆಯರಿಗೆ, ಮಕ್ಕಳಿಗೆ ನಿರ್ಗತಿಕರಿಗೆ ಸಿಗಬೇಕಾದ ಸಹಾಯ, ಸೌಲಭ್ಯ ಸೌಕರ್ಯ ಇತ್ಯಾದಿಗಳನ್ನು ಆಯವ್ಯಯಗಳಲ್ಲಿ ನಿಗದಿ ಗೊಳಿಸಿದ ಪ್ರಕಾರ ಸಿಗದಂತೆ ವಂಚಿಸಿ ಹಾರೊಡೆಯುವದು ಸಹ ನಿರಾತಂಕವಾಗಿ ದೇಶಾದ್ಯಂತ ಎಲ್ಲಾ ಹಂತಗಳಲ್ಲಿ ನಡೆದೇ ಇದೆ. ಎಲ್ಲಾ ಹಂತದ ನೌಕರಶಾಹಿ ಬಜೆಟ್ ಪ್ರಕಾರ ನೂರಕ್ಕೆ ನೂರರಷ್ಟು ಅಥವಾ ಅದಕ್ಕೂ ಹೆಚ್ಚು ವೇತನ ಭತ್ತೆಯನ್ನು ತಪ್ಪದೆ ಪಡೆಯುತ್ತಿರುವಾಗ ಜನತೆಗೆ ಬಜೆಟ್ ಪ್ರಕಾರ ಸಿಗಬೇಕಾದ ಸೌಲಭ್ಯಗಳನ್ನೇಕೆ ನೂರಕ್ಕೆ ನೂರರಷ್ಟು ಈ ಅಧಿಕಾರಿ ನೌಕರಶಾಹಿ ವೆಚ್ಚ ಮಾಡುತ್ತಿಲ್ಲ? ಇದಕ್ಕೆ ಕ್ರಮವೇನು?

ಈ ರಾಷ್ಟ್ರದ ಎಲ್ಲಾ ಹಂತದ ಆಡಳಿತ ಅಭಿವೃದ್ಧಿಗೆ ಎಲ್ಲಾ ಹಂತದ ಅಧಿಕಾರಿ ನೌಕರಶಾಹಿ ಅದೆಷ್ಟು ಜವಾಬ್ದಾರರೋ ಅದಕ್ಕೂ ಹೆಚ್ಚು ಜವಾಬ್ದಾರಿ ಎಲ್ಲಾ ಹಂತದ ಚುನಾಯಿತ ಪ್ರಜಾಪ್ರತಿನಿಧಿಗಳಿಗೂ ಇವೆ. ಪ್ರಜಾಪ್ರತಿನಿಧಿಗಳಾದವರು ವಿವಿಧ ಹಂತದಲ್ಲಿ ಸದಸ್ಯರಾಗಿರಬಹುದು, ಉಪಾಧ್ಯಕ್ಷರಾಗಿರಬಹುದು, ಅಧ್ಯಕ್ಷರಾಗಿರಬಹುದು, ಮಂತ್ರಿಯಾಗಿ ರಬಹುದು, ಮುಖ್ಯ ಮಂತ್ರಿಯಾಗಿರಬಹುದು, ಪ್ರಧಾನ ಮಂತ್ರಿಯಾಗಿರಬಹುದು, ಉಪರಾಷ್ಟ್ರಪತಿಯಾಗಿರಬಹುದು ಅಥವಾ ರಾಷ್ಟ್ರಪತಿ ಆಗಿರಬಹುದು. ಇವರೆಲ್ಲರಿಗೂ, ಅಧಿನಿಯಮ ಬದ್ಧವಾದ ಹಾಗೂ ಸಂವಿಧಾನ ಬದ್ಧವಾದ ಜವಾಬ್ದಾರಿ ಹೊಣೆ ಗಾರಿಕೆಯೂ ಇದೆ. ಈ ರಾಷ್ಟ್ರದಲ್ಲಿ ಅಧಿಕಾರ ವ ನೌಕರ ಶಾಹಿಯನ್ನು ಪ್ರಜಾಪ್ರತಿನಿಧಿ ಗಳಾದ ಪ್ರಜಾಶಾಹಿ ನಿಯಂತ್ರಣ ಹಾಗೂ ಸವಾರಿ ಮಾಡಿ ಈ ರಾಷ್ಟ್ರಕ್ಕೆ ಎಲ್ಲಾ ಹಂತದಲ್ಲಿ ಸುರಳೀತವಾದ, ಸುಭದ್ರವಾದ, ಸ್ಥಿರವಾದ ಜನೋಪಕಾರಿಯಾದ ಆಡಳಿತ ಹಾಗೂ ಅಭಿವೃದ್ಧಿಯನ್ನು ಸಾಧಿಸಲೇಬೇಕಾಗುತ್ತದೆ. ಆದರೆ ಸಾಧಿಸಲಾಗಿದೆಯೇ? ಈ

ದಿಶೆಯಲ್ಲಿ ಎಲ್ಲಾ ಹಂತದ ಪ್ರಜಾ ಪ್ರತಿನಿಧಿಗಳು ಗಂಭೀರವಾಗಿ ಚಿಂತಿಸಿ - ಆಲೋಚಿಸಿ ಆಡಳಿತದ ಹಾಗೂ ಅಭಿವೃದ್ಧಿಯ ಅರಿವನ್ನು ಮಾಡಿಕೊಂಡು ಮುನ್ನಡೆ ಇಟ್ಟರೆ ಒಳ್ಳೆಯದು. ಈ ರಾಷ್ಟ್ರದಲ್ಲಿ ಪ್ರಜಾಸಾರ್ವಭೌಮತ್ವ ಜಾರಿಯಲ್ಲಿದೆ. ಪ್ರಜೆಗಳ ಪ್ರತಿನಿಧಿಗಳಾದ ಪ್ರಜಾರಾಜರು ಅಧಿಕಾರ ವ ನೌಕರರ ಮುಖಾಂತರ ತಮಗಿರುವ ಕೇಲ 5 ವರ್ಷಗಳ ಅವಧಿಯಲ್ಲಿ ಉತ್ತಮ ಆಡಳಿತ ಹಾಗೂ ಸಾರ್ವಂಗೀಣ ಅಭಿವೃದ್ಧಿ ಸಾಧಿಸಬೇಕಾಗುತ್ತದೆ. ರಾಷ್ಟ್ರದ ಎಲ್ಲಾ ಹಂತದಲ್ಲಿ ಬಡತನ ನಿರುದ್ಯೋಗ, ಶೋಷಣೆ, ಭ್ರಷ್ಟಾಚಾರ, ಪಕ್ಷಪಾತ, ಸ್ವಜನಪಕ್ಷಪಾತ, ಅಧಿಕಾರ ದುರುಪಯೋಗ ದುರಾಡಳಿತಗಳು ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇವೆ. ಏಕೆ? ಅಭಿವೃದ್ಧಿಯಲ್ಲಿ ಅಸಮರ್ಪಕತೆ, ಅವ್ಯವಹಾರ, ಅಕ್ರಮ, ಕುಂಠಿತ ನಡೆದೇ ಇದೆ. ಏಕೆ? ಬಜೆಟ್‌ದಲ್ಲಿ ನಿಗದಿ ಹಣ ಆಡಳಿತ ಹಾಗು ಅಭಿವೃದ್ಧಿಯೇತರಕ್ಕಾಗಿ ನೂರಕ್ಕೆ ನೂರರಷ್ಟು ಅಥವಾ ಅದಕ್ಕೂ ಹೆಚ್ಚು ಹಣ ತಪ್ಪದೆ ವೆಚ್ಚವಾಗುತ್ತಲಿದೆ, ಆದರೆ ಅಭಿವೃದ್ಧಿಗಾಗಿ ಬಜೆಟ್ ನಿಗದಿತ ಹಣ ಪ್ರತಿವರ್ಷ ನೂರಕ್ಕೂ ನೂರರಷ್ಟು ವೆಚ್ಚವಾಗುತ್ತಿಲ್ಲ ಏಕೆ? ಇದಕ್ಕೆ ಅಧಿಕಾರಿಗಳು ಜವಾಬ್ದಾರರೇ ಅಥವಾ ಮಂತ್ರಿಗಳನ್ನೊಳಗೊಂಡ ಪ್ರಜಾಪ್ರತಿನಿಧಿಗಳು ಜವಾಬ್ದಾರರೇ ಎಂಬುದನ್ನು ಪ್ರಜಾಪ್ರತಿನಿಧಿಗಳೇ ತಿಳಿದುಕೊಂಡು ನಡೆದರೆ ಒಳ್ಳೆಯದು. ಪ್ರಜಾಪ್ರತಿನಿಧಿಗಳಾದವರು ತಮ್ಮ 5 ವರ್ಷಗಳ ಅವಧಿಯಲ್ಲಿ ಮಾಡಬೇಕಾದ ಆಡಳಿತ ಹಾಗೂ ಅಭಿವೃದ್ಧಿಯ ಅರಿವನ್ನು ಅರಿತು ಅಧಿಕಾರಶಾಹಿಯನ್ನು ಹದ್ದುಬಸ್ತಿನಲ್ಲಿಟ್ಟು ಬಜೆಟ್ ಪ್ರಕಾರ ಆಗಬೇಕಾದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಕ್ರಿಯಾಶೀಲರಾಗಿ ನ್ಯಾಯನಿಷ್ಠರುಗಳಾಗಿ, ದಾಕ್ಷಿಣ್ಯಪರರಾಗದೆ ಆಡಳಿತ ನಡೆಸಿದರೆ ಮಾತ್ರ ನಮ್ಮ ರಾಷ್ಟ್ರದಲ್ಲಿ ಎಲ್ಲಾ ಹಂತದ ಆಡಳಿತ ಅಭಿವೃದ್ಧಿ ಯಶಸ್ವಿಯಾಗಬಲ್ಲುದು ಹಾಗೂ ಪ್ರಜಾತಂತ್ರ ವ್ಯವಸ್ಥೆಯೂ ಸುವ್ಯವಸ್ಥೆಯಾಗಬಲ್ಲುದು.

❑

ನಾಲ್ಕು ವರ್ಷದ ಆರೋಗ್ಯ - ಕುಟುಂಬ ಕಲ್ಯಾಣ ವೆಚ್ಚ : 531-00 ಕೋಟಿ ಖೋಟಾ

ಕರ್ನಾಟಕ ರಾಜ್ಯದ ಎಲ್ಲಾ 27 ಜಿಲ್ಲೆಗಳಲ್ಲಿಯ 175 ತಾಲೂಕುಗಳಾದ್ಯಂತ ಎಲ್ಲಾ ರೀತಿಯ ಆಡಳಿತ ಹಾಗೂ ಅಭಿವೃದ್ಧಿಯನ್ನು ಸುಗಮಗೊಳಿಸುವ ಸಲುವಾಗಿ ಬೇಕಾದಷ್ಟು ಇಲಾಖೆಗಳಿವೆ ಹಾಗೂ ಈ ಎಲ್ಲಾ ಇಲಾಖೆಗಳಿಗೂ ಸಾಕಷ್ಟು ಮಂತ್ರಿಗಳೂ ಇದ್ದಾರೆ. ಈ ಎಲ್ಲಾ ಮಂತ್ರಿಗಳ ಮೇಲೆ ಅವರ ಕಾರ್ಯ ವೈಖರಿ ಉತ್ತಮವಾಗಿರುವಂತೆ ನೋಡಿಕೊಳ್ಳಲು ಒಬ್ಬ ನುರಿತ, ಅರಿತ ಅನುಭವೀ ಮುಖ್ಯಮಂತ್ರಿಗಳೂ ಇದ್ದಾರೆ. ಇವರೆಲ್ಲರ ಮೇಲೆ ಸಂಸದೀಯ ಪದಾಧಿಕಾರಿಗಳನ್ನೊಳಗೊಂಡ ವಿಧಾನ ಸಭೆ ಹಾಗೂ ವಿಧಾನ ಪರಿಷತ್ತು ಕೂಡ ಇದೆ. ರಾಜ್ಯದ ಸರ್ವಾಂಗೀಣ ಆಡಳಿತ ಹಾಗೂ ಅಭಿವೃದ್ಧಿಯತ್ತ ಗಮನ ಹರಿಸದೆ ಹದಗೆಡಿಸುವುದು ಯಾರಿಗೂ ಭೂಷಣವಲ್ಲ. ಪ್ರತಿಯೊಬ್ಬ ಮಂತ್ರಿ ತನ್ನ ಇಲಾಖೆಯಲ್ಲಿ ಅಥವಾ ತನ್ನ ವ್ಯಾಪ್ತಿಯಲ್ಲಿ ಬಜೆಟ್ ಪ್ರಕಾರ ಅದೆಷ್ಟು ಹಣ ಯಾವ್ಯಾವದ ಉದ್ದೇಶಕ್ಕಾಗಿ ನಿಗದಿಯಾಗಿದೆ, ನಿಗದಿಯಾದ ಹಣ ಪ್ರತಿವರ್ಷ ವಾಸ್ತವಿಕವಾಗಿ ವೆಚ್ಚವಾಗಿ ಆರ್ಥಿಕ ಹಾಗೂ ಭೌತಿಕ ಗುರಿಯನ್ನು ಸಾಧಿಸಿಯೇ ಇಲ್ಲವೇ ಎಂಬುದನ್ನು ನೋಡುವದು ಅವರವರ ಕರ್ತವ್ಯ. ನಿಗದಿತ ಆರ್ಥಿಕ ಹಾಗೂ ಭೌತಿಕ ಗುರಿ ಸಾಧಿಸದೇ ಇದ್ದಾಗ ಈ ವೈಫಲ್ಯಕ್ಕೆ ಯಾರು ಕಾರಣ, ಯಾವ ಅಧಿಕಾರಿ ಕಾರಣ, ಯಾವ ಮುಖ್ಯಸ್ಥ ಕಾರಣವೆಂಬುದನ್ನು ಕಂಡು ಹಿಡಿದು ನಿಗದಿತ ಗುರಿ ಸಾಧಿಸಲು ಅಸಮರ್ಥ ಹಾಗೂ ಅದಕ್ಷರಾದವರ ಮೇಲೆ ನಿರ್ದಾಕ್ಷಿಣ್ಯವಾಗಿ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳದತೆ ನಿಷ್ಕ್ರಿಯಾರಾಗಿ ವಿಫಲರಾದರೆ ಮುಂದಿನ ಅಧಿಕಾರಿಗಳು ಸಹ ಪ್ರತಿವರ್ಷ ಆರ್ಥಿಕ ಹಾಗೂ ಭೌತಿಕ ಗುರಿಸಾಧಿಸುವಲ್ಲಿ ಯಾವುದೇ ಪ್ರಯತ್ನ ಮಾಡದೆ ಕ್ರಿಯಾಶೀಲರಾಗದೆ ಪ್ರತಿವರ್ಷ ವೈಫಲ್ಯ ಮುಂದುವರಿದು ಸಾರ್ವಜನಿಕರಿಗೆ ಸಿಗುವ ಸವಲತ್ತು ಸೌಲಭ್ಯಗಳು ಸಿಗದಂತಾಗುತ್ತವೆ. ಅಸಮರ್ಥ ಅಯೋಗ್ಯ ಹಾಗೂ ತಪ್ಪಿತಸ್ಥ ಅಧಿಕಾರಿಗಳನ್ನು ದಂಡಿಸದೆ ಹೋದರೆ ಯಾವ ಸರಕಾರವೇ ಬರಲಿ ಯಾವ ಮಂತ್ರಿಗಳೇ

ಬರಲಿ ಏನು ಮಾಡಲಿಕ್ಕೂ ಸಾಧ್ಯವಾಗುವುದಿಲ್ಲ. ಈ ತರಹದ ವೈಫಲ್ಯ ಕರ್ತವ್ಯ ಚ್ಯುತಿ ಹದಗೆಟ್ಟ ಆಡಳಿತ, ಹದಗೆಟ್ಟ ಅಭಿವೃದ್ಧಿ ಬಹುತೇಕ ಅನೇಕ ಇಲಾಖೆಗಳಲ್ಲಿ ಯಥಾವತ್ತಾಗಿ ನಿರಾತಂಕವಾಗಿ ನಡೆದು ಬಂದಿರುವದು ಜನತೆಯ ದುರ್ದೈವ. ರಾಜ್ಯದ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಇಲಾಖೆಯ ಕಾರ್ಯ ವೈಖರಿಯನ್ನು ಹೇಳುವದಾದರೆ ಈ ಇಲಾಖೆ ಜನತೆಯ ಆರೋಗ್ಯಕ್ಕೆ ಸೌಭಾಗ್ಯವಾಗದೆ, ಭಾಗ್ಯವಾಗದೆ, ಸಂಪತ್ತಾಗದೆ, ವರವಾಗಧೆ, ಶಾಪವಾಗುತ್ತಿರುವದು ಯಾರಿಗೂ ಭೂಷಣವಲ್ಲ, ವೈದ್ಯಕೀಯ ಜನಾರೋಗ್ಯ (2210) ಹಾಗೂ ಕುಟುಂಬ ಕಲ್ಯಾಣ (2211) ಈ ಇಲಾಖೆಯಲ್ಲಿ ಜಿಲ್ಲಾ ಪಂಚಾಯತಿ ಹಾಗೂ ಸರಕಾರಿ ಇಲಾಖೆಯಲ್ಲಿ ರಾಜ್ಯಾದ್ಯಂತ 74,691 ಜನ ಹುದ್ದೆದಾರರಿದ್ದಾರೆ. ಈ ಎಲ್ಲ ಜನ ತಮ್ಮ ತಮ್ಮ ಕರ್ತವ್ಯವನ್ನು ಚಾಚೂ ತಪ್ಪದೆ ಜನತೆಯ ಆರೋಗ್ಯ ಕಾಪಾಡುವ ಎಲ್ಲಾ ಸೇವೆಗಳನ್ನು ಮಾಡುತ್ತಿದ್ದಾರೆಯೇ ಎಂಬುದನ್ನು ಮಂತ್ರಿಗಳು ಅರಿತರೆ ಒಳ್ಳೆಯದು. ಅನೇಕ ಕಡೆ ಆಸ್ಪತ್ರೆಗಳೇ ಇಲ್ಲ. ಇದ್ದರೆ ಡಾಕ್ಟರ್ ಇಲ್ಲ, ಇರಬೇಕಾದ ಸಿಬ್ಬಂದಿ ಇಲ್ಲ, ಇದ್ದರೆ ಆಸ್ಪತ್ರೆಗಳಲ್ಲಿ ರೋಗಿಗಳಿಗೆ, ಅಪಘಾತಕ್ಕೀಡಾದವರಿಗೆ ಸಿಗುವದೇ ಇಲ್ಲ, ಔಷಧ ಗುಳಿಗೆಗಳಿಲ್ಲ. ಬಂದ ರೋಗಿಗಳಿಗೆ ಉಪಚಾರವಿಲ್ಲ, ವಾಹನಗಳಿಲ್ಲ, ವಾಹನಗಳಿದ್ದರೆ ಎಣ್ಣೆ ಇಲ್ಲ, ಎರಡೂ ಇದ್ದರೆ ಚಾಲಕನಿಲ್ಲ, ಎಲ್ಲವೂ ಇದ್ದರೆ ವಾಹನ ರಿಪೇರಿಯಲ್ಲಿರುತ್ತದೆ. ಬಡರೋಗಿಗಳು ಬಂದರೆ ಅವರಿಗೆ ಔಷಧ ಗುಳಿಗೆ ಇಂಜಕ್ಷನ್ ಟೂಬ್ ಇಲ್ಲದೆ ಹಣವಿಲ್ಲದ ಬಡವ ಹಣ ಕೊಟ್ಟು ಅಂಗಡಿಯಿಂದ ಹೇಗೆ ತರಬೇಕು? ಹೆರಿಗೆ ಆಸ್ಪತ್ರೆ ಇದ್ದರೆ ಅದು ಯಾವಾಗಲೂ ರಿಪೇರಿ, ಮಹಿಳಾ ವೈದ್ಯರಿರುವದಿಲ್ಲ ಯಾವದಾದರೂ ಮಹಿಳಾ ಡಾಕ್ಟರರನ್ನು ಹಾಕಿದರೆ ಆರು ತಿಂಗಳು ವರ್ಷಗಂಟಲೆ ಕುಂಟುನೆಪದ ಮೇಲೆ ರಜಾ ಹಾಕಿ ಹೆರಿಗೆ ಆಸ್ಪತ್ರೆಗಳಲ್ಲಿ ಡಾಕ್ಟರರಿಲ್ಲದೆ ಹೆರಿಗೆಗೆ ಬಂದ ಹೆಣ್ಣು ಮಕ್ಕಳ ಪಾಡಂತೂ ಹೇಳತೀರದಷ್ಟು ಕಂಡುಬರುವ ಸಾಕಷ್ಟು ಉದಾಹರಣೆಗಳಿವೆ. ರಾಜ್ಯದ ಎಲ್ಲಾ ಆಸ್ಪತ್ರೆಗಳಿಗೆ ಇಡೀ ವರ್ಷ ಬೇಕಾಗುವ ಸಾಕಷ್ಟು ಔಷಧ ಖರೀದಿ ಇಲ್ಲ, ಪುರವಣಿ ಇಲ್ಲ. ಆಸ್ಪತ್ರೆಗಳಲ್ಲಿ ಔಷಧಿ ಗುಳಿಗೆ ಟ್ಯೂಬ್‌ಗಳಿಲ್ಲದೆ, ಅವ್ಯವಸ್ಥೆಯ ಕೊಂಪೆಯಾಗಿದೆ. ರೋಗಿಗಳಿಗೆ ಉಪಚಾರವಾಗುವ ಬದಲು 97-98ರಲ್ಲಿ 731.82 ಕೋಟಿ, 98-99ರಲ್ಲಿ 718.29 ಕೋಟಿ, 99-2000ರಲ್ಲಿ 714.03 ಕೋಟಿ, 2000-2001ರಲ್ಲಿ 711.63 ಕೋಟಿ ಹೀಗೆ ಅಂದಾಜು ವೆಚ್ಚವನ್ನು ಸತತವಾಗಿ ಕಡಿಮೆ ಮಾಡುತ್ತ ಪ್ರತಿವರ್ಷ ಅದನ್ನು ಕೂಡ ಸಂಪೂರ್ಣವಾಗಿ ವೆಚ್ಚಮಾಡದೆ ಹೋದರೆ ಇದು ಪಾಳೆಗಾರರ ಸರಕಾರವೇ ಎಂದು ಪ್ರಶ್ನಿಸಬೇಕಾಗುತ್ತದೆ. ಅದನ್ನೀಗ ಪ್ರಜಾಪ್ರಭುತ್ವದಲ್ಲಿ ನೆನಪಿಸಿಕೊಂಡು ಗ್ರಾಮೀಣ ಅಭಿವೃದ್ಧಿ ಬಜೆಟ್ 13165 ಸಿಬ್ಬಂದಿ ಸಾಕಲಿಕ್ಕೆ ಇದೆಯೇ? ಅಥವಾ 3.11 ಕೋಟಿ ಮೀರಿದ ಗ್ರಾಮೀಣ ಜನತೆಯನ್ನು ಸಂರಕ್ಷಿಸಲಿಕ್ಕೆ ಹಾಗೂ ಸರ್ವಾಂಗೀಣ ಅಭಿವೃದ್ಧಿಗೊಳಿಸಲಿಕ್ಕೆ ಇದೆಯೇ?

ಸಿಎಜಿಯ ಅಧಿಕೃತ ವರದಿಯ ಪ್ರಕಾರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳಿಗೆ ತೆಗೆದಿಟ್ಟ ಹಣ 536.48 ಕೋಟಿ, ವಾಸ್ತವಿಕವಾಗಿ ವೆಚ್ಚ ಮಾಡಿದ ಹಣ 349.88 ಕೋಟಿ, ವೆಚ್ಚ ಮಾಡದೆ ಉಳಿಸಿದ ಹಣ 286.60 ಕೋಟಿ, ಈ ದುರ್ದೈವಿ ಗ್ರಾಮೀಣ ಅಭಿವೃದ್ಧಿಗೆ ಬಳಸದೆ ಉಳಿಸಿದ ಹಣ 94-95ರಲ್ಲಿ 185.52 ಕೋಟಿ, 95-96ರಲ್ಲಿ 306.29 ಕೋಟಿ, 96-97ರಲ್ಲಿ 323.68 ಕೋಟಿ, 97-98ರಲ್ಲಿ 359.39 ಕೋಟಿ, 98-99ರಲ್ಲಿ 286.60 ಕೋಟಿ. ಹೀಗೆ 9,495 ರಿಂದ 98-99ರ ವರೆಗಿನ 5 ವರ್ಷದ ಅವಧಿಯಲ್ಲಿ ಬಜೆಟ್ ಪ್ರಕಾರ ವೆಚ್ಚಮಾಡದೆ ಉಳಿಸಿದ ಹಣ 1,461,48 ಕೋಟಿ, ಸೂತ್ರಗಳಿಗನುಗುಣವಾಗಿ 92-93 ರಿಂದ 98-99ರ ವರೆಗೆ ವಿಶೇಷ ಘಟಕ ಯೋಜನೆಯಲ್ಲಿ 3,967 ಕೋಟಿ, ಹಣವನ್ನು ತೊಡಗಿಸಬೇಕಾಗಿತ್ತಾದರೂ ಕೇವಲ 2,396 ಕೋಟಿ ಹಣವನ್ನು ತೊಡಗಿಸಿ ಅದರಲ್ಲಿಯೂ ಕೇವಲ 2,088.00 ಕೋಟಿ ಹಣವನ್ನು ವೆಚ್ಚಮಾಡದೆ ಅಧಿಕಾರಿಗಳು ತಮ್ಮ ಪಿಡಿ ಲೆಕ್ಕದಲ್ಲಿಟ್ಟ ಬಗ್ಗೆ ಸಹ ಉಲ್ಲೇಖಗಳಿವೆ. ರಾಜ್ಯ ಸರಕಾರದ ವರದಿಯ ಪ್ರಕಾರ ಇಂದಿರಾ ಅವಾಜ್, ಡಿಪಿಎಪಿ, ಉದ್ಯೋಗ ಭರವಸೆ, ಮರುಭೂಮಿ ಅಭಿವೃದ್ಧಿ, ಪಶ್ಚಿಮಘಟ್ಟ ಅಭಿವೃದ್ಧಿ, ಹೊಗೆ ರಹಿತ ಚೂಲಾ, ಕೈಪಂಪು, ಕೊಳವೆ ಭಾವಿ, ನಿರ್ಮಲ - ಗ್ರಾಮ, ಈ ಮಹತ್ವಪೂರ್ಣ ಯೋಜನಗಳಿಗೆ 1-4-1994 ರಿಂದ 20-2-2002ರ ವರೆಗಿನ ಅವಧಿಯಲ್ಲಿ 1,945.36 ಕೋಟಿ, ಆರ್ಥಿಕ ಗುರಿಯಲ್ಲಿ 1,534.69 ಕೋಟಿ ಮಾತ್ರ ವೆಚ್ಚ ಮಾಡಿ ಸಾಧನೆಯನ್ನು ಕಡಿಮೆಗೊಳಿಸಿ 410.97 ಕೋಟಿ ಮೊತ್ತವನ್ನು ವೆಚ್ಚ ಮಾಡದೆ ಬಿಟ್ಟು ಗ್ರಾಮೀಣ ಅಭಿವೃದ್ಧಿ ಹಾಗೂ ಬಡತನ ನಿರ್ಮೂಲನ ಮಾಡುವಲ್ಲಿ ಸರಕಾರ ವಿಫಲಗೊಂಡಿದ್ದು ಅಭಿವೃದ್ಧಿ ಯೋಜನೆಗಳ ಅನುಷ್ಠಾನ ಜಾರಿ, ಅಧಿಕಾರಿಗಳ ಮೇಲೆ ಸರಕಾರದ ಹಿಡಿತವೇ ಇಲ್ಲವೆಂಬುದು ಸುಸ್ಪಷ್ಟವಿದೆ. ಅಧಿಕೃತ ಮಾಹಿತಿ ಪ್ರಕಾರ 95-96 ರಿಂದ 99-2000 ವರೆಗಿನ ಐದು ವರ್ಷದ ಅವಧಿಯಲ್ಲಿ ರಾಜ್ಯಾದ್ಯಂತ 3,36,633 ಮನೆಗಳನ್ನು ವಸತಿಹೀನರಿಗೆ ಕಟ್ಟಿಸುವ ಗುರಿ ಇತ್ತಾದರೂ ಇದರಲ್ಲಿ ಕೇವಲ 1,73,066 ಮನೆಗಳನ್ನು ಕಟ್ಟಿಸಿದ್ದು 1,63,567 ಮನೆಗಳನ್ನು ಕಟ್ಟಿಸಲಿಕ್ಕೆ ಆಗಿಲ್ಲ. ರಾಜ್ಯದಲ್ಲಿ 1995 ಸರ್ವೆ ಪ್ರಕಾರ 11.53 ಲಕ್ಷ ಜನ ನಿವೇಶನ ರಹಿತರಿದ್ದಾರೆ.

ಇದರ ದುಷ್ಪರಿಣಾಮ ರಾಜ್ಯದ ಗ್ರಾಮೀಣ ಅಭಿವೃದ್ಧಿಯ ಸರ್ವಾಂಗೀಣ ಹಿನ್ನೆಡೆ ಹಾಗು ದುರ್ಗತಿಯು ನಿರುದ್ಯೋಗಿ ಗ್ರಾಮೀಣ ಬಡ ಜನತೆಗೆ ಗಂಡಾಂತರಕಾರಿ. ಇದು ಹೀಗೆಯೇ ಮುಂದುವರಿದರೆ ನಮಗೆ ಸಿಕ್ಕ ಸ್ವಾತಂತ್ರ್ಯ ಹಾಗೂ ಪ್ರಜಾತಂತ್ರ ವ್ಯವಸ್ಥೆಯ ಸದುಪಯೋಗವಾದರೂ ಏನು? ವಿವಿಧ ಹಂತದ ಚುನಾಯಿತ ಪ್ರಜಾಪ್ರತಿನಿಧಿಗಳ ಹಾಗೂ ಮಂತ್ರಿಗಳ ಪ್ರಯೋಜನವಾದರೂ ಏನು? ಶಾಸಕರಾದವರು ಬಜೆಟಿಗೆ ಸಂಬಂಧಿಸಿದ ಹಾಗೂ ಶಾಸಕಾಂಗವು ಶಾಸಕರಿಗೆ ಒದಗಿಸುವ ಎಲ್ಲಾ ದಾಖಲೆ

ಸಾಹಿತ್ಯಗಳನ್ನು ಅಧ್ಯಯನ ಮಾಡಿ ಲೋಪದೋಷ, ಚ್ಯುತಿ, ಮೋಸ, ವಂಚನೆಗಳನ್ನು ತಿಳಿದುಕೊಂಡು ಈ ರೋಗ ಮಾರಕಗಳು ಮರುಕಳಿಸದಂತೆ ಸರಕಾರಕ್ಕೆ ಅಧಿಕಾರಿಗಳಿಗೆ ಎಚ್ಚರಿಕೆ ಕೊಟ್ಟು ಪರಿಸ್ಥಿತಿಯನ್ನು ಸುಧಾರಿಸದೆ ಹೋದರೆ ಹಾಗೂ ಈ ದಿಶೆಯಲ್ಲಿ ತಮ್ಮ ಅಮೂಲ್ಯವಾದ ವೇಳೆಯಲ್ಲಿ ಉಪಯೋಗಿಸದೆ ದಾರುಣ ಹಾಗೂ ಮಾರಕ ಪರಿಸ್ಥಿತಿಯೇ ಮುಂದುವರೆಯಲಿಕ್ಕೆ ಆಸ್ಪದ ಮಾಡಿಕೊಟ್ಟರೆ ಮುಗ್ಧ ಜನತೆಗೆ ಮಾರಿಗಳಾಗಿ "ಕೊಡಲೀ ಕಾವು ಕುಲಕ್ಕೆ ಮೃತ್ಯು" ಎಂಬಂತೆ ಪ್ರಜಾಪ್ರತಿನಿಧಿಗಳೇ ಪ್ರಜಾಪ್ರಭುಗಳಿಗೆ ಕುತ್ತು ಹಾಗೂ ಮೃತ್ಯು ಎಂಬಂತಾಗಿ ಪ್ರಜಾತಂತ್ರ ವ್ಯವಸ್ಥೆಯು ಬಗ್ಗೆ ಅಪನಂಬಿಕೆ ಅವಿಶ್ವಾಸ ಉಂಟಾಗುವದರಲ್ಲಿ ಸಂಶಯವಿಲ್ಲ. ಈ ಹಿನ್ನಲೆಯಲ್ಲಿ ಎಲ್ಲಾ ಪ್ರಜಾಪ್ರತಿನಿಧಿಗಳು ಆತ್ಮಾವಲೋಕವ್ನ ಮಾಡಿಕೊಳ್ಳುವುದು ಒಳ್ಳೆಯದು.

❑

ಸಂವಿಧಾನ ಬದ್ಧ ಮಾಹಿತಿ ಹಕ್ಕು

ಆಗಸ್ಟ್ 15, 1947ರಂದು ನಮ್ಮ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದೆ. ಭಾರತ ಸಂವಿಧಾನಿಕ ಅಸ್ತಿತ್ವದಲ್ಲಿ ಸಾರ್ವಭೌಮ ಸಮಾಜವಾದಿ ಜಾತ್ಯಾತೀತ ಪ್ರಜಾತಂತ್ರ ಗಣರಾಜ್ಯ ವ್ಯವಸ್ಥೆ ಮುನ್ನಡೆದಿದೆ. 1952ರಿಂದ ಸಂವಿಧಾನಬದ್ಧ ಲೋಕಸಭೆ, ವಿಧಾನ ಸಭೆಗಳಿಗೆ ಚುನಾವಣೆಗಳು ನಡೆದು ಕೇಂದ್ರ ಹಾಗೂ ರಾಜ್ಯ ಸರಕಾರಗಳು ಈ ದೇಶದ ಆಡಳಿತವನ್ನು ನಡೆಸುತ್ತಲಿವೆ. ನಾಗರಿಕ ಪ್ರಜೆಗಳೇ ಈ ದೇಶದ ಪ್ರಭುಗಳು, ಈ ಪ್ರಭುಗಳು ತಮ್ಮ ಚುನಾಯಿತ ಪ್ರತಿನಿಧಿಗಳ ಮುಖಾಂತರ ವಿವಿಧ ಹಂತದ ಪಂಚಾಯತಿ, ರಾಜ್ಯ ಸರಕಾರ ಹಾಗೂ ಕೇಂದ್ರ ಸರಕಾರದ ಆಡಳಿತ ನಡೆಸುತ್ತಿದ್ದಾರೆ. ಈ ದೇಶದ ನಾಡ ಪ್ರಭು ನಾಗರಿಕರಿಗೆ ಸಂವಿಧಾನಕ್ಕನುಗುಣವಾದ ಕೆಲವು ಕರ್ತವ್ಯಗಳು ಇವೆ ಹಾಗೂ ಹಕ್ಕುಗಳೂ ಇವೆ. ಸಂವಿಧಾನದ ಆರ್ಟಿಕಲ್ 19(1)(ಎ) ಪ್ರಕಾರ ಪ್ರತಿಯೊಬ್ಬ ನಾಗರಿಕನಿಗೆ ಭಾಷಣ ಸ್ವಾತಂತ್ರ್ಯ ಹಾಗೂ ಶಬ್ದ ಪ್ರಯೋಗ ಸ್ವಾತಂತ್ರ್ಯ ಬಹು ಮುಖ್ಯವಾಗಿದೆ. ನಾಗರಿಕರು ಭಾಷಣ ಮಾಡುವಲ್ಲಿಯಾಗಲಿ, ಶಬ್ದ ಪ್ರಯೋಗ ಮಾಡುವಲ್ಲಿಯಾಗಲೀ, ಲೇಖನ ಬರೆಯವಲ್ಲಿ ಆಗಲೀ, ಲೇಖನ ಪ್ರಕಟಿಸುವಲ್ಲಿಯಾಗಲೀ ಅಗತ್ಯವಾದ ಮಾಹಿತಿಯನ್ನು ಸರಕಾರ, ಸರಕಾರ ನಿರ್ಮಿತ ಸಂಸ್ಥೆ, ಇಲಾಖೆ ಹಾಗೂ ಏಜನ್ಸಿಗಳ ಚಟುವಟಿಕೆಗಳ ಬಗ್ಗೆ ತಿಳಿದುಕೊಳ್ಳುವ ಹಕ್ಕು ಕೂಡ ಪಡೆದಿದ್ದಾರೆ. ನಾಗರಿಕರ ಈ ವ್ಯಾಪ್ತಿಯಲ್ಲಿ ವೃತ್ತ ಪತ್ರಿಕೆಗಳು ಮಾಲೀಕರು, ಸಂಪಾದಕರು, ಬರಹಗಾರರು, ಪ್ರಕಾಶಕರು ಕೂಡ ಸೇರುತ್ತಾರೆ. ನಿರ್ದಿಷ್ಟ ಧೋರಣೆಯಂತೆ ಸರಕಾರಗಳು ವೃತ್ತ ಪತ್ರಿಕೆಗಳಿಗೆ ಜಾಹಿರಾತುಗಳನ್ನು ಕೂಡ ಕೊಡಬೇಕಾಗುತ್ತದೆ. ಭಾಷಣ ಹಾಗೂ ಶಬ್ದ ಪ್ರಯೋಗ ಸ್ವಾತಂತ್ರ್ಯ ಪರಿಣಾಮಕಾರಿಯಾಗಿ ಕಾರ್ಯಕಾರಿಯಾಗಬೇಕಾದರೆ ಸರಕಾರ ಹಾಗೂ ಸರಕಾರಿ ಅಂಗಗಳಿಂದ ಅವುಗಳ ಚಟುವಟಿಕೆಗಳ ಬಗೆಗಿನ ಆಡಳಿತ ಹಾಗೂ ಅಭಿವೃದ್ದಿಗೆ ಸಂಬಂಧಿಸಿದ ರಾಷ್ಟ್ರೀಯ ಭದ್ರತೆ ಹಾಗೂ ರಾಷ್ಟ್ರೀಯ ಸಮಗ್ರತೆಗೆ ಸಂಬಂಧಿಸಿದ ವಿಷಯ ಹೊರತುಪಡಿಸಿ ಎಲ್ಲಾ ಮಾಹಿತಿ ಪಡೆಯಲೇಬೇಕಾಗುತ್ತದೆ. ಸರಕಾರ ಹಾಗೂ ಸರಕಾರಿ ಏಜೆಂಟ್ ವ ಪಾರುಪತ್ತೆಗಳು ಆಗಾಗ್ಗೆ ತಮ್ಮ ಪ್ರಚಾರಕ್ಕಾಗಲೀ ಸಾರ್ವಜನಿಕ ಹಿತಕ್ಕೆ ಮೀಸಲಾದ ಧ್ಯೇಯ ಧೋರಣೆಯ ಯೋಜನೆ ಕಾರ್ಯ

ಚಟುವಟಿಕೆಗಳ ಬಗ್ಗೆ, ಹೇಳಿಕೆಗಳನ್ನು ಸುದ್ದಿ ಮಾಧ್ಯಮಗಳ ಮುಖಾಂತರವಾಗಲೀ ಸುತ್ತೋಲೆ, ಆಜ್ಞೆಗಳ ಮುಖಾಂತರವಾಗಲೀ ತಮಗೆ ಅನುಕೂಲವಿದ್ದವುಗಳನ್ನು ಮಾತ್ರ ಕೊಡುವ ಸಂಪ್ರದಾಯವಿದೆ. ಈ ಬಗ್ಗೆ ಸರಕಾರ ವ ಏಜೆಂಟರು, ಜಾಹೀರಾತುಗಳ ಮುಖಾಂತರ ವಿವಿಧ ಪತ್ರಿಕೆಗಳಿಗೆ ಕೊಡುವ ಪರಿಪಾಠವು ಉಂಟು. ಸರಕಾರಗಳನ್ನು ಹೊಗಳುವ ಪತ್ರಿಕೆಗಳಿಗೆ ಹೆಚ್ಚಿನ ಮೊತ್ತದ ಜಾಹಿರಾತುಗಳನ್ನು, ಸರಕಾರಗಳನ್ನು ಪ್ರಸಂಗಾನುಸಾರವಾಗಿ ಹೊಗಳುವ ಹಾಗೂ ತೆಗಳುವ ಪತ್ರಿಕೆಗಳಿಗೆ ಕಡಿಮೆ ಮೊತ್ತದ ಜಾಹೀರಾತುಗಳನ್ನು ಕೊಡುವದೂ ಉಂಟು. ಹಾಗೆಯೇ ಕಟುವಾಗಿ ಟೀಕಿಸಿ ಸರಕಾರಕ್ಕೆ ಬುದ್ಧಿ ಹೇಳುವ ಪತ್ರಿಕೆಗಳಿಗೆ ಕೆಲವು ವೇಳೆ ಜಾಹಿರಾತುಗಳನ್ನು ಕೊಡದೆ ಇರುವ ಉದಾಹರಣೆಗಳೂ ಉಂಟು.

ಸರಕಾರಿ ವ ಸರಕಾರಿ ಪಾರುಪತ್ತೆಗಳ ಚಟುವಟಿಕೆಗಳ ಮಾಹಿತಿ ಸರಕಾರಕ್ಕೆ ಪ್ರತಿಕೂಲವಾಗಿದ್ದರೆ ಅಂಥಹ ಮಾಹಿತಿಯಿಂದ ಸರಕಾರಕ್ಕೆ ಕೆಟ್ಟ ಹೆಸರು ಬಂದು ಉಗ್ರಟೀಕೆಗೆ ಗುರಿಯಾಗಬೇಕಾಗಿದ್ದ ಪ್ರಸಂಗದಲ್ಲಿ ನಾಗರಿಕರಿಗೇ ಏಕೆ, ಪತ್ರಿಕೆಗಳಿಗೇ ಏಕೆ, ಶಾಸಕರು ಹಾಗೂ ಸಂಸದರಿಗೆ ಸಹಿತ ಅವರಿಗೆ ಅವರು ಕೇಳಿದ ಯಾವುದೇ ಸಾರ್ವಜನಿಕ ಹಿತಾಸಕ್ತಿ ಮಾಹಿತಿಯನ್ನು ಸರಕಾರ ಕೊಡಲೇಬೇಕೆಂದಿದ್ದರೂ ಅದನ್ನು ಕೊಡದೇ ಇರುವ ಉದಾಹರಣೆ ಕೂಡ ಸಂಸತ್ತು ಶಾಸಕಾಂಗದಲ್ಲಿ ಇವೆ. ವಿಧಾನಸಭೆ ಹಾಗೂ ವಿಧಾನ ಪರಿಷತ್ತು, ಲೋಕಸಭೆ ಹಾಗೂ ರಾಜ್ಯಸಭೆಗೆ ಶಾಸಕರು ಸಂಸದರು ತಮ್ಮ ಹಕ್ಕನ್ನು ಚಲಾಯಿಸಿ ಪ್ರಶ್ನೆಗಳನ್ನು ಹಾಕಿ ಮಾಹಿತಿಯನ್ನು ಕೇಳಿ ಇದಾಗ ಕೂಡ ಮಾಹಿತಿ ಸಿಕಿಲ್ಲವೆಂದು, ಮಾಹಿತಿ ಬಂದಿಲ್ಲವೆಂದು ಕುಂಟು ನೆಪ ಹೇಳಿ ಪ್ರಶ್ನೆಗೆ ಮಾಹಿತಿ ಉತ್ತರ ಕೊಡಲು ಕೆಲದಿನ ಕೆಲವು ವಾರ, ಕೆಲವು ತಿಂಗಳ ಅವಧಿಬೇಕೆಂದು ಮಾಹಿತಿ ಕೊಡದೆ ಅಧಿವೇಶನದ ಅವಧಿ ಮುಗಿದು ಸರಕಾರ ಉತ್ತರಿಸದೆ ಪಾರಾದ ಉದಾಹರಣೆಯೂ ಈ ದೇಶದಲ್ಲಿ ಉಂಟು. ಮಾಹಿತಿ ದೊರಕಿದರೂ ಅದನ್ನು ಸಂಸತ್ತು ಶಾಸಕಾಂಗಕ್ಕೆ ಕೊಡದೆ ಇದ್ದುದೂ ಉಂಟು. ರಾಷ್ಟ್ರದಲ್ಲಿ ಅಧಿವೇಶನ ಮುಗಿದ ಮೇಲೆ ಕೂಡ ಅಧಿವೇಶನದಲ್ಲಿ ಹಾಕಿದ ಪ್ರಶ್ನೆಗಳಿಗೆ ಮಾಹಿತಿ ತರಿಸಿಕೊಂಡು ಅಧಿವೇಶನ ಮುಗಿದ ಮೇಲೆ ಕೂಡ ಮಾಹಿತಿ ಉತ್ತರಗಳನ್ನು ಪ್ರಶ್ನೆ ಹಾಕಿ ಮಾಹಿತಿ ಕೇಳಿದ ಸದಸ್ಯರಿಗೆ ಅವರವರ ಸ್ಥಳಕ್ಕೆ ಕಳುಹಿಸಿಕೊಡುವ ಸತ್‌ಸಂಪ್ರದಾಯ ಕೂಡ ಅಲ್ಲಲ್ಲಿ ಇವೆ. ಸರಕಾರ ಹೊರಡಿಸಿದ ಯಾವುದೇ ಅಧಿಸೂಚನೆ ಆಜ್ಞೆ ಸುತ್ತೋಲೆ ಇತ್ಯಾದಿಗಳ ಪ್ರತಿಗಳನ್ನು ಸರಕಾರವು ಶಾಸಕರಿಗೆ ನೇರವಾಗಿ ಅಥವಾ ವಿಧಾನ ಮಂಡಳದ ಮುಖಾಂತರ ಕಳುಹಿಸಿಕೊಡಬೇಕೆಂಬ ಆದೇಶ ಕೂಡ ಕೆಲವು ರಾಜ್ಯಗಳಲ್ಲಿವೆ. ಜನತಾ ಪ್ರತಿನಿಧಿಗಳು ಸರಕಾರ ಅಥವಾ ಸರಕಾರೀ ಪಾರುಪತ್ತೇದಾರರಿಂದ ಮಾಹಿತಿ ಪಡೆಯುವದು ಹಾಗೂ ಆ ಮಾಹಿತಿಯನ್ನು ದೈನಂದಿನ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಪ್ರಯೋಜನ ಮಾಡಿಕೊಳ್ಳುವದು ಅವರ ಕರ್ತವ್ಯವಾಗಿದೆ.

ಪ್ರಜಾತಂತ್ರ ವ್ಯವಸ್ಥೆಯಲ್ಲಿ ಪ್ರಜಾಪ್ರಭುಗಳಾದ ನಾಗರಿಕರು ಸರಕಾರಗಳಿಗೆ ಪರೋಕ್ಷವಾಗಿ ಹಾಗೂ ಅಪರೋಕ್ಷವಾಗಿ ಕಂದಾಯ ನೀಡುವ ಕರದಾತರು. ಈ ಕರದಾತರ ವಿವಿಧ ಕೊಡುಗೆಯಿಂದಲೇ ಸರಕಾರಗಳ ರೆವಿನ್ಯೂ ಸೇವೆಗಳಿಗೆ ಬಜೆಟ್ ಪ್ರಕಾರ ವೆಚ್ಚಮಾಡಬೇಕಾಗುತ್ತದೆ. ಸರಕಾರಗಳು ಪ್ರಜಾ ಸರಕಾರಗಳು. ಸರಕಾರ ಹಾಗೂ ಸರಕಾರಿ ಏಜೆಂಟ್ ಸಂಸ್ಥೆಗಳಿಂದ ಸಾರ್ವಜನಿಕ ಹಿತಾಸಕ್ತಿಯ ಯಾವುದೇ ಮಾಹಿತಿಯನ್ನು ಪಡೆದು ಭಾಷಣ ಹಾಗೂ ಶಬ್ದ ಪ್ರಯೋಗ ಮಾಡುವ ಹಕ್ಕು ನಾಗರಿಕರಿಗೆ ಇದೆ. ಅಂತೆಯೇ ನಾಗರಿಕರು ಕೇಳಿದ ಮಾಹಿತಿ ಕೊಡುವ ಕರ್ತವ್ಯ ಸರಕಾರಗಳಿದ್ದು ಇದೆ. ಆದರೆ ಈ ಹಕ್ಕು ಹಾಗೂ ಕರ್ತವ್ಯ ಎಷ್ಟರ ಮಟ್ಟಿಗೆ ಇದೆಯೆಂದರೆ ಅದು ನಿರಾಶಾದಾಯಕ. ನಾಗರಿಕರು ಕೊಟ್ಟ ಕರ ಕಂದಾಯದಿಂದ ಸರಕಾರಗಳ ಸಾಮಾನ್ಯ ಸಾಮಾಜಿಕ ಹಾಗೂ ಆರ್ಥಿಕ ಚಟುವಟಿಕೆಗಳು ನಡೆಯುತ್ತಲಿರುವಾಗ ನಾಗರಿಕರ ಅಮೂಲ್ಯವಾದ ಮತಗಳಿಂದ ಚುನಾಯಿತರಾದ ಪ್ರತಿನಿಧಿಗಳಿಂದ ಶಾಸಕಾಂಗ ಹಾಗೂ ಕಾರ್ಯಾಂಗ ನಡೆಯುತ್ತಿರುವಾಗ ಸರಕಾರದ ಯಾವತ್ತೂ ಕಾರ್ಯಚಟುವಟಿಕೆಗಳ ಮಾಹಿತಿಯನ್ನು ನಾಗರಿಕರು ಪಡೆದು ಸರಕಾರಕ್ಕೆ ಸೂಕ್ತ ಸಲಹೆ, ಸೂಚನೆಗಳನ್ನು ಸಮಂಜಸವಾಗದ, ಸಮರ್ಥವಾದ ಆಡಳಿತ ಅಭಿವೃದ್ಧಿ ಹಿತದೃಷ್ಟಿಯಿಂದ ಕೊಡುವದು ಅತ್ಯಗತ್ಯವಿರುವುದರಿಂದ ಸರಕಾರಗಳು, ಶಾಸಕರು, ಸಂಸದರು, ಸಾರ್ವಜನಿಕ ನಾಗರಿಕ ಪ್ರಜೆಗಳು, ಕೇಳಿದ ಮಾಹಿತಿಯನ್ನು ಪ್ರಜಾ ಸರಕಾರಗಳು ಕೊಡಲೇಬೇಕು. ಯಾವುದೇ ಕುಂಟುನೆಪ ಹೇಳಿ ಮಾಹಿತಿ ಕೊಡದೆ ತಪ್ಪಿಸಿಕೊಂಡರೆ ಅದು ಮಾತೃದ್ರೋಹ, ಪ್ರಜಾದ್ರೋಹ ಹಾಗೂ ಪ್ರಜಾಸತ್ತೆಗೆ ಮಹಾ ದ್ರೋಹ. ನಮ್ಮ ರಾಷ್ಟ್ರದಲ್ಲಿ ಕೆಲವು ರಾಜ್ಯ ಸರಕಾರಗಳು ಹನ್ನೆರಡು ತಿಂಗಳ ವಾರ್ಷಿಕ ವರದಿಗಳನ್ನು ಕೊಡದೆ ಪ್ರತಿವರ್ಷ ಒಂಬತ್ತು ಅಥವಾ ಹತ್ತು ತಿಂಗಳ ವಾರ್ಷಿಕ ವರದಿಗಳನ್ನು ಮಾತ್ರ ಕೊಟ್ಟು ಶಾಸಕರ ಹಾಗೂ ಸರ್ವಾಜನಿಕರ ಕಣ್ಣಲ್ಲಿ ಮಣ್ಣು ಉಗ್ಗುವ ಕೆಟ್ಟ ಸಂಪ್ರದಾಯ ನಿರಾತಂಕವಾಗಿ ನಡೆದು ಬಂದ ಉದಾಹರಣೆ ಕೂಡ ಇದೆ. ಸರಕಾರಿ ಏಜಂಟರಾದ ಕೆಲವು ಸಂಘ ಸಂಸ್ಥೆಗಳು ಸರಕಾರೀ ಕೃಪಾ ಪೋಷಿತವಾಗಿದ್ದರೂ ವಾರ್ಷಿಕ ವರದಿ, ಸಾಲ ಚಿಂದಗಿ ಇತ್ಯಾದಿ ಆಥಾವೆ ಪತ್ರಗಳನ್ನೇ ಸದಸ್ಯ ನಾಗರಿಕರಿಗೆ ಪ್ರತಿವರ್ಷ ಕೊಡದ ಉದಾಹರಣೆ ಕೂಡ ಇವೆ. ಸಾಕಷ್ಟು ಸಂಪೂರ್ಣ ಹಾಗೂ ಸಮರ್ಪಕ ಮಾಹಿತಿ ಇರದ ಕಾರಣದಿಂದ ನಾಗರಿಕ ಹಾಗೂ ಜನತಾ ಪ್ರತಿನಿಧಿಗಳ ಉಗ್ರಟೀಕೆಗೆ ಹಾಗೂ ಪ್ರತಿಭಟನೆಗೆ ಹೆದರಿ ಸರಕಾರದ ಹಾಗೂ ಸಂಸ್ಥೆಗಳು ಮಾಹಿತಿ ನೀಡದೆ ತಪ್ಪಿಸಿಕೊಳ್ಳುತ್ತಿರುವುದು ಅವರಿಗೆ ಅನಿವಾರ್ಯವಾಗಿದೆ. ಇನ್ನಾದರೂ ಸರಕಾರಗಳು ತಮ್ಮ ಹಾಗೂ ತಮ್ಮ ಪಾರುಪತ್ತೆದಾರ ಏಜಂಟ್ ಇಲಾಖೆ ಹಾಗೂ ಸಂಘ ಸಂಸ್ಥೆಗಳ ಆಡಳಿತ ಅಭಿವೃದ್ಧಿ ಹಾಗೂ ಚಟುವಟಿಕೆಗಳಿಗೆ ಸಂಬಂಧಿಸಿದ ಯಾವುದೇ ಮಾಹಿತಿಯನ್ನು ನಾಗರಿಕರು ಕೇಳಿದಾಗ ಒದಗಿಸುವ ಕರ್ತವ್ಯವನ್ನು ಕಾರ್ಯಗತಮಾಡುವ ಬಗ್ಗೆ ಸೂಕ್ತ ಏರ್ಪಾಡು ಮಾಡಿದರೆ ಅದು ಪ್ರಜಾತಂತ್ರ ವ್ಯವಸ್ಥೆಗೆ ಸಂದ ಗೌರವ. ಇಲ್ಲವಾದರೆ ಇದು ಪಾಳೇಗಾರಿಕೆ

ಸರ್ವಾಧಿಕಾರದತ್ತ ಸಾಗಿದ ಪ್ರಜಾತಂತ್ರ ಅರ್ಥಹೀನ ವ್ಯವಸ್ಥೆಯೆಂದು ಹೇಳುವದು ಅನಿವಾರ್ಯವಾದೀತು. ಸುದೈವದಿಂದ ಶ್ರೀ ಎಸ್.ಎಂ. ಕೃಷ್ಣರವರ ಮುಖಂಡತ್ವದಲ್ಲಿರುವ ಕರ್ನಾಟಕ ಸರಕಾರ ಮಾಹಿತಿ ಹಕ್ಕು ವಿದೇಯಕವನ್ನು ತಯಾರಿಸಿ ಅದನ್ನು ಸುಗ್ರೀವಾಜ್ಞೆ ಹೊರಡಿಸುವ ಮೂಲಕ ಅಥವಾ ಮುಂದಿನ ವಿಧಾನ ಮಂಡಳದ ಅಧಿವೇಶನದಲ್ಲಿ ಮಂಡಿಸಿ ಅಂಗೀಕಾರ ಪಡೆದು ಅಧಿನಿಯಮವನ್ನು ಜಾರಿಗೊಳಿಸಿ ಕೆಲವು ವಿಶೇಷ ಸಂದರ್ಭವನ್ನು ಹೊರತುಪಡಿಸಿ ಸಾರ್ವಜನಿಕರಿಗೆ ಮಾಹಿತಿ ಒದಗಿಸುವ ಬಗ್ಗೆ ಮುಂದಾಗಿರುವದು ಸ್ತುತ್ಯ ಹಾಗೂ ಅಭಿನಂದನೀಯವಾಗಿದ್ದು, ಈ ಬಗೆಗಿನ ಸುಗ್ರೀವಾಜ್ಞೆ ಅಥವಾ ಅಧಿನಿಯಮ ಜಾರಿಗೊಂಡರೆ ಸಾರ್ವಜನಿಕರು ಸರಕಾರಕ್ಕೆ ಚಿರಋಣಿ.

❑

ರಾಜ್ಯ ಸರಕಾರಿ ಆಡಳಿತ ಯಂತ್ರಗಳ ವೈಫಲ್ಯ : ರಾಜ್ಯಪಾಲರ ಕರ್ತವ್ಯ

ಭಾರತ ಸಂವಿಧಾನಕ್ಕನುಸಾರವಾಗಿ ಭಾರತ ಸರಕಾರ ಹಾಗೂ ಭಾರತ - ಸಂಸತ್ತು, ರಾಜ್ಯ ಸರಕಾರ ಹಾಗೂ ರಾಜ್ಯ ವಿಧಾನ ಮಂಡಲಗಳು, ಕಾನೂನು ಬದ್ಧ ಸ್ಥಳೀಯ ಸಂಸ್ಥೆ ನಿಯಂತ್ರಣಕ್ಕೊಳಪಟ್ಟವು. ಹಾಗೂ ಇತರ ಪ್ರಾಧಿಕಾರಗಳನ್ನು "ರಾಜ್ಯ" ಒಳಗೊಂಡಿರುತ್ತದೆ. ಸಂಸತ್ತು ಭಾರತ ವ ಕೇಂದ್ರಕ್ಕೆ ಸಂಬಂಧಿಸಿದಂತೆ ಲಕ್ಷಾಂತರ ಕೋಟಿ ಹಣದ ಆಯವ್ಯಯಕ್ಕೆ ಅಂಗೀಕಾರ ಕೊಟ್ಟು ಈ ಆಯವ್ಯಯದ ಉಸ್ತುವಾರಿಯನ್ನು ಕೇಂದ್ರ ಸರಕಾರಕ್ಕೆ ಕೊಡುತ್ತದೆ. ಅಂತೆಯೇ ರಾಜ್ಯಗಳ ವಿಧಾನ ಮಂಡಲಗಳು ಸಹಸ್ರಾರು ಕೋಟಿ ಹಣದ ಆಯವ್ಯಯಕ್ಕೆ ಅಂಗೀಕಾರ ಕೊಟ್ಟು ಆಯವ್ಯಯ ಮಾಡುವ ಅಧಿಕಾರವನ್ನು ರಾಜ್ಯಗಳ ಸರಕಾರಕ್ಕೆ ಕೊಡುತ್ತವೆ. ರಾಜ್ಯ ಸರಕಾರಗಳು ಬಜೆಟ್ ಪ್ರಕಾರ ದೊರಕಿಸಿಕೊಂಡ ಹಣವನ್ನು ಬಜೆಟ್ ಪ್ರಕಾರ ಸಾಮಾನ್ಯ, ಸಾಮಾಜಿಕ ಹಾಗೂ ಆರ್ಥಿಕ ಸೇವೆಗಳಿಗೆ ಸರಕಾರಗಳ ಏಜನ್ಸಿಗಳಾದ ಸರಕಾರಿ ಇಲಾಖೆಗಳ ಮುಖಾಂತರ, ಸಂವಿಧಾನ ಬದ್ಧವಾಗಿ ರಚಿತವಾದ ವಿವಿಧ ಅಧಿನಿಯಮಗಳ ಪ್ರಕಾರ ರಚಿತವಾದ ಪ್ರತಿಯೊಂದು ಸಂಘ, ಸಂಸ್ಥೆ, ಸಹಕಾರಿ ಸಂಸ್ಥೆ, ಟ್ರಸ್ಟ್, ಪ್ರಾಧಿಕಾರ, ಪಾಲಿಕೆ, ಸಮಿತಿ, ಸಭೆ, ನಿಗಮ ಇತ್ಯಾದಿಗಳಿಗೆ ಅಥವಾ ಇತ್ಯಾದಿಗಳ ಮುಖಾಂತರ ಪ್ರತಿವರ್ಷ ವೆಚ್ಚಮಾಡುತ್ತ ರಾಜ್ಯಕ್ಕೆ ಸುಭದ್ರ, ಸಮರ್ಥ, ಸಮರ್ಪಕ ಆಡಳಿತ ಹಾಗೂ ಸರ್ವಾಂಗೀಣ ಅಭಿವೃದ್ಧಿಕೊಟ್ಟು ರಾಜ್ಯಾದ್ಯಂತ ಕಾನೂನು ಸುವ್ಯವಸ್ಥೆ, ಶಾಂತಿ, ಸುಖ, ಸಂಪತ್ತು ನೆಮ್ಮದಿ, ಏಕತೆ, ಸಾಮರಸ್ಯತೆ, ಭ್ರಾತೃತ್ವ, ಸಹಕಾರ, ಜಾತ್ಯಾತೀತತೆ ನೆಲೆಗೊಳಿಸಿ ಸ್ವಾರ್ಥ, ಜಾತಿಯತೆ, ಪಕ್ಷಪಾತ, ಸ್ವಜನ ಪಕ್ಷಪಾತ, ದುರಾಡಳಿತ, ಅಧಿಕಾರ ದುರುಪಯೋಗ ಹಾಗೂ ಭ್ರಷ್ಟಾಚಾರ ರಹಿತ ಆಡಳಿತವನ್ನೊದಗಿಸಿ ನಿಗದಿತ ಆರ್ಥಿಕ, ಭೌತಿಕ ಗುರಿ ಪ್ರತಿವರ್ಷ ಸಾಧಿಸುತ್ತ ಕಾನೂನು ಸುವವ್ಯಸ್ಥೆ ಹದಗೆಡಿಸದೆ ಸುಖಿ ಸಮೃದ್ಧಿಯ ಗಾಂಧೀಜಿ ಕನಸಿನ ರಾಮರಾಜ್ಯವನ್ನು ನನಸಾಗಿ ಮಾಡಿ ಪ್ರಜಾತಂತ್ರ ವ್ಯವಸ್ಥೆಯನ್ನು ದೇಶಾದ್ಯಂದ

ಸುವ್ಯವಸ್ಥಿತಗೊಳಿಸಬೇಕಾಗುತ್ತವೆ. ಇದೆಲ್ಲವೂ ಆಯಾ ರಾಜ್ಯ ಸರಕಾರಗಳು ಮಾಡಲೇ ಬೇಕಾದ ಆದ್ಯ ಕರ್ತವ್ಯ. ಮೇಲ್ಕಂಡ ಸರಕಾರದ ಎಲ್ಲಾ ಏಜನ್ಸಿಗಳು ಸಹ ತಮ್ಮ ತಮ್ಮ ಕರ್ತವ್ಯಗಳನ್ನು ಮಾಡಲೇಬೇಕಾಗಿದ್ದು, ಅವೆಲ್ಲಾ ದಕ್ಷ ಹಾಗೂ ಸಮರ್ಥವಾಗಿ ಕಾರ್ಯನಿರ್ವಹಿಸುವಂತೆ ನೋಡತಕ್ಕದ್ದು ಹಾಗೂ ನಿಗಾ ವಹಿಸತಕ್ಕದ್ದು. ಸರಕಾರ ಹಾಗೂ ರಾಜ್ಯ ವಿಧಾನ ಮಂಡಲಗಳ ಆದ್ಯಕರ್ತವ್ಯವೂ ಆಗಿದೆ. ಸರಕಾರ ಹಾಗೂ ಸರಕಾರಿ ಏಜನ್ಸಿಗಳ ಕರ್ತವ್ಯ ಹಾಗೂ ಕರ್ತವ್ಯಚ್ಯುತಿ ತಾರಕ ಮಾರಕಗಳ ಬಗ್ಗೆ ವಿಧಾನ ಮಂಡಲ ಗಣನೆಗೆ ತೆಗೆದುಕೊಂಡು ಹೊಗಳಿಕೆ, ತೆಗಳಿಕೆ, ಖಂಡನೆ, ಟೀಕೆ, ಛೀಮಾರಿ ಕೂಡ ಹಾಕಿ ಸೂಕ್ತವಾದ ಸಲಹೆ ಸೂಚನೆಗಳನ್ನು ಕೊಡಬೇಕಾಗುತ್ತದೆ. ಯಾವುದೇ ಸರಕಾರ ತಾನಾಗಲೀ ತನ್ನ ಏಜನ್ಸಿಗಳಾಗಲೀ ಸಮರ್ಪಕವಾಗಿ ಕಾರ್ಯ ನಿರ್ವಹಿಸದೆ ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗೊಳಿಸದೆ ಆಡಳಿತವನ್ನು ಹದಗೆಡಿಸಿ ಧರ್ಮಕಾರಣಿಗಳು, ರಾಜ್ಯಕಾರಣಿಗಳು ಹಾಗೂ ಕ್ರಿಮಿನಲ್‌ಗಳ ಅಪವಿತ್ರ ಮೈತ್ರಿ ಹೊಂದಾಣಿಕೆಯಿಂದ ಅರಾಜಕತೆ, ಅಶಾಂತಿ, ಶಿಷ್ಟರಿಗೆ ರಕ್ಷಣೆ ಇಲ್ಲದೆ ದುಷ್ಟರಿಗೆ ರಕ್ಷಣೆ, ಆರ್ಥಿಕ ದಿವಾಳಿ ಇತ್ಯಾದಿ ಮಾರಕಗಳಿಗೆ ಆಸ್ಪದ ಕೊಟ್ಟು ವಿಫಲಗೊಂಡಾಗ ಆ ರಾಜ್ಯ ಸರಕಾರದ ಮೇಲೆ ವಿಧಾನ ಮಂಡಳದಲ್ಲಿ ಅವಿಶ್ವಾಸ ಮಂಡನೆ ಮಾಡಿ ಜನತೆಗೆ ಹಾಗೂ ಶಾಸಕರಿಗೆ ಮನದಟ್ಟು ಮಾಡಿಕೊಟ್ಟು ಅವರ ಬೆಂಬಲ ಪಡೆದು ಅವಿಶ್ವಾಸ ಠರಾವನ್ನು ಅಂಗೀಕಾರಮಾಡಿಸಿಕೊಂಡು ಸರಕಾರವನ್ನು ಹೊರಹಾಕಬೇಕಾಗುತ್ತದೆ. ಹೊಸ ಸರಕಾರ ಸ್ಥಾಪಿಸಲು ಸಾಧ್ಯವಾಗದೇ ಇದ್ದಾಗ ಶಾಸನ ಸಭೆಯ ಒಳಗಿನ ಅಧಿಕೃತ ವಿರೋಧ ಪಕ್ಷಗಳು ಹಾಗೂ ಹೊರಗಿನ ಅಧಿಕೃತ ರಾಜಕೀಯ ವಿರೋಧ ಪಕ್ಷಗಳು ರಾಜ್ಯದ ರಾಜ್ಯಪಾಲರನ್ನು ಕಂಡು ರಾಜ್ಯದಲ್ಲಿಯ ಸಂವಿಧಾನಬದ್ಧ ಆಡಳಿತ ಯಂತ್ರ (ಕಾನ್‌ಸ್ಟಿಟ್ಯೂಶನಲ್ ಮಿಶಿನರಿ ಇನ್ ಸ್ಟೇಟ್) ವಾದ ರಾಜ್ಯ ಸರಕಾರ ಹಾಗೂ ರಾಜ್ಯ ಸರಕಾರಗಳ ಏಜನ್ಸಿಗಳ ದುರಾಡಳಿತ ದಿವಾಳಿಯಾಗಿ ಕಾನೂನು ಸುವ್ಯವಸ್ಥೆ ವಿಫಲಗೊಂಡ ಬಗ್ಗೆ ಸವಿಸ್ತಾರ ಹಾಗೂ ಸವಿವರಗಳೊಂದಿಗೆ ಖಾತ್ರಿ ಮಾಡಿಕೊಟ್ಟು ರಾಜ್ಯಪಾಲರು ಸಂವಿಧಾನ ಆರ್ಟಿಕಲ್ 356ರ ಪ್ರಕಾರ ಮುಂದಿನ ಕ್ರಮ ತೆಗೆದುಕೊಳ್ಳಲು ವಾದ ಮಂಡಿಸಬೇಕಾಗುತ್ತದೆ. ರಾಜ್ಯಪಾಲರು ನಿಷ್ಪಕ್ಷಪಾತಿಗಳಾಗಿ ವಾದ ಪರಿಶೀಲಿಸಿ ರಾಷ್ಟ್ರಪತಿಗಳಿಗೆ ವರದಿ ಸಲ್ಲಿಸಬೇಕಾಗುತ್ತದೆ. ಕೆಲವು ರಾಜ್ಯಪಾಲರು ಪ್ರಾಮಾಣಿಕ ವರದಿ ಕೊಟ್ಟಿರುವ ಹಾಗೂ ಕೊಡದಿರುವ ದೃಷ್ಟಾಂತಗಳೂ ನಮ್ಮ ರಾಷ್ಟ್ರದಲ್ಲಿವೆ. ರಾಜ್ಯಪಾಲರು ಹಾಗೂ ರಾಷ್ಟ್ರಪತಿಗಳು ಸಮರ್ಪಕ ಅಥವಾ ಅಸಮರ್ಪಕ ಕ್ರಮ ತೆಗೆದುಕೊಂಡ ಉದಾಹರಣೆ ಕೂಡ ಈ ರಾಷ್ಟ್ರದಲ್ಲಿದೆ. ಹೀಗಿರುವಾಗ ಆಯಾ ರಾಜ್ಯದ ಅಧಿಪತಿ ರಾಜ್ಯಪಾಲರನ್ನು ನೇಮಿಸುವಾಗ ರಾಜ್ಯಪಾಲರಿಗೆ-ಅಧೀನರಾದ ಮುಖ್ಯಮಂತ್ರಿಗಳನ್ನು ಕೇಳಿ ರಾಜ್ಯಪಾಲರ ನೇಮಕ ಮಾಡಬೇಕೆಂಬ ಬಗ್ಗೆ ಸಂವಿಧಾನ ತಿದ್ದುಪಡಿ ಮಾಡಿ ನೇಮಕ ಮಾಡಬೇಕೆಂಬುದು ಆ ಪ್ರಬುದ್ಧ ಅಸಂಬದ್ಧವೆಂದು

ಹೇಳದೆಗತ್ಯಂತರವಿಲ್ಲ. ಯಾರು ಏನೇ ಕ್ರಮ ತೆಗೆದುಕೊಳ್ಳಲಿ ಬಿಡಲಿ ಮುಂದಿನ ಕ್ರಮ ರಾಜ್ಯಗಳ ಶಾಸಕ, ಸಂಸದರು ಹಾಗೂ ನಂತರ ಜನತಾ ಜನಾರ್ಧನ ಮತದಾರರ ಕೈಯಲ್ಲಿರುವದು ಅಂತಿಮ.

ಕೆಲವು ರಾಜ್ಯಗಳಲ್ಲಿ ಬಹುತೇಕ ಆದೇಷ್ಟೋ ಕಾನೂನುಗಳು ಉಲ್ಲಂಘಿಸಲ್ಪಟ್ಟು ಅಕ್ರಮವೆಸಗಲ್ಪಟ್ಟು ನಿಷ್ಕ್ರಿಯವಾಗಿವೆ. ಆ ಕ್ರಮಗಳನ್ನು ತಡೆಗಟ್ಟುವ ಮುಂಜಾಗ್ರತೆ ಕ್ರಮಗಳೂ ಇಲ್ಲ. ತಪ್ಪಿತಸ್ಥರ ಮೇಲೆ ಕಾನೂನು ಕ್ರಮವೂ ಇಲ್ಲ. ಶಿಕ್ಷೆಗೆ ಸೂಕ್ತ ಏರ್ಪಾಡೂ ಇಲ್ಲ, ಕಾನೂನಿನ ಸೂಕ್ತ ತಿದ್ದುಪಡಿಯೂ ಇಲ್ಲ, ತಿದ್ದುಪಡಿ ಮಾಡಿಕೊಟ್ಟು ಸಾಕಷ್ಟು ಅಕ್ರಮ ಅನ್ಯಾಯ, ಸ್ವಾರ್ಥ, ಪಕ್ಷಪಾತ, ಅಧಿಕಾರ ದುರುಪಯೋಗ, ದುರಾಡಳಿತ, ಭ್ರಷ್ಟಾಚಾರ, ಜಾತೀಯತೇ ಅಕ್ರಮ, ಆಸ್ತಿ ಹಾಗೂ ಹೇರಳವಾದ ಸಂಪತ್ತು ಗಳಿಕೆ ಮಾಡಲು ಆಸ್ಪದ ಮಾಡಿಕೊಟ್ಟ ಉದಾಹರಣೆಗಳೂ ರಾಷ್ಟ್ರದಲ್ಲುಂಟು. ಅನೇಕ ರಾಜ್ಯಗಳಲ್ಲಿ ಹೆದ್ದಾರಿ ದರೋಡೆ, ಕೊಲೆ, ಸುಲಿಗೆ, ಮಾರಾಮಾರಿ, ಹೊಡೆದಾಟ ಬಡಿದಾಟ, ಕಡಿದಾಟ, ಲೂಟಿ, ಹಾವಳಿ, ಕಳವು, ದೊಂಬಿ, ಸಂಘರ್ಷಣೆ, ರಸ್ತೆ ಸುಧಾರಣೆ ಇಲ್ಲದೆ ಅಗಲವಿಲ್ಲದ ಕಿರಿ ಹಾಗೂ ಡೊಂಕು ಇಕ್ಕಟ್ಟಿನ ರಸ್ತೆ ಪರಿಣಾಮವಾಗಿ ರಸ್ತೆ ಅಪಘಾತ, ವಾಹನಗಳ ಢಿಕ್ಕಿ, ರಸ್ತೆ ಅನಾಹುತ. ದುರ್ಮರಣ ಇತ್ಯಾದಿ ಮಾರಕಗಳು ದಿನೇ ದಿನೇ ಹೆಚ್ಚುತ್ತಿರುವುದು ಸುದ್ದಿ ಪತ್ರಿಕಾ ಮಾಧ್ಯಮಗಳಿಂದ ತಿಳಿಯುವ ದಿನನಿದ್ಯತ ದುರಿತವಾಗುತ್ತಿದೆ. ರಾಜ್ಯ ಸರಕಾರಗಳ ಹಾಗೂ ರಾಜ್ಯ ಸರಕಾರದ ಏಜನ್ಸಿಗಳಿಂದ ಆಯಾರಾಜ್ಯಗಳ ಸಾಮಾನ್ಯ ಸಾಮಾಜಿಕ ಹಾಗೂ ಆರ್ಥಿಕ ಸೇವಾ ಅಭಿವೃದ್ಧಿ ಕಾರ್ಯಗಳಿಗೆ ಹಾಗೂ ಸಾಲ ಮರುಪಾವತಿಗೆ ಆಯುವ್ಯಯುದಲ್ಲಿ ನಿಗದಿಗೊಳಿಸಿದ ರೆವಿನ್ಯೂ ಬಂಡವಾಳ ಹಾಗೂ ಸಾಲದ ಲೆಕ್ಕದಲ್ಲಿ ವೆಚ್ಚಮಾಡಲು ಹಣವಿಲ್ಲದೆ ಅಭಿವೃದ್ಧಿ ಕಡೆಗಣಿಸಿ ಸಾಮಾನ್ಯ ಸಾಮಾಜಿಕ ಹಾಗೂ ಆರ್ಥಿಕ ಸೇವಾ ಮೊತ್ತದಲ್ಲಿ ದುರ್ಬಳಕೆ, ನಿರ್ಬಳಕೆ, ಅಪರಾಧಪರಾ, ದುರುಪಯೋಗವಾಗಿ ಜನತೆಗೆ ಗಂಡಾಂತರಕಾರಿ ಹಾಗೂ ಮಾರಕವಾಗುತ್ತಿರುವುದು ಪ್ರತಿವರ್ಷದ ಆಯಾ ರಾಜ್ಯಗಳ ರಾಜ್ಯ ಸರಕಾರ ಹಾಗೂ ರಾಜ್ಯ ಸರಕಾರಗಳ ಏಜನ್ಸಿಗಳ ವಾರ್ಷಿಕ ವರದಿ, ಆಡಿಟ್ ವರದಿ, ಶಾಸಕಾಂಗ ಸಮಿತಿಗಳ ವರದಿ, ನ್ಯಾಯಂಗ ತನಿಖಾ ವರದಿ, ಸಿ.ಎ.ಜಿ. ವರದಿಗಳನ್ನು ನೋಡಿದರೆ ರಾಜ್ಯ ಸರಕಾರದ ಏಜನ್ಸಿಗಳ ಯಂತ್ರ ಕಾರ್ಯ ವಿಫಲಗೊಂಡಿರುವದು ಸುಸ್ಪಷ್ಟವಾಗಿದೆ. ವಿಧಾನ ಮಂಡಳ ಸಮರ್ಪಕವಾಗಿ ಕಾರ್ಯ ನಿರ್ವಹಿಸಿ ಸರಕಾರ ಸರಕಾರಿ ಏಜನ್ಸಿ ಯಂತ್ರದ ವಿಫಲತೆಯನ್ನು ಎತ್ತಿತೋರಿಸಿ ರಾಜ್ಯಪಾಲರಿಗೆ ಖಾತ್ರಿ ಮಾಡಿಕೊಟ್ಟಾಗ ರಾಜ್ಯಪಾಲರು ವಿಧಾನ ಸಭೆಯನ್ನು ವಿಸರ್ಜನೆ ಮಾಡಲು ಶಿಫಾರಸ್ಸು ಮಾಡದೆ ರಾಜ್ಯ ಸರಕಾರವನ್ನು ಮಾತ್ರ ವಜಾಮಾಡಲು ಶಿಫಾರಸ್ಸು ಮಾಡಿದ ಉದಾಹರಣೆಗಳುಂಟು. ವೈಫಲ್ಯಕ್ಕೆ ಸರಕಾರ ಹಾಗೂ ವಿಧಾನ ಸಭೆ ಎರಡೂ

ಕಾರಣವಾದಾಗ ಸರಕಾರದ ವಜಾ ಹಾಗೂ ವಿಧಾನ ಸಭೆಯ ವಿಸರ್ಜನೆ ಎರಡಕ್ಕೂ ಶಿಫಾರಸ್ಸು ಮಾಡಿದ ಉದಾಹರಣೆಯೂ ಉಂಟು. ಅನೇಕ ರಾಜ್ಯ ಸರಕಾರಗಳು ದುರ್ಬಲ ಹಾಗೂ ಅಸಮರ್ಪಕವಾಗಿ ಜನತೆಗೆ ತಾರಕವಾಗದೆ ಮಾರಕವಾಗಿ ಜನಜೀವನವೇ ಅಸ್ತವ್ಯಸ್ತವಾಗಿ ಅರಾಜಕತೆ, ಅನಾಗರಿಕತೆ ಉಂಟಾಗಿ ಗಂಡಾಂತರ ದಲ್ಲಿರುವದು ಕಂಡುಬರುತ್ತಿದೆ. ಬಹುತೇಕ ರಾಜ್ಯ ಸರಕಾರಗಳ ಖಜಾನೆಯಲ್ಲಿ ಹಣವಿಲ್ಲದೆ ಖಾಲಿಯಾಗಿ ಸಾಮಾಜಿಕ, ಸಾಮಾನ್ಯ ಹಾಗೂ ಆರ್ಥಿಕ ಸೇವೆಯ ಕಾರ್ಯಕ್ರಮಗಳಿಗೆ ಹಣದ ಅಭಾವದಿಂದ ಪ್ರತಿವರ್ಷ ಸಹಸ್ರಾರು ಕೋಟಿ ಹಣವನ್ನು ವೆಚ್ಚಮಾಡಲು ಸಾಧ್ಯವಾಗದಿರುವದು ಆಯಾ ರಾಜ್ಯಗಳ ಸಿ.ಎ.ಜಿ. ವರದಿಗಳನ್ನು ನೋಡಿದರೆ ಚಿತ್ರ ಸುಸ್ಪಷ್ಟವಿದೆ. ಕರ್ನಾಟಕ ರಾಜ್ಯದ ಉದಾಹರಣೆ ಹೇಳುವದಾದರೆ 1994-95 ರಿಂದ 1998-99ರ ವರೆಗಿನ ಮೂರು ಸರಕಾರಗಳ 5 ವರ್ಷಗಳ ಅವಧಿಯಲ್ಲಿ ಖಜಾನೆ ಖಾಲಿಯಾದ ಪ್ರಯುಕ್ತ 14,326.14 ಕೋಟಿ ಹಣವನ್ನು ಒಟ್ಟಾರೆ ವೆಚ್ಚಮಾಡಲಿಕ್ಕಾಗದ ಆಡಳಿತ ಹಾಗೂ ಅಭಿವೃದ್ಧಿಯನ್ನು ಹದಗೆಡಿಸಲಾಗದೆ, ಹದಗೆಟ್ಟ ಸರಕಾರದ ಈ ನಿರಂತರ ವೈಫಲ್ಯಕ್ಕೆ ಶಾಸಕಾಂಗವೂ ಕಾರಣವೆಂದು ಹೇಳದೆ ಗತ್ಯಂತರವಿಲ್ಲ. ಮೇಲ್ಕಂಡ ಲಭ್ಯವಿದ್ದ ಎಲ್ಲ ಮಾಹಿತಿ ರಾಜ್ಯದ ರಾಜ್ಯಪಾಲರಿಗೆ ಕೂಡ ಸಲ್ಲಿಸಲಾಗುತ್ತಿದ್ದು ಅವುಗಳನ್ನೆಲ್ಲ ರಾಜ್ಯಪಾಲರು ಅಧ್ಯಯನ ಮಾಡಿ ಸರಕಾರಕ್ಕೆ ಬುದ್ಧಿ ಹೇಳುವದಾಗಲೀ ಸರಿದಾರಿಗೆ ತರುವದಾಗಲೀ ಅಥವಾ ರಾಜ್ಯ ಸರಕಾರದ ಯಂತ್ರ ವಿಫಲಗೊಂಡ ಬಗ್ಗೆ ರಾಷ್ಟ್ರಪತಿಗಳಿಗೆ ವರದಿ ಸಲ್ಲಿಸುವದಾಗಲೀ ಅದೆಲ್ಲ ರಾಜ್ಯಪಾಲರ ಕರ್ತವ್ಯ. ಆದರೆ? ಆಡಳಿತ ಯಂತ್ರಗಳ ವೈಫಲ್ಯದ ದುಷ್ಪರಿಣಾಮವಾಗಿ ಅರಾಜಕತೆ, ಅನಾಗರೀಕತೆ, ಆರ್ಥಿಕ ಬಿಕ್ಕಟ್ಟು ಹೆಚ್ಚಾಗಿ ಅಭಿವೃದ್ಧಿ ಅವಸಾನಗೊಂಡು ಜನಜೀವನವೇ ಗಂಡಾಂತರಕಾರಿ ಯಾಗಿರುವ ಹಾಗೂ ನ್ಯಾಯಾಂಗ ಸುವ್ಯವಸ್ಥೆಗೆ ಭಗ್ನ ತರಲು ಹೊಂಚುಹಾಕುತ್ತಿರುವ ಸಮಾಜಘಾತಕ ದುಶ್ಶಕ್ತಿಗಳ ಕೈವಾಡವನ್ನು ಗಮನಿಸಿ ಕಾರ್ಯಾಂಗ ಹಾಗೂ ಶಾಸಕಾಂಗಗಳು ಇನ್ನಾದರೂ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳವದು ಒಳ್ಳೆಯದು.

❑

ಉದ್ಯಮಗಳ ಮಹೋದ್ಯಮ ಬಿ ಪಿ ಇ

ಕರ್ನಾಟಕ ರಾಜ್ಯ ಸಾರ್ವಜನಿಕ ಉದ್ಯಮಗಳ ಮಹೋದ್ಯಮ (ಬಿಪಿಇ) 31-3-99ಕ್ಕೆ 1831.19 ಕೋಟಿ ಒಟ್ಟು ಬಂಡವಾಳ ಹೊಂದಿರುವ ರಾಜ್ಯದ 17 ಸರಕಾರಿ ಇಲಾಖೆಗೆ ಸಂಬಂಧಿಸಿದ 78 ಸರಕಾರಿ ಸಾರ್ವಜನಿಕ ಉದ್ಯಮಗಳ ಮೇಲ್ವಿಚಾರಣೆ, ಉಸ್ತುವಾರಿ, ಸಮನ್ವಯ ಕಾರ್ಯಗಳನ್ನು ನಿರ್ವಹಿಸಿ ಸರಕಾರದ ಪ್ರಮುಖ ಅಂಗವಾಗಿ ಸಚಿವಾಲಯವಾಗಿ ಮಿನಿ ಸರಕಾರವೇ ಆಗಿ ಕಾರ್ಯ ನಿರ್ವಹಿಸಬೇಕಾಗುತ್ತದೆ. ಈ ಮಹೋದ್ಯಮ ಮುಖ್ಯಮಂತ್ರಿಗಳ ಅಧೀನದಲ್ಲಿರುತ್ತದೆ. ಸರಕಾರದ ಪದನಿಮಿತ್ತ ಪ್ರಧಾನ ಕಾರ್ಯದರ್ಶಿಗಳೇ ಈ ಮಹೋದ್ಯಮದ ಮಹಾ ನಿರ್ದೇಶಕರಾಗಿರುತ್ತಾರೆ. ಇವರಿಗೆ ಸಹಾಯಕರಾಗಿ ಸರಕಾರದ ಪದ ನಿಮಿತ್ತ ಕಾರ್ಯದರ್ಶಿಗಳು ನಿರ್ದೇಶನ ಹಾಗೂ ವಿಶೇಷ ನಿರ್ದೇಶಕರನ್ನೊಳಗೊಂಡ ಸುಮಾರು 5 ಜನ ಹೊಣೆಗಾರ ಸಿಬ್ಬಂದಿಯವರು ಇರುತ್ತಾರೆ. ರಾಜ್ಯದಲ್ಲಿಯ ಎಲ್ಲಾ ಸಾರ್ವಜನಿಕ ಸರಕಾರಿ ಉದ್ಯಮಗಳು ಸಾರ್ವಜನಿಕರಿಗೆ ಹಾಗೂ ರಾಜ್ಯದ ಪ್ರಜೆಗಳಿಗೆ ತಾರಕವಾದ ಉತ್ತಮ ವ್ಯವಹಾರ ಮಾಡುತ್ತ ಸಾಮಾನ್ಯ, ಸಾರ್ವಜನಿಕ ಹಾಗೂ ಆರ್ಥಿಕ ಸೇವೆಯನ್ನು ಸಮರ್ಪಕವಾಗಿ ಮಾಡುತ್ತ ಆರ್ಥಿಕ, ವರ್ಷ ಮಾರ್ಚ್ 31ಕ್ಕೆ ಮುಗಿದ ಕೂಡಲೆ ಇವುಗಳ ಆಯುವ್ಯಯು, ವ್ಯಾಪಾರಿ ಪತ್ರಿಕೆ, ಲಾಭಹಾನಿ ಪತ್ರಿಕೆ, ಸಾಲ - ಬಿಂದಗಿಗಳನ್ನು ತಯಾರಿಸಿ ವಾರ್ಷಿಕ ವರದಿಗಳನ್ನು ತಯಾರಿಸಿ ಸರಕಾರಕ್ಕೆ, ವಿಧಾನ ಮಂಡಲಕ್ಕೆ ಸಿ.ಎ.ಜಿ.ಯವರಿಗೆ ಕೊಡುವಂತೆ ಜವಾಬ್ದಾರಿ ವಹಿಸಿ ಇವೆಲ್ಲವುಗಳ ಸಮೀಕೃತ ವರದಿಯನ್ನು ಮಹೋದ್ಯಮವೇ ತಯಾರಿಸಿ ಸಕಾಲದಲ್ಲಿ ತಪ್ಪದೆ ಸಲ್ಲಿಸಬೇಕಾಗುತ್ತದೆ. ಎಲ್ಲಾ ಉದ್ಯಮಗಳ ಉತ್ತಮ ಆಡಳಿತ ಹಾಗೂ ವ್ಯವಹಾರ ಮಾಡಿಸುವ ಜವಾಬ್ದಾರಿ ಈ ಮಹೋದ್ಯಮದ್ದೇ ಇರುತ್ತದೆ. ಈ ಎಲ್ಲಾ ಉದ್ಯಮಗಳು ಪ್ರತಿ ವರ್ಷ ಆರ್ಥಿಕ ವರ್ಷ ಮಾರ್ಚ್ ತಿಂಗಳು ಮುಗಿದ ಕೂಡಲೇ ಮೂರು ತಿಂಗಳ ಅಂದರೆ ಜೂನ್ ಕೊನೆಯ ಒಳಗಾಗಿ ವಾರ್ಷಿಕ ವರದಿಗಳನ್ನು ತಯಾರಿಸಿ ವಿಧಾನ ಮಂಡಲಕ್ಕೆ, ಮಹೋದ್ಯಮಕ್ಕೆ ಸಿ.ಎ.ಜಿ.ಯುವರಿಗೆ ಹಾಗೂ ಸಂಬಂಧಪಟ್ಟವರಿಗೆ ಕೊಡಲೇಬೇಕು. ಈ ಜವಾಬ್ದಾರಿ ಮಹೋದ್ಯಮಕ್ಕೆ ಕೂಡ ಇದೆ. ಈ 78

ಉದ್ಯಮಗಳಲ್ಲಿ ಒಂದಾದ ಕರ್ನಾಟಕ ರಾಜ್ಯ ಹಣಕಾಸು ನಿಗಮ ಮಾತ್ರ ತನ್ನ ವರದಿಯನ್ನು ಜೂನ್ ತಿಂಗಳ ಒಳಗಾಗಿ ಕೊಡುತ್ತ ಬಂದಿರುವದು ಪ್ರಶಂಸನೀಯ. ಕೆಲವು ನಿಗಮಗಳ 93-94 ರಿಂದ 97-98ರ ವರೆಗಿನ ಲೆಕ್ಕ ಪತ್ರಗಳನ್ನು 1999 ಜನವರಿ ವರೆವಿಗೂ ಕೊಡದೆ ಇರುವದು ಕಂಡು ಬಂದಿದೆ. ರಾಜ್ಯ ಹಣಕಾಸು ಸಂಸ್ಥೆ 98-99ರ ವಾರ್ಷಿಕ ವರದಿಯನ್ನು 99ರ ಜೂನ್ ತಿಂಗಳ ಒಳಗಾಗಿ, 99-2000ರ ವಾರ್ಷಿಕ ವರದಿಯನ್ನು 2000ದ ಜುಲೈ ಒಳಗಾಗಿ ಕೊಟ್ಟಿರುವಾಗ ಉಳಿದೆಲ್ಲಾ ನಿಗಮಗಳೇನು ಧಾಡಿಯೆಂದು ಪ್ರಶ್ನಿಸಬೇಕಾಗುತ್ತದೆ ಹಾಗೂ ಮಹೋದ್ಯಮದ ನಿಷ್ಠೆಯ ಕೊರತೆ ಹಾಗೂ ಕರ್ತವ್ಯ ಲೋಪ ಸುಸ್ಪಷ್ಟ. ಅನೇಕ ಉದ್ಯಮಗಳಿಗೆ ಅನೇಕ ಮಂತ್ರಿಗಳು, ಶಾಸಕರು ಹಾಗೂ ಅಸಂಖ್ಯಾತ ಐ.ಎ.ಎಸ್. ಹಾಗೂ ಕೆ.ಎ.ಎಸ್. ಅಧಿಕಾರಿಗಳೇ ಪದಾಧಿಕಾರಿಗಳಿರುವಾಗ ಇವರ ಕರ್ತವ್ಯ ಲೋಪ ಹಾಗೂ ಇವರೆಲ್ಲರ ಮೇಲಿನ ಮುಖ್ಯಮಂತ್ರಿಗಳ ಕರ್ತವ್ಯ ಲೋಪವೆಂದು ಹೇಳದೆ ಗತ್ಯಂತರವಿಲ್ಲ. ಈ ಮಹೋದ್ಯಮವು ಕೂಡ ತನ್ನ 98-99ರ ವರದಿಯನ್ನು 2000ದ ಅಕ್ಟೋಬರ್ ತಿಂಗಳಲ್ಲಿ ವಿಧಾನ ಮಂಡಲಕ್ಕೆ ಸಲ್ಲಿಸಿದ್ದು ಇದು ಕೂಡ ಕರ್ತವ್ಯ ಲೋಪವಲ್ಲವೇ? 99-2000ರ ಸಾಲಿನ ವಾರ್ಷಿಕ ವರದಿಯನ್ನು ಈ ಅಕ್ಟೋಬರ್ ತಿಂಗಳಲ್ಲಿಯೇ ಸಲ್ಲಿಸಿದರೆ ಅದು ಮಹೋದ್ಯಮದ ಅಗತ್ಯ ಕರ್ತವ್ಯವೆನ್ನಬಹುದಾಗಿತ್ತು. ಕರ್ತವ್ಯಲೋಪ ಹಾಗೂ ನಿಷ್ಠೆಯ ಕೊರತೆಯ ದುಷ್ಪರಿಣಾಮವಾಗಿ ಈ ಎಲ್ಲಾ ಉದ್ಯಮಗಳ ಆರ್ಥಿಕ ಪರಿಸ್ಥಿತಿ ವ್ಯವಹಾರ ಆಡಳಿತ ಸಕಾಲದಲ್ಲಿ ಶಾಸಕರಿಗೆ ಮಂತ್ರಿಗಳಿಗೆ ಹಾಗೂ ಸಾರ್ವಜನಿಕರಿಗೆ ಗೊತ್ತಾಗಬಾರದು ಹಾಗೂ ದುರ್ವ್ಯವಹಾರ, ದುಂದವೆಚ್ಚ, ಕರ್ತವ್ಯಲೋಪ, ಲಾಭ ಹಾನಿ, ಹೂಡಿದ - ಮೊತ್ತದ ನಾಶ ಇತ್ಯಾದಿ ಅಕ್ರಮಗಳ ಯಥಾವತ್ತಾಗಿ ಸಾಗಬೇಕೆಂಬುದೇ ಈ ನಿಗಮಗಳ ದುರುದ್ದೇಶವೆಂದು ಅನಿಸುತ್ತದೆ. ರಾಜ್ಯದ ಪ್ರಜಾ ಪ್ರಭುಗಳಿಗೆ ಬಹಳ ಉಪಯುಕ್ತವಾದ ಸಾರ್ವಜನಿಕ ಉಪಯುಕ್ತತೆಯ ಹಣಕಾಸು ವ್ಯವಸ್ಥೆಯ, ಅಭಿವೃದ್ಧಿಶೀಲ ವಾಣಿಜ್ಯ, ಅಭಿವೃದ್ಧಿಶೀಲ ವಾಣಿಜ್ಯೇತರ ಸಾರ್ವಜನಿಕ ಸೇವಾ, ಉತ್ಪಾದನಾ, ಮಾರುಕಟ್ಟೆ, ಜಾಹಿರಾತು, ಮೊದಲಾದ ಕೃಷಿ ಹಾಗೂ ಕೃಷಿಯೇತರ ಸಾರ್ವಜನಿಕ ಉದ್ಯಮಗಳು ರಾಜ್ಯದ ಜನತೆಗೆ ಅತಿ ಉಪಯುಕ್ತವಾಗಿದ್ದು ಜನತೆಯ ಹಾಗೂ ರಾಜ್ಯದ ಸರ್ವಾಂಗೀಣ ಪ್ರಗತಿಗೆ ಹಾಗೂ ಅಭಿವೃದ್ಧಿಗೆ ಕಂಕಣಬದ್ಧವಾಗಿವೆ. 1980-81 ರಲ್ಲಿ ಹೂಡಿದ ಬಂಡವಾಳದ ಮೊತ್ತ 1415.77 ಕೋಟಿ ಇದ್ದು 313.98ಕ್ಕೆ 18,331.19 ಕೋಟಿಗೆ ಏರಿದು ಇದು ಇನ್ನೂ ಏರುತ್ತಲೇ ಇದೆ. ಮಹೋದ್ಯಮರ ವರದಿ ಪ್ರಕಾರ 31-3-98ಕ್ಕೆ 45 ಉದ್ಯಮಗಳಲ್ಲಿದ್ದ ಒಟ್ಟು ಕೂಡಿಬಿದ್ದ ಹಾನಿ 1172.60 ಕೋಟಿ ಇದ್ದುದು 31-3-99ಕ್ಕೆ 44 ಉದ್ಯಮಗಳಲ್ಲಿದ್ದ ಒಟ್ಟು ಕೂಡಿಬಿದ್ದ ಹಾನಿ 1426.82 ಕೋಟಿಗೆ ಏರಿದೆ. ಇದಕ್ಕೆ ವ್ಯತಿರಿಕ್ತವಾಗಿ ಸರಕಾರದ 2-5-2000ರ ಹೇಳಿಕೆ ಪ್ರಕಾರ

ಉದ್ಯಮಗಳ ಕೂಡಿಬಿದ್ದ ಹಾನಿ 31-3-98ಕ್ಕೆ 993.05 ಕೋಟಿ ಇದ್ದು ತಾಳಮೇಳವಿಲ್ಲದ ಯದ್ವಾತದ್ವಾ ಬೇಜವಾಬ್ದಾರಿ ಲೆಕ್ಕವೆಂಬುದು ಸುಸ್ಪಷ್ಟ, ಅತಿ ಹೆಚ್ಚಿನ ಕೂಡಿಬಿದ್ದ ಹಾನಿಯಲ್ಲಿರುವ ನಿಗಮ ಮೊದಲನೇ ಛಾಂಪಿಯನ್ ಪ್ರಶಸ್ತಿ ಸಾರಿಗೆ ಸಂಸ್ಥೆ ಪಡೆದು ಗಿನ್ನೀಸ್ ದಾಖಲೆ ಪಡೆಯಬಹುದಾಗಿದೆ. ಒಟ್ಟಾರೆ ಕೂಡಿಬಿದ್ದ ಹಾನಿ ಪ್ರತಿವರ್ಷ ಏರುತ್ತಲೇ ಇದೆ, ಕಿಮ್ಕೊ, ಎನ್.ಜಿ.ಇ.ಎಫ್. ಕೈಗಾರಿಕೆ, ಸಾಬೂನು ಮತ್ತು ಡಿಟರ್ಜಂಟ್, ರಾಜ್ಯ ಜವಳಿ, ಮೈಸೂರು ಲ್ಯಾಂಪ್ಸ್, ಟೆಲಿಕಾಂ, ಚಲನಚಿತ್ರ ಅಭಿವೃದ್ಧಿ, ಮೆಶ್ಶಿನ್‌ಟೂಲ್ಸ್ ನಿಗಮಗಳು ರೋಗಗ್ರಸ್ಥಗಳಾಗಿವೆ. ಮೈಸೂರು ತಂಬಾಕು, ಮೀನು ಅಭಿವೃದ್ಧಿ, ಟಂಗಸ್ಟನ್ ಪೋಲಿ, ಮೈಸೂರ ಕಡ್ಡಿಪೆಟ್ಟಿಗೆ ಕ್ರೋಮಟ್ಯಾನಿಂಗ್, ಅಗ್ರೊಪ್ರೋಟೀನ್, ಅಸಿಟೇಟ ಮತ್ತು ಕೆಮಿಕಲ್ಸ್, ವಿಜಯನಗರ ಸ್ಟೀಲ್ ನಿಗಮಗಳು ಪರಿಸಮಾಪ್ತಿ ಲಿಕ್ವಿಡೇಶನ ದಾರಿ ಹಿಡಿದಿರುವದು ನಾಚಿಕೆಗೇಡು. 97-98ರಲ್ಲಿ ಕೆ.ಎಸ್.ಆರ್.ಟಿ.ಸಿ. ಗೆ ಸಂಬಂಧಿಸಿದ ಲೆಕ್ಕವನ್ನೇ ಸಿ.ಎ.ಜಿ.ಗೆ ಸಲ್ಲಿಸದೆ ಸಿ.ಎ.ಜಿ.ಯನ್ನು ಅಂಧಕಾರದಲ್ಲಿ ಇಟ್ಟಿದ್ದು ಯಾರಿಗೂ ಭೂಷಣವಲ್ಲ. ಸರಕಾರಕ್ಕೆ ಗೊತ್ತಿರುವಂತೆ ಅನೇಕ ಉದ್ಯಮಗಳು 25-4-2000ಕ್ಕೆ 96-97 ರಿಂದ 99-2000ರ ವರೆಗಿನ ವಾರ್ಷಿಕ ವರದಿಗಳನ್ನು, 96-97 ರಿಂದ 98-99ರ ವರೆಗಿನ ವಾರ್ಷಿಕ ಲೆಕ್ಕವನ್ನು ಕೊಡದೆ ಬಾಕಿ ಉಳಿಸಿಕೊಂಡಿವೆ. ಕೆ.ಎಸ್.ಆರ್.ಟಿ.ಸಿ. 25-4-2000 ರ ಒಳಗಾಗಿ 97-98, 98-99ನೇ ಸಾಲಿನ ವಾರ್ಷಿಕ ವರದಿಯನ್ನಾಗಲೀ ಸಲ್ಲಿಸದೆ ಬಾರಿ ಇಟ್ಟು ಕೊಂಡಿದೆ. ಆಗಿಂದಾಗ್ಗೆ ಸಕಾಲದಲ್ಲಿ ಎಲ್ಲಾ 78 ಉದ್ಯಮಗಳಿಂದ ವಾರ್ಷಿಕ ವರದಿ ಹಾಗೂ ವಾರ್ಷಿಕ ಲೆಕ್ಕವನ್ನು ಪಡೆಯುವಲ್ಲಿ ಹಾಗೂ ಸಕಾಲದಲ್ಲಿ ತನ್ನ ಉದ್ಯಮಗಳ ಸಮೀಕ್ಷಾ ವರದಿಯನ್ನು ಮಹ್ಯೋದ್ಯಮ ವಿಧಾನ ಮಂಡಲಕ್ಕೆ ಸಲ್ಲಿಸದಿರುವ ವೈಫಲ್ಯ ಸುಸ್ಪಷ್ಟವಿದೆ.

ಸಮರ್ಪಕ ಸೇವೆ ಮಾಡದೆ ಪ್ರಯಾಣಿಕರಿಗೆ ಸುಗಮ ಸಂಚಾರಿ ವ್ಯವಸ್ಥೆ ಮಾಡದೆ, ಸಮಯಕ್ಕೆ ಸರಿಯಾಗಿ ಬಸ್ಸುಗಳನ್ನು ಬಿಡದೆ ಸಿಕ್ಕಾಪಟ್ಟೆ ಶೆಡ್ಯೂಲಗಳನ್ನು ರದ್ದುಮಾಡುತ್ತ ಅಧಿಕೃತ ವರದಿಗಳ ಪ್ರಕಾರ ಸರಿಯಾಗಿ ಆಳಿಡತ ಮಾಡದೆ ನಷ್ಟದಲ್ಲಿ ಬಿದ್ದು ಒದ್ದಾಡುತ್ತಿರುವ ಸಾರಿಗೆ ಸಂಸ್ಥೆ 78 ಉದ್ಯಮಗಳಲ್ಲಿ ನಷ್ಟ ಹೊಂದುತ್ತಿರುವ ಪ್ರಥಮ ಶ್ರೇಣಿಯಲ್ಲಿ ಪ್ರಥಮ ಸ್ಥಾನದಲ್ಲಿದೆ. 96-97ರ ಅಂತ್ಯಕ್ಕೆ ಈ ಸಾರಿಗೆ ಸಂಸ್ಥೆಯ ಕೂಡಿ ಬಿದ್ದ ಹಾನಿ 578.85 ಕೋಟಿ ಇದ್ದು 97-98ರಲ್ಲಿ 54.56 ಕೋಟಿ. 98-99ರಲ್ಲಿ 16.94 ಕೋಟಿ, 99-2000ದಲ್ಲಿ 31-3-2000ರ ವರೆಗೆ 26.00 ಕೋಟಿ ಹಾನಿಹೊಂದಿ ಈ ಸಾರಿಗೆ ಸಂಸ್ಥೆಯ **ಕೂಡಿ**ಬಿದ್ದ ಹಾನಿ 96-97 ಅಂತ್ಯಕ್ಕೆ 578.85 ಕೋಟಿ, 97-98 ಅಂತ್ಯಕ್ಕೆ 633.41 ಕೋಟಿ, 98-99 ಅಂತ್ಯಕ್ಕೆ 649.35 ಕೋಟಿ 99-2000ರ ಜನವರಿ ಅಂತ್ಯಕ್ಕೆ 675.41 ಕೋಟಿಗೆ ಏರಿದೆ. ಈ ಸಂಸ್ಥೆ ವಿಭಜನೆಯಾಗಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಹಾಗೂ ವಾಯವ್ಯ ಕರ್ನಾಟಕ ಸಾರಿಗೆ ಸಂಸ್ಥೆಗಳು

97-98ರಿಂದ ಹುಟ್ಟಿಕೊಂಡಿದೆ. ಮಹೋದ್ಯಮದ ವರದಿ ಪ್ರಕಾರ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ 97-98ರಲ್ಲಿ 80.50 ಕೋಟಿ, 98-99ರಲ್ಲಿ 76.54 ಕೋಟಿ ನಷ್ಟ ಕೂಡಿಬಿದ್ದ ಹಾನಿಯಾಗಿದೆ.

99-2000 ಸಾಲಿನ ನಷ್ಟ ತಿಳಿಯಲು ಸದ್ಯಕ್ಕೆ ತೊಂದರೆದಾಯ ಈ ಅಂತೆಯೇ ವಾಯುವ್ಯ ಕರ್ನಾಟಕ ಸಾರಿಗೆ ಸಂಸ್ಥೆ 98-99ರ ಅಂತ್ಯಕ್ಕೆ 140.11 ಕೋಟಿ ಕೂಡಿಬಿದ್ದ ಹಾನಿ ಹೊಂದಿದೆ. ಹೀಗೆ ಕೆ.ಎಸ್.ಆರ್.ಟಿ.ಸಿ. ಬೆಂಗಳೂರು ಮಹಾನಗರ ಸಾರಿಗೆ, ವಾಯುವ್ಯ ಕರ್ನಾಟಕ ಸಾರಿಗೆ ಈ ಮೂರು ಸಂಸ್ಥೆಗಳ ಕೂಡಿಬಿದ್ದ ಹಾನಿ 31-3-99ಕ್ಕೆ 866.00 ಕೋಟಿ ಆಗಿದ್ದು 31-3-2000ಕ್ಕೆ ಎಷ್ಟೆಂಬುದು ಇನ್ನೂ ತಿಳಿಯಬೇಕು. 31-3-2000ಕ್ಕೆ 900-00 ಕೋಟಿ ಕೂಡಿಬಿದ್ದ ಹಾನಿ ಮೀರಬಹುದಾಗಿದೆ. ಒಂದೇ ಸಂಸ್ಥೆಯನ್ನು ಅನಾವಶ್ಯಕವಾಗಿ ಮೂರು ಸಂಸ್ಥೆಗಳನ್ನಾಗಿ ವಿಂಗಡಿಸಿ ಈಗ ಮತ್ತೆ ಈಶಾನ್ಯ ಕರ್ನಾಟಕ ಸಾರಿಗೆ ಸಂಸ್ಥೆಯನ್ನು ಮಾಡಿ ಸಿಕ್ಕಾಪಟ್ಟೆ ಹೆಚ್ಚಿನ ವೇತನ ಅಧಿಕಾರಿಗಳನ್ನು ನೇಮಿಸುತ್ತ ಅವಶ್ಯಕವಾದ ಮೇಸ್ತ್ರಿ, ನಿರ್ವಾಹಕ, ಚಾಲಕ ಮೊದಲಾದವರನ್ನು ನೇಮಿಸದೆ ಅವಶ್ಯಕ ಉತ್ತಮ ದರ್ಜೆಯ ಬಿಡಿಭಾಗ ಪೂರೈಸದೆ, ಕಳಪೆ ವಸ್ತುಗಳನ್ನು ಖರೀದಿಸಿ ಸರಕಾರಿ ಸಾರಿಗೆ ಉದ್ಯಮವನ್ನು ಹದಗೆಡಿಸಿ ಸಾರ್ವಜನಿಕ ಹಣದ ಲೂಟಿಗೆ ಆಸ್ಪದ ಮಾಡಿ ಖಾಸಗಿ ಸಾರಿಗೆ ಸಂಸ್ಥೆಗಳಿಗೆ ಅನುಕೂಲ ಮಾಡಿಕೊಟ್ಟಿರುವ ಆಡಳಿತ ವೈಖರಿ ಹಾಸ್ಯಾಸ್ಪದವಾಗಿದೆ. ಎಲ್ಲಾ 78 ಉದ್ಯಮಗಳ ಹಾಗೂ ಮಾತೃಸಂಸ್ಥೆ ಮಹೋದ್ಯಮದ ಆಡಳಿತ ಯಂತ್ರ ಅನೇಕ. ಕೆ.ಎ.ಎಸ್., ಐ.ಎ.ಎಸ್. ಅಧಿಕಾರಿಗಳು ಶಾಸಕರು, ಮಂತ್ರಿಗಳು, ಮಹಾಮಂತ್ರಿಗಳನ್ನೊಳಗೊಂಡ ಸರಕಾರದ ಕೈಯಲ್ಲಿಯೇ ಇದ್ದು ಈ ಯಂತ್ರ ಬಹುಮಟ್ಟಿಗೆ ವಿಫಲಗೊಂಡಿರುವ ಬಜೆಟ್ ಕಾಗದ ಪತ್ರ, ಸಿ.ಎ.ಜಿ. ವರದಿ, ಶಾಸಕಾಂಗ ಸಮಿತಿಗಳ ವರದಿ, ಉದ್ದಿಮೆಗಳ ವರದಿ, ಮಹೋದ್ಯಮದ ವರದಿ ಇತ್ಯಾದಿಗಳನ್ನು ನೋಡಿದರೆ ಸುಸ್ಪಷ್ಟವಾಗಿದೆ. ಇದು ಪ್ರಜಾತಂತ್ರ ವ್ಯವಸ್ಥೆಗೆ ಗಂಡಾಂತರಕಾರಿ. ಇನ್ನಾದರೂ ಈ ರಾಜ್ಯದ ಜನತೆಯ ಸರ್ವತೋಮುಖ ಅಭಿವದ್ಧಿ ಹಾಗೂ ಅನುಕೂಲತೆಯ ದೃಷ್ಟಿಯಿಂದ ರಾಜ್ಯದ ಸರಕಾರಿ ಮಹೋದ್ಯಮ (ಬಿ.ಪಿ.ಇ)ದ ಆಡಳಿತ ಮಂಡಳಿ ತನ್ನ ಜವಾಬ್ದಾರಿಯನ್ನರಿತು ಎಲ್ಲಾ ಉದ್ಯಮಗಳ ಆಡಳಿತ ಮಂಡಳಿಗಳನ್ನು ಹದ್ದು ಬಸ್ತಿನಲ್ಲಿಟ್ಟು ಅವೆಲ್ಲಾ ತಾವು ಮಾಡಬೇಕಾದ ವ್ಯವಹಾರವನ್ನು ಸಮರ್ಪಕವಾಗಿ ಮಾಡುವಂತೆ, ಸಕಾಲದಲ್ಲಿ ವಾರ್ಷಿಕ ವರದಿ ಲೆಕ್ಕವನ್ನು ಸಂಬಂಧಿಸಿದವರಿಗೆ ಸಲ್ಲಿಸುತ್ತ ಕಾರ್ಯನಿರ್ವಹಿಸುವಂತೆ ಮಾಡುವದು ಒಳ್ಳೆಯದು, ಮಂತ್ರಿಗಳು ಹಾಗೂ ಮುಖ್ಯಮಂತ್ರಿಗಳು ಕೂಡ ಈ ದಿಶೆಯಲ್ಲಿ ಜವಾಬ್ದಾರಿವಹಿಸಿ ಉದ್ಯಮಗಳ ಅವನತಿ ಹಾಗೂ ವಿನಾಶಕ್ಕೆ ಕಾರಣವಾಗಿರುವ ಮಹೋದ್ಯಮ ಸಮರ್ಪಕವಾಗಿ ಕಾರ್ಯನಿರ್ವಹಿಸು ವಂತೆ ಜವಾಬ್ದಾರಿ ವಹಿಸಿದರೆ ರಾಜ್ಯದಲ್ಲಿಯ ಎಲ್ಲಾ ಸಾರ್ವಜನಿಕ ಸರಕಾರಿ

ಉದ್ಯಮಗಳ ಸಾರ್ಥಕ ಸೇವೆ ಜನತೆಗೆ ಸಿಗಬಲ್ಲುದು ಹಾಗೂ ಸಾರ್ವಜನಿಕ ಸರಕಾರಿ ಹಣದ ಅಪವ್ಯಯ ನಿಲ್ಲಬಲ್ಲುದು. ಈ ದಿಶೆಯಲ್ಲಿ ಶಾಸಕರು ಕೂಡ ಸೂಕ್ತವಾದ ಚಿಂತನ ಮಂಥನ ಮಾಡುವದು ಅವರ ಆದ್ಯ ಕರ್ತವ್ಯ. ರಾಜ್ಯದ ರೈತರಿಗೆ ಅವಶ್ಯಕ ಹಾಗೂ ಅನುಕೂಲವಾಗಿದ್ದ ಕೃಷ್ಣಾ ನೀರಾವರಿ ಏತ ನಿಗಮ, ಕಾವೇರಿ ನೀರಾವರಿ ಏತ ನಿಗಮಗಳನ್ನು ಸಮಾಧಿ ಮಾಡಿ ಅನಾವಶ್ಯಕವಾಗಿ ಮತ್ತೆ ಮೂರು ಸಾರಿಗೆ ನಿಗಮಗಳನ್ನು ಸೃಷ್ಟಿಸಿರುವದು ಆಡಳಿತ ಅನುಭವದ ನಿಷ್ಠೆಯ ಕೊರತೆ ಎಲ್ಲರಲ್ಲೂ ಎದ್ದು ಕಾಣುತ್ತಿರುವದು ಪ್ರಜಾತಂತ್ರ ವ್ಯವಸ್ಥೆಯ ದುರ್ದೈವವಲ್ಲದೆ ಮತ್ತೇನು?

❑

ನಗರಾಭಿವೃದ್ಧಿ ಯೋಜನೆ : ಕುಂಠಿತ

ರಾಜ್ಯದ ಹಲವಾರು ಯೋಜನೆಗಳಿಗೆ ಕೇಂದ್ರ ಸರಕಾರ ಆರ್ಥಿಕ ಪುರಸ್ಕಾರ ಹಾಗೂ ನೆರವು ನೀಡಿ ಜನತೆಗೆ ಅವುಗಳ ಪ್ರಯೋಜನ ದೊರಕಿಸಿಕೊಡಲು ಮುಂದಾಗುತ್ತಿದೆ. ಇಂಥ ಅನೇಕ ಯೋಜನೆಗಳಲ್ಲಿ ರಾಜ್ಯದಲ್ಲಿಯ ನಗರಗಳ ಅಭಿವೃದ್ಧಿ ಯೋಜನೆಗಳಿಗೆ ನೆರವನ್ನು ಕೇಂದ್ರ ಸರಕಾರ ಕೊಡುತ್ತಿದೆ. ರಾಜ್ಯದಲ್ಲಿ 40 ನಗರ ಸಭೆ, 82 ಪುರಸಭೆ ಹಾಗೂ 6 ಮಹಾನಗರ ಪಾಲಿಕೆಗಳಿವೆ. ನಗರಗಳ ಆಡಳಿತ ಅಭಿವೃದ್ಧಿ ಹಾಗೂ ಉಸ್ತುವಾರಿ ನೋಡಲಿಕ್ಕೆ ಹಾಗೂ ಮಾಡಲಿಕ್ಕೆ ನಗರಾಭಿವೃದ್ಧಿ ಇಲಾಖೆಯಿದೆ. ಈ ಇಲಾಖೆಗೆ ಮಂತ್ರಿಗಳು ಹಾಗೂ ಮಂತ್ರಾಲಯೂ ಇದೆ. ನಗರಗಳಲ್ಲಿ ನಾಗರಿಕರಿಗೆ ಅಗತ್ಯವಾದ ಮೂಲಭೂತ ಸೌಕರ್ಯ ಸವಲತ್ತುಗಳನ್ನು ಒದಗಿಸಿ ನಗರ ನಾಗರಿಕರ ಜೀವನ ಹಸವಾಗಿರುವಂತೆ ನೋಡಿಕೊಳ್ಳುವದು ಸರಕಾರದ ಕರ್ತವ್ಯ. ಆದರೆ ಈ ಕರ್ತವ್ಯವನ್ನು ಸರಕಾರ ಸಮರ್ಪಕವಾಗಿ ಪಾಲಿಸದೆ ನಗರದ ನಾಗರಿಕರು ಹೇರಳವಾದ ಕರ ಕಂದಾಯ ಕೊಡುತ್ತಿದ್ದರೂ ಅವರಿಗೆ ಆಯವ್ಯಯದ ಪ್ರಕಾರ ನಿಗದಿತ ಆರ್ಥಿಕ ಹಾಗೂ ಭೌತಿಕ ಗುರಿಯನ್ನು ಸಾಧಿಸುವಲ್ಲಿ ಸತತವಾಗಿ ವಿಫಲಗೊಂಡು ನಾಗರಿಕರನ್ನು ವಂಚಿಸುತ್ತಿರುವದು ಯಥಾ ಪ್ರಕಾರ ಸಾಗಿದೆ. ನಗರ ಪ್ರದೇಶದಲ್ಲಿ ಬುದ್ಧಿ ಜೀವಿಗಳು ಹೆಚ್ಚಾಗಿದ್ದರೂ ಅವರಾದರೂ ನಾಗರಿಕ ಸೌಲಭ್ಯಗಳ ಸವಲತ್ತು ಅಭಿವೃದ್ಧಿ ದೊರಕದ ಬಗ್ಗೆ ಚಕಾರ ಶಬ್ದವನ್ನು ಸರಕಾರದ ವೈಫಲ್ಯದ ಬಗ್ಗೆ ಎತ್ತದಿರುವದು ಪ್ರಜಾತಂತ್ರ ವ್ಯವಸ್ಥೆಯ ಆಡಳಿತ ಅಭಿವೃದ್ಧಿಯ ಅವಹೇಳನವೆನ್ನಬೇಕಾಗಿದೆ. ರಾಜ್ಯದ ನಗರಾಭಿವೃದ್ಧಿಯ ವಿಫಿಧ ಯೋಜನೆಗಳಿಗೆ ನಿಗದಿಗೊಳಿಸಿದ ಬಜೆಟ್ ಹಣವನ್ನು ಸಂಪೂರ್ಣವಾಗಿ ವೆಚ್ಚ ಮಾಡದೆ 1995-96, 96-97, 98-99 ಈ ನಾಲ್ಕು ವರ್ಷಗಳ ಅವಧಿಯಲ್ಲಿ ವಿವಿಧ ಯೋಜನೆಗಳಿಗೆ ರೆವಿನ್ಯೂ ಹಾಗೂ ಬಂಡವಾಳ ಪುರಸ್ಕೃತ ಮೊತ್ತ 220.98 ಕೋಟಿ ಮೊತ್ತವನ್ನು ವೆಚ್ಚ ಮಾಡದೆ ಉಳಿಸಲಾಗಿದೆ. ಅಂತೆಯೇ ಈ ನಾಲ್ಕು ವರ್ಷಗಳ ಅವಧಿಯಲ್ಲಿ ಬೆಂಗಳೂರು ಅಭಿವೃದ್ಧಿಗೆ ನಿಗದಿಪಡಿಸಿದ ಮೊತ್ತವನ್ನು ಸಂಪೂರ್ಣ ವೆಚ್ಚ ಮಾಡದೆ 449.28 ಕೋಟಿ ರೆವಿನ್ಯೂ ಮತ್ತು ಬಂಡವಾಳ ಪುರಸ್ಕೃತ ಮೊತ್ತವನ್ನು ವೆಚ್ಚಮಾಡದೆ ಉಳಿಸಲಾಗಿರುವುದು ಸಂವಿಧಾನ ಬದ್ಧ ಸಿ.ಎ.ಜಿ. ವರದಿಯಿಂದ

ಸುಸ್ಪಷ್ಟಗೊಂಡಿದೆ. ಹೀಗೆ ರಾಜ್ಯದ ನಗರಾಭಿವೃದ್ಧಿ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರದೇಶದಲ್ಲಿಯೇ ನಿಗದಿತ ಆರ್ಥಿಕ ಗುರಿ ಹಾಗೂ ಭೌತಿಕ ಗುರಿಯನ್ನು ಸತತವಾಗಿ ಸಾಧಿಸದೆ ವಿಫಲಗೊಳಿಸುತ್ತ ಹೋಗುವುದು ಯಾವ ಸರಕಾರಕ್ಕೂ ಭೂಷಣವಲ್ಲ. ಪ್ರಜಾತಂತ್ರ ವ್ಯವಸ್ಥೆಯಲ್ಲಿಯ ಪ್ರಜಾ ಸರಕಾರಗಳೇ ತಾವು ನುಡಿದಂತೆ ನಡೆಯದಿದ್ದರೆ ವಿಧಾನ ಸಭೆ ಹಾಗೂ ವಿಧಾನ ಪರಿಷತ್ತುಗಳು ಅಂಗೀಕಾರ ಮಾಡಿದ ಬಜೆಟ್ ಪ್ರಕಾರ ಹಣವನ್ನು ವೆಚ್ಚಮಾಡದೆ ಪ್ರತಿವರ್ಷ ಕೋಟ್ಯಂತರ ಹಣವನ್ನು ವೆಚ್ಚಮಾಡದೆ ಆರ್ಥಿಕ ಹಾಗೂ ಭೌತಿಕ ಗುರಿಯನ್ನು ಸಾಧಿಸದೆ ಹೋಗುತ್ತ ನಗರನಾಗರಿಕರನ್ನು ವಿವಿಧ ಸವಲತ್ತು ಸೌಲಭ್ಯಗಳಿಂದ ವಂಚಿತರಾಗುವಂತೆ ಮಾಡುವದಾದರೆ ಪಾಳೆಗಾರಿಕೆ ಸರ್ವಾಧಿಕಾರಿ ಆಡಳಿತಕ್ಕಿಂತ ಪ್ರಜಾ ಸರಕಾರಗಳು ಮೇಲಲ್ಲವೆಂದು ಹೇಳುವದು ಅನಿವಾರ್ಯ.

ರಾಜ್ಯದ ನಗರಾಭಿವೃದ್ಧಿಗೆ ಸಂಬಂಧಪಟ್ಟಂತೆ ಕೇಂದ್ರ ಸರಕಾರದ ಪುರಸ್ಕೃತ ಯೋಜನೆಗಳಾದ (1) ಸಮಗ್ರ ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಅಭಿವೃದ್ಧಿ ಯೋಜನೆ, (2) ಸ್ವರ್ಣಜಯಂತಿ ಶಹರಿರೋಜಗಾರ ಯೋಜನೆ, (3) ಹತ್ತನೆ ಹಣಕಾಸು ಯೋಜನೆ, (4) ಮೆಗಾಸಿಟಿಯೋಜನೆ, (5) ತ್ವರಿತ ನೀರು ಸರಬರಾಜು ಯೋಜನೆ ಹೀಗೆ ಈ ಐದೂ ಕೇಂದ್ರ ಪುರಸ್ಕೃತ ಯೋಜನೆಗಳು ನಗರಗಳ ನಾಗರಿಕರ ಸರ್ವತೋಮುಖ ಸವಲತ್ತು ಸಮೃದ್ಧಿಗೆ ಕಾಮಧೇನು ಕಲ್ಪವೃಕ್ಷಗಳಾಗಿವೆ. ಈ ಯೋಜನೆಗಳಿಗೆ ಕೇಂದ್ರ ಸರ್ಕಾರ ಪ್ರತಿವರ್ಷ ರಾಜ್ಯ ಸರಕಾರಕ್ಕೆ ಹಣವನ್ನು ಬಿಡುಗಡೆ ಮಾಡುತ್ತದೆ. ಈ ಹಣದೊಂದಿಗೆ ರಾಜ್ಯ ಸರಕಾರ ತನ್ನ ಪಾಲಿನ ಹಣವನ್ನು ಹಾಕಿ ಎರಡೂ ಸರಕಾರಗಳ ಹಣವನ್ನು ರಾಜ್ಯ ಸರಕಾರ ತನ್ನದೆ ಆದ ನಗರಾಭಿವೃದ್ಧಿ ಇಲಾಖೆಯ ಮುಖಾಂತರ ನಗರ ಪ್ರದೇಶದಲ್ಲಿ ಈ ಯೋಜನೆಗಳನ್ನು ಯಶಸ್ವಿಗೊಳಿಸಿ ಸಾಧಿಸಬೇಕಾದ ಆರ್ಥಿಕ ಹಾಗೂ ಭೌತಿಕ ಗುರಿಯನ್ನು ಸಾಧಿಸಲೇಬೇಕಾಗುತ್ತದೆ. ಆದರೆ ಸಾಧನೆ ಸಮರ್ಪಕವಾಗಿರದೆ ವೈಫಲ್ಯದಿಂದ ಕೂಡಿ ನಗರನಾಗರಿಕರ ಅಭಿವೃದ್ಧಿಗೆ ಮಾರಕವಾಗುತ್ತ ನಡೆದಿದೆ.

ಸಮಗ್ರ ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಅಭಿವೃದ್ಧಿ ಯೋಜನೆಯಲ್ಲಿ 97-98 ಹಾಗೂ 98-99ರಲ್ಲಿ ಆರ್ಥಿಕ ಗುರಿಯನ್ನು ನೂರಕ್ಕೆ ನೂರರಷ್ಟು ಸಾಧಿಸಿರುವದಾಗಿ ಸರಕಾರ ಹೇಳಿದ್ದು 99-2000ದಲ್ಲಿ ನಿಗದಿತ ಬಿಡುಗಡೆಯಾದ 7.00 ಕೋಟಿಯಲ್ಲಿ 4.82 ಕೋಟಿ ರೂ. ವೆಚ್ಚ ಮಾಡಿ 2.19 ಕೋಟಿ ಮೊತ್ತವನ್ನು ವೆಚ್ಚ ಮಾಡದೆ ಬಿಟ್ಟು ಯೋಜನೆ ಪರಿಪೂರ್ಣವಾಗಿರುವುದಿಲ್ಲ. ಸ್ವರ್ಣಜಯಂತಿ ಶಹರಿ ರೋಜಗಾರ್ ಯೋಜನೆಯಲ್ಲಿ 98-99, 99-2000 ಈ ಎರಡು ವರ್ಷದ ಅವಧಿಯಲ್ಲಿ 27 ಜಿಲ್ಲೆಗಳಿಗೆ ಬಿಡುಗಡೆಯಾದ 68.42 ಕೋಟಿ ಮೊತ್ತದಲ್ಲಿ 32.72 ಕೋಟಿ ಮೊತ್ತವನ್ನು ವೆಚ್ಚ ಮಾಡಿ 35.70 ಕೋಟಿ ಮೊತ್ತವನ್ನು ವೆಚ್ಚ ಮಾಡದೆ ಉಳಿಸಿ ಈ ಯೋಜನೆಯನ್ನು ಕುಂಠಿಗೊಳಿಸಲಾಗಿದೆ. ಬಹುತೇಕ ಎಲ್ಲಾ ಜಿಲ್ಲೆಗಳು ನಿಗದಿತ ಗುರಿಸಾಧಿಸಲು ಹಿಂದೆ ಬಿದ್ದಿವೆ. ಬೆಂಗಳೂರು ನಗರ ಜಿಲ್ಲೆಗೆ ಬಿಡುಗಡೆಯಾದ 5.56 ಕೋಟಿಯಲ್ಲಿ ಕೇವಲ

3.30 ಕೋಟಿ ವೆಚ್ಚಮಾಡಿದೆ. ಕೋಲಾರ ಜಿಲ್ಲೆಗೆ ಬಿಡುಗಡೆಯಾದ 3.56 ಕೋಟಿಯಲ್ಲಿ ಕೇವಲ 43.00 ಲಕ್ಷ ವೆಚ್ಚ ಮಾಡಲಾಗಿದೆ. ಬೆಳಗಾವಿ ಜಿಲ್ಲೆಗೆ ಬಿಡುಗಡೆಯಾದ 5.03 ಕೋಟಿಯಲ್ಲಿ 1.92 ಕೋಟಿ ವೆಚ್ಚವಾಗಿದೆ. ಹಾವೇರಿ ಜಿಲ್ಲೆಗೆ ಬಿಡುಗಡೆಯಾದ 1.90 ಕೋಟಿಯಲ್ಲಿ ಕೇವಲ 78.00 ಲಕ್ಷ ವೆಚ್ಚ ಮಾಡಲಾಗಿದೆ. ಮಂಡ್ಯ ಜಿಲ್ಲೆಗೆ ಬಿಡುಗಡೆಯಾದ 2.06 ಕೋಟಿಯಲ್ಲಿ ಕೇವಲ 94.00 ಕೋಟಿ ವೆಚ್ಚ ಮಾಡಲಾಗಿದೆ. ಬಾಗಲಕೋಟೆ ಜಿಲ್ಲೆಗೆ ಬಿಡುಗಡೆಯಾದ 3.40 ಕೋಟಿಯಲ್ಲಿ 1.68 ಕೋಟಿ ವೆಚ್ಚ ಮಾಡಲಾಗಿದೆ. ಈ ಯೋಜನೆ ಯಶಸ್ವಿಗೊಳಿಸುವಲ್ಲಿ ಮುಖ್ಯಮಂತ್ರಿ, ನಗರಾಭಿವೃದ್ಧಿ ಮಂತ್ರಿ, ಬಹುತೇಕ ಎಲ್ಲಾ ಜಿಲ್ಲಾ ಉಸ್ತುವಾರಿ ಮಂತ್ರಿಗಳೂ ಕರ್ತವ್ಯಲೋಪಿ ಗಳಾಗಿರುವದು ನಗರ ನಾಗರಿಕರ ದುರ್ದೈವ ಹತ್ತನೇ ಹಣಕಾಸು ಆಯೋಗದ ಯೋಜನೆಯಲ್ಲಿ ರಾಜ್ಯದ ಎಲ್ಲಾ 27 ಜಿಲ್ಲೆಗಳಿಗೆ 97-98, 98-99, 99-2000 ಈ ಮೂರು ವರ್ಷಗಳಲ್ಲಿ ಬಿಡುಗಡೆಯಾದ 71.87 ಕೋಟಿ ಮೊತ್ತದಲ್ಲಿ 31.14 ಕೋಟಿ ವೆಚ್ಚ ಮಾಡಿ 40.73 ಕೋಟಿ ಮೊತ್ತವನ್ನು ಬಳಸದೆ ಉಳಿಸಲಾಗಿದೆ. ಅತಿಹೆಚ್ಚು 6.34 ಕೋಟಿ ಹಣ ಪಡೆದ ಬೆಳಗಾವಿ ಜಿಲ್ಲೆ 2.24 ಕೋಟಿ ವೆಚ್ಚ ಮಾಡಿದೆ. 1.96 ಕೋಟಿ ಪಡೆದ ಬಾಗಲಕೋಟೆ ಜಿಲ್ಲೆ ಕೇವಲ 66.04 ಲಕ್ಷ ವೆಚ್ಚಮಾಡಿದೆ, 2.08 ಕೋಟಿ ಪಡೆದ ಮಂಡ್ಯ 1.04 ಕೋಟಿ ವೆಚ್ಚ ಮಾಡಿದೆ. 2.43 ಕೋಟಿ ಪಡೆದ ಗದಗ ಜಿಲ್ಲೆ ಕೇವಲ 69.43 ಲಕ್ಷ ವೆಚ್ಚ ಮಾಡಿದೆ. ರಾಜ್ಯದ ರಾಜಧಾನಿ ಬೆಂಗಳೂರು ಜಿಲ್ಲೆಯಲ್ಲಿ 5.56 ಕೋಟಿಯಲ್ಲಿ 2.31 ಕೋಟಿ ವೆಚ್ಚವಾಗಿದೆ. ರಾಜ್ಯದಲ್ಲಿ ಕೇವಲ ಆರು ಮಹಾನಗರ ಪಾಲಿಕೆ ಬೆಂಗಳೂರು ನಗರ, ಬೆಳಗಾವಿ ನಗರ, ಗುಲ್ಬರ್ಗಾ ನಗರ, ಹುಬ್ಬಳ್ಳಿ, ಧಾರವಾಡ ನಗರ, ಮಂಗಳೂರು ನಗರ, ಮೈಸೂರರು ನಗರಗಳದ್ದು ಹತ್ತನೇ ಹಣಕಾಸು ಆಯೋಗ ಯೋಜನೆಯಲ್ಲಿ ಈ ಎಲ್ಲಾ ಪಾಲಿಕೆಗಳಿಗೆ ಬಿಡುಗಡೆಯಾದ 12.39 ಕೋಟಿ ಮೊತ್ತದಲ್ಲಿ 97-98, 98-99, 99-2000 ಈ ಮೂರು ವರ್ಷದ ಅವಧಿಯಲ್ಲಿ 5.84 ಕೋಟಿ ವೆಚ್ಚಮಾಡಿ 6.56 ಕೋಟಿ ಮೊತ್ತವನ್ನು ವೆಚ್ಚಮಾಡದೆ ಉಳಿಸಲಾಗಿದೆ. ಇದು ಮಹಾ ಪಾಲಿಕಾಭಿವೃದ್ಧಿಯೇ? ಇದು ಕೂಡ ವೈಫಲ್ಯದತ್ತ ಸಾಗಿ ಪಾಲಿಕೆಗಳು ನಿಗದಿತ ಆರ್ಥಿಕ ಹಾಗೂ ಭೌತಿಕ ಗುರಿ ಸಾಧಿಸದೆ ಹೋದರೆ ಪಾಲಿಕೆಗಳ ಮೇಲೆ ಸರಕಾರದ ಸವಾರಿ ನಿರರ್ಥಕವೆನ್ನಬೇಕಾಗುತ್ತದೆ. ನಗರವಾಸಿ ಪುರಸಭೆ, ನಗರಸಭೆ, ನಗರ ಪಾಲಿಕೆಗಳ ಚುನಾಯಿತ ಸದಸ್ಯರ, ಚುನಾಯಿತ ಅಧ್ಯಕ್ಷ ಹಾಗೂ ಮೇಯರರ, ಶಾಸಕರ, ಸಂಸದರ, ಮಂತ್ರಿಗಳ ಉಸ್ತುವಾರಿ ಮಂತ್ರಿಗಳ ಹಾಗೂ ಮುಖ್ಯಮಂತ್ರಿಗಳ ಕಾರ್ಯದಕ್ಷತೆ ಅಭಾವವೇ ಈ ಎಲ್ಲ ವೈಫಲ್ಯಕ್ಕೆ ಕಾರಣವೆಂದು ಹೇಳಬೇಕಾಗುವದು ಅನಿವಾರ್ಯ. ಸರಕಾರದ ಅಧಿಕೃತ ಮಾಹಿತಿಯಂತೆ ಮೆಗಾಸಿಟಿ ಯೋಜನೆಗೆ ಹಾಗೂ ತ್ವರಿತ ನೀರು ಸರಬರಾಜು ಯೋಜನೆಯಡಿಯಲ್ಲಿ ಮಾತ್ರ ಕೇಂದ್ರ ಸರಕಾರ ಹಾಗೂ ರಾಜ್ಯ ಸರಕಾರಗಳಿಂದ ಬಿಡುಗಡೆಯಾದ ಹಣ ನೂರಕ್ಕೆ ನೂರರಷ್ಟು ವೆಚ್ಚವಾಗಿದೆ. ಈ ಎರಡೂ ಯೋಜನೆಗಳಿಗೆ ಬಿಡುಗಡೆಯಾದ ಹಣ ನೂರಕ್ಕೆ ನೂರರಷ್ಟು ವೆಚ್ಚವಾಗಿರುವಾಗ ಇತರ

ಮೂರು ಯೋಜನೆಗಳಿಗೇಕೆ ನೂರಕ್ಕೆ ನೂರರಷ್ಟು ಹಣ ವೆಚ್ಚಮಾಡಲಿಲ್ಲ? ಸರಕಾರ ಇನ್ನಾದರೂ ಎಚ್ಚೆತ್ತು ತನ್ನ ಕರ್ತವ್ಯದ ಅರಿವನ್ನು ಅರಿತುಕೊಂಡು ರಾಜ್ಯ ಸರಕಾರದ ಹಾಗೂ ಕೇಂದ್ರ ಸರಕಾರದ ಪುರಸ್ಕೃತ ಹಾಗೂ ಇತರ ಎಲ್ಲಾ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿದರೆ ಪ್ರಜಾತಂತ್ರ ವ್ಯವಸ್ಥೆಗೆ ಭೂಷಣ. ಇಲ್ಲವಾದರೆ ಪ್ರಜಾತಂತ್ರ ವ್ಯವಸ್ಥೆಗೆ ಅಪಚಾರ.

❑

ಕೇಂದ್ರ ಯೋಜನೆ ಹಾಗೂ ವಿತ್ತ - ವ್ಯರ್ಥವಾಗದೆ ಸಾರ್ಥಕವಾಗಬೇಕು

ಕೇಂದ್ರ ಸರಕಾರ ಪ್ರತಿವರ್ಷ ಕರ್ನಾಟಕ ಸರಕಾರಕ್ಕೆ ಸಹಾಯಾನುದಾನ ಮತ್ತು ಅಂಶದನ ಹಣವನ್ನು ಕೊಡುತ್ತಲಿದ್ದು 98-99ರಲ್ಲಿ 2043.43 ಕೋಟಿ, 99-2000ರಲ್ಲಿ 2794.56 ಕೋಟಿ ಕೊಟ್ಟಿದ್ದು, 2000-2001ದಲ್ಲಿ 3407.11 ಕೋಟಿಯನ್ನು ಕೊಡಲಿದೆ. ಅಂತೆಯೇ ಕೇಂದ್ರ ಸರಕಾರ ರಾಜ್ಯಕ್ಕೆ ಪ್ರತಿವರ್ಷ ವಿವಿಧ ಸಾಲ ಕೊಡುವದು ಹಾಗೂ ಸಾಲ ಬಾಕಿ ವಸೂಲು ಮಾಡುವದನ್ನು ಮಾಡುತ್ತಿದೆ. ರಾಜ್ಯ ಸರಕಾರದ ಸಾಲದ ಬಾಕಿ ಕೇಂದ್ರ ಸರಕಾರಕ್ಕೆ ಕೊಡತಕ್ಕದ್ದು 98-99ರ ಅಂತ್ಯಕ್ಕೆ 9015.36 ಕೋಟಿ, 99-2000 ಅಂತ್ಯಕ್ಕೆ 94,28.66 ಕೋಟಿಯಾಗಿದ್ದು, ಈ ಬಾಕಿ 2000-2001ರ ಅಂತ್ಯಕ್ಕೆ 10,234.92 ಕೋಟಿ ಏರಲಿದೆ. ರಾಜ್ಯ ಸರಕಾರವು ಈಗಾಗಲೇ 31.03.2000ಕ್ಕೆ ಕೇಂದ್ರ ಸರಕಾರದಿಂದ 10542.93 ಕೋಟಿ ವಿವಿಧ ಸಾಲಗಳನ್ನು ಪಡೆದಿದೆ, ರಾಜ್ಯ ಸರಕಾರ 31-3-2000ಕ್ಕೆ ವಿವಿಧ ಮೂಲಗಳಿಂದ ಆಂತರಿಕ ಸಾಲ 4471.93 ಕೋಟಿ ಪಡೆದಿದೆ. ಹೀಗೆ ರಾಜ್ಯ ಸರಕಾರ 31.03.2000ಕ್ಕೆ ಒಟ್ಟು 15,014.86 ಕೋಟಿ ಒಟ್ಟು ಸಾಲ ಪಡೆದಿದೆ. ಕೇಂದ್ರದ ಸಾಲ ಸಹಾಯಧನ ಮತ್ತು ಅಂಶದಾನ ಆಂತರಿಕ ಸಾಲ ಪಡೆಯುವ ಮಹದುದ್ದೇಶ ರಾಜ್ಯದ ಸಾಮಾನ್ಯ ಸಾಮಾಜಿಕ ಹಾಗೂ ಆರ್ಥಿಕ ಸೇವೆಗಳಿಗೆ ರೆವಿನ್ಯೂ ಹಾಗೂ ಬಂಡವಾಳ ಮೇಲಿನ ವೆಚ್ಚ ಮಾಡಿ ಈ ರಾಜ್ಯದ ಕೃಷಿ ಹಾಗೂ ಕೃಷಿಯೇತರರ ಆರ್ಥಿಕ ಅಭಿವೃದ್ಧಿಗೋಸ್ಕರವೇ ಆಗಿದೆ. ಆಯವ್ಯಯದಲ್ಲಿ ನಿಗದಿತ ಮೊತ್ತವನ್ನು ಅನ್ನದಾತ ಕೃಷಿಕರಿಗಾಗಿ ಮುಡುಪಾಗಿಟ್ಟಿದ್ದನ್ನು ಸಂಪೂರ್ಣವಾಗಿ ವೆಚ್ಚಮಾಡದೆ ಕೃಷಿಕರನ್ನು ಕೃಷಿ ಉದ್ಯಮವನ್ನು ಸರಕಾರ ವಂಚಿಸುತ್ತಿರುವದು. ಸಿ.ಎ.ಜಿ. ವರದಿ ಸರಕಾರದ ವಿತ್ತ. ನಿರೂಪಣೆ, ಶಾಸಕಾಂಗ ಸಮಿತಿಗಳ ವರದಿ ಹಾಗೂ ಸರಕಾರದ ಅಧೀಕೃತ ಹೇಳಿಕೆಗಳನ್ನು ನೋಡಿದರೆ ಸುಸ್ಪಷ್ಟವಿದೆ. 95-96-97-98ನೇ ಸಾಲಿನಲ್ಲಿ ಕೃಷಿ ಇಲಾಖೆ 125.85 ಕೋಟಿ ಹಣವನ್ನು ವೆಚ್ಚ ಮಾಡದಿರುವದು ಸಿ.ಎ.ಜಿ. ವರದಿಯಿಂದ ತಿಳಿದು ಬಂದಿದೆ. ಗ್ರಾಮ ಮಟ್ಟದ ಕೃಷಿ ಸಹಾಯಕ (ಗ್ರಾಮಸೇವಕ) ನಿಂದ ಹಿಡಿದು ಡೈರೆಕ್ಟರ್ ಆಫ್ ಆಗ್ರಿಕಲ್ಚರವರೆಗಿನ ಕೃಷಿ ಇಲಾಖೆ 2401 ಶೀರ್ಷಿಕೆಯಲ್ಲಿ ಸರಕಾರಿ ಹಾಗೂ ಜಿಲ್ಲಾ

ಪಂಚಾಯತಗಳಲ್ಲಿ ಒಟ್ಟು 14,848 ಜನ ಸಿಬ್ಬಂದಿ ಇದೆ. ಈ ಸಿಬ್ಬಂದಿಯ ಅಥವಾ ಈ ಇಲಾಖೆಗಳ ಅಸ್ತಿತ್ವ ಮಾರ್ಗದರ್ಶನ ಹಾಗೂ ಸಲಹೆಗಳಿಲ್ಲದೆ ರೈತರಿಗೆ ಮಾರಕವಾಗಿದೆಯೇ ಹೊರತು ತಾರಕವಾಗಿಲ್ಲ. ಕೃಷಿಗೆ ನಿಗದಿಪಡಿಸಿದ ಹಣ ಪ್ರತಿವರ್ಷ ವೆಚ್ಚಮಾಡದೆ ಈ ಸಿಬ್ಬಂದಿಯ ವೇತನ ಭತ್ಯೆಗಳಿಗೆ ನಿಗದಿಪಡಿಸಿದ ಹಣಕ್ಕಿಂತ ಪ್ರತಿವರ್ಷ ಹೆಚ್ಚು ವೆಚ್ಚಮಾಡುತ್ತ ಭೌತಿಕ ಹಾಗೂ ಆರ್ಥಿಕ ಗುರಿಯನ್ನು ನಿಗದಿಪಡಿಸಿದ ಪ್ರಕಾರ ಸಾಧಿಸಿದೆ ಕೃಷಿಕರು, ಕೃಷಿ ಉದ್ಯಮ ಹಾಗೂ ಕೃಷಿ ಆಧಾರಿತ ಉದ್ಯಮಗಳೆಲ್ಲಾ ಅವಸಾನದ ಅಂಚಿನಲ್ಲಿವೆ. ಶೇಂಗಾಕಾಳು, ಕುಸುಬೆಕಾಳು, ಸೂರ್ಯಕಾಂತಿ ಕಾಳು ಹಾಗೂ ವಿವಿಧ ಎಣ್ಣೆಕಾಳು ಬೆಳೆಯಲು ಮಾರ್ಗದರ್ಶನವಿರದೆ ಈ ಎಣ್ಣೆಕಾಳುಗಳ ಬೆಳೆಯ ಕ್ಷೇತ್ರ ಭಾರಿ ಪ್ರಮಾಣದಲ್ಲಿ ಕಡಿಮೆಯಾಗುತ್ತ ಎಣ್ಣೆಕಾಳುಗಳ ಅಭಾವದಿಂದಾಗಿ ಎಣ್ಣೆ ಮಿಲ್ಲುಗಳೆಲ್ಲಾ ಕದ ಮುಚ್ಚಿವೆ. ಅಗತ್ಯವಾದ ಉತ್ತಮವಾದ ಕುಸುಬೆ, ಶೇಂಗಾ ಸೂರ್ಯಕಾಂತಿ ಇತ್ಯಾದಿ ಎಣ್ಣೆ ಬಳಕೆದಾರರಿಗೆ ಸಿಗದೆ ಬಳಕೆದಾರರು ಆಮದು ಎಣ್ಣೆ ಉಣ್ಣಬೇಕಾಗಿದೆ. ಎಣ್ಣೆ ಗಿರಣಿಗಳ ಸಾಮರ್ಥ್ಯಕ್ಕೆ ತಕ್ಕಂತೆ ಹಾಗೂ ಉಣ್ಣಲು ಬೇಕಾದ ಎಣ್ಣೆ ಪ್ರಮಾಣಕ್ಕೆ ತಕ್ಕಂತೆ ಎಣ್ಣೆಕಾಳು ಬೆಳೆಯುವದನ್ನು ಬಿಟ್ಟು ಮೆಕ್ಕೆ ಜೋಳವನ್ನು ಮಿತಿಮೀರಿ ಅಗತ್ಯತೆಗಿಂತ ಹೆಚ್ಚಾಗಿ ಬೆಳೆಯಲು ಮುಂದಾಗಿ ಮೆಕ್ಕೆ ಜೋಳದ ಖರೀದಿದಾರರು ಇಲ್ಲದೆ ಕೇಂದ್ರ ಸರಕಾರ ಮೆಕ್ಕಿ ಜೋಳದ ಖರೀದಿಗೆ ಮುಂದಾಗಿರುವದು ಸದ್ಯಕ್ಕೆ ಸುದೈವವಾಗಿದ್ದರೂ ಮುಂದೇನು ಎಂಬ ಬಗ್ಗೆ ಕೃಷಿ ಇಲಾಖೆ ವ ಸರಕಾರ ದೂರಾಲೋಚನೆ ಮಾಡುವದು ಅಗತ್ಯ ಕರ್ತವ್ಯ. ಸಾರ್ವಜನಿಕ ನೌಕರರು ತಮ್ಮ ಸ್ವಂತ ಹಿತದ ಬಗ್ಗೆ ಹಾಗೂ ಭವಿಷ್ಯದ ಬಗ್ಗೆ ಚಿಂತನೆ ಮಾಡುವದರ ಜೊತೆಗೆ ಸಾರ್ವಜನಿಕರ ಹಿತ ಹಾಗೂ ಭವಿಷ್ಯದ ಬಗ್ಗೆ ಸಹ ಚಿಂತಿಸುವದು ಒಳ್ಳೆಯದು.

ಕೇಂದ್ರ ಸರಕಾರದಿಂದ ವರದಾನವಾದ ಕೃಷಿ ಯೋಜನೆಗಳನೇಕ ರಾಜ್ಯಕ್ಕೆ ದೊರೆಯುತ್ತಿವೆ. ಈ ಕೃಷಿಯೋಜನೆಗಳನ್ನು ರಾಜ್ಯ ಕೃಷಿ ಇಲಾಖೆ ಕೃಷಿವರ್ಧನೆಗಾಗಿ ಅನುಷ್ಠಾನಗೊಳಿಸಬೇಕಾಗುತ್ತದೆ. ಕೇಂದ್ರದಿಂದ ದೊರೆಯುವ ಯೋಜನೆಗಳಾದ (1) ಏಕದಳ ಧಾನ್ಯ ಅಭಿವೃದ್ಧಿ ಯೋಜನೆ, (2) ವೇಗವರ್ಧಕ ಮುಸುಕಿನ ಜೋಳ ಅಭಿವೃದ್ಧಿ ಯೋಜನೆ, (3) ಎಣ್ಣೆಕಾಳು ಉತ್ಪಾದನಾ ಯೋಜನೆ, (4) ದ್ವಿದಳ ಧಾನ್ಯ ಅಭಿವೃದ್ಧಿ ಯೋಜನೆ, (5) ತೀವ್ರ ಹತ್ತಿ ಅಭಿವೃದ್ಧಿ ಯೋಜನೆ, (6) ಸಣ್ಣ ಟ್ರಾಕ್ಟರ್‌ಗಳ ವಿತರಣಾ ಯೋಜನೆ, (7) ಕಬ್ಬು ಅಭಿವೃದ್ಧಿ ಯೋಜನೆ, (8) ಗೋಧಿ ಕಿರುಚೀಲ ಪ್ರಾತ್ಯಕ್ಷಿಕೆ ಯೋಜನೆ, (9) ಭತ್ತದ ಕಿರುಚೀಲ ಪ್ರಾತ್ಯಕ್ಷಿಕೆ ಯೋಜನೆ, (10) ಒರಟು ಧಾನ್ಯ ಕಿರುಚೀಲ ಪ್ರಾತ್ಯಕ್ಷಿಕೆ ಯೋಜನೆ, (11) ಸಮಗ್ರ ಪೀಡೆ ನಿರ್ವಹಣೆ ಅಡಿಯಲ್ಲಿ ಗುಲಬರ್ಗಾದಲ್ಲಿ ಹೊಸದಾಗಿ ಜೈವಿಕ ನಿಯಂತ್ರಣ ಪ್ರಯೋಗ ಶಾಲೆ ಸ್ಥಾಪನೆ ಯೋಜನೆ, (12) ರಸಗೊಬ್ಬರಗಳ ಸಮಗ್ರ ಮತ್ತು ಸಮತೋಲನ ಬಳಕೆ ಯೋಜನೆ, (13) ಜೈವಿಕ ಗೊಬ್ಬರಗಳ ಅಭಿವೃದ್ಧಿ ಬಳಕೆಯ ರಾಷ್ಟ್ರೀಯ ಯೋಜನೆ, (14) ಸಣ್ಣ ಮತ್ತು ಅತಿ ಸಣ್ಣ ರೈತರ ವಿಶೇಷ ನೆರವಿನ ಹಾಗೂ ಕೀಟನಾಶಕ ನಿಯಂತ್ರಣ ಪ್ರಯೋಗ ಶಾಲೆಗಳ

ಬಲವರ್ಧನೆ (15) ರಾಜ್ಯ ಭೂಬಳಕೆ ಮಂಡಳಿ ಯೋಜನೆ, ಹೀಗೆ ಈ ಹದಿನೈದು ಕೇಂದ್ರ ಸರಕಾರ ಪುರಸ್ಕೃತ ಯೋಜನೆಗಳು ರಾಜ್ಯದಲ್ಲಿ ಅನುಷ್ಠಾನಗೊಳ್ಳಬೇಕಾಗಿದೆ. ಈ ಯೋಜನೆಗಳಿಗೆ ಕೇಂದ್ರ ಹಾಗೂ ರಾಜ್ಯ ಸರಕಾರಗಳೆರಡೂ ತಮ್ಮ ಪಾಲಿನ ಹಣವನ್ನು ಹಾಕಬೇಕಾಗುತ್ತದೆ. ಆ ಪ್ರಕಾರ ಕೇಂದ್ರ ಸರಕಾರ ರಾಜ್ಯ ಸರಕಾರಕ್ಕೆ ಪ್ರತಿವರ್ಷ ಹಣವನ್ನು ಬಿಡುಗಡೆ ಮಾಡುತ್ತದೆ. ಈ ಎಲ್ಲ 18 ಯೋಜನೆಗಳಿಗೆ 97-98, 98-99, 99-2000 ಈ ಮೂರು ವರ್ಷದಲ್ಲಿ ಕೇಂದ್ರ ಸರಕಾರ ರಾಜ್ಯ ಸರಕಾರಕ್ಕೆ 48.60 ಕೋಟಿ ಕೊಟ್ಟಿದೆ. ರಾಜ್ಯ ಸರಕಾರ ಕೇವಲ 15.15 ಕೋಟಿ ನೀಡಿ ಕೃಷಿ ಇಲಾಖೆಗೆ ಯೋಜನೆಗಳ ಆರ್ಥಿಕ ಹಾಗೂ ಭೌತಿಕ ಗುರಿ ಸಾಧಿಸಲು ಜವಾಬ್ದಾರಿ ವಹಿಸಿ ಕೊಟ್ಟಿದೆ. ಕೃಷಿ ಇಲಾಖೆಯ ಸಂಪೂರ್ಣ ಹಣ ವೆಚ್ಚಮಾಡಿ ಆರ್ಥಿಕ ಹಾಗೂ ಭೌತಿಕ ಸಾಧನೆ ಗಳಿಸಿದೆಯೇ? ಮೂರು ವರ್ಷದ ಅವಧಿಯಲ್ಲಿ ಲಭ್ಯವಿದ್ದ ಕೇಂದ್ರ ಹಾಗೂ ರಾಜ್ಯದ ಒಟ್ಟಾರೆ ಮೊತ್ತ 63.74 ಕೋಟಿಯಲ್ಲಿ 50.94 ಕೋಟಿ ಹಣವನ್ನು ಮಾತ್ರ ವೆಚ್ಚ ಮಾಡಿ 12.81 ಕೋಟಿ ಮೊತ್ತವನ್ನು ವೆಚ್ಚಮಾಡುವಲ್ಲಿ ಸರಕಾರ ವಿಫಲಗೊಂಡು ಸಾಧಿಸಬೇಕಾಗಿದ್ದ ಸಂಪೂರ್ಣ ಆರ್ಥಿಕ ಹಾಗೂ ಭೌತಿಕ ಗುರಿಯನ್ನು ಸಾಧಿಸದೆ ವಿಫಲಗೊಂಡು ವ್ಯವಸಾಯ ಅಭಿವೃದ್ಧಿಗೆ ಹಾಗೂ ವಿಕಾಸಕ್ಕೆ ಅವಶ್ಯಕವಾದ ಈ ಪೂರಕ ಹಾಗೂ ತಾರಕ ಯೋಜನೆಗಳನ್ನು ಕುಂಠಿತಗೊಳಿಸಲಾಗಿದೆ. ಇದೊಂದು ಅಧಿಕೃತ ಸಣ್ಣ ಉದಾಹರಣೆ ಮಾತ್ರ. ಹಾಗೂ ಇಂಥಹ ಅನೇಕ ಉತ್ತಮ ಯೋಜನೆಗಳು ಯಶಸ್ವಿಯಾಗಿ ಗ್ರಾಮಾಂತರ ರೈತರ ಪ್ರಯೋಜನದಾರರಿಗೆ ವಾಸ್ತವಿಕವಾಗಿ ಸಿಗದೆ ಕಾಗದದ ಕುದುರೆ ಯೋಜನೆಗಾಗಿ ಹರಿದು ಬಂದ ಹಣ ಹಾಗೂ ಪ್ರಯೋಜನ ಸಿಗಬೇಕಾದವರಿಗೆ ಸಿಗದೆ ಕೆಲವು ಅಧಿಕಾರಿಗಳಿಗೆ ಸಿಕ್ಕು ಕೋಟ್ಯಾಂತರ ಹಣವನ್ನು ಲೋಕಾಯುಕ್ತ ಅಧಿಕಾರಿಗಳು ಪತ್ತೆಹಚ್ಚಿದ ಉದಾಹರಣೆ ಕೂಡ ಪತ್ರಿಕೆಗಳ ಮುಖಾಂತರ ಸ್ಪಷ್ಟವಾಗಿವೆ. ಈ ಯೋಜನೆಗಳು ಬಹುತೇಕ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿದ್ದು ಈ ಯೋಜನೆಗಳ ಪ್ರಯೋಜನ ಪಡೆದ ಪ್ರಯೋಜನದಾರರು ಯಾರ್ಯಾರು ಯಾರಿಗೆ ಎಷ್ಟರ ಮಟ್ಟಿಗೆ ಪ್ರಯೋಜನ ದೊರಕಿದೆ. ಈ ಪ್ರಯೋಜನ ಅರ್ಹರಿಗೆ ಸಿಕ್ಕಿದೆಯೇ ಎಂಬುದನ್ನು ಆಯಾ ಜಿಲ್ಲೆಯ ಶಾಸಕರು ಖಾತ್ರಿ ಮಾಡಿಕೊಂಡರೆ ಒಳ್ಳೆಯದು. ರಾಜ್ಯದ ಜನತೆಗೆ ಸಿಗಬೇಕಾದ ಇಂಥಹ ಹಲವಾರು ಯೋಜನೆಗಳು ನಿಗದಿತ ಆರ್ಥಿಕ ಹಾಗೂ ಭೌತಿಕ ಸೌಲಭ್ಯವನ್ನು ದೊರಕಿಸಿಕೊಡುವಲ್ಲಿ ವಿಫಲವಾದರೆ ಅವುಗಳ ಪ್ರಯೋಜನ ಜನತೆಗೆ ಸಿಗದೆ ಹೋದರೆ ಈ ಯೋಜನೆಗಳನ್ನು ಜನತೆಗೆ ಸಿಗದಂತೆ ಮಧ್ಯವರ್ತಿಗಳು ಹಾಗೂ ಅಧಿಕಾರಿಗಳು ಸೇರಿ ಹಾರ್‍ರೊಡೆದರೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಪ್ರಜೆಗಳ ಪಾಡೇನು? ಜನತಾ ಪ್ರತಿನಿಧಿಗಳ ಹೊಣೆಗಾರಿಕೆ ಏನು?

ಮಂತ್ರಿಗಳಾದವರು ಸಹ ತಮ್ಮ ತಮ್ಮ ಇಲಾಖೆಯನ್ನು ಹಾಗೂ ಇಲಾಖೆಯ ಅಧಿಕಾರಿ ಸಿಬ್ಬಂದಿಯನ್ನು ಸಮರ್ಥರೀತಿಯಲ್ಲಿ ಸವಾರಿ ಮಾಡದೆ ಸಮರ್ಥ ಆಡಳಿತ ಮಾಡದೆ ನಿಗದಿತ ಆರ್ಥಿಕ ಭೌತಿಕ ಗುರಿ ಸಾಧಿಸುವಲ್ಲಿ ಅಸಮರ್ಥರಾದರೆ ಅಂಥವರ

ಮೇಲೆ ಮುಖ್ಯಮಂತ್ರಿಗಳ ಕ್ರಮವೇನು? ಈ ದಿಶೆಯಲ್ಲಿ ಎಲ್ಲರ ಚಿಂತನೆ ಅವಶ್ಯ. ಕೇಂದ್ರ ಹಾಗೂ ರಾಜ್ಯ ಸರಕಾರಗಳ ಹಣ ಹಾಗೂ ಯೋಜನೆ ರಾಜ್ಯದ ಹಾಗೂ ರಾಜ್ಯದ ಜನತೆಯ ಸರ್ವಾಂಗೀಣ ಅಭಿವೃದ್ಧಿಗೆ ಸಾರ್ಥಕವಾಗಬೇಕೇ ಹೊರತು ವ್ಯರ್ಥ ಹಾಗೂ ನಿರರ್ಥಕವಾಗಬಾರದು.

❑

ನಿರ್ಲಕ್ಷಿತ ನಗರಾಭಿವೃದ್ಧಿ : ಹುಸಿ ಭರವಸೆಯ ಬಜೆಟ್

ರಾಜ್ಯಾದ್ಯಂತ ಪಟ್ಟಣಗಳಲ್ಲಿ ನಡೆಯುವ ಎಲ್ಲಾ ವ್ಯವಹಾರ ಹಾಗೂ ವ್ಯವಸ್ಥೆ ಗ್ರಾಮಗಳ ಅಭಿವೃದ್ಧಿ ಹಾಗೂ ಮುನ್ನಡೆಗೆ ಅಡಿಪಾಯ ಹಾಗೂ ಮಾರ್ಗಸೂಚಿಯಾಗಿದೆ. ಪಟ್ಟಣಗಳಲ್ಲಿಯ ವ್ಯವಹಾರ, ಉದ್ಯಮ, ಶಿಕ್ಷಣ, ಆಡಳಿತ ಹಾಗೂ ಸರ್ವಾಂಗೀಣ ಅಭಿವೃದ್ಧಿಯನ್ನು ಕಡೆಗಣಿಸದೆ ಸರ್ಕಾರ ಸಾಧಿಸಲೇಬೇಕಾದ್ದು ಅಗತ್ಯ ಹಾಗೂ ಅತ್ಯವಶ್ಯಕ. ರಾಜ್ಯಾದ್ಯಂತ ಪಟ್ಟಣಗಳಲ್ಲಿ ಪಟ್ಟಣ ಪಂಚಾಯತಿ ಪುರಸಭೆ, ನಗರಸಭೆ, ಹಾಗೂ ಮಹಾನಗರ ಪಾಲಿಕೆಗಳಿವೆ. ಈ ಸ್ಥಳೀಯ ಸಂಸ್ಥೆ, ನಗರ ಪಾಲಿಕೆ, ನಗರಾಭಿವೃದ್ಧಿ ಪ್ರಾಧಿಕಾರ, ಪಟ್ಟಣ ಅಭಿವೃದ್ಧಿ ಮಂಡಳಿಗಳಿಗೆ ಅಭಿವೃದ್ಧಿಗೋಸ್ಕರವಾಗಿ ಸರಕಾರ ಪ್ರತಿವರ್ಷ ನಿಗದಿತ ಮೊತ್ತವನ್ನು ಆಯವ್ಯಯ ಪ್ರಕಾರ ವೆಚ್ಚ ಮಾಡಲೇಬೇಕಾಗುತ್ತದೆ ಹಾಗೂ ಆರ್ಥಿಕ ಮತ್ತು ಭೌತಿಕ ಗುರಿಯನ್ನು ಸಾಧಿಸಲೇಬೇಕಾಗುತ್ತದೆ. ಕೊಳಚಿ ಪ್ರದೇಶ ಸುಧಾರಣೆ, ಕೊಳಚಿಗಳ ಸುಧಾರಣೆ, ವಿಶೇಷ ಘಟಕ ಯೋಜನೆ, ರಸ್ತೆ ಯೋಜನೆ, ಆರ್ಥಿಕವಾಗಿ ದುರ್ಬಲ ವರ್ಗದವರಿಗೆ ಮನೆ, ನಿವೇಶನ, ವಿದ್ಯುತ್ ಅನುಕೂಲ, ನೀರಿನ ಅನುಕೂಲ, ಜನಮಾಲಿನ್ಯ ನಿವಾರಣೆ ಇತ್ಯಾದಿ ವಿವಿಧ ಯೋಜನೆಗಳನ್ನು ನಗರಾಭಿವೃದ್ಧಿ ಇಲಾಖೆ ಅನುಷ್ಠಾನಗೊಳಿಸಿ ಯಶಸ್ವಿಗೊಳಿಸಬೇಕಾಗುತ್ತದೆ. ಇದಕ್ಕಾಗಿಯೇ ನಗರಾಭಿವೃದ್ಧಿ ಸಚಿವಾಲಯ ಸಿಬ್ಬಂದಿಯೊಂದಿಗೆ ಸಾಕಷ್ಟು ಇಲಾಖಾ ಅಧಿಕಾರಿ ಸಿಬ್ಬಂದಿಯಿದ್ದಾರೆ. ಈ ಎಲ್ಲರಿಗೆ ಸಮರ್ಪಕ ಆಡಳಿತ ಮಾಡಿ ನಿಗದಿತ ಗುರಿ ಸಾಧಿಸಲೆಂದು ಸಾಕಷ್ಟು ವೇತನ ಭತ್ಯೆ, ಇತರೆ ಭತ್ಯೆ, ಪ್ರಯಾಣ ಭತ್ಯೆ, ವೆಚ್ಚವನ್ನು ಪ್ರತಿವರ್ಷ ಬಜೆಟ್ ಮೀರಿ ಕೊಟ್ಟು ಅವರಿಗೆ ಅನೂಕೂಲವಾಗಲೆಂದು ಕಛೇರಿ ವೆಚ್ಚ, ದೂರವಾಣಿ ವೆಚ್ಚ, ವಿದ್ಯುತ್ ವೆಚ್ಚ, ನೀರಿನ ವೆಚ್ಚ, ಇಂಧನ ಮತ್ತು ತೈಲ ವೆಚ್ಚ, ಮೋಟಾರ ವಾಹನ ದುರಸ್ತಿ, ಹೊಸ ಮೋಟಾರ ಖರೀದಿ, ಸಾಧನ ಸಾಮಗ್ರಿ ಮತ್ತು ಸಲಕರಣೆಗಳ ಖರೀದಿ ವೆಚ್ಚ, ಪೀಠೋಪಕರಣ ವೆಚ್ಚ ಇತ್ಯಾದಿ ಇತರ ವೆಚ್ಚಕ್ಕಾಗಿ ಸಹ ಬಜೆಟ್‌ದಲ್ಲಿ ಹಣವನ್ನು

ಪ್ರತಿವರ್ಷ ತೆಗೆದು ನಿಗದಿಪಡಿಸಲಾಗುತ್ತಿದ್ದು ಈ ನಿಗದಿತ ಮೊತ್ತವನ್ನು ಸಂಪೂರ್ಣವಾಗಿ ವೆಚ್ಚ ಮಾಡುವುದಲ್ಲದೆ ಅನೇಕ ಸಾರಿ ಬಜೆಟ್ ಮೊತ್ತ ಮೀರಿ ವೆಚ್ಚ ಮಾಡಿದ ಉದಾಹರಣೆಗಳು ಉಂಟು. ಅಂದ ಮೇಲೆ ಈ ವೆಚ್ಚವನ್ನು ಸರ್ಕಾರ ಯಾವ ರೀತಿಯಲ್ಲಿ ವೆಚ್ಚ ಮಾಡುತ್ತದೆಯೋ ಅದೇ ರೀತಿಯಲ್ಲಿ ನಗರಾಭಿವೃದ್ಧಿಗೆ ಬಜೆಟ್‌ದಲ್ಲಿ ನಗದಿತ ಹಣವನ್ನು ಸಂಪೂರ್ಣವಾಗಿ ಏಕೆ ಪ್ರತಿವರ್ಷ ವೆಚ್ಚ ಮಾಡುವುದಿಲ್ಲ? ಈ ವೈಫಲ್ಯವನ್ನು ನಗರ ಪಿತಾಮಹ ನಾಗರಿಕ ಮತದಾರರು ಯಾರೂ ಕೇಳುವುದಿಲ್ಲ, ನಗರ ಜನಪ್ರತಿನಿಧಿಗಳಾರೂ ಕೇಳುವುದಿಲ್ಲ, ಶಾಸಕರಾಗಲೀ, ಸಂಸದರಾಗಲೀ ಯಾರೂ ಕೇಳುವುದಿಲ್ಲವೆಂದೇ ನಿರಾತಂಕವಾಗಿ ಈ ವೈಫಲ್ಯ ಮುಂದುವರೆಯಬೇಕೆ? ಇದನ್ನೆಲ್ಲಾ ನಗರಾಭಿವೃದ್ಧಿ ಮಂತ್ರಿಗಳು ಕಂಡೂ ಅಥವಾ ಏನೂ ಗೊತ್ತಾಗದೆ ಅಥವಾ ತಿಳಿಯದೇ ಮೂಕಪ್ರೇಕ್ಷಕರಾಗಿ ಮುಂದೆ ನಡೆಯಬೇಕೆ? ಅಸಮರ್ಥ ನಗರಾಭಿವೃದ್ಧಿ ಅಧಿಕಾರಿ ಶಾಖೆಯನ್ನು ಸವಾರಿ ಮಾಡುವ ಸಾಮರ್ಥ್ಯ ಮಂತ್ರಿಗಳಿಗಿಲ್ಲವೆ? ಇದು ಪ್ರಜಾರಾಜ್ಯವೇ ಅಥವಾ ಪಾಳೆಗಾರಿಕೆ ರಾಜ್ಯವೇ ಎಂದು ಪ್ರಶ್ನಿಸಬೇಕಾಗುತ್ತದೆ. ಇದಕ್ಕೆಲ್ಲ ಉಪಾಯವೇನು? ಈ ದಿಶೆಯಲ್ಲಿ ಎಲ್ಲರ ಚಿಂತನ ಮಂಥನ ಅತ್ಯಗತ್ಯ.

ಹೊಸ ವರ್ಷದ ಬಜೆಟ್ ಬಂದಿದೆ. ಈ ಹೊಸ ವರ್ಷ 2001-2002ರಲ್ಲಿ ನಗರಾಭಿವೃದ್ಧಿಗಾಗಿ ರಾಜಸ್ವ ಲೆಕ್ಕ, ಬಂಡವಾಳ ಲೆಕ್ಕ, ಸಾಲದ ಲೆಕ್ಕ ಹೀಗೆ ಈ ಮೂರು ಲೆಕ್ಕದಲ್ಲಿ 355.48 ಕೋಟಿ ಮೊತ್ತವನ್ನು ತೆಗೆದಿಟ್ಟು ನಗರದ ನಾಗರಿಕರ ಬಾಯಲ್ಲಿ ನೀರು ಬರುವಂತೆ ಮಾಡಿ ಮೂಗಿಗೆ ತುಪ್ಪ ಹಚ್ಚಿ ವಾಸನೆ ಮೂಸಿಸುವಂತೆ ಮಾಡಿ ವರ್ಷದಾಂತ್ಯಕ್ಕೆ ಸಾಕಷ್ಟು ಭಾರೀ ಕೋಟಿ ಕೋಟಿ ಮೊತ್ತವನ್ನು ವೆಚ್ಚ ಮಾಡದೇ ಬಿಟ್ಟು ಯಥಾಪ್ರಕಾರ ನಿರಾತಂಕವಾಗಿ ಪ್ರತಿವರ್ಷ ನಗರ ನಾಗರಿಕರನ್ನು ವಂಚಿಸುವದೇ? ಈ ವಂಚನೆ ನಿವಾರಣೆಗೆ ಉಪಾಯವೇನು? ಪ್ರತಿವರ್ಷ ಬಜೆಟ್‌ದಲ್ಲಿ ಹೆಚ್ಚಿಗೆ ಅಂದಾಜು ವೆಚ್ಚ ತೋರಿಸುವದು, ಈ ಹೆಚ್ಚಿಸಿದ ಅಂದಾಜನ್ನು ವಾಸ್ತವಿಕವಾಗಿ ವೆಚ್ಚ ಮಾಡದೆ ಕೋಟ್ಯಂತರ ಹಣವನ್ನು ಉಳಿಸಿ ಅಭಿವೃದ್ಧಿ ಕಾರ್ಯಗಳನ್ನು ಕುಂಠಿತಗೊಳಿಸುತ್ತ ನಾಗರಿಕರನ್ನು ವಂಚಿಸುವುದು ಯಾವುದೇ ಸರ್ಕಾರವಿರಲಿ ಆ ಸರ್ಕಾರಕ್ಕೆ ಭೂಷಣವಲ್ಲ. ಅಂಥಹ ಸರ್ಕಾರಕ್ಕೆ ನಾಗರೀಕ ವಿರೋಧಿ ಸರ್ಕಾರವೆನ್ನದೆ ಗತ್ಯಂತರವಿಲ್ಲ. ಸರ್ಕಾರದ ವಾರ್ಷಿಕ ವಿತ್ತ ನಿರೂಪಣೆ ಆಯವ್ಯಯದ ಪ್ರಕಾರ ರೆವಿನ್ಯೂ ಬಂಡವಾಳ ಹಾಗೂ ಸಾಲದ ಲೆಕ್ಕದಲ್ಲಿ ವೆಚ್ಚ ಮಾಡದೇ ಬಿಟ್ಟಿರುವ ಮೊತ್ತ 98-99ರಲ್ಲಿ 80.33 ಕೋಟಿ, 99-2000ರಲ್ಲಿ 37.00 ಕೋಟಿ, 2000-2001ರಲ್ಲಿ 47.96 ಕೋಟಿ. ಇದು ನಿರಂತರವಾಗಿ ನಡೆದು ಬಂದಿದೆ. ಈ ವೈಫಲ್ಯ ಹಾಗೂ ನಗರ ವಿರೋಧಿ ಏಕೆ? ಈ ಮೂರು ವರ್ಷಗಳಲ್ಲಿ 165.28 ಕೋಟಿ ವೆಚ್ಚ ಮಾಡದೆ ಬಿಡುವುದಾದರೆ ಇದಕ್ಕಾಗಿಯೇ ಒಬ್ಬ ಮಂತ್ರಿ, ಈ ಮಂತ್ರಿ ಇದನ್ನೆಲ್ಲ ನೋಡಲಿಕ್ಕೆ ಸರಿಪಡಿಸಲಿಕ್ಕೆ ಆಗದೆ ಯಥಾಪ್ರಕಾರ ಈ ದುರವಸ್ಥೆ ಮುಂದುವರೆಯಬೇಕೆ? ಇದಕ್ಕೆ ಪ್ರಜಾತಂತ್ರ ವ್ಯವಸ್ಥೆ ಎನ್ನಬೇಕೆ? ಬಜೆಟ್

ಪ್ರಕಾರ 98-99ರಲ್ಲಿ 211.75 ಕೋಟಿ, 99-2000ರಲ್ಲಿ 197.28 ಕೋಟಿ, 2000-2001ರಲ್ಲಿ 253.35 ಕೋಟಿ ನಿಗದಿ ಮಾಡಿ ಅದರಲ್ಲಿ ಒಟ್ಟಾರೆ 165.28 ಕೋಟಿ ವೆಚ್ಚ ಮಾಡದೆ ಬಿಟ್ಟು 2001-2002 ಈ ವರ್ಷದಲ್ಲಿ ಒಮ್ಮೆಲೇ 355.48 ಕೋಟಿ ವೆಚ್ಚ ಮಾಡುವ ಅಂದಾಜನ್ನು ತೋರಿಸುವ ತಂತ್ರದ ಹಿನ್ನೆಲೆಯಾದರೂ ಏನು?

ಸಿ.ಎ.ಜಿ. ವರದಿ 99-2000 ಸಾಲಿನದು ಇನ್ನೂ ಹೊರಬಂದಿಲ್ಲ. ಹಿಂದಿನ ಸಿ.ಎ.ಜಿ. ವರದಿ ಪ್ರಕಾರ 95-96 ರಿಂದ 98-99ರ ವರೆಗಿನ ಅವಧಿಯಲ್ಲಿ ರೆವಿನ್ಯೂ ಮತ್ತು ಬಂಡವಾಳ ಲೆಕ್ಕದಲ್ಲಿ ನಗರಾಭಿವೃದ್ಧಿ ನಿಗದಿತ ಹಣದಲ್ಲಿ 220.98 ಕೋಟಿ ವೆಚ್ಚ ಮಾಡಿಲ್ಲ. ಇದೇ ಅವಧಿಯಲ್ಲಿ ಬೆಂಗಳೂರು ಅಭಿವೃದ್ಧಿಗೆ ನಿಗದಿತ ಮೊತ್ತದಲ್ಲಿ 449.28 ಕೋಟಿ ವೆಚ್ಚ ಮಾಡಿಲ್ಲ. ಇದನ್ನೆಲ್ಲಾ ಮಂತ್ರಿಗಳು ಹಾಗೂ ಶಾಸಕರು ನೋಡದೆ ಹಾಗೂ ನೋಡಿ ಸೂಕ್ತ ಕ್ರಮ ಮುಂದಾದರೂ ತೆಗೆದುಕೊಳ್ಳದೇ ಹೋದರೆ ಮಂತ್ರಿಗಳ ಹಾಗೂ ಶಾಸಕರ ಕರ್ತವ್ಯಗಳಾದರೂ ಏನು ಎಂದು ಪ್ರಶ್ನಿಸುವುದು ಅನಿವಾರ್ಯ. ಮುಂದಾದರೂ ಈಗ ಮುಂದುವರೆದಿರುವ ಆರ್ಥಿಕ ಹಾಗೂ ಭೌತಿಕ ವೈಫಲ್ಯಗಳು ಮರುಕಳಿಸದಂತೆ ಮುಂಜಾಗ್ರತೆ ವಹಿಸುವಲ್ಲಿ ಹೊಣೆಗಾರ ನಗರ ನಾಗರಿಕರು, ನಗರ ನಾಗರೀಕರ ಪ್ರತಿನಿಧಿಗಳು, ಶಾಸಕರು, ಸಂಸದರು, ಮಂತ್ರಿಗಳು ಹಾಗೂ ಸರ್ಕಾರ ಮುಂದಾದರೆ ನಗರಾಡಳಿತ ನಗರಾಭಿವೃದ್ಧಿ ಸುಸೂತ್ರವಾಗಬಲ್ಲದು, ಇಲ್ಲವಾದರೆ ಎಲ್ಲವೂ ಅತಂತ್ರ, ಅನೇಕ ನಗರಾಡಳಿತ ಅಭಿವೃದ್ಧಿಯಲ್ಲಿ ಭ್ರಷ್ಟಾಚಾರ, ಸ್ವಾರ್ಥ ಜಾತೀಯತೆ, ಪಕ್ಷಪಾತ, ಸ್ವಜನ ಪಕ್ಷಪಾತ, ಅಧಿಕಾರ ದುರುಪಯೋಗ, ದುರಾಳಿತ, ದುಂದುವೆಚ್ಚ, ನಿರ್ವೆಚ್ಚ, ದುರ್ವೆಚ್ಚ ನಡೆದಿರುವ ವಾಸ್ತವಿಕ ವಸ್ತುಸ್ಥಿತಿಗಳು ಪತ್ರಿಕಾವರದಿಗಳ ಮುಖಾಂತರ ಗೋಚರಿಸುತ್ತಲೇ ಇವೆ. ಇದು ಹೀಗೆಯೇ ಮುಂದುವರೆದರೆ ನಗರಾಭಿವೃದ್ಧಿ ಸುಧಾರಿಸುವುದೆಂತು? ಪ್ರಜಾತಂತ್ರ ವ್ಯವಸ್ಥೆಗೆ ಹಾಗೂ ಪ್ರಜಾಪ್ರತಿನಿಧಿಗಳಿಗೆ ಗೌರವ ಘನತೆ ಮೆರಗು ಬರುವದೆಂತು? ಈ ದಿಶೆಯಲ್ಲಿ ಯಶಸ್ವಿ ನಗರಾಡಳಿತ ಹಾಗೂ ನಗರಾಭಿವೃದ್ಧಿ ಹಿತ ದೃಷ್ಟಿಯಿಂದ ಎಲ್ಲರ ಚಿಂತನ ಮಂಥನ ದೂರಾಲೋಚನೆ ಹಾಗೂ ದೂರದೃಷ್ಟಿ ಅತ್ಯವಶ್ಯ.

❑

ಅನಾವಶ್ಯಕ ಹುದ್ದೆ - ನೇಮಕ

ರಾಜ್ಯದ ಆರ್ಥಿಕ ಪರಿಸ್ಥಿತಿ ತೃಪ್ತಿಕರವಾಗಿಲ್ಲ; ಹದಗೆಟ್ಟಿದೆ, ಶೋಚನೀಯವಾಗಿದೆ. ಆರ್ಥಿಕ ಬಿಕ್ಕಟ್ಟಿನ ಪರಿಣಾಮವಾಗಿ ಅಭಿವೃದ್ಧಿ ಕಾಮಗಾರಿಗಳು ಹಾಗೂ ಕಾರ್ಯಚಟುವಟಿಕೆ ಗಳು ಕುಂಠಿತಗೊಂಡಿವೆ. ಪ್ರತಿವರ್ಷ ವಿವಿಧ ಕರ - ಕಂದಾಯಗಳ ನ್ನೊಳಗೊಂಡ ರಾಜಸ್ವ ಆದಾಯ ಮಿತಿಮೀರಿ ಹೆಚ್ಚುತ್ತಿದ್ದರೂ ಅದರಲ್ಲಿಯ ಬಹುಪಾಲು ಪ್ರತಿವರ್ಷ ನೌಕರರ ವೇತನ ಭತ್ಯೆ ಇತ್ಯಾದಿ ಆಡಳಿತ ವೆಚ್ಚಕ್ಕಾಗಿ, ಅಭಿವೃದ್ಧಿಯೇತರ ವೆಚ್ಚಕ್ಕಾಗಿ ವ್ಯಯವಾಗುತ್ತಿದೆ. ಸರಕಾರದಲ್ಲಿ ಮಿತಿಮೀರಿ ಅನಾವಶ್ಯಕ ಇಲಾಖೆಗಳು, ಅನಾವಶ್ಯಕ ಹುದ್ದೆಗಳು ಹಾಗು ಅನಾವಶ್ಯಕ ನೇಮಕ ನಿರ್ಮಾಣವಾಗುತ್ತಲೇ ಇವೆ. ಆಡಳಿತ ಸುಧಾರಣಾ ಸಮಿತಿಗಳು ಅನೇಕ ರಚಿತವಾಗಿ ಸಲಹೆ ಸೂಚನೆಗಳನ್ನು ಕೊಟ್ಟಿದ್ದರೂ ಅವೆಲ್ಲ ಮೂಲೆ ಗುಂಪಾಗಿವೆ. ಕಂದಾಯ ಇಲಾಖೆಯಲ್ಲಿದ್ದ ವಕ್ಫ್ ಹಾಜ್ ಹಾಗೂ ಮುಜರಾಯಿಗಳನ್ನು ಬೇರ್ಪಡಿಸಿ ಅವುಗಳನ್ನೆಲ್ಲಾ ಹೊಸ ಹೊಸ ಇಲಾಖೆಗಳನ್ನಾಗಿ ಮಾಡಿ ಅವುಗಳಿಗೆ ಅನಾವಶ್ಯಕ ಮಂತ್ರಿ ಹಾಗೂ ಇಲಾಖಾಧಿಕಾರಿಗಳನ್ನು ನಿರ್ಮಿಸಲಾಗಿದೆ. ವಾರ್ತಾ, ಪ್ರವಾಸೋದ್ಯಮ ಮತ್ತು ಯುವ ಜನಸೇವಾ ಇಲಾಖೆಯನ್ನು ಒಡೆದು ಹೆಚ್ಚಿನ ಮಂತ್ರಿ ಹಾಗೂ ಇಲಾಖಾಧಿಕಾರಿಗಳನ್ನು ನಿರ್ಮಿಸಲಾಗಿದೆ. ಹಣಕಾಸು ಇಲಾಖೆಯನ್ನು ಒಡೆದು ಅಬಕಾರಿ ಇಲಾಖೆಗೆ ಒಬ್ಬ ಮಂತ್ರಿ ಹಾಗೂ ಇಲಾಖಾಧಿಕಾರಿ ಗಳನ್ನು ನೇಮಿಸಲಾಗಿದೆ. ಅಂತೆಯೇ ಸಣ್ಣ ಉಳಿತಾಯ ಮತ್ತು ಲಾಟರಿ ವಿಮೆ ಮಂತ್ರಿ ಹಾಗೂ ಇಲಾಖಾಧಿಕಾರಿಗಳನ್ನು ನೇಮಿಸಲಾಗಿದೆ. ನಗರಾಭಿವೃದ್ಧಿ ಇಲಾಖೆಯಿಂದ ಪೌರಾಡಳಿತ ಬೇರ್ಪಡಿಸಿ ಇದಕ್ಕಾಗಿಯೇ ಒಬ್ಬ ಸ್ವತಂತ್ರ ಮಂತ್ರಿ ಹಾಗೂ ಇಲಾಖಾಧಿಕಾರಿಗಳನ್ನು ಮಾಡಲಾಗಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ವಸತಿಗಾಗಿಯೇ ವಸತಿ ಮಂತ್ರಿ ಹಾಗೂ ಇಲಾಖಾಧಿಕಾರಿಗಳನ್ನು ನೇಮಿಸಲಾಗಿದೆ. ಶಿಕ್ಷಣ ಇಲಾಖೆಯನ್ನು ಒಡೆದು ಉನ್ನತ ಶಿಕ್ಷಣ, ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣ ಹಾಗೂ ವೈದ್ಯಕೀಯ ಶಿಕ್ಷಣ ಮಂತ್ರಿ ಹಾಗೂ ಇಲಾಖಾಧಿಕಾರಿಗಳನ್ನು ನೇಮಿಸಲಾಗಿದೆ. ಅಂತೆಯೇ ಸ್ವತಂತ್ರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮಂತ್ರಿ ಹಾಗೂ ಇಲಾಖಾಧಿಕಾರಿಗಳನ್ನು ನಿರ್ಮಿಸಲಾಗಿದೆ. ಅಂತೆಯೇ ವಯಸ್ಕರ ಶಿಕ್ಷಣ, ಗ್ರಂಥಾಲಯ,

ಮುದ್ರಣ ಲೇಖನ ಸಾಮಗ್ರಿಗಾಗಿ ಒಬ್ಬ ಮಂತ್ರಿ ಹಾಗೂ ಇಲಾಖಾಧಿಕಾರಿಗಳನ್ನು ನೇಮಿಸಲಾಗಿದೆ. ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯನ್ನು ಒಡೆದು ಸಕ್ಕರೆಗಾಗಿ ಒಬ್ಬ, ಭಾರಿ ಕೈಗಾರಿಕೆಗೆ ಒಬ್ಬ ಹಾಗು ಸಣ್ಣ ಕೈಗಾರಿಕೆಗೆ ಒಬ್ಬ ಹೀಗೆ ಮೂರು ಮಂತ್ರಿಗಳನ್ನಾಗಿ ಮಾಡಿ ಇಲಾಖಾಧಿಕಾರಿಗಳನ್ನು ನೇಮಿಸಲಾಗಿದೆ. ಅಂತೆಯೇ ಜವಳಿಗೊಬ್ಬ ಮಂತ್ರಿ ಹಾಗೂ ಇಲಾಖೆಯನ್ನು ಮಾಡಲಾಗಿದೆ. ಪ್ರದೇಶಾಭಿವೃದ್ಧಿ ಕಾರ್ಯ, ಜಿಲ್ಲಾ ಪಂಚಾಯತಿ, ತಾಲೂಕ್ ಪಂಚಾಯತಿ ಹಾಗೂ ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ಬರುತ್ತಿದ್ದರೂ ಪ್ರದೇಶಾಭಿವೃದ್ಧಿ ಎಂಬ ಹೆಸರಿನಲ್ಲಿ ಒಬ್ಬ ಮಂತ್ರಿ, ಇಲಾಖೆ ಹಾಗು ವಿವಿಧ ಅಭಿವೃದ್ಧಿ ಮಂಡಳಿಗಳನ್ನು ನಿರ್ಮಿಸಲಾಗಿದೆ. ಪಂಚಾಯತ್ ರಾಜ್ ಅಭಿವೃದ್ಧಿ ಸಹಕಾರ ಇಲಾಖೆಯನ್ನು ವಿಂಗಡಿಸಿ ಸಹಕಾರ ಇಲಾಖೆಯೊಂದನ್ನು ನಿರ್ಮಾಣ ಮಾಡಿ ನಂತರ ಈ ಸಹಕಾರ ಇಲಾಖೆಯಿಂದ ಕೃಷಿ ಮಾರುಕಟ್ಟೆಯನ್ನು ಬೇರ್ಪಡಿಸಿ ಸಹಕಾರ ಇಲಾಖೆಗೆ ಒಬ್ಬ ಮಾರುಕಟ್ಟೆಗೆ ಒಬ್ಬ ಹೀಗೆ ಇಬ್ಬರು ಮಂತ್ರಿಗಳು ಹಾಗೂ ಇಲಾಖೆಯನ್ನು ನಿರ್ಮಿಸಲಾಗಿದೆ. ಕೃಷಿ ಇಲಾಖೆಯಿಂದ ತೋಟಗಾರಿಕೆಯನ್ನು ಬೇರ್ಪಡಿಸಿ ತೋಟಗಾರಿಕೆಗಾಗಿಯೇ ಒಬ್ಬ ಸ್ವತಂತ್ರ ಮಂತ್ರಿ ಹಾಗು ಇಲಾಖೆಯನ್ನು ನಿರ್ಮಿಸಲಾಗಿದೆ. ಇಲ್ಲಿ ಅದೆಷ್ಟು ಅನಾವಶ್ಯಕ ಹಾಗೂ ಅನಾನುಕೂಲವೆಂಬುದನ್ನು ಊಹಿಸಲು ಕೂಡ ಅಸಾಧ್ಯ **"ಅಂಬ್ಲಿ ಕುಡಿಯುವವನೊಬ್ಬ ಮೀಸೆ ಹಿಡಿಯುವವನೊಬ್ಬ"** ಎಂಬಂತಾಗಿದೆ ಇಲಾಖೆ ಇಲಾಖಾ ಮಂತ್ರಿ ಹಾಗು ಇಲಾಖಾಧಿಕಾರಿಗಳ ಅನುಚಿತ ಅಸ್ತಿತ್ವ, ಬಹುತೇಕ ಎಲ್ಲಾ ಇಲಾಖೆಗಳಲ್ಲಿ ರಾಜ್ಯಮಟ್ಟ, ವಿಭಾಗ ಮಟ್ಟ, ಜಿಲ್ಲಾ ಮಟ್ಟ, ಉಪವಿಭಾದ ಮಟ್ಟ ಹಾಗೂ ತಾಲೂಕು ಮಟ್ಟದಲ್ಲಿ ಅನೇಕ ಅಧಿಕಾರಿಗಳಿದ್ದರೂ ಅನಾವಶ್ಯಕವಾಗಿ ಹೆಚ್ಚಿನ ಹಾಗೂ ಹೊಸ ಹುದ್ದೆಗಳನ್ನು ಹೆಚ್ಚುವರಿಯಾಗಿ ನಿರ್ಮಿಸಿ ಅಧಿಕಾರಿಗಳ ಹಿಂಡನ್ನೇ ಹುಟ್ಟಿಸಲಾಗಿದೆ. ಸಹಕಾರಿ ಇಲಾಖೆಯಲ್ಲಿ ನಾಲ್ಕು ವಿಭಾಗಗಳಲ್ಲಿ ನಾಲ್ಕು ಜಂಟೀ ರಿಜಿಸ್ಟಾರ್‌ಗಳು ಇದ್ದರೂ ಇವರ ಮೇಲೆ ಸುಮಾರು ಜನ ಜಂಟೀ ರಿಜಿಸ್ಟಾರರನ್ನು ಅನಾವಶ್ಯಕವಾಗಿ ಹುದ್ದೆಗಳನ್ನು ನಿರ್ಮಿಸಿ ನೇಮಿಸಲಾಗಿದೆ. ಎಲ್ಲಾ ಇಲಾಖೆಗಳಲ್ಲಿ ಹೆಚ್ಚುವರಿ ಅಧಿಕಾರಿ, ವಿಶೇಷ ಅಧಿಕಾರಿ ಹುದ್ದೆಗಳನ್ನು ನಿರ್ಮಿಸಿ ನೇಮಿಸಲಾಗಿದೆ. ರಾಜ್ಯ ಸರಕಾರದ ಬಹುತೇಕ ನೌಕರರು ಅವರವರ ಕೇಂದ್ರ ಸ್ಥಳದಲ್ಲಿ ವಾಸವಾಗಿರದೆ ತಮಗೆ ಅನುಕೂಲವಾದ ಪರಸ್ಥಳದಲ್ಲಿಯೇ ಇದ್ದಾರೆ. ಅನಾವಶ್ಯಕ ಹುದ್ದೆಗಳನ್ನು ಸಿಕ್ಕಾಪಟ್ಟೆ ನಿರ್ಮಾಣ ಮಾಡಿ ಸಿಕ್ಕಾಪಟ್ಟೆ ನೇಮಕ ಮಾಡಲಾಗಿದೆ. ಗ್ರಾಮಾಂತರ ಗ್ರಾಮಗಳಲ್ಲಿ ವಾಸವಾಗಿದ್ದು ಕರ್ತವ್ಯ ನಿರ್ವಹಿಸಬೇಕಾದ ನೌಕರರನೇಕರು ಅಂದರೆ ಕೃಷಿ ಸಹಾಯಕ, ಗ್ರಾಮ ಪಂಚಾಯತಿ ಕಾರ್ಯದರ್ಶಿ, ಗ್ರಾಮಲೆಕ್ಕಾಧಿಕಾರಿ ಹಾಗೂ ಇತರ ಗ್ರಾಮನೌಕರರಾರೂ ಬಹುತೇಕ ಅವರವರ ಕಾರ್ಯಕ್ಷೇತ್ರ - ಕೇಂದ್ರ ಸ್ಥಳಗಳಲ್ಲಿ ವಾಸವಾಗುವುದಿಲ್ಲ. ಸೂಟಿ ದಿನಗಳೆಂದು ಹಾಗೂ ಆ ಸೂಟಿ ದಿನದ ಹಿಂದಿನ ಹಾಗೂ ಮುಂದಿನ ದಿನಗಳಂದು ಸಹ ಜನತೆಗೆ ಸಿಕ್ಕುವದಿಲ್ಲ. ಜನತೆಗೆ ಇವರು ತಾರಕರಾಗದೆ

ಮಾರಕರಾಗಿದ್ದಾರೆ. ಗ್ರಾಮಾಂತರ ಆಸ್ಪತ್ರೆಗಳಲ್ಲಿ ಸಹ ವೈದ್ಯರು ಇರದೆ ವರ್ಗ ಮಾಡಿದರೆ ಆ ಸ್ಥಳಗಳಿಗೆ ಬಹುತೇಕ ಹೋಗದೆ ರಜಾ ಬೆಳಸಿ ಅಥವಾ ವರ್ಗವನ್ನು ಬೇರೆ ಕಡೆ ಮಾಡಿಸಿಕೊಳ್ಳುತ್ತಾರೆ. ಬಹುತೇಕ ಶಾಸಕರು ಹಾಗೂ ಮಂತ್ರಿಗಳಿಗೆ ನೇಮಕಾತಿ, ವರ್ಗಾವರ್ಗಿ ಇತ್ಯಾದಿ ಕೆಲಸವೇ ಹೆಚ್ಚಾಗಿದ್ದು ಜನತೆಯ ಕಷ್ಟ ಕಾರ್ಪಣ್ಯ ಸಮಸ್ಯಗಳತ್ತ ಗಮನಹರಿಸದೆ ಇರುವದು ಪ್ರಜಾತಂತ್ರ ವ್ಯವಸ್ಥೆಯ ದುರ್ದೈವ. ನ್ಯಾಯಾಂಗದಲ್ಲಿ ತಾಲೂಕು ಮಟ್ಟ,..ಉಪವಿಭಾಗ ಮಟ್ಟ, ಜಿಲ್ಲಾ ಮಟ್ಟ ಕೋರ್ಟ್‌ಗಳು ಹಾಗೂ ಹೈ ಕೋರ್ಟ್‌ಗಳಲ್ಲಿ ಹೆಚ್ಚಿನ ನ್ಯಾಯಾಧೀಶರ ಹುದ್ದೆಗಳ ನಿರ್ಮಾಣ ಹಾಗೂ ನೇಮಕಾತಿಗಳು ಕೇಸುಗಳ ತ್ವರಿತ ನಿರ್ಣಯಕ್ಕಾಗಿ ಅತಿ ಅವಶ್ಯವಿದ್ದರೂ ಅವಶ್ಯಕ ಹುದ್ದೆ ನಿರ್ಮಾಣ ಹಾಗೂ ನೇಮಕಾತಿ ಮಾಡಿ ಜನತೆಯ ಕೇಸುಗಳ ಇತ್ಯರ್ಥಕ್ಕೆ ಸರಕಾರ ಮುಂದಾಗಬೇಕೇ ಹೊರತು ವಿವಿಧ ಇಲಾಖೆಗಳಲ್ಲಿ ಸಿಕ್ಕಾಪಟ್ಟೆ ಅನಾಶ್ಯಕ ಹುದ್ದೆ ನಿರ್ಮಿಸಿ ನೇಮಕ ಮಾಡುವುದನ್ನು ಕೈ ಬಿಡಬೇಕು ಹಾಗೂ ಪ್ರಜೆಗಳ ಸಾರ್ವಜನಿಕ ಸಮಸ್ಯೆಗಳಿಗೆ ಸ್ಪಂದಿಸಬೇಕು. ಅನೇಕ ಸಂಘ ಸಂಸ್ಥೆ ನಿಗಮಗಳಲ್ಲಿ ಸೇವೆ ಸಲ್ಲಿಸುತ್ತಿರುವ ಕೆ.ಎ.ಎಸ್. ಹಾಗೂ ಐ.ಎ.ಎಸ್ ಅನೇಕ ಅಧಿಕಾರಿಗಳ ಹಾವಳಿ ಹೆಚ್ಚಾಗಿ ಅವುಗಳ ದುಸ್ಥಿತಿ ಹಾಗು ನಾಶಕ್ಕೆ ಕಾರಣರಾಗಿ ಆ ಅನೇಕ ಸಂಸ್ಥೆ - ಸಂಘ - ನಿಗಮಗಳು ದಿವಾಳಿಯತ್ತ ಸಾಗುತ್ತಿರುವ ಚಿತ್ರ ಸರಕಾರಿ ಹಾಗೂ ಸಾರ್ವಜನಿಕ ಪತ್ರಿಕಾ ವರದಿಗಳನ್ನು ನೋಡಿದರೆ ಸುಸ್ಪಷ್ಟವಾಗುತ್ತದೆ. ಅನೇಕ ಎಲ್ಲಾ ಹಂತದ ಅಧಿಕಾರಿಗಳು ಭ್ರಷ್ಟ ರಾಜಕಾರಣಿಗಳ ಏಜಂಟರಂತೆ ಕೆಲಸ ಮಾಡುತ್ತ ಪ್ರಜೆಗಳ ಕಂಟಕ ಪ್ರಾಯರಾಗಿದ್ದು ಅಂಥವರ ಬಗ್ಗೆ ಯಾರು ನಿಗಾ ವಹಿಸಬೇಕು? **"ಬೇಲಿಯೇ ಎದ್ದು ಹೊಲು ಮೇದರೆ"** ಹೊಲ ಕಾಯ ವರಾರು ಎಂಬಂತಾಗಿದೆ ಸ್ವಾತಂತ್ರ್ಯ ಪ್ರಜಾ ತಂತ್ರ ವ್ಯವಸ್ಥೆ. ಅದೆಷ್ಟು ವರ್ಷ ಅಧಿಕಾರದಲ್ಲಿದ್ದೆನೆಂಬುದು ಮುಖ್ಯವಲ್ಲ. ಮಂತ್ರಿ ಮುಖ್ಯಮಂತ್ರಿಯಾದವರು ಜಗಜ್ಯೋತಿ ಮಹಾಮಂತ್ರಿ ಬಿಜ್ಜಳ ರಾಜ್ಯದ ಬಸವೇಶ್ವರರು ತಮ್ಮ ಆಡಳಿತ ಮಾಡುವಾಗ **"ನ್ಯಾಯನಿಷ್ಠುರಿ ನಾನು; ದಾಕ್ಷಿಣ್ಯ ಪರ ನಾನಲ್ಲ"** ವೆಂಬಂತೆ ಕಾರ್ಯನಿರ್ವಹಿಸಿದಂತೆ ಈಗಿನ ಪ್ರಜಾತಂತ್ರ ವ್ಯವಸ್ಥೆಯಲ್ಲಿಯ ಮಂತ್ರಿ ಮಹೋದಯ ಜನಪ್ರತಿನಿಧಿ ಅಧಿಕಾರಿ ಸಾರ್ವಜನಿಕ ನೌಕರರೆಲ್ಲರೂ ತಾವು ಮಾಡಬೇಕಾದ ಕರ್ತವ್ಯವನ್ನು ಚಾಚುತಪ್ಪದೆ ಮಾಡಿದರೆ ಹಾಗೂ ಜಾತ್ಯಾತೀತರಾಗಿ, ನಿಷ್ಪಕ್ಷಪಾತಿಗಳಾಗಿ, ಪ್ರಾಮಾಣಿಕರಾಗಿ, ಪಕ್ಷಪಾತಿಗಳಾಗದೆ, ದುರಾಡಳಿತ ಮಾಡದೆ, ಅಧಿಕಾರ ದುರುಪಯೋಗ ಮಾಡದೆ ನಡೆದುಕೊಂಡರೆ ಯಾವುದೇ ಸರಕಾರ ಜನಪರ ಸರಕಾರವಾಗಬಲ್ಲುದು, ಕೆಲವು ಸರಕಾರಗಳು ತಮಗಿಷ್ಟ ಬಂದಂತೆ ಮನಬಲ್ಲಂತೆ ತಮ್ಮ ವರನ್ನು ಸಂತೈಸಲು ಅಧಿನಿಯಮ ಬದ್ಧ ಸಂಘ ಸಂಸ್ಥೆ ನಿಗಮಗಳಲ್ಲಿಯ ಚುನಾಯಿತ ಸದಸ್ಯರು ಪದಾಧಿಕಾರಿಗಳಾದಲ್ಲಿ ಅವರನ್ನು ಬುಡಮೇಲು ಮಾಡಲು ಅಥವಾ ಸ್ಥಾನಪಲ್ಲಟ ಮಾಡಲು ನಾಮಕರಣ ಸದಸ್ಯರ ಹುದ್ದೆಗಳ ನಿರ್ಮಾಣ ಕೂಡ ಪ್ರಜಾತಂತ್ರ ವ್ಯವಸ್ಥೆಗೆ ಗಂಡಾಂತರಕಾರಿಯಾಗಿದೆ.

ಕಾರ್ಯಾಂಗದ ಸರ್ವಶ್ರೇಷ್ಠ ಪೀಠದ ಅಧ್ಯಕ್ಷರಾದ ಅನೇಕ ಮುಖ್ಯಮಂತ್ರಿಗಳ ಆಡಳಿತ ವೈಖರಿ ಈ ರಾಜ್ಯದ ಉನ್ನತಿ ಅಥವಾ ಅವನತಿಗೆ ಮೂಲ ಕಾರಣವಾಗಿರುವದು. ಸ್ವಾತಂತ್ರ್ಯನಂತರದ ಎಲ್ಲಾ ಮುಖ್ಯಮಂತ್ರಿಗಳ ಇತಿಹಾಸ ಸುಸ್ಪಷ್ಟವಾಗಿ ಗೋಚರಿಸುತ್ತಿದೆ. ಹೀಗಿರುವಾಗ ಈಗಿನ ಈ ರಾಜ್ಯದ ಮುಖ್ಯಮಂತ್ರಿಗಳು ಪ್ರಗತಿಪರ ಒಳ್ಳೆಯ ಸುಸೂತ್ರ ಆಡಳಿತದ ಬಗ್ಗೆ ಬಂದಿರುವ ಸಲಹೆ, ಸೂಚನೆ, ಟೀಕೆ, ಟಿಪ್ಪಣಿ, ಶಹಬಾಸಗಿರಿ ಎಲ್ಲವನ್ನು ನೋಡಿ ಮುಂದೆ ಹೆಜ್ಜೆ ಇಟ್ಟು ಆಡಳಿತ ಮಾಡಿದರೆ ಅದು ರಾಜ್ಯಕ್ಕೆ ಸುದೈವ. ಇಲ್ಲವಾದರೆ ದುರ್ದೈವ.

❑

ಶಾಸಕಾಂಗ

ಭೂ ಕಂದಾಯ : ಒಂದು ಚಿಂತನೆ

ಭಾರತವು ವ್ಯವಸಾಯದಾರರ ದೇಶವೇನೊ ನಿಜ. ಆದರೆ ಭಾರತದಲ್ಲಿಯ ವ್ಯವಸಾಯಗಾರರು ಸುಖವಾಗಿ ಚಕ್ಕಂದವಾಗಿ ತಮ್ಮ ಜೀವನವನ್ನು ಸಾಗಿಸುತ್ತ ಇರುವವವರ ಸಂಖ್ಯೆ ಅತಿ ವಿರಳ. ನೂರಕ್ಕೆ ತೊಂಬತ್ತರಂತೆ ವ್ಯವಸಾಯಗಾರರು ಆರ್ಥಿಕ ಬಿಕ್ಕಟ್ಟಿನಲ್ಲಿ ಸಿಲುಕಿ ನರಳುತ್ತಿದ್ದಾರೆ.

ಸಹಕಾರಿ ಸಂಘ ರೆವಿನ್ಯೂ ಖಾತೆ ಸಾವಿಕಾರ, ದಲಾಲ ಮೊದಲಾದವರಿಂದ ರೈತರು ಹೆಚ್ಚಿನ ಪ್ರಮಾಣದಲ್ಲಿ ಅನೇಕ ತರಹದ ಸಾಲಗಳನ್ನು ಪಡೆದುಕೊಂಡು ತಮ್ಮ ವ್ಯವಸಾಯ ಅಭಿವೃದ್ಧಿಯನ್ನು ಮಾಡಲು ಪ್ರಯತ್ನಿಸಿ ಮುಂದೆ ತಾವು ಬೆಳೆದ ಯಾವತ್ತೂ ಒಕ್ಕಲುತನ ಫಸಲನ್ನು ಮಾರಿ ಬಂದ ಹಣವನ್ನು ಹಾಗೂ ತಾವು ಖರ್ಚುಮಾಡಿದ ಹಣವನ್ನು ತುಲನೆ ಮಾಡಿ ನೋಡಿದರೆ ಅವರ ಖರ್ಚಿನ ಬಾಬ್ತು ಹೆಚ್ಚಾಗುವುದೇ ಹೊರತು ಉತ್ಪನ್ನದ ಬಾಬ್ತು ಪ್ರತಿವರ್ಷ ಕಡಿಮೆಯಾಗುತ್ತಲೇ ಹೊರಟಿದೆ.

ಈ ತರಹದ ಅವಾಂತರ ಪ್ರತಿವರ್ಷ ನಡೆದು ಪ್ರತಿಯೊಬ್ಬ ರೈತನ ಬಜೆಟ್ ಖೋತಾ ಬಜೆಟ್ ಆಗುತ್ತಿದೆಯೆ ಹೊರತು ಉಳಿತಾಯ ಬಜೆಟ್ ಎಂದೂ ಆಗುವುದಿಲ್ಲ.

ಇತ್ತೀಚೆಗೆ ಹೆಚ್ಚು ಬೆಳೆ ಬೆಳೆಯುವ ಆಂದೋಲನವು ಕೂಡ ನಡೆದಿದ್ದು ಈ ಆಂದೋಲನವು ಕೂಡ ನಡೆದಿದ್ದು ಈ ಆಂದೋಲನವನ್ನು ಯಶಸ್ವಿಯನ್ನಾಗಿ ಮಾಡಲು ಉತ್ತಮವಾದ ರಸಾಯನಿಕ ಮಿಶ್ರಣ ಇತ್ಯಾದಿ ಗೊಬ್ಬರ, ಬೀಜ, ಕ್ರಿಮಿನಾಶಕ ಔಷಧಿ, ಸುಧಾರಿಸಿದ ಒಕ್ಕಲುತನ ಉಪಕರಣ ಇತ್ಯಾದಿಗಳನ್ನು ಖರೀದಿಮಾಡಿ ಉಪಯೋಗಿಸಿ ಜಮೀನುಗಳನ್ನು ಸುಧಾರಿಸಿ, ಬೀಜವನ್ನು ಬಿತ್ತಿ ಬೆಳೆದು ಮಾರಾಟ ಮಾಡಿದರೂ ಕೂಡ ರೈತರ ಆರ್ಥಿಕ ಪರಿಸ್ಥಿತಿ ಸುಧಾರಿಸದೆ ಇರುವುದು ರೈತರ ದುರ್ದೈವವೇ ಸರಿ.

ಪ್ರತಿ ವರ್ಷ ರೈತರು ಗೃಹಕೃತ್ಯದ ಸಲುವಾಗಿ ಸಹಕಾರ ಸಂಘ ಸರಕಾರ ಸಾವುಕಾರ, ದಲಾಲ ಮೊದಲಾದವರಲ್ಲಿ ತಮ್ಮ ಸಾಲದ ಮೊತ್ತವನ್ನು ಅಧಿಕ ಪ್ರಮಾಣದಲ್ಲಿ

ಹೆಚ್ಚಿಸಿಕೊಂಡು ಸಾಲದ ಗಂಟು ಬೆಳೆಯುವ ಅನಿಷ್ಟವನ್ನು ಮುಖಂಡರು ಕಣ್ಣಾರೆ ಕಂಡು ಈ ದುರದೃಷ್ಟವನ್ನು ಹೋಗಲಾಡಿಸುವ ಯಾವುದೇ ತರಹದ ಪರಿಣಾಮಕಾರಿ ಉಪಾಯವನ್ನು ಕಂಡುಹಿಡಿಯುತ್ತಿಲ್ಲ.

ಭಾರತದ ರೈತರನ್ನು ಸಾಲ ಗುಲಾಮರನ್ನಾಗಿ ಮಾಡುವ ದಿಸೆಯಲ್ಲಿ ಮಾತ್ರ ಅವರನ್ನು ನೂಕಿದಂತಾಗುವುದೇ ಹೊರತು ಅವರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿ ಅವರನ್ನು ವೈಯಕ್ತಿಕ ಅಭಿವೃದ್ಧಿ ದಿಸೆಯಲ್ಲಿ ಮಾರ್ಗದರ್ಶನ ಮಾಡಿದಂತಾಗುವುದಿಲ್ಲ.

ರೈತರ ಆರ್ಥಿಕ ಪರಿಸ್ಥಿತಿಯು ಚೆನ್ನಾಗಿದೆಯೊ ಇಲ್ಲವೋ ಎಂಬುದನ್ನು ರಾಜಕೀಯ ಮುಖಂಡರು ಈಗಾದರೂ ತಿಳಿದುಕೊಳ್ಳಬೇಕು. ರೈತರು ಬಿಕ್ಕಟ್ಟಿನಲ್ಲಿ ಸಿಕ್ಕಿರುವ ದಾರುಣ ಪರಿಸ್ಥಿತಿಯನ್ನು ಚೆನ್ನಾಗಿ ಅರಿತುಕೊಂಡಿದ್ದರೆ ರೈತರು ತೆತ್ತುವ ಭೂ ಕಂದಾಯವನ್ನು ಅನ್ಯಾಯವಾಗಿ ಹೆಚ್ಚಿಸುವ ಗೋಜಿಗೆ ಹೋಗುತ್ತಿರಲಿಲ್ಲವೇನೋ ಎಂದನಿಸುತ್ತದೆ.

ರೈತರ ಕಂಗಾಲು ಪರಿಸ್ಥಿತಿಯನ್ನು ಈಗಲಾದರೂ ಅರಿತು ಭೂ ಕಂದಾಯವನ್ನು ಹೆಚ್ಚಿಸುವ ಹವ್ಯಾಸವನ್ನು ಬಿಟ್ಟುಬಿಡಲೇಬೇಕು. ರೈತರು ಕಂಗಾಲಾಗಿದ್ದರೂ ಕೂಡ ಗ್ರಾಮ ಪಂಚಾಯತಿ, ನಗರಸಭೆ, ತಾಲ್ಲೂಕು ಬೋರ್ಡ್, ಜಿಲ್ಲಾ ಬೋರ್ಡ್, ರಾಜ್ಯ ಸರಕಾರ, ಕೇಂದ್ರ ಸರಕಾರ ಇತ್ಯಾದಿ ಸರಕಾರಗಳಿಗೆ ದಿನಬೆಳಗಾದರೆ ಅನೇಕ ರೀತಿಯಿಂದ ಕರಗಳನ್ನು ತೆತ್ತುತ್ತಲಿದ್ದಾರೆ.

ಆರ್ಥಿಕ ಬಿಕ್ಕಟ್ಟಿನ ಬಡಿತದಿಂದ ಗಾಯಗೊಂಡು ಬಳಲುತ್ತಿರುವಾಗ ಭೂ ಕಂದಾಯವನ್ನು ಹೆಚ್ಚಿಸಿ ಗಾಯದ ಮೇಲೆ ಬರೆ ಎಳೆದು ನಿರ್ಜೀವಿಗಳನ್ನಾಗಿ ಮಾಡುವದು ಎಳ್ಳಷ್ಟೂ ಹಿತಕರವಲ್ಲ. ದಿನದಿನಕ್ಕೆ ನಾನಾತರದ ಕರಗಳನ್ನು ಹಾಕುವ ಹಾಗೂ ಹೆಚ್ಚಿಸುವ ವಿಧಾನದಿಂದಲೆ ಸರಕಾರದ ಆರ್ಥಿಕ ಪರಿಸ್ಥಿತಿ ಸುಧಾರಿಸುವುದೆಂಬ ಮಾತನ್ನು ನಾವು ಮರೆಯಬೇಕು. ಸರಕಾರದ ಆರ್ಥಿಕ ಪರಿಸ್ಥಿತಿಯನ್ನು ನಿಜವಾಗಿಯೂ ಸುಧಾರಿಸಬೇಕಾಗಿದ್ದರೆ ಸರಕಾರದ ಅನೇಕ ಶಾಖೆಗಳಲ್ಲಿ ಹುಚ್ಚು ಹೊಳೆಯಾಗಿ ಹರಿಯುತ್ತಿರುವ ವೆಚ್ಚವನ್ನು ತಡೆಯಲೇಬೇಕು.

ನಿಷ್ಪ್ರಯೋಜನವಾಗುತ್ತಿರುವುದು ಕಂಡುಬರುತ್ತಿದ್ದರೂ ಪ್ರಯೋಜನ ಹಾಗೂ ಕಲ್ಯಾಣವಾಗಲೆಂದು ಕೋಟ್ಯಂತರ ಹಣವನ್ನು ದಿನದಿನಕ್ಕೆ ವ್ಯಯ ಮಾಡಲು ಮುಂದಾಗುವುದನ್ನು ಸರಕಾರ ಹಾಗೂ ಸರಕಾರದಲ್ಲಿಯ ಹೊಣೆಗಾರ ವ್ಯಕ್ತಿಗಳು ಬಂದ್ ಮಾಡಲೇಬೇಕು. ಅಂದರೆ ಮಾತ್ರ ಅದೆಷ್ಟೋ ದೊಡ್ಡ ಪ್ರಮಾಣದಲ್ಲಿ ಸರಕಾರದ ಬಜೆಟ್ ಉಳಿತಾಯವಾಗಬಲ್ಲುದು.

ಪ್ರತಿಯೊಬ್ಬ ರೈತನ ಆರ್ಥಿಕ ಪರಿಸ್ಥಿತಿ ಸುಧಾರಿಸುವಂತೆ ಮಾಡಿ ಅವನಿಗೆ ವರ್ಷಕ್ಕೆ ಕೆಲವೊಂದು ಹಣವಾದರೂ ಉಳಿತಾಯವಾಗುವ ಒಳ್ಳೇ ಪರಿಸ್ಥಿತಿ ಒದಗಿಸುವ ಹಾಗೂ ಗಳಿಕೆಯವನನ್ನಾಗಿ ಮಾಡದೆ ಇದ್ದು ರೈತರು ಸಾಲದ ಶೂಲಕ್ಕೆ ಸಿಕ್ಕಿ ನರಳುತ್ತಿರುವ ದಾರುಣ ಪರಿಸ್ಥಿತಿಯಲ್ಲಿ ಭೂ- ಕಂದಾಯ ಹೆಚ್ಚಿಸಿ, ಹೆಚ್ಚಿನ ಕರವನ್ನು ಹಾಕುವುದು ಎಳ್ಳಷ್ಟೂ ಹಿತಕಾರಿಯಲ್ಲ. ಅದು ಕೋಟ್ಯಂತರ ಒಕ್ಕಲಿಗರಿಗೆ ಅಪಾಯಕಾರಕವಾಗಲಿದ್ದು ಕಂದಾಯ ಹೆಚ್ಚಿಸುವ ಹವ್ಯಾಸವನ್ನು ತೊರೆಯುವುದೇ ಲೇಸು.

❑

ಜನಪರ ಯೋಜನೆ ಮತ್ತು ಶಾಸಕರು

ರಾಜ್ಯ ಸರಕಾರದ ಒಟ್ಟು ಆದಾಯ 1986-87 ರಲ್ಲಿ 3445 ಕೋಟಿ, 87-88 ರಲ್ಲಿ 4220 ಕೋಟಿ, 88-89 ರಲ್ಲಿ 4404 ಕೋಟಿ, 89-90 ರಲ್ಲಿ 5008 ಕೋಟಿ ರೂಪಾಯಿ, ಹೀಗೆ ಪ್ರತಿ ವರ್ಷ ಏರುತ್ತಲೇ ಇದೆ. ಇದರಲ್ಲಿ ಪ್ರತಿಯೊಬ್ಬ ಪ್ರಜೆಯೂ ಕೊಡುತ್ತಿರುವ ವಿವಿಧ ಕರ 86-97 ರಲ್ಲಿ 1205 ಕೋಟಿ, 87-88 ರಲ್ಲಿ 1414 ಕೋಟಿ, 88-89 ರಲ್ಲಿ 1698 ಕೋಟಿ, 89-90 ರಲ್ಲಿ 1932 ಕೋಟಿ ರೂಪಾಯಿ ಇದೆ. ಪ್ರಜೆಗಳಿಂದ ವಸೂಲು ಮಾಡಬೇಕಾದ ಕರವನ್ನು ಪ್ರತಿವರ್ಷ ಯಾವುದೇ ಮುಲಾಜು ಇಲ್ಲದೆ ಸರಕಾರ ವಸೂಲು ಮಾಡುತ್ತಲೇ ಇದೆ.

ಸರಕಾರದ ಒಟ್ಟು ಆದಾಯದಲ್ಲಿಯ ಖರ್ಚಿನತ್ತ ಗಮನ ಹರಿಸಿದರೆ ಸಂಬಳ, ಕೂಲಿ, ಪಿಂಚಣಿ ವೇತನಗಳಿಗಾಗಿ 86-87 ರಲ್ಲಿ 824 ಕೋಟಿ, 87-88 ರಲ್ಲಿ 814(?) ಕೋಟಿ, 88-89 ರಲ್ಲಿ 1020 ಕೋಟಿ, 89-90 ರಲ್ಲಿ 1689 ಕೋಟಿ ರೂಪಾಯಿ ಖರ್ಚು ಮಾಡಲಾಗಿದೆ.

ಕಛೇರಿ ಖರ್ಚು, ಇತರ ವೆಚ್ಚ, ಮೋಟಾರು ವಾಹನ, ನಿರ್ವಹಣೆ, ಯಂತ್ರ ಸಾಧನೆ, ಸಲಕರಣೆ, ಸಾಮಗ್ರಿ ಪೂರೈಕೆ, ಬಾಡಿಗೆ ಮತ್ತು ಪ್ರಯಾಣ ಖರ್ಚು ಮತ್ತು ಕರಗಳ ಬಾಬ್ತಿಗಾಗಿ 86-97 ರಲ್ಲಿ 475 ಕೋಟಿ, 87-88 ರಲ್ಲಿ 124 (?) ಕೋಟಿ, 88-89 ರಲ್ಲಿ 228 ಕೋಟಿ, 89-90 ರಲ್ಲಿ 315 ಕೋಟಿ ರೂಪಾಯಿ ಖರ್ಚು ಮಾಡಲಾಗಿದೆ. ಇತರ ಸಹಾಯ ಧನಕ್ಕಾಗಿ 86-87 ರಲ್ಲಿ 281 ಕೋಟಿ, 87-88 ರಲ್ಲಿ 220 ಕೋಟಿ, 88-89 ರಲ್ಲಿ 253 ಕೋಟಿ, 89-90 ರಲ್ಲಿ 299 ಕೋಟಿ ರೂಪಾಯಿ ಖರ್ಚು ಮಾಡಲಾಗಿದೆ.

ಸಹಾಯಧನ, ವಿದ್ಯಾರ್ಥಿ ವೇತನ, ರೋಗಿಗಳ ಊಟೋಪಚಾರ, ಔಷಧಿಗಳಿಗಾಗಿ 86-87 ರಲ್ಲಿ 104 ಕೋಟಿ, 87-88 ರಲ್ಲಿ 34 ಕೋಟಿ, 88-89 ರಲ್ಲಿ 57 ಕೋಟಿ, 89-90 ರಲ್ಲಿ 46 ಕೋಟಿ ರೂಪಾಯಿ ಖರ್ಚು ಮಾಡಲಾಗಿದ್ದು, ಸರಕಾರ ಈ

ಬಾಬ್ತುಗಳಿಗೆ ಹೆಚ್ಚು ಹಣ ವರ್ಷ-ವರ್ಷ ಖರ್ಚು ಮಾಡುವ ಬದಲು ಕಡಿಮೆ ಖರ್ಚು ಮಾಡುತ್ತಿರುವುದು ವಿಷಾದನೀಯ.

ರಾಜ್ಯ ಯೋಜನೆ ಕಾರ್ಯಕ್ರಮ, ಕೇಂದ್ರ ಪರಿಷ್ಕೃತ ಕಾರ್ಯಕ್ರಮ, ಯೋಜನೆಗಳು (ಕೇಂದ್ರ), ಕಾಮಗಾರಿಗಳು, ಜಿಲ್ಲಾ ಪರಿಷತ್ತು ಯೋಜನೆಗಳಿಗಾಗಿ 86-87 ರಲ್ಲಿ 442 ಕೋಟಿ, 87-88 ರಲ್ಲಿ 1210 ಕೋಟಿ, 88-89 ರಲ್ಲಿ 1173 ಕೋಟಿ, 89-90 ರಲ್ಲಿ 776 ಕೋಟಿ ರೂಪಾಯಿ ಖರ್ಚು ಮಾಡಲಾಗಿದ್ದು, ಅಭಿವೃದ್ಧಿ ಕಾಮಗಾರಿಗಳತ್ತ ಸರಕಾರ ಅತಿ ಕಡಿಮೆ ಖರ್ಚು ಮಾಡಿ ನಿಗಾ ವಹಿಸದೆ ಇರುವುದು ದುರ್ದೈವ. ಯೋಜನೇತರ ಕಾರ್ಯಗಳಿಗಾಗಿ 86-87 ರಲ್ಲಿ 66 ಕೋಟಿ, 87-88 ರಲ್ಲಿ 60 ಕೋಟಿ, 88-89 ರಲ್ಲಿ 105 ಕೋಟಿ, 89-90 ರಲ್ಲಿ 198 ಕೋಟಿ ರೂಪಾಯಿ ಖರ್ಚು ಮಾಡಿರುವುದು ಯೋಜನೇತರ ಕಾರ್ಯಕ್ಕೆ ಹೆಚ್ಚಿನ ಗಮನ ಸರಕಾರ ಕೊಟ್ಟಿರುವುದು ಎದ್ದು ಕಾಣುತ್ತದೆ.

ಬಂಡವಾಳ ಹೂಡಿಕೆ, ಪಡೆದ ಸಾಲ ಪರತ ಮಾಡುವುದು ಹಾಗೂ ಬಡ್ಡಿ ಡಿವಿಡೆಂಡ್ ಸಲುವಾಗಿ 86-87 ರಲ್ಲಿ 1381 ಕೋಟಿ, 87-88 ರಲ್ಲಿ 1657 ಕೋಟಿ, 88-89 ರಲ್ಲಿ 1558 ಕೋಟಿ, 89-90 ರಲ್ಲಿ 1668 ಕೋಟಿ ರೂಪಾಯಿ ಖರ್ಚು ಮಾಡಿದೆ.

ವಿಧಾನ ಮಂಡಲಕ್ಕೆ, ವಿಧಾನ ಸಭೆಯ ಹಾಗೂ ವಿಧಾನ ಪರಿಷತ್ತಿನ ಸದಸ್ಯರಿಗೆ ಹಾಗೂ ಮಂತ್ರಿಗಳಿಗೆ ಹಣಕಾಸು ಇಲಾಖೆ ಆಗಿಂದಾಗ್ಗೆ ವಾಸ್ತವಿಕ ಹಣಕಾಸು ಮಾಹಿತಿಯನ್ನು ಸಕಾಲದಲ್ಲಿ ತಿಳಿಸದೆ ಸಲಹೆ, ಸೂಚನೆ ಪಡೆಯದೆ ವಿಧಾನ ಮಂಡಲವನ್ನು, ಸರಕಾರವನ್ನು ಹಾಗೂ ಸಾರ್ವಜನಿಕರನ್ನು ಅಂಧಕಾರದಲ್ಲಿಟ್ಟು ಹಣಕಾಸು ವರ್ಷ ಅವಧಿಯು ಮುಗಿದ ಒಂದು ವರ್ಷ ಅಥವಾ ಒಂದೂವರೆ ವರ್ಷದ ನಂತರ ವಾಸ್ತವಿಕ ಅಂಶಗಳನ್ನು ತಿಳಿಸುತ್ತಿರುವುದು ದುರ್ದೈವ.

ಬಜೆಟ್‌ನಲ್ಲಿ ತೋರಿಸಿದ ಹಾಗೂ ಮಂಜೂರಾದ ಹಣದಲ್ಲಿ ಪ್ರತಿ ವರ್ಷ ಅಭಿವೃದ್ಧಿ ಕಾಮಗಾರಿ, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಹಾಗೂ ಬಡವರ ಯೋಜನೆಗಳಿಗೆ ಪೂರಾ ಹಣ ಖರ್ಚು ಮಾಡದೆ ಹಾಗೂ ಸಾಕಷ್ಟು ಹಣ ಒದಗಿಸದೆ ಇರುವ ಅನಿಷ್ಟ ಪದ್ಧತಿ ಮುಂದುವರಿಯುತ್ತಿರುವುದನ್ನು ನೋಡಿದರೆ ಮಂತ್ರಿಗಳಿಗೆ ಅವರವರ ಇಲಾಖೆಯ ಮೇಲೆ ಹಿಡಿತವೇ ಇಲ್ಲವೆಂಬುದು ಎದ್ದು ಕಾಣುತ್ತದೆ.

ಇನ್ನು ಬಜೆಟ್, ಪರಿಷ್ಕೃತ ಬಜೆಟ್ ಹಾಗೂ ವಾಸ್ತವಿಕ ಬಜೆಟ್ ಬಗ್ಗೆ ಹೇಳುವುದಾದರೆ, ಪ್ರತಿವರ್ಷ ಈ ಅಂಕಿಗಳು ಯದ್ವಾತದ್ವಾ ಇರುತ್ತಿದ್ದು, ಈ ವಿಷಯದಲ್ಲಿ ಸಹ ಆಯಾ ಇಲಾಖೆಯ ಮಂತ್ರಿಗಳು ಹಾಗೂ ಹಣಕಾಸು ಇಲಾಖೆಯ ಮಂತ್ರಿಗಳು ಗಮನಹರಿಸದೇ ಇರುವುದು ಹಾಗೂ ಹಿಡಿತ ಇಟ್ಟುಕೊಳ್ಳದೇ ಇರುವುದು ದುರ್ದೈವ. ಉದಾಹರಣೆಗೆ ಹೇಳುವುದಾದರೆ ಸಂಬಳ, ಕೂಲಿ, ಪಿಂಚಣಿ ವೇತನ ಇವುಗಳಿಗಾಗಿ

89-90 ರ ಬಜೆಟ್‌ನಲ್ಲಿ 1548 ಕೋಟಿ, ಪರಿಷ್ಕೃತ ಬಜೆಟ್‌ನಲ್ಲಿ 1088 ಕೋಟಿ, ವಾಸ್ತವಿಕ ಬಜೆಟ್‌ನಲ್ಲಿ 1689 ಕೋಟಿ ರೂಪಾಯಿ ತೋರಿಸಲಾಗಿದೆ.

ಪ್ರಯಾಣ ಖರ್ಚು, ಕಛೇರಿ ಖರ್ಚು, ಇತರ ವೆಚ್ಚ, ಮೋಟಾರು ವಾಹನಗಳು, ನಿರ್ವಹಣೆ, ಯಂತ್ರ ಸಾಧನೆ, ಸಲಕರಣೆ, ಸಾಮಗ್ರಿ ಪೂರೈಕೆ, ಬಾಡಿಗೆ, ಕರ, ಇತರೆ ಸಹಾಯಧನ ಇವುಗಳಿಗಾಗಿ 1989-90 ರ ಬಜೆಟ್‌ನಲ್ಲಿ 2055 ಕೋಟಿ, ಪರಿಷ್ಕೃತ ಬಜೆಟ್‌ನಲ್ಲಿ 1741 ಕೋಟಿ, ವಾಸ್ತವಿಕ ಬಜೆಟ್‌ನಲ್ಲಿ 2304 ಕೋಟಿ ರೂಪಾಯಿ ತೋರಿಸಲಾಗಿದೆ.

ಸಹಾಯಧನ, ವಿದ್ಯಾರ್ಥಿ ವೇತನ, ರೋಗಿಗಳ ಊಟೋಪಚಾರ, ಔಷಧಿಗಳು ಇವುಗಳಿಗಾಗಿ 1989-90ರ ಬಜೆಟ್‌ನಲ್ಲಿ 58 ಕೋಟಿ, ಪರಿಷ್ಕೃತ ಬಜೆಟ್‌ನಲ್ಲಿ 60 ಕೋಟಿ, ವಾಸ್ತವಿಕ ಬಜೆಟ್‌ನಲ್ಲಿ 46 ಕೋಟಿ ರೂಪಾಯಿ ತೋರಿಸಲಾಗಿದೆ.

ರಾಜ್ಯ ಯೋಜನೆ ಕಾರ್ಯಕ್ರಮ, ಕೇಂದ್ರ ಪರಿಷ್ಕೃತ ಕಾರ್ಯಕ್ರಮ, ಕೇಂದ್ರ ಯೋಜನೆ, ಯೋಜನೇತರ ಕಾರ್ಯಕ್ರಮ, ಕಾಮಗಾರಿ, ಜಿಲ್ಲಾ ಪರಿಷತ್ ಯೋಜನೆ ಇವುಗಳಿಗಾಗಿ 1989-90ರ ಬಜೆಟ್‌ನಲ್ಲಿ 1248 ಕೋಟಿ, ಪರಿಷ್ಕೃತ ಬಜೆಟ್‌ನಲ್ಲಿ 1589 ಕೋಟಿ, ವಾಸ್ತವಿಕ ಬಜೆಟ್‌ನಲ್ಲಿ 975 ಕೋಟಿ ರೂಪಾಯಿ ತೋರಿಸಲಾಗಿದೆ.

ಬಂಡವಾಳ ಹೂಡಿಕೆ, ಪಡೆದ ಸಾಲ ಪರತ ಮಾಡುವುದು, ಬಡ್ಡಿ (ಡಿವಿಡೆಂಡ್) ಕೊಡುವುದು, ಇವುಗಳಿಗಾಗಿ 1989-90 ರಲ್ಲಿ 1751 ಕೋಟಿ, ಪರಿಷ್ಕೃತ ಬಜೆಟ್‌ನಲ್ಲಿ 1537 ಕೋಟಿ, ವಾಸ್ತವಿಕ ಬಜೆಟ್‌ನಲ್ಲಿ 1668 ಕೋಟಿ ರೂಪಾಯಿಗಳನ್ನು ತೋರಿಸಲಾಗಿದೆ.

ಸರಕಾರವು ಖರ್ಚು ಮಾಡಬಹುದಾದ ತನ್ನ 26 ವಿವರಗಳಿಗಾಗಿ 1989-90ರ ಬಜೆಟ್‌ನಲ್ಲಿ 5216 ಕೋಟಿ, ಪರಿಷ್ಕೃತ ಬಜೆಟ್‌ನಲ್ಲಿ 4928 ಕೋಟಿ, ವಾಸ್ತವಿಕ ಬಜೆಟ್‌ನಲ್ಲಿ 4495 ಕೋಟಿ ರೂಪಾಯಿ ತೋರಿಸಲಾಗಿದ್ದು, ಯೋಜನೇತರ ಖಾತೆಗಳಲ್ಲಿ ಬಜೆಟ್ ಮೀರಿ ಖರ್ಚು ಮಾಡಿರುವುದು, ಯೋಜನಾ ಹಾಗೂ ಜನಪರ ಕಾರ್ಯಕ್ರಮಗಳಿಗೆ ಬಜೆಟ್‌ಗಿಂತ ಕಡಿಮೆ ಖರ್ಚು ಮಾಡಿರುವುದು ಈ ಅನಿಷ್ಟ ಹಾಗೂ ಜನವಿರೋಧಿ ಪರಂಪರೆ ಹೋಗಲಾಡಿಸಲೇಬೇಕಾಗಿದೆ. ವಿಧಾನ ಮಂಡಲ ಮಂಜೂರು ಮಾಡಿದ ಹಣದಲ್ಲಿ ಎಂದಿನಿಂದಲೂ ಹಾಗೂ ಹಿಂದಿನಿಂದಲೂ ಜನಪರ ಅಭಿವೃದ್ಧಿ ಯೋಜನೆಗಳಿಗೆ ಪ್ರತಿವರ್ಷ ನೂರಾರು ಕೋಟಿ ಹಣವನ್ನು ಖರ್ಚು ಮಾಡದೆ ಬಂದಿದ್ದು, 1989-90 ರಲ್ಲಿ 721 ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ಮಂಜೂರಾದ ಹಣದಲ್ಲಿ ಕಡಿಮೆ ಖರ್ಚು ಮಾಡಿ, ಸರಕಾರ ವಿಧಾನ ಮಂಡಲಕ್ಕೆ, ಶಾಸಕರಿಗೆ, ಸಾರ್ವಜನಿಕರಿಗೆ ಅದರಲ್ಲೂ ವಿಶೇಷವಾಗಿ ರೈತರಿಗೆ, ರೈತಕಾರ್ಮಿಕರಿಗೆ, ಬಡಜನತೆಗೆ ಅಪಚಾರ ಹಾಗೂ ಅಪಕಾರ ಮಾಡಿದೆ. ಬಜೆಟ್‌ನಲ್ಲಿ ಹಣ ಒದಗಿಸುವಾಗಲೇ ರೈತರಿಗೆ, ರೈತಕಾರ್ಮಿಕರಿಗೆ

ಹಾಗೂ ಬಡವರಿಗೆ ಅನುಕೂಲವುಳ್ಳ ಯೋಜನೆಗಳಿಗೆ ಸಾಕಷ್ಟು ಅಥವಾ ಕನಿಷ್ಠ ಹಣ ಒದಗಿಸದೇ ಇರುವ ಅನಿಷ್ಠ ಪರಂಪರೆಯನ್ನು ಬಿಟ್ಟು ಹೆಚ್ಚು ಹಣ ಒದಗಿಸುವಲ್ಲಿ ಹಣಕಾಸು ಇಲಾಖೆ ಜಾಗ್ರತೆ ವಹಿಸುವುದು ಸೂಕ್ತ. ಈ ದಿಶೆಯಲ್ಲಿ ಶಾಸಕರು ಸೂಕ್ತ ಜವಾಬ್ದಾರಿ ವಹಿಸಿದರೆ ಜನತಾ ಜನಾರ್ಧನ ಅವರಿಗೆ ಚಿರಋಣಿ.

❑

ಜನಸಾಮಾನ್ಯರಿಗೆ ಭಾರವಾದ 92-93ರ ಬಜೆಟ್

ರಾಜ್ಯ ಸರಕಾರದ ಉತ್ಪನ್ನ ಸಂಪನ್ಮೂಲಗಳು ಪ್ರಮುಖವಾಗಿ ತೆರಿಗೆ ಉತ್ಪನ್ನ, ತೆರಿಗೆ ರಹಿತ ಉತ್ಪನ್ನ, ಕೇಂದ್ರ ಸರ್ಕಾರದ ಸಹಾಯಧನ ಮತ್ತು ಪಾಲುಧನ, ಸಾಲ ಮತ್ತು ಮುಂಗಡ ಇತ್ಯಾದಿಗಳಿರುತ್ತವೆ. ಈ ಉತ್ಪನ್ನ ಪ್ರತಿವರ್ಷ ಹೆಚ್ಚುತ್ತಲೇ ಇದೆ.

1990-91 ರಲ್ಲಿ ವಾಸ್ತವಿಕ ಲೆಕ್ಕದ ಪ್ರಕಾರ (1) ಮಾರಾಟ ತೆರಿಗೆ, (2) ಅಬಕಾರಿ, (3) ಸ್ಟಾಂಪು ಮತ್ತು ನೋಂದಣಿ ಫೀ, (4) ವರಮಾನ ತೆರಿಗೆ, (5) ವಾಹನ ತೆರಿಗೆ, (6) ಸರಕು ಮತ್ತು ಸೇವೆ ಮೇಲಿನ ತೆರಿಗೆ, (7) ವಿದ್ಯುಚ್ಛಕ್ತಿ ತೆರಿಗೆ ಮತ್ತು ಶುಲ್ಕ, (8) ವ್ಯವಸಾಯ ವರಮಾನ ತೆರಿಗೆ, (9) ಭೂ ಕಂದಾಯ ಇತ್ಯಾದಿ ತೆರಿಗೆಗಳ ಆದಾಯ 2535.17 ಕೋಟಿ ರೂಪಾಯಿ ಬಂದಿದ್ದು, ಈ ಆದಾಯ 1992-93 ರಲ್ಲಿ ರೂ. 3745.97 ಕೋಟಿ ರೂಪಾಯಿ ಆಗಲಿದೆ. ಅಂದರೆ ಜನಸಾಮಾನ್ಯರು 1-4-92ರಿಂದ 31-3-93ರ ಅವಧಿಯಲ್ಲಿ 90-91ರಲ್ಲಿ ತೆತ್ತ ಹಣಕ್ಕಿಂತ 1210.69 ಕೋಟಿ ರೂಪಾಯಿ ಹೆಚ್ಚಿಗೆ ಹಣವನ್ನು ರಾಜ್ಯ ಸರ್ಕಾರಕ್ಕೆ ತೆರಬೇಕಾಗುತ್ತದೆ ಅಥವಾ ಸರಕಾರ ಜನಸಾಮಾನ್ಯರಿಂದ ವಸೂಲಿ ಮಾಡಬೇಕಾಗುತ್ತದೆ. ಜನಸಾಮಾನ್ಯರ ಆರ್ಥಿಕ ಪರಿಸ್ಥಿತಿ ಚಿಂತಾಜನಕವಿದ್ದರೂ ಸರಕಾರ ಪ್ರತಿವರ್ಷ ಕರವನ್ನು ಹೆಚ್ಚಿಸುತ್ತಲೇ ಇರುವುದನ್ನು ನೋಡಿದರೆ ಯಾವ ರಾಜ್ಯ ಅಥವಾ ರಾಜ್ಯ ಸರಕಾರ ಬಂದರೂ ರಾಗಿ ಬೀಸುವುದು ತಪ್ಪಲಿಲ್ಲವೆಂದು ಹೇಳುವ ಬಡವರ ಗಾದೆ ವಾಸ್ತವಿಕ ಸತ್ಯಾಂಶದಿಂದ ಕೂಡಿದೆ ಎಂದರೆ ತಪ್ಪಾಗಲಾರದು.

1990-91ರಲ್ಲಿ (1) ಗ್ರಾಮೋದ್ಯೋಗ ಮತ್ತು ಚಿಕ್ಕಪುಟ್ಟ ಉದ್ಯಮ, (2) ಖನಿಜ ಮತ್ತು ಲೋಹ ಉದ್ಯಮ, (3) ಉದ್ಯಮಗಳು, (4) ಅರಣ್ಯ ಮತ್ತು ವನ್ಯಜೀವನ, (5) ಆಹಾರ ಮತ್ತು ದಾಸ್ತಾನು, (6) ಭಾರೀ ಮತ್ತು ಮಧ್ಯಮ ನೀರಾವರಿ, (7) ಸಣ್ಣ ನೀರಾವರಿ, (8) ವಿದ್ಯುಚ್ಛಕ್ತಿ, (9) ಸಹಕಾರ, (10) ಪೋಲೀಸ್, (11) ರಸ್ತೆ ಮತ್ತು ಸೇತುವೆ, (12) ಲೋಕೋಪಯೋಗಿ ಕಾಮಗಾರಿ, (13) ವೈದ್ಯಕೀಯ ಮತ್ತು ಆನಾರೋಗ್ಯ,

(14) ಶಿಕ್ಷಣ, (15) ಗೃಹನಿರ್ಮಾಣ, (16) ಪಶುಸಂಗೋಪನೆ, (17) ಸಸ್ಯ ಸಂಗೋಪನೆ, (18) ಕಾರ್ಮಿಕ ಮತ್ತು ಉದ್ಯೋಗ ಇತ್ಯಾದಿ ಇಲಾಖೆಗಳ ಮುಖಾಂತರ ಸಾಮಾನ್ಯ ಸಾಮಾಜಿಕ ಹಾಗೂ ಆರ್ಥಿಕ ಸೇವೆಗಳಿಗಾಗಿ ಜನಸಾಮಾನ್ಯರು ಸರಕಾರಕ್ಕೆ ವಾಸ್ತವಿಕ ಲೆಕ್ಕದ ಪ್ರಕಾರ 517.19 ಕೋಟಿ ರೂಪಾಯಿ ತೆರಿಗೆ ರಹಿತ ಕಪ್ಪ, ಕಾಣಿಕೆ ಕೊಟ್ಟಿದ್ದು ಈ ಮೊತ್ತ 1992-93ರಲ್ಲಿ 717.50 ಕೋಟಿ ರೂಪಾಯಿಗಳಿಗೆ ಏರಲಿದ್ದು 90-91ಕ್ಕಿಂತ 92-93ರಲ್ಲಿ 200.30 ಕೋಟಿ ರೂಪಾಯಿ ಹೆಚ್ಚಾಗಲಿದೆ. ತೆರಿಗೆ ಹಾಗೂ ತೆರಿಗೆ ರಹಿತ ಆದಾಯ ಸರಕಾರಕ್ಕೆ 1990-91ರಲ್ಲಿ 3052.37 ಕೋಟಿ ರೂಪಾಯಿ ಜನಸಾಮಾನ್ಯರಿಂದ ಸಂದಾಯವಾಗಿದ್ದು, ಈ ಆದಾಯ 92-93ರಲ್ಲಿ 4463.37 ಕೋಟಿ ರೂಪಾಯಿ ಆಗಲಿದ್ದು ಜನಸಾಮಾನ್ಯರ ಮೇಲೆ ಒಂದು ವರ್ಷ ದಾಟುವುದರಲ್ಲಿಯೇ 1410.99 ಕೋಟಿ ರೂಪಾಯಿ ಹೆಚ್ಚಿನ ಭಾರ ಬೀಳಲಿದ್ದು ಈ ಭಾರವನ್ನು ಜನಸಾಮಾನ್ಯರು ಹೇಗೆ ಸಹಿಸಬೇಕು ಎಂಬುದನ್ನು ಸರಕಾರ, ಶಾಸಕರು ಹಾಗೂ ಸಂಸದರು ಚಿಂತಿಸಿದರೆ ಒಳ್ಳೆಯದು.

ಸರಕಾರದ 3ನೇ ಆರ್ಥಿಕ ಸಂಪನ್ಮೂಲ, ಕೇಂದ್ರ ಸರ್ಕಾರ ಪ್ರತಿ ವರ್ಷರಾಜ್ಯ ಸರ್ಕಾರಕ್ಕೆ ಕೊಡುತ್ತಿರುವ ಸಹಾಯಧನ ಹಾಗೂ ಕರಗಳ ಪಾಲು ಆಗಿದ್ದು, ಕೇಂದ್ರ ಸರಕಾರ ಕೂಡ ಜನಸಾಮಾನ್ಯರಿಂದ ಪ್ರತಿವರ್ಷ ವಸೂಲು ಮಾಡುವ ಕರ, ಸುಂಕ ಇತ್ಯಾದಿ ಪ್ರತಿ ವರ್ಷ ಹೆಚ್ಚುತ್ತಲೇ ಇರುತ್ತದೆ. ಕೇಂದ್ರ ಸರ್ಕಾರ 90-91ರಲ್ಲಿ ವಾಸ್ತವಿಕ ಲೆಕ್ಕದ ಪ್ರಕಾರ 839.80 ಕೋಟಿ ರೂಪಾಯಿಗಳನ್ನು ರಾಜ್ಯ ಸರ್ಕಾರಕ್ಕೆ ಕೊಟ್ಟಿದ್ದು, 92-93ರಲ್ಲಿ 1209.54 ಕೋಟಿ ರೂಪಾಯಿ ಬರಬೇಕೆಂದು ರಾಜ್ಯ ಸರಕಾರ ನಿರೀಕ್ಷಿಸಿದ್ದು ಅಂದರೆ 369.74 ಕೋಟಿ ರೂಪಾಯಿ ಹೆಚ್ಚಿಗೆ ಹಣ ಸೇರಿಸಿದ್ದು ಇವರಲ್ಲಿ ಕೇಂದ್ರ ಸರಕಾರ ಎಷ್ಟು ಕೊಡುತ್ತದೆಯೋ ಕಾದು ನೋಡಬೇಕಾಗಿದೆ.

ಸರ್ಕಾರದ 4ನೇ ಸಂಪನ್ಮೂಲ ಸಾರ್ವಜನಿಕ ಸಾಲವಿದ್ದು 90-91ರಲ್ಲಿ ವಾಸ್ತವಿಕ ಲೆಕ್ಕದ ಪ್ರಕಾರ 777.37 ಕೋಟಿ ರೂಪಾಯಿ ಇದ್ದು, 92-93ರಲ್ಲಿ 1699.19 ಕೋಟಿ ಸಾಲವನ್ನು ನಿರೀಕ್ಷಿಸುತ್ತಿದ್ದು, ಈ ಸಾಲ ಕೂಡಾ 921.82 ಕೋಟಿ ರೂಪಾಯಿ ಹೆಚ್ಚಾಗಲಿದ್ದು, ರಾಜ್ಯ ಸರ್ಕಾರಕ್ಕೆ ಕೂಡಾ ಸಾಲದ ಭಾರ ಪ್ರತಿವರ್ಷ ಹೆಚ್ಚುತ್ತಿರುವುದು ವಿಷಾದನೀಯ.

ಸರಕಾರದ ಮತ್ತೊಂದು ಪ್ರಮುಖ ಆರ್ಥಿಕ ಮೂಲ ಸಾರ್ವಜನಿಕ ಲೆಕ್ಕದ್ದಾಗಿದ್ದು (1) ಭವಿಷ್ಯನಿಧಿ, (2) ವಿಮಾ ಮತ್ತು ನಿವೃತ್ತ ವೇತನ ನಿಧಿ, (3) ಅಭಿವೃದ್ಧಿ ಮತ್ತು ಬೆಲೆ ಯಂತ್ರದ ನಿಧಿ, (4) ಅರಣ್ಯ ಅಭಿವೃದ್ಧಿ ನಿಧಿ, (5) ಕಂಪನಿ ಮತ್ತು ನಿಗಮಗಳಿಂದ ಠೇವಣಿ, (6) ಸಿವಿಲ್ ಡಿಪಾಸಿಟ್, (7) ಲೋಕಲ್ ಫಂಡ್ ಠೇವಣಿ, (8) ಅಮಾನತ್ತು ಲೆಕ್ಕ ಇತ್ಯಾದಿ ಮೂಲಗಳಿಂದ ಇರುತ್ತದೆ. ರಾಜ್ಯ ಸರಕಾರ 96-97ರಲ್ಲಿ 8030.35 ಕೋಟಿ ರೂಪಾಯಿ ಈ ಮೂಲದಿಂದ ಪಡೆದಿದ್ದು, 92-93ರಲ್ಲಿ 7426.06 ಕೋಟಿ ರೂಪಾಯಿ

ಪಡೆಯಲು ಆಶಿಸಿದ್ದು, ಒಂದು ವರ್ಷದ ಅವಧಿಯಲ್ಲಿ 1395.71 ಕೋಟಿ ರೂಪಾಯಿ ಹೆಚ್ಚಿನ ಮೊತ್ತವನ್ನು ಈ ಮೂಲಗಳಿಂದ ಸರಕಾರ ನಿರೀಕ್ಷಿಸಿದೆ.

ಸರಕಾರದ ಈ ಎಲ್ಲ ಮೂಲಗಳ ಜಮಾ ಮೊತ್ತ 1990-91ರಲ್ಲಿ 11081.12 ಕೋಟಿ ರೂಪಾಯಿಗಳಾಗಿದ್ದು, ಈ ವೊತ್ತ 92-93ರಲ್ಲಿ 14899.37 ಕೋಟಿ ರೂಪಾಯಿಗಳಾಗಲಿದ್ದು ಅಂದರೆ ಒಂದು ವರ್ಷದ ಅವಧಿಯಲ್ಲಿ 3818.24 ಕೋಟಿ ರೂಪಾಯಿ ಹೆಚ್ಚು ಆಗಲಿದೆ.

ಸರಕಾರದ ಹಣ ಸಾರ್ವಜನಿಕ ಹಣ ಈ ಹಣ ಸಾರ್ವಜನಿಕರ, ಜನಸಾಮಾನ್ಯರ ಸರ್ವಾಂಗೀಣ ಅಭಿವೃದ್ಧಿಗಾಗಿ ಪ್ರಾಮಾಣಿಕವಾಗಿ ಖರ್ಚು ಆಗಲೇಬೇಕು. ಈ ಹಣದಲ್ಲಿ ಅಭಿವೃದ್ಧಿಗಾಗಿ ಎಷ್ಟು ಹಣ ಹೇಗೆ ಎಲ್ಲಿ ಯಾವ ರೀತಿಯಲ್ಲಿ ಪೋಲಾಗದಂತೆ ಹೆಚ್ಚಿನ ಪ್ರಮಾಣದಲ್ಲಿ ಖರ್ಚಾಗಬೇಕೆಂಬ ಬಗ್ಗೆ ರಾಜ್ಯದ ಶಾಸಕರು ಚಿಂತಿಸಿ, ಸರಕಾರಕ್ಕೆ ಸಲಹೆ, ಸೂಚನೆ ಕೊಟ್ಟು ಸರಕಾರದ ಉತ್ಪನ್ನ ಪ್ರತಿ ವರ್ಷವೂ ಹೆಚ್ಚಾಗುತ್ತಿರುವಂತೆ ಜನಸಾಮಾನ್ಯರ ಆದಾಯ ಹೆಚ್ಚಿಸಿ, ಕರಭಾರ ತಗ್ಗಿಸಿ, ಅವರ ಆರ್ಥಿಕ ಪರಿಸ್ಥಿತಿ ಸುಧಾರಿಸುವ ಬಗ್ಗೆ ಪ್ರಸ್ತುತ ಆರ್ಥಿಕ ಬಿಕ್ಕಟ್ಟನ್ನು ಬಗೆಹರಿಸುವಲ್ಲಿ ಮುಂದಾದರೆ ಸಾರ್ವಜನಿಕ ಹಿತದೃಷ್ಟಿಯಿಂದ ಒಳ್ಳೆಯದು.

❑

ಶಾಸಕಾಂಗ ಅರಾಜಕತೆಗೆ ಆಹ್ವಾನ

ಕರ್ನಾಟಕ ವಿಧಾನ ಸಭೆಯಲ್ಲಿ ಕಾಂಗ್ರೆಸ್ 177, ಜನತಾದಳ 25, ಬಿ.ಜೆ.ಪಿ. 4, ಇತರರು 16, ಖಾಲಿ ಜಾಗ 1, ನಾಮಕರಣ 1, ಸಭಾಧ್ಯಕ್ಷ 1 ಹೀಗೆ ವಿವಿಧ ಬಲಾಬಲ ಇರುತ್ತದೆ.

ರಾಜ್ಯದಲ್ಲಿ ಯಾವುದೇ ಸರ್ಕಾರ ಅಧಿಕಾರದಲ್ಲಿ ಉಳಿಯಬೇಕಾದರೆ ಅಥವಾ ಅಧಿಕಾರಕ್ಕೆ ಬರಬೇಕಾದರೆ ವಿಧಾನ ಸಭೆಯಲ್ಲಿ 113 ಸದಸ್ಯರ ನಿಚ್ಚಳ ಬೆಂಬಲ ಅವಶ್ಯಕವಾಗಿ ಇರಬೇಕಾಗುತ್ತದೆ. ಈಗಿನ ಕಾಂಗ್ರೆಸ್ 177 ಸದಸ್ಯರಲ್ಲಿ ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿಯಾಗಿ ಮುಂದುವರೆಯಲು ಅವರಿಗೆ ಎಲ್ಲಾ 117 ಸದಸ್ಯರ ಬೆಂಬಲವಂತೂ ಇಲ್ಲವೆಂಬುದು ಸುಸ್ಪಷ್ಟ. ಈ 177 ಸದಸ್ಯರಲ್ಲಿ ಉಪಮುಖ್ಯಮಂತ್ರಿ ಎಸ್.ಎಂ. ಕೃಷ್ಣ, 2. ಕಂದಾಯ ಮಂತ್ರಿ ರಾಜಶೇಖರಮೂರ್ತಿ, 3. ಸಚಿವ ಶ್ರೀ ಮಂಜುನಾಥ, 4. ಡಾ. ಲಮಾಣಿ, 5. ಟಿ. ರಾಮಕೃಷ್ಣ, 6. ಪೆರಿಕಾಲ ಮಲ್ಲಪ್ಪ, 7. ಡಿಸೋಜ, 8. ಶ್ರೀಮತಿ ಮನೋರಮಾ ಮಧ್ವರಾಜ್, ಮೊದಲಾದ 71 ಶಾಸಕರು, ಮುಖ್ಯಮಂತ್ರಿ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಶ್ರೀ ವೀರಪ್ಪ ಮೊಯಿಲಿ ವಿರುದ್ಧ ಗುರುತರವಾದ ಆಪಾದನೆಗಳನ್ನು ಮಾಡಿ ಮೊಯಿಲಿಯವರ ಬದಲಾವಣೆ ನಿರೀಕ್ಷಿಸಿರುವುದು ಸುಸ್ಪಷ್ಟ. ಇದು ಸತ್ಯವೇ ಆಗಿದ್ದರೆ ಮೊಯಿಲಿಯವರು ಅಧಿಕಾರದಿಂದ ಕೆಳಗಿಳಿದು ಮತ್ತೊಬ್ಬ ಧುರೀಣನನ್ನು ಆರಿಸಿಕೊಳ್ಳಲು ಕಾಂಗ್ರೆಸ್ ಶಾಸಕಾಂಗ ಪಕ್ಷಕ್ಕೆ ಅನುಕೂಲ ಮಾಡಿಕೊಟ್ಟು ತಮ್ಮ ಹಾಗೂ ಶಾಸಕಾಂಗದ ಘನತೆ, ಗೌರವಗಳನ್ನು ಸಂಸದೀಯ ಪದ್ಧತಿಗೆ ಅನುಗುಣವಾಗಿ ಕಾಪಾಡಬೇಕು. ತಮಗೆ ಸಂಪೂರ್ಣ ಬಹುಮತ ಕಾಂಗ್ರೆಸ್ ಶಾಸಕಾಂಗ ಪಕ್ಷದಲ್ಲಿಯೇ 89 ಜನ ಶಾಸಕರ ಬೆಂಬಲವಿದ್ದರೆ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯನ್ನಾದರೂ ಕರೆದು ಅದನ್ನು ರುಜುವಾತುಪಡಿಸಿಕೊಂಡು ಇನ್ನುಳಿದ ಶಾಸಕರಿಗೆ ತಿಳಿಹೇಳಿ ಮುಖ್ಯಮಂತ್ರಿಯಾಗಿ ಮುಂದುವರಿಯಬೇಕು.

ಕಳೆದ ವಿಧಾನಸಭಾ ಅಧಿವೇಶನದಲ್ಲಿ ಅವಿಶ್ವಾಸ ನಿರ್ಣಯದ ಮೇಲೆ ಚರ್ಚೆ ನಡೆದು ನಿರ್ಣಯದ ಪರ ಮತಗಣನೆಯ ಕಾಲಕ್ಕೆ ಸುಮಾರು 56 ಜನ ಕಾಂಗ್ರೆಸ್ ಶಾಶಕರು ಮತದಾನ ಮಾಡಲು ಕೊಟ್ಟ ವ್ಹಿಪ್ ಕಡೆಗಣಿಸಿ ಬಾವಿಯಲ್ಲಿಳಿದು ಕಾರ್ಯಕಲಾಪಗಳಿಗೆ ತಡೆಯುಂಟುಮಾಡಿದಾಗ ಡಿವಿಜನ್ ಮಾಡಲು ಅವಕಾಶ ಕಲ್ಪಿಸಿ ಮತಗಣನೆ ನಡೆಯಬೇಕಾಗಿತ್ತು. ಮತಗಣನೆಯಲ್ಲಿ ವೀರಪ್ಪ ಮೊಯಿಲಿಯವರು ಜಯಶೀಲರಾಗಿದ್ದರೆ ಮಾತ್ರ ಅಧಿಕಾರದಲ್ಲಿ ಮುಂದುವರಿಯಬೇಕಾಗಿತ್ತು. ಡಿವಿಜನ್ ಮಾಡಿ ಮತ ಎಣಿಕೆ ಮಾಡಿದ್ದರೆ ಅವಿಶ್ವಾಸ ನಿರ್ಣಯ ಬಹುಮತದಿಂದ ಪಾಸಾಗುತ್ತಿತ್ತು ಹಾಗೂ ಅದರ ಪರಿಣಾಮವಾಗಿ ಶ್ರೀ ವೀರಪ್ಪ ಮೊಯಿಲಿಯವರು ಗೌರವಯುತವಾಗಿ ರಾಜೀನಾಮೆ ಕೊಡಬೇಕಾಗಿತ್ತು ಹಾಗೂ ವ್ಹಿಪ್ ಧಿಕ್ಕರಿಸಿದ ಶಾಸಕರು ಸದಸ್ಯತ್ವದಿಂದ ಅನರ್ಹರು ಕೂಡ ಆಗಬೇಕಾಗಿತ್ತು. ದುರ್ದೈವದಿಂದ ಸಂಸದೀಯ ಪದ್ಧತಿಗೆ ತಿಲಾಂಜಲಿಯನ್ನು ಇತ್ತು ಅವಿಶ್ವಾಸ ನಿರ್ಣಯದ ಧ್ವನಿಮತದಿಂದ ಬಿದ್ದು ಹೋಯಿತು ಎಂದು ವಿಧಾನಸಭೆಯನ್ನು ಹಠಾತ್ ಮುಂದೂಡಿದ್ದು ಪ್ರಜಾಪ್ರಭುತ್ವದ ಅವಹೇಳನ, ಕಾಂಗ್ರೆಸ್ ಶಾಸಕಾಂಗ ಇಂದು ಶಿಸ್ತು, ನೀತಿ, ನಿಯಮ ಹಾಗೂ ಸಂಸದೀಯ ಮೌಲ್ಯಗಳನ್ನು ಗಾಳಿಗೆ ತೂರಿ ನಡೆಯುತ್ತಿರುವುದು ವಿಷಾದನೀಯ. ಈ ರಾಜ್ಯದ ಜಗತ್‌ಪ್ರಭುಗಳು ಮುಂದಿನ 5 ವರ್ಷ ವೀರೇಂದ್ರ ಪಾಟೀಲರ ಮುಖಂಡತ್ವದಲ್ಲಿಯೇ ಕಾಂಗ್ರೆಸ್ ಅಧಿಕಾರಕ್ಕೆ ಬರಲೆಂಬ ಉದ್ದೇಶದಿಂದಲೇ 1989ರಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತಂದರು. ಈ 5 ವರ್ಷದ ಅವಧಿಯಲ್ಲಿ ಕಾಂಗ್ರೆಸ್ ಹಾಗೂ ಕಾಂಗ್ರೆಸ್ ಶಾಸಕಾಂಗ ಪಕ್ಷ ರಾಜ್ಯದಲ್ಲಿ ಸುಭದ್ರ, ಸಮರ್ಥ ಹಾಗೂ ಸಬಲವಾದ ಸರ್ಕಾರವನ್ನು ಕೊಟ್ಟು ಉತ್ತಮ ಆಡಳಿತ ನಡೆಸಬಹುದಿತ್ತು. ವೀರೇಂದ್ರ ಪಾಟೀಲರನ್ನು ಆಪಾದನೆಗಳ ನೆಪದ ಮೇಲೆ ಕಿತ್ತುಹಾಕಿ ಬಂಗಾರಪ್ಪನವರನ್ನು ಅಧಿಕಾರಕ್ಕೆ ತಂದದ್ದೂ ದುರ್ದೈವದ ದುರಂತ. ಬಂಗಾರಪ್ಪನವರನ್ನೂ ಸಹ ಗುರುತರ ಆಪಾದನೆಗಳ ಮೇಲೆ ಕಿತ್ತು ಹಾಕಿ ಮೊಯಿಲಿಯವರನ್ನು ತಂದದ್ದು ಸಹ ಮತ್ತೊಂದು ದುರ್ದೈವ. ಈಗ ಮೊಯಿಲಿಯವರ ಮೇಲೆ ಸಹ ಗುರುತರವಾದ ಅಪಾದನೆ ಹೊರಿಸಿ ಅವರನ್ನು ಸಹ ಅಧಿಕಾರದಿಂದ ಕೆಳಗಿಳಿಸುವುದು ಸಹ ದುರ್ದೈವದ ಅತಿರೇಕ. ವೀರಪ್ಪ ಮೊಯಿಲಿಯವರ ವಿರುದ್ಧ ಕಾಂಗ್ರೆಸ್ ಶಾಸಕಾಂಗದ 177 ಸದಸ್ಯರಲ್ಲಿ ಉಪಮುಖ್ಯಮಂತ್ರಿ ಹಾಗೂ ಕಂದಾಯ ಸಚಿವರನ್ನು ಸೇರಿ ಅವರಿಗೆ 80 ಜನ ಸದಸ್ಯರ ಬೆಂಬಲವಿದ್ದರೆ ಅವರೇ ಶಾಸಕಾಂಗ ಸಭೆ ಕರೆದು ವೀರಪ್ಪ ಮೊಯಿಲಿಯವರನ್ನು ಬದಲಾಯಿಸಲು ಹಾಗೂ ಯಾರು ಹೊಸ ನಾಯಕರಾಗಬೇಕೆಂದು ನಿರ್ಣಯಿಸಿ ಈ ನಿರ್ಣಯಗಳನ್ನು ಪ್ರಧಾನಿ ಹಾಗೂ ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷರಿಗೆ ಕಳುಹಿಸಿಕೊಡಬೇಕು. ಪ್ರಧಾನಿಯವರಾದರೂ ಸಂಸದೀಯ ಘನತೆ,

ಗೌರವ ಎತ್ತಿ ಹಿಡಿದು ಮೊಯಿಲಿಯವರನ್ನು ಕೆಳಗಿಳಿಸಿ, ಮತ್ತೊಬ್ಬ ಮುಖ್ಯಮಂತ್ರಿಯನ್ನು ಚುನಾಯಿಸಲು ಅಥವಾ ಹೆಸರಿಸಲು ಮುಂದಾಗಬೇಕು. ಪ್ರಧಾನಿಗಳ ಅನುಚಿತ ದ್ವಂದ್ವ ಹಾಗೂ ಸಂವಿಧಾನ ವಿರೋಧಿ ನೀತಿಯೇ ರಾಜ್ಯದಲ್ಲಿಯ ಕಾಂಗ್ರೆಸ್ ಅರಾಜಕತೆ ಹಾಗೂ ಆಡಳಿತ ಅರಾಜಕತೆಗೆ ಕಾರಣವೆಂದರೆ ತಪ್ಪಾಗಲಾರದು.

ಯಾವುದೇ ಅಥವಾ ಯಾರದೇ ಸರ್ಕಾರ ಅಥವಾ ಮಂತ್ರಿಮಂಡಲವಿರಲಿ ಅದಕ್ಕೆ ನೀತಿಸಂಹಿತೆ ಇರುತ್ತದೆ. ಮಂತ್ರಿಮಂಡಲದಲ್ಲಿಯೇ ಇದ್ದುಕೊಂಡು ತಮ್ಮ ಕರ್ತವ್ಯಗಳಿಗೆ ಲಕ್ಷ್ಯ ಕೊಡದೆ ಸ್ಥಾನಮಾನದ ದುರುಪಯೋಗಪಡಿಸಿಕೊಂಡು, ಮುಖ್ಯಮಂತ್ರಿಗೆ ವಿಧೇಯರಾಗಿ ನಡೆದುಕೊಳ್ಳದೆ, ಮುಖ್ಯಮಂತ್ರಿಗೆ ಕಿರಕಿರಿ ಉಂಟುಮಾಡುವುದಾಗಲೀ, ಮುಖ್ಯಮಂತ್ರಿ ವಿರುದ್ಧ ಸಟೆದು ನಿಂತು ಹೇಳಿಕೆ ಕೊಡುವುದೇ ಆಗಲಿ, ಅಪಾದನೆ ಮಾಡುವುದೇ ಆಗಲಿ ಅಥವಾ ಬಂಡಾಯ ಹೂಡುವುದೇ ಆಗಲೀ ಮುಖ್ಯಮಂತ್ರಿಯಿಂದ ನೇಮಕವಾದ ಅವರ ಮಂತ್ರಿಮಂಡಲದಲ್ಲಿಯ ಈ ಯಾವುದೇ ಮಂತ್ರಿಗೆ ಅಥವಾ ಆ ಮಂತ್ರಿಗಳ ಘನತೆ, ಗೌರವ ಹಾಗೂ ನೀತಿಸಂಹಿತೆಗೆ ತಕ್ಕುದಲ್ಲ. ಅಂತಹ ಮಂತ್ರಿಗಳು ಸಂವಿಧಾನಬದ್ಧವಾಗಿ ರಾಜೀನಾಮೆ ಕೊಟ್ಟು ಭಿನ್ನಮತೀಯ ಶಾಸಕರ ಗುಂಪಿಗೆ ಸೇರಬೇಕು. ಭಿನ್ನಮತೀಯ ಶಾಸಕರು ಇರಬಹುದು, ಆದರೆ ಭಿನ್ನಮತೀಯ ಸಚಿವರಿಗೆ ಯಾವುದೇ ನೈತಿಕ ಹಕ್ಕು ಬರಲಾರದು. ಮುಖ್ಯಮಂತ್ರಿ ಯಾರೇ ಇರಲಿ ಅವರು ತಮ್ಮ ಮಂತ್ರಿಮಂಡಲದ ಯಾರೇ ಮಂತ್ರಿ ತಮ್ಮ ವಿರುದ್ಧ ವಿರೋಧಾಭಾಸ ವ್ಯಕ್ತಪಡಿಸಿದರೆ, ಅದರಿಂದ ಗೌರವದಿಂದ ರಾಜೀನಾಮೆ ಪಡೆದುಕೊಳ್ಳಬೇಕು. ಅವರು ರಾಜೀನಾಮೆ ಕೊಡಲಿಕ್ಕೆ ಒಪ್ಪದಿದ್ದರೆ ಅವರನ್ನು ನಿರ್ದಾಕ್ಷಿಣ್ಯವಾಗಿ ತೆಗೆದುಹಾಕಬೇಕು. ಇದು ಸಂವಿಧಾನಬದ್ಧವಾದ ನೀತಿಸಂಹಿತೆ.

ಸಭಾಧ್ಯಕ್ಷರು ಶಾಸಕರ ಸ್ನೇಹಿತ, ನೀತಿ, ವಿಧಿ, ಮಾರ್ಗದರ್ಶಿಯಾಗಿ ಸ್ಥಾನದ, ಶಾಸನ ಸಭೆಯ ಹಾಗೂ ಸದಸ್ಯರ ಗೌರವ, ಹಿರಿಮೆ, ಹಕ್ಕು, ಕಾರ್ಯಕಲಾಪಗಳನ್ನು ಕಾಪಾಡಬೇಕು. ಸಭಾಧ್ಯಕ್ಷ ಸ್ಥಾನಕ್ಕೆ ತನ್ನ ಹೆಸರು ಸೂಚಿತವಾದೊಡನೆ ಅಥವಾ ಚುನಾಯಿತನಾದ ತಕ್ಷಣ ತನ್ನ ರಾಜಕೀಯ ಪಕ್ಷದ ಸದಸ್ಯತ್ವಕ್ಕೆ ಸಹ ರಾಜೀನಾಮೆ ಕೊಡಬೇಕು. ಸದನದ ಎಲ್ಲಾ ರಾಜಕೀಯ ಪಕ್ಷಗಳ ಶಾಸಕರ ಪ್ರೀತಿ, ವಿಶ್ವಾಸಗಳಿಗೆ ಪಾತ್ರರಾಗಬೇಕು. ಅವು ಸಂಸದೀಯ ಸತ್‌ಸಂಪ್ರದಾಯದ ಸೂತ್ರಗಳು. ಈ ಸೂತ್ರಗಳಿಗೆ ವ್ಯತಿರಿಕ್ತವಾಗಿ ಸತ್‌ಸಂಪ್ರದಾಯಗಳಿಗೆ ತಿಲಾಂಜಲಿಯನ್ನು ಇತ್ತಿರುವುದು ವಿಷಾದನೀಯ.

ದುರ್ದೈವದಿಂದ ಈ ರಾಜ್ಯದಲ್ಲಿ ಜನತೆ ಕೊಟ್ಟ ಅಧಿಕಾರವನ್ನು ಸರಿಯಾಗಿ ಚಲಾಯಿಸದೆ ಪ್ರಜೆಗಳಿಗೆ ಮಾರಕವಾದ ರೀತಿಯಲ್ಲಿ ಕಾಂಗ್ರೆಸ್ ಶಾಸಕರು ಸಂಸದೀಯ ಪಕ್ಷ, ಮಂತ್ರಿಮಂಡಲ, ಮಂತ್ರಿಗಳು ಹಾಗೂ ಮುಖ್ಯಮಂತ್ರಿಗಳು ನಡೆದುಕೊಳ್ಳುತ್ತಿರುವರು

ಹಾಗೂ ರಾಜ್ಯದಲ್ಲಿ ಉತ್ತಮ, ಸಮರ್ಥ, ಸುಭದ್ರ ಹಾಗೂ ಸಬಲ ಸರ್ಕಾರವಾಗುವಲ್ಲಿ ವಿಫಲವಾಗಿ ದಿವಾಳಿ ಸರಕಾರವಾಗಿರುವುದು ಸಾಧುವಲ್ಲ. ರಾಜ್ಯಾದ್ಯಂತ ಭ್ರಷ್ಟಾಚಾರ, ಪಕ್ಷಪಾತ, ಸ್ವಜನ ಪಕ್ಷಪಾತ, ದುರಾಡಳಿತ, ಅಧಿಕಾರ ದುರುಪಯೋಗಕ್ಕೆ ದಾರಿ ಮಾಡಿಕೊಟ್ಟಿರುವುದು, ಅಧಿಕೃತ ವಿರೋಧಪಕ್ಷಗಳ ಶಾಸಕರು ಸಹ ಆಡಳಿತ ಪಕ್ಷವನ್ನು ಸಮರ್ಥವಾಗಿ ಎದುರಿಸದಿರುವುದು ಸಹ ಈ ರಾಜ್ಯದ ಪ್ರಜಾಪ್ರಭುಗಳ ದುರ್ದೈವ.

❑

94-95 ಆಯವ್ಯಯ

ಪ್ರತಿ ವರ್ಷ ಸಾರ್ವಜನಿಕರಿಂದ ವಿವಿಧ ಕರ-ಕಂದಾಯ ವಸೂಲು ಮಾಡಿ ಹಾಗೂ ವಿವಿಧ ರೀತಿಯ ಸಾಲನಿಧಿ ಪಡೆದು ಸರಕಾರ ಆಡಳಿತ ನಡೆಸುತ್ತಿದೆ. ಕೇಂದ್ರ ಸರಕಾರದಿಂದ ಸಹಾಯಧನ ಹಾಗೂ ಕರದ ಪಾಲನ್ನು ಸಹ ಪಡೆಯುತ್ತಿದೆ. ವಿವಿಧ ತೆರಿಗೆ, ತೆರಿಗೆ ರಹಿತ ಆದಾಯ, ಕೇಂದ್ರ ಸರಕಾರದ ಧನಸಹಾಯ, ತೆರಿಗೆ ಪಾಲು ಹೀಗೆ ಒಟ್ಟು ಕಂದಾಯ 92-93ರಲ್ಲಿ ವಾಸ್ತವಿಕವಾಗಿ 5421-66 ಕೋಟಿ ಸಂದಾಯವಾಗಿದ್ದು ಆಯ ವ್ಯಯ ಪ್ರಕಾರ 94-95ರಲ್ಲಿ 8168.36 ಕೋಟಿಗೆ ಏರಿದೆ. ಈ ಏರಿಕೆಯ ಮೊತ್ತದಲ್ಲಿ ಅಬಕಾರಿ, ಮಾರಾಟ, ವಾಹನ, ಸರಕು, ವಿದ್ಯುತ್ ಇತ್ಯಾದಿ ಕರದ ಬಾಬ್ತು 1622.40 ಕೋಟಿ ಹೆಚ್ಚಿನ ಹಣ ಸೇರಿರುತ್ತದೆ. ರಾಜ್ಯ ಸರಕಾರದ ಕಂದಾಯದ ಆದಾಯ 90-91ರಲ್ಲಿ 3892.17 ಕೋಟಿ, 91-92ರಲ್ಲಿ 4775.47 ಕೋಟಿ, 92-93ರಲ್ಲಿ 5421.66 ಕೋಟಿ, ವಾಸ್ತವಿಕವಾಗಿ ಸಂದಾಯವಾಗಿದ್ದು 93-94ರಲ್ಲಿ 6672.31 ಕೋಟಿ, 94-95ರಲ್ಲಿ 8168.36 ಕೋಟಿ ಅಂದಾಜು ಪ್ರಕಾರ ಏರುತ್ತಿದ್ದು ಇಷ್ಟೊಂದು ಕಂದಾಯವನ್ನು ರಾಜ್ಯ ಸರಕಾರ ಪಡೆಯುತ್ತಿದೆ. ಈ ತರಹದ ಏರಿಕೆ ಜನಸಾಮಾನ್ಯರ ಸುಲಿಗೆಯೆಂದು ಹೇಳದೆ ಗತ್ಯಂತರವಿಲ್ಲ.

ಕಂದಾಯ ಉತ್ಪನ್ನ ಆಡಳಿತಕ್ಕೆ ಸಾಲದೆ ಇರುವುದರಿಂದ ಸಾರ್ವಜನಿಕರಿಂದ, ನೌಕರರಿಂದ ಕೇಂದ್ರ ಸರಕಾರದಿಂದ, ಸಂಘ-ಸಂಸ್ಥೆಗಳಿಂದ ಸರಕಾರದ ಪ್ರತಿವರ್ಷ ಸಾಲ, ಮುಂಗಡ ನಿಧಿ, ಠೇವಣಿ ಇತ್ಯಾದಿ ಮೂಲಗಳಿಂದ ಹಣ ಪಡೆಯುತ್ತಿದೆ. ಹೀಗೆ ಪಡೆದ ಸಾಲ 90-91ರಲ್ಲಿ 7188.94 ಕೋಟಿ, 91-92ರಲ್ಲಿ 14208.43 ಕೋಟಿ, 92-93ರಲ್ಲಿ 16527.15 ಕೋಟಿ ವಾಸ್ತವಿಕವಿದ್ದು, 93-94ರಲ್ಲಿ, 11948.35 ಕೋಟಿ, 94-95ರಲ್ಲಿ 12461.06 ಕೋಟಿ ಸಾಲವನ್ನು ಅಂದಾಜು ಪ್ರಕಾರ ಪಡೆಯಲಿದೆ. ಹೀಗೆ ಪಡೆದ ಸಾಲವನ್ನು ಸರಕಾರ ಪ್ರತಿವರ್ಷ ತೀರಿಸಬೇಕಾಗುತ್ತದೆ. ಹೀಗೆ ತೀರಿಸಿದ ಸಾಲ 90-91ರಲ್ಲಿ 6396.62 ಕೋಟಿ, 91-92ರಲ್ಲಿ 13228.95 ಕೋಟಿ, 92-93ರಲ್ಲಿ 15619.46 ಕೋಟಿ ವಾಸ್ತವಿಕವಾಗಿದ್ದು ತೀರಿಸಬೇಕಾದ ಸಾಲದ ಅಂದಾಜು 93-94ರಲ್ಲಿ 10982.93 ಕೋಟಿ, 94-95ರಲ್ಲಿ 11485.03 ಕೋಟಿ ಇರುತ್ತದೆ. ಪ್ರತಿವರ್ಷ ಸಾಲ ಪಡೆದು ಸರಕಾರ

ನಡೆಸುತ್ತಿದ್ದು ಕೊಡಬೇಕಾದ ಸಾಲದ ಬಾಕಿ 90-91ರ ಕೊನೆಗೆ 5762.71 ಕೋಟಿ, 91-92ಕ್ಕೆ 6470.99 ಕೋಟಿ, 92-93ಕ್ಕೆ 7907.33 ಕೋಟಿ ವಾಸ್ತವಿಕವಿದ್ದು, 93-94ಕ್ಕೆ 9055.75 ಕೋಟಿ, 94-95ಕ್ಕೆ 10412.77 ಕೋಟಿ ಅಂದಾಜು ಇರುತ್ತದೆ. ಪ್ರತಿವರ್ಷ ಹೆಚ್ಚಿನ ಸಾಲ ಪಡೆದು ಅಭಿವೃದ್ಧಿ ಕಾರ್ಯಗಳಿಗೆ ಸಾಕಷ್ಟು ಖರ್ಚು ಮಾಡದೇ, ಸಾಲ ಪರತ ಮಾಡದೇ, ಸಾಲದ ಬಾಕಿ ಕೊಡದೇ ಉಳಿಸಿಕೊಂಡು ಸಾಲದ ಭಾರ ಹೆಚ್ಚುತ್ತಿರುವುದು ಆರ್ಥಿಕ ದಿವಾಳಿಯ ದಿಕ್ಸೂಚಿಯೆಂದರೆ ತಪ್ಪಾಗಲಾರದು. ಸರಕಾರ ಪಡೆದ ಸಾಲಕ್ಕೆ ಪ್ರತಿವರ್ಷ ಬಡ್ಡಿ ಸಂದಾಯ ಮತ್ತು ಋಣಸೇವೆ ಮಾಡುತ್ತಿದ್ದು 90-91ರಲ್ಲಿ 481.40 ಕೋಟಿ, 91-92ರಲ್ಲಿ 566.97 ಕೋಟಿ, 92-93ರಲ್ಲಿ 651.74 ಕೋಟಿ ವಾಸ್ತವಿಕವಿದ್ದು, 93-94ರಲ್ಲಿ 797.91 ಕೋಟಿ, 94-95ರಲ್ಲಿ 945.96 ಕೋಟಿ ಅಂದಾಜು ಕೊಡಲಿದೆ.

ಅಭಿವೃದ್ಧಿ ಅವಕಾಶವಿರದ ಸಾಮಾನ್ಯ ಸೇವೆಗಾಗಿ 90-91ರಲ್ಲಿ 1174.59 ಕೋಟಿ, 91-92ರಲ್ಲಿ 1422.00 ಕೋಟಿ, 92-93ರಲ್ಲಿ 1699.68 ಕೋಟಿ, ವಾಸ್ತವಿಕ ಖರ್ಚಾಗಿದ್ದು 93-94ರಲ್ಲಿ 1926.01 ಕೋಟಿ, 94-95ರಲ್ಲಿ 2328.59 ಕೋಟಿ, ಅಂದಾಜು ಖರ್ಚಾಗಲಿದೆ. ಸಾಮಾಜಿಕ ಸೇವೆಗಾಗಿ 90-91ರಲ್ಲಿ 1538.91 ಕೋಟಿ, 91-92ರಲ್ಲಿ 1892.84 ಕೋಟಿ, 92-93ರಲ್ಲಿ 2082.25 ಕೋಟಿ, ವಾಸ್ತವಿಕ ಖರ್ಚಾಗಿದ್ದು 93-94ರಲ್ಲಿ 2545.91 ಕೋಟಿ, 94-95ರಲ್ಲಿ 3053.85 ಕೋಟಿ ಅಂದಾಜು ಖರ್ಚಾಗಲಿದೆ. ಸಾಮಾಜಿಕ ಸೇವೆಯಲ್ಲಿ ಬರುವ ಸಾಮಾನ್ಯ ಶಿಕ್ಷಣಕ್ಕೆ 90-91ರಲ್ಲಿ 758.52 ಕೋಟಿ, 91-92ರಲ್ಲಿ 908.08 ಕೋಟಿ, 92-93ರಲ್ಲಿ 1040.05 ಕೋಟಿ ವಾಸ್ತವಿಕ ಖರ್ಚಾಗಿದ್ದು, 93-94ರಲ್ಲಿ 1274.06 ಕೋಟಿ, 94-95ರಲ್ಲಿ 1562.83 ಕೋಟಿ ಅಂದಾಜು ಖರ್ಚಾಗಲಿದೆ. ನಮ್ಮ ರಾಜ್ಯದಲ್ಲಿ ಶಿಕ್ಷಣದ ಗುರಿ, ಗುಣಮಟ್ಟ ಹೇಗೆ ಸಾಗುತ್ತಿದೆ ಎಂಬುದನ್ನು ಹೇಳುವುದು ಅವಶ್ಯವಿಲ್ಲ. ಸಾಮಾಜಿಕ ಸೇವೆಗಳಲ್ಲಿ ಬರುವ ವೈದ್ಯಕೀಯ, ನೀರು ಪೂರೈಕೆ, ಗೃಹ ನಿರ್ಮಾಣ, ಹರಿಜನ, ಗಿರಿಜನ ಹಾಗೂ ಇತರ ಹಿಂದುಳಿದ ವರ್ಗ, ಕಾರ್ಮಿಕ ಉದ್ಯೋಗ, ಸಾಮಾಜಿಕ ಕಲ್ಯಾಣ, ಪೌಷ್ಠಿಕ ಆಹಾರ, ನೈಸರ್ಗಿಕ ವಿಕೋಪಗಳ ಪರಿಹಾರ, ಇತ್ಯಾದಿಗಳಿಗೆ ಆಯ ವ್ಯಯದಲ್ಲಿ ಸಾಕಷ್ಟು ಹಣ ತೆಗೆಯದಿರುವುದು ಹಾಗೂ ತೆಗೆದಿಟ್ಟದ್ದರೆ ಪೂರಾ ಹಣವನ್ನು ಖರ್ಚು ಮಾಡದೇ ಇರುವುದು, ಜನಸಾಮಾನ್ಯರಿಗೆ ಸಿಗುವ ಸವಲತ್ತುಗಳನ್ನು ಹಾರಿ ಹೊಡೆಯುವುದೇ ಆಗಿದೆ. ಆರ್ಥಿಕ ಸೇವೆಗಳು ಪ್ರಮುಖವಾದ ಜನಪರ ಸೇವೆಗಳಾಗಿದ್ದು, ಈ ಬಗ್ಗೆ 90-91ರಲ್ಲಿ 1159.30 ಕೋಟಿ, 91-92ರಲ್ಲಿ 1521.38 ಕೋಟಿ, 92-93ರಲ್ಲಿ 1685.50 ಕೋಟಿ (ಬಜೆಟ್ ಮೊತ್ತಕ್ಕಿಂತ ಕಡಿಮೆ) ವಾಸ್ತವಿಕವಾಗಿದ್ದು, 93-94ರಲ್ಲಿ 1841.38 ಕೋಟಿ (ಬಜೆಟ್ ಮೊತ್ತಕ್ಕಿಂತ ಕಡಿಮೆ), 94-95ರಲ್ಲಿ 2400.00 ಕೋಟಿ, ಅಂದಾಜು ಖರ್ಚಾಗಲಿದೆ. ಈ ಸೇವೆಗಳಿಗೆ ಒಕ್ಕಲುತನ, ಪಶುಸಂಗೋಪನೆ, ಹೈನಾಭಿವೃದ್ಧಿ, ಗ್ರಾಮೀಣಾಭಿವೃದ್ಧಿ, ಮೀನುಗಾರಿಕೆ, ಸಹಕಾರ, ಸಣ್ಣ ನೀರಾವರಿ, ಪ್ರವಾಹ ನಿಯಂತ್ರಣ,

ವಿದ್ಯುಚ್ಛಕ್ತಿ, ರಸ್ತೆ ಮತ್ತು ಸೇತುವೆ, ರಸ್ತೆ ಸಾರಿಗೆ ಸೇವೆ, ಭಾರೀ ಮತ್ತು ಮಧ್ಯಮ ನೀರಾವರಿ ಇತ್ಯಾದಿಗಳಿಗೆ ಆಯವ್ಯಯದಲ್ಲಿ ಸಾಕಷ್ಟು ಹಣ ಒದಗಿಸದೆ ಕೆಲವೊಂದು ಕಡೆ ಆಯ ವ್ಯಯದಲ್ಲಿ ತೋರಿಸಿದ ಹಣಕ್ಕಿಂತ ಕಡಿಮೆ ಖರ್ಚು ಮಾಡುವ ಹಾಗೂ ಇಲ್ಲಿ ರೈತ ಹಾಗೂ ಗ್ರಾಮಾಂತರ ಮುಗ್ಧರನ್ನು ವಂಚಿಸುವ ಕುಹಕತನವೆಂದರೆ ತಪ್ಪಿಲ್ಲ. ನಗರಪಾಲಿಕೆ, ನಗರಸಭೆ ಪಂಚಾಯತಿ ಗ್ರಂಥಾಲಯಗಳಿಗೆ ಸಹಾಯಾನುದಾನ ಮತ್ತು ಅಂಶಾನುದಾನವಾಗಿ 92-93ರಲ್ಲಿ 124.66 ಕೋಟಿ, ವಾಸ್ತವಿಕವಾಗಿ ಕೊಟ್ಟಿದ್ದು, 93-94ರಲ್ಲಿ 146.40 ಕೋಟಿ (ಆಯವ್ಯಕ್ಕಿಂತ ಕಡಿಮೆ), 94-95ರಲ್ಲಿ 165.83 ಕೋಟಿ, ಅಂದಾಜು ಕೊಡಲಿದ್ದು ಇದು ಅತಿ ಕಡಿಮೆ ಇದ್ದು ನಗರಪಾಲಿಕೆ, ನಗರಸಭೆ, ಪಂಚಾಯತಿ, ಗ್ರಂಥಾಲಯಗಳ ಸಿಬ್ಬಂದಿಗೆ ಪಗಾರವಿಲ್ಲದೇ ಕೆಲಸ ಮಾಡುತ್ತಿರುವುದು, ಪತ್ರಿಕೆಗಳಿಗೆ ಗ್ರಂಥಾಲಯಗಳು ಚಂದಾ ಹಣ ಕೊಡದೇ ಎಷ್ಟೋ ಗ್ರಂಥಾಲಗಳಿಗೆ ಪತ್ರಿಕೆಗಳೇ ಬಾರದೇ ಓದುಗರನ್ನು ವಂಚಿಸಿದಂತಾಗಿದೆ.

ಸಾಮಾನ್ಯ ಸೇವೆ, ಆರ್ಥಿಕ ಸೇವೆ, ಸಾಮಾಜಿಕ ಸೇವೆಗಳ ಬಂಡವಾಳ ವೆಚ್ಚಕ್ಕೆ 90-91ರಲ್ಲಿ 654.80 ಕೋಟಿ, 91-92ರಲ್ಲಿ 785.86 ಕೋಟಿ, 92-93ರಲ್ಲಿ 786.63 ಕೋಟಿ, ವಾಸ್ತವಿಕವಾಗಿ ಖರ್ಚು ಮಾಡಿದ್ದು ಇದು ಬಹಳ ಕಡಿಮೆ ಇರುತ್ತದೆ. 93-94ರಲ್ಲಿ 1180.65 ಕೋಟಿ, 94-95ರಲ್ಲಿ 1388.02 ಕೋಟಿ, ಅಂದಾಜು ತೋರಿಸಿದ್ದು, ಈ ಎತ್ತರದ ಸಂಖ್ಯೆ ಈ ಲೆಕ್ಕದಲ್ಲಿ ಬರುವ ಜನ ಹಾಗೂ ಸಂಸ್ಥೆಗಳನ್ನು ವಂಚಿಸುವುದಾಗಿದೆ. ಸಸ್ಯ ಸಂಗೋಪನೆ, ಆಹಾರ ದಾಸ್ತಾನು, ಉಗ್ರಾಣ, ಸಹಕಾರ, ಹೈನು ಅಭಿವೃದ್ಧಿ, ವಿದ್ಯುಚ್ಛಕ್ತಿ, ಸಾರಿಗೆ ಇತ್ಯಾದಿ ಇಲಾಖೆಗಳಲ್ಲಿ 92-93ಕ್ಕಿಂತ ಕಡಿಮೆ ಹಣವನ್ನು 94-95ರಲ್ಲಿ ಕೊಟ್ಟಿರುವುದು ಇಲ್ಲವೆ ಕೊಡದಿರುವುದು ಈ ಇಲಾಖೆಗಳ ದುರ್ದೈವ. ವಿವಿಧ ಸಾಮಾನ್ಯ ಸೇವೆಗಳಿಗಾಗಿ ಸಾರ್ವಜನಿಕ ಸಂಸ್ಥೆ ಹಾಗೂ ಇಲಾಖೆಗಳಿಗೆ 92-93ರಲ್ಲಿ 509.17 ಕೋಟಿ ವಾಸ್ತವಿಕ ಸಾಲ ಕೊಟ್ಟಿದ್ದರೂ 93-94ರಲ್ಲಿ 491.72 ಕೋಟಿ, 94-95ರಲ್ಲಿ 557.85 ಕೋಟಿ ಅಂದಾಜು ವೆಚ್ಚ ತೋರಿಸಿದ್ದು ಹಾಗೂ ಇವುಗಳನ್ನು ಸಾಲ ಸೌಲಭ್ಯದಿಂದ ವಂಚಿಸಿದ್ದು ಹಣಕಾಸು ಇಲಾಖೆಯ ಕೈಚಳಕ ಎದ್ದು ಕಾಣುತ್ತದೆ.

ಭಾರೀ ಮತ್ತು ಮಧ್ಯಮ ನೀರಾವರಿ ಯೋಜನೆಗಳಿಗೆ 90-91ರಲ್ಲಿ 411-27 ಕೋಟಿ, 91-92ರಲ್ಲಿ 548.29 ಕೋಟಿ, 92-93ರಲ್ಲಿ 701.16 ಕೋಟಿ ವಾಸ್ತವಿಕವಾಗಿ ಖರ್ಚು ಮಾಡಿದ್ದು 93-94ರಲ್ಲಿ 903.14 ಕೋಟಿ (ಆಯವ್ಯಯ ಅಂದಾಜಿಗಿಂತ ಕಡಿಮೆ), 94-95ರಲ್ಲಿ 1219.25 ಕೋಟಿ, ಅಂದಾಜು ಖರ್ಚು ತೋರಿಸಲಾಗಿದೆ. ಅಂತೆಯೇ ಸಣ್ಣ ನೀರಾವರಿ ಯೋಜನೆಗಳಿಗೆ 90-91ರಲ್ಲಿ 59.25 ಕೋಟಿ, 91-92ರಲ್ಲಿ 63.71 ಕೋಟಿ, 92-93ರಲ್ಲಿ 87.09 ಕೋಟಿ ವಾಸ್ತವಿಕ ಖರ್ಚು ಮಾಡಿದ್ದು 93-94ರಲ್ಲಿ 90.16 ಕೋಟಿ (ಆಯವ್ಯಯ ಅಂದಾಜಿಗಿಂತ ಕಡಿಮೆ), 94-95ರಲ್ಲಿ 100.12 ಕೋಟಿ, ಅಂದಾಜು ವೆಚ್ಚ ತೋರಿಸಲಾಗಿದೆ. ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗೆ ಈ ಯೋಜನೆಗಳು ಪೂರಕವಾಗಿದ್ದರೂ ಸಾಲ ಶುಲ್ಕ ತೆರಿಗೆಗಳಿಂದ ಹೇರಳ ಹಣ ಪಡೆಯುತ್ತಿದ್ದರೂ ಸರಕಾರ

ಈ ಯೋಜನೆಗಳಿಗೆ ಹೆಚ್ಚು ಹಣ ಖರ್ಚು ಮಾಡದಿರುವುದು ಜನತೆಯ ದುರ್ದೈವ.

ಪ್ರತಿವರ್ಷ ಭಾರೀ ಪ್ರಮಾಣದಲ್ಲಿ ಕರಕಂದಾಯವನ್ನು ಜನಸಾಮಾನ್ಯರಿಂದ ಸುಲಿದು, ದತ್ತಗೇದಿಯಂತೆ ಸಾಲ ಪಡೆದು ಯಾವ ಪ್ರಮಾಣದಲ್ಲಿ ಏರಿಕೆ ಸಂದಾಯವಾಗಿದೆಯೋ ಅದೇ ಪ್ರಮಾಣದಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಹಣ ಖರ್ಚು ಮಾಡದೇ, ರಾಜ್ಯದಲ್ಲಿ ಹಳ್ಳಿಯಿಂದ ಹಳ್ಳಿಗೆ ರಸ್ತೆಗಳಿರದೆ, ರಸ್ತೆಗಳಿದ್ದರೆ ಸಂಚಾರಕ್ಕೆ ಸರಿಯಿರದೇ, ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ, ಜಿಲ್ಲಾ ತಾಲ್ಲೂಕು ರಸ್ತೆಗಳನ್ನು ದುರಸ್ತಿ ಮಾಡದೇ, ನೀರಾವರಿ ಕೆರೆಗಳನ್ನು ದುರಸ್ತಿ ಮಾಡದೇ, ಊರುಗಳಲ್ಲಿ ಹಾದು ಹೋಗುವ ರಸ್ತೆಗಳನ್ನು ಡಾಂಬರ ಮಾಡದೇ, ಭ್ರಷ್ಟಾಚಾರ, ದುರಾಡಳಿತ ತಡೆಯದೆ, ಸಾಕಷ್ಟು ಮಾನವ ಆಸ್ಪತ್ರೆ, ಜಾನುವಾರು ಆಸ್ಪತ್ರೆಗಳನ್ನು ಪ್ರಾರಂಭಿಸದೇ, ಪ್ರಾರಂಭಿಸಿದರೆ ಅವುಗಳಿಗೆ ಸಾಕಷ್ಟು ಔಷಧೋಪಚಾರ ವೈದ್ಯರನ್ನು ಒದಗಿಸದೇ, ಶಾಲಾ ಶಿಕ್ಷಕರನ್ನು ನೇಮಿಸದೇ, ನೇಮಿಸಿದರೆ ಪಗಾರಕೊಡದೇ, ಎಲ್ಲಾ ಹಳ್ಳಿಗಳಿಗೆ ಕುಡಿಯುವ ನೀರಿನ ಯೋಜನೆ ಮಾಡದೇ, ಮಾಡಿದರೆ ಸರಿಯಾಗಿ ನೀರು ಸರಬರಾಜು ಮಾಡದೇ, ಗ್ರಾಮಾಂತರ ವಾಚನಾಲಯ ಮಾಡಿ ಪ್ರತಿಹಳ್ಳಿಗೆ ಕನಿಷ್ಠ ಒಂದಾದರೂ ದಿನಪತ್ರಿಕೆ ಒದಗಿಸದೇ, ಪತ್ರಿಕೆಗಳಿಗೆ ಚಂದಾ ಹಣ ಕೊಡದೇ ಪತ್ರಿಕೆಗಳು ಬಂದ್ ಆಗಿ, ಇತ್ಯಾದಿ ಗ್ರಾಮಾಂತರ ಜನಪರ ಯೋಜನೆಗಳನ್ನು ಕಾರ್ಯರೂಪದಲ್ಲಿ ತರದೇ ಇರುವುದು ವಿಷಾದನೀಯ. 94-95ರ ಆಯವ್ಯಯ ಕರಕಂದಾಯ ಸುಲಿಗೆ ಹಾಗೂ ಸಾಲದ ಆಯವ್ಯಯವಾಗಿದೆ. ಜನತೆಗೆ ಇದೊಂದು ಜಲಗುದುರೆಯಾಗಿದೆ, ಜನರ ಮೂಗಿಗೆ ತುಪ್ಪ ಸವರುವ ಯೋಜನೆಯಾಗಿದೆ. ಅಭಿವೃದ್ಧಿಗೆ ತಾರಕವಾದ ಬಜೆಟ್ ಆಗಿದೆ. ಈ ಆಯವ್ಯಯವನ್ನು ಅಧ್ಯಯನ ಮಾಡಿ ವಿಧಾನಮಂಡಲದಲ್ಲಿ ಸರಿಯಾಗಿ ಚರ್ಚಿಸದೇ ಕಾಲಹರಣ ಮಾಡಿ ಅಧಿಕೃತ ವಿರೋಧಪಕ್ಷಗಳು ನಿರ್ಜೀವಿಗಳಾಗಿದ್ದುದು ಪ್ರಜಾಪ್ರಭುತ್ವದ ದುರಂತ, ಪ್ರಜೆಗಳ ದುರ್ದೈವ. ಈ ಬಗ್ಗೆ ಯಾರು ಚಿಂತಿಸಬೇಕು? ಯಾರು ಹೊಣೆಗಾರರು?

❑

ಶಾಸಕರು ಹಾಗೂ ಶಾಸಕಾಂಗದ ಜವಾಬ್ದಾರಿ

ಸ್ವಾತಂತ್ರ್ಯ ಪಡೆದ ಗಣರಾಜ್ಯ ಈ ದೇಶದ ಜನಸಂಖ್ಯೆ 86 ಕೋಟಿ ಮೀರಿ ದಿನೇ ದಿನೇ ಹೆಚ್ಚುತ್ತಲೇ ಇದೆ. ಕರ್ನಾಟಕ ರಾಜ್ಯದ ಜನಸಂಖ್ಯೆ 5 ಕೋಟಿ ದಾಟುವ ನಿರೀಕ್ಷೆಯಲ್ಲಿದೆ. ಈ ರಾಜ್ಯದ ಪ್ರಜೆಗಳೇ ಪ್ರಭುಗಳು. ಈ ರಾಜ್ಯವನ್ನು ಆಳುವ ಅರಸು, ರಾಜಾಧಿರಾಜ ಚಕ್ರವರ್ತಿಗಳೇ ಇಂದಿನ ಪ್ರಜೆಗಳು. ಈ ಪ್ರಜೆಗಳೆಲ್ಲರಿಗೂ ಈ ರಾಜ್ಯವನ್ನು ಆಳಲಿಕ್ಕೆ ಅಥವಾ ರಾಜ್ಯದ ಆಡಳಿತ ನಡೆಸಲಿಕ್ಕೆ ಆಗುವುದಿಲ್ಲ. ಆದ್ದರಿಂದಲೇ ಸಂವಿಧಾನಬದ್ಧವಾಗಿ ತಮ್ಮ ಸಲುವಾಗಿ, ತಮ್ಮ ಪರವಾಗಿ ತಮ್ಮಿಂದ 224 ಶಾಸಕ ಪ್ರಜಾಪ್ರತಿನಿಧಿಗಳನ್ನು ಕರ್ನಾಟಕ ವಿಧಾನಸಭೆಗೆ ಪ್ರತಿ 5 ವರ್ಷಕ್ಕೊಮ್ಮೆ ಆರಿಸಿ ಕಳುಹಿಸುತ್ತಾರೆ. ಈ ಎಲ್ಲಾ 224 ಸದಸ್ಯರು ಸೇರಿ ವಿಧಾನಸಭೆಯ ಅಧ್ಯಕ್ಷ ಹಾಗೂ ಉಪಾಧ್ಯಕ್ಷರನ್ನು ಆರಿಸುತ್ತಾರೆ. 224ರಲ್ಲಿ ಬಹುಮತ ಪಡೆದ ರಾಜಕೀಯ ಪಕ್ಷ ತಮ್ಮ ನಾಯಕರನ್ನು ಆರಿಸಿಕೊಂಡು ಅವರು ಸಭಾನಾಯಕರಾಗಿ ಈ ರಾಜ್ಯದ ಮುಖ್ಯಮಂತ್ರಿ ಯಾಗಿ ಆಡಳಿತ ನಡೆಸುತ್ತಾರೆ. ಅತಿ ಹೆಚ್ಚು ಶಾಸಕರನ್ನು ಪಡೆದ ವಿರೋಧಿಪಕ್ಷ ಅಧಿಕೃತ ವಿರೋಧಿಪಕ್ಷವಾಗಿ ಈ ಪಕ್ಷ ತನ್ನ ನಾಯಕನನ್ನು ಆರಿಸಿಕೊಂಡು ಆ ನಾಯಕರು ಅಧಿಕೃತ ವಿರೋಧಿಪಕ್ಷದ ನಾಯಕನಾಗಿ ಮುಖ್ಯಮಂತ್ರಿ ವ ಆ ಮುಖ್ಯಮಂತ್ರಿಯ ಸರಕಾರದ ಲೋಪ - ದೋಷ ಎತ್ತಿ ತೋರಿಸಿ ಸರಕಾರಕ್ಕೆ ಸಾರ್ವಜನಿಕ ಸಲಹೆ, ಸೂಚನೆಗಳನ್ನು ಕೊಡಬೇಕಾಗುತ್ತದೆ. ವಿಧಾನಸಭೆಯಲ್ಲಿ ಆಡಳಿತ ಪಕ್ಷ, ವಿರೋಧಪಕ್ಷ, ಮುಖ್ಯಮಂತ್ರಿ, ಮಂತ್ರಿಗಳು, ವಿರೋಧಪಕ್ಷದ ನಾಯಕರು ಹಾಗೂ ಸದಸ್ಯರೆಲ್ಲರಿಗೂ ಸದಾವಕಾಶ ಒದಗಿಸಿ ವಿಧಾನಸಭೆಯ ಕಾರ್ಯಕಲಾಪಗಳನ್ನು ಯಶಸ್ವಿಯಾಗಿ ನಡೆಯುವಂತೆ ವಿಧಾನಸಭಾಧ್ಯಕ್ಷರು ನೋಡಿಕೊಳ್ಳಬೇಕಾಗುತ್ತದೆ. ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ, ಪ್ರಜಾಪ್ರಭುತ್ವದ ಪ್ರಮುಖ ಅಂಗಾಂಗಗಳಾಗಿದ್ದರೂ ಕಾರ್ಯಾಂಗ ಹಾಗೂ ನ್ಯಾಯಾಂಗ, ಶಾಸಕಾಂಗ ದಿಂದಲೇ ಉದ್ಭವವಾದ ಅಂಗಗಳಾಗಿರುವುದರಿಂದ ಈ ದೇಶದ ಆಗುಹೋಗು, ಉಳಿವು-ಅಳಿವು, ಶ್ರೀಮಂತಿಕೆ-ಬಡತನ, ಕೀರ್ತಿ-ಅಪಕೀರ್ತಿ, ಆರ್ಥಿಕ ಉನ್ನತಿ, ಆರ್ಥಿಕ ದಿವಾಳಿ, ಶಾಸಕಾಂಗವನ್ನೇ ಅವಲಂಬಿಸಿರುತ್ತದೆ ಎಂಬುದನ್ನು ರಾಜ್ಯದ ಹಾಗೂ ಈ ದೇಶದ ಜನತೆಯ ಉಜ್ವಲ ಭವಿಷ್ಯವನ್ನು ಹಾಗೂ ಹಣೆಬರಹವನ್ನು ನಿರ್ಮಿಸುವ

ವಿಧಿಯೇ ವಿಧಾನಸಭೆ ಎಂಬುದನ್ನು ಮಂತ್ರಿಗಳನ್ನೊಳಗೊಂಡ 224 ಶಾಸಕರು ತಿಳಿಯಬೇಕು. ಈ 224 ಸದಸ್ಯರೊಂದಿಗೆ ಒಬ್ಬ ನಾಮಕರಣ ಸದಸ್ಯರೂ ವಿಧಾನಸಭೆಯಲ್ಲಿರುತ್ತಾರೆ. ವಿಧಾನ ಪರಿಷತ್ತು ಕೂಡ ಶಾಸಕಾಂಗದ ಭಾಗವಾಗಿರುತ್ತದೆ.

ವಿವಿಧ ತೆರಿಗೆ, ಸಹಾಯಾನುದಾನ, ಅಂಶದಾನ, ಸಾರ್ವಜನಿಕ ಸಾಲ, ಸಾರ್ವಜನಿಕ ಲೆಕ್ಕ ಇತ್ಯಾದಿ ಮೂಲಗಳಿಂದ ಸರಕಾರಿ ಖಜಾನೆಗೆ 92-93ರಲ್ಲಿ 21912.00 ಕೋಟಿ ವಾಸ್ತವಿಕವಾಗಿ ಜಮೆಯಾಗಿದ್ದು 94-95ರಲ್ಲಿ 20534.00 ಕೋಟಿ ಅಂದಾಜು ಜಮೆಯಾಗಲಿದೆ. ಅಂತೆಯೇ ವಿವಿಧ ಸೇವೆ, ಸಹಾಯಾನುದಾನ, ಅಂಶಾನುದಾನ, ಬಂಡವಾಳ, ಸಾರ್ವಜನಿಕ ಸಾಲ, ಸಾರ್ವಜನಿಕ ಲೆಕ್ಕ, ಇತ್ಯಾದಿ ವೆಚ್ಚಕ್ಕಾಗಿ ಸರಕಾರಿ ಖಜಾನೆಯಿಂದ 92-93ರಲ್ಲಿ 2191.00 ಕೋಟಿ ವಾಸ್ತವಿಕ ವೆಚ್ಚವಾಗಿದ್ದು, 94-95ರಲ್ಲಿ 20534.00 ಕೋಟಿ ಅಂದಾಜು ವೆಚ್ಚವಾಗಲಿದೆ. ಇಷ್ಟೊಂದು ಮೊತ್ತದ ಜಮಾ ಹಾಗೂ ವೆಚ್ಚ ವಿವರಗಳನ್ನು ಸುದೀರ್ಘವಾಗಿ ಶಾಸಕರು, ಮಂತ್ರಿಗಳು, ಆಡಳಿತ ಹಾಗೂ ವಿರೋಧಪಕ್ಷಗಳೆಲ್ಲರೂ ವಿಧಾನಸಭೆಯಲ್ಲಿ ಚರ್ಚಿಸಿ, ದುರಾಡಳಿತ, ದುರುಪಯೋಗ, ಭ್ರಷ್ಟಾಚಾರ, ಪಕ್ಷಪಾತ, ಸ್ವಜನ ಪಕ್ಷಪಾತ, ಸದುಪಯೋಗಿ, ದುಂದುಗಾರಿಕೆ ಜವಾಬ್ದಾರಿಯ ಬಗ್ಗೆ ಸಾರ್ವಜನಿಕರಲ್ಲಿ ಬೆಳಕನ್ನು ಚೆಲ್ಲಬೇಕಾಗುತ್ತದೆ. ರಾಜ್ಯದ ಖಜಾನೆಗೆ ಹಳ್ಳಿಯ ಒಬ್ಬ ಭಿಕ್ಷುಕನಿಂದ ಹಿಡಿದು ಬೆಂಗಳೂರಿನ ಕುಬೇರನ ವರೆಗೆ ಎಲ್ಲರಿಂದಲೂ ಜಮೆಯ ಹಣ ವಿವಿಧ ರೀತಿಯಲ್ಲಿ ಬರುತ್ತದೆ. ಹಾಗೂ ಖಜಾನೆಯ ಹಣದ ವೆಚ್ಚ ಕೂಡ ಇವರೆಲ್ಲರಿಗೂ ರಾಜ್ಯದಲ್ಲಿಯ ಸಾರ್ವಜನಿಕ ವಿವಿಧ ಸೇವೆ, ಸಂಘ-ಸಂಸ್ಥೆ, ಶಾಲೆ, ಆಲಯ, ನಿಲಯ, ಆಡಳಿತ, ನಿಗಮ, ಕಂಪನಿ ಇತ್ಯಾದಿ ವಿವಿಧ ಅಭಿವೃದ್ಧಿ ಕಾರ್ಯ ಗಳಿಗಾಗಿ ಖಜಾನೆ ಹಣ ವೆಚ್ಚ ಮಾಡಲಾಗುತ್ತದೆ. ಈ ಖಜಾನೆಯ ಉಸ್ತುವಾರಿಯ ಜವಾಬ್ದಾರಿ, ವಿಧಾನಸಭೆಯ ಅಧ್ಯಕ್ಷ, ಸದಸ್ಯರು ಹಾಗೂ ಮಂತ್ರಿಗಳಾದ ಎಲ್ಲ 225 ಜ, ಶಾಸಕರ ಮೇಲೆ ಇದ್ದು, ಐದು ವರ್ಷದ ಆಡಳಿತ, ಕೀರ್ತಿ, ಅಪಕೀರ್ತಿ, ಇವರೆಲ್ಲರ ಆಡಳಿತ ವೈಖರಿಯನ್ನು ಅವಲಂಬಿಸಿರುತ್ತದೆ. ಸಾರ್ವಜನಿಕರ ಸಮಸ್ಯೆಗಳನ್ನು ಬಗೆಹರಿಸುವುದು, ಅವರ ಸುಖ-ದುಃಖ, ದುಮ್ಮಾನಗಳಲ್ಲಿ ಸಹಭಾಗಿಯಾಗುವುದು, ಸಾರ್ವಜನಿಕರಿಗೆ ಅತ್ಯವಶ್ಯವಾದ ಅನುಕೂಲತೆಗಳನ್ನು ಒದಗಿಸುವುದು, ಸಾರ್ವಜನಿಕ ಹಿತಾಸಕ್ತಿಯುಳ್ಳವರಾಗುವುದು ಸಾರ್ವಜನಿಕ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸುವುದು, ಸಾರ್ವಜನಿಕರ, ಶಾಸಕರ, ಶಾಸಕಾಂಗದ ಹಾಗೂ ಈ ರಾಜ್ಯದ ಘನತೆ, ಗೌರವ, ಹಿರಿಮೆ ಹಾಗೂ ಕೀರ್ತಿಯನ್ನು ಎತ್ತಿಹಿಡಿದು ಕಾಪಾಡುವುದು ಸಹ ಇವರೆಲ್ಲರ ಆದ್ಯ ಕರ್ತವ್ಯವಾಗಿದೆ. ಇವರೆಲ್ಲರಲ್ಲಿ ಪ್ರಾಮಾಣಿಕರು, ಅಪ್ರಮಾಣಿಕರು, ಸಮರ್ಥರು, ಅಸಮರ್ಥರು, ಭ್ರಷ್ಟರು, ಪಕ್ಷಪಾತಿಗಳು, ಸ್ವಜನ ಪಕ್ಷಪಾತಿಗಳು, ದುರಾಡಳಿತಗಾರರು, ಅಧಿಕಾರ ದುರುಪಯೋಗ ಮಾಡುವವರು ಇರಬಹುದು, ಅದು ಅವರವರ ಕಾರ್ಯವೈಖರಿಯನ್ನು ಅವಲಂಬಿಸಿರುತ್ತದೆ. ಪ್ರತಿಯೊಬ್ಬ ಶಾಸಕರಿಗೆ ವೇತನ ಹಾಗೂ ವಿವಿಧ ಭತ್ಯೆ ಸೇರಿ ಪ್ರತಿ ತಿಂಗಳಿಗೆ ಏಳುವರೆ ಸಾವಿರ ರೂಪಾಯಿ ಮೊತ್ತ, ಸಭೆ

ನಡೆದಾಗ ದಿನನಿತ್ಯ ಭತ್ಯೆ ಪ್ರತಿದಿನ 250.00 ರೂ. ಪ್ರಯಾಣ ಭತ್ಯೆ 1 ಕಿ.ಮೀ.ಗೆ 4.50 ರೂ. ಇರುವಾಗ ತಮ್ಮ ಕರ್ತವ್ಯವನ್ನು ಶಾಸಕರು ಸರಿಯಾಗಿ ಮಾಡಬೇಕು ಹಾಗೂ ನಿರ್ವಹಿಸಬೇಕು. ಅದು ಸಹ ಅವರ ಆದ್ಯ ಕರ್ತವ್ಯ.

ತಮ್ಮನ್ನು ತಾವು ಅರ್ಪಿಸಿಕೊಂಡು ಸಾರ್ವಜನಿಕ ಜೀವನದಲ್ಲಿ ಅತ್ಯುತ್ತಮ ರೀತಿಯಲ್ಲಿ ಆರ್ಥಿಕ ಮುಗ್ಗಟ್ಟಿನಲ್ಲಿ ಆಸ್ತಿ-ಪಾಸ್ತಿ ಸವೆಸಿಕೊಂಡು ಸಾಮಾಜಿಕ ಜೀವನದಲ್ಲಿ ಪರೋಪಕಾರಿಯಾಗಿ, ಸ್ವಾತಂತ್ರ್ಯಕ್ಕಾಗಿ, ಸಮಾಜಸೇವೆಗಾಗಿ, ಸಾರ್ವಜನಿಕ ಆಡಳಿತಕ್ಕಾಗಿ, ಶಾಸಕರಾಗಿ ಅಥವಾ ಶಾಸಕರಾಗದೇ ಅಹೋರಾತ್ರಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟು ಸೇವೆಗೈದವರು ಹಾಗೂ ಸೇವೆ ಗೈಯುವವರು ಇದ್ದಾರೆ. ಹೊಟ್ಟೆ ಹೊರಕರಾಗಿ ಕೋಟ್ಯಂತರ ಆಸ್ತಿ ಹಾಗೂ ಹಣ ಮಾಡಿದವರೂ ನಮ್ಮ ರಾಜ್ಯ ಹಾಗೂ ದೇಶದಲ್ಲಿದ್ದಾರೆ. ಶಾಸಕರಾಗಿ ಅಥವಾ ಮಾಜಿ ಶಾಸಕರಾಗಿ ಪಗಾರ ಅಥವಾ ವಿಶ್ರಾಂತಿ ವೇತನ ಪಡೆಯುವವರು, ಸಾರ್ವಜನಿಕ ಸೇವಾನಿರತರಾದವರು ಬೇಕಾದಷ್ಟು ಇದ್ದಾರೆ. ಅನೇಕ ಸಾಮಾಜಿಕ ಕಾರ್ಯಕರ್ತ, ಮಾಜಿ ಶಾಸಕರ ಕರುಣಾಜನಕ ಆರ್ಥಿಕ ಪರಿಸ್ಥಿತಿಯನ್ನೇ ಕಂಡು ವಿಧಾನಮಂಡಲ ಹಾಗೂ ಸಂಸತ್ತಿನಲ್ಲಿ ಚರ್ಚೆ ಮಾಡಿ ಮಾಜಿ ಸಂಸದ ಶಾಸಕರಿಗೆ ವಿಶ್ರಾಂತಿ ವೇತನದ ಕಾನೂನು ಮಾಡಿ ಆ ಪ್ರಕಾರ ವಿಶ್ರಾಂತಿ ವೇತನ ಕೊಡಲಾಗುತ್ತಿದೆ. ಬೆಕ್ಕು ಹಾಲಿನ ಪಾತ್ರೆಯನ್ನು ಪುಕ್ಕಟೆಯಾಗಿ ಕಾಯುತ್ತೇನೆಂದು ಹೇಳುವಂತೆ ಶಾಸಕನಾಗಿ, ಮಂತ್ರಿಯಾಗಿ ಕಾರ್ಯ ಮಾಡುತ್ತೇನೆ ಹಾಗೂ ಪುಕ್ಕಟೆಯಾಗಿ ಸಮಾಜಸೇವೆಯನ್ನು ಮಾಜಿ ಸಂಸದ ಹಾಗೂ ಶಾಸಕನಾಗಿ ಮಾಡುತ್ತೇನೆಂದು ಹೇಳುವ ಢೋಂಗಿ ಮುಖಂಡರನೇಕರು ಈ ದೇಶದಲ್ಲಿದ್ದಾರೆ. ಅವರಿಗೆ ಪ್ರಾಮಾಣಿಕರ ಗೌರವ, ಸೇವಾ ಪ್ರಶಂಸೆಯ ಬಗ್ಗೆ ಚಿಂತನೆಯೇ ಇಲ್ಲವೆಂದರೆ ತಪ್ಪಾಗಲಾರದು. ಸರಕಾರಿ ನೌಕರರೇ ಇರಲಿ ಸಾರ್ವಜನಿಕ ಸೇವಕನಾಗಿರಲಿ ಅವರಿಗೆ ಕೊಡುವ ವೇತನವೇ ಇರಲಿ ಅಥವಾ ನಿವೃತ್ತಿ ವೇತನವೇ ಇರಲಿ ಅದು ಕೊಡತಕ್ಕದ್ದು ಅನಿವಾರ್ಯ ಹಾಗೂ ಅತ್ಯವಶ್ಯ. 1993-94ನೇ ಸಾಲಿನಲ್ಲಿ ಸರಕಾರದವರು ವೇತನ ಹಾಗೂ ವಿಶ್ರಾಂತಿ ವೇತನಕ್ಕಾಗಿ ಒದಗಿಸಿದ ಮೊತ್ತ 2432-32 ಕೋಟಿ ಇದ್ದು 94-95ನೇ ವರ್ಷದಲ್ಲಿ ಅದು ಇನ್ನೂ ಹೆಚ್ಚಾಗಬಹುದಾಗಿದೆ. ಮಾಜಿ ಶಾಸಕರಿಗೆ ಕೊಟ್ಟಿರುವ ವಾರ್ಷಿಕ ವಿಶ್ರಾಂತಿ ವೇತನ 1985-86ರಿಂದ 88-89ರ ವರೆಗೆ ಸರಾಸರಿ 38,34,501.58 ರೂ. ಇದ್ದು, ಇತ್ತೀಚೆಗೆ ಇದು ಹೆಚ್ಚಾಗಿರಬಹುದು. ಮಾಜಿ ಶಾಸಕರೆಲ್ಲರೂ ಅಧಿಕಾರದಲ್ಲಿರಲಿ ಇಲ್ಲದಿರಲಿ ಅವರಲ್ಲನೇಕರು ನಿಸ್ವಾರ್ಥ ಸಮಾಜ ಸೇವೆ ಮಾಡುತ್ತಿರುವುದು ಕಂಡುಬಂದಿದೆ. ಮಾಜಿ ಶಾಸಕರು, ಸಂಸದರು ಹಾಗೂ ಹಾಲಿ ಶಾಸಕರು, ಸಂಸದರು ಅವರು ಮಂತ್ರಿಗಳೇ ಇರಲಿ, ಮಾಜಿ ಮಂತ್ರಿಗಳೇ ಇರಲಿ, ಅವರಲ್ಲನೇಕರು ಕೋಟ್ಯಂತರ ಆಸ್ತಿ ಹಣವನ್ನು ತಮ್ಮ ಹಾಗೂ ತಮ್ಮ ಸಂಬಂಧಿಕರ ಹೆಸರಿನಲ್ಲಿ ಮಾಡಿದ ದೃಷ್ಟಾಂತ ಬೇಕಾದಷ್ಟಿದ್ದರೂ ಅಂತಹ ಭ್ರಷ್ಟ ಕುಬೇರರ ಮೇಲೆ ಕಣ್ಣಿಟ್ಟು ಉಗ್ರಕ್ರಮ ತೆಗೆದುಕೊಂಡು ಉಗ್ರಶಿಕ್ಷೆ ಕೊಡುವಲ್ಲಿ ಮುಂದಾದರೆ ಅದು ಶ್ಲಾಘನೀಯ. ವಿಶ್ರಾಂತಿ ವೇತನ ಕಾನೂನು ಪಾಸಾಗುವಲ್ಲಿ ಹಾಗೂ ಜಾರಿ ಕೊಡುವಲ್ಲಿ

ಹಾಗೂ ಜಾರಿಯಲ್ಲಿರುವುದಕ್ಕೆ ಭಾಗೀದಾರರೂ ಆಗಿರುವವರೇ ಮಾಜಿ ಶಾಸಕರ ಬಗ್ಗೆ ವಿಶ್ರಾಂತಿ ವೇತನದ ಬಗ್ಗೆ ಟೀಕಿಸುವುದು ಸರಿಯಲ್ಲ, ಸರಕಾರಿ ಸಾರ್ವಜನಿಕ ಹಣವನ್ನು ಲೂಟಿ ಮಾಡುತ್ತಿರುವ ಹಾಗೂ ಲೂಟಿ ಮಾಡಿದ ಹಾಗೂ ಹೇರಳವಾದ ಆಸ್ತಿ ಹಣವನ್ನು ಮಾಡಿದ ದುರಾಡಳಿತಗಾರ, ಭ್ರಷ್ಟ, ಪಕ್ಷಪಾತಿ, ಸ್ವಜನ ಪಕ್ಷಪಾತಿ, ಅನೇಕ ಶಾಸಕ, ಸಂಸದ, ಮಂತ್ರಿ ಹಾಗೂ ಅಧಿಕಾರಿಗಳ ಮೇಲೆ ತನಿಖೆ ನಡೆಯಿಸಿ ಅವರನ್ನು ಉಗ್ರವಾಗಿ ಶಿಕ್ಷಿಸಲು ಹೊಣೆಗಾರರು ಮುಂದಾದರೆ ಅದು ಅವರ ಸ್ತುತ್ಯ ಕರ್ತವ್ಯ.

❑

ಶಾಸಕರು ಸರ್ವಶ್ರೇಷ್ಠತೆಯನ್ನು ಸಾಧಿಸಬೇಕು

ಈ ಭಾರತ ದೇಶದ ಪ್ರಜೆಗಳೇ ಈ ದೇಶದ ಮಾಲೀಕರು, ಕರ್ನಾಟಕವನ್ನೊಳಗೊಂಡ ಭಾರತದ ಪ್ರಜೆಗಳು ಈ ರಾಷ್ಟ್ರವನ್ನಾಳುತ್ತಿದ್ದಾರೆ. ಈ ರಾಜ್ಯದ ಪ್ರಜೆಗಳು ಕರ್ನಾಟಕ ರಾಜ್ಯವನ್ನಾಳುತ್ತಿದ್ದಾರೆ. ಎಲ್ಲರಿಗೂ ರಾಜ್ಯ ಹಾಗೂ ರಾಷ್ಟ್ರವನ್ನಾಳುವುದು ಕಷ್ಟಕರವೆಂದೇ ಭಾರತ ಸಂವಿಧಾನಕ್ಕನುಗುಣವಾಗಿ ವಿಧಾನಸಭೆಗೆ ಹಾಗೂ ಲೋಕಸಭೆಗೆ ಪ್ರತಿನಿಧಿಗಳನ್ನು ಆರಿಸಿ ಕಳಿಸಿ, ಅವರ ಮುಖಾಂತರ ಈ ದೇಶದ ಪ್ರಭುಗಳಾದ ಪ್ರಜೆಗಳು ಆಡಳಿತ ನಡೆಸುತ್ತಿದ್ದಾರೆ. ಜನತೆಯ ಅಮೂಲ್ಯವಾದ ಹಾಗೂ ಅದ್ಭುತ ಶಕ್ತಿಯುಳ್ಳ ಮತಗಳಿಂದ ಪ್ರತಿನಿಧಿಗಳಾದ ಶಾಸಕರು ಹಾಗೂ ಸಂಸದರು ಚುನಾಯಿತರಾಗುತ್ತಾರೆ. ಲೋಕಸಭೆ ಈ ದೇಶದ ಜನತೆಯ ಅಮೂಲ್ಯವಾದ ಶಕ್ತಿಯಾಗಿದ್ದರೆ ವಿಧಾನಸಭೆ ಈ ರಾಜ್ಯದ ಜನತೆಯ ಅಮೂಲ್ಯವಾದ ಶಕ್ತಿ, ಧ್ವನಿ ಹಾಗೂ ಮೇರುಪರ್ವತ.

ಈ ರಾಜ್ಯದ ಜನಪ್ರತಿನಿಧಿ ವಿಧಾನಸಭೆಯ ಸದಸ್ಯರು ಅವರು ಸದಸ್ಯರಾಗಿರಲಿ, ಮಂತ್ರಿ, ಮುಖ್ಯಮಂತ್ರಿಯಾಗಿರಲಿ, ಸಂಸದೀಯ ಪದಾಧಿಕಾರಿಗಳಾಗಿರಲಿ ಅವರೆಲ್ಲರೂ ಜವಾಬ್ದಾರಿಯಿಂದ ವಿಧಾನಸಭೆಯ ಮುಖಾಂತರ ಈ ರಾಜ್ಯದ ಆರ್ಥಿಕ ಅಭಿವೃದ್ಧಿ ಹಾಗೂ ಸಾಮಾಜಿಕ ಆಡಳಿತವನ್ನು ಸಮರ್ಥ ರೀತಿಯಿಂದ ನಡೆಸಬೇಕಾಗುತ್ತದೆ. ಈ ಸದಸ್ಯರ ಹಾಗೂ ವಿಧಾನಸಭೆಯ ಶಕ್ತಿ ಅದ್ಭುತ. ಸದಸ್ಯರಾದ ಇವರು ಪವಾಡ ಪುರುಷರು ಆಗಬಹುದು. ಯಾವುದೇ ಪ್ರಜೆ ಈ ಸದಸ್ಯರನ್ನು ಬಿನ್ನವಿಸಿಕೊಂಡಾಗ ಆತ ಬೇಡಿದ ಬೇಡಿಕೆ, ಕುಡಿಯುವ ನೀರೇ ಆಗಲಿ, ಓಡಾಡುವ ಮಾರ್ಗವೇ ಆಗಲಿ, ಶಾಲೆಯೇ ಆಗಲಿ, ಕಾಲೇಜ್ ಆಗಲಿ, ಮಸೀದಿ, ಮಂದಿರ, ಚರ್ಚ್ ರಚನೆಯಾಗಲಿ, ಆಸ್ಪತ್ರೆ, ಅಂಗನವಾಡಿಗಳೇ ಆಗಲಿ, ನೀರಾವರಿ ಯೋಜನೆಯೇ ಆಗಿರಲಿ, ಯಾವುದೇ ವಿವಿಧ ಪರಿಹಾರವೇ ಆಗಲಿ, ಆಶ್ರಯ ನಿವೇಶನಗಳಾಗಲಿ, ಯಾವುದೇ ವಿವಿಧ ಅಭಿವೃದ್ಧಿ ಯೋಜನೆಗಳೇ ಆಗಲಿ ಇವೆಲ್ಲವುಗಳನ್ನು ಸತ್ಯ, ನ್ಯಾಯ, ನೀತಿ, ದಯೆ, ನಿಯಮಗಳ ಚೌಕಟ್ಟಿನಲ್ಲಿ ಅಧಿಕಾರಿಗಳ ಮುಖಾಂತರ ಕೊಡಿಸುವ ಹಕ್ಕು, ಶಕ್ತಿ, ಸಾಮರ್ಥ್ಯ ಈ ಸದಸ್ಯರಿಗೆ ಇದೆ. ಅಂತೆಯೇ ಚುನಾಯಿತರಾದ ಕೂಡಲೇ ಹಾಗೂ ಅಧಿಕಾರ ವಹಿಸಿಕೊಂಡ ಕೂಡಲೇ, ಇವರನ್ನು ಸಾರ್ವಜನಿಕರು ಭೇದಭಾವ ಮರೆತು ಭಾರೀ

ಮೆರವಣಿಗೆ, ಉತ್ಸವಗಳಿಂದ ಗೌರವ ಕೊಟ್ಟು ತಮ್ಮ ಆಸೆ-ಆಕಾಂಕ್ಷೆಗಳನ್ನು ಈಡೇರಿಸಿಕೊಡಲೆಂದು ಆಶಿಸಿ, ಅಪಾರವಾಗಿ ಸನ್ಮಾನಿಸಿ ಗೌರವ ಕೊಡುತ್ತಾರೆ. ಇದು ಸತ್-ಸಂಪ್ರದಾಯ, ರಾಜಾಧಿರಾಜರ ಕಾಲದಲ್ಲಿ "ರಾಜಾ ಪ್ರತ್ಯಕ್ಷ ದೇವತಾ" ಆಗಿದ್ದರೆ ಇಂದು "ಪ್ರಜಾ ಪ್ರತ್ಯಕ್ಷ ದೇವತಾ", "ಪ್ರಜಾ ಪ್ರತಿನಿಧಿ ಪ್ರತ್ಯಕ್ಷ ದೇವತಾ" ಅಂದರೆ ಅತಿಶಯೋಕ್ತಿಯಲ್ಲ. ಈ ಸದಸ್ಯರಿಗಿರುವ ಈ ಅದ್ಭುತ ಶಕ್ತಿ ದೇವರನ್ನು ಹೊರತುಪಡಿಸಿ ಯಾವ ರಾಜಕೀಯ ಹಾಗೂ ಧಾರ್ಮಿಕ ಮುಖಂಡನಿಗೂ ಇಲ್ಲ. ಇಂತಹ ಅದ್ಭುತ ಶಕ್ತಿಯ ಪವಾಡ ಪುರುಷರಾದ ಸದಸ್ಯರು ಚುನಾಯಿತರಾಗಿ ವಿವಿಧ ಅಧಿಕಾರ ವಹಿಸಿಕೊಂಡ ಕೂಡಲೇ ತಮ್ಮ ಹಾಗೂ ತಮ್ಮ ಸ್ಥಾನದ ಹಿರಿಮೆ, ಗೌರವ, ಘನತೆ, ಗಾಂಭೀರ್ಯ, ಪವಾಡಶಕ್ತಿ, ಜವಾಬ್ದಾರಿಯನ್ನು ಗಮನದಲ್ಲಿಟ್ಟುಕೊಂಡು ನಡೆ-ನುಡಿಯಲ್ಲಿ ಪಕ್ಷಭೇದ, ಜಾತಿಭೇದ, ಮತಭೇದ, ಭಾಷಾಭೇದ ಮರೆತು ಎಲ್ಲರೂ ನಮ್ಮವರೆಂದು ಕಾರ್ಯನಿರ್ವಹಿಸಿ ವಿಧಾನಸಭೆಗೆ ಹಾಗೂ ವಿಧಾನಸಭೆಯ ಸದಸ್ಯರ ಸನ್ಮಾನಕ್ಕೆ ಇರುವ ಅಪಾರವಾದ ಗೌರವವನ್ನು ಮೆರೆದಂತಾಗುತ್ತದೆ ಹಾಗೂ ಎತ್ತಿಹಿಡಿದಂತಾಗುತ್ತದೆ.

ವಿಧಾನಸಭೆ ಈ ರಾಜ್ಯದ ಜನತೆಯ ಸಾರ್ವಭೌಮ ಸಭೆ. ಈ ಸಭೆಯ ಕಾರ್ಯಕಲಾಪಗಳು ಈ ರಾಜ್ಯದ ಹಾಗೂ ಜನತೆಯ ಸರ್ವಾಂಗೀಣ ಅಭಿವೃದ್ಧಿ, ರಾಜ್ಯದಲ್ಲಿ ಶಾಂತಿ, ಶಿಸ್ತು ಪರಿಪಾಲನೆ, ಉತ್ತಮ ಆಡಳಿತ, ಜನತೆಗೆ ನೆಮ್ಮದಿ, ರಾಜ್ಯದ ಧನ ವಿನಿಯೋಗ, ಈ ರಾಜ್ಯದ ನೆಲ-ಜಲ-ತರು, ನಿಧಿ-ನಿಕ್ಷೇಪ ಕಾಪಾಡುವಲ್ಲಿ ಮಹತ್ವದ ಅದ್ಭುತ ಪಾತ್ರ ವಹಿಸಬೇಕಾಗುತ್ತಿದ್ದು, ಈ ಬಗ್ಗೆ ಸದಸ್ಯರ ಜವಾಬ್ದಾರಿ ಹೆಚ್ಚಿನದು ಇರುತ್ತದೆ. 1995-96ರಲ್ಲಿ ವಿಧಾನಸಭೆ ಮಂಜೂರಿ ಕೊಟ್ಟ ಆಯ ವ್ಯಯ ಮೊತ್ತ 22,716.83 ಕೋಟಿ. ಇಷ್ಟೊಂದು ಹಣವನ್ನು ರಾಜ್ಯ ಸರಕಾರದ ಅಧಿಕಾರಿ ಸಿಬ್ಬಂದಿ ಮುಖಾಂತರ ಪಡೆಯಬೇಕಾಗುತ್ತದೆ ಹಾಗೂ ಅಧಿಕಾರಿಗಳ ಮುಖಾಂತರ ವೆಚ್ಚ ಮಾಡಲಾಗುತ್ತದೆ. ಈ ಹಣದಲ್ಲಿ ಕೇವಲ 6758.18 ಕೋಟಿ ಮೊತ್ತ ಮಾತ್ರ ತೆರಿಗೆ ಹಾಗೂ ತೆರಿಗೆಯೇತರ ಆದಾಯವಿದ್ದು, ಉಳಿದೆಲ್ಲಾ ಹಣ ಕೇಂದ್ರ ಸರಕಾರದ ಸಹಾಯ, ಪಾಲು ಹಾಗೂ ವಿವಿಧ ಸಾಲಗಳಿಂದ ಪಡೆದ ಹಣವಿರುತ್ತದೆ. ಈ ಎಲ್ಲಾ ಹಣ ಸದುಪಯೋಗವಾಗುವಂತೆ ದುರುಪಯೋಗವಾಗದಂತೆ ಕಣ್ಣಲ್ಲಿ ಕಣ್ಣಿಟ್ಟು ನಿಗಾವಹಿಸಿ ನೋಡಬೇಕಾಗುವುದು ಸದಸ್ಯರ ಕರ್ತವ್ಯ. ಈ ದಿಸೆಯಲ್ಲಿ ಸರಕಾರಿ ಅಧಿಕಾರಿ ಸಿಬ್ಬಂದಿ ಹಳ್ಳಿಯ ಗ್ರಾಮ ಸಹಾಯಕನಿಂದ ಹಿಡಿದು ರಾಜ್ಯದ ಮುಖ್ಯ ಕಾರ್ಯದರ್ಶಿಯವರೆಗಿನ ಸುಮಾರು 651914 ಜನ ಸಿಬ್ಬಂದಿಯವರನ್ನು ಹದ್ದುಬಸ್ತಿನಲ್ಲಿಟ್ಟು ಅವರಿಂದ ಕೆಲಸ ತೆಗೆದುಕೊಳ್ಳಬೇಕು. ಈ ಅಧಿಕಾರಿ ಸಿಬ್ಬಂದಿಗೆ ಆಯ ವ್ಯಯ ಪ್ರಕಾರ 95-96ರಲ್ಲಿ 2690.19 ಕೋಟಿ ಮೊತ್ತವನ್ನು ವೇತನ ಹಾಗೂ ವಿವಿಧ ಭತ್ಯೆಗಾಗಿ ಕೊಡಬೇಕಾಗುತ್ತದೆ. ಹಾಗೆಯೇ ನಿವೃತ್ತ ನೌಕರರಿಗೆ 552.24 ಕೋಟಿ ವಿಶ್ರಾಂತಿ ವೇತನ ಕೊಡಬೇಕಾಗುತ್ತದೆ. ಅಧಿಕಾರಿ ಸಿಬ್ಬಂದಿ ಜನಪರ ಅಭಿವೃದ್ಧಿ ಯೋಜನೆಗಳಿಗೆ ನಿಗದಿಪಡಿಸಿದ ಪೂರಾ ಹಣವನ್ನು ಖರ್ಚು ಮಾಡದೇ ನೂರಾರು ಕೋಟಿ ಹಣ ಉಳಿಸಿ ಸಾರ್ವಜನಿಕ ಹಾಗೂ

ಶಾಸಕರ ಕಣ್ಣಲ್ಲಿ ಮಣ್ಣುಗ್ಗುವ ಹಾಗೂ ಬಡಜನರಿಗೆ ಸಿಗುವ ಸಹಾಯ, ಸವಲತ್ತುಗಳನ್ನು ಪ್ರತಿವರ್ಷ ಹಾರು ಹೊಡೆಯುತ್ತಿರುವ ಉದಾಹರಣೆ ಸಹಸ್ರಾರು ಇವೆ. ವಿಧಾನಸಭೆಯ ಮುಂದೆ ಸರಕಾರವೇ ಆಗಲಿ, ಸರಕಾರಿ ನೌಕರರೇ ಆಗಲಿ, ಯಾವುದೇ ಸಂಘ-ಸಂಸ್ಥೆ, ಪ್ರಾಧಿಕಾರ, ನಿಗಮ, ವಿಶ್ವವಿದ್ಯಾಲಯ ಇತ್ಯಾದಿಯಾಗಿ ಇರಲಿ ಇವು ದೊಡ್ಡವಲ್ಲ. ಇವು ವಿಧಾನಸಭಾ ಕೃಪಾಪೋಷಿತ ಪ್ರಜಾಸಾಧನಗಳು. ಇವರೆಲ್ಲರ ಮೇಲೆ ವಿಧಾನಸಭೆ ಪ್ರಜಾ ಸಾರ್ವಭೌಮ, ಸಾಮ್ರಾಟ, ವಿಧಾನಸಭೆಯ ಆದೇಶ ಪ್ರಕಾರ ಸರಕಾರ ಹಾಗೂ ಅಧಿಕಾರಿಗಳು ಆಯ ವ್ಯಯದ ಪ್ರಕಾರ ಜಮೆ ಹಾಗೂ ವೆಚ್ಚ ಮಾಡದೇ 1991ರಿಂದ 1994ರ ಮೂರು ವರ್ಷ ಅವಧಿಯಲ್ಲಿ ನಿಗದಿಪಡಿಸಿದ ಜಮೆಯಲ್ಲಿ 1915.65 ಕೋಟಿ ಕಡಿಮೆ ಜಮಾ ಪಡೆದಿದ್ದು, ನಿಗದಿಪಡಿಸಿದ ವೆಚ್ಚದಲ್ಲಿ 1349.34 ಕೋಟಿ ಮೊತ್ತವನ್ನು ಖರ್ಚು ಮಾಡದೆ ಉಳಿಸಿದ್ದಾರೆ. ಖರ್ಚು ಮಾಡಿದ ಈ ಹಣ ಹೆಚ್ಚಾಗಿ ಜನಪರ ಯೋಜನೆಗಳಿಗೆ ನಿಗದಿಪಡಿಸಿದ ಹಣ ಇದ್ದು, ಇಲ್ಲಿ ಅಧಿಕಾರಿಗಳು ನೌಕರರು ಸಾರ್ವಜನಿಕ ಹಿತವನ್ನು ಕಡೆಗಣಿಸಿದ್ದು ಇವರನ್ನು ಶಾಸಕರು ಗಮನಿಸದಿರುವುದು ಹಾಗೂ ಅದಕ್ಕ ಅಧಿಕಾರಿಗಳನ್ನು ತಪಾಸಣೆಗೆ ಗುರಿಪಡಿಸದೇ ಇರುವುದ ಸರಿ ಅಲ್ಲ, ಸಾಧುವೂ ಅಲ್ಲ, ತೆರಿಗೆ ಹಾಗೂ ತೆರಿಗೆಯೇತರ ಕರ ಭಾರತ ಸರ್ಕಾರಕ್ಕೆ ಭಾರತೀಯರಿಂದ 100787.00 ಕೋಟಿ, ರಾಜ್ಯ ಸರ್ಕಾರಕ್ಕೆ ರಾಜ್ಯದ ಜನತೆಯಿಂದ 6758.18 ಕೋಟಿ ಮೊತ್ತವನ್ನು 95-96ರಲ್ಲಿ ಕೊಡುತ್ತಿದ್ದು, ರಾಜ್ಯ ಜನಸಂಖ್ಯೆ 4.49 ಕೋಟಿ ಇದ್ದು ರಾಜ್ಯದ ಜನತೆ ರಾಜ್ಯ ಹಾಗೂ ಕೇಂದ್ರ ಸರ್ಕಾರಕ್ಕೆ ಈ ವರ್ಷ ತಲಾ 2708.20 ರೂಪಾಯಿಗಳನ್ನು ಅಪರೋಕ್ಷ ವಾಗಿ ಕೊಡುತ್ತಿದ್ದು, ಜನತೆಯು ರಾಜ್ಯ ಹಾಗೂ ಕೇಂದ್ರ ಸರ್ಕಾರದ ಸಾವುಕಾರ ರೆಂಬುದನ್ನು ಯಾರೂ ಮರೆಯುವಂತಿಲ್ಲ. ಈ ವಿಷಯದಲ್ಲಿ ಸರಕಾರಿ ಸಿಬ್ಬಂದಿ ತಾವು ಜನತೆಯ ಸೇವಕರೆಂದು ದಕ್ಷತೆಯಿಂದ ಪ್ರಾಮಾಣಿಕರಾಗಿ ಭ್ರಷ್ಟರಾಗದೇ ಸರಕಾರಕ್ಕೆ ಹಾಗೂ ಶಾಸನಸಭೆಗೆ ಅಧೀನ ಹಾಗೂ ವಿಧೇಯರಾಗಿ ಕೆಲಸ ಮಾಡಬೇಕಾಗಿರುವುದು ಅವರ ಆದ್ಯ ಕರ್ತವ್ಯ. ಅಧಿಕಾರಿಗಳನ್ನು ಹಾಗೂ ಸರಕಾರವನ್ನು ಹದ್ದುಬಸ್ತಿನಲ್ಲಿಟ್ಟು ಅವರಿಂದ ಕರ್ತವ್ಯಗಳನ್ನು ನಿರ್ವಹಿಸಿಕೊಳ್ಳುವುದು ಕೂಡ ಶಾಸಕರ ಹಾಗೂ ಶಾಸನಸಭೆಯ ಹಕ್ಕು. ಈ ಹಕ್ಕನ್ನು ಸಾರ್ಥಕಗೊಳಿಸುವಲ್ಲಿ ಎಲ್ಲಾ ವಿಧದ ಶಾಸಕರು ಯಶಸ್ವಿಯಾದರೆ ಮಾತ್ರ ಪ್ರಜಾತಂತ್ರ ವ್ಯವಸ್ಥೆ ಸುವ್ಯವಸ್ಥೆ. ಇಲ್ಲವಾದರೆ ಎಲ್ಲವೂ ಅವ್ಯವಸ್ಥೆಯಾದೀತು.

❑

ಬಿ.ಎಸ್. ವಾಯ್. ಬೇಷರತ್ ವಿಷಾದ

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 191ರ ಪ್ರಕಾರ ವಿಧಾನಸಭೆಯ ಸದಸ್ಯರು, ಅಧ್ಯಕ್ಷರ ಅನುಮತಿ ಪಡೆದು, ಅಧ್ಯಕ್ಷರು, ಸದಸ್ಯರು ಅಥವಾ ಸದನದ ಅಥವಾ ಸದನದ ಸಮಿತಿಯು ಹಕ್ಕುಚ್ಯುತಿ ವಿಷಯುವನ್ನು ವಿಧಾನಸಭೆಯಲ್ಲಿ ಎತ್ತಬಹುದಾಗಿದೆ. ಸದನದ ಅಧ್ಯಕ್ಷರು ಹಾಗೂ ಸದಸ್ಯರ ಹಕ್ಕು, ಘನತೆ, ಗೌರವಕ್ಕೆ, ಧಕ್ಕೆ ಬಾರದಂತೆ ನೋಡಿಕೊಳ್ಳುವುದು ಹಾಗೂ ನಡೆದುಕೊಳ್ಳುವುದು ಎಲ್ಲಾ ಸದಸ್ಯರ ಕರ್ತವ್ಯ. ಈ ಕರ್ತವ್ಯಲೋಪವಾಗಿ ಹಕ್ಕುಚ್ಯುತಿ ಬಂದಾಗ ಹಕ್ಕುಬಾಧ್ಯತಾ ಪ್ರಶ್ನೆ ಬರುತ್ತದೆ. ಇಂತಹ ಪ್ರಮಾದಗಳು ಆಗಿಂದಾಗ್ಗೆ ಸದಸ್ಯರಿಂದ ಅಥವಾ ಸದಸ್ಯರಲ್ಲದವರಿಂದ ಬಂದಾಗ ಅವರೆಲ್ಲರೂ ಹಕ್ಕುಚ್ಯುತಿಯ ಆರೋಪವನ್ನು ಎದುರಿಸಬೇಕಾಗುತ್ತದೆ ಹಾಗೂ ಈ ಆರೋಪದ ಬಗ್ಗೆ ಬೇಷರತ್ ವಿಷಾದ ವ್ಯಕ್ತಪಡಿಸಿದರೆ ಅಥವಾ ಕ್ಷಮಾಪಣೆ ಕೇಳಿದರೆ ಅವರ ಮೇಲಿನ ಪ್ರಕರಣವನ್ನು ಯಾವುದೇ ಹಂತದಲ್ಲಿ ಮುಕ್ತಾಯಗೊಳಿಸಲಾದ ಉದಾಹರಣೆಗಳು ನಮ್ಮ ರಾಜ್ಯದ ಸಂಸದೀಯ ಇತಿಹಾಸದಲ್ಲಿ ಉಲ್ಲೇಖಿತವಾಗಿದೆ. ಈ ಉಲ್ಲೇಖಗಳಲ್ಲಿ 1985-89ರ ಏಳನೇ ವಿಧಾನಸಭೆಯಲ್ಲಿ (1) ಶಾಸಕರಾದ ನಾರಾಯಣ ಕುಮಾರ್, ಬಾಬು ರೆಡ್ಡಿತುಂಗಳ ಇವರ ವಿರುದ್ಧ ಶಾಸಕ ಆರ್.ಎಸ್. ಮಾನೆ, (2) ವಿಶ್ವಭಾರತಿ ಸಹಕಾರಿ ಗೃಹನಿರ್ಮಾಣ ಸಂಘಧ ಪದಾಧಿಕಾರಿ ಶ್ರೀ ಬಿ. ಕೃಷ್ಣಭಟ್ಟ ಇವರ ವಿರುದ್ಧ ಶಾಸಕ ಶ್ರೀ ಆರ್. ವೆಂಕಟರಾಮಯ್ಯ, (3) ಶಾಸಕ ಶ್ರೀ ಮಲ್ಲಿಕಾರ್ಜುನ ಖರ್ಗೆಯುವರ ವಿರುದ್ಧ ಶಾಸಕ ಶ್ರೀ ರಾಜವರ್ಧನ ಅವರು ತಂದ ಹಕ್ಕುಚ್ಯುತಿ ಪ್ರಕರಣದಲ್ಲಿ ಬೇಷರತ್ ವಿಷಾದ ವ್ಯಕ್ತಪಡಿಸಿದ್ದರಿಂದ ಅವುಗಳನ್ನು ಅಲ್ಲಿಗೆ ಮುಕ್ತಾಯ ಮಾಡಲಾಗಿದೆ. (1) ವಿರೋಧ ಪಕ್ಷದ ನಾಯಕ ಶ್ರೀ ಬಂಗಾರಪ್ಪನವರ ವಿರುದ್ಧ ಶಾಸಕ ಶ್ರೀ ರಮೇಶ್ ಕುಮಾರ್, (2) ಗೃಹಮಂತ್ರಿ ರಾಚಯ್ಯನವರ ವಿರುದ್ಧ ಶ್ರೀ ಬಂಗಾರಪ್ಪ, (3) ವಿರೋಧಿ ನಾಯಕ ಶ್ರೀ ಬಂಗಾರಪ್ಪನವರ ವಿರುದ್ಧ ಮುಖ್ಯಮಂತ್ರಿ ಶ್ರೀ ರಾಮಕೃಷ್ಣ ಹೆಗ್ಗಡೆ, (4) ಮುಖ್ಯಮಂತ್ರಿ ರಾಮಕೃಷ್ಣ ಹೆಗ್ಗಡೆಯುವರ ವಿರುದ್ಧ ಶ್ರೀ ಆರ್. ವೆಂಕಟರಾಮಯ್ಯ, (5) ಮುಖ್ಯಮಂತ್ರಿ ರಾಮಕೃಷ್ಣ ಹೆಗ್ಗಡೆ ವಿರುದ್ಧ ಶ್ರೀ ಬಂಗಾರಪ್ಪ, (6) ಮಂತ್ರಿ ಶ್ರೀ ಹೆಚ್. ಡಿ. ದೇವೇಗೌಡರ ವಿರುದ್ಧ ಶ್ರೀ ಬಂಗಾರಪ್ಪ, (7) ಕಾನೂನು

ಮಂತ್ರಿ ವಿರುದ್ಧ ಶ್ರೀ ಬಿ. ಎಸ್. ಯಡಿಯೂರಪ್ಪ, (8) ಶ್ರೀ ಬಿ. ರಾಚಯ್ಯನವರ ವಿರುದ್ಧ ಶ್ರೀ ಕೆ. ಹೆಚ್. ಶ್ರೀನಿವಾಸ, (9) ಶ್ರೀ ಪಾಟೀಲ ಪುಟ್ಟಪ್ಪನವರ ವಿರುದ್ಧ ಶ್ರೀ ವೆಂಕಟರಾಮಯ್ಯ ಹಾಗೂ ಶ್ರೀ ಉಮರಬ್ಬ, (10) ಗ್ರಾಮೀಣ ಅಭಿವೃದ್ಧಿ ಮಂತ್ರಿ ಶ್ರೀ ನಜೀರ್‌ಸಾಬ್‌ರ ವಿರುದ್ಧ ಶ್ರೀ ಕೆ. ಹೆಚ್. ಪಾಟೀಲ್, (11) ಡಾ। ಚಿದಾನಂದಮೂರ್ತಿಯವರ ವಿರುದ್ಧ ಶ್ರೀ ಕೆ. ಹೆಚ್. ಪಾಟೀಲ್, (12) ಶ್ರೀ ಅಡ್ಯಂತಾಯ ಹಾಗೂ ಶ್ರೀ ಉಮರಬ್ಬರವರ ವಿರುದ್ಧ ಶ್ರೀ ರಮೇಶ್‌ಕುಮಾರ್, (13) ಶ್ರೀ ಪಾಟೀಲ ಪುಟ್ಟಪ್ಪನವರ ವಿರುದ್ಧ ಶ್ರೀ ಉಮರಬ್ಬ, (14) ಉದ್ಯಮ ಮಂತ್ರಿಗಳ ವಿರುದ್ಧ ಶ್ರೀ ಜೆ. ಮಾದೇಗೌಡ, (15) ಮುಖ್ಯಮಂತ್ರಿ ವಿರುದ್ಧ ಶ್ರೀ ಮಲ್ಲಿಕಾರ್ಜುನ ಖರ್ಗೆ, (16) ಮುಖ್ಯಮಂತ್ರಿಗಳ ವಿರುದ್ಧ ವಿರೋಧ ಪಕ್ಷದ ನಾಯಕ ಶ್ರೀಮತಿ ಕೆ. ಎಸ್. ನಾಗರತ್ನಮ್ಮ, (17) ಶ್ರೀ ಜನಾರ್ಧನ ಪೂಜಾರಿಯವರ ವಿರುದ್ಧ ಶ್ರೀ ಎ. ಲಕ್ಷ್ಮೀಸಾಗರ್, (18) ಶ್ರೀ ರಾಮಕೃಷ್ಣ ಹೆಗ್ಗಡೆಯವರ ವಿರುದ್ಧ ಶ್ರೀ ಎಂ. ಎಸ್. ಕೃಷ್ಣನ್, (19) ಶ್ರೀ ಬಿ. ಲಕ್ಕಪ್ಪನವರ ವಿರುದ್ಧ ಶ್ರೀ ಡಾ। ಜೀವರಾಜ ಆಳ್ವ ಹೀಗೆ ಅನೇಕರ ವಿರುದ್ಧ ಅನೇಕರು ಹಕ್ಕುಚ್ಯುತಿ ಪ್ರಕರಣಗಳನ್ನು ವಿಧಾನಸಭೆಯಲ್ಲಿ ಮಂಡಿಸಿದ್ದು ವಿಧಾನಸಭೆಯಲ್ಲಿ ಹಾಗೂ ಹಕ್ಕುಭಾದ್ಯತಾ ಸಮಿತಿಯಲ್ಲಿ ಚರ್ಚೆಯಾಗಿ ಯಾವುದೇ ಅಹಿತಕರ ಕ್ರಮ ತೆಗೆದುಕೊಳ್ಳದೆ ಮುಕ್ತಾಯ ಮಾಡಲ್ಪಟ್ಟಿವೆ.

ಬೇಷರತ್ ವಿಷಾದ ಅಥವಾ ಕ್ಷಮಾಪಣೆ ವ್ಯಕ್ತಮಾಡಿದ ಯಾವುದೇ ಪ್ರಕರಣದಲ್ಲಿ ಕ್ರಮವನ್ನು ಮುಂದುವರಿಸದೆ ಅಲ್ಲಿಗೆಯೇ ಮನ್ನಿಸಿ ಮುಕ್ತಾಯ ಮಾಡಿದ ಉದಾಹರಣೆಗಳು ಬಹುತೇಕ ಎಲ್ಲಾ ವಿಧಾನಸಭೆ ಹಾಗೂ ಲೋಕಸಭೆಗಳಲ್ಲಿ ಸಾಕಷ್ಟು ಇದೆ.

ವಿಧಾನಸಭೆಯ ಅಧ್ಯಕ್ಷರ ತೀರ್ಮಾನ ಯಾವುದೇ ವಿಷಯದಲ್ಲಿರಲಿ ಸುಸಂಬದ್ಧ ಪ್ರಸ್ತಾವದ ಹೊರತು ಆ ತೀರ್ಮಾನ ಅಂತಿಮ ಹಾಗೂ ಸರ್ವಶ್ರೇಷ್ಠ. ಆ ತೀರ್ಮಾನವನ್ನು ಪ್ರಶ್ನಿಸುವ ಹಕ್ಕು ಯಾರಿಗೂ ಇಲ್ಲ. ಆ ತೀರ್ಮಾನವನ್ನು ಪುನರ್ವಿಮರ್ಶಿಸಲು ವಿಧಾನಸಭಾ ಅಧ್ಯಕ್ಷರಿಗೆ ಸಕಾರಣಗಳ ಮೇಲೆ ಅರ್ಜಿ ಸಲ್ಲಿಸದೆ ಯಾವುದೇ ಸದಸ್ಯ ಆ ಆದೇಶವನ್ನು ಪ್ರಶ್ನಿಸಿದರೆ ಅದು ಹಕ್ಕುಚ್ಯುತಿಯಾಗುತ್ತದೆ. ಅಂತಹ ಹಕ್ಕುಚ್ಯುತಿ ಗೈದ ಸದಸ್ಯರು ಪ್ರಾರಂಭದಲ್ಲಿಯೇ ಬೇಷರತ್ ವಿಷಾದ ಅಥವಾ ಕ್ಷಮಾಪಣೆ ವ್ಯಕ್ತಪಡಿಸಿದರೆ ಆ ಪ್ರಕರಣವನ್ನು ಅಲ್ಲಿಗೇ ಕೈಬಿಟ್ಟ ಉದಾಹರಣೆಗಳು ಸಂಸದೀಯ ಇತಿಹಾಸದ ಸತ್-ಸಂಪ್ರದಾಯಗಳಲ್ಲಿ ಸೇರಿವೆ. ವಿಷಾದ ಅಥವಾ ಕ್ಷಮಾಪಣೆ ಕೇಳದ ಪ್ರಕರಣಗಳನ್ನು ಸಭಾಧ್ಯಕ್ಷರು ವಿಧಾನಸಭೆಯಲ್ಲಿ ಚರ್ಚಿಸಲು ಅವಕಾಶ ಕೊಡಬಹುದು. ಇಲ್ಲವೇ ನಿಯಮಗಳಲ್ಲಿ ಏನೇ ಹೇಳಿದ್ದರೂ ಹಕ್ಕುಚ್ಯುತಿಯ ಯಾವುದೇ ಪ್ರಶ್ನೆಯನ್ನು ಪರಿಶೀಲನೆ, ತನಿಖೆ ಹಾಗೂ ವರದಿಗಾಗಿ ಹಕ್ಕುಬಾಧ್ಯತೆ ಸಮಿತಿಗೆ ಕಳುಹಿಸಬಹುದಾಗಿದೆ. ವಸ್ತುಸ್ಥಿತಿ ಹೀಗಿರುವಾಗ ವಿಧಾನಸಭೆಯ ಅಧ್ಯಕ್ಷ ಶ್ರೀ ರಮೇಶ್‌ಕುಮಾರ್ ಅವರು ಕೊಟ್ಟ ತೀರ್ಪಿನ ವಿರುದ್ಧ ವಿರೋಧಪಕ್ಷದ ನಾಯಕ ಯಡಿಯೂರಪ್ಪನವರು ಶಾಸನಸಭೆಯ ಹೊರಗಡೆ

ಟೀಕಿಸಿರುವರೆಂಬುದು ಹಾಗೂ ವಿಧಾನಸಭೆಯ ಅಧ್ಯಕ್ಷರ ಮನಸ್ಸಿಗೆ ನೋವುಂಟಾಗಿರುವು ದೆಂಬುದು. ಇದೊಂದು ಅಹಿತಕರ ಘಟನೆಯಾಗಿದ್ದು, ಹೀಗಾಗಬಾರದಾಗಿತ್ತು. ಈಗ ವಿರೋಧ ಪಕ್ಷದ ನಾಯಕರಾದ ಶ್ರೀ ಯಡಿಯೂರಪ್ಪನವರು ಬೇಷರತ್ ವಿಷಾದ ಅಥವಾ ಕ್ಷಮಾಪಣೆ ವ್ಯಕ್ತಪಡಿಸಿ, ಪ್ರಕಟಣೆ ಹೊರಡಿಸಿದ್ದು, ತಾ। 21.8.95ರಂದು ಸೇರುವ ಅಧಿವೇಶನದ ಪ್ರಾರಂಭದಲ್ಲಿಯೇ ಬೇಷರತ್ ವಿಷಾದ ವ ಕ್ಷಮಾಪಣೆ ವ್ಯಕ್ತಪಡಿಸಲು ಮುಂದಾಗಿ ವಿಧಾನಸಭೆ ಹಾಗೂ ವಿಧಾನಸಭೆಯ ಅಧ್ಯಕ್ಷರ ಘನತೆ, ಗೌರವಗಳನ್ನು ಎತ್ತಿಹಿಡಿಯುವ ಸಂಪ್ರದಾಯ ಹಾಕುತ್ತಿರುವುದರಿಂದ ಈ ವಿಷಯವನ್ನು ಬೆಳೆಸದೆ ಇಲ್ಲಿಗೆಯೇ ಮುಕ್ತಾಯ ಮಾಡಿ ಇಂತಹ ದುರ್ಘಟನೆ ಮುಂದಾಗದಂತೆ ಹಾಗೂ ದುಷ್ಪರಿಣಾಮವಾಗದಂತೆ ಎಲ್ಲರೂ ಎಚ್ಚರವಹಿಸಿ ರಾಜ್ಯದಲ್ಲಿ ತಲೆದೋರಿರುವ ಭೀಕರ ಬರಗಾಲ ಹಾಗೂ ರಾಜ್ಯದ ಹಣಕಾಸು ಪರಿಸ್ಥಿತಿ ಸುಧಾರಣೆಯ ಬಗ್ಗೆ ಚರ್ಚಿಸಿ ಸೂಕ್ತ ಕ್ರಮ ತೆಗೆದುಕೊಳ್ಳುವುದು ಎಲ್ಲರಿಗೂ ಹಿತಕರ.

❑

ಆರ್ಥಿಕ ಅಭಿವೃದ್ಧಿಗೆ ಆಯ ವ್ಯಯ ತಾರಕವಾಗಬೇಕು

ರಾಷ್ಟ್ರದಲ್ಲಿಯ ಯಾವುದೇ ರಾಜ್ಯ ಸರಕಾರಗಳೇ ಇರಲಿ ಕೇಂದ್ರ ಸರಕಾರವೇ ಇರಲಿ ಈ ಎಲ್ಲ ಸರಕಾರಗಳ ಪ್ರತಿ ವರ್ಷಗಳ ಆಯವ್ಯಯ ಆಯಾ ಸರಹದ್ದಿಗೆ ಹೇಗೆ ತಾರಕವಾಗಿ ಸರ್ವಾಂಗೀಣ ಅಭಿವೃದ್ಧಿಯನ್ನು ಅನುಷ್ಠಾನಗೊಳಿಸಬೇಕು. ಇದು ಆಯಾ ಸರಹದ್ದಿನ ಸರಕಾರಗಳ ಆದ್ಯ ಕರ್ತವ್ಯ. ಈ ದಿಸೆಯಲ್ಲಿ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಬಹುಮಟ್ಟಿಗೆ ವಿಫಲವಾಗುತ್ತಿರುವುದು ಆಯಾ ಸರಕಾರಗಳ ಆಯ ವ್ಯಯ (ಬಜೆಟ್) ಪತ್ರಗಳನ್ನು ಕೂಲಂಕುಶವಾಗಿ ಅಧ್ಯಯನ ಮಾಡಿದರೆ ಅದು ಸುಸ್ಪಷ್ಟ.

ಸದ್ಯಕ್ಕೆ ಕರ್ನಾಟಕ ರಾಜ್ಯದ ಆಯ ವ್ಯದಯ ಬಗ್ಗೆ ಹೇಳುವುದಾದರೆ ರಾಜ್ಯದ ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳಾದ ಕೃಷಿ, ಪಶುಸಂಗೋಪನೆ, ಸಸ್ಯ ಸಂಗೋಪನೆ, ಸಹಕಾರ, ಹೈನಾಭಿವೃದ್ಧಿ, ಮೀನುಗಾರಿಕೆ, ವಿವಿಧ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ, ಗ್ರಾಮೀಣ ಉದ್ಯೋಗ, ಭಾರಿ ಮಧ್ಯಮ ಹಾಗೂ ಸಣ್ಣ ನೀರಾವರಿ, ಪ್ರದೇಶಾಭಿವೃದ್ಧಿ, ವಿದ್ಯುಚ್ಛಕ್ತಿ, ಗ್ರಾಮೋದ್ಯೋಗ, ಸಣ್ಣ ಕೈಗಾರಿಕೆ, ರಸ್ತೆ ಮತ್ತು ಸೇತುವೆ, ಇತ್ಯಾದಿ ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಪ್ರತಿವರ್ಷ ಕಡಿಮೆ ಹಣವನ್ನು ಬಜೆಟ್‌ನಲ್ಲಿ ನಿಗದಿಗೊಳಿಸುವುದು ಹಾಗೂ ನಿಗದಿಪಡಿಸಿದ ಆ ಹಣವನ್ನು ಸಂಪೂರ್ಣವಾಗಿ ವೆಚ್ಚ ಮಾಡದೇ ಇರುವುದು ಮುಂದುವರೆದಿದೆ. ಇದು ರಾಜ್ಯದ ಸಾರ್ವಜನಿಕರ ಹಿತದೃಷ್ಟಿಯಿಂದ ಸಾಧುವಲ್ಲ. ಈ ಆರ್ಥಿಕ ಕಾರ್ಯಕ್ರಮಗಳಿಗೆ 94-95ರ ಆಯವ್ಯಯದಲ್ಲಿ ನಿಗದಿಪಡಿಸಿದ ಹಣ 2400.14 ಕೋಟಿ. ಇದರಲ್ಲಿ ವೆಚ್ಚ ಮಾಡಿರುವುದು 2062.95 ಕೋಟಿ. ವೆಚ್ಚ ಮಾಡದೆ ಉಳಿಸಿದ ಹಣ 337.19 ಕೋಟಿ. 95-96ನೇ ಸಾಲಿಗೆ ಬಜೆಟ್‌ನಲ್ಲಿ ನಿಗದಿ ಮಾಡಿದ ಮೊತ್ತ 2734.60 ಕೋಟಿ. ಪರಿಷ್ಕೃತ ಬಜೆಟ್‌ನಲ್ಲಿ ನಿಗದಿ ಮಾಡಿದ ಮೊತ್ತ 2505.12 ಕೋಟಿ, 96-97ರಲ್ಲಿ ಬಜೆಟ್‌ನಲ್ಲಿ ನಿಗದಿ ಮಾಡಿದ ಹಣ ಕೇವಲ 3072.23 ಕೋಟಿ. ಹೀಗಾದರೆ ರಾಜ್ಯದ ಆರ್ಥಿಕ ಅಭಿವೃದ್ಧಿ ಸಾಧಿಸುವುದೆಂತು?

ಸಾಮಾಜಿಕ ಅಭಿವೃದ್ಧಿ ಕಾರ್ಯಕ್ರಮಗಳಾದ ಸಾಮಾನ್ಯ ಶಿಕ್ಷಣ, ವೈದ್ಯಕೀಯ, ಜನಾರೋಗ್ಯ, ನೀರು ಪೂರೈಕೆ ಮತ್ತು ನೈರ್ಮಲ್ಯ, ಗೃಹನಿರ್ಮಾಣ, ನಗರಾಭಿವೃದ್ಧಿ, ಹರಿಜನ, ಗಿರಿಜನ ಮತ್ತು ಇತರ ಹಿಂದುಳಿದ ವರ್ಗಗಳ ಕಲ್ಯಾಣ, ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ, ನೈಸರ್ಗಿಕ ವಿಕೋಪಗಳ ಬಗ್ಗೆ ಪರಿಹಾರ, ಪೌಷ್ಟಿಕ ಆಹಾರ, ಇತರ ಸಾಮಾಜಿಕ ಕಾರ್ಯಕ್ರಮ ಇತ್ಯಾದಿಗಳಿಗೆ ಸಹ ಆಯವ್ಯಯದಲ್ಲಿ ನಿಗದಿಮಾಡಿದ ಹಣವನ್ನು ಸಂಪೂರ್ಣವಾಗಿ ವೆಚ್ಚ ಮಾಡದೇ ಇರುವುದು ಮುಂದುವರೆದಿದ್ದು 1994-95ರಲ್ಲಿ ಕಡಿಮೆ ಮೊತ್ತ 3053.85 ಕೋಟಿ ನಿಗದಿಪಡಿಸಿದ್ದರೂ 2753.74 ಕೋಟಿ ಮೊತ್ತವನ್ನು ಮಾತ್ರ ವಾಸ್ತವಿಕವಾಗಿ ವೆಚ್ಚ ಮಾಡಿ 300.11 ಕೋಟಿ ಮೊತ್ತವನ್ನು ವೆಚ್ಚ ಮಾಡದೇ ಉಳಿಸಲಾಗಿದೆ. 95-96ರ ಆಯವ್ಯಯದಲ್ಲಿ 3432.53 ಕೋಟಿ ಮೊತ್ತವನ್ನು ನಿಗದಿಗೊಳಿಸಿದ್ದರೂ ಪರಿಷ್ಕೃತ ಬಜೆಟ್‌ನಲ್ಲಿ 3361.60 ಕೋಟಿಗೆ ಇಳಿಸಲಾಗಿದೆ ಇದು ಸಮಾಜಕ್ಕೆ ಸರಿಯೇ?

ಸಾಮಾನ್ಯ ಸೇವೆಗಳಾದ ಬಡ್ಡಿ ಸಂದಾಯ 94-95ರಲ್ಲಿ ಬಜೆಟ್ ಪ್ರಕಾರ 945.96 ಕೋಟಿ ನಿಗದಿಪಡಿಸಿದ್ದು ವಾಸ್ತವಿಕವಾಗಿ 871.42 ಕೋಟಿ ಮಾಡಲಾಗಿದೆ. ವಿಶ್ರಾಂತಿ ವೇತನಕ್ಕೆ 466.89 ಕೋಟಿ ನಿಗದಿಪಡಿಸಿದ್ದು ವಾಸ್ತವಿಕವಾಗಿ 470.36 ಕೋಟಿ ವೆಚ್ಚ ಮಾಡಲಾಗಿದೆ. ವಿವಿಧ ಸಾಮಾನ್ಯ ಸೇವೆಗಳಿಗೆ 94-95 ಬಜೆಟ್‌ನಲ್ಲಿ 2328.59 ಕೋಟಿ ನಿಗದಿಪಡಿಸಿದ್ದು, 2300.88 ಕೋಟಿ ವೆಚ್ಚ ಮಾಡಿ 27.71 ಕೋಟಿ ಉಳಿಸಲಾಗಿದೆ. ಹೀಗೆ ಆರ್ಥಿಕ, ಸಾಮಾಜಿಕ ಹಾಗೂ ಸಾಮಾನ್ಯ ಸೇವೆಗಳಿಗೆ 94-95ರ ಬಜೆಟ್‌ನಲ್ಲಿ ನಿಗದಿಗೊಳಿಸಿದ ಒಟ್ಟಾರೆ ಮೊತ್ತ 7762.59 ಕೋಟಿಯಲ್ಲಿ 7117.59 ಕೋಟಿ ವೆಚ್ಚ ಮಾಡಿ 645.00 ಕೋಟಿ ಮೊತ್ತವನ್ನು ವೆಚ್ಚ ಮಾಡಿರುವುದಿಲ್ಲ. ಆರ್ಥಿಕ, ಸಾಮಾಜಿಕ ಹಾಗೂ ಸಾಮಾನ್ಯ ಸೇವೆಗಳ ಬಂಡವಾಳ ವೆಚ್ಚಕ್ಕೆ ಸಹ 1994-95ರ ಬಜೆಟ್‌ನಲ್ಲಿ 1388.02 ಕೋಟಿ ನಿಗದಿಗೊಳಿಸಿದ್ದು ಇದರಲ್ಲಿ 1136.81 ಕೋಟಿ ವೆಚ್ಚ ಮಾಡಿ 251.21 ಕೋಟಿ ಮೊತ್ತವನ್ನು ವೆಚ್ಚ ಮಾಡದೇ ಬಿಡಲಾಗಿದೆ. ಹೀಗೆ ಆರ್ಥಿಕ, ಸಾಮಾಜಿಕ ಹಾಗೂ ಸಾಮಾನ್ಯ ಕಾರ್ಯಕ್ರಮಗಳಿಗೆ 94-95ರಲ್ಲಿ ಒಟ್ಟಾರೆ ನಿಗದಿತ ಮೊತ್ತ 9150.61 ಕೋಟಿ ಇದ್ದರೂ, ಕೇವಲ 8254.40 ಕೋಟಿ ವೆಚ್ಚ ಮಾಡಿ 896.21 ಕೋಟಿ ವೆಚ್ಚ ಮಾಡದೇ ಬಿಟ್ಟು ರಾಜ್ಯದ ಆರ್ಥಿಕ, ಸಾಮಾಜಿಕ ಹಾಗೂ ಸಾಮಾನ್ಯ ಅಭಿವೃದ್ಧಿ ಕಾರ್ಯಗಳನ್ನು ಕುಂಠಿತಗೊಳಿಸಲಾಗಿದೆ. ಈ ಅನಿಷ್ಟ ಅಭಿವೃದ್ಧಿ ವಿರೋಧಿ ನೀತಿ ಧೋರಣೆ ಮೊದಲಿನಿಂದಲೂ ಸಾಗಿಬಂದಿದ್ದು ಯಥಾಪ್ರಕಾರ ಮುಂದುವರೆದು ಅಭಿವೃದ್ಧಿಗೆ ಮಾರಕವಾಗುತ್ತದೆ. ಇದಕ್ಕೆ ಯಾರು ಜವಾಬ್ದಾರಿ?

ಸರಕಾರದ ಆದಾಯ ಮೂಲಗಳಾದ ತೆರಿಗೆ, ತೆರಿಗೆಯ್ಯೇತರ ಹಾಗೂ ಕೇಂದ್ರ ಸರಕಾರದ ಪಾಲು ಹಾಗೂ ಸಹಾಯಧನಗಳಿಂದ ಬಜೆಟ್ ಪ್ರಕಾರ 94-95ರಲ್ಲಿ ನಿಗದಿಗೊಳಿಸಿದ ಆದಾಯ ಮೊತ್ತ 8168.36 ಕೋಟಿ. ಇದರಲ್ಲಿ 6968.39 ಕೋಟಿ

ಮಾತ್ರ ಪಡೆದು 1199.96 ಕೋಟಿ ಆದಾಯ ಪಡೆಯದೆ ಬಿಡಲಾಗಿದೆ. ಇದು ಪ್ರತಿ ವರ್ಷ ನಡೆದು ಬಂದಿರುವ ಕೆಟ್ಟ ಸಂಪ್ರದಾಯ ಹಾಗೂ ಖಜಾನೆಗೆ ಭಾರೀ ಖೋತಾ, ಹೀಗಾದರೆ ಹೇಗೆ:

ಸರಕಾರದ ಅಭಿವೃದ್ಧಿಯೇತರ ಆಡಳಿತ ವೆಚ್ಚ ಪ್ರತಿವರ್ಷ ಶರವೇಗದಲ್ಲಿ ಏರುತ್ತಲೇ ಇದೆ. ಈ ವೆಚ್ಚ ಭರಿಸುವುದಕ್ಕಾಗಿ ಹಾಗೂ ಅಭಿವೃದ್ಧಿಯ ಕನಿಷ್ಠ ವೆಚ್ಚಕ್ಕಾಗಿ ಸರಕಾರ ಪ್ರತಿವರ್ಷ ಸಾಲ ಪಡೆಯುತ್ತಿದ್ದು ಇದು ಸಹ ಪ್ರತಿವರ್ಷ ಏರುತ್ತಿದ್ದು ಇದಕ್ಕೆ ಕೊಡುವ ಬಡ್ಡಿ ಸಹಿತ ಏರುತ್ತಲೇ ಇದೆ. ಭಾರತ ಸರಕಾರದ ಸಾಲ, ಬಹಿರಂಗ ಮಾರುಕಟ್ಟೆ ಸಾಲ, ಠೇವಣಿ, ವಿವಿಧ ಬಾಂಡುಗಳು, ಅಲ್ಪಾವಧಿ ಸಾಲ, ವಿವಿಧ ನಿಧಿಗಳು, ಇತರ ಸಾಲ, ಇತ್ಯಾದಿ ವಿವಿಧ ಸಾಲಗಳು ಪ್ರತಿವರ್ಷ ಏರುತ್ತಲೇ ಇವೆ. 94-95ರಲ್ಲಿ ವಾಸ್ತವಿಕ ಈ ಸಾಲ 10635.67 ಕೋಟಿ ಇದ್ದುದು, 95-96ರಲ್ಲಿ 11839.25 ಕೋಟಿ, 96-97ರಲ್ಲಿ 13277.76 ಕೋಟಿಗೆ ಏರಲಿದೆ. 94-95ರಲ್ಲಿ ವಾಸ್ತವಿಕವಾಗಿ ಕೊಟ್ಟಿರುವ ಬಡ್ಡಿ 871.42 ಕೋಟಿಯಾಗಿದ್ದರೆ ಅದು 96-96ರಲ್ಲಿ 1081.44 ಕೋಟಿ, 96-97ರಲ್ಲಿ 1274.33 ಕೋಟಿಗೆ ಏರಲಿದೆ. ಅಂತೆಯೇ ರಾಜ್ಯದ ಕರದಾತರಿಂದ 94-95ರಲ್ಲಿ 5558.81 ಕೋಟಿ ತೆರಿಗೆ ಹಾಗೂ ತೆರಿಗೆಯೇತರ ಕರ ವಸೂಲಾಗಿದ್ದು, 95-96ರಲ್ಲಿ 7050.65 ಕೋಟಿ, 96-97ರಲ್ಲಿ 8103.00 ಕೋಟಿ ಅವ್ಯಾಹತವಾಗಿ ಏರುತ್ತಿದ್ದು, ಕರದಾತರ ಹ್ಾಗೂ ಈ ರಾಜ್ಯದ ಸರ್ವಾಂಗೀಣ ಅಭಿವೃದ್ಧಿ ಮಾತ್ರ ಪ್ರತಿ ವರ್ಷ ಕುಂಠಿತವಾಗುತ್ತ ನಡೆದಿರುವುದು ವಿಪರ್ಯಾಸ.

ಆದಾಯ ಸಂಪನ್ಮೂಲಗಳಿಂದ ಸರಿಯಾದ ಆದಾಯವನ್ನು ಸಂಪೂರ್ಣವಾಗಿ ಪಡೆಯದೇ ಇರುವ ವೈಫಲ್ಯಕ್ಕೆ, ವಿವಿಧ ಅಭಿವೃದ್ಧಿ ಯೋಜನೆಗಳಿಗೆ ನಿಗದಿಪಡಿಸಿದ ಮೊತ್ತವನ್ನು ಆಯುವ್ಯಯ ಪ್ರಕಾರ ವೆಚ್ಚ ಮಾಡದೇ ಅಭಿವೃದ್ಧಿ ಕಾರ್ಯಗಳನ್ನು ಕುಂಠಿತಗೊಳಿಸುವ ವೈಫಲ್ಯಕ್ಕೆ, ವಿವಿಧ ಕಾಮಗಾರಿಗಳ ಅನುಷ್ಠಾನದಲ್ಲಿ ಅವ್ಯವಹಾರಗಳಿಗೆ ಸಿಕ್ಕುಬಿದ್ದ ಭ್ರಷ್ಟ ಅಧಿಕಾರಿಗಳನ್ನು ಕಂಡುಹಿಡಿಯಲಿಕ್ಕೆ, ಕಂಡುಹಿಡಿದರೆ ಅವರಿಗೆ ತಕ್ಕ ಶಿಕ್ಷೆ ಕೊಡಲು ತಪ್ಪಿದ ವೈಫಲ್ಯಕ್ಕೆ, ಸರಕಾರಕ್ಕೆ ಬರಬೇಕಾದ ಕರ ಕಂದಾಯ ಬಾಕಿ ವಸೂಲಿಯ ವೈಫಲ್ಯಕ್ಕೆ, ಕಾರಣರಾದ ಆಡಳಿತ ಅಧಿಕಾರಿಗಳು ಹಾಗೂ ಸಂಬಂಧಿಸಿದ ಮಂತ್ರಿಗಳ ಮೇಲೆ ಕಟ್ಟುನಿಟ್ಟಾದ ಕ್ರಮ ಜರುಗಿಸುವ ಸಂವಿಧಾನ ಅಥವಾ ಅಧಿನಿಯಮಬದ್ಧವಾದ ಘಟಕ ಇರದೆ ಹೋದರೆ, ಕುಂಟುತ್ತಿರುವ ಅಭಿವೃದ್ಧಿಯನ್ನು ಸುಧಾರಿಸುವುದು ಹಾಗೂ ದಿವಾಳಿಯತ್ತ ದಾಪುಗಾಲು ಹಾಕುತ್ತಿರುವ ಆರ್ಥಿಕ ಗುಲಾಮಗಿರಿಯಿಂದ ಈ ರಾಜ್ಯ ಪಾರಾಗುವುದು ಭಾರೀ ಕಷ್ಟವಾದೀತು.

❑

ವಿಧಾನಸಭೆ ಪ್ರಶ್ನೋತ್ತರದ ಅವಧಿ

ಕರ್ನಾಟಕ ಪ್ರಾಂತ ಸರಹದ್ದಿನಲ್ಲಿಯ ಶೈಕ್ಷಣಿಕ, ಧಾರ್ಮಿಕ, ವ್ಯವಸಾಯ, ನ್ಯಾಯ ಪರಿಪಾಲನೆ, ಆಡಳಿತ, ಅಭಿವೃದ್ಧಿ ಇತ್ಯಾದಿ ಇನ್ನೂ ಅನೇಕ ಸಾಮಾನ್ಯ, ಸಾಮಾಜಿಕ ಹಾಗೂ ಆರ್ಥಿಕ ಸೇವೆಗಳ ಉಸ್ತುವಾರಿ ಹಾಗೂ ಅನುಷ್ಠಾನವನ್ನು ನೋಡಿಕೊಳ್ಳುವುದೇ ರಾಜ್ಯ ಕಾರ್ಯಕಾರಿಣಿಯಾದ ಕರ್ನಾಟಕ ಸರಕಾರದ ಮಹಾ ಸದುದ್ದೇಶ. ಈ ಉದ್ದೇಶ ಸಾಧನೆಗಾಗಿ ಈ ರಾಜ್ಯದ ಜನತೆಯ ಚುನಾಯಿತ ಪ್ರತಿನಿಧಿಗಳ ಸಭೆಯಾದ ವಿಧಾನಸಭೆ ಪ್ರತಿವರ್ಷ ಬಜೆಟ್ ಅಧಿವೇಶನ, ವಿಶೇಷ ಅಧಿವೇಶನ, ಚಳಿಗಾಲ ಅಧಿವೇಶನ, ಮಳೆಗಾಲ ಅಧಿವೇಶನ ಮೊದಲಾದ ಅನೇಕ ಅಧಿವೇಶನಗಳಲ್ಲಿ ಸೇರಿ ಉಪಯುಕ್ತವಾದ ಚುಕ್ಕೆ ಗುರ್ತಿನ ಪ್ರಶ್ನೆ, ಚುಕ್ಕೆ ಗುರುತಿಲ್ಲದ ಪ್ರಶ್ನೆ, ಅಲ್ಪಕಾಲಾವಧಿ ಪ್ರಶ್ನೆ, ನಿಲುವಳಿ ಸೂಚನೆ, ಸಾರ್ವಜನಿಕ ಮಹತ್ವದ ಜರೂರು ವಿಷಯ ಸೂಚಿ, ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಸರಕಾರದ ಗಮನ ಸೆಳೆಯುವುದು, ಪ್ರಶ್ನೋತ್ತರಗಳ ಬಗ್ಗೆ ಅರ್ಧ ಗಂಟೆ ಚರ್ಚೆ, ನಿರ್ಣಯಗಳ ಮಂಡನೆ, ಸಾರ್ವಜನಿಕರ ಮನವಿ ಮಂಡನೆ, ವಿಧೇಯಕ ಮಂಡನೆ, ಪ್ರಸ್ತಾವನೆಯ ಮೂಲಕ ಸಾರ್ವಜನಿಕ ಹಿತದೃಷ್ಟಿಯ ವಿಷಯ. ಮಂತ್ರಿಗಳ ವಿಷಯದಲ್ಲಿ ಅವಿಶ್ವಾಸ ಪ್ರಸ್ತಾವನೆ, ಆಯವ್ಯಯ ಮಂಡನೆ, ಚರ್ಚೆ ಹಾಗೂ ಅನುಮೋದನೆ, ಹಕ್ಕುಬಾಧ್ಯತೆ, ಕ್ರಿಯಾಲೋಪಗಳು, ಕ್ರಿಯಾಲೋಪವಲ್ಲದ ಯಾವುದೇ ಒಂದು ಮಹತ್ವದ ವಿಚಾರ ಇತ್ಯಾದಿ ವಿವಿಧ ಅಸ್ತ್ರಗಳ ಮುಖಾಂತರ, ಅನೇಕ ಮಹತ್ವದ ವಿಚಾರಗಳ ಬಗ್ಗೆ ಕಾರ್ಯಕಲಾಪಗಳನ್ನು ನಡೆಯಿಸಿ, ಚರ್ಚಿಸಿ ಸೂಕ್ತ ಕ್ರಮ ಹಾಗೂ ನಿರ್ಣಯವನ್ನು ತೆಗೆದುಕೊಳ್ಳಬೇಕಾಗುತ್ತದೆ.

ಸಾಮಾನ್ಯ, ಸಾಮಾಜಿಕ ಹಾಗೂ ಆರ್ಥಿಕ, ಇತ್ಯಾದಿ ಕಾರ್ಯಕ್ರಮಗಳಿಗಾಗಿ ಬಜೆಟ್ ಅಧಿವೇಶನದಲ್ಲಿ ಪ್ರತಿವರ್ಷ ವೆಚ್ಚ ಮಾಡಬೇಕಾದ ರಾಜಸ್ವ ಹಾಗೂ ಬಂಡವಾಳ ಮೊತ್ತ, ಸಣ್ಣ ಉಳಿತಾಯ, ವಿವಿಧ ನಿಧಿ, ಠೇವಣಿ, ಮುಂಗಡ ಇತ್ಯಾದಿ ಸಾರ್ವಜನಿಕ ಲೆಕ್ಕ, ಮಾರುಕಟ್ಟೆ ಸಾಲ, ಕೇಂದ್ರ ಸರಕಾರದ ಸಾಲ ಇತ್ಯಾದಿ ವಿವಿಧ ಸಾರ್ವಜನಿಕ ಸಾಲಗಳಿಗೆ ವ್ಯಯಮಾಡಬೇಕಾದ ಒಟ್ಟಾರೆ ಮೊತ್ತ ಹಾಗೂ ಈ ಎಲ್ಲ ಮೊತ್ತ ವೆಚ್ಚ

ಮಾಡಲು ಬೇಕಾಗಿರುವ ಹಣವನ್ನು ಶೇಖರಣೆ ಮಾಡುವ ಬಗ್ಗೆ ತೆರಿಗೆ ಆದಾಯ, ತೆರಿಗೆ ರಹಿತ ಆದಾಯ, ಕೇಂದ್ರ ಸರಕಾರದ ಕರಪಾಲು ಹಾಗೂ ಧನಸಹಾಯ, ಇತ್ಯಾದಿ ಸಂಚಿತ ನಿಧಿಗಳಿಕೆ, ಸಣ್ಣ ಉಳಿತಾಯ, ವಿವಿಧ ನಿಧಿ, ಠೇವಣಿ, ಮುಂಗಡ ಇತ್ಯಾದಿ ಸಾರ್ವಜನಿಕ ಲೆಕ್ಕ, ಮಾರುಕಟ್ಟೆ ಸಾಲ, ಕೇಂದ್ರ ಸರಕಾರದ ಸಾಲ ಇತ್ಯಾದಿ ವಿವಿಧ ಸಾರ್ವಜನಿಕ ಸಾಲಗಳನ್ನು ಪಡೆದು ಈ ಒಟ್ಟಾರೆ ಆಯ ಮೊತ್ತವನ್ನು ಸರಕಾರದ ಖಜಾನೆಗೆ ಜಮಾಯಿಸಿಕೊಳ್ಳುವ ಬಗ್ಗೆ ವಿವರವಾಗಿ ಚರ್ಚಿಸಿ ಆಯವ್ಯಯ(ಬಜೆಟ್)ವನ್ನು ಮಂಜೂರು ಮಾಡಲಾಗುತ್ತಿದೆ. ವಿಧಾನಸಭೆಯಿಂದ ಬಜೆಟ್ ಮಂಜೂರು ಆಗದ ಹೊರತು ಒಂದು ಪೈಸೆಯನ್ನು ಕೂಡ ವೆಚ್ಚ ಮಾಡುವ ಅಧಿಕಾರ ಸರಕಾರಕ್ಕಿಲ್ಲ. ಬಜೆಟ್ ಪ್ರಕಾರ ಮಂಜೂರಾದ ಯಾವುದೇ ಆಯ(ಜಮಾ) ಮೊತ್ತದ ಬಗ್ಗೆ ಅಥವಾ ಯಾವುದೇ ವ್ಯಯ(ಖರ್ಚು) ಮೊತ್ತದ ಬಗ್ಗೆ ಸರಕಾರವನ್ನು ಪ್ರಶ್ನಿಸುವ ಪರಮೋಚ್ಚ ಹಕ್ಕು ವಿಧಾನಸಭೆಯ ಪ್ರತಿಯೊಬ್ಬ ಸದಸ್ಯನಿಗೂ ಅವನು ಅಧಿಕಾರಾರೂಢ ಪಕ್ಷದವನೇ ಇರಲಿ ಅಥವಾ ಪ್ರತಿಪಕ್ಷ ಅಥವಾ ಪ್ರತಿ ಗುಂಪಿನ ಸದಸ್ಯನೇ ಇರಲಿ ಅಥವಾ ಯಾವುದೇ ಪಕ್ಷೇತರನೇ ಇರಲಿ ಅವನಿಗಿರುತ್ತದೆ. ಅಂತೆಯೇ ಸರಕಾರದ ಹೇಳಿಕೆ ಹಾಗೂ ಉತ್ತರಗಳಿಂದ ದೊರೆತ ನಿರ್ವಹಿಸಬೇಕಾದ ಕಾರ್ಯಗಳ ನಿರ್ವಹಣಾ ಕರ್ತವ್ಯ ಕೂಡ ಶಾಸಕರಿಗೆ ಇರುತ್ತದೆ.

ಪ್ರತಿವರ್ಷ ಆಯವ್ಯಯ(ಬಜೆಟ್) ಮೊತ್ತ ಹೆಚ್ಚುತ್ತಿದ್ದು 1996-97ನೇ ಸಾಲಿಗೆ ತಾ। 1-4-96ರ ಆರಂಭದ ಶಿಲ್ಕು ಹಾಗೂ 31-3-97ರ ಅಖೈರು ಶಿಲ್ಕು ಸೇರಿ ಸರಕಾರದ ಆಯವ್ಯಯ ಅಥವಾ ಆದಾಯ-ವೆಚ್ಚದ(ಬಜೆಟ್) ಮೊತ್ತ 24560.01 ಕೋಟಿ ಆಗುತ್ತದೆ. ಸರಕಾರ ಇಷ್ಟೊಂದು ಮೊತ್ತವನ್ನು ಮೇಲೆ ಹೇಳಿದ ಮೂಲಗಳಿಂದ ಶೇಖರಣೆ ಮಾಡಿ ಮೇಲೆ ಹೇಳಿದ ಮೂಲಗಳಿಗೆ ಬಿಡುಗಡೆ ಮಾಡಬೇಕಾಗುತ್ತದೆ. ಇಷ್ಟೊಂದು ಮೊತ್ತದ ಆಯವ್ಯಯದ ಬಗ್ಗೆ ಹಾಗೂ ಹಿಂದಿನ ವರ್ಷದ ವಾಸ್ತವಿಕ ಆಯವ್ಯಯದ ಬಗ್ಗೆ ವಿಧಾನಸಭೆಯಲ್ಲಿ ಅಧಿವೇಶನ ಕರೆದಾಗಲೆಲ್ಲಾ ಚರ್ಚಿಸಬೇಕಾಗುತ್ತದೆ. ವಿಧಾನಸಭೆಯ ಎಲ್ಲ ಕಾರ್ಯಚಟುವಟಿಕೆಗಳಲ್ಲಿ ಅತೀ ಮಹತ್ವವುಳ್ಳದ್ದು ಪ್ರಶ್ನೋತ್ತರ ಅವಧಿ. ಅದು ಕಾರಣದಿಂದಲೇ ಎಲ್ಲಾ ವಿಧಾನಸಭೆಗಳಲ್ಲಿ ಹಾಗೂ ಲೋಕಸಭೆಯಲ್ಲಿ ಪ್ರತಿದಿವಸ ಕಾರ್ಯಕಲಾಪ ಪಟ್ಟಿಯಲ್ಲಿ ಪ್ರಶ್ನೋತ್ತರ ವೇಳೆಗೆ ಪ್ರಥಮ ಸ್ಥಾನ. ಇದು ಸತ್‌ಸಂಪ್ರದಾಯ. ಈ ಸಂಪ್ರದಾಯ ಪರ ರಾಷ್ಟ್ರಗಳಲ್ಲಿ ಕೂಡ ಇದೆ. ಪ್ರಶ್ನೋತ್ತರ ಫಲ-ಶ್ರುತಿ ಶಾಸಕರ ಬ್ರಹ್ಮಾಸ್ತ್ರಕ್ಕೆ ಪೂರಕ ವ್ಯವಸ್ಥೆ, ರಾಜ್ಯದ ಆಗುಹೋಗು, ಆಯವ್ಯಯ, ಆಡಳಿತ, ಲೋಪದೋಷ, ಸಾರ್ವಜನಿಕ ರಕ್ಷಣೆ, ಸಾಲಸೊತ್ತು, ಪೋಷಣೆ, ಕರ್ತವ್ಯಲೋಪ, ಕರ್ತವ್ಯ ಚ್ಯುತಿ, ಅವ್ಯಹಾರ, ದುರ್ವ್ಯವಹಾರ, ಯೋಜನೆಗಳ ಅನುಷ್ಠಾನ, ಕಾನೂನು ಕಟ್ಟಳೆ ಸುವ್ಯವಸ್ಥೆಗಳ ನಿರ್ವಹಣೆ, ವೈಫಲ್ಯ, ಸಾಫಲ್ಯ, ಭ್ರಷ್ಟಾಚಾರ, ಸ್ವಾರ್ಥ, ಪಕ್ಷಪಾತ, ಸ್ವಜನ ಪಕ್ಷಪಾತ, ದುರಾಡಳಿತ, ಅಧಿಕಾರ ದುರುಪಯೋಗ ಇತ್ಯಾದಿ ವಿವಿಧ ಆದಾಯ ಹಾಗೂ ಸಾಮಾನ್ಯ, ಸಾಮಾಜಿಕ ಹಾಗೂ ಆರ್ಥಿಕ ವೆಚ್ಚಗಳ ಬಗ್ಗೆ, ಸರಕಾರದ ಕಾರ್ಯವೈಖರಿ ಬಗ್ಗೆ, ಯಾವುದೇ ಸದಸ್ಯರು ಪ್ರಶ್ನೆಗಳನ್ನು ಹಾಕಿ ಸರಕಾರದಿಂದ ಲಿಖಿತ

ಹಾಗೂ ತೊಂಡಿ ಉತ್ತರ ಪಡೆದು, ಉಪಪ್ರಶ್ನೆಗಳನ್ನು ಸಹ ಯಾರು ಬೇಕಾದರೂ ಕೇಳಿ ಸರಕಾರದಿಂದ ಉತ್ತರ ಪಡೆಯಬಹುದಾಗಿದೆ. ಸರಕಾರ ಕೊಟ್ಟ ಉತ್ತರಗಳಲ್ಲಿಯ ಬಹು ಮುಖ್ಯ ಹಾಗೂ ಉಪಯುಕ್ತವಾದ ಮಾಹಿತಿ ಅಂಕಿ-ಅಂಶ ಸಂಖ್ಯೆಗಳೊಂದಿಗೆ ಸಿಗುತ್ತಿರುವುದರಿಂದ ಇದರ ಬಹುಉಪಯೋಗವನ್ನು ಇನ್ನಾವುದೇ ಚರ್ಚೆಯಲ್ಲಿ ಬಳಸಿ ಹಾಗೂ ಉಪಯೋಗಿಸಿ ಕೊಳ್ಳಬಹುದಾಗಿದೆ ಹಾಗೂ ಸರಕಾರದ ಮಂತ್ರಿ ಹಾಗೂ ಅಧಿಕಾರಿಗಳ ಕಾರ್ಯವೈಖರಿಯನ್ನು ಸಹ ಗುರುತಿಸಿಕೊಳ್ಳಬಹುದಾಗಿದೆ. ಆಯ ಶೇಖರಣೆ ಮಾಡುವಲ್ಲಿ, ವ್ಯಯ ಬಟವಾಡೆ ಮಾಡುವಲ್ಲಿ, ಆಯವ್ಯಯ ಅಂದಾಜಿಗೂ ಹಾಗೂ ವಾಸ್ತವಿಕ ಮೊತ್ತಕ್ಕೂ ಅಜಗಜಾಂತರವಾಗಿ ಸಹಸ್ರಾರು ಕೋಟಿ ಮೊತ್ತದ ಕೊರತೆ ಪ್ರತಿ ವರ್ಷ ಕಂಡುಬರುತ್ತಿರುವುದರಿಂದ ಪ್ರಶ್ನೋತ್ತರ ವೇಳೆಯಲ್ಲಿ ಸಿಕ್ಕ ಮಾಹಿತಿ ಅಸ್ತ್ರಗಳು ಉಳಿದೆಲ್ಲ ಕಾರ್ಯಕಲಾಪಗಳಿಗೆ ಪೂರಕವಾಗುತ್ತಿರುವುದರಿಂದ ಅಧಿವೇಶನ ಪ್ರತಿದಿವಸ ಯಾವುದೇ ಸಣ್ಣ ಕಾರಣವನ್ನು ದೊಡ್ಡ ಕಾರಣವನ್ನಾಗಿ ಮಾಡಿ ಪ್ರಶ್ನೋತ್ತರ ವೇಳೆಯನ್ನು ಬದಿಗೊತ್ತುವುದು ಹಾಗೂ ಬದಿಗೊತ್ತಲಿಕ್ಕೆ ವ್ಯರ್ಥ ಪ್ರಯತ್ನ ಮಾಡುವುದು ಯಾವ ಶಾಸಕರಿಗೂ ಹಾಗೂ ಯಾವುದೇ ಪಕ್ಷಕ್ಕೂ ಭೂಷಣವಲ್ಲ. ಅನೇಕ ಶಾಸಕರು ಪ್ರಶ್ನೆಗಳನ್ನು ಹಾಕದೆ ಇರುವುದು, ಹಾಕಿದರೆ ಗೈರುಹಾಜರಿ ಉಳಿಯುವುದು ಅವರಿಗೆ ಸಲ್ಲದು. ಅದು ಅವರ ಆದ್ಯ ಕರ್ತವ್ಯದ ಚ್ಯುತಿಯೆಂದು ಹೇಳಿದರೆ ತಪ್ಪಾಗಲಾರದು. ಯಾವುದೇ ಒಬ್ಬ ಸದಸ್ಯನಿಗೆ ದೊರೆತ ಲೇಖಿ ಹಾಗೂ ತೊಂಡಿ ಉತ್ತರಗಳು ಉಳಿದೆಲ್ಲಾ ಸದಸ್ಯರಿಗೂ ಸಿಗುತ್ತಿರುವುದರಿಂದ ಅವುಗಳ ಉಪಯೋಗ ಹಾಗೂ ಉಪಯುಕ್ತತೆಯನ್ನು ಉಳಿದೆಲ್ಲ ಚರ್ಚೆಗಳಲ್ಲಿ ಅಳವಡಿಸಿಕೊಂಡು ಚರ್ಚೆಗಳು ಫಲಪ್ರದವಾಗುವಂತೆ ಹಾಗೂ ಸರಕಾರ ಹದ್ದುಬಸ್ತಿನಲ್ಲಿರುವಂತೆ ನೋಡಿಕೊಂಡು ಈ ರಾಜ್ಯದ ವಿಧಾನಸಭೆ ಈ ರಾಜ್ಯದ ಹಾಗೂ ಜನತೆಯ ಆಗುಹೋಗು ಹಾಗೂ ಭವಿಷ್ಯ ನಿರ್ಮಾಣದ ಮಹಾ ಅಸ್ತ್ರ ಹಾಗೂ ಸೂತ್ರ ಸಂಜೀವಿನಿಯಾಗಬೇಕು. ಸರಕಾರದ ಆಡಳಿತ ಲೋಪದೋಷ, ಸಾರ್ವಜನಿಕ ಕುಂದು-ಕೊರತೆ, ಬೇಡಿಕೆಗಳ ಬಗ್ಗೆ ಸಾಕಷ್ಟು ಪ್ರಶ್ನೆಗಳನ್ನು ಸಲ್ಲಿಸಿ ಉತ್ತರ ಪಡೆದು ಸೂಕ್ತ ಕ್ರಮ ತೆಗೆದುಕೊಳ್ಳವುದು ಪ್ರತಿಯೊಬ್ಬ ಶಾಸಕರ ಆದ್ಯ ಕರ್ತವ್ಯವಿರುವುದರಿಂದ ಈ ದಿಶೆಯಲ್ಲಿ ಶಾಸಕರು ಅವರ ಅವಧಿಯಲ್ಲಿ ಕರ್ತವ್ಯನಿಷ್ಠರಾಗುವುದು ಒಳ್ಳೆಯದು.

❑

ಬಜೆಟ್ - ಬೇಜವಾಬ್ದಾರಿ

ಬಜೆಟ್ ಅಂದರೆ ಸಂಸತ್ ಹಾಗೂ ಶಾಸಕಾಂಗದ ಮಂಜೂರಿ ಪಡೆದು, ರಾಜ್ಯದ ಹಾಗೂ ರಾಷ್ಟ್ರದ ಸಂಪನ್ಮೂಲಗಳಿಂದ ಪಡೆದ ಆದಾಯ (ಆಯ) ಹಾಗೂ ರಾಜ್ಯದ ಹಾಗೂ ರಾಷ್ಟ್ರದ ವಿವಿಧ ಯೋಜನೆಗಳ ಅನುಷ್ಠಾನಗಳಿಗಾಗಿ ಮಾಡುವ ವೆಚ್ಚ (ವ್ಯಯ). ಈ ಆಯವ್ಯಯದಲ್ಲಿ ಗಣನೀಯವಾದ ಹೆಚ್ಚು ಕಡಿಮೆಯಾದಲ್ಲಿ ರಾಜ್ಯದ ಹಾಗೂ ರಾಷ್ಟ್ರದ ಹಣಕಾಸು ಪರಿಸ್ಥಿತಿ ಏರುಪೇರಾಗಿ ಸಂಪನ್ಮೂಲಗಳ ಕೊರತೆಯಿಂದ ಯೋಜನೆಗಳು ಮೊಟಕುಗೊಂಡು ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಳ್ಳುವುವು ಹಾಗೂ ಸರಕಾರಗಳು ಆರ್ಥಿಕ ದಿವಾಳಿಯತ್ತ ಸಾಗಬೇಕಾಗುತ್ತವೆ. ಹೀಗಾಗದಂತೆ ನೋಡಿಕೊಳ್ಳುವುದು ಆರ್ಥಿಕ ಇಲಾಖೆಯ ಅಧಿಕಾರಿಗಳ ಹಾಗೂ ವಿತ್ತಮಂತ್ರಿ, ಮುಖ್ಯಮಂತ್ರಿ ಹಾಗೂ ಪ್ರಧಾನಮಂತ್ರಿಗಳ ಜವಾಬ್ದಾರಿ ಇರುತ್ತದೆ. ಕೇಂದ್ರ ಹಾಗೂ ರಾಜ್ಯ ಸರಕಾರಗಳ ಪ್ರತಿವರ್ಷದ ಅಂದಾಜು ಆಯ ಅಂದಾಜು ವೆಚ್ಚದ ಅಂಕಿ-ಸಂಖ್ಯೆ, ಅಂಶಗಳನ್ನು ಹಾಗೂ ವಾಸ್ತವಿಕ ಆಯ, ವಾಸ್ತವಿಕ ವೆಚ್ಚದ ಅಂಕಿ-ಸಂಖ್ಯೆ ಅಂಶಗಳನ್ನು ಗಮನಿಸಿದರೆ, ಈ ರಾಜ್ಯದ ಹಾಗೂ ರಾಷ್ಟ್ರದ ಹಣಕಾಸು ಇಲಾಖೆಯ ಅಧಿಕಾರಿಗಳ ಹಾಗೂ ಮಂತ್ರಿ, ಮುಖ್ಯಮಂತ್ರಿ, ಪ್ರಧಾನಮಂತ್ರಿಗಳ ಬೇಜವಾಬ್ದಾರಿ ಸುಸ್ಪಷ್ಟವಾಗಿ ಕಾಣಬರುತ್ತದೆ.

ಈಗ ನಮ್ಮ ರಾಜ್ಯ ಸರಕಾರದ ಆಯವ್ಯಯದ ಅಂದಾಜು ಹಾಗೂ ವಾಸ್ತವಿಕ ಚಿತ್ರದ ಬಗ್ಗೆ ಹೇಳುವುದಾದರೆ, ರಾಜ್ಯ ಸರಕಾರದ ಬೇಜವಾಬ್ದಾರಿ ಎದ್ದು ಕಾಣುತ್ತಿದೆ. ರಾಜ್ಯ ಸರಕಾರದ ಅಧಿಕೃತ ಪ್ರಕಟಣೆ ಪ್ರಕಾರ 90-91ರಿಂದ 94-95ರ ವರೆಗಿನ ಐದು ವರ್ಷಗಳ ಅವಧಿಯಲ್ಲಿ ಆಯವ್ಯಯದ ನಿಗದಿತ ಅಂದಾಜು ಆದಾಯ 39196.80 ಕೋಟಿ ಇದ್ದರೂ ವಾಸ್ತವಿಕ ಆದಾಯ 35473.29 ಕೋಟಿ ರೂ. ಆಗಿದ್ದು, 3723.29 ಕೋಟಿ ಕಡಿಮೆ ಆದಾಯ ಪಡೆದಿದ್ದು, ಹೀಗಾದರೆ ಸರಕಾರ ನಡೆಸುವುದಾದರೂ ಹೇಗೆ? ಇದಕ್ಕೆ ತದ್ವಿರುದ್ಧವಾಗಿ, ಇದೇ ಐದು ವರ್ಷದ ಅವಧಿಯಲ್ಲಿ, ಆಯವ್ಯಯದ ನಿಗದಿತ ಅಂದಾಜು ವೆಚ್ಚ 41076.16 ಕೋಟಿ ಇದ್ದು, ಇದರಲ್ಲಿ ವಾಸ್ತವಿಕ ವೆಚ್ಚ 37444.70 ಕೋಟಿಯಾಗಿದ್ದು 3631.46 ಕೋಟಿ ಕಡಿಮೆ ವೆಚ್ಚ ಮಾಡಿದ್ದು, ಹೀಗಾದರೆ ರಾಜ್ಯ ಅಭಿವೃದ್ಧಿ ಹೇಗೆ ಆಗಬೇಕು? ಬಜೆಟ್‌ಗೆ ಬೆಲೆಯಾದರೂ ಏನು? ರಾಜ್ಯದ ಆಯವ್ಯಯದ ಅಂದಾಜು

ಹಾಗೂ ವಾಸ್ತವಿಕ ಆದಾಯ ಹಾಗೂ ವೆಚ್ಚದ ಬಗ್ಗೆ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ, ವಿವಿಧ ಶಾಸಕಾಂಗ ಸಮಿತಿ, ಸಿ.ಎ.ಜಿ. ವರದಿಗಳು ಸರಕಾರಕ್ಕೆ ಆಗಿಂದಾಗ್ಗೆ ಸಲ್ಲಿಸಲ್ಪಟ್ಟರೂ ವರದಿಯಲ್ಲಿಯ ಸಲಹೆ ಸೂಚನೆ, ಟೀಕೆ, ಟಿಪ್ಪಣಿಗಳು, ಸರಕಾರದ ಮಂತ್ರಿ ಹಾಗೂ ಅಧಿಕಾರಿಗಳು ಗಣನೆಗೆ ತೆಗೆದುಕೊಳ್ಳದೆ ಇರುವುದು ಭೂಷಣವಲ್ಲ. ಭಾರತದ ಸಿ.ಎ.ಜಿ.ಯವರ ಅಧಿಕೃತ ವರದಿ ಪ್ರಕಾರ 91-92ರಿಂದ, 94-95ರ ವರೆಗಿನ ನಾಲ್ಕು ವರ್ಷಗಳ ಅವಧಿಯಲ್ಲಿ ಸರಕಾರ ಆಯವ್ಯಯ ಅಂದಾಜು ಪ್ರಕಾರ ವೆಚ್ಚ ಮಾಡಬೇಕಾದ ಮೊತ್ತದಲ್ಲಿ 5513.17 ಕೋಟಿ ಮೊತ್ತವನ್ನು ವೆಚ್ಚ ಮಾಡದೆ ಉಳಿಸಲಾಗಿದೆ. 92-93ರಿಂದ, 94-95ರ ವರೆಗಿನ ಮೂರು ವರ್ಷದ ಅವಧಿಯಲ್ಲಿ ನಿಗದಿತ ಆಯವ್ಯಯದ ವೆಚ್ಚದ ಅಂದಾಜು ಮೊತ್ತದಲ್ಲಿ, ಕೆಲವು ಇಲಾಖೆಗಳು ಅಂದಾಜು ಮೀರಿ ಸುಮಾರು 173.19 ಕೋಟಿ ಹೆಚ್ಚು ವೆಚ್ಚ ಮಾಡಿರುವಾಗ ಜನಪರ ಯೋಜನೆಗಳಿಗೆ ಹಿಂದಿನ ನಾಲ್ಕು ವರ್ಷಗಳ ಅವಧಿಯಲ್ಲಿ 5513.17 ಕೋಟಿ ಮೊತ್ತವನ್ನೇಕೆ ವೆಚ್ಚ ಮಾಡಿಲ್ಲ? ಕೃಷಿ ವಲಯ, ಪಶುಸಂಗೋಪನಾ ವಲಯ, ರೇಷ್ಮೆ ವಲಯ, ಸಹಕಾರಿ ನೂಲಿನ ವಲಯ, ವಸತಿ ವಲಯ, ನೀರಾವರಿ ವಲಯ, ಗ್ರಾಮಾಭಿವೃದ್ಧಿ ವಲಯ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗದ ವಲಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ವಲಯ, ತೋಟಗಾರಿಕೆ ವಲಯ, ಮೀನುಗಾರಿಕೆ ವಲಯ, ಹಿಂದುಳಿದ ಕ್ಷೇತ್ರಾಭಿವೃದ್ಧಿ ವಲಯ, ರಸ್ತೆ ಸೇತುವೆ ವಲಯ, ಸಕ್ಕರೆ ಉದ್ಯಮಗಳಿಗಾಗಿಯೇ ಆಯವ್ಯಯದಲ್ಲಿ ನಿಗದಿಪಡಿಸಿದ ಅಂದಾಜು ವೆಚ್ಚದಲ್ಲಿ, 92-93, 93-94, 94-95ರಲ್ಲಿ ವೆಚ್ಚ ಮಾಡದೆ ಉಳಿಸಲಾದ ಮೊತ್ತ 1304.06 ಕೋಟಿ. ಹೀಗೆ ವಿಶೇಷ ವರ್ಗಗಳಿಗಾಗಿ ಸಿಗಬೇಕಾಗಿದ್ದ ಸವಲತ್ತು ಅಭಿವೃದ್ಧಿಯನ್ನು ಅಧಿಕಾರಿಗಳು ಸಿಗದಂತೆ ಮಾಡಿ ಅವರನ್ನು ವಂಚಿಸುವಲ್ಲಿ ಮಾತ್ರ ಆಸಕ್ತಿ ವಹಿಸಿರುವುದು ಈ ಅಧಿಕಾರಿಗಳಿಗೆ ನಾಚಿಕೆ ಬರಬೇಕು ಹಾಗೂ ಅಧಿಕಾರಿಗಳ ಕರ್ತವ್ಯಚ್ಯುತಿಯ ಬಗ್ಗೆ ನಿಗಾವಹಿಸಿದ ಆಯಾ ಮಂತ್ರಿಗಳಿಗೆ ಸಹ ತೀರಾ ನಾಚಿಕೆ ಬರಬೇಕು. ಈ ರೀತಿ ಮುಂದುವರೆದ ಲೋಪದೋಷ ಕೂಡಿದರೆ ಈ ಬಗ್ಗೆ ಯಾರೂ ಹೇಳುವವರು ಕೇಳುವವರಿಲ್ಲ, ದಾದನ್ಯೆ ಫಿರಾಡನ್ಯೆ ಅನ್ನುವಂತಾಗಿದೆ.

ಬಜೆಟ್‌ನಲ್ಲಿ, ನಿಗದಿಗೊಳಿಸಿದ ವಾರ್ಷಿಕ ವೆಚ್ಚವನ್ನು ಆಯಾ ತಿಂಗಳಲ್ಲಿ ಅಥವಾ ತಪ್ಪಿದರೆ, ಆಯಾ ತ್ರೈಮಾಸಿಕದಲ್ಲಿ ವೆಚ್ಚ ಮಾಡಬೇಕೆಂದಿದ್ದರೂ ಅಧಿಕಾರಿಗಳು ವರ್ಷದ ಹನ್ನೊಂದು ತಿಂಗಳಲ್ಲಿ ವೆಚ್ಚ ಮಾಡದೆ ಜನತೆಗೆ ಪ್ರಯೋಜನ ಮಾಡಿಕೊಡದೆ ವರ್ಷದ ಕೊನೆಯ ತಿಂಗಳಾದ ಮಾರ್ಚ್ ತಿಂಗಳಲ್ಲಿ ಅದರಲ್ಲೂ, ಮಾರ್ಚ್ ತಿಂಗಳ ಕೊನೆಯ ವಾರ ಅಥವಾ ಮಾರ್ಚ್ 31ಕ್ಕೆ ವೆಚ್ಚ ತೋರಿಸಿದ ಉದಾಹರಣೆಗಳು ಸಾಕಷ್ಟು ಇವೆ. ಕೇಂದ್ರ ಸರಕಾರ ಗೊಬ್ಬರ ತರಿಸದೆ ಅಥವಾ ಪಡೆಯದೆ ಒಂದುನೂರಾಮೂವತ್ತು ಮೂರು ಕೋಟಿ ಖರ್ಚು ಹಾಕಿದ ಉದಾಹರಣೆ ಇದ್ದರೆ ನಮ್ಮ ರಾಜ್ಯದಲ್ಲಿ ಕಂಪ್ಯೂಟರ್ ಇಲ್ಲದೆ ಕೋಟ್ಯಂತರ ಹಣ ಖರ್ಚು ಹಾಕಿದ ಸಾಕಷ್ಟು ಉದಾಹರಣೆಗಳಿದ್ದು ಮಾರ್ಚ್ ತಿಂಗಳಲ್ಲಿಯ ವೆಚ್ಚ ಕೋಟ್ಯಂತರ ಹಣದ ದುರುಪಯೋಗ, ದುರ್ವಿನಿಯೋಗ, ಖೋಟಾ

ಬಿಲ್ಲುಗಳನ್ನಿಟ್ಟು, ಹಣ ಖರ್ಚು ಹಾಕಿ ಎತ್ತಿ ಹಾಕಿದ ಹಾಗೂ ಈ ಪ್ರಕರಣಗಳಲ್ಲಿ ಅನೇಕ ಅಧಿಕಾರಿಗಳು ಹಾಗೂ ಮಂತ್ರಿಗಳು ಮೀಲಾಫಿಯಾದ ಉದಾಹರಣೆಗಳು ಸಹ ರಾಜ್ಯಾದ್ಯಂತ ಹಾಗೂ ರಾಷ್ಟ್ರಾದ್ಯಂತ ಸಾಕಷ್ಟು ಇವೆ. 92-93ರಲ್ಲಿ ತಪಾಸಣೆ ಮಾಡಿದ ಹತ್ತು ಪ್ರಕರಣಗಳಲ್ಲಿ ವೆಚ್ಚ ಮಾಡಿದ 131.42 ಕೋಟಿ ಮೊತ್ತದಲ್ಲಿ ಮೊದಲು ಹನ್ನೊಂದು ತಿಂಗಳಲ್ಲಿ 87.17 ಕೋಟಿ ವೆಚ್ಚ ಮಾಡಿ ಮಾರ್ಚ್ ತಿಂಗಳಲ್ಲಿ 49.25 ಕೋಟಿ ವೆಚ್ಚ ಮಾಡಲಾಗಿದೆ. 93-94ರಲ್ಲಿ ತಪಾಸಣೆ ಮಾಡಿದ ಹತ್ತು ಪ್ರಕರಣಗಳಲ್ಲಿ ವೆಚ್ಚ ಮಾಡಿದ 113.41 ಕೋಟಿಯಲ್ಲಿ ಹನ್ನೊಂದು ತಿಂಗಳಲ್ಲಿ 70.38 ಕೋಟಿ ವೆಚ್ಚ ಮಾಡಿ ಮಾರ್ಚ್ ತಿಂಗಳಲ್ಲಿ 43.03 ಕೋಟಿ ವೆಚ್ಚ ಮಾಡಲಾಗಿದೆ. 94-95ರಲ್ಲಿ ತಪಾಸಣೆ ಮಾಡಿದ ಹನ್ನೊಂದು ಪ್ರಕರಣಗಳಿದ್ದು, ವೆಚ್ಚ ಮಾಡಿದ 340.33 ಕೋಟಿ ಮೊತ್ತದಲ್ಲಿ ಹನ್ನೊಂದು ತಿಂಗಳಲ್ಲಿ 201.68 ಕೋಟಿ ವೆಚ್ಚ ಮಾಡಿ ಮಾರ್ಚ್ ತಿಂಗಳಲ್ಲಿ 138.65 ಕೋಟಿ ವೆಚ್ಚ ಮಾಡಲಾಗಿದೆ. ಹೀಗೆ ವರ್ಷದಲ್ಲಿ ವೆಚ್ಚ ಮಾಡಿದ ಹಣದಲ್ಲಿ ಮಾರ್ಚ್ ತಿಂಗಳಲ್ಲಿ ಶೇಕಡಾ 51ರಿಂದ 100ರ ವರೆಗೆ ವೆಚ್ಚ ಮಾಡುತ್ತಾ ಬರಲಾಗುತ್ತಿದೆ. ಹೀಗಾಗದಂತೆ ವರ್ಷದ ಪ್ರತಿ ತಿಂಗಳೂ ಬಜೆಟ್ ಪ್ರಕಾರ ವೆಚ್ಚ ಮಾಡಲು ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ ಮತ್ತು ಸಿ.ಎ.ಜಿ. ವರದಿಗಳು ಸರಕಾರಕ್ಕೆ ಸೂಚನೆ ನೀಡಿದರೆ ಸರಕಾರ ಅದನ್ನು ಕಡೆಗಣಿಸಿ ಯಥಾ ಪ್ರಕಾರ ತನ್ನ ಹಣವನ್ನೇ ಮುಂದುವರೆಸುತ್ತಿರುವುದು ಸರಕಾರಕ್ಕೆ ನಾಚಿಕೆ ಬರಬೇಕು. ಇನ್ನಾದರೂ, ನೀತಿ-ನಿಯಮ, ಸಲಹೆ, ಸೂಚನೆಗಳನ್ನು ಸರಕಾರ ಪಾಲಿಸುವುದು ಅದರ ಕರ್ತವ್ಯವಾಗಬೇಕು. ಬಜೆಟ್‌ನಲ್ಲಿ ನಿಗದಿ ಮಾಡಿದ ಆಯವ್ಯಯ ಪ್ರಕಾರ ವಿವಿಧ ಇಲಾಖಾ ಅಭಿವೃದ್ಧಿಗೆ ವೆಚ್ಚ ಮಾಡಬೇಕಾದ ಹಣವನ್ನು ಸಂಪೂರ್ಣವಾಗಿ ವೆಚ್ಚ ಮಾಡಲು ಸಿ.ಎ.ಜಿ., ಎ.ಸಿ. ಸಾರ್ವಜನಿಕರು, ಶಾಸಕರು ಸರಕಾರಕ್ಕೆ ಸಲಹೆ, ಸೂಚನೆ ಕೊಟ್ಟರೂ ಸರಕಾರವೇ ಆದ ಅಧಿಕಾರಶಾಹಿಗಳು ಹಾಗೆ ಮಾಡದೆ ಪ್ರತಿವರ್ಷ ಸಹಸ್ರಾರು ಕೋಟಿ ಹಣವನ್ನು ವೆಚ್ಚ ಮಾಡದೆ ಸಿ.ಎ.ಜಿ. ಅಧಿಕೃತ ವರದಿ ಪ್ರಕಾರ 92-93ರಲ್ಲಿ 1057.57 ಕೋಟಿ, 93-94ರಲ್ಲಿ 1165.85 ಕೋಟಿ, 94-95ರಲ್ಲಿ 2076.83 ಕೋಟಿ ನಿವ್ವಳ ಮೊತ್ತವನ್ನು ವೆಚ್ಚಮಾಡದೆ ಉಳಿಸುವಲ್ಲಿ ಮಾರಕವಾದ ಪ್ರಗತಿಯನ್ನು ಸಾಧಿಸುತ್ತ ಹೊರಟಿರುವುದು ಹಾಗೂ ಇದನ್ನು ನಿಸ್ಸಾಹಯಕರಾಗಿ ಮಂತ್ರಿಶಾಹಿ ನೋಡುತ್ತಿರುವುದನ್ನು ನೋಡಿದರೆ ಇಂದು ಪ್ರಜೆಗಳು ಪ್ರಜಾಶಾಹಿಯ ಹಿಡಿತದಲ್ಲಿದ್ದೇವೆಯೋ ಅಥವಾ ಅಧಿಕಾರಶಾಹಿಗಳ ಹಿಡಿತದಲ್ಲಿದ್ದೇವೆಯೋ ಅನ್ನುವುದನ್ನು ಬುದ್ಧಿಜೀವಿಗಳೇ ಹೇಳಬೇಕು.

❑

ಶಾಸಕಾಂಗ-ಕಾರ್ಯಾಂಗ-ನ್ಯಾಯಾಂಗ-ಪತ್ರಿಕಾಂಗಗಳ ಪಾವಿತ್ರ್ಯ ಪರಂಪರೆ

ಮನುಷ್ಯನು ಸುಖಿಯಾಗಿ ಸಂಪತ್ಭರಿತನಾಗಿ ಮುನ್ನಡೆಯಬೇಕಾಗಿದ್ದರೆ ಅಂಗ-ಅಂಗಾಗಳೆಲ್ಲವೂ ಆರೋಗ್ಯಕರವಾಗಿದ್ದು ರೋಗಪೀಡಿತವಾಗಬಾರದು. ಅಂತೆಯೇ ಈ ರಾಷ್ಟ್ರದಲ್ಲಿ ಪ್ರಜಾಪ್ರಭುತ್ವ, ಪ್ರಜಾರಾಜ್ಯ ಸರಿಯಾಗಿ, ಯಶಸ್ವಿಯಾಗಿ ನಡೆದು ಜನತೆಯ ಸುಖ, ಶಾಂತಿ, ನೆಮ್ಮದಿಯಿಂದಿದ್ದು ಸಂಪತ್ಭರಿತ ರಾಷ್ಟ್ರವಾಗಿ ಸಮರ್ಥ ಹಾಗೂ ಸುಭದ್ರವಾಗಿ, ಯಶಸ್ವಿಯಾಗಿ ಮುಂದುವರೆಯಬೇಕಾಗಿದ್ದರೆ ನಮ್ಮ ರಾಷ್ಟ್ರದ ಸಂವಿಧಾನಬದ್ಧವಾದ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗಗಳು ಪ್ರಾಮಾಣಿಕವಾಗಿ, ಪರಿಣಾಮಕಾರಿಯಾಗಿ ನಡೆದರೆ ಮಾತ್ರ ಸಾಧ್ಯ. ಈ ಮೂರು ಅಂಗಗಳು ಆರೋಗ್ಯಕರವಾಗಿ ಕಾರ್ಯನಿರ್ವಹಿಸಬೇಕಾದರೆ ಪ್ರಜಾಸತ್ತೆಯ ಧ್ವನಿಯಾದ ಪತ್ರಿಕಾಂಗವು ಈ ಅಂಗಗಳ ಲೋಪದೋಷ, ರೋಗರುಜಿನಗಳನ್ನು ಎತ್ತಿ ತೋರಿಸಿ ಅವುಗಳ ನಿವಾರಣೆಗೆ ಸೂಕ್ತವಾದ ಸಲಹೆ-ಸೂಚನೆ, ಟೀಕೆ-ಟಿಪ್ಪಣಿಗಳನ್ನು ಹಾಗೂ ಪ್ರಜೆಗಳ ಬೇಕು-ಬೇಡಗಳನ್ನು, ತೊಂದರೆ-ತಗಾದೆಗಳನ್ನು, ಆಶೋತ್ತರಗಳನ್ನು ಆಯಾ ಅಂಗಗಳ ನಜರಿಗೆ ಬರುವಂತೆ ಆಗಾಗ್ಗೆ ಪ್ರಕಟಿಸಬೇಕು. ಅಂದರೆ ಮಾತ್ರ ಎಲ್ಲವೂ ಸುರಕ್ಷಿತ ಹಾಗೂ ಸುರಳೀಕೃತ.

ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೇ ಈ ರಾಷ್ಟ್ರದ ಮಾಲೀಕರು, ಚಕ್ರವರ್ತಿಗಳು, ರಾಜಾಧಿರಾಜರು, ಅವರಿಗಾಗಿ ಅವರಿಂದ ಅವರೇ ಈ ರಾಷ್ಟ್ರವನ್ನು, ರಾಜ್ಯವನ್ನು ಆಳಬೇಕಾಗುತ್ತದೆ. ಅಂದು 'ರಾಜಾ ಪ್ರತ್ಯಕ್ಷ ದೇವತ' ನಾಗಿದ್ದರೆ ಇಂದು ಪ್ರಜಾ ಪ್ರತ್ಯಕ್ಷ ದೇವತಾ, ಪ್ರಜೆಗಳ ಪ್ರತಿರೂಪವೇ ಆಗಿರುವ ಶಾಸಕಾಂಗವೇ ಇಂದು ಪ್ರತ್ಯಕ್ಷ ದೇವತಾ. ಈ ರಾಷ್ಟ್ರವನ್ನು ಕಾಯುವುದು, ಕೊಲ್ಲುವುದು, ಉಳಿಸುವುದು, ಬೆಳೆಸುವುದೆಲ್ಲವೂ ಶಾಸಕಾಂಗದ ಕೈಯಲ್ಲಿದೆ. ನಮ್ಮ ರಾಷ್ಟ್ರದ ಶಾಸಕಾಂಗ, ರಾಜ್ಯದ ಶಾಸಕಾಂಗವೇ ಇರಬಹುದು ಅಥವಾ ರಾಷ್ಟ್ರದ ಶಾಸಕಾಂಗ (ಸಂಸತ್ತು) ಇರಬಹುದು, ಆ ಶಾಸಕಾಂಗದ ಜವಾಬ್ದಾರಿ ಅತಿ ಹೆಚ್ಚಿನದು. ಶಾಸಕಾಂಗ ಈ ರಾಷ್ಟ್ರದ, ರಾಜ್ಯದ ಜನತೆಯ ಸಂವಿಧಾನ

ಸೌಧ. ಶಾಸಕಾಂಗ ಅಥವಾ ಸಂಸತ್ತಿನ ಪೀಠ ಪರಮೋಚ್ಛವಾದದ್ದು. ಸಂಸತ್ತಿನಲ್ಲಿ ಸಂವಿಧಾನದ ಹಿರಿಯ ರಾಷ್ಟ್ರಪತಿ, ಉಪರಾಷ್ಟ್ರಪತಿಗಳ ನಂತರದದ ಸ್ಥಾನ ಸಭಾಧ್ಯಕ್ಷ-ಉಪಸಭಾಧ್ಯಕ್ಷ, ಪ್ರಧಾನಮಂತ್ರಿ, ಸಭಾನಾಯಕ, ವಿಪಕ್ಷನಾಯಕ ಹಾಗೂ ಸದಸ್ಯರು. ಅಂತೆಯೇ ಶಾಸಕಾಂಗಗಳಲ್ಲಿ ಸಂವಿಧಾನದ ಹಿರಿಯ ರಾಜ್ಯಪಾಲರ ನಂತರ, ಸಭಾಧ್ಯಕ್ಷ. ಉಪಸಭಾಧ್ಯಕ್ಷ, ಮುಖ್ಯಮಂತ್ರಿ, ಸಭಾನಾಯಕ, ವಿಪಕ್ಷ ನಾಯಕ ಹಾಗೂ ಸದಸ್ಯರು, ಸಂಸತ್ತು ಹಾಗೂ ಶಾಸನ ಸಭೆಯಲ್ಲಿಯ ಒಂದು ಬಹುದೊಡ್ಡ ಸಂಖ್ಯೆಯ ರಾಜಕೀಯ ಪಕ್ಷ ಅಥವಾ ಪಕ್ಷಗಳು ತಮ್ಮ ನಾಯಕನನ್ನಾಗಿ ಯಾರಾದರೊಬ್ಬರನ್ನು ಆರಿಸಿಕೊಂಡ ನಂತರ ಅವರೇ ಈ ರಾಷ್ಟ್ರದ ಪ್ರಧಾನಮಂತ್ರಿಯಾಗಿ, ರಾಜ್ಯದ ಮುಖ್ಯಮಂತ್ರಿಯಾಗಿ ಮಂತ್ರಿಮಂಡಳವನ್ನು ರಚಿಸಿಕೊಂಡು ಕಾರ್ಯನಿರ್ವಹಿಸಬೇಕಾಗುತ್ತದೆ ಹಾಗೂ ಆಡಳಿತ ಚುಕ್ಕಾಣಿಯನ್ನು ಹಿಡಿಯಬೇಕಾಗುತ್ತದೆ. ಈಶ್ವರನ ಅಥವಾ ಸತ್ಯನಿಷ್ಠೆಯ ಹೆಸರಿನಲ್ಲಿ ರಾಗದ್ವೇಷ, ಅಸೂಯೆಯಿಂದ ದೂರವಿದ್ದು ಪ್ರಾಮಾಣಿಕನಾಗಿ ಕೆಲಸ ಮಾಡುವ ಬಗ್ಗೆ ಅಧಿಕಾರ ಪ್ರಮಾಣ ಸ್ವೀಕಾರ ಮಾಡಬೇಕಾಗುತ್ತದೆ. ಶಾಸಕಾಂಗದ ಒಂದು ಪ್ರಮುಖ ಭಾಗವೇ ಸರಕಾರವಾಗಿರುವುದರಿಂದ ಸರಕಾರವನ್ನು ಅಥವಾ ಮಂತ್ರಿಗಳನ್ನು ಹದ್ದುಬಸ್ತಿನಲ್ಲಿಟ್ಟು ದಾರಿತಪ್ಪದಂತೆ, ಪ್ರಾಮಾಣಿಕವಾಗಿ, ಪಕ್ಷಪಾತವಿಲ್ಲದೆ ಸ್ವಜನ ಪಕ್ಷಪಾತವಿಲ್ಲದೆ, ಅಧಿಕಾರ ದುರುಪಯೋಗ ಮಾಡದಂತೆ, ದುರಾಡಳಿತ ಮಾಡದಂತೆ ಸರಕಾರ ನಡೆಸುವುದು ಮಂತ್ರಿಮಂಡಳದ ಕರ್ತವ್ಯ. ಈ ಕರ್ತವ್ಯದಲ್ಲಿ ವಿಫಲವಾದಾಗ ಶಾಸಕಾಂಗ ಮಂತ್ರಿಮಂಡಳ ಅಥವಾ ಸರಕಾರಕ್ಕೆ ತಕ್ಕ ಪಾಠ ಕಲಿಸುವುದು ಅನಿವಾರ್ಯ ಅಗತ್ಯ. ಲೋಕಸಭೆ ಅಥವಾ ವಿಧಾನಸಭೆ ಅಧ್ಯಕ್ಷರು ಸರ್ವಾನುಮತದಿಂದ ಅಥವಾ ಬಹುಮತದಿಂದ ಅಸ್ತಿತ್ವಕ್ಕೆ ಬಂದ ತಕ್ಷಣ ತಾವು ಯಾವುದೇ ರಾಜಕೀಯ ಪಕ್ಷದ ಸದಸ್ಯರಾಗಿರಲಿ ಅವರು ಆ ಸ್ಥಾನಕ್ಕೆ ಹಾಗೂ ಅವರು ಹೊಂದಿದ ಯಾವುದೇ ಸಂವಿಧಾನ, ಅಧಿನಿಯಮಬದ್ಧವಾದ ಸಂಘ-ಸಂಸ್ಥೆ, ಘಟಕಗಳ ಪದಾಧಿಕಾರಿಗಳ ಹುದ್ದೆಗೆ ರಾಜೀನಾಮೆ ಕೊಡುವುದು ಸೂಕ್ತ ಹಾಗೂ ಸತ್‌ಸಂಪ್ರದಾಯಬದ್ಧವಾದುದು. ಇದಕ್ಕೆ ಅಪರಾಧವಾಗಿ ನಡೆದುಕೊಂಡವರು ಈ ರಾಷ್ಟ್ರದಲ್ಲಿ ಅನೇಕರು ಇದ್ದಾರೆ. ಶಾಸಕಾಂಗದ ಸದಸ್ಯರು ಶಾಸಕಾಂಗದ ಘನತೆ, ಗೌರವ, ಹಿರಿಮೆ, ಮಹಿಮೆಗೆ ತಕ್ಕಂತೆ ನಡೆದುಕೊಳ್ಳಬೇಕೇ ಹೊರತು ವಿವೇಕರಹಿತರಾಗಿ ಸ್ಥಾನಾಭಿಮಾನಹೀನರಾಗಿ ನಡೆದುಕೊಳ್ಳುವುದು ಸರಿಯಲ್ಲ. ವ್ಯತಿರಿಕ್ತವಾಗಿ ನಡೆದುಕೊಂಡು ಸಂಸತ್ತು, ಶಾಸಕಾಂಗಕ್ಕೆ ಅಗೌರವ ತರುವವರೂ ಅನೇಕರು ಇದ್ದಾರೆ. ಅದು ಸರಿಯಲ್ಲ. ಶಾಸಕರು, ಸಂಸದರು ಸರ್ವಜ್ಞರಾಗಿರಬೇಕಾದುದು, ಜನತೆಯ ಭಾವನೆಗಳ ಪ್ರತೀಕವಾಗಬೇಕಾಗಿರುವುದು, ಶಾಸನಸಭೆ ಸಂಸತ್ತಿನಲ್ಲಿ ಒಳಗೆ ಹೊರಗೆ ಸಕ್ರಿಯರಾಗಿ, ಕ್ರಿಯಾಶೀಲರಾಗಿ ಪರಿಪೂರ್ಣರಾಗಿ ಜನತೆಯ ಧ್ವನಿಯಾಗಿ ಕಾರ್ಯ ನಿರ್ವಹಿಸಬೇಕಾಗುದುದು ಅಗತ್ಯ.

ಈ ರಾಷ್ಟ್ರ ಹಾಗೂ ರಾಜ್ಯಗಳಲ್ಲಿ ಜನತೆಯ ಆಶೋತ್ತರಗಳನ್ನು ಅರಿತು ಅವುಗಳನ್ನು ಈಡೇರಿಸುವುದಕ್ಕಾಗಿ, ಶಾಂತಿ, ಸುವ್ಯವಸ್ಥೆ, ಕಾನೂನು ಪರಿಪಾಲನೆ ಮಾಡುವುದಕ್ಕಾಗಿ,

ಸುಭದ್ರ, ಸಮರ್ಥ ಹಾಗೂ ಆರ್ಥಿಕ ಭದ್ರತೆಯ ಆಡಳಿತ ನಡೆಸುವುದಕ್ಕಾಗಿ, ಅವಶ್ಯ ಕಾನೂನುಗಳನ್ನು ರಚಿಸುವುದಾಗಲೀ, ಇದ್ದ ಕಾನೂನುಗಳ ಸಮರ್ಥ ಕಾರ್ಯಾಚರಣೆ ಮಾಡುವುದಾಗಲೀ, ಆರ್ಥಿಕ ಪ್ರಗತಿಗೆ ಅಗತ್ಯವಾದ ಯೋಜನೆಗಳನ್ನು ರೂಢಿಸಿಕೊಂಡು ಆ ಯೋಜನೆಗಳನ್ನು ಕಾರ್ಯಗತ ಮಾಡುವುದಾಗಲೀ, ಈ ಯೋಜನೆಗಳನ್ನು ಯಶಸ್ವಿಯಾಗಿ, ಪರಿಪೂರ್ಣವಾಗಿ ಪೂರ್ಣಗೊಳಿಸಲು ಆರ್ಥಿಕ ಸಂಪನ್ಮೂಲಗಳನ್ನು ರೂಢಿಸಿಕೊಂಡು ಆದಾಯ ಪಡೆದು ಕಾರ್ಯಪ್ರವೃತ್ತರಾಗುವುದಾಗಲೀ, ಪ್ರಾಮಾಣಿಕವಾಗಿ ಪಕ್ಷಪಾತ, ಸ್ವಜನ ಪಕ್ಷಪಾತ ರಹಿತವಾಗಿ, ಅಧಿಕಾರ ದುರುಪಯೋಗ, ದುರಾಡಳಿತ ರಹಿತರಾಗಿ, ಸ್ವಾರ್ಥಿಗಳಾಗದೆ, 'ಸರ್ವೇಜನಾಃ ಸುಖಿನೋಭ' ವಂತು ಎಂದು ಕೆಲಸ ಮಾಡಿ ರಾಷ್ಟ್ರದ, ರಾಜ್ಯದ ಸರ್ವಾಂಗೀಣ ಪ್ರಗತಿ ಸಾಧಿಸುವ ಮಹೋದ್ದೇಶವೇ ಸರಕಾರದ್ದು ಎಂಬುದನ್ನು ಸರಕಾರ ಅರಿತು ಮುನ್ನಡೆಯುವುದು ಸರಕಾರಗಳ ಆದ್ಯ ಹಾಗೂ ಅಗತ್ಯ ಕರ್ತವ್ಯ. ಇದಕ್ಕೆ ತಪ್ಪಿದಲ್ಲಿ ಶಾಸಕಾಂಗ ಅಥವಾ ಪ್ರಜಾಪ್ರಭುಗಳು ತಕ್ಕ ಪಾಠವನ್ನು ಕಾರ್ಯಾಂಗ ಸರಕಾರಕ್ಕೆ ಕಲಿಸುವುದು ಅನಿವಾರ್ಯ.

ನಮ್ಮ ದೇಶದಲ್ಲಿ ಕಾರ್ಯಾಂಗ ಸಾರ್ವಜನಿಕರಿಂದ ಉಗ್ರ ಟೀಕೆಗೆ ಗುರಿಯಾದಷ್ಟು ನ್ಯಾಯಾಂಗ ಗುರಿಯಾಗಿಲ್ಲ. ಕಾರ್ಯಾಂಗಗಳಲ್ಲಿ ಜೇಲಿಗೆ ಹೋಗುವಂತಹ ಹಾಗೂ ಮಹಾಪರಾಧಗಳನ್ನು ಮಾಡಿದ ಅನೇಕರು ಅತ್ಯುನ್ನತ ಅಧಿಕಾರಗಳಲ್ಲಿದ್ದಾರೆ. ಹೇರಳವಾದ ಹಣ, ಹೊನ್ನು, ಮಣ್ಣನ್ನು ಗಳಿಸಿದರೂ ಅವರು ಯಾವುದೇ ಬಲೆಯಲ್ಲಿ ಸಿಕ್ಕದೆ, ಸಿಕ್ಕರೆ ಹೇಗಾದರೂ ಮಾಡಿ ಪಾರಾಗಿ ಸುಖಜೀವನ ಸಾಗಿಸುತ್ತಿದ್ದಾರೆ. ಕಾರ್ಯಾಂಗ ಅಂತಹ ತಪ್ಪಿತಸ್ಥರನ್ನು ಕೋರ್ಟಿಗೆ ಹೋಗುವಂತೆ ಮಾಡದೆ, ಕೋರ್ಟಿಗೆ ಒಂದು ವೇಳೆ ಹೋಗು ವಂತೆ ಮಾಡಿದರೆ ಸಾಕ್ಷಿ, ಪುರಾವೆಗಳನ್ನು ಸರಿಯಾಗಿ ಕೋರ್ಟಿಗೆ ಒದಗಿಸದೆ ಲೋಪದೋಷಗಳನ್ನುಂಟುಮಾಡಿ ಸಂಶಯದ ಲಾಭವನ್ನು ಕೋರ್ಟುಗಳಲ್ಲಿ ಅವರಿಗೆ ಸಿಗುವಂತೆ ಮಾಡಲು ಕಾರಣರಾಗುತ್ತಾರೆ. ನ್ಯಾಯಾಂಗವು ನಮ್ಮ ರಾಷ್ಟ್ರದಲ್ಲಿ ಯಾರದೇ ಬಿಡೆ, ಮುರವತ್ತು, ವಶೀಲಿ, ಅನುಚಿತ ಹಸ್ತಕ್ಷೇಪಕ್ಕೆ ಮಣಿಯದೆ ತನ್ನ ಮುಂದಿರುವ ಸಾಕ್ಷ್ಯಾಧಾರಗಳ ಮೇಲೆ ಸೂಕ್ತ ಹಾಗೂ ನಿಷ್ಪಕ್ಷಪಾತವಾದ ನಿರ್ಧಾರ ವ ತೀರ್ಪುಗಳನ್ನು ನೀಡುತ್ತಿರುವುದು ನಮ್ಮ ರಾಷ್ಟ್ರದಲ್ಲಿ ಅಷ್ಟೇ ಅಲ್ಲದೆ ಪರರಾಷ್ಟ್ರದಲ್ಲಿ ಕೂಡ ಭಾರತದ ನ್ಯಾಯಾಂಗ ಮೆಚ್ಚುಗೆ ಪಡೆಯುತ್ತಿರುವುದು ಸುದೈವ. ಅರಾಜಕತೆ, ಆರ್ಥಿಕ ಅಭದ್ರತೆ, ಈ ರಾಷ್ಟ್ರದಲ್ಲಿ ಹೆಚ್ಚಾಗಲು ಕಾರಣವಾಗಿರುವ ಈ ರಾಷ್ಟ್ರದ ಕಾರ್ಯಾಂಗಗಳು ನ್ಯಾಯಾಂಗದಲ್ಲಿ ಸಹ ಅಭದ್ರತೆಯನ್ನುಂಟು ಮಾಡಲು ಕಾರ್ಯಾಂಗದಲ್ಲಿ ಅಧಿಕಾರಿಗಳು ಕಾರ್ಯಾಂಗದ ತಾಳಕ್ಕೆ ತಕ್ಕಂತೆ ಕುಣಿಯುತ್ತ ನ್ಯಾಯವಲ್ಲದ ಕಾರ್ಯ ಮಾಡುವ ಹಾಗೆಯೇ ನ್ಯಾಯಾಂಗದ ಅಧಿಕಾರಿಗಳೂ ಸಹ ಕಾರ್ಯಾಂಗದ ಗುಲಾಮರಾಗಿ ಕೆಲಸ ಮಾಡಬೇಕೆಂಬ ದುರುದ್ದೇಶದಿಂದ ನ್ಯಾಯಾಧೀಶರನ್ನು ನೇಮಿಸುವ ಅಧಿಕಾರ ಸುಪ್ರೀಮ್ ಕೋರ್ಟಿಗೆ ಇದ್ದುನ್ನು ಕಸಿದು, ತಾನೇ ಮಾಡಬೇಕೆಂಬ ಕಾರ್ಯಾಂಗದ ದುರಾಸೆಗೆ ಶಾಸಕಾಂಗ ಹಾಗೂ ಸಾರ್ವಜನಿಕರು ತಡೆಯನ್ನು ಮಾಡುವುದು ಈಗ ಅನಿವಾರ್ಯ. ಇದಕ್ಕೆ ತಪ್ಪಿದರೆ

ಅಧಿಕಾರಾರೂಢ ರಾಜಕೀಯ ಮುಖಂಡರು ಹಾಗೂ ಅವರ ಹಿಂಬಾಲಿಗರು, ನಿರಪರಾಧಿಗಳು ಅಪರಾಧಿಗಳು ಆಗಬಹುದಾದ ದುರಂತವನ್ನು ಪ್ರಜಾಸತ್ತೆ ಕಾಣಬೇಕಾದೀತು.

ಪ್ರಜಾಸಮೂಹಕ್ಕೆ ಪತ್ರಿಕೆಗಳು ನ್ಯಾಯವಾದಿಗಳಿದ್ದಂತೆ, ಪ್ರಜೆಗಳಿಗೆ ಆಗುವ ಅನ್ಯಾಯ, ಬೇಕು-ಬೇಡಗಳನ್ನು, ಸಿಗಬೇಕಾದ ನ್ಯಾಯವನ್ನು, ಪ್ರಜೆಗಳ ಅನಿಸಿಕೆಗಳನ್ನು ಪತ್ರಿಕೆಗಳ ಮುಖಾಂತರ ಪ್ರಕಟಿಸಿ ಅವುಗಳಿಗೆ ನಿವಾರಣೆ ದೊರಕುವಲ್ಲಿ ಪತ್ರಿಕೆಗಳು ಸತತವಾಗಿ ಹೋರಾಡುತ್ತಿವೆ. ಸರಕಾರಕ್ಕೆ, ಸಾರ್ವಜನಿಕರಿಗೆ, ಶಾಸಕಾಂಗಕ್ಕೆ, ಕಾರ್ಯಾಂಗಕ್ಕೆ ಹಾಗೂ ನ್ಯಾಯಾಂಗಕ್ಕೆ ಅವುಗಳು ಸಮರ್ಥ ರೀತಿಯ ಕಾರ್ಯ ಮಾಡಲು ಅವಶ್ಯಕ ಸಲಹೆ, ಸೂಚನೆ, ಮಾರ್ಗದರ್ಶನ, ಟೀಕೆ, ಟಿಪ್ಪಣಿಗಳನ್ನು ಮಾಡಿ ಎಚ್ಚರಿಕೆಯ ಗಂಟೆಯಾಗಿ ಸಾಮಾಜಿಕ, ರಾಜಕೀಯ ಹಾಗೂ ಧಾರ್ಮಿಕ ರೋಗಗಳಿಗೆ ದಿವ್ಯ ಔಷಧಿಯಾಗಿ ಪ್ರಜಾಪ್ರಭುತ್ವ ಸರಿಯಾದ ಮಾರ್ಗದಲ್ಲಿ ದಾರಿತಪ್ಪದೆ ಹೋಗಲು ದಾರಿದೀಪವಾಗಿ ಧಾವಿಸುತ್ತಿರುವುದು ಪ್ರಜಾಸತ್ತೆಯ ಸುದೈವವಾಗಿ ಈ ರಾಷ್ಟ್ರದ ಪ್ರಜೆಗಳ ಹಾಗೂ ಪರರಾಷ್ಟ್ರದ ಪ್ರಜೆಗಳ ಪ್ರೀತಿಗೆ ಅರ್ಹರಾಗಿರುವುದು ಭಾರತದ ಪತ್ರಿಕಾಂಗದ ಹಿರಿಮೆ ಅಭಿನಂದನಾರ್ಹ. ಈ ಹಿನ್ನೆಯಲ್ಲಿ ಭಾರತದ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಹಾಗೂ ಪತ್ರಿಕಾಂಗ ಪ್ರಗತಿಪಥದಲ್ಲಿ ಸಾಗಿ ಪ್ರಜಾಸತ್ತೆಯ ಉಳಿವಿಗಾಗಿ ಸೂಕ್ತ ಕಾರ್ಯ ನಿರ್ವಹಿಸುವುದು ಅಗತ್ಯ.

❑

ಸಾಮಾನ್ಯ, ಸಾಮಾಜಿಕ, ಆರ್ಥಿಕ ಸೇವೆಗಳ ಬಂಡವಾಳ ವೆಚ್ಚ

ರಾಜ್ಯದ ಆಡಳಿತ, ಅಭಿವೃದ್ಧಿ, ಪ್ರಗತಿ, ಸಾಮಾನ್ಯ ಸೇವೆ, ಸಾಮಾಜಿಕ ಸೇವೆ, ಆರ್ಥಿಕ ಸೇವೆ ಹಾಗೂ ಸ್ಥಳೀಯ ಸಂಸ್ಥೆ, ಪಂಚಾಯತ್ ರಾಜ್ ಸಂಸ್ಥೆಗಳ ಸೇವೆಗಳಿಗೆ ವೆಚ್ಚ ಮಾಡುವ ಹಣದ ಪ್ರಮಾಣವನ್ನು ಅವಲಂಬಿಸಿದೆ. ಈ ಯೋಜನಾ ಸೇವೆಗಳು ಪ್ರತಿವರ್ಷ ಸಮರ್ಪಕವಾಗಿ ಅನುಷ್ಠಾನಗೊಳ್ಳಬೇಕು ಹಾಗೂ ಅವುಗಳ ಪ್ರಯೋಜನ ರಾಜ್ಯದ ಜನತೆಗೆ ತಲುಪಬೇಕು. ಈ ಯೋಜನಾ ಸೇವೆಗಳು ತೃಪ್ತಿಕರವಾಗಿ ಕಾರ್ಯಗತ ವಾಗಬೇಕಾದರೆ ಈ ಸೇವೆಗಳಿಗೆ ಪ್ರತಿವರ್ಷ ನಿಗದಿಗೊಳಿಸುತ್ತಿರುವ ಮೊತ್ತ ಸಂಪೂರ್ಣ ವಾಗಿ ವೆಚ್ಚವಾಗಲೇಬೇಕು ಹಾಗೂ ಪ್ರತಿವರ್ಷ ಬೆಲೆ ಏರಿಕೆ ಹೆಚ್ಚುತ್ತಲೇ ಇರುವುದರಿಂದ ವೆಚ್ಚ ಕೂಡ ಪ್ರತಿವರ್ಷ ಏರಲೇಬೇಕು. ಈ ಏರಿಕೆಯು ಹಣವನ್ನು ವೆಚ್ಚ ಮಾಡುವುದಕ್ಕಾಗಿಯೇ ಪ್ರತಿವರ್ಷ ಜನತೆಯಿಂದ ವಿವಿಧ ಕರ, ಕಂದಾಯಗಳನ್ನು ವಸೂಲು ಮಾಡುವ ಬಗ್ಗೆ ಹೆಚ್ಚಿನ ಆದಾಯ ಹಣವನ್ನು ನಿಗದಿಪಡಿಸಿ ಹೆಚ್ಚಿನ ಹಣವನ್ನು ಆದಾಯವಾಗಿ ಸರಕಾರ ಪಡೆಯುತ್ತಲೇ ಇದೆ.

ಪ್ರತಿವರ್ಷ ಜನತೆ ಸರಕಾರಕ್ಕೆ ಹೆಚ್ಚು ಹೆಚ್ಚಾಗಿ ಕರ ಕಂದಾಯ ಸಲ್ಲಿಸುತ್ತಿದ್ದರೂ ಜನತೆಯ ಕಲ್ಯಾಣ ಹಾಗೂ ಪ್ರಗತಿ ಕಾರ್ಯಕ್ರಮಗಳಾದ ಸಾಮಾನ್ಯ, ಸಾಮಾಜಿಕ, ಆರ್ಥಿಕ ಹಾಗೂ ಸ್ಥಳೀಯ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳ ಸೇವೆಗಳಿಗೆ ಕಡಿಮೆ ವೆಚ್ಚ ಮಾಡುತ್ತಾ ಕಡಿಮೆ ಹಣವನ್ನು ಆಯ-ವ್ಯಯದಲ್ಲಿ ನಿಗದಿ ಮಾಡುತ್ತಾ, ನಿಗದಿ ಮಾಡಿದ ಅಲ್ಪ ಹಣವನ್ನು ಸಹ ಸಂಪೂರ್ಣವಾಗಿ ವೆಚ್ಚ ಮಾಡದೇ ರಾಜ್ಯದ ಎಲ್ಲಾ ವಿವಿಧ ಕಾರ್ಯಕ್ರಮಗಳನ್ನು ಕುಂಠಿತಗೊಳಿಸುವುದು ಸರಕಾರಕ್ಕೆ ಸಾಧುವಾದುದಲ್ಲ. ರಾಜ್ಯ ಸರಕಾರದ ಪ್ರತಿ ವರ್ಷದ ಬಜೆಟ್ ರಾಜ್ಯದ ಜನತೆಗೆ ಭಾರೀ ವಂಚನೆ ಮಾಡುತ್ತಿರುವುದು ಅಧಿಕೃತ ಅಂಕಿ-ಸಂಖ್ಯೆಗಳಿಂದ ಸುಸ್ಪಷ್ಟವಿದೆ.

ರಾಜ್ಯದ ಪ್ರಗತಿಗೆ ತಾರಕ ಹಾಗೂ ಪೂರಕವಾಗಿರುವ ಈ ನಾಲ್ಕು ಪ್ರಮುಖ ಸೇವೆಗಳಿಗೆ 1995-96ರ ಅವಧಿಗಾಗಿ ನಿಗದಿಪಡಿಸಿದ 9093.64 ಕೋಟಿ ಅಂದಾಜಿನಲ್ಲಿ

ಪರಿಷ್ಕೃತ ಅಂದಾಜನ್ನು 8767.64 ಕೋಟಿಗೆ ಇಳಿಸಿ ಇದರಲ್ಲಿ 8481.19 ಕೋಟಿಯನ್ನು ವಾಸ್ತವಿಕವಾಗಿ ವೆಚ್ಚ ಮಾಡಿ 612.46 ಕೋಟಿ ಮೊತ್ತವನ್ನು ವೆಚ್ಚ ಮಾಡದೇ ಉಳಿಸಲಾಗಿದೆ. ಹೀಗೆ ಪ್ರತಿವರ್ಷ ಮಾಡುತ್ತಾ ಹೋದರೆ ರಾಜ್ಯದ ಪ್ರಗತಿ ಹೇಗಾಗಬೇಕು? ಪ್ರತಿವರ್ಷ ಬಜೆಟ್‌ನಲ್ಲಿ ಹೆಚ್ಚಿನ ಮೊತ್ತ ತೋರಿಸಿ ಜನತೆಗೆ, ಶಾಸಕಾಂಗಕ್ಕೆ ವಂಚಿಸುವುದು, ಒಂದು ವರ್ಷವಾದ ಕೂಡಲೇ ಮತ್ತೆ ಆ ಮೊತ್ತವನ್ನು ಪರಿಷ್ಕೃತಗೊಳಿಸಿ ಕಡಿಮೆ ಮಾಡುವುದು, ಮತ್ತೆ ಎರಡು ವರ್ಷ ಮುಗಿದ ವೇಳೆಗೆ ವಾಸ್ತವಿಕವಾಗಿ ಭಾರೀ ಕಡಿಮೆ ಮೊತ್ತದ ವಾಸ್ತವಿಕ ವೆಚ್ಚವನ್ನು ತೋರಿಸುವುದನ್ನು ನೋಡಿದರೆ ಚಾಣಾಕ್ಷ ಹಾಗೂ ಬೇಜವಾಬ್ದಾರಿ ಆರ್ಥಿಕ ಅಧಿಕಾರಿಗಳು ವ್ಯವಹಾರಿಕ ಜ್ಞಾನವಿಲ್ಲದ ಶಾಸಕಾಂಗ, ಶಾಸಕರು ಹಾಗೂ ಜನತೆಯೆಂದು ಬಹುಮಟ್ಟಿಗೆ ತಿಳಿದಿರುವುದು ಪ್ರಜಾಪ್ರಭುತ್ವದ ದುರಂತವೆನ್ನದೇ ಗತ್ಯಂತರವಿಲ್ಲ.

ಸಾಮಾನ್ಯ ಸೇವೆಗಳಿಗೆ ಸಂಬಂಧಿಸಿದ ಲೋಕೋಪಯೋಗಿ ಕಾಮಗಾರಿಗಳ ಮೇಲಣ ಬಂಡವಾಳ ವೆಚ್ಚಕ್ಕೆ, ಸಾಮಾಜಿಕ ಸೇವೆಗಳಿಗೆ ಸಂಬಂಧಿಸಿದ ನಗರಾಭಿವೃದ್ಧಿ, ಹರಿಜನ, ಗಿರಿಜನ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಮೊದಲಾದುವುಗಳ ಮೇಲಣ ಬಂಡವಾಳ ವೆಚ್ಚಕ್ಕೆ, ಆರ್ಥಿಕ ಸೇವೆಗಳಿಗೆ ಸಂಬಂಧಿಸಿದ ಸಸ್ಯ ಸಂಗೋಪನೆ, ಪಶುಸಂಗೋಪನೆ, ಕೃಷಿ ಸಂಸ್ಥೆಗಳು, ಸಹಕಾರ, ಇತರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ, ಭಾರೀ ಮಧ್ಯಮ ಮತ್ತು ಸಣ್ಣ ನೀರಾವರಿ, ಪ್ರವಾಹ ನಿಯಂತ್ರಣ ಯೋಜನೆ, ಇಂಜಿನಿಯರಿಂಗ್ ಉದ್ಯಮ, ಇಲೆಕ್ಟ್ರಾನಿಕ್ ಉದ್ಯಮ, ಬಳಕೆದಾರರ ಸರಕಿನ ಉದ್ಯಮ, ಖನಿಜ ಮತ್ತು ಇತರೆ ಕೈಗಾರಿಕೆಗಳು, ರಸ್ತೆ ಮತ್ತು ಸೇತುವೆಗಳು, ಸಾರಿಗೆ, ಇತರ ಸಾರಿಗೆ ಸೇವೆ, ಪ್ರವಾಸೋದ್ಯಮ ಇತ್ಯಾದಿ ಸೇವೆಗಳ ಮೇಲಣ ಬಂಡವಾಳ ವೆಚ್ಚಕ್ಕಾಗಿ 95-96ರಲ್ಲಿ ಕೇವಲ 1240.46 ಕೋಟಿ ಮೊತ್ತವನ್ನು ವಾಸ್ತವಿಕ ವೆಚ್ಚ ಮಾಡಿದ್ದರೂ 96-97ರಲ್ಲಿ ಬಜೆಟ್ ಅಂದಾಜು ಪ್ರಕಾರ 1128.64 ಕೋಟಿಗೆ ವಾಸ್ತವಿಕ ಇಳಿಸಿದ್ದರೂ, ಇಳಿಸಿದ ಈ ಮೊತ್ತವನ್ನು ಪರಿಷ್ಕೃತ ಬಜೆಟ್ ಪ್ರಕಾರ 908.98 ಕೋಟಿಗೆ ಇಳಿಸಿ 97-98ರ ಬಜೆಟ್‌ನಲ್ಲಿ 996.85 ಕೋಟಿಗೆ ನಿಗದಿಗೊಳಿಸಲಾಗಿದೆ. ಇದು ವಿಧಾನಸಭೆಯಲ್ಲಿ ಮಂಡಿಸಿದ 97-98 ಆಯ-ವ್ಯಯದ ಒಂದು ಪ್ರಮುಖ ದುರಂತ ಕಥೆ ಹಾಗೂ ವಾಸಿಯಾಗದ ವ್ಯಥೆ.

ಮಿತಿ ಮೀರಿದ ಸಾಲ ಮುಂಗಡ ಬಂಡವಾಳ

ಪ್ರತಿವರ್ಷ ಸಾರ್ವಜನಿಕ ಸಾಲ, ಸಾರ್ವಜನಿಕ ಲೆಕ್ಕ, ಸಾಲ ಮುಂಗಡ ಮೂಲಗಳಿಂದ ಬಂಡವಾಳ ಸಾಲವನ್ನು ಸರಕಾರ ಪಡೆಯುತ್ತಿದೆ ಹಾಗೂ ಕೊಡುತ್ತಿದೆ. ಈ ಬಾಬ್ತು 95-96ರಲ್ಲಿ 33286.26 ಕೋಟಿ ಸಾಲ ಮುಂಗಡವನ್ನು ಸರಕಾರ ಪಡೆದಿದ್ದು ಈ ಮೊತ್ತ ಬಜಟ್ ಮೀರಿದ್ದು ಬಜೆಟ್ ಮಿತಿಗಿಂತ 7302.45 ಕೋಟಿ ಅಧಿಕವಿರುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ ಇದೇ 95-96ರಲ್ಲಿ 32678.70 ಕೋಟಿ ಸಾಲ ಮುಂಗಡವನ್ನು

ಸರಕಾರ ಕೊಟ್ಟಿದ್ದು ಈ ಮೊತ್ತ ಸಹ ಬಜೆಟ್ ಅಂದಾಜಿನ ಮಿತಿ ಮೀರಿದ್ದು ಬಜೆಟ್ ಮಿತಿಗಿಂತ ಹೆಚ್ಚು 7546.02 ಕೋಟಿ ಅಧಿಕ ಬಟವಾಡೆಯಾಗಿರುತ್ತದೆ. ಇಷ್ಟೊಂದು ಭಾರೀ ಮೊತ್ತದ ಸಾಲ ಮುಂಗಡ ಬಂಡವಾಳ ಪಡೆದಿದ್ದರೂ ಹಾಗೂ ಬಟವಾಡೆ ಮಾಡಿದ್ದರೂ ಸಾಮಾನ್ಯ, ಸಾಮಾಜಿಕ ಹಾಗೂ ಸ್ಥಳೀಯ ಪಂಚಾಯತ್‌ರಾಜ್ ಸಂಸ್ಥೆಗಳ ಅಂದಾಜಿನ ಪ್ರಕಾರ ರೆವಿನ್ಯೂ ಹಣವನ್ನು ವೆಚ್ಚ ಮಾಡದೇ 612.46 ಕೋಟಿ ಮೊತ್ತವನ್ನು ಉಳಿಸಿ ರಾಜ್ಯ ಪ್ರಗತಿಗೆ ಉಪಯುಕ್ತ ಹಾಗೂ ಉಪಕಾರಿಯಾದ ಕಾರ್ಯಕ್ರಮಗಳನ್ನು ಕುಂಠಿತಗೊಳಿಸಲಾಗಿದೆ.

ಅಧಿಕಾರಿಗಳಿಗೆ ಇಷ್ಟವಾದ ಹಾಗೂ ಅವರಿಗೆ ಮಾತ್ರ ಅನುಕೂಲ ಹಾಗೂ ಹಿತಕಾರಿಯಾಗಬಲ್ಲ ಕಾರ್ಯಕ್ರಮ ಹಾಗೂ ಸೇವೆಗಳಿಗೆ ಮಾತ್ರ ಬಜೆಟ್ ಅಂದಾಜಿನಂತೆ ಹಾಗೂ ಬಜೆಟ್ ಅಂದಾಜು ಮೀರಿ ಹಣ ವೆಚ್ಚ ಮಾಡಿ ಈ ರಾಜ್ಯ ಜನತೆಯ ಸೇವೆಗೆ ತಾರಕವಾದ ಅಭಿವೃದ್ಧಿ ಕಾರ್ಯಕ್ರಮ ಸೇವೆಗಳಿಗೆ ಬಜೆಟ್ ಅಂದಾಜಿನ ವ್ಯಾಪ್ತಿ ಮೀರುವುದಿರಲಿ ಬಜೆಟ್ ವ್ಯಾಪ್ತಿಯಲ್ಲಾದರೂ ವೆಚ್ಚ ಮಾಡದೇ ಬಜೆಟ್ ಪ್ರಕಾರ ನಿಗದಿ ಮಾಡಿದ ಹಣದಲ್ಲಿಯೇ ಸಹಸ್ರಾರು ಕೋಟಿ ಮೊತ್ತವನ್ನು ವೆಚ್ಚ ಮಾಡದೇ ಉಳಿಸುವುದಾದರೆ ಪ್ರತಿ ವರ್ಷಗಳ ಬಜೆಟ್‌ಗಳೆಲ್ಲಾ ಪ್ರಜಾಶಾಹಿಗೆ ಮಾರಕ, ಶಾಪ ಹಾಗೂ ಅಧಿಕಾರಿಶಾಹಿಗೆ ಮಾತ್ರ ತಾರಕವರವೆಂದು ಹೇಳದೇ ಗತ್ಯಂತರವಿಲ್ಲ. ಸರಕಾರದ ವಾರ್ಷಿಕ ವಿತ್ತ ನಿರೂಪಣೆಯ ವಾಸ್ತವಿಕ ಅಂಕಿ-ಅಂಶಗಳು ಇದಾದರೆ ಈ ಅಂಕಿ-ಅಂಶಗಳಿಗೆ ವ್ಯತಿರಿಕ್ತವಾಗಿ ಹಾಗೂ ಅಜಗಜಾಂತರವಾಗಿ ಕಂಡುಬರುವ ಅಂಕಿ-ಅಂಶಗಳು ಭಾರತದ ಸಂವಿಧಾನಬದ್ಧ ಕಂಟ್ರೋಲರ್ ಆ್ಯಂಡ್ ಅಡೀಟರ್ ಜನರಲ್ (ಸಿಎಜಿ)ರವರ ಅಧಿಕೃತ ವರದಿಗಳಲ್ಲಿ ಕಂಡುಬರುತ್ತವೆ. ಈ ಎಲ್ಲಾ ಅವಾಂತರಗಳಿಗೆ ರಾಜ್ಯದ ವಿತ್ತ ಮಂತ್ರಿಗಳನ್ನೇ ಜವಾಬ್ದಾರರನ್ನಾಗಿ ಹಿಡಿಯಬೇಕಾಗುತ್ತದೆ. ವಿತ್ತಮಂತ್ರಿಗಳು ಹಣಕಾಸು ಇಲಾಖೆಯನ್ನು ಹಾಗೂ ಹಣಕಾಸು ಇಲಾಖೆ ಅಧಿಕಾರಿಗಳನ್ನು ಹದ್ದುಬಸ್ತಿನಲ್ಲಿಡಲು ಬಜೆಟ್ ಪ್ರಕಾರ ಕ್ರಮ ತೆಗೆದುಕೊಳ್ಳಲು ವಿಫಲರಾಗಿ ರಾಜ್ಯದ ಆರ್ಥಿಕ ವ್ಯವಸ್ಥೆ, ಅವ್ಯವಸ್ಥೆ ಹಾಗೂ ಅಭದ್ರ ಹಾಗೂ ಅನಾನುಕೂಲವಾಗಲು ಮೂಲಕಾರಣರಾಗಿರುವುದು ವಿವಿಧ ಅಧಿಕೃತ ವರದಿಗಳಿಂದ ಸುಸ್ಪಷ್ಟವಾಗಿದೆ. ಇನ್ನಾದರೂ ವಿತ್ತಮಂತ್ರಿಗಳು ಹಾಗೂ ಕಾರ್ಯಾಂಗದ ಮಾಲೀಕರಾದ ಶಾಸಕಾಂಗದ ಶಾಸಕರು ಕಣ್ತೆರೆದು ನೋಡಿ ಆರ್ಥಿಕ ಅಸ್ಥಿರತೆ ಹಾಗೂ ಅವ್ಯವಸ್ಥೆಯನ್ನು ಅಧ್ಯಯನ ಹಾಗೂ ಅರ್ಥ ಮಾಡಿಕೊಂಡು ಸರಿಪಡಿಸಿ ಪ್ರತಿವರ್ಷ ಮಂಜೂರು ಮಾಡುವ ಬಜೆಟ್ 'ಕಾಗದದ' ಕುದುರೆಯಾಗದಂತೆ ನೋಡಿಕೊಳ್ಳುವುದು ರಾಜ್ಯದ ಜನತೆಯ ಹಿತದೃಷ್ಟಿಯಿಂದ ಒಳ್ಳೆಯದು.

❑

ವಿತ್ತೀಯ ವ್ಯವಸ್ಥೆ - ಅವ್ಯವಸ್ಥೆ

ರಾಜ್ಯದ ಆಡಳಿತ ಈ ರಾಜ್ಯದ ಪ್ರಜೆಗಳ ಕೈಯಲ್ಲಿದೆ. ಅಂದರೆ ಪ್ರಜೆಗಳ ಪ್ರತಿನಿಧಿಗಳಾದ ಶಾಸಕರ ಕೈಯಲ್ಲಿದೆ. ಶಾಸಕರೇ ರಾಜ್ಯದ ಆಡಳಿತಗಾರರು, ಶಾಸಕಾಂಗದ ಈ ಮಾಲೀಕರು ಆಡಳಿತವನ್ನು ಕಾರ್ಯಾಂಗದ ಮುಖ್ಯಮಂತ್ರಿ, ಮಂತ್ರಿ ಹಾಗೂ ಅಧಿಕಾರಿಗಳ ಮುಖಾಂತರ ಮಾಡಬೇಕಾಗುತ್ತದೆ. ಇವರೆಲ್ಲರನ್ನು ಶಾಸಕಾಂಗ ಸರಿಯಾಗಿ ಸವಾರಿ ಮಾಡಿ ಸಮರ್ಥ ಹಾಗೂ ಸುಭದ್ರ ಸರಕಾರವನ್ನು ನಡೆಸಬೇಕಾಗುತ್ತದೆ. ಈ ಆಡಳಿತ ದುರಾಡಳಿತವಾಗದೇ ದೃಢವಾದ ಆಡಳಿತವಾಗಬೇಕಾಗುತ್ತದೆ. ಶಾಸಕಾಂಗದಿಂದ ಅನುಮೋದಿತ ಬಜೆಟ್ (ಆಯ-ವ್ಯಯ) ಅಂದಾಜಿನಂತೆ ನಿಗದಿತ ಆದಾಯ ಪಡೆಯಲೇಬೇಕಾಗುತ್ತದೆ ಹಾಗೂ ಅಂದಾಜಿನಂತೆ ನಿಗದಿತ ವ್ಯಯ ಮಾಡಲೇಬೇಕಾಗುತ್ತದೆ. ಇದಕ್ಕೆ ಕಾರ್ಯಾಂಗ ತಪ್ಪಿದಲ್ಲಿ ವಿತ್ತೀಯ ವ್ಯವಸ್ಥೆ, ಅವ್ಯವಸ್ಥೆಯಾಗಿ ಅಲ್ಲೋಲ-ಕಲ್ಲೋಲ ವಾಗಿ ಹಣಕಾಸಿನ ಕೊರತೆಯಿಂದ ರಾಜ್ಯದ ಸರ್ವಾಂಗೀಣ ಪ್ರಗತಿಯ ದ್ಯೋತಕವಾದ ಸಾಮಾನ್ಯ, ಸಾಮಾಜಿಕ, ಆರ್ಥಿಕ ಸೇವೆಗಳ ಹಾಗೂ ಸಹಾಯ ಕಾರ್ಯಕ್ರಮಗಳು ಕುಂಠಿತವಾಗಿ ರಾಜ್ಯದ ಜನತೆಯ ಆರ್ಥಿಕ, ಸಾಮಾಜಿಕ ಹಾಗೂ ಸಾಮಾನ್ಯ ಪ್ರಗತಿ ಅಧೋಗತಿಗಿಳಿಯುತ್ತದೆ. ಈಗಾಗಲೇ ಪ್ರತಿವರ್ಷ ಈ ಅಧೋಗತಿ ಅವ್ಯಾಹತವಾಗಿ, ನಿರಂತರವಾಗಿ, ನಿರಾತಂಕವಾಗಿ ಎಂದಿನಂತೆ ಹಿಂದಿನಂತೆ ಮುಂದುವರೆಯುತ್ತಿರುವುದು ಸದನ ಸಮಿತಿಗಳ ಹಾಗೂ ಇಂಡಿಯಾದ ಕಂಟ್ರೋಲರ್ ಮತ್ತು ಆಡಿಟರ್ ಜನರಲ್‌ರವರ ಅಧಿಕೃತ ವರದಿಗಳಿಂದ ಸುಸ್ಪಷ್ಟವಾಗುತ್ತಲಿದೆ. ಈ ವರದಿಗಳ ಸಲಹೆ, ಸೂಚನೆ, ಟೀಕೆ, ಟಿಪ್ಪಣಿ, ಆದೇಶಗಳನ್ನು ಕಾರ್ಯಾಂಗವು ಕಸದ ಬುಟ್ಟಿಗೆ ಹಾಕುತ್ತಾ ಗಾಳಿಗೆ ತೂರುತ್ತಾ ದುರಹಂಕಾರಿಯಾಗಿ ಸಾಗುತ್ತ ಶಾಸಕಾಂಗವನ್ನು ಗಮನಿಸದೆ ಹೊರಟಿರುವುದನ್ನು ನೋಡಿದರೆ ಕಾರ್ಯಾಂಗವು ಶಾಸಕಾಂಗದ ಹಿಡಿತ ಹಾಗೂ ಹದ್ದುಬಸ್ತಿನಲ್ಲಿ ಇಲ್ಲವೇ ಇಲ್ಲವೆಂಬುದು ಬಹುಮಟ್ಟಿಗೆ ಸತ್ಯವಾಗುತ್ತ ನಡೆದಿದೆ. ಶಾಸಕರಿಗೆ ಈ ರಾಜ್ಯದ ವಿತ್ತೀಯ ವ್ಯವಸ್ಥೆ, ಅವ್ಯವಸ್ಥೆ, ಅಧೋಗತಿ, ಅಲ್ಲೋಲ-ಕಲ್ಲೋಲಗಳ ಅರಿವು ಹಾಗೂ ಅರಿವಿನ ಚಿಂತನೆಯೇ ಇಲ್ಲದೆ ಕಾರ್ಯಾಂಗವನ್ನು ಸವಾರಿ ಮಾಡುವ ಸಾಮರ್ಥ್ಯವೂ ಕೂಡ ಇಲ್ಲವೇನೋ ಎಂದು ಹೊಣೆಗಾರ ಪ್ರಜೆಗಳು ಪ್ರಶ್ನಿಸಬೇಕಾಗುತ್ತದೆ.

ಹಾಗಾದರೆ ಶಾಸಕರ ಹೊಣೆಗಾರಿಕೆಯೇನು? ಕರ್ತವ್ಯಗಳೇನು? ಚುನಾಯಿತ ಅವಧಿಯಲ್ಲಿ ಅವರು ಮಾಡಬೇಕಾದ ಹಾಗೂ ಮಾಡಬಾರದ ಕರ್ತವ್ಯಗಳೇನು ಎಂಬುದನ್ನು ಶಾಸಕರು ಅರಿತು ಪತ್ರಿಕೆಗಳ ಹಾಗೂ ಸಾರ್ವಜನಿಕರ ಉಗ್ರ ಟೀಕೆಗೆ ಆಸ್ಪದ ಕೊಡದೆ ವ ಗುರಿಯಾಗದೆ ಮುನ್ನಡೆದರೆ ಒಳ್ಳೆಯದು.

ಪ್ರತಿವರ್ಷ ಮಿತಿ ಮೀರಿದ ಭಾರೀ ಪ್ರಮಾಣದ ರೆವಿನ್ಯೂ ಆದಾಯ ಹೆಚ್ಚುತ್ತಿದ್ದರೂ ನಿಗದಿಪಡಿಸಿದಂತೆ ಸಂದಾಯವಾಗುತ್ತಿಲ್ಲ. ಆಯ-ವ್ಯಯದ ಅಂದಾಜು ಆಯಕ್ಕಿಂತ ಭಾರೀ ಪ್ರಮಾಣದಲ್ಲಿ ಆಯ ಕಡಿಮೆಯಾಗುತ್ತಲೇ ಇದೆ. 93-94ರಲ್ಲಿ 658.95 ಕೋಟಿ, 94-95ರಲ್ಲಿ 1199.97 ಕೋಟಿ, 95-96ರಲ್ಲಿ 430.68 ಕೋಟಿ ಕಡಿಮೆ ಆದಾಯವಾಗಿರುತ್ತದೆ. 96-97ರಲ್ಲಿ 209.00 ಕೋಟಿ ಮೀರಿ ಆದಾಯವಾಗಲಿದೆ. 95-96ರಲ್ಲಿ ಮುದ್ರಾಂಕ ಮತ್ತು ನೋಂದಣಿ ಆದಾಯ ಅಂದಾಜು 415.00 ಕೋಟಿ ಇದ್ದರೂ ಈ ಅಂದಾಜು ಮೀರಿ 536.53 ಕೋಟಿ ವಾಸ್ತವಿಕ ಆದಾಯುವನ್ನು ಸ್ಟ್ಯಾಂಪ್ ಖರೀದಿದಾರ ಹಾಗೂ ನೋಂದಣಿದಾರರಿಂದ ವಸೂಲಿ ಮಾಡಲಾಗಿದೆ. 95-96ರ ಬಡ್ಡಿ ಆದಾಯ ಅಂದಾಜು 532.06 ಕೋಟಿ ಇದ್ದರೂ 695.75 ಕೋಟಿ ಹೆಚ್ಚಿನ ವಾಸ್ತವಿಕ ಆದಾಯ ಪಡೆಯಲಾಗಿದೆ. ಆದಾಗ್ಯೂ 95-96ರಲ್ಲಿ ಕರ, ಕರೇತರ, ಕೇಂದ್ರದ ಪಾಲು ಸಹಾಯ ಆದಾಯ ಅಂದಾಜಿನಲ್ಲಿ 430.67 ಕೋಟಿ ಕಡಿಮೆ ಆದಾಯ ಪಡೆಯಲಾಗಿದೆ. ಹೀಗೆ ನಿಗದಿತ ಆದಾಯದಲ್ಲಿ ಪ್ರತಿವರ್ಷ ಕಡಿಮೆಯಾದರೆ ಅಂದಾಜು ವೆಚ್ಚಕ್ಕಾಗಿ ಹಣವೆಲ್ಲಿ?

ಸಾಮಾನ್ಯ, ಸಾಮಾಜಿಕ ಹಾಗೂ ಆರ್ಥಿಕ ಸೇವೆ ಇತ್ಯಾದಿಗಳಿಗಾಗಿ ನಿಗದಿ ಮಾಡಿದ ಬಜೆಟ್ ಅಂದಾಜಿನಂತೆ ವೆಚ್ಚವಾಗುತ್ತಿರುವುದಿಲ್ಲ. ಕೆಲವೊಂದು ಆಡಳಿತ ಸೇವೆ ಅಭಿವೃದ್ಧಿಯೇತರ ಸೇವೆಗಳಿಗೆ ಅಂದಾಜು ಮೀರಿ ವೆಚ್ಚ ಮಾಡುತ್ತಿದ್ದರೂ ಅಗತ್ಯವಾದ ಸಾರ್ವಜನಿಕ ಹಿತಾಸಕ್ತಿ ಸೇವೆಗಳಿಗೆ ಬಜೆಟ್ ವೆಚ್ಚದ ಅಂದಾಜಿಗಿಂತ ಅತಿ ಕಡಿಮೆ ಮೊತ್ತವನ್ನು ವೆಚ್ಚ ಮಾಡುತ್ತಿರುವುದು ಮುಂದುವರೆದೇ ಇದೆ. ಸಿ.ಎ.ಜಿ. ವರದಿ ಪ್ರಕಾರ 93-94ರಲ್ಲಿ 1165.85 ಕೋಟಿ, 94-95ರಲ್ಲಿ 2076.83 ಕೋಟಿ, 95-96ರಲ್ಲಿ 2919.11 ಕೋಟಿ ಸಿಕ್ಕಿ ಮೊತ್ತವನ್ನು ವೆಚ್ಚ ಮಾಡದೇ ಉಳಿಸಲಾಗಿದೆ. ಇದು ಸರಿಯೇ ಎಂಬುದನ್ನು ಈ ರಾಜ್ಯದ ಮಾಲೀಕರಾದ ಪ್ರಜೆಗಳ ಪ್ರತಿನಿಧಿಗಳಾದ ಶಾಸಕರೇ ಹೇಳಬೇಕು. ಈ ಕರ್ತವ್ಯಚ್ಯುತಿ ಹಾಗೂ ಅದಕ್ಷತೆಗೆ ಕಾರಣರಾದ ಕಾರ್ಯಾಂಗದವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುವ ಸಾಹಸವನ್ನಾದರೂ ಶಾಸಕರು ಮಾಡಲೇಬೇಕು. ಅದು ಅವರ ಆದ್ಯ ಕರ್ತವ್ಯ. ಈ ಅರಿವು ಅವರಿಗಿರಬೇಕು.

95-96ರಲ್ಲಿ ಅತಿ ಮುಖ್ಯ ಸೇವೆಗಳಾದ (1) ಗ್ರಾಮೀಣ ಅಭಿವೃದ್ಧಿಗೆ 306.39 ಕೋಟಿ, (2) ಆರೋಗ್ಯ ಕುಟುಂಬದ ಕಲ್ಯಾಣಕ್ಕೆ 68.58 ಕೋಟಿ, (3) ವ್ಯವಸಾಯ ಪಶುಸಂಗೋಪನೆ, ರೇಷ್ಮೆ, ಮೀನುಗಾರಿಕೆಗೆ 67.84 ಕೋಟಿ, (4) ಆರಕ್ಷ ಸೇವೆಗೆ 53.71 ಕೋಟಿ, (5) ವಸತಿಗೆ 51.35 ಕೋಟಿ, (6) ಸಹಕಾರಕ್ಕೆ 46.84 ಕೋಟಿ, (7) ಸಣ್ಣ

ಪ್ರಮಾಣದ ಕೈಗಾರಿಕೆಗಳಿಗೆ 44.44 ಕೋಟಿ, (8) ಬೆಂಗಳೂರು ಅಭಿವೃದ್ಧಿಗೆ 42.70 ಕೋಟಿ, (9) ನಗರಾಭಿವೃದ್ಧಿಗೆ 41.50 ಕೋಟಿ, (10) ಕಟ್ಟಡಗಳಿಗೆ 40.81 ಕೋಟಿ, (11) ಹಿಂದುಳಿದ ಪ್ರದೇಶಾಭಿವೃದ್ಧಿಗೆ 38.00 ಕೋಟಿ, (12) ಭಾರೀ ಮತ್ತು ಮಧ್ಯಮ ಉದ್ಯಮಗಳಿಗೆ 37.96 ಕೋಟಿ, (13) ಸಕ್ಕರೆ ಹಾಗೂ ನೂಲಿನ ಉದ್ಯಮಗಳಿಗೆ 15.17 ಕೋಟಿ ಹೀಗೆ ಇನ್ನೂ ಅನೇಕ ಉದ್ಯಮಗಳಿಗೆ ಕೋಟ್ಯಾಂತರ ಮೊತ್ತವನ್ನು ವೆಚ್ಚ ಮಾಡದೇ ರೆವಿನ್ಯೂ ಹಾಗೂ ಬಂಡವಾಳ ವೆಚ್ಚದಲ್ಲಿ ಸಿ.ಎ.ಜಿ. ಪ್ರಕಾರ ಉಳಿಸಲಾಗಿದೆ. 1996ರ ಮಾರ್ಚ್ ತಿಂಗಳೊಂದರಲ್ಲಿಯೇ ಬಜೆಟ್ ಅಂದಾಜಿನಲ್ಲಿಯ ನೂರಕ್ಕೆ ನೂರರಷ್ಟು ಹಣವನ್ನು (1) ಹೈನಾಭಿವೃದ್ಧಿ, (2) ಇತರೆ ವ್ಯವಸಾಯ ಕಾರ್ಯಕ್ರಮ, (3) ಉದ್ಯಮ ಹಾಗೂ ಖನಿಜದ ಮೇಲಿನ ಬಂಡವಾಳಗಳಿಗೆ ವೆಚ್ಚ ಮಾಡಲಾಗಿದ್ದು, ಇನ್ನೂ ಕೆಲವು ಸೇವೆಗಳಿಗೆ ಶೇಕಡಾ 52ರಿಂದ 94ರ ವರೆಗೆ ಮಾರ್ಚಿ ತಿಂಗಳೊಂದರಲ್ಲಿಯೇ ವೆಚ್ಚ ಮಾಡಲಾಗಿದೆ. ವರ್ಷದ ಪ್ರತಿ ತಿಂಗಳುಗಳಲ್ಲಿ ವೆಚ್ಚ ಮಾಡಲು ತಿಳಿಸಿದ ಸದನ ಸಮಿತಿ ಹಾಗೂ ಸಿ.ಎ.ಜಿ. ವರದಿಯನ್ನು ಸತತವಾಗಿ ಧಿಕ್ಕರಿಸಲಾಗುತ್ತಿದೆ. ಅನೇಕ ಇಲಾಖೆಗಳಲ್ಲಿ ಹಣ ದುರುಪಯೋಗ, ಅಪರಾ-ತಪರಾ, ಖೊಟ್ಟಿ ಲೆಕ್ಕಪತ್ರಗಳ ಸೃಷ್ಟಿ, ಬಿಲ್ಲಿಗಿಂತ ಹೆಚ್ಚು ಹಣ ಕೊಡುವುದು, ಹಣ ವೆಚ್ಚ ಮಾಡದೇ ಬ್ಯಾಂಕುಗಳಲ್ಲಿ ಇಡುವುದು, ಲೆಕ್ಕದಲ್ಲಿ ಹೆಚ್ಚು ಕಡಿಮೆ ಮಾಡುವುದು, ಇತರೆ ಉಪಯೋಗಿ ಸಲಕರಣೆ ಖರೀದಿ, ಅನಾವಶ್ಯಕ ಖರೀದಿ ಇತ್ಯಾದಿ ಇನ್ನೂ ಅನೇಕ ಅಕ್ರಮಗಳು ಪ್ರತಿವರ್ಷ ನಡೆಯುತ್ತ ಮುಂದುವರೆಯುತ್ತಲೇ ಇದ್ದು ತನಿಖಾ ವರದಿಗಳು ತನಿಖಾಧಿಕಾರಿಗಳಿಂದ ಸಲ್ಲಿಸಲ್ಪಟ್ಟಿದ್ದರೂ ಅವುಗಳ ಬಗ್ಗೆ ತಪ್ಪಿತಸ್ಥರ ಮೇಲೆ ಯಾವುದೇ ಕ್ರಮ ತೆಗೆದುಕೊಳ್ಳದೇ ಬಿಟ್ಟಿರುವುದು ಹಾಗೂ ಅವರನ್ನು ರಕ್ಷಿಸುತ್ತಿರುವುದು ಅಧಿಕೃತ ವರದಿಗಳಿಂದ ಸುಸ್ಪಷ್ಟವಿದೆ. ಪ್ರತಿವರ್ಷ ಜನತೆಯ ಮೇಲೆ ಕರಭಾರ ಹೆಚ್ಚಿಸುತ್ತಿದ್ದರೂ ಜನತೆ ಸಹಿಸಿಕೊಳ್ಳಲೇಬೇಕಾಗಿದೆ. ಜನತೆಗೆ ಅವಶ್ಯವಿರುವ ವಿವಿಧ ಸೇವೆಗಳಿಗೆ ನಿಗದಿತ ಹಣದಲ್ಲಿ ಭಾರೀ ಹಣವನ್ನು ವೆಚ್ಚ ಮಾಡದಿದ್ದರೂ ಜನತೆ ಸಹಿಸಿಕೊಳ್ಳಬೇಕಾಗಿದೆ. ಭ್ರಷ್ಟಾಚಾರ, ಪಕ್ಷಪಾತ, ಸ್ವಜನ ಪಕ್ಷಪಾತ, ಅಧಿಕಾರ ದುರುಪಯೋಗ, ದುರಾಡಳಿತ ಈ ಪಂಚ-ಪೀಡೆಗಳು ಹೆಚ್ಚಾಗಿ ಅವುಗಳ ದುಷ್ಪ ಪರಿಣಾಮ ಜನತೆಯ ಮೇಲಾಗುತ್ತಿದ್ದರೂ ಅವು ನಿವಾರಣೆಯಾಗದೆ ಜನತೆ ಮೂಕಪ್ರೇಕ್ಷಕವಾಗಿ ಸಹಿಸಿಕೊಳ್ಳಬೇಕು. ಈ ಸಹನೆಗೆ ಮಿತಿ ಇಲ್ಲವೆ? ಈ ದಿಸೆಯಲ್ಲಿ ಶಾಸಕಾಂಗ ಸುದೀರ್ಘವಾಗಿ ವಿಚಾರ, ಯೋಚನೆ ಮಾಡುವುದು ಲೇಸು.

❑

ರಾಷ್ಟ್ರಧ್ವಜ ವಂದನೆ

ರಾಷ್ಟ್ರಾದ್ಯಂತ ಆಗಸ್ಟ್ 15 - ಸ್ವಾತಂತ್ರ್ಯ ದಿನೋತ್ಸವ, ಅಕ್ಟೋಬರ್ 2 - ಗಾಂಧಿ ಜಯಂತಿ ಉತ್ಸವ, ಜನವರಿ 26 - ಗಣರಾಜ್ಯೋತ್ಸವ ದಿನಗಳಂದು ಸರಕಾರ ಅಧಿಕೃತ ಈ ಉತ್ಸವಗಳ ಕಾರ್ಯಕ್ರಮದಲ್ಲಿ ರಾಷ್ಟ್ರಧ್ವಜವನ್ನು ಆರೋಹಣ ಮಾಡಲಾಗುತ್ತಿದೆ. ಗಣ್ಯರಿಂದ ವಂದನೆ ಸ್ವೀಕರಿಸಲಾಗುತ್ತಿದೆ. ರಾಷ್ಟ್ರಮಟ್ಟದಲ್ಲಿ ರಾಷ್ಟ್ರಪತಿ, ಪ್ರಧಾನಮಂತ್ರಿ, ರಾಜ್ಯಮಟ್ಟದಲ್ಲಿ ರಾಜ್ಯಪಾಲ, ಮುಖ್ಯಮಂತ್ರಿ, ಜಿಲ್ಲಾಮಟ್ಟದಲ್ಲಿ ಉಸ್ತುವಾರಿ ಜಿಲ್ಲಾ ಕ್ಯಾಬಿನೆಟ್ ಮಂತ್ರಿ ಈ ಗೌರವಾನ್ವಿತ ಗಣ್ಯರು ಧ್ವಜಾರೋಹಣ ಮಾಡುತ್ತಾರೆ ಹಾಗೂ ಧ್ವಜವಂದನೆ ಸ್ವೀಕರಿಸುತ್ತಾರೆ. ರಾಷ್ಟ್ರಪತಿಗಳ ಕಾರ್ಯಾಲಯ ಹೊರಡಿಸಿದ ಅಧಿಕೃತ ಪ್ರಕಟಣೆಯ ಅಗ್ರತಾಸೂಚಿ (Rank and Precedence of the Person)ಯ ಪ್ರಕಾರ ರಾಷ್ಟ್ರಪತಿ, ಉಪರಾಷ್ಟ್ರಪತಿ, ಪ್ರಧಾನಮಂತ್ರಿ, ರಾಜ್ಯಪಾಲ, ಮಾಜಿ ರಾಷ್ಟ್ರಪತಿ, ಭಾರತದ ಮುಖ್ಯ ನ್ಯಾಯಾಧೀಶ, ಲೋಕಸಭಾಧ್ಯಕ್ಷ, ಮಾಜಿ ಪ್ರಧಾನಿ, ರಾಜ್ಯದ ಮುಖ್ಯಮಂತ್ರಿ, ಕೇಂದ್ರದ ಕ್ಯಾಬಿನೆಟ್ ಮಂತ್ರಿ, ರಾಜ್ಯಸಭಾ ಹಾಗೂ ಲೋಕಸಭಾ ವಿರೋಧ ಪಕ್ಷದ ನಾಯಕರು, ರಾಜ್ಯಸಭೆಯ ಉಪಸಭಾಪತಿ, ರಾಜ್ಯದ ಉಪಮುಖ್ಯಮಂತ್ರಿ, ಲೋಕಸಭಾ ಉಪಾಧ್ಯಕ್ಷ, ಕೇಂದ್ರ ರಾಜ್ಯಮಂತ್ರಿ, ವಿಧಾನ ಪರಿಷತ್ ಸಭಾಪತಿ, ವಿಧಾನ ಸಭಾಧ್ಯಕ್ಷ, ಹೈಕೋರ್ಟ್ ಮುಖ್ಯ ನ್ಯಾಯಾಧೀಶ, ರಾಜ್ಯ ಕ್ಯಾಬಿನೆಟ್ ಮಂತ್ರಿ, ವಿರೋಧ ಪಕ್ಷದ ನಾಯಕ, ಕೇಂದ್ರದ ಉಪಮಂತ್ರಿ, ಮಾಜಿ ಮುಖ್ಯಮಂತ್ರಿ, ಶಾಸನಸಭೆಯ ಉಪಸಭಾಪತಿ, ಉಪಾಧ್ಯಕ್ಷ, ರಾಜ್ಯದ ರಾಜ್ಯಮಂತ್ರಿ, ಸರಕಾರಿ ಮುಖ್ಯ ಸಚೇತಕ, ರಾಜ್ಯದ ಉಪಮಂತ್ರಿ, ಜಿಲ್ಲಾ ಪರಿಷತ್ ಅಧ್ಯಕ್ಷ, ಉಪಾಧ್ಯಕ್ಷ, ಪಾರ್ಲಿಮೆಂಟ್ ಸದಸ್ಯರು, ಶಾಸನಸಭಾ ಸದಸ್ಯರು, ಸರಕಾರದ ಮುಖ್ಯ ಕಾರ್ಯದರ್ಶಿ, ಡಿವಿಜನಲ್ ಕಮಿಷನರ್, ಸರಕಾರದ ಕಾರ್ಯದರ್ಶಿಗಳು, ಜಿಲ್ಲಾ ಡೆಪ್ಯುಟಿ ಕಮಿಷನರ್, (ಅವರವರ ಜಿಲ್ಲೆಯಲ್ಲಿ) ಜಿಲ್ಲಾ ನ್ಯಾಯಾಧೀಶರು, ಹೀಗೆ ಇವರೆಲ್ಲರೂ ಅನುಕ್ರಮವಾಗಿ ಅಗ್ರತಾ ಪಟ್ಟಿಯಲ್ಲಿಯ ಅಗ್ರಗಣ್ಯರಾಗಿರುತ್ತಾರೆ. ಜಿಲ್ಲಾಧಿಕಾರಿಗಳಿಗಿಂತ ಮೇಲೆ ಪಾರ್ಲಿಮೆಂಟ್ ಹಾಗೂ ಶಾಸನಸಭೆ ಸದಸ್ಯರು ಅಗ್ರಸ್ಥಾನದಲ್ಲಿರುತ್ತಾರೆ.

ತಹಶೀಲ್ದಾರರು ಜಿಲ್ಲಾಧಿಕಾರಿಗಳನಂತರ ಇರುತ್ತಾರೆಂಬುದು ಪ್ರತಿಯೊಬ್ಬ ಜನಸಾಮಾನ್ಯರಿಗೂ ಗೊತ್ತಿರುವ ಅಂಶ. ಮೇಲ್ಕಂಡ ಅಗ್ರತಾ ಯಾದಿಯನ್ನು ರಾಜ್ಯದಲ್ಲಿಯ ವಿವಿಧ ರಾಜ್ಯೋತ್ಸವ ಸಂದರ್ಭಗಳಲ್ಲಿ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ.

ಧ್ವಜಸಂಹಿತೆ, (Flag Code) ಪ್ರಕಾರ ರಾಷ್ಟ್ರಧ್ವಜವನ್ನು ರಾಷ್ಟ್ರಪತಿ, ಉಪರಾಷ್ಟ್ರಪತಿ, ರಾಜ್ಯಪಾಲರು, ಉಪರಾಜ್ಯಪಾಲರು, ಪ್ರಧಾನಮಂತ್ರಿ, ಕೇಂದ್ರದ ಮಂತ್ರಿ, ರಾಜ್ಯಮಂತ್ರಿ, ಉಪಮಂತ್ರಿ, ಮುಖ್ಯಮಂತ್ರಿ, ರಾಜ್ಯದ ಕ್ಯಾಬಿನೆಟ್ ಮಂತ್ರಿ, ಲೋಕಸಭಾಧ್ಯಕ್ಷ, ಉಪಸಭಾಧ್ಯಕ್ಷ, ರಾಜ್ಯಸಭಾ ಉಪಾಧ್ಯಕ್ಷ, ವಿಧಾನ ಪರಿಷತ್ ಸಭಾಪತಿ, ವಿಧಾನಸಭಾಧ್ಯಕ್ಷ, ವಿಧಾನ ಪರಿಷತ್ ಉಪಸಭಾಪತಿ, ವಿಧಾನಸಭಾ ಉಪಾಧ್ಯಕ್ಷ, ಭಾರತದ ಮುಖ್ಯ ನ್ಯಾಯಾಧೀಶ, ಸುಪ್ರೀಮ್ ಕೋರ್ಟ್ ನ್ಯಾಯಾಧೀಶರು, ರಾಜ್ಯ ಹೈಕೋರ್ಟ್ ಮುಖ್ಯ ನ್ಯಾಯಾಧೀಶ ಈ ಎಲ್ಲ ಗಣ್ಯರು ತಮ್ಮ ತಮ್ಮ ಮೋಟಾರ್ ಕಾರುಗಳ ಮೇಲೆ ರಾಷ್ಟ್ರಧ್ವಜವನ್ನು ಸೂರ್ಯೋದಯ ನಂತರ ಸೂರ್ಯಾಸ್ತ ಮೊದಲು ಅಧಿಕೃತವಾಗಿ ಹಾರಿಸಬಹುದಾಗಿದೆ.

ಧ್ವಜಸಂಹಿತೆ ಪ್ರಕಾರ ಧ್ವಜಾರೋಹಣ ಕಾಲಕ್ಕೆ ಗಣ್ಯವ್ಯಕ್ತಿ ಧ್ವಜಾರೋಹಣ ಮಾಡಿ ವಂದನೆ ಸ್ವೀಕರಿಸಬಹುದೆಂದು ಅಧಿನಿಯಮವೇ ಹೇಳುತ್ತದೆ. ಆ ಪ್ರಕಾರ ರಾಷ್ಟ್ರಮಟ್ಟದಲ್ಲಿ ರಾಷ್ಟ್ರಪತಿ, ಪ್ರಧಾನಮಂತ್ರಿ, ರಾಜ್ಯಮಟ್ಟದಲ್ಲಿ ರಾಜ್ಯಪಾಲ, ಮುಖ್ಯಮಂತ್ರಿ, ಜಿಲ್ಲಾಮಟ್ಟದಲ್ಲಿ ಜಿಲ್ಲಾ ಉಸ್ತುವಾರಿ ಕ್ಯಾಬಿನೆಟ್ ಮಂತ್ರಿಗಳು ಧ್ವಜಾರೋಹಣ ಮಾಡಿ ಧ್ವಜವಂದನೆಯನ್ನು ಸ್ವೀಕರಿಸುತ್ತಾರೆ. ಈ ರಾಷ್ಟ್ರೀಯ ಹಬ್ಬವನ್ನು ದೇಶಾದ್ಯಂತ ಎಲ್ಲಾ ರಾಜ್ಯಗಳ ಎಲ್ಲಾ ತಾಲ್ಲೂಕು ಕೇಂದ್ರ, ಗ್ರಾಮ, ಪುರ, ನಗರಗಳಲ್ಲಿ ಅತಿ ವಿಜೃಂಭಣೆಯಿಂದ ನೆರವೇರಿಸಲಾಗುತ್ತಿದೆ. ಸ್ವಾತಂತ್ರ್ಯ ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೇ ಪ್ರಭುಗಳು, ಪ್ರಜೆಗಳೇ ಗಣ್ಯ ನಾಗರಿಕರು, ಪ್ರಜೆಗಳ ವ ಗಣ್ಯ ನಾಗರಿಕರು ಪ್ರತಿನಿಧಿಗಳೇ ಸ್ಥಳೀಯ ಚುನಾಯಿತ ಲೋಕಸಭಾ ಸದಸ್ಯರು ಹಾಗೂ ವಿಧಾನಸಭಾ ಸದಸ್ಯರು. ಇವರು ನಾಗರಿಕರ ಪ್ರತಿನಿಧಿ (ಸಿವಿಲ್ ರೆಪ್ರೆಸೆಂಟೇಟಿವ್)ಗಳು, ಶಾಸಕಾಂಗದ ಮಾಲೀಕರು, ಕಾರ್ಯಾಂಗ (ಸರಕಾರ) ಶಾಸಕಾಂಗಕ್ಕೆ ಅಧೀನ.

ಧ್ವಜಸಂಹಿತೆ (Flag Code)ಯು 7ನೇ ಕಲಮಿನ ವಂದನೆ (7)ಯಲ್ಲಿ ಧ್ವಜಾರೋಹಣ ಉತ್ಸವದಲ್ಲಿ ಗಣ್ಯರು ಧ್ವಜವಂದನೆಯನ್ನು ಸ್ವೀಕರಿಸಬಹುದು. (A dignitary may take the salute) ಎಂದು ಸುಸ್ಪಷ್ಟವಾಗಿದೆ. ಶಾಸಕರು, ಸಂಸದರು ಕೇಂದ್ರ ಸರಕಾರ ನಿರ್ದಿಷ್ಟಪಡಿಸಿದ ಗಣ್ಯರ ಅಗ್ರತಾ ಯಾದಿಯಲ್ಲಿ ಜಿಲ್ಲಾ ಡೆಪ್ಯುಟಿ ಕಮಿಷನರ್, ಡಿವಿಜನಲ್ ಕಮಿಷನರ್, ಸರ್ಕಾರದ ಕಾರ್ಯದರ್ಶಿ, ಸರಕಾರದ ಮುಖ್ಯ ಕಾರ್ಯದರ್ಶಿಗಳಿಗಿಂತ ಮೇಲೆ ಅಗ್ರಗಣ್ಯರಾಗಿ ಇರುವುದರಿಂದ ರಾಜ್ಯದಲ್ಲಿಯ ಎಲ್ಲಾ ತಾಲ್ಲೂಕು ಮಟ್ಟದಲ್ಲಿಯ ಎಲ್ಲಾ ಅಧಿಕೃತ ರಾಷ್ಟ್ರೀಯ ಉತ್ಸವಗಳಾದ ಸ್ವಾತಂತ್ರ್ಯ ದಿನೋತ್ಸವ, ಗಣರಾಜ್ಯೋತ್ಸವ, ಗಾಂಧಿ ಜಯಂತ್ಯೋತ್ಸವ, ಕನ್ನಡ ರಾಜ್ಯೋತ್ಸವಗಳಂದು

ಗಣ್ಯರೂ ನಾಗರಿಕರ ಪ್ರತಿನಿಧಿಗಳೂ ಆದ ಸಂಸದ ಶಾಸಕರನ್ನು ಕಡೆಗಣಿಸಿ ತಾಲ್ಲೂಕಿನ ರೆವಿನ್ಯೂ ಅಧಿಕಾರಿ ತಹಶೀಲ್ದಾರರಿಂದ ಧ್ವಜಾರೋಹಣ ಹಾಗೂ ವಂದನೆ ಸ್ವೀಕರಿಸಲು ಸರಕಾರ ಅವಕಾಶ ಮಾಡಿಕೊಟ್ಟಿರುವುದು ಸ್ವತಂತ್ರ ಭಾರತದ ಪ್ರಜಾಪ್ರಭುತ್ವದ ಅವಹೇಳನ, ಅಪಚಾರ, ಅಪಮಾನವೆಂದು ಹೇಳದೆ ಗತ್ಯಂತರವಿಲ್ಲ. ಪ್ರಜಾಪ್ರತಿನಿಧಿಗಳಾದ ಗ್ರಾಮ ಪಂಚಾಯತಿ, ತಾಲ್ಲೂಕ ಪಂಚಾಯತಿ, ಜಿಲ್ಲಾ ಪಂಚಾಯತಿ, ಪುರಸಭೆ, ನಗರಸಭೆ, ನಗರಪಾಲಿಕೆಗಳ ಅಧ್ಯಕ್ಷರು ಅವರವರ ಗ್ರಾಮ, ನಗರಗಳಲ್ಲಿ ಧ್ವಜಾರೋಹಣ ಮಾಡಿ ಧ್ವಜವಂದನೆ ಸ್ವೀಕರಿಸುತ್ತಿರುವಾಗ, ಪ್ರಧಾನಮಂತ್ರಿ, ಮುಖ್ಯಮಂತ್ರಿ, ಮಂತ್ರಿಗಳು, ರಾಷ್ಟ್ರ, ರಾಜ್ಯ ಹಾಗೂ ಜಿಲ್ಲಾಮಟ್ಟದಲ್ಲಿ ನಾಗರಿಕರ ಪ್ರತಿನಿಧಿಗಳಾಗಿ ಧ್ವಜಾರೋಹಣ ಮಾಡಿ ವಂದನೆ ಸ್ವೀಕರಿಸುತ್ತಿರುವಾಗ, ಲಕ್ಷಾಂತರ ನಾಗರಿಕರ ಚುನಾಯಿತ ಪ್ರತಿನಿಧಿಗಳಾದ ಸಂಸದ ಶಾಸಕರಿಗೆ ವಿಧಾನಸಭಾ ಹಾಗೂ ಲೋಕಸಭಾ ಮತಕ್ಷೇತ್ರಗಳಾದ ಅವರವರ ತಾಲ್ಲೂಕು ಕೇಂದ್ರ ಸ್ಥಳದಲ್ಲಿ ಏರ್ಪಡಿಸಲಾಗುವ ಈ ರಾಷ್ಟ್ರೀಯ ಉತ್ಸವಗಳಲ್ಲಿ ಇವರೇಕೆ ಧ್ವಜಾರೋಹಣ ಮಾಡಿ ಧ್ವಜವಂದನೆ ಸ್ವೀಕರಿಸಬಾರದು? ಈ ದಿಸೆಯಲ್ಲಿ ಶಾಸಕರು, ಸಂಸದರು, ನಾಗರಿಕರು, ಸಂಸದೀಯ ಪದಾಧಿಕಾರಿಗಳು, ಪತ್ರಿಕೆಗಳು ಸೂಕ್ತ ಹಾಗೂ ಪ್ರಜಾಸತ್ತಾತ್ಮಕ ಮೌಲ್ಯಗಳಿಗೆ ಅನುಗುಣವಾಗಿ ನಾಗರಿಕ ಪ್ರತಿನಿಧಿಗಳಾದ ಸಂಸದ ಹಾಗೂ ಶಾಸಕರಿಗೆ ಧ್ವಜಾರೋಹಣ ಹಾಗೂ ಧ್ವಜವಂದನೆ ಅನುಕೂಲ ಮಾಡಿಕೊಡುವ ಬಗ್ಗೆ ಸರಕಾರದ ಗಮನ ಸೆಳೆದರೂ ಸರಕಾರದ ಹೊಣೆ ಹೊತ್ತ ಮಂತ್ರಿ, ಗೃಹಮಂತ್ರಿ, ಮುಖ್ಯಮಂತ್ರಿ, ಪ್ರಧಾನಮಂತ್ರಿಗಳು ಅಧಿಕಾರಿಗಳ ತಾಳಕ್ಕೆ ತಕ್ಕಂತೆ ಈ ವಿಷಯದಲ್ಲಿ ಕುಣಿದು ಸೂಕ್ತ ಕ್ರಮ ತೆಗೆದುಕೊಳ್ಳದೆ ಪ್ರಜಾಸತ್ತೆಗೆ, ಪ್ರಜೆಗಳಿಗೆ, ಪ್ರಜೆಗಳಾದ ನಾಗರಿಕ ಪ್ರತಿನಿಧಿ ಸಂಸದರಿಗೆ, ಶಾಸಕರಿಗೆ ಅವಮಾನ, ಅಗೌರವ, ಅಸಹ್ಯ ಮಾಡುವುದು ಖಂಡನೀಯ. ಇನ್ನಾದರೂ ಹೊಣೆ ಅರಿತು ಸ್ವಾತಂತ್ರ್ಯದ ಸುವರ್ಣ ಮಹೋತ್ಸವವನ್ನಾ ಚರಿಸುತ್ತಿರುವ ಈ ವರ್ಷದಲ್ಲಿ ಇನ್ನು ಮುಂದೆ ಚುನಾಯಿತ ನಾಗರಿಕ ಪ್ರತಿನಿಧಿಗಳಿಗೆ ಅವಕಾಶ ಕೊಡುವುದು ಪ್ರಜಾಸತ್ತೆಗೆ ಸಂದ ಗೌರವ, ಸಂಪತ್ತು ಹಾಗೂ ಸಂಸದರು, ಶಾಸನಸಭೆ ಹಾಗೂ ಶಾಸಕರು ಪ್ರಜಾಸತ್ತೆಯ ಗೌರವ ಕಾಯುವುದಕ್ಕಾಗಿ ಸೂಕ್ತ ಹೋರಾಟ ಮಾಡುವುದು ಕೂಡ ಪ್ರಜಾಪ್ರಭುತ್ವದ ಹಿರಿಮೆ ದೃಷ್ಟಿಯಿಂದ ಆದ್ಯ ಕರ್ತವ್ಯ.

❑

ಸದನದ ಗೌರವಾನ್ವಿತರ ಗೌರವ ಕಾಪಾಡುವುದು ಅಗತ್ಯ

ಪ್ರಪಂಚದಲ್ಲೆಲ್ಲಾ ಪ್ರಜಾಪ್ರಭುತ್ವ - ಪ್ರಜಾಸತ್ತೆ ಜಾರಿಯಲ್ಲಿದೆ. ಪ್ರಜೆಗಳೇ ಆಯಾ ರಾಷ್ಟ್ರಗಳ ಮಾಲೀಕರು, ಸಾಮ್ರಾಟರು. ಅವರೆಲ್ಲರೂ ಅವರ ಪರವಾಗಿ ಪ್ರತಿನಿಧಿಗಳನ್ನು ಅಲ್ಲಲ್ಲಿಯ ಪ್ರಜಾಪ್ರತಿನಿಧಿಗಳ ಸದನಗಳಿಗೆ ಚುನಾಯಿಸಿ ಕಳುಹಿಸುತ್ತಾರೆ. ಆಯಾ ಸದನದಲ್ಲಿ ಅವರೆಲ್ಲರೂ ಸೇರಿ ಆಯಾ ರಾಷ್ಟ್ರದ ಅಥವಾ ರಾಜ್ಯಗಳ ಸರ್ವಾಂಗೀಣ ಆಡಳಿತ ಹಾಗೂ ಅಭಿವೃದ್ಧಿಯ ಬಗ್ಗೆ ಸೂಕ್ತವಾದ ನೀತಿ, ನಿಯಮ, ಅಧಿನಿಯಮ, ಆದೇಶ, ಆಜ್ಞೆ ಇತ್ಯಾದಿ ಆಡಳಿತಾತ್ಮಕ ಕ್ರಮಗಳನ್ನು ತೆಗೆದುಕೊಳ್ಳುತ್ತಾರೆ. ಚುನಾಯಿತ ಪ್ರತಿನಿಧಿಗಳೆಲ್ಲರೂ ಪ್ರಧಾನಮಂತ್ರಿಯೇ ಇರಲಿ, ಮುಖ್ಯಮಂತ್ರಿಯೇ ಇರಲಿ, ಮಂತ್ರಿಯೇ ಇರಲಿ ಅಥವಾ ಯಾವುದೇ ನಾಯಕನೇ ಇರಲಿ ಅಥವಾ ಸಾಮಾನ್ಯ ಸದಸ್ಯನಾಗಿಯೇ ಇರಲಿ ಅವರೆಲ್ಲರೂ ಘನತೆ, ಗೌರವ, ಗಾಂಭೀರ್ಯಗಳೊಂದಿಗೆ ವಿವೇಕಸಹಿತರಾಗಿ ಸದನಗಳ ಒಳಗೆ ಹಾಗೂ ಹೊರಗೆ ವರ್ತಿಸಬೇಕಾಗುತ್ತದೆ ಹಾಗೂ ಜನತೆಯ ಪ್ರೀತಿ, ವಿಶ್ವಾಸಗಳಿಗೆ ಪಾತ್ರರಾಗಿರಬೇಕಾಗುತ್ತದೆ. ಜನತೆಯಿಂದ ವಿವಿಧ ಮೂಲಗಳಿಂದ ಬಂದ ಆದಾಯವನ್ನು ಜನತೆಯ ಸಲುವಾಗಿ ವಿವಿಧ ಆಡಳಿತ ಹಾಗೂ ಅಭಿವೃದ್ಧಿಗಾಗಿ ಆಯವ್ಯಯಗಳಲ್ಲಿ ನಿಗದಿಪಡಿಸಿದಂತೆ ವೆಚ್ಚ ಮಾಡಬೇಕಾಗುತ್ತದೆ. ಜನತಾ ಪ್ರತಿನಿಧಿಗಳು ತಾವು ಪವಾಡ ಪುರುಷರೆಂಬುದನ್ನೂ ಜನತೆಯ ಬೇಡಿಕೆಗಳನ್ನು ಆರ್ಥಿಕ ಸಂಪನ್ಮೂಲಗಳ ಇತಿಮಿತಿಯ ಚೌಕಟ್ಟಿನಲ್ಲಿ ಈಡೇರಿಸಿಕೊಟ್ಟು ಪರೋಪಕಾರ ಮಾಡುವ ವರದಾತರೆಂಬುದನ್ನು ಮರೆಯಲಾಗದು. ಚುನಾಯಿತ ಪ್ರತಿನಿಧಿಗಳು ಯಾವುದೇ ಪ್ರತಿಷ್ಠಿತ ವರ್ಗದವರೇ ಇರಲಿ, ಸಾಮಾನ್ಯ ವರ್ಗದವರೇ ಇರಲಿ ಅಥವಾ ಯಾವುದೇ ಗುಲಾಮ ವರ್ಗದವರೇ ಇರಲಿ ಅವರೆಲ್ಲರೂ ಸಮಾಜದಲ್ಲಿಯ ಅತ್ಯುನ್ನತ, ಗೌರವಾನ್ವಿತ, ಪೂಜ್ಯ ವ್ಯಕ್ತಿಗಳಾಗಿ ತಮ್ಮ ಅಧಿಕಾರದ ಅವಧಿಯಲ್ಲಿ ನಡೆದುಕೊಳ್ಳಲೇಬೇಕಾಗುತ್ತದೆ. ಅವರಿಗಿಂತ ಹೆಚ್ಚಿನ ಪ್ರಥಮ ಪ್ರಜೆಗಳಾರೂ ಇಲ್ಲವೆಂಬುದನ್ನೂ ತಾವೇ ಪ್ರಜೆಗಳ ಘನತೆವೆತ್ತ ಸರ್ವಶ್ರೇಷ್ಠರೆಂದು ನಡೆದುಕೊಳ್ಳಬೇಕಾಗುತ್ತದೆ. ಎಲ್ಲಾ ಹಂತದ ಪ್ರಜಾಪ್ರತಿನಿಧಿಗಳು ಭಾರತ ದೇಶದಲ್ಲಿ ಸಂವಿಧಾನಬದ್ಧವಾಗಿ ಈಶ್ವರನ (ದೇವರ) ಹೆಸರಿನಲ್ಲಿ ವಿವಿಧ ಪ್ರಮಾಣವಚನ ಸ್ವೀಕಾರ

ಮಾಡಿ ಅಧಿಕಾರಕ್ಕೆ ಬರುತ್ತಾರೆಂಬುದನ್ನೂ ಹಾಗೂ ಈಶ್ವರನಿಗಿಂತ ದೊಡ್ಡವರು ಈ ದೇಶದಲ್ಲಿ ಯಾರೂ ಇಲ್ಲವೆಂಬುದನ್ನೂ ಅರಿತು ಈಶ್ವರನ ಹೆಸರಿನಲ್ಲಿ 'ಸರಕಾರದ ಕೆಲಸ, ದೇವರ ಕೆಲಸ - ದೇವರ ಕೆಲಸ ಸರಕಾರದ ಕೆಲಸ' ವೆಂದು ಪ್ರಾಮಾಣಿಕವಾಗಿ ನ್ಯಾಯ ನಿಷ್ಠುರವಾಗಿ ದಾಕ್ಷಿಣ್ಯಪರರಾಗದೆ, ರಾಗ-ದ್ವೇಷವಿಲ್ಲದೆ ಪ್ರಜಾಕಾರ್ಯವನ್ನೂ ನಿರ್ವಹಿಸಿ ದೇಶದಲ್ಲಿ ಉತ್ತಮ ಆಡಳಿತ ಹಾಗೂ ಉತ್ತಮ ಅಭಿವೃದ್ಧಿ ಸಾಧಿಸಿ ಎಲ್ಲರಿಂದ ಶಹಬಾಸಗಿರಿ ಪಡೆಯಬೇಕಾಗುತ್ತದೆ. ಅವರ ನಡೆ-ನುಡಿಯಲ್ಲಿ ಗುಲಾಮಗಿರಿಯ ಯಾವುದೇ ದಾಸ್ಯಪ್ರವೃತ್ತಿ ಹಾಗೂ ಅಪರಾಧಿ ಮನೋವೃತ್ತಿ, ಕೀಳರಿಮೆ ಇರಬಾರದೆಂಬುದನ್ನೂ ಸಹ ಅವರು ಅರಿತಿರಬೇಕಾಗುತ್ತದೆ. ಅವರ ನಡೆ-ನುಡಿಗಳು ಮತ್ತೊಬ್ಬರಿಗೆ ಪವಿತ್ರ, ಪೂಜ್ಯ, ಆದರ್ಶ ಹಾಗೂ ಅನುಕರಣೀಯವಾಗಬೇಕಾಗುತ್ತದೆ. ಆಟ, ನಾಟಕಗಳಲ್ಲಿ ಪಾತ್ರಧಾರಿ ಯಾದವನು ಯಾವ ರೀತಿಯಲ್ಲಿ ತನ್ನ ವೈಯಕ್ತಿಕ ಜೀವನಮಟ್ಟದ ಅಂತಸ್ತನ್ನು ಆ ಅವಧಿಯಲ್ಲಿ ಮರೆತು ನಾಟಕದಲ್ಲಿಯ ಪಾತ್ರದ ಅಂತಸ್ತಿಗೆ ಮಟ್ಟಕ್ಕೆ ತಕ್ಕಂತೆ ಪಾತ್ರವನ್ನು ಸರಿಯಾಗಿವಹಿಸಿ ಜನರ ಪ್ರೀತಿಗೆ ಪಾತ್ರವಾಗುತ್ತಾನೋ ಹಾಗೆಯೇ ಪ್ರಜಾಪ್ರತಿನಿಧಿ ಪಾತ್ರಧಾರಿಗಳು ತಮ್ಮ ತಮ್ಮ ಚುನಾಯಿತ ಅವಧಿಯಲ್ಲಿ ವಿವಿಧ ಹಂತದ ಪ್ರಜಾಪ್ರತಿನಿಧಿ ಪಾತ್ರದ ಸದಸ್ಯರದೇ ಇರಲಿ, ಮಂತ್ರಿಯದೇ ಇರಲಿ, ಮುಖ್ಯಮಂತ್ರಿ, ಪ್ರಧಾನಮಂತ್ರಿಯದೇ ಇರಲಿ ಅಥವಾ ಯಾವುದೇ ನಾಯಕನದೇ ಇರಲಿ ಅದೆಲ್ಲವನ್ನೂ ಘನತೆ, ಗೌರವದಿಂದ ವಹಿಸಿ ಪ್ರಶಂಸೆಗೆ ಪಾತ್ರನಾಗುವುದು ಒಳ್ಳೆಯದು. ಆದರೆ ದುರ್ದೈವದಿಂದ ಈ ದೇಶದಲ್ಲಿ ರಾಜ್ಯ ವಿಧಾನಸಭೆಯೇ ಇರಲಿ, ವಿಧಾನ ಪರಿಷತ್ತೇ ಇರಲಿ, ಲೋಕಸಭೆಯೇ ಇರಲಿ, ರಾಜ್ಯಸಭೆಯೇ ಇರಲಿ, ಕೇಂದ್ರ ಸರ್ಕಾರವೇ ಇರಲಿ ಅಥವಾ ರಾಜ್ಯ ಸರಕಾರವೇ ಇರಲಿ, ಈ ಎಲ್ಲವುಗಳಲ್ಲಿ ಪ್ರಜಾಪ್ರತಿನಿಧಿಗಳು ತಮ್ಮ ಘನತೆ, ಗೌರವಗಳಿಗೆ ತಿಲಾಂಜಲಿಯನ್ನಿತ್ತು ವಿವೇಕರಹಿತರಾಗಿ ನಡೆದುಕೊಳ್ಳುವುದು, ಗುಲಾಮಗಿರಿ ದಾಸ್ಯಪ್ರವೃತ್ತಿಗೆ ಇಳಿಯುವುದು, ತಮ್ಮ ಸ್ಥಾನಕ್ಕೆ ಕುಂದು ತರುವುದು, ಸದನಗಳಲ್ಲಿ ಮೈಮರೆತು ನಡೆಯುವುದು, ಅಸಹ್ಯ ರೀತಿಯಲ್ಲಿ ವರ್ತಿಸುವುದು ಅಲ್ಲಲ್ಲಿ ಕಂಡುಬರುತ್ತಿದ್ದು ಅದು ಸ್ವಾತಂತ್ರ್ಯೋತ್ತರದ ಪ್ರಜಾಸತ್ತೆಗೆ, ಪ್ರಜಾತಂತ್ರ ವ್ಯವಸ್ಥೆಗೆ ಮಾರಕವೆಂದು ಅನಿವಾರ್ಯವಾಗಿ ಹೇಳದೆ ಗತ್ಯಂತರವಿಲ್ಲ.

ನಮ್ಮ ರಾಷ್ಟ್ರದಲ್ಲಿಯ ರಾಜ್ಯಗಳ ಶಾಸಕಾಂಗಕ್ಕೆ ರಾಜ್ಯಪಾಲರು ಸಂವಿಧಾನಬದ್ಧ ಮುಖ್ಯಸ್ಥರು. ಶಾಸಕಾಂಗದಿಂದ ಮಂಜೂರಾದ ಎಲ್ಲಾ ಮಸೂದೆಗಳಿಗೂ ಅವರೇ ಒಪ್ಪಿಗೆ ಕೊಟ್ಟು ಅಧಿನಿಯಮಗಳನ್ನಾಗಿ ಮಾಡಬೇಕಾಗುತ್ತದೆ. ಅವರಿಗೆ ಸಂವಿಧಾನಬದ್ಧವಾದ ಇನ್ನೂ ಅನೇಕ ಅಧಿಕಾರಗಳಿರುತ್ತವೆ. ಪ್ರತಿವರ್ಷ ವರ್ಷದ ಕೊನೆಗೆ ಹಾಗೂ ಬಜೆಟ್ ಅಧಿವೇಶನದ ಪೂರ್ವದಲ್ಲಿ ರಾಜ್ಯಗಳ ವಿಧಾನಸಭೆ ಹಾಗೂ ವಿಧಾನ ಪರಿಷತ್ತಿನ ಜಂಟಿ ಅಧಿವೇಶನದಲ್ಲಿ ಸಭಾಧ್ಯಕ್ಷ ಹಾಗೂ ಸಭಾಪತಿಯವರ ಸಮ್ಮುಖದಲ್ಲಿ ಸದಸ್ಯರನ್ನು ಉದ್ದೇಶಿಸಿ ಸರಕಾರದ ಪರವಾಗಿ ರಾಜ್ಯಪಾಲರು ಭಾಷಣ ಮಾಡಿ ಸರಕಾರ ಆಗಲೇ ಮಾಡಿದ ಕಾರ್ಯವನ್ನು ಹಾಗೂ ಮುಂದೆ ಮಾಡಬೇಕಾದ ಕಾರ್ಯ, ಧ್ಯೇಯ

ಧೋರಣೆಗಳನ್ನು ಹೇಳಬೇಕಾಗುತ್ತದೆ. ಇದು ಎಲ್ಲ ರಾಜ್ಯಗಳಲ್ಲಿರುವ ಸಂವಿಧಾನಬದ್ಧ ಸತ್‌ಸಂಪ್ರದಾಯ. ರಾಜ್ಯಪಾಲರು ಜಂಟಿ ಅಧಿವೇಶನಕ್ಕೆ ಬರುವಾಗ ವಿಧಾನಸಭೆ ಅಧ್ಯಕ್ಷರು, ವಿಧಾನ ಪರಿಷತ್ತಿನ ಸಭಾಪತಿ ಹಾಗೂ ಕಾರ್ಯದರ್ಶಿಗಳು ಅವರನ್ನು ಗೌರವದಿಂದ ಬರಮಾಡಿಕೊಂಡ ಮೇಲೆ ರಾಜ್ಯಪಾಲರು ಜಂಟಿಸಭೆಯನ್ನು ವೇದಿಕೆಯಿಂದ ಉದ್ದೇಶಿಸಿ ಭಾಷಣ ಮಾಡಿ ನಿರ್ಗಮಿಸಬೇಕಾಗುತ್ತದೆ. ರಾಜ್ಯಪಾಲರ ಭಾಷಣದ ಮೇಲೆ ಎರಡೂ ಸದನಗಳಲ್ಲಿ ಸುದೀರ್ಘ ಚರ್ಚೆಮಾಡಿ ವಂದನಾ ಸ್ವೀಕಾರ ನಿರ್ಣಯು ವಾಗಬೇಕಾಗುತ್ತದೆ. ಈ ನಿರ್ಣಯದ ಬಗ್ಗೆ ಚರ್ಚೆ ಮಾಡುವಾಗ ಸದಸ್ಯರು ಯಾವುದೇ ರೀತಿಯಲ್ಲಿ ಬೆಂಬಲಿಸುವ ಅಥವಾ ವಿರೋಧಿಸುವ ಬಗ್ಗೆ ಸುದೀರ್ಘವಾದ ಭಾಷಣ ಮಾಡಬಹುದಾಗಿದೆ. ರಚನಾತ್ಮಕ ಟೀಕೆ, ಸಲಹೆ, ಸೂಚನೆಗಳನ್ನೂ ಕೂಡ ಕೊಡಬಹುದಾಗಿದೆ. ನಿಯಮಗಳ ಚೌಕಟ್ಟಿನಲ್ಲಿ ಏನೇ ಮಾತಾಡುವ ಸಂವಿಧಾನಾತ್ಮಕ ಹಕ್ಕುಗಳು ಎಲ್ಲ ಸದಸ್ಯರಿಗೂ ಇವೆ. ಆದರೆ?

ಇತ್ತಿತ್ತಲಾಗಿ ಕೆಲವು ರಾಜ್ಯಗಳಲ್ಲಿ ರಾಜ್ಯಪಾಲರೆಂದರೇನು, ವಿಧಾನಸಭಾ ಹಾಗೂ ವಿಧಾನ ಪರಿಷತ್ತು ಹಾಗೂ ಸರಕಾರದ ಕೂಡ ಅವರ ಸಂವಿಧಾನಬದ್ಧ ಸಂಬಂಧವೇನು? ಜಂಟಿ ಅಧಿವೇಶನದಲ್ಲಿ ರಾಜ್ಯಪಾಲರು ಮಾಡಬೇಕಾದ ಭಾಷಣವೇನು, ಆ ಭಾಷಣದ ಬಗ್ಗೆ ಚರ್ಚೆ ಎಂದು, ಯಾವಾಗ? ಜಂಟಿ ಅಧಿವೇಶನದ ಸದನದಲ್ಲಿ ಯಾರ್ಯಾರ ನಡವಳಿಕೆ ಹೇಗಿರಬೇಕೆಂಬುದು ಸಹ ಅನೇಕರಿಗೆ ಗೊತ್ತಿಲ್ಲದಿರುವುದು ಅಥವಾ ಗೊತ್ತಿದ್ದರೆ ಅದಕ್ಕೆ ವ್ಯತಿರಿಕ್ತವಾಗಿ ನಡೆದುಕೊಳ್ಳುವುದು ಹಾಗೂ ಸದನದ ಸದಸ್ಯರ, ರಾಜ್ಯಪಾಲರ, ಸಭಾಧ್ಯಕ್ಷರ ಹಾಗೂ ಸಭಾಪತಿಗಳ ಗೌರವಕ್ಕೆ ಧಕ್ಕೆ ಮಾಡುತ್ತಿರುವುದು ಈ ದೇಶದ ದುರ್ದೈವ. ಇದಕ್ಕೆ ಹೊಣೆ ಅವರು ಪಡೆದ ಶಿಕ್ಷಣವೋ ಅಥವಾ ಅವರು ಬೆಳೆದು ಬಂದ ಪರಿಸರದ ಪ್ರತಿಫಲವೋ ಯಾರು ಹೇಳಬೇಕು?

ರಾಜ್ಯಪಾಲರು ಆಗಮಿಸುವಾಗ, ಭಾಷಣ ಮಾಡುವಾಗ ಹಾಗೂ ಸಭೆಯಿಂದ ನಿರ್ಗಮಿಸುವಾಗ ಸದಸ್ಯರು ಕೂಗಾಡುವರು, ಚೀರಾಡುವರು, ಭಾಷಣಕ್ಕಾಗಿ ಅಡ್ಡಿಪಡಿಸುವರು, ವೇದಿಕೆಯನ್ನೇರಿ ರಾಜ್ಯಪಾಲರ ಕೈಯಲ್ಲಿಯ ಭಾಷಣ ಪತ್ರಿಕೆಯನ್ನೇ ಕಸಿದುಕೊಳ್ಳುವರು, ಸದಸ್ಯರು ತಮ್ಮ ಸ್ಥಾನ ಬಿಟ್ಟೆದ್ದು ಸದನದ ಬಾವಿಗೆ ಬರುವುದು, ಘೋಷಣೆ ಕೂಗುವುದು, ಶಂಖ ಊದುವುದು, ಗಂಟೆ-ಜಾಗಟೆ ಬಾರಿಸುವುದು, ಕೇಕೆ ಹಾಕುವುದು, ಎತ್ತರದ ಧ್ವನಿಯಿಂದ ಕೂಗಾಡುವುದು, ಭಾಷಣ ಪತ್ರಿಕೆಯನ್ನು ಹರಿದು ಹಾಕುವುದು, ಮನಸ್ಸಿಗೆ ಬಂದಂತೆ ಒದರಾಡುವುದು, ಪ್ರತಿಭಾಷಣ ಮಾಡುವುದು, ಬಹಿಷ್ಕಾರ ಹಾಕುವುದು, ವಾಕ್‌ಔಟ್ ಮಾಡುವುದು, ರಾಜ್ಯಪಾಲರು ಏನು ಭಾಷಣ ಮಾಡುತ್ತಿದ್ದಾರೆಂಬುದನ್ನೇ ಕೇಳದಿರುವುದು, ಆ ಭಾಷಣ ಕೇಳಿ ನಂತರ ರಾಜ್ಯಪಾಲರ ನಿರ್ಗಮನದ ನಂತರ ಪತ್ರಿಕಾ ಪ್ರತಿನಿಧಿಗಳನ್ನು ಕಂಡು ತಮ್ಮ ತಮ್ಮ ಅಭಿಪ್ರಾಯಗಳನ್ನು ಕೊಡದೇ ಇರುವುದು, ರಾಜ್ಯಪಾಲರ ಭಾಷಣವನ್ನು ಸದಸ್ಯನಾಗಿ ಕೇಳಿ ಅವರ ಹಾಗೂ

ಅವರ ಸರಕಾರದ ಆಗುಹೋಗು ನಡೆದ ಘಟನೆ ಹಾಗೂ ಮುಂದಿನ ಆಗುಹೋಗು, ಧ್ಯೇಯ-ಧೋರಣೆಯನ್ನು ತಿಳಿದುಕೊಳ್ಳದೆ ಸಾರ್ವಜನಿಕರ, ಪ್ರಜಾಪ್ರತಿನಿಧಿ ಕರ್ತವ್ಯದ ಲೋಪವನ್ನೇ ಅಥವಾ ಹರಣವನ್ನೇ ಮಾಡುತ್ತಿರುವ ಅಹಿತಕರ, ಅನಾಗರಿಕ, ಅನಾವಶ್ಯಕ ಸಂವಿಧಾನ ವಿರೋಧಿ ನೀತಿ-ನಿಯಮಬಾಹಿರವಾದ ಅಕ್ರಮಗಳನ್ನೇ ಅನುಸರಿಸುವುದಾದರೆ ಪ್ರಜಾಪ್ರಭುತ್ವ ನಮಗೇಕೆ ಬೇಕೆಂದು ಪ್ರಶ್ನಿಸಬೇಕಾಗುತ್ತದೆ. ರಾಜ್ಯಗಳಲ್ಲಿಯ ಲಕ್ಷಾಂತರ ಪಂಚಾಯತಿ, ಸಂಘ, ಸಭೆ, ಸಂಸ್ಥೆ, ನಿಗಮ, ಪ್ರಾಧಿಕಾರ ಮೊದಲಾದವುಗಳ ಸದಸ್ಯರು ಸಹ ದೇಶಾದ್ಯಂತ ತಾವು ಭಾಗವಹಿಸುವ ಸಭೆಗಳಲ್ಲಿ ಸಹ ವಿಧಾನಸಭೆ, ವಿಧಾನ ಪರಿಷತ್ತು ಅಥವಾ ಜಂಟಿ ಸಭೆಗಳಲ್ಲಿ ನಡೆವ ಅನಾಗರಿಕ, ಅಕ್ರಮ, ನೀತಿಬಾಹಿರ ಘಟನೆಗಳು ನಡೆಯುತ್ತಿರುವುದಿಲ್ಲವೆಂಬ ಸಂಗತಿಯನ್ನು ಇನ್ನಾದರೂ ಈ ದೇಶದ ಶಾಸಕರು, ಸಂಸದರು ಸಭಾಂಗಣಗಳು ರಣಾಂಗಣ ಹಾಗೂ ಗೊಂದಲದ ಗೂಡುಗಳಾಗ ಬಾರದೆಂಬು ದನ್ನು ಅರಿತು ನಡೆದರೆ ಅವರಿಗೂ, ಶಾಸನ ಸಭೆಗಳಿಗೂ ಹಾಗೂ ಪ್ರಜಾತಂತ್ರ ವ್ಯವಸ್ಥೆಗೂ ಗೌರವ, ಘನತೆ ಬರಬಹುದು. ಇಲ್ಲದೇ ಹೋದರೆ ಇದು ಡೆಮೋಕ್ರಸಿ ಹೋಗಿ ಅನಾರ್ಕಿ ಆದೀತು.

❑

ಆಯವ್ಯಯ : ಸಿಬ್ಬಂದಿಗೆ ಸಿಹಿ - ಜನತೆಗೆ ಕಹಿ

ಬಜೆಟ್ ಪ್ರಕಾರ (1) ಲೋಕೋಪಯೋಗಿ ಕಾಮಗಾರಿ, (2) ಸಾಮಾನ್ಯ ಶಿಕ್ಷಣ, (3) ಕ್ರೀಡಾ ಕಾರ್ಯಕ್ರಮಗಳು ಮತ್ತು ಯುವಜನ ಸೇವಾ, (4) ವೈದ್ಯಕೀಯ ಮತ್ತು ಜನಾರೋಗ್ಯ, (5) ಕುಟುಂಬ ಕಲ್ಯಾಣ, (6) ಗೃಹನಿರ್ಮಾಣ, (7) ಹರಿಜನ, ಗಿರಿಜನ ಮತ್ತು ಇತರ ಹಿಂದುಳಿದ ವರ್ಗಗಳ ಕಲ್ಯಾಣ, (8) ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ, (9) ಸಸ್ಯ ಸಂಗೋಪನೆ, (10) ಭೂಸಾರ ಮತ್ತು ಜಲಸಂರಕ್ಷಣೆ, (11) ಪಶುಸಂಗೋಪನೆ, (12) ಮೀನುಗಾರಿಕೆ, (13) ಅರಣ್ಯ ಮತ್ತು ವನ್ಯಜೀವನ, (14) ಗ್ರಾಮೀಣ ಅಭಿವೃದ್ಧಿಗೆ ವಿಶೇಷ ಕಾರ್ಯಕ್ರಮಗಳು, (15) ಗ್ರಾಮೀಣ ಉದ್ಯೋಗ, (16) ಇತರೆ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳು, (17) ಸಣ್ಣ ನೀರಾವರಿ, (18) ಗ್ರಾಮೋದ್ಯಮ ಮತ್ತು ಸಣ್ಣ ಉದ್ಯಮಗಳು, (19) ಉದ್ಯಮಗಳು, (20) ಸಚಿವಾಲಯ ಆರ್ಥಿಕ ಸೇವೆಗಳು - ಹೀಗೆ ಈ 20 ಸರಕಾರಿ ಮತ್ತು ಪಂಚಾಯತಿ ಇಲಾಖೆಯಲ್ಲಿ, ಜಿಲ್ಲಾ ಪಂಚಾಯತಿಗಳಲ್ಲಿ 317418 ಅಧಿಕಾರಿ ಸಿಬ್ಬಂದಿಗಳಿವೆ. ಇವೇ ಈ 20 ಇಲಾಖೆಗಳಲ್ಲಿ ಸರಕಾರಿ ಸಿಬ್ಬಂದಿ ಅಧಿಕಾರಿಗಳ ಸಂಖ್ಯೆ 102741 ಇವೆ. ಈ 20 ಇಲಾಖೆಗಳಲ್ಲಿ ಸರಕಾರಿ ವ ಜಿಲ್ಲಾ ಪಂಚಾಯತಿ ಅಧಿಕಾರಿ ಸಿಬ್ಬಂದಿಗಳ ಸಂಖ್ಯೆ ಒಟ್ಟು 420159 ಇರುತ್ತವೆ. ಈ ಎಲ್ಲ ಇಲಾಖೆಗಳಿಗೆ ಬಜೆಟ್ ಪ್ರಕಾರ ನಿಗದಿಗೊಳಿಸಿದ ಹಣವನ್ನು ಈ ಎಲ್ಲ 4.21 ಲಕ್ಷ ಸಿಬ್ಬಂದಿ ಸಂಪೂರ್ಣವಾಗಿ ಸತತವಾಗಿ ವೆಚ್ಚ ಮಾಡದೇ ಇರುವುದು ಬಜೆಟ್ ಪುಸ್ತಕಗಳನ್ನು ನೋಡಿದರೆ ಸುಸ್ಪಷ್ಟವಾಗಿರುತ್ತದೆ. ಬಜೆಟ್ ಅಧಿವೇಶನ ಕಾಲಕ್ಕೆ ಈ ಎಲ್ಲ ಇಲಾಖೆಗಳಿಗೆ ಹೆಚ್ಚಿನ ಹಣ ತೋರಿಸುವುದು ಹಾಗೂ ಶಾಸನಸಭೆಯನ್ನು ಪುಸಾಯಿಸುವುದು ವ ವಂಚಿಸುವುದು, ಮುಂದಿನ ವರ್ಷ ಆ ಹೆಚ್ಚಿನ ಹಣವನ್ನು ಕಡಿಮೆಗೊಳಿಸುವುದು, ಆ ಮುಂದಿನ ವರ್ಷ ಕಡಿಮೆ ಹಣ ವೆಚ್ಚ ಮಾಡಿದ್ದನ್ನು ತೋರಿಸುವುದು ಹಾಗೂ ಹಿಂದಿನದನ್ನು ಯಾರೂ ನೋಡದಂತೆ ಮಾಡುವುದು ನಡೆದೇ ಇದ್ದು, ಇದು ಹೀಗೆಯೇ ಮುಂದುವರೆದರೆ ಬಜೆಟ್ ಪ್ರಕಾರ ಹಣ ವೆಚ್ಚವಾಗದೇ ಹಾಗೆಯೇ ಪ್ರತಿವರ್ಷ ಮುಂದುವರೆಯುವುದಾದರೆ ಹಾಗೂ ಅಭಿವೃದ್ಧಿ ಪ್ರತಿವರ್ಷ ಹಿಂದೆ ಬೀಳುತ್ತ ಹೋಗುವುದಾದರೆ ಇದಕ್ಕೆ ಮುಂದಿನ ಕ್ರಮವಾದರೂ ಏನು?

ಈ ವರ್ಷ ಬಜೆಟ್ ಅಧಿವೇಶನದಲ್ಲಿ ಮಂಡಿಸಿದ ಆಯವ್ಯಯದ ಪ್ರಕಾರ ಮೇಲಿನ 20 ಇಲಾಖೆಗಳಿಗೆ 1996-97 ರಲ್ಲಿ ಗೊತ್ತುಪಡಿಸಿದ ಕೇವಲ 5033.59 ಕೋಟಿ ಹಣವನ್ನು ಸಂಪೂರ್ಣವಾಗಿ ವೆಚ್ಚ ಮಾಡದೆ 675.29 ಕೋಟಿ ಹಣವನ್ನು ಉಳಿಸಲಾಗಿದೆ. ಹಿಂದಿನ ವರ್ಷದ ಬಜೆಟ್ ಪ್ರಕಾರ ಈ ಇಪ್ಪತ್ತು ಇಲಾಖೆಗಳಿಗೆ 95-96 ರಲ್ಲಿ ಗೊತ್ತುಪಡಿಸಿದ ಹಣವನ್ನು ಸಹ ಸಂಪೂರ್ಣವಾಗಿ ವೆಚ್ಚ ಮಾಡದೇ 640.62 ಕೋಟಿ ಹಣವನ್ನು ಉಳಿಸಲಾಗಿದೆ. ಹೀಗೆಯೇ ಇದು ಮುಂದುವರೆದರೆ 420159 ಅಧಿಕಾರಿ ಸಿಬ್ಬಂದಿಯನ್ನು ಸಾಕಿ ಇವರಿಗೆ ಸಹಸ್ರಾರು ಕೋಟಿ ವೇತನ, ಭತ್ಯೆ ಕೊಟ್ಟು ಗ್ರಾಮಾಭಿವೃದ್ಧಿಗೆ ಸಹಸ್ರಾರು ಕೋಟಿ ವೆಚ್ಚ ಮಾಡದೆ ಉಳಿಸಿ ಸರಕಾರ ಇವರಿಗೆ ಸಿಹಿಯನ್ನು ಪ್ರತಿವರ್ಷ ಕೊಡುತ್ತ ಗ್ರಾಮಾಂತರ ಜನತೆಗೆ ಪ್ರತಿವರ್ಷ ಕಹಿ ಕೊಡುವುದೇ ಸರಕಾರದ ಉದ್ದೇಶವೇ? ಇದನ್ನು ಹೀಗೆಯೇ ಪ್ರತಿವರ್ಷ ಮುಂದುವರಿಸುವುದಾದರೆ ಇದನ್ನೆಲ್ಲಾ ಕಂಡು ನೋಡದೆ ಅಥವಾ ಕಂಡು ನೋಡಿದರೆ ನಿಸ್ಸಹಾಯಕರಾಗಿ ಯಾವುದೇ ಕ್ರಮ ತೆಗೆದುಕೊಳ್ಳದೆ ಹೋದರೆ ಎಲ್ಲಾ ಹಂತದ ಪ್ರಜಾಪ್ರತಿನಿಧಿಗಳು ಇರುವುದಾದರೂ ಏತಕ್ಕೆಂದು ಪ್ರಶ್ನಿಸಬೇಕಾಗುತ್ತದೆ. ಇನ್ನಾದರೂ ಈ ದಿಶೆಯಲ್ಲಿ ಹೊಣೆಗಾರ ಪ್ರತಿನಿಧಿಗಳಾದವರು ಹಾಗೂ ಅಧಿಕಾರಿ ಸಿಬ್ಬಂದಿಗಳು ತಮ್ಮ ಹೊಣೆಯರಿತು ಸಾರ್ವಜನಿಕ ಉಪ್ಪು ಉಂಡು ಅವರ ಋಣ ತೀರಿಸಬೇಕೆಂಬ ಅರಿವನ್ನು ಅರಿಯುವುದು ಒಳ್ಳೆಯದು.

ರಾಜ್ಯದಲ್ಲಿ ಜಿಲ್ಲಾ ಪಂಚಾಯತಿಗಳ ಸಂಖ್ಯೆ 20 ರಿಂದ 27ಕ್ಕೆ ಏರಿದೆ. ಗ್ರಾಮೀಣ ಕ್ಷೇತ್ರದ ಹಾಗೂ ಗ್ರಾಮೀಣ ಜನತೆಯ ಸರ್ವತೋಮುಖ ಪ್ರಗತಿಯನ್ನು ಸಾಧಿಸುವುದು ಇವುಗಳ ಮಹಾನ್ ಉದ್ದೇಶವಾಗಿದೆ. ಈ ಉದ್ದೇಶ ಸಾಧಿಸುವಲ್ಲಿ ಅಧಿಕಾರಿ ಸಿಬ್ಬಂದಿಯ ಪಾತ್ರ ಅತೀ ಮುಖ್ಯವಾಗಿದೆ. ಅಧಿಕಾರಿ ಸಿಬ್ಬಂದಿಗೆ ಸರ್ವ ಮಾಹಿತಿ, ಹಣಕಾಸಿನ ವ್ಯವಸ್ಥೆ, ಹಣದ ಬಳಕೆ, ನಿರ್ಬಳಕೆ, ದುರ್ಬಳಕೆ ಎಲ್ಲಾ ಗೊತ್ತೇ ಇರುತ್ತದೆ. ಆದರೆ ಈ ಎಲ್ಲ ಮಾಹಿತಿ ಎಲ್ಲಾ ಹಂತದ ಚುನಾಯಿತ ಪ್ರತಿನಿಧಿಗಳಿಗೆ ಗೊತ್ತಿರುವುದಿಲ್ಲ ಹಾಗೂ ಗೊತ್ತು ಮಾಡಿಕೊಳ್ಳಲಿಕ್ಕೆ ಯಾರೂ ಪ್ರಯತ್ನಿಸುವುದಿಲ್ಲ. ಇದು ಜನಸಾಮಾನ್ಯರ ದುರ್ದೈವ. ಪ್ರತಿವರ್ಷ ವಿಧಾನಸಭೆಯ ಬಜೆಟ್ ಅಧಿವೇಶನದಲ್ಲಿ ಯಾವ್ಯಾವ ಜಿಲ್ಲಾ ಪಂಚಾಯತಿಗೆ ಯಾವ್ಯಾವ ಯೋಜನೆಗಳಿಗೆ ಯಾವ್ಯಾವ ಇಲಾಖೆಗೆ ಎಷ್ಟೆಷ್ಟು ಹಣವನ್ನು ತೆಗೆದಿರಿಸಲಾಗಿದೆ ಎಂಬುದನ್ನು ಯಾವ್ಯಾವ ಲೆಕ್ಕಶೀರ್ಷಿಕೆಗಳಿಗೆ ಯಾವ್ಯಾವ ಸೇವೆಯಲ್ಲಿ ಎಷ್ಟೆಷ್ಟು ಹಣ ತೆಗೆದಿಡಲಾಗಿದೆ ಹಾಗೂ ಯಾವ್ಯಾವ ಶೀರ್ಷಿಕೆಗೆ ಸಂಬಂಧಿಸಿದ ಅಧಿಕಾರಿ ಸಿಬ್ಬಂದಿಗೆ ಎಷ್ಟೆಷ್ಟು ವೇತನ ಭತ್ಯೆ, ಇತರೆ ಭತ್ಯೆ ಹಾಗೂ ಪರಿಹಾರದ ಬಾಬ್ತು ಎಷ್ಟೆಷ್ಟು ಹಣ ತೆಗೆದಿಡಲಾಗುತ್ತದೆ ಎಂಬುದನ್ನು ಸಹ ಬಜೆಟ್ ಅಧಿವೇಶನದಲ್ಲಿ ಹೇಳಲಾಗುತ್ತಿದೆ. ಈ ಎಲ್ಲ ಜಿಲ್ಲಾ ಪಂಚಾಯತಿಗಳಲ್ಲಿನ ನೌಕರರ ಸಂಖ್ಯೆ 317418 ಇದೆ. ಈ ಸಿಬ್ಬಂದಿಗೆ ಕೊಡುತ್ತಿರುವ ವೇತನ, ತುಟ್ಟಿಭತ್ಯೆ, ಇತರೆ ಭತ್ಯೆ, ಮಧ್ಯಂತರ ಪರಿಹಾರ ಇತ್ಯಾದಿಗೆ ವೆಚ್ಚ ಮಾಡುವ ಹಣ ಪ್ರತಿವರ್ಷ ಹೆಚ್ಚಾಗುತ್ತ ಹಾಗೂ ಬಜೆಟ್ ಮೀರಿ ಖರ್ಚಾಗುತ್ತ ಬರುತ್ತಿದ್ದು ಈ ಮೊತ್ತ 1998-99ರಲ್ಲಿ ಬಜೆಟ್ ಪ್ರಕಾರ 1946.76 ಕೋಟಿಗೆ ಏರಿದೆ.

ಸರಕಾರಿ ನೌಕರರ ವೇತನ ಭತ್ಯೆ 95-96ರಲ್ಲಿ 2480.74 ಕೋಟಿ, 96-97ರಲ್ಲಿ 3028.11 ಕೋಟಿ, 97-98ರಲ್ಲಿ 3390.57 ಕೋಟಿ ಹೀಗೆ ಏರುತ್ತಲಿದ್ದು 98-99ರಲ್ಲಿ ಸಹ ಭಾರೀ ಏರಲಿದೆ. ನಿವೃತ್ತ ವೇತನ ಭತ್ಯೆ ಸಹ 96-97ರಲ್ಲಿ 716.41 ಕೋಟಿಯಾಗಿದ್ದು, 97-98ರಲ್ಲಿ 889.26 ಕೋಟಿ, 98-99ರಲ್ಲಿ 1041.00 ಕೋಟಿಗೆ ಏರಲಿದೆ. ಈ ಮೊತ್ತವನ್ನು ಇಷ್ಟೇ ಆಗಲಿ ಅಥವಾ ಬಜೆಟ್ ಮೀರಿ ಇನ್ನೂ ಎಷ್ಟೇ ಹೆಚ್ಚಾದರೂ ಅದನ್ನು ಕೊಡಲೇಬೇಕು, ಅದು ಅನಿವಾರ್ಯ. ಈ ಇಪ್ಪತ್ತು ಇಲಾಖೆಗಳಲ್ಲಿಯ 102741. ಸರಕಾರಿ ನೌಕರರಿಗೆ ಸಹ ಕೊಡಬೇಕಾದ ವೇತನ ಭತ್ಯೆ ವಿವರ ಅಂಕಿ-ಸಂಖ್ಯೆ ಎಲ್ಲೂ ಸಿಗಲಾರವು. ಇಷ್ಟೊಂದು ಭಾರೀ ಪ್ರಮಾಣದ ಅಧಿಕಾರಿ ಸಿಬ್ಬಂದಿ ತಾವು ಜನತೆಯ ಸೇವಕರೆಂಬ ಭಾವನೆಯನ್ನು ತಾಳಿ ಗ್ರಾಮೀಣ ಜನತೆಗೆ ಹಾಗೂ ಅವರಿಗೆ ಮೀಸಲಾಗಿ ಬಜೆಟ್‌ನಲ್ಲಿ ತೆಗೆದಿಟ್ಟ ನಿಗದಿತ ಹಣವನ್ನು ಪ್ರತಿವರ್ಷ ನೂರಕ್ಕೆ ನೂರರಷ್ಟು ವೆಚ್ಚ ಮಾಡಿ ಜನತೆಯ ಗ್ರಾಮೀಣ ಅಭಿವೃದ್ಧಿ ಸಾಧಿಸಲೇಬೇಕೆಂಬ ಗುರಿ ಹಾಗೂ ಸದೀಚ್ಛೆ ಇಲ್ಲದೆ ಪ್ರತಿವರ್ಷ ಹಲವು ನೂರಾರು ಕೋಟಿ ಹಣ ವೆಚ್ಚ ಮಾಡದೆ ಅಭಿವೃದ್ಧಿ ಕುಂಠಿತಗೊಳಿಸುತ್ತಿರುವುದು ನಾಚಿಕೆಗೇಡೆಂದು ಹೇಳದೇ ಗತ್ಯಂತರವಿಲ್ಲ. ಈ ಅಧಿಕಾರಿ ಸಿಬ್ಬಂದಿ ಇನ್ನಾದರೂ ತಾವು ಈ ರಾಜ್ಯದ ಜನತೆಯ ಮಕ್ಕಳೇ ಇರುವರೆಂಬ ಅರಿವು ಹಾಗೂ ಮಾನವತೆಯ ನೆನಪನ್ನು ಜ್ಞಾಪಿಸಿಕೊಂಡು ಅಧಿಕಾರ ನಿರ್ವಹಿಸಿದರೆ ಒಳ್ಳೆಯದು. ಭ್ರಷ್ಟಾಚಾರ, ಪಕ್ಷಪಾತ, ಸ್ವಜನ ಪಕ್ಷಪಾತ, ದುರಾಡಳಿತ ಹಾಗೂ ಅಧಿಕಾರ ದುರುಪಯೋಗ ಮಾಡಿದವರ ಮೇಲೆ ಸರಕಾರವಾಗಲೀ, ಸರಕಾರದಲ್ಲಿಯ ಪ್ರಜಾಪ್ರತಿನಿಧಿಗಳಾಗಲೀ ಯಾರೂ ಯಾವುದೇ ಶಿಸ್ತಿನ, ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುವ ಎದೆಗಾರಿಕೆಯೇ ಇಲ್ಲದಿರುವುದರಿಂದ ಅಧಿಕಾರಿ ಸಿಬ್ಬಂದಿಯೇ ಮಾನವೀಯತೆ ದೃಷ್ಟಿಯಿಂದ ಪ್ರಾಮಾಣಿಕ ಕೆಲಸ ಮಾಡುವುದು ಅಗತ್ಯ.

❑

ಬಜೆಟ್ ದುಷ್ಪರಿಣಾಮ
ಅಸಮರ್ಪಕ ರಸ್ತೆ ಸಂಪರ್ಕ

ರಸ್ತೆ ಸಂಪರ್ಕ ರಾಜ್ಯದ ಎಲ್ಲಾ ಜನತೆಗೆ ಅಮೂಲ್ಯ ಹಾಗೂ ಅಗತ್ಯವಾದ ಸಾಧನ. ಈ ಸಾಧನ ಸಂಪೂರ್ಣ ಹಾಗೂ ಸಮರ್ಪಕ ಅನುಕೂಲವಾದರೆ ಮಾತ್ರ ಪ್ರಗತಿಗೆ ತಾರಕ, ಇಲ್ಲವಾದರೆ ಅದು ಮಾರಕ. ನಮ್ಮ ರಾಜ್ಯದ ಭೂಗೋಲಿಕ ವಿಸ್ತೀರ್ಣ 1.92 ಲಕ್ಷ ಚದರ ಕಿ.ಮೀ. ಇದೆ. ರಾಜ್ಯದಲ್ಲಿಯ ಹಳ್ಳಿ, ಪಟ್ಟಣಗಳ ಸಂಖ್ಯೆ 28000 ಮೀರಿರುತ್ತದೆ. 5655 ಗ್ರಾಮ ಪಂಚಾಯತಿ ಕೇಂದ್ರ, 7081 ಹಾಲು ಸಂಘಗಳ ಕೇಂದ್ರ, 8718 ಗ್ರಾಮ ಲೆಕ್ಕಾಧಿಕಾರಿಗಳ ಕಛೇರಿ ಕೇಂದ್ರ, 4350 ವ್ಯವಸಾಯ ಸೇವಾ ಸಹಕಾರಿ ಸಂಘಗಳ ಕೇಂದ್ರ, 745 ಕಂದಾಯ ಹೋಬಳಿ ಕೇಂದ್ರ, 175 ತಾಲ್ಲೂಕು ಕಛೇರಿ ಕೇಂದ್ರ, 49 ಉಪವಿಭಾಗ ಕೇಂದ್ರ, 27 ಜಿಲ್ಲಾ ಕೇಂದ್ರ, 4 ಕಂದಾಯ ವಿಭಾಗ ಕೇಂದ್ರ, ಒಂದು ರಾಜಧಾನಿ ಬೆಂಗಳೂರು ಕೇಂದ್ರ, ಈ ಸಂಖ್ಯೆ ರಾಜ್ಯಾದ್ಯಂತ ಅಸಂಖ್ಯಾತವಾಗಿ ಬೆಳೆಯುತ್ತಲೇ ಇದೆ. ರಾಜ್ಯಾದ್ಯಂತ ಶಿಕ್ಷಣ, ವಾಣಿಜ್ಯ, ವೈದ್ಯಕೀಯ, ವ್ಯಾಪಾರ ಹಾಗೂ ಪ್ರೇಕ್ಷಣೀಯ ಕೇಂದ್ರಗಳು ಸಹ ಸಾಕಷ್ಟು ಇವೆ. ಇವೆಲ್ಲ ಕೇಂದ್ರಗಳ ಸಾರ್ವಜನಿಕ ಉಪಯುಕ್ತತೆಗಾಗಿ ರೈಲ್ವೆ, ವಾಯು ಹಾಗೂ ಹಡಗು ನಾವೆಗಳ ಸಂಪರ್ಕ ಸಾಧನಗಳಿಗಿಂತ ರಸ್ತೆ ಸಂಪರ್ಕ ಸಾಧನವೇ ಅತಿ ಮುಖ್ಯವಾದುದಾಗಿದ್ದು ರಾಜ್ಯದ ಜನತೆಗೆ ದಿನ ಹಾಗೂ ರಾತ್ರಿಗಳಲ್ಲಿ ಅತೀ ಅವಶ್ಯ ಹಾಗೂ ಅತ್ಯಗತ್ಯವಾಗಿದೆ. ರಸ್ತೆ ಸಂಪರ್ಕವನ್ನು ಸುಗಮ ಗೊಳಿಸುವುದು ರಾಜ್ಯ ಸರಕಾರದ ಆದ್ಯ ಕರ್ತವ್ಯ. ಈ ದಿಶೆಯಲ್ಲಿ ಪ್ರತಿವರ್ಷ ರಸ್ತೆಗಳ ರಚನೆಗಾಗಿ, ರಸ್ತೆಗಳ ನಿರ್ವಹಣೆಗಾಗಿ, ರಸ್ತೆಗಳ ದುರಸ್ತಿಗಾಗಿ ಸಾಕಷ್ಟು ಹಣವನ್ನು ಬಜೆಟ್ ನಲ್ಲಿ ತೆಗೆದಿರಿಸಿ ಅದನ್ನು ಸಂಪೂರ್ಣವಾಗಿ ವೆಚ್ಚ ಮಾಡಿ ಜನತೆಗೆ ಸುಗಮವಾದ ಸಂಪರ್ಕ ವನ್ನು ಒದಗಿಸಬೇಕಾಗುತ್ತದೆ. ಈ ದಿಸೆಯಲ್ಲಿ ಪ್ರತಿವರ್ಷ ಹೆಚ್ಚಿನ ರಸ್ತೆಗಳನ್ನು ನಿರ್ಮಾಣ ಮಾಡದೆ ಹಾಗೂ ಇದ್ದಬಿದ್ದ ರಸ್ತೆಗಳನ್ನು ನಿರ್ವಹಣೆ ಹಾಗೂ ದುರಸ್ತಿ ಮಾಡದೇ ರಾಜ್ಯಾದ್ಯಂತ ರಸ್ತೆಗಳನ್ನು ನಾದುರಸ್ತೆ ಹಾಗೂ ಹಾಳು ಮಾಡಿ ಅಸಂಖ್ಯಾತ ರಸ್ತೆ ದುರಂತ ಹಾಗೂ ದುರ್ಮರಣಗಳಿಗೆ ದಾರಿಮಾಡಿ ಜನತೆಯನ್ನು ಸರಕಾರ ಸಂಕಷ್ಟಕ್ಕೀಡುಮಾಡಿದೆ ಹಾಗೂ ನಿರಂತರವಾಗಿ ಈ ಕೊಡುಗೆ ಮುಂದುವರಿಯಲಿದೆ. ಇದು ಏಕೆ?

ರಾಜ್ಯದಲ್ಲಿ ರಾಷ್ಟ್ರೀಯ ಹೆದ್ದಾರಿ 1997 ಕಿ.ಮೀ. ರಾಜ್ಯ ಹೆದ್ದಾರಿ 11395 ಕಿ.ಮೀ., ಜಿಲ್ಲಾ ಮತ್ತು ಮುಖ್ಯರಸ್ತೆ 28311 ಕಿ.ಮೀ, ಇತರ ಜಿಲ್ಲಾ ರಸ್ತೆ 2090 ಕಿ.ಮೀ., ಜಿಲ್ಲಾ ಪಂಚಾಯತಿ ಗ್ರಾಮೀಣ ರಸ್ತೆ 37984 ಕಿ.ಮೀ., ತಾಲ್ಲೂಕು ಪಂಚಾಯತಿ (ಟಿ.ಡಿ.ಜಿ.) ರಸ್ತೆ 30020 ಕಿ.ಮೀ., ನೀರಾವರಿ ಇಲಾಖೆ ಗ್ರಾಮೀಣ ರಸ್ತೆ 9417 ಕಿ.ಮೀ., ಅರಣ್ಯ ಇಲಾಖೆ ರಸ್ತೆ 2582 ಕಿ.ಮೀ. ಹೀಗೆ ಈ ಎಂಟು ತರಹದ ರಸ್ತೆಯ ಉದ್ದ ಒಟ್ಟು 123796 ಕಿ.ಮೀ. ಇದೆ. ರಾಜ್ಯದಲ್ಲಿಯ ಯಾವುದೇ ಒಂದು ಜನವಸತಿ ಗ್ರಾಮ, ನಗರ ಸುತ್ತಲಿನ ಎಲ್ಲಾ ಗ್ರಾಮಗಳಿಗೆ ಸುಸಜ್ಜಿತವಾದ ರಸ್ತೆ, ಸಂಪರ್ಕ, ವಿವಿಧ ಉದ್ದೇಶಗಳಿಗೆ ಸಂಪೂರ್ಣವಾಗಿ ಇರಲೇ ಬೇಕು, ಇದೆಯೇ? ಇಲ್ಲ. ಏಕೆ? ಸರಕಾರದ ಜವಾಬ್ದಾರಿಯೇನು? ವಾಸ್ತವಿಕವಾಗಿ 1995-96ರಲ್ಲಿ 13392 ಕಿ.ಮೀ. ಉದ್ದದ ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳಿಗೆ 138.40 ಕೋಟಿ ವೆಚ್ಚವನ್ನು ಮಾಡಿದ್ದು ಉಳಿದೆಲ್ಲ ಇತರ 110399 ಕಿ.ಮೀ. ಉದ್ದದ ರಸ್ತೆಗಳಿಗೆ ಕೇವಲ 77.97 ಕೋಟಿ ವೆಚ್ಚವನ್ನು ಮಾತ್ರ ಮಾಡಲಾಗಿದೆ. ಇದೇ ಈ ಎಲ್ಲಾ ಇತರ ರಸ್ತೆಗಳಿಗೆ 96-97ರ ಬಜೆಟ್‌ನಲ್ಲಿ 93.11 ಕೋಟಿ ನಿಗದಿಗೊಳಿಸಿದ್ದನ್ನು ಪರಿಷ್ಕೃತ ಬಜೆಟ್‌ನಲ್ಲಿ 79.70 ಕೋಟಿಗೆ ಇಳಿಸಲಾಗಿದೆ. ಇದು ಸಮಂಜಸವೆ?

ರಾಜ್ಯದ ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದ ಲೋಕೋಪಯೋಗಿ ಕಾಮಗಾರಿ (2059), ಲೋಕೋಪಯೋಗಿ ಕಾಮಗಾರಿ ಮೇಲಣ ಬಂಡವಾಳ ವೆಚ್ಚ (4059), ರಸ್ತೆ ಮತ್ತು ಸೇತುವೆಗಳು (3054), ರಸ್ತೆ ಮತ್ತು ಸೇತುವೆಗಳ ಮೇಲಣ ಬಂಡವಾಳ ವೆಚ್ಚ (5054) ಹೀಗೆ ನಾಲ್ಕು ಪ್ರಮುಖ ಶೀರ್ಷಿಕೆಗಳಿರುತ್ತವೆ. ಜಿಲ್ಲಾ ಪಂಚಾಯತಿಗೆ ಸಂಬಂಧಿಸಿದ ಲೋಕೋಪಯೋಗಿ ಕಾಮಗಾರಿ (2059) ಈ ಶೀರ್ಷಿಕೆಯಲ್ಲಿ ಸಿಬ್ಬಂದಿ ಸಂಖ್ಯೆ 9294 ಇದ್ದು, ಇವರೆಲ್ಲರಿಗೆ 98-99ರಲ್ಲಿ 58.17 ಕೋಟಿ ಮೊತ್ತ ವೇತನ ಭತ್ಯೆ ತಾತ್ಕಾಲಿಕ ಪರಿಹಾರವನ್ನು ಬಜೆಟ್ ಪ್ರಕಾರ ಸಂಪೂರ್ಣ ಅಥವಾ ಹೆಚ್ಚು ಕೊಡಲಾಗುತ್ತಿದೆ. ಲೋಕೋಪಯೋಗಿ ಕಾಮಗಾರಿ ಹಾಗೂ ಕಾಮಗಾರಿ ಮೇಲೆ ಬಂಡವಾಳ ವೆಚ್ಚಕ್ಕಾಗಿ 95-96 ಹಾಗೂ 96-97ರ ಬಜೆಟ್‌ನಲ್ಲಿ 331.13 ಕೋಟಿ ಮೊತ್ತವನ್ನು ನಿಗದಿಪಡಿಸಿದ್ದರೂ ಅದರಲ್ಲಿ 291.79 ಕೋಟಿ ವಾಸ್ತವಿಕ ವೆಚ್ಚ ಮಾಡಿ 39.34 ಕೋಟಿ ಮೊತ್ತವನ್ನು ಬಜೆಟ್ ಪ್ರಕಾರ ಬಳಸದೇ ಬಿಡಲಾಗಿದೆ. ಲೋಕೋಪಯೋಗಿ (2059) ಇಲಾಖೆಯಲ್ಲಿ 16105 ಸಿಬ್ಬಂದಿ, ರಸ್ತೆ ಮತ್ತು ಸೇತುವೆ (3054) ಇಲಾಖೆಯಲ್ಲಿ 1565 ಸಿಬ್ಬಂದಿ ಹೀಗೆ ಒಟ್ಟು 17670 ಸಿಬ್ಬಂದಿ ಸರಕಾರಿ ವ್ಯಾಪ್ತಿಯಲ್ಲಿ ಬರುತ್ತದೆ. ರಸ್ತೆ ಮತ್ತು ಸೇತುವೆ, ರಸ್ತೆ ಮತ್ತು ಸೇತುವೆ ಮೇಲಿನ ಬಂಡವಾಳ ವೆಚ್ಚ ಈ ಎರಡು 3054 ಮತ್ತು 5054 ಶೀರ್ಷಿಕೆಗಳಲ್ಲಿ 95-96ರಲ್ಲಿ ಬಜೆಟ್‌ನಲ್ಲಿ 226.66 ಕೋಟಿ ಮೊತ್ತವನ್ನು ನಿಗದಿಮಾಡಿದ್ದರೂ 214.77 ಕೋಟಿ ಮೊತ್ತವನ್ನು ವೆಚ್ಚ ಮಾಡಿ 11.89 ಕೋಟಿ ಮೊತ್ತವನ್ನು ಬಳಸದೇ ಬಿಡಲಾಗಿದೆ. ಕೆಲವು ಶೀರ್ಷಿಕೆಗಳಲ್ಲಿ ಬಜೆಟ್‌ಗಿಂತ ಹೆಚ್ಚು ಹಣವನ್ನು ವೆಚ್ಚ ಮಾಡುವ ಸಂಪ್ರದಾಯ ಕೆಲವು

ಶೀರ್ಷಿಕೆಗಳಲ್ಲಿರುವಾಗ ಸಾರ್ವಜನಿಕರಿಗೆ ಬಹು ಉಪಯೋಗಿ ಕಾರ್ಯ, ರಸ್ತೆ, ಸೇತುವೆ ಸೇವೆಯಂತಹ ಇನ್ನೂ ಅನೇಕ ಸಾರ್ವಜನಿಕ ಸುಗಮ ಸಂಪರ್ಕ ಸೇವೆಗಳಿಗೆ ಪ್ರತಿವರ್ಷ ಅತೀ ಕಡಿಮೆ ಹಣವನ್ನು ನಿಗದಿ ಮಾಡುತ್ತ ಹಾಗೂ ಅದರಲ್ಲಿಯೇ ಸಂಪೂರ್ಣ ಹಣ ವೆಚ್ಚ ಮಾಡದೇ ಸಾರ್ವಜನಿಕರಿಗೆ ಅನಾನುಕೂಲ, ತೊಂದರೆದಾಯಕ ಮಾಡುತ್ತ ಅವರಿಗೆ ಸಿಗಬೇಕಾದ ಸಂಪರ್ಕ ಸೌಲಭ್ಯ, ಸೌಕರ್ಯ ಹಾಗೂ ಅನುಕೂಲತೆಗಳನ್ನು ಒದಗಿಸದೇ ಹೋಗುವುದಾದರೆ ಸರಕಾರದ ಕೆಲಸವಾದರೂ ಏನು? ರಾಜ್ಯದಲ್ಲಿಯ ಇಷ್ಟೊಂದು ಉದ್ದದ ರಸ್ತೆ ದುರಸ್ತಿ ಕಾರ್ಯಕ್ಕೆ 95-96ರಲ್ಲಿ 63.43 ಕೋಟಿ, 96-97ರಲ್ಲಿ 75.59 ಕೋಟಿ ಮಾತ್ರ ಲೋಕೋಪಯೋಗಿ ಇಲಾಖೆ ವೆಚ್ಚ ಮಾಡಿದ್ದು, ಈ ಮೊತ್ತ ಸಾಕಾಗದೇ ರಾಜ್ಯದಲ್ಲಿಯ ರಸ್ತೆಗಳು ಸುಗಮ ಸಂಚಾರಕ್ಕೆ ಮಾರಿಯಾಗಿರುವ ಸುಸ್ಪಷ್ಟ ಚಿತ್ರ ಎಲ್ಲರಿಗೂ ಗೊತ್ತಿದೆ. ದುರಸ್ತಿ ಕಾರ್ಯ ಸಮರ್ಪಕವಾಗದೇ ಸಾರ್ವಜನಿಕ ಸಂಚಾರಕ್ಕೆ ತೊಂದರೆ ಮುಂದುವರಿದೇ ಇದೆ. ಇದಕ್ಕೆ ಪರಿಹಾರವೇನು? ರಾಜ್ಯದಲ್ಲಿರುವ ರಸ್ತೆ ನಿರ್ವಹಣೆಗೆ 7630 ಗ್ಯಾಂಗ್‌ಮನ್‌ರು ಅವಶ್ಯಕವಾಗಿರಬೇಕೆಂದು ಹಾಗೂ ಅವರಲ್ಲಿ 4866 ಜನ ಗ್ಯಾಂಗ್‌ಮನ್‌ರು ಮಾತ್ರ ಇರುತ್ತಾರೆಂದು ಸರಕಾರ ಹೇಳಿದ್ದು, ಈ ಎಲ್ಲಾ ಗ್ಯಾಂಗ್‌ಮನ್ನರು ಎಲ್ಲಿ, ಯಾವಾಗ ಕೆಲಸ ಮಾಡುತ್ತಾರೆಂಬುದು ಆಯಾ ಎಂಜಿನೀಯರರಿಗೆ ಮಾತ್ರ ಗೊತ್ತೇ ವಿನಹ ಯಾರಿಗೂ ಕಾಣದು. ರಸ್ತೆಗಳ ನಿರ್ವಹಣೆ ಇವರಿಂದ ಎಲ್ಲಿಯೂ ಸಮರ್ಪಕವಾಗಿ ಆಗುತ್ತಿಲ್ಲವೆಂಬುದು ರಾಜ್ಯಾದ್ಯಂತ ಯಾವ ರಸ್ತೆಗಳನ್ನು ನೋಡಿದರೂ ಸುಸ್ಪಷ್ಟವಿದೆ. ಬಜೆಟ್ ಅಂದಾಜಿನ ವೆಚ್ಚ ಪ್ರತಿವರ್ಷ ಎಷ್ಟರ ಮಟ್ಟಿಗೆ ಹೆಚ್ಚಾಗಬೇಕಾಗಿತ್ತು, ಅಷ್ಟರಮಟ್ಟಿಗೆ ಹೆಚ್ಚಾಗದೇ ಹಾಗೂ ಸಾಕಷ್ಟು ಹಣ ಇರದೆ ಅಂದಾಜು ಕೂಡಾ ಪ್ರತಿ ವರ್ಷ ಬಹುತೇಕ ಎಲ್ಲಾ ಸಾಮಾನ್ಯ, ಸಾಮಾಜಿಕ ಹಾಗೂ ಆರ್ಥಿಕ ಸೇವೆಗಳಿಗೆ ವೆಚ್ಚವಾಗದೇ ಇರುವ ಬಗ್ಗೆ ಎಲ್ಲರೂ ಗಂಭೀರವಾಗಿ ಯೋಚಿಸುವುದಗತ್ಯ. ಈ ಎಲ್ಲಾ ಲೋಪಗಳಿಗೆ ಶಾಸಕರ, ಸಂಸದರ, ಮಂತ್ರಿಗಳ, ನಿಷ್ಕ್ರಿಯತೆಯೇ ಕಾರಣವೆಂದರೆ ತಪ್ಪಾಗಲಾರದು. ರಾಜ್ಯದ ಜನತೆಯ ಕಲ್ಯಾಣ ಸಾಧನೆಗಾಗಿ ರೂಪಿತವಾಗಿರುವ ರಾಜ್ಯ ಮಾಜಿ ಶಾಸಕರ ವೇದಿಕೆ, ಕೃಷಿ ಶಾಸಕರ ವೇದಿಕೆ, ತಾಲ್ಲೂಕು - ಜಿಲ್ಲಾ ಹಾಗೂ ರಾಜ್ಯ ಕೃಷಿಕ ಸಮಾಜ ಘಟಕಗಳು, ರಾಜ್ಯದಲ್ಲಿಯ ಗ್ರಾಮ, ತಾಲ್ಲೂಕು, ಜಿಲ್ಲಾ ಹಾಗೂ ರಾಜ್ಯಮಟ್ಟದ ಎಲ್ಲಾ ಅಧಿಕೃತ ರಾಜಕೀಯ ಪಕ್ಷಗಳ ಘಟಕಗಳು ಪರಿಣಾಮಕಾರಿಯಾಗಿ ಸಾರ್ವಜನಿಕ ಹಿತಾಸಕ್ತಿಯನ್ನು ಕಾಪಾಡಲು, ಸರಕಾರಗಳ ವೈಫಲ್ಯದ ಬಗ್ಗೆ ಯಾವುದೇ ಚಿಂತನೆ ಮಾಡದೇ, ಸಾರ್ವಜನಿಕ ಕಳಕಳಿ ಹೊಂದದ, ರಾಜ್ಯದ ಸರ್ವಾಂಗೀಣ ಅಭಿವೃದ್ಧಿ ವೈಫಲ್ಯ ನಿರಾತಂಕವಾಗಿ ಮುಂದುವರಿಯಲು ಬಿಟ್ಟಿರುವುದು ಸರಿಯಲ್ಲ, ಇನ್ನಾದರೂ ಇವರೆಲ್ಲರೂ ಹಾಗೂ ಈ ಎಲ್ಲಾ ಘಟಕಗಳು ಎಚ್ಚೆತ್ತು ಚುರುಕಾಗಿ ನಿಗಾವಹಿಸುವುದು ಒಳ್ಳೆಯದು.

(ಅಂಕಿ-ಅಂಶಗಳು ಅಧಿಕೃತ)

❑

ಚುನಾಯಿತ ಸಂಸದ ಶಾಸಕರಿಗೆ ಕಿವಿ ಮಾತು

ನಮ್ಮ ರಾಷ್ಟ್ರದಲ್ಲಿ ಸಹಸ್ರಾರು ಜಾತಿ, ಉಪಜಾತಿಗಳಿದ್ದರೂ ಅವರೆಲ್ಲರೂ ಬುದ್ಧಿವಂತ (ಬ್ರಾಹ್ಮಣ), ವ್ಯಾಪಾರಿ (ವೈಶ್ಯ), ಹೋರಾಟಗಾರ (ಕ್ಷತ್ರಿಯ), ಶ್ರಮಜೀವಿ (ಶೂದ್ರ) ಈ ಎಲ್ಲ ನಾಲ್ಕು ಉದ್ಯೋಗ ವರ್ಗಗಳಲ್ಲಿ ಹಿಂದೂ, ಮುಸಲ್ಮಾನ್, ಕ್ರಿಶ್ಚಿಯನ್, ಜೈನ, ಬೌದ್ಧ ಮೊದಲಾದವರು ಸೇರಿದ್ದಾರೆ. ಚುನಾವಣೆಗಳಲ್ಲಿ ಯಾವುದೇ ಜಾತಿಯ ಎಷ್ಟೇ ಉಮೇದುವಾರರಿದ್ದರೂ ಆ ವಿವಿಧ ಉಮೇದುವಾರರಿಗೆ ಅವರವರ ವರ್ಗವನ್ನು ಗಣನೆಗೆ ತೆಗೆದುಕೊಳ್ಳದೆ ಬಹುತೇಕ ಎಲ್ಲಾ ವರ್ಗದವರು ಜಾತ್ಯಾತೀತರಾಗಿ ತಮಗೆ ಇಷ್ಟಬಂದ ಯಾವುದೇ ಉಮೇದುವಾರರನ್ನು ತನು-ಮನ-ಧನಗಳ ಧಾರೆಯೆರೆದು ಚುನಾಯಿಸುವುದುಂಟು. ಸ್ವಜಾತಿಯವರೇ ಭಿನ್ನಭಿನ್ನ ರಾಜಕೀಯ ಪಕ್ಷಗಳಲ್ಲಿ ಇದ್ದು ಒಬ್ಬರಿಗೊಬ್ಬರು ನಿರಂತರ ವಿರೋಧಿಗಳಾಗಿರುವುದೂ ಉಂಟು. ನಮ್ಮ ದೇಶದಲ್ಲಿ ಕೆಲವು ಸ್ವಾಮಿಗಳು ರಾಜಕೀಯದಲ್ಲಿ, ಚುನಾವಣೆಗಳಲ್ಲಿ ಭಾಗವಹಿಸದೆ ಅಥವಾ ಯಾವುದೇ ಉಮೇದುವಾರನಿಗೆ ಪರೋಕ್ಷ ಅಥವಾ ಅಪರೋಕ್ಷ ಬೆಂಬಲ ಕೊಡದೆ ತಮಗೆ ತಿಳಿದ ಯೋಗ್ಯವ್ಯಕ್ತಿಗೆ ಬೆಂಬಲ ಕೊಡಬಹುದೆಂದು ಹೇಳಿ ರಾಜಕೀಯದಿಂದ ದೂರ ಉಳಿದು ಎಲ್ಲರ ಪ್ರೀತಿಗೆ ಪಾತ್ರರಾಗಿ ಜಾತ್ಯಾತೀತ, ಧಾರ್ಮಿಕ ಕಾರ್ಯಗಳನ್ನು ಮಾಡುವವರೂ ಇದ್ದಾರೆ. ಇನ್ನೂ ಕೆಲವು ಸ್ವಾಮಿಗಳು ತಮಗೆ ಕಾಣಿಕೆ ಕೊಟ್ಟು ಕಾಲುಬಿದ್ದ ಉಮೇದು ವಾರ, ಒಳ್ಳೆಯವನೇ ಇರಲೀ, ಕೆಟ್ಟವನೇ ಇರಲೀ, ಅಯೋಗ್ಯನೇ ಇರಲಿ, ಸ್ವಜಾತಿಯನೇ ಇರಲಿ, ಪರಜಾತಿಯವನೇ ಇರಲಿ, ಭ್ರಷ್ಟನೇ ಇರಲಿ, ಪ್ರಾಮಾಣಿಕನೇ ಇರಲೀ ಅವನ ಯೋಗ್ಯತೆ, ಅಯೋಗ್ಯತೆಯನ್ನು ಗಮನಿಸದೆ ಅವನಿಗೆ ಮತ ಕೊಡಲು ಮುಗ್ಧ ಜನತೆಗೆ ಹೇಳುವ ಹಾಗೂ ಹೇಳಿದ ಉದಾಹರಣೆಯೂ ಉಂಟು. ಕೆಲವು ಸ್ವಾಮಿಗಳು ಜಾತ್ಯಾತೀತರೆಲ್ಲರಿಂದ ಆರಿಸಿ ಬಂದ ಜಾತ್ಯಾತೀತ ಚುನಾಯಿತರನ್ನು ತನ್ನ ಏಜೆಂಟರ ಮುಖಾಂತರ ಸೆಳೆದುಕೊಂಡು ಅವರಲ್ಲಿ ಜಾತೀಯತೆಯ ವಿಷಬೀಜವನ್ನು ತುಂಬಿ ಅವನನ್ನು ತನ್ನ ದಾಸಾನುದಾಸನನ್ನಾಗಿ ಮಾಡಿಕೊಂಡು ಜಾತ್ಯಾತೀತ ಪ್ರತಿನಿಧಿಯಾಗಿ ಕೆಲಸ ಮಾಡಲು ಬಿಡದೆ ಅವರನ್ನು ಜಾತೀಯವಾದಿಯನ್ನಾಗಿ ಪರಿವರ್ತಿಸಿದ ಉದಾಹರಣೆಯೂ

ಉಂಟು. ಅಂತೆಯೇ ಕೆಲವು ಚುನಾಯಿತರು ತಾವು ಜಾತ್ಯಾತೀತ ಎಲ್ಲರಿಂದ ಬೆಂಬಲ ಪಡೆದು ಚುನಾಯಿತನಾಗಿದ್ದನೆಂಬುದನ್ನೇ ಮರೆತು ಸ್ವಜಾತಿಯವರಿಗೆ ಮಾತ್ರ ಶಾಸಕ, ಸಂಸದನೆಂಬಂತೆ ವರ್ತಿಸುವವರೂ ಅನೇಕರಿದ್ದಾರೆ. ಕೆಲವು ಸ್ವಾಮಿಗಳು ಹೇರಳವಾದ ಹಣ, ಮಣ್ಣು, ಹೊನ್ನು ಮಾಡಿಕೊಂಡು ತನ್ನ ಜಾತಿ ಬಲ, ತೋಳ್ ಬಲ, ಹಣ ಬಲಗಳಿಂದ ಕೊಳಕು ರಾಜಕೀಯ ಮಾಡುವವರೂ ಈ ದೇಶದಲ್ಲಿದ್ದಾರೆ. ಅಂತೆಯೇ ರಾಷ್ಟ್ರದಲ್ಲಿ ಅನೇಕ ಹೆಸರಾಂತ ಆದರ್ಶರಾದ ಮುಗ್ಧ ಹಾಗೂ ಮೂಢನಂಬಿಕೆಗಳಿಂದ ದೂರವಿರುವ ಶ್ರೇಷ್ಠ ಸಮಾಜ ಸುಧಾರಕರು ಹಾಗೂ ರಾಜಕಾರಣಗಳು "ಸಂವಿಧಾನಬದ್ಧ ಅಗ್ರಗಣ್ಯರು ಕಂಡ ಕಂಡವರಿಗೆ ಬಹಿರಂಗವಾಗಿ ಕಾಲುಬಿದ್ದು ಗುಲಾಮಗಿರಿ ಪ್ರದರ್ಶಿಸುವುದು ಪ್ರಜಾಸತ್ತೆಯ ಅವಹೇಳನ"ವೆಂದಿದ್ದಾರೆ. "ರಾಜಕಾರಣಿಗಳಿಗೆ ಹಾಗೂ ಸಂವಿಧಾನಬದ್ಧ ಅಗ್ರಗಣ್ಯರಿಗೆ ಸ್ವಾಮಿಗಳ ವ್ಯಾಮೋಹ ಬೇಡ"ವೆಂದಿದ್ದಾರೆ. "ಢೊಂಗಿಸ್ವಾಮಿ ಮತ್ತು ರಾಜಕಾರಣಿಗಳ ಸಂಬಂಧ ಅಂತ್ಯಗೊಳ್ಳದಿದ್ದರೆ ಪ್ರಜಾತಂತ್ರಕ್ಕೆ ಅಪಾಯ" ವೆಂದಿದ್ದಾರೆ. "ಹಲವು ಸ್ವಾಮಿಗಳು ತಾವು ಮಾಡಬೇಕಾದ ಧಾರ್ಮಿಕ ಕೆಲಸವನ್ನು ಬಿಟ್ಟು ರಾಜಕಾರಣಿಗಳೊಂದಿಗೆ ಕೈ ಜೋಡಿಸಿ ಜಾತಿ ಸಂಘಟನೆಗಳನ್ನು ಮಾಡಿ ಅದರಿಂದ ಲಾಭ ಗಿಟ್ಟಿಸುವ ಸ್ವಾಮಿಗಳಿಗೇನೂ ಕೊರತೆಯಿಲ್ಲ"ವೆಂದಿದ್ದಾರೆ. "ಧರ್ಮದ ಮೂಲವಾದ ಮಠಗಳೇ ಕಲುಷಿತವಾಗಿರುವಾಗ ಜನರು ಕೆಡುವುದೇನೂ ದೊಡ್ಡದಲ್ಲ" ವೆಂದಿದ್ದಾರೆ. "ಶಿಕ್ಷಣ ದಾಸೋಹಗಳನ್ನು ಮುಂದುಮಾಡಿಕೊಂಡು ಸಂಸ್ಥೆಗಳನ್ನೆಲ್ಲಾ ಜಾತಿಬಲದಿಂದ ಸರಕಾರದ ಅನುದಾನಕ್ಕೊಳಪಡಿಸಿಕೊಂಡು ಮೆಡಿಕಲ್ ಇಂಜನಿಯರಿಂಗ್ ಕಾಲೇಜುಗಳಿಂದ ಕೋಟ್ಯಾಂತರ ಡೊನೇಶನ್ ವಸೂಲಿ ಮಾಡುವುದಿಲ್ಲವೇ? ಅರಮನೆ ವಶ ಮಾಡಿಕೊಂಡರೆ ಮಠಗಳನ್ನು ವಶಪಡಿಸಿಕೊಳ್ಳಲಿ" ಎಂದಿದ್ದಾರೆ. ಈ ಮಹನೀಯರ ಅಭಿಪ್ರಾಯಗಳನ್ನು ವಿವಿಧ ಜನಾಂಗದ ಸ್ವಾಮಿಗಳು ಗಮನಿಸಿ ತಮ್ಮ ನಡವಳಿಕೆಗಳು ಸಾರ್ವಜನಿಕ ಟೀಕೆಗೆ ಗುರಿಯಾಗದಂತೆ ನೋಡಿಕೊಂಡು ಜಾತ್ಯಾತೀತ ಮಾನವ ಧರ್ಮದ ಜಾತ್ಯಾತೀತ ಸ್ವಾಮಿಗಳಾಗಿ ಎಲ್ಲರಿಗೂ ಲೇಸನ್ನೇ ಬಯಸುವ, ಎಲ್ಲರೂ ನಮ್ಮವರೇ ಎಂಬ ಆದರ್ಶಗಳನ್ನು ಅಳವಡಿಸಿಕೊಂಡು ನಡೆದುಕೊಂಡು ಕಾರ್ಯನಿಷ್ಠರಾದುದು ಈ ದೇಶದ ಏಕತೆ, ಸಮರಸತೆಗೆ ದಾರಿ ಸುಗಮ.

ಸಂಸದರು, ಶಾಸಕರು, ಜನತೆಯ ಪ್ರತಿನಿಧಿಗಳು, ಜನತೆಯಲ್ಲಿ ಬಡವರು, ಶ್ರೀಮಂತರು, ಅವಿದ್ಯಾವಂತರು, ವಿದ್ಯಾವಂತರು, ಪಂಡಿತರು, ಪಾಮರರು, ಮಹಿಳೆಯರು, ಪುರುಷರು, ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು, ಶೂದ್ರರು, ಮುಸಲ್ಮಾನರು, ಕ್ರಿಶ್ಚಿಯನ್ನರು, ಪಾರ್ಸಿಗಳು, ಜೈನರು, ಬೌದ್ಧರು ಇತ್ಯಾದಿ ಹೀಗೆ ಈ ಎಲ್ಲಾ ವರ್ಗದವರು ಇದ್ದಾರೆ. ಎಲ್ಲರೂ ಮತ ಕೊಟ್ಟಿರುತ್ತಾರೆ. ಚುನಾಯಿತನಾದ ಶಾಸಕ ಸಂಸದ ಮತ ಕೊಟ್ಟ ಜನತೆ ಹಾಗೂ ಮತ ಕೊಡದ ಜನತೆ ಎಲ್ಲ ಪ್ರಜೆಗಳಿಗೂ ಜನತಾ ಪ್ರತಿನಿಧಿಯಾಗಿ ರಾಗ

ದ್ವೇಷವಿಲ್ಲದೆ ಶ್ರದ್ಧಾಪೂರ್ವಕವಾಗಿ ಭಾರತದ ಅಖಂಡತೆಯನ್ನು ಎತ್ತಿ ಹಿಡಿಯಬೇಕಾಗುತ್ತದೆ. ಎಲ್ಲಾ ವರ್ಗ, ಜಾತಿ ಜನರಿಂದ ಮತ ಪಡೆದು ಚುನಾಯಿತರಾದ ಮೇಲೆ ತಾನು ಶಾಸಕ ಸಂಸದನಾಗಿರುವವರೆಗೆ ಅಥವಾ ಮಂತ್ರಿಯಾಗಿರುವವರೆಗೆ ಯಾವುದೇ ಜಾತಿ ಪಂಗಡದವ ನೆಂಬಂತೆ ಅಥವಾ ಯಾವುದೇ ಸ್ವಾಮಿಯ ಜಾತಿ ಪಂಗಡಕ್ಕೆ ಸೇರಿದವನೆಂಬಂತೆ ನಡೆದುಕೊಳ್ಳವುದಾಗಲೀ, ತೋರಿಸಿಕೊಡುವುದಾಗಲೀ, ನುಡಿದುಕೊಳ್ಳುವುದಾಗಲೀ, ಅದು ಸಂವಿಧಾನ ವಿರೋಧಿ ಹಾಗೂ ಜಾತ್ಯಾತೀತ ಧಾರ್ಮಿಕ ವಿರೋಧಿಯೆಂಬುದನ್ನು ಶಾಸಕರು, ಸಂಸದರು ಹಾಗೂ ಮಂತ್ರಿಗಳು ತಿಳಿಯುವುದು ಒಳ್ಳೆಯದು. ನಮ್ಮ ದೇಶದಲ್ಲಿ ಚುನಾಯಿತರಾದ ಶಾಸಕರು, ಸಂಸದರು, ಮಂತ್ರಿಗಳು ಅವರು ಯಾವುದೇ ಕುಲ, ಜಾತಿ, ಪಂಗಡ ವರ್ಗಕ್ಕೆ ಸೇರಿರಲೀ ಅವರಲ್ಲಿ ಅನೇಕರು ಜಾತ್ಯಾತೀತರಾಗಿ ಮತ ಕೊಟ್ಟವ, ಕೊಡದವ, ಎಲ್ಲರೂ ನಮ್ಮವರೇ ಎಂದು ಭಯ, ಪಕ್ಷಪಾತ, ಮಮತೆ, ದ್ವೇಷವಿಲ್ಲದೆ ಎಲ್ಲ ಬಗೆಯ ಜನರಿಗೆ ಸಂವಿಧಾನ ಮತ್ತು ಕಾನೂನುಗಳಿಗೆ ಅನುಸಾರವಾಗಿ ನ್ಯಾಯ ವಾದುದನ್ನೇ ಮಾಡಿದ ಹಾಗೂ ಮಾಡುತ್ತಿರುವ ಆದರ್ಶ ಪ್ರಜಾಪ್ರತಿನಿಧಿ ಶ್ರೇಷ್ಠರ ಜೀವಂತ ದೃಷ್ಟಾಂತಗಳು ಬೇಕಾದಷ್ಟು ಇವೆ. ಸ್ವಾಮಿಗಳಾದವರು ಸಹ ಅವರು ಯಾವುದೇ ಕುಲ, ಜಾತಿ, ಪಂಗಡ, ವರ್ಗಕ್ಕೆ ಸೇರಿರಲಿ ಅವರಲ್ಲಿ ಅನೇಕರು ಜಾತ್ಯಾತೀತರಾಗಿ ಮಾನವ ಧರ್ಮಗುರುಗಳಾಗಿ ಧಾರ್ಮಿಕ ಹಾಗೂ ಮಾನವೀಯ ಮೌಲ್ಯಗಳನ್ನು ಎತ್ತಿ ತೋರಿಸುತ್ತ ಎಲ್ಲರಿಗೂ ಲೇಸನ್ನೇ ಬಯಸುತ್ತ ಎಲ್ಲರೂ ನನ್ನವರೆಂಬ ಭಾವನೆಯಿಂದ ಜಾತೀಯತೆಯನ್ನು ಎತ್ತಿ ಹಿಡಿಯದೆ ಸಮಾಜ ಸುಧಾರಣೆಯತ್ತ ನಿಗಾವಹಿಸಿ ಮಾನವ ಸಮಾಜದ ಏಕತೆ, ಸಮಗ್ರತೆ, ಸಹಿಷ್ಣುತೆ, ಸಮರಸತೆಗಾಗಿ ಹಗಲಿರುಳು ಶ್ರಮಿಸಿ ಹೆಣ್ಣು, ಮಣ್ಣು, ಹಣ, ಹೊನ್ನಿಗಾಗಿ, ಆಶೆ ಮಾಡದೆ ನಿರಾಡಂಬರಿಗಳಾಗಿ ನಿಸ್ವಾರ್ಥಿಗಳಾಗಿ ಕಪಟಿ ಸನ್ಯಾಸಿ ಗಳಾಗದೆ ಎಲ್ಲಾ ಬಗೆಯ ಜನರಿಗೆ ಲೇಸನ್ನೇ ಬಗೆಯುವ ಆದರ್ಶ ಜಂಗಮ ಶ್ರೇಷ್ಠರೂ ನಮ್ಮ ದೇಶದಲ್ಲಿದ್ದಾರೆ. ಈ ದೇಶದ ಉನ್ನತಿಗೆ ಜಾತ್ಯಾತೀತ ಧರ್ಮಕಾರಣಿಗಳ ಅವಶ್ಯಕತೆ ಇರುವುದರಿಂದ ಈ ದೇಶವು ಲಕ್ಷಾಂತರ ಜಾತಿಗಳಿಂದ ತುಂಬಿತುಳುಕುತ್ತಿದ್ದು ಎಲ್ಲಾ ರಾಜಕಾರಣಿಗಳು ರಾಜಕೀಯ ಮೌಲ್ಯಗಳನ್ನು ಆಧರಿಸಿ, ಎಲ್ಲಾ ಧರ್ಮಕಾರಣಿಗಳು ಧಾರ್ಮಿಕ ಮೌಲ್ಯಗಳನ್ನು ಆಧರಿಸಿ ಜಾತ್ಯಾತೀತರಾಗಿ ಎಲ್ಲಾ ವರ್ಗದ ಜನತೆಯ ಪ್ರಗತಿಗೆ ಕಂಕಣಬದ್ಧರಾಗಿ ಕಾರ್ಯನಿರ್ವಹಿಸುವುದು ಎಲ್ಲರಿಗೂ ಒಳಿತು. ಇದಕ್ಕೆ ತಪ್ಪಿದರೆ ದೇಶದಲ್ಲಿ ಅರಾಜಕತೆ, ಅಧರ್ಮ, ಅಶಾಂತಿ, ಅಭದ್ರತೆ, ಅನ್ಯಾಯ, ಅಕರ್ತವ್ಯ, ಅಕಾರ್ಯ, ಅಕ್ರಮ, ಅನಾದರ, ಅಗೌರವ, ಅನಾಚಾರ, ಅತ್ಯಾಚಾರ, ಅಸೂಯೆ ಇತ್ಯಾತಿ ಅಕರ ವಿಕಾರಗಳು ಅಗಾಧ, ಅಗಣಿತವಾಗಿ ರಾಜಕೀಯ ಕ್ರಾಂತಿ ಹಾಗೂ ಧಾರ್ಮಿಕ ಕ್ರಾಂತಿಗೆ ಕೇಡಿನ ಕೊಡುಗೆಯಾದೀತು. ಈ ದೇಶದ ಅಳಿವು-ಉಳಿವು, ಆಡಳಿತ ಅಭಿವೃದ್ಧಿ, ಘನತೆ-ಗೌರವ ಜನಪ್ರತಿನಿಧಿ ಸರ್ವಶ್ರೇಷ್ಠರಾದ ಶಾಸಕರು ಹಾಗೂ ಸಂಸದರ

ಕೈಯಲ್ಲಿರುವುದರಿಂದ ಅವರು ಶಾಸಕಾಂಗದ ಅಗ್ರೇಶ್ವರರೇ ಇರಲಿ ಅಥವಾ ಕಾರ್ಯಾಂಗ ಅಗ್ರೇಶ್ವರರೇ ಇರಲಿ ಆ ಸ್ಥಾನದ ಹೊಣೆಗಾರಿಕೆಯ ಅರಿವನ್ನು ಅರಿತುಕೊಂಡು ನುಡಿದು, ನುಡಿದಂತೆ ನಡೆದು ಈ ರಾಷ್ಟ್ರದ ಸ್ವಾತಂತ್ರ್ಯ ಹಾಗೂ ಪ್ರಜಾಸತ್ತೆಯ ಘನತೆ, ಗೌರವವನ್ನು ಕಾಪಾಡುವಲ್ಲಿ ಗಣನೀಯ ಹಾಗೂ ಗೌರವಯುತ ಪಾತ್ರ ನಿರ್ವಹಿಸುವುದು ಅಗತ್ಯ.

❑

ಶಾಸಕರಿಗೆ ಸರಕಾರಿ ಮಾಹಿತಿ ಸಲ್ಲಿಕೆ ಕಡ್ಡಾಯವಿರಲಿ

ರಾಜ್ಯದ ಜನಸಾಮಾನ್ಯರಿಗೆ ಸಾಮಾನ್ಯ, ಸಾಮಾಜಿಕ ಹಾಗೂ ಆರ್ಥಿಕ ಸೇವೆಗಳನ್ನೊದಗಿಸಿ ರಾಜ್ಯದ ಆಡಳಿತ ಹಾಗೂ ಅಭಿವೃದ್ಧಿಯನ್ನು ಉತ್ತಮ ರೀತಿಯಲ್ಲಿ ದಕ್ಷತೆಯಿಂದ ಪರಿಣಾಕಾರಿಯಾಗಿ ಒದಗಿಸುವುದು ರಾಜ್ಯ ಸರಕಾರದ ಆದ್ಯ ಕರ್ತವ್ಯ. ಸರಕಾರವೆಂದರೆ ಕಾರ್ಯಾಂಗ. ಕಾರ್ಯಾಂಗ ಯಶಸ್ವಿಯಾಗಿ ಜನಪರ ಆಡಳಿತ ಅಭಿವೃದ್ಧಿ ಮಾಡುವಲ್ಲಿ ಮಂತ್ರಿ, ಮಹಾಮಂತ್ರಿಗಳು ಹಾಗೂ ಕಾರ್ಯಾಂಗದ ಅಧಿಕಾರಿಗಳ ಪಾತ್ರ ಪ್ರಮುಖವಾಗಿದೆ. ಸರಕಾರ ಹಾಗೂ ಜನತೆಯ ನಡುಮಧ್ಯೆ ಶಾಸಕರು ಮಹತ್ವದ ಕೊಂಡಿಯಾಗಿ ಸೇತುವೆಯಾಗಿ ಕಾರ್ಯನಿರ್ವಹಿಸಬೇಕಾಗುತ್ತದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವಿವಿಧ ಅಧಿನಿಯಮಗಳು, ರಾಜ್ಯಪಾಲರಿಂದ ಅಥವಾ ರಾಷ್ಟ್ರಪತಿಗಳಿಂದ ಹೊರಡಿಸಲ್ಪಟ್ಟ ಸುಗ್ರೀವಾಜ್ಞೆಗಳು ರಾಜ್ಯಾದ್ಯಂತ ಹಾಗೂ ದೇಶಾದ್ಯಂತ ಜಾರಿಯಲ್ಲಿ ಬರಬೇಕಾಗುತ್ತದೆ. ಸಾಮಾನ್ಯ, ಸಾಮಾಜಿಕ, ಆರ್ಥಿಕ ಅಭಿವೃದ್ಧಿ ಹಾಗೂ ಆಡಳಿತ ಈ ಯಾವುದೇ ವಿಷಯಕ್ಕೆ ಸಂಬಂಧಿಸಿದ ಅಧಿನಿಯಮಗಳಿಗೆ ಅನುಗುಣವಾಗಿ ಆಡಳಿತ ಹಾಗೂ ಅಭಿವೃದ್ಧಿಯನ್ನು ಸಾಗಿಸಬೇಕಾಗುತ್ತದೆ. ಈ ಆಡಳಿತ ಹಾಗೂ ಅಭಿವೃದ್ಧಿ ಸಾಧಿಸುವಲ್ಲಿ ಶಾಸಕರ ಪಾತ್ರ ಕೂಡ ಗಣನೀಯವಾದ ಮಹತ್ವ ಪಡೆದಿದೆ. ಶಾಸಕರ ಪಾತ್ರ ಪರಿಣಾಮಕಾರಿಯಾಗಬೇಕಾದರೆ ಸರ್ಕಾರದ ಯಾವತ್ತೂ ಕಾರ್ಯಮಾಹಿತಿ ಅವರಿಗೆ ಅಗತ್ಯವಾಗಿದ್ದು ಈ ಎಲ್ಲಾ ಮಾಹಿತಿಗಳನ್ನು ಆಗಿಂದಾಗ್ಗೆ ಸರಕಾರ ಒದಗಿಸಲೇಬೇಕು. ಈ ಎಲ್ಲಾ ಮಾಹಿತಿಗಳನ್ನು ಶಾಸಕರು ಅರಿತುಕೊಂಡು ದೈನಂದಿನ ಕಾರ್ಯಕ್ರಮದಲ್ಲಿ ಅವುಗಳ ಉಪಯೋಗ ತೆಗೆದುಕೊಂಡು ಕಾರ್ಯಾಚರಣೆಗಳಲ್ಲಿ ಆಸಕ್ತಿ ವಹಿಸಬೇಕಾಗುತ್ತದೆ. ಜನತೆಗೆ ಸರಕಾರದ **ಗೊತ್ತುಗುರಿ**, ಧ್ಯೇಯ-ಧೋರಣೆ ತಾರಕವಾಗಿ ಸರಿ ಇದ್ದಲ್ಲಿ ಅದನ್ನು ಜನತೆಗೆ ತಿಳಿಹೇಳಿ ಆಡಳಿತ ಅಭಿವೃದ್ಧಿ ಸುಗಮವಾಗಿ ಸಾಗುವಲ್ಲಿ ಜನತೆಗೆ ಅದರ ಪ್ರತಿಫಲ ದೊರಕುವಲ್ಲಿ ಪಾಲುಗಾರರಾಗಬೇಕಾಗುತ್ತದೆ ಹಾಗೂ ಜನತೆಯ ಸಹಕಾರ ಪಡೆಯ ಬೇಕಾಗುತ್ತದೆ. ಸರಕಾರದ ಗೊತ್ತುಗುರಿ, ಧೋರಣೆ ಮಾರಕವಾಗಿ ಅಸಮಂಜಸವಾಗಿದ್ದಲ್ಲಿ ಅಂತಹ ಧೋರಣೆಯನ್ನು ಬದಲಿಸಲು, ಮಾರ್ಪಾಡು ಮಾಡಲು ಅಥವಾ ಹಿಂತೆಗೆದು

ಕೊಳ್ಳಲು ಸರ್ಕಾರಕ್ಕೆ ಸಲಹೆ, ಸೂಚನೆ ಕೊಡಬೇಕಾಗುತ್ತದೆ. ಸರಕಾರಿ ಗೊತ್ತುಗುರಿ, ಧೋರಣೆ ಪ್ರತಿಯೊಬ್ಬ ಶಾಸಕರಿಗೆ ಗೊತ್ತಿರಲೇಬೇಕೆಂಬ ಸದುದ್ದೇಶದಿಂದ, ಸದೀಚ್ಛೆಯಿಂದ ಸರಕಾರದ ವಿವಿಧ ಇಲಾಖೆಗಳಿಂದ ಹೊರಡಿಸಲಾಗುವ ಸಾರ್ವಜನಿಕರಿಗೆ ಅನ್ವಯವಾಗುವಂತಹ ಸಹಸ್ರಾರು ಸರಕಾರಿ ಆಜ್ಞೆ, ಅಧಿಕೃತ ಜ್ಞಾಪನ, ಅಧಿಸೂಚನೆ, ಪರಿಪತ್ರ, ಸುತ್ತೋಲೆ ಮುಂತಾದ ಕಾರ್ಯಸೂಚನೆಗಳನ್ನು ಶಾಸಕರೆಲ್ಲರಿಗೂ ಮುಟ್ಟಿಸಲು ಅವುಗಳ 300 ಪ್ರತಿಗಳನ್ನು (ವಿಧಾನಸಭೆಯ ಸದಸ್ಯರ ಸಂಖ್ಯೆ : 225, ವಿಧಾನ ಪರಿಷತ್ತಿನ ಸದಸ್ಯರ ಸಂಖ್ಯೆ : 75) ವಿಧಾನಮಂಡಲದ ಕಾರ್ಯಾಲಯಕ್ಕೆ ತಪ್ಪದೇ ಕಳುಹಿಸಬೇಕೆಂದು ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ : ಡಿಪಿಎಆರ್ : 60, ಎ.ಎ.ಆರ್. 86, ಬೆಂಗಳೂರು ದಿನಾಂಕ : 21-10-86ರ ಪ್ರಕಾರ ಸಚಿವಾಲಯದ ಎಲ್ಲಾ ಇಲಾಖೆಗಳಿಗೆ ಆದೇಶ ಕಳುಹಿಸಿದ್ದು, ಆ ಪ್ರಕಾರ ಕೆಲವು ವರ್ಷಗಳವರೆಗೆ ಇವೆಲ್ಲವುಗಳನ್ನು ವಿಧಾನಮಂಡಲಕ್ಕೆ ಕಳುಹಿಸಲಾಗಿ ಅವೆಲ್ಲಾ ಎಲ್ಲಾ ಶಾಸಕರಿಗೂ ವಿಧಾನಮಂಡಲದಿಂದ ತಲುಪಿ ಆ ಎಲ್ಲ ಮಾಹಿತಿಗಳನ್ನು ಶಾಸಕರು ಪಡೆದು ಸರಕಾರದ ಈ ಎಲ್ಲ ಮಾಹಿತಿಗಳನ್ನು ದೈನಂದಿನ ಆಡಳಿತ ಹಾಗೂ ಅಭಿವೃದ್ಧಿಯಲ್ಲಿ ಪರಿಣಾಮಕಾರಿಯಾಗಿ ಶಾಸಕರು ಉಪಯೋಗ ಮಾಡಿಕೊಳ್ಳುತ್ತಿದ್ದರು. ಆದರೆ ಇತ್ತಿತ್ತಲಾಗಿ ಆ ಯಾವುದೇ ಮಾಹಿತಿಗಳು ಶಾಸಕರಿಗೆ ಸಿಗದೇ ಕೇವಲ ಅಧಿಕಾರಿಗಳಿಗೆ ಮಾತ್ರ ಗೊತ್ತಾಗಿ ಶಾಸಕರು ಅಂಧಕಾರದಲ್ಲಿದ್ದು ಆ ಎಲ್ಲಾ ಮಾಹಿತಿಗಳ ಅರಿವು ಇರದೇ ಇಲಾಖೆಗಳ ಆಗುಹೋಗುಗಳೇ ಶಾಸಕರಿಗೆ ಗೊತ್ತು ಆಗುವುದಿಲ್ಲ. ಸಾರ್ವಜನಿಕರು ಅಧಿಕಾರಿಗಳಿಂದ ಅಕಸ್ಮಾತ್ ಆ ಮಾಹಿತಿ ಪಡೆದಾಗ ಮಾತ್ರ ಅವರಿಂದ ಅಥವಾ ಸ್ಥಳೀಯ ಅಧಿಕಾರಿಗಳಿಂದ ತಿಳಿದುಬರುತ್ತದೆ. ಇಂತಹ ಸನ್ನಿವೇಶದಲ್ಲಿ ಅನೇಕ ಶಾಸಕರು ಅಪಹಾಸ್ಯಕ್ಕೆ ಗುರಿಯಾಗುತ್ತಾರೆ. ಎಲ್ಲಾ ಇಲಾಖೆಗಳ ತಾರಕ-ಮಾರಕ ಹಾಗೂ ಸಾಧಕ-ಬಾಧಕ ಮಾಹಿತಿಯ ಅರಿವು ಸಾರ್ವಜನಿಕ ಪ್ರತಿನಿಧಿಗಳಾದ ಶಾಸಕರಿಗೆ ದೈನಂದಿನ ಆಡಳಿತ ಅಭಿವೃದ್ಧಿಯು ಸಾರ್ವಜನಿಕ ಹಿತದೃಷ್ಟಿಯಿಂದ ಶಾಸಕರು ಈ ಮಾಹಿತಿಯನ್ನು ಪಡೆಯುವುದು ಅಗತ್ಯ. ವಿಧಾನಮಂಡಲವು ಕೂಡ ಸರಕಾರದಿಂದ ಈ ಎಲ್ಲ ಮಾಹಿತಿ ಪಡೆದು ಶಾಸಕರಿಗೆ ಕಳುಹಿಸಬೇಕು. ಸರಕಾರ ಕೂಡ ತನ್ನ ಹೊಣೆಗಾರಿಕೆಯನ್ನರಿತು ಶಾಸಕರನ್ನು ಮಾಹಿತಿಯಿಂದ ವಂಚಿಸದಿರಲು ಶಾಸಕರು ಪರಿಣಾಮಕಾರಿಯಾಗಿ ತಮ್ಮ ಕಾರ್ಯನಿರ್ವಹಿಸಬೇಕಾದ ಅಗತ್ಯತೆಯನ್ನು ಅರಿತು ಯಾವತ್ತೂ ಎಲ್ಲಾ ಇಲಾಖಾ ಮಾಹಿತಿಯನ್ನು ಆಗಿಂದಾಗ್ಗೆ ಕಳುಹಿಸುವಲ್ಲಿ ಕಾರ್ಯಶೀಲರಾಗುವುದು ಅತ್ಯವಶ್ಯ.

ಸರಕಾರದ ವಿವಿಧ ಇಲಾಖೆಗಳು ದಿನವಹಿ ಬೇಕಾದಷ್ಟು ಮೇಲ್ಕಂಡ ಕಾರ್ಯಸೂಚಿಗಳನ್ನು ಹೊರಡಿಸಿ ಸಂಬಂಧಿಸಿದ ಅಧಿಕಾರಿಗಳಿಗೆ ಮಾತ್ರ ಕಳುಹಿಸಿ ,ಅವುಗಳ ಪ್ರತಿಗಳನ್ನು ಗೆಜೆಟ್, ಎ.ಜೆ. ಕೇಂದ್ರ ಸರ್ಕಾರ, ವಿವಿಧ ಇಲಾಖಾ ಕಾರ್ಯದರ್ಶಿಗಳು, ಜಿಲ್ಲಾ ಹಾಗೂ ವಿಭಾಗೀಯ ಅಧಿಕಾರಿ ಮೊದಲಾದವರಿಗೆ ಮಾತ್ರ ಕಳುಹಿಸಿ ಶಾಸಕರಿಗೆ ವ ಶಾಸಕಾಂಗಕ್ಕೆ ಕಳುಹಿಸದೇ ಶಾಸಕರನ್ನು ಅಂಧಕಾರದಲ್ಲಿ ಇಡುವುದು ಸರಕಾರಕ್ಕೆ

ಭೂಷಣವಲ್ಲ. ಕರ್ನಾಟಕ ರಾಜ್ಯದಲ್ಲಿ ರೈತರು ಉತ್ಪಾದಿಸಿದ ಜೋಳ, ಮೆಕ್ಕೆಜೋಳ, ಬಾಜ್ರಾ, ರಾಗಿ, ಎಣ್ಣೆಕಾಳು, ಹತ್ತಿ, ಶೇಂಗಾ ಹಿಂಡಿ, ಸೂರ್ಯಕಾಂತಿ ಕಾಳು, ಸೋಯಾಬೀನ್, ಅಕ್ಕಿ, ಮೊದಲಾದ ಮಾಲುಗಳಿಗೆ ಮಾರುಕಟ್ಟೆಯಲ್ಲಿ ಬೆಲೆ ಕಡಿಮೆ ಯಾಗಿ ರೈತರಿಗೆ ಭಾರೀ ನಷ್ಟವಾಗುತ್ತಿದ್ದಾಗ ರಾಜ್ಯಾದ್ಯಂತ ರೈತರು, ಬೆಳೆಗಾರರು, ಶಾಸಕರು, ಸಂಸದರು ಕೇಂದ್ರ ಹಾಗೂ ರಾಜ್ಯ ಸರಕಾರದ ನಜರಿಗೆ ಈ ವಿಷಯವನ್ನು ತಂದು ಬೆಂಬಲ ಬೆಲೆಯನ್ನು ಗೊತ್ತುಪಡಿಸಲು ಹಾಗೂ ಸರಕಾರವೇ ಆ ಬೆಲೆಗೆ ಖರೀದಿಸಲು ಕೇಳಿಕೊಂಡಾಗ ಕೇಂದ್ರ ಹಾಗೂ ರಾಜ್ಯ ಸರಕಾರಗಳೆರಡು ಇದಕ್ಕೆ ಸಮ್ಮತಿಸಿ ಅದರ ಪರಿಣಾಮವಾಗಿ ಕರ್ನಾಟಕ ಸರ್ಕಾರ ಬೆಂಬಲ ಬೆಲೆಯನ್ನು ನಿಗದಿ ಮಾಡಿ ಫಸಲನ್ನು ಖರೀದಿಸುವ ಬಗ್ಗೆ ದಿನಾಂಕ : 29-10-98 ಹಾಗೂ 13-11-98ರಂದು ಎರಡು ಆಜ್ಞೆಗಳನ್ನು ಹೊರಡಿಸಿ ಬೆಳೆಗಾರರಿಗೆ ಅನುಕೂಲ ಮಾಡಿಕೊಟ್ಟಿದೆ. ಈ ಆಜ್ಞೆಯ ಪ್ರತಿಗಳನ್ನು ಶಾಸಕಾಂಗಕ್ಕಾಗಲೀ ಅಥವಾ ಶಾಸಕ, ಸಂಸದರಿಗಾಗಲೀ ಕಳುಹಿಸದೇ ಈ ಮಾಹಿತಿಯಿಂದ ಅವರನ್ನು ವಂಚಿತರನ್ನಾಗಿಸಿದೆ. ಈ ಆಜ್ಞೆಗಳೇ ಆಗಲೀ ಮತ್ತಾವ ಕಾರ್ಯಸೂಚನೆಗಳೇ ಆಗಲೀ ಶಾಸಕ, ಸಂಸದರಿಗೆ ಕೂಡಲೇ ಮುಟ್ಟದೇ ಆ ಪತ್ರಗಳ ವಿವರ ಅವರಿಗೆ ಗೊತ್ತಾಗದೇ ಹೋದರೆ ಯಾವುದೇ ಬೆಳೆಗಾರ ಏನನ್ನೇ ಕೇಳಿದರೂ ಮಾಹಿತಿಯಿಲ್ಲದೇ ಮೂಕಪ್ರೇಕ್ಷಕರಂತೆ ಶಾಸಕರು ಇರಬೇಕೇ? ಗ್ಯಾಜಿಟ್ ಪತ್ರಿಕೆಗಳು 3-4 ತಿಂಗಳು ತಡವಾಗಿ ಶಾಸಕರಿಗೆ ತಲುಪುತ್ತಿರುವದರಿಂದ ಅದರಲ್ಲಿಯ ಯಾವುದೇ ಆದೇಶಗಳನ್ನು ಹುಡುಕುವುದು ಸುಲಭವಲ್ಲದರಿಂದ ಅನಾನುಕೂಲತೆಯೇ ಆಗುತ್ತದೆ. ಆದ್ದರಿಂದಲೇ ಆಗಿನ ಸರಕಾರ 21-10-86 ರಂದು ಆದೇಶ ಹೊರಡಿಸಿ ಶಾಸಕರಿಗೆ ಅನುಕೂಲ ಮಾಡಿಕೊಟ್ಟಿತ್ತು. ಇನ್ನಾದರೂ ಮೇಲ್ಕಂಡ ಎಲ್ಲಾ ಕಾರ್ಯಸೂಚನಾ ಪತ್ರಗಳನ್ನು ರಾಜ್ಯದ ಎಲ್ಲಾ ಶಾಸಕರಿಗೆ ಹಾಗೂ ಸಂಸದರಿಗೆ ಕಳುಹಿಸಿ ಆ ಬಗ್ಗೆ ಪ್ರತಿಯೊಂದು ಕಾರ್ಯಸೂಚನಾ ಪತ್ರಗಳಲ್ಲಿ ಶಾಸಕರಿಗೆ ಪ್ರತಿಗಳನ್ನು ಕಳುಹಿಸಲಾಗಿದೆ ಎಂದು ಅಥವಾ 300 ಪ್ರತಿಗಳನ್ನು ಶಾಸಕರಿಗೆ ತಲುಪಿಸಲು ಶಾಸಕಾಂಗಕ್ಕೆ ಕಳುಹಿಸಲಾಗಿದೆ ಎಂದು ಸೇರಿಸುವುದು ಒಳ್ಳೆಯದು. ಸರಕಾರದ ವಿವಿಧ ಇಲಾಖಾ ಕಾರ್ಯದರ್ಶಿಗಳು, ಮಂತ್ರಿಗಳು ಹಾಗೂ ಶಾಸಕರು 21-10-86ರ ಸರಕಾರಿ ಸುತ್ತೋಲೆ ಪ್ರಕಾರ ವಿವಿಧ ಇಲಾಖೆಗಳ ಎಲ್ಲಾ ಆಜ್ಞೆ, ಸುತ್ತೋಲೆ, ಇತ್ಯಾದಿ ಕಾರ್ಯಸೂಚನಾ ಪತ್ರಗಳ ಬಗ್ಗೆ ಗಮನಹರಿಸಿ ಪ್ರತಿಯೊಬ್ಬ ಶಾಸಕರಿಗೆ ಎಲ್ಲಾ ಮಾಹಿತಿ ಸಕಾಲದಲ್ಲಿ ಪೂರ್ಣ ದೊರೆಯುವಲ್ಲಿ ಗಮನಹರಿಸಿ ಸಾರ್ವಜನಿಕ ಹಿತಾಸಕ್ತಿಯು ಕಾರ್ಯಗಳು ಪರಿಣಾಮಕಾರಿಯಾಗುವಲ್ಲಿ ಮುಂದಾಗುವುದು ಒಳ್ಳೆಯದು. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಪ್ರಜಾಪ್ರಭುಗಳ ಪ್ರತಿನಿಧಿಗಳಾದ ಶಾಸಕರಿಗೆ ಸಾರ್ವಜನಿಕರಿಗೆ ಸಂಬಂಧಿಸಿದ ಎಲ್ಲಾ ಸಾರ್ವಜನಿಕ ಹಿತಾಸಕ್ತಿಯ ಮಾಹಿತಿಗಳನ್ನು ಕಳಿಸುವ ಹೊಣೆಗಾರಿಕೆ ತಮ್ಮದೆಂದು ಸರಕಾರದಲ್ಲಿಯ ಹೊಣೆಗಾರ ಅಧಿಕಾರಿಗಳು ಅರಿತು ನಡೆದುಕೊಂಡರೆ ಒಳ್ಳೆಯದು.

❑

ಶಾಸಕಾಂಗ - ನ್ಯಾಯಾಂಗಗಳ ಘನತೆ, ಗೌರವ

ನಮ್ಮ ರಾಷ್ಟ್ರದಲ್ಲಿ ಸಮಸ್ತ ನಾಗರಿಕರೆಲ್ಲರಿಗೂ ವಾಕ್ ಸ್ವಾತಂತ್ರ್ಯಕ್ಕೆ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಸಂವಿಧಾನಬದ್ಧವಾದ ಹಕ್ಕು ಇದೆ. ಆರ್ಟಿಕಲ್ 194(1) ಪ್ರಕಾರ ಸಂವಿಧಾನ ಉಪಬಂಧಗಳಿಗೆ ಹಾಗೂ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳಿಗೆ ಒಳಪಟ್ಟು ವಿಧಾನಸಭೆಯಲ್ಲಿ ಸದಸ್ಯರಿಗೆ ವಾಕ್ ಸ್ವಾತಂತ್ರ್ಯವಿದೆ. 194(2)ರ ಪ್ರಕಾರ ವಿಧಾನಸಭೆಯಲ್ಲಿ ಯಾವುದೇ ಸದಸ್ಯನು ಹೇಳಿದ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ನ್ಯಾಯಾಲಯದಲ್ಲಿ ಯಾವುದೇ ವ್ಯವಹರಣೆಗೆ ಗುರಿಯಾಗುವುದಿಲ್ಲ. ವಿಧಾನಸಭೆಯ ಅಧಿಕಾರದ ಮೇರೆಗೆ ಪ್ರಕಟವಾದ ಯಾವುದೇ ವರದಿಯ ವ್ಯವಹರಣೆಗಳಿಗೆ ಸಹ ಗುರಿಯಾಗುವುದಿಲ್ಲ. ವಿಧಾನಸಭೆಯಲ್ಲಿ ಯಾವುದೇ ಮಾತಾಡುವಾಗ ನ್ಯಾಯಾಲಯದಲ್ಲಿ ಇತ್ಯರ್ಥದಲ್ಲಿದ್ದು ಇನ್ನೂ ತೀರ್ಪು ನೀಡದ ಯಾವುದೇ ಸಂಗತಿಯನ್ನು ಕುರಿತು ನಿಯಮ 327(1) ಪ್ರಕಾರ ಮಾತನಾಡಲಿಕ್ಕೆ ಬಾರದು. ಅಂತೆಯೇ ರಾಷ್ಟ್ರಾಧ್ಯಕ್ಷರು ಅಥವಾ ರಾಜ್ಯಪಾಲರ ಅಥವಾ ಯಾವುದೇ ನ್ಯಾಯಾಲಯದ ನಡವಳಿಕೆಯನ್ನು ಕುರಿತು ಆರೋಪಿಸಲಿಕ್ಕಾಗದು ಅಥವಾ ಚರ್ಚೆಯನ್ನು ಪರಿಣಾಮಕಾರಿಯಾಗಿ ಮಾಡುವ ಉದ್ದೇಶಕ್ಕಾಗಿ ರಾಜ್ಯಪಾಲರ ಅಥವಾ ರಾಷ್ಟ್ರಾಧ್ಯಕ್ಷರ ಹೆಸರನ್ನು ಬಳಸಲಿಕ್ಕೆ ಸಹ ನಿಯಮ 327(10)ರ ಪ್ರಕಾರ ಬಾರದು. ಒಂದು ವೇಳೆ ಮಾತನಾಡಿದರೆ ಅದನ್ನು ಕಡತದಿಂದ ಸಭಾಧ್ಯಕ್ಷರು ತೆಗೆದು ಹಾಕದೆ ಇದ್ದರೆ ವಿಧಾನಸಭೆಯ ನಡವಳಿಕೆಗಳನ್ನು ಯಾರೂ ಪ್ರಶ್ನಿಸಲಿಕ್ಕೆ ಬರುವುದಿಲ್ಲ. ಒಂದು ವೇಳೆ ಅದನ್ನು ಯಾರಾದರೂ ಪ್ರಶ್ನಿಸಿದರೆ ಅದು ಸದನ, ಸದನದ ಸದಸ್ಯರ ಹಾಗೂ ಸಭಾಧ್ಯಕ್ಷರ ಹಕ್ಕುಬಾಧ್ಯತೆಯನ್ನು ಎದುರಿಸಬೇಕಾಗುತ್ತದೆ. ಇಂತಹ ಹಕ್ಕುಬಾಧ್ಯತೆಯ ಉಲ್ಲಂಘನೆ ಮಾಡಿದ ವ್ಯಕ್ತಿ ಆರೋಪವನ್ನು ಎದುರಿಸಬೇಕಾಗುತ್ತದೆ. ಇಂತಹ ಹಕ್ಕುಬಾಧ್ಯತೆ ಉಲ್ಲಂಘನೆಯ ಬಗ್ಗೆ ವಿಷಯವನ್ನು ನಿಯಮ 195 ಅಥವಾ 196ರ ಮೇರೆಗೆ ಪರಿಶೀಲನೆಗಾಗಿ, ಹಕ್ಕುಬಾಧ್ಯತಾ ಸಮಿತಿಗೆ ಕಳಿಸಬಹುದಾಗಿದೆ.

ಸಂಸತ್ತು ಆಗಲಿ ಅಥವಾ ವಿಧಾನಮಂಡಲವಾಗಲಿ ಈ ರಾಷ್ಟ್ರದ ಹಾಗೂ ರಾಜ್ಯಗಳ ಅತ್ಯುನ್ನತ ಸಂವಿಧಾನಬದ್ಧವಾದ ಪ್ರಜಾಸತ್ತೆಯ ಅಗ್ರೇಶ್ವರ ಲಿಂಗಗಳು, ಕಾನೂನುಗಳನ್ನು ರಚಿಸಿ ಅವುಗಳನ್ನು ಕಾರ್ಯರೂಪದಲ್ಲಿ ತರಲು ನ್ಯಾಯ ನಿರ್ಣಯ ಕೊಡಲು ನ್ಯಾಯಾಂಗಕ್ಕೆ ಅನುಕೂಲ ಮಾಡಿಕೊಡುವ ಪ್ರಜಾಪ್ರತೀಕಗಳು. ಸಂಸತ್ತು ಅಥವಾ ವಿಧಾನಮಂಡಲದಲ್ಲಿ ಯಾವುದೇ ಸದಸ್ಯ ಮಾತಾಡಿದ ಮಾತುಗಳು ಹಾಗೂ ಭಾಗವಹಿಸಿದ ಚರ್ಚಾ ವಿಷಯಗಳಿಗೆ ಸಂವಿಧಾನಬದ್ಧ ರಕ್ಷಣೆಯಿದ್ದು ಅವುಗಳನ್ನು ಯಾವುದೇ ನ್ಯಾಯಾಲಯಗಳಲ್ಲಿ ಪ್ರಶ್ನಿಸಲು ಬಾರದು ಹಾಗೂ ಆ ವಿಷಯ ಯಾವುದೇ ನ್ಯಾಯಾಲಯದಲ್ಲಿ ಕ್ರಿಮಿನಲ್ ಕಂಟೆಂಪ್ಟ್ ಅಥವಾ ಸಿವಿಲ್ ಕಂಟೆಂಪ್ಟ್ ಆಗಲಾರದು. ಹಕ್ಕುಬಾಧ್ಯತೆಯು ಸದನದ, ಸದನ ಸಮಿತಿಯ ಹಾಗೂ ಸದಸ್ಯರ ಸ್ವಾತಂತ್ರ್ಯ, ಅಧಿಕಾರ, ಘನತೆ ಹಾಗೂ ಗೌರವವನ್ನು ರಕ್ಷಿಸುವ ಸಾಧನವಾಗಿದೆ. ಸಂಸತ್ತಿನ ಹಕ್ಕುಬಾಧ್ಯತಾ ಸಮಿತಿಯು ತನಿಖೆಯಾದನಂತರ ಪಾರ್ಲಿಮೆಂಟ್ ಸದಸ್ಯರೊಬ್ಬರನ್ನು 1951ರಲ್ಲಿ ಘನತೆ, ಗೌರವಗಳಿಂದ ನಡೆದುಕೊಳ್ಳದ್ದರಿಂದ ಪಾರ್ಲಿಮೆಂಟ್ ಸದಸ್ಯರಾಗಿ ಯಾವ ರೀತಿಯಲ್ಲಿ ನಡೆದುಕೊಳ್ಳಬೇಕಾಗಿತ್ತೋ ಅದಕ್ಕೆ ತಕ್ಕಂತೆ ನಡೆದುಕೊಳ್ಳದ್ದರಿಂದ ಅವರನ್ನು ಸಂಸತ್ತು ಎಕ್ಸ್‌ಪೆಲ್ ಮಾಡಿದ ಉದಾಹರಣೆಯುಂಟು. ಅಂತೆಯೇ ಸಂಸತ್-ಸದನದ ಹಕ್ಕುಬಾಧ್ಯತೆ ಉಲ್ಲಂಘನೆಗಾಗಿ ಶ್ರೀಮತಿ ಇಂದಿರಾ ಗಾಂಧಿಯವರನ್ನು 19-12-1978ರಲ್ಲಿ ಅವರು ಮಾಡಿದ ಅಪರಾಧಕ್ಕಾಗಿ ಸಂಸತ್ ಸದಸ್ಯತ್ವದಿಂದ ತೆಗೆದು ಹಾಕಿ ಸಂಸತ್ತು ಅವರನ್ನು ಜೇಲಿಗೆ ಕಳುಹಿಸಿದ ಉದಾಹರಣೆಯುಂಟು.

ಸಂಸತ್ತಿನ ಅಥವಾ ವಿಧಾನಮಂಡಲದ ತೀರ್ಮಾನವನ್ನು ಸುಪ್ರೀಂ ಕೋರ್ಟ್ ಆಗಲೀ ಅಥವಾ ರಾಜ್ಯ ಹೈಕೋರ್ಟ್ ಆಗಲೀ ಪ್ರಶ್ನಿಸಲಿಕ್ಕಾಗುವುದಿಲ್ಲವಾದ್ದರಿಂದ ತಮ್ಮ ತೀರ್ಮಾನವನ್ನು ತಾವೇ ಸಂಸತ್ತಾಗಲೀ ಅಥವಾ ವಿಧಾನಮಂಡಲಗಳಾಗಲೀ ಪುನರ್ವಿಮರ್ಶಿಸುವ ಉನ್ನತ ಅಧಿಕಾರವಿರುವುದರಿಂದ ತಾ। 19-12-1978 ರಂದು ಕೊಟ್ಟ ಆರನೇ ಲೋಕಸಭೆಯ ತೀರ್ಮಾನವನ್ನು ಏಳನೇ ಲೋಕಸಭೆ ತಾ। 7-5-1981ರಂದು ರದ್ದುಮಾಡಿ ಶ್ರೀಮತಿ ಇಂದಿರಾಗಾಂಧಿಯವರನ್ನು ನಿರ್ದೋಷಿಯನ್ನಾಗಿ ಮಾಡಿದ ತೀರ್ಮಾನವೂ ಸಂಸತ್ತಿನ ಇತಿಹಾಸ ಸೇರಿದೆ.

ಆರ್ಟಿಕಲ್ 211 ಪ್ರಕಾರ ಸರ್ವೋಚ್ಚ ನ್ಯಾಯಾಲಯದ ಅಥವಾ ಉಚ್ಚ ನ್ಯಾಯಾಲಯದ ಯಾವುದೇ ನ್ಯಾಯಾಧೀಶರ ಕರ್ತವ್ಯ ನಿರ್ವಹಣೆಯಲ್ಲಿನ ಅವರ ವರ್ತನೆಯ ಬಗ್ಗೆ ರಾಜ್ಯ ವಿಧಾನಮಂಡಲದಲ್ಲಿ ಯಾವುದೇ ಚರ್ಚೆಯನ್ನು ನಡೆಸಲು ಬಾರದು. ಅಕಸ್ಮಾತ್ ಇಂತಹ ವಿಷಯದ ಬಗ್ಗೆ ಯಾವುದೇ ಸದಸ್ಯನು ಮಾತಾಡಲು ಪ್ರಾರಂಭಿಸಿದರೆ ಅಂತಹ ಸದಸ್ಯನಿಗೆ ಮಾತಾಡಲು ಸಭಾಧ್ಯಕ್ಷರು ಅವಕಾಶ ಕೊಡಬಾರದು. ಸಭಾಧ್ಯಕ್ಷರು ಸೂಚನೆ ಮೀರಿ ಮಾತಾಡಲು ಮುಂದಾದರೆ ಮಾತಾಡಿದ್ದನ್ನು ಕಡತದಿಂದ ತೆಗೆದು ಹಾಕಿ ಮುಂದೆ ಆ ಸದಸ್ಯ ಏನೇ ಮಾತಾಡಿದರೂ ಆ ಮಾತನ್ನು ರಿಕಾರ್ಡ್

ಮಾಡದಿರಲು ವರದಿಗಾರರಿಗೆ ಸಭಾಧ್ಯಕ್ಷರು ಆದೇಶ ಕೊಡಬೇಕಾಗುತ್ತದೆ. ವಿಧಾನಮಂಡಲ ದಲ್ಲಿ ಯಾವುದೇ ಸದಸ್ಯ ಮಾತಾಡುವಾಗ ಇತರರಿಗೆ ಮಾನನಷ್ಟವನ್ನುಂಟು ಮಾಡುವಂಥ ಅಥವಾ ಅಸಭ್ಯವಾದ ಅಥವಾ ಸಭಾಮರ್ಯಾದೆಗೆ ತಕ್ಕುದಲ್ಲವಾದ ಅಥವಾ ವ್ಯಕ್ತಿಯ ಘನತೆಗೆ ಯೋಗ್ಯವಲ್ಲದ ಪದವನ್ನು ಅಥವಾ ಪದಗಳನ್ನು ಚರ್ಚೆಯಲ್ಲಿ ಉಪಯೋಗಿಸಲಾಗಿದೆ ಎಂಬುದಾಗಿ ಸಭಾಧ್ಯಕ್ಷರು ಅಭಿಪ್ರಾಯಪಟ್ಟರೆ ಸಭಾಧ್ಯಕ್ಷರು ತಮ್ಮ ವಿವೇಚನಾನುಸಾರ ಸಭೆಯ ಕಾರ್ಯಕಲಾಪಗಳ ವರದಿಯಿಂದ ಅಂತಹ ಪದಗಳನ್ನು ತೆಗೆದುಹಾಕಲು ಆದೇಶಿಸಬಹುದಾಗಿದೆ. ಇದು ಸಂವಿಧಾನ ಹಾಗೂ ವಿಧಾನಮಂಡಲಗಳ ನಿಯಮಬದ್ಧ ಉಲ್ಲೇಖ. ಭಾರತ ಸಂವಿಧಾನ ಪ್ರಕಾರ ವಿಧಾನಮಂಡಲದಲ್ಲಿನ ಯಾವುದೇ ವ್ಯವಹಾರಗಳ ಸಿಂಧುತ್ವವನ್ನು ಪ್ರಕ್ರಿಯೆಯಲ್ಲಿನ ಯಾವುದೇ ಕ್ರಮ ದೋಷದ ಆಧಾರದ ಮೇಲೆ ಯಾವುದೇ ಕೋರ್ಟಿನಲ್ಲಿ ಪ್ರಶ್ನಿಸಲಿಕ್ಕೆ ಬರುವುದಿಲ್ಲ. ಅಂತೆಯೇ ವಿಧಾನಮಂಡಲ ದಲ್ಲಿ ವ್ಯವಹಾರ ನಡವಳಿಕೆ ಸುವ್ಯವಸ್ಥೆ, ನಿರ್ವಹಣೆ ಹಾಗೂ ಪ್ರಕ್ರಿಯೆಯನ್ನು ಕ್ರಮಗೊಳಿಸುವ ಸಲುವಾಗಿ ವಿಧಾನಮಂಡಲದ ಸದಸ್ಯ ಅಥವಾ ಅಧಿಕಾರಿಗಳ ಅಧಿಕಾರವನ್ನು ಸಹ ಯಾವುದೇ ಕೋರ್ಟಿನ ವ್ಯಾಪ್ತಿಗೆ ಪ್ರಶ್ನಿಸಲು ಬರುವುದಿಲ್ಲ.

ಸದಸ್ಯರು ಸಭೆಯಲ್ಲಿ ಆಡಿದ ಮಾತುಗಳು ಸತ್ಯಕ್ಕೆ ದೂರವಾದ ಹಾಗೂ ಮತ್ಸರವುಳ್ಳದ್ದಾಗಿದ್ದರೂ ಸಹ ನ್ಯಾಯಾಲಯ ವ್ಯಾಪ್ತಿಯಿಂದ ಅವರಿಗೆ ರಕ್ಷಣೆಯಿದೆಯೆಂದು ಎ.ಐ.ಆರ್. 1951 ಕಲಕತ್ತಾ 176ರಲ್ಲಿ ಉಲ್ಲೇಖವಿದೆ. ಸದನದಲ್ಲಿ ಸದಸ್ಯನಾಡಿದ ಮಾತು ಕೋರ್ಟ್ ನಿಂದನೆಯಾಗಿದ್ದರೂ ಸದನದಲ್ಲಿ ಸದಸ್ಯರ ಮಾತಿಗೆ ವಿಶೇಷ ವಿನಾಯಿತಿ ಇರುವುದರಿಂದ ಅವರ ಮೇಲೆ ಯಾವುದೇ ನ್ಯಾಯಾಲಯ ನಿಂದನೆ ಕ್ರಮ ತೆಗೆದುಕೊಳ್ಳಲಿಕ್ಕೆ ಬಾರದು ಎಂದು ಎ.ಐ.ಆರ್. 1958 ಒರಿಸ್ಸಾ 168ರಲ್ಲಿ ಉಲ್ಲೇಖವಿದೆ. ಏನೇ ಮಾತಾಡಿದರೂ ಅಥವಾ ಮಾಡಿದರೂ ಆ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವುದು ಸದನಕ್ಕೆ ಬಿಟ್ಟ ವಿಚಾರವಿದ್ದು, ಸದನವು ಆ ವಿಷಯವನ್ನು ಹಕ್ಕುಬಾಧ್ಯತಾ ಸಮಿತಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಬಹುದಾಗಿದೆ. ಸದನವು ಸಂವಿಧಾನಬದ್ಧ ಸರ್ವಸ್ವಾತಂತ್ರ್ಯ ಸಾಮ್ರಾಟನಿರುವುದರಿಂದ ಸಭಾಧ್ಯಕ್ಷರು ಗರಿಷ್ಠ ಘನತೆ, ಕೀರ್ತಿವೇತ್ತರಿರುವುದರಿಂದ ಸದನದ ಅಥವಾ ಸಭಾಧ್ಯಕ್ಷರ ತೀರ್ಮಾನದ ವಿರುದ್ಧ ನ್ಯಾಯಾಲಯ ಯಾವುದೇ ಕ್ರಮ ತೆಗೆದುಕೊಳ್ಳಲಾರದೆಂದು ಅಲ್ಲಾಹಾಬಾದ್ ಹೈಕೋರ್ಟ್ ನಿರ್ಧರಿಸಿದ ಬಗ್ಗೆ ಎ.ಐ.ಆರ್. 1954 ಅಲಹಾಬಾದ್ 319ರಲ್ಲಿ ಸಹ ಉಲ್ಲೇಖವಿದೆ. ನ್ಯಾಯಾಲಯ ನಿಂದನೆ ಅಧಿನಿಯಮದ ಕಲಂ 5ರ ಪ್ರಕಾರ ಕೋರ್ಟಿನಲ್ಲಿ ಚವಕಾಸಿಯಾಗಿ ಅಂತಿಮವಾಗಿ ತೀರ್ಮಾನವಾದ ಯಾವುದೇ ವ್ಯಾಜ್ಯದ ಅರ್ಹತೆಯ ಬಗ್ಗೆ ಹಿತಕರವಾದ ಟೀಕೆ ಅಭಿಪ್ರಾಯವನ್ನು ಪ್ರಕಟಿಸಿದ ವ್ಯಕ್ತಿ ಕೋರ್ಟ್ ನಿಂದನೆಯ ತಪ್ಪುಗಾರನಾಗಲಾರ.

ದುರ್ದೈವದಿಂದ ಇತ್ತೀಚೆಗೆ ವಿಧಾನಸಭೆಯಲ್ಲಿ ನಡೆದ ನ್ಯಾಯಾಧೀಶರ ನ್ಯಾಯಾಲಯದ ಒಳಗಿನ ಅಥವಾ ಹೊರಗಿನ ನಡವಳಿಕೆಗಳ ಬಗ್ಗೆ ಚರ್ಚೆ, ಸದನದ

ಸದಸ್ಯರ ಸದನದ ಒಳಗಿನ ಅಥವಾ ಹೊರಗಿನ ನಡವಳಿಕೆಗಳ ಚರ್ಚೆ ದುರದೃಷ್ಟಕರ ಹಾಗೂ ಗಂಭೀರವಾಗಬಾರದಿತ್ತು. ಶಾಸಕಾಂಗದ ಗೌರವ ವ ಘನತೆಯನ್ನು ನ್ಯಾಯಾಂಗ ಎತ್ತಿ ಹಿಡಿಯಬೇಕು. ನ್ಯಾಯಾಂಗದ ಗೌರವ, ಘನತೆಯನ್ನು ಶಾಸಕಾಂಗ ಎತ್ತಿ ಹಿಡಿಯಬೇಕು. ಇದು ಈ ಎರಡೂ ಸಂವಿಧಾನಬದ್ಧ ಅಂಗಗಳ ಕರ್ತವ್ಯ. ಈ ಎರಡೂ ಅಂಗಗಳು ಸಂವಿಧಾನ ಹಾಗೂ ಸಂವಿಧಾನಬದ್ಧ ಅಧಿನಿಯಮಗಳ ಚೌಕಟ್ಟಿನಲ್ಲಿ ಕಾರ್ಯನಿರ್ವಹಿಸಬೇಕು. ಶಾಸಕಾಂಗದ ಸದಸ್ಯರು, ನ್ಯಾಯಾಂಗದ ನ್ಯಾಯಾಧೀಶರು ಇಬ್ಬರೂ ತಮ್ಮ ತಮ್ಮ ಇತಿಮಿತಿಗಳ ಮಧ್ಯದಲ್ಲಿ ತಮ್ಮ ತಮ್ಮ ಘನತೆ, ಗೌರವಗಳನ್ನು ಹಾಗೂ ಶಾಸಕಾಂಗ, ನ್ಯಾಯಾಂಗ ಘನತೆ, ಗೌರವಗಳನ್ನು ಎತ್ತಿ ಹಿಡಿದು ಕಾರ್ಯ ನಿರ್ವಹಿಸಿ ಮಾಡನಾಡಬೇಕೇ ಹೊರತು ಯಾರೂ ಹದ್ದುಮೀರಿ ವರ್ತಿಸುವುದು ಈ ರಾಷ್ಟ್ರದ ಸಂವಿಧಾನಕ್ಕೆ ಅಪಚಾರ ಮಾಡಿದಂತಾಗುವುದು. ಈ ಹಿನ್ನೆಲೆಯಲ್ಲಿ ಸಂವಿಧಾನ, ಸಂವಿಧಾನಬದ್ಧ ಅಧಿನಿಯಮ, ಸಂವಿಧಾನಬದ್ಧ ಶಾಸಕಾಂಗ ನಿಯಮಗಳ ವ್ಯಾಪ್ತಿಯಲ್ಲಿ ದುರುದೃಷ್ಟವಾದ ಸಂಘರ್ಷಣೆಯನ್ನು ಸಮಾಪ್ತಿಗೊಳಿಸುವುದು ಒಳ್ಳೆಯದು.

❑

ಶಾಸಕಾಂಗದ ಹಿರಿಮೆಯ ಅರಿವು

ನಮ್ಮ ರಾಷ್ಟ್ರದಲ್ಲಿ ಜನಗಣ ಅಧಿನಾಯಕರ ಪ್ರಜಾರಾಜ್ಯ ಅಸ್ತಿತ್ವದಲ್ಲಿದೆ. ರಾಷ್ಟ್ರದ ಜನತೆಯ ಜೀವಾಳ ಲೋಕಸಭೆ, ರಾಜ್ಯಗಳ ಜನತೆಯ ಜೀವಾಳ ವಿಧಾನಸಭೆ. ರಾಷ್ಟ್ರದ ಆಡಳಿತವನ್ನು ಈ ರಾಷ್ಟ್ರದ ಜನತೆ ತಮ್ಮ ಚುನಾಯಿತ ಪ್ರತಿನಿಧಿ ಲೋಕಸಭಾ ಸದಸ್ಯರ ಮುಖಾಂತರ ನಡೆಸುತ್ತಿದ್ದಾರೆ. ರಾಜ್ಯಗಳ ಆಡಳಿತವನ್ನು ರಾಜ್ಯದ ಜನತೆ ತಮ್ಮ ಚುನಾಯಿತ ಪ್ರತಿನಿಧಿ ವಿಧಾನಸಭಾ ಸದಸ್ಯರ ಮುಖಾಂತರ ನಡೆಸುತ್ತಿದ್ದಾರೆ. ಸಂವಿಧಾನಬದ್ಧ ಲೋಕಸಭೆಯಲ್ಲಿ ಅತಿಹೆಚ್ಚಿನ ಸದಸ್ಯರ ಬಹುಮತ ಪಡೆದ ಮೊದಲನೆಯ ರಾಜಕೀಯ ಪಕ್ಷ ತನ್ನ ನಾಯಕನನ್ನು ಚುನಾಯಿಸಿಕೊಂಡು ಈ ನಾಯಕ ಪ್ರಧಾನಮಂತ್ರಿಯಾಗಿ ಸಂವಿಧಾನಬದ್ಧ ಕಾರ್ಯಾಂಗದ ಮುಖ್ಯಸ್ಥನಾಗುತ್ತಾನೆ. ಹೆಚ್ಚು ಸದಸ್ಯರ ಬಹುಮತ ಪಡೆದ ಎರಡನೇ ರಾಜಕೀಯ ಪಕ್ಷ ತನ್ನ ನಾಯಕನನ್ನು ಚುನಾಯಿಸಿಕೊಂಡು ಲೋಕಸಭಾಧ್ಯಕ್ಷರ ಮನ್ನಣೆ ಪಡೆದು ಅಧಿಕೃತ ವಿರೋಧಪಕ್ಷವಾಗಿ ಪ್ರಧಾನಮಂತ್ರಿಯ ನಂತರದ ಕ್ಯಾಬಿನೆಟ್ ದರ್ಜೆ ಮಿನಿಸ್ಟರ್ ಸ್ಥಾನ ಹೊಂದಿ ಕಾರ್ಯ ನಡೆಸುತ್ತದೆ. ಪ್ರಧಾನಮಂತ್ರಿಯ ಪಕ್ಷ, ಅಧಿಕೃತ ವಿರೋಧ ನಾಯಕನ ಪಕ್ಷ, ಹಾಗೂ ಇತರ ಎಲ್ಲಾ ಪಕ್ಷ ಹಾಗೂ ಪಕ್ಷೇತರ ರನ್ನೊಳಗೊಂಡ ಸಮಗ್ರ ಲೋಕಸಭೆಯ ನಾಯಕ ಲೋಕಸಭಾಧ್ಯಕ್ಷರು ಬಹುತೇಕವಾಗಿ ಎಲ್ಲರಿಂದ ಅವಿರೋಧವಾಗಿ ಚುನಾಯಿತರಾಗಿ ಮುಂದಿನ ಹೊಸ ಲೋಕಸಭಾ ಚುನಾವಣೆಯಾಗಿ ಹೊಸ ಲೋಕಸಭಾಧ್ಯಕ್ಷರ ಸಭಾ ಅಸ್ತಿತ್ವದಲ್ಲಿ ಬರುವವರೆಗೂ ಕೇಂದ್ರ ಶಾಸಕಾಂಗದ ನಾಯಕರಾಗಿ, ಮುಖ್ಯಸ್ಥರಾಗಿ ಅಧಿಕಾರದಲ್ಲಿರುತ್ತಾರೆ. ಹೀಗೆ ಶಾಸಕಾಂಗ ಅಥವಾ ಸಂಸತ್ತಿನ ಹಿರಿಮೆ ಕಾರ್ಯಾಂಗಕ್ಕಿಂತ ಮೇಲು.

ರಾಜ್ಯ ವಿಧಾನಸಭೆಯಲ್ಲಿ ಅತೀ ಹೆಚ್ಚಿನ ಸದಸ್ಯರ ಬಹುಮತ ಪಡೆದ ಮೊದಲನೆಯ ರಾಜಕೀಯ ಪಕ್ಷ ತನ್ನ ನಾಯಕನನ್ನು ಚನಾಯಿಸಿಕೊಂಡು ಈ ನಾಯಕ ಮುಖ್ಯಮಂತ್ರಿ ಯಾಗಿ ಸಂವಿಧಾನಬದ್ಧ ಕಾರ್ಯಾಂಗದ ಮುಖ್ಯಸ್ಥನಾಗುತ್ತಾನೆ. ಹೆಚ್ಚಿನ ಸದಸ್ಯರ ಬಹುಮತ ಪಡೆದ ಎರಡನೇ ರಾಜಕೀಯ ಪಕ್ಷ ತನ್ನ ನಾಯಕನನ್ನು ಚುನಾಯಿಸಿಕೊಂಡು ವಿಧಾನಸಭಾಧ್ಯಕ್ಷರ ಮನ್ನಣೆ ಪಡೆದು ಅಧಿಕೃತ ವಿರೋಧ ಪಕ್ಷವಾಗಿ ಮುಖ್ಯಮಂತ್ರಿಯ ನಂತರದ ಕ್ಯಾಬಿನೆಟ್ ದರ್ಜೆಯ ಮಿನಿಸ್ಟರ್ ಸ್ಥಾನ ಹೊಂದಿ ಕಾರ್ಯ ನಡೆಸುತ್ತದೆ.

ಮುಖ್ಯಮಂತ್ರಿಯ ಪಕ್ಷ, ಅಧಿಕೃತ ವಿರೋಧಿ ನಾಯಕನ ಪಕ್ಷ ಹಾಗೂ ಇತರ ಎಲ್ಲಾ ಪಕ್ಷ ಹಾಗೂ ಪಕ್ಷೇತರರನ್ನೊಳಗೊಂಡ ಸಮಗ್ರ ವಿಧಾನಸಭೆಯ ನಾಯಕ ವಿಧಾನಸಭಾ ಅಧ್ಯಕ್ಷರು ಬಹುತೇಕವಾಗಿ ಎಲ್ಲರಿಂದ ಅವಿರೋಧ ಚುನಾಯಿತರಾಗಿ ಮುಂದಿನ ಹೊಸ ವಿಧಾನಸಭಾ ಚುನಾವಣೆಯಾಗಿ ಹೊಸ ವಿಧಾನಸಭೆ ಅಸ್ಥಿತ್ವದಲ್ಲಿ ಬರುವವರೆಗೂ ರಾಜ್ಯ ಶಾಸಕಾಂಗದ ನಾಯಕರಾಗಿ ಮುಖ್ಯಸ್ಥರಾಗಿ ಅಧಿಕಾರದಲ್ಲಿರುತ್ತಾರೆ. ಹೀಗೆ ಶಾಸಕಾಂಗದ ಅಥವಾ ವಿಧಾನಸಭೆಯ ಹಿರಿಮೆ ಕೂಡ ಕಾರ್ಯಾಂಗಕ್ಕಿಂತ ಮೇಲು.

ಈ ದೇಶದ ಅಥವಾ ರಾಜ್ಯಗಳ ಯಾವುದೇ ಅಧಿನಿಯಮ ಪಾಸು ಮಾಡುವ, ತಿದ್ದುಪಡಿ ಮಾಡುವ, ತೆಗೆದುಹಾಕುವ, ಬದಲಾವಣೆ ಮಾಡುವ ಅಥವಾ ಅನೇಕ ಅಧಿನಿಯಮಗಳನ್ನು ಬದಲಿಸಿ ಏಕರೂಪ ಹೊಸ ಅಧಿನಿಯಮ ಮಾಡುವ ಪರಮಾಧಿಕಾರ ಸಂಬಂಧಿಸಿದ ಲೋಕಸಭೆ ಹಾಗೂ ವಿಧಾನಸಭೆಗಳಿಗೆ ಇರುತ್ತದೆ. ಈ ಅಧಿಕಾರ ಚಲಾವಣೆಗಾಗಿ ಸಂಬಂಧಿಸಿದ ಮಸೂದೆಗಳನ್ನು ಆಯಾ ಸರ್ಕಾರಗಳೇ ಲೋಕಸಭೆ ಅಥವಾ ರಾಜ್ಯ ವಿಧಾನಸಭೆಯಲ್ಲಿ ಮಂಡಿಸಬೇಕಾಗುತ್ತದೆ. ಇಂತಹ ಬದಲಾವಣೆ ಮಾಡಲು ಲೋಕಸಭಾ ಸದಸ್ಯರಾಗಲೀ, ಲೋಕಸಭಾಧ್ಯಕ್ಷರಾಗಲೀ, ರಾಜ್ಯ ವಿಧಾನಸಭಾಧ್ಯಕ್ಷರಾಗಲೀ, ವಿಧಾನಸಭಾ ಸದಸ್ಯರಾಗಲೀ ಸರಕಾರಕ್ಕೆ ಸೂಚನೆ, ಸಲಹೆ ಕೊಟ್ಟ ಉದಾಹರಣೆಗಳೂ ಉಂಟು. ಹಾಗೂ ಆ ಪ್ರಕಾರ ಸರಕಾರಗಳು ನಡೆದುಕೊಂಡ ಉದಾಹರಣೆಗಳೂ ಉಂಟು. ಕೇಂದ್ರ ಶಾಸಕಾಂಗ, ರಾಜ್ಯ ಶಾಸಕಾಂಗ ಹಾಗೂ ಅವುಗಳ ಸದಸ್ಯರ ಹಕ್ಕು, ಘನತೆ, ಗೌರವ ಹಾಗೂ ಸೂಕ್ತ ಸಲಹೆ, ಸೂಚನೆಗಳನ್ನು ಎತ್ತಿ ಹಿಡಿಯುವುದು ಸರ್ಕಾರದ ಕಾರ್ಯಾಂಗಗಳ ಕರ್ತವ್ಯ. ಈ ಕರ್ತವ್ಯಗಳ ಅರಿವೇ ಕಾರ್ಯಾಂಗದ ಅಧಿಪತಿ ಮಂತ್ರಿಗಳಿಗೆ ಅಥವಾ ಕಾರ್ಯಾಂಗದ ಐ.ಎ.ಎಸ್. ಅಧಿಕಾರಿ ಕಾರ್ಯದರ್ಶಿ, ಕಮೀಷನರ್‌ರಿಗೆ ಆಗದೆ, ಶಾಸಕಾಂಗ ಹಾಗೂ ಶಾಸಕಾಂಗದ ಸದಸ್ಯರಿಗೆ ಮುಜುಗರ, ಅಗೌರವ, ಅಪಹಾಸ್ಯವನ್ನುಂಟು ಮಾಡಿದ ಹಾಗೂ ಮಾಡುತ್ತಿರುವವರ ಉದಾಹರಣೆಯುಂಟು. ಈ ರಾಷ್ಟ್ರದ ಸಾರ್ವಭೌಮರು ಪ್ರಜೆಗಳು, ಇದು ಪ್ರಜೆಗಳ ರಾಷ್ಟ್ರ. ಚುನಾಯಿತ ಪ್ರಜಾಪ್ರತಿನಿಧಿಗಳಾದ ಸಂಸದರು ಹಾಗೂ ಶಾಸಕರು ಪ್ರಜೆಗಳ ಸಾರ್ವಭೌಮ ಸಂಕೇತ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಟ ಮಾಡಿ ಈ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟವರು ಈ ದೇಶದ ಜನತೆ, ಸ್ವಾತಂತ್ರ್ಯ ದೊರೆತ ಸುವರ್ಣ ದಿನ ಆಗಸ್ಟ್ 15, ದೇಶದಲ್ಲಿ ಪ್ರಜಾರಾಜ್ಯ, ಜನಗಣ ಅಧಿನಾಯಕನ ರಾಜ್ಯ, ಪ್ರಜಾತಂತ್ರ ವ್ಯವಸ್ಥೆ ಅಸ್ತಿತ್ವದಲ್ಲಿ ಬಂದ ಐತಿಹಾಸಿಕ ದಿನ ಜನವರಿ 26. ಈ ಎರಡೂ ಮಹತ್ವದ ರಾಷ್ಟ್ರೀಯ ಮಹೋತ್ಸವ ದಿನಗಳಂದು ಭಾರತೀಯರು ರಾಷ್ಟ್ರಧ್ವಜ ಏರಿದ ಕೂಡಲೇ ಅದಕ್ಕೆ ವಂದನೆ ಶರಣು ಹೊಡೆದು "ಜನಗಣಮನ ಅಧಿನಾಯಕ ಜಯಹೇ.........." ಎಂದು ರಾಷ್ಟ್ರಗೀತೆಯನ್ನು ಹಾಡುತ್ತೇವೆ. ಆದರೆ ಈ ಎರಡೂ ದಿನಗಳಂದು ಪ್ರಜೆಗಳ ಚುನಾಯಿತ ಪ್ರತಿನಿಧಿಗಳಿಗೆ ಇರುವ ಗೌರವವಾದರೂ ಏನು? ಧ್ವಜಾರೋಹಣವನ್ನು

ಜಿಲ್ಲಾ ಹಾಗೂ ಪ್ರಮುಖ ಕೇಂದ್ರಗಳಲ್ಲಿ ಮಾತ್ರ ಶಾಸಕರಾದ ಮಂತ್ರಿಗಳು ಮಾಡಿ ಗೌರವ ಸ್ವೀಕರಿಸಿದರೆ, ಮಂತ್ರಿಗಳಿಲ್ಲದ ತಾಲ್ಲೂಕು, ಉಪವಿಭಾಗ ಕೇಂದ್ರಗಳಲ್ಲಿ ಸಾರ್ವಜನಿಕರ ಸಮಕ್ಷಮ ಧ್ವಜಾರೋಹಣ ಮಾಡಿ ವಂದನೆ ಸ್ವೀಕರಿಸುವವರು ತಹಶೀಲ್ದಾರ್, ಉಪವಿಭಾಗಾಧಿಕಾರಿಗಳು, ಅಲ್ಲಿ ಪ್ರಜಾಪ್ರತಿನಿಧಿ ಶಾಸಕರು, ಸಂಸದರು ನಿರುಪಾಯವಿಲ್ಲದೆ ತಮ್ಮ ಘನತೆ, ಗೌರವ ಬದಿಗಿಟ್ಟು ಪ್ರಜಾಸತ್ತೆಯನ್ನು ಅವಹೇಳನಕ್ಕೆ ಬಲಿಕೊಟ್ಟು ಭಾಗವಹಿಸಬೇಕು. ಪ್ರಜಾಸತ್ತೆಗೆ ಅವಹೇಳನಕರವಾದ ಸನ್ನಿವೇಶಕ್ಕೆ ತೆರೆ ಎಳೆದು 'ಧ್ವಜಸಂಹಿತೆ' (ಫ್ಲಾಗ್ಸ್ ಕೋಡ್)ಯಲ್ಲಿ 'ಸಿವಿಲ್ ಡಿಗ್ನೆಟರಿ' ಬದಲು 'ಇಲೆಕ್ಟೆಡ್ ಡಿಗ್ನೆಟರಿ' ಎಂದು ಬದಲಾವಣೆ ಮಾಡಿ ಜನತೆಯ ಚುನಾಯಿತ ಪ್ರತಿನಿದಿಗಳು ಧ್ವಜಾರೋಹಣವನ್ನು ದೇಶಾದ್ಯಂತ ಮಾಡಲು ಅವಕಾಶವನ್ನು ರಾಜ್ಯ ಹಾಗೂ ಕೇಂದ್ರ ಸರಕಾರಗಳು ಮಾಡುವುದು ಪ್ರಜಾಸತ್ತೆಯ ಘನತೆ, ಗೌರವ ದೃಷ್ಟಿಯಿಂದ ಒಳ್ಳೆಯದು.

ಮಂತ್ರಿಗಳು ಅಥವಾ ಶಾಸಕ, ಸಂಸದರು ಚುನಾಯಿತರಾದ ಕೂಡಲೇ ಮತ ಕೊಟ್ಟವರಿಗೆ, ಕೊಡದವರಿಗೆ ಎಲ್ಲರಿಗೂ ಪಕ್ಷಭೇದ ಮರೆತು ಸರ್ವಜನಪ್ರತಿನಿಧಿಯಾಗಿ ಜನತೆಯ ಕಾರ್ಯ ಮಾಡಬೇಕಾಗುತ್ತದೆ. ತಮ್ಮ ಸ್ಥಾನದ ಘನತೆ, ಗೌರವ, ಹಿರಿಮೆಯನ್ನು ಎತ್ತಿಹಿಡಿದು ನಡೆಯಬೇಕಾಗುತ್ತದೆ ಹಾಗೂ ನುಡಿಯಬೇಕಾಗುತ್ತದೆ. ಅನೇಕ ಶಾಸಕರು, ಸಂಸದರು ಸಾರ್ವಜನಿಕರಿಂದ ಮತಗಳನ್ನು ಸ್ವೀಕರಿಸಿ ಅವುಗಳನ್ನು ಪರಿಶೀಲನೆಗಾಗಿ ಸಂಬಂಧಿಸಿದ ಅಧಿಕಾರಿಗಳಿಗಾಗಲೀ, ಮಂತ್ರಿಗಳಿಗಾಗಲೀ ಅಥವಾ ವಿಧಾನಸಭೆಯ ಅಧ್ಯಕ್ಷರಿಗಾಗಲೀ ಅಥವಾ ಅರ್ಜಿಗಳ ಸಮಿತಿಗಾಗಲೀ, ಶಾಸಕರು ಕಳುಹಿಸಿಕೊಡಬಹುದು. ಅರ್ಜಿಗಳೆಲ್ಲಾ ಚವಕಾಶಿಯಾಗಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು. ಇದು ಅಧಿಕೃತ ಉಲ್ಲೇಖ. ಆದರೆ ದುರ್ದೈವದಿಂದ ಇದಕ್ಕೆ ವ್ಯತಿರಿಕ್ತವಾಗಿ ಅನೇಕ ಶಾಸಕರು, ಮಾಜಿ ಶಾಸಕರು, ಮಾಜಿ ಮಂತ್ರಿಗಳು, ಸಂಸದರು ತಮ್ಮ ಘನತೆ, ಗೌರವ, ಹಿರಿಮೆ, ಕರ್ತವ್ಯಗಳಿಗೆ ತಿಲಾಂಜಲಿಯನ್ನಿತ್ತು ತಮ್ಮ ಸ್ಥಾನದ ಹಿರಿಮೆಯ ಅರಿವೇ ಇಲ್ಲದೆ ತಾವೇ ಸಾರ್ವಜನಿಕರಿಂದ ಮನವಿಗಳನ್ನೂ ಸ್ವೀಕರಿಸಿ ಸಂಬಂಧಿಸಿದವರಿಗೆ ಸೂಕ್ತ ಕ್ರಮಕ್ಕೆ ಕಳುಹಿಸುವುದನ್ನೂ ಬಿಟ್ಟು ಆತ್ಮಗೌರವವಿಲ್ಲದೆ, ತಹಸೀಲ್ದಾರ್ ಇಲ್ಲವೆ ಅದರ ಅಧೀನ ಅಧಿಕಾರಿ, ಜಿಲ್ಲಾಧಿಕಾರಿ ಇಲ್ಲವೇ ಅವರ ಅಧೀನ ಅಧಿಕಾರಿ ಇವರಾರೂ ಸಿಗದಿದ್ದರೆ ಅಥವಾ ತಪ್ಪಿಸಿಕೊಂಡು ಹೋದರೆ ಕೈಗೆ ಸಿಕ್ಕ ಕಛೇರಿ ನೌಕರರ ಕೈಯಲ್ಲಿ ಸಾರ್ವಜನಿಕರೊಡನೆ ಮನವಿ ಕೊಟ್ಟು ಮರಳಿ ಬರುವ ಉದಾಹರಣೆ ಬೇಕಾದಷ್ಟು ಇವೆ. ಶಾಸಕಾಂಗದ ಶಾಸಕ ಸಂಸದರಿಗಿಂತ ಕಾರ್ಯಾಂಗದ ಕೆಳ ಅಧಿಕಾರಿಗಳಿಗೆ ಮನವಿ ಸ್ವೀಕರಿಸಿ ಬೇಡಿಕೆ ಪೂರೈಸುವಲ್ಲಿ ಹೆಚ್ಚಿನ ಅಧಿಕಾರವಿದೆ ಎಂಬ ತಪ್ಪು ಕಲ್ಪನೆ ಸಾರ್ವಜನಿಕರಿಗೆ ಬರುತ್ತಿರುವುದು ಸರಿಯಲ್ಲ. ಈ ದಿಶೆಯಲ್ಲಿ ಪ್ರಜಾಪ್ರತಿನಿಧಿಗಳು ತಮಗಿರುವ ಪರಮೋಚ್ಚ ಅಧಿಕಾರದ ಅರಿವನ್ನು ಅರಿತು ತಾವೇ ಸಾರ್ವಜನಿಕರಿಂದ ಮನವಿ ಸ್ವೀಕರಿಸಬೇಕೇ ಹೊರತು, ತಾವೇ ಸಾರ್ವಜನಿಕರೊಂದಿಗೆ ತಾಲ್ಲೂಕು, ವಿಭಾಗ,

ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಮನವಿ ಕೊಡುವ ಕೆಟ್ಟ ಸಂಪ್ರದಾಯ ಶಾಸಕ, ಸಂಸದರಿಗೂ ಅವಹೇಳನ ಮತ್ತು ಪ್ರಜಾಸತ್ತೆ, ಪ್ರಜಾರಾಜ್ಯಕ್ಕೆ ಅವಹೇಳನ. ಈ ದಿಶೆಯಲ್ಲಿ ಶಾಸಕರು, ಸಂಸದರು ತಮ್ಮ ಘನತೆ, ಗೌರವ ಕರ್ತವ್ಯಗಳನ್ನು ಅರಿತು ಮುನ್ನಡೆಯುವುದು ಒಳ್ಳೆಯದು. ಸರಕಾರಗಳಲ್ಲಿಯ ಹೊಣೆಗಾರ ಮಂತ್ರಿಗಳು ಸಹ ಈ ದಿಶೆಯಲ್ಲಿ ಸೂಕ್ತ ಬದಲಾವಣೆಗೆ ಅವಕಾಶ ಮಾಡುವುದು ಅಗತ್ಯ.

❑

ಶಾಸಕರ ಬೇಡಿಕೆಗೆ ಅನುಚಿತ ತಡೆ

ಈ ರಾಷ್ಟ್ರದ ಪ್ರಜಾ ಜನತಾ ಸಾಮ್ರಾಟರು ತಮ್ಮ ಚುನಾಯಿತ ಪ್ರತಿನಿಧಿ ಸಂಸತ್ ಸದಸ್ಯರ ಮುಖಾಂತರ ದೆಹಲಿಯ ಸಂಸತ್ ಸೌಧ ಅಥವಾ ಸಂಸತ್ ಭವನದಲ್ಲಿಯ ಪ್ರಧಾನಮಂತ್ರಿ ಹಾಗೂ ಅಧಿಕೃತ ವಿರೋಧಪಕ್ಷದ ನಾಯಕರು ಹಾಗೂ ಮಂತ್ರಿ, ಸದಸ್ಯರ ಮುಖಾಂತರ ಈ ದೇಶದ ಆಡಳಿತ ಹಾಗೂ ಅಭಿವೃದ್ಧಿಯನ್ನು ಸಾಧಿಸುತ್ತಿದ್ದಾರೆ. ಈ ದೇಶದ ಆಡಳಿತ ಹಾಗೂ ಅಭಿವೃದ್ಧಿಗೆ ಅವಶ್ಯವಿರುವ ಕಾನೂನು ಸುವ್ಯವಸ್ಥೆಯನ್ನು ನಿರ್ವಹಿಸುವ ಸಲುವಾಗಿ ಅವಶ್ಯವಿರುವ ವೆಚ್ಚಕ್ಕೆ ಬೇಕಾಗಿರುವ ಆದಾಯ ಸಂಗ್ರಹಿಸುವ ಬಗ್ಗೆ ಹಾಗೂ ವಿವಿಧ ಸಾಮಾನ್ಯ, ಸಾಮಾಜಿಕ, ಆರ್ಥಿಕ ಸೇವೆ ಇತ್ಯಾದಿಗಳಿಗೆ ಅವಶ್ಯವಾಗಿ ಬೇಕಾಗಿರುವ ಧನ ವಿನಿಯೋಗ ಇತ್ಯಾದಿಗಳ ಬಗ್ಗೆ ಸಾರ್ವಜನಿಕ ಹಿತಾಸಕ್ತಿಯ ವಿಧಿ-ವಿಧಾನ ಅಧಿನಿಯಮಗಳನ್ನು ಸಂಸತ್ ಭವನದಲ್ಲಿ ಸಂವಿಧಾನಬದ್ಧವಾಗಿ ರಚಿಸಿ ಮಂಜೂರಿ ಪಡೆದು ಈ ಸಂಸತ್ ಭವನದ ಮುಖಾಂತರ ಈ ರಾಷ್ಟ್ರದ ಹಣೆಬರಹವನ್ನು ಸಹ ಪ್ರಜೆಗಳು ಬರೆಯುತ್ತಾರೆ. ಅಂತೆಯೇ ಪ್ರಜಾ ಪ್ರಭುಗಳು ತಮ್ಮ ಪ್ರತಿನಿಧಿಗಳನ್ನು ಕರ್ನಾಟಕ ವಿಧಾನಸಭೆಗೆ ಚುನಾಯಿಸಿ ಕಳುಹಿಸಿ ಮುಖ್ಯಮಂತ್ರಿ ಅಧಿಕೃತ ವಿರೋಧಪಕ್ಷದ ನಾಯಕ ಮಂತ್ರಿಗಳು ಹಾಗೂ ಸದಸ್ಯರ ಮುಖಾಂತರ ಈ ರಾಜ್ಯದ ಆಡಳಿತ ಹಾಗೂ ಅಭಿವೃದ್ಧಿಯನ್ನು ವಿಧಾನ ಸಭೆ ಹಾಗೂ ವಿಧಾನ ಪರಿಷತ್‌ಗಳಿರುವ ವಿಧಾನಸೌಧದಿಂದ ಅಥವಾ ವಿಧಾನಭವನದಲ್ಲಿಂದ ಸಾಧಿಸುತ್ತಿದ್ದಾರೆ. ಈ ರಾಜ್ಯದ ಆಡಳಿತ ಹಾಗೂ ಅಭಿವೃದ್ಧಿಗೆ ಅವಶ್ಯವಿರುವ ಕಾನೂನು ಶಾಂತಿ ಪರಿಪಾಲನೆಯ ನಿರ್ವಹಣೆಗಾಗಿ ಅವಶ್ಯವಿರುವ, ಆಡಳಿತ ಹಾಗೂ ಅಭಿವೃದ್ಧಿಗೆ ಅಗತ್ಯವಾಗಿ ಬೇಕಾಗಿರುವ ಆದಾಯ ಸಂಗ್ರಹಿಸುವ ಬಗ್ಗೆ ಹಾಗೂ ವಿವಿಧ ಸಾಮಾನ್ಯ, ಸಾಮಾಜಿಕ ಹಾಗೂ ಆರ್ಥಿಕ ಇತ್ಯಾದಿ ಸೇವೆಗಳಿಗೆ ಬೇಕಾಗಿರುವ ಧನ ವಿನಿಯೋಗ ಇತ್ಯಾದಿಗಳ ಬಗ್ಗೆ ಸಾರ್ವಜನಿಕ ಹಿತಾಸಕ್ತಿಯ ವಿಧಿ-ವಿಧಾನ ಅಧಿನಿಯಮಗಳನ್ನು ವಿಧಾನಸಭೆಯಲ್ಲಿ ಸಂವಿಧಾನಬದ್ಧವಾಗಿ ರಚಿಸಿ ವಿಧಾನಸೌಧದ ಮುಖಾಂತರ ಈ ರಾಜ್ಯದ ಹಣೆಬರಹವನ್ನು ಸಹ ಈ ರಾಜ್ಯದ ಪ್ರಜೆಗಳು ಬರೆಯುತ್ತಾರೆ.

ರಾಷ್ಟ್ರಮಟ್ಟದಲ್ಲಿ ಲೋಕಸಭೆ ಹಾಗೂ ರಾಜ್ಯಸಭೆಗಳನ್ನೊಳಗೊಂಡ ಸಂಸತ್ ಸೌಧ ಅಥವಾ ಸಂಸತ್ ಭವನ ಈ ರಾಷ್ಟ್ರದ ಜೀವಾಳವಾಗಿದ್ದರೆ, ಈ ರಾಜ್ಯದ ವಿಧಾನಸಭೆ ಹಾಗೂ ವಿಧಾನ ಪರಿಷತ್ತನ್ನೊಳಗೊಂಡ ವಿಧಾನಸೌಧ ಈ ರಾಜ್ಯದ ಜನತೆಯ ಜೀವಾಳವಾಗಿರುತ್ತದೆ. ಈ ರಾಜ್ಯದ ಮುಖ್ಯಮಂತ್ರಿ ಅಧಿಕೃತ ವಿರೋಧಪಕ್ಷದ ನಾಯಕ, ಮಂತ್ರಿಗಳು ಹಾಗೂ ಸದಸ್ಯರೆಲ್ಲರಿಂದ ಬಹುತೇಕವಾಗಿ ಸರ್ವಾನುಮತದಿಂದ ವಿಧಾನಸಭೆಯ ಅಧ್ಯಕ್ಷರಾಗಿ ಚುನಾಯಿತರಾಗಿ ವಿಧಾನ ಸಭಾಧ್ಯಕ್ಷರು ಕಾರ್ಯನಿರ್ವಹಿಸ ಬೇಕಾಗುತ್ತದೆ. ಇದು ಸತ್ಪರಂಪರೆ. ಅಂತೆಯೇ ವಿಧಾನ ಪರಿಷತ್ತಿನ ಸಭಾಪತಿಗಳು ಸಹ ಉನ್ನತ ಪೀಠದ ಅಧ್ಯಕ್ಷರಾಗಿ ಚುನಾಯಿತರಾಗಿ ಕಾರ್ಯನಿರ್ವಹಿಸಬೇಕಾಗುತ್ತದೆ. ಸಭಾಧ್ಯಕ್ಷ ವ ಸಭಾಪತಿಗಳು ಮುಖ್ಯಮಂತ್ರಿ, ಅಧಿಕೃತ ವಿರೋಧಪಕ್ಷದ ನಾಯಕ, ಮಂತ್ರಿ ಹಾಗೂ ಸದಸ್ಯರೆಲ್ಲರ ಘನತೆ, ಗೌರವ, ಗಾಂಭೀರ್ಯ, ಹಿರಿಮೆ, ಹಕ್ಕುಗಳನ್ನು ರಕ್ಷಿಸಬೇಕಾಗುತ್ತದೆ ಹಾಗೂ ಸದನದಲ್ಲಿರುವ ಅವರ ಕಾರ್ಯನಿರ್ವಹಣೆಗಾಗಿ ಅವಶ್ಯವಿರುವ ಅನುಕೂಲತೆ, ಅವಕಾಶಗಳನ್ನು ಸಹ ಒದಗಿಸಬೇಕಾಗುತ್ತದೆ. ಅಂತೆಯೇ ಈ ಎಲ್ಲ ಸದಸ್ಯರು ಸಭಾಧ್ಯಕ್ಷ ಸಭಾಪತಿಗಳ ಹಾಗೂ ಘನತೆವೆತ್ತ ಅಗ್ರಪೀಠ ಅಥವಾ ಸಿಂಹಾಸನದ ಗೌರವ, ಘನತೆ, ಹಿರಿಮೆ, ಜ್ಯೇಷ್ಠತೆ, ಶ್ರೇಷ್ಠತೆಯನ್ನು ಎತ್ತಿಹಿಡಿದು ಪ್ರಜಾಸತ್ತೆಯ ಪತಾಕೆಯನ್ನು ಹಾರಿಸಬೇಕಾಗುತ್ತದೆ. ಸಭಾಧ್ಯಕ್ಷ, ವ ಸಭಾಪತಿಗಳು ಸದಸ್ಯರ ಸ್ನೇಹಿತರೂ ಹೌದು, ತತ್ವಜ್ಞಾನಿಯೂ ಹೌದು ಹಾಗೂ ಮಾರ್ಗದರ್ಶಿಯೂ (ಫ್ರೆಂಡ್, ಫಿಲಾಸಫರ್ ಮತ್ತು ಗೈಡ್) ಹೌದು. ವಿಧಾನಸಭೆ, ವಿಧಾನ ಪರಿಷತ್ತಿನಲ್ಲಿ ಸಾರ್ವಜನಿಕ ಸಾಮ್ರಾಟರ ಪರವಾಗಿ ಪ್ರತಿನಿಧಿ ಶಾಸಕರು ಸಾರ್ವಜನಿಕ ಹಿತದೃಷ್ಟಿಯಿಂದ ಯಾವುದೇ ಸಮಂಜಸವಾದ ಬೇಡಿಕೆಗಳನ್ನಿಡಬಹುದು. ಸರಕಾರದ ಆಡಳಿತ ಅಭಿವೃದ್ಧಿಯ ಕಾರ್ಯಾಚರಣೆಯಲ್ಲಿ ಕಂಡು ಬಂದ ಲೋಪ, ದೋಷ, ಭ್ರಷ್ಟಾಚಾರ, ಪಕ್ಷಪಾತ, ಸ್ವಜನ ಪಕ್ಷಪಾತ, ಅಧಿಕಾರ ದುರುಪಯೋಗ, ದುರಾಡಳಿತ, ಸ್ವಾರ್ಥ, ಇತ್ಯಾದಿಗಳ ರಚನಾತ್ಮಕ ಅಥವಾ ಉಗ್ರ ಟೀಕೆ-ಟಿಪ್ಪಣಿ, ಸಲಹೆಗಳನ್ನು ದಾಕ್ಷಿಣ್ಯಪರರಾಗದೆ ನ್ಯಾಯನಿಷ್ಠುರಿಗಳಾಗಿ ಹೇಳಬಹುದು. ಅಂತಹ ಎಲ್ಲ ಹೇಳಿಕೆಗಳನ್ನು ಹೇಳುವ ಅವಕಾಶವನ್ನು ಸಭಾಧ್ಯಕ್ಷರು ಸದಸ್ಯರಿಗೆ ಕೊಡುವ ಸತ್‌ಸಂಪ್ರದಾಯ ಯಥಾವತ್ತಾಗಿ ನಡೆದುಬಂದಿದೆ. ಇಂತಹ ಕಟು ಟೀಕೆ, ಬೇಡಿಕೆಗಳನ್ನು ಅಧಿಕಾರಾರೂಢ ಪಕ್ಷ ಕಾರ್ಯಾಂಗದ ಮುಖ್ಯಮಂತ್ರಿಗಳು, ಮಂತ್ರಿಗಳು, ಸದಸ್ಯರು ಶಾಂತಚಿತ್ತರಾಗಿ ಉದ್ವಿಗ್ನರಾಗದೆ ಸಂಯಮದಿಂದ ಕೇಳಿಕೊಂಡು ಸದಸ್ಯರ ಸಮಸ್ಯೆಗಳಿಗೆ ಸೂಕ್ತ ನಿವಾರಣೆಗಳನ್ನೊದಗಿಸಿ ಅವರ ಸೂಕ್ತವಾದ ಸಾರ್ವಜನಿಕ ಹಿತಾಸಕ್ತಿಯ ಬೇಡಿಕೆಗಳಿಗೆ ಮನ್ನಣೆ ಕೊಡುವುದು ಅವರ ಕರ್ತವ್ಯವಾಗಬೇಕು. ಇದಕ್ಕೆ ಸರಕಾರ ತಪ್ಪಿದಲ್ಲಿ ಅಥವಾ ಸರಕಾರ ತನಗೆ ಬಹುಮತವಿದೆಯೆಂದು ಮೊಂಡು-ಹಟ ಹಿಡಿದು ದುರಹಂಕಾರದಿಂದ ಶಾಸಕರ ಅಭಿಪ್ರಾಯವನ್ನು ಅದು ಸದಭಿಪ್ರಾಯವಿದ್ದರೂ ಅದನ್ನು ಕಡೆಗಣಿಸಿ ಧಿಕ್ಕರಿಸಿದಲ್ಲಿ ಸಭಾಭವನಗಳು ಗೊಂದಲದ ಗೂಡುಗಳಾಗಿ, ರಣರಂಗಗಳಾಗಿ, ಕಣೆಗೆಗಳ-ಕಾನನಗಳಾಗಿ, ಕುರುಕ್ಷೇತ್ರವಾಗಿ, ಸಂತೆಗಳಾಗಿ ಪರಿಣಮಿಸುವ ಸಂಭವಗಳೇ

ಹೆಚ್ಚಾಗಿರುವುದರಿಂದ ಅದನ್ನು ಮನಗಂಡು ಸರಕಾರ ವರ್ತಿಸುವುದು ಹಾಗೂ ಸುಗಮ ಸಮರ್ಥ ರೀತಿಯಲ್ಲಿ ಸದನದ ಕಾರ್ಯಕಲಾಪಗಳು ನಡೆಯುವಂತೆ - ದುರ್ಗಮ ದಾರಿ ಮಾಡದೆ - ಸುಗಮ-ಸುಸೂತ್ರ ದಾರಿಗೆ ಒಲವು ತೋರಿಸುವುದು ಸರಕಾರದ ಕರ್ತವ್ಯವಾಗ ಬೇಕು. ಇದಕ್ಕೆ ಸರಕಾರ ತಪ್ಪಿದರೆ ಪ್ರಜಾತಂತ್ರ ವ್ಯವಸ್ಥೆಯ ಅವಹೇಳನ-ಅಪಚಾರವನ್ನು ಸರಕಾರ . ಮಾಡಿದಂತಾಗುತ್ತದೆ.

ತಹಶೀಲ್ದಾರರು ಸರಕಾರದ ತಾಲ್ಲೂಕು ಮಟ್ಟದ ಒಬ್ಬ ಅಧಿಕಾರಿ. ತಾಲ್ಲೂಕಿನ ಒಬ್ಬ ರೆವಿನ್ಯೂ ಅಧಿಕಾರಿಯಾಗಿ, ತಾಲ್ಲೂಕಿನ ಒಬ್ಬ ಎಕ್ಸಿಕ್ಯೂಟಿವ್ ಮ್ಯಾಜಿಸ್ಟ್ರೇಟರಾಗಿ ಸರಕಾರದ ಏಜೆಂಟನಾಗಿ ತನ್ನ ಕಾರ್ಯವ್ಯಾಪ್ತಿಯಲ್ಲಿ ಕೆಲಸ ಮಾಡಬೇಕಾಗುತ್ತದೆ. ಇವರಿರುವ ಕಛೇರಿ ತಾಲ್ಲೂಕು ಕಛೇರಿಯೇ ಹೊರತು ವಿಧಾನಸಭೆ, ವಿಧಾನಪರಿಷತ್ತು, ಶಾಸಕಾಂಗ ಹಾಗೂ ಕಾರ್ಯಾಂಗದ ಕಾರ್ಯಾಲಯ ಮಂತ್ರಾಲಯಗಳನ್ನೊಳಗೊಂಡ ವಿಧಾನಸೌಧವೂ ಅಲ್ಲ, ಮಿನಿ ವಿಧಾನಸೌಧವೂ ಅಲ್ಲವೆಂಬ ವಿವೇಕವನ್ನು ಸರಕಾರ ಹಾಗೂ ಶಾಸಕರು ಅರಿತರೆ ಒಳ್ಳೆಯದು. ರಾಜ್ಯ ಸರಕಾರದ ಬಜೆಟ್ ಹಣವನ್ನು ತನ್ನ ತನ್ನ ಕ್ಷೇತ್ರಗಳಲ್ಲಿ ಯಾವ್ಯಾವ ಅಭಿವೃದ್ಧಿ ಕಾರ್ಯ ಹಾಗೂ ಕಾಮಗಾರಿಗಳಿಗೆ ಪ್ರತಿವರ್ಷ ಪಡೆಯಬೇಕೆಂಬುದು ಎಲ್ಲಾ ಶಾಸಕರ ಹಕ್ಕು ಹಾಗೂ ಅವಗಳನ್ನು ಕಾರ್ಯಗತ ಮಾಡಬೇಕೆಂಬುದು ಕೂಡ ಶಾಸಕರ ಕರ್ತವ್ಯ. ಈ ಹಕ್ಕು ಹಾಗೂ ಕರ್ತವ್ಯಗಳನ್ನು ನಿಷ್ಪಕ್ಷವಾಗಿ ಈಡೇರಿಸಿಕೊಡುವುದು ಆಯಾ ಮಂತ್ರಿಗಳ ಆದ್ಯ ಕರ್ತವ್ಯ ಕೂಡ ಹೌದು. ಶಾಸಕರಾಗಲೀ, ಮಂತ್ರಿಗಳಾಗಲೀ ಅವರೆಲ್ಲರೂ ಈಶ್ವರ ಅಥವಾ ಸತ್ಯನಿಷ್ಠೆ ನಾಮದಿಂದ ರಾಗದ್ವೇಷವಿಲ್ಲದೆ ಅಧಿಕಾರ ನಿರ್ವಹಿಸುವುದಾಗಿ ಪ್ರಮಾಣ ಸ್ವೀಕರಿಸಿದ ಮೇಲೆ ರಾಗದ್ವೇಷ ಭೀತಿಯಿಲ್ಲದೆ ಪಕ್ಷಪಾತಿಯಾಗದೆ ಕಾರ್ಯನಿರ್ವಹಿಸಬೇಕು. ಶಾಸಕರು ತಮ್ಮ ಬೇಡಿಕೆಯನ್ನು ಈಡೇರಿಸುವ ಸಲುವಾಗಿ ಸರಕಾರಕ್ಕೆ ಕೇಳುವುದು ಅವರ ಹಕ್ಕು. ಅದನ್ನು ಈಡೇರಿಸುವುದು ಸರಕಾರದ ಕರ್ತವ್ಯ. ಈ ಕರ್ತವ್ಯ ನಿರ್ವಹಿಸುವಲ್ಲಿ ಯಾವುದೇ ಶಾಸಕರು ಮಂತ್ರಿಯ ಮೇಲೆ ಹಿಂದೆ ಮಾಡಿದ ಆರೋಪದ, ದ್ವೇಷದ ಸಿಟ್ಟನ್ನು ಇಟ್ಟುಕೊಂಡು ಶಾಸಕನ ಸಾರ್ವಜನಿಕ ಹಿತಾಸಕ್ತಿಯ ಬೇಡಿಕೆಯನ್ನು ಮನ್ನಿಸದೆ ಇರುವುದಾಗಲಿ, ದಿನಮೇಕ ಮಾಡುವುದಾಗಲೀ ಯಾವುದೇ ಮಂತ್ರಿಗೆ ಭೂಷಣವಲ್ಲ. ಕಂದಾಯ ಆಯುಕ್ತರಿಂದ ಹಾಗೂ ಮುಖ್ಯಮಂತ್ರಿಗಳಿಂದ ಆದೇಶ ಹೊರಟರೂ ತಾಲ್ಲೂಕು ಕಛೇರಿ ಕಟ್ಟಡಕ್ಕೆ ಬಾಗೇಪಲ್ಲಿ ಶಾಸಕರ ಕೋರಿಕೆಯನ್ನು ಮನ್ನಿಸದೆ ರೆವಿನ್ಯೂ ಮಂತ್ರಿಗಳು ಕಟ್ಟಡ ಪ್ರಾರಂಭಕ್ಕೆ ಸೂಕ್ತ ಆದೇಶ ಹೊರಡಿಸದೆ ಇದ್ದುದು ಸಹ ಸರಿಯಲ್ಲ, ತನ್ನ ಕ್ಷೇತ್ರಕ್ಕೆ ಸಾರ್ವಜನಿಕ ತಾಲ್ಲೂಕು ಕಛೇರಿ (ಮಿನಿ ವಿಧಾನಸೌಧ?) ಕಟ್ಟಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕಾದ ಆ ಶಾಸಕನ ಹಕ್ಕಿಗೆ ಹಳೇ ದ್ವೇಷದ ಪರಿಣಾಮವಾಗಿ ಚ್ಯುತಿ ತಂದುದು ಹಾಗೂ ಶಾಸಕನ ಹಕ್ಕುಚ್ಯುತಿ ಮಾಡಿರುವುದು ಪತ್ರಿಕಾ ವರದಿಗಳನ್ನು ನೋಡಿದರೆ ಅದು ಸುಸ್ಪಷ್ಟ. 99 ಮಾರ್ಚ್ 8 ರಂದೇ ಬಾಗೇಪಲ್ಲಿ ಶಾಸಕರು ವಿಧಾನಸಭೆ ಅಧ್ಯಕ್ಷರಿಗೆ ಈ ಬಗ್ಗೆ ರೆವಿನ್ಯೂ ಸಚಿವರ ಮೇಲೆ ಹಕ್ಕುಚ್ಯುತಿ ಸೂಚನೆಯನ್ನು ಕಳುಹಿಸಿರುವಾಗ

ಸಭಾಧ್ಯಕ್ಷರು ಸದಸ್ಯರ, ಸರಕಾರ ಹಾಗೂ ಮಂತ್ರಿಗಳ ಹಿತದೃಷ್ಟಿಯಿಂದ ಈ ಸೂಚನೆಯನ್ನು ತಕ್ಷಣ ಹಕ್ಕುಚ್ಯುತಿ ಸಮಿತಿಗಾಗಲೀ ಕಳುಹಿಸಿ ಅಥವಾ ಚರ್ಚೆಗೆ ಅವಕಾಶ ಕೊಟ್ಟು ಅಹಿತ ವಾತಾವರಣವನ್ನುಂಟು ಮಾಡುವ ಬದಲು ಸೌಹಾರ್ದ ದೃಷ್ಟಿಯಿಂದ ಬೇಡಿಕೆ ಈಡೇರಿಸಿ ಸುಗಮಗೊಳಿಸಲು ಸರಕಾರಕ್ಕೆ ಸಭಾಧ್ಯಕ್ಷರು ಸೂಚನೆ ಕೊಟ್ಟ ಪ್ರಕಾರ ಮಾರ್ಚ್ ಕೊನೆಯೊಳಗಾಗಿ ಶಾಸಕರ ಬೇಡಿಕೆಯಾದ ತಾಲ್ಲೂಕು ಕಛೇರಿ ಕಟ್ಟಡ ನಿರ್ಮಾಣಕ್ಕೆ ಸರಕಾರಿ ಆದೇಶ ಹೊರಡಿಸಿದ್ದರೆ ಆಗಬಾರದ ರಾದ್ಧಾಂತವನ್ನು ಮೊದಲೇ ತಪ್ಪಿಸಬಹುದಾಗಿತ್ತು. ಸಭಾಧ್ಯಕ್ಷರು ಮಾರ್ಚ್ 8 ರಿಂದ ಸೌಹಾರ್ದ ಕಾಯುವ ದೃಷ್ಟಿಯಿಂದ ಹಕ್ಕುಚ್ಯುತಿ ಸೂಚನೆಯನ್ನು ಕಾಯ್ದಿರಿಸಿದ್ದು ತಪ್ಪೇನು? ಬೇಡಿಕೆ ಈಡೇರಿಸಲು ಸರಕಾರಕ್ಕೆ ಸೂಚಿಸಿದ್ದು ತಪ್ಪೇನು? ಮುಖ್ಯಮಂತ್ರಿಗಳು ಮೊದಲೇ ಗಮನಹರಿಸಿದ್ದರೆ ಒಳ್ಳೆಯದಾಗುತ್ತಿತ್ತು. ಆದರೆ ಅವರಿಗೆ ಇಂತಹ ಅತಿ ಮಹತ್ವದ ವಿಚಾರಗಳನ್ನು ಬಗೆಹರಿಸಲು ಸಮಯ ಬೇಕಲ್ಲವೇ? ತಡವಾದರೂ ಪರವಾಗಿಲ್ಲ. ಕೊನೆಗಾದರೂ ಮುಖ್ಯಮಂತ್ರಿಗಳು ಸರಕಾರಿ ಆದೇಶ ಹೊರಡಿಸಲು ಮುಂದೆ ಬಂದುದು ಒಳ್ಳೆಯದು. ಸರಕಾರ ಸಭಾಧ್ಯಕ್ಷರ ಸಂಯಮದ, ಔದಾರ್ಯದ, ಸೌಜನ್ಯದ ಹಾಗೂ ಸಾರ್ವಜನಿಕ ಹಿತಾಸಕ್ತಿಯ ಸೂಚನೆಗಳನ್ನು ಧಿಕ್ಕರಿಸಿ ಅನಗತ್ಯ ಮುಜುಗರವನ್ನು ಮಾಡದಂತೆ ಮುಂದೆ ಇಂತಹ ಸನ್ನಿವೇಶ ಮರುಕಳಿಸದಂತೆ ಸರಕಾರ ಮುಂಜಾಗ್ರತೆ ವಹಿಸುವುದು ಎಲ್ಲರಿಗೂ ಒಳ್ಳೆಯದು.

❑

ಈ ರಾಷ್ಟ್ರದ - ರಾಜ್ಯದ ಭವಿಷ್ಯ

ಈ ರಾಷ್ಟ್ರದ ಭವ್ಯ ಭವಿಷ್ಯವನ್ನು ಉತ್ತಮಗೊಳಿಸಿ ಸಮಂಜಸವಾದ ಆಡಳಿತ ಹಾಗೂ ಅಭಿವೃದ್ಧಿಯನ್ನು ನೀಡಿ ಪ್ರಗತಿಶೀಲ ಹಾಗೂ ಅಭಿವೃದ್ಧಿಶೀಲ ರಾಷ್ಟ್ರವನ್ನಾಗಿ ನಿರ್ಮಾಣ ಮಾಡುವ ಸಂಪೂರ್ಣ ಅಧಿಕಾರ ಜನತೆಯ ಸಂಕೇತ ಲೋಕಸಭೆಗೆ ಇದೆ. ಈ ಲೋಕಸಭೆಯಲ್ಲಿ ಒಂದು ಕಡೆ ಅಧಿಕಾರಾರೂಢ ಆಡಳಿತ ಪಕ್ಷ, ಆ ಪಕ್ಷದ ನಾಯಕರು ಅಥವಾ ಪ್ರಧಾನಮಂತ್ರಿಗಳಾದರೆ, ಮತ್ತೊಂದು ಕಡೆಗೆ ಅಧಿಕೃತ ವಿರೋಧಪಕ್ಷ ಆ ಪಕ್ಷದ ನಾಯಕರು ಕ್ಯಾಬಿನೆಟ್ ಮಂತ್ರಿಸ್ಥಾನಮಾನ ಹಾಗೂ ಅನೇಕ ಅವಕಾಶ ಹೊಂದಿದ ವಿಪಕ್ಷ ನಾಯಕರಿದ್ದು ಸದನದ ಸಭಾನಾಯಕ, ವಿಪಕ್ಷ ನಾಯಕ ಹಾಗೂ ಇನ್ನಿತರ ಎಲ್ಲಾ ವಿರೋಧಿ ಗುಂಪುಗಳನ್ನು ನಮ್ರಭಾವನೆಯಿಂದ ನೋಡಿಕೊಂಡು ಸ್ನೇಹಿತ, ತತ್ವಜ್ಞಾನಿ ಹಾಗೂ ಮಾರ್ಗದರ್ಶಕರಾಗಿರಲು ಸದನದ ಎಲ್ಲಾ ಸದಸ್ಯರಿಂದ ಚುನಾಯಿತರಾದ ಲೋಕಸಭಾಧ್ಯಕ್ಷರಿರುತ್ತಾರೆ. ಇವರೆಲ್ಲರ ಅಧಿಕಾರ ಅವಧಿ ಐದು ವರ್ಷವಿದ್ದು ಈ ಅವಧಿಯಲ್ಲಿ ಪ್ರತಿವರ್ಷ ಯಾವ್ಯಾವ ಮೂಲಗಳಿಂದ ಎಷ್ಟೆಷ್ಟು ಹಣಕಾಸಿನ ಆಯವನ್ನು ಪಡೆಯಬೇಕು, ಪಡೆದ ಆ ಹಣವನ್ನು ಯಾವ್ಯಾವ ಸಾಮಾನ್ಯ, ಸಾಮಾಜಿಕ ಹಾಗೂ ಆರ್ಥಿಕ ಸೇವೆಗಳಿಗೆ ಬಟವಾಡೆ ವ ವೆಚ್ಚ ಮಾಡಬೇಕೆಂಬ ವಿವರಗಳನ್ನು ಆಯವ್ಯಯದಲ್ಲಿ ಅಧಿಕಾರಾರೂಢ ಸರಕಾರ ತೋರಿಸಿ ಅವುಗಳ ಮಂಜೂರಿಯನ್ನು ಬಜೆಟ್ ಅಧಿವೇಶನದಲ್ಲಿ ಪಡೆದು ಆಯಾ ಆರ್ಥಿಕ ವರ್ಷಗಳಲ್ಲಿ ಕಾರ್ಯನಿರ್ವಹಿಸಬೇಕಾಗುತ್ತದೆ. ಬಜೆಟ್ ಪ್ರಕಾರ ನಿಗದಿತ ಆದಾಯವನ್ನು ಪಡೆಯದೆ ಹೋದರೆ ಹಾಗೂ ಪಡೆದ ಆದಾಯವನ್ನು ಸಂಪೂರ್ಣವಾಗಿ ವೆಚ್ಚ ಮಾಡದೆ ಹೋದರೆ ಪ್ರತಿವರ್ಷ ಸಾಲದ ಹೊರೆಯೂ ಹೆಚ್ಚುತ್ತದೆ ಹಾಗೂ ನಿಗದಿತ ಸೇವೆಗಳ ಕಾರ್ಯ ಅಥವಾ ಅಭಿವೃದ್ಧಿ ಕುಂಠಿತಗೊಂಡು ಜನತೆಯನ್ನು ವಂಚಿರನ್ನಾಗಿ ಮಾಡಿದಂತಾಗುತ್ತದೆ. ಇದು ಸರಕಾರಕ್ಕಾಗಲೀ, ವಿರೋಧಪಕ್ಷಕ್ಕಾಗಲೀ, ಸಂಸದರಿಗಾಗಲೀ ಅಥವಾ ಹಣಕಾಸು ಇಲಾಖೆಯ ಅನುಷ್ಠಾನ ಆಡಳಿತ ಅಧಿಕಾರಿಗಳಿಗಾಗಲೀ ಭೂಷವಲ್ಲ. ಆಯಾ ವರ್ಷಗಳಲ್ಲಿ ಬಜೆಟ್ ಪ್ರಕಾರ ಆದಾಯ ಕಾಲ ಕಾಲಕ್ಕೆ ಬಂದಿದೆಯೋ ಇಲ್ಲವೇ, ಬರದಿದ್ದರೆ ಯಾಕೆ ಬರಲಿಲ್ಲ, ಇದಕ್ಕೆ ಕಾರಣವೇನು ಹಾಗೂ ಕಾರಣರಾರು ಎಂಬುದನ್ನು

ನೋಡಿ ಸೂಕ್ತ ಕ್ರಮ ತೆಗೆದುಕೊಳ್ಳುವುದು ಪ್ರಧಾನಮಂತ್ರಿ, ಮಂತ್ರಿ, ವಿರೋಧಪಕ್ಷ, ವಿರೋಧಿ ಗುಂಪುಗಳ ನಾಯಕರನ್ನೊಳಗೊಂಡ ಎಲ್ಲಾ ಸಂಸದರ ಕಟ್ಟುನಿಟ್ಟಾದ ಕರ್ತವ್ಯ. ಅಂತೆಯೇ ಬಜೆಟ್ ಪ್ರಕಾರ ನಿಗದಿಗೊಳಿಸಿದ ಸಾಮಾನ್ಯ, ಸಾಮಾಜಿಕ ಹಾಗೂ ಆರ್ಥಿಕ ಸೇವೆಗಳಿಗೆ ನಿಗದಿಗೊಳಿಸಿದ ಮೊತ್ತ ಆಯಾ ವರ್ಷದಲ್ಲಿ ಕಾಲಕಾಲಕ್ಕೆ ವೆಚ್ಚವಾಯಿತೆ ಇಲ್ಲವೇ ವೆಚ್ಚವಾಗದಿದ್ದರೆ ಭೌತಿಕ ಪ್ರಗತಿ ಸಾಧಿಸದಿದ್ದರೆ ಏಕೆ ಸಾಧಿಸಲಿಲ್ಲ, ಸಾಧಿಸದೆ ಇರಲಿಕ್ಕೆ ಯಾರು ಕಾರಣರು, ಕಾರಣರಾದವರ ಮೇಲೆ ಏನು ಕ್ರಮವೆಂಬುದನ್ನು ಸಹ ಸಂಸತ್ತು ಸುದೀರ್ಘವಾಗಿ ಚಿಂತಿಸುವುದು ಸಹ ಅಗತ್ಯ ಕರ್ತವ್ಯ. ಪ್ರತಿವರ್ಷ ಬಜೆಟ್ ಮಂಡಿಸಿದಾಗ್ಗೆ ಬಜೆಟ್‌ನಲ್ಲಿ ಮುಂದಿನ ವರ್ಷದ ಅಂದಾಜು ಚಾಲೂ ವರ್ಷದ ಪರಿಷ್ಕೃತ ಅಂದಾಜು ಹಾಗೂ ಹಿಂದಿನ ವರ್ಷದ ವಾಸ್ತವಿಕ ಆಯವ್ಯಯಗಳ ಲೆಕ್ಕವಿದ್ದೇ ಇರುತ್ತದೆ. ಭಾರತ ಸರ್ಕಾರದ ಹಿಂದಿನ ವರ್ಷಗಳ ಬಜೆಟ್‌ಗಳನ್ನು ಅಧ್ಯಯನ ಮಾಡಿದರೆ ಬಜೆಟ್ ಪ್ರಕಾರ ಯಾವುದೇ ವರ್ಷದಲ್ಲಿ ಆಯವ್ಯಯ ವಾಸ್ತವಿಕವಾಗಿರದೆ ಲಕ್ಷಾಂತರ ಕೋಟಿ ಮೊತ್ತ ಆಯವಿರದೆ, ಬಟವಾಡೆ ಮಾಡದೆ ಪ್ರತಿವರ್ಷ ವಿವಿಧ ಸೇವೆಗಳು ನಿರಂತರವಾಗಿ ಕುಂಠಿತಗೊಳ್ಳುತ್ತಲೇ ಇವೆ ಹಾಗೂ ದೇಶೀ, ವಿದೇಶೀ ಸಾಲದ ಹೊರೆ ಹೆಚ್ಚುತ್ತಲೇ ಇದೆ. ಈ ದಿಶೆಯಲ್ಲಿ ಸಂಸತ್ ಸದಸ್ಯರೆಲ್ಲರೂ ಅವರು ಯಾವುದೇ ಸ್ಥಾನದಲ್ಲಿರಲಿ, ಯಾವುದೇ ಪಕ್ಷದಲ್ಲಿರಲಿ ಅವರೆಲ್ಲ ಈ ರಾಷ್ಟ್ರದ ಸರ್ವಾಂಗೀಣ ಅಭಿವೃದ್ಧಿಗಾಗಿ ಗಂಭೀರವಾಗಿ ವಿಚಾರ ವಿನಿಮಯ ಮಾಡುವುದು ಅಗತ್ಯ.

ಲೋಕಸಭೆ, ಅಧಿಕಾರಾರೂಢ ಪಕ್ಷದ ಸರಕಾರ, ವಿರೋಧ ಪಕ್ಷ ಹಾಗೂ ಸಂಸದರ ಕಾರ್ಯವಿಧಾನ ಮಾದರಿಯಲ್ಲಿಯೇ ಕರ್ನಾಟಕದಲ್ಲಿ ಕೂಡ ಮುಖ್ಯಮಂತ್ರಿಗಳು, ಮಂತ್ರಿಗಳು, ವಿರೋಧಪಕ್ಷ, ವಿರೋಧಿ ಗುಂಪುಗಳನ್ನೊಳಗೊಂಡ ಎಲ್ಲಾ ಶಾಸಕರು ಹಾಗೂ ಸಭಾಧ್ಯಕ್ಷರನ್ನೊಳಗೊಂಡ ವಿಧಾನಸಭೆ ಕೂಡ ರಾಜ್ಯದಲ್ಲಿ ತನ್ನ ಐದು ವರ್ಷಗಳ ಅವಧಿಯಲ್ಲಿ ಕಾರ್ಯನಿರ್ವಹಿಸಬೇಕಾಗುತ್ತದೆ. ಅದ್ಯಾವ ಕಾರಣದಿಂದಲೋ ಪ್ರತಿವರ್ಷ ಬಜೆಟ್ ಪ್ರಕಾರ ಆದಾಯ ಪಡೆಯದೆ, ಬಜೆಟ್ ಪ್ರಕಾರ ಬಟವಾಡೆ ಮಾಡದೆ, ನಿಗದಿತ ಹಣ ವೆಚ್ಚಮಾಡದೆ, ನಿಗದಿತ ಅಭಿವೃದ್ಧಿ ಸಾಧಿಸದೆ ಹೆಚ್ಚೆಚ್ಚು ಸಾಲ ಮಾಡುತ್ತ ಸರಕಾರ ಹೊರಟಿರುವುದು ಹಿಂದಿನ ವರ್ಷಗಳ ಬಜೆಟ್ ಪುಸ್ತಕಗಳನ್ನು ತೆರೆದು ನೋಡಿದರೆ ಚಿತ್ರ ಸುಸ್ಪಷ್ಟವಿದೆ. ದೇಶಾದ್ಯಂತ, ಅಲ್ಲದೆ ರಾಜ್ಯಾದ್ಯಂತ, ಸ್ವಾರ್ಥ, ಪಕ್ಷಪಾತ, ಸ್ವಜನ ಪಕ್ಷಪಾತ, ಅಧಿಕಾರ ದುರುಪಯೋಗ, ದುರಾಡಳಿತ, ಭ್ರಷ್ಟಾಚಾರ, ನಿರುದ್ಯೋಗ, ಬಡತನ ಜಾತೀಯತೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇವೆ, ಇದು ಮುಂದುವರಿಯ ಬಾರದು. ಇವಕ್ಕೆ ಹಾಗೂ ಈ ವಾದಿಗಳಿಗೆ ತೆರೆ ಎಳೆಯುವುದು, ತಡೆಗೋಡೆ ಹಾಕುವುದು ಕೇಂದ್ರದ ಹಾಗೂ ರಾಜ್ಯದ ಹೊಸ ಸರಕಾರಗಳ ಕರ್ತವ್ಯವೆಂಬುದನ್ನು ಎಲ್ಲಾ ಹಂತದ ಪ್ರಜಾಪ್ರತಿನಿಧಿಗಳು ಅರಿತರೆ ಒಳ್ಳೆಯದು.

ಸುದೈವದಿಂದ ಭಾರತೀಯ ಪ್ರಜೆಗಳು ಕೇಂದ್ರದಲ್ಲಿ ಬಿ.ಜೆ.ಪಿ. ಪಕ್ಷಕ್ಕೆ ಆಡಳಿತ ಪಕ್ಷವಾಗಿ ಸರಕಾರ ನಡೆಸುವ ಅಧಿಕಾರವನ್ನು ವ ಅವಕಾಶವನ್ನು ಕೊಟ್ಟಿದ್ದು, ಕಾಂಗ್ರೆಸ್ ಪಕ್ಷಕ್ಕೆ ಅಧಿಕೃತ ವಿರೋಧಪಕ್ಷವಾಗಿ ಕಾರ್ಯನಿರ್ವಹಿಸುವ ಅಧಿಕಾರ ವ ಅವಕಾಶವನ್ನು ಕೊಟ್ಟಿದ್ದಾರೆ. ಅಂತೆಯೇ ಕರ್ನಾಟಕದ ಜನತೆ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಆಡಳಿತ ಪಕ್ಷವಾಗಿ ಸರಕಾರ ನಡೆಸುವ ಅವಕಾಶ ಹಾಗೂ ಅಧಿಕಾರವನ್ನು ಕೊಟ್ಟಿದ್ದು, ಬಿ.ಜೆ.ಪಿ. ಪಕ್ಷಕ್ಕೆ ಅಧಿಕೃತ ವಿರೋಧಪಕ್ಷವಾಗಿ ಕಾರ್ಯನಿರ್ವಹಿಸುವ ಅಧಿಕಾರ ವ ಅವಕಾಶವನ್ನು ಕೊಟ್ಟಿದ್ದಾರೆ. ಭಾರತೀಯ ಜನತಾಪಕ್ಷಕ್ಕೆ ಹಾಗೂ ಕಾಂಗ್ರೆಸ್ಸಿಗೆ ರಾಷ್ಟ್ರಮಟ್ಟದಲ್ಲಿ ಹಾಗೂ ರಾಜ್ಯಮಟ್ಟದಲ್ಲಿ ಕೊಟ್ಟಿರುವ ಈ ಸುವರ್ಣ ಅವಕಾಶ ಹಾಗೂ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳದೆ ಸದುಪಯೋಗಡಿಸಿಕೊಂಡು ಈ ರಾಷ್ಟ್ರಕ್ಕೆ ಹಾಗೂ ರಾಜ್ಯಕ್ಕೆ ಸುಭದ್ರ ಹಾಗೂ ಸ್ಥಿರವಾದ ಸರಕಾರವನ್ನು ಮುಂದಿನ ಸಂಪೂರ್ಣ ಐದೂ ವರ್ಷ ಅವಧಿಗೆ ಕೊಟ್ಟು ಉತ್ತಮ ಆಡಳಿತ ಹಾಗೂ ಅಭಿವೃದ್ಧಿಯನ್ನು ನೀಡಬೇಕು. ಅಧಿಕೃತ ವಿರೋಧ ಪಕ್ಷಗಳೇ ಇರಲಿ, ವಿರೋಧಿ ಗುಂಪುಗಳೇ ಇರಲಿ ಅಥವಾ ಯಾರೇ ಇರಲಿ ಆ ಎಲ್ಲಾ ಸಂಸದರು, ಶಾಸಕರು ಸರಕಾರಕ್ಕೆ ಉತ್ತಮ ಸಲಹೆ, ಸೂಚನೆ, ಮಾರ್ಗದರ್ಶನ ಕೊಟ್ಟು ಸರಕಾರ ತಪ್ಪುದಾರಿ ಹಿಡಿದಾಗ ತರಾಟೆಗೆ ತೆಗೆದುಕೊಂಡು ಹದ್ದುಬಸ್ತಿನಲ್ಲಿಡಲು ಮುಂದಾಗಬೇಕೇ ಹೊರತು ಯಾವುದೇ ಸರಕಾರವನ್ನು ಅಸ್ಥಿರಗೊಳಿಸುವ ದುಸ್ಸಾಹಸಕ್ಕೆ ಕೈಹಾಕದೆ ಪ್ರಜಾತಂತ್ರ ವ್ಯವಸ್ಥೆಯನ್ನು ಸುವ್ಯವಸ್ಥಿತವಾಗಿ ಸಾಗುವಂತೆ ಯಶಸ್ವಿಗೊಳಿಸುವುದು ಒಳ್ಳೆಯದು.

❑

ಪ್ರಮಾಣ ವಚನ

ಭಾರತದ ಸಂವಿಧಾನದ ಚೌಕಟ್ಟಿನಲ್ಲಿ ಈ ರಾಷ್ಟ್ರದಲ್ಲಿಯ ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗಗಳು ಕಾರ್ಯ ನಿರ್ವಹಿಸಬೇಕಾಗುತ್ತದೆ. ಈ ರಾಷ್ಟ್ರದ ಸಂವಿಧಾನಬದ್ಧ ಅಗ್ರಗಣ್ಯ ಸರ್ವೋತ್ತಮ ಶ್ರೇಷ್ಠರಾದ ರಾಷ್ಟ್ರಾಧ್ಯಕ್ಷರು, ಉಪರಾಷ್ಟ್ರಾಧ್ಯಕ್ಷರು, ಸಂಸತ್ ಸದಸ್ಯರು, ಸುಪ್ರೀಮ್ ಕೋರ್ಟಿನ ನ್ಯಾಯಾಧೀಶರು, ರಾಜ್ಯಪಾಲರು, ವಿಧಾನಮಂಡಲದ ಸದಸ್ಯರು, ಕೇಂದ್ರ ಮಂತ್ರಿಗಳು, ಭಾರತ ಕಂಟ್ರೋಲರ್ ಮತ್ತು ಆಡಿಟರ್ ಜನರಲ್‌ರವರು, ರಾಜ್ಯಗಳ ಮಂತ್ರಿಗಳು, ಇವರೆಲ್ಲರೂ ತಮ್ಮ ತಮ್ಮ ಅಧಿಕಾರ ಸ್ವೀಕರಿಸುವಾಗ ಪ್ರಮಾಣವಚನ ಮಾಡಬೇಕಾಗುತ್ತದೆ. ಇವರೆಲ್ಲರ ಪ್ರಮಾಣವಚನ ಸಂವಿಧಾನಬದ್ಧವಾಗಿ ಆಂಗ್ಲಭಾಷೆಯಲ್ಲಿ "ಸ್ವೇರ್ ಇನ್ ದಿ ನೇಮ್ ಆಫ್ ಗಾಡ್" ಅಥವಾ "ಸೋಲಮ್‌ಲಿ ಅಫರ್ಮ್" ಎಂದು ಹೇಳಬೇಕಾಗುತ್ತದೆ. ಹಿಂದಿ ಭಾಷೆಯಲ್ಲಿ "ಈಶ್ವರ ಕಿ ಶಪಥ್ ಲೇತಾ ಹೂಂ" ಅಥವಾ "ಸತ್ಯನಿಷ್ಠಾ ಸೆ ಪ್ರತಿಜ್ಞಾ ಕರತಾ ಹೂಂ" ಎಂದು ಹೇಳಬೇಕಾಗುತ್ತದೆ. ಕನ್ನಡದಲ್ಲಿ "ದೇವರ ಹೆಸರಿನಲ್ಲಿ ಪ್ರಮಾಣ ಮಾಡುತ್ತೇನೆ" ಅಥವಾ "ಶ್ರದ್ಧಾಪೂರ್ವಕವಾಗಿ ದೃಢೀಕರಣ ಮಾಡುತ್ತೇನೆ" ಎಂದು ಹೇಳಬೇಕಾಗುತ್ತದೆ. ಸಂವಿಧಾನದ 60 ನೇ ಅನುಚ್ಛೇದದ ಪ್ರಕಾರ ರಾಷ್ಟ್ರಾಧ್ಯಕ್ಷರು ಪ್ರಮಾಣವಚನ ಅಥವಾ ದೃಢೀಕರಣ ಮಾಡಬೇಕಾಗುತ್ತದೆ. 159 ನೇ ಅನುಚ್ಛೇದದ ಪ್ರಕಾರ ರಾಜ್ಯಪಾಲರುಗಳು ಪ್ರಮಾಣವಚನ ಅಥವಾ ದೃಢೀಕರಣ ಮಾಡಬೇಕಾಗುತ್ತದೆ. ಕೇಂದ್ರ ಮಂತ್ರಿಗಳು, ಸಂಸದರು, ಸುಪ್ರೀಮ್ ಕೋರ್ಟ್ ನ್ಯಾಯಾಧೀಶರು, ಭಾರತ ಕಂಟ್ರೋಲರ್ ಮತ್ತು ಆಡಿಟರ್ ಜನರಲ್‌ರವರು, ರಾಜ್ಯಗಳ ಮಂತ್ರಿಗಳು, ಶಾಸಕರು, ಹೈಕೋರ್ಟ್‌ಗಳ ನ್ಯಾಯಾಧೀಶರು, ಸಂವಿಧಾನದ 75(4), 99, 124(6), 148(2), 164(3), 188 ಮತ್ತು 219ನೆಯ ಅನುಚ್ಛೇದಗಳ ಪ್ರಕಾರ ಮೂರನೆಯ ಅನುಸೂಚಿಯಲ್ಲಿಯ ನಿರ್ದಿಷ್ಟ ನಮೂನೆಗಳ ಪ್ರಕಾರ ಪ್ರಮಾಣವವಚನ ಮಾಡಬೇಕಾಗುತ್ತದೆ.

ಕೇಂದ್ರ ಹಾಗೂ ರಾಜ್ಯ ಸರಕಾರಗಳ ಮಂತ್ರಿಗಳು ಮಂತ್ರಿಪದದ ಪ್ರಮಾಣವಚನ ಹಾಗೂ ಮಂತ್ರಿಯ ಗೋಪ್ಯತಾ ಪಾಲನಾ ಪ್ರಮಾಣವಚನ ಹೀಗೆ ಎರಡು ಪ್ರಮಾಣ ವಚನ ಮಾಡಬೇಕಾಗುತ್ತದೆ. ಇವರೆಲ್ಲರೂ ಪ್ರಮಾಣ ಮಾಡಿದ ಪ್ರಕಾರ ಕಾನೂನು

ಮೂಲಕ ಸ್ಥಾಪಿತವಾದ ಭಾರತ ಸಂವಿಧಾನಕ್ಕೆ ಸತ್ಯ, ಶ್ರದ್ಧೆ ಮತ್ತು ನಿಷ್ಠೆಯನ್ನು ಹೊಂದಿ ಭಾರತದ ಸಾರ್ವಭೌಮತ್ವ ಮತ್ತು ಅಖಂಡತೆಯನ್ನು ಎತ್ತಿಹಿಡಿದು ಮಂತ್ರಿಗಳಾಗಿ ತಮ್ಮ ಕರ್ತವ್ಯಗಳನ್ನು ಶ್ರದ್ಧೆಯಿಂದ ಮತ್ತು ಅಂತಃಕರಣಪೂರ್ವಕವಾಗಿ ನಿರ್ವಹಿಸಬೇಕಾಗುತ್ತದೆ. ಭಯ ಅಥವಾ ಪಕ್ಷಪಾತ, ಮಮತೆ ಅಥವಾ ದ್ವೇಷ ಇಲ್ಲದೆ ಎಲ್ಲ ಬಗೆಯ ಜನರಿಗೆ ಸಂವಿಧಾನಕ್ಕೆ ಹಾಗೂ ಕಾನೂನಿಗೆ ಅನುಸಾರವಾಗಿ ನ್ಯಾಯಸಮ್ಮತವಾದುದನ್ನು ಮಾಡಬೇಕಾಗುತ್ತದೆ. ಇದು ಕಡ್ಡಾಯವಾದ ಕರ್ತವ್ಯ, ಹಿಂದಿನ ಇತಿಹಾಸದ ಪುಟುಗಳನ್ನು ತಿರುವಿ ಹಾಕಿದರೆ ಅನೇಕ ಮಂತ್ರಿಗಳು ತಮ್ಮ ತಮ್ಮ ಸಂವಿಧಾನ ಹಾಗೂ ಅಧಿನಿಯಮ ಬದ್ಧ ಕರ್ತವ್ಯಗಳನ್ನು ಗಾಳಿಗೆ ತೂರಿದ ಸಂದರ್ಭಗಳೇ ಹೆಚ್ಚಾಗಿವೆ. ಇನ್ನಾದರೂ ಯಾವ ಮಂತ್ರಿಗಳೂ ಹಾಗೆ ಮಾಡದೆ ಸಂವಿಧಾನ ಹಾಗೂ ಕಾಯ್ದೆಬದ್ಧ ಕರ್ತವ್ಯಗಳನ್ನು ನಿರ್ವಹಿಸುವುದು ಅಗತ್ಯ ಹಾಗೂ ಒಳ್ಳೆಯದು. ಸಂಸದ ಹಾಗೂ ಶಾಸಕರಾದವರು ಸಹ ಕಾನೂನು ಮೂಲಕ ಸ್ಥಾಪಿತವಾದ ಭಾರತ ಸಂವಿಧಾನಕ್ಕೆ ಸತ್ಯ ಮತ್ತು ನಿಷ್ಠೆಯನ್ನು ಹೊಂದಿ ಭಾರತದ ಸಾರ್ವಭೌಮತ್ವ ಹಾಗೂ ಅಖಂಡತೆಯನ್ನು ಎತ್ತಿಹಿಡಿದು ತಾವು ಕೈಕೊಳ್ಳಲಿರುವ ಕರ್ತವ್ಯವನ್ನು ಶ್ರದ್ಧಾಪೂರ್ವಕವಾಗಿ ನಿರ್ವಹಿಸಬೇಕಾಗುತ್ತದೆ. ಆದರೆ ಅನೇಕರು ತಮ್ಮ ಕರ್ತವ್ಯದ ಅರಿವೇ ಇರದೆ ಕರ್ತವ್ಯಚ್ಯುತಿಯನ್ನು ಮಾಡಿದ ಉದಾಹರಣೆಗಳು ಸಾಕಷ್ಟು ಇದ್ದು, ಇನ್ನು ಮುಂದಾದರೂ ತಮ್ಮ ಕರ್ತವ್ಯವನ್ನು ಕ್ರಿಯಾಶೀಲರಾಗಿ ಮಾಡಿ ರಾಜ್ಯಗಳಲ್ಲಿ ಉತ್ತಮ ಆಡಳಿತ ಹಾಗೂ ಅಭಿವೃದ್ಧಿ ಸಾಧಿಸಲಿಕ್ಕೆ ಶ್ರಮಪಟ್ಟರೆ ಜನತಾ ಜನಾರ್ಧನ ಅವರಿಗೆ ಆಭಾರಿ.

ಸಂಸದ ಹಾಗೂ ಶಾಸಕರಾದವರಿಗೆ ಭಾರತದ ಸಂವಿಧಾನ, ಸಂಸತ್ತು ಹಾಗೂ ಕರ್ನಾಟಕ ವಿಧಾನಸಭೆಯ ಹಾಗೂ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ ಹಾಗೂ ವಿವಿಧ ಸಾರ್ವಜನಿಕ ಹಿತಾಸಕ್ತಿಯ ಅಧಿನಿಯಮಗಳ ಅರಿವನ್ನು ಅರಿಯುವುದು ಅತ್ಯಗತ್ಯ. ಈ ದಿಸೆಯಲ್ಲಿ ಸಂಸತ್ತು ಹಾಗೂ ವಿಧಾನಮಂಡಲಗಳು ತನ್ನ ತನ್ನ ಸದಸ್ಯರಿಗೆ ಸಂಬಂಧಿಸಿದ ಈ ಎಲ್ಲಾ ಸಾಹಿತ್ಯವನ್ನೊದಗಿಸುವುದು ಒಳ್ಳೆಯದು. ಸದಸ್ಯರು ಕೂಡ ಸಂವಿಧಾನ ಹಾಗೂ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳ ಚೌಕಟ್ಟಿನಲ್ಲಿ ಅವೆಲ್ಲವನ್ನು ಅರಿತು ನುಡಿದರೆ ಹಾಗೂ ನಡೆದರೆ ಯಾವುದೇ ಅಹಿತಕರ ಘಟನೆ ನಡೆಯದೆ ಎಲ್ಲಾ ಕಾರ್ಯಕಲಾಪಗಳು ಸುಸೂತ್ರವಾಗಿ ಶಾಂತರೀತಿಯಿಂದ ಜರುಗಲು ಅನುಕೂಲ.

ಕರ್ನಾಟಕ ವಿಧಾನಸಭೆಯ ಸದಸ್ಯರೆಲ್ಲರೂ ಸಂವಿಧಾನದ 188ನೇ ಅನುಚ್ಛೇದದ ಪ್ರಕಾರ ಸಂವಿಧಾನದ 3ನೇ ಅನುಸೂಚಿಯಲ್ಲಿ ಗೊತ್ತುಪಡಿಸಿದ ನಿರ್ದಿಷ್ಟ ನಮೂನೆಯಲ್ಲಿ ಕಡ್ಡಾಯವಾಗಿ ಇಂಗ್ಲೀಷಿನಲ್ಲಿ "ಸ್ವೇರ್ ಇನ್ ದ ನೇಮ್ ಆಫ್ ಗಾಡ್". ಇಲ್ಲವೆ, "ಸೋಲಮ್‌ಲಿ ಅಫರ್ಮ್" ಎಂದಾಗಲೀ ಹಿಂದಿ ಭಾಷೆಯಲ್ಲಿ "ಈಶ್ವರ ಕಿ ಶಪಥ್ ಲೇತಾ ಹೂಂ". ಇಲ್ಲವೆ "ಸತ್ಯ ನಿಷ್ಠಾ ಸೆ ಪ್ರತಿಜ್ಞಾ ಕರ್ತಾ ಹೂಂ" ಎಂದಾಗಲೀ,

ಕನ್ನಡದಲ್ಲಿ "ದೇವರ ಹೆಸರಿನಲ್ಲಿ ಪ್ರಮಾಣ ಮಾಡುತ್ತೇನೆ". ಇಲ್ಲವೆ, "ಶ್ರದ್ಧಾಪೂರ್ವಕ ವಾಗಿ ದೃಢೀಕರಣ ಮಾಡುತ್ತೇನೆ'' ಎಂದಾಗಲೀ ಇಲ್ಲವೆ ಸದಸ್ಯರ ಅವರವರ ಮಾತೃಭಾಷೆಯಲ್ಲಿ ಈ ಅಧಿಕೃತ ಶಬ್ದಗಳಿಗೆ ಸರಿಯಾದ ಭಾಷಾಂತರ ರೂಪದಲ್ಲಿ ಪ್ರಮಾಣವಚನ ಸ್ವೀಕರಿಸುವುದು ಕಡ್ಡಾಯವಾಗಿದೆ. ಇತ್ತೀಚಿಗೆ ಕೆಲವು ಸದಸ್ಯರು ಸಂವಿಧಾನದಲ್ಲಿಯ ಉಲ್ಲೇಖಗಳನ್ನು ಉಲ್ಲಂಘಿಸಿ ಮಹಾತ್ಮಾ ಗಾಂಧಿ, ಏಸು, ಮುರುಗನ್, ಜಗಜ್ಯೋತಿ ಬಸವಣ್ಣ, ಉಡುಪಿ ಶ್ರೀಕೃಷ್ಣ, ಪುತ್ತೂರ ಮಹಲಿಂಗೇಶ್ವರ, ಬೆನಕನಹಳ್ಳಿ ಬೆನಕೇಶ್ವರ, ಅಣ್ಣಮ್ಮದೇವಿ, ಪ್ರಧಾನಿ ವಾಜಪೇಯಿ, ಕೆಂಗಲ್ ಹನುಮಂತಯ್ಯ, ಚಾಮುಂಡೇಶ್ವರಿ, ಕನ್ನಡತಾಯಿ ಭುವನೇಶ್ವರಿ, ಬಾಗಲಕೋಟೆ, ಮುಳುಗಡೆ ಸಂತ್ರಸ್ತರು, ಮಲೆಮಹದೇಶ್ವರ ಇತ್ಯಾದಿ ತಮ್ಮ ತಮ್ಮ ಇಷ್ಟದೇವತೆ, ಇಷ್ಟದೇವರು, ಇಷ್ಟನಾಯಕರು, ಇಷ್ಟ ಪ್ರಜೆಗಳು ಇವರ ಹೆಸರಿನಲ್ಲಿ ಪ್ರಮಾಣ ಮಾಡಿರುವುದು ಅವರವರ ಖಾಸಗಿ ಅಭಿಮಾನ, ತತ್ವ, ನಿಷ್ಠೆ, ಇಷ್ಟಾ ಪ್ರೇಮ, ಇಷ್ಟಾ ವಿಶ್ವಾಸ, ಹೆಮ್ಮೆ, ಪೂಜ್ಯಭಾವನೆಯಿಂದ ವ್ಯಕ್ತಪಡಿಸುತ್ತಿದ್ದು, ಇದನ್ನು ಬೇರೆ ವೇದಿಕೆಗಳಲ್ಲಿ ವ್ಯಕ್ತ ಮಾಡಬೇಕೇ ಹೊರತು ಪ್ರಮಾಣವಚನ ಸ್ವೀಕಾರ ವೇದಿಕೆಯಲ್ಲಿ ಸಮಂಜಸವಲ್ಲ. ಇದು ಸಂವಿಧಾನಬಾಹಿರವಾಗಿರುವುದು ಸುಸ್ಪಷ್ಟ. ಮುಂದೆ ಹೀಗಾಗದಂತೆ ಸುಸ್ಪಷ್ಟ ತಿಳುವಳಿಕೆಯನ್ನು ಸದಸ್ಯರಿಗೆ ಮೊದಲೇ ಕೊಟ್ಟು ಸಂವಿಧಾನಬದ್ಧ ಕಡ್ಡಾಯವಾದ ನಮೂನೆಯ ಪ್ರಕಾರವೇ ಕಡ್ಡಾಯವಾಗಿ ಪ್ರಮಾಣವಚನ ಸ್ವೀಕರಿಸಲು ಶಾಸಕರಿಗೆ ಹಾಗೂ ಮಂತ್ರಿಗಳಿಗೆ ಮಾರ್ಗದರ್ಶನ ಮಾಡುವುದು ಒಳ್ಳೆಯದು. ಈ ಸದಸ್ಯರ ಭಾವನೆ ಸೂಕ್ತ ಹಾಗೂ ಒಳ್ಳೇದಿದ್ದರೂ ಆ ಭಾವನೆಯನ್ನು ಅಧಿವೇಶನ ಚರ್ಚೆಯ ಕಾಲಕ್ಕೆ ಸಂದರ್ಭಾನು ಸಾರವಾಗಿ ಸಹ ಅವರವರ ಈ ಇಷ್ಟದೇವತೆ, ದೇವರು, ನಾಯಕರ ಬಗ್ಗೆ ಭಕ್ತಿ, ಅಭಿಮಾನಪೂರ್ವಕ ಮಾತಾಡಬಹುದು. ಅದು ಅವರವರ ವಾಕ್ ಸ್ವಾತಂತ್ರ್ಯ ಭಾರತದ ಪೂರ್ವೇತಿಹಾಸವನ್ನು ಓದಿ ನೋಡಿದರೆ ನಡೆದು ಬಂದಿರುವ ಧಾರ್ಮಿಕ ಸತ್‌ಸಂಪ್ರ ದಾಯವನ್ನು ತಿಳಿದು ನೋಡಿದರೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ವರ್ಗದ ಎಲ್ಲಾ ಹಿಂದುಗಳು ದೇವರಲ್ಲಿ ಅಥವಾ ಈಶ್ವರನಲ್ಲಿ ವಿಶ್ವಾಸ, ನಂಬಿಕೆ, ಶ್ರದ್ಧೆ, ನಿಷ್ಠೆಯನ್ನಿಟ್ಟು ದೇವಾಲಯ, ಶಿವಾಲಯಗಳನ್ನು ಕಟ್ಟಿಸಿ ಶಿವದೇವನನ್ನು ಪೂಜಿಸುತ್ತಿರುವುದು ಕಂಡುಬರುತ್ತದೆ. ಅಂತೆಯೇ ಭಾರತದ ಸಂವಿಧಾನ ಶಿಲ್ಪಿಗಳು ಸಂವಿಧಾನದಲ್ಲಿ ಈಶ್ವರನ ಹೆಸರಿನಲ್ಲಿ ಪ್ರಮಾಣವಚನ ಸ್ವೀಕಾರ ಮಾಡುವುದನ್ನು ಉಲ್ಲೇಖಿಸಿದ್ದಾರೆ. ಈಶ್ವರನೆಂದರೆ ದೇವರು, ಸತ್ಯ, 'ಸತ್ಯಂ ಶಿವಂ'. ಸಂವಿಧಾನ ಇಂಗ್ಲೀಷ್ ಹಾಗೂ ಹಿಂದಿ ಭಾಷೆ ಯಲ್ಲಿದ್ದು, ಇಂಗ್ಲೀಷಿನಲ್ಲಿ ''ಗಾಡ್'' ಎಂದು ಹಿಂದಿಯಲ್ಲಿ ''ಈಶ್ವರ್'' ಎಂದು ಉಲ್ಲೇಖವಾಗಿದ್ದು, ಆ ಪ್ರಕಾರ ಈಶ್ವರ್ ಅಥವಾ ದೇವರ ಹೆಸರಿನಲ್ಲಿಯೇ ಪ್ರಮಾಣ ವಚನ ಮಾಡುವುದು ಎಲ್ಲರಿಗೂ ಸಂವಿಧಾನಬದ್ಧವಾಗಲೇಬೇಕು.

❑

ಪ್ರಜಾತಂತ್ರ ವ್ಯವಸ್ಥೆಯಲ್ಲಿ ಸ್ಪೀಕರರ ಸ್ಥಾನ

ಭಾರತ ಸ್ವತಂತ್ರ ರಾಷ್ಟ್ರವಾಗಿ ಜಾತ್ಯಾತೀತ ಸಮಾಜವಾದಿ ಸಾರ್ವಭೌಮ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿದೆ. ದಿನಾಂಕ 26.1.1950 ರಂದು ಸಂವಿಧಾನ ಜಾರಿಯಲ್ಲಿ ಬಂದಿದೆ. ಸಂವಿಧಾನಕ್ಕನುಗುಣವಾಗಿ ಈ ರಾಷ್ಟ್ರದ ಪ್ರಜೆಗಳೇ ಈ ರಾಷ್ಟ್ರದ ಪ್ರಭುಗಳು, ರಾಜಾಧಿರಾಜ ಸಾಮ್ರಾಟರು, ಅಶೋಕ ಚಕ್ರವನ್ನು ಹೊಂದಿದ ಚಕ್ರವರ್ತಿಗಳು. ಸಂವಿಧಾನದ ಪ್ರಕಾರ ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗಗಳು ಮೂರು ಪ್ರಮುಖ ಅಂಗಗಳು. ಇವುಗಳಲ್ಲಿ ಶಾಸಕಾಂಗವೇ ಸರ್ವಶ್ರೇಷ್ಠ. ಜನತೆಯ ಚುನಾಯಿತ ಪ್ರತಿನಿಧಿಗಳಿಂದ ಕೂಡಿದ ವಿಧಾನಸಭೆ ರಾಜ್ಯಗಳ ಮಟ್ಟದಲ್ಲಿ, ಲೋಕಸಭೆ ರಾಷ್ಟ್ರಮಟ್ಟದಲ್ಲಿ ಶ್ರೇಷ್ಠವಾದ ಜನತೆಯ ಪ್ರಾತಿನಿಧಿಕ ಸಂಕೇತ. ಈ ಸಂಕೇತಗಳೇ ಲೋಕಸಭೆಯಲ್ಲಿಯ ಆಡಳಿತ ಪಕ್ಷದ ಸಭಾನಾಯಕ ಪ್ರಧಾನಮಂತ್ರಿ, ಅತೀ ಹೆಚ್ಚು ಸದಸ್ಯರನ್ನು ಪಡೆದ ವಿಪಕ್ಷದ ಅಥವಾ ಅಧಿಕೃತ ವಿರೋಧ ಪಕ್ಷದ ನಾಯಕರು ಹಾಗೂ ಇತರ ಎಲ್ಲಾ ಸದಸ್ಯರನ್ನೊಳಗೊಂಡ ಸಂಸತ್ ಸದಸ್ಯರಿಂದ ಲೋಕಸಭಾ ಅಧ್ಯಕ್ಷರು ಬಹುತೇಕವಾಗಿ ಅವಿರೋಧವಾಗಿ ಇಲ್ಲವೇ ಬಹುಮತದಿಂದ ಚುನಾಯಿತರಾಗಿರುತ್ತಾರೆ. ಅಂತೆಯೇ ವಿಧಾನಸಭೆಯ ಆಡಳಿತ ಪಕ್ಷದ ಸಭಾನಾಯಕ ಮುಖ್ಯಮಂತ್ರಿ, ಅತೀ ಹೆಚ್ಚು ಸದಸ್ಯರನ್ನು ಪಡೆದ ವಿಪಕ್ಷದ ಅಥವಾ ಅಧಿಕೃತ ವಿರೋಧ ಪಕ್ಷದ ನಾಯಕರು ಹಾಗೂ ಇತರ ಎಲ್ಲಾ ಸದಸ್ಯರನ್ನೊಳಗೊಂಡ ವಿಧಾನಸಭಾ ಸದಸ್ಯರಿಂದ ವಿಧಾನಸಭಾ ಅಧ್ಯಕ್ಷರು ಬಹುತೇಕವಾಗಿ ಅವಿರೋಧವಾಗಿ ಇಲ್ಲವೇ ಬಹುಮತದಿಂದ ಚುನಾಯಿತರಾಗಿರುತ್ತಾರೆ. ಈ ಸಭಾಧ್ಯಕ್ಷರ ಅವಧಿ ಸಭೆಗಳ ಅವಧಿಯಂತೆ ಐದು ವರ್ಷಗಳದ್ದಾಗಿರುತ್ತದೆ. ಯಾವುದೇ ಕಾರಣದಿಂದ ಸರಕಾರಗಳು ವಜಾ ಆಗಿ ಲೋಕಸಭೆ ಅಥವಾ ವಿಧಾನಸಭೆ ವಿಸರ್ಜಿಸಲ್ಪಟ್ಟರೂ ಸಭಾಧ್ಯಕ್ಷರು ಹೊಸ ಚುನಾವಣೆಗಳು ಜರುಗಿ ಹೊಸ ಲೋಕಸಭೆ ಅಥವಾ ವಿಧಾನಸಭೆ ರಚಿತವಾಗಿ ಹೊಸ ಸಭಾಧ್ಯಕ್ಷರು ಚುನಾಯಿತರಾಗುವವರೆವಿಗೂ ಮುಂದುವರಿಯುತ್ತಾರೆ ಅಥವಾ ಅಧಿಕಾರದಲ್ಲಿರುತ್ತಾರೆ. ಸಭಾಧ್ಯಕ್ಷರು ಪ್ರಜಾಸತ್ತೆಯ ಸಂಕೇತ. ಪ್ರಜಾಸತ್ತೆ ನಿರಂತರವಾಗಿ ಅಸ್ತಿತ್ವದಲ್ಲಿರುತ್ತದೆ.

ಸಭಾಧ್ಯಕ್ಷ ಸ್ಥಾನ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಅತ್ಯುನ್ನತ ಸ್ಥಾನ, ಅಗ್ರಗಣ್ಯ ಸ್ಥಾನ, ಘನತೆ-ಗೌರವ ಸ್ಥಾನ. ಸಭಾಧ್ಯಕ್ಷ ಸ್ಥಾನಕ್ಕೆ ಅವಿರೋಧವಾಗಿ ಚುನಾಯಿತರಾಗುವ ಲಕ್ಷಣ ಕಂಡ ಕೂಡಲೇ ಅಥವಾ ಚುನಾವಣೆಯಾದಲ್ಲಿ ಸಭಾಧ್ಯಕ್ಷರಾಗಿ ಆರಿಸಿ ಬಂದ ತಕ್ಷಣ ಅಧ್ಯಕ್ಷರಾದವರು ತಾವು ಹೊಂದಿಕೊಂಡಿದ್ದ ರಾಜಕೀಯ ಪಕ್ಷದ ಸದಸ್ಯ ಸ್ಥಾನಕ್ಕೆ ಹಾಗೂ ಅವರು ಹೊಂದಿದ್ದ ಯಾವುದೇ ಅಧಿನಿಯಮಬದ್ಧ ಸಂಘ-ಸಂಸ್ಥೆ, ಪ್ರಾಧಿಕಾರ ನಿಗಮಗಳ ಪದಾಧಿಕಾರಿಗಳ ಸ್ಥಾನಕ್ಕೆ ರಾಜೀನಾಮೆ ಕೊಡುವುದು ಸತ್‌ಸಂಪ್ರದಾಯ. ಈ ಸತ್‌ಸಂಪ್ರದಾಯ ಹಾಗೂ ಸತ್‌ಪರಂಪರೆಯಂತೆ ನಡೆದುಕೊಂಡವರೇ ಹೆಚ್ಚು. ಆದರೆ ಇದಕ್ಕೆ ಅಪವಾದವಾಗಿ ಕೆಲವರು ಹಾಗೆ ಮಾಡದೆ ಸಭಾಧ್ಯಕ್ಷ ಸ್ಥಾನಕ್ಕೆ ಹಾಗೂ ತಮಗೆ ಕಳಂಕ ತಂದ ಉದಾಹರಣೆಗಳೂ ನಮ್ಮ ದೇಶದ ಸಂಸದೀಯ ಇತಿಹಾಸದಲ್ಲಿ ಉಳಿದಿವೆ. ಸಭಾಧ್ಯಕ್ಷರಾದವರು ಮತ್ತೆ ಸದಸ್ಯ ಚುನಾವಣೆಗೆ ನಿಲ್ಲದೇ ಇರುವುದು ಒಳ್ಳೆಯದು. ಬ್ರಿಟಿಷ್ ಸಂಪ್ರದಾಯದಂತೆ ಸಭಾಧ್ಯಕ್ಷರಾದವರು ಅವಿರೋಧವಾಗಿ ಆರಿಸಿ ಬರುವಂತೆ ನೋಡಿಕೊಳ್ಳುವುದು ಎಲ್ಲಾ ರಾಜಕೀಯ ಪಕ್ಷಗಳಿಗೆ ಬಿಟ್ಟ ವಿಷಯ.

ವಿಧಾನಸಭಾಧ್ಯಕ್ಷರಾದವರು ವಿಧಾನಸಭೆಯ ಚುನಾವಣೆಗೆ ನಿಲ್ಲದ, ಲೋಕಸಭಾಧ್ಯಕ್ಷರಾದವರು ಲೋಕಸಭೆಯ ಚುನಾವಣೆಗೆ ನಿಲ್ಲದ ಉದಾಹರಣೆ ಸಾಕಷ್ಟು ಇವೆ. ಇದಕ್ಕೆ ತದ್ವಿರುದ್ಧವಾಗಿ ಸಭಾಧ್ಯಕ್ಷರಾದವರು ಚುನಾವಣೆಗೆ ನಿಂತು ಸೋತ ಉದಾಹರಣೆಗಳೂ ಇವೆ. ಬ್ರಿಟಿಷ್ ಪಾರ್ಲಿಮೆಂಟ್‌ನಲ್ಲಿಯ ಸಭಾಧ್ಯಕ್ಷರು ಮತ್ತೆ ಚುನಾವಣೆಗೆ ನಿಲ್ಲಲು ಇಚ್ಛಿಪಟ್ಟಲ್ಲಿ ಅವರನ್ನು ಎಲ್ಲಾ ರಾಜಕೀಯ ಪಕ್ಷಗಳು ಅವರು ಅವಿರೋಧವಾಗಿ ಚುನಾಯಿತರಾಗಲು ಅನುಕೂಲ ಮಾಡಿಕೊಡುತ್ತವೆ ಹಾಗೂ ಸಭಾಧ್ಯಕ್ಷರು ಅವಿರೋಧ ಚುನಾಯಿತರಾಗಿ ಮತ್ತೆ ಸಭಾಧ್ಯಕ್ಷರಾಗುತ್ತಾರೆ. ಇಲ್ಲವಾದರೆ ಅವರು ಗೌರವದಿಂದ ರಾಜಕೀಯದಿಂದಲೇ ನಿವೃತ್ತರಾಗುತ್ತಾರೆ. ಆದರೆ ಈ ಸಂಪ್ರದಾಯ ಭಾರತದಲ್ಲಿ ಇನ್ನೂ ಮನ್ನಣೆ ಪಡೆದಿಲ್ಲ.

ಸಭಾಧ್ಯಕ್ಷರಾದವರು ನಿಷ್ಪಕ್ಷಪಾತಿಗಳಾಗಿರಬೇಕಾಗುತ್ತದೆ, ಪಕ್ಷಾತೀತರಾಗಬೇಕಾಗುತ್ತದೆ, ಜಾತ್ಯಾತೀತರಾಗಿರಬೇಕಾಗುತ್ತದೆ. ಸಭೆಯ ಎಲ್ಲ ಸದಸ್ಯರನ್ನು ಒಂದೇ ರೀತಿಯಲ್ಲಿ ಕಾಣಬೇಕಾಗುತ್ತದೆ. ಎಲ್ಲ ಸದಸ್ಯರಿಗೂ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಲು ಹಾಗೂ ಅವರ ಭಾವನೆಗಳನ್ನು ವ್ಯಕ್ತಪಡಿಸಲು ಹಾಗೂ ಮಂಡಿಸಲು ಸದವಕಾಶ ಕೊಡಬೇಕಾಗುತ್ತದೆ. ಎಲ್ಲರನ್ನೂ ಒಂದೇ ಭಾವನೆಯಿಂದ ಕಾಣಬೇಕಾಗುತ್ತದೆ. ತಾಳ್ಮೆಯುಳ್ಳವರಾಗಿರಬೇಕಾಗುತ್ತದೆ. ತಮ್ಮ ವಿವೇಚನೆಯನ್ನು ಸಮಯಾನುಸಾರ ಹಾಗೂ ಸಂದರ್ಭಾನುಸಾರವಾಗಿ ಉಪಯೋಗಿಸಬೇಕಾಗುತ್ತದೆ. ಸಭೆಯು ಯಾವತ್ತೂ ಕಾರ್ಯಕಲಾಪಗಳು ಸಂವಿಧಾನಬದ್ಧವಾಗಿ ಹಾಗೂ ಸಂವಿಧಾನಕ್ಕನುಗುಣವಾಗಿ ರಚನೆಯಾದ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳಿಗನುಸಾರವಾಗಿ ನಡೆಯಬೇಕಾಗಿದ್ದು ಅವುಗಳನ್ನು ಪಾಲಿಸುವುದು ಪ್ರತಿಯೊಬ್ಬ ಸದಸ್ಯರ ಕರ್ತವ್ಯವಾಗಿರುತ್ತದೆ.

ಸರಕಾರವು ಪ್ರತಿವರ್ಷ ಆದಾಯದ ಹಾಗೂ ವೆಚ್ಚದ ಮೊತ್ತದ ವಿವರಗಳನ್ನು ಕೊಟ್ಟು ಆಯವ್ಯಯವನ್ನು ಮಂಡಿಸಿ ಮುಂದಿನ ವರ್ಷದ ಅಂದಾಜು ಆದಾಯ ವೆಚ್ಚ, ಚಾಲೂ ವರ್ಷದ ಪರಿಷ್ಕೃತ ಅಂದಾಜು ಆದಾಯ ವೆಚ್ಚ ಹಾಗೂ ಹಿಂದಿನ ವರ್ಷದ ವಾಸ್ತವಿಕ ಆದಾಯ ವೆಚ್ಚದ ವಿವರಗಳನ್ನು ಬಜೆಟ್ ಅಧಿವೇಶನದಲ್ಲಿ ಮಂಡಿಸಿ ಸಭೆಯಲ್ಲಿ ಚರ್ಚೆಯಾಗಿ ಮಂಜೂರಿಯಾಗಬೇಕಾಗುತ್ತದೆ. ಸದಸ್ಯರಿಗೆ ಅವಶ್ಯವಿರುವ ಸರಕಾರಿ ಸುತ್ತೋಲೆ, ಆಜ್ಞೆ ಇತ್ಯಾದಿಗಳನ್ನು ಸರಕಾರದ ಆಯವ್ಯಯದ ಅಂಕಿಸಂಖ್ಯೆಗಳನ್ನು ಇತರ ಸಾರ್ವಜನಿಕ ಹಿತಾಸಕಿಯ ಮಾಹಿತಿಗಳನ್ನು ಸರಕಾರ ಆಗಿಂದಾಗ್ಗೆ ಸದಸ್ಯರಿಗೆ ಒದಗಿಸುವ ವ್ಯವಸ್ಥೆಯನ್ನು ಸಭಾಧ್ಯಕ್ಷರು ಮಾಡಬೇಕಾಗುತ್ತದೆ. ಎಲ್ಲ ಇಲಾಖೆಗಳ ವಾರ್ಷಿಕ ವರದಿಗಳನ್ನು ನೋಡಿ ಮಾತಾಡಲು ಸದಸ್ಯರಿಗೆ ಬಜೆಟ್ ಅಧಿವೇಶನದಲ್ಲಿ ಸಕಾಲದಲ್ಲಿ ಒದಗಿಸಲು ಸರಕಾರಕ್ಕೆ ಸಭಾಧ್ಯಕ್ಷರು ಹೇಳಬೇಕಾಗುತ್ತದೆ. ಸಭಾಧ್ಯಕ್ಷರು ಸರಕಾರಕ್ಕೆ, ಮಂತ್ರಿಗಳಿಗೆ ಸಹ ಮಾರ್ಗದರ್ಶನ, ಎಚ್ಚರಿಕೆ ಆಗಾಗ ಕೊಡಬೇಕಾಗುತ್ತದೆ. ಹೊಸ ಹೊಸ ಕಾಯಿದೆ ಹಾಗೂ ತಿದ್ದುಪಡಿ ಕಾಯಿದೆಗಳನ್ನು ಸಹ ಸಭೆಯಿಂದ ಸಠಕಾರ ಮಂಜೂರಿ ಪಡೆಯಬೇಕಾಗುತ್ತದೆ. ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆ, ಚುಕ್ಕೆ ಗುರುತಿನ ಪ್ರಶ್ನೆ, ಚುಕ್ಕೆ ಗುರುತಿಲ್ಲದ ಪ್ರಶ್ನೆ, ಅಲ್ಪಕಾಲಿನ ಪ್ರಶ್ನೆ, ಪೂರಕ ಪ್ರಶ್ನೆ, ನಿಲುವಳಿ ಸೂಚನೆ, ಗಮನ ಸೆಳೆಯುವ ಸೂಚನೆ, ಅರ್ಜಿಯನ್ನು ಒಪ್ಪಿಸುವುದು, ನಿರ್ಣಯ ಮಂಡನೆ, ಪ್ರಸ್ತಾವ ಮಂಡನೆ, ಹಕ್ಕುಬಾಧ್ಯತೆ ಪ್ರಶ್ನೆ, ಕ್ರಿಯಾಲೋಪ ಎತ್ತುವುದು, ಬಜೆಟ್ ಮೇಲೆ ಚರ್ಚೆ, ವರದಿಗಳ ಮೇಲೆ ಚರ್ಚೆ ಇತ್ಯಾದಿ ವಿಷಯಗಳ ಮೇಲೆ ಮಾತಾಡುವ ಹಾಗೂ ಚರ್ಚಿಸುವ ಅಧಿಕಾರ ಪ್ರತಿಯೊಬ್ಬರಿಗೂ ಇದ್ದರೂ ಅವರೆಲ್ಲರೂ ನಡವಳಿಕೆಯ ನಿಯಮಗಳಿಗನುಸಾರವಾಗಿ ನಡೆದುಕೊಳ್ಳಬೇಕಾಗುತ್ತದೆ. ನಿಯಮಗಳ ಉಲ್ಲಂಘನೆ ಮಾಡಿದ ಸದಸ್ಯರಿಗೆ ಎಚ್ಚರಿಕೆ ಕೊಡುವುದು, ಹೆಸರಿಸುವುದು, ಸದನದ ಹೊರಗೆ ಕಳುಹಿಸುವುದು, ಸಸ್ಪೆಂಡ್ ಮಾಡುವುದು ಅಧ್ಯಕ್ಷರ ಅಧಿಕಾರವ್ಯಾಪ್ತಿಯಲ್ಲಿ ಬರುತ್ತದೆ. ಅಧ್ಯಕ್ಷರು ಸದಸ್ಯರ ಸ್ನೇಹಿತರೂ ಹೌದು, ತತ್ವಜ್ಞಾನಿಯೂ ಹೌದು, ಮಾರ್ಗದರ್ಶಿಯೂ ಹೌದು. ಸದನದಲ್ಲಿ ಸಭಾಧ್ಯಕ್ಷರು ಕೊಟ್ಟ ತೀರ್ಮಾನ ಅದು ಅಂತಿಮವಾದುದು. ಅಧ್ಯಕ್ಷರ ತೀರ್ಮಾನವನ್ನು ಉಲ್ಲಂಘಿಸುವವರು ಹಕ್ಕುಚ್ಯುತಿಯ ಕ್ರಮಕ್ಕೆ ಒಳಗಾಗುವರು. ಅಧ್ಯಕ್ಷರು ಕೊಟ್ಟ ತಮ್ಮ ತೀರ್ಮಾನವನ್ನು ತಾವೇ ಪುನರ್ವಿಮರ್ಶಿಸಬಹುದು. ಆದರೆ ಅವರ ತೀರ್ಮಾನವನ್ನು ಯಾವುದೇ ಕೋರ್ಟ್‌ನಲ್ಲಿ ಪ್ರಶ್ನಿಸಲಾಗದು. ಸಭಾಧ್ಯಕ್ಷರಿಗೆ ಸಭೆಯಲ್ಲಿ ಯಾವುದೇ ವಿಷಯದ ಬಗ್ಗೆ ಮತದಾನವಾದಾಗ ಯಾವುದೇ ಪರಮತ ಕೊಡಲಿಕ್ಕೆ ಬಾರದು. ಆದರೆ ಮತಗಳು ಸಮನಾಗಿ ಬಂದಾಗ ಇದ್ದ ಪರಿಸ್ಥಿತಿಯನ್ನು ಇದ್ದ ಹಾಗೆ ಮುಂದುವರಿಸಲು ಮಾತ್ರ ಮತ ನೀಡುವ ಸತ್‌ಸಂಪ್ರದಾಯವಿದೆ. ಸಭಾಧ್ಯಕ್ಷರಿಗೆ ಸಭೆ ನಡೆಸಲು ಸಹಾಯಕರಾಗಿ ಉಪಾಧ್ಯಕ್ಷರಿದ್ದು ಇವರಿಬ್ಬರ ಗೈರು ಹಾಜರಿಯಲ್ಲಿ ಸಭೆ ನಡೆಸಲು 6 ಜನ ಸದಸ್ಯರನ್ನು ಮೀರದಂತೆ ಅಧ್ಯಕ್ಷರನ್ನು ಸಭಾಧ್ಯಕ್ಷರು ನೇಮಿಸುತ್ತಾರೆ. ಯಾವುದೇ ಸದಸ್ಯರ ಭಾಷಣದ ಕಾಲಮಿತಿ ಹಾಕುವ ಅಧಿಕಾರ ಸಭಾಧ್ಯಕ್ಷರಿಗೆ ಇರುತ್ತದೆ. ಸಭಾಧ್ಯಕ್ಷರು

ಶಾಸಕಾಂಗ ಕಾರ್ಯಾಲಯ ಆಡಳಿತದ ಪ್ರಮುಖರೂ ಆಗಿದ್ದು ಅದರ ಉತ್ತಮ ಆಡಳಿತಕ್ಕೆ ಜವಾಬ್ದಾರರಿರುತ್ತಾರೆ. ಸಭೆಯಲ್ಲಿ ಅಧಿವೇಶನಗಳಲ್ಲಿಯ ಯಾವತ್ತೂ ಕಾರ್ಯಕಲಾಪಗಳ ವರದಿ ಹಾಗೂ ಯಾವತ್ತೂ ಸದನ ಸಮಿತಿಗಳ ವರದಿಗಳನ್ನು ಸಹ ಆಗಿಂದಾಗ್ಗೆ ಮುದ್ರಿಸಿ ಪ್ರಕಟಿಸುವ ವ್ಯವಸ್ಥೆಯನ್ನೂ ಸಹ ಮಾಡಿಸಬೇಕಾಗುತ್ತದೆ.

ಶಾಸಕಾಂಗ ಅಥವಾ ಸಂಸತ್ತಿನ ಪ್ರಮುಖರು ಸಭಾಧ್ಯಕ್ಷರು. ಕಾರ್ಯಾಂಗದ ಪ್ರಮುಖರು, ಮುಖ್ಯಮಂತ್ರಿ ಅಥವಾ ಪ್ರಧಾನಮಂತ್ರಿಗಳು. ನ್ಯಾಯಾಂಗದ ಪ್ರಮುಖರು ಮುಖ್ಯ ನ್ಯಾಯಾಧೀಶರು. ಈ ಮೂರು ಪ್ರಮುಖರ ಮೇಲೆ ರಾಜ್ಯಮಟ್ಟದಲ್ಲಿ ರಾಜ್ಯಪಾಲರು, ರಾಷ್ಟ್ರಮಟ್ಟದಲ್ಲಿ ರಾಷ್ಟ್ರಾಧ್ಯಕ್ಷರು ಸಂವಿಧಾನಬದ್ಧ ಅಗ್ರಗಣ್ಯರಾಗಿದ್ದು ರಾಜ್ಯಮಟ್ಟದಲ್ಲಿರುವ ಸಭಾಧ್ಯಕ್ಷರು ರಾಜ್ಯಪಾಲರಾಗಿ, ರಾಷ್ಟ್ರಮಟ್ಟದಲ್ಲಿರುವ ಸಭಾಧ್ಯಕ್ಷರು ಉಪರಾಷ್ಟ್ರಪತಿಗಳಾಗಿ ಇಲ್ಲವೇ ರಾಷ್ಟ್ರಪತಿಗಳಾಗಿ ಹೋಗಬೇಕೇ ವಿನಃ ಮಂತ್ರಿ ಅಥವಾ ಮುಖ್ಯಮಂತ್ರಿ ಅಥವಾ ಪ್ರಧಾನಮಂತ್ರಿಗಳಾಗುವುದು ಕೂಡ ಸಮಂಜಸವಲ್ಲ. ನಮ್ಮ ರಾಷ್ಟ್ರದಲ್ಲಿ ಮಂತ್ರಿ, ಮುಖ್ಯಮಂತ್ರಿಯಾದವರು ವಿಧಾನಸಭಾಧ್ಯಕ್ಷರಾಗಿ ಘನತೆ, ಗೌರವ ಎತ್ತಿ ಹಿಡಿದ ಉದಾಹರಣೆ ಸಾಕಷ್ಟು ಇವೆ. ಇದಕ್ಕೆ ವ್ಯತಿರಿಕ್ತವಾಗಿ ಸಭಾಧ್ಯಕ್ಷರಾದವರು ಮಂತ್ರಿ, ಮುಖ್ಯಮಂತ್ರಿಗಳಾಗಿ ಕೆಳಗೆ ಹೋದವರೂ ಇದ್ದಾರೆ. ಸಭೆಯ ಕಾರ್ಯಕಲಾಪ ಗಳನ್ನು ರೂಢಿಸುವ ಸಲುವಾಗಿ ಸದನದ ಅಧಿವೇಶನದ ಪ್ರಾರಂಭದಲ್ಲಿ ಅಥವಾ ಕಾಲಕಾಲಕ್ಕೆ ಕಾರ್ಯಕಲಾಪಗಳ ಸಲಹಾ ಸಮಿತಿಯನ್ನು ರಚಿಸುತ್ತಿದ್ದು ಈ ಸಮಿತಿಗೆ ಸಭಾಧ್ಯಕ್ಷರೇ ಅಧ್ಯಕ್ಷರಾಗಿದ್ದು ಈ ಸಮಿತಿಯಲ್ಲಿ ಸಭಾನಾಯಕ ಮುಖ್ಯ ವ ಪ್ರಧಾನಮಂತ್ರಿಗಳು, ವಿರೋಧ ಪಕ್ಷದ ನಾಯಕರು ಮೊದಲಾದವರು ಸಭಾಧ್ಯಕ್ಷರಿಂದ ನೇಮಿಸಿದವರೇ ಇರುತ್ತಾರೆ. ಸಾರ್ವಜನಿಕ ಲೆಕ್ಕ ಸಮಿತಿ, ಅಂದಾಜುಗಳ ಸಮಿತಿ, ಸಾರ್ವಜನಿಕ ಉದ್ಯಮಗಳ ಸಮಿತಿ, ಅಧೀನ ಶಾಸನ ರಚನಾ ಸಮಿತಿ, ಸರಕಾರೀ ಭರವಸೆಗಳ ಸಮಿತಿ ಇತ್ಯಾದಿ ಸದನ ಸಮಿತಿಗಳಿಗೆ ವಿಧಾನಸಭೆಯಿಂದ ಚುನಾಯಿತ ಸದಸ್ಯರ ಪೈಕಿ ಒಬ್ಬರನ್ನು ಅಧ್ಯಕ್ಷರನ್ನಾಗಿ ನೇಮಿಸುವ ಅಧಿಕಾರ ಸಭಾಧ್ಯಕ್ಷರಿಗಿದೆ. ಕೆಲವು ಸಮಿತಿಗಳಿಗೆ ಕೆಲವರನ್ನು ನಾಮಕರಣ ಮಾಡುವ ಅಧಿಕಾರವೂ ಇದೆ. ಸಂವಿಧಾನ ಆರ್ಟಿಕಲ್ 179(ಸಿ) ಪ್ರಕಾರ ಕನಿಷ್ಠ 15 ದಿವಸಗಳ ನೋಟೀಸ್ ಕೊಟ್ಟು ವಿಧಾನಸಭೆಯ ಅಧ್ಯಕ್ಷರನ್ನು ವಿಧಾನಸಭೆಯ ಸದಸ್ಯರು ಬಹುಮತದಿಂದ ತೆಗೆದುಹಾಕುವ ಅಧಿಕಾರವಿದೆ. ಅಂತೆಯೇ ಸಂವಿಧಾನ ಆರ್ಟಿಕಲ್ 94(ಸಿ) ಪ್ರಕಾರ ಕನಿಷ್ಠ 15 ದಿನಗಳ ನೋಟೀಸ್ ಕೊಟ್ಟು ಲೋಕಸಭೆಯ ಅಧ್ಯಕ್ಷರನ್ನು ಲೋಕಸಭೆಯ ಸದಸ್ಯರು ಬಹುಮತದಿಂದಲೂ ತೆಗೆದುಹಾಕುವ ಅಧಿಕಾರವಿದೆ. ಆದರೆ ಈ ಅಸ್ತ್ರಗಳು ಇದುವರೆಗೆ ಯಾವುದೇ ಲೋಕಸಭೆಯ ಹಾಗೂ ವಿಧಾನಸಭೆಯ ಅಧ್ಯಕ್ಷರನ್ನು ತೆಗೆದುಹಾಕಿದ ಉದಾಹರಣೆಗಳಿಲ್ಲ. ಭಾರತ ದೇಶದ ಹಾಗೂ ರಾಜ್ಯಗಳ ಆಗುಹೋಗುಗಳನ್ನು, ಆಯವ್ಯಯವನ್ನು, ಆಡಳಿತ ಅಭಿವೃದ್ಧಿಗೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನು ಚರ್ಚಿಸುವ ಹಾಗೂ ಇತ್ಯರ್ಥಗೊಳಿಸುವ ಸರ್ವಶ್ರೇಷ್ಠ ಅಧಿಕಾರ ಹಾಗೂ ಅವಕಾಶ ಈ ಸಭೆಗಳಿಗೆ ಇರುವುದರಿಂದ ಈ ಸಭೆಗಳು

ಜನತೆಯ ಧ್ವನಿ ಹಾಗೂ ಸಂಕೇತವಾಗಿರುವುದರಿಂದ ಈ ದೇಶದ ಹಾಗೂ ರಾಜ್ಯಗಳ ಭವಿಷ್ಯವನ್ನೇ ಬರೆಯುವ ವಿಧಿಲಿಖಿತ ಲೋಕಸಭೆ ಹಾಗೂ ವಿಧಾನಸಭೆಗಳಿಗೆ ಇರುವುದರಿಂದ ಈ ಸಭೆಗಳನ್ನು ನಡೆಸಿಕೊಂಡು ಹೋಗುವ ಚುಕ್ಕಾಣಿ ಸಭಾಧ್ಯಕ್ಷರ ಕೈಯಲ್ಲಿರುವುದರಿಂದ ಸಭಾಧ್ಯಕ್ಷರ ಸ್ಥಾನ, ಹೊಣೆಗಾರಿಕೆ ಹಾಗೂ ಘನತೆ, ಗೌರವದ ಪ್ರಜಾತಂತ್ರ ವ್ಯವಸ್ಥೆಯ ಪರಮೋಚ್ಚ ಅಗ್ರಸ್ಥಾನಗಳಾಗಿವೆ.

❑

ಸಂವಿಧಾನ ತಿದ್ದುಪಡಿ ಸಂವಿಧಾನಬದ್ಧ ಆರ್ಟಿಕಲ್ 368 ಸುಸ್ಪಷ್ಟ

ಭಾರತದ ಪ್ರಜೆಗಳಾದ ನಾವು ಸಾರ್ವಭೌಮ, ಸಮಾಜವಾದಿ, ಜಾತ್ಯಾತೀತ, ಪ್ರಜಾಸತ್ತಾತ್ಮಕ ಗಣರಾಜ್ಯ ರಾಷ್ಟ್ರವನ್ನಾಗಿ ಭಾರತ ದೇಶವನ್ನು ರಚಿಸಿಕೊಂಡು ಈ ರಾಷ್ಟ್ರದ ಸಮಸ್ತ ನಾಗರಿಕರಿಗೆ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ನ್ಯಾಯವನ್ನು ವಿಚಾರ ಅಭಿವ್ಯಕ್ತಿ, ವಿಶ್ವಾಸ, ನಂಬಿಕೆ, ಪೂಜಾ ಸ್ವಾತಂತ್ರ್ಯವನ್ನು, ಸ್ಥಾನಮಾನ ಮತ್ತು ಅವಕಾಶದ ಸಮಾನತೆಯನ್ನು ದೊರಕಿಸಿಕೊಳ್ಳಲು, ವ್ಯಕ್ತಿ, ಗೌರವ, ರಾಷ್ಟ್ರದ ಏಕತೆ ಹಾಗೂ ಅಖಂಡತೆಯನ್ನು ಖಾತ್ರಿ ಮಾಡಿಕೊಂಡು ಭ್ರಾತೃ ಭಾವನೆಗಳನ್ನು ವೃದ್ಧಿಗೊಳಿಸುವುದಕ್ಕಾಗಿ ಶ್ರದ್ಧಾಪೂರ್ವಕವಾಗಿ ದೃಢಸಂಕಲ್ಪ ಮಾಡಿ ಸಂವಿಧಾನ ಸಭೆಯಲ್ಲಿ 26-11-1949 ರಂದು ಭಾರತ ಸಂವಿಧಾನವನ್ನು ಅಂಗೀಕರಿಸಿ ಅಧಿನಿಯಮಗೊಳಿಸಿ ನಮ್ಮಷ್ಟಕ್ಕೆ ನಾವು ಆತ್ಮಾರ್ಪಿತಗೊಳಿಸಿಕೊಂಡು ಈ ಸಂವಿಧಾನ ಅಥವಾ ವಿಧಿಲೇಖನ ತಾ। 26-1-1950 ರಂದಿನಿಂದ ರಾಷ್ಟ್ರಾದ್ಯಂತ ಜಾರಿ ಬಂದಿದೆ. ಆ ಪ್ರಕಾರ 1952ರಿಂದ ಪ್ರಜಾಪ್ರತಿನಿಧಿಗಳ ಆಯ್ಕೆ ರಾಜ್ಯವಿಧಾನ ಸಭೆಗಳಿಗೆ ಹಾಗೂ ಲೋಕಸಭೆಗೆ ಐದು ವರ್ಷಕ್ಕೊಮ್ಮೆ ಆಗುತ್ತಲೇ ಬಂದಿದೆ. ರಾಜ್ಯ ಹಾಗೂ ಕೇಂದ್ರ ಸರಕಾರಗಳು ರಚಿತವಾಗುತ್ತ ರಾಜ್ಯಗಳ ಹಾಗೂ ರಾಷ್ಟ್ರದ ಆಡಳಿತ ಹಾಗೂ ಅಭಿವೃದ್ಧಿಯನ್ನು ನಡೆಸುತ್ತಲೇ ಬಂದಿವೆ. ಸಂವಿಧಾನ ವಿಧಿಲೇಖನದಲ್ಲಿಯು ಜಾತ್ಯಾತೀತ ರಾಷ್ಟ್ರ ಕಟ್ಟುವ ವಿಧಿಲೇಖನ ಜಾತ್ಯಾತೀತ ಭ್ರಾತೃಭಾವನೆ ಇತ್ಯಾದಿಗಳನ್ನು ಪಾಲಿಸದೆ ಸಂವಿಧಾನ ವಿರೋಧಿ ಜಾತೀಯತೆಯನ್ನು ಹಾಗೂ ವೈರತ್ವ, ವೈಷಮ್ಯವನ್ನು ಹುಟ್ಟುಹಾಕುವಲ್ಲಿ ಈ ದೇಶದ ಅನೇಕ ದೇಶದ್ರೋಹಿ ರಾಜಕಾರಣಿಗಳ ಹಾಗೂ ಧರ್ಮಕಾರಣಿಗಳ ಹಾವಳಿ ಹೆಚ್ಚಾಗುತ್ತಿದ್ದು ಇವರಿಗೆ ಯಾವ ಶಿಕ್ಷೆಯು ಇಲ್ಲದೆ ಸ್ವಾರ್ಥ, ಭ್ರಷ್ಟಾಚಾರ, ಪಕ್ಷಪಾತ, ಸ್ವಜನ ಪಕ್ಷಪಾತ, ಅಧಿಕಾರ ದುರುಪಯೋಗ, ದುರಾಡಳಿತ, ನಿರುದ್ಯೋಗ, ಜಾತೀಯತೆ, ಬಡತನ ಇತ್ಯಾದಿ ಸಾಮಾಜಿಕ ಪೀಡೆಗಳು ಹೆಚ್ಚಾಗಿದ್ದು ಸಂವಿಧಾನ ವಿಧಿಯ ಅನೇಕ ಲೇಖಗಳು ನಿಷ್ಕ್ರಿಯೆಗೊಳ್ಳುತ್ತ ಪ್ರಜಾತಂತ್ರ ವ್ಯವಸ್ಥೆ ಗಂಡಾಂತರಕ್ಕೆ ಸಿಲುಕಿದೆ. ಈ ಪ್ರಸಂಗದಲ್ಲಿ ಸಂವಿಧಾನ ವಿಧಿಲೇಖನದ ಪರಿಣಾಮಕಾರಿ ಜಾರಿಗಾಗಿ ಎಲ್ಲರೂ ಚಿಂತಿಸುವುದು ಅತ್ಯಗತ್ಯ.

ಸಂವಿಧಾನದ ವಿಧಿಲೇಖನ ಆರ್ಟಿಕಲ್ 368(1)ರ ಪ್ರಕಾರ ಸಂವಿಧಾನದಲ್ಲಿ ಏನೇ ಇದ್ದಾಗ್ಯೂ ಸಂಸತ್ತು ತನ್ನ ಸಂವಿಧಾಯಿ ಅಧಿಕಾರವನ್ನು ಚಲಾಯಿಸಿ ಈ ಅನುಚ್ಛೇದದಲ್ಲಿ ವಿಧಿಸಿದ ಪ್ರಕ್ರಿಯೆಗೆ ಅನುಸಾರವಾಗಿ ಈ ಸಂವಿಧಾನದ ಯಾವುದೇ ಉಪಬಂಧವನ್ನು ಇನ್ನಷ್ಟು ಸೇರಿಸುವ, ಬದಲಾವಣೆ ಮಾಡುವ ಅಥವಾ ರದ್ದು ಮಾಡುವ ತಿದ್ದುಪಡಿಯನ್ನು ಮಾಡುವ ಅಧಿಕಾರವನ್ನು ಸಂಸತ್ತು ಹೊಂದಿದೆ. 368(1)ರ ಪ್ರಕಾರ ಸಂವಿಧಾನದ ತಿದ್ದುಪಡಿಯನ್ನು ಆ ಉದ್ದೇಶಕ್ಕಾಗಿ ವಿಧೇಯಕವನ್ನು ಸಂಸತ್ತಿನ ಯಾವುದಾದರೂ ಒಂದು ಸದನದಲ್ಲಿ ಮಂಡಿಸಬೇಕಾಗುತ್ತದೆ. ಆ ಸದನದ ಒಟ್ಟು ಸದಸ್ಯರ ಬಹುಮತದಿಂದ ಮತ್ತು ಆ ಸದನದ ಸದಸ್ಯರ ಪೈಕಿ ಹಾಜರಿದ್ದು ಮತ ಕೊಡುವವರಲ್ಲಿ ಮೂರನೆಯ ಎರಡು ಭಾಗಕ್ಕೆ ಕಡಿಮೆಯಿಲ್ಲದಷ್ಟು ಸದಸ್ಯರ ಬಹುಮತದಿಂದ ಆ ವಿಧೇಯಕವು ಅಂಗೀಕೃತವಾದ ಬಳಿಕ ಅದನ್ನು ರಾಷ್ಟ್ರಾಧ್ಯಕ್ಷರಿಗೆ ಒಪ್ಪಿಸಿ ಅವರ ಅನುಮತಿಯನ್ನು ಪಡೆದ ಮೇಲೆ ಸಂವಿಧಾನ ತಿದ್ದುಪಡಿಯಾಗಿ ಜಾರಿಯಲ್ಲಿ ಬರುತ್ತದೆ. ಆದರೆ ಅಂತಹ ತಿದ್ದುಪಡಿಯು ರಾಷ್ಟ್ರಾಧ್ಯಕ್ಷರ ಚುನಾವಣೆ, ರಾಷ್ಟ್ರಾಧ್ಯಕ್ಷರ ಚುನಾವಣೆಯ ರೀತಿ, ಕೇಂದ್ರದ ಕಾರ್ಯಾಂಗ ಅಧಿಕಾರದ ವ್ಯಾಪ್ತಿ, ರಾಜ್ಯದ ಕಾರ್ಯಾಂಗ ವ್ಯಾಪ್ತಿ, ಕೇಂದ್ರ ಹಾಗೂ ರಾಜ್ಯ ಕ್ಷೇತ್ರಗಳಿಗೆ ಉಚ್ಚ ನ್ಯಾಯಾಲಯಗಳು, ಕೇಂದ್ರ ನ್ಯಾಯಾಂಗ, ರಾಜ್ಯಗಳಲ್ಲಿನ ಉಚ್ಚ ನ್ಯಾಯಾಲಯಗಳು ಅಥವಾ ಕೇಂದ್ರ ಮತ್ತು ರಾಜ್ಯಗಳ ನಡುವಣ ವಿಧಾಯಿ ಸಂಬಂಧಗಳು, ಏಳನೇ ಅನುಸೂಚಿಯಲ್ಲಿಯ ಪಟ್ಟಿಗಳ ಪೈಕಿ ಯಾವುದೇ ಒಂದು ವಿಷಯ ಸಂಸತ್ತಿನಲ್ಲಿ ರಾಜ್ಯಗಳ ಪ್ರಾತಿನಿಧ್ಯದಲ್ಲಿ 368 ನೇ ಅನುಚ್ಛೇದದ ಉಪಬಂಧಗಳಲ್ಲಿ ಯಾವುದೊಂದು ಬದಲಾವಣೆ ಮಾಡಲು ಉದ್ದೇಶಿಸಿದರೆ ಆ ತಿದ್ದುಪಡಿಗಾಗಿ ಉಪಬಂಧವನ್ನು ಮಾಡುವ ವಿಧೇಯಕವನ್ನು ರಾಷ್ಟ್ರಾಧ್ಯಕ್ಷರ ಅನುಮತಿಗಾಗಿ ಅವರಿಗೆ ಸಲ್ಲಿಸುವುದಕ್ಕಿಂತ ಮುಂಚೆ ರಾಜ್ಯಗಳಲ್ಲಿ ಅರ್ಧಕ್ಕಿಂತ ಕಡಿಮೆಯಿಲ್ಲದಷ್ಟು ರಾಜ್ಯಗಳ ವಿಧಾನಮಂಡಲಗಳು ಆ ಬಗ್ಗೆ ಅವು ಅಂಗೀಕರಿಸಿದ ನಿರ್ಣಯಗಳ ಮೂಲಕ ಆ ತಿದ್ದುಪಡಿಯನ್ನು ಅನುಸಮರ್ಥಿಸುವುದು ಅಗತ್ಯವಾಗಿರುತ್ತದೆ. ಸಂದೇಹಗಳ ನಿವಾರಣೆಗಾಗಿ 368 ನೇ ಆರ್ಟಿಕಲ್ ಮೇರೆಗೆ ಸೇರ್ಪಡೆ ವ್ಯವಸ್ಥೆಗೊಳಿಸುವಿಕೆ ಅಥವಾ ನಿರಸನಗೊಳಿಸುವ ಮೂಲಕ ಸಂವಿಧಾನದ ಉಪಬಂಧಗಳನ್ನು ತಿದ್ದುಪಡಿ ಮಾಡಲು ಸಂಸತ್ತಿಗೆ ಇರುವ ಸಂವಿಧಾನಬದ್ಧ ಅಧಿಕಾರವು ಯಾವುದೇ ಪರಿಮಿತಿಗೆ ಒಳಪಟ್ಟಿರತಕ್ಕುದಲ್ಲವೆಂದು ಘೋಷಿಸಲಾಗಿದೆ. ಹೀಗೆ 368ನೇ ಆರ್ಟಿಕಲ್ ಸಂವಿಧಾನ ತಿದ್ದುಪಡಿಯ ಬಗ್ಗೆ ಸುಸ್ಪಷ್ಟವಾಗಿದೆ.

ಸಂವಿಧಾನ ಅನುಚ್ಛೇದ 368ರ ಪ್ರಕಾರ ಸಂಸತ್ ಸಭೆಗೆ ಇರುವ ಅಧಿಕಾರದ ಮೇರೆಗೆ 1951ರಿಂದ 1995ರ ವರೆಗೆ 78 ಸಂವಿಧಾನ ತಿದ್ದುಪಡಿ ಅಧಿನಿಯಮಗಳನ್ನು ಕೇಂದ್ರ ಸರಕಾರವು ಲೋಕಸಭೆಯಲ್ಲಿ ಮಂಡಿಸಿ ಪಾಸು ಮಾಡಿಸಿಕೊಂಡಿದ್ದು ಆ ಪ್ರಕಾರ ನಾಲ್ಕುನೂರಕ್ಕೂ ಹೆಚ್ಚು ಸೇರಿಕೆ ಬದಲಾವಣೆ, ರದ್ದು ಇತ್ಯಾದಿಗಳಾಗಿವೆ. ಶ್ರೀಮತಿ ಇಂದಿರಾಗಾಂಧಿಯವರ ಸರಕಾರ ಸಂವಿಧಾನವನ್ನು ತಿದ್ದುಪಡಿ ಮಾಡಿಸಿಕೊಂಡು ಲೋಕಸಭೆ ವಿಧಾನಸಭೆಗಳ ಅವಧಿ ಐದು ವರ್ಷವಿದ್ದುದನ್ನು ಆರು ವರ್ಷಕ್ಕೆ ಏರಿಸಲಿಲ್ಲವೇ?

ಅನಂತರ ಬಂದ ಸರಕಾರ ಮತ್ತೆ ಸಂವಿಧಾನವನ್ನು ತಿದ್ದುಪಡಿ ಮಾಡಿಸಿಕೊಂಡು ಆರು ವರ್ಷವಿದ್ದುದನ್ನು ಮತ್ತೆ ಐದು ವರ್ಷಕ್ಕೆ ಇಳಿಸಲಿಲ್ಲವೇ? ಈ ಏರಿಕೆ ಹಾಗೂ ಇಳಿಕೆ ಉಗ್ರ ಟೀಕೆಗೆ ಗುರಿಯಾಗಿದ್ದಿಲ್ಲವೇ? ಕೆಲವು ತಿದ್ದುಪಡಿಗಳು ಅವಶ್ಯವಿರಬಹುದು, ಅನಾವಶ್ಯಕ ವಾಗಿರಬಹುದು, ಪಕ್ಷದ ಸ್ವಾರ್ಥಕ್ಕಾಗಿಯೂ ಇರಬಹುದು. ಸಾರ್ವಜನಿಕ ಹಿತದೃಷ್ಟಿಯಿಂದ ಅಗತ್ಯವೂ ಇರಬಹುದು ಅಥವಾ ಅನಗತ್ಯವೂ ಇರಬಹುದು. ಅದೇನೆಯಿದ್ದರೂ ಈ ರಾಷ್ಟ್ರದ ಉತ್ತಮ ಆಡಳಿತ ಹಾಗೂ ಅಭಿವೃದ್ಧಿ ದೃಷ್ಟಿಯಿಂದ ಹಾಗೂ ಸಂವಿಧಾನಬದ್ಧ ವಾದ ಕಾರ್ಯಾಚರಣೆಗಳ ಹಾಗೂ ಸಾರ್ವಜನಿಕ ಹಿತದೃಷ್ಟಿಯಿಂದ ಅತ್ಯಗತ್ಯವಾಗಿರುವುದು ಸಂವಿಧಾನಬದ್ಧ. ಸಂವಿಧಾನಕ್ಕನುಗುಣವಾಗಿ ನಮ್ಮ ರಾಷ್ಟ್ರ ಜಾತ್ಯಾತೀತ ರಾಷ್ಟ್ರವಾಗಿ ಭ್ರಾತೃತ್ವವನ್ನು ಹೊಂದಿರಬೇಕಾಗಿದೆ. ಆದರೆ ಸಂವಿಧಾನ ವಿರೋಧಿಗಳಾಗಿ, ರಾಷ್ಟ್ರದ್ರೋಹಿ ಗಳಾಗಿ ಅನೇಕ ರಾಜಕಾರಣಿ ಹಾಗೂ ಧರ್ಮಕಾರಣಿಗಳು ತಾವೇ ಜಾತೀಯತೆಯನ್ನುಂಟು ಮಾಡಿ ಭ್ರಾತೃತ್ವಕ್ಕೆ ದ್ರೋಹ ಬಗೆಯುತ್ತ ಮೆರೆದಾಡುತ್ತಿದ್ದಾರೆ. ಇವರಿಗೆ ಸಂವಿಧಾನ ಉಲ್ಲಂಘನೆಗಾಗಿ ತಕ್ಕ ಶಿಕ್ಷೆಯೇ ಇಲ್ಲ. ಸಾರ್ವಭೌಮರನ್ನು ಗುಲಾಮರನ್ನಾಗಿ ಕಾಣುತ್ತಿದ್ದಾರೆ ಏಕೆ?

ಸಂವಿಧಾನ ಪರಾಮರ್ಶಿಸುವ ಸಲುವಾಗಿ ಸಮಿತಿಯನ್ನು ರಚಿಸಿದಾಕ್ಷಣ ಸಂವಿಧಾನ ತಿದ್ದುಪಡಿಯಾಯಿತು ಎಂಬಂತೆ ಮಾತಾಡುವುದು ಸರಿಯಲ್ಲ. ಸಮಿತಿಯು ಅಧ್ಯಯನ ಮಾಡಿ ಸಾರ್ವಜನಿಕ ಅಭಿಪ್ರಾಯ ಪಡೆದು ವರದಿಯನ್ನು ಕೇಂದ್ರಸರ್ಕಾರಕ್ಕೆ ಸಲ್ಲಿಸಿದ ಮೇಲೆ ಆ ವರದಿಯುನ್ನು ಸರಕಾರ ವಿಚಾರ ವಿನಿಮಯ ಮಾಡಿ ಯಾವ್ಯಾವ ಅನುಚ್ಛೇದಗಳನ್ನು ಏನೇನು ಮಾಡಬೇಕೆಂಬ ಬಗ್ಗೆ ತೀರ್ಮಾನ ತೆಗೆದುಕೊಂಡು ತಿದ್ದುಪಡಿ ಮಸೂದೆಯನ್ನು ಮಂಡಿಸಿ ಜಂಟಿ ಸಮಿತಿಗೆ ಕಳುಹಿಸಿ ವರದಿ ತರಿಸಿಕೊಂಡು ಚರ್ಚೆ ಮಾಡಿ ಆರ್ಟಿಕಲ್ 368ರಲ್ಲಿ ವಿವರಿಸಿದಂತೆ ತಿದ್ದುಪಡಿ ಮಾಡಬಹುದು ಇಲ್ಲವೇ ಬಿಡಬಹುದು. ಸಂಸದೀಯ ಇತಿಹಾಸಗಳ ಪುಟಗಳನ್ನು ತಿರುವಿ ಹಾಕಿದರೆ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಅನೇಕ ಸಮಿತಿಗಳನ್ನು ನೇಮಿಸಿ ಅವುಗಳಿಂದ ವರದಿ ತರಿಸಿಕೊಂಡು ಮುಂದೆ ಅಂತಹ ಮಂಡಿಸಿದ ಯಾವುದೇ ಮಸೂದೆಗಳನ್ನು ಕೈಬಿಟ್ಟಿರುವ ಅನೇಕ ಜೀವಂತ ಉದಾಹರಣೆಗಳು ರಾಷ್ಟ್ರಾದ್ಯಂತ ಇವೆ. ಕರ್ನಾಟಕದಲ್ಲಿಯೇ ಕರ್ನಾಟಕ ಏಕೀಕರಣವಾಗಿ ಅರ್ಧ ಶತಮಾನದಾಗಿದ್ದು, ಏಕರೂಪ ಧಾರ್ಮಿಕ ದತ್ತಿ ಮತ್ತು ಹಿಂದೂ ಧಾರ್ಮಿಕ ಸಂಸ್ಥೆಗಳ ಅಧಿನಿಯಮ ಪಾಸು ಮಾಡಿ, ಜಾರಿಗೊಳಿಸದೆ ಸಾಕಷ್ಟು ಮಸೂದೆಗಳನ್ನು ವಿಧಾನಮಂಡಲದಲ್ಲಿ ಮಂಡಿಸಿರುವುದು, ಜಂಟಿ ಪರಿಶೀಲನಾ ಸಮಿತಿಗಳನ್ನು ನೇಮಿಸಿ ವರದಿ ತರಿಸಿಕೊಂಡು ಕೆಲವು ಧಾರ್ಮಿಕ ಹಾಗೂ ರಾಜಕಾರಣಿಗಳ ಅನುಚಿತ ಒತ್ತಡಕ್ಕೆ ಮಣಿದು ಏಕೀಕರಣಪೂರ್ವ ಅಧಿನಿಯಮಗಳನ್ನೇ ಇಂದಿಗೂ ಮುಂದುವರಿಸಿರುವ ಸ್ಯಾಂಪಲ್ ಕೂಡ ಇದೆ. ಇಂತಹ ಉದಾಹರಣೆ ಕೇಂದ್ರದಲ್ಲಿಯೂ ಸಾಕಷ್ಟು ಇವೆ. ಸಂವಿಧಾನ ಪರಾಮರ್ಶೆ ಮಾಡಿ ವರದಿ ಸಲ್ಲಿಸಲು ಸಮಿತಿಯನ್ನು ಕೇಂದ್ರ ಸರಕಾರ ನೇಮಿಸಿದಾಕ್ಷಣ ಸಂವಿಧಾನ ತಿದ್ದುಪಡಿಯಾದಂತಾಗುವುದಿಲ್ಲ. ಸಂವಿಧಾನ ತಿದ್ದುಪಡಿ

ಮಾಡಲು ಕಟ್ಟುನಿಟ್ಟಾದ ಕ್ರಮಗಳುಳ್ಳ 368ನೇ ಲೇಖವು ಸಂವಿಧಾನದಲ್ಲಿದೆ. ಸಮಿತಿ ಸಾರ್ವಜನಿಕ ಎಲ್ಲಾ ವರ್ಗಗಳ ಅಭಿಪ್ರಾಯವನ್ನು ಪಡೆದು ಯಾವ್ಯಾವ ಅನುಚ್ಛೇದಗಳನ್ನು ಬದಲಿಸಬೇಕು ಇಲ್ಲವೆ ಸೇರಿಸಬೇಕು ಇಲ್ಲವೆ ತೆಗೆದುಹಾಕಬೇಕೆಂಬ ಬಗ್ಗೆ ಅಧ್ಯಯನ ಮಾಡಿ ಸರಕಾರಕ್ಕೆ ವರದಿ ಸಲ್ಲಿಸಬೇಕಾಗುತ್ತದೆ. ಆ ವರದಿಯನ್ನು ಸರಕಾರ ಪರಿಶೀಲಿಸಿ ಆ ವರದಿಯಲ್ಲಿಯ ಅಂಶಗಳನ್ನು ಎಷ್ಟರ ಮಟ್ಟಿಗೆ ಎಷ್ಟನ್ನು ಗಣನೆಗೆ ತೆಗೆದುಕೊಳ್ಳ ಬೇಕೆಂಬುದನ್ನು ಪರಿಶೀಲಿಸಿ ತಿದ್ದುಪಡಿಯನ್ನು ಕೇಂದ್ರ ಸರಕಾರವು ಸರ್ವೋನ್ನತ ಸಭೆ ಸಂಸತ್ತಿನಲ್ಲಿ ಮಂಡಿಸಬೇಕಾಗುತ್ತದೆ. ಸಂಸತ್ತಿನಲ್ಲಿ ಮಂಡಿಸಿದ ನಂತರ ಸಂಸತ್ತು ಅಂದರೆ ಲೋಕಸಭೆ ಮತ್ತು ರಾಜ್ಯಸಭೆಗಳು ಸುದೀರ್ಘ ಚರ್ಚೆ ಮಾಡಿ ಸಂವಿಧಾನದ 368ರ ಪ್ರಕಾರ ಮುಂದಿನ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಆ ಬಗ್ಗೆ ಇಡೀ ಭಾರತೀಯರು ಹಾಗೂ ಇನ್ನೆಲ್ಲಾ ಚುನಾಯಿತ ಪ್ರತಿನಿಧಿಗಳು ದೇಶಾದ್ಯಂತ ತಮ್ಮ ಅಭಿಪ್ರಾಯಗಳನ್ನು ಪತ್ರಿಕೆಗಳ ಮುಖಾಂತರ ಅಥವಾ ನೇರವಾಗಿ ಸರಕಾರಕ್ಕೆ ವ್ಯಕ್ತಪಡಿಸಬೇಕಾಗುತ್ತದೆ. ಕೇಂದ್ರ ಸರಕಾರ ಕೂಡ ಅಭಿಪ್ರಾಯಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಸಂವಿಧಾನ ಪರಾಮರ್ಶೆಗೆ ಸಮಿತಿಯನ್ನು ನೇಮಿಸಿದಾಕ್ಷಣ ಸಂವಿಧಾನ ಸಂಪೂರ್ಣವಾಗಿ ತಿದ್ದುಪಡಿಯಾಗಿಹೋಯಿತೆಂಬ ತಪ್ಪು ಅಭಿಪ್ರಾಯ, ತಪ್ಪು ಗ್ರಹಿಕೆ, ತಪ್ಪು ತೀರ್ಮಾನಗಳನ್ನು ಈ ಮಂಚೂಣೆಯಲ್ಲಿ ವ್ಯಕ್ತಪಡಿಸದೆ ಕಾದುನೋಡುವುದು ಒಳ್ಳೆಯದು. ಸರಕಾರದ ಸೂಚಿತ ಕರಡು-ಮಸೂದೆ ವಿಧಿಲೇಖವನ್ನು ಗಂಭೀರವಾಗಿ ಪರಿಶೀಲಿಸಿ ಸೂಕ್ತ ಮಾರ್ಪಾಡು, ಸೇರ್ಪಡೆ ಹಾಗೂ ರದ್ದುಮಾಡುವ ಸರ್ವಶ್ರೇಷ್ಠ ಅಧಿಕಾರ ಸಂಸತ್ತಿಗಿರುವುದರಿಂದ ಸಂಸತ್ತಿನ ಅಂತಿಮ ತೀರ್ಮಾನವನ್ನು ಕಾಯಬೇಕಾದುದು ಅಗತ್ಯ, ಅನಿವಾರ್ಯ.

❑

ಸ್ವತಂತ್ರ ಜನತಂತ್ರದಲ್ಲಿ ವಿಪಕ್ಷನಾಯಕರ ಹೊಣೆ ಅಪಾರ-ಅಗತ್ಯ

ಪ್ರಜಾಪ್ರಭುತ್ವ ಜನತಂತ್ರ ಹೊಂದಿದ ಸ್ವಂತಂತ್ರ ಭಾರತ ದೇಶದಲ್ಲಿ ಕೇಂದ್ರ ಸರಕಾರ ಹಾಗೂ ಕೇಂದ್ರ ಸರಕಾರದ ಮಂತ್ರಿಮಂಡಲ ಪ್ರಧಾನಮಂತ್ರಿಗಳ ನೇತೃತ್ವದಲ್ಲಿ ಈ ರಾಷ್ಟ್ರದ ಆಡಳಿತವನ್ನು ಸುಭದ್ರವಾಗಿ ಹಾಗೂ ಸಮರ್ಥವಾಗಿ ನಡೆಸಬೇಕಾಗುತ್ತದೆ. ಈ ರಾಷ್ಟ್ರದ ಸರ್ವಾಂಗೀಣ ಸರ್ವತೋಮುಖ ಸಾಮಾನ್ಯ, ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿ ಸಾಧಿಸಬೇಕಾಗುತ್ತದೆ. ಅಂತೆಯೇ ಈ ರಾಷ್ಟ್ರದಲ್ಲಿಯ ರಾಜ್ಯಗಳ ಆಡಳಿತವನ್ನು ಸಹ ಸುಭದ್ರವಾಗಿ ಹಾಗೂ ಸಮರ್ಥವಾಗಿ ರಾಜ್ಯ ಸರಕಾರ ಹಾಗೂ ರಾಜ್ಯ ಸರಕಾರದ ಮಂತ್ರಿಮಂಡಳ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ನಡೆಸಬೇಕಾಗುತ್ತದೆ. ರಾಜ್ಯಗಳ ಸರ್ವಾಂಗೀಣ ಸರ್ವತೋಮುಖ ಸಾಮಾನ್ಯ, ಸಾಮಾಜಿಕ ಹಾಗೂ ಆರ್ಥಿಕ ಸೇವಾ ಅಭಿವೃದ್ಧಿಯನ್ನು ಕೂಡ ಸಾಧಿಸಬೇಕಾಗುತ್ತದೆ.

ಇದೆಲ್ಲ ಕೇಂದ್ರ ಹಾಗೂ ರಾಜ್ಯ ಸರಕಾರಗಳ ಆದ್ಯ ಕರ್ತವ್ಯ. ಕೇಂದ್ರ ಸರಕಾರದ ಪ್ರದಾನಮಂತ್ರಿಗಳು, ರಾಜ್ಯ ಸರಕಾರದ ಮುಖ್ಯಮಂತ್ರಿಗಳು ಈ ದೇಶದ ಹಾಗೂ ರಾಜ್ಯಗಳ ಪ್ರಜೆಗಳು ಪ್ರತಿವರ್ಷ ಕೊಡುತ್ತಿರುವ ಕಂದಾಯ ಹಾಗೂ ಕರೇತರ ಕಂದಾಯ, ಸಾಲ, ಮುಂಗಡಗಳಿಂದ ಪಡೆದ ಆದಾಯವನ್ನು ಪ್ರತಿವರ್ಷ ಆಡಳಿತ ಹಾಗೂ ಅಭಿವೃದ್ಧಿಗಾಗಿ ವೆಚ್ಚ ಮಾಡಬೇಕಾಗುತ್ತದೆ. ಈ ಆದಾಯ ಹಾಗೂ ವೆಚ್ಚದ ವಿವರಗಳನ್ನು ಬಜೆಟ್ ಅಧಿವೇಶನದಲ್ಲಿ ಈ ಸರಕಾರಗಳು ಬಜೆಟ್ ಮುಖಾಂತರ ಮಂಡಿಸಿ ಲೋಕಸಭೆ, ರಾಜ್ಯಸಭೆ, ವಿಧಾನಸಭೆ, ವಿಧಾನ ಪರಿಷತ್ತುಗಳಲ್ಲಿ ಮಂಡಿಸಿ ಚರ್ಚೆಯ ನಂತರ ಮಂಜೂರಿ ಪಡೆದು ವೆಚ್ಚ ಮಾಡಬೇಕಾಗುತ್ತದೆ. ವಿಧಾನಸಭೆಯಲ್ಲಿ ಬಹುಮತ ಪಡೆದ ಅತಿ ದೊಡ್ಡ ರಾಜಕೀಯ ಪಕ್ಷ ನಾಯಕರು ಸಭಾನಾಯಕರಾಗಿ ಮುಖ್ಯಮಂತ್ರಿ ಯಾದರೆ ಅಲ್ಪಮತ ಪಡೆದ ಅತಿ ದೊಡ್ಡ ಪಕ್ಷದ ನಾಯಕ ಅಧಿಕೃತ ವಿರೋಧ ಪಕ್ಷದ ನಾಯಕರಾಗಿ ಛಾಯಾ ಮುಖ್ಯಮಂತ್ರಿಯಾಗಿ ಕೆಲಸ ನಿರ್ವಹಿಸಬೇಕಾಗುತ್ತದೆ. ಸಂಸತ್ತು ಹಾಗೂ ವಿಧಾನಮಂಡಲಗಳಲ್ಲಿ ಬಜೆಟ್ ಮಂಡಿಸಿದ ಮೇಲೆ ಅಧಿಕೃತ ವಿರೋಧ ಪಕ್ಷಗಳ

ನಾಯಕರು ವಿವಿಧ ವಿರೋಧ ಪಕ್ಷ ಗುಂಪುಗಳ ನಾಯಕರು ಹಾಗೂ ಸದಸ್ಯರು ಬಜೆಟ್ ಅಧ್ಯಯನ ಮಾಡಿ ಹಿಂದಿನ ವರ್ಷದ ವಾಸ್ತವಿಕ ಆದಾಯ ವೆಚ್ಚದ ಬಗ್ಗೆ, ಪ್ರಸ್ತುತ ವರ್ಷದ ಆದಾಯ ವೆಚ್ಚದ ಬಗ್ಗೆ ಹಾಗೂ ಮುಂದಿನ ವರ್ಷದ ಆದಾಯ ವೆಚ್ಚದ ಬಗ್ಗೆ ಮಾತಾಡಿ ಸೂಕ್ತ ಸಲಹೆ, ಸೂಚನೆ ಕೊಟ್ಟು ಸರಕಾರಗಳ ಉತ್ತಮ ಯೋಜನೆಗಳ ಬಗ್ಗೆ ಪ್ರಶಂಸೆ ಮಾಡಬಹುದಾಗಿದೆ. ಅಂತೆಯೇ ಹಿಂದಿನ ವರ್ಷಗಳಲ್ಲಿ ನಡೆದ ಹಣದ ನಿರ್ಬಳಕೆ, ಸದ್ಬಳಕೆ, ದುರ್ಬಳಕೆ, ಉತ್ತಮ ಆಡಳಿತ, ಸ್ವಾರ್ಥ, ಪಕ್ಷಪಾತ, ಸ್ವಜನ ಪಕ್ಷಪಾತ, ಭ್ರಷ್ಟಾಚಾರ, ಅಧಿಕಾರ ದುರುಪಯೋಗ, ದುರಾಡಳಿತ ಇತ್ಯಾದಿಗಳ ಬಗ್ಗೆ ನಿರ್ದಾಕ್ಷಿಣ್ಯವಾಗಿ, ದಾಕ್ಷಿಣ್ಯಪರರಾಗದೆ ನೇರ ಹಾಗೂ ಬಿಚ್ಚುನುಡಿಯಿಂದ ಮಾತಾಡ ಬೇಕಾಗುತ್ತದೆ. ಅನಿಷ್ಟಗಳು ಮರುಕಳಿಸದಂತೆ ಕಾಳಜಿ ವಹಿಸಲು ಸರಕಾರಕ್ಕೆ ಸೂಕ್ತ ಸಲಹೆಗಳನ್ನು ಕೂಡ ಕೊಡಬೇಕಾಗುತ್ತದೆ. ಈ ಸಂಸದೀಯ ಸಭೆಗಳಲ್ಲಿ ಸರಕಾರದ ವಿಚಾರಗಳನ್ನು ಹಾಗೂ ವಿರೋಧ ಪಕ್ಷಗಳ ವಿಚಾರವನ್ನು ಮಂಡಿಸಲು ಎರಡೂ ಬಣಗಳಿಗೆ ಸಭಾಧ್ಯಕ್ಷರು ಸಾಕಷ್ಟು ಸದವಕಾಶವನ್ನು ಕೊಟ್ಟು ಉತ್ತಮ ಆಡಳಿತ ಹಾಗೂ ಅಭಿವೃದ್ಧಿಯ ಹಿತವನ್ನು ಕಾಪಾಡಬೇಕಾಗುತ್ತದೆ. ಸರಕಾರಗಳು ಸದನಗಳ ಒಳಗೆ ಹಾಗೂ ಹೊರಗೆ ತಮ್ಮ ಧೋರಣೆ ಹಾಗೂ ಕಾರ್ಯಕ್ರಮಗಳ ಆಡಳಿತ ಹಾಗೂ ಅಭಿವೃದ್ಧಿ ಕಾರ್ಯಾಚರಣೆಯನ್ನು ಉತ್ತಮ ರೀತಿಯಲ್ಲಿ ಮಾಡುವ ಬಗ್ಗೆ ಹೇಳಬೇಕಾಗುತ್ತದೆ. ಅಂತೆಯೇ ವಿರೋಧಪಕ್ಷಗಳ ನಾಯಕರು ಹಾಗೂ ಸದಸ್ಯರು ಸರಕಾರದ ತಪ್ಪು ಧೋರಣೆ ಹಾಗೂ ಕಾರ್ಯಕ್ರಮಗಳ ಆಡಳಿತ ಅಭಿವೃದ್ಧಿಯ ಕಾರ್ಯಾಚರಣೆಯಲ್ಲಿ ಕಂಡು ಬಂದ ಹಾಗೂ ಕಂಡು ಬರಬಹುದಾದ ಲೋಪದೋಷ ಇತ್ಯಾದಿ ಮಾರಕಗಳ ಬಗ್ಗೆ ಸರಕಾರಗಳನ್ನು ಎಚ್ಚರಿಸಿ ಮುಂದೆ ಹಾಗೆ ತಪ್ಪು, ಲೋಪದೋಷ ಇತ್ಯಾದಿ ಮಾರಕಗಳು ಮರುಕಳಿಸದಂತೆ ಮಾಡಲು ಎಚ್ಚರಿಕೆ ಕೊಡಬೇಕಾಗುತ್ತದೆ. ಹಿಂದೆ ಕಂಡು ಬಂದ ಲೋಪದೋಷ, ಅಪರಾಧಗಳ ಬಗ್ಗೆ ತನಿಖೆ ನಡೆಸಿ ತಪ್ಪಿತಸ್ಥರ ಮೇಲೆ ಉಗ್ರಕ್ರಮ ತೆಗೆದುಕೊಳ್ಳುವಂತೆ ಹೇಳಬೇಕಾಗುತ್ತದೆ. ಸರಕಾರ ಕೂಡ ವಿರೋಧಿ ಪಕ್ಷದವರು ಹೇಳಿದ ಸೂಕ್ತ ಸಲಹೆ, ಸೂಚನೆ, ಮಾರ್ಗದರ್ಶನಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಸರಕಾರಗಳು ವಿರೋಧಿಪಕ್ಷಗಳ ಸಲಹೆ, ಸೂಚನೆಗಳನ್ನು ತಿರಸ್ಕರಿಸಿ ಮದೋನ್ಮತ್ತರಾಗಿ ಜನತೆಗೆ ಮಾರಕವಾಗಿ ನಡೆದುಕೊಂಡರೆ ಸರಕಾರದ ವಿರುದ್ಧ ನಿಲುವಳಿ ಸೂಚನೆ, ಅವಿಶ್ವಾಸ ಸೂಚನೆಗಳನ್ನು ಮಂಡಿಸಿ ಸರಕಾರವನ್ನು ಶಿಕ್ಷಿಸಲು ಮುಂದಾಗಬೇಕಾಗುತ್ತದೆ. ಭಾರೀ ಬಹುಮತವಿದೆಂದು ಸರಕಾರಗಳು ಜನತೆಗೆ ಮಾರಕವಾಗಿ ನಡೆದುಕೊಂಡರೆ ಅಂತಹ ಸರಕಾರಗಳು ಮಾಡುವ ಮಾರಕಗಳನ್ನು ಜನತೆಯ ಮುಂದಿಟ್ಟು ಆ ಸರಕಾರಗಳನ್ನು, ಅವರ ರಾಜಕೀಯ ಪಕ್ಷಗಳನ್ನು ಮುಂದಿನ ಸಾರ್ವತ್ರಿಕ ಚುನಾವಣೆಯಲ್ಲಿ ಸೋಲಿಸಲು ವಿರೋಧಪಕ್ಷಗಳು ಜನತೆಯ ಮೊರೆ ಹೋಗಬೇಕಾಗುತ್ತದೆ. ಚಲಿಸುವ ಆಸೆಗಳನ್ನು ಹದ್ದುಬಸ್ತಿನಲ್ಲಿಡಲು ಅಂಕುಶದ ಅವಶ್ಯಕತೆ ಅಗತ್ಯವಾಗಿದೆ. ಕುದುರೆಗಳನ್ನು ಹದ್ದುಬಸ್ತಿನಲ್ಲಿಡಲು ಲಂಗುಲಗಾಮುಗಳ ಅವಶ್ಯಕತೆ ಅಗತ್ಯವಾಗಿದೆ. ಅಂತೆಯೇ ಚಲಿಸುವ

ಸರಕಾರಗಳನ್ನು ಹದ್ದುಬಸ್ತಿನಲ್ಲಿಡಲು ವಿರೋಧಪಕ್ಷಗಳ ನಾಯಕರ ಹೊಣೆ ಅತೀವ ಮಹತ್ವ ಇದೆ. ಸರಕಾರಗಳು ಚಲಿಸುವ ಆಡಳಿತ ಹಾಗೂ ಅಭಿವೃದ್ಧಿಯ ಆಸೆಗಳು ಇದ್ದ ಹಾಗೆ, ಈ ಆಸೆಗಳನ್ನು ಹದ್ದುಬಸ್ತಿನಲ್ಲಿಟ್ಟು ಉತ್ತಮ ಆಡಳಿತ ಹಾಗೂ ಅಭಿವೃದ್ಧಿಯ ಹೆದ್ದಾರಿ ಹಿಡಿದು ದಾರಿ ತಪ್ಪದೆ ಹೋಗಬೇಕಾದರೆ ವಿರೋಧಪಕ್ಷಗಳ ಸದಸ್ಯರು ಹಾಗೂ ನಾಯಕರು ಅಂಕುಶ ಹಾಗೂ ಲಂಗುಲಗಾಮುಗಳಾಗಿ ಕಾರ್ಯವಹಿಸಿ ಸರಕಾರಗಳ ಉತ್ತಮ ಆಡಳಿತ ಹಾಗೂ ಅಭಿವೃದ್ಧಿ ಮಾಡುವಲ್ಲಿ ಅತಿ ಮಹತ್ವದ ಪಾತ್ರ ವಹಿಸಬೇಕಾಗುತ್ತದೆ.

ಕೇಂದ್ರ ಹಾಗೂ ರಾಜ್ಯ ಸರಕಾರಗಳ ಮಹಾಮಂತ್ರಿಗಳು ಒಂದೆಡೆಯಾದರೆ ಮತ್ತೊಂದೆಡೆ ವಿರೋಧಿಪಕ್ಷದ ನಾಯಕರು, ಛಾಯಾಮಹಾಮಂತ್ರಿಗಳಾಗಿ, ವಿರೋಧಿಪಕ್ಷಗಳು ಛಾಯಾಮಂತ್ರಿಮಂಡಲವಾಗಿ ಕಾರ್ಯನಿರ್ವಹಿಸಬೇಕಾಗುತ್ತದೆಯೆಂಬ ಬ್ರಿಟಿಷ್ ಸಂಸದೀಯ ಉಲ್ಲೇಖವನ್ನು ಜ್ಞಾಪಿಸಿಕೊಂಡು ಅಧಿಕಾರಾರೂಢ ಪಕ್ಷ ಹಾಗೂ ವಿರೋಧಿಪಕ್ಷಗಳು ನಮ್ಮ ರಾಷ್ಟ್ರದಲ್ಲಿ ಸಂಸದೀಯ ಕೆಲಸ ನಿರ್ವಹಿಸಬೇಕಾಗುತ್ತದೆ. ಅಧಿಕಾರಾರೂಢ ಸರಕಾರಗಳು ಸಹ ರಾಷ್ಟ್ರದ ಅಥವಾ ರಾಜ್ಯದ ಹಿತಾಸಕ್ತಿ ವಿಷಯ, ರಕ್ಷಣಾ ಹಣಕಾಸು ಧೋರಣೆ, ವಿದೇಶಿ ಸಂಬಂಧ ಇತ್ಯಾದಿ ಮಹತ್ವದ ವಿಷಯಗಳ ಬಗ್ಗೆ ವಿರೋಧಿಪಕ್ಷಗಳ ನಾಯಕರನ್ನು ಕರೆದು ಅವರ ಕೂಡ ಚರ್ಚಿಮಾಡಿ ಉತ್ತಮ ಹಾಗೂ ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಸರಕಾರಗಳು ಯಾವುದೇ ಕಾರಣಕ್ಕಾಗಿ ರಾಜೀನಾಮೆ ಕೊಟ್ಟಾಗ, ಸೋಲನ್ನು ಕಂಡಾಗ, ಪತನಗೊಂಡಾಗ ಅಥವಾ ಚುನಾವಣೆ ಗಳಲ್ಲಿ ಸೋಲನ್ನು ಕಂಡಾಗ ವಿರೋಧಿಪಕ್ಷದ ನಾಯಕರು ಹೊಸ ಸರಕಾರವನ್ನು ರಚಿಸುವ ಜವಾಬ್ದಾರಿಯನ್ನು ತೆಗೆದುಕೊಳ್ಳಲಿಕ್ಕೆ ಸಹ ತಯಾರಿಸಿರಬೇಕಾಗುತ್ತದೆ. ಮಹಾಮಂತ್ರಿಗಳಿಗೆ ವಿರೋಧಿಪಕ್ಷದ ನಾಯಕರು ಪರ್ಯಾಯ ಛಾಯಾ ಮಹಾಮಂತ್ರಿ ಗಳಾಗುವ ಅವಕಾಶವಿದೆಯೆಂಬ ಅರಿವು ಎಲ್ಲಾ ವಿರೋಧಪಕ್ಷಗಳ ನಾಯಕರಿಗೆ ಇದ್ದರೆ ಒಳ್ಳೆಯದು. ವಿರೋಧ ಪಕ್ಷದ ಸ್ಥಾನ ಹೊಣೆಗಾರಿಕೆಯದೆಂದೇ ಲೋಕಸಭೆಯಲ್ಲಿ ಆಡಳಿತ ಪಕ್ಷ ಮಹಾಮಂತ್ರಿ ಹಾಗೂ ಮಂತ್ರಿಗಳ ಸಾಲಿನ ಎದುರುಗಡೆಯೇ ಎದುರಿನ ಸಾಲಿನಲ್ಲಿ ಉಪಸಭಾಧ್ಯಕ್ಷರ ಪೀಠದ ನಂತರ ಮೊದಲನೇ ಪೀಠದ ಸ್ಥಾನವನ್ನು ಪ್ರಪಂಚದಾದ್ಯಂತ ಸಂಸತ್ ಸಭೆಗಳಲ್ಲಿ ಗೊತ್ತುಪಡಿಸಿರುವ ಹಿನ್ನೆಲೆ ಇದೆ. ವಿರೋಧಪಕ್ಷದ ನಾಯಕರು ದಿನನಿತ್ಯ ಸರಕಾರದ ಹಾಗೂ ಸರಕಾರದಲ್ಲಿಯ ಮಂತ್ರಿಗಳ ನಡವಳಿಕೆ ಹೇಳಿಕೆ ಕಾರ್ಯಾಚರಣೆಯನ್ನು ನಿರೀಕ್ಷಿಸುತ್ತ ಅವುಗಳ ಬಗ್ಗೆ ಹೊಗಳುವಿಕೆ, ತೆಗಳುವಿಕೆ, ಶಹಬಾಸ್‌ಗಿರಿ, ಟೀಕೆ-ಟಿಪ್ಪಣಿಗಳನ್ನು ತಕ್ಷಣ ಆಗಾಗ್ಗೆ ಮಾಡುತ್ತ ಸರಕಾರಗಳನ್ನು ನಿಯಂತ್ರಿಸುತ್ತ ಎಲ್ಲ ವಿಷಯಗಳನ್ನು ಪ್ರಜೆಗಳ ಗಮನದತ್ತ ಪತ್ರಿಕಾಂಗಗಳ ಮುಖಾಂತರ ತರುವ ಜವಾಬ್ದಾರಿ ಹೊಣೆ ಅಪಾರ ಹಾಗೂ ಅಗತ್ಯವಾಗಿದೆ. ಈ ಹಿನ್ನೆಲೆಯಲ್ಲಿ ಸರಕಾರಗಳು ಹಾದಿ ಹಿಡಿದು ಹಾದಿ ತಪ್ಪದಂತೆ ಹೋಗುವುದು ಹಾಗೂ ಉತ್ತಮ ಆಡಳಿತ ಅಭಿವೃದ್ಧಿಗೊಳಿಸುವುದು ಒಳ್ಳೆಯದು. ಅಂತೆಯೇ ವಿರೋಧಿ ಪಕ್ಷಗಳು ಸರಕಾರ ಹಾದಿತಪ್ಪಿ ಹಾದಿ ಹಿಡಿಯದೆ ಉತ್ತಮ ಆಡಳಿತ ಅಭಿವೃದ್ಧಿಯನ್ನು ಕಡೆ ಗಣಿಸಿ

ವಿಫಲರಾಗುತ್ತ ನಡೆದರೆ ಅವರಿಗೆ ಪಾಠ ಕಲಿಸುವುದು ಒಳ್ಳೆಯದು. ಒಟ್ಟಿನ ಮೇಲೆ ಅಧಿಕಾರಾರೂಢ ಪಕ್ಷ ಹಾಗೂ ವಿರೋಧಿ ಪಕ್ಷಗಳು ಪ್ರಜಾತಂತ್ರ ವ್ಯವಸ್ಥೆ ಸುಸೂತ್ರವಾಗಿ ಸಾಗಲು ಎರಡು ಕಣ್ಣುಗಳಾಗಿದ್ದು, ಇವೆರಡೂ ಯಾವಾಗಲೂ ಆರೋಗ್ಯಕರವಾಗಿರಬೇಕು. ಈ ಕಾರಣದಿಂದಲೇ ಲೋಕಸಭೆ, ರಾಜ್ಯಸಭೆ, ವಿಧಾನಸಭೆಗಳು, ವಿಧಾನ ಪರಿಷತ್ತುಗಳು ಇವುಗಳು ವಿಪಕ್ಷ ನಾಯಕರಿಗೆ ಕ್ಯಾಬಿನೆಟ್ ಮಂತ್ರಿ ಸ್ಥಾನಮಾನವನ್ನು ಕೊಟ್ಟು ಎಲ್ಲಾ ರೀತಿಯ ಆರ್ಥಿಕ ಸವಲತ್ತು, ಸಹಾಯ, ಅನುಕೂಲತೆ, ಅವಕಾಶ ಇತ್ಯಾದಿಗಳನ್ನೂ ಅಧಿಕೃತವಾಗಿ ಒದಗಿಸಿದ್ದು ಘನತೆ, ಗೌರವ, ಜವಾಬ್ದಾರಿಯುಳ್ಳ ಈ ನಾಯಕರೆಲ್ಲಾ ಪ್ರಜಾತಂತ್ರ ವ್ಯವಸ್ಥೆಯ ಸುವ್ಯವಸ್ಥೆಗಾಗಿ ಸಮರ್ಥ ರೀತಿಯಲ್ಲಿ ಕಾರ್ಯನಿರ್ವಹಣೆಗೆ ಸಿದ್ಧರಾಗಬೇಕಾಗುವುದು ಒಂದು ರೀತಿ ಮಹತ್ವಪೂರ್ಣ.

❑

ಸಂವಿಧಾನಬದ್ಧ ಅಗ್ರಗಣ್ಯರ ಗೌರವ ಪಾಲನೆ

ಭಾರತ ಸಂವಿಧಾನದ ಪ್ರಕಾರ ರಾಷ್ಟ್ರಾಧ್ಯಕ್ಷರು, ಉಪರಾಷ್ಟ್ರಾಧ್ಯಕ್ಷರು, ಪ್ರಧಾನಮಂತ್ರಿಗಳು, ಆಯಾ ರಾಜ್ಯಗಳ ರಾಜ್ಯಪಾಲರು, ಮುಖ್ಯಮಂತ್ರಿಗಳು, ಮಂತ್ರಿಗಳು, ಲೋಕಸಭಾ, ವಿಧಾನಸಭಾ ಸದಸ್ಯರು, ರಾಜ್ಯಸಭಾ, ವಿಧಾನ ಪರಿಷತ್ ಸದಸ್ಯರು, ಇತ್ಯಾದಿ ಇತ್ಯಾದಿ ಸಂಸದೀಯ ಶಾಸಕಾಂಗ ಪ್ರಮುಖರು, ಕಾರ್ಯಾಂಗ ಪ್ರಮುಖರು ಹಾಗೂ ನ್ಯಾಯಾಂಗ ಪ್ರಮುಖರು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಸಂವಿಧಾನಬದ್ಧ ಅಗ್ರಗಣ್ಯರಾಗಿದ್ದಾರೆ. ಈ ಬಗ್ಗೆ ರಾಷ್ಟ್ರಪತಿಗಳು ಅಗ್ರಗಣ್ಯರ ಪಂಕ್ತಿಯ ಪಟ್ಟಿಯನ್ನು ಕಾಲಕಾಲಕ್ಕೆ ಪ್ರಕಟಿಸುತ್ತಾರೆ. ಸರಕಾರಿ ಕಾರ್ಯಕ್ರಮಗಳಲ್ಲಿ ಅಧಿಕಾರಿಗಳು ಈ ಅಗ್ರಗಣ್ಯರಿಗೆ ಸೂಕ್ತವಾದ ಗೌರವವನ್ನು ಕೊಡಬೇಕಾಗುತ್ತದೆ. ಅಂತೆಯೇ ಸಂಸತ್ತು ಹಾಗೂ ಶಾಸಕಾಂಗದಿಂದ ಅನುಮೋದನೆ ಪಡೆದ ಸರಕಾರಿ ವ ಸಾರ್ವಜನಿಕ ಬಜೆಟ್ ಮೊತ್ತದ ಕೃಪಾಪೋಷಿತ ಸಾರ್ವಜನಿಕ ಸಂಘ-ಸಂಸ್ಥೆ ಪ್ರಾಧಿಕಾರ ನಿಗಮ ಅಕಾಡೆಮಿ ಮೊದಲಾದವುಗಳು ಸಹ ಸಂವಿಧಾನ ಅಗ್ರಗಣ್ಯರಿಗೆ ಸೂಕ್ತ ಗೌರವ ಕೊಡುವುದು ಅವುಗಳ ನೈತಿಕ ಕರ್ತವ್ಯ. ಈ ರಾಷ್ಟ್ರದ ವಿಧಿ ವಿಧಾನ ಲೇಖನ ಬರೆಯುವರೇ ಸಂವಿಧಾನಬದ್ಧ ಅಗ್ರಗಣ್ಯರು. ಸರಕಾರಿ ಧನ ಸಹಾಯ ಸವಲತ್ತು ಪಡೆಯುವ ಅನೇಕ ಸಂಸ್ಥೆಗಳು ಹಾಗೂ ಆ ಸಂಸ್ಥೆಗಳ ಆಡಳಿತ ಮಂಡಳಿಯವರು ತಾವು ಸಂಸತ್ತು, ಶಾಸಕಾಂಗ ಹಾಗೂ ಸರಕಾರಗಳಿಗಿಂತ ಮೇಲು ಎಂಬ ಅನುಚಿತ ಭಾವನೆಯಿಂದ ಸಂಸತ್ತು, ಶಾಸಕಾಂಗ ಹಾಗೂ ಸರಕಾರಗಳ ಗಣ್ಯರನ್ನು ಯಾವುದೇ ಸಂದರ್ಭದಲ್ಲಿ ಕಡೆಗಣಿಸುವುದು ಹಾಗೂ ಗೌರವ ನೀಡದೆ ಇರುವುದು ಸರಿಯಲ್ಲ. ಇಂತಹ ಘಟನೆಗಳು ಪತ್ರಿಕೆಗಳ ಮುಖಾಂತರ ಆಗಾಗ ಕಂಡುಬರುತ್ತಲೇ ಇವೆ. ಈ ದಿಶೆಯಲ್ಲಿ ಜಿಲ್ಲಾ ಉಸ್ತುವಾರಿ ಮಂತ್ರಿಗಳಾದವರು ಹಾಗೂ ಸರಕಾರಿ ಅಧಿಕೃತ ಏಜೆಂಟರಾದ ಜಿಲ್ಲಾಧಿಕಾರಿಗಳು ಎಚ್ಚರವಹಿಸಿ ಯಾವುದೇ ದೃಷ್ಟಿಯಿಂದ ಅಧಿಕಾರಾರೂಢ ರಾಜಕೀಯ ಪಕ್ಷಗಳ ಏಜೆಂಟರಂತೆ ಸಂವಿಧಾನಬದ್ಧ ಅಗ್ರಗಣ್ಯರಾದ ರಾಜಕೀಯ ವಿರೋಧಪಕ್ಷದವರನ್ನು ನಿರ್ಲಕ್ಷಿಸುವುದು ಸಮಂಜಸವಲ್ಲ.

ರಾಜ್ಯಗಳಲ್ಲಿ ಸಂಸದೀಯ ಅಗ್ರಗಣ್ಯರು ಸಭಾಧ್ಯಕ್ಷ ಹಾಗೂ ಸಭಾಪತಿಗಳು, ಕಾರ್ಯಾಂಗದ ಅಗ್ರಗಣ್ಯರು, ಮುಖ್ಯಮಂತ್ರಿಗಳು, ನ್ಯಾಯಾಂಗದ ಅಗ್ರಗಣ್ಯರು ಮುಖ್ಯ ನ್ಯಾಯಾಧೀಶರು, ಈ ಮೂರೂ ಅಂಗಗಳ ಮೇಲೆ ಅಧಿಕಾಗ್ರಗಣ್ಯರು ರಾಜ್ಯಪಾಲರು. ರಾಜ್ಯಗಳಲ್ಲಿ ಅತಿ ಅಗ್ರಗಣ್ಯ ಸ್ಥಾನ ಪಡೆದವರು ರಾಜ್ಯಪಾಲರೇ ಇರುವುದರಿಂದ ರಾಜ್ಯಪಾಲರ ಘನತೆ, ಗೌರವ, ಮೇಲ್ಪಂಕ್ತಿ ಪಾಲನೆ ಹಾಗೂ ರಕ್ಷಣೆ ಕಾಪಾಡುವುದು ಎಲ್ಲರ ಸಂವಿಧಾನಬದ್ಧ ಕರ್ತವ್ಯ. ಈ ದಿಸೆಯಲ್ಲಿ ಈ ದೇಶದ ನಾಗರಿಕರಾದ ಎಲ್ಲಾ ರಾಜಕಾರಣಿಗಳ ಹಾಗೂ ಧರ್ಮಕಾರಣಿಗಳ ಕರ್ತವ್ಯ, ಆದರೆ ಈ ಕರ್ತವ್ಯಪಾಲನೆ ಮಾಡದವರನೇಕರು ಈ ರಾಷ್ಟ್ರದಲ್ಲಿದ್ದಾರೆ. ಅನೇಕ ಸಭೆಗಳ ಸಂದರ್ಭದಲ್ಲಿ ರಾಜ್ಯಪಾಲರನ್ನು ಕೇಂದ್ರಬಿಂದುವನ್ನಾಗಿ ಮಾಡದೆ ರಾಜಕಾರಣಿ ಹಾಗೂ ಧರ್ಮಕಾರಣಿಗಳು ತಾವೇ ಕೇಂದ್ರಬಿಂದುವಾಗಿ ರಾಜ್ಯಪಾಲರನ್ನು ಕಡೇ ಪಂಕ್ತಿಗೆ ದೂಡಿದ್ದೂ ಉಂಟು. ಸಭೆ, ಸಮ್ಮೇಳನಗಳಿಗೆ ರಾಜ್ಯಪಾಲರು ಆಗಮಿಸಿದಾಗ ಕೆಲವು ಧರ್ಮಕಾರಣಿಗಳು ಎದ್ದು ನಿಂತು ಗೌರವ ಸೂಚಿಸದೆ ಸೊಕ್ಕಿನಿಂದ ಕೂತೇ ಸಂವಿಧಾನಕ್ಕೆ ಅಪಮಾನ ಮಾಡಿದ ಸಂದರ್ಭಗಳೂ ಉಂಟು. ರಾಜ್ಯಪಾಲರನ್ನು ಭೇಟಿ ಮಾಡಲು ಹೋದಾಗ ರಾಜ್ಯಪಾಲರು ಸಹಜವಾಗಿ ಕೂತಿದ್ದರೂ ರಾಜಕಾರಣಿ, ಧರ್ಮಕಾರಣಿಗಳು ತಾವೂ ಸಹಜವಾಗಿ ಕೂಡ್ರದೆ ಕಾಲಮೇಲೆ ಕಾಲುಹಾಕಿಕೊಂಡು ಕೂಡ್ರುವುದು ಹಾಗೂ ಸಮಾರಂಭದಲ್ಲಿ ಶಾಸಕಾಂಗದ ಅಗ್ರಗಣ್ಯ ಸಭಾಪತಿ ಸಭಾಧ್ಯಕ್ಷರನ್ನು ಹಾಗೂ ರಾಜ್ಯಪಾಲರನ್ನು ಪಕ್ಕದಲ್ಲಿ ಕೂಡ್ರಿಸಿ ಮುಖ್ಯಮಂತ್ರಿ ನಡುಮಧ್ಯೆ ಕೂಡ್ರುವುದು ಇತ್ಯಾದಿ ಅಹಂಕಾರ ಪ್ರವೃತ್ತಿ ವ್ಯಕ್ತಪಡಿಸಿ ಸಂವಿಧಾನಕ್ಕೆ ಅಪಚಾರ ಮಾಡಿದ್ದೂ ಈ ರಾಷ್ಟ್ರದಲ್ಲಿ ಉಂಟು. ರಾಜ್ಯದಲ್ಲಿ ರಾಜ್ಯಪಾಲರಿಗಿಂತ ಅತಿ ಎತ್ತರದ ಘನತೆ, ಗೌರವದ ವ್ಯಕ್ತಿ. ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗ ಅಧಿಪತಿಗಳನ್ನೊಳಗೊಂಡು ಯಾವುದೇ ರಾಜಕಾರಣಿ ಹಾಗೂ ಧರ್ಮಕಾರಣಿಗಳಿಗಿಲ್ಲವೆಂಬುದನ್ನು ಎಲ್ಲರೂ ಅರಿತರೆ ಹಾಗೂ ಅರಿತು ನಡೆದರೆ ಒಳ್ಳೆಯದು.

ರಾಜ್ಯಪಾಲರಾದವರು ಕೂಡ ಈ ರಾಷ್ಟ್ರದ ರಾಜ್ಯಗಳಲ್ಲಿ ತಾವು ಅತಿ ಹೆಚ್ಚಿನವರೆಂದು ತಿಳಿದು ನಡೆದುಕೊಳ್ಳುವುದು ಒಳ್ಳೆಯದು. ಸಿಕ್ಕ-ಸಿಕ್ಕ, ಕಂಡ-ಕಂಡ ಹಾಗೂ ಕರೆ-ಕರೆದ ಎಲ್ಲ ಕಾರ್ಯಕ್ರಮಗಳಿಗೆ ಹೋಗುವುದು ಸರಿಯೆ? ಸಂವಿಧಾನಬದ್ಧವಾಗಿ ಅವರು ಹಾಜರಾಗಬೇಕಾದ ಕಾರ್ಯಕ್ರಮಕ್ಕೆ ವೇದಿಕೆಗೆ ಆಗಮಿಸುವಾಗ ಹಾಗೂ ನಿರ್ಗಮಿಸುವಾಗ "ಜನಗಣಮನ ಅಧಿನಾಯಕ ಜಯಹೇ" ಇತ್ಯಾದಿ ರಾಷ್ಟ್ರಗೀತೆಯನ್ನು ಪೋಲೀಸ್ ವಾದ್ಯದ ತಂಡ ನುಡಿಸುತ್ತಿರುವ ಸತ್‌ಸಂಪ್ರದಾಯವಿದೆ. ಈ ಸಂಪ್ರದಾಯಕ್ಕೆ ವಿದಾಯ ಹೇಳುವುದು ಯಾರಿಗೂ ಭೂಷಣವಲ್ಲ. ರಾಜ್ಯಪಾಲರು ಇತರರಂತೆ ಒಬ್ಬ ಸಾಮಾನ್ಯರಂತೆ ಬಿಡುವಿಲ್ಲದ ಕಾರ್ಯಕ್ರಮಗಳಿಗೆ ಹೋಗುವುದು ಸಮಂಜಸವೇ? ರಾಜ್ಯಪಾಲರ ಕಾರ್ಯವೇನೇ ಇದ್ದರೂ ಅವೆಲ್ಲ ಆರ್ಟಿಕಲ್ ನಂ. 356 ಇತ್ಯಾದಿ ಸಂವಿಧಾನಕ್ಕನುಗುಣವಾಗಿಯೇ ಇರುತ್ತವೆ. ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗ ಕಾರ್ಯವೈಖರಿ ಬಗ್ಗೆ ಯಾರಾದರೂ ರಾಜ್ಯಪಾಲರಿಗೆ ಮನವಿ ಅರ್ಪಿಸಬಹುದು. ಅಂತಹ

ಪ್ರಸಂಗದಲ್ಲಿ ಈ ಮೂರು ಅಂಗಗಳ ಅಧಿಪತಿಗಳಿಗೆ ಪತ್ರ ಬರೆದು ವಿವರ ಪಡೆಯ ಬಹುದು ಅಥವಾ ಸೂಕ್ತ ಕ್ರಮಕ್ಕಾಗಿ ಮನವಿಗಳನ್ನು ಅವರಿಗೆ ಕಳುಹಿಸಬಹುದು. ಸಂವಿಧಾನದ ಹೊರಗಡೆ ಸಾರ್ವಜನಿಕ ಸಭೆಗಳಲ್ಲಿ ಬಹಿರಂಗವಾಗಿ ಶಾಸಕಾಂಗಕ್ಕಾಗಲೀ, ಕಾರ್ಯಾಂಗಕ್ಕಾಗಲೀ ಅಥವಾ ನ್ಯಾಯಾಂಗಕ್ಕಾಗಲೀ ಒಬ್ಬ ರಾಜಕಾರಣಿಯಂತೆ ಸಲಹೆ, ಸೂಚನೆ, ಟೀಕೆ, ಪ್ರಶಂಸೆ, ಭಿನ್ನಾಭಿಪ್ರಾಯ ಕೊಡುವುದು ಅವರಿಗೆ ಸಲ್ಲತಕ್ಕದ್ದಲ್ಲ. ಸರಕಾರದ ಬಗ್ಗೆ ಟೀಕೆ ಅಥವಾ ಪ್ರಶಂಸೆ ಆರ್ಟಿಕಲ್ ನಂ. 356 ಬಳಸುವಾಗ ಮಾತ್ರ ಅತ್ಯಗತ್ಯವೆಂಬುದನ್ನು ರಾಜ್ಯಪಾಲರಾದವರು ಅರಿಯುವುದು ಅಗತ್ಯ. "ಅತಿ ಪರಿಚಯಾತ ಅವಜ್ಞಾ ಸಂತತಗಮನಾತ್ ಅನಾದರೋಭವತಿ" ಎಂಬ ಸುಭಾಷಿತ ನುಡಿಯನ್ನು ಈ ರಾಷ್ಟ್ರದಲ್ಲಿಯ ಎಲ್ಲಾ ರಾಜ್ಯಪಾಲರು ಅರಿಯುವುದು ಅಗತ್ಯ. ರಾಜ್ಯಪಾಲರುಗಳ ಕಾರ್ಯಾಲಯಗಳ ಉನ್ನತ ಅಧಿಕಾರಿಗಳು, ಕಾರ್ಯಾಂಗದ ಮುಖ್ಯಮಂತ್ರಿಗಳು, ಶಾಸಕಾಂಗದ ಸಭಾಧ್ಯಕ್ಷ ಸಭಾಪತಿಗಳು, ನ್ಯಾಯಾಂಗದ ಮುಖ್ಯ ನ್ಯಾಯಾಧೀಶರುಗಳು, ಅನನುಭವಿ ರಾಜ್ಯಪಾಲರುಗಳಿಗೆ ಅವರ ಸ್ಥಾನದ ಹಿರಿಮೆಯ ಅರಿವನ್ನು ಎತ್ತಿ ಹೇಳಿ ಸಂವಿಧಾನಬದ್ಧ ಕಾರ್ಯಗಳನ್ನು ತಿಳಿಹೇಳಿ ಘನತೆ, ಗೌರವಗಳಿಂದ ಗಂಭೀರವಾಗಿ ನಡೆದುಕೊಳ್ಳಲು ಹೇಳುವುದು ಕೂಡ ಅತ್ಯವಶ್ಯವಾಗಿದೆ. ಬಹಿರಂಗವಾಗಿ ಯಾವುದೇ ಅಥವಾ ಯಾರದೇ ಅನಾವಶ್ಯಕ ಪ್ರಶಂಸೆಯಾಗಲೀ, ಹೇಳಿಕೆಯಾಗಲೀ ಸಂತೋಷ ಅಥವಾ ಅಸಂತೋಷ ವ್ಯಕ್ತಪಡಿಸುವುದಾಗಲೀ ಯಾವುದೇ ರಾಜ್ಯಪಾಲರಿಗೆ ಭೂಷಣವಲ್ಲ.

ಈ ರಾಷ್ಟ್ರದ ರಾಷ್ಟ್ರಾಧ್ಯಕ್ಷರಾಗಲೀ, ಉಪರಾಷ್ಟ್ರಾಧ್ಯಕ್ಷರಾಗಲೀ, ಪ್ರಧಾನಮಂತ್ರಿಗಳಾಗಲೀ ಯಾವುದೇ ರಾಜ್ಯದ ಯಾವುದೇ ಕಾರ್ಯಕ್ರಮಕ್ಕೆ ಆಗಮಿಸಿದಾಗ ಸಂಬಂಧಿಸಿದ ಹೊಣೆಗಾರ ಅಧಿಕಾರಿಗಳು ಕಾರ್ಯಕ್ರಮವನ್ನು ರೂಪಿಸಿದಾಗ ಆ ಕಾರ್ಯಕ್ರಮಗಳಿಗೆ ರಾಜ್ಯಪಾಲರಾಗಲೀ, ಮುಖ್ಯಮಂತ್ರಿಗಳಾಗಲೀ, ಮಂತ್ರಿಗಳಾಗಲೀ, ಸ್ಥಳೀಯ ಸಂಸದರಾಗಲೀ, ಶಾಸಕರಾಗಲೀ ಇವರನ್ನು ಕಾರ್ಯಕ್ರಮಕ್ಕೆ ಆಮಂತ್ರಿಸುವಲ್ಲಿ, ಗಣನೆಗೆ ತೆಗೆದುಕೊಳ್ಳುವಲ್ಲಿ, ಆಸನದ ವ್ಯವಸ್ಥೆ ಮಾಡುವಲ್ಲಿ ಪ್ರೊಟೋಕಾಲ್ ಸೂತ್ರಗಳನ್ನು ನಿರ್ಲಕ್ಷಿಸಿದ ಉದಾಹರಣೆಗಳು ಅನೇಕ ಪತ್ರಿಕೆಗಳ ಮುಖಾಂತರ ಹಾಗೂ ಆಮಂತ್ರಣ ಪತ್ರಿಕೆಗಳ ಮುಖಾಂತರ ಕಂಡುಬರುತ್ತಿವೆ. ಇವ್ಯಾವುವೂ ಕಾರ್ಯಕ್ರಮಲೋಪ ಮಾಡುವುದು ವ್ಯವಸ್ಥಾಪಕರಿಗೆ ಸಾಧುವಾದುದಲ್ಲ. ಕಾರ್ಯಕ್ರಮಗಳನ್ನೇರ್ಪಡಿಸುವ ಅಥವಾ ಉಸ್ತುವಾರಿ ನೋಡುವ ಯಾರೇ ಆಗಲೀ ಅವರು ಸಂವಿಧಾನಬದ್ಧ ಅಗ್ರಗಣ್ಯ ನಾಯಕರನ್ನು ಯಾವುದೇ ಹಂತದಲ್ಲಿ ಸಾರ್ವಜನಿಕ ಸರಕಾರಿ ಕಾರ್ಯಕ್ರಮಗಳಲ್ಲಿ ನಿರ್ಲಕ್ಷಿಸುವುದು ಸಮಂಜಸವಲ್ಲ. ರಾಷ್ಟ್ರಾಧ್ಯಕ್ಷರ ಕಾರ್ಯಾಲಯದಿಂದ ಪ್ರಕಟಿಸಿದ ಪ್ರೊಟೋಕಾಲ್ ಪಂಕ್ತಿಗೆ ಮಂತ್ರಿ, ಉಪಮಂತ್ರಿಗಳಲ್ಲದೆ ಯಾವುದೇ ಸಂಘ-ಸಂಸ್ಥೆಯ ಅಧ್ಯಕ್ಷ, ಉಪಾಧ್ಯಕ್ಷರ ಹುದ್ದೆಗಳಿಗೆ ಮಂತ್ರಿ, ಉಪಮಂತ್ರಿ ಸ್ಥಾನಮಾನ ಕೊಟ್ಟು ರಾಜ್ಯ ಸರಕಾರಗಳು ಮಂತ್ರಿ, ಉಪಮಂತ್ರಿ ಸ್ಥಾನಕ್ಕೇರಿಸಿ ನಿರ್ಲಕ್ಷಿಸುವುದು ಕೆಲರಾಜ್ಯಗಳಲ್ಲಿ ಕಣ್ಣೊರೆಸುವ ತಂತ್ರ ನಡೆದಿದ್ದು ಅದು ಕೂಡ ಸಮಂಜಸವಲ್ಲವೆಂದು ಹೇಳದೆ ಗತ್ಯಂತರವಿಲ್ಲ. ರಾಜ್ಯ ಸರಕಾರಗಳು ಸಂವಿಧಾನ

ಬದ್ಧ ಗಣ್ಯರನ್ನು ಸಮಾರಂಭಗಳಿಗೆ ಆಮಂತ್ರಿಸದೆ ಇದ್ದ ಪರಿಸ್ಥಿತಿಯ ಪರಿಣಾಮವಾಗಿ ಹೊಡೆದಾಟ, ಬಡಿದಾಟ, ಕೊಲೆ-ಸುಲಿಗೆ, ಲಾಠಿ, ಚಾರ್ಜ್, ಟಯರ್‌ಗ್ಯಾಸ್ ಪ್ರಯೋಗ ಇತ್ಯಾದಿ ರಾಜಕೀಯ ಅಹಿತಕರ ಘಟನೆಗಳು ದೇಶಾದ್ಯಂತ ಅಲ್ಲಲ್ಲಿ ನಡೆದಿರುವುದನ್ನು ಆ ಬಗ್ಗೆ ಆಗಿರುವ ನ್ಯಾಯಾಂಗ ತನಿಖಾ ವರದಿಗಳ ಹಿನ್ನೆಲೆಯಲ್ಲಿ ಸಂವಿಧಾನಬದ್ಧ ಅಗ್ರಗಣ್ಯರಿಗೆ ಯಾವುದೇ ರೀತಿಯಲ್ಲಿಯೂ ಅಗೌರವವಾಗದಂತೆ ಸಂಬಂಧಿಸಿದ ನೀತಿಸಂಹಿತೆಗಳನ್ನು ಅನುಸರಿಸಿ ಗಣ್ಯರ ಗೌರವ ಕಾಪಾಡುವುದು ಎಲ್ಲರ ಕರ್ತವ್ಯ.

❑

ಬಡವರಿಗೆ ಭಾರವಾದ ಆಯವ್ಯಯ

ರಾಜ್ಯದ ಜನಸಂಖ್ಯೆ 4.50 ಕೋಟಿ ಮೀರಿದೆ. ರಾಜ್ಯದ 29193 ಗ್ರಾಮಗಳ ಗ್ರಾಮೀಣ ಜನಸಂಖ್ಯೆ 3.11 ಕೋಟಿ ಮೀರಿದೆ. ರಾಜ್ಯದ 306 ನಗರಗಳ ನಗರ ಜನಸಂಖ್ಯೆ 1.40 ಕೋಟಿ ಮೀರಿದೆ. ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಶೇಕಡಾ 80ರಷ್ಟು ಜನರು ರೈತ ಹಾಗೂ ರೈತ ಕಾರ್ಮಿಕರಿದ್ದಾರೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರು ಇತ್ಯಾದಿ ಬಡವರ ಜನಸಂಖ್ಯೆಯೇ ರಾಜ್ಯದಲ್ಲಿ ಹೆಚ್ಚಾಗಿದೆ. ಈ ರಾಜ್ಯದ ಒಟ್ಟಾರೆ ಜನತೆ ಸರಕಾರಕ್ಕೆ ಪ್ರತಿವರ್ಷ ಮಿತಿ ಮೀರಿ ಹೆಚ್ಚೆಚ್ಚು ರೆವಿನ್ಯೂ ಕಂದಾಯ ಕರವನ್ನು ತೆತ್ತುತ್ತಿದೆ. ಸ್ವಾಂತಂತ್ರ್ಯ ಪೂರ್ವ ಪಾಳೇಗಾರ ಸರಕಾರಗಳು ಜನತೆಯನ್ನು ಸುಲಿದು ಆಡಳಿತಕ್ಕಾಗಿಯೇ ಸಂಪೂರ್ಣ ಹಣವನ್ನು ವೆಚ್ಚ ಮಾಡಿ ಜನತೆಯ ಅಭಿವೃದ್ಧಿಯನ್ನು ಕಡೆಗಣಿಸಿದ ಮಾದರಿಯಲ್ಲಿಯೇ ಇಂದಿನ ಪ್ರಜಾ ಸರಕಾರಗಳು ಜನತೆಯಿಂದ ಹೇರಳವಾದ ಕರವನ್ನು ವಸೂಲು ಮಾಡಿ ಆಡಳಿತಕ್ಕಾಗಿಯೇ ಹೆಚ್ಚು ವೆಚ್ಚ ಮಾಡುತ್ತ ಸರ್ವಜನರ ಸರ್ವಾಂಗೀಣ ಅಭಿವೃದ್ಧಿಯನ್ನು ಕಡೆಗಣಿಸುತ್ತ ಹೊರಟಿರುವುದು ಜನತೆಯ ದುರ್ದೈವ.

ರಾಜಸ್ವ ತೆರಿಗೆ ಮೂಲಗಳಾದ 1) ನಿಗಮ ತೆರಿಗೆಯ ಹೊರತು ವರಮಾನದ ಮೇಲಿನ ತೆರಿಗೆ, 2) ವ್ಯವಸಾಯ ವರಮಾನದ ಮೇಲಿನ ತೆರಿಗೆ, 3) ವರಮಾನ ಮತ್ತು ವ್ಯಯಗಳ ಮೇಲಿನ ತೆರಿಗೆ, 4) ಭೂಕಂದಾಯ, 5) ಮುದ್ರಾಂಕ ಮತ್ತು ನೋಂದಣಿ ಶುಲ್ಕ, 6) ಸಂಪತ್ತಿ ಶುಲ್ಕ, 7) ಕೃಷಿ ಜಮೀನು ಬಿಟ್ಟು ಸ್ಥಿರ ಆಸ್ತಿಗಳ ಮೇಲೆ ತೆರಿಗೆ, 8) ರಾಜ್ಯದ ಅಬಕಾರಿ ತೆರಿಗೆ, 9) ಮಾರಾಟ ತೆರಿಗೆ, 10) ವಾಹನ ತೆರಿಗೆ, 11) ಸರಕುಗಳ ಮತ್ತು ಪ್ರಯಾಣಿಕರ ಮೇಲೆ ತೆರಿಗೆ, 12) ವಿದ್ಯುಚ್ಛಕ್ತಿಯ ಮೇಲೆ ತೆರಿಗೆ ವ ಶುಲ್ಕ, 13) ಸರಕು ಮತ್ತು ಸೇವೆಗಳ ಮೇಲಣ ಇತರೆ ತೆರಿಗೆ ವ ಶುಲ್ಕ, ಈ ಹದಿಮೂರು ಮೂಲಗಳಿಂದ 96-97ರಲ್ಲಿ 6490.31 ಕೋಟಿ, 97-98ರಲ್ಲಿ 7539.17 ಕೋಟಿ, 98-99ರಲ್ಲಿ 7717.10 ಕೋಟಿ, 99-2000ದಲ್ಲಿ 8977.22 ಕೋಟಿ, ರೆವಿನ್ಯೂ ಆದಾಯವನ್ನು ಸರಕಾರ ರಾಜ್ಯದ ಜನತೆಯಿಂದ ವಸೂಲು ಮಾಡಿದ್ದು 2000-2001 ಚಾಲೂ ವರ್ಷದಲ್ಲಿ 10204.18 ಕೋಟಿ ಮೊತ್ತ ಕರವನ್ನು ವಸೂಲು ಮಾಡಲಿದೆ. ಈ

ರಾಜಸ್ವ ತೆರಿಗೆಯೊಂದಿಗೆ ತೆರಿಗೆ ರಹಿತ ಆದಾಯ ಬಡ್ಡಿ, ತೆರಿಗೆ ರಹಿತ ಆದಾಯಗಳಾದ ಸಾಮಾನ್ಯ ಸೇವೆ, ಸಾಮಾಜಿಕ ಸೇವೆ, ಆರ್ಥಿಕ ಸೇವೆಗಳ ಆದಾಯ, ಕೇಂದ್ರ ಸರಕಾರದಿಂದ ಸಹಾಯಾನುದಾನ ಹಾಗೂ ಕೇಂದ್ರ ಅಬಕಾರಿ ಶುಲ್ಕದಲ್ಲಿ ರಾಜ್ಯದ ಪಾಲು ಆದಾಯ, ಹೀಗೆ ಒಟ್ಟಾರೆ ರೆವಿನ್ಯೂ ಆದಾಯ ಪ್ರತಿವರ್ಷ ರಾಜ್ಯ ಸರಕಾರದ ಖಜಾನೆಗೆ ಹೆಚ್ಚು ಹೆಚ್ಚಾಗಿ ಹರಿದುಬರುತ್ತಿದ್ದು ಈ ಒಟ್ಟಾರೆ ರೆವಿನ್ಯೂ ಆದಾಯ 97-98ರಲ್ಲಿ 10613.40 ಕೋಟಿ, 98-99ರಲ್ಲಿ 11230.45 ಕೋಟಿ, 99-2000ರಲ್ಲಿ 13104.00 ಕೋಟಿ ಬಂದಿದ್ದು 2000-2001ರಲ್ಲಿ 15212.66 ಕೋಟಿ, ಬರಲಿದೆ. ಈ ರೆವಿನ್ಯೂ ಆದಾಯದಲ್ಲಿ 96-9ರಲ್ಲಿ ಬಂದ ಬಡ್ಡಿ 679.90 ಕೋಟಿ, ಕೊಟ್ಟ ಬಡ್ಡಿ 1331.9 ಕೋಟಿ, 97-98ರಲ್ಲಿ ಬಂದ ಬಡ್ಡಿ 567.96 ಕೋಟಿ, ಕೊಟ್ಟ ಬಡ್ಡಿ 1538.49 ಕೋಟಿ, 98-99ರಲ್ಲಿ ಬಂದ ಬಡ್ಡಿ 676.01 ಕೋಟಿ, ಕೊಟ್ಟ ಬಡ್ಡಿ 1783.55 ಕೋಟಿ, 99-2000ದಲ್ಲಿ ಬಂದ ಬಡ್ಡಿ 670.52 ಕೋಟಿ, ಕೊಟ್ಟ ಬಡ್ಡಿ 2039.57 ಕೋಟಿ, 2000-2001ರಲ್ಲಿ ಬರಲಿರುವ ಬಡ್ಡಿ 688.80 ಕೋಟಿ, ಕೊಡಲಿರುವ ಬಡ್ಡಿ 2392.59 ಕೋಟಿ ರೂಪಾಯಿ. ಹೀಗಿದೆ ಸರಕಾರದ ಬಡ್ಡಿ ವ್ಯವಹಾರ. ಈ ರೆವಿನ್ಯೂ ಆದಾಯದಲ್ಲಿ ರಾಜ್ಯ ನಿವೃತ್ತ ನೌಕರರ ವಿಶ್ರಾಂತಿ ವೇತನ ಮತ್ತು ವಿವಿಧ ಸಾಮಾನ್ಯ ಸೇವೆಗಾಗಿ 96-97ರಲ್ಲಿ 744.71 ಕೋಟಿ, 97-98ರಲ್ಲಿ 851.21 ಕೋಟಿ, 98-99ರಲ್ಲಿ 1018.74 ಕೋಟಿ, 99-2000ದಲ್ಲಿ 1484.61 ಕೋಟಿ ಕೊಟ್ಟಿದ್ದು 2000-2001ರಲ್ಲಿ 1636.64 ಕೋಟಿ ಕೊಡಬೇಕಾಗುತ್ತದೆ. ಇದೇ ಆದಾಯದಲ್ಲಿ ಪೊಲೀಸ್ ಇಲಾಖೆಗೆ 96-97ರಲ್ಲಿ 394.00 ಕೋಟಿ, 97-98ರಲ್ಲಿ 455.79 ಕೋಟಿ, 98-99ರಲ್ಲಿ 502.38 ಕೋಟಿ, 99-2000ದಲ್ಲಿ 669.30 ಕೋಟಿ, 2000-2001ರಲ್ಲಿ 695.10 ಕೋಟಿ, ಹೀಗೆ ಕೊಟ್ಟ ಹಾಗೂ ಕೊಡಲಿರುವ ವೆಚ್ಚವಿದೆ. ಇದೇ ಆದಾಯದಲ್ಲಿ ಸಾಮಾನ್ಯ ಶಿಕ್ಷಣ ಇಲಾಖೆಗೆ 96-97ರಲ್ಲಿ 1805.54 ಕೋಟಿ, 97-98ರಲ್ಲಿ 2057.98 ಕೋಟಿ, 98-99ರಲ್ಲಿ 2435.23 ಕೋಟಿ, 99-2000ದಲ್ಲಿ 2747.45 ಕೋಟಿ, 2000-2001ರಲ್ಲಿ 3472.71 ಕೋಟಿ ಕೊಟ್ಟಿದೆ ವ ಕೊಡಲಿದೆ. ಇದೇ ಆದಾಯದಲ್ಲಿ ರಾಜ್ಯದ ರೈತರಿಗೆ ಶಾಪವಾಗಿರುವ ವಿದ್ಯುತ್ ಇಲಾಖೆಗೆ 96-97ರಲ್ಲಿ 960.57 ಕೋಟಿ, 97-98ರಲ್ಲಿ 607.20 ಕೋಟಿ, 98-99ರಲ್ಲಿ 673.34 ಕೋಟಿ, 99-2000ದಲ್ಲಿ 445.38 ಕೋಟಿ, 2000-2001ರಲ್ಲಿ 883.39 ಕೋಟಿ ಕೊಡಲಾಗಿದೆ ವ ಕೊಡಲಾಗುತ್ತಿದೆ. ಹೀಗೆ ಈ ಆದಾಯ ಹಣದ ರಸ ಹೋಗಿ ಉಳಿದ ಸಿಪ್ಪೆ, ವ್ವಾಟೆ ಜನಸಾಮಾನ್ಯರಿಗೆ ಸೀಪಲು ಬಿಡಲಾಗುತ್ತಿದೆ.

ಬಡ್ಡಿ, ವಿಶ್ರಾಂತಿ ವೇತನ ಸೌಲಭ್ಯ, ಪೊಲೀಸ್ ಇಲಾಖಾ, ಶಿಕ್ಷಣ, ವಿದ್ಯುತ್ ಇಲಾಖೆಗೆ ಇಷ್ಟೊಂದು ನಿಖರವಾದ ಸಿಂಹಪಾಲು ಹಣವನ್ನು ರೆವಿನ್ಯೂ ಆದಾಯದಲ್ಲಿಂದ ಕೊಡುತ್ತಿದ್ದರೂ ಸರಕಾರಿ ನೌಕರರಿಗೆ ರೆವಿನ್ಯೂ ಆದಾಯದಲ್ಲಿಂದ ಸುಮಾರು ಶೇಕಡಾ 70ರಷ್ಟು ಮೊತ್ತವನ್ನು ಕೊಡುತ್ತಿದ್ದರೂ ಅವರಿಗೆ ಪ್ರತಿವರ್ಷ ಹಾಗೂ ಈ ವರ್ಷ ಹೆಚ್ಚಾಗಿ ಹೆಚ್ಚಿಸಿ ಕೊಡುವ ವೇತನಭತ್ಯೆಯೆಷ್ಟೆಂಬುದನ್ನು ಆಯವ್ಯಯ ಪತ್ರಿಕೆಗಳಲ್ಲಿ ಸರಕಾರ

ಬುದ್ಧಿಪೂರ್ವಕ ಗುಟ್ಟಾಗಿ ಇಟ್ಟು ಪ್ರಕಟಿಸುತ್ತಿಲ್ಲ. ಪ್ರತಿವರ್ಷ ಜನತೆ ಹೆಚ್ಚೆಚ್ಚು ರೆವಿನ್ಯೂ ಆದಾಯ ಕೊಡುತ್ತಿದ್ದರೂ ರೆವಿನ್ಯೂ ವೆಚ್ಚದಲ್ಲಿ ಸಾಮಾನ್ಯ, ಸಾಮಾಜಿಕ, ಆರ್ಥಿಕ ಹಾಗೂ ಸಹಾಯಾನುದಾನ ಸೇವೆಗಳಿಗೆ ನಿಗದಿಗೊಳಿಸಿದ ಬಜೆಟ್ ಮೊತ್ತದಲ್ಲಿ 96-97ರಲ್ಲಿ 555.02 ಕೋಟಿ, 97-98ರಲ್ಲಿ 1075.25 ಕೋಟಿ, 98-99ರಲ್ಲಿ 914.97 ಕೋಟಿ, 99-2000ದಲ್ಲಿ 713.78 ಕೋಟಿ ಮೊತ್ತವನ್ನು ವೆಚ್ಚ ಮಾಡಿಲ್ಲ. ಕೃಷಿ ಮತ್ತು ಕೃಷಿಗೆ ಸಂಬಂಧಿಸಿದ ಅಭಿವೃದ್ಧಿ, ಗ್ರಾಮೀಣ ಅಭಿವೃದ್ಧಿ, ಉದ್ಯಮ, ಖನಿಜ, ಪ್ರದೇಶಾಭಿವೃದ್ಧಿ, ಬೃಹತ್ ಮತ್ತು ಮಧ್ಯಮ ನೀರಾವರಿ ಅಭಿವೃದ್ಧಿ, ಹರಿಜನ-ಗಿರಿಜನ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಅಭಿವೃದ್ಧಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿಯನ್ನೊಳಗೊಂಡ ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ ಅಭಿವೃದ್ಧಿ ಇತ್ಯಾದಿ ಜನಪರ ಯೋಜನೆಗಳಿಗೆ ಬಜೆಟ್ ಪ್ರಕಾರ ಮೀಸಲಿಟ್ಟ ಹಣದಲ್ಲಿ 96-97ರಲ್ಲಿ 571.87 ಕೋಟಿ, 97-98ರಲ್ಲಿ 689.30 ಕೋಟಿ, 98-99ರಲ್ಲಿ 414.37 ಕೋಟಿ, 99-2000ದಲ್ಲಿ 252.26 ಕೋಟಿ ಮೊತ್ತವನ್ನು ವೆಚ್ಚಮಾಡಿಲ್ಲ. ಪ್ರತಿವರ್ಷ ನೂರಾರು ಕೋಟಿ ಹಣವನ್ನು ವೆಚ್ಚ ಮಾಡದೆ ಇರುವ ವಂಚನಾ ಸಂಪ್ರದಾಯ ನಡೆದೇ ಇದೆ. ಇದು ನಿಲ್ಲದೇ ಇದ್ದರೆ ಸಾರ್ವಜನಿಕರಿಗೆ ಸರಕಾರ ಮಾಡುವ ವಂಚನೆಯಿಂದ ಪಾರಾಗುವುದು ಪರಾಕಷ್ಟವಾಗುತ್ತದೆ. ಪ್ರತಿವರ್ಷ ಮಿತಿಮೀರಿ ರೆವಿನ್ಯೂ ಆದಾಯ ಸರಕಾರಕ್ಕೆ ಬರುತ್ತಿದ್ದರೂ ಅಭಿವೃದ್ಧಿಗೆ ಹಣ ವೆಚ್ಚ ಮಾಡದೆ ಕುಂಠಿತಗೊಳಿಸಿ ಆಡಳಿತ ಹಾಗೂ ಅಭಿವೃದ್ಧಿಯೇತರ ಕಾರ್ಯಕ್ಕೆ ಸಹ ಹಣ ಸಾಲದೆ ಸಿಕ್ಕಾಪಟ್ಟೆ ಸಾಲವನ್ನು ರಾಜ್ಯ ಸರಕಾರ ಮಾಡುತ್ತ 96-97ರಲ್ಲಿ 14043.04 ಕೋಟಿ, 97-98ರಲ್ಲಿ 15697.49 ಕೋಟಿ, 98-99ರಲ್ಲಿ 18721.02 ಕೋಟಿ, 99-2000ದಲ್ಲಿ 21502.58 ಕೋಟಿ, 2000-2001ರಲ್ಲಿ 25477.98 ಕೋಟಿ ಸಾಲ (ಲಾಯಾಬಿಲಿಟಿ) ಹೊಂದಿದೆ ಮ ಹೊಂದಲಿದೆ. ಆದಾಗ್ಯೂ ರಾಜ್ಯದಲ್ಲಿ ಆಡಳಿತ ಹಾಗೂ ಅಭಿವೃದ್ಧಿ ಜನತೆಗೆ ಮಾರಕವಾಗಿರುವುದು ದಿನನಿತ್ಯದ ವಿವಿಧ ಪತ್ರಿಕೆಗಳ ಮುಖಾಂತರ ಪ್ರಕಟವಾಗುತ್ತಿರುವ ಚಿತ್ರ ಸುಸ್ಪಷ್ಟವಾಗಿದೆ. ಆಡಳಿತದಲ್ಲಿ ಪಕ್ಷಪಾತ, ತಾರತಮ್ಯ, ಸ್ವಾರ್ಥ, ಸ್ವಜನ ಪಕ್ಷಪಾತ, ಭ್ರಷ್ಟಾಚಾರ, ಅಧಿಕಾರ ದುರುಪಯೋಗ, ದುರಾಡಳಿತ, ದಬ್ಬಾಳಿಕೆ, ಶೋಷಣೆ, ರಸ್ತೆ ಅಪಘಾತ, ವಿವಿಧ ಕಾನೂನು ಉಲ್ಲಂಘನೆ, ಅಕ್ರಮ ಕಟ್ಟಡ, ದರೋಡೆ, ಅಕ್ರಮ ಸಾಗುವಳಿ, ಕೊಲೆ, ಸುಲಿಗೆ, ಅಕ್ರಮ ಆದಾಯ, ಮಾರಾಮಾರಿ, ಕೊಳ್ಳಿ, ಜಾತೀಯತೆಯ ದುಷ್ಟ ಪರಿಣಾಮ, ಮೋಸ, ವಂಚನೆ, ವಿವಿಧ ಅಪರಾಧ ಇತ್ಯಾದಿ ಸಾಮಾಜಿಕ ಮಾರಕ ಪೀಡೆಗಳು ಹೆಚ್ಚುತ್ತಲೇ ಇವೆ. ಅಭಿವೃದ್ಧಿಯಲ್ಲಿ ಪ್ರತಿವರ್ಷ ನಿಗದಿತ ಗುರಿ ಸಾಧಿಸದೆ ಇರುವುದು, ನಿಗದಿತ ಅಭಿವೃದ್ಧಿ ಹಣ ವೆಚ್ಚ ಮಾಡದೇ ಇರುವುದು, ಕಳ್ಳ ಕಾಮಗಾರಿ ಹೆಚ್ಚುತ್ತಿರುವುದು, ಕಾಮಗಾರಿಗಳಾಗದಿದ್ದರೂ ಆಗಿವೆಯೆಂದು ಖೊಟ್ಟಿ ಕಾಗದಪತ್ರ ಸೃಷ್ಟಿಸಿ ಹಣ ಎತ್ತಿಹಾಕುವುದು, ಟೆಂಡರ್ ಕರೆಯದೆ ತಮಗಿಷ್ಟ ಬಂದವರಿಗೆ ಕಾಮಗಾರಿ ಗುತ್ತಿಗೆ ಕೊಡುವುದು, ಸಕಾಲದಲ್ಲಿ ಕಾಮಗಾರಿಗಳಾಗದೇ ಇರುವುದು, ನಿಗದಿತ ಅಂದಾಜು ಮೊತ್ತಕ್ಕಿಂತ ಹೆಚ್ಚಿನ ಮೊತ್ತವನ್ನು ಕಾಮಗಾರಿ

ಗುತ್ತಿಗೆದಾರರಿಗೆ ಕೊಡುವುದು, ಸರಕು ಪಡೆಯದೆ ಹಣ ಖರ್ಚು ಹಾಕುವುದು ಅನೇಕ ವಿವಿಧ ಚುನಾಯಿತ ಪ್ರತಿನಿಧಿಗಳೇ ಕಂಟ್ರಾಕ್ಟರ್‌ರಾಗುವುದು ಅರ್ಹರಿಗೆ ಪ್ರಯೋಜನ ವಂಚನೆ, ಅನರ್ಹರಿಗೆ ಪ್ರಯೋಜನ, ಸಂಚಾರಕ್ಕೆ ಸುಗಮವಾದ ರಸ್ತೆಗಳಿಲ್ಲದಿರುವುದು, ಸಾಕಷ್ಟು ಕುಡಿಯುವ ನೀರಿನ ವ್ಯವಸ್ಥೆ ಇಲ್ಲದಿರುವುದು, ಸುಗಮ ಸಾರಿಗೆ ವ್ಯವಸ್ಥೆ ಇಲ್ಲದಿರುವುದು, ವೈದ್ಯರ ಹಾಗೂ ಔಷಧಿಗಳ ಕೊರತೆ ಹೆಚ್ಚುತ್ತಿರುವುದು, ವಿವಿಧ ಉದ್ಯಮಗಳ ನಾಶ, ನೀರಾವರಿ ಯೋಜನೆಗಳ ವೈಫಲ್ಯ, ರೈತರ ಫಸಲಿಗೆ ಯೋಗ್ಯ ಬೆಲೆ ಸಿಗದಿರುವುದು, ಶಾಲಾ ಕಾಲೇಜುಗಳಲ್ಲಿ ಡೊನೇಶನ್ ಹಾಗೂ ಅಕ್ರಮಗಳ ಹಾವಳಿ, ನಿಗದಿತ ಯೋಜನಾ ಮೊತ್ತದ ನಿರ್ಬಳಕೆ, ದುರ್ಬಳಕೆ, ದುಂದುವೆಚ್ಚ, ದುರುಪಯೋಗ, ಕರ್ತವ್ಯಚ್ಯುತಿ, ದಾಕ್ಷಿಣ್ಯಪರ ಪ್ರವೃತ್ತಿ, ತಪ್ಪಿತಸ್ಥರನ್ನು ಪತ್ತೆಹಚ್ಚದಿರುವುದು, ತಪ್ಪಿತಸ್ಥರಿಗೆ ತಕ್ಕ ಶಿಕ್ಷೆ ಕೊಡದಿರುವುದು ಇತ್ಯಾದಿ ನ್ಯೂನತೆ, ಲೋಪದೋಷ ಮಾರಕಗಳು ಸರ್ವಾಂಗೀಣ ಅಭಿವೃದ್ಧಿಗೆ ಗಂಡಾಂತರಕಾರಿಯಾಗಿದ್ದು ಒಟ್ಟಿನ ಮೇಲೆ ರಾಜ್ಯದ ಆಡಳಿತ ಹಾಗೂ ಅಭಿವೃದ್ಧಿ ಸಂವಿಧಾನಬದ್ಧವೇ ಎಂಬುದು ಪ್ರಶ್ನಾರ್ಹವಾಗಿದೆ. ಈ ಹಿನ್ನೆಲೆಯಲ್ಲಿ ಹೊಸ ಸರಕಾರ ಕಣ್ಣು ತೆರೆದು ನೋಡಿ ರಾಜ್ಯದ ಉತ್ತಮ ಆಡಳಿತ ಹಾಗೂ ಅಭಿವೃದ್ಧಿಯತ್ತ ಗಮನಹರಿಸಿ ಸರಕಾರದ ಕಾರ್ಯದಲ್ಲಿ ಪ್ರವೃತ್ತರಾಗುವುದು ಎಲ್ಲರಿಗೂ ಒಳಿತು.

❑

ಬಜೆಟ್ ನಿಗದಿತ ವ್ಯಯ ಅಭಿವೃದ್ಧಿಗೆ ಅತ್ಯಗತ್ಯ

ಪ್ರತಿವರ್ಷ ಬಹುತೇಕ ಮಾರ್ಚ್ ತಿಂಗಳಲ್ಲಿ ರಾಜ್ಯ ಸರಕಾರ ವಿಧಾನಮಂಡಲದ ಬಜೆಟ್ ಅಧಿವೇಶನದಲ್ಲಿ ಮುಂದಿನ ವರ್ಷದ ಆಯವ್ಯಯವನ್ನು ಮಂಡಿಸುತ್ತದೆ. ಭಾರವಾದ ಪುಸ್ತಕಗಳ ಹೊರೆಯನ್ನೇ ಎಲ್ಲಾ ಶಾಸಕರಿಗೆ ಕೊಡಲಾಗುತ್ತಿದೆ. ಈ ಎಲ್ಲಾ ಪುಸ್ತಕಗಳ ಸಾರ ಅಥವಾ ಗುಟ್ಟನ್ನು ಒಳಗೊಂಡ ಅತಿ ಮಹತ್ವದ ಸುಮಾರು 38 ಪುಟಗಳ ವಾರ್ಷಿಕ ವಿತ್ತ ನಿರೂಪಣೆ (ಆಯವ್ಯಯ) ಪುಸ್ತಿಕೆಯನ್ನು ಕೊಡಲಾಗುತ್ತಿದೆ. ಈ ಪುಸ್ತಕಕ್ಕೆ ಅತಿ ಮಹತ್ವವಿದ್ದು ಸರಕಾರದ ವಿವಿಧ ಮೂಲಗಳ ಆಯದ ಮೊತ್ತ ವಿವಿಧ ಉದ್ದೇಶಗಳ ವ್ಯಯದ ಮೊತ್ತವನ್ನೊಳಗೊಂಡ ಮುಂದಿನ ವರ್ಷದ ಅಂದಾಜು ಆಯವ್ಯಯದ ಮೊತ್ತ, ಪ್ರಸ್ತುತ ವರ್ಷದ ಅಂದಾಜು ಹಾಗೂ ಪರಿಷ್ಕೃತ ಆಯವ್ಯಯದ ಮೊತ್ತ ಹಾಗೂ ಹಿಂದಿನ ವರ್ಷದಲ್ಲಿಯ ವಾಸ್ತವಿಕ ಆಯವ್ಯಯದ ಮೊತ್ತವನ್ನು ಶೀರ್ಷಿಕೆವಾರು ನಮೂದು ಮಾಡಲಾಗುತ್ತಿದೆ. ಪ್ರತಿವರ್ಷ ಆಯವ್ಯಯ ಮಂಡನೆ ಮಾಡಿದ ಕೂಡಲೆ ಮುಂದಿನ ವರ್ಷಕ್ಕಾಗಿ ತೋರಿಸಿದ ಶೀರ್ಷಿಕೆದಾರ ಅಂದಾಜು ಅಂಕಿ ಸಂಖ್ಯೆಗಳನ್ನಷ್ಟೇ ನೋಡಿ ತೃಪ್ತಿಗೊಂಡು ಬಜೆಟ್ ಪ್ರಶಂಸಿಸುವ ಹೊಗಳಿಕೆ ಒಂದು ಕಡೆಯಾದರೆ ಅತೃಪ್ತಿಗೊಂಡು ತಿರಸ್ಕಾರ ಟೀಕೆ ಮತ್ತೊಂದೆಡೆ ಶಾಸಕರಿಂದ ಸಾರ್ವಜನಿಕರಿಂದ ಹೊರಹೊಮ್ಮಿ ಬರುತ್ತದೆ. ಮುಂದಿನ, ಇಂದಿನ ಹಾಗೂ ಹಿಂದಿನ ವರ್ಷಗಳ ಎಲ್ಲಾ ವಾರ್ಷಿಕ ವಿತ್ತ ನಿರೂಪಣೆಗಳನ್ನು ಅಧ್ಯಯನ ಮಾಡಿ ನೋಡಿದರೆ ಪ್ರತಿ ಮುಂದಿನ ವರ್ಷ ಭಾರಿ ಅಭಿವೃದ್ಧಿಗಾಗಿ ಭಾರೀ ಮೊತ್ತವನ್ನು ತೆಗೆದಿಟ್ಟಿರುವುದಾಗಿ ಅತಿ ರಂಜಿತ ಅಂಕಿಸಂಖ್ಯೆಗಳನ್ನು ತೋರಿಸಿ ಜನತೆಗೆ ಹಾಗೂ ಶಾಸಕರಿಗೆ ಅತಿ ಆಸೆ ತೋರಿಸಲಾಗುತ್ತಿದೆ. ಮುಂದಿನ ವರ್ಷಕ್ಕಾಗಿ ತೋರಿಸಿದ ಯೋಜನೆ ಹಾಗೂ ಯೋಜನೆಗಳ ನಿಗದಿತ ಮೊತ್ತ ಕಾಗದದ ಕುದುರೆಯಾಗುತ್ತದೆ. ಮಾಯದ ಜಿಂಕೆಯಾಗುತ್ತದೆ. ಆಯವ್ಯಯದ ನಿಗದಿತ ಮೊತ್ತ ಆಯಾ ವರ್ಷದಲ್ಲಿ ಯಾವ ವರ್ಷವೂ ಸಂಪೂರ್ಣ ವೆಚ್ಚವಾಗದೆ ಇರುವುದು ಕರದಾತರ-ಜನತೆಯ ದುರ್ದೈವ. ಅಂದಾಜು ಆಯವ್ಯಯ, ಪರಿಷ್ಕೃತ ಆಯವ್ಯಯ ಹಾಗೂ ವಾಸ್ತವಿಕ ಆಯವ್ಯಯ ಹೀಗೆ ಈ ಮೂರು ವರ್ಷಗಳ ಎಲ್ಲಾ ಬಜೆಟ್ ಪುಸ್ತಕಗಳನ್ನು ಇಲ್ಲವೆ ಕನಿಷ್ಠ ಈ ಮೂರು ವರ್ಷಗಳ ವಿತ್ತ ನಿರೂಪಣೆ ಪುಸ್ತಕಗಳ

ಪುಟಗಳನ್ನಾದರೂ ತಿರುವಿ ಹಾಕಿದರೆ ಕಂಡುಬರುವುದು ಸರಕಾರ ಭಾರೀ ಹೇಳುವುದು, ಹೇಳಿದ್ದನ್ನು ಮಾಡದೆ ಇರುವುದು, ಕೊಟ್ಟ ಭರವಸೆಗಳೆಲ್ಲಾ ಬಹುತೇಕ ಹುಸಿಯಾಗಿಸಿ ಜನತೆಯನ್ನು, ಶಾಸಕರನ್ನು ವಂಚಿಸುತ್ತಿರುವುದು, ಕರ್ತವ್ಯಚ್ಯುತಿ ಹಾಗೂ ಕುಂಠಿತ ಅಭಿವೃದ್ಧಿ ಸುಸ್ಪಷ್ಟವಾಗುತ್ತದೆ.

ರಾಜ್ಯದ ಜನತೆಗೆ ವಿಶೇಷವಾಗಿ ಉಪಯುಕ್ತ ಯೋಜನೆಗಳಾದ ಶಿಕ್ಷಣ, ವೈದ್ಯಕೀಯ ಮತ್ತು ಜನಾರೋಗ್ಯ, ಕುಟುಂಬ ಕಲ್ಯಾಣ, ನೀರು ಪೂರೈಕೆ ಮತ್ತು ನೈರ್ಮಲ್ಯ, ವಸತಿ ನಿರ್ಮಾಣ, ನಗರಾಭಿವೃದ್ಧಿ, ಹರಿಜನ-ಗಿರಿಜನ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ, ಕಾರ್ಮಿಕ ಮತ್ತು ಉದ್ಯೋಗ, ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ, ಪೌಷ್ಟಿಕ ಆಹಾರ, ನೈಸರ್ಗಿಕ ವಿಕೋಪಗಳ ಬಗ್ಗೆ ಪರಿಹಾರ, ಇತರ ಸಾಮಾಜಿಕ ಸೇವೆ ಇತ್ಯಾದಿ ಸಾಮಾಜಿಕ ಸೇವೆಗಳಿಗೆ, ಕೃಷಿ ಭೂಸಾರ ಮತ್ತು ಜಲಸಂರಕ್ಷಣೆ, ಪಶುಸಂಗೋಪನೆ, ಹೈನಾಭಿವೃದ್ಧಿ, ಮೀನುಗಾರಿಕೆ, ಅರಣ್ಯ ಮತ್ತು ವನ್ಯಜೀವನ, ಆಹಾರ ದಾಸ್ತಾನು ಮತ್ತು ಉಗ್ರಾಣ, ಕೃಷಿ ಸಂಶೋಧನೆ ಮತ್ತು ಶಿಕ್ಷಣ, ಸಹಕಾರ, ಇತರ ಕೃಷಿ ಕಾರ್ಯಕ್ರಮ, ಕೃಷಿ ಮತ್ತು ಸಂಬಂಧಪಟ್ಟ ಚಟುವಟಿಕೆ, ವಿಶೇಷ ಗ್ರಾಮೀಣ ಅಭಿವೃದ್ಧಿ, ಕಾರ್ಯಕ್ರಮ, ಗ್ರಾಮೀಣ ಉದ್ಯೋಗ, ಭೂಸುಧಾರಣೆ, ಇತರೆ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ, ಗ್ರಾಮೋದ್ಯಮ ಮತ್ತು ಸಣ್ಣ ಉದ್ಯಮ, ಇತರ ಉದ್ಯಮ, ಉದ್ಯಮ ಮತ್ತು ಖನಿಜ, ರಸ್ತೆ ಮತ್ತು ಸೇತುವೆ, ರಸ್ತೆ ಸಾರಿಗೆ ಇತ್ಯಾದಿ ಆರ್ಥಿಕ ಸೇವೆಗಳಿಗೆ 1998-99ನೇ ವರ್ಷಕ್ಕೆ ಮೊದಲು ಹೇಳಿದ ಅಂದಾಜು ವ್ಯಯ ಮೊತ್ತ 7245.16 ಕೋಟಿ, ಆಮೇಲೆ ಹೇಳಿದ ಪರಿಷ್ಕೃತ ವ್ಯಯ ಮೊತ್ತ 7096.85 ಕೋಟಿ, ನಂತರ ಮಾಡಿದ ವಾಸ್ತವಿಕ ವ್ಯಯ ಮೊತ್ತ 6497.17 ಕೋಟಿ, ಹೀಗೆ 98-99ರ ಅಂದಾಜು ವ್ಯಯ ಮೊತ್ತವನ್ನು ವಾಸ್ತವಿಕವಾಗಿ 748.00 ಕೋಟಿ ವೆಚ್ಚವಾಗದೆ ಜನತೆಗೆ ಹಾಗೂ ಶಾಸಕಾಂಗಕ್ಕೆ ತೋರಿಸಿದ ವರದಿಯನ್ನು ಸರಕಾರ ನಿರಾಶೆಗೊಳಿಸದೆ ಇದನ್ನು ಶಾಸಕರು ಹಾಗೂ ಹೊಣೆಗಾರರು ಅರಿತು ಭವಿಷ್ಯದ ಬಗ್ಗೆ ಇನ್ನಾದರೂ ಚಿಂತಿಸುವುದಗತ್ಯ. 1999-2000ನೇ ವರ್ಷಕ್ಕೆ ಮೊದಲು ಹೇಳಿದ ಅಂದಾಜು ವ್ಯಯ ಮೊತ್ತ 8095.42 ಕೋಟಿ ಈಗ ಪರಿಷ್ಕೃತ ವ್ಯಯ ಮೊತ್ತ 7634.08 ಕೋಟಿ ತೋರಿಸಿ 361.34 ಕೋಟಿ ವೆಚ್ಚ ಮಾಡದಿರುವ ಮುನ್ಸೂಚನೆಯನ್ನು ಸರಕಾರ ಕೊಟ್ಟಿದ್ದು ಇದು ವಾಸ್ತವಿಕವಾಗಿ ಎಷ್ಟು ಕಡಿಮೆಯಾಗುವುದೆಂಬುದು 2001-2002ನೇ ಸಾಲಿನ ಮುಂದಿನ ವರ್ಷದ ಆಯವ್ಯಯ ಮಂಡಿಸಿದಾಗ ಮಾತ್ರ ಗೊತ್ತಾಗುವುದು. ಈ ಅಂಕಿಸಂಖ್ಯೆ ಕೆಲವು ಮಹತ್ವದ ಶೀರ್ಷಿಕೆಗಳಿಗೆ ಸಂಬಂಧಿಸಿದ ಸ್ಯಾಂಪಲ್ ಮಾತ್ರ.

ರೆವಿನ್ಯೂ ಲೆಕ್ಕದಲ್ಲಿ ಸಾಮಾನ್ಯ, ಸಾಮಾಜಿಕ, ಆರ್ಥಿಕ ಹಾಗೂ ಸಹಾಯಾನುದಾನ ಮತ್ತು ಅಂಶದಾನ ಸೇವೆಗಳಿಗಾಗಿ 1997-98ರಲ್ಲಿ ಅಂದಾಜು ವ್ಯಯ 11965.45 ಕೋಟಿ ಮಾಡುವುದಾಗಿ ಹೇಳಿದ್ದೇಕೆ ನಂತರ ಪರಿಷ್ಕೃತ ವ್ಯಯ 11833.20 ಕೋಟಿ ಮಾಡುವುದಾಗಿ ಹೇಳಿದ್ದೇಕೆ ಹಾಗೂ ನಂತರ ವಾಸ್ತವಿಕ ವ್ಯಯ 10890.21 ಕೋಟಿ

ವ್ಯಯ ಮಾಡಿ 1075.25 ಕೋಟಿ ವೆಚ್ಚ ಮಾಡದೆ ಕರ್ತವ್ಯಚ್ಯುತಿ ಮಾಡಿದ್ದೇಕೆ? ರೆವಿನ್ಯೂ ಲೆಕ್ಕದಲ್ಲಿ ಶೇಕಡಾ 70ರಷ್ಟು ವೇತನ, ವಿಶ್ರಾಂತಿ ವೇತನ, ಬಡ್ಡಿಗಾಗಿಯೇ ಹೋಗುತ್ತಿದ್ದರೂ ಸಹಸ್ರಾರು ಕೋಟಿ ಹಣವನ್ನು ಅಭಿವೃದ್ಧಿಗೆ ವೆಚ್ಚ ಮಾಡದೆ ಬಿಟ್ಟಿರುವುದು ಸರಕಾರ ಸಾರ್ವಜನಿಕರನ್ನು ವಂಚಿಸಿ ಘಸಾಯಿಸಿದಂತಾಗುವುದು ಇಲ್ಲಿ ಸುಸ್ಪಷ್ಟವಾಗಿದೆ. ಅಂತೆಯೇ 1998-99ರಲ್ಲಿ ಅಂದಾಜು ವ್ಯಯ 13360.58 ಕೋಟಿ ಮಾಡುವುದಾಗಿ ಹೇಳಿದ್ದೇಕೆ ಹಾಗೂ ನಂತರ ಪರಿಷ್ಕೃತ ವ್ಯಯ 13564.91 ಕೋಟಿ ಮಾಡುವುದಾಗಿ ಹೇಳಿದ್ದೇಕೆ ಹಾಗೂ ನಂತರ ವಾಸ್ತವಿಕ ವ್ಯಯ 12445.61 ಕೋಟಿ ಮಾಡಿ 914.96 ಕೋಟಿ ವ್ಯಯ ಮಾಡದೆ ಮತ್ತೆ ಕರ್ತವ್ಯಚ್ಯುತಿಯನ್ನು ಸರಕಾರ ಮಾಡಿದ್ದೇಕೆ? ಹೀಗೆ ಪ್ರತಿವರ್ಷ ಹೇಳುವುದೊಂದು ಮಾಡುವುದೊಂದು ಕರ್ತವ್ಯಚ್ಯುತಿ ಮಾಡುತ್ತ ಹೋದರೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಯದ್ವಾತದ್ವಾ ಆಯವ್ಯಯಕ್ಕೆ ಏನೆನ್ನಬೇಕು ಎಂಬುದನ್ನು ಶಾಸಕ ಮಂತ್ರಿ ಪ್ರಜಾಪ್ರತಿನಿಧಿಗಳೇ ಹೇಳಬೇಕು. ಹೆಚ್ಚುತ್ತಿರುವ ರೆವಿನ್ಯೂ ಆದಾಯ ಭಾರೀ ಕಡಿಮೆಯಾಗಿ ಸರಕಾರ ತಾನು ಮಾಡಬೇಕಾದ ಆಡಳಿತ ಅಭಿವೃದ್ಧಿಗೆ ಹಣವೇ ಇರದಿರುವುದರಿಂದ ಪ್ರತಿವರ್ಷ ಭಿಕ್ಷಾಪಾತ್ರೆಯನ್ನು ಹಿಡಿದು ಕೇಂದ್ರ ಸರಕಾರ, ಸರಕಾರಿ ನೌಕರ ಹಾಗೂ ಸಾರ್ವಜನಿಕರ ಎದುರು ಅನಿವಾರ್ಯವಾಗಿ ಹೋಗಲೇಬೇಕಾಗುತ್ತದೆ ಹಾಗೂ ಯಾವ್ಯಾವ ಮೂಲದಿಂದ ಎಷ್ಟೆಷ್ಟು ಸಾಲ ಹಾಗೂ ಮುಂಗಡ ಪಡೆಯಬೇಕಾಗುತ್ತದೆಂಬುದನ್ನು ಸಹ ಆಯವ್ಯಯ ಪತ್ರದಲ್ಲಿ ಹೇಳಲೇಬೇಕಾಗುತ್ತದೆ. ಹೀಗೆ ಪಡೆದ ಸಾಲ ಮತ್ತು ಮುಂಗಡದಲ್ಲಿ ನಿಗದಿತ ಯೋಜನೆಗಳಿಗೆ ಸಾಲ ಮತ್ತು ಮುಂಗಡವನ್ನು ವೆಚ್ಚ ಮಾಡಲೇಬೇಕಾಗುತ್ತದೆ. 97-98ರಲ್ಲಿ ಅಂದಾಜು ವ್ಯಯ ಪ್ರಕಾರ 1735.88 ಕೋಟಿ ಸಾಲ ಮುಂಗಡಕ್ಕೆ ವೆಚ್ಚ ಮಾಡುವುದಾಗಿ ಹೇಳಿದ್ದರೂ ಕೇವಲ 896.67 ಕೋಟಿ ಮೊತ್ತವನ್ನು ಬಟವಾಡೆ ಮಾಡಿ 839.21 ಕೋಟಿ ಹಣವನ್ನು ಬಟವಾಡೆ ಮಾಡಿರುವುದಿಲ್ಲ. ಅಂತೆಯೇ 98-99ರಲ್ಲಿ 2008.38 ಕೋಟಿ ಅಂದಾಜು ಸಾಲ ಮುಂಗಡವನ್ನು ವೆಚ್ಚ ಮಾಡುವುದಾಗಿ ಹೇಳಿ ವಾಸ್ತವಿಕವಾಗಿ ಕೇವಲ 695.74 ಕೋಟಿ ಬಟವಾಡೆ ಮಾಡಿ 1312.64 ಕೋಟಿ ಮೊತ್ತವನ್ನು ಬಟವಾಡೆ ಮಾಡದೆ ಬಿಡಲಾಗಿದೆ. 99-2000 ಸಾಲಿನಲ್ಲಿ 081.88 ಕೋಟಿ ಸಾರ್ವಜನಿಕ ಸಾಲ ಮತ್ತು ಸಾಲ ಮುಂಗಡ ಮೊತ್ತವನ್ನು ಅಂದಾಜು ಬಟವಾಡೆ ಮಾಡುವುದಾಗಿ ಹೇಳಿ ಪರಿಷ್ಕೃತ ವ್ಯಯ ಮೊತ್ತ ಕೇವಲ 894.41 ಕೋಟಿ ಬಟವಾಡೆ ಮಾಡುವುದಾಗಿ ಹೇಳಿ 1187.46 ಕೋಟಿ ಸಾರ್ವಜನಿಕ ಸಾಲ ವ ಸಾಲ ಮುಂಗಡ ಮೊತ್ತವನ್ನು ಬಟವಾಡೆ ಮಾಡದಿರುವುದಾಗಿ ಸರಕಾರದ ಅಧಿಕೃತ ವಿತ್ತ ನಿರೂಪಣೆಯಲ್ಲಿ ಹೇಳಲಾಗಿದೆ. ಇದು ಹೀಗೆಯೇ ನಡೆದುಬಂದಿರುವ ಆಡಳಿತ ಅಭಿವೃದ್ಧಿಯಲ್ಲಿಯ ಲೋಪ - ದೋಷ, ವಂಚನೆ - ಮೋಸ ಹಾಗೂ ಅಭಿವೃದ್ಧಿಯ ಕುಂಠಿತ ಅನೀತಿ. ಇದು ಹೀಗೆಯೇ ಮುಂದುವರೆದರೆ ಪ್ರತಿವರ್ಷ ವಿಧಾನಮಂಡಲಕ್ಕೆ ಸಲ್ಲಿಸುವ ಆಯವ್ಯಯ ಪತ್ರ ಗಾಳಿಗೋಪುರ ತಮಾಷೆ, ನಕಲಿ ಬಂಗಾರ, ವಂಚನೆ - ಪತ್ರವಾಗುವುದಿಲ್ಲವೇ? ಬಜೆಟ್ ಮೇಲಿನ ಚರ್ಚೆ ಅರ್ಥಪೂರ್ಣವಾಗಬೇಕು. ಆಯವ್ಯಯ ಪತ್ರ ಸಂಬಂಧಿಸಿದ ಮೂರು

ವರ್ಷಗಳ ವಾರ್ಷಿಕ ವಿತ್ತ ನಿರೂಪಣೆಗಳಲ್ಲಿಯ ಎಲ್ಲಾ ಲೆಕ್ಕ ಶೀರ್ಷಿಕೆಗಳ ಅಂದಾಜು, ಪರಿಷ್ಕೃತ ಹಾಗೂ ವಾಸ್ತವಿಕ ವ್ಯಯಗಳ ಮೊತ್ತವನ್ನು ಅಭ್ಯಸಿಸಿ ವಿಧಾನಮಂಡಲದಲ್ಲಿ ಶಾಸಕರು ಚರ್ಚಿಸಿದರೆ ಮಾತ್ರ ನಿಜವಾದ ಬಣ್ಣ ಬಯಲಿಗೆ ಬರಲಿಕ್ಕೆ ಸಾಧ್ಯವಿದೆ ಹಾಗೂ ಸೂಕ್ತ ಪರಿಹಾರ ಸೂತ್ರವನ್ನು ಕಂಡುಹಿಡಿಯಲಿಕ್ಕೆ ಸಾಧ್ಯವಿದೆ. ಈ ಹಿನ್ನೆಲೆಯಲ್ಲಿ ಶಾಸಕರೆಲ್ಲರೂ ಪಕ್ಷಭೇದ ಮರೆತು ಚರ್ಚಿಸಿ, ಸರಕಾರವನ್ನು ತರಾಟೆಗೆ ತೆಗೆದುಕೊಂಡರೆ ಅದು ಸಾರ್ಥಕ. ಇಲ್ಲವಾದರೆ ಪ್ರಜಾಸತ್ತೆಯ ಅವಹೇಳನ. ಸರಕಾರ ಈ ದಿಶೆಯಲ್ಲಿ ಗಮನಹರಿಸುವುದು ಕೂಡ ಅಗತ್ಯ.

❑

ಪ್ರಜಾಪ್ರತಿನಿಧಿಗಳ ಮೂಲ ಗುರಿ ಯಾವುದು?

ರಾಜ್ಯಾದ್ಯಂತ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ, ಜಿಲ್ಲಾ ಪಂಚಾಯತಿಗಳಿಗೆ ಚುನಾವಣೆ ನಡೆದು ಅಸಂಖ್ಯಾತ ಜನಪ್ರತಿನಿಧಿಗಳು ಆರಿಸಿ ಬಂದಿದ್ದಾರೆ. ಅವರೆಲ್ಲಾ ಯಾವುದೇ ರಾಜಕೀಯ ಪಕ್ಷಕ್ಕೆ ಸಂಬಂಧಿಸಿದ್ದರೂ ಅವರೆಲ್ಲರ ಮೂಲ ಘನ ಉದ್ದೇಶ ಗ್ರಾಮಾಭಿವೃದ್ಧಿಯ ಸಾಧನೆ. ಈ ಗ್ರಾಮಾಭಿವೃದ್ಧಿಯನ್ನು ಸಾಧಿಸುವಲ್ಲಿ ಗ್ರಾಮ, ತಾಲ್ಲೂಕು, ಜಿಲ್ಲಾ ಪಂಚಾಯತಿಯ ಚುನಾಯಿತ ಸದಸ್ಯರು, ಶಾಸಕರು, ಸಂಸದರು, ಜಿಲ್ಲಾ ಉಸ್ತುವಾರಿ ಮಂತ್ರಿಗಳು ಹಾಗೂ ಗ್ರಾಮಾಭಿವೃದ್ಧಿ ಪಂಚಾಯತ್ ರಾಜ್ಯ ಸಚಿವರು ಇವರೆಲ್ಲರ ಮೇಲೆ ಮುಖ್ಯಮಂತ್ರಿಗಳು ಹೀಗೆ ಇವರೆಲ್ಲರ ಮೇಲೆ ಮುಂದಿನ ಐದು ವರ್ಷಗಳ ಅವಧಿಯಲ್ಲಿ ಹೆಚ್ಚಿನ ಜವಾಬ್ದಾರಿ ಇದೆ. ಪ್ರತಿಯೊಬ್ಬ ಸದಸ್ಯರಾಗಲೀ ಪದಾಧಿಕಾರಿಗಳಾಗಲೀ ಅಥವಾ ಅಧಿಕಾರಿಯೇ ಆಗಲೀ ಅವರೆಲ್ಲರೂ ಪ್ರಾಮಾಣಿಕರಾಗಿ, ನಿಸ್ವಾರ್ಥಿಗಳಾಗಿ, ಪಕ್ಷಪಾತಿಗಳಾಗದೆ, ಸ್ವಾರ್ಥಿಗಳಾಗದೆ, ಭ್ರಷ್ಟರಾಗದೆ, ಅಧಿಕಾರ ದುರುಪಯೋಗ ಮಾಡದೆ, ದುರಾಡಳಿತ ಮಾಡದೆ, ಜಾತ್ಯಾತೀತರಾಗಿ ಸಮರ್ಥರಾಗಿ, 'ದೇಶ ಸೇವೆಯೇ ಈಶ ಸೇವೆ' ಎಂದು ಕಾರ್ಯನಿರ್ವಹಿಸಬೇಕಾಗುತ್ತದೆ. ಇಲ್ಲಿಯವರೆಗೂ ನಡೆದು ಬಂದಿರುವ ಗ್ರಾಮಾಭಿವೃದ್ಧಿ ಪಂಚಾಯತ್ ರಾಜ್ಯ ಆಡಳಿತದಲ್ಲಿ ಮಾರಕವಾದ ಭ್ರಷ್ಟಾಚಾರ, ಜಾತೀಯತೆ, ಸ್ವಾರ್ಥ, ಪಕ್ಷಪಾತ, ಸ್ವಜನ ಪಕ್ಷಪಾತ, ಅಧಿಕಾರ ದುರುಪಯೋಗ, ಅದಕ್ಷತೆ, ದುರಾಡಳಿತ, ದುಂದುಗಾರಿಕೆಗಳು ಅನೇಕ ಕಡೆ ನಡೆದಿರುವುದು ಜನಾಭಿಪ್ರಾಯ, ಪತ್ರಿಕಾ ವರದಿ, ತನಿಖಾ ವರದಿ, ಸಿಎಜಿ ವರದಿ, ಆಡಿಟ್ ವರದಿ ಇತ್ಯಾದಿಗಳ ಮುಖಾಂತರ ವ್ಯಕ್ತವಾಗಿರುವುದು ಸುಸ್ಪಷ್ಟವಿದೆ. ಅನೇಕರು ಇದಕ್ಕೆ ಅಪವಾದವಾಗಿ ಗ್ರಾಮೀಣ ಅಭಿವೃದ್ಧಿಗೆ ಅಹೋರಾತ್ರಿ ಶ್ರಮವಹಿಸಿ ಸರ್ವಾಂಗೀಣ ಗ್ರಾಮೀಣ ಅಭಿವೃದ್ಧಿ ಸಾಧಿಸಿದವರೂ ಇದ್ದಾರೆ. ರಾಜ್ಯ ಸರಕಾರದ ಅಧಿಕೃತ ವಾರ್ಷಿಕ ವಿತ್ತ ನಿರೂಪಣೆಗಳನ್ನು ಹಾಗೂ ಸಿಎಜಿ ವರದಿಗಳನ್ನು ಆಳವಾಗಿ ಅಭ್ಯಾಸ ಮಾಡಿದರೆ ಕಂಡುಬರುವುದು ಪಂಚಾಯತಿಗಳ, ಪಂಚಾಯತ್ ಗ್ರಾಮೀಣ ಅಭಿವೃದ್ಧಿಗೆ ಸಂಬಂಧಿಸಿದ ಇಲಾಖೆಗಳ, ಪಂಚಾಯತ್ ರಾಜ್ ಗ್ರಾಮೀಣ ಅಭಿವೃದ್ಧಿ ಮಂತ್ರಿಗಳ, ಜಿಲ್ಲಾ

ಉಸ್ತುವಾರಿ ಮಂತ್ರಿಗಳ ಹಾಗೂ ಸಂಬಂಧಿಸಿದ ಹೊಣೆಗಾರ ಎಲ್ಲಾ ಹಂತದ ಅಧಿಕಾರಿಗಳ ಅದಕ್ಷತೆ, ಅಸಮರ್ಥತೆ, ಕರ್ತವ್ಯಚ್ಯುತಿ, ಬೇಜವಾಬ್ದಾರಿ ಯಥಾವತ್ತಾಗಿ ನಿರಾತಂಕವಾಗಿ ನಡೆದು ಬಂದು ಗ್ರಾಮೀಣ ಅಭಿವೃದ್ಧಿ ಕುಂಠಿತವಾಗುತ್ತ ಸಾಧಿಸಬೇಕಾದ ಆಯವ್ಯಯ ನಿಗದಿ ಆರ್ಥಿಕ ಗುರಿ ಹಾಗೂ ಭೌತಿಕ ಗುರಿ ಸಾಧಿಸುವಲ್ಲಿ ತಪ್ಪಿರುವುದು ಕಂಡುಬಂದಿದೆ. ಪ್ರತಿವರ್ಷ ಶಾಸಕಾಂಗದಿಂದ ಅಂಗೀಕಾರವಾದ ನಿರ್ದಿಷ್ಟ ಆರ್ಥಿಕ ಗುರಿ ಹಾಗೂ ಭೌತಿಕ ಗುರಿ ಸಾಧಿಸುತ್ತಿರುವುದಿಲ್ಲ ಏಕೆ? ಇದಕ್ಕೆ ಕಾರಣರಾರು? ಅಂಥವರ ಮೇಲೆ ಏನು ಕ್ರಮ ತೆಗೆದುಕೊಳ್ಳಲಾಗುತ್ತಿದೆ? ಎಂದು ಕೇಳಿದರೆ ಅದಕ್ಕೆ ಉತ್ತರವೇ ಯಾರಿಗೂ ದೊರೆಯದು.

ಸರಕಾರಿ ಇಲಾಖೆ ಹಾಗೂ ಪಂಚಾಯತ್ ರಾಜ್ ಗ್ರಾಮೀಣ ಅಭಿವೃದ್ಧಿ ವ್ಯಾಪ್ತಿಗೆ ಲೋಕೋಪಯೋಗಿ ಕಾಮಗಾರಿ, ಸಾಮಾನ್ಯ ಶಿಕ್ಷಣ, ಕ್ರೀಡಾ ಕಾರ್ಯಕ್ರಮಗಳು ಮತ್ತು ಯುವಜನ ಸೇವೆಗಳು, ವೈದ್ಯಕೀಯ ಮತ್ತು ಜನಾರೋಗ್ಯ, ಕುಟುಂಬ ಕಲ್ಯಾಣ, ಗೃಹನಿರ್ಮಾಣ, ಹರಿಜನ-ಗಿರಿಜನ ಮತ್ತು ಇತರ ಹಿಂದುಳಿದ ವರ್ಗಗಳ ಕಲ್ಯಾಣ, ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ, ಸಸ್ಯಸಂಗೋಪನೆ, ಭೂಸಾರ ಮತ್ತು ಜಲಸಂರಕ್ಷಣೆ, ಪಶುಸಂಗೋಪನೆ, ಮೀನುಗಾರಿಕೆ, ಅರಣ್ಯ ಮತ್ತು ವನ್ಯಜೀವನ, ಗ್ರಾಮೀಣ ಅಭಿವೃದ್ಧಿಗೆ ವಿಶೇಷ ಕಾರ್ಯಕ್ರಮ, ಗ್ರಾಮೀಣ ಉದ್ಯೋಗ, ಇತರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ, ಸಣ್ಣ ನೀರಾವರಿ, ಗ್ರಾಮೋದ್ಯಮ ಮತ್ತು ಸಣ್ಣ ಉದ್ಯಮ, ಉದ್ಯಮಗಳು, ಸಚಿವಾಲಯ, ಆರ್ಥಿಕ ಸೇವೆ ಹೀಗೆ ಇಪ್ಪತ್ತು ಶೀರ್ಷಿಕೆಗಳ ವಿವಿಧ ಇಲಾಖೆಗಳು ಬರುತ್ತವೆ. ಈ ಇಲಾಖೆಗಳಿಗೆ ಅನೇಕ ಮಂತ್ರಿಗಳೂ ಇದ್ದಾರೆ. ಈ ಎಲ್ಲಾ ಸಾಮಾಜಿಕ, ಸಾಮಾನ್ಯ ಹಾಗೂ ಆರ್ಥಿಕ ಸೇವೆಗಳಿಗೆ ರೆವಿನ್ಯೂ ಲೆಕ್ಕದಲ್ಲಿ ಸಹಸ್ರಾರು ಕೋಟಿ ಹಣವನ್ನು ಒದಗಿಸುತ್ತಿದ್ದು ನಿಗದಿತ ಆ ಹಣವನ್ನೆಲ್ಲಾ ಪ್ರತಿವರ್ಷ ಸರಕಾರಿ ಇಲಾಖೆ ಹಾಗೂ ಅಭಿವೃದ್ಧಿ ಪಂಚಾಯತ್ ರಾಜ್ ಸಂಸ್ಥೆಗಳು ವೆಚ್ಚ ಮಾಡದೆ ಅಭಿವೃದ್ಧಿ ಕುಂಠಿತಗೊಳಿಸುತ್ತಿದ್ದು ಈ ಗುಂಡಾಂತರಕಾರಿ ಲೋಪ ಹಾಗೂ ಚ್ಯುತಿಗೆ ತೆರೆ ಎಳೆದು ಇನ್ನು ಮುಂದಾದರೂ ನಿಗದಿತ ಹಣ ವೆಚ್ಚಮಾಡಿ ನಿಗದಿತ ಆರ್ಥಿಕ ಹಾಗೂ ಭೌತಿಕ ಗುರಿಯನ್ನು ಹೊಣೆಗಾರರು ಸಾಧಿಸಲೇಬೇಕೆಂಬ ಅರಿವು ಸಂಬಂಧಿಸಿದವರಿಗೆ ಇರುವುದು ಒಳ್ಳೆಯದು. ಜಿಲ್ಲಾ ಪಂಚಾಯತಿ ಹಾಗೂ ಸರಕಾರಿ ಈ ಇಪ್ಪತ್ತು ಇಲಾಖೆಗಳಿಗೆ ಸಂಬಂಧಿಸಿದಂತೆ ಜಿಲ್ಲಾ ಪಂಚಾಯತಿಗಳಲ್ಲಿ 3,39,964, ಹುದ್ದೆಗಳು ಇವೆ. ಇವರೆಲ್ಲರಿಗೆ 2000-2001ರಲ್ಲಿ ಕೊಡುವ ವೇತನ ಭತ್ಯೆಯ ಮೊತ್ತ 2798.11 ಕೋಟಿ. ಈ ಇಪ್ಪತ್ತು ಶೀರ್ಷಿಕೆ ಇಲಾಖೆಯಲ್ಲಿರುವ ಸರಕಾರಿ ಹುದ್ದೆಗಳ ಸಂಖ್ಯೆ 96,564. ಇವರಿಗೆ ಕೊಡುವ ವೇತನ ಭತ್ಯೆಯ ಮೊತ್ತ ಸಿಗಲಾರದು. ಒಟ್ಟಿನ ಮೇಲೆ ಈ ಇಪ್ಪತ್ತು ಶೀರ್ಷಿಕೆ ಇಲಾಖೆಗಳಲ್ಲಿ ಸರಕಾರಿ ಹಾಗೂ ಜಿಲ್ಲಾ ಪಂಚಾಯತಿ ವ್ಯಾಪ್ತಿಯಲ್ಲಿ ಒಟ್ಟು 4,36,528

ಹುದ್ದೆಗಳಿವೆ. ಈ ಇಪ್ಪತ್ತು ಇಲಾಖೆಗಳಿಗೆ 2000-2001 ಆಯವ್ಯಯದಲ್ಲಿ ನಿಗದಿಗೊಳಿಸಿದ ರೆವಿನ್ಯೂ ಲೆಕ್ಕದ ಮೊತ್ತ 7708.59 ಕೋಟಿ. ಈ ರೆವಿನ್ಯೂ ವೆಚ್ಚದ ಮೊತ್ತದಲ್ಲಿ ಎಷ್ಟೇ ಮೊತ್ತ ವೇತನಭತ್ಯೆಗೆ ನಿಗದಿತ ಅಂದಾಜು-ವೆಚ್ಚ ಆಯವ್ಯಯ ಮೀರಿದರೂ ಅಡ್ಡಿಯಿಲ್ಲ. ಆದರೆ ಜನಪರ ಸಾಮಾನ್ಯ, ಸಾಮಾಜಿಕ ಹಾಗೂ ಆರ್ಥಿಕ ಸೇವೆಗಳಿಗೆ ನಿಗದಿತ ಮೊತ್ತವನ್ನು ಸಂಪೂರ್ಣವಾಗಿ ವೆಚ್ಚ ಮಾಡಿ ಸರ್ವಾಂಗೀಣ ಅಭಿವೃದ್ಧಿ ಸಾಧಿಸುವಲ್ಲಿ ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳ ಕಲ್ಯಾಣ, ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಪ್ರಯೋಜನದಾರರಿಗೆ ಸಿಗಬೇಕಾದ ಸೌಲಭ್ಯ, ಸವಲತ್ತು, ಸಹಾಯ ಇತ್ಯಾದಿಗಳನ್ನು ವಿವಿಧ ಹಂತದ ಚುನಾಯಿತ ಸದಸ್ಯರು ತಮ್ಮ ತಮ್ಮ ಅವಧಿಯಲ್ಲಿ ಒದಗಿಸಿಕೊಟ್ಟರೆ ಅವರು ಚುನಾಯಿತರಾದದ್ದಕ್ಕೂ ಹಾಗೂ ಜನತೆ ವಿಶ್ವಾಸವಿಟ್ಟು ಮತ ಕೊಟ್ಟದ್ದಕ್ಕೂ ಸಾರ್ಥಕವಾಗಬಲ್ಲುದು. ಸಾಮಾನ್ಯ ಸಾಮಾಜಿಕ ಹಾಗೂ ಆರ್ಥಿಕ ಸೇವೆಗಳಿಗೆ ನಿಗದಿಗೊಳಿಸಿದ್ದ ರೆವಿನ್ಯೂ ವೆಚ್ಚ 1998-99ರಲ್ಲಿ 6219.97 ಕೋಟಿ ಮೊತ್ತದಲ್ಲಿ ಕೆಲವು ಸೇವೆಗಳಿಗೆ ಬಜೆಟ್ ಮೀರಿ ಅಧಿಕ ವೆಚ್ಚಮಾಡಿದ್ದರೂ ವೆಚ್ಚ ಮಾಡದೆ ಬಿಟ್ಟ ಒಟ್ಟಾರೆ ಮೊತ್ತ 844.37 ಕೋಟಿ, 1999-2000 ದಲ್ಲಿ 6743.69 ಕೋಟಿ ಅಂದಾಜು ವೆಚ್ಚ ನಿಗದಿ ಮಾಡಿದ್ದರೂ ಅದರಲ್ಲಿ ಸಹ ಕೆಲವು ಸೇವೆಗಳಿಗೆ ಬಜೆಟ್ ಮೀರಿ ಅಧಿಕ ವೆಚ್ಚ ಮಾಡಿದ್ದರೂ ವೆಚ್ಚ ಮಾಡದೆ ಬಿಟ್ಟ ಒಟ್ಟಾರೆ ಮೊತ್ತ 433.26 ಕೋಟಿ, ಈ ಮೂಲಕ ಸಂಪ್ರದಾಯ ಹಿಂದಿನಿಂದ ಯಥಾವತ್ತಾಗಿ ನಿರಾತಂಕವಾಗಿ ನಡೆದು ಬರುತ್ತಿದ್ದರೂ ಈ ಚ್ಯುತಿಯನ್ನು ಸರಕಾರದ ವಾರ್ಷಿಕ ವರದಿ, ವಿತ್ತ ನಿರೂಪಣೆ, ಆಯವ್ಯಯ ಚಿತ್ರ, ಸಿ.ಎ.ಜಿ. ವರದಿ, ಪತ್ರಿಕಾ ವರದಿ ಹಾಗೂ ಸಾರ್ವಜನಿಕರು ಎತ್ತಿ ತೋರಿಸುತ್ತ ಬಂದಿದ್ದರೂ ಅದೆಲ್ಲಾ ಅರಣ್ಯರೋದನವಾಗುತ್ತಿರುವುದನ್ನು ನೋಡಿದರೆ ಪಂಚಾಯತ್ ರಾಜ್ಯ ಸಂಸ್ಥೆಗಳ ಎಲ್ಲಾ ಹಂತದ ಚುನಾಯಿತ ಪ್ರತಿನಿಧಿಗಳು, ಶಾಸಕರು, ಸಂಸದರು, ಮಂತ್ರಿಗಳು ಹಾಗೂ ಸರಕಾರ ತಮ್ಮ ತಮ್ಮ ಕರ್ತವ್ಯಪಾಲನೆಯಲ್ಲಿ ತಪ್ಪಿದ್ದಾರೆಂಬುದು ಸುಸ್ಪಷ್ಟವಾಗಿದೆ. ಜನತೆಯ ಆರೋಗ್ಯ ರಕ್ಷಣೆ ಮಾಡಬೇಕಾದ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಸೇವೆಯ ರೆವಿನ್ಯೂ ವೆಚ್ಚ 151.26 ಕೋಟಿ, ವಸತಿ ಸೇವೆಯ ರೆವಿನ್ಯೂ ವೆಚ್ಚ 83.40 ಕೋಟಿ, ಹಿಂದುಳಿದ ಪ್ರದೇಶಾಭಿವೃದ್ಧಿ ಸೇವೆಯ ರೆವಿನ್ಯೂ ವೆಚ್ಚ 32.65 ಕೋಟಿ, ಸಹಕಾರ ಸೇವೆಯ ರೆವಿನ್ಯೂ ವೆಚ್ಚ 45.68 ಕೋಟಿ, ಗ್ರಾಮೀಣ ಅಭಿವೃದ್ಧಿ ಸೇವೆಯ ರೆವಿನ್ಯೂ ವೆಚ್ಚ 286.60 ಕೋಟಿ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಸೇವೆಯ ರೆವಿನ್ಯೂ ವೆಚ್ಚ 65.52 ಕೋಟಿ, ಮಹಿಳೆ ಮತ್ತು ಮಕ್ಕಳ ಸೇವೆಯ ರೆವಿನ್ಯೂ ವೆಚ್ಚ 24.31 ಕೋಟಿ, ಮಲೆನಾಡು ಅಭಿವೃದ್ಧಿ ಸೇವೆಯ ವೆಚ್ಚ 15.14 ಕೋಟಿ. ಹೀಗೆ ಇಷ್ಟೊಂದು ಭಾರೀ ಮೊತ್ತವನ್ನು 98-99ರಲ್ಲಿ ವೆಚ್ಚ ಮಾಡದೆ ಬಿಟ್ಟಿರುವುದು ಸಿ.ಎ.ಜಿ. ವರದಿಯಿಂದ ತಿಳಿದು ಬಂದಿದೆ. ಇದೆಲ್ಲಾ ಹೀಗೆಯೇ ನಡೆಯುತ್ತ ಮುಂದುವರೆದರೆ ಎಲ್ಲಾ ಹಂತದ

ಪ್ರಜಾಪ್ರತಿನಿಧಿಗಳ ಹಾಗೂ ಸರಕಾರದ ಕೆಲಸವಾದರೂ ಏನು? 'ತಪ್ಪಿಸಿಕೊಂಡು ಹೋದ ದನ ಹುಡುಕಲಿಲ್ಲ. ಮನೆಗೆ ಬಂದ ದನ ಕೊಟ್ಟಿಗೆಯುಲ್ಲಿ ಕಟ್ಟಲಿಲ್ಲ' ಎಂಬ ಮನೆಯೊಡೆಯನ ಪಾಡು ಪ್ರಜಾತಂತ್ರ ವ್ಯವಸ್ಥೆಯಲ್ಲಿಯ ಪ್ರಜಾಪ್ರತಿನಿಧಿಗಳ ಹಾಗೂ ಸರಕಾರದ ಪಾಡು ಕೂಡ ಆಗಿ ಜನತಂತ್ರ ವ್ಯವಸ್ಥೆಯೇ ಅವಸಾನದತ್ತ ಸಾಗುವುದರಲ್ಲಿ ಸಂಶಯವೇ ಇಲ್ಲ. ಇನ್ನಾದರೂ ಸಿಗಬೇಕಾದ ಆರ್ಥಿಕ ಹಾಗೂ ಭೌತಿಕ ಸೌಲಭ್ಯಗಳ ಗುರಿ ಸಾಧನೆಯನ್ನು ಅವರವರ ಆಯವ್ಯಯ ಪತ್ರಗಳ ಪ್ರಕಾರ ಈಡೇರಿಸಿಕೊಡುವಲ್ಲಿ ಪ್ರಯತ್ನಶೀಲರಾದರೆ ಅವರಿಗೆ ಪ್ರಜಾಸಮೂಹ ಚಿರಋಣಿ. ಇಲ್ಲವಾದರೆ 'ಕೊಡಲಿ ಕಾವು ಕುಲಕ್ಕೆ ಕುತ್ತು ಹಾಗೂ ಮೃತ್ಯು'.

❑

ಶಾಸಕಾಂಗ-ಕಾರ್ಯಾಂಗ ಕಾರ್ಯವೈಖರಿ

ಕರ್ನಾಟಕ ರಾಜ್ಯದ ಹಾಗೂ ರಾಜ್ಯದ ಜನತೆಯ ಜೀವಾಳ ಶಾಸಕಾಂಗ ಹಾಗೂ ಕಾರ್ಯಾಂಗ. ಶಾಸಕಾಂಗ ಹಾಗೂ ಕಾರ್ಯಾಂಗದ ಕಾರ್ಯವೈಖರಿ ರಾಜ್ಯದ ಹಾಗೂ ರಾಜ್ಯದ ಜನತೆಯ ಉಳಿಗಾಲಕ್ಕೆ ತಾರಕವಾಗಿದೆಯೇ ಹೊರತು ಮಾರಕವಾಗಿ ಅಳಿಗಾಲಕ್ಕೆ ದಾರಿ ಮಾಡಿಕೊಟ್ಟಿರುವುದಿಲ್ಲ. ಈ ರಾಜ್ಯದ ಸರ್ವತೋಮುಖ ಅಭಿವೃದ್ಧಿಗಾಗಿ, ಸುಭದ್ರ ಹಾಗೂ ಸಮರ್ಥ ಆಡಳಿತಕ್ಕಾಗಿ, ಜನತೆಯ ಸುಖ-ಸಮೃದ್ಧಿ, ಶಾಂತಿ, ನೆಮ್ಮದಿಗಾಗಿ ಶಾಸಕಾಂಗ ಹಾಗೂ ಕಾರ್ಯಾಂಗಗಳು ಸಾಕಷ್ಟು ಪ್ರಯತ್ನಪಟ್ಟು ಪ್ರಗತಿ ಸಾಧಿಸಿವೆ. ಭಾರತದಲ್ಲಿಯೇ ಕರ್ನಾಟಕ ಆದರ್ಶ ರಾಜ್ಯವಾಗಿದೆ, ಆದರ್ಶ ಶಾಸಕಾಂಗವಾಗಿದೆ ಹಾಗೂ ಆದರ್ಶ ಕಾರ್ಯಾಂಗವಾಗಿದೆ. ಶಾಸಕಾಂಗವೆಂದರೆ ಶಾಸಕರಾದ ಮುಖ್ಯಮಂತ್ರಿ, ಮಂತ್ರಿಗಳು, ಮುಖ್ಯ ನಿರ್ದೇಶಕರು, ವಿರೋಧಪಕ್ಷದ ನಾಯಕರು ಹಾಗೂ ಇತರ ಶಾಸಕರು ಇವರೆಲ್ಲರನ್ನೊಳಗೊಂಡ ಹಾಗೂ ಇವರೆಲ್ಲರಿಂದ ಚುನಾಯಿತರಾದ ವಿಧಾನಸಭಾಧ್ಯಕ್ಷರು ಹಾಗೂ ವಿಧಾನಸಭೆಯ ಉಪಾಧ್ಯಕ್ಷರನ್ನೊಳಗೊಂಡ ವಿಧಾನಸಭೆ, ವಿಧಾನಸಭೆಯ ಈ ಶಾಸಕಾಂಗದ ಅತ್ಯುನ್ನತ ಪೀಠದ ಪೀಠಾಧೀಶರು, ಪೀಠಾಧಿಪತಿಗಳು ಈ ವಿಧಾನಸಭಾಧ್ಯಕ್ಷರು. ಈ ಅಧ್ಯಕ್ಷರು ಹಾಗೂ ವಿಧಾನಸಭೆಯ ಕಾರ್ಯದರ್ಶಿಗಳು ಈ ಶಾಸಕಾಂಗದ ಸೂತ್ರಧಾರರು. ವಿಧಾನಸಭೆಯಲ್ಲಿ ಬಹುಮತ ಪಡೆದ ರಾಜಕೀಯ ಶಾಸಕಾಂಗ ಪಕ್ಷದ ಚುನಾಯಿತ ನಾಯಕರೇ ಮುಖ್ಯಮಂತ್ರಿಗಳು. ಈ ನಾಯಕ ಮುಖ್ಯಮಂತ್ರಿಗಳೇ ಕಾರ್ಯಾಂಗದ ಅತ್ಯುನ್ನತ ಪೀಠದ ಪೀಠಾಧಿಪತಿಗಳು ಪೀಠಾಧೀಶ್ವರರು. ಕಾರ್ಯಾಂಗದ ಸೂತ್ರಧಾರಿಗಳು ಈ ಮುಖ್ಯಮಂತ್ರಿ ಹಾಗೂ ಮುಖ್ಯ ಕಾರ್ಯದರ್ಶಿಗಳು ಸೃಷ್ಟಿಸುವ ಶಕ್ತಿ, ರಕ್ಷಿಸುವ ಶಕ್ತಿ ಹಾಗೂ ಶಿಕ್ಷಿಸುವ ಶಕ್ತಿ ರಾಜ್ಯದ ಶಾಸಕಾಂಗ ಹಾಗೂ ಕಾರ್ಯಾಂಗದ ಪೀಠಾಧಿಪತಿಗಳಿಬ್ಬರ ಕೈಯಲ್ಲಿದೆ. ಸ್ವಾತಂತ್ರ್ಯ ನಂತರ ಪ್ರಜಾತಂತ್ರ ವ್ಯವಸ್ಥೆ ಸಂವಿಧಾನಬದ್ಧವಾಗಿ ಅಸ್ತಿತ್ವದಲ್ಲಿ ಬಂದ ಮೇಲೆ ನಮ್ಮ ರಾಜ್ಯದ ಶಾಸಕಾಂಗ ಹಾಗೂ ಕಾರ್ಯಾಂಗ ಹಾಗೂ ಅವುಗಳ ಪೀಠಾಧಿಪತಿಗಳಾದ ವಿಧಾನಸಭಾಧ್ಯಕ್ಷರು ಹಾಗೂ ಮುಖ್ಯಮಂತ್ರಿಗಳು ಗಣನೀಯವಾಗಿ ಈ ರಾಜ್ಯದ ಆಗುಹೋಗುಗಳಿಗೆ ಸ್ಪಂದಿಸಿ ಅಪಾರವಾದ ಸೇವೆಯನ್ನು ಸಲ್ಲಿಸಿದ್ದಾರೆ ಹಾಗೂ ಪ್ರಜಾತಂತ್ರ

ವ್ಯವಸ್ಥೆಗೆ ಘನತೆ, ಗೌರವ ಹಾಗೂ ಮೆರಗುಗಳನ್ನು ತಂದುಕೊಟ್ಟಿದ್ದಾರೆ. ಪ್ರಜಾತಂತ್ರ ವ್ಯವಸ್ಥೆ ನಮ್ಮೀ ದೇಶದಲ್ಲಿ ಬಂದ ಮೇಲೆ ರಾಷ್ಟ್ರಾದ್ಯಂತ ನಮ್ಮ ರಾಜ್ಯವನ್ನು ಸೇರಿ ದೇಶದ ಎಲ್ಲಾ ರಾಜ್ಯಗಳಲ್ಲಿ 1952 ರಿಂದ 5 ವರ್ಷಕ್ಕೊಮ್ಮೆ ಚುನಾವಣೆ ಜರುಗುತ್ತ ಕೇಂದ್ರ ಹಾಗೂ ರಾಜ್ಯ ಶಾಸಕಾಂಗಗಳಿಗೆ ಜನತೆ ತನ್ನ ಪ್ರತಿನಿಧಿಗಳನ್ನು ಚುನಾಯಿಸುತ್ತ ಬಂದಿದ್ದು ಹಾಗೂ ಚುನಾಯಿತ ಸದಸ್ಯರು ಶಾಸಕಾಂಗ ಹಾಗೂ ಕಾರ್ಯಾಂಗವನ್ನು ರಚಿಸುತ್ತಲೇ ಬಂದಿದ್ದಾರೆ. 1952ರ ಚುನಾವಣೆಯಿಂದ ಹಿಡಿದು ಇಲ್ಲಿಯವರೆಗೆ ನಮ್ಮ ರಾಜ್ಯದಲ್ಲಿ 11 ಚುನಾವಣೆಗಳು ನಡೆದು ಈಗ 11ನೇ ವಿಧಾನಸಭೆ ಅಸ್ತಿತ್ವದಲ್ಲಿದೆ. ವಿಧಾನಸಭೆಗೆ 1952ರಿಂದ ಇಲ್ಲಿಯವರೆಗೆ ಒಟ್ಟು 14 ಜನ ವಿಧಾನಸಭಾಧ್ಯಕ್ಷರಾಗಿದ್ದು ಮೊದಲನೆಯವರಾಗಿ ಶ್ರೀ ಹೆಚ್. ಸಿದ್ಧಯ್ಯ ಹಾಗೂ ನಂತರ ಸರ್ವಶ್ರೀ ಹೆಚ್.ಎನ್. ರುದ್ರಪ್ಪ, ಎಸ್.ಆರ್. ಕಂಠಿ, ಬಿ. ವೈಕುಂಠ ಬಾಳಿಗಾ, ಎಸ್.ಡಿ. ಕೊಠಾವಳೆ, ಶ್ರೀಮತಿ ಕೆ.ಎಸ್. ನಾಗರತ್ನಮ್ಮ ಸರ್ವ ಶ್ರೀ ಪಿ. ವೆಂಕಟರಮಣ, ಕೆ.ಹೆಚ್. ರಂಗನಾಥ, ಡಿ.ಬಿ. ಚಂದ್ರೇಗೌಡ, ಬಿ.ಜಿ.ಬಣಕಾರ್, ಎಸ್.ಎಂ. ಕೃಷ್ಣ, ವಿ.ಎಸ್. ಕೌಜಲಗಿ, ರಮೇಶ್ ಕುಮಾರ್ ಇವರುಗಳು ಕಾರ್ಯ ನಿರ್ವಹಿಸಿದ್ದು ಹಾಗೂ ಈಗಿನ ಶ್ರೀ ಎಂ.ವಿ. ವೆಂಕಟಪ್ಪನವರು ಕಾರ್ಯನಿರ್ವಹಿಸುತ್ತಿದ್ದಾರೆ. ಈ ಸಭಾಧ್ಯಕ್ಷರಿಗೆ ನೆರವಾಗಲು ವಿಧಾನಸಭೆಯ ಕಾರ್ಯದರ್ಶಿಗಳಾಗಿ 1952ರಿಂದ ಇಲ್ಲಿಯವರೆಗೆ ಸರ್ವಶ್ರೀ ಜಿ.ಎಸ್. ವೆಂಕಟರಮಣ ಅಯ್ಯರ್, ಕೆ. ಹನುಮಂತಪ್ಪ, ಟಿ. ವೆಂಕಟಸ್ವಾಮಿ, ಎಂ. ಸುಬ್ಬರಾವ್, ಕೆ.ಎಸ್. ಶಿಂಗಾರಿಗೌಡ, ಎಂ. ಇನ್ನಾಸಪ್ಪ, ಎನ್.ಹೆಚ್. ಮುತ್ತಲಗೇರಿ, ಯಾಕುಬ್ ಶರೀಫ್ ನಿರ್ವಹಿಸಿದ್ದು ನಂತರ ಹಾಲಿ ಶ್ರೀ ಟಿ. ರಾಜಣ್ಣ ಕಾರ್ಯ ನಿರ್ವಹಿಸುತ್ತಿದ್ದಾರೆ. ಹೀಗೆ ಶಾಸಕಾಂಗದ ವಿಧಾನಸಭೆಯ ಪದಾಧಿಕಾರಿಗಳು ಹಾಗೂ ಅಧಿಕಾರಿಗಳು ಈ ರಾಜ್ಯದ ಹಾಗೂ ಜನತೆಯ ಹಣೆಬರಹ ಬರೆದು ಅವರ ಉಳಿವಿಗಾಗಿ ಹಾಗೂ ಬೆಳೆಯುವಿಕೆಗಾಗಿ ಶ್ರಮಿಸುತ್ತ ಸಂವಿಧಾನ ಹಾಗೂ ಅಧಿನಿಯಮಬದ್ಧ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಶ್ರಮಿಸುತ್ತಿದ್ದಾರೆ.

ನಮ್ಮ ರಾಷ್ಟ್ರದ ಅನೇಕ ರಾಜ್ಯಗಳಲ್ಲಿ ವಿಧಾನ ಪರಿಷತ್ತು ಕೂಡ ಇದ್ದು ಇವುಗಳ ಅಸ್ತಿತ್ವ ವಿಧಾನಸಭೆಗಳನ್ನೇ ಅವಲಂಬಿಸಿದ್ದು ಕೆಲವು ಕಡೆ ಪರಿಷತ್ತು ಇವೆ, ಕೆಲವು ಕಡೆ ಇಲ್ಲ. ನಮ್ಮ ರಾಜ್ಯದಲ್ಲಿ ಪರಿಷತ್ತು ಕೂಡ 1952ರಿಂದ ಅಸ್ತಿತ್ವದಲ್ಲಿದ್ದು ಅದೊಂದು ಅನುಭವಸ್ಥರ ಹಿರಿಯರ ಮನೆಯೆಂದೆನಿಸಿಕೊಂಡು ಕಾರ್ಯನಿರ್ವಹಿಸುತ್ತಿದೆ. ಈ ಸುದೀರ್ಘ ಅವಧಿಯಲ್ಲಿ ಸರ್ವ ಶ್ರೀ ಕೆ.ಟಿ. ಭಾಷ್ಯಂ, ಟಿ. ಸುಬ್ರಹ್ಮಣ್ಯ, ಪಿ. ಸೀತಾರಾಮಯ್ಯ, ವಿ. ವೆಂಕಟಪ್ಪ, ಕೆ.ವಿ. ನರಸಪ್ಪ, ಹೆಚ್.ಎಫ್. ಕಟ್ಟಿಮನಿ, ಜಿ.ವಿ. ಹಳ್ಳಿಕೇರಿ, ಎಸ್.ಸಿ. ಏಡಕೆ, ಕೆ.ಕೆ. ಶೆಟ್ಟಿ, ಆರ್.ಬಿ. ನಾಯಕ, ಆರ್.ಬಿ. ಪೋತೆದಾರ, ಡಿ. ಮಂಜುನಾಥ, ಡಿ.ಬಿ. ಕಲಮನಕರ್ ಹಾಗೂ ಹಾಲಿ ಶ್ರೀ ಬಿ.ಎಲ್. ಶಂಕರ್‌ರವರು ವಿಧಾನಪರಿಷತ್ತಿನ ಸಭಾಪತಿಗಳಾಗಿದ್ದಾರೆ. ವಿಧಾನಸಭೆಗೆ ಪೂರಕವಾಗಿ ವಿಧಾನ/ ಪರಿಷತ್ತು ಹಿರಿಯ

ಮಾರ್ಗದರ್ಶಕರಾಗಿ ಸಲಹೆ, ಸೂಚನೆ ಕೊಡುತ್ತ ಪ್ರಜಾತಂತ್ರ ವ್ಯವಸ್ಥೆಯ ಯಶಸ್ವಿಗೆ ಪೂರಕ ಹಾಗೂ ನೆರವಾಗುತ್ತಿರುವುದು ಸುದೈವ.

ಶಾಸಕಾಂಗವು ಅಂಗೀಕಾರ ಮಾಡಿಕೊಟ್ಟ ಅಧಿನಿಯಮಗಳಿಗೆ ಬದ್ಧವಾಗಿ ಶಾಸಕಾಂಗ ಮಂಜೂರು ಮಾಡಿಕೊಟ್ಟ ಬಜೆಟ್ ಪ್ರಕಾರ ಖಜಾನೆಗೆ ಹಣ ದೊರಕಿಸುವುದಾಗಲಿ, ಹಣವೆಚ್ಚ ಮಾಡುವುದಾಗಲೀ, ನಿಗದಿ ಅಭಿವೃದ್ಧಿ ಕಾರ್ಯಗಳ ಅನುಷ್ಠಾನ ಮಾಡುವುದಾಗಲೀ, ರಾಜ್ಯದಲ್ಲಿ ಶಾಂತಿ, ನೆಮ್ಮದಿ, ಸುವ್ಯವಸ್ಥೆ, ಆಡಳಿತ, ಅಭಿವೃದ್ಧಿ ಮಾಡುವುದಾಗಲೀ, ರಾಜ್ಯದ ಹಿತ ಕಾಯುವುದಾಗಲೀ, ಇದೆಲ್ಲಾ ರಾಜ್ಯದ ಕಾರ್ಯಾಂಗದ ಕೈಯಲ್ಲಿದೆ. ಇದೆಲ್ಲವನ್ನು ಶಾಸಕಾಂಗ ಕಾದುನೋಡಬೇಕಾಗುತ್ತದೆ. ಕಾರ್ಯಾಂಗದ ಅಧಿಪತಿ ಮುಖ್ಯಮಂತ್ರಿ ರಾಜ್ಯದ ಆಡಳಿತ ಸಿಂಹಾಸನಾಧೀಶ್ವರನ ಕೈಯಲ್ಲಿ ರಾಜ್ಯದ ಆಡಳಿತ ಅಭಿವೃದ್ಧಿ ಸೂತ್ರಗಳಿದ್ದು ಕಾರ್ಯಾಂಗದ ಕಾರ್ಯನಿರ್ವಹಣೆಗಾಗಿ ಈ ಸಭಾನಾಯಕ ಮುಖ್ಯಮಂತ್ರಿ ತನ್ನ ಮಂತ್ರಿಮಂಡಲವನ್ನು ರಚಿಸಿಕೊಂಡು ಮಂತ್ರಿ ಮಂಡಲದ ಸದಸ್ಯರ ಮುಖಾಂತರ ಆಡಳಿತ ನಡೆಸಬೇಕಾಗುತ್ತದೆ. ಈ ಆಡಳಿತವನ್ನು ಸಂವಿಧಾನಬದ್ಧವಾಗಿ 1952 ರಿಂದ ಮುಖ್ಯಮಂತ್ರಿಗಳು ನಡೆಸುತ್ತ ಬಂದಿದ್ದಾರೆ ಹಾಗೂ ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗಾಗಿ ಕಾರ್ಯ ನಿರ್ವಹಿಸಿದ್ದಾರೆ. ಸ್ವಾತಂತ್ರ್ಯ ನಂತರ ಪ್ರಜಾತಂತ್ರ ಪೂರ್ವದಲ್ಲಿ ಎಂ.ಆರ್. ವಿಧಾನಸಭೆಯ ಅವಧಿಯಲ್ಲಿ ಕೆ. ಚಂಗಲರಾಯರೆಡ್ಡಿಗಾರು ಮುಖ್ಯಮಂತ್ರಿಯಾಗಿದ್ದ ನಂತರ ಪ್ರಜಾತಂತ್ರ ವ್ಯವಸ್ಥೆಗೆ ಅನುಗುಣವಾಗಿ 1952 ರಿಂದ ಕರ್ನಾಟಕ ಏಕೀಕರಣವಾಗುವ ಪೂರ್ವದವರೆಗೆ ಕೆ. ಹನುಮಂತಯ್ಯನವರು ಮುಖ್ಯಮಂತ್ರಿಗಳಾಗಿ ಉತ್ತಮ ಹಾಗೂ ಆದರ್ಶ ಮುಖ್ಯಮಂತ್ರಿಗಳಾಗಿ ಚಿಕ್ಕ ಹಾಗೂ ಚೊಕ್ಕ ಮಂತ್ರಿಮಂಡಲವನ್ನು ಹೊಂದಿದವರಾಗಿದ್ದರು. ಅಂತೆಯೇ ಕರ್ನಾಟಕ ಏಕೀಕರಣವಾಗುವವರೆಗೆ ಕೆ. ಹನುಮಂತಯ್ಯನವರು ನಂತರ ಕಡಿದಾಳ್ ಮಂಜಪ್ಪನವರು ಪ್ರಾಮಾಣಿಕ ಸರಳಜೀವಿಯಾಗಿ ಮುಖ್ಯಮಂತ್ರಿ ಸ್ಥಾನವನ್ನು ನಿರ್ವಹಿಸಿದ್ದರು. ರಾಷ್ಟ್ರದಲ್ಲಿಯೇ ಆದರ್ಶ ಶಾಸಕಾಂಗ ಹಾಗೂ ಕಾರ್ಯಾಂಗದ ಸೌಧ ವಿಧಾನಸೌಧವನ್ನು ನಿರ್ಮಿಸಿದ ಶಿಲ್ಪಿ ಮೈಸೂರು ರಾಜ್ಯದ ಮುಖ್ಯಮಂತ್ರಿ ಹನುಮಂತಯ್ಯನವರು ನಿರ್ಮಿಸಿದ ಬೃಹತ್ ವಿಧಾನಸೌಧದಲ್ಲಿ ಕರ್ನಾಟಕ ವಿಧಾನಸಭೆಯಲ್ಲಿ ಮುಖ್ಯಮಂತ್ರಿಯಾಗಿ ಕೂಡ್ರುವ ವಿಧಿ ಅವರಿಗೆ ಕೂಡಿಬರಲಿಲ್ಲದ್ದು ದುರ್ದೈವ. 1956 ನವೆಂಬರ್ ಒಂದರಂದು ಹಳೇ ಮೈಸೂರು ರಾಜ್ಯ, ಮುಂಬಯಿ ಕರ್ನಾಟಕ ರಾಜ್ಯ, ಮದ್ರಾಸ್ ಕರ್ನಾಟಕ ರಾಜ್ಯ, ಹೈದರಾಬಾದ್ ಕರ್ನಾಟಕ ರಾಜ್ಯ ಹಾಗೂ ಕೊಡಗು ಕರ್ನಾಟಕ ರಾಜ್ಯಗಳೆಲ್ಲಾ ಭಾಷಾವಾರು ಪ್ರಾಂತ ರಚನೆ ಕಾಯ್ದೆ ಪ್ರಕಾರ ಈ ಎಲ್ಲಾ ರಾಜ್ಯಗಳ 1952ರ ಚುನಾಯಿತ ಶಾಸಕರು ಒಂದಾಗಿ ಹೊಸ ಕನ್ನಡ ರಾಜ್ಯದ ಮೊದಲನೆಯ ಮುಖ್ಯಮಂತ್ರಿಯನ್ನಾಗಿ ಸ್ವಾತಂತ್ರ್ಯ ಯೋಧ ಕರ್ನಾಟಕ ಏಕೀಕರಣದ ಹೋರಾಟಗಾರ ಶ್ರೀ ಎಸ್. ನಿಜಲಿಂಗಪ್ಪನವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಿ ವಿಧಾನಸೌಧದ ಕಾರ್ಯಾಂಗದಿಂದ ರಾಜ್ಯದ ಆಡಳಿತ ಮುಂದುವರೆದಿದೆ. ನಿಜಲಿಂಗಪ್ಪ

ನವರ ಉತ್ತರಾಧಿಕಾರಿ ಮುಖ್ಯಮಂತ್ರಿಗಳಾಗಿ ಸರ್ವಶ್ರೀ ಬಿ.ಡಿ. ಜತ್ತಿ, ನಂತರದ ಎಸ್.ಆರ್. ಕಂಠಿ, ವೀರೇಂದ್ರ ಪಾಟೀಲ್, ಡಿ. ದೇವರಾಜ ಅರಸು, ಆರ್. ಗುಂಡೂರಾವ್, ರಾಮಕೃಷ್ಣ ಹೆಗಡೆ, ಎಸ್.ಆರ್. ಬೊಮ್ಮಾಯಿ, ಎಸ್. ಬಂಗಾರಪ್ಪ, ವೀರಪ್ಪ ಮೊಯಿಲಿ, ಹೆಚ್.ಡಿ. ದೇವೇಗೌಡ, ಜೆ.ಹೆಚ್. ಪಟೇಲ್ ಕಾರ್ಯನಿರ್ವಹಿಸಿ ನಂತರ 11-10-99ರಿಂದ ಶ್ರೀ ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿಯಾಗಿ ಆಡಳಿತ ವಹಿಸಿಕೊಂಡು 3 ವರ್ಷ ಮುಟ್ಟುವ ದಾರಿಯಲ್ಲಿದ್ದಾರೆ. ನಮ್ಮ ರಾಜ್ಯದ ಮುಖ್ಯಮಂತ್ರಿಗಳಾಗಿ ಕೆಲಸ ನಿರ್ವಹಿಸಿದ ಬಿ.ಡಿ. ಜತ್ತಿಯವರು ರಾಜ್ಯಪಾಲರಾಗಿ, ಉಪರಾಷ್ಟ್ರಪತಿಗಳಾಗಿ ಹಾಗೂ ಹಂಗಾಮಿ ರಾಷ್ಟ್ರಪತಿಗಳಾಗಿದ್ದುದು ಹಾಗೂ ಮುಖ್ಯಮಂತ್ರಿಯಾಗಿದ್ದ ಚಂಗಲರಾಯರೆಡ್ಡಿ ಹಾಗೂ ಸಿ.ಎಂ. ಪೂಣಚ್ಚರವರು ಮತ್ತು ಮಂತ್ರಿಯಾಗಿದ್ದ ಬಿ. ರಾಚಯ್ಯನವರು ರಾಜ್ಯಪಾಲರಾಗಿದ್ದುದು, ಅಂತೆಯೇ ನಮ್ಮ ರಾಜ್ಯದ ಮುಖ್ಯಮಂತ್ರಿಯಾಗಿದ್ದ ಹೆಚ್.ಡಿ. ದೇವೇಗೌಡರು ಪ್ರಧಾನಮಂತ್ರಿಯಾಗಿದ್ದು ಹಾಗೂ ಅನೇಕರು ಕೇಂದ್ರ ಮಂತ್ರಿಗಳಾಗಿದ್ದದ್ದು ನಮ್ಮ ರಾಜ್ಯದ ಶಾಸಕಾಂಗ, ಕಾರ್ಯಾಂಗ ಹಾಗೂ ವಿಧಾನಸೌಧಕ್ಕೆ ಎಂದಿಲ್ಲದ ಮೆರುಗು ತಂದಿರುವುದು ನಮ್ಮ ರಾಜ್ಯದ ಸುದೈವ ಹಾಗೂ ಶ್ರೇಷ್ಠತೆ. ನಮ್ಮ ರಾಜ್ಯದ ಶಾಸಕರಲ್ಲಿ ಸುಮಾರು 338 ಜನ ಮಾನ್ಯರು ಮಂತ್ರಿಗಳಾಗಿದ್ದಾರೆ. ಸುಮಾರು 16 ಜನ ಮಾನ್ಯರು ಮುಖ್ಯಮಂತ್ರಿಗಳಾಗಿದ್ದಾರೆ. ಸುಮಾರು 19 ಜನ ವಿಧಾನಪರಿಷತ್ ಸಭಾಪತಿಗಳಾಗಿದ್ದಾರೆ. ಸುಮಾರು 15 ಜನ ವಿಧಾನಸಭಾಧ್ಯಕ್ಷರಾಗಿದ್ದಾರೆ. ಈ ರಾಜ್ಯದ ಕೆಲವು ಮುಖ್ಯಮಂತ್ರಿಗಳು ಚಿಕ್ಕ ಹಾಗೂ ಚೊಕ್ಕ ಮಂತ್ರಿಮಂಡಲ ರಚಿಸಿ ಆರೇಳು ಮಂತ್ರಿಗಳನ್ನು ಪಡೆದ ಉದಾಹರಣೆ ಇದ್ದರೂ ಇತ್ತಿತ್ತಲಾಗಿ ಮಿತಿ ಮೀರಿದ ಹಿಂಡುಮಂತ್ರಿಗಳನ್ನು ಪಡೆದವರೂ ಇದ್ದಾರೆ. 1956-57ರ ನಿಜಲಿಂಗಪ್ಪನವರ 12 ಜನರ ಮಂತ್ರಿಮಂಡಲ ಹಾಗೆಯೇ ಮುಂದೆ ಬಂದು 14ಕ್ಕೆ ಏರಿ, ಜತ್ತಿಯವರ ಮಂತ್ರಿಮಂಡಲ 20ಕ್ಕೆ ಏರಿ, ಮತ್ತೆ ನಿಜಲಿಂಗಪ್ಪನವರ ಮಂತ್ರಿಮಂಡಲ 24ಕ್ಕೆ ಏರಿ, ವೀರೇಂದ್ರ ಪಾಟೀಲ್ ಮಂಡಲ 29ಕ್ಕೆ ಏರಿ, ದೇವರಾಜ ಅರಸರ ಮಂಡಲ 35ಕ್ಕೆ ಏರಿ ರಾಮಕೃಷ್ಣ ಹೆಗಡೆಯವರ ಮಂಡಲ 35ಕ್ಕೆ ಏರಿ, ವೀರಪ್ಪ ಮೊಯಿಲಿಯವರ ಮಂಡಲ 46ಕ್ಕೆ ಏರಿ, ಜೆ.ಹೆಚ್. ಪಟೇಲ್ ಮಂಡಲ 40ಕ್ಕೆ ಏರಿ, ಜಂಬೊಜೆಟ್ ಮಂತ್ರಿಮಂಡಲವಾಗಿ, ಎಸ್.ಎಂ. ಕೃಷ್ಣರವರ ಮಂಡಲ 43ಕ್ಕೆ ಇಳಿದು ಈಗ ಮತ್ತೆ 48ಕ್ಕೆ ಏರಿದೆ. ಅಲ್ಲಲ್ಲಿ ಕೆಲವು ಸಾಧಕ-ಬಾಧಕಗಳ ಅಪವಾದಗಳಿಗೊಳಪಟ್ಟು ನಮ್ಮ ರಾಜ್ಯದ ಶಾಸಕಾಂಗ ಹಾಗೂ ಕಾರ್ಯಾಂಗ ಇಡೀ ಭಾರತದಲ್ಲಿಯೇ ಸಂವಿಧಾನಬದ್ಧ ಅಂಗಗಳಾಗಿ ಶಾಸಕಾಂಗ ಹಾಗೂ ಕಾರ್ಯಾಂಗದ ಘನತೆ, ಗೌರವ, ಹಿರಿಮೆಗಳನ್ನು ಎತ್ತಿ ಹಿಡಿದಿರುವುದು ಈ ರಾಜ್ಯದ ಸುದೈವ.

❑

ಶಾಸಕ-ಸಂಸದರಿಗೆ ನೀತಿಸಂಹಿತೆ

ಭಾರತದ ಜನಸಂಖ್ಯೆ 100 ಕೋಟಿ ದಾಟಿದೆ. ಕರ್ನಾಟಕ ರಾಜ್ಯದ ಜನಸಂಖ್ಯೆ 5 ಕೋಟಿ ಮೀರಿದೆ. ಈ ಬೃಹತ್ ರಾಷ್ಟ್ರ ಹಾಗೂ ರಾಜ್ಯದ ಉತ್ತಮ ಹಾಗೂ ಸಮರ್ಥ ಆಡಳಿತ ಅಭಿವೃದ್ಧಿ ಹಾಗೂ ಭವ್ಯ ಭವಿಷ್ಯತ್ತಿಗಾಗಿ ಲೋಕಸಭೆ ಹಾಗೂ ವಿಧಾನಸಭೆಗಳು, ಕೇಂದ್ರ ಸರಕಾರ ಹಾಗೂ ರಾಜ್ಯ ಸರಕಾರಗಳು ಸಂವಿಧಾನಬದ್ಧ ಪ್ರಜಾತಂತ್ರ ವ್ಯವಸ್ಥೆಗೆ ಅನುಗುಣವಾಗಿ ಅಸ್ತಿತ್ವದಲ್ಲಿ ಬಂದಿದೆ. ಆಡಳಿತ ಹಾಗೂ ಅಭಿವೃದ್ಧಿಗಾಗಿ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಜನತೆಯಿಂದ ವಿವಿಧ ಮೂಲಗಳಿಂದ ಹಣವನ್ನು ಸ್ವೀಕರಿಸಿ ವಿವಿಧ ಮೂಲಗಳಿಗೆ ಹಣವನ್ನು ಬಟವಾಡೆ ಮಾಡಬೇಕಾಗುತ್ತದೆ. ಈ ದಿಶೆಯಲ್ಲಿ ಕೇಂದ್ರ ಸರಕಾರ ವಿವಿಧ ಮೂಲಗಳಿಂದ 99-2000ದಲ್ಲಿ 10.70 ಲಕ್ಷ ಕೋಟಿ ಮೊತ್ತವನ್ನು ಸ್ವೀಕಾರ ಮಾಡಿದ್ದು, 2001-2002 ರಲ್ಲಿ 8.87 ಲಕ್ಷ ಕೋಟಿ ಮೊತ್ತವನ್ನು ಪಡೆಯಬೇಕಾಗಿದೆ. ಪಡೆದ ಈ ಮೊತ್ತದಲ್ಲಿ 99-2000 ದಲ್ಲಿ 10.71 ಲಕ್ಷ ಕೋಟಿ ಮೊತ್ತವನ್ನು ಬಟವಾಡೆ ಮಾಡಿದ್ದು, 2001-2002 ರಲ್ಲಿ 8.87 ಲಕ್ಷ ಕೋಟಿ ಮೊತ್ತವನ್ನು ಬಟವಾಡೆ ಮಾಡಬೇಕಾಗಿದೆ. ಅದೇ ರೀತಿ ಎಲ್ಲಾ ರಾಜ್ಯಗಳು ತಮ್ಮ ತಮ್ಮ ರಾಜ್ಯಗಳ ಆಡಳಿತ ಅಭಿವೃದ್ಧಿಗೆ ಹಣ ಪಡೆದು ಬಟವಾಡೆ ಮಾಡಬೇಕಾಗುತ್ತದೆ. ಕರ್ನಾಟಕ ರಾಜ್ಯ ಸರಕಾರ 99-2000ದಲ್ಲಿ 5.3.08 ಸಾವಿರ ಕೋಟಿ ವೆಚ್ಚ ಪಡೆದು 53.06 ಸಾವಿರ ಕೋಟಿ ಹಣ ಬಟವಾಡೆ ಮಾಡಿದ್ದು, 2001-2002ರಲ್ಲಿ 37.24 ಸಾವಿರ ಕೋಟಿ ಹಣ ಪಡೆದು 3728 ಸಾವಿರ ಕೋಟಿ ಮೊತ್ತವನ್ನು ಬಟವಾಡೆ ಮಾಡಬೇಕಾಗಿದೆ. ಕೇಂದ್ರ ಹಾಗೂ ರಾಜ್ಯ ಸರಕಾರಗಳು ಮಂಡಿಸುವ ಆಯವ್ಯಯ ಬಜೆಟನ್ನು ಲೋಕಸಭೆ ಹಾಗೂ ವಿಧಾನಸಭೆಗಳಲ್ಲಿ ಮಂಡಿಸಿದಾಗ ಆದಾಯ ಮೂಲ ಹಾಗೂ ಬಟವಾಡೆ ಮೂಲಗಳನ್ನು ಹಾಗೂ ಅವುಗಳ ವಿವರಗಳನ್ನೆಲ್ಲಾ ನೋಡಿ ಹಿಂದಿನ ವರ್ಷದ ವಾಸ್ತವಿಕ ಆಯುವ್ಯಯು, ಚಾಲೂ ಸಾಲಿನ ಪರಿಷ್ಕೃತ ಆಯುವ್ಯಯು ಹಾಗೂ ಮುಂದಿನ ವರ್ಷದ ಅಂದಾಜು ಆಯುವ್ಯಯುಗಳನ್ನೆಲ್ಲಾ ವಿವರವಾಗಿ ಹಾಗೂ ಸುದೀರ್ಘವಾಗಿ ಚರ್ಚೆಮಾಡಿ ಲೋಪ-ದೋಷ, ವೈಫಲ್ಯ-ಸಾಫಲ್ಯ, ವ್ಯವಹಾರ-ಅವ್ಯವಹಾರ, ಅಕ್ರಮ-ಸಕ್ರಮಗಳನ್ನೆಲ್ಲಾ ಎತ್ತಿತೋರಿಸಿ ಸೂಕ್ತ ಸಲಹೆ-ಸೂಚನೆ

ಮಾರ್ಗದರ್ಶನವನ್ನು ಸಂಸದರು ಹಾಗೂ ಶಾಸಕರು ಮಾಡಬೇಕಾಗುತ್ತದೆ ಹಾಗೂ ಆಯವ್ಯಯಕ್ಕೆ ಮಂಜೂರಿ ಕೊಡಬೇಕಾಗುತ್ತದೆ. ಪ್ರತಿವರ್ಷ ಬಜೆಟ್ ಅಧಿವೇಶನವಲ್ಲದೆ ಚಳಿಗಾಲ ಅಥವಾ ವಿಶೇಷ ಅಧಿವೇಶನಗಳನ್ನು ಕೂಡ ಕರೆದು ರಾಷ್ಟ್ರ ಹಾಗೂ ರಾಜ್ಯಗಳ ಆದಾಯ ವೆಚ್ಚಗಳ ಬಗ್ಗೆ ಹಾಗೂ ಆಗು-ಹೋಗುಗಳ ಬಗ್ಗೆ ವಿವಿಧ ಪ್ರಶ್ನೆ, ವಿವಿಧ ವಿಚಾರಗಳ ಬಗ್ಗೆ ಸಭೆಯ ಕಾರ್ಯಕಲಾಪಗಳನ್ನು ನಡೆಸಬೇಕಾಗುತ್ತದೆ. ಲೋಕಸಭೆ, ವಿಧಾನಸಭೆಗಳು ಕೇಂದ್ರ ರಾಜ್ಯ ಸರಕಾರಗಳನ್ನು ಸವಾರಿ ಮಾಡಿ ಅವುಗಳು ಸಮರ್ಥ ರೀತಿಯ ಕೆಲಸ ಕಾರ್ಯ ಮಾಡಲು ಹಾಗೂ ಉತ್ತಮ ಆಡಳಿತ ಅಭಿವೃದ್ಧಿ ಮಾಡುವಲ್ಲಿ ಸಹ ಗಣನೀಯ ಪಾತ್ರ ವಹಿಸಬೇಕಾಗುತ್ತದೆ. ಲೋಕಸಭೆ ಕೇಂದ್ರ ಸರಕಾರ ಹಾಗೂ ರಾಜ್ಯ ವಿಧಾನಸಭೆ, ರಾಜ್ಯ ಸರಕಾರ ಸಮರ್ಪಕವಾಗಿ ಕಾರ್ಯನಿರ್ವಹಿಸಿ ಪ್ರಜಾತಂತ್ರ ವ್ಯವಸ್ಥೆ ಹಾಗೂ ಪ್ರಜಾ ಸರಕಾರಗಳನ್ನು ಯಶಸ್ವಿಗೊಳಿಸಬೇಕಾಗಿದ್ದಲ್ಲಿ, ಪ್ರತಿವರ್ಷ ಲೋಕಸಭೆ ಹಾಗೂ ವಿಧಾನಸಭೆಗಳ ಹೆಚ್ಚಿನ ಅಧಿವೇಶನಗಳನ್ನು ಕರೆದು ಹೆಚ್ಚು ಕಾಲ ಹೆಚ್ಚಿನ ದಿನಗಳಂದು ಸಭೆ ನಡೆಸಿ ಸಮರ್ಪಕ ಕಾರ್ಯನಿರ್ವಹಣೆಗಳ ಸದವಕಾಶ ಮಾಡುವುದು ಅಗತ್ಯ ಹಾಗೂ ಅನಿವಾರ್ಯವಾಗಿದೆ. ಆದರೆ ದುರ್ದೈವದಿಂದ ಲೋಕಸಭೆ ಹಾಗೂ ರಾಜ್ಯ ವಿಧಾನಸಭೆಗಳು ಪ್ರತಿವರ್ಷ ಹೆಚ್ಚಿನ ದಿನಗಳಂದು ಕಾರ್ಯಕಲಾಪ ನಡೆಸದಿರುವುದು ಕಂಡುಬಂದಿದೆ. 2000ನೇ ವರ್ಷದ ಜನವರಿಯಿಂದ ಡಿಸೆಂಬರ್ ಅವಧಿಯ ಒಂದು ವರ್ಷದಲ್ಲಿ ಈ ರಾಷ್ಟ್ರದ ಘನತೆವೆತ್ತ ಲೋಕಸಭೆ ಹಾಗೂ ರಾಜ್ಯಸಭೆ ಕೇವಲ 85 ದಿನಗಳ ಕಾರ್ಯಕಲಾಪ ನಡೆಸಿರುವುದು ಸಮರ್ಪಕವೇ? ಪ್ರತಿವರ್ಷ 8 ರಿಂದ 10 ಲಕ್ಷ ಕೋಟಿ ಮೊತ್ತದ ಆಯವ್ಯಯ ವಹಿವಾಟು ಮಾಡುವ ಕೇಂದ್ರ ಸರಕಾರದ ಆಗು-ಹೋಗುಗಳ ಬಗ್ಗೆ ಇಷ್ಟೇ ಚರ್ಚೆ ಸಾಕೇ? ಈ ವರ್ಷದಲ್ಲಿ ಮಧ್ಯಪ್ರದೇಶ ವಿಧಾನಸಭೆ ಮಾತ್ರ 72 ದಿನ ಕಾರ್ಯಕಲಾಪ ನಡೆಸಿದೆ. ಈ ರಾಷ್ಟ್ರದ ಉಳಿದೆಲ್ಲ ವಿಧಾನಸಭೆಗಳು ಮಧ್ಯಪ್ರದೇಶಕ್ಕಿಂತ ಹಿಂದೆ ಬಿದ್ದಿವೆ. ಕರ್ನಾಟಕ ರಾಜ್ಯ ವಿಧಾನಸಭೆ ಕೂಡ 2000 ದಲ್ಲಿ ಕೇವಲ 48 ದಿನಗಳ ಕಾರ್ಯಕಲಾಪ ನಡೆಸಿದೆ. ನಮ್ಮ ರಾಜ್ಯದಲ್ಲಿ ಈ ಹನ್ನೊಂದನೆಯ ವಿಧಾನಸಭೆ ಅಸ್ತಿತ್ವದಲ್ಲಿದ್ದು 99ರಲ್ಲಿ 9 ದಿವಸ, 2000ದಲ್ಲಿ 48 ದಿವಸ, 2001 ರಲ್ಲಿ ನವೆಂಬರ್ ವರೆಗೆ ಕೇವಲ 37 ದಿವಸ ಕಾರ್ಯಕಲಾಪ ನಡೆಸಿದ್ದು, ನವೆಂಬರ್ ಕೊನೆಯವರೆಗೆ ಈ ಸಭೆ ಒಟ್ಟಾರೆ ಕೇವಲ 94 ದಿವಸ ಕಾರ್ಯಕಲಾಪ ನಡೆಸಲಾಗಿದೆ. ಕರ್ನಾಟಕದಲ್ಲಿ ಮೊದಲನೇ ವಿಧಾನಸಭೆ 1952 ರಿಂದ ಅಸ್ತಿತ್ವದಲ್ಲಿ ಬಂದಿದ್ದು ಇಲ್ಲಿವರೆಗೆ ಹನ್ನೊಂದು ವಿಧಾನಸಭೆಗಳು ಅಸ್ತಿತ್ವದಲ್ಲಿ ಬಂದಿದ್ದು 52.57ರ ಅವಧಿಯಲ್ಲಿ 278, 57-61ರಲ್ಲಿ 366, 62-66ರಲ್ಲಿ 365, 67-71ರಲ್ಲಿ 226, 72-77ರಲ್ಲಿ 427, 78-82ರಲ್ಲಿ 337, 83-85ರಲ್ಲಿ 103, 85-89ರಲ್ಲಿ 232, 89-94ರಲ್ಲಿ 244, 94-99ರಲ್ಲಿ 227. 1999ರಿಂದ 2001 ನವೆಂಬರ್ ಕೊನೆಯವರೆಗೆ 94 ದಿನಗಳಷ್ಟು ಮಾತ್ರ ಈ ಹನ್ನೊಂದು ವಿಧಾನಸಭೆಗಳು ಕಾರ್ಯಕಲಾಪ ನಡೆಸಿವೆ. ಈ ಕಾರ್ಯಕಲಾಪಗಳ ದಿನಗಳು ಅತಿಕಡಿಮೆಯೆಂದು ಹೇಳಿದರೆ ತಪ್ಪೇನಿಲ್ಲ. ಅನೇಕ ಶಾಸಕರು, ಶಾಸಕಾಂಗ

ಪಕ್ಷಗಳು ಕಾರ್ಯಕಲಾಪಗಳಿಗೆ ಹೆಚ್ಚಿನ ದಿನಗಳನ್ನು ನಿಗದಿಪಡಿಸಿ ಅವಕಾಶವನ್ನು ಚರ್ಚೆಗೆ ಕೊಡಲುಕೇಳುತ್ತಾ ಬಂದಿದ್ದರೂ ಸರಕಾರಗಳ ಅನಾಸ್ಥೆಯಿಂದ ಆಶೆ ಈ ಡೇರಿಲ್ಲ ಇಷ್ಟೊಂದು ಕಡಿಮೆ ದಿನಗಳಂದು ಸಹ ಚರ್ಚೆ ಪ್ರಶ್ನೆ, ಸೂಚನೆ, ವಿವಿಧ ವಿಚಾರ ಮಂಡನೆ ಫಲಕಾರಿಯಾಗದೇ ಸಭೆಗಳು ಗೊಂದಲ, ಗಲಾಟೆ, ಮಾರಾಮಾರಿಯಲ್ಲಿ ಅನಾವಶ್ಯಕ ಕಾಲಹರಣವಾಗುತ್ತಿರುವುದು ಈ ರಾಜ್ಯದ ಹಾಗೂ ಈ ರಾಷ್ಟ್ರದ ಪ್ರಜಾತಂತ್ರ ವ್ಯವಸ್ಥೆಯ ದುರ್ದೈವ. ಇತ್ತೀಚೆಗೆ ಸಭೆಗಳ ಕಾರ್ಯಕಲಾಪ ಯಶಸ್ವಿಯಾಗಿ ಉಚ್ಚಮಟ್ಟದವಾಗುವಂತೆ ಮಾಡಲು ಲೋಕಸಭೆ ಅಧ್ಯಕ್ಷ ಬಾಲಯೋಗಿಯವರ ಅಧ್ಯಕ್ಷತೆಯಲ್ಲಿ ನಡೆದ ಸಂಸದೀಯ ಪಟು ಪದಾಧಿಕಾರಿಗಳ ಸಭೆಯಲ್ಲಿ ನೀತಿಸಂಹಿತೆಯ ರಚನೆ ಹಾಗೂ ಅನುಷ್ಠಾನದ ಬಗ್ಗೆ ತೀರ್ಮಾನಿಸಿರುವುದು ಸ್ವಾಗತಾರ್ಹ. ರಾಜ್ಯದಲ್ಲಿ ಲೋಕಾಯುಕ್ತ ಕಾನೂನು ಇದೆ. ಈ ಕಾನೂನು ಬೆದರುಗೊಂಬೆಯಾಗಿದೆ. ಈ ಕಾನೂನು ಉಲ್ಲಂಘನೆಗೆ ಯಾವ ಶಿಕ್ಷೆಯೂ ಇಲ್ಲ, ಈ ಶಿಕ್ಷೆಯ ಸೇರ್ಪಡೆ ಈ ಕಾನೂನಿನಲ್ಲಿರಬೇಕಾದ್ದು ಅವಶ್ಯವೆಂಬುದನ್ನು ಸರಕಾರ ಅರಿತು ಶಿಕ್ಷಾರ್ಹ ತಿದ್ದುಪಡಿ ಸೇರಿಸಿದರೆ ಒಳ್ಳೆಯದು. ಶಾಸಕರ ಹಿಂದಿನ ವರ್ಷದ ಸಾಲದಿಂದಾಗಿ ಪತ್ರಿಕೆಯನ್ನು ಜೂನ್ 30ರ ಒಳಗಾಗಿ ಸಲ್ಲಿಸಬೇಕೆಂದಿದ್ದು ಮಂತ್ರಿ, ಮುಖ್ಯಮಂತ್ರಿಗಳನ್ನೊಳಗೊಂಡ ಅನೇಕ ಶಾಸಕರು ಸಲ್ಲಿಸದಿರುವುದು ಕಂಡುಬಂದಿದೆ. ಅನೇಕರು ಹೇರಳವಾದ ಬಿಂದಗಿಯನ್ನು ಶಾಸಕ ಮಂತ್ರಿಗಳಾದ ಮೇಲೆ ಹೊಂದಿದ್ದರಿಂದಲೇ ಆ ಹೂರಣ ಹೊರಬಂದೀತೆಂಬ ಕಾರಣದಿಂದ ಬಿಂದಗಿ ವಿವರಗಳನ್ನು ಸಲ್ಲಿಸುತ್ತಿರುವುದಿಲ್ಲವೆಂಬ ಟೀಕೆ ಸಾಕಷ್ಟು ಇವೆ. ಭ್ರಷ್ಟರನ್ನು ರಕ್ಷಿಸುವ ಸಲುವಾಗಿಯೇ ಸರಕಾರ ಶಿಕ್ಷಾರ್ಹ ಅಂಶವನ್ನು ಲೋಕಾಯುಕ್ತ ಕಾಯ್ದೆಯಲ್ಲಿ ಬುದ್ಧಿಪೂರ್ವಕ ಸೇರಿಸುತ್ತಿಲ್ಲವೆಂಬ ಟೀಕೆಗಳೂ ಇವೆ. ಪ್ರಜಾತಂತ್ರ ವ್ಯವಸ್ಥೆ ನಮ್ಮ ದೇಶದಲ್ಲಿ ಯಶಸ್ವಿಯಾಗಿ ಪರಿಣಾಮಕಾರಿಯಾಗಿ ಸಾಗಬೇಕಾಗಿದ್ದಲ್ಲಿ ಸಭೆಗಳಲ್ಲಿ ಒಳಗೆ ಮತ್ತು ಸಭೆಯ ಹೊರಗೆ ಮಂತ್ರಿಗಳನ್ನೊಳಗೊಂಡ ಸದಸ್ಯರ ನಡವಳಿಕೆ ಹಾಗೂ ನೀತಿಸಂಹಿತೆ ರಚಿತವಾಗಿ ಜಾರಿಯಾಗಲೇಬೇಕು. ಲೋಕಾಯುಕ್ತ ಕಾಯ್ದೆಯಲ್ಲಿಯ ಉಲ್ಲಂಘನೆಯಾಗಿ ಸ್ವಾರ್ಥ, ಪಕ್ಷಪಾತ, ಸ್ವಜನ ಪಕ್ಷಪಾತ, ಭ್ರಷ್ಟಾಚಾರ, ಅಧಿಕಾರ ದುರುಪಯೋಗ, ದುರಾಡಳಿತವಾಗಿ ವಾಮಮಾರ್ಗದಿಂದ ಹೇರಳ ಹಣ ಗಳಿಸುವವರಿಗೆ ಶಿಕ್ಷಿಸುವ ತಿದ್ದುಪಡಿ ಸೇರ್ಪಡೆ ಅಗತ್ಯ.

❑

ವಿಧಾನಸಭೆ ಮತ್ತು ವಿಧಾನಪರಿಷತ್ತು

ಎಲ್ಲಾ ರಾಜ್ಯಗಳಲ್ಲಿ ವಿಧಾನಸಭೆ ಶಾಸಕಾಂಗವಿರುತ್ತದೆ. ಆದರೆ ವಿಧಾನ ಪರಿಷತ್ತುಗಳು ಇರುವುದಿಲ್ಲ. ವಿಧಾನಪರಿಷತ್ತನ್ನು ರಚಿಸುವುದು ಅಥವಾ ಇದ್ದ ವಿಧಾನಪರಿಷತ್ತನ್ನು ರದ್ದುಪಡಿಸುವ ಸಂಪೂರ್ಣ ಅಧಿಕಾರ ಸಂಸತ್ತಿನ ಅಂಗೀಕಾರಕ್ಕೊಳಪಟ್ಟು ವಿಧಾನಸಭೆಗೇ ಇರುತ್ತದೆ. ವಿಧಾನಸಭೆ-ಶಾಸಕಾಂಗ ಸರ್ವಶ್ರೇಷ್ಠವಾದುದು. ರಾಜ್ಯಗಳ ಪ್ರಜಾಪ್ರಭು ಜನತೆಯಿಂದ ನೇರವಾಗಿ ಚುನಾಯಿತವಾದ ಸಂವಿಧಾನಬದ್ಧ ಶಾಸಕಾಂಗ. ಶಾಸಕಾಂಗ ಕಾರ್ಯಾಂಗಕ್ಕಿಂತ ಮೇಲು. ಉಚ್ಚ ಅಧಿಕಾರವುಳ್ಳದ್ದು ಶಾಸಕಾಂಗ. ಶಾಸಕಾಂಗದ ಸಭಾನಾಯಕ ಮುಖ್ಯಮಂತ್ರಿಯನ್ನು ಚುನಾಯಿಸಿ ಅವರ ಕೈಯಲ್ಲಿ ಇಡೀ ರಾಜ್ಯದ ಆಡಳಿತ ಅಭಿವೃದ್ಧಿಯನ್ನು ನಡೆಸುವ ಮಹತ್ವಪೂರ್ಣ ಅಧಿಕಾರವನ್ನು ಕೊಟ್ಟು ಅವರನ್ನು ಕಾರ್ಯಾಂಗದ ಮುಖ್ಯಸ್ಥರನ್ನಾಗಿ ನೇಮಿಸಿ ಮಂತ್ರಿಮಂಡಲವನ್ನು ರಚಿಸಿಕೊಂಡು ಆ ರಾಜ್ಯದ ಆಡಳಿತ ನಡೆಸುತ್ತಾರೆ. ಮುಖ್ಯಮಂತ್ರಿ, ಮಂತ್ರಿಗಳಿಗೆ ಅವರವರ ಇಲಾಖೆಗಳನ್ನು ನಡೆಸಲು ಅವಶ್ಯಕ ಬೇಕಾದ ಹಣವನ್ನು ಶೇಖರಿಸಲು ಹಾಗೂ ವೆಚ್ಚ ಮಾಡಲು ಅವಶ್ಯಕವಾದ ಹಣದ ಆಯವ್ಯಯವನ್ನು ವಿಧಾನಸಭೆ ಅಧಿವೇಶನದಲ್ಲಿ ಶಾಸಕರುಳ್ಳ ಶಾಸಕಾಂಗ ಮಂಜೂರು ಮಾಡುತ್ತದೆ. ಮಂಜೂರು ಮಾಡಿದ ಆಯವ್ಯಯದ ಪ್ರಕಾರ ಮಂತ್ರಿಮಂಡಲ-ಕಾರ್ಯಾಂಗ ಹಳ್ಳಿಯಿಂದ ಹಿಡಿದು ರಾಜ್ಯಮಟ್ಟದ ಎಲ್ಲಾ ಹಂತದ ಅಧಿಕಾರಿಗಳ ಮುಖಾಂತರ ವ್ಯವಹಾರ ಮಾಡಬೇಕಾಗುತ್ತದೆ. ಆಯ ಪ್ರಕಾರ ನಿಗದಿತ ಹಣವನ್ನು ಶೇಖರಿಸುವುದು ಕಾರ್ಯಾಂಗದ ಕರ್ತವ್ಯ. ಅಂತೆಯೇ ಆಯವ್ಯಯ ನಿಗದಿಗೊಳಿಸಿದ ಪ್ರಕಾರ ಹಣವನ್ನು ವೆಚ್ಚ ಮಾಡಿ ನಿಗದಿತ ಆರ್ಥಿಕ ಹಾಗೂ ಭೌತಿಕ ಗುರಿಯನ್ನು ಸಾಧಿಸಲೇಬೇಕಾಗುತ್ತದೆ. ಸಾಧಿಸುವಲ್ಲಿ ವಿಫಲವಾದರೆ ಶಾಸಕಾಂಗ, ಕಾರ್ಯಾಂಗವನ್ನು ತರಾಟೆಗೆ ತೆಗೆದುಕೊಂಡು ಎಚ್ಚರಿಸಬೇಕಾಗುತ್ತದೆ. ಸರ್ಕಾರ ಆಡಳಿತವನ್ನು ಸಮರ್ಥವಾಗಿ ನಡೆಸದೆ ಆಡಳಿತ ಯಂತ್ರ ಕುಸಿದ ಪ್ರಸಂಗದಲ್ಲಿ ಶಾಸಕಾಂಗವು ಕಾರ್ಯಾಂಗ ಸರಕಾರವನ್ನು ಅಧಿಕಾರದಿಂದ ಹೊರದಬ್ಬಬೇಕಾಗುತ್ತದೆ. ಸರಕಾರಕ್ಕೆ ಮುಖ್ಯಮಂತ್ರಿಗಳಿಗೆ, ಮಂತ್ರಿಗಳಿಗೆ, ಅಧಿಕಾರಿಗಳಿಗೆ ಎಚ್ಚರಿಸುವ, ಮಾರ್ಗದರ್ಶನ

ಮಾಡುವ, ಸೂಕ್ತ ಸಲಹೆ-ಸೂಚನೆ ಕೊಡುವ, ಅಗತ್ಯ ಆದೇಶ ಕೊಡುವ ಪರಮಾಧಿಕಾರ ಶಾಸಕಾಂಗಕ್ಕಿದೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಶಾಸಕಾಂಗ ಸರ್ವಶ್ರೇಷ್ಠ ಸಾರ್ವಭೌಮ ಸರ್ವೋತ್ತಮ ಅಧಿಕಾರವುಳ್ಳ ಸಂವಿಧಾನಬದ್ಧವಾದುದು. ರಾಜ್ಯದ ಆಗುಹೋಗುಗಳನ್ನು ಗಮನಿಸುವುದು ರಾಜ್ಯದ ಜನತೆಯ ಉಜ್ವಲ ಭವಿಷ್ಯವನ್ನು ನಿರ್ಮಿಸುವುದು ಇತ್ಯಾದಿ ಸರ್ವೋದ್ದೇಶ ಶಾಸಕಾಂಗದ್ದು. ಶಾಸಕಾಂಗವೆಂದರೆ ಶಾಸಕರು, ಸಭಾನಾಯಕರು, ವಿವಿಧ ರಾಜಕೀಯ ಪಕ್ಷಗಳ ಗುಂಪಿನ ನಾಯಕರು, ಅಧಿಕೃತ ವಿರೋಧಪಕ್ಷದ ನಾಯಕರು, ಮುಖ್ಯ ಸಚೇತಕರು, ವಿಧಾನಸಭಾ ಉಪಾಧ್ಯಕ್ಷರು ಹಾಗೂ ವಿಧಾನಸಭಾಧ್ಯಕ್ಷ ರನ್ನೊಳಗೊಂಡ ವಿಧಾನಸಭೆ. ಕಾರ್ಯಾಂಗ - ಸರಕಾರ ವಿಧಾನಸಭೆಯ ಅಂಗವಾದ ಬಹುಮತ ಪಡೆದ ರಾಜಕೀಯ ಪಕ್ಷದ ಶಾಸಕರಿಂದ ನೇಮಕಗೊಂಡ ಸಭಾನಾಯಕ ಮುಖ್ಯ. ಮುಖ್ಯಮಂತ್ರಿ ಕಾರ್ಯಾಂಗದ ಮುಖ್ಯಸ್ಥರು. ಶಾಸಕಾಂಗ-ವಿಧಾನಸಭೆಯ ಪಕ್ಷಭೇದ ಮರೆತ ಎಲ್ಲಾ ಶಾಸಕರಿಂದ ಚುನಾಯಿತರಾದ ವಿಧಾನಸಭಾಧ್ಯಕ್ಷರು ಶಾಸಕಾಂಗದ ಮುಖ್ಯಸ್ಥರು, ಒಟ್ಟಿನ ಮೇಲೆ ಶಾಸಕಾಂಗ ಕಾರ್ಯಾಂಗಕ್ಕಿಂತಲೂ ಮೇಲು. ಶಾಸಕಾಂಗಕ್ಕೆ ಕಾರ್ಯಾಂಗವೇ ಅಧೀನ ಹೊರತು ಕಾರ್ಯಾಂಗಕ್ಕೆ ಶಾಸಕಾಂಗ ಅಧೀನವಲ್ಲ. ಮಂತ್ರಿ-ಮುಖ್ಯಮಂತ್ರಿಗಳೆಲ್ಲರೂ ಶಾಸಕಾಂಗದ ಸದಸ್ಯರಾಗಿರುವುದರಿಂದ ಕಾರ್ಯಾಂಗ-ಮಂತ್ರಿಮಂಡಲ ಶಾಸಕಾಂಗದ ಒಂದು ಪ್ರಮುಖ ಅಂಗ. ಶಾಸಕಾಂಗದ ಸದಸ್ಯರಾದ ಶಾಸಕರೇ ಇರಲಿ, ಮಂತ್ರಿಗಳೇ ಇರಲಿ, ಮುಖ್ಯಮಂತ್ರಿಗಳೇ ಇರಲಿ, ಸಂಸದೀಯ ಪದಾಧಿಕಾರಿಗಳೇ ಇರಲಿ ಅವರೆಲ್ಲರೂ ರಾಜ್ಯದ ಸಾರ್ವಭೌಮ ಜನ ಪ್ರಜಾಪ್ರಭುಗಳ ದೃಷ್ಟಿಯಲ್ಲಿ ಪೂಜ್ಯರಾಗಿರಬೇಕು. ಅಗ್ರಗಣ್ಯರಾಗಿರಬೇಕು, ಮಾರ್ಗದರ್ಶಕರಾಗಿರಬೇಕು. ಅವರ ಕಾರ್ಯವೈಖರಿ ಪ್ರಾಮಾಣಿಕವಾಗಿರಬೇಕು. ನಿಸ್ವಾರ್ಥಿಗಳಾಗಿರಬೇಕು. ಇವರಾ ರಲ್ಲಿಯೂ ಜಾತೀಯತೆ, ಸ್ವಾರ್ಥ, ಮೋಸ, ವಂಚನೆ, ಪಕ್ಷಪಾತ, ಸ್ವಜನ ಪಕ್ಷಪಾತ, ಸಮಾಜ ಘಾತುಕತನ, ಭ್ರಷ್ಟಾಚಾರ, ಅಧಿಕಾರ ದುರುಪಯೋಗ, ದುರಾಡಳಿತ, ಆಲಸ್ಯ, ಅಯೋಗ್ಯತೆ, ಅಸಮರ್ಥತೆ, ದಾಸ್ಯ ಮನೋವೃತ್ತಿ, ದುರ್ಬಲ ಮನೋವೃತ್ತಿ, ತಾರತಮ್ಯ, ರಾಗ-ದ್ವೇಷ ಇತ್ಯಾದಿ ಪ್ರಜಾತಂತ್ರ ವಿರೋಧಿ ಅನಾಗರೀಕ ರಾಕ್ಷಸೀ ಸಾಮಾಜಿಕ ದುರ್ಗುಣಗಳು ಇರಲೇಬಾರದು. ಅಂದರೆ ಮಾತ್ರ ರಾಜ್ಯದ ಪ್ರಜಾರಾಜ-ಪ್ರಭುಗಳು ಸರ್ವಶ್ರೇಷ್ಠ ಪೂಜಾರ್ಹರಾದ ಪ್ರಜಾಪ್ರತಿನಿಧಿ, ಶಾಸಕ ಶ್ರೇಷ್ಠರು, ಸರಕಾರದ ಮೂಲಕ - ಪಾಲಕ ಜವಾಬ್ದಾರಿಗಳು. ವಿಧಾನಸಭೆಯಲ್ಲಿ ಶಾಸಕರು ಅಂಗೀಕಾರ ಮಾಡಿಕೊಟ್ಟ ಪ್ರಕಾರ ಆಯವ್ಯಯವನ್ನು ಮಾಡುವುದು ಹಾಗೂ ಆರ್ಥಿಕ-ಭೌತಿಕ ಗುರಿ ಸಾಧಿಸುವವರು, ಹಳ್ಳಿಯ ಕೃಷಿ ಸಹಾಯಕ, ಗ್ರಾಮ ಲೆಕ್ಕಾಧಿಕಾರಿ ಮೊದಲಾದವರಿಂದ ಹಿಡಿದು ರಾಜ್ಯದ ಮುಖ್ಯ ಕಾರ್ಯದರ್ಶಿಯವರೆಗೆ ಎಲ್ಲಾ ಹಂತದ ಅಧಿಕಾರಿಗಳ ಹಾಗೂ ಆಯವ್ಯಯದ ಅನುದಾನ ಸಹಾಯಾನುದಾನ ಪಡೆವ ಸಂಘ-ಸಂಸ್ಥೆ ಇತ್ಯಾದಿ ಪ್ರಾಧಿಕಾರಗಳ

ಪದಾಧಿಕಾರಿಗಳ ಹೊಣೆಗಾರಿಕೆ ಇದೆ. ಈ ಎಲ್ಲಾ ಹಂತದ ಹೊಣೆಗಾರರ ಮೇಲೆ ಶಾಸಕರು, ಸಂಸದರು, ಮಂತ್ರಿಗಳು, ಮುಖ್ಯಮಂತ್ರಿಗಳು ಹಾಗೂ ಸಂಸದೀಯ ಪದಾಧಿಕಾರಿಗಳ ಹೆಚ್ಚಿನ ಹೊಣೆ, ಮೇಲ್ವಿಚಾರಣೆ, ಸಲಹೆ ಸೂಚನೆ, ಮಾರ್ಗದರ್ಶನ, ಆದೇಶ ಇತ್ಯಾದಿ ಆಡಳಿತಾಧಿಕಾರಗಳೂ ಇವೆ. ಸರಕಾರದ ಅಂಗೀಕೃತ ಧ್ಯೇಯ, ಧೋರಣೆ,. ಕಾರ್ಯಕ್ರಮ ಇತ್ಯಾದಿ ಜನಪರ ಯೋಜನೆ, ಅಭಿವೃದ್ಧಿ, ಆಡಳಿತ ಅನುಷ್ಠಾನಗೊಳಿಸುವಲ್ಲಿ ಲೋಪದೋಷ ಕುಂಠಿತ ಕಂಡುಬಂದಲ್ಲಿ ಯಾವುದೇ ಅಧಿಕಾರಿ ದಾರಿ ತಪ್ಪಿದಲ್ಲಿ ಶಾಸಕಾಂಗ-ಶಾಸಕರು ಅವರಿಗೆ ಸೂಕ್ತ ಆದೇಶ ಕೊಟ್ಟರೆ, ಅದು ಸಾರ್ವಜನಿಕ ದೃಷ್ಟಿಯಿಂದ ಒಳ್ಳೆಯದು. ಕರ್ನಾಟಕ ರಾಜ್ಯದಲ್ಲಿ 224 ಚುನಾಯಿತ ವಿಧಾನಸಭಾ ಸದಸ್ಯರಿದ್ದಾರೆ. ಇವರು ತಮ್ಮ ತಮ್ಮ ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯಗಳ ಸಮೀಕ್ಷೆಯನ್ನು ನಡೆಸಬೇಕಾಗುತ್ತದೆ. ಇದಕ್ಕಾಗಿ ತಿಂಗಳಲ್ಲಿ ಹತ್ತು ದಿನಗಳ ಕಾಲ ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳು, ಅವರಿಗೆ ಜೀಪೊಂದನ್ನು ಒದಗಿಸಿ ಅವರಾಗಲೀ ಅಥವಾ ಬೇರೆ ಯಾವುದೇ ಒಬ್ಬ ಜವಾಬ್ದಾರಿ ಅಧಿಕಾರಿಯಾಗಲಿ, ಶಾಸಕರೊಂದಿಗೆ ಪ್ರಯಾಣ ಮಾಡಬೇಕೆಂದು 1986 ರಲ್ಲಿ ಸರಕಾರದ ಸುತ್ತೋಲೆ ಕೂಡ ಇದೆ. ಶಾಸಕರು ಸಮೀಕ್ಷೆ ಮಾಡುವಾಗ ಯಶಸ್ವಿ ಕಾರ್ಯಾಚರಣೆಗಾಗಿ ಅಧಿಕಾರಿಗಳಿಗೆ ಸೂಚನೆ ಆದೇಶ ಕೊಟ್ಟರೆ ತಪ್ಪೇನು? ಗಜೆಟೆಡ್ ಅಧಿಕಾರಿಗಳೇ ಇರಲಿ, ಐ.ಎ.ಎಸ್., ಐ.ಪಿ.ಎಸ್., ಐ.ಎಫ್.ಎಸ್. ಅಧಿಕಾರಿಗಳೇ ಇರಲಿ, ಸರ್ಕಾರದ ಕಾರ್ಯದರ್ಶಿ ಅಥವಾ ಮುಖ್ಯ ಕಾರ್ಯದರ್ಶಿ, ಮಂತ್ರಿ, ಮಹಾಮಂತ್ರಿಯೇ ಇರಲಿ, ಇವರಲ್ಲಿ ಯಾರೇ ದಾರಿ ತಪ್ಪಿದಲ್ಲಿ, ದಾರಿ ತಪ್ಪದಿರಲು ಹಾಗೂ ಸರಿ ಸೂಕ್ತ ದಾರಿ ಹಿಡಿದು ಕಾರ್ಯನಿರ್ವಹಿಸಲು ಶಾಸಕರು ಸೂಕ್ತ ಆದೇಶ ಕೊಡುವುದು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಸರಿ ಹಾಗೂ ಅತ್ಯಗತ್ಯ. ಆದರೆ ಈ ಆದೇಶ ಕೊಡುವ ಸಾಮರ್ಥ್ಯ ಸಾಮಾಜಿಕ - ದುರ್ಗುಣಗಳಿಂದ ಬಹುದೂರವಿರುವ ಶಾಸಕರಿಗೆ ಮಾತ್ರ ಸಾಧ್ಯ. ವಿಧಾನಸಭೆ ಹಾಗೂ ವಿಧಾನಸಭೆಯ ಸದಸ್ಯರ ಹಾಗೂ ವಿಧಾನಪರಿಷತ್ ಹಾಗೂ ವಿಧಾನ ಪರಿಷತ್ ಸದಸ್ಯರ ನಡುವೆ ಯಾವುದೇ ವಿರಸವಿರದೆ ಸರಸವಿರಬೇಕಾದ್ದು ಅಗತ್ಯ. ವಿಧಾನಸಭೆ ಕೆಳಮನೆಯೆಂದು ವಿಧಾನಪರಿಷತ್ ಮೇಲ್ಮನೆಯೆಂದು ಕರೆಯುವುದು ಸಮರ್ಪಕವಲ್ಲ. ಅದು ಪ್ರಜಾತಂತ್ರ ವ್ಯವಸ್ಥೆಗೆ ಅವಮಾನ. ವಿಧಾನಸಭೆಗಳು ರಾಜ್ಯಗಳ ಮೇಲ್ಮನೆಗಳೇ ಹೊರತು ಕೆಳಮನೆಗಳಲ್ಲವೇ ಅಲ್ಲ. ಕೆಳಮನೆ ಎಲ್ಲಿಯೂ ಪ್ರಜಾಪ್ರಭುತ್ವದಲ್ಲಿಲ್ಲ. ವಿಧಾನ ಪರಿಷತ್ತು ಹಿರಿಯರ ಮನೆ, ಪರಿಣತ ಪಾರಂಗತರ ಮನೆ, ಮಾರ್ಗದರ್ಶಕರ ಮನೆ, ವಿಶೇಷ ಜ್ಞಾನಿ - ಅಪಾರ ಅನುಭವಿಗಳ ಮನೆ. ಪದವೀಧರರು, ಶಿಕ್ಷಕರು ಸ್ಥಳೀಯ ಸಂಸ್ಥೆಗಳ ಸದಸ್ಯರು, ಶಾಸಕರು, ರಾಜ್ಯಪಾಲ ರಿಂದ ನಾಮಕರಣವಾದವರು ಇವರೆಲ್ಲರೂ ವಿಧಾನಸಭೆಯ ಚುನಾವಣೆ ಕ್ಷೇತ್ರಗಳಲ್ಲಿ ಮತದಾರರಿರುವಾಗ ವಿಧಾನಸಭೆಯ ಸದಸ್ಯರೆಲ್ಲರೂ ಇವರ ಪ್ರತಿನಿಧಿಗಳಿರುವಾಗ ಈ

ವರ್ಗದವರಿಗೆ ಪ್ರತ್ಯೇಕ ಲೆಕ್ಕ ಪ್ರತಿನಿಧಿಗಳೇಕೆ ಬೇಕೆಂದು ಪ್ರಶ್ನಿಸುವವರು ಇದ್ದಾರೆ. ಈ ಹಾಗೂ ಇತ್ಯಾದಿ ಕಾರಣಗಳಿಗಾಗಿ ವಿಧಾನಸಭೆಯು ವಿಧಾನಪರಿಷತ್ತನ್ನು ರದ್ದುಮಾಡಿದ ಉದಾಹರಣೆ ಕೂಡ ಈ ರಾಷ್ಟ್ರದಲ್ಲಿದೆ. ರೈತ ವರ್ಗ, ವರ್ತಕ ವರ್ಗ, ಕೂಲಿಕಾರರ ವರ್ಗ, ವಿವಿಧ ನೌಕರದಾರರ ವರ್ಗ, ಪ್ರಾಥಮಿಕ ಶಿಕ್ಷಕರ ವರ್ಗ, ನ್ಯಾಯವಾದಿಗಳ ವರ್ಗ, ವೈದ್ಯರ ವರ್ಗ, ಎಂಜಿನಿಯರ್ ವರ್ಗ ಇವರೆಲ್ಲರ ಪ್ರತಿನಿಧಿಗಳಿಗೂ ವಿಧಾನಪರಿಷತ್ತಿನಲ್ಲಿ ಪ್ರತಿನಿಧಿ ಸ್ಥಾನ ಬೇಕೆಂಬವರೂ ಇದ್ದಾರೆ. ಏನೇ ಇರಲಿ ಇದ್ದ ವಿಧಾನಪರಿಷತ್ತುಗಳು ಈ ರಾಷ್ಟ್ರದಲ್ಲಿ ಹಿರಿಯರ ಮನೆಯಾಗಿ ವಿಧಾನಸಭೆಗೆ ಹಾಗೂ ರಾಜ್ಯಕ್ಕೆ ತಾರಕವಾಗಿರಬೇಕು.

❑

ವಿಧಾನಸಭೆ - ವಿಧಾನಪರಿಷತ್ತು ಮಹಾಮಹಿಮರ ಮಹಾ ಮನೆಗಳು

ವಿಧಾನಸಭೆ ಹಾಗೂ ವಿಧಾನಪರಿಷತ್ತುಗಳು ರಾಜ್ಯ ಮಹಾಮಹಿಮರ ಮಹಾ ಮನೆಗಳು. ವಿಧಾನಸಭೆ ಕೆಳಮನೆ ಹಾಗೂ ವಿಧಾನಪರಿಷತ್ತು ಮೇಲ್ಮನೆ ಇವು ವ್ಯವಹಾರಿಕ ಸಂವಿಧಾನಬದ್ಧವಾಗಲಾರದು. ಇವೆರಡೂ ಮೇಲ್ಮನೆಗಳೇ ಅಥವಾ ಮಹಾ ಮನೆಗಳೇ ಆಗಿರುತ್ತವೆ. ವಿಧಾನಸಭೆಗೆ ರಾಜ್ಯಾದ್ಯಂತ ಚುನಾವಣೆಗಳು ನಡೆದು ಪ್ರಜಾಪ್ರತಿನಿಧಿಗಳು ಚುನಾಯಿತರಾಗಿ ವಿಧಾನಸಭಾಧ್ಯಕ್ಷರನ್ನು, ಮುಖ್ಯಮಂತ್ರಿಗಳನ್ನು ಹಾಗೂ ವಿರೋಧಪಕ್ಷದ ನಾಯಕರನ್ನು ಸಂವಿಧಾನಬದ್ಧವಾಗಿ ಆರಿಸಿಕೊಂಡು ವಿಧಾನಸಭೆಯ ಹಾಗೂ ರಾಜ್ಯದ ಆಡಳಿತವನ್ನು ಸಾಧಿಸುತ್ತಾರೆ. ರಾಜ್ಯದ ಭವಿಷ್ಯ ಹಾಗೂ ಆಗುಹೋಗುಗಳೆಲ್ಲವೂ ವಿಧಾನಸಭೆಯ ಕೈಯಲ್ಲಿಯೇ ಇದೆ. ಚುನಾಯಿತ ವಿಧಾನಸಭೆ ಹಾಗೂ ಚುನಾಯಿತ ಸರಕಾರಗಳಿರುವ ಎಲ್ಲಾ ರಾಜ್ಯಗಳಲ್ಲಿ ವಿಧಾನಪರಿಷತ್ತುಗಳು ಇರುವುದಿಲ್ಲ. ಹೊಸದಾಗಿ ವಿಧಾನಪರಿಷತ್ತನ್ನು ರಚಿಸುವುದು ಹಾಗೂ ರಚಿತವಾದ ಇದ್ದ ವಿಧಾನಪರಿಷತ್ತನ್ನು ರದ್ದುಪಡಿಸುವ ಅಧಿಕಾರ ಸಂಸತ್ತಿನ ಮಂಜೂರಿಗೊಳಪಟ್ಟು ವಿಧಾನಸಭೆಗೇ ಇರುತ್ತದೆ. ವಿಧಾನಸಭೆಯ ಕಾರ್ಯಕಲಾಪಗಳಿಗೆ ವಿಧಾನಪರಿಷತ್ತು ವ್ಯತಿರಿಕ್ತ ಹಾಗೂ ಮಾರಕವಾದ ಸಂದರ್ಭದಲ್ಲಿ ವಿಧಾನಸಭೆ, ವಿಧಾನಪರಿಷತ್ತನ್ನು ರದ್ದುಪಡಿಸಿದ ಉದಾಹರಣೆ ನಮ್ಮ ರಾಷ್ಟ್ರದಲ್ಲಿವೆ. ವಿಧಾನಸಭೆಗೆ ಪ್ರಜೆಗಳು ನೇರವಾಗಿ ಪ್ರಜಾಪ್ರತಿನಿಧಿಗಳನ್ನು 5 ವರ್ಷಕ್ಕೊಮ್ಮೆ ಚುನಾಯಿಸುತ್ತಾರೆ. ಆದರೆ ವಿಧಾನಪರಿಷತ್ತಿಗೆ ಹೀಗೆ ನೇರವಾದ ಚುನಾವಣೆಗಳು ನಡೆಯುವುದಿಲ್ಲ. ವಿಧಾನಪರಿಷತ್ತಿನ ಉದ್ದೇಶ ವಿಧಾನಪರಿಷತ್ತು ವಿಧಾನಸಭೆಗೆ ಮಾರ್ಗದರ್ಶಿಯಾಗಬೇಕು. ಸೂಕ್ತ ಸಲಹೆಗಳನ್ನು ಕೊಡಬೇಕು, ದಾರಿದೀಪವಾಗಬೇಕು, ಸಂಜೀವಿನಿಯಾಗಬೇಕು, ಸಹಾಯಕಾರಿಯಾಗಬೇಕೆಂಬ ಉದ್ದೇಶದಿಂದಲೇ ವಿಧಾನಪರಿಷತ್ತಿಗೆ ಅಸಾಧಾರಣ, ಅಸಾಮಾನ್ಯ, ಅಪಾರ ಅನುಭವಿ, ವ್ಯವಹಾರಿಕ ಜ್ಞಾನವುಳ್ಳ ಸಮಾಜಿಕ, ಸಾರ್ವಜನಿಕ ಕ್ಷೇತ್ರಗಳಲ್ಲಿ ಸಮಾಜ ಸೇವೆಗೈದ, ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ, ಜಿಲ್ಲಾ ಪಂಚಾಯತಿ, ಪಟ್ಟಣ ಪಂಚಾಯತಿ, ಪುರಸಭೆ, ನಗರಸಭೆ, ನಗರಪಾಲಿಕೆ, ಇತ್ಯಾದಿ ಸ್ಥಳೀಯ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳ ಕ್ಷೇತ್ರದಿಂದ,

ಕೆಲವರು ಚುನಾಯಿತರಾಗಿ ಬರುತ್ತಾರೆ. ಶಿಕ್ಷಣ ತಜ್ಞರಾದ ಶಿಕ್ಷಕರ ಕ್ಷೇತ್ರದಿಂದ ಕೆಲವರು ಚುನಾಯಿತರಾಗಿ ಬರುತ್ತಾರೆ. ಪದವೀಧರ ಪಂಡಿತರ ಕ್ಷೇತ್ರದಿಂದ ಕೆಲವರು ಚುನಾಯಿತರಾಗಿ ಬರುತ್ತಾರೆ. ವಿಧಾನಸಭೆಯ ಸದಸ್ಯರಿಂದ ಕೆಲವು ಅಪಾರ ಅನುಭವಿಗಳು ಆರಿಸಿ ಬರುತ್ತಾರೆ. ರಾಜ್ಯಪಾಲರಿಂದ ನಾಮಕರಣಗೊಂಡವರು ಕೆಲವರು ಸದಸ್ಯರಾಗುತ್ತಾರೆ. ಹೀಗೆ ವಿಧಾನಪರಿಷತ್ತಿಗೆ ಪ್ರತಿಷ್ಠಿತ ವ್ಯಕ್ತಿ ಅಪಾರ ಅನುಭವಿಗಳಾದವರೇ ಬರಬೇಕೆಂಬುದು ಸಂವಿಧಾನ ಶಿಲ್ಪಿಗಳ ಮಹದುದ್ದೇಶ, ಆದರೆ ಆಗುತ್ತಿರುವುದೇನು?

ಅಪ್ಪ ವಿಧಾನಸಭೆ ಸದಸ್ಯರಾಗಿದ್ದರೆ ಮಗ ವಿಧಾನಪರಿಷತ್ ಸದಸ್ಯ, ಗಂಡ-ಅಣ್ಣ ವಿಧಾನಸಭೆ ಸದಸ್ಯನಾಗಿದ್ದರೆ ಹೆಂಡತಿ-ತಂಗಿ ವಿಧಾನಪರಿಷತ್ ಸದಸ್ಯರು, ಅತಿ ಹೆಚ್ಚು ವಯಸ್ಸಿನ ಅಪಾರ, ಅಸಾಧಾರಣ ಪ್ರತಿಷ್ಠಿತ ವ್ಯಕ್ತಿ ವಿಧಾನಸಭೆ ಸದಸ್ಯನಾಗಿದ್ದರೆ ಅತಿ ಚಿಕ್ಕ ವಯಸ್ಸಿನ ಅನನುಭವಿ ವ್ಯವಹಾರಿಕ ಜ್ಞಾನವಿಲ್ಲದವರನೇಕರು ನಮ್ಮ ರಾಷ್ಟ್ರದಲ್ಲಿ ವಿಧಾನಪರಿಷತ್ತಿನ ಸದಸ್ಯರಾದದ್ದೂ ಇದೆ. ಅಪಾರ ಅನುಭವವುಳ್ಳವರ ವಿಧಾನಸಭೆಯಲ್ಲಿ ಅಂಗೀಕಾರವಾದ ಜನಪರ ಮಸೂದೆಯನ್ನು ರಾಜಕೀಯ ದುರುದ್ದೇಶದಿಂದ ವಿಧಾನಪರಿಷತ್ತು ಅಂಗೀಕಾರ ಮಾಡದೇ ತಿರಸ್ಕರಿಸಿ ಪ್ರಜಾತಂತ್ರ ವ್ಯವಸ್ಥೆಯ ರೂವಾರಿ ವಿಧಾನಸಭೆಗೇ ಅಪಚಾರ ಮಾಡಿದ ವಿಧಾನ ಪರಿಷತ್ತಿನ ಉದಾಹರಣೆಗಳೂ ಉಂಟು. ವಿಧಾನಸಭೆಯಿಂದ ವಿಧಾನಪರಿಷತ್ತಿಗೆ ಸರಕಾರಕ್ಕೆ ಬೇಕಾದವರು, ಏನೂ ಅನುಭವವಿಲ್ಲದವರು, ಅತಿ ಚಿಕ್ಕ ವಯಸ್ಸಿನವರು, ವ್ಯಾವಹಾರಿಕ ಜ್ಞಾನವಿಲ್ಲದವರು, ಸಾಮಾಜಿಕ ಹಿನ್ನೆಲೆ ಇಲ್ಲದವರು ಇತ್ಯಾದಿ ಅನೇಕರನ್ನು ಚುನಾಯಿಸಿದ ಉದಾಹರಣೆಗಳೂ ನಮ್ಮ ರಾಷ್ಟ್ರದಲ್ಲಿವೆ. ವಿಧಾನಪರಿಷತ್ತಿಗೆ ಕೆಲವರನ್ನು ಸದಸ್ಯರನ್ನಾಗಿ ರಾಜ್ಯಪಾಲರು ನಾಮಕರಣ ಮಾಡಬೇಕಾಗುತ್ತದೆ. ರಾಜ್ಯಪಾಲರು ಮಾಡುವ ನಾಮಕರಣಗಳು ಯಾವುದೇ ಒಂದು ತಳಹದಿ, ಅಳತೆಗೋಲಿಲ್ಲದೇ ಮುಖ್ಯಮಂತ್ರಿಗಳು ಶಿಫಾರಸ್ಸು ಮಾಡಿದ ವ್ಯಕ್ತಿಗಳನ್ನೇ ರಾಜ್ಯಪಾಲರು ಕಣ್ಮುಚ್ಚಿ ನಾಮಕರಣ ಮಾಡಿದ ಉದಾಹರಣೆಗಳೂ ನಮ್ಮ ರಾಷ್ಟ್ರದಲ್ಲಿದೆ. ಸಾಹಿತ್ಯ, ಸೈನ್ಸ್, ಆರ್ಟ್ಸ್, ಸಹಕಾರ ಚಳುವಳಿ ಮತ್ತು ಸಮಾಜಸೇವೆಯಲ್ಲಿ ವಿಶೇಷ ಜ್ಞಾನ ಅಥವಾ ವಾಸ್ತವಿಕ ಅನುಭವ ಉಳ್ಳವರನ್ನೇ ರಾಜ್ಯಪಾಲರು ವಿಧಾನಪರಿಷತ್ತಿನ ಸದಸ್ಯರನ್ನಾಗಿ ನಾಮಕರಣ ಮಾಡಬೇಕೆಂದು ಸಂವಿಧಾನ ಲೇಖವಿದ್ದರೂ ಈ ಅಂಶಗಳನ್ನು ಗಾಳಿಗೆ ತೂರಿ ಮುಖ್ಯಮಂತ್ರಿಗಳ ತಾಳಕ್ಕೆ ತಕ್ಕಂತೆ ಅವರು ಶಿಫಾರಸ್ ಮಾಡಿದವರನ್ನೇ ನಾಮಕರಣ ಮಾಡಿದ ಉದಾಹರಣೆಗಳು ರಾಷ್ಟ್ರದಲ್ಲಿ ಸಾಕಷ್ಟು ಇವೆ. ರಾಜ್ಯಪಾಲರು ಶಾಸಕಾಂಗದ ಅಧಿಪತಿ ವಿಧಾನಸಭಾಧ್ಯಕ್ಷರ ಮೇಲೆ, ಕಾರ್ಯಾಂಗ ಅಧಿಪತಿ ಮುಖ್ಯಮಂತ್ರಿಗಳ ಮೇಲೆ, ನ್ಯಾಯಾಂಗದ ಅಧಿಪತಿ ಹೈಕೋರ್ಟ್ ಮುಖ್ಯ ನ್ಯಾಯಾಧೀಶರ ಮೇಲೆ ಸಂವಿಧಾನಬದ್ಧ ಅಗ್ರಗಣ್ಯರು. ಈ ಮೂರು ಸಂವಿಧಾನಬದ್ಧ ಅಂಗಗಳ ಅಧಿಪತಿಗಳಿಗಿಂತ ಹೆಚ್ಚಿನ ಅನುಭವವುಳ್ಳ ಹಾಗೂ ಅಧಿಕಾರ ಚಲಾವಣೆಯನ್ನು ಅಂಜದೇ ಅಳುಕದೇ ಸ್ವತಂತ್ರವಾಗಿ ತಮ್ಮ ನಿರ್ಧಾರವನ್ನು ತೆಗೆದುಕೊಳ್ಳುವ ಶ್ರೇಷ್ಠ ಸಮಂಜಸ ಪರಮಾಧಿಕಾರವುಳ್ಳವರಾಗಿದ್ದಾರೆ. ಹೀಗಿರುವಾಗ ರಾಜ್ಯಪಾಲರವರು ಸರಕಾರದ

ಅಸಮಂಜಸ ಶಿಫಾರಸ್ಸನ್ನು ಒಪ್ಪುವುದೇಕೆ? ನಮ್ಮ ರಾಷ್ಟ್ರದಲ್ಲಿ ಕೆಲವು ರಾಜ್ಯಪಾಲರು ವಿಶ್ವವಿದ್ಯಾಲಯ ವೈಸ್ - ಚಾನ್ಸಲರನ್ನು ನೇಮಿಸುವಾಗ ಸರಕಾರ ಶಿಫಾರಸ್ಸು ಮಾಡಿದ ಕ್ರಿಮಿನಲ್‌ಗಳನ್ನೇ ನೇಮಕ ಮಾಡಿ ನಂತರ ಅವರು ಕ್ರಿಮಿನಲ್ ಎಂದು ಗೊತ್ತಾದ ಮೇಲೆ ಆ ನೇಮಕ ಅಥವಾ ನಾಮಕರಣವನ್ನು ರದ್ದುಪಡಿಸಿದ ಉದಾಹರಣೆಯೂ ಉಂಟು. ವಿಧಾನಪರಿಷತ್ತಿಗೆ ರಾಜ್ಯಪಾಲರು ಸದಸ್ಯರನ್ನು ನಾಮಕರಣ ಮಾಡುವಾಗ ಸಾಹಿತ್ಯ, ಸೈನ್ಸ್, ಆರ್ಟ್ಸ್, ಸಹಕಾರ ಚಳುವಳಿ ಮತ್ತು ಸಮಾಜಸೇವೆ ಕ್ಷೇತ್ರದಲ್ಲಿ ವಿಶೇಷ ಜ್ಞಾನ ಅಥವಾ ವಾಸ್ತವಿಕ ಅನುಭವವುಳ್ಳವರಲ್ಲಿಯೇ ಹೆಚ್ಚಿನ ಶ್ರೇಣಿಯ ಪ್ರತಿಭಾವಂತ ಅತೀ ಹೆಚ್ಚಿನವರಾರೆಂಬುದನ್ನು ಖಚಿತ ಮಾಡಿಕೊಂಡು ಅವರಲ್ಲೇ ಅತೀ ವಿಶೇಷ ಜ್ಞಾನಿಗಳನ್ನು ನಾಮಕರಣ ಮಾಡಬೇಕೇ ಹೊರತು ನ್ಯಾಯ ನಿಷ್ಠುರಿಗಳಾಗದೇ ದಾಕ್ಷಿಣ್ಯಪರರಾಗಿ ಪಕ್ಷಪಾತಿಗಳಾಗಿ ನಾಮಕರಣ ಮಾಡಿದರೆ ಅದು ಸಮಂಜಸವಲ್ಲ. ಅಂತೆಯೇ ರಾಜಕೀಯ ಪಕ್ಷಗಳು ಸ್ಥಳೀಯ ಸಂಸ್ಥೆಗಳ ಸದಸ್ಯರ ಕ್ಷೇತ್ರದಿಂದಾಗಲೀ, ಪದವೀಧರ ಕ್ಷೇತ್ರದಿಂದಾಗಲೀ, ಶಿಕ್ಷಕರ ಕ್ಷೇತ್ರದಿಂದಾಗಲೀ ಅಥವಾ ವಿಧಾನಸಭೆ ಸದಸ್ಯರ ಕ್ಷೇತ್ರದಿಂದಾಗಲೀ ತಮ್ಮ ತಮ್ಮ ಉಮೇದುವಾರರನ್ನು ಗೊತ್ತುಪಡಿಸುವಾಗ ಅಪಾರ ಅನುಭವಿ ವಿಶೇಷ ಜ್ಞಾನ ಹಾಗೂ ಸಾಮಾಜಿಕ ಸೇವೆ ಮಾಡಿದ ಗಣ್ಯರನ್ನೇ ಗುರುತಿಸಿ ಚುನಾವಣೆಗೆ ನಿಲ್ಲಿಸಿ ಅಂಥವರನ್ನು ಗೆಲ್ಲಿಸಿ ವಿಧಾನಪರಿಷತ್ ಸದಸ್ಯರನ್ನಾಗಿ ಮಾಡಿದರೆ ಅಂತಹ ವಿಧಾನಪರಿಷತ್ ಹಿರಿಯರ, ಜ್ಞಾನಿಗಳ, ಅಪಾರ ಅನುಭವಿಗಳ, ಸಮಾಜಸೇವಕರ, ಸಮಾಜ ಚಿಂತಕರ, ಮಾರ್ಗದರ್ಶಕರ ಮಹಾಮನೆಯಾದೀತು. ವಿಧಾನಪರಿಷತ್ತು ಕೇವಲ ಕೆಲವು ಅಪಾರ ಅನುಭವಿ ಜ್ಞಾನಿ ಮಾರ್ಗದರ್ಶಿ ಹಿರಿಯರಾದರೆ ಸಾಲದು. ಈ ಮನೆಯಲ್ಲಿ ನೂರಕ್ಕೆ ನೂರರಷ್ಟು ಸದಸ್ಯರು ವಿಧಾನಸಭೆಯ ಸದಸ್ಯರೆಲ್ಲರನ್ನು ಮೀರಿಸುವ ಅಪಾರ ಅನುಭವಿಗಳಾದರೆ ಮಾತ್ರ ವಿಧಾನಪರಿಷತ್ತಿನ ಅಸ್ತಿತ್ವ ಕಾರ್ಯಾಚರಣೆ ಸಂವಿಧಾನಬದ್ಧ ಹಾಗೂ ರಾಜ್ಯಕ್ಕೆ ಶಾಸಕಾಂಗಕ್ಕೆ ಶೋಭಾಯಮಾನವಾಗಿ ಮಹಾಮನೆಯಾಗಿ ಹಿರಿಯರ ಮೇಲ್ಮನೆಯೂ ಆದೀತು. ವಿಧಾನಪರಿಷತ್ತಿಗೆ ನಾಮಕರಣ ಹೊಂದಲು ಅರ್ಹರಾದ ಅಸಾಧಾರಣ ಅನುಭವಿಗಳು ಕೂಡ ಹಾಜರಿರದೆ ರಾಜ್ಯಪಾಲರಿಗೆ ಮನವಿ ಸಲ್ಲಿಸಿ, ರಾಜ್ಯಪಾಲರನ್ನು ಸತ್ವ ಪರೀಕ್ಷೆಗೆ ಹಚ್ಚುವುದು ಸಾರ್ವಜನಿಕ ಹಿತದೃಷ್ಟಿಯಿಂದ ಅಗತ್ಯ ಕರ್ತವ್ಯವೆಂಬುದನ್ನು ಅರಿತು ಮುನ್ನಡೆದರೆ ಸಂವಿಧಾನ ಆರ್ಟಿಕಲ್ 171(5) ಅಸ್ತಿತ್ವದಲ್ಲಿರುವುದು ಸಾರ್ಥಕವಾದೀತು.

❑

ವಿಧಾನಪರಿಷತ್ತಿಗೆ ನಾಮಕರಣ
ರಾಜ್ಯಪಾಲ - ಸರ್ಕಾರದಿಂದ ಸಂವಿಧಾನ ಉಲ್ಲಂಘನೆ

ಅನೇಕರು ಅನೇಕ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿ ಅರ್ಹತೆಯನ್ನು ಹೊಂದಿ ವಿವಿಧ ಸ್ಥಾನ ಹಾಗೂ ಅಧಿಕಾರ ಪಡೆಯಲು ಅರ್ಹರಾಗಿರುತ್ತಾರೆ. ಈ ಎಲ್ಲ ಅರ್ಹರಲ್ಲಿಯೆ ರ್‍ಯಾಂಕ್ ಹಾಗೂ ಅತಿ ರ್‍ಯಾಂಕ್ ಪಡೆದ ಪ್ರತಿಭಾವಂತರನ್ನೇ ಮಾತ್ರ ನೇಮಕ ಮಾಡುವುದು ಕಾನೂನು ನೀತಿ, ನಿಯಮಬದ್ಧವಾಗಿರುತ್ತದೆ. ಈ ರಾಷ್ಟ್ರದಲ್ಲಿ ವಿಧಾನಸಭೆ, ವಿಧಾನಪರಿಷತ್ತು, ಲೋಕಸಭೆ, ರಾಜ್ಯಸಭೆಗಳ ಸದಸ್ಯರಾಗಲು ಅರ್ಹರಾದ ಯಾರನ್ನೇ ಆಗಲಿ ರಾಜಕೀಯ ಪಕ್ಷಗಳು ಉಮೇದುವಾರರನ್ನಾಗಿ ಚುನಾವಣೆಗೆ ನಿಲ್ಲಿಸಿ ಚುನಾಯಿಸಿ ಕೊಳ್ಳಲಾಗುತ್ತದೆ. ಇಲ್ಲಿ ಕನಿಷ್ಠ ಹಾಗೂ ಗರಿಷ್ಠ ಅರ್ಹತೆಗಳಾವುವೂ ಗಣನೆಗೆ ಬರುವುದಿಲ್ಲ. ಅಂತೆಯೇ ಮಂತ್ರಿ, ಮಹಾಮಂತ್ರಿಗಳಾಗಲು ಸಹ ಕನಿಷ್ಠ ಹಾಗೂ ಗರಿಷ್ಠ ಅನುಭವ, ಯೋಗ್ಯತೆ, ಅರ್ಹತೆ ಮೊದಲಾದ ಹಿರಿಮೆ-ಗರಿಮೆಗಳನ್ನು ಗಣನೆಗೆ ತೆಗೆದುಕೊಂಡು ಅವರನ್ನು ಚುನಾವಣೆಗೆ ನಿಲ್ಲಿಸಿ ಗೆಲ್ಲಿಸಿ ಮಂತ್ರಿ, ಮಹಾಮಂತ್ರಿಗಳನ್ನಾಗಿ ಮಾಡಿದ ಸತ್ ಸಂಪ್ರದಾಯಗಳೂ ನಮ್ಮ ರಾಷ್ಟ್ರದಲ್ಲಿ ಸಾಕಷ್ಟಿವೆ. ಈ ರಾಷ್ಟ್ರದಲ್ಲಿ ಅನೇಕ ಅಧಿನಿಯಮ ವ ಕಾನೂನುಬದ್ಧ ಸಂಘ-ಸಂಸ್ಥೆಗಳಿಗೆ ಸದಸ್ಯರನ್ನು ನಾಮಕರಣ ಮಾಡುವ ಹಕ್ಕು ಸರ್ಕಾರಗಳಿಗಿವೆ. ಆ ಸರಕಾರಗಳು ನಾಮಕರಣ ಮಾಡುವ ತಮ್ಮ ತಮ್ಮ ರಾಜಕೀಯ ಪಕ್ಷದ ಸದಸ್ಯರಾದ ಅನನುಭವಿಗಳನ್ನಾಗಲಿ ಅನುಭವಿಗಳನ್ನಾಗಲಿ ಅಥವಾ ಅಪಾರ ಅನುಭವಗಳನ್ನಾಗಲೀ ನಾಮಕರಣ ಮಾಡಿದ ಸತ್ ಸಂಪ್ರದಾಯಗಳೂ ಉಂಟು. ನಾಮಕರಣ ಮಾಡುವ ಹಕ್ಕು ಸರ್ಕಾರಕ್ಕಿದ್ದರೆ ತಮಗಿಷ್ಟ ಬಂದವರನ್ನೇ ಮಾಡುವ ಹಕ್ಕನ್ನು ಯಾರೂ ಪ್ರಶ್ನಿಸಲಾರರು. ಭಾರತ ಸಂವಿಧಾನ ಪ್ರಕಾರ ರಾಜ್ಯದ ವಿಧಾನಪರಿಷತ್ತಿಗೆ ಕೆಲವರನ್ನು ನಾಮಕರಣ ಮಾಡುವ ಹಕ್ಕು ಸರ್ಕಾರಕ್ಕಿರದೆ ರಾಜ್ಯದ ರಾಜ್ಯಪಾಲರಿಗೆ ಆರ್ಟಿಕಲ್ 171(3)(ಇ) ಮತ್ತು 5 ಪ್ರಕಾರ ವಿಧಾನಪರಿಷತ್ತಿಗೆ ಕೆಲವು ಸದಸ್ಯರನ್ನು ನಾಮಕರಣ ಮಾಡುವ ಹಕ್ಕು ಇದೆ. ಈ ನಾಮಕರಣದ ಸಲುವಾಗಿ ರಾಜ್ಯಪಾಲರಿಗೆ ಅರ್ಹರಾದವರೂ ಅರ್ಜಿ ಸಲ್ಲಿಸಬಹುದು, ರಾಜ್ಯದಲ್ಲಿ ಯ ರಾಜಕೀಯ ಪಕ್ಷಗಳೂ ತಮಗಿಷ್ಟ ಬಂದವರ ಹೆಸರನ್ನು ಶಿಫಾರಸು ಮಾಡಬಹುದು. ರಾಜ್ಯದ ಮುಖ್ಯಮಂತ್ರಿಗಳೂ

ತಮಗಿಷ್ಟ ಬಂದ ಗಣ್ಯರನ್ನೇ ಆಗಲಿ ಅತಿ ಗಣ್ಯರನ್ನೇ ಆಗಲಿ ಸಂವಿಧಾನಬದ್ಧ ಅರ್ಹರ ಹೆಸರನ್ನು ರಾಜ್ಯಪಾಲರಿಗೆ ಶಿಫಾರಸು ಮಾಡಬಹುದು. ರಾಜ್ಯಪಾಲರು ರಾಜ್ಯದ ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗದ ಪಾಲಕರೂ ಹೌದು. ರಾಜ್ಯದ ಪ್ರಜಾರಾಜಪಾಲರೂ ಹೌದು. ಭಾರತ ಸಂವಿಧಾನಬದ್ಧ ಅಗ್ರಗಣ್ಯರೂ ಹೌದು. ವಿಧಾನಸಭಾಧ್ಯಕ್ಷ, ಮುಖ್ಯಮಂತ್ರಿ, ಮುಖ್ಯ ನ್ಯಾಯಾಧೀಶರ ಮೇಲೆ ಅಧಿಕಾರ ಹೊಂದಿದ ಸರ್ವಶ್ರೇಷ್ಠರೂ ಹೌದು. ಹೀಗಿರುವಾಗ ಮುಖ್ಯಮಂತ್ರಿ, ವಿಧಾನಸಭಾಧ್ಯಕ್ಷ ರಾಜಕೀಯ ಪಕ್ಷಗಳ ನಾಯಕರು ಶಿಫಾರಸು ಮಾಡಿದ ಹೆಸರುಗಳನ್ನು ಹಾಗೂ ನೇರವಾಗಿ ರಾಜ್ಯಪಾಲರಿಗೆ ಮನವಿ ಮಾಡಿಕೊಂಡವರ ಹೆಸರುಗಳನ್ನು ಗಣನೆಗೆ ತೆಗೆದುಕೊಂಡು ಸಂವಿಧಾನಬದ್ಧವಾಗಿ ಸಾಹಿತ್ಯ, ವಿಜ್ಞಾನ, ಕಲೆ, ಸಹಕಾರಿ ಆಂದೋಲನ ಮತ್ತು ಸಾಮಾಜಿಕ ಸೇವೆ ಈ ವಿಷಯಗಳಲ್ಲಿ ವಿಶೇಷ ಜ್ಞಾನ ಅಥವಾ ವಾಸ್ತವಿಕ ಅನುಭವವುಳ್ಳವರನ್ನೇ ಮಾತ್ರ ವಿಧಾನಪರಿಷತ್ತಿನ ಸದಸ್ಯರನ್ನಾಗಿ ನಾಮಕರಣ ಮಾಡಬೇಕೆಂಬ ಕಡ್ಡಾಯ ಸಂವಿಧಾನ ಆರ್ಟಿಕಲ್ 171(5)ರಲ್ಲಿ ಉಲ್ಲೇಖಿಸಲ್ಪಟ್ಟಿದೆ. ಈ ನಾಮಕರಣ ಮಾಡುವ ಅಧಿಕಾರವನ್ನು ಸಂವಿಧಾನ ರಾಜ್ಯಪಾಲರಿಗೆ ಕೊಟ್ಟಿದೆಯೇ ವಿನಃ ರಾಜ್ಯದ ಮುಖ್ಯಮಂತ್ರಿಗಳಿಗೆ ಕೊಟ್ಟಿಲ್ಲ. ರಾಜ್ಯದ ಮುಖ್ಯಮಂತ್ರಿಗಳು ರಾಜಕೀಯ ಪಕ್ಷಗಳು ಅಥವಾ ಯಾರೇ ಗಣ್ಯರು ಶಿಫಾರಸು ಮಾಡಿದ ಹೆಸರುಗಳನ್ನು ಹಾಗೂ ನೇರವಾಗಿ ಮನವಿ ಸಲ್ಲಿಸಿದವರನ್ನು ಗಣನೆಗೆ ತೆಗೆದುಕೊಂಡು ಅವರನ್ನು ಅವರವರ ಅನುಭವ ಹಾಗೂ ವಿಶೇಷ ಜ್ಞಾನ ಪಡೆದ ಹಿನ್ನೆಲೆಯಲ್ಲಿ ರಾಜ್ಯಪಾಲರು ತಮ್ಮ ವಿವೇಚನೆಗೊಳಪಟ್ಟು ತಮ್ಮ ಅವಗಾಹನೆಗೆ ವಿವಿಧ ಮೂಲಗಳಿಂದ ಬಂದ ಹೆಸರುಗಳ ಪೈಕಿ ಸಾಹಿತ್ಯ, ವಿಜ್ಞಾನ, ಕಲೆ, ಸಹಕಾರಿ ಆಂದೋಲನ ಹಾಗೂ ಸಾಮಾಜಿಕ ಸೇವೆಗಳಲ್ಲಿ ಅತಿ ಹೆಚ್ಚಿನ ವಿಶೇಷ ಜ್ಞಾನ ಅಥವಾ ಪ್ರಾತ್ಯಕ್ಷಿಕ ಅನುಭವವುಳ್ಳ ವ್ಯಕ್ತಿ, ಅವರು ಅಧಿಕಾರಾರೂಡ ಪಕ್ಷದ ಮುಖ್ಯಮಂತ್ರಿಗಳು ಶಿಫಾರಸು ಮಾಡಿದವರೇ ಇರಲಿ ಅಥವಾ ಯಾರೇ ಇರಲಿ ಅವರಲ್ಲಿ 5 ಜನರನ್ನು ನಾಮಕರಣ ಮಾಡಿ ರಾಜ್ಯಪಾಲರೇ ನೇರವಾಗಿ ಪ್ರಕಟಣೆ ಹೊರಡಿಸಬೇಕಾಗುತ್ತದೆ. ಆದರೆ ಈ ದಿಶೆಯಲ್ಲಿ ಸಂವಿಧಾನದ ಉಲ್ಲೇಖವನ್ನು ಗಾಳಿಗೆ ತೂರಿ ಮುಖ್ಯಮಂತ್ರಿಗಳು ಮಾತ್ರ ಶಿಫಾರಸು ಮಾಡಿದವರನ್ನು ಮಾತ್ರ ನಾಮಕರಣ ಮಾಡಿರುವುದು ಸಂವಿಧಾನ ಸುಸ್ಪಷ್ಟ ಉಲ್ಲಂಘನೆ.

ಈಗ ನಾಮಕರಣಗೊಂಡವರು ಯಾವ ರೀತಿಯಿಂದಲೂ ಅನರ್ಹರಲ್ಲ. ಅವರ ಬಗ್ಗೆ ಆದರ, ಗೌರವಗಳು ಎಲ್ಲರಲ್ಲೂ ಇವೆ. ಆದರೆ, ಇವರಿಗಿಂತಲೂ ಹೆಚ್ಚಿನ ರ್‍ಯಾಂಕ್ ಪಡೆದ ಸಾಹಿತ್ಯ, ಕಲೆ, ವಿಜ್ಞಾನ, ಸಹಕಾರ ಆಂದೋಲನ ಮತ್ತು ಸಾಮಾಜಿಕ ಸೇವೆಯಲ್ಲಿ ಹೆಚ್ಚಿನ ವಿಶೇಷ ಜ್ಞಾನ ಅಥವಾ ಪ್ರಾತ್ಯಕ್ಷಿಕ ಅನುಭವವುಳ್ಳ ಅಪಾರ ಅಗ್ರಗಣ್ಯ ಮಹಾಪುರುಷರು ಕಾಂಗ್ರೆಸ್ ಪಕ್ಷಗಳನ್ನೊಳಗೊಂಡ ಎಲ್ಲ ರಾಜಕೀಯ ಪಕ್ಷಗಳಲ್ಲಿ ಹಾಗೂ ಪಕ್ಷಾತೀತ ವಲಯಗಳಲ್ಲಿ ಸಾಕಷ್ಟು ವ್ಯಕ್ತಿಗಳು ಇರುವಾಗ ಅವರನ್ನು ಕಡೆಗಣಿಸಿ ರಾಜ್ಯಪಾಲರು, ಮುಖ್ಯಮಂತ್ರಿಗಳ ಶಿಫಾರಸ್ಸಿಗೆ ಮಾತ್ರ ತಮ್ಮ ವಿವೇಚನೆಯನ್ನು ಬಿಟ್ಟು

ಮುದ್ರೆ ಹಾಕಿರುವುದು ದುರದೃಷ್ಟಕರ ಹಾಗೂ ಸಂವಿಧಾನ ಬಾಹಿರ ಹಾಗೂ ಅವಹೇಳನ. ರಾಜ್ಯಪಾಲರು ಸಂವಿಧಾನದ ರಕ್ಷಕರು, ಪಾಲಕರು. ಅವರು ಯಾವುದೇ ಪಕ್ಷದ ಅಥವಾ ಸರ್ಕಾರದ ಏಜೆಂಟರಾಗಿರದೆ ಸಂವಿಧಾನ ಹಾಗೂ ಸಂವಿಧಾನದ ಉಲ್ಲೇಖ ಹಾಗೂ ಕಾರ್ಯ ನಿರ್ವಹಿಸುವಲ್ಲಿ ತಮ್ಮ ಪ್ರಾಮಾಣಿಕ ವಿವೇಚನೆಯನ್ನು ಸಾಕಾರಗೊಳಿಸುವುದು ಇನ್ನಾದರೂ ಒಳ್ಳೆಯದು. ಈಗ ನಾಮಕರಣಗೊಂಡವರನ್ನು ವಿಧಾನಪರಿಷತ್ತಿಗೆ ಅಥವಾ ರಾಜ್ಯಸಭೆಗೆ ವಿಧಾನಸಭಾ ಕ್ಷೇತ್ರದಿಂದ ಸುಲಭವಾಗಿ ಆರಿಸಿ ಕಳುಹಿಸುವ ಅವಕಾಶವಿದ್ದರೂ ಮುಖ್ಯಮಂತ್ರಿಗಳು ಕಾಂಗ್ರೆಸ್ ಪಕ್ಷದಲ್ಲಿಯೇ ಇರುವ ಅತೀ ಅಪಾರ ಅಗ್ರಗಣ್ಯ ಸಾಹಿತಿ, ವಿಜ್ಞಾನಿ, ಕಲೆಗಾರ, ಸಹಕಾರಿ, ಸಮಾಜ ಸೇವಕ ಮೊದಲಾದ ಹಿರಿಯರನ್ನು ಅವರಾರೇ ಇರಲಿ ಅವರನ್ನು ರಾಜ್ಯಪಾಲರಿಂದ ನಾಮಕರಣ ಮಾಡಿಸಿಕೊಂಡಿದ್ದರೆ ಮುಖ್ಯಮಂತ್ರಿಗಳಿಗಿರುವ ಅಪಾರ ಪ್ರಶ್ನಾತೀತ ಅನುಭವಕ್ಕೆ ಅತಿ ಹೆಚ್ಚಿನ ಮೆರುಗು ಬರುತ್ತಿತ್ತು. ಆದರೆ ಸಾಹಿತ್ಯ, ಕಲೆ, ವಿಜ್ಞಾನ, ಸಹಕಾರ ಆಂದೋಲನ, ಸಮಾಜ ಸೇವೆ ಸಂವಿಧಾನ 171(5)ರ ಉಲ್ಲೇಖದಲ್ಲಿರುವ ವಿಶೇಷ ಜ್ಞಾನಿ ಅಥವಾ ಪ್ರಾತ್ಯಕ್ಷಿಕ ಅನುಭವವುಳ್ಳ ಹಿರಿಯರ ಸೇವೆಗೆ ವಂಚಿತವಾದ ವಿಧಾನಪರಿಷತ್ತಿನ ದುರ್ದೈವ. ವಿಧಾನಪರಿಷತ್ತಿಗೆ ನಾಮಕರಣ ಮಾಡುವ ಸಂವಿಧಾನ 171(3)(ಇ) ಮತ್ತು 5 ಪ್ರಕಾರ ರಾಜ್ಯಪಾಲರಿಗೆ ಇರುವ ಅಧಿಕಾರವನ್ನು, ರಾಜ್ಯಪಾಲರು ವಿವೇಚನಾಶೀಲರಾಗಿ ಅತಿಗಣ್ಯರನ್ನು ನಾಮಕರಣ ಮಾಡಲಿಕ್ಕೆ ತಪ್ಪಿದರೆ ಸಂವಿಧಾನದ ಉದ್ದೇಶವೇ ನಿಷ್ಪ್ರಯೋಜಕವಾಗುವುದಾದರೆ ಈ ಅಧಿಕಾರವನ್ನು ಮುಖ್ಯಮಂತ್ರಿಗಳಿಗೆಯೇ ಏಕೆ ಕೊಡಬಾರದು? ಈ ದಿಶೆಯಲ್ಲಿ ಎಲ್ಲರ ಚಿಂತನೆ ಅಗತ್ಯ. ರಾಜ್ಯಪಾಲರ ಕಾರ್ಯಾಲಯಕ್ಕೆ ಬಂದ ಅತಿ ಅನುಭವಿಗಳ ಹೆಸರುಗಳನ್ನು ತಿರಸ್ಕರಿಸಿ, ಪಕ್ಷಪಾತ, ಸ್ವಜನ ಪಕ್ಷಪಾತ ಮಾಡಿದ ಬಗ್ಗೆ ಯಾರಾದರೂ ನ್ಯಾಯಾಲಯಕ್ಕೆ ಸಾರ್ವಜನಿಕ ಹಿತಾಸಕ್ತಿ ರಿಟ್ ಅರ್ಜಿ ಸಲ್ಲಿಸಿದರೆ ಅವುಗಳ ಪರಿಶೀಲನೆಯನ್ನು ಕೋರ್ಟ್ ಮಾಡಿದರೆ ಪರಿಣಾಮವೇನಾದೀತೆಂಬುದನ್ನು ರಾಜ್ಯಪಾಲರು ಹಾಗೂ ಸರ್ಕಾರ ಊಹಿಸುವುದು ಕೂಡ ಒಳ್ಳೆಯದು.

❑

ರಾಜ್ಯದ ಆಯವ್ಯಯ ಮತ್ತು ಶಾಸಕರ ಹೊಣೆಗಾರಿಕೆ

"ಕಾಂಚಾಣಂ ಕಾರ್ಯಸಿದ್ಧಿ" ಎಂಬಂತೆ ರಾಜ್ಯ ಸರಕಾರ ಕೈಕೊಳ್ಳಬೇಕಾದ ಆಡಳಿತ ಹಾಗೂ ಅಭಿವೃದ್ಧಿ ಕಾರ್ಯ ಕಾರ್ಯಗತ, ಸಿದ್ಧಿಯಾಗಬೇಕಾದರೆ ಕಾಂಚಾಣ (ಹಣವು) ಅವಶ್ಯವಾಗಿ ಬೇಕಾಗುತ್ತದೆ. ಪ್ರತಿವರ್ಷ ಯಾವ್ಯಾವ ಕಾರ್ಯಗಳಿಗಾಗಿ, ಎಷ್ಟೆಷ್ಟು ಕಾಂಚಾಣ ಬೇಕೆಂಬುದನ್ನು ಲಕ್ಕ ಹಾಕಿ ಬಜೆಟ್ ತಯಾರಿಸಿ, ಅದನ್ನು ವಿಧಾನಸಭೆಯಲ್ಲಿ ಮಂಡಿಸಿ ಅಂಗೀಕಾರ ಪಡೆದು ನಿಗದಿತ ಕಾರ್ಯಗಳಿಗೆ ನಿಗದಿತ ಕಾಂಚಾಣ ವೆಚ್ಚಮಾಡಿ, ನಿಗದಿತ ಆರ್ಥಿಕ ಹಾಗೂ ಭೌತಿಕ ಗುರಿಯನ್ನು ಸಾಧಿಸ ಬೇಕಾದುದು ಎಲ್ಲಾ ರಾಜ್ಯ ಸರಕಾರಗಳ ಸಂವಿಧಾನಬದ್ಧ ಕರ್ತವ್ಯ. ಈ ಕರ್ತವ್ಯದಲ್ಲಿ ಯಾವುದೇ ಸರಕಾರ, ಯಾವುದೇ ಮಂತ್ರಿ, ಯಾವುದೇ ಶಾಸಕರು ವಿಫಲಗೊಳ್ಳಬಾರದು. ಅವರು ವಿಫಲಗೊಂಡರೆ ಅಧ್ಯಕ್ಷರು, ಅಸಮರ್ಥರು, ಅಯೋಗ್ಯರೆಂದು ಅವರ ಆಡಳಿತ ಯಂತ್ರ ವಿಫಲಗೊಂಡಿದೆಯೆಂಬುದು ಸುಸ್ಪಷ್ಟ ಸಿದ್ಧಾಂತ. ನಮ್ಮ ರಾಜ್ಯದಲ್ಲಿ 99-2000ನೇ ಹಿಂದಿನ ವರ್ಷದಲ್ಲಿ ಅಧಿಕಾರದಲ್ಲಿದ್ದ ಜನತಾ ಹಾಗೂ ಕಾಂಗ್ರೆಸ್ ಸರಕಾರಗಳೆರಡೂ ಬಜೆಟ್ ನಿಗದಿತ ಆದಾಯದಲ್ಲಿ 2451.84 ಕೋಟಿ ಆಯ ಪಡೆದಿರುವುದಿಲ್ಲ. ಅಂತೆಯೇ ನಿಗದಿತ ವ್ಯಯಮಾಡುವಲ್ಲಿ 2284.01 ಕೋಟಿ ವೆಚ್ಚಮಾಡಿರುವುದಿಲ್ಲ. ನಿಗದಿತ ಆರ್ಥಿಕ ಹಾಗೂ ಭೌತಿಕ ಗುರಿ ಸಾಧಿಸುವಲ್ಲಿ ಆಡಳಿತ ಯಂತ್ರ ವಿಫಲವಾಗಿರುವುದು ಸುಸ್ಪಷ್ಟ. ಮುಂದೆ ಹೀಗಾಗದಂತೆ ಎಚ್ಚರಿಕೆ ವಹಿಸುವುದು ಸರಕಾರ ಹಾಗೂ ಶಾಸಕರ ಕರ್ತವ್ಯ.

2000-2001ನೇ ಪ್ರಸ್ತುತ ವರ್ಷದಲ್ಲಿ ತೆರಿಗೆ ರಾಜಸ್ವ, ತೆರಿಗೆ ರಹಿತ ರಾಜಸ್ವ, ಕೇಂದ್ರ ಸರಕಾರಿ ಸಹಾಯಾನುದಾನ ಕೇಂದ್ರ ಅಬಕಾರಿ ಶುಲ್ಕದ ಪಾಲು ಇವುಗಳ ಒಟ್ಟು 67 ಮೂಲಗಳಿಂದ ಹಾಗೂ ಆಂತರಿಕ ಸಾಲ, ಕೇಂದ್ರ ಸರಕಾರದ ಸಾಲ ಮತ್ತು ಮುಂಗಡ, ವಿವಿಧ ಸಾರ್ವಜನಿಕ ಸಾಲ ಮತ್ತು ಮುಂಗಡ ಇತ್ಯಾದಿ 46 ಬಂಡವಾಳ ಮೂಲಗಳಿಂದ ಒಟ್ಟು 20567.17 ಕೋಟಿ ಸಂಚಿತ ನಿಧಿ ಆಯ ಪಡೆಯಬೇಕಾಗುತ್ತದೆ.

ಸಾಮಾನ್ಯ, ಸಾಮಾಜಿಕ, ಆರ್ಥಿಕ ಸೇವೆ, ಸ್ಥಳೀಯ ಸಂಸ್ಥೆ ಮತ್ತು ಪಂಚಾಯತಿ ರಾಜ್ಯ ಸಂಸ್ಥೆಗಳಿಗೆ ಪರಿಹಾರ ಮತ್ತು ಪಾಲು ಇತ್ಯಾದಿ 84 ಮೂಲಗಳಿಗೆ, ಸಾಮಾನ್ಯ, ಸಾಮಾಜಿಕ, ಆರ್ಥಿಕ ಸೇವೆಗಳ ಬಂಡವಾಳ ವೆಚ್ಚ, ರಾಜ್ಯ ಸರಕಾರದ ಆಂತರಿಕ ಸಾಲ, ವಿವಿಧ ಸಾಲ ಮತ್ತು ಮುಂಗಡ ಇತ್ಯಾದಿ 86 ಮೂಲಗಳಿಗೆ ಒಟ್ಟು 24411.46 ಕೋಟಿ ಸಂಚಿತ ನಿಧಿಯ ವೆಚ್ಚಮಾಡಬೇಕಾಗುತ್ತದೆ. ಸಾದಲ್‌ವಾರ್ ನಿಧಿಯಿಂದ 5.00 ಕೋಟಿ ಆಯ ಪಡೆದ ಆ ನಿಧಿಯ ಅಷ್ಟೇ 5.00 ಕೋಟಿ ವೆಚ್ಚಮಾಡಬೇಕಾಗುತ್ತದೆ. ಸಣ್ಣ ಉಳಿತಾಯ, ಭವಿಷ್ಯ ನಿಧಿ ಇತ್ಯಾದಿ ಮೀಸಲು ನಿಧಿ, ಠೇವಣಿ ಮತ್ತು ಮುಂಗಡಗಳು, ಅಮಾನತು ಮತ್ತು ಸಂಕೀರ್ಣ, ಹಣ ರವಾನೆ ಇತ್ಯಾದಿ 32 ಸಾರ್ವಜನಿಕ ಲೆಕ್ಕ ಮೂಲಗಳಿಂದ ಒಟ್ಟು 15361.16 ಆಯ ಪಡೆದು, 32 ಸಾರ್ವಜನಿಕ ಲೆಕ್ಕದ ಮೂಲಗಳಿಗೆ 14913.16 ಕೋಟಿ ಮೊತ್ತವನ್ನು ಬಟವಾಡೆ ಮಾಡಬೇಕಾಗುತ್ತದೆ. ಹೀಗೆ ರಾಜ್ಯ ಸರಕಾರ 2000-2001ನೇ ವರ್ಷದಲ್ಲಿ ಒಟ್ಟು 145 ಆರ್ಥಿಕ ಮೂಲಗಳಿಂದ 35933.33 ಕೋಟಿ ಮೊತ್ತದ ಆಯವನ್ನು ಪಡೆದು ಒಟ್ಟು 202 ಆರ್ಥಿಕ ಮೂಲಗಳಿಗೆ 36329.62 ಕೋಟಿ ಮೊತ್ತದ ಬಟವಾಡೆ ಮಾಡಬೇಕಾಗುತ್ತದೆ. ಹೀಗೆ ಈ ವರ್ಷದಲ್ಲಿ ನಿಗದಿತ ಆದಾಯ ಪಡೆದು ನಿಗದಿತ ಬಟವಾಡೆ ಮಾಡಿ ಆರ್ಥಿಕ ಹಾಗೂ ಭೌತಿಕ ಗುರಿಯನ್ನು ಸಾಧಿಸಬೇಕಾಗುತ್ತದೆ. 30-9-2000ಕ್ಕೆ 2000-2001ಕ್ಕೆ ಈಗಾಗಲೇ ಆರ್ಥಿಕ ವರ್ಷದ ಅರ್ಧ ಅವಧಿ ಮುಕ್ತಾಯವಾಗಿದ್ದು ನಿಗದಿತ ವಾರ್ಷಿಕ ಆಯದಲ್ಲಿ ನಿಗದಿತ ಅರ್ಧ ಶೇಕಡಾ 50ರಷ್ಟು ಆಯ ಪಡೆಯಲಾಗಿದೆಯೇ? ನಿಗದಿತ ವಾರ್ಷಿಕ ಬಟವಾಡೆಯಲ್ಲಿ ನಿಗದಿತ ಅರ್ಧ ಶೇಕಡಾ 50ರಷ್ಟು ಬಟವಾಡೆ ಮಾಡಿ ನಿಗದಿತ ಭೌತಿಕ ಅಭಿವೃದ್ಧಿ ಸಾಧಿಸಲಾಗಿದೆಯೇ? ಪ್ರತಿತಿಂಗಳು ಹಾಗೂ ಪ್ರತಿವರ್ಷ ಕೆಲವು ಮೂಲಗಳಿಗೆ ಆಡಳಿತ ಹಾಗೂ ಅಭಿವೃದ್ಧಿಯೇತರ ವೆಚ್ಚವನ್ನು ಸರಕಾರ ನೂರಕ್ಕೆ ನೂರರಷ್ಟು ಅಥವಾ ಹೆಚ್ಚು ಮಾಡಲೇಬೇಕಾಗುತ್ತದೆ. ಆದರೆ ಅಭಿವೃದ್ಧಿ ಕಾರ್ಯಗಳಿಗೆ ನೂರಕ್ಕೆ ನೂರರಷ್ಟು ಮಾಡಲು ಸರಕಾರಗಳು ಸತತವಾಗಿ ವಿಫಲವಾಗುತ್ತಿವೆ, ಇದು ಸರಿಯಲ್ಲ. 99-2000ದಲ್ಲಿ ವಿಶ್ರಾಂತಿವೇತನ ಭತ್ಯೆಗೆ ಆಯವ್ಯಯದಲ್ಲಿ ನಿಗದಿತ ಮೊತ್ತ 1263.28 ಕೋಟಿ, ವಾಸ್ತವಿಕ ಪರಿಷ್ಕೃತ ವೆಚ್ಚದ ಮೊತ್ತ 1427.48 ಕೋಟಿ, ಬಜೆಟ್ ಮೀರಿ ಹೆಚ್ಚು ಮಾಡಿದ ವೆಚ್ಚ 164.20 ಕೋಟಿ, 2000-2001ರಲ್ಲಿ ನಿಗದಿತ ವ್ಯಯ 1578.00 ಕೋಟಿ. ಆದರೆ ಹಾಲಿ ಸಿಬ್ಬಂದಿಗೆ ಎಷ್ಟು ಮೊತ್ತದ ವೇತನ ಭತ್ಯೆಯೆಂಬುದು ಶಾಸಕರಿಗೂ ತಿಳಿಯದು, ಪ್ರಜೆಗಳಿಗೂ ತಿಳಿಯದು, ಏಕೆ?

ರಾಜ್ಯದ ಸರ್ವತೋಮುಖ ಆಡಳಿತ ಹಾಗೂ ಅಭಿವೃದ್ಧಿಯ ಯಶಸ್ಸು ರಾಜ್ಯದ ಹಣಕಾಸು ಪರಿಸ್ಥಿತಿಯನ್ನು ಅವಲಂಬಿಸಿರುವುದರಿಂದ ಸರಕಾರ ಮಾಡುವ ಹಣಕಾಸು ವ್ಯವಸ್ಥೆ, ಆಡಳಿತ ಹಾಗೂ ಅಭಿವೃದ್ಧಿಗಳ ಮೇಲ್ವಿಚಾರ, ರಾಜ್ಯದ ಶಾಸಕರ ಕಾರ್ಯ

ವೈಖರಿಯು ಮಹತ್ವಪೂರ್ಣವಾಗಿರುತ್ತದೆ. ರಾಜ್ಯದ ಖಜಾನೆಗೆ ಬಜೆಟ್ ಪ್ರಕಾರ ನಿಗದಿತ ಹಣ ಪ್ರತಿತಿಂಗಳು ಬಂದದ್ದೆಷ್ಟು, ಬಂದ ಹಣ ವೆಚ್ಚವಾದದ್ದೆಷ್ಟು, ಯಾವ್ಯಾವ ಮೂಲಗಳಿಗೆ ಎಷ್ಟೆಷ್ಟು ಹಣ ವೆಚ್ಚವಾಯಿತು, ಯಾವ್ಯಾವ ಕಾರ್ಯಗಳಿಗೆ ಎಷ್ಟೆಷ್ಟು ವೆಚ್ಚವಾಯಿತು, ವೆಚ್ಚವಾದ ಹಣ ವಾಸ್ತವಿಕವಾಗಿದೆಯೇ, ಕಾಮಗಾರಿಗಳು ವಾಸ್ತವಿಕವಾಗಿ ಆಗಿದೆಯೇ ಎಂಬುದನ್ನು ತಿಳಿದುಕೊಳ್ಳುವುದು ಹಾಗೂ ಸೂಕ್ತ ಕ್ರಮ ತೆಗೆದುಕೊಳ್ಳುವುದು ಶಾಸಕರ ಕರ್ತವ್ಯ. ಒಟ್ಟಿನ ಮೇಲೆ ಹಳ್ಳಿಯಿಂದ ರಾಜ್ಯದ ರಾಜಧಾನಿ ವರೆಗೆ ಆಯದ ಹಣ ವೆಚ್ಚವಾಗುವ ಬಗ್ಗೆ ನಿಗಾ ವಹಿಸುವುದು ಶಾಸಕರ ಜವಾಬ್ದಾರಿ, ಆಡಳಿತ ಹಾಗೂ ಅಭಿವೃದ್ಧಿಯಲ್ಲಿ ಸ್ವಾರ್ಥ, ಜಾತೀಯತೆ, ಭ್ರಷ್ಟಾಚಾರ, ಹಣದ ದುರುಪಯೋಗ, ದುರ್ಬಳಕೆ, ಪಕ್ಷಪಾತ, ಸ್ವಜನ ಪಕ್ಷಪಾತ, ತಾರತಮ್ಯ, ಕರ್ತವ್ಯಲೋಪ, ಅಧಿಕಾರ ದುರುಪಯೋಗ, ದುರಾಡಳಿತಗಳನ್ನು ಹತ್ತಿಕ್ಕಲು ಪ್ರಯತ್ನಿಸುವುದು ಕೂಡ ಶಾಸಕರ ಆದ್ಯ ಕರ್ತವ್ಯ. ಶಾಸಕರು ಸರಕಾರವನ್ನು ಹಾಗೂ ಅಧಿಕಾರಶಾಹಿಯನ್ನು ಸವಾರಿ ಮಾಡಬೇಕಾಗುತ್ತದೆ. ಈ ದಿಶೆಯಲ್ಲಿ ಶಾಸಕರು ವಿಧಾನಸಭೆಯಲ್ಲಿ ವಿವಿಧ ಎಲ್ಲಾ ಹಂತದ ಪ್ರಶ್ನೆಗಳನ್ನು ಹಾಕಿ ಸರಕಾರದಿಂದ ಮಾಹಿತಿ ಪಡೆದು ಟೀಕೆ, ಟಿಪ್ಪಣಿ, ಸಲಹೆ, ಸೂಚನೆ, ಶಹಬಾಸಗಿರಿ ಮಾಡಿ ಸರಕಾರವನ್ನು ಎಚ್ಚರಿಸಿ, ಅಭಿನಂದಿಸಿ, ಅಭಿವೃದ್ಧಿ, ಆಡಳಿತ ಸುಧಾರಣೆ ಬಗ್ಗೆ ಭರವಸೆಗಳನ್ನು ಕೂಡ ಪಡೆದು, ಆಡಳಿತ ಅಭಿವೃದ್ಧಿಯತ್ತ ಸುಧಾರಣಾ ಕ್ರಮವನ್ನು ರಾಜ್ಯದ ಸಾರ್ವಜನಿಕರ ಹಿತದೃಷ್ಟಿಯಿಂದ ತೆಗೆದುಕೊಳ್ಳಬೇಕಾಗುತ್ತದೆ. ವಿಧಾನಸಭೆಯ ಕಾರ್ಯಕಲಾಪಗಳಲ್ಲಿ ಎಲ್ಲಕ್ಕಿಂತ ಪ್ರಾಧಾನ್ಯವಾದುದು ಪ್ರಶ್ನೋತ್ತರಗಳು. ಸಾಕಷ್ಟು ಪ್ರಶ್ನೆಗಳನ್ನು ಹಾಕಿ ಉತ್ತರ ಪಡೆಯುವುದು ಹಾಗೂ ಆ ಮಾಹಿತಿಯು ಸದುಪಯೋಗ ಮಾಡಿಕೊಳ್ಳುವಲ್ಲಿ ಶಾಸಕರ ಪಾತ್ರ ಅತಿ ಮುಖ್ಯ. ಅನೇಕ ಶಾಸಕರು ಸಾಕಷ್ಟು ಪ್ರಶ್ನೆಗಳನ್ನು ಹಾಕಿ ಅತ್ಯುತ್ತಮ ಕಾರ್ಯ ಮಾಡುವವರೂ ಇದ್ದಾರೆ. ವಿಧಾನಸಭೆಗೆ ಶಾಸಕರು ಚುನಾಯಿತರಾಗಿ ಬಂದು ಒಂದು ವರ್ಷ ಮುಕ್ತಾಯಗೊಂಡಿದೆ. ಈ ಒಂದು ವರ್ಷದ ಅವಧಿಯಲ್ಲಿ ಚುನಾಯಿತ 224, ನಾಮಕರಣ ಒಬ್ಬರು ಹೀಗೆ 225 ಶಾಸಕರು ವಿಧಾನಸಭೆಯಲ್ಲಿದ್ದಾರೆ. ಇವರಲ್ಲಿ 103 ಶಾಸಕರು ಒಂದು ಪ್ರಶ್ನೆಯನ್ನು ಕೂಡ ಹಾಕಿಲ್ಲ. ಏಕೆ? 75 ಶಾಸಕರು 1 ರಿಂದ 25 ಪ್ರಶ್ನೆಗಳನ್ನು ಹಾಕಿದ್ದಾರೆ, 25 ಶಾಸಕರು 26ರಿಂದ 50 ಪ್ರಶ್ನೆವರೆಗೆ ಹಾಕಿದ್ದಾರೆ, 12 ಶಾಸಕರು 51 ರಿಂದ 75 ಪ್ರಶ್ನೆಗಳನ್ನು ಹಾಕಿದ್ದಾರೆ. 6 ಶಾಸಕರು 76 ರಿಂದ 100 ರ ವರೆಗೆ ಪ್ರಶ್ನೆ ಹಾಕಿದ್ದಾರೆ. 3 ಶಾಸಕರು 101 ರಿಂದ 125 ರ ವರೆಗೆ ಪ್ರಶ್ನೆ ಹಾಕಿದ್ದಾರೆ. ಒಬ್ಬರು 126 ಪ್ರಶ್ನೆ ಹಾಕಿದ್ದಾರೆ. ಪ್ರಶ್ನೆ ಹಾಕಿದವರಲ್ಲಿ ಅತಿ ಹೆಚ್ಚಿನ ಐವರೆಂದರೆ ಶ್ರೀ ಚಂದ್ರಕಾಂತ ಬೆಲ್ಲದರವರು 12 ರ ಪ್ರಶ್ನೆ, ಶ್ರೀ ಎ.ಎಸ್. ಗುರುಸ್ವಾಮಿಯವರು 113 ಪ್ರಶ್ನೆ, ಶ್ರೀ ಎಂ. ಎಸ್. ಕೌಜಲಗಿಯವರು 110 ಪ್ರಶ್ನೆ, ಶ್ರೀ ಎಂ.ಎಸ್. ಆತ್ಮಾನಂದರವರು 104 ಪ್ರಶ್ನೆ, ಶ್ರೀ ಎ. ರಾಮದಾಸರವರು 97 ಪ್ರಶ್ನೆಗಳನ್ನು

ಹಾಕಿ ವಿಕ್ರಮ ಸಾಧಿಸಿದ್ದಾರೆ. ಇದು ಮೊದಲನೆಯ ವರ್ಷವಾಗಿದ್ದು ಮುಂದೆ ಇನ್ನೂ ನಾಲ್ಕು ವರ್ಷಗಳು ಇದ್ದು ಈ ಅವಧಿಯಲ್ಲಾದರೂ ಎಲ್ಲಾ 225 ಜನ ಶಾಸಕರು ತಮಗಿರುವ ಮಾಹಿತಿ ಹಕ್ಕನ್ನು ಸಾಧಿಸಿ ತಪ್ಪದೆ ಹೆಚ್ಚೆಚ್ಚು ಪ್ರಶ್ನೆಗಳನ್ನು ಹಾಕಿ ಸರಕಾರದ ಎಲ್ಲಾ ಬಗೆಯ ಮಾಹಿತಿಗಳನ್ನು ಪಡೆದು ಸಾರ್ವಜನಿಕರ ಅವಗಾಹನೆಗೆ ಬರುವಂತೆ ಮಾಡಿ ಸರಕಾರ ಚುರುಕುಗೊಂಡು ಬಜೆಟ್ ಪ್ರಕಾರ ನಿಗದಿತ ಆದಾಯ ಪಡೆದು, ನಿಗದಿತ ವ್ಯಯ ಮಾಡಿ, ನಿಗದಿತ ಆರ್ಥಿಕ ಹಾಗೂ ಭೌತಿಕ ಗುರಿ ಸಾಧಿಸುವಂತೆ, ರಾಜ್ಯದಲ್ಲಿ ಕಾನೂನು ವ್ಯವಸ್ಥೆ ಸುಸೂತ್ರ ನಡೆಯುವಂತೆ, ರಾಜ್ಯಕ್ಕೆ ಸುಭದ್ರ ಹಾಗೂ ಸಮರ್ಥ ಕರ್ತವ್ಯನಿಷ್ಠ ಆಡಳಿತ ಯಂತ್ರವಾಗುವಂತೆ, ಎಲ್ಲಾ ಶಾಸಕರು ಪ್ರಯತ್ನಪಟ್ಟು ಕಾರ್ಯಶೀಲರಾದರೆ ಪ್ರಜಾತಂತ್ರ ವ್ಯವಸ್ಥೆ ನಮ್ಮ ರಾಜ್ಯದಲ್ಲಿ ಯಶಸ್ವಿಯಾಗಬಲ್ಲುದು.

❑

ಆಯವ್ಯಯದ ಅರಿವು ಅನುಷ್ಠಾನ ಸಂಸದ-ಶಾಸಕರಿಗೆ ಅಗತ್ಯ

ಬೃಹತ್ ಭಾರತದೇಶದ ಹಾಗೂ ಈ ದೇಶದಲ್ಲಿಯ ರಾಜ್ಯಗಳ ಸುಭದ್ರ ಹಾಗೂ ಸಮರ್ಥ ಆಡಳಿತ ಮತ್ತು ಸರ್ವಾಂಗೀಣ ಅಭಿವೃದ್ಧಿ ಜನತೆಯ ಪ್ರತಿನಿಧಿಗಳಾದ ಸಂಸದರು ಹಾಗೂ ಶಾಸಕರ ಕೈಯಲ್ಲಿದೆ. ಸಂಸದ ಶಾಸಕರು ಕಾರ್ಯಾಂಗದಲ್ಲಿ ಮಂತ್ರಿಗಳಾಗಿರಬಹುದು, ಮಹಾಮಂತ್ರಿಗಳಾಗಿರಬಹುದು, ಸಂಸತ್ತು ಶಾಸಕಾಂಗ ಸಮಿತಿಗಳ ಸದಸ್ಯ ಅಥವಾ ಪದಾಧಿಕಾರಿಗಳೂ ಆಗಿರಬಹುದು. ಯಾವುದೇ ಸರಕಾರೀ ಸಾರ್ವಜನಿಕ ಉದ್ಯಮಗಳ ಪದಾಧಿಕಾರಿಗಳೂ ಆಗಿರಬಹುದು. ಅಂತೆಯೇ ಶಾಸಕಾಂಗದಲ್ಲಿ ವಿರೋಧ ಪಕ್ಷದ ನಾಯಕರಾಗಿರಬಹುದು, ಉಪಾಧ್ಯಕ್ಷರಾಗಿರಬಹುದು, ಸಭಾಧ್ಯಕ್ಷರೂ ಆಗಿರಬಹುದು. ಇವರೆಲ್ಲರ ಕರ್ತವ್ಯ ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗ ಸಮರ್ಥವಾಗಿ ಕಾರ್ಯನಿರ್ವಹಿಸಲು ಬೇಕಾದ ಅಗತ್ಯತೆ ಹಾಗೂ ಅವಶ್ಯಕತೆಗಳ ಬಗ್ಗೆ ತೀವ್ರ ಗಮನಹರಿಸಬೇಕಾದ್ದು ಇರುತ್ತದೆ. ಕೇಂದ್ರ ಹಾಗೂ ರಾಜ್ಯ ಸರಕಾರ ಅಥವಾ ಕಾರ್ಯಾಂಗಗಳು, ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗಗಳಿಗೆ ಆಡಳಿತ ಹಾಗೂ ಅಭಿವೃದ್ಧಿಗೆ ಅವಶ್ಯಕವಾಗಿ ಖರ್ಚು ಮಾಡಲು ಬೇಕಾದ ಹಣದ ಮೊತ್ತವನ್ನು ಹಾಗೂ ಈ ಖರ್ಚನ್ನು ಭರಿಸಲು ಪಡೆಯಬೇಕಾದ ಹಣದ ಮೊತ್ತವನ್ನು ಯಾವ್ಯಾವ ಮೂಲಗಳಿಂದ ಎಷ್ಟು ಎಷ್ಟೆಂಬುದನ್ನು ನಿಗದಿ ಮಾಡಿ ಈ ಬಗ್ಗೆ ನಿರ್ದಿಷ್ಟವಾದ ಆಯವ್ಯಯ ಅಂದಾಜನ್ನು ತಯಾರಿಸಿ ಸಂಸತ್ತು ಹಾಗೂ ಶಾಸಕಾಂಗದಲ್ಲಿ ಮಂಡಿಸಿ ಚರ್ಚೆಯಾದ ನಂತರ ಸಂಸತ್ತು ಮತ್ತು ಶಾಸಕಾಂಗದಿಂದ ಅಂಗೀಕಾರ ಪಡೆದು ಅಂಗೀಕೃತವಾದ ಆಯವ್ಯಯ ಪ್ರಕಾರ ಪ್ರತಿವರ್ಷ ಆಯವ್ಯಯದಲ್ಲಿ ನಿಗದಿತ ಆದಾಯ ವ ಆಯವನ್ನು ಪಡೆದು ನಿಗದಿತ ಕಾರ್ಯಕ್ರಮಗಳಿಗೆ ವೆಚ್ಚ ವ ವ್ಯಯವನ್ನು ಸರಕಾರಗಳು ಮಾಡಬೇಕಾಗುತ್ತವೆ. ಆಯುವ್ಯಯದ ನಿಗದಿತ ಆಯವನ್ನು ತಪ್ಪದೇ ಪಡೆದು ಆ ಹಣವನ್ನೆಲ್ಲಾ ಆಯವ್ಯಯ ನಿಗದಿತ ವೆಚ್ಚವನ್ನು ಸಂಪೂರ್ಣವಾಗಿ ವೆಚ್ಚಮಾಡಿ ನಿಗದಿತ ಆರ್ಥಿಕ ಹಾಗೂ ಭೌತಿಕ ಗುರಿಯನ್ನು ಸಾಧಿಸಲೇಬೇಕಾಗುತ್ತದೆ. ಇದು ಕೇಂದ್ರ ಹಾಗೂ ರಾಜ್ಯ ಸರಕಾರಗಳ ಕಟ್ಟುನಿಟ್ಟಾದ ಕರ್ತವ್ಯವಾಗಿರುತ್ತದೆ. ಈ ಎಲ್ಲ ಆಯವ್ಯಯದಲ್ಲಿಯ

ಆಯದ ಹಣ ಹಾಗೂ ವ್ಯಯದ ಹಣ ಆಯದ ಸಂಪನ್ಮೂಲ ಹಾಗೂ ವ್ಯಯದ ಕಾರ್ಯಕ್ರಮಗಳ ಅರಿವು ಹಾಗೂ ಅನುಷ್ಠಾನಗಳ ಹೊಣೆಗಾರಿಕೆ ಪ್ರತಿಯೊಬ್ಬ ಮಂತ್ರಿ ಸಂಸದ ಹಾಗೂ ಶಾಸಕರ ಮೇಲಿರುತ್ತದೆ. ಪ್ರತಿಯೊಬ್ಬ ಸಂಸದರು ಹಾಗೂ ಶಾಸಕರು ಆಯವ್ಯಯಗಳ ಅಂದಾಜು, ಪರಿಷ್ಕೃತ ಅಂದಾಜು ಹಾಗೂ ವಾಸ್ತವಿಕ ಆಯವ್ಯಯಗಳನ್ನು ಕೇಂದ್ರ ಹಾಗೂ ರಾಜ್ಯಗಳ ವಾರ್ಷಿಕ ವಿತ್ತ ನಿರೂಪಣೆ, ಆಡಿಟ್ ವರದಿ ಹಾಗೂ ಸಿ.ಎ.ಜಿ. ಇತ್ಯಾದಿ ಸಂಸದೀಯ ಸರಕಾರಿ ಸಾಹಿತ್ಯವನ್ನು ಅಧ್ಯಯನ, ಅಭ್ಯಾಸಮಾಡಿ ಆಯವ್ಯಯದ ಅರಿವು ಹಾಗೂ ಅನುಷ್ಠಾನ ಮಾಹಿತಿಯನ್ನು ಪಡೆದುಕೊಂಡರೆ ಮಾತ್ರ ಸರಕಾರ ಹಾಗೂ ಸಂಸದ ಶಾಸಕರು ಹೇಳಿದ್ದೇನು, ಮಾಡಿದ್ದೇನು ಎಂಬ ವಾಸ್ತವಿಕ ಅರಿವು ಹಾಗೂ ಅನುಷ್ಠಾನ ಸುಸ್ಪಷ್ಟವಾಗಿ ಮುಂದಿನ ಹೆಜ್ಜೆ ಇಡಲು ಬಹಳ ಅನುಕೂಲವಾಗುತ್ತದೆ. ಆದರೆ ದುರ್ದೈವದಿಂದ ಆಯವ್ಯಯದ ಪ್ರಕಾರ ನಿಗದಿತ ಆದಾಯವೂ ಸಂಪೂರ್ಣವಾಗಿ ಬರುತ್ತಿರುವುದಿಲ್ಲ ಹಾಗೂ ನಿಗದಿತ ವೆಚ್ಚವೂ ಸಂಪೂರ್ಣವಾಗಿ ಆಗುತ್ತಿಲ್ಲ. ಸಾಧಿಸಬೇಕಾದ ಆರ್ಥಿಕ ಸಾಧನೆ ಹಾಗೂ ಭೌತಿಕ ಸಾಧನೆ ಕೂಡ ದೇಶಾದ್ಯಂತ, ರಾಜ್ಯಾದ್ಯಂತ ಆಗುತ್ತಿಲ್ಲ. ಸರಕಾರ ಹಾಗೂ ಸಂಸದ ಶಾಸಕರ ಕರ್ತವ್ಯ ಹೇಳುವುದೊಂದೇ ಆಗಬಾರದು, ನುಡಿಯುವುದೊಂದೇ ಆಗಬಾರದು, ಹೇಳಿದಂತೆ ಮಾಡಲೇಬೇಕು, ನುಡಿದಂತೆ ನಡೆಯಲೇಬೇಕು, ಬಜೆಟ್ ಪ್ರಕಾರ ಮೊದಲು ಹೇಳಿದ್ದೇನು ನಂತರ ಮಾಡಿದ್ದೇನು? ಮಾಡದೇ ಇರುವುದೇನು? ಎಂಬ ಬಗ್ಗೆ ತಿಳಿದುಕೊಂಡು ಅನುಷ್ಠಾನವಾಗಬೇಕಾದ್ದು ಏನಿತ್ತು? ಆ ಅನುಷ್ಠಾನವಾಗಲಿಲ್ಲವೇಕೆ? ಸಂಸತ್ತು ಶಾಸಕಾಂಗ ಸಭೆಗಳಲ್ಲಿ ಜನತೆಗೆ ಕೊಟ್ಟ ಭರವಸೆಗಳೇನು? ಆ ಭರವಸೆಗಳು ಈಡೇರಿಸಲಿಲ್ಲ ಅಥವಾ ಅನುಷ್ಠಾನಗೊಳಿಸಲಿಲ್ಲ. ಇದಕ್ಕೆ ಯಾರು ಕಾರಣರು ಅವರ ಅದಕ್ಷತೆ ಹಾಗೂ ಅಸಮರ್ಥತೆಗೆ ಕೊಡಬೇಕಾದ ಶಿಕ್ಷೆ ಅಥವಾ ಪ್ರೋತ್ಸಾಹವೇನೆಂಬ ಬಗ್ಗೆ ಪ್ರಜಾಪ್ರತಿನಿಧಿಗಳ ತೀರ್ಮಾನ ಅವಶ್ಯವೆಂಬುದನ್ನು ಮನಗಾಣುವುದು ಅತ್ಯಗತ್ಯ.

ಕೇಂದ್ರ ಹಾಗೂ ರಾಜ್ಯ ಸರಕಾರಗಳು ಪ್ರತಿವರ್ಷ ಆಯವ್ಯಯವನ್ನು ಹೆಚ್ಚಿಸಿ ಸಂಸತ್ತು ಹಾಗೂ ವಿಧಾನಮಂಡಲದಿಂದ ಅಂಗೀಕಾರ ಪಡೆಯುತ್ತಿದ್ದರೂ ಅಂದಾಜಿನ ಪ್ರಕಾರ ವಾಸ್ತವಿಕ ಆಯವ್ಯಯವನ್ನು ಮಾಡುತ್ತಿರುವುದಿಲ್ಲ. ಈ ರಾಷ್ಟ್ರದ ಜನತೆಯಿಂದ ವಿವಿಧ ಕರ - ಸುಂಕಗಳಿಂದ ಕೂಡಿದ ರೆವಿನ್ಯೂ ಆದಾಯವನ್ನು ವಾಸ್ತವಿಕವಾಗಿ ಪ್ರತಿವರ್ಷ ಕೇಂದ್ರ ಸರಕಾರ ಹೆಚ್ಚಿಚ್ಚು ಪಡೆಯುತ್ತಿದ್ದು ಈ ರೆವಿನ್ಯೂ ಆದಾಯ 95-96 ರಲ್ಲಿ 1-00 ಲಕ್ಷ ಕೋಟಿ, 96-97 ರಲ್ಲಿ 1.16 ಲಕ್ಷ ಕೋಟಿ, 97-98 ರಲ್ಲಿ 1.30 ಲಕ್ಷ ಕೋಟಿ, 98-99 ರಲ್ಲಿ 1.30 ಲಕ್ಷ ಕೋಟಿ, 99-2000 ದಲ್ಲಿ 1.54 ಲಕ್ಷ ಕೋಟಿ, 2000-2001 ರಲ್ಲಿ 1.79 ಲಕ್ಷ ಕೋಟಿ ಹೀಗೆ ಗಗನಕ್ಕೆ ಏರುತ್ತಲೇ ಇದೆ.

ತೆರಿಗೆ ರಾಜಸ್ವ, ತೆರಿಗೆ ರಹಿತ ರಾಜಸ್ವ, ಸಹಾಯಾನುದಾನ ಮತ್ತು ಅಂಶದಾನ ಸಾರ್ವಜನಿಕ ಋಣ, ಸಾಲ ಮತ್ತು ಮುಂಗಡ ಇತ್ಯಾದಿ ಸಂಚಿತ ನಿಧಿ ಆದಾಯ ಕೇಂದ್ರ

ಸರಕಾರಕ್ಕೆ 95-96 ರಲ್ಲಿ 3.58 ಲಕ್ಷ ಕೋಟಿ, 96-97 ರಲ್ಲಿ 4.11 ಲಕ್ಷ ಕೋಟಿ, 97-98 ರಲ್ಲಿ 6.35 ಲಕ್ಷ ಕೋಟಿ, 98-99ರಲ್ಲಿ 6.54 ಲಕ್ಷ ಕೋಟಿ, 99-2000 ದಲ್ಲಿ 8.96 ಲಕ್, ಕೋಟಿ, 2000-2001 ರಲ್ಲಿ 7.78 ಲಕ್ಷ ಕೋಟಿ ಹೀಗೆ ಸಂದಾಯವಾಗುತ್ತಿದ್ದು ಅದೇಕೋ ಚಾಲೂ ವರ್ಷದಲ್ಲಿ ಕಡಿಮೆಯಾಗಿದೆ.

ಸಂಚಿತ ನಿದಿಯನ್ನು 95-96 ರಲ್ಲಿ 29473 ಕೋಟಿ, 96-97 ರಲ್ಲಿ 32586 ಕೋಟಿ, 98-99 ರಲ್ಲಿ 22172 ಕೋಟಿ, 99-2000 ದಲ್ಲಿ 9046 ಕೋಟಿ ಆಯ ಪಡೆಯುವಲ್ಲಿ ಕೇಂದ್ರ ಹಣಕಾಸು ಇಲಾಖೆ ವಿಫಲಗೊಂಡಿದೆ. ಅಂತೆಯೇ ಸಂಚಿತ ನಿಧಿಯನ್ನು 95-96 ರಲ್ಲಿ 39633 ಕೋಟಿ, 96-97ರಲ್ಲಿ 35393 ಕೋಟಿ, 98-99 ರಲ್ಲಿ 23916 ಕೋಟಿ, 99-2000 ದಲ್ಲಿ 10877 ಕೋಟಿ ವೆಚ್ಚ ಮಾಡುವಲ್ಲಿ ಸಹ ಕೇಂದ್ರ ಸರಕಾರ ತಪ್ಪಿದೆ. ಇಷ್ಟೊಂದು ಭಾರೀ ಮೊತ್ತದ ಕೋಟ್ಯಾಂತರ ಹಣ ವೆಚ್ಚವಾಗದೆ ಇರುವಾಗ ಅದಕ್ಕೆ ಗಮನಕೊಡದೆ ಆ ಹಣ ಸಂಪೂರ್ಣ ವೆಚ್ಚ ಮಾಡಲು ಚಿಂತಿಸದೆ, ಪ್ರಯತ್ನಿಸದೆ ಸಂಸದರು ತಮಗೆ ಗೊತ್ತುಪಡಿಸಿದ ಒಂದೆರಡು ಕೋಟಿ ಸಂಸದ ನಿದಿಯನ್ನು ವೆಚ್ಚಮಾಡುವಲ್ಲಿಯೇ "ಹೊರಿ ಹುಲ್ಲು ಬಿಟ್ಟು ಹಿಡಿ ಹುಲ್ಲಿಗೆ" ಮಾತ್ರ ಚಿಂತಿಸಿ ಕಾಲಹರಣ ಮಾಡುವುದು ಸಾಧುವಲ್ಲ.

ಕರ್ನಾಟಕ ರಾಜ್ಯ ವಿಧಾನಮಂಡಲದಲ್ಲಿ ಅಂಗೀಕೃತವಾದ ಆಯವ್ಯಯ ಪ್ರಕಾರ ಸಂಚಿತ ನಿಧಿಯ ಆಯವನ್ನು ಪಡೆಯುವುದು ಹಾಗೂ ವ್ಯಯವನ್ನು ಮಾಡುವುದು ರಾಜ್ಯ ಸರಕಾರದ ಕರ್ತವ್ಯ. ಸರಕಾರದ ಮೇಲೆ ಈ ಬಗ್ಗೆ ನಿಗಾ ಇಡುವುದು ಶಾಸಕಾಂಗ ಸದಸ್ಯರ ಕರ್ತವ್ಯ. ಆದರೆ ಇಲ್ಲಿ ಕೂಡ ಕರ್ತವ್ಯದ ಲೋಪವಾಗುತ್ತಿರುವುದು ಜನತೆಯ ದುರ್ದೈವ. ಸಂಚಿತ ನಿಧಿ ಅಂದಾಜು ಆಯದಲ್ಲಿ 94-95 ರಲ್ಲಿ 1048.59 ಕೋಟಿ, 95-96 ರಲ್ಲಿ 2012.18 ಕೋಟಿ, 96-97 ರಲ್ಲಿ 669.26 ಕೋಟಿ, 97-98 ರಲ್ಲಿ 2060.84 ಕೋಟಿ, 98-99 ರಲ್ಲಿ 2656.98 ಕೋಟಿ, 99-2000 ದಲ್ಲಿ 2247.55 ಕೋಟಿ ಆಯ ಪಡೆಯಲು ರಾಜ್ಯ ಸರಕಾರ ವಿಫಲವಾಗುತ್ತಲೇ ಇದೆ. ಅಂತೆಯೇ ಸಂಚಿತ ನಿಧಿಯಲ್ಲಿ 1994-95 ರಲ್ಲಿ 1244.00 ಕೋಟಿ, 95-96 ರಲ್ಲಿ 1988-27 ಕೋಟಿ, 96-97 ರಲ್ಲಿ 198.94 ಕೋಟಿ, 97-98 ರಲ್ಲಿ 1701.36 ಕೋಟಿ, 98-99 ರಲ್ಲಿ 2121.03 ಕೋಟಿ, 99-2000 ದಲ್ಲಿ 2287.32 ಕೋಟಿ ಮೊತ್ತವನ್ನು ವೆಚ್ಚ ಮಾಡದೆ ಬಿಡಲಾಗಿದೆ. ವೆಚ್ಚ ಮಾಡದೆ ಬಿಡಲಾದ ಹಣ ಸಾಮಾಜಿಕ, ಸಾಮಾನ್ಯ ಹಾಗೂ ಆರ್ಥಿಕ ಸೇವೆಗಳ ವೆಚ್ಚಗಳಿಗೆ, ಈ ಸೇವೆಗಳ ಬಂಡವಾಳ ವೆಚ್ಚಗಳಿಗೆ, ಸಹಾಯಾನುದಾನ ಅಂಶದಾನಗಳಿಗೆ, ಸಾಲ ಮತ್ತು ಮುಂಗಡಗಳಿಗೆ, ಸಾರ್ವಜನಿಕ ಋಣ ಸೇವೆಗಳಿಗೆ ಸಂಬಂಧಿಸಿದ ವೆಚ್ಚವಾಗಿದ್ದು ಇದರ ದುಷ್ಪರಿಣಾಮವಾಗಿ ಜನತೆಯ ಹಾಗೂ ಸಂಘ-ಸಂಸ್ಥೆಗಳ ಸರ್ವಾಂಗೀಣ ಅಭಿವೃದ್ಧಿಯ ಕುಂಠಿತಕ್ಕೆ ಕಾರಣವಾಗಿ ಅದೆಷ್ಟೋ ಕಾರ್ಯಕ್ರಮಗಳಲ್ಲಿ ನಿಗದಿತ ಆರ್ಥಿಕ ಗುರಿ ಹಾಗೂ ಭೌತಿಕ ಗುರಿಯನ್ನು ಸಾಧಿಸುವಲ್ಲಿ

ಸರಕಾರ ಹಾಗೂ ಜನತಾ ಪ್ರತಿನಿಧಿಗಳು ವಿಫಲಗೊಂಡಿರುವುದು ಅವರೆಲ್ಲರ ಕರ್ತವ್ಯ ಅಸಮಾಧಾನಕರವಾಗಿ ತೃಪ್ತಿಕರವಾಗದಿರುವುದು ಪ್ರಜಾತಂತ್ರ ವ್ಯವಸ್ಥೆಯು ದಾರಿತಪ್ಪಿ ನಡೆದಿದೆಯೆಂದು ಹೇಳುವುದು ಅನಿವಾರ್ಯ. ಇನ್ನಾದರೂ ಸಂಸದರು, ಶಾಸಕರು, ಮಂತ್ರಿಗಳು, ಸರಕಾರ ಎಚ್ಚೆತ್ತು ತಮ್ಮ ತಮ್ಮ ಕಾರ್ಯಗಳ ಅರಿವನ್ನು ಅರಿತು ಕಾರ್ಯಕ್ರಮಗಳ ಅನುಷ್ಠಾನ ಅಧಿಕಾರಿಗಳನ್ನು ಕಾರ್ಯಶೀಲರಾಗುವಂತೆ ಮಾಡಿ ಅಂಗೀಕೃತ ಆಯವ್ಯಯಗಳ ಪ್ರಕಾರ ವಾಸ್ತವಿಕವಾದ ಆದಾಯ ಪಡೆದು ವೆಚ್ಚಮಾಡಿ ಪ್ರತಿವರ್ಷ ನಿಗದಿತ ಆರ್ಥಿಕ ಗುರಿ ಹಾಗೂ ಭೌತಿಕ ಗುರಿಯನ್ನು ಚಾಚೂ ತಪ್ಪದೆ ಸಾಧಿಸಿ ಜನತೆಯ ಸರ್ವಾಂಗೀಣ ಅಭಿವೃದ್ಧಿಗೆ ಕಾರಣೀಭೂತರಾಗುವುದು ಒಳ್ಳೆಯದು. ಸಂಸದರು ಶಾಸಕರು ಸರಕಾರಗಳ ಆಯವ್ಯಯ. ಆಯವ್ಯಯಗಳ ಪ್ರಕಾರ ಆರ್ಥಿಕ ಗುರಿ, ಭೌತಿಕ ಗುರಿ ಅನುಷ್ಠಾನ ಹಾಗೂ ಸಾಧನೆ ಸಂಪೂರ್ಣವಾಗಿ ಸಾಧಿಸಲು ಅವರಿಗೆ ಅಗತ್ಯವಾದ ಹಾಗೂ ಅವಶ್ಯವಾದ ಸವಲತ್ತು, ಸೌಕರ್ಯಗಳನ್ನು ಸಂಸತ್ತು ಹಾಗೂ ಶಾಸನ ಸಭೆಗಳು ಅಧಿನಿಯಮಬದ್ಧವಾಗಿ ನೀಡಿದ್ದು ಅವೆಲ್ಲವುಗಳ ಸದುಪಯೋಗ ಮಾಡಿಕೊಂಡು ತಮ್ಮ ತಮ್ಮ ಅವಧಿಯಲ್ಲಿ ತಮ್ಮ ತಮ್ಮ ಅಮೂಲ್ಯವಾದ ವೇಳೆಯನ್ನು ವ್ಯರ್ಥಗೊಳಿಸಿ ಉಪಯೋಗಿಸಿಕೊಂಡು ಕಾರ್ಯೋನ್ಮುಖರಾದರೆ ಅವರಿಗೆ ಜನತಾ ಜನಾರ್ಧನ ಚಿರಋಣಿ.

❑

ಕಾರ್ಯಾಂಗ

ತಡೆರಹಿತ ಏರಿಕೆಯ ಕರಭಾರ

ರಾಜ್ಯ ಸರಕಾರಕ್ಕೆ ಜನಸಾಮಾನ್ಯರು ಕೊಡುತ್ತಿರುವ ತೆರಿಗೆ ಹಾಗೂ ತೆರಿಗೆ ರಹಿತ ಕಂದಾಯ ಪ್ರತಿವರ್ಷ ಏರುತ್ತಲೇ ಇವೆ. ಕರ್ನಾಟಕ ರಾಜ್ಯದ ಜನತೆ ತೆರಿಗೆ ಹಾಗೂ ಕಂದಾಯ ಕೊಟ್ಟಿರುವುದು 90-91ರಲ್ಲಿ 3052.37 ಕೋಟಿ, 91-92ರಲ್ಲಿ 3773.12 ಕೋಟಿ ಮೊತ್ತವಾಗಿದ್ದು, ಅದು 92-93ರಲ್ಲಿ 4591.02 ಕೋಟಿ. 93-94ರಲ್ಲಿ 5473.49 ಕೋಟಿ ಮೊತ್ತಕ್ಕೆ ಏರಲಿದೆ. ನಮ್ಮ ರಾಜ್ಯದ ಜನಸಂಖ್ಯೆ 4.61 ಕೋಟಿ ಇದ್ದು, ಪ್ರತಿಯೊಬ್ಬ ವ್ಯಕ್ತಿ ತಲಾನುವಾರು ರಾಜ್ಯ ಸರಕಾರಕ್ಕೆ 91-92ರಲ್ಲಿ 818.00 ರೂ. ಕಂದಾಯ ಕೊಟ್ಟಿದ್ದು 92-93ರಲ್ಲಿ 995.00 ರೂ., 93-94ರಲ್ಲಿ 1187.00 ರೂ. ತಲಾನುವಾರ ಕಂದಾಯ ಕೊಡಬೇಕಾಗುತ್ತದೆ.

ರಾಜ್ಯ ಸರಕಾರಕ್ಕೆ ತೆರಿಗೆ ಕೊಟ್ಟಿರುವದು ವಾಸ್ತವಿಕವಾಗಿ 90-91ರಲ್ಲಿ 2535.17 ಕೋಟಿ, 91-92ರಲ್ಲಿ 3151.84 ಕೋಟಿ ರೂ. ಮೊತ್ತವಾಗಿದ್ದು, 92-93 ರಲ್ಲಿ 3772.60 ಕೋಟಿ, 93-94ರಲ್ಲಿ 4573.66 ಕೋಟಿ ಮೊತ್ತಕ್ಕೆ ಏರಲಿದೆ. ಇದರಲ್ಲಿ, ಮಾರಾಟ ಕರ 90-91ರಲ್ಲಿ 1316.92 ಕೋಟಿ, 91-92ರಲ್ಲಿ 1653.22 ಕೋಟಿ ವಸೂಲಾಗಿದ್ದು 92-93ರಲ್ಲಿ 2033.00 ಕೋಟಿ, 93-94ರಲ್ಲಿ 2522.00 ಕೋಟಿಯಾಗಲಿದೆ. ಅಬಕಾರಿ ಕರ 90-91ರಲ್ಲಿ 429.69 ಕೋಟಿ, 91-92ರಲ್ಲಿ 510.32 ಕೋಟಿ ವಸೂಲಾಗಿದ್ದು, 92-93ರಲ್ಲಿ 573.00 ಕೋಟಿ, 93-94ರಲ್ಲಿ 701.67 ಕೋಟಿ ವಸೂಲಾಗಲಿದೆ. ವಾಹನಗಳ ಮೇಲಿನ ಕರ 90-91ರಲ್ಲಿ 192.42 ಕೋಟಿ, 91-92ರಲ್ಲಿ 227.47 ಕೋಟಿ ವಸೂಲಾಗಿದ್ದು, 92-93ರಲ್ಲಿ 244.00 ಕೋಟಿ, 93-94ರಲ್ಲಿ 271.00 ಕೋಟಿ ವಸೂಲಾಗಲಿದೆ. ಮುದ್ರಾಂಕ ಹಾಗೂ ನೋಂದಣಿ ಕರ 90-91ರಲ್ಲಿ 144.27 ಕೋಟಿ, 91-92ರಲ್ಲಿ 206.01 ಕೋಟಿ, ವಸೂಲಾಗಿದ್ದು, 92-93ರಲ್ಲಿ 275.00 ಕೋಟಿ, 93-94ರಲ್ಲಿ 300.00 ಕೋಟಿ ವಸೂಲಾಗಲಿದೆ.

ತೆರಿಗೆ ರಹಿತ ಕಂದಾಯದ ಮೂಲಗಳಾದ ಬಡ್ಡಿ, ಲಾಭ, ಲಾಭಾಂಶ, ಸಾಮಾನ್ಯ ಸೇವೆ, ಸಾಮಾಜಿಕ ಸೇವೆ, ಆಧಿಕ ಸೇವೆ ಮೊದಲಾದುವುಗಳಿಂದ 90-91ರಲ್ಲಿ 517.19 ಕೋಟಿ, 91-92ರಲ್ಲಿ 621.28 ಕೋಟಿ ವಸೂಲಾಗಿದ್ದು, 92-93ರಲ್ಲಿ 818.42 ಕೋಟಿ, 93-94ರಲ್ಲಿ 899.83 ಕೋಟಿ ವಸೂಲಾಗಲಿದೆ.

ಕೇಂದ್ರ ಸರಕಾರಕ್ಕೆ ಸಹ ಈ ದೇಶದ ಜನಸಾಮಾನ್ಯರು ಕಂದಾಯವನ್ನು ಪ್ರತಿವರ್ಷ ಕೊಡುತ್ತಲೇ ಇದ್ದು, ಅದು ಪ್ರತಿವರ್ಷ ಗಣನೀಯವಾಗಿ ಏರುತ್ತಲೇ ಇದೆ. ಈ ದೇಶದ ಜನತೆ ಕೇಂದ್ರ ಸರಕಾರಕ್ಕೆ 91-92ರಲ್ಲಿ 66047.00 ಕೋಟಿ ಕಂದಾಯ ಸಲ್ಲಿಸಿದ್ದು 92-93ರಲ್ಲಿ 78279.00 ಕೋಟಿ, 93-94ರಲ್ಲಿ 84209.00 ಕೋಟಿ ಸಲ್ಲಿಸಲಿದ್ದಾರೆ. ನಮ್ಮ ದೇಶದ ಜನಸಂಖ್ಯೆ 8526.50 ಲಕ್ಷವಿದ್ದು ಪ್ರತಿಯೊಬ್ಬ ವ್ಯಕ್ತಿ ತಲಾನುವಾರು ಕೇಂದ್ರ ಸರ್ಕಾರಕ್ಕೆ 91-92ರಲ್ಲಿ ತಲಾ 774.00 ರೂ. ಕೊಟ್ಟಿದ್ದು, 92-93ರಲ್ಲಿ 918.00 ರೂ., 93-94ರಲ್ಲಿ 987.00 ರೂ. ತಲಾನುವಾರು ಕಂದಾಯ ಕೊಡಬೇಕಾಗುತ್ತದೆ.

ಕರ್ನಾಟಕ ರಾಜ್ಯದ ಜನತೆ ಕೇಂದ್ರ ಹಾಗೂ ರಾಜ್ಯ ಸರಕಾರಗಳಿಗೆ ತಲಾನುವಾರು ತೆರಿಗೆ ಹಾಗೂ ತೆರಿಗೆ ರಹಿತ ಕಂದಾಯ, 91-92ರಲ್ಲಿ 1592.00 ರೂಪಾಯಿ ಸಲ್ಲಿಸಿದ್ದು, 92-93ರಲ್ಲಿ 1913.00 ರೂಪಾಯಿ, 93-94ರಲ್ಲಿ 2174.00 ರೂಪಾಯಿ ಸಲ್ಲಿಸಲಿದ್ದಾರೆ.

ರಾಜ್ಯದ ಹಾಗೂ ಈ ದೇಶದ ಜನತೆಯ ಆರ್ಥಿಕ ಪರಿಸ್ಥಿತಿ ಸುಧಾರಿಸದೆ ಕಂಗಾಲಾಗಿ ವಿವಿಧ ಸಾಲಗಳ ಮೊರೆಹೊಕ್ಕು, ಸಾಲ ಮಾಡಿ ದುಡಿದರೂ ಅವನು ಆರ್ಥಿಕವಾಗಿ ಮುಂದುವರೆಯದಿದ್ದರೂ ರಾಜ್ಯ ಹಾಗೂ ಕೇಂದ್ರ ಸರಕಾರಗಳಿಗೆ ತಪ್ಪದೆ ತೆರಿಗೆರಹಿತ ಕಂದಾಯವನ್ನು ಪ್ರತಿವರ್ಷ ಕಾನೂನುಬದ್ಧವಾಗಿಯೇ ಅನಿವಾರ್ಯವಾಗಿ ಕೊಡುತ್ತಿದ್ದಾನೆ. ಹೀಗೆ ಕಂದಾಯ ಪಡೆದ ಸರಕಾರ ಜನಸಾಮಾನ್ಯರ ಆರ್ಥಿಕ, ಸಾಮಾಜಿಕ ಅಭಿವೃದ್ಧಿಗೆ ಗಮನ ಹರಿಸದೆ ಸರಕಾರ ತಾನು ಖರ್ಚುಮಾಡಿದ ಹಣ ಎಷ್ಟರಮಟ್ಟಿಗೆ ವಾಸ್ತವಿಕವಾಗಿ ಪರಿಣಾಮ ಬೀರಿದೆ ಎಂಬುದನ್ನು ಅರಿಯದೆ ಸರಕಾರದಿಂದ ಸಿಗಬೇಕಾದ ಸಾಲ ಸಹಾಯ ಸೌಲತ್ತು ಅನುಕೂಲತೆ ಯೋಜನೆ, ಪ್ರಯೋಜನೆಗಳ ಉಪಯೋಗ, ದುರುಪಯೋಗ ವಂಚನೆಗಳತ್ತ ಗಮನಹರಿಸದೆ, ದುರಾಡಳಿತ ದುಂದುಗಾರಿಕೆಗಳಿಗೆ ದಾರಿಮಾಡಿ ಜನತೆ ಎಷ್ಟೇ ಕಂದಾಯ ಕೊಟ್ಟರೂ ರಾಜ್ಯ ಹಾಗೂ ಕೇಂದ್ರ ಸರಕಾರಗಳು ಸ್ವದೇಶಿ ಸಾಲವನ್ನು ಹೆಚ್ಚಿಸುತ್ತ ಅದೂ ಸಾಲದೆ ವಿದೇಶಿ ಸಾಲದ ಮೊರೆಹೊಕ್ಕು, ಭಾರಿ ಮೊತ್ತದ ಸಾಲ ಪಡೆದು ಅದು ಸಾಲದೆ ಹೇರಳವಾದ ಪ್ರಮಾಣದಲ್ಲಿ ಬಂಗಾರವನ್ನು ಸಹ ಅಡವಿಟ್ಟು ವಿದೇಶಿ ಸಾಲ ಪಡೆದು ರಾಜ್ಯ ಹಾಗೂ ಕೇಂದ್ರ ಸರಕಾರಗಳು ಸಾಲ ತೀರಿಸದೆ ಪ್ರತಿವರ್ಷ ಸಾಲ ಹೆಚ್ಚಿಸುತ್ತ ಹೇರಳವಾದ ಬಡ್ಡಿ ಕೊಡುತ್ತಿರುವುದು. ನಮ್ಮ ದೇಶದ ಜನತೆಯ ದುರ್ದೈವವಾಗಿದೆ.

ರಾಜ್ಯ ಸರಕಾರ ಸಾಲದ ಮೂಲಗಳಾದ ಸಾರ್ವಜನಿಕ ಸಾಲ ಮತ್ತು ಮುಂಗಡ ಹಾಗೂ ಸಾರ್ವಜನಿಕ ಲೆಕ್ಕಗಳಿಂದ 90-91ರಲ್ಲಿ 7180.74 ಕೋಟಿ, 91-92ರಲ್ಲಿ 14177.84 ಕೋಟಿ ಸಾಲ ಪಡೆದಿದ್ದು, 92-93ರಲ್ಲಿ 9497.55 ಕೋಟಿ, 93-94ರಲ್ಲಿ 10675.75 ಕೋಟಿ ಸಾಲ ಪಡೆಯಲಿದೆ. ಇಷ್ಟೊಂದು ಸಾಲ ಪಡೆದು ಸರಕಾರ ನಡೆಸಿದರೂ ನಿರೀಕ್ಷಿತ ಫಲ ದೊರಕದೆ ಪ್ರತಿವರ್ಷ ರಾಜ್ಯ ಸರಕಾರ ಹೊರಬೇಕಾದ ಸಾಲದ ಮೊತ್ತ ತಡೆರಹಿತವಾಗಿಯೇ ಏರುತ್ತಿರುವುದು ಆಡಳಿತ ಪ್ರಕ್ರಿಯೆ ಅಭಾವ ಅಧಿಕಾರಿ ಶಾಹಿ ಹಾಗೂ ಪ್ರಜಾಶಾಹಿ ಮುಖಂಡರಲ್ಲಿ ಸುಸ್ಪಷ್ಟವಾಗಿ ತೋರುತ್ತದೆ. ಭಾರತ ಸರಕಾರ ಬಹಿರಂಗ ಮಾರುಕಟ್ಟೆ, ಭೂ ಪರಿಹಾಶ ಬಾಂಡು, ಅಲ್ಪಾವಧಿ ಸಾಲ, ಇತರ ಸಾಲ, ರಾಜ್ಯ ಭವಿಷ್ಯನಿಧಿ, ಇತರೆ ಠೇವಣಿ ಇತ್ಯಾದಿ. ಸಾಲದ ಮೂಲಗಳಿಗೆ ರಾಜ್ಯ ಸರಕಾರ 1991ರ ಮಾರ್ಚ್ 31ಕ್ಕೆ 5762.71 ಕೋಟಿ, 1992ರ ಮಾರ್ಚ್ 31ಕ್ಕೆ 6470.99 ಕೋಟಿ ಸಾಲ ಕೊಡಬೇಕಾಗಿದ್ದು 93 ಮಾರ್ಚ್ 31ಕ್ಕೆ 7624.08 ಕೋಟಿ, 94 ಮಾರ್ಚ್ 31ಕ್ಕೆ 8957.25 ಕೋಟಿ ಕೊಡಬೇಕಾಗುತ್ತದೆ. ಹಾಗೂ ದೊಡ್ಡ ಪ್ರಮಾಣದ ಬಡ್ಡಿಯನ್ನು ಸಹ ರಾಜ್ಯ ಸರಕಾರ ತೆತ್ತಬೇಕಾಗುತ್ತದೆ. ಈ ದೇಶದಲ್ಲಿ ಶೇಕಡಾ 80ರಷ್ಟಿರುವ ರೈತರು ಈ ದೇಶದ ನಿಗಮ, ರಾಜ್ಯ ಸರಕಾರ ಹಾಗೂ ಕೇಂದ್ರ ಸರಕಾರ ಇವರೆಲ್ಲರ ಆರ್ಥಿಕ ಪರಿಸ್ಥಿತಿ ದಿವಾಳಿ ಅಂಚಿನಲ್ಲಿದ್ದು ಸಾಲದ ಶೂಲಕ್ಕೆ ಸಿಕ್ಕುಬಿದ್ದು ಒದ್ದಾಡುತ್ತಿರುವಾಗ ಅವರ ಆರ್ಥಿಕ ಸುಧಾರಣೆಗೆ ಪರಿಹಾರ ಅತ್ಯವಶ್ಯಕವಾಗಿದೆ.

ಕೇಂದ್ರ ಸರಕಾರದ ದೇಶಿ ಹಾಗೂ ವಿದೇಶಿ ಸಾಲ ಕೂಡ ಪ್ರತಿವರ್ಷ ಏರುತ್ತಲೇ ಇದೆ. 1991 ಮಾರ್ಚ್ ಕೊನೆಗೆ ಇದ್ದ ಕೇಂದ್ರ ಸರಕಾರದ ವಿದೇಶಿ ಸಾಲ 121998.00 ಕೋಟಿ, 1991ರ ಕೊನೆ 170267.00 ಕೋಟಿಯಾಗಿದ್ದು ಅದು ಇಂದಿಗೂ ಏರುತ್ತಲೇ ಇದೆ. ಕೇಂದ್ರ ಸರಕಾರ ಕೊಡಬೇಕಾಗುವ ಬಡ್ಡಿಯೇ 92-93ರಲ್ಲಿ 62000.00 ಕೋಟಿ, 93-94ರಲ್ಲಿ 38000.00 ಕೋಟಿಯಾಗುತ್ತದೆ. 93-94ರಲ್ಲಿ ಮತ್ತೆ ಕೇಂದ್ರ ಸರಕಾರ ಪಡೆಯಲಿರುವ ಹೊಸ ಸಾಲ 32645.00 ಕೋಟಿ ಬಡ್ಡಿ ಸಹಿತವಾದದ್ದು ಇರುತ್ತದೆ. ಕೇಂದ್ರ ಸರಕಾರದಿಂದ ರಾಜ್ಯ ಸರಕಾರಕ್ಕೆ ಬರುವ ಸಹಾಯಾನುದನಗಳು ಮತ್ತು ಅಂಶಾನುದನಗಳು ಸಹ ಪ್ರತಿವರ್ಷ ಹೆಚ್ಚುತ್ತಿದ್ದರೂ ಸಹ ಆಯಾ ಉದ್ದೇಶ ಹಾಗೂ ಯೋಜನೆಗಳಿಗೆ ಆಯಾ ವರ್ಷದಲ್ಲಿಯಾಗಲೀ ಮುಂದಿನ ವರ್ಷದಲ್ಲಿಯಾಗಲೀ ಆ ಹಣವನ್ನು ಖರ್ಚು ಮಾಡದೆ ಉದ್ದೇಶ ಹಾಗೂ ಯೋಜನೆಗಳನ್ನು ವಿಫಲಗೊಳಿಸಿ ಪ್ರಯೋಜನದರರನ್ನು ವಂಚಿಸಿ ಬೇರೆ ಅನುತ್ಪಾದಿತ ಆಡಳಿತ ಉದ್ದೇಶಗಳಿಗೆ ಈ ಹಣ ಬಳಸಿಕೊಂಡು ಸರಕಾರದ ದಾರುಣವಾದ ದೃಷ್ಟಾಂತಗಳು ಸಾಕಷ್ಟು ಇವೆ. ಜನಸಾಮಾನ್ಯ ರಹಿತ ಸೌಲಭ್ಯ, ಸವಲತ್ತು ಹಾಗೂ ಸಹಾಯಕ್ಕಾಗಿ ಆಯವ್ಯಯದಲ್ಲಿ ಹಣ ನೀಡುವುದೇ ಕಡಿಮೆಯಾದರೂ ಆ ಹಣವನ್ನು ಖರ್ಚುಮಾಡದೆ ಜನತೆಗೆ ಅನುಕೂಲವಲ್ಲದ

ಉದ್ದೇಶಗಳಿಗೆ ಆ ಹಣವನ್ನು ತಿರುಗಿಸುವ ಅಸಂಬದ್ಧ ಪರಿಹಾರ ಕೂಡ ಸರಕಾರಗಳು ಅನುಸರಿಸುತ್ತವೆ. ರಾಜ್ಯದ ಹಾಗೂ ಕೇಂದ್ರದ ಆಯವ್ಯಯ ಪತ್ರ ಹಾಗೂ ಇವುಗಳಿಗೆ ಪೂರಕವಾಗಿರುವ ಆರ್ಥಿಕ ಸಾಹಿತ್ಯವನ್ನು ಯಾರು ಅಭ್ಯಾಸ ಮಾಡಬೇಕು, ಯಾರು ಅಧ್ಯಯನ ಮಾಡಬೇಕು. ಅವರ ಇಂಗಿತವನ್ನು ಯಾರು ಕಂಡುಹಿಡಿದು ಸಲಹೆ ಸೂಚನೆ ಮಾರ್ಗದರ್ಶನ ಮಾಡಬೇಕು? ಈ ದೇಶದ ಜನತೆಗೆ ಅವನು ಸರಕಾರಗಳಿಗೆ ಕೊಡುವ ಕರ - ಕಂದಾಯ ಶುಲ್ಕದ ಫಲ ಹಾಗೂ ಸಂಸದ ಶಾಸಕರಿಗೆ ಕೊಡುವ ಅಮೂಲ್ಯ ಮತದ ಫಲ, ಕರದಾತ ಹಾಗೂ ಮತದಾತರಿಗೆ ಹೇಗೆ ದೊರೆಯಬೇಕು? ಎಷ್ಟರ ಮಟ್ಟಿಗೆ ದೊರೆಯಬೇಕು? ಯಾವ ರೂಪದಲ್ಲಿ ದೊರೆಯಬೇಕು ಎಂಬ ವಿಚಾರಗಳನ್ನು ಪ್ರಜ್ಞಾವಂತರು ಚಿಂತಿಸಿದರೆ ಒಳ್ಳೆಯದು.

❑

ವರ್ಗಾವಣೆ ಮಾರ್ಗಸೂಚಿ

ರಾಜ್ಯ ಸರಕಾರದಲ್ಲಿ "ಅ" ವರ್ಗದ 17278, "ಬ" ವರ್ಗದ 28740 "ಕ" ವರ್ಗದ 455737 "ಡ" ವರ್ಗದ 71384 ಇತರ ವರ್ಗದ 78775 ಹೀಗೆ ಒಟ್ಟು 651934 ಜನ ಸರಕಾರಿ ನೌಕರ ಸಿಬ್ಬಂದಿ ಸೇನೆ 1995ನೇ ಹೊಸ ವರ್ಷದ ಪ್ರಾರಂಭದಿಂದ ಇದೆ. ಈ ಸೇನೆಯ ಸಂಖ್ಯೆ ತಾ 1-4-92ರಂದು 563210 ಇದ್ದು ಇಂದಿಗೆ ಮೂರು ವರ್ಷದ ಅವಧಿಯಲ್ಲಿ 88704 ನೌಕರರ ಸಂಖ್ಯೆ ಹೆಚ್ಚಿದೆ. ಈ ಸಿಬ್ಬಂದಿಗೆ ಈ ವರ್ಷ 95-96ರಲ್ಲಿ 2690.19 ಕೋಟಿ ಮೊತ್ತದ ವೇತನಭತ್ಯೆಯನ್ನು ಕೊಡಲಾಗುತ್ತದೆ. ಈ ಸೇನೆಯ ಮುಖಾಂತರ ರಾಜ್ಯದಲ್ಲಿ ಶಾಂತಿ, ಸುವ್ಯವಸ್ಥೆ, ಉತ್ತಮ ಆಡಳಿತ, ಭ್ರಷ್ಟಾಚಾರ ರಹಿತ, ಪಕ್ಷಪಾತ ರಹಿತ, ಸ್ವಜನಪಕ್ಷಪಾತ ರಹಿತ, ಜನತೆಯ ಹಾಗೂ ಸರಕಾರದ ಆರ್ಥಿಕ ಅಭಿವೃದ್ಧಿ, ರಾಜ್ಯದ ಸರ್ವಾಂಗೀಣ ಸರ್ವತೋಮುಖ ಅಭಿವೃದ್ಧಿ, ಅಭಿವೃದ್ಧಿಗಾಗಿ ನಿಗದಿಗೊಳಿಸಿದ ಸಂಪೂರ್ಣ ಮೊತ್ತದ ವೆಚ್ಚ ಇತ್ಯಾದಿ ಪ್ರಜಾಸೇವೆಗಳನ್ನು ನಿರ್ವಹಿಸಬೇಕಾಗುತ್ತದೆ. ಈ ಎಲ್ಲ ಸಿಬ್ಬಂದಿ ಸೇನೆಯನ್ನು ನಿಯಂತ್ರಿಸಿ ಅವರಿಂದ ಪರಿಣಾಮಕಾರಿಯಾದ ಕೆಲಸ ತೆಗೆದುಕೊಳ್ಳುವುದು ರಾಜ್ಯದ ಸಂಸದೀಯ ಪದಾಧಿಕಾರಿಗಳು, ಮುಖ್ಯಮಂತ್ರಿ, ಮಂತ್ರಿ, ವಿರೋಧಪಕ್ಷಗಳ ನಾಯಕರುಗಳನ್ನೊಳಗೊಂಡ 300 ಜನ ಶಾಸಕರ ಆದ್ಯ ಕರ್ತವ್ಯ. ಈ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಈ ಶಾಸಕರು ವಿಫಲರಾಗಬಾರದು. ಸರಕಾರಿ ಸಿಬ್ಬಂದಿ ಸೇನೆಯಲ್ಲಿ ಅನೇಕರು ಪ್ರಾಮಾಣಿಕರು, ಯೋಗ್ಯರು, ಸಮರ್ಥರು, ನಿಷ್ಠಾವಂತರು, ಸಾರ್ವಜನಿಕ ಕಳಕಳಿಯುಳ್ಳವರು ಇದ್ದಾರೆ. ಇದಕ್ಕೆ ತದ್ವಿರುದ್ಧವಾಗಿ ಪಕ್ಷಪಾತಗಳು, ಸ್ವಜನಪಕ್ಷಪಾತಗಳು, ಮೈಗಳ್ಳರು, ಭ್ರಷ್ಟರು, ಅದಕ್ಷರು, ಅಸಮರ್ಥರು ಇದ್ದಾರೆ. ಇವರಿಂದ ಒಳ್ಳೆಯ ಅಧಿಕಾರಿಗಳಿಗೆ, ಸರಕಾರಕ್ಕೆ, ಪ್ರಜಾತಂತ್ರ ವ್ಯವಸ್ಥೆಗೆ ಕೆಟ್ಟ ಹೆಸರು ಬರುತ್ತದೆ. ಇಂತಹವರನ್ನು ವಿವಿಧ ಶಾಸಕರು ಹದ್ದುಬಸ್ತಿನಲ್ಲಿಟ್ಟು ನ್ಯಾಯ ನಿಷ್ಠುರವಾದಿಗಳಾಗಿ, ದಾಕ್ಷಿಣ್ಯಪರರಾಗದೆ, ತಪ್ಪಿತಸ್ಥರನ್ನು ಯಾವ ಮುಲಾಜಿಲ್ಲದೇ ಶಿಕ್ಷಿಸಿ ಉತ್ತಮ ಅಧಿಕಾರಿಗಳಿಗೆ ಪ್ರೋತ್ಸಾಹ ಹಾಗೂ ಉತ್ತೇಜನ ಕೊಡುವುದು ಅತ್ಯವಶ್ಯ.

ಸಿಬ್ಬಂದಿ ಸೇನೆಯನ್ನು ನಿಯಂತ್ರಣದಲ್ಲಿಟ್ಟು ಅವರಿಂದ ಪರಿಣಾಮಕಾರಿಯಾದ ಕೆಲಸ ತೆಗೆದುಕೊಳ್ಳಲು ಹಾಗೂ ಅವರಿಗೆ ಅನುಕೂಲವಾಗುವ ದೃಷ್ಟಿಯಿಂದ, ವರ್ಗಾವಣೆ ಮಾರ್ಗಸೂಚಿ ಅಥವಾ ನೀತಿಸಂಹಿತೆಯನ್ನು ರಚಿಸಿ ಹಿಂದಿನ ಎಲ್ಲಾ ಸರಕಾರಗಳು ಹಾಗೂ ಈಗಿನ ಸರಕಾರ ಸಹಿತವಾಗಿ ಆಗಿಂದಾಗ್ಗೆ ಸೂಕ್ತವಾದ ಸರಿಯಾದ ಬದಲಾವಣೆಯನ್ನು ನೌಕರರ ಹಿತದೃಷ್ಟಿಯಿಂದ ಹಾಗೂ ಸಾರ್ವಜನಿಕ ಹಿತದೃಷ್ಟಿಯಿಂದ ಮಾಡುತ್ತಲೇ ಬಂದಿದ್ದಾರೆ ಹಾಗೂ ಕಾರ್ಯಾಚರಣೆಯಲ್ಲಿ ಬಹುಮಟ್ಟಿಗೆ ಆಗದೆ ಇದ್ದರೂ ಕೆಲಮಟ್ಟಿಗೆ ಆದರೂ ತಂದಿದ್ದಾರೆ. ಅನೇಕ ನೌಕರರಿಗೆ ಮಾರ್ಗಸೂಚಿ ತಾರಕವಾಗಿದ್ದರೆ ಅನೇಕರಿಗೆ ಮಾರಕವಾಗಿದೆಯೆಂದರೆ ತಪ್ಪಾಗಲಾರದು, ಪರಸ್ಪರ ಕಬೂಲಿವರ್ಗಾವರ್ಗಿ ಸವಲತ್ತು ಪ್ರಭಾವಶಾಲಿಗಳಿಗೆ ಸಿಗುತ್ತಿದ್ದರೆ ಪ್ರಭಾವಶಾಲಿಗಳಲ್ಲದ ನೌಕರರಿಗೆ ಇಂತಹ ಪ್ರಯೋಜನ ಸಿಗುತ್ತಿಲ್ಲ. ಗಂಡ-ಹೆಂಡಿರಾದ ಪ್ರಭಾವಶಾಲಿಗಳಿಗೆ ಮಾತ್ರ ಒಂದೇ ಕಡೆಗೆ ಇರುವ ಸವಲತ್ತು ಸಿಗುತ್ತದೆ; ಪ್ರಭಾವಶಾಲಿಯಲ್ಲದ ಅನೇಕರಿಗೆ ಈ ಸವಲತ್ತು ಸಿಗುತ್ತಿಲ್ಲ. ಪ್ರಭಾವಶಾಲಿಗಳಾದವರು ಗರಿಷ್ಠ ಅವಧಿ ಮೀರಿ ಎಷ್ಟೇ ಅವಧಿಗಳಾದರೆ ಅವರನ್ನು ಒಂದೇ ಸ್ಥಳದಲ್ಲಿ ಮುಂದುವರಿಸಿದ ಅನೇಕ ಉದಾಹರಣೆಗಳಿವೆ. ಪ್ರಭಾವಶಾಲಿಯಲ್ಲದವರನೇಕರು ಗರಿಷ್ಠ ಅವಧಿಗೆ ಒಂದು ಸ್ಥಳದಲ್ಲಿಡದಂತೆ ಚಂಡಾಟದ ವರ್ಗಾವರ್ಗಿ ಮಾಡಿ ಅವರಿಗೆ ಅನಾನುಕೂಲವಾಗುವಂತೆ ಮಾಡಲಾದ ಉದಾಹರಣೆಗಳು ಸಹಸ್ರಾರು.

'ಅ' ಮತ್ತು 'ಬ' ವರ್ಗದ ಅನೇಕ ಅಧಿಕಾರಿಗಳು ತಮ್ಮ ಸ್ವಂತ ಜಿಲ್ಲೆಗೆ ಇಲ್ಲವೇ ತಮ್ಮ ಸ್ವಂತ ತಾಲ್ಲೂಕಿಗೆ ವರ್ಗಮಾಡಿಸಿಕೊಂಡು ಹಲವಾರು ವರ್ಷ ಅಲ್ಲಿಯೇ ಮುಂದುವರೆದ ಅಥವಾ ಗರಿಷ್ಠ ಅವಧಿ ಮೀರಿ ಮುಂದುವರೆದ ಉದಾಹರಣೆಗಳಿದ್ದು ಈಗಲೂ ಮುಂದುವರಿಯುತ್ತಿವೆ. ನಾಲ್ಕನೇ ದರ್ಜೆ ನೌಕರರು, ಶಿಕ್ಷಣ ಇಲಾಖೆಯಲ್ಲಿಯ ಬೋಧಕ ಸಿಬ್ಬಂದಿ, ಪ್ಯಾರಾ ಮೆಡಿಕಲ್ ಸಿಬ್ಬಂದಿ, 'ಸಿ' ಗುಂಪಿನ ಗ್ರಾಮೀಣ ಪ್ರದೇಶದಲ್ಲಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿ ಇವರಿಗೆ ಇರುವ ಸವಲತ್ತುಗಳನ್ನು ಅನೇಕರಿಗೆ ನಿರಾಕರಿಸುವುದು ಸಹ ಕಂಡುಬಂದಿದೆ. 'ಡಿ' ವರ್ಗದ ನೌಕರರನ್ನು ತಮ್ಮ ಸ್ವಂತ ತಾಲ್ಲೂಕುಗಳಲ್ಲಿ ಇಡಬೇಕಾಗಿದ್ದರೂ ಪರಜಿಲ್ಲೆಯಲ್ಲಿರುವ ಅನೇಕರನ್ನು ಅವರ ಸ್ವಂತ ತಾಲ್ಲೂಕು ಅಥವಾ ಜಿಲ್ಲೆಗೆ ವರ್ಗಾಯಿಸದಿರುವ ಅನೇಕ ಉದಾಹರಣೆಗಳಿವೆ. ನಿವೃತ್ತರಾಗಲಿರುವ ನೌಕರರಿಗೆ ಇರುವ ಸವಲತ್ತುಗಳಿಂದಲೂ ಸಹ ಅನೇಕರು ವಂಚಿತರಾಗಿದ್ದಾರೆ.

1-4-95ರಿಂದ ಜಾರಿಯಲ್ಲಿ ಬಂದಿರುವ ಸರಕಾರಿ ನೌಕರರ ವರ್ಗಾವಣೆ ಮಾರ್ಗಸೂಚಿ ಅಥವಾ ನೀತಿ ಸಂಹಿತೆ ಸಾರ್ವಜನಿಕ ಹಾಗೂ ಆಡಳಿತ ಹಿತದೃಷ್ಟಿಯಿಂದ ಯೋಗ್ಯ ಹಾಗೂ ಸಮರ್ಥನೀಯವಾಗಿದ್ದು ಅದನ್ನು ಚಾಚೂ ತಪ್ಪದೇ ಅನುಷ್ಠಾನಗೊಳಿಸುವುದು ಸಂಬಂಧಿಸಿದ ಅಧಿಕಾರಿಗಳು, ಮಂತ್ರಿಗಳ ಹಾಗೂ ಮುಖ್ಯಮಂತ್ರಿಗಳ ಕರ್ತವ್ಯವಾಗಬೇಕು. ಈ ಹಿಂದೆ ಇಂತಹ ಮಾರ್ಗಸೂಚಿಗಳನ್ನು ಗಾಳಿಗೆ ತೂರಿ ತಮಗೆ ಮನಬಲ್ಲಂತೆ ಕೆಲವರಿಗೆ ಪೂರಕವೂ ಕೆಲವರಿಗೆ ತಾರಕವೂ ಆದ ಅನುಚಿತ

ವರ್ಗಾವಣೆಗಳನ್ನು ಅಧಿಕಾರಿಗಳು, ಮಂತ್ರಿಗಳು ಹಾಗೂ ಮುಖ್ಯಮಂತ್ರಿಗಳು ಮಾಡಿದ ದೃಷ್ಟಾಂತಗಳು ಬೇಕಾದಷ್ಟಿವೆ. ಹಿಂದಿನವರು ನೀತಿ ಸಂಹಿತೆಯನ್ನು ಉಲ್ಲಂಘಿಸಿದ ಕೆಟ್ಟ ಸಂಪ್ರದಾಯಗಳನ್ನು ಕೈಬಿಟ್ಟು ವರ್ಗಾವಣೆ ಮಾರ್ಗಸೂಚಿಗೆ ಅನುಗುಣವಾಗಿ ಈಗಿನ ಸರಕಾರ ವರ್ಗಾವಣೆಗಳನ್ನು ಯಾವುದೇ ಬಿಡೆ, ಮುರವತ್ತು, ಮುಲಾಜು, ಅನುಚಿತ ಒತ್ತಡಗಳಿಗೆ ಮಣಿಯದೇ ಮಾಡಿದರೆ ರಾಜ್ಯದ ಆಡಳಿತ ಸುಗಮವಾಗಿ ಅಭಿವೃದ್ಧಿ ಕಾರ್ಯಗಳ ಯಶಸ್ವೀ ಅನುಷ್ಠಾನಕ್ಕೆ ನಾಂದಿಯಾದೀತು ಹಾಗೂ ಸರಕಾರಕ್ಕೆ ಒಳ್ಳೆಯ ಹೆಸರು ಬಂದೀತು.

❑

ನಿರುದ್ಯೋಗ ನಿವಾರಣೆ ಮತ್ತು ಸರಕಾರಗಳ ಆಸಕ್ತಿ

ರಾಷ್ಟ್ರದಲ್ಲಿ ಶರವೇಗದಲ್ಲಿ ಹೆಚ್ಚುತ್ತಿರುವ ಜನಸಂಖ್ಯೆಯನ್ನು ತಡೆಗಟ್ಟಲು ಕೇಂದ್ರ ಹಾಗೂ ರಾಜ್ಯ ಸರಕಾರಗಳು ಸಾಕಷ್ಟು ಯೋಜನೆಗಳನ್ನು ಹಾಕಿಕೊಂಡಿದ್ದರೂ ಅವುಗಳ ಪರಿಣಾಮ ಯಶಸ್ವಿಯಾಗದೆ ಯಥಾವತ್ತಾಗಿ ಜನಸಂಖ್ಯೆ ಹೆಚ್ಚುತ್ತಲೇ ಇದೆ ಹಾಗೂ ಈ ಬಗ್ಗೆ ಹಣದ ವೆಚ್ಚ ಸಹ ಹೆಚ್ಚುತ್ತಲೇ ಇದೆ. ಜನಸಂಖ್ಯೆ ಹೆಚ್ಚಾದಂತೆ ಬಡತನ ನಿರುದ್ಯೋಗ ಸಹ ನಿರಾತಂಕವಾಗಿ ಹೆಚ್ಚುತ್ತಲೇ ಇದೆ. ಬಡತನ ತೊಲಗಿಸಲು ಬಡತನ ರೇಖೆಯಿಂದ ವಿವಿಧ ಆರ್ಥಿಕ ಸಹಾಯದ ಅನೇಕ ಯೋಜನೆಗಳನ್ನು ಹಾಕಿಕೊಂಡಿದ್ದರೂ ಅವುಗಳ ಪರಿಣಾಮ ಯಾವುದೇ ಫಲ ಕೊಡದೆ ಬಡತನ, ತೊಂದರೆ, ಅನ್ನ, ವಸ್ತ್ರ, ಆಶ್ರಯ ಗಳಿಂದ ವಂಚಿತರಾಗಿ ಸಾಲದ ಶೂಲಕ್ಕೆ ಸಿಕ್ಕಿರುವ ಭಾರೀ ಸಂಖ್ಯೆಯ ಬಡವರನ್ನು ಗ್ರಾಮಾಂತರ ಪ್ರದೇಶದಲ್ಲಿ ನೋಡುತ್ತಿದ್ದೇವೆ. ಗೊಬ್ಬರ, ಬೀಜ, ಸಲಕರಣಗಳನ್ನು ಕೊಳ್ಳಲು ಹಣವಿರದೆ, ಬಿತ್ತಿದ ಬೆಳೆಗೆ ಕ್ರಿಮಿನಾಶಕ ಔಷಧಕ್ಕೆ ಹಣವಿಲ್ಲದೆ, ಬೆಳೆಯಲ್ಲಿಯ ಕಳೆಯನ್ನು ತೆಗೆಯಲು ಹಣವಿಲ್ಲದೆ, ಬಡವರ ವ್ಯವಸಾಯ ಉದ್ಯಮ ನಶಿಸಿ ಹೋಗಿರುವುದನ್ನು ಕಣ್ಣಾರೆ ನೋಡುತ್ತಿದ್ದೇವೆ. ಆದಾಗ್ಯೂ ಕೈಗಡ ಸಾಲ ಮಾಡಿ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಿ ಅವರಿಗೆ ನೌಕರಿ ಸಿಗದೆ ವ್ಯವಸಾಯು ಮಾಡಲು ಹಣವಿರದೆ ಎಸ್.ಎಸ್.ಎಲ್.ಸಿ. ಅಥವಾ ಡಿಗ್ರಿ ಪರೀಕ್ಷೆ ಪಾಸಾಗಿ ನೌಕರಿ ಸಿಗದೆ ನಿರುದ್ಯೋಗಿ ಗಳಾಗಿ ಅಲೆದಾಡುತ್ತಿರುವ ಲಕ್ಷಾಂತರ ನಿರುದ್ಯೋಗಿಗಳನ್ನು ನಮ್ಮ ರಾಜ್ಯದಲ್ಲಿಯೇ ನೋಡುತ್ತಿದ್ದೇವೆ. ಜನಸಂಖ್ಯೆ ಹೆಚ್ಚಾದಂತೆ ರಾಜ್ಯದಲ್ಲಿ ಶಾಲೆ, ಕಾಲೇಜು, ವಿಶ್ವವಿದ್ಯಾಲಯ ಗಳ ಸಂಖ್ಯೆ ಹೆಚ್ಚುತ್ತಲೇ ಇವೆ. ಓದುವ ವಿದ್ಯಾರ್ಥಿಗಳ ಸಂಖ್ಯೆಯೂ ಹೆಚ್ಚುತ್ತಲೇ ಇದೆ. ವಿದ್ಯಾರ್ಜನೆಯ ದೇಣಿಗೆ ವೆಚ್ಚ ಹೆಚ್ಚುತ್ತಲೇ ಇದೆ. ಆಸ್ತಿ ಮಾರಿ, ಡೊನೇಶನ್ ಕೊಟ್ಟು ನೌಕರಿ ಪಡೆದು ದಶಕಗಳವರೆಗೆ ಯಾವುದೇ ವೇತನ ಭತ್ಯೆ ಇಲ್ಲದೆ ಶಿಕ್ಷಕರಾಗಿ ಕೆಲಸ ಮಾಡಿ ತೊಂದರೆಗೀಡಾದ ಸಹಸ್ರಾರು ಯುವಕರು ಸರಕಾರದ ಗಮನದಲ್ಲಿದ್ದರೂ, ಸರಕಾರ ಕಣ್ಣು ಮುಚ್ಚಿಕೊಂಡು ಅವರ ಕಳವಳ - ಕಷ್ಟವನ್ನು ನಿವಾರಿಸುವಲ್ಲಿ ವಿಫಲವಾಗಿದೆ.

ಸರಕಾರದ ವಿವಿಧ ಇಲಾಖೆಗಳಲ್ಲಿ ಹಾಗೂ ಸಾರ್ವಜನಿಕ ಸರಕಾರಿ ಉದ್ಯಮಗಳಲ್ಲಿ ಲಕ್ಷಾಂತರ ಹುದ್ದೆಗಳು ಖಾಲಿ ಇದ್ದರೂ ಸರಕಾರ ಹಾಗೂ ಸರಕಾರಿ ಆಡಳಿತ ಮಂಡಳಿ ಅವುಗಳನ್ನು ಆಗಾಗ್ಗೆ ತುಂಬಲು ಹಾಗೂ ನಿರುದ್ಯೋಗಿಗಳಿಗೆ ಉದ್ಯೋಗ ಒದಗಿಸಿಕೊಡಲು ಮುಂದಾಗದೆ ಇರುವುದು ನಿರುದ್ಯೋಗಿಗಳ ದುರ್ದೈವ.

ಕರ್ನಾಟಕ ರಾಜ್ಯದಲ್ಲಿ ನಿರುದ್ಯೋಗ ನಿವಾರಣೆಯ ದಿಶೆಯಲ್ಲಿ 1972-77ರ ದೇವರಾಜ ಅರಸರ ಸರಕಾರ ಸರಕಾರಿ ನೌಕರರ ನಿವೃತ್ತಿ ವಯೋಮಿತಿಯನ್ನು 58ರಿಂದ 55ಕ್ಕೆ ಇಳಿಸಿ ನಿರುದ್ಯೋಗಿಗಳಿಗೆ ಉದ್ಯೋಗದ ಅವಕಾಶ ಮಾಡಿಕೊಟ್ಟಿತ್ತು. ಇದರಿಂದ ಅನೇಕರು ನಿವೃತ್ತರಾಗಿ ಅನೇಕರಿಗೆ ನೌಕರಿ ಅವಕಾಶ ಸಿಕ್ಕಿತು. ಇತ್ತಿತ್ತಲಾಗಿ ಹುದ್ದೆ ಹಾಗೂ ಭಡ್ತಿಗಳು ಲಕ್ಷಾಂತರ ಹೆಚ್ಚಾಗುತ್ತಿದ್ದರೂ ನಿವೃತ್ತರ ಸಂಖ್ಯೆ ಹೆಚ್ಚಾಗುತ್ತಿದ್ದರೂ ನಿವೃತ್ತರಿಗೆ ಭಾರಿ ಪ್ರಮಾಣದ ನಿವೃತ್ತಿ ಸೌಲಭ್ಯಗಳು ದೊರೆಯುತ್ತಿದ್ದರೂ, ನಿರುದ್ಯೋಗಿ ಯುವಕರಿಗೆ ಗಧಾ ಪ್ರಹಾರ ಮಾಡಿ ನಿರದ್ಯೋಗಿಗಳ ಸಂಖ್ಯೆ ಪ್ರತಿವರ್ಷ ಹೆಚ್ಚಾಗುವಂತೆ ಸರಕಾರ ಮಾಡಿದ್ದು ಸಮಂಜಸವಲ್ಲವೆಂದು ಹೇಳದೇ ಗತ್ಯಂತರವಿಲ್ಲ. ಎಸ್.ಎಸ್.ಎಲ್.ಸಿ. ಪಾಸಾದವರು. ವಾಣಿಜ್ಯ, ಕಲಾ, ಸಾಮಾನ್ಯ, ಕಾನೂನು, ಎಂಜಿನಿಯರಿಂಗ್ ಶಿಕ್ಷಣ ತರಬೇತಿ, ವೈದ್ಯ ಶಿಕ್ಷಣ ಇತ್ಯಾದಿ ವಿವಿಧ ಅನೇಕ ಪದವೀಧರರಿಗೆ ನೌಕರಿ ಸಿಗದೆ ನಿರುದ್ಯೋಗಿಗಳಾಗಿ ಉದ್ಯೋಗ ಪಡೆಯುವ ಸಲುವಾಗಿ ಉದ್ಯೋಗ ವಿನಿಮಯ ಕಚೇರಿಗಳಲ್ಲಿ ತಮ್ಮ ಹೆಸರನ್ನು ನೋಂದಾಯಿಸಿದರೂ ಅವಿದ್ಯಾವಂತ ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆ ಪ್ರತಿವರ್ಷ ಹೆಚ್ಚಾಗುತ್ತಾ, ಬೆಳೆಯುತ್ತಾ ಬಂದು 95-96ರಲ್ಲಿ ಹದಿನಾರು ಲಕ್ಷಕ್ಕಿಂತ ಹೆಚ್ಚಿನ ಸಂಖ್ಯೆಯ ಗಡಿಯನ್ನು ದಾಟಿದೆ. ಯಾವುದೇ ದಾಖಲೆಗಳಲ್ಲಿರದ ಸಹಸ್ರಾರು ಬಾಲಕರು ಮನೆ ಮಾರು ತೊರೆದು ದುಬಾರಿಯಾಗಿರುವ ಒಕ್ಕಲುತನ ಉದ್ಯಮ ತೊರೆದು ಹೊಲ ಮನೆಗಳನ್ನು ಅಡವು ಹಾಕಿ ಬಾಲಕಾರ್ಮಿಕರಾಗಿ ನಗರಗಳ ಹೋಟೆಲ್‌ಗಳಲ್ಲಿ ಕನಿಷ್ಠ ವೇತನಕ್ಕೂ ದಾರಿ ಕಾಣದೆ ಹೊಟ್ಟೆಪಾಡಿಗಾಗಿ ಜೀತದಾಳುಗಳಾಗಿ ದುಡಿಯುವವರನ್ನು ದೊಡ್ಡ ಪ್ರಮಾಣದಲ್ಲಿ ಕಾಣಬಹುದಾಗಿದೆ. ಶಾಲಾ, ಕಾಲೇಜು, ವಿಶ್ವವಿದ್ಯಾಲಯಗಳ ಸಂಖ್ಯೆ ಹೆಚ್ಚಾದಂತೆ ನಿರುದ್ಯೋಗಿಗಳ ಸಂಖ್ಯೆ ಹೆಚ್ಚಾಗಿ ಶಾಲಾ, ಕಾಲೇಜು, ವಿಶ್ವವಿದ್ಯಾಲಯಗಳು ನಿರುದ್ಯೋಗಿ ಗಳನ್ನು ನಿರ್ಮಾಣ ಮಾಡುವ ನಿರುದ್ಯೋಗಿ ಕಾರ್ಖಾನೆಗಳಾಗಿರುವುದನ್ನು ಸರಕಾರ ನೋಡಿಯೂ ಈ ದಿಶೆಯಲ್ಲಿ ನಿರುದ್ಯೋಗ ನಿವಾರಣೆಯನ್ನು ಅಥವಾ ಯಾವುದೇ ಉದ್ಯೋಗಶೀಲರಾಗುವತ್ತ ವಿದ್ಯಾಸಂಸ್ಥೆಗಳಿಂದ ಮುಕ್ತರಾದ ವಿದ್ಯಾರ್ಥಿಗಳನ್ನು ಉತ್ತಮ ನಾಗರೀಕರನ್ನಾಗಿ ಮಾಡುವಲ್ಲಿ ಸರಕಾರ ನಿಷ್ಕ್ರಿಯವಾಗುವುದು ಸಾಧುವಲ್ಲ. ಶಾಲಾ, ಕಾಲೇಜು, ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಣಮಟ್ಟ ಕಡಿಮೆ ಹಾಗೂ ಕಳಪೆ ಮಟ್ಟದ್ದಾಗಿ ಓದಲೇ ಬೇಕಾದ ಉತ್ತಮವಾದ ವಾತಾವರಣವಿರದೆ ತೇರ್ಗಡೆಯಾದವರು ದ್ವಿತೀಯ ಹಾಗೂ ತೃತೀಯ ಶ್ರೇಣಿಯವರೇ ಭಾರೀ ಪ್ರಮಾಣದಲ್ಲಿರುತ್ತಿದ್ದು ಅವರಿಗೆ ಯಾವುದೇ ಮೆರಿಟ್ ಇಲ್ಲದೆ ನೌಕರಿ ದೊರೆಯದೆ ವಂಚಿತರಾಗಿ ನೌಕರಿಗೆ ಸೇರುವ ವಯೋಮಿತಿಯನ್ನು

ದಾಟಿ ಕಷ್ಟಮಯ ಜೀವನದಲ್ಲಿ ಹೊರಳಾಡುತ್ತಿರುವ ಉದಾಹರಣೆಗಳು ಸಾಕಷ್ಟು ಇವೆ. ವಸೂಲಿ, ವರ್ಚಸ್ಸು, ಹಣವಿಲ್ಲದ ಅನೇಕ ಅರ್ಹತೆಯುಳ್ಳವರಿಗೆ ನೌಕರಿ ಸಿಗದ ಉದಾಹರಣೆಗಳು ಸಾಕಷ್ಟು ಇವೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರು ಅನೇಕರು ನೌಕರಿ ಇಲ್ಲದೆ ಒಡಾಡುತ್ತಿದ್ದರೂ ಖೋಟಾ ಜಾತಿ ಪತ್ರ ಪಡೆದು ನೌಕರಿ ಗಿಟ್ಟಿಸಿಕೊಂಡ ಅನೇಕರು ಸಹಸ್ರಾರು ಸಂಖ್ಯೆಯಲ್ಲಿದ್ದರೂ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಂಡು ವಜಾ ಮಾಡದೆ ಪರಿಶಿಷ್ಟ ಜಾತಿ, ಪಂಗಡದವರಿಗೆ ಮಾಡಿದ ಅನ್ಯಾಯವನ್ನು ನೋಡುತ್ತಾ ಕಣ್ಣುಮುಚ್ಚಿ ಕೂತುಕೊಂಡು ಈ ವರ್ಗಗಳಲ್ಲಿ ಸಹ ನಿರುದ್ಯೋಗಿಗಳ ಸಂಖ್ಯೆ ಹೆಚ್ಚಿಸಲು ಸರಕಾರವೇ ಹೊಣೆಗಾರರಾಗಿರುವುದು ಸಾಧುವಲ್ಲ. ಸರಕಾರ ಇನ್ನಾದರೂ ಬಡವರ, ಜನಸಾಮಾನ್ಯರ, ಕೃಷಿಕರ, ಕೃಷಿ ಕಾರ್ಮಿಕರ ಮಕ್ಕಳು ನಿರುದ್ಯೋಗಿಗಳಾಗದಂತೆ ಹಾಗೂ ಈ ನಿರುದ್ಯೋಗಿಗಳ ಸಂಖ್ಯೆ ಹೆಚ್ಚಾಗದಂತೆ ಜಾಗ್ರತೆ ಹಾಗೂ ಜವಾಬ್ದಾರಿ ವಹಿಸಿ ಬೃಹದಾಕಾರವಾಗಿರುವ ನಿರುದ್ಯೋಗ ಸಮಸ್ಯೆಗೆ ನಿವಾರಣೆ ಒದಗಿಸುವುದು ಒಳ್ಳೆಯದು.

❑

ಸಹಕಾರಿ ವಲಯದ ಕೃಷಿಸಾಲ

ರಾಜ್ಯದಲ್ಲಿಯ ಕೃಷಿಕರನ್ನು ಕೃಷಿ ಕಾರ್ಮಿಕರನ್ನು ಹಾಗೂ ಕೃಷಿ ಉದ್ಯಮವನ್ನು ಘೋಷಿಸುವುದು ಹಾಗೂ ಕೃಷಿಕರ ಆರ್ಥಿಕ ಪರಿಸ್ಥಿತಿ ಸುಧಾರಿಸುವರೇ ಸಹಕಾರ ಸಂಘಗಳ ಮೂಲ ಉದ್ದೇಶ. ಈ ಉದ್ದೇಶವನ್ನು ಸಾಧಿಸುವ ಸಲುವಾಗಿಯೇ ಗ್ರಾಮಾಂತರ ಪ್ರದೇಶದಲ್ಲಿ ಗ್ರಾಮ ವ್ಯವಸಾಯಪತ್ತಿನ ಸಹಕಾರ ಸಂಘ, ತಾಲ್ಲೂಕು ಪ್ರಾಥಮಿಕ ವ್ಯವಸಾಯ ಅಭಿವೃದ್ಧಿ ಬ್ಯಾಂಕ್, ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಹಾಗೂ ಇವೆಲ್ಲವುಗಳ ಶಾಖೆಗಳು ಪ್ರತಿ ತಾಲ್ಲೂಕು ಹಾಗೂ ಅಲ್ಲಲ್ಲಿಯ ಕೇಂದ್ರಗಳಲ್ಲಿ ಸ್ಥಾಪಿತವಾಗಿವೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಜನರಿಗೆ ಧನಸಹಾಯಮಾಡಿ ಅವರನ್ನು ಈ ಸಹಕಾರ ಪತ್ತಿನ ಸಂಸ್ಥೆಗಳಿಗೆ ಸದಸ್ಯರನ್ನಾಗಿ ಮಾಡಿಕೊಂಡು ಅವರ ಆರ್ಥಿಕ ಹಾಗೂ ವ್ಯವಸಾಯ ಅಭಿವೃದ್ಧಿ ಮಾಡುವ ಗುರಿಯನ್ನು ಹೊಂದಲಾಗಿದೆ. ಗ್ರಾಮಾಂತರ ಎಲ್ಲಾ ವರ್ಗಗಳ ವ್ಯವಸಾಯ ಹಾಗೂ ಆರ್ಥಿಕ ಪರಿಸ್ಥಿತಿ ಸುಧಾರಿಸಿ ಅವರನ್ನು ಹಣವಂತರನ್ನಾಗಿ ಮಾಡುವುದಲ್ಲದೆ ಅವರು ದುಡಿಮೆಯಲ್ಲಿ ಠೇವಣಿಯನ್ನು ಸಹ ಪಡೆದು ಕೊಳ್ಳಬೇಕೆಂಬ ಉದ್ದೇಶವೂ ಇದೆ. ರಾಜ್ಯದಲ್ಲಿ ವಿವಿಧ ವ್ಯವಸಾಯಗಾರರ ಕೃಷಿ ಹಾಗೂ ಕೃಷಿಯೇತರ ಉದ್ದಿಮೆಗಾಗಿ ಸೇವೆಯನ್ನು ಒದಗಿಸಲು ಸುಮಾರು 4374 ಪ್ರಾಥಮಿಕ ವ್ಯವಸಾಯ ಪತ್ತಿನ ಗ್ರಾಮ ಸಹಕಾರ ಸಂಘ, ಪ್ರತಿ ಜಿಲ್ಲೆಗೊಂದರಂತೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಹಾಗೂ ಅವುಗಳ ಶಾಖೆಗಳು ಹಾಗೂ 177 ತಾಲ್ಲೂಕು ವ್ಯವಸಾಯ ಅಭಿವೃದ್ಧಿ ಬ್ಯಾಂಕುಗಳು ಕಾರ್ಯನಿರತವಾಗಿದೆ. ಈ ಪತ್ತಿನ ವ್ಯವಸಾಯ ಸಹಕಾರ ಸಂಘಗಳು ತೃಪ್ತಿಕರವಾಗಿ ಸಾಲವನ್ನು ಹಂಚದೆ, ಕೊಟ್ಟ ಸಾಲವನ್ನು ಸರಿಯಾಗಿ ವಸೂಲಿಮಾಡದೆ, ವ್ಯವಸಾಯಗಾರರಿಗೆ ತಾರಕವಾಗಿದೆ. ಮಾರಕವಾಗಿ ವ್ಯವಸಾಯಗಾರರು ವಾಣಿಜ್ಯ ಹಾಗೂ ಇತರ ಗ್ರಾಮೀಣ ಬ್ಯಾಂಕ್ ಹಾಗೂ ಇತರ ಬ್ಯಾಂಕುಗಳಿಗೆ ಸಾಲಕ್ಕಾಗಿ ಮೊರೆ ಹಾಗೂ ಶರಣು ಹೋಗುವುದಕ್ಕೆ ಆಸ್ಪದ ಮಾಡಿಕೊಟ್ಟು, ರೈತರು ಆರ್ಥಿಕ ಬಿಕ್ಕಟ್ಟಿಗೆ ಸಿಕ್ಕುವಂತೆ ಮಾಡಿರುವದಲ್ಲದೆ ತಾವೂ ಸಹ ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿ ದಿವಾಳಿದಾರಿಯತ್ತ ದಾಪುಗಾಲು ಹಾಕುತ್ತಿರುವುದು ಸರಿಯಲ್ಲ. ಈ ದಿಶೆಯಲ್ಲಿ ಹೊಣೆಗಾರ ಸಹಕಾರಿ ಮುಖಂಡರು ಹಾಗೂ ಅಧಿಕಾರಿಗಳು ಚಿಂತಿಸಬೇಕಾಗಿದೆ.

ರಾಜ್ಯದಲ್ಲಿ ಸುಮಾರು 4374 ಪ್ರಾಥಮಿಕ ಪತ್ತಿನ ವ್ಯವಸಾಯ ಸಹಕಾರ ಸಂಘಗಳು ಗ್ರಾಮಾಂತರ ಸದಸ್ಯರಿಗೆ ವಿವಿಧ ಅಲ್ಪಾವಧಿ, ಮಧ್ಯಮಾವಧಿ ಹಾಗೂ ದೀರ್ಘಾವಧಿ ಸಾಲಗಳ ಉದ್ದೇಶಗಳಿಗಾಗಿ 93-94ರಲ್ಲಿ 373-66 ಕೋಟಿ, 94-95ರಲ್ಲಿ 435-11 ಕೋಟಿ, 95-96ರಲ್ಲಿ 433.72 ಕೋಟಿ ರೂ. ಸಾಲವನ್ನು ಕೊಟ್ಟಿದ್ದರೂ ರೈತರ ಪರಿಸ್ಥಿತಿ ಚಿಂತಾಜನಕವಿದ್ದುದರಿಂದ ಸಾಲದ ಬಾಕಿ ವಸೂಲಿ ತೃಪ್ತಿಕರವಾಗಿಲ್ಲ. ಈ ಸಂಘಗಳನ್ನು ಸದೃಢಪಡಿಸಲು ಹಾಗೂ ಅವುಗಳ ಸಿಬ್ಬಂದಿಗೆ ಕನಿಷ್ಠ ವೇತನ ದೊರಕುವಂತೆ ಮಾಡಿ ಅವರ ಸೇವೆಯನ್ನು ಸಾರ್ಥಕ ರೀತಿಯಲ್ಲಿ ಪಡೆಯುವಂತೆ ಮಾಡುವಲ್ಲಿ ಸರಕಾರ ತಪ್ಪಿರುವುದು ದುರ್ದೈವ, ರಾಜ್ಯದಲ್ಲಿ ರಾಷ್ಟ್ರೀಕೃತ ಬ್ಯಾಂಕು, ಗ್ರಾಮೀಣ ಬ್ಯಾಂಕು, ಖಾಸಗೀ ವಲಯ ಬ್ಯಾಂಕು, ಸ್ಟೇಟ್ ಬ್ಯಾಂಕ್ ಇತ್ಯಾದಿ ಬ್ಯಾಂಕುಗಳು ಸುಮಾರು 4395 ಶಾಖೆಗಳನ್ನು ಹೊಂದಿದ್ದು ಗ್ರಾಮಾಂತರ ಪ್ರದೇಶದಲ್ಲಿಯೇ ಸುಮಾರು 2371 ಶಾಖೆಗಳಿವೆ. ಈ ಎಲ್ಲಾ ಬ್ಯಾಂಕು ಶಾಖೆಗಳು ಗ್ರಾಮಾಂತರ ರೈತರಿಗೆ ವಿವಿಧ ಉದ್ದೇಶಗಳಿಗಾಗಿ ಅವರ ಅಭಿವೃದ್ಧಿಗಾಗಿ ಸಾಕಷ್ಟು ಸಾಲವನ್ನು ಕೊಡುತ್ತಿವೆ ಹಾಗೂ ಹೆಚ್ಚಿನ ಬಡ್ಡಿಯನ್ನು ಸಹ ಆಕರಣೆ ಮಾಡಿ ಸಾಲವನ್ನು ವಸೂಲುಮಾಡಿ ಸಹಕಾರ ಸಂಘಗಳ ಕಾರ್ಯವ್ಯಾಪ್ತಿಯಲ್ಲಿ ಅನಿವಾರ್ಯವಾಗಿ ತಮ್ಮನ್ನು ತಾವು ತೊಡಗಿಸಿಕೊಂಡಿವೆ. ಈ ವಾಣಿಜ್ಯ ಬ್ಯಾಂಕುಗಳು ಕೃಷಿ ಹಾಗೂ ಕೃಷಿ ಆಧಾರಿತ ಕಾರ್ಯಕ್ರಮಗಳಿಗಾಗಿ 93-94ರಲ್ಲಿ 2646 ಕೋಟಿ, 94-95ರಲ್ಲಿ 2624 ಕೋಟಿ, 95-96ರಲ್ಲಿ 2800.00 ಕೋಟಿ, ಸಾಲವನ್ನು ಕೊಟ್ಟಿದ್ದು ಇದರಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಹಾಗೂ ದುರ್ಬಲ ವರ್ಗದವರಿಗಾಗಿಯೇ 93-94ರಲ್ಲಿ 1557.06 ಕೋಟಿ, 94-95ರಲ್ಲಿ 1649-74 ಕೋಟಿ 95-96ರಲ್ಲಿ 1750.00 ಕೋಟಿ ಸಾಲವನ್ನು ರಾಜ್ಯಾದ್ಯಂತ ಕೊಡಲಾಗಿದೆ. ರಾಜ್ಯದಲ್ಲಿ ಕೃಷಿ ಚಟುವಟಿಕೆಗಳಿಗೆ ವಾಣಿಜ್ಯ ಬ್ಯಾಂಕುಗಳು ಪ್ರತಿ ಜಿಲ್ಲೆಗೆ ಸುಮಾರು ನೂರು ಕೋಟಿ ರೂ. ಮೊತ್ತವನ್ನು ಸಾಲವನ್ನಾಗಿ 96-97ರಲ್ಲಿ ಕೊಡುವ ಯೋಜನೆ ಹಾಕಿಕೊಂಡಿದೆ. ಉದಾಹರಣೆಗೆ ಧಾರವಾಡ ಜಿಲ್ಲೆಯಲ್ಲಿ ಸುಮಾರು 1.26 ಲಕ್ಷ ಖಾತೆದಾರರಿಗೆ ಬೆಳೆ ಸಾಲ ಹಾಗೂ ಇತರ ಕೃಷಿ ಚಟುವಟಿಕೆಗಳಿಗೆ ಸುಮಾರು 122.96 ಕೋಟಿ ಬ್ಯಾಂಕ್ ಸಾಲ ಸೌಲಭ್ಯ ಕಲ್ಪಿಸುವ ಕಾರ್ಯಕ್ರಮವನ್ನು ವಾಣಿಜ್ಯ ಬ್ಯಾಂಕುಗಳು ಹಾಕಿಕೊಂಡಿವೆ. ಸಹಕಾರಿ ಸಂಸ್ಥೆಗಳ ಹಾಗೂ ವಾಣಿಜ್ಯ ಸಂಸ್ಥೆಗಳ ಸೇವೆ ಹಾಗೂ ಸಾಲ ಕೊಟ್ಟ ಮೊತ್ತದ ಅಜಗಜಾಂತರ ಅಂತರ ಕೃಷಿಕರಿಗೆ ಯಾವ ರೀತಿಯಲ್ಲಿ ದೊರೆಯುತ್ತಿದೆ ಎಂಬುದನ್ನು ನೋಡಿದರೆ ಸಹಕಾರಿ ಧುರೀಣರು ಹಾಗೂ ಅಧಿಕಾರಿಗಳು ತಲೆತಗ್ಗಿಸಬೇಕಾಗುತ್ತದೆ.

ಮೊದಮೊದಲು ಸಹಕಾರ ಸಂಸ್ಥೆಗಳು ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ (ಐ.ಆರ್.ಡಿ.ಪಿ.)ಗಳಲ್ಲಿ ಸರಿಯಾಗಿ ಪಾಲ್ಗೊಂಡು ರೈತರಿಗೆ ನೆರವಾಗುತ್ತಿದ್ದು, ಅದು ಈಗ ಕುಂಟುತ್ತಿದೆ. ಈ ಯೋಜನೆಯ ಅನುಷ್ಠಾನವನ್ನು ಸರಕಾರದವರು ವಾಣಿಜ್ಯ ಬ್ಯಾಂಕುಗಳಿಗೆ ಕೊಟ್ಟು ಅವುಗಳನ್ನು ಪ್ರೋತ್ಸಾಹಿಸುತ್ತಿರುವುದು ಸರಕಾರಕ್ಕೆ ಭೂಷಣವಲ್ಲ. ಗ್ರಾಮಾಂತರ

ಸಹಕಾರಿ ಸಂಸ್ಥೆಗಳಿಗೆ ಸರಿಯಾದ ಸಿಬ್ಬಂದಿ ವ್ಯವಸ್ಥೆ ಇಲ್ಲದಿದ್ದರೂ ಅವರು ತೃಪ್ತಿಕರವಾಗಿ ಈ ಯೋಜನೆಯ ಅನುಷ್ಠಾನವನ್ನು ಜಾರಿಗೊಳಿಸುತ್ತಿದ್ದರೂ ಅವರ ಕೈ ತಪ್ಪುತ್ತಿರುವುದು ಸರಿಯಲ್ಲ. ಸಮಗ್ರ ಗ್ರಾಮೀಣ ಯೋಜನೆಯ ಹಣವನ್ನು ವಾಣಿಜ್ಯ ಬ್ಯಾಂಕಿನವರು ಆಯಾ ವರ್ಷದಲ್ಲಿ ಸಂಪೂರ್ಣವಾಗಿ ಬಟವಾಡೆ ಮಾಡದೆ ಮಾರ್ಚ್ ಕೊನೆಯ ಭಾಗಕ್ಕೆ ತಮ್ಮ ಶಾಖೆಗಳಲ್ಲಿ ಕೋಟ್ಯಂತರ ಹಣವನ್ನು ಶಿಲ್ಕು ಉಳಿಸಿಕೊಳ್ಳುತ್ತಿರುವುದು ವಾಸ್ತವಿಕ ಅಂಶ ಸುಸ್ಪಷ್ಟವಿದೆ.

ವಿವಿಧ ಉದ್ದೇಶಗಳಿಗೆ ಸಾಲಕೊಡುವ ಗುರಿಹೊಂದಿದ ಸಹಕಾರ ಸಂಘ ಹಾಗೂ ಬ್ಯಾಂಕುಗಳು ಅವುಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಂತೆ ಸರಕಾರ ನಿಗಾ ವಹಿಸಬೇಕೇ ಹೊರತು ರಾಷ್ಟ್ರೀಕೃತ ಬ್ಯಾಂಕು, ವಾಣಿಜ್ಯ ಬ್ಯಾಂಕು, ಗ್ರಾಮೀಣ ಬ್ಯಾಂಕು, ಸ್ಟೇಟ್ ಬ್ಯಾಂಕು, ವಿವಿಧ ನಿಗಮಗಳ ಮೂಲಕ ಸಹಕಾರ ಸಂಸ್ಥೆಗಳು ನೀಡಬೇಕಾದ ವಿವಿಧ ಸೇವೆ ಹಾಗೂ ಸಾಲದ ವ್ಯವಸ್ಥೆಯನ್ನು ದೋಚಿಕೊಟ್ಟರೆ ಸಹಕಾರ ಸಂಸ್ಥೆಗಳ ಅಸ್ತಿತ್ವಕ್ಕೆ ಗಂಡಾಂತರವನ್ನು ಸರಕಾರವೇ ತಂದೊಡ್ಡಿದಂತಾಗುತ್ತದೆ. ರಾಜ್ಯದಲ್ಲಿ ಪತ್ತಿನ ಸಹಕಾರ ಸಂಘಗಳನ್ನೊಳಗೊಂಡ ಒಟ್ಟು ಸಹಕಾರ ಸಂಘಗಳ ಸಂಖ್ಯೆ ಸುಮಾರು 26 ಸಾವಿರ ದಾಟಿವೆ. ಇವುಗಳಲ್ಲಿ ಸುಮಾರು ಸಾವಿರಕ್ಕಿಂತ ಹೆಚ್ಚು ಸಂಘಗಳಿಗೆ ಶೇರು ಹಣವನ್ನೇ ಸರಕಾರ ತೊಡಗಿಸಿಲ್ಲ. ಈ ಅನಾಸ್ಥೆ ಏಕೆ? ಶೇರು ಹಣ ಪಡೆದ ಸಂಘಗಳ ಸಂಖ್ಯೆ ಸುಮಾರು 10400 ಮಾತ್ರ. ಇವುಗಳಿಗೆ ಮಂಜೂರು ಮಾಡಿರುವ ಶೇರು ಹಣ ಕೇವಲ 183.00 ಕೋಟಿ ಮಾತ್ರ. ಹೀಗಾದರೆ ಸಹಕಾರ ಸಂಸ್ಥೆಗಳು ಹೇಗೆ ಉಳಿಯಬೇಕು ಹಾಗೂ ಬೆಳೆಯಬೇಕು? ರಾಜ್ಯದ ಸಹಕಾರ ಸಂಸ್ಥೆಗಳಲ್ಲಿರುವ ಒಟ್ಟು ಉದ್ಯೋಗಿಗಳ ಸಂಖ್ಯೆ ಸುಮಾರು 94 ಸಾವಿರ, ಇವರ ಭವಿಷ್ಯ ಹಾಗೂ ಸೇವೆಯ ಬಗ್ಗೆ ಸರಕಾರ ಗಮನ ಹರಿಸವುದು ಅವಶ್ಯವೆಂಬುದನ್ನು ಮನಗಾಣುವುದು ಸರಕಾರಕ್ಕೆ ಅಗತ್ಯ.

ಸಹಕಾರ ಸಂಘಗಳ ಆರ್ಥಿಕ ಪರಿಸ್ಥಿತಿ ಹಾಗೂ ಆಡಳಿತ ಪರಿಸ್ಥಿತಿ ಸುಧಾರಿಸಿ ಅವುಗಳ ವಿವಿಧ ಉದ್ದೇಶಗಳನ್ನು ಅನುಷ್ಠಾನ ಮಾಡಲು ಸರಕಾರ ಅವಕಾಶ ಕಲ್ಪಿಸದೇ ಹಾಗೂ ಆಸಕ್ತಿ ವಹಿಸದೇ ಹೋದರೆ ಸಹಕಾರಿ ವಲಯಕ್ಕೆ ಭಾರೀ ಗಂಡಾಂತರವುಂಟಾಗಿ ಸಹಕಾರಿ ಸಂಘಗಳ ಬಹುಮುಖ ಕಾರ್ಯವನ್ನು ವಾಣಿಜ್ಯ ಬ್ಯಾಂಕುಗಳು, ಗ್ರಾಮೀಣ ಬ್ಯಾಂಕುಗಳು, ಸ್ಟೇಟ್ ಬ್ಯಾಂಕುಗಳು, ಖಾಸಗೀ ಬ್ಯಾಂಕುಗಳು, ಹಣಕಾಸು ನಿಗಮ, ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ಇತ್ಯಾದಿ ಇನ್ನು ಅನೇಕ ನಿಗಮಗಳು ಕಸಿದುಕೊಂಡಾವು ಹಾಗೂ ಸಹಕಾರಿ ವಲಯಕ್ಕೆ ಕೇಡಿನ ಕೊಡಿಗೆಯನ್ನು ಕೊಟ್ಟಾವು.

❑

ಸಾಲ ತರುವುದು - ತೀರಿಸುವುದೊಂದೇ ಸರಕಾರದ ಉದ್ದೇಶವಾಗಬಾರದು

ನಿರಂತರ ಲಾಭ ಸಾಧನೆಗಾಗಿ ಹಾಗೂ ತಾತ್ಕಾಲಿಕ ಅಭಿವೃದ್ಧಿ ಕಾರ್ಯಗಳಿಗೆ ವ್ಯಕ್ತಿಯೇ ಆಗಲಿ, ಸಂಘ - ಸಂಸ್ಥೆಗಳೇ ಆಗಲಿ, ಸರಕಾರವೇ ಆಗಲಿ, ವಿವಿಧ ಸಾಲಗಳನ್ನು ಪಡೆಯಲೇಬೇಕಾಗುತ್ತವೆ. ಪಡೆದ ಸಾಲವನ್ನು ಸದುಪಯೋಗ ಮಾಡಿಕೊಂಡು ಸಾಲದ ಪ್ರತಿಫಲ ದೊರಕಿಸಿಕೊಂಡು ತಮ್ಮ ತಮ್ಮ ನಿರಂತರ ಸೊತ್ತನ್ನು ಹೆಚ್ಚಿಸಿಕೊಂಡು, ಸಾಲವನ್ನು ಮರುಪಾವತಿ ಮಾಡಿ ಸಾಲಗಾರರಾಗಿದ್ದವರೇ ಸಾಹುಕಾರರಾಗಿ ಮತ್ತೊಬ್ಬರಿಗೆ ಸಾಲ ಕೊಡುವ ಪ್ರವೃತ್ತಿ ಅನೇಕರಿಗೆ ಇದೆ. ಈ ಪ್ರವೃತ್ತಿ ಪ್ರಪಂಚದಲ್ಲೆಡೆ - ಪರರಾಷ್ಟ್ರದಲ್ಲೆ ಕಂಡುಬರುತ್ತಿರುವ ಉದಾಹರಣೆ ಸಾಕಷ್ಟು ಇವೆ.

ಕರ್ನಾಟಕದಲ್ಲಿ ಶೇಕಡಾ 85ರಷ್ಟು ಸಾಲಗಾರರಿದ್ದಾರೆ. ಶೇಕಡಾ 15ರಷ್ಟು ಸಾಹುಕಾರರಿದ್ದಾರೆ. ಈ ಸಾಲಗಾರರು ವ್ಯಕ್ತಿಗಳಿಂದ, ಸ್ಥಳೀಯ ಖಾಸಗಿ ಹಣಕಾಸು ಸಂಸ್ಥೆಗಳಿಂದ, ಸಹಕಾರ ಸಂಸ್ಥೆಗಳಿಂದ, ವಿವಿಧ ನಿಗಮಗಳಿಂದ, ವಿವಿಧ ಬ್ಯಾಂಕುಗಳಿಂದ ಸಾಲ ಪಡೆಯುತ್ತಲೇ ಇದ್ದಾರೆ ಹಾಗೂ ಈ ಸಾಲಕ್ಕೆ ಹೇರಳವಾದ ಬಡ್ಡಿಯನ್ನು ಮಾತ್ರ ಆಗಿಂದ್ದಾಗ್ಗೆ ಕಟ್ಟುತ್ತ ಸಾಲದ ಅಸಲು ಬಾಕಿಯನ್ನು ತೀರಿಸಲಿಕ್ಕೆ ಅಸಮರ್ಥರಾಗಿದ್ದಾರೆ. ಇಷ್ಟೇ ಅಲ್ಲ, ಅನೇಕ ಸಾಲಗಾರರು ಬಡ್ಡಿ ಕೊಡಲಿಕ್ಕೆ ಸಹ ಒದ್ದಾಡುತ್ತಿದ್ದಾರೆ. ಈ ಸಾಲಗಾರರು ಪಡೆದ ಅಸಲನ್ನು ಹಾಗೂ ಬಡ್ಡಿಯನ್ನು ವಸೂಲಿ ಮಾಡಲು ಅವರ ಆಸ್ತಿ - ಆಭರಣಗಳನ್ನು ಆಗಿಂದಾಗ್ಗೆ ಸಾಹುಕಾರರು ಹರಾಜು ಹಾಕುತ್ತಲೇ ಇದ್ದಾರೆ. ಸಾಲಗಾರರು ಸಾಲದಿಂದ ಮುಕ್ತರಾಗುವ ಬದಲು ಸಾಲದ ಶೂಲಕ್ಕೆ ಸಿಕ್ಕಿಹಾಕಿಕೊಂಡು ಒದ್ದಾಡುತ್ತಲೇ ಇದ್ದಾರೆ. ಸಾಹುಕಾರರು ಅವರು ವ್ಯಕ್ತಿಗಳೇ ಇರಲಿ, ಸ್ಥಳೀಯ ಹಣಕಾಸು ಸಂಸ್ಥೆಗಳೇ ಇರಲಿ, ನಿಗಮಗಳೇ ಇರಲಿ, ಬ್ಯಾಂಕುಗಳೇ ಇರಲಿ ಅವರೆಲ್ಲರೂ ಪಠಾಣರಾಗಿ ನಿರ್ದಯಿಗಳಾಗಿ ಕಾನೂನು ಮಾರ್ಗದಿಂದಾಗಲೀ, ಮುಠ್ಠಾಳ ಮಾರ್ಗದಿಂದಾಗಲೀ ಬಲತ್ಕಾರದಿಂದಾಗಲೀ, ತೋಳ್ಬಲದಿಂದಾಗಲೀ ಸಾಲಗಾರರನ್ನು ಸುಲಿಯುತ್ತಲೇ ಇದ್ದಾರೆ. ಅನೇಕ ಸಾಹುಕಾರ ವ್ಯಕ್ತಿಗಳು ತಾವು ಗಳಿಸಿದ ಹಣ ಪ್ರಾಮಾಣಿಕ ದುಡಿಮೆಯಿಂದಾಗಲಿ

ಮಾಮ ಮಾರ್ಗದಿಂದಗಲೀ. ಭ್ರಷ್ಟ ಮಾರ್ಗದಿಂದಾಗಲಿ ಅದೆಲ್ಲವನ್ನು ಸ್ಥಳೀಯ, ರಾಜ್ಯದಲ್ಲಿಯ, ರಾಷ್ಟ್ರದಲ್ಲಿಯ, ಹಣಕಾಸು ಸಂಸ್ಥೆ, ಬ್ಯಾಂಕು, ಉದ್ಯಮಗಳಲ್ಲಿ ತೊಡಗಿಸಿ ಇನ್ನೂ ಉಳಿದ ಹಣವೆಲ್ಲವನ್ನು ಪರದೇಶಗಳಲ್ಲಿಯ ಬ್ಯಾಂಕುಗಳಲ್ಲಿ ಇಟ್ಟು ಬಂದು ಮತ್ತೆ ಆಗಾಗ್ಗೆ ಪರದೇಶಗಳಿಗೆ ಆರೋಗ್ಯ ತಪಾಸಣೆ ಇತ್ಯಾದಿ ಬೇರೆ ಬೇರೆ ನೆಪದಲ್ಲಿ ಹೋಗಿ ಇಟ್ಟು ಬರುವುದು ಹಾಗೂ ತೆಗೆದುಕೊಂಡು ಬರುವುದನ್ನು ಮಾಡುತ್ತಿದ್ದಾರೆ. ಭ್ರಷ್ಟ ನೀತಿಗಳಿಂದ ಗಳಿಸಿದ ಹಣದ ಬಗ್ಗೆ ಸರಕಾರ ಯಾವುದೇ ರೀತಿಯ ತನಿಖೆ ಮಾಡುವ ಗೊಡವೆಗೆ ಹೋಗುತ್ತಲೇ ಇಲ್ಲ. ಇದು ಈ ದೇಶದ ದುರ್ದೈವ.

ವ್ಯಕ್ತಿ ಸಾಲಗಾರರಂತೆ ಕೇಂದ್ರ ಸರಕಾರ ಹಾಗೂ ರಾಜ್ಯ ಸರಕಾರಗಳೂ ವಿವಿಧ ಮೂಲಗಳಿಂದ ವಿವಿಧ ರೀತಿಯಲ್ಲಿ ವಿವಿಧ ಸಾಲಗಳನ್ನು ಪಡೆಯುತ್ತಲೇ ಇವೆ. ಸರಕಾರಗಳ ರೆವಿನ್ಯೂ ಆದಾಯ ಆಡಳಿತ ಹಾಗೂ ಅಭಿವೃದ್ಧಿ ಸೇವೆಗಳಿಗೆ ಸಾಲದೆ ಕಡಿಮೆ ಬೀಳುತ್ತಿರುವುದರಿಂದ, ಕಡಿಮೆ ಬೀಳುವ ಹಣಕ್ಕಾಗಿ ಹಾಗೂ ನಿರಂತರ ಆದಾಯ ಕೊಡುವ ನಿರಂತರ ಸಂಪನ್ಮೂಲಗಳನ್ನು ನಿರ್ಮಿಸುವ ಸಲುವಾಗಿ ಸಾಲ ಪಡೆಯುವುದು ಹಾಗೂ ಪಡೆದ ಸಾಲವನ್ನು ಆಗಾಗ್ಗೆ ತೀರಿಸುವುದು ಅನಿವಾರ್ಯ. ನಿರಂತರ ಆದಾಯ ನೀಡುವ ನಿರಂತರ ಸಂಪನ್ಮೂಲಗಳನ್ನು ಸಾಧಿಸುವಲ್ಲಿ ಹಾಗೂ ಪಡೆಯುವಲ್ಲಿ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಯಶಸ್ವಿಯಾಗದಿರುವುದು ಸರಕಾರದ ಕ್ರಿಯಾಶೀಲ ಹಾಗೂ ಸಕ್ರಿಯ ಪ್ರಯತ್ನದ ಕೊರತೆಯೇ ಕಾರಣವೆಂದರೆ ತಪ್ಪಾಗಲಾರದು. ಕರ್ನಾಟಕ ರಾಜ್ಯ ಸರಕಾರ ನಿರಂತರ ಸಂಪನ್ಮೂಲಗಳ ಹಾಗೂ ಅವುಗಳಿಂದ ಬರುವ ಆದಾಯದ ಕೊರತೆಯಿಂದಾಗಿ ಸರಕಾರದ ವೆಚ್ಚವನ್ನು ಭರಣ ಮಾಡಲಿಕ್ಕೆ ಅನಿವಾರ್ಯವಾಗಿ ವಿವಿಧ ಮೂಲಗಳಿಂದ ವಿವಿಧ ಸಾಲವನ್ನು ಪ್ರತಿವರ್ಷ ಪಡೆಯಲೇಬೇಕಾಗುತ್ತದೆ ಹಾಗೂ ಪಡೆದ ಸಾಲವನ್ನು ಪ್ರತಿವರ್ಷ ತೀರಿಸಲೇ ಬೇಕಾಗುತ್ತದೆ. ಹೀಗೆ ಪಡೆದ ಸಾಲವು ಭಾರೀ ಮೊತ್ತದ್ದು ಆಗುತ್ತಿದ್ದು ಮರುಪಾವತಿ ಮಾಡುವ ಸಾಲವೂ ಭಾರಿ ಪ್ರಮಾಣದಲ್ಲಿ ಪ್ರತಿವರ್ಷ ಹೆಚ್ಚುತ್ತಲೇ ಇದೆ. ಪ್ರತಿವರ್ಷ ಪಡೆದ ಭಾರೀ ಸಾಲದಲ್ಲಿ ಅತಿ ಕಡಿಮೆ ಮೊತ್ತವನ್ನು ಮಾತ್ರ ಸಾಮಾನ್ಯ ಸೇವೆ, ಸಾಮಾಜಿಕ ಸೇವೆ ಹಾಗೂ ಆರ್ಥಿಕ ಸೇವೆಗಳಿಗೆ ಬಹುಮಟ್ಟಿಗೆ ವೆಚ್ಚಮಾಡಲಾಗುತ್ತಿದೆ.

ಕೇಂದ್ರ ಸರಕಾರದ ಸಾಲ, ಮಾರುಕಟ್ಟೆ ಸಾಲ, ನಿಗಮಗಳ ಸಾಲ, ರಿಜರ್ವ್ ಬ್ಯಾಂಕ್ ಕೃಷಿ ನಿಧಿ ಸಾಲ, ಎನ್.ಸಿ.ಡಿ.ಸಿ. ಸಾಲ, ವಿಮಾ ನಿಗಮ ಸಾಲ, ಸಣ್ಣ ಉಳಿತಾಯ ಸಾಲ, ವಿವಿಧ ನಿಧಿ ಸಾಲ, ವಿವಿಧ ಠೇವಣಿ ಸಾಲ, ಮುಂಗಡ ವಿವಿಧ ಬಾಂಡ್ ಸಾಲ ಇತ್ಯಾದಿ ಸಾರ್ವಜನಿಕ ಸಾಲಗಳನ್ನು ರಾಜ್ಯ ಸರಕಾರ ಪ್ರತಿವರ್ಷ ಪಡೆಯುತ್ತ ಮತ್ತೆ ಪ್ರತಿವರ್ಷ ಹೊಸ ಸಾಲ ಮಾಡುತ್ತ ಹಳೇ ಸಾಲ ಕೊಡುತ್ತ ಹಾಗೂ ಕೊಡತಕ್ಕ ಸಾಲದ ಬಾಕಿಯನ್ನು ಪ್ರತಿವರ್ಷ ಹೆಚ್ಚಿಸಿಕೊಳ್ಳುತ್ತ ಹೊರಟಿದೆ. ಪಡೆದ ಸಾಲದಲ್ಲಿ ವಿವಿಧ ಸೇವೆಗಳಿಗೆ ಬಂಡವಾಳ ವೆಚ್ಚಕ್ಕಾಗಿ ಕಡಿಮೆ ವೆಚ್ಚ ಮಾಡುತ್ತ ನಿರಂತರ

ಆದಾಯ ನೀಡುವ ಸಂಪನ್ಮೂಲ ಉತ್ಪಾದನಾ ಯೋಜನೆಗಳನ್ನು ಸೃಷ್ಟಿಸಿಕೊಳ್ಳದಿರುವುದು ದುರ್ದೈವ. ರಾಜ್ಯ ಸರಕಾರವು 93-94ರಲ್ಲಿ ಪಡೆದ ವಿವಿಧ ಸಾಲದ ಒಟ್ಟು ಮೊತ್ತ 20045.77 ಕೋಟಿ. ಪರತ ಕೊಟ್ಟ ಸಾಲ 18990.16 ಕೋಟಿ, ಉಳಿಸಿಕೊಂಡ ಸಾಲ 1055.61 ಕೋಟಿ. ಈ ವರ್ಷ ಸಾಮಾನ್ಯ, ಸಾಮಾಜಿಕ, ಆರ್ಥಿಕ ಸೇವೆಗಳಿಗೆ ಮಾಡಿದ ಬಂಡವಾಳ ವೆಚ್ಚ 1187.87 ಕೋಟಿ, 94-95ರಲ್ಲಿ ಪಡೆದ ವಿವಿಧ ಸಾಲದ ಒಟ್ಟು ಮೊತ್ತ 22215.32 ಕೋಟಿ. ಪರತ ಕೊಟ್ಟ ಸಾಲ 20742.25 ಕೋಟಿ, ಉಳಿಸಿಕೊಂಡ ಸಾಲ 1473.08 ಕೋಟಿ. ಈ ವರ್ಷ ಸಾಮಾನ್ಯ, ಸಾಮಾಜಿಕ, ಆರ್ಥಿಕ ಸೇವೆಗಳ ಬಂಡವಾಳ ವೆಚ್ಚ 1136.62 ಕೋಟಿ. 95-96ರಲ್ಲಿ ಪಡೆದ ವಿವಿಧ ಸಾಲದ ಒಟ್ಟು ಮೊತ್ತ 23228.72 ಕೋಟಿ. ಪರತಸಾಲ, ಕೊಟ್ಟ ಸಾಲ 22035-60 ಕೋಟಿ. ಉಳಿಸಿಕೊಂಡ ಸಾಲ 1193.12 ಕೋಟಿ. ಈ ವರ್ಷ ಸಾಮಾನ್ಯ ಸಾಮಾಜಿಕ, ಆರ್ಥಿಕ ಸೇವೆಗಳ ಬಂಡವಾಳ ವೆಚ್ಚ 1240.46 ಕೋಟಿ. ರಾಜ್ಯ ಸರಕಾರ ಕೊಡಬೇಕಾದ ಬಾಕಿ ಸಾಲ ಪ್ರತಿವರ್ಷ ಏರುತ್ತಲೇ ಇದೆ. 31-3-95ಕ್ಕೆ 10635.68 ಕೋಟಿ, 31-3-96ಕ್ಕೆ 12054.99 ಕೋಟಿಗೆ ಏರಿದ್ದು ಅದು 31-3-97ಕ್ಕೆ 13358.49 ಕೋಟಿ, 31-3-98ಕ್ಕೆ 14871.00 ಕೋಟಿಗೆ ಏರಲಿದೆ. ಹೀಗೆ ಸರಕಾರವೇ ದೊಡ್ಡ ಸಾಲಗಾರನಾಗಿ ಪ್ರತಿವರ್ಷ ಸಹಸ್ರಾರು ಕೋಟಿ ಬಡ್ಡಿಯನ್ನೇ ಕೊಡುತ್ತ ಸಾಲದ ಮುಖಾಂತರ ಪಡೆದ ಹಣದಲ್ಲಿ ಅತಿಸ್ವಲ್ಪ ಮೊತ್ತವನ್ನು ಮಾತ್ರ ಸೇವೆಗಳಿಗೆ ವೆಚ್ಚ ಮಾಡುತ್ತ ಹೋದರೆ ರಾಜ್ಯ ಸರಕಾರದ ಹಾಗೂ ಜನತೆಯ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿ ಆರ್ಥಿಕ ಭದ್ರತೆಯನ್ನು ಪಡೆಯುವುದಾದರೂ ಹೇಗೆ? ಈ ದಿಶೆಯಲ್ಲಿ ಹಾಗೂ ಹಿನ್ನೆಲೆಯಲ್ಲಿ ಅಪಾರ ಅನುಭವವುಳ್ಳ ಹಾಗೂ ಅಪಾರ ಆರ್ಥಿಕ ಅರಿವುಳ್ಳ ಅನೇಕ ಶಾಸಕರು, ಮಂತ್ರಿಗಳೆಲ್ಲಾ ಆಲೋಚಿಸಿ ರಾಜ್ಯದ ಕುಂಠಿತಗೊಳ್ಳುತ್ತಿರುವ ಪ್ರಗತಿ ಬಗ್ಗೆ, ಹೆಚ್ಚುತ್ತಿರುವ ಸಾಲಬಡ್ಡಿಯ ಬಗ್ಗೆ, ನಿರಂತರ ಆದಾಯ ನೀಡುವ, ನಿರಂತರ ಸಂಪನ್ಮೂಲಗಳನ್ನು ನಿರ್ಮಾಣ ಮಾಡುವ ಬಗ್ಗೆ, ಆದಾಯ ಹಾಗೂ ಸಾಲದ ಬಳಕೆ, ಸದ್ಬಳಕೆ, ನಿರ್ಬಳಕೆ ಹಾಗೂ ದುರ್ಬಳಕೆ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವುದು ಹಾಗೂ ರಾಜ್ಯದ ಜನತೆಯ ಮತ್ತು ಸರಕಾರದ ಆರ್ಥಿಕ ಭದ್ರತೆಯನ್ನು ಕಾಪಾಡುವುದು ಒಳ್ಳೆಯದು. ❑

ಸಾಮಾಜಿಕ ಸೇವೆ ಮತ್ತು ಸರಕಾರ

ಸಾಮಾನ್ಯ ಶಿಕ್ಷಣ, ತಾಂತ್ರಿಕ ಶಿಕ್ಷಣ, ಕಲೆ ಮತ್ತು ಸಂಸ್ಕೃತಿ, ವೈದ್ಯಕೀಯ ಜನಾರೋಗ್ಯ, ಕುಟುಂಬ ಕಲ್ಯಾಣ, ನೀರು ಪೂರೈಕೆ, ನೈರ್ಮಲ್ಯ, ಗೃಹನಿರ್ಮಾಣ, ನಗರಾಭಿವೃದ್ಧಿ, ಹರಿಜನ-ಗಿರಿಜನ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ, ಸಾಮಾಜಿಕ ಭದ್ರತೆ, ಮಕ್ಕಳ ಮತ್ತು ಮಹಿಳಾ ಕಲ್ಯಾಣ, ಕಾರ್ಮಿಕ ಉದ್ಯೋಗ, ಪೌಷ್ಠಿಕ ಆಹಾರ, ಇತರ ಸಾಮಾಜಿಕ ಸೇವೆ, ಸಚಿವಾಲಯ ಸೇವೆ, ವಾರ್ತಾ ಪ್ರಚಾರ, ನಿಸರ್ಗ ವಿಕೋಪಗಳ ಪರಿಹಾರ, ಕ್ರೀಡಾ - ಯುವಜನ, ಈ ಹದಿನೇಳು ಸಾಮಾಜಿಕ ಸಾಮೂಹಿಕ ಸುಧಾರಣೆಯ ಹಾಗೂ ಪ್ರಗತಿದಾಯಕವಾದ ಸೇವೆಗಳಾಗಿರುತ್ತವೆ. ಈ ಯೋಜನೆಗಳಿಗೆ 96-97ರ ಆಯವ್ಯಯದಲ್ಲಿ 4047.84 ಕೋಟಿ ಅಂದಾಜು ವೆಚ್ಚ ತೋರಿಸಿ, ಈ ಸೇವೆಗಳ ವ್ಯಾಪ್ತಿಯಲ್ಲಿ ಬರುವ ಶಿಕ್ಷಕರು, ವಿದ್ಯಾರ್ಥಿಗಳು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರು, ಹಿಂದುಳಿದ ವರ್ಗದವರು, ಮಕ್ಕಳು, ಮಹಿಳೆಯರು, ವೈದ್ಯರು, ರೋಗಿಗಳು, ಕ್ರೀಡಾಪಟುಗಳು, ಕಲಾವಂತರು, ನೀರು ಕುಡಿಯುವವರು, ನಿವೇಶನ ರಹಿತರು, ಕಾರ್ಮಿಕರು, ಅಶಕ್ತ ಮಕ್ಕಳು, ಇತ್ಯಾದಿ ಸಮೂಹಕ್ಕೆ ಹುರುಪು-ಹುಮ್ಮಸ್ಸು, ಆಶೆ, ಕುತೂಹಲವನ್ನು ಸರಕಾರ ಹುಟ್ಟಿಸಿದ್ದು "ಸಾರ್ವಜನಿಕ ಸ್ಮರಣೆ ಕ್ಷಣಿಕ"ವೆಂಬುದನ್ನು ಸರಕಾರ ಗಮನದಲ್ಲಿಟ್ಟುಕೊಂಡು ಸಂಬಂಧಿಸಿದ ಸಾರ್ವಜನಿಕರು ಇದನ್ನು ಮರೆತಿರಬಹುದೆಂದು 4047.84 ಕೋಟಿ ಮೊತ್ತವನ್ನು 97-98ರ ಬಜೆಟ್‌ದಲ್ಲಿ 3857.09 ಕೋಟಿಗೆ ಇಳಿಸಿದ್ದಾರೆ. ಮತ್ತೆ ಜನತೆಯ ಆಶೆಯನ್ನು ಚಿಗುರಿಸಲು ಈ ಯೋಜನೆಗಳಿಗೆ 97-98ರಲ್ಲಿ 4624.34 ಕೋಟಿ ಅಂದಾಜು ತೋರಿಸಿದ್ದು ಮುಂದಿನ ವರ್ಷ ಇದರಲ್ಲೆಷ್ಟು ಇಳಿಸಿ ಅದರಲ್ಲಿ ಸಹ ಎಷ್ಟು ಕಡಿಮೆ ವೆಚ್ಚ ಮಾಡುತ್ತಾರೋ ಕಾದು ನೋಡಬೇಕಾಗುತ್ತದೆ.

ಸರಕಾರಗಳ ಹಿಂದಿನ ವಾರ್ಷಿಕ ವಿತ್ತ ನಿರೂಪಣೆಗಳನ್ನು ಅಧ್ಯಯನ ಮಾಡಿ ನೋಡಿದರೆ ಪ್ರತಿವರ್ಷ ವಿಧಾನ ಸಭೆಯ ಬಜೆಟ್ ಅಧಿವೇಶನದಲ್ಲಿ ಅತಿ ಹೆಚ್ಚಿನ ದೊಡ್ಡ ಮೊತ್ತದ ವೆಚ್ಚದ ಅಂದಾಜನ್ನು ತೋರಿಸುವುದು, ಒಂದು ವರ್ಷ ಮುಗಿದು ಮತ್ತೆ ಬಜೆಟ್ ಮಂಡಿಸುವಾಗ ಹಿಂದೆ ತೋರಿಸಿದ ಅಂದಾಜಿನ ದೊಡ್ಡ ಮೊತ್ತವನ್ನು ಕಡಿಮೆಗೊಳಿಸುವುದು. ಕಡಿಮೆಗೊಳಿಸಿದ ಅಂದಾಜು ಮೊತ್ತವನ್ನು ಮತ್ತೆ ಮುಂದಿನ

ಅಧಿವೇಶನದಲ್ಲಿ ಕಡಿಮೆಗೊಳಿಸಿ ವಾಸ್ತವಿಕ ವೆಚ್ಚ ಮಾಡಿರುವುದನ್ನು ತೋರಿಸಿ, ಎಲ್ಲಾ ರೀತಿಯಿಂದ ಉದ್ದೇಶಿಸಿದ ಪ್ರಗತಿಯನ್ನು ಕುಂಠಿತಗೊಳಿಸುತ್ತಿರುವುದು ನಡೆದು ಬಂದಿರುವ ಒಂದು ಮಾರಕವಾದ ಸಂಪ್ರದಾಯ. ಅಭಿವೃದ್ಧಿಯೇತರ ಹಾಗೂ ಆಡಳಿತಾತ್ಮಕವಾದ ಅನಾವಶ್ಯಕ ಕೆಲವು ಸೇವೆಗಳಿಗೆ ಬಜೆಟ್‌ದಲ್ಲಿ ಹೆಚ್ಚಿನ ಹಣ ತೋರಿಸಿ, ಪರಿಷ್ಕೃತ ಬಜೆಟ್‌ನಲ್ಲಿ ಇನ್ನೂ ಹೆಚ್ಚಿನ ಹಣ ತೋರಿಸಿ, ವಾಸ್ತವಿಕವಾಗಿ ಇನ್ನೂ ಹೆಚ್ಚಿನ ಹಣ ಖರ್ಚು ಮಾಡಿರುವ ಹಾಗೂ ಮಾಡುತ್ತಿರುವ ಅನೇಕ ದೃಷ್ಟಾಂತಗಳು ಸರಕಾರಿ ದಾಖಲೆಗಳಲ್ಲಿ ದೊರೆಯುತ್ತಿರುವಾಗ ಪ್ರಜೆಗಳ ಪ್ರಗತಿಗೆ ಪ್ರಮುಖವಾದ ಸೇವೆಗಳಿಗೇಕೆ ಅಧಿಕಾರಿಗಳ ಲಗಾಮು? ಶಾಸಕರಿಗೆ, ಸಂಬಂಧಿಸಿದ ಮಂತ್ರಿಗಳಿಗೆ, ವಿತ್ತ ಮಂತ್ರಿಗಳಿಗೆ ಹಾಗೂ ಮುಖ್ಯಮಂತ್ರಿಗಳಿಗೆ ಇದನ್ನೆಲ್ಲಾ ನೋಡಲಿಕ್ಕೆ ಅಥವಾ ಅಧ್ಯಯನ ಮಾಡಲಿಕ್ಕೆ ಹಾಗೂ ತಿಳಿದುಕೊಳ್ಳಲಿಕ್ಕೆ ಸಾಧ್ಯವೇ ಇಲ್ಲವೆಂಬ ಕಾರಣದಿಂದ ಅಧಿಕಾರಿಗಳು ಹೀಗೆ ಮಾಡುವರೋ ಹೇಗೆ?

ಮೇಲ್ಕಂಡ ಎಲ್ಲಾ ಹದಿನೇಳು ಸಾಮಾಜಿಕ ಸೇವೆಗಳಿಗೆ ರೆವಿನ್ಯೂ ವೆಚ್ಚದಲ್ಲಿ, 93-94ರಲ್ಲಿ ಬಜೆಟ್ ಪ್ರಕಾರ 2577.17 ಕೋಟಿ, ಪರಿಷ್ಕೃತ ಬಜೆಟ್ ಪ್ರಕಾರ 2545.92 ಕೋಟಿ, ವಾಸ್ತವಿಕ ಬಜೆಟ್ ಪ್ರಕಾರ 2378.51 ಕೋಟಿ ಮೊತ್ತವಾಗಿದ್ದು, ಈ 93-94ರಲ್ಲಿ ವೆಚ್ಚ ಮಾಡದೇ ಇರುವ ಮೊತ್ತ 198.67 ಕೋಟಿ. 94-95ರಲ್ಲಿ ಬಜೆಟ್ ಪ್ರಕಾರ 3053.86 ಕೋಟಿ, ಪರಿಷ್ಕೃತ ಬಜೆಟ್ ಪ್ರಕಾರ 2857.68 ಕೋಟಿ, ವಾಸ್ತವಿಕ ಬಜೆಟ್ ಪ್ರಕಾರ 2753.75 ಕೋಟಿ ಮೊತ್ತವಾಗಿದ್ದು, ಈ 94-95ರಲ್ಲಿ ವೆಚ್ಚ ಮಾಡದೆ ಬಿಟ್ಟಿರುವ ಮೊತ್ತ 300-12 ಕೋಟಿ. 95-96ರಲ್ಲಿ ಬಜೆಟ್ ಪ್ರಕಾರ 3432.54 ಕೋಟಿ, ಪರಿಷ್ಕೃತ ಬಜೆಟ್ ಪ್ರಕಾರ 3361.61 ಕೋಟಿ, ವಾಸ್ತವಿಕ ಬಜೆಟ್ ಪ್ರಕಾರ 3250.30 ಕೋಟಿ ಮೊತ್ತವಾಗಿದ್ದು, ಈ 95-96ರಲ್ಲಿ ವೆಚ್ಚ ಮಾಡದೆ ಬಿಟ್ಟಿರುವ ಮೊತ್ತ 182.25 ಕೋಟಿ.

ಸರಕಾರ ಪ್ರತಿವರ್ಷ ವಿವಿಧ ಸಾಲ, ನಿಧಿ, ಠೇವಣಿ ಪಡೆದು ವಿವಿಧ ಇಲಾಖೆ ಹಾಗೂ ಸೇವೆಗಳಿಗೆ ಬಂಡವಾಳ ವೆಚ್ಚವನ್ನು ವಹಿಸುತ್ತಿದೆ. ಈ ದಿಶೆಯಲ್ಲಿ ಮೇಲ್ಕಾಣಿಸಿದ ಅನೇಕ ಸಾಮಾಜಿಕ ಸೇವೆಗಳಿಗೆ ಸಹ ಮೇಲ್ಕಂಡ ರೆವಿನ್ಯೂ ವೆಚ್ಚದೊಂದಿಗೆ ಬಂಡವಾಳ ವೆಚ್ಚವನ್ನು ಮಾಡುತ್ತಿದೆ. ಮೇಲ್ಕಂಡ ಸಾಮಾಜಿಕ ಸೇವೆಗಳಿಗೆ ಬಂಡವಾಳ ವೆಚ್ಚದಲ್ಲಿ 93-94ನೇ ಸಾಲಿನಲ್ಲಿ ಬಜೆಟ್ ಅಂದಾಜು ಮೊತ್ತ 90.94 ಕೋಟಿ, ಪರಿಷ್ಕೃತ ಅಂದಾಜು ಮೊತ್ತ 72.26 ಕೋಟಿ, ವಾಸ್ತವಿಕ ವೆಚ್ಚದ ಮೊತ್ತ 52.06 ಕೋಟಿ ವೆಚ್ಚವಾಗಿದ್ದು, ಈ ವರ್ಷದಲ್ಲಿ ವೆಚ್ಚ ಮಾಡದೆ ಬಿಟ್ಟ ಮೊತ್ತ 37.98 ಕೋಟಿ. 94-95ನೇ ಸಾಲಿನಲ್ಲಿ ಬಜೆಟ್ ಅಂದಾಜು ಮೊತ್ತ 113.90 ಕೋಟಿ, ಪರಿಷ್ಕೃತ ಮೊತ್ತ 87.91 ಕೋಟಿ, ವಾಸ್ತವಿಕ ವೆಚ್ಚದ ಮೊತ್ತ 68.62 ಕೋಟಿಯಾಗಿದ್ದು, ಈ ವರ್ಷದಲ್ಲಿ ವೆಚ್ಚ ಮಾಡದೆ ಬಿಟ್ಟ ಮೊತ್ತ 45.29 ಕೋಟಿ, 95-96ರಲ್ಲಿ ಬಜೆಟ್ ಅಂದಾಜು ಮೊತ್ತ 111.70 ಕೋಟಿ, ಪರಿಷ್ಕೃತ ಅಂದಾಜು ಮೊತ್ತ 81.57 ಕೋಟಿ, ವಾಸ್ತವಿಕ ವೆಚ್ಚದ ಮೊತ್ತ 82.33

ಕೋಟಿಯಾಗಿದ್ದು ಈ ವರ್ಷದಲ್ಲಿ ವೆಚ್ಚ ಮಾಡದೆ ಉಳಿಸಿರುವ ಮೊತ್ತ 29.37 ಕೋಟಿ, 96-97ರಲ್ಲಿ ಬಜೆಟ್ ಅಂದಾಜು ಮೊತ್ತ 100.59 ಕೋಟಿ, ಪರಿಷ್ಕೃತ ಅಂದಾಜು ಮೊತ್ತ 62.82 ಕೋಟಿ. ವಾಸ್ತವಿಕ ವೆಚ್ಚವನ್ನು ಮುಂದಿನ ವರ್ಷದವರೆಗೆ ಕಾದು ನೋಡಬೇಕು. 97-98ರಲ್ಲಿ ಕೇವಲ 101.06 ಕೋಟಿ ಬಜೆಟ್ ಅಂದಾಜು ಮೊತ್ತವಾಗಿದ್ದು, ಇದರ ಪರಿಣಾಮ ಹಿಂದಿನಂತಾಗುವಲ್ಲಿ ಸಂಶಯವೆ ಇಲ್ಲ.

ಈ ರಾಜ್ಯದ ಹಣಕಾಸಿನ ಹತೋಟಿ ಪ್ರಜಾಪ್ರತಿನಿಧಿಗಳಾದ ಗೌರವಾನ್ವಿತ ಶಾಸಕರು, ಮಂತ್ರಿಗಳು, ವಿತ್ತ ಮಂತ್ರಿಗಳು ಹಾಗೂ ಮುಖ್ಯಮಂತ್ರಿಗಳ ಕೈಯಲ್ಲಿದೆಯೇ? ಅಥವಾ ಅಧಿಕಾರಶಾಹಿಗಳ ಕೈಯಲ್ಲಿದೆಯೇ? ಇದನ್ನು ಯಾರು ಹೇಳಬೇಕು?

ವಿಧಾನ ಸಭೆಯಲ್ಲಿ ಅಧ್ಯಕ್ಷ ಪೀಠ, ಮುಖ್ಯಮಂತ್ರಿ, ಮಂತ್ರಿಗಳ ಪೀಠ, ವಿರೋಧ ಪಕ್ಷದ ಹಾಗೂ ಗುಂಪುಗಳ ನಾಯಕರ ಪೀಠ ಹಾಗೂ ಸದಸ್ಯರ ಪೀಠ, ರಾಜ್ಯದಲ್ಲಿಯೇ ಅತ್ಯುನ್ನತ, ಶ್ರೇಷ್ಠ ಹಾಗೂ ಘನತೆವೇತ್ತ ಗೌರವಾನ್ವಿತ ಜವಾಬ್ದಾರಿ ಪವಿತ್ರ ಪವಾಡ ಪೀಠಗಳು. ಈ ಪೀಠಗಳನ್ನು ಅಲಂಕರಿಸಲು ಪ್ರಜೆಗಳು ಶಾಸಕರನ್ನು ಆರಿಸಿ ಕಳುಹಿಸುತ್ತಾರೆ. ಜನತೆಯು ಕೊಟ್ಟ ಸಹಸ್ರಾರು ಕೋಟಿ ಕರ ಕಂದಾಯದ ಹಾಗೂ ಇತರೆ ಮೂಲಗಳಿಂದ ಪಡೆದ ಪಾಲು, ಸಾಲ, ಸಹಾಯ ನಿಧಿ, ಠೇವಣಿ ಇತ್ಯಾದಿ ಸಹಸ್ರಾರು ಕೋಟಿ ಜಮೇಯಾದ ಖಜಾನೆಯ ಉಸ್ತುವಾರಿ ನೋಡಿಕೊಂಡು ಈ ಹಣದ ಬಟವಾಡೆ ಸಹ ದುರುಪಯೋಗವಾಗದಂತೆ ಆಯವ್ಯಯದ ಚೌಕಟ್ಟಿನಲ್ಲಿ ಯಾವ್ಯಾವ ಉದ್ದೇಶಗಳಿಗಾಗಿ ವೆಚ್ಚವಾಗಬೇಕೋ ಆ ಸೇವೆಗಳಿಗೆ ವಾಸ್ತವಿಕವಾಗಿ ವೆಚ್ಚವಾಗಿ ಜನತೆಯ ಆಶೋತ್ತರಗಳನ್ನು ಪರಿಣಾಮಕಾರಿಯಾಗಿ ಪವಾಡ ಸದೃಶರೂಪದಲ್ಲಿ ಈಡೇರಿಸಿ ರಾಜ್ಯದ ಹಿತ, ಪ್ರಗತಿ ಅಲ್ಲದೆ ಕಾನೂನು, ಶಾಂತಿ - ಶಿಸ್ತು ಪರಿಪಾಲನೆ ಆಗಲೇಬೇಕು ಹಾಗೂ ಪ್ರಜಾತಂತ್ರ ವ್ಯವಸ್ಥೆ ಸುವ್ಯವಸ್ಥಿತಗೊಳ್ಳಲೇಬೇಕು. ಈ ಪೀಠಗಳಿಗೆ ಅಪಚಾರವಾಗದಂತೆ ಉಚ್ಚ ಪರಂಪರೆಯನ್ನು ಪರಿಪಾಲಿಸಿಕೊಂಡು ಚುನಾಯಿಸಿದ ಪ್ರಜೆಗಳಿಗೆ ಅನ್ಯಾಯವಾಗದಂತೆ ಅದರ ಅವಶ್ಯಕ ಆಶೋತ್ತರಗಳು ಅನುಷ್ಠಾನಗೊಂಡು ಸರ್ವಾಂಗೀಣ ಪ್ರಗತಿ ಹೊಂದಲು ಪ್ರತಿವರ್ಷದ ಆಯವ್ಯಯ ಅಸ್ತವ್ಯಸ್ತವಾಗದಂತೆ ಅನುಷ್ಠಾನವಾಗುವಲ್ಲಿ ಜಾಗ್ರತೆ ವಹಿಸುವುದು ಶಾಸಕರಿಗೆ ಅತ್ಯಗತ್ಯ. ಶಾಸಕಾಂಗ ಒಪ್ಪಿಗೆ ಕೊಟ್ಟ ಆಯವ್ಯಯವನ್ನು ಚಾಚೂ ತಪ್ಪದೆ ಅನುಷ್ಠಾನಗೊಳಿಸುವುದು ಕಾರ್ಯಾಂಗದ ಕರ್ತವ್ಯ. ಈ ಕರ್ತವ್ಯಕ್ಕೆ ಸರಕಾರ ಚ್ಯುತಿ ತಂದಾಗ ಶಾಸಕಾಂಗ ಕಾರ್ಯಾಂಗದ ಕಿವಿ ಹಿಂಡುವ ಕಾರ್ಯವನ್ನು ತಪ್ಪದೆ ಮಾಡಲೇಬೇಕು. ದಾರಿ ತಪ್ಪಿದ ಕಾರ್ಯಾಂಗವನ್ನು ಹಾದಿಗೆ ತಂದು ಹದ್ದುಬಸ್ತಿನಲ್ಲಿಡಬೇಕು. ಅಂದರೆ ಮಾತ್ರ ಪ್ರಜಾಪ್ರಭುತ್ವದ ಸಂಕೇತ ಶಾಸಕಾಂಗ.

❑

ಸರಕಾರಕ್ಕೆ ಸಮಭಾವನೆ - ನಿಷ್ಪಕ್ಷಪಾತ ಪ್ರಾಮಾಣಿಕತೆ

ಸರಕಾರ ಯಾವುದೇ ಇರಲಿ, ಯಾರದೇ ಇರಲಿ ಅದು ಪಕ್ಷ ಭೇದ ಮರೆತು ಇಡೀ ರಾಜ್ಯವನ್ನು ಒಂದೇ ಭಾವದಿಂದ ನೋಡಿ ರಾಗ, ದ್ವೇಷ, ಅಸೂಯೆ, ಸ್ವಾರ್ಥ, ಪಕ್ಷಪಾತ, ಸ್ವಜನ ಪಕ್ಷಪಾತ, ಭ್ರಷ್ಟಾಚಾರ, ದುರಾಡಳಿತ, ಅಧಿಕಾರ ದುರುಪಯೋಗದಂತ ಅನಿಷ್ಟಗಳನ್ನು ಮರೆತು ರಾಜ್ಯದ ಸರ್ವಾಂಗೀಣ ಪ್ರಗತಿ ಪಡೆಯಬೇಕು. ಇದು ರಾಜನೀತಿ ಹಾಗೂ ಪ್ರಜಾನೀತಿ. ಇದಕ್ಕೆ ತಪ್ಪಿ ವ್ಯತಿರಿಕ್ತವಾಗಿ ನಡೆದುಕೊಂಡರೆ ಸರ್ಕಾರಗಳ ಆಡಳಿತ ವೈಖರಿ ಪ್ರಜಾ ಸ್ವಾತಂತ್ರ್ಯಕ್ಕೆ ಹಾಗೂ ಪ್ರಜಾಸತ್ತೆಗೆ ಗಂಡಾಂತರದ ದುಷ್ಪರಿಣಾಮ ನಿಶ್ಚಿತ. ಈ ದಿಶೆಯಲ್ಲಿ ಸರಕಾರಗಳು ಹೊಣೆಯರಿತು ನಡೆಯುವುದು ಅವಶ್ಯ.

ನೀರಾವರಿ ಸೌಲಭ್ಯಗಳ ವೈಫಲ್ಯ

ರಾಜ್ಯದ ಭೂಗೋಲಿಕ ಕ್ಷೇತ್ರ 190498 ಚವರಸ್ ಕಿಲೋಮೀಟರ್ ಇದೆ. ಇದರಲ್ಲಿ ಉತ್ತರ ಕರ್ನಾಟಕದ ಕೃಷ್ಣಾ ಕೊಳ್ಳ ಹಾಗೂ ಗೋದಾವರಿ ಕೊಳ್ಳಗಳ ಕ್ಷೇತ್ರ ಶೇಕಡಾ 51.2ಕ್ಕೆ ಹೆಚ್ಚು ಇದ್ದು, ದಕ್ಷಿಣ ಕರ್ನಾಟಕದ ಕಾವೇರಿ ಕೊಳ್ಳದ ಕ್ಷೇತ್ರ ಶೇಕಡಾ 18.8 ಮಾತ್ರ ಇರುತ್ತದೆ. ಉತ್ತರ ಕರ್ನಾಟಕದ ಉಪಯುಕ್ತವಾದ ಕೃಷ್ಣಾ-29, ಗೋದಾವರಿ-3, ಮಹಾದಾಯಿ-1 ಹೀಗೆ 33 ಭಾರೀ ಮತ್ತು ಮಧ್ಯಮ ಯೋಜನೆಗಳಿಗೆ ಅಂದಾಜು ವೆಚ್ಚ 10236.74 ಕೋಟಿ ಇದ್ದು, ಇದರಲ್ಲಿ ಕೇವಲ 3117.61 ಕೋಟಿ ಮೊತ್ತವನ್ನು ಮಾತ್ರ 31-3-96ಕ್ಕೆ ವೆಚ್ಚ ಮಾಡಿದ್ದು ಇರುತ್ತದೆ. ಈ ಎಲ್ಲ 33 ಯೋಜನೆಗಳಿಂದ 1898564 ಹೆಕ್ಟರ್ ಪ್ರದೇಶ ನೀರಾವರಿಯಾಗಬೇಕಾಗಿದ್ದು, ಇದರಲ್ಲಿ 11 ಯೋಜನೆಗಳಿಂದ ಕೇವಲ 848598 ಹೆಕ್ಟರ್ ಮಾತ್ರ 31-3-96ಕ್ಕೆ ನೀರಾವರಿಯಾಗಿದೆ. 33 ಯೋಜನೆಗಳ ಪೈಕಿ 22 ಯೋಜನೆಗಳಿಗೆ ಯಾವುದೇ ಪ್ರಮಾಣದ ನೀರನ್ನು ಬಳಸಿಲ್ಲ ಹಾಗೂ ಯಾವುದೇ ಎಷ್ಟೇ ಕ್ಷೇತ್ರವನ್ನು ಸಹ ನೀರಾವರಿಗೆ ಒಳಪಡಿಸಿಲ್ಲ. ಹೀಗೆ ಪ್ರಗತಿ ಕುಂಟುತ್ತ ನಡೆದರೆ 2000 ಇಸ್ವಿಯೊಳಗಾಗಿ ಬಚಾವತ್ ಆಯೋಗದ ಕೊಡಿಗೆಯ ನೀರನ್ನು

ಬಳಸಿ ಈ ನೀರಾವರಿ ಯೋಜನೆಗಳನ್ನು ಯಶಸ್ವಿ ಮಾಡಲು ಸಾಧ್ಯವೇ ಎಂಬುದು ಕನಸಾಗುತ್ತಿದೆ. 1960-61ರಲ್ಲಿ ಪ್ರಾರಂಭವಾದ ಮಲಪ್ರಭಾ ನೀರಾವರಿ ಯೋಜನೆಗೆ 31-12-96ರವರೆಗೆ 400.34 ಕೋಟಿ ವೆಚ್ಚ ಮಾಡಿ 163742 ಹೆಕ್ಟರ್ ಕ್ಷೇತ್ರವನ್ನು ಬೈಲಹೊಂಗಲ, ರಾಮದುರ್ಗ, ಸವದತ್ತಿ, ನರಗುಂದ, ನವಲಗುಂದ, ರೋಣ, ಗದಗ ತಾಲ್ಲೂಕುಗಳಲ್ಲಿ ನೀರಾವರಿಗೆ ಒಳಪಡಿಸಿದ್ದು, ಇನ್ನು ಬಾದಾಮಿ, ನವಲಗುಂದ, ರೋಣ, ಗದಗ ತಾಲ್ಲೂಕುಗಳಲ್ಲಿ 54449 ಹೆಕ್ಟರ್ ಕ್ಷೇತ್ರವನ್ನು ನೀರಾವರಿಗೆ ಒಳಪಡಿಸಬೇಕಾಗಿದೆ. ಇಷ್ಟೊಂದು ಮಂದಗತಿ ಹಾಗೂ ಅಧೋಗತಿಯಲ್ಲಿ ಪ್ರಗತಿ ಕುಂಟುತ್ತ ನಡೆದರೆ 2000 ಇಸ್ವಿಯೊಳಗಾಗಿ ಬಚಾವತ್ ನೀರನ್ನು ಬಳಸುವುದಾದರೂ ಹೇಗೆ? ಈ ಎಲ್ಲಾ ಯೋಜನೆಗಳನ್ನು ಯಶಸ್ವಿ ಮಾಡುವುದಾದರೂ ಹೇಗೆ? ಈ ವೈಫಲ್ಯಕ್ಕೆ, ನಿರ್ಲಕ್ಷ್ಯಕ್ಕೆ, ನಿರಾಸಕ್ತಿಗೆ ದಕ್ಷಿಣ ಕರ್ನಾಟಕದವರ ಪ್ರಾಬಲ್ಯದಲ್ಲಿರುವ ಸರಕಾರದ ಪಕ್ಷಪಾತ ಹಾಗೂ ಮಲತಾಯಿ ಧೋರಣೆಯೇ ಕಾರಣವೆಂಬುದು ಸುಸ್ಪಷ್ಟವಾಗುತ್ತದೆ. ಬಚಾವತ್ ಆಯೋಗದಲ್ಲಿ ನೀರನ್ನು ನಿಗದಿ ಮಾಡಿ ತೀರಿಸಿದ ಮಲಪ್ರಭಾ ಮೇಲ್ದಂಡೆ, ಭದ್ರಾ ಮೇಲ್ದಂಡೆ, ದಂಡಾವತಿ, ಮದಗ, ಮಾಸೂರ ಮೊದಲಾದ ಕೆಲವು ಯೋಜನೆಗಳನ್ನು ಅಧಿಕೃತ ಯಾದಿಗಳಿಂದ ತೆಗೆದು ಹಾಕಿರುವುದು ಈ ಯೋಜನೆಗಳ ಪ್ರಯೋಜನದಾರರಾದ ಉತ್ತರ ಕರ್ನಾಟಕದ ಜನತೆಯ ದುರ್ದೈವ.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಪ್ರತಿಭಾವಂತರಿಗೆ ಪಂಗನಾಮ

ರಾಜ್ಯದಲ್ಲಿಯ ಪರಿಶಿಷ್ಟ ಜಾತಿಯ ಮತ್ತು ಪರಿಶಿಷ್ಟ ಪಂಗಡದ ಪ್ರತಿಭಾವಂತ ವಿದ್ಯಾವಂತರಿಗೆ ಒಂದು ಮತ್ತು ಎರಡನೇ ದರ್ಜೆ ಸರಕಾರಿ ಹುದ್ದೆಗೆ ನೇರವಾಗಿ ನೇಮಿಸಿ ಅವರಿಗೆ ಸವಲತ್ತು ಹಾಗೂ ಪ್ರೋತ್ಸಾಹ ಕೊಡಬೇಕೆಂಬ ಉತ್ತಮ ಹಾಗೂ ಪ್ರೋತ್ಸಾಹ ದಾಯಕವಾದ ಸರಕಾರಿ ಯೋಜನೆಯೊಂದಿದೆ. ಆ ಪ್ರಕಾರ ಇತ್ತೀಚಿಗೆ ಒಂದನೇ ಮತ್ತು ಎರಡನೇ ದರ್ಜೆ ಹುದ್ದೆಗೆ ಸರಕಾರ ನೇರವಾಗಿ ನೇಮಕ ಮಾಡಿದ್ದು. ಈ ನೇಮಕದಲ್ಲಿ ಉತ್ತರ ಕರ್ನಾಟಕದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ವಿದ್ಯಾವಂತ ನಿರುದ್ಯೋಗಿ ಗಳಿಗೆ ಭಾರೀ ಅನ್ಯಾಯವಾಗಿ ಅವರಿಗೆ ಸಿಗುವ ಸವಲತ್ತುಗಳನ್ನು ಹಾರ್‍ಗೊಡೆಯಲಾಗಿದೆ. ಈ ನೇರ ನೇಮಕಾತಿಯಲ್ಲಿ ಬೆಂಗಳೂರು ವಿಭಾಗದಲ್ಲಿ 28, ಮೈಸೂರು ವಿಭಾಗದಲ್ಲಿ 11, ಬೆಳಗಾವಿ ವಿಭಾಗ 5, ಗುಲಬರ್ಗಾ ವಿಭಾಗ 6, ಗುಜರಾತ್ ರಾಜ್ಯ 1 ಹೀಗೆ 51 ಜನರನ್ನು ನೇಮಕ ಮಾಡಿದ್ದು, ಉತ್ತರ ಕರ್ನಾಟಕದ ಬಗ್ಗೆ ಅನ್ಯಾಯ ಪಕ್ಷಪಾತ ಮಾಡುವ ಬಗ್ಗೆ ಸಾಕಷ್ಟು ಟೀಕೆಗಳಿದ್ದರೂ ಅವುಗಳನ್ನು ಲೆಕ್ಕಿಸದೆ ಮಾಡಿರುವ ಸರಕಾರದ ಈ ಕ್ರಮ ಖಂಡನೀಯ.

ಸರಕಾರಿ ಪ್ರಥಮ ದರ್ಜೆ ಕಾಲೇಜು ಕಟ್ಟಡ ನಿರ್ಮಾಣದಲ್ಲಿ ಪಕ್ಷಪಾತ

ಸರಕಾರದಿಂದ ನಡೆಯಲ್ಪಡುವ ಸರಕಾರಿ ಪ್ರಥಮ ದರ್ಜೆ ಕಾಲೇಜುಗಳು ರಾಜ್ಯದ ಎಲ್ಲ ಜಿಲ್ಲೆಗಳಲ್ಲಿದ್ದು ಬಹಳಷ್ಟು ಕಾಲೇಜುಗಳು ಖಾಸಗೀ ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿವೆ. ಕಟ್ಟಡಗಳ ಅವಶ್ಯಕತೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಇವೆ. ಇತ್ತೀಚಿಗೆ ಪ್ರಥಮ ದರ್ಜೆ ಕಾಲೇಜು ಕಟ್ಟಡಗಳ ನಿರ್ಮಾಣವನ್ನು ಮಂಜೂರಿ ಮಾಡಿ ಈ ಬಗ್ಗೆ 96-97ರಲ್ಲಿ 3.03 ಕೋಟಿ ಮಂಜೂರು ಮಾಡಿದೆ. ಬೆಂಗಳೂರು ವಿಭಾಗದಲ್ಲಿ - 32 ಕಟ್ಟಡಗಳನ್ನು, ಮೈಸೂರು ವಿಭಾಗದಲ್ಲಿ - 24 ಕಟ್ಟಡಗಳನ್ನು, ಬೆಳಗಾವಿ ವಿಭಾಗದಲ್ಲಿ - 7 ಕಟ್ಟಡಗಳನ್ನು ಹೀಗೆ ಒಟ್ಟು 63 ಕಟ್ಟಡಗಳನ್ನು ಮಂಜೂರಿ ಮಾಡಿದ್ದು, ಗುಲಬರ್ಗಾ ವಿಭಾಗಕ್ಕೆ ಒಂದಾದರೂ ಕಟ್ಟಡವನ್ನು ಮಂಜೂರು ಮಾಡಿಲ್ಲ. ಹೀಗೆ ಪ್ರಥಮ ದರ್ಜೆ ಕಾಲೇಜು ಕಟ್ಟಡಗಳನ್ನು ಮಂಜೂರಿ ಮಾಡಿ ಕಟ್ಟಿಸುವಲ್ಲಿ ಸರಕಾರ ಪಕ್ಷಪಾತ ಮಾಡಿದೆ, ಇದು ಸರ್ಕಾರಕ್ಕೆ ಭೂಷಣವಲ್ಲ.

ಲೋಕೋಪಯೋಗಿ ಸಂಪರ್ಕ, ಕಟ್ಟಡಗಳ ರಚನೆಗೆ ವೆಚ್ಚದಲ್ಲಿ ಭೇದ

ರಾಜ್ಯದಲ್ಲಿ ಗ್ರಾಮಾಂತರ ಪ್ರದೇಶವೇ ಹೆಚ್ಚು. ಜನರು ಊರಿಂದೂರಿಗೆ ಅನೇಕ ಕೆಲಸ ಕಾರ್ಯಗಳಿಗಾಗಿ ವಿವಿಧ ವಾಹನ ಹಾಗೂ ನಡಿಗೆ ಮುಖಾಂತರ ರಸ್ತೆ ಪ್ರಯಾಣ ಮಾಡಬೇಕಾದುದು ಅನಿವಾರ್ಯ. ಉತ್ತರ ಕರ್ನಾಟಕದ ಬೆಳಗಾವಿ, ಗುಲಬರ್ಗಾ ವಿಭಾಗದ ಭೂಗೋಲಿಕ ವಿಶಾಲತೆ - 100000 ಚ.ಕಿ.ಮಿ. ಇದ್ದು, ಇಲ್ಲಿ ಕೇವಲ 19548 ಕೆ.ಎಂ. ಉದ್ದದ ಲೋಕೋಪಯೋಗಿ ರಸ್ತೆ ಮಾರ್ಗ ಇವೆ. ಇಷ್ಟೊಂದು ರಸ್ತೆ ಹಾಗೂ ಲೋಕೋಪಯೋಗಿ ಕಟ್ಟಡದ ಸಲುವಾಗಿ 95-96ರಲ್ಲಿ ಸರಕಾರವು ಮಾಡಿರುವ ವೆಚ್ಚ ಕೇವಲ 71.65 ಕೋಟಿ. ಆದರೆ ಬೆಂಗಳೂರು-ಮೈಸೂರು ವಿಭಾಗಗಳ ಭೂಗೋಲಿಕ ವಿಶಾಲತೆ 91800 ಚ.ಕಿ.ಮೀ. ಇದ್ದು, ಇಲ್ಲಿ 24318 ಕಿ.ಮೀ. ಲೋಕೋಪಯೋಗಿ ಮಾಡಿರುವ ವೆಚ್ಚ 86.84 ಕೋಟಿ. ಹೀಗೆ ರಸ್ತೆ ನಿರ್ಮಾಣದಲ್ಲಿ ಮತ್ತು ಹಣ ವೆಚ್ಚ ಮಾಡುವಲ್ಲಿ ಸಹ ಉತ್ತರ ಕರ್ನಾಟಕವನ್ನು ಸರಕಾರ ಪಕ್ಷಪಾತ ಹಾಗೂ ಮಲತಾಯಿ ಧೋರಣೆಯಿಂದ ನೋಡುವುದು ಸರಿಯಲ್ಲ.

ಅಂಬೇಡ್ಕರ್ ಆಶ್ರಯ, ಇಂದಿರಾ ಆವಾಜ್ ಮನೆಗಳು

ರಾಜ್ಯದಲ್ಲಿಯ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳ ಬಡವರಿಗೆ, ನಿರ್ಗತಿಕರಿಗೆ ಅ.ಆ.ಇ. ಮನೆಗಳನ್ನು ಕಟ್ಟಿಸಿಕೊಡುವ ಯೋಜನೆ ಅತ್ಯಂತ ಉಪಯುಕ್ತವಾದ ಯೋಜನೆ. ಈ ಯೋಜನೆ ಸಹ ಕುಂಟುತ್ತಾ ನಡೆದಿದೆ. ಕುಂಟುತ್ತಿರುವ ಈ ಅ.ಆ.ಇ. ಯೋಜನೆಯಲ್ಲಿ 1995-96ರಲ್ಲಿ ಬೆಂಗಳೂರು ವಿಭಾಗದಲ್ಲಿ - 22085 ಮನೆಗಳು, ಮೈಸೂರು ವಿಭಾಗದಲ್ಲಿ - 17877 ಮನೆಗಳು, ಗುಲಬರ್ಗಾ ವಿಭಾಗದಲ್ಲಿ -

16590 ಮನೆಗಳು, ಬೆಳಗಾವಿ ವಿಭಾಗದಲ್ಲಿ - 8378 ಮನೆಗಳನ್ನು ಕಟ್ಟಿಸಲಾಗಿದೆ. ಈ ಮನೆಗಳನ್ನು ಕಟ್ಟಿಸಲು ಸರಕಾರ ಹಣ ಬಿಡುಗಡೆ ಮಾಡುವಲ್ಲಿ ಹಿಂದೇಟು ಹಾಕಿ ಬಡವರಿಗೆ ಅವರಿಗೆ ಸಿಗುವ ಸವಲತ್ತು ಸಮರ್ಪಕವಾಗಿ ಸಿಗದಂತೆ ಮಾಡುವುದು ಸಲ್ಲದು.

ಹೊಸ ಜಿಲ್ಲೆಗಳ ರಚನೆಗೆ ಹಿಂದೇಟು

ಪ್ರಜೆಗಳು ತಮ್ಮ ಕೆಲಸ, ಕಾರ್ಯ, ವ್ಯವಹಾರಕ್ಕಾಗಿ ಅವರವರ ಜಿಲ್ಲಾ ಕೇಂದ್ರ ಸ್ಥಳಗಳಿಗೆ ಹೋಗಿ ಬರಬೇಕಾಗುತ್ತದೆ. ಅವರವರ ಸ್ಥಳಗಳಿಂದ ಜಿಲ್ಲಾ ಕೇಂದ್ರಗಳು ಬಹು ದೂರವಿದ್ದರೆ ಅವರಿಗಾಗುವ ತ್ರಾಸು - ತಾಪತ್ರಯ ಹೇಳತೀರದು. ಈ ದಿಶೆಯಲ್ಲಿ ಆದಷ್ಟು ಸಮೀಪದಲ್ಲಿ ಜಿಲ್ಲಾ ಕೇಂದ್ರಗಳಿರಬೇಕೆಂಬುದು ಜನತೆಯ ಮಹದಾಶೆ. ಈ ದಿಶೆಯಲ್ಲಿ ಬೆಳಗಾಂವ್ ಹಾಗೂ ಗುಲಬರ್ಗಾ ವಿಭಾಗ ಉತ್ತರ ಕರ್ನಾಟಕದಲ್ಲಿಯ ಪ್ರಜೆಗಳು ಹೆಚ್ಚಿನ ಜಿಲ್ಲೆಗಳನ್ನು ನಿರ್ಮಾಣ ಮಾಡಲು ಸರಕಾರವನ್ನು ಕೇಳುವುದು ಅವರ ಹಕ್ಕು. ಈ ಹಕ್ಕನ್ನು ಅಲ್ಲಗಳೆದು ಕುಂಟು ನೆಪ ಮುಂದೆ ಮಾಡಿ ಹೊಸ ಜಿಲ್ಲೆಗಳ ರಚನೆ ಮುಂದೂಡುವುದು ಯಾವ ಸರಕಾರಕ್ಕೂ ಭೂಷಣವಲ್ಲ. ಬೆಂಗಳೂರು ವಿಭಾಗದ ಭೂಗೋಲಿಕ ವಿಸ್ತಾರ 48300 ಚ.ಕಿ.ಮೀ. ಇಲ್ಲಿರುವ ಜಿಲ್ಲೆಗಳ ಸಂಖ್ಯೆ ಆರು. ಮೈಸೂರು ವಿಭಾಗದ ಭೂಗೋಲಿಕ ವಿಸ್ತಾರ 43500 ಚ.ಕಿ.ಮೀ. ಇಲ್ಲಿರುವ ಜಿಲ್ಲೆಗಳ ಸಂಖ್ಯೆ ಆರು. ಬೆಳಗಾವಿ ವಿಭಾಗದ ಭೂಗೋಲಿಕ ವಿಸ್ತಾರ 54500 ಚ.ಕಿ.ಮೀ. ಇಲ್ಲಿರುವ ಜಿಲ್ಲೆಗಳ ಸಂಖ್ಯೆ ನಾಲ್ಕು. ಗುಲಬರ್ಗಾ ವಿಭಾಗದ ಭೂಗೋಲಿಕ ವಿಸ್ತಾರ 5500 ಚ.ಕಿ.ಮೀ. ಇಲ್ಲಿರುವ ಜಿಲ್ಲೆಗಳ ಸಂಖ್ಯೆ ನಾಲ್ಕು. ಭೂಗೋಳ ಹಾಗೂ ಜನಸಂದಣಿಗೆ ಅನುಗುಣವಾಗಿ ಹೆಚ್ಚಿನ ಜಿಲ್ಲೆಗಳನ್ನು ಬೆಳಗಾವಿ ಮತ್ತು ಗುಲಬರ್ಗಾ ವಿಭಾಗದಲ್ಲಿ ಮಾಡುವುದನ್ನು ಕಡೆಗಣಿಸುವುದು ಸರಕಾರಕ್ಕೆ ಸರಿಯಲ್ಲ.

ಗಡಿಭಾಗದಲ್ಲಿ ಕನ್ನಡ ಭಾಷೆ ಹಾಗೂ ಕನ್ನಡಿಗರಿಗೆ ಕಡೆಗಣಿಸುವುದು ಸಲ್ಲದು

ಮೊದಲು ಬೇರೆ ಬೇರೆ ರಾಜ್ಯದಲ್ಲಿದ್ದ ಮುಂಬಯಿ ಕರ್ನಾಟಕ, ಹೈದರಾಬಾದ್ ಕರ್ನಾಟಕ, ಮದ್ರಾಸ್ ಕರ್ನಾಟಕ, ಕೊಡಗು ಕರ್ನಾಟಕ ಹಾಗೂ ಮೈಸೂರು ಕರ್ನಾಟಕದವರು ನಾವೆಲ್ಲ ಈಗ ಒಂದಾಗಿದ್ದು ಒಂದೇ ನಾಡು ಕರ್ನಾಟಕದಲ್ಲಿದ್ದೇವೆ. ಕನ್ನಡ ಭಾಷೆ ಆಡಳಿತ ಭಾಷೆಯಾಗಲೇ ಬೇಕು. ಕನ್ನಡಕ್ಕೆ ಆದ್ಯತೆ ಬೇಕೇ ಬೇಕು. ದುರ್ದೈವದಿಂದ ಕನ್ನಡೇತರ ಬೇರೆ ಬೇರೆ ಭಾಷೆಗಳಿಗೆ ಹಾಗೂ ಕನ್ನಡೇತರರಿಗೆ ಸರಕಾರ ಮಾರುಹೋಗಿ ಪ್ರೋತ್ಸಾಹಿಸುತ್ತಿರುವುದು ಹಾಗೂ ಕನ್ನಡ ಭಾಷೆ ಹಾಗೂ ಕನ್ನಡಿಗರನ್ನು ಕಡೆಗಣಿಸುವುದು ಸರಕಾರಕ್ಕೆ ಸಲ್ಲದು. ಕನ್ನಡ ಗಡಿಭಾಗದಲ್ಲಿ ಪ್ರಾಥಮಿಕ ಹಾಗೂ ಮಾಧ್ಯಮಿಕ ಕನ್ನಡ ಶಾಲೆಗಳನ್ನು ಹೆಚ್ಚಿಸುವುದು, ಕನ್ನಡ ಶಿಕ್ಷಕರನ್ನು ಹೆಚ್ಚು ಹೆಚ್ಚಾಗಿ ನೇಮಿಸುವುದು, ಕನ್ನಡ ಗಡಿಭಾಗದಲ್ಲಿಯ ವಿವಿಧ ಕನ್ನಡ ದಿನಪತ್ರಿಕೆ, ವಾರಪತ್ರಿಕೆ, ಮಾಸಪತ್ರಿಗಳಿಗೆ ಹೆಚ್ಚಿನ

ಜಾಹೀರಾತುಗಳನ್ನು ಕೊಟ್ಟು ಕನ್ನಡ ಪತ್ರಿಕೋದ್ಯಮಿಗಳಿಗೆ ಹೆಚ್ಚಿನ ಪ್ರೋತ್ಸಾಹ ಕೊಡುವುದು ಅಗತ್ಯವೆಂಬುದನ್ನು ಸರಕಾರ ಮನಗಾಣಸಬೇಕಾದುದು ಅಗತ್ಯ. ಆದರೆ ಈ ದಿಶೆಯಲ್ಲಿ ಸರಕಾರದ ನಿರುತ್ಸಾಹ ಖಂಡನೀಯವೆನ್ನದೆ ಗತ್ಯಂತರವಿಲ್ಲ. ಬೆಳಗಾವಿ ನಗರ ಹಾಗೂ ನಗರದ ಪೂರ್ವ ದಿಕ್ಕಿನ ಗ್ರಾಮಗಳಲ್ಲಿ, ಬೆಳಗಾವಿ ನಗರದ ಉತ್ತರಕ್ಕೆ, ಪಶ್ಚಿಮಕ್ಕೆ ಹಾಗೂ ದಕ್ಷಿಣಕ್ಕೆ ಮಹಾಜನ ಸಮಿತಿ ಮಹಾರಾಷ್ಟ್ರಕ್ಕೆ ಅಟ್ಟಲು ಶಿಫಾರಸ್ಸು ಮಾಡಿರುವ ಕಂಗರಾಳಿ ಬಿ.ಕೆ. ಕಂಗರಾಳಿ, ಕೆ.ಹೆಚ್. ಹಿಂಡಲಗಿ, ಸವಗಾವ, ಮಂಡೋಲ್, ಹಂಗರಗಿ, ಕೊತಲವಾಡಿ, ಮಚ್ಛೆ, ಯಲ್ಲೂರ, ಯರಮಾಲೆ, ವಾಘವಾಡೆ, ಜಾಡಶಹಾಪುರ, ಸುಲಗೆ, ಎಲ್ಲೂರ, ನಾಗರಹಟ್ಟಿ, ದೇಸೂರ ನಂದೀಹಳ್ಳಿ ಮೊದಲಾದ ಗ್ರಾಮದ, ನಗರಗಳ ಹಾಗೂ ತಾಲ್ಲೂಕಿನ ಎಲ್ಲಾ ಕನ್ನಡಿಗರನ್ನು ಬೆಳಗಾವಿಯ ಎಲ್ಲಾ ಕನ್ನಡ ಪತ್ರಿಕೆಗಳನ್ನು ಪ್ರೋತ್ಸಾಹಿಸುವಲ್ಲಿ ಹಾಗೂ ಇಲ್ಲಿಯ ಮರಾಠಿ ಭಾಷೆಯ ಜನರನ್ನು ಕನ್ನಡದತ್ತ ಒಲಿಸಿಕೊಳ್ಳುವಲ್ಲಿ ಸರಕಾರ ಹಿಂದೇಟು ಹಾಕಿ ಕನ್ನಡ ಭಾಷೆಗೆ, ಕನ್ನಡಿಗರಿಗೆ ಹಾಗೂ ಕರ್ನಾಟಕಕ್ಕೆ ದ್ರೋಹ ಬಗೆಯುತ್ತಿರುವುದು ಸರಕಾರಕ್ಕೆ ಒಳಿತಲ್ಲ.

ಆರೋಗ್ಯ ಭಾಗ್ಯಕ್ಕೆ ಆಪತ್ತು ಆಗಬಾರದು

ಉತ್ತರ ಕರ್ನಾಟಕದ ಬೆಳಗಾವಿ ಗುಲಬರ್ಗಾ ವಿಭಾಗಗಳ ಭೂಗೋಲಿಕ ವಿಸ್ತಾರ 100000 ಚ.ಕಿ.ಮೀ. ದಕ್ಷಿಣ ಕರ್ನಾಟಕದ ಬೆಂಗಳೂರು, ಮೈಸೂರು ವಿಭಾಗಗಳ ಭೂಗೋಲಿಕ ವಿಸ್ತಾರ 91800 ಚ.ಕಿ.ಮೀ. ಉತ್ತರ ಕರ್ನಾಟಕದಲ್ಲಿರುವ ಮೆಡಿಕಲ್ ಕಾಲೇಜು ಸಂಸ್ಥೆಗಳ ಸಂಖ್ಯೆ 6. ಆಸ್ಪತ್ರೆ ಹಾಗೂ ಆರೋಗ್ಯ ಘಟಕಗಳ ಸಂಖ್ಯೆ 867. ಆದರೆ ದಕ್ಷಿಣ ಕರ್ನಾಟಕದಲ್ಲಿರುವ ಮೆಡಿಕಲ್ ಕಾಲೇಜು ಸಂಸ್ಥೆಗಳ ಸಂಖ್ಯೆ 13, ಆಸ್ಪತ್ರೆ ಹಾಗೂ ಆರೋಗ್ಯ ಘಟಕಗಳ ಸಂಖ್ಯೆ 1414, ಉತ್ತರ ಕರ್ನಾಟಕದಲ್ಲಿ 19 ಕಾನೂನು ಕಾಲೇಜ್, ದಕ್ಷಿಣ ಕರ್ನಾಟಕದಲ್ಲಿ 40 ಕಾನೂನು ಕಾಲೇಜುಗಳನ್ನು ಸ್ಥಾಪಿಸಲಾಗಿದೆ. ಹೀಗೆ ಜನತೆಗೆ ಆರೋಗ್ಯ ಶಿಕ್ಷಣ ಕಾಲೇಜುಗಳನ್ನು, ಆಸ್ಪತ್ರೆಗಳನ್ನು ಮತ್ತು ಕಾನೂನು ಶಿಕ್ಷಣ ಕಾಲೇಜುಗಳನ್ನು ಸ್ಥಾಪಿಸುವಲ್ಲಿ ಹಾಗೂ ಜನತೆಗೆ ಅಲ್ಲಲ್ಲಿ ಆರೋಗ್ಯ ಘಟಕಗಳನ್ನು ಸ್ಥಾಪಿಸುವಲ್ಲಿ ಸಹ ಸರಕಾರ ಭಾರೀ ಪಕ್ಷಪಾತ, ಅನ್ಯಾಯವನ್ನು ಉತ್ತರ ಕರ್ನಾಟಕಕ್ಕೆ ಮಾಡಿರುವುದು ಎದ್ದು ಕಾಣುವ ದೃಷ್ಟಾಂತ, ಈ ಪಕ್ಷಪಾತ ನಿವಾರಣೆಗೆ ಉಪಾಯವೇನು?

ರೈಲ್ವೆ ಮತ್ತು ನ್ಯಾಯಪೀಠ

ಉತ್ತರ ಕರ್ನಾಟಕಕ್ಕೆ ದೊರೆಯಬಹುದಾಗಿದ್ದ ಹೈಕೋರ್ಟ್ ನ್ಯಾಯಪೀಠ ಹಾಗೂ ರೈಲ್ವೆ ವಲಯಗಳನ್ನು ಒಡೆದು ಆಳುವ ನೀತಿಯನ್ನು ಅನುಸರಿಸಿ ಅವು ಸಿಗಗೊಡದಂತೆ ನೀಚಧೋರಣೆಯನ್ನು ಅನುಸರಿಸುತ್ತಿರುವುದು ಸರಿಯಲ್ಲ.

ಸಂಘಟನೆ ಹೋರಾಟ ಅಗತ್ಯ

ಮೊಸರನ್ನು ಕಡೆಯದಿದ್ದರೆ ಬೆಣ್ಣೆಯೂ ಇಲ್ಲ, ತುಪ್ಪವೂ ಇಲ್ಲ, ಮಜ್ಜಿಗೆಯೂ ಇಲ್ಲ, ಹಾಗೆಯೇ ಸಂಘಟನೆ, ಹೋರಾಟವಿಲ್ಲದಿದ್ದರೆ ಹಕ್ಕುಗಳಿಗೂ ಸಂಚಕಾರ, ಪ್ರಗತಿಗೂ ಸಂಚಕಾರ, ಸಿಗಬೇಕಾದ ಸೌಲಭ್ಯ, ಸವಲತ್ತುಗಳಿಗೂ ಸಂಚಕಾರ. ಇದರ ದುಷ್ಪರಿಣಾಮ ಬಹುಮುಖ ಪ್ರಗತಿ ಕುಂಠಿತವಾಗಿ ಭ್ರಷ್ಟಾಚಾರ, ಪಕ್ಷಪಾತ, ಸ್ವಜನ ಪಕ್ಷಪಾತ, ಅಧಿಕಾರ ದುರುಪಯೋಗ, ದುರಾಡಳಿತ, ಸ್ವಾರ್ಥ ಮೊದಲಾದ ಸಾಮಾಜಿಕ ಪಿಡುಗುಗಳು ಹೆಚ್ಚಾಗಿ, ಸಿಕ್ಕ ಸ್ವಾತಂತ್ರ್ಯಕ್ಕೆ ಹಾಗೂ ದೊರೆತ ಪ್ರಜಾತಂತ್ರ ವ್ಯವಸ್ಥೆಗೆ ಗರಿಷ್ಠ ಗಂಡಾಂತರ ನಮ್ಮೆಲ್ಲರ ಮುಂದೆ ಕಾದು ಕುಳಿತಿದೆ. ಈ ದಿಶೆಯಲ್ಲಿ ಹಾಗೂ ಹಿನ್ನೆಲೆಯಲ್ಲಿ ಪರಿಣಾಮಕಾರಿಯಾದ ಚಿಂತನೆ - ಮಂಥನ ಹಾಗೂ ಮುಂದಿನ ಸಂಘಟನೆ, ಹೋರಾಟದ ಹೆಜ್ಜೆ ಅತಿ ಅವಶ್ಯಕ ಹಾಗೂ ಅತ್ಯಗತ್ಯ.

ದೇವಾಲಯ ಆರಾಧನಾ ಯೋಜನೆ, ಪಕ್ಷಪಾತ-ಸ್ವಾರ್ಥ

ಪ್ರತಿಯೊಬ್ಬ ಶಾಸಕ, ಸಂಸದ, ಮಂತ್ರಿ, ಮುಖ್ಯಮಂತ್ರಿ, ಪ್ರಧಾನಮಂತ್ರಿ, ಉಪರಾಷ್ಟ್ರಪತಿ, ರಾಷ್ಟ್ರಪತಿ, ನ್ಯಾಯಾಧೀಶ, ಮುಖ್ಯ ನ್ಯಾಯಾಧೀಶರೆಲ್ಲರೂ ಅಧಿಕಾರ ಪ್ರಮಾಣ ಸ್ವೀಕರಿಸುವಾಗ ಈಶ್ವರನ ಅಥವಾ ಸತ್ಯನಿಷ್ಠೆಯ ಹೆಸರಿನ ಪ್ರಮಾಣ ಮಾಡುತ್ತಿದ್ದು ಹಿಂದುಸ್ಥಾನದಲ್ಲಿರುವವರೆಲ್ಲರೂ ಪ್ರತಿನಿತ್ಯ ತಮ್ಮ ಈಶ್ವರ ಅಥವಾ ಹಲವು ನಾಮದ ದೇವರುಗಳನ್ನು ಪೂಜಿಸುತ್ತಿದ್ದಾರೆ. ಅಂತೆಯೇ ರಾಜ್ಯ ಸರಕಾರವು ದೇವಾಲಯುಗಳನ್ನು ಜೀರ್ಣೋದ್ಧಾರ ಮಾಡುವಲ್ಲಿ ಅಥವಾ ಹೊಸ ಹೊಸ ದೇವಾಲಯುಗಳನ್ನು ಆರಾಧನಾ ಯೋಜನೆಯಲ್ಲಿ ಕಟ್ಟಿಸಿಕೊಡುವಲ್ಲಿ ಹಾಗೂ ದೇವಾಲಯಗಳ ಅರ್ಚಕರಿಗೆ ತಸ್ಥಿಕ ಭತ್ಯೆ ಕೊಡುತ್ತಿದೆ. ಈ ದಿಶೆಯಲ್ಲಿ ಸಹ ರಾಜ್ಯ ಸರಕಾರವು ನಿರ್ಲಕ್ಷ್ಯ, ಪಕ್ಷಪಾತ ಮಾಡುತ್ತ ದೇವಾಲಯ ಅಥವಾ ಮುಜರಾಯಿ ಇಲಾಖೆಯ 1956ರ ಪೂರ್ವದ 5 ಬೇರೆ ಬೇರೆ ರಾಜ್ಯಗಳ ಬೇರೆ ಬೇರೆ ಕಾಯ್ದೆಗಳನ್ನು ಒಟ್ಟುಗೂಡಿಸಿ ಏಕರೂಪ ಜಿಮ್ಮೆ ಅಧಿನಿಯಮವನ್ನು ರಚಿಸದೆ ದೇವಾಲಯ ಹಾಗೂ ದೇವಾಲಯಗಳ ಹೇರಳವಾದ ಆಸ್ತಿಯನ್ನು ಲೂಟಿ ಮಾಡಲಿಕ್ಕೆ ಅನೇಕ ಭ್ರಷ್ಟ ರಾಜಕಾರಣಿ ಹಾಗೂ ಧರ್ಮಕಾರಣಿಗಳಿಗೆ ಆಸ್ಪದ ಮಾಡಿಕೊಟ್ಟು ಏಕರೂಪ ಕಾಯ್ದೆ ಮಾಡುವುದನ್ನು ಕುಂಟುನೆಪ ಮಾಡಿ 40 ವರ್ಷಗಳಿಂದ ಮುಜರಾಯಿ ಕ್ಷೇತ್ರದಲ್ಲಿ ಅರಾಜಕತೆಯನ್ನು ಮಾಡಿರುವುದು ಸರಕಾರಕ್ಕೆ ಭೂಷಣವಲ್ಲ. ಅನೇಕ ದೇವಾಲಯಗಳು ಯಾವುದೇ ಐದು ಹಳೇ ಅಧಿನಿಯಮಗಳ ವ್ಯಾಪ್ತಿಯಲ್ಲಿ ಬಾರದೆ ಲಂಗುಲಗಾಮು ಇಲ್ಲದೆ ಅವುಗಳ ಉಸ್ತುವಾರಿಗಳು ಗಂಟು ಹೊಡೆಯಲಿಕ್ಕೆ ಆಸ್ಪದ ಮಾಡಿರುವುದು ಸರಕಾರಕ್ಕೆ ಸರಿಯಲ್ಲ. ಸರಕಾರದ ಲೆಕ್ಕದಲ್ಲಿ ಉತ್ತರ ಕರ್ನಾಟಕದಲ್ಲಿ 22817 ದೇವಾಲಯಗಳು ಹಾಗೂ 13154

ತಸ್ತಿಕದಾರರು ಇದ್ದು 94-95ರಲ್ಲಿ ಆರಾಧನಾ ಯೋಜನೆಯಲ್ಲಿ 2.54 ಕೋಟಿ ವೆಚ್ಚ ಮಾಡಲಾಗಿದೆ. ದಕ್ಷಿಣ ಕರ್ನಾಟಕದಲ್ಲಿ 20393 ದೇವಾಲಯಗಳು ಹಾಗೂ 16649 ತಸ್ತಿಕದಾರರು ಇದ್ದು 94-95ರಲ್ಲಿ ಆರಾಧನಾ ಯೋಜನೆಯಲ್ಲಿ 4.19 ಕೋಟಿ ರೂ. ವೆಚ್ಚ ಮಾಡಲಾಗಿದ್ದು, ದೇವರ ಬಗ್ಗೆ, ಅರ್ಚಕ ತಸ್ತಿಕರ ಬಗ್ಗೆ, ಆರಾಧನಾ ಯೋಜನೆ ಬಗ್ಗೆ ಸ್ವಾರ್ಥ, ಪಕ್ಷಪಾತ, ಸ್ವಜನ ಪಕ್ಷಪಾತ, ಅಧಿಕಾರ ದುರುಪಯೋಗ, ನಿರ್ಲಕ್ಷ್ಯ ಮಾಡುವುದು ಯಾವುದೇ ಸರಕಾರಕ್ಕೆ ಭೂಷಣವಲ್ಲ. ಈ ಅಪರಾಧಕ್ಕೆ ಗುರಿಯಾಗುವ ಯಾವುದೇ ರಾಜ ಮಹಾರಾಜ, ಚಕ್ರವರ್ತಿ, ರಾಜಾಧಿರಾಜ, ಮಂತ್ರಿ, ಮುಖ್ಯಮಂತ್ರಿ, ಪ್ರಧಾನಮಂತ್ರಿಗಳು ಹಾಗೂ ಅವರವರ ಸರಕಾರಗಳು ಉರುಳಿಹೋಗಿ ಅಪರಾಧಿಗಳಾಗಿ ನ್ಯಾಯಾಲಯಗಳ ಕಟ್ಟೆ ಹತ್ತಿರುವವರನ್ನು ನೋಡಿದರೆ, ಜನತೆ ಇಂಥವರಿಗೆ ಶಿಕ್ಷೆ ಕೊಡದಿದ್ದರೂ ದೇವರೇ ಶಿಕ್ಷೆ ಕೊಡುತ್ತಿರುವ ಅನೇಕ ಉದಾಹರಣೆಗಳನ್ನು ನೋಡಿ ಇನ್ನಾದರೂ ಸರಕಾರಗಳು ಹಾಗೂ ಹೊಣೆಗಾರರು ಪ್ರಾಮಾಣಿಕವಾಗಿ ನಡೆಯುವರನ್ನು ಕಲಿತರೆ ಒಳ್ಳೆಯದು.

❑

ಮಹಾಮಂತ್ರಿ ಬಸವೇಶ್ವರರ ತತ್ವ

ಸ್ವಾತಂತ್ರ್ಯಪೂರ್ವ ಬ್ರಿಟಿಷ್ ಆಡಳಿತದಲ್ಲಿ ಹಾಗೂ ಸ್ವಾತಂತ್ರ್ಯ ನಂತರ ಪ್ರಜಾತಂತ್ರ ವ್ಯವಸ್ಥೆಯಲ್ಲಿ, ಸಂಸ್ಥಾನ ಮಟ್ಟದಲ್ಲಿ, ರಾಜ್ಯ ಮಟ್ಟದಲ್ಲಿ ಹಾಗೂ ರಾಷ್ಟ್ರ ಮಟ್ಟದಲ್ಲಿ ಅನೇಕರು ಮಂತ್ರಿ, ಮಹಾಮಂತ್ರಿಗಳಾಗಿದ್ದಾರೆ. ಇದರಲ್ಲಿ ಅನೇಕ ರಾಜ್ಯ ಮಟ್ಟದ ಹಾಗೂ ರಾಷ್ಟ್ರ ಮಟ್ಟದ ಮಂತ್ರಿ, ಮಹಾಮಂತ್ರಿಗಳು ಅಪಹಾಸ್ಯ, ಅಪವಾದ, ಅಪರಾಧಗಳಿಗೆ ಗುರಿಯಾಗಿ, ಆರಕ್ಷಕರ ಕಛೇರಿ, ನ್ಯಾಯಾಲಯಗಳ ಕಟ್ಟೆ ಹತ್ತಿ, ಆರೋಪಗಳನ್ನು ಎದುರಿಸಿ, ಜೈಲುಗಳಲ್ಲಿ ಉಂಡುಟ್ಟು ಬಂದವರಿದ್ದಾರೆ, ಬರುತ್ತಲೂ ಇದ್ದಾರೆ. ಮಂತ್ರಿ ಹುದ್ದೆಗೆ ಬಂದ ಮೇಲೆ ಅನೇಕರು ಅದೊಂದು ಪರಮೋಚ್ಚ ಸ್ಥಾನ, ಘನತೆ-ಗೌರವದ ಸ್ಥಾನವೆಂಬುದನ್ನು ಅರಿತು ಜನತೆಯನ್ನು ಹಾಗೂ ಜನತೆಯ ಮಾನ-ಮರ್ಯಾದೆ, ಘನತೆ-ಗೌರವಗಳನ್ನು ರಕ್ಷಿಸುವ ಸ್ಥಾನವೆಂಬುದನ್ನು ಮರೆತು ಮೂಢನಂಬಿಕೆಗಳಿಗೆ ಮಾರು ಹೋಗಿ ಜ್ಯೋತಿಷಿಗಳು ಹಾಗೂ ಕಪಟ ಸನ್ಯಾಸಿಗಳ ಗುಲಾಮರಾಗಿ ಅವರು ಹೇಳಿದಂತೆ ನಡೆದುಕೊಳ್ಳುತ್ತಾ ತಮ್ಮ ಕಾರ್ಯ-ಕರ್ತವ್ಯಗಳನ್ನು ಮರೆತು, ಜನತೆ, ರಾಜ್ಯ ಹಾಗೂ ರಾಷ್ಟ್ರವನ್ನು ಅಪಹಾಸ್ಯ, ಅವಹೇಳನ ಹಾಗೂ ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿಸಿ ಅರಾಜಕತೆಯನ್ನುಂಟು ಮಾಡಿ ಪ್ರಜಾತಂತ್ರ ವ್ಯವಸ್ಥೆ ಅತಂತ್ರ ಹಾಗೂ ಅವ್ಯವಸ್ಥೆಗೊಳ್ಳುವಂತೆ ಮಾಡುತ್ತಿರುವವರು ಸುಸ್ಪಷ್ಟವಾಗಿದೆ. ಈ ರಾಷ್ಟ್ರದಲ್ಲಿ ಎಲ್ಲ ಮಟ್ಟದಲ್ಲಿ ಹಾಗೂ ಎಲ್ಲಾ ಕಾಲದಲ್ಲಿ ಮಂತ್ರಿ, ಮಹಾಮಂತ್ರಿ ಅಮಾಲ್ಯರನೇಕರು ಆದರ್ಶಕರು ಮತ್ತು ಪ್ರಾಮಾಣಿಕರು, ದಕ್ಷರು ಪಕ್ಷಪಾತಿಗಳಾದವರು ಸ್ವಜನ ಪಕ್ಷಪಾತಿಗಳಾದವರು, ಅಧಿಕಾರ ದುರುಪಯೋಗ ಮಾಡಿಕೊಳ್ಳದವರು, ದುರಾಡಳಿತ ಮಾಡದವರು, ನ್ಯಾಯ-ನಿಷ್ಠುರತೆಯಿಂದಿದ್ದವರು, ದಾಕ್ಷಿಣ್ಯ ಪರ ಆಗದವರು, ಜನತಾ ಸೇವೆಯೇ ಜನಾರ್ಧನ ಸೇವೆಯೆಂದವರು, ಕಾಯಕವೇ ಕೈಲಾಸವೆಂದವರು, ನುಡಿದರೆ ಮುತ್ತಿನ ಹಾರದಂತಿರಬೇಕೆಂದವರು, ನುಡಿದರೆ ಈಶ್ವರನು ಮೆಚ್ಚಬೇಕೆಂದವರು, ಇವನಾರವ, ಇವನಾರವ ಎನ್ನದೇ, ಇವ ನಮ್ಮವ, ಇವ ನಮ್ಮವನೆಂದವರು, ದಯವೇ ಧರ್ಮದ ಮೂಲವಯ್ಯವೆಂದವರು, ಸಕಲರಿಗೂ ಲೇಸನ್ನೆ ಬಯಸಬೇಕೆಂದವರು, ಅಹಿಂಸಾಪರಮೋಧರ್ಮ ಎಂದವರು, ಹುಸಿಯ ನುಡಿಯ ಬೇಡವೆಂದವರು, ಪರ ಧನಾಮಿಷವ ತೊರೆಯಿರಿ ಎಂದವರು, ಪರ ನಾರಿಯರ

ತೊರೆಯಿರಿ ಎಂದವರು, ಹುಸಿಯ ನುಡಿಯ ಬೇಡವೆಂದವರು, ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಎಲ್ಲರನ್ನೂ ಒಂದೇ ಎನ್ನಿರಿ ಎಂದವರು, ದುಷ್ಟರನ್ನು ಶಿಕ್ಷಿಸಿರಿ, ಶಿಷ್ಟರನ್ನು ರಕ್ಷಿಸಿರಿ ಎಂದವರು ಮಹಾಮಂತ್ರಿ ಬಸವೇಶ್ವರರು ಹಾಗೂ ಅನೇಕ ಮಹಾಪುರುಷರು ಆಗಿ ಹೋಗಿದ್ದಾರೆ ಹಾಗೂ ಆಗುತ್ತಲೂ ಇದ್ದಾರೆ. ಈ ಅನೇಕರ ಹೆಸರುಗಳು ಇತಿಹಾಸದ ಪುಟಗಳಲ್ಲಿ ಸುವರ್ಣಾಕ್ಷರಗಳಲ್ಲಿ ಬರೆಯಲ್ಪಟ್ಟಿವೆ.

ಈ ತತ್ವಗಳ ಪರಿಪಾಲನೆಯಲ್ಲಿ ಮಹಾಮಂತ್ರಿ ಬಸವೇಶ್ವರ, ಅಂಬೇಡ್ಕರ್, ಲಾಲ್ ಬಹದ್ದೂರ್ ಶಾಸ್ತ್ರಿ, ಕಾಮರಾಜ್ ನಾಡರ್ ಮೊದಲಾದವರು ಗಣ್ಯರಾಗಿ ಆದರ್ಶ ಪುರುಷರಾಗಿದ್ದಾರೆ. ಈ ಆದರ್ಶ ಪುರುಷರ ಆದರ್ಶಗಳನ್ನು ಹಾಗೂ ಆಡಳಿತ ಮೌಲ್ಯಗಳನ್ನು ಇಂದಿನ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿಯ ಎಲ್ಲಾ ಹಂತದ ಎಲ್ಲ ಮಂತ್ರಿಗಳು ನೆನಪಿಸಿಕೊಂಡು ಅವುಗಳನ್ನು ಅಳವಡಿಸಿಕೊಂಡು ರಾಜ್ಯದ ಹಾಗೂ ರಾಷ್ಟ್ರದ ಆಡಳಿತ ಚುಕ್ಕಾಣಿಯನ್ನು ಹಿಡಿದು ಆಡಳಿತ ನಡೆಸಿದರೆ ಮಾತ್ರ ರಾಜ್ಯದಲ್ಲಿ ಸ್ನೇಹ, ಸುಖ, ಶಾಂತಿ, ನೆಮ್ಮದಿಯುಂಟಾಗಿ ಸಂಪತ್‌ಭರಿತ ಸಮಾಜ ಹಾಗೂ ರಾಜ್ಯ-ರಾಷ್ಟ್ರವಾಗಬಲ್ಲುದು, ಇದಕ್ಕೆ ತಪ್ಪಿದರೆ ಸಮಾಜ, ರಾಜ್ಯ ಹಾಗೂ ರಾಷ್ಟ್ರ ಅಶಾಂತಿಯ ಆಗರವಾಗಿ ಆರ್ಥಿಕ ಪರಿಸ್ಥಿತಿ ಅಲ್ಲೋಲ-ಕಲ್ಲೋಲವಾಗಿ ಅರಾಜಕತೆಯನ್ನು ಆಹ್ವಾನ ಕೊಟ್ಟಂತಾಗುವುದು.

ರಾಷ್ಟ್ರದಲ್ಲಿ ಜಗಜ್ಯೋತಿ ಬಸವೇಶ್ವರರು ಬಿಜ್ಜಳ ರಾಜ್ಯದ ಮಹಾಮಂತ್ರಿಯಾಗಿ ರಾಜಕೀಯ ಜ್ಯೋತಿಯಾಗಿ ಅನುಭವ ಮಂಟಪದ ಸಂಸ್ಥಾಪಕರಾಗಿ ಧಾರ್ಮಿಕ ಜ್ಯೋತಿಯಾಗಿ ಮಾನವ ಕುಲಕ್ಕೆ ಒಬ್ಬ ಆದರ್ಶ ಮಹಾಪುರುಷರಾಗಿ, ರಾಜಕೀಯ ಧಾರ್ಮಿಕ ಹಾಗೂ ಸಾಮಾಜಿಕ ಮೌಲ್ಯಗಳ ಮಹಾಭಂಡಾರವನ್ನೇ ಸೃಷ್ಟಿಸಿ ಹೋಗಿದ್ದಾರೆ. ಅವರ ಈ ಮಹಾಮೌಲ್ಯಗಳನ್ನು ಅನುಷ್ಠಾನದಲ್ಲಿ ತಂದ ಹಾಗೂ ತರುತ್ತಿರುವ ಅನೇಕ ರಾಜಕೀಯ ಧಾರ್ಮಿಕ ಹಾಗೂ ಸಾಮಾಜಿಕ ಮುಖಂಡರು, ಮಂತ್ರಿಗಳು, ಮಹಾಮಂತ್ರಿಗಳು ಅನೇಕರಿದ್ದಾರೆ. ಇದಕ್ಕೆ ತದ್ವಿರುದ್ಧವಾಗಿ ಅನೇಕ ರಾಜಕೀಯ, ಧಾರ್ಮಿಕ, ಸಾಮಾಜಿಕ ಮುಖಂಡರು, ಮಂತ್ರಿ ಹಾಗೂ ಮಹಾಮಂತ್ರಿಗಳು ಈ ಮೌಲ್ಯಾಧಾರಿತ ತತ್ವಗಳನ್ನು ಗಾಳಿಗೆ ತೂರಿ ತತ್ವಗಳಿಗೆ ತದ್ವಿರುದ್ಧವಾಗಿ ವರ್ತಿಸಿ, ಸಮಾಜವನ್ನು ಒಡೆದು ಚೂರು ಚೂರು ಮಾಡಿ ಸಹಸ್ರಾರು ಜಾತಿ, ಉಪಜಾತಿ, ಕುಲ, ಉಪಕುಲ, ಮೇಲು-ಕೀಳು, ಸವರ್ಣೀಯ, ದಲಿತ, ಉಳ್ಳವರು, ಉಳ್ಳದವರು ಎಂಬ ಭೇದ-ಭಾವಗಳನ್ನುಂಟು ಮಾಡಿ, ಸಮಾಜದಲ್ಲಿ ಅಶಾಂತಿ, ಅನ್ಯಾಯ, ಅತ್ಯಾಚಾರ, ಅಭದ್ರತೆ, ಸ್ವಾರ್ಥ, ಪಕ್ಷಪಾತ, ಸ್ವಜನ ಪಕ್ಷಪಾತ, ಭ್ರಷ್ಟಾಚಾರ, ಅಧಿಕಾರ ದುರುಪಯೋಗ, ದುರಾಡಳಿತ, ಇತ್ಯಾದಿ ಅನಾಚಾರಗಳೆಂಬ ಸಾಮಾಜಿಕ, ರಾಜಕೀಯ ಹಾಗೂ ಧಾರ್ಮಿಕ ಮಹಾರೋಗಗಳು ಹೆಚ್ಚಲು ಕಾರಣರಾಗಿ ಸಮಾಜವೇ ತತ್ತರಿಸಿ ಹೋಗುವಂತೆ ಮಾಡಿದ್ದು, ಈ ಪೀಡೆಗಳಿಂದ ಪಾರಾಗಲು ಹಾಗೂ ಸಮಾಜವನ್ನು ರಕ್ಷಿಸುವುದು ಪ್ರಸ್ತುತ ವಾತಾವರಣದಲ್ಲಿ

ಅತ್ಯವಶ್ಯವಿದೆ. ಈ ದಿಸೆಯಲ್ಲಿ ಹೊಣೆಗಾರ ರಾಜಕೀಯ, ಧಾರ್ಮಿಕ ಹಾಗೂ ಸಾಮಾಜಿಕ ಮುಖಂಡರು ಕಾರ್ಯಶೀಲರಾಗುವುದು ಅಗತ್ಯ.

ಬಸವಣ್ಣ ಮಹಾಮಂತ್ರಿಗಳು ಅನೇಕ ಮಹಾಮೌಲ್ಯಗಳನ್ನು ಆಚರಣೆಯಲ್ಲಿ ತಂದು ನುಡಿದಂತೆ ನಡೆದರು, ನಡೆದಂತೆ ನುಡಿದರು. ಅಂತೆಯೇ ಅವರಿಂದು ಆದರ್ಶ ಪುರುಷರಾಗಿದ್ದಾರೆ. ಆ ತತ್ವಗಳಲ್ಲಿ ಕೆಲವನ್ನಾದರೂ ಈಗಿನ ಮಂತ್ರಿ, ಮಹಾಮಂತ್ರಿಗಳು ಅಳವಡಿಸಿಕೊಂಡು ಆಚರಣೆ ಹಾಗೂ ಅನುಷ್ಠಾನದಲ್ಲಿ ತಂದರೆ ಒಳ್ಳೆಯದು. ಬಸವಣ್ಣನವರು ಮಹಾಮಂತ್ರಿಯಾಗಿ "ನ್ಯಾಯ ನಿಷ್ಠುರಿ ದಾಕ್ಷಿಣ್ಯ ಪರ ನಾನಲ್ಲ"ವೆಂದರು. ಈಗಿನ ಅನೇಕ ಮಂತ್ರಿಗಳು, ಮಹಾಮಂತ್ರಿಗಳು "ನ್ಯಾಯ ನಿಷ್ಠುರಿ ನಾನಲ್ಲ" "ದಾಕ್ಷಿಣ್ಯಪರ ನಾನು" ಎಂದು ಕಾರ್ಯ ನಿರ್ವಹಿಸುತ್ತಿದ್ದಾರೆ. ಬಸವಣ್ಣನವರು ನುಡಿದರೆ ಮುತ್ತಿನ ಹಾರ, ಸ್ಫಟಿಕದ ಸಲಾಕೆ, ಮಾಣಿಕ್ಯದ ದೀಪ್ತಿಯಂತಿರಬೇಕೆಂದರು, ಈಗಿನ ಮಂತ್ರಿಗಳನೇಕರು ಇದಕ್ಕೆ ತದ್ವಿರುದ್ಧವಾಗಿ ಆಗೊಂದು, ಈಗೊಂದು ನುಡಿ, ಹುಸಿ ನುಡಿ, ವಂಚಿಸುವ ನುಡಿ, ಸುಳ್ಳಿನ ಕಂತೆಯ ನುಡಿಯನ್ನೇ ಆಡಿ ಸಮಾಜವನ್ನು ವಂಚಿಸುತ್ತಿದ್ದಾರೆ. ಬಸವಣ್ಣನವರು, "ಜನತಾ ಸೇವೆಯೇ ಜನಾರ್ಧನ ಸೇವೆ" ಎಂದರು. ಈಗಿನ ಮಂತ್ರಿಗಳನೇಕರು ಈಶ್ವರನ ಅಥವಾ ಸತ್ಯ, ನಿಷ್ಠೆಯ ಹೆಸರಿನಲ್ಲಿ ಅಧಿಕಾರ ಪ್ರಮಾಣ ವಚನ ಸ್ವೀಕರಿಸಿದರೂ ಸಹ "ಸ್ವ-ಜನರ ಸೇವೆಯೇ ಈಶ್ವರನ ಸೇವೆ" ಎನ್ನುತ್ತಿದ್ದಾರೆ. ಬಸವಣ್ಣನವರು ಸಕಲರಿಗೂ ಲೇಸನ್ನು ಬಯಸಬೇಕೆಂದರು, ಈಗಿನ ಮಂತ್ರಿಗಳನೇಕರು ಸಕಲರಿಗೂ ಲೇಸನ್ನು ಬಯಸದೆ ತಮ್ಮ ಚೇಲಾಗಳಿಗೆ ಮಾತ್ರ ಲೇಸನ್ನು ಬಯಸುತ್ತಾರೆ. ಬಸವಣ್ಣನವರು ಪರಧನಾಮಿಷದ ತೊರೆಯಿರೆಂದರು ಈಗಿನ ಮಂತ್ರಿ, ಮಹಾಮಂತ್ರಿ ಗಳನೇಕರು ಪರಧನಾಮಿಷಕ್ಕೆ ಬಲಿಯಾಗಿ ಸಿಕ್ಕು ತೊಳಲಾಡುತ್ತಿದ್ದಾರೆ. ಬಸವಣ್ಣನವರು ಇವನಾರವನೆನ್ನದೇ ಈತ ನಮ್ಮವ ಎಂದು ನುಡಿದರು. ಈಗಿನ ಮಂತ್ರಿ, ಮಹಾಮಂತ್ರಿ ಗಳನೇಕರು, ಸ್ವಾರ್ಥ, ಪಕ್ಷಪಾತ, ಸ್ವಜನಪಕ್ಷಪಾತ ಮಾಡುತ್ತಾ ಸಿಕ್ಕಿ ಹಾಕಿಕೊಂಡು ಒದ್ದಾಡುತ್ತಿದ್ದಾರೆ. ಇದೊಂದು ವಿಧಿಯ ವಿಪರ್ಯಾಸ.

ರಾಷ್ಟ್ರದಲ್ಲಿ ಮಹಾಮಂತ್ರಿ ಬಸವೇಶ್ವರ, ಅಂಬೇಡ್ಕರ್, ಲಾಲ್ ಬಹಾದ್ದೂರ್ ಶಾಸ್ತ್ರಿ, ಕಾಮರಾಜ್ ನಾಡರ್ ಮೊದಲಾದ ಆದರ್ಶ ಪುರುಷರ ಆದರ್ಶಗಳು ಪ್ರಕಾಶಮಾನವಾಗಿರುವಾಗ ಅವರ ಜಯಂತಿಯನ್ನು ಭಾರತೀಯರೆಲ್ಲರೂ ಆಚರಿಸುತ್ತಿರುವಾಗ ತೋರಿಕೆಯ ಆಡಂಬರದ ಮನೋರಂಜನೆಯ ಕಾರ್ಯಕ್ರಮವೆಂದು ತಿಳಿಯದೆ ಅವರ ಆದರ್ಶಗಳನ್ನು ಜ್ಞಾಪಿಸಿಕೊಂಡು ದಿನನಿತ್ಯ ಆಚರಣೆಯಲ್ಲಿ ಅವುಗಳನ್ನು ಅಳವಡಿಸಿಕೊಂಡು ನುಡಿದು ನುಡಿದಂತೆ ನಡೆದರೆ ಆಡಳಿತ ಚುಕ್ಕಾಣಿ ಹಿಡಿದವರಾದ ಮಂತ್ರಿ, ಮಹಾಮಂತ್ರಿ ಗಳು ಹಾಗೂ ಇತರ ಆಡಳಿತಗಾರರೆಲ್ಲರಿಗೂ ಒಳ್ಳೆಯದು ಹಾಗೂ ಜನತೆಗೂ ಒಳ್ಳೆಯದು. ಬಸವೇಶ್ವರರ ತತ್ವಗಳನ್ನು ಆಚರಣೆಯಲ್ಲಿ ತರಲು ಅವರು 12ನೇ ಶತಮಾನದಲ್ಲಿ ಅನುಭವ ಮಂಟಪ ಸ್ಥಾಪಿಸಿ ಪ್ರಾರಂಭಿಸಿದ ಜಂಗಮ ಸಮೂಹದ ಮಠದ ಆಚಾರ್ಯರು ಅನೇಕರು

ಉತ್ತಮ ಉತ್ತರಾಧಿಕಾರಿಗಳಾಗಿ ಬಸವತತ್ವಗಳನ್ನು ಚಾಚೂ ತಪ್ಪದೇ ಉಪದೇಶ ಅನುಷ್ಠಾನ ಮಾಡಿ ಆದರ್ಶ ಮಠಗಳ ಆಚಾರ್ಯರಾಗಿ ಅತ್ಯುತ್ತಮ ಸಮಾಜಸೇವೆಯನ್ನು ಮಾಡುತ್ತಿದ್ದಾರೆ. ಇನ್ನುಳಿದ ಕೆಲವರು ಸಹ ಬಸವತತ್ವಗಳಿಗೆ ತಿಲಾಂಜಲಿಯನ್ನೀಯದೇ ಆಸೆ, ಆಡಂಬರಗಳನ್ನು ಬಿಟ್ಟು ಅವರ ಮೂಲ ಕರ್ತೃಗಳಾದ ಬಸವ ತತ್ವ ಆಚರಣೆಗೆ ಸಜ್ಜಾಗಿ, ಸಮಾಜಕ್ಕೆ ಮಾರ್ಗದರ್ಶನ, ಉಪದೇಶ, ಹಿತೋಪದೇಶ ಮಾಡಿ ಬಸವತತ್ವಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿ ಬಸವಣ್ಣನವರಂತೆ "ಎನಗಿಂತ ಕಿರಿಯರಿಲ್ಲ, ಶಿವಭಕ್ತ (ಪ್ರಜೆ)ರಿಗಿಂತ ಹಿರಿಯರಿಲ್ಲ" ಎಂಬಂತೆ ನುಡಿದು ನಡೆದುಕೊಂಡು ಸುಭದ್ರವಾದ ಸಮಾಜ ನಿರ್ಮಾಣ ಮಾಡಲು ದಾರಿದೀಪವಾದರೆ ಸಮಾಜ ಅವರಿಗೆ ಚಿರಋಣಿ.

❑

ಸರಕಾರಿ ಕಾರ್ಯಕ್ರಮ ಮತ್ತು ಶಿಷ್ಟಾಚಾರ ಪ್ರಾಧಾನ್ಯತೆ

ಹಳ್ಳಿಗಳಿಂದ ಹಿಡಿದು ರಾಷ್ಟ್ರದ ರಾಜಧಾನಿ ದಿಲ್ಲಿಯುವರೆಗೆ ಸರಕಾರಿ ಕಾರ್ಯಕ್ರಮಗಳು ಆಗಾಗ್ಗೆ ಜರಗುತ್ತಲೇ ಇವೆ. ಈ ಕಾರ್ಯಕ್ರಮಗಳಿಗೆ ಪ್ರಜಾಪ್ರತಿನಿಧಿಗಳಾದ ಪ್ರಜಾರಾಜ್ಯದ ಪ್ರತೀಕ ಅಥವಾ ಪ್ರತಿರೂಪವಾದ ವಿಧಾನಮಂಡಳದ ಸದಸ್ಯರು, ಸಂಸತ್ತಿನ ಸದಸ್ಯರು, ಮಂತ್ರಿಗಳು, ಮುಖ್ಯಮಂತ್ರಿಗಳು, ನ್ಯಾಯಾಧೀಶರು, ಪ್ರಧಾನಮಂತ್ರಿಗಳು, ಸಂಸದೀಯ ಪದಾಧಿಕಾರಿಗಳು, ರಾಜ್ಯಪಾಲರು, ಉಪರಾಷ್ಟ್ರಪತಿಗಳು ಹಾಗೂ ರಾಷ್ಟ್ರಪತಿಗಳು ಆಗಾಗ್ಗೆ ಭಾಗವಹಿಸುತ್ತಾರೆ. ಇವರೆಲ್ಲರೂ ತಮ್ಮ ತಮ್ಮ ಅಧಿಕಾರ ಪ್ರಮಾಣವಚನ ಸ್ವೀಕರಿಸುವಾಗ ಸಂವಿಧಾನಬದ್ಧವಾಗಿ ದೇವರ ಹೆಸರಿನಲ್ಲಿ ಅಂದರೆ "ಈಶ್ವರ" ಅಥವಾ ಸತ್ಯ ನಿಷ್ಠೆಯ ಹೆಸರಿನಲ್ಲಿ ಪ್ರಮಾಣ ಮಾಡುತ್ತಾರೆ. ಸಂವಿಧಾನ ಹಾಗೂ ಅಧಿನಿಯಮಬದ್ಧವಾದ ಶಿಷ್ಟಾಚಾರ ಹಾಗೂ ಪ್ರಾಧಾನ್ಯತೆ ಅಥವಾ ಶ್ರೇಷ್ಠತೆಯನ್ನು ಸರಕಾರಿ ಕಾರ್ಯಕ್ರಮವನ್ನು ಏರ್ಪಡಿಸುವಾಗ ಅನುಸರಿಸಬೇಕಾಗುತ್ತದೆ. ಈ ಶಿಷ್ಟಾಚಾರ ಹಾಗೂ ಶ್ರೇಷ್ಠತೆಯು ಬಗ್ಗೆ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಆಗಾಗ್ಗೆ ಜಿಲ್ಲಾಧಿಕಾರಿಗಳಿಗೆ, ಶಾಸಕರಿಗೆ, ಸಂಸದರಿಗೆ, ಮಂತ್ರಿ, ಮುಖ್ಯಮಂತ್ರಿ ಹೀಗೆ ಸಂಬಂಧಿಸಿದ ಪ್ರತಿಯೊಬ್ಬರಿಗೂ ಸರಕಾರೀ ಅಧಿಕೃತ ಆದೇಶಗಳನ್ನು ಕಳುಹಿಸುತ್ತಲೇ ಇದ್ದಾರೆ. ಆದರೆ ಈ ಎಲ್ಲ ಆದೇಶಗಳನ್ನು ಗಾಳಿಗೆ ತೂರಿ, ಕಸದ ಬುಟ್ಟಿಗೆ ಹಾಕಿ, ಅವುಗಳಿಗೆ ತಿಲಾಂಜಲಿಯನ್ನಿತ್ತು ಪ್ರಜಾತಂತ್ರ ವ್ಯವಸ್ಥೆಗೆ, ಪ್ರಜಾಸತ್ತೆಗೆ ಅವಹೇಳನ ಮಾಡುತ್ತಿರುವುದು ನಡೆದೇ ಇದೆ. ಇದು ಸಾಧುವಾದುದಲ್ಲ.

ಯಾವುದೇ ಮಂತ್ರಿಗಳು ಪ್ರಮಾಣ ವಚನ ಸ್ವೀಕರಿಸುವಾಗ ಸರಕಾರೀ ಕಾರ್ಯಕ್ರಮವನ್ನೆ ಏರ್ಪಡಿಸಬೇಕಾಗುತ್ತದೆ. ಆಗ ಆ ಕೇಂದ್ರ ವೇದಿಕೆಯ ಮೇಲೆ ರಾಷ್ಟ್ರಪತಿ, ಉಪರಾಷ್ಟ್ರಪತಿ, ಪ್ರಧಾನಮಂತ್ರಿಗಳಿದ್ದು ಪ್ರಮಾಣವಚನ ಸ್ವೀಕಾರ ಮಾಡಬೇಕಾದ ಮಂತ್ರಿ ವೇದಿಕೆಯ ಮೇಲೆ ಬಂದು ಪ್ರಮಾಣವಚನ ಸ್ವೀಕಾರ ಮಾಡಿ ನಿರ್ಗಮಿಸಬೇಕಾಗುತ್ತದೆ. ಅಂತೆಯೇ ರಾಜ್ಯ ವೇದಿಕೆಯ ಮೇಲೆ ರಾಜ್ಯ .... ಮುಖ್ಯಮಂತ್ರಿಗಳಿದ್ದು ಪ್ರಮಾಣವಚನ

ಸ್ವೀಕಾರ ಮಾಡಬೇಕಾದ ಮಂತ್ರಿ ಸರಕಾರದ ಮುಖ್ಯ ಕಾರ್ಯದರ್ಶಿ ಕರೆದ ಪ್ರಕಾರ ವೇದಿಕೆಗೆ ಬಂದು ಪ್ರಮಾಣವಚನ ಸ್ವೀಕಾರ ಮಾಡಿ ನಿರ್ಗಮಿಸಬೇಕಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಸರಕಾರದ ಪ್ರಾಧಾನ್ಯತಾ ಯಾದಿಯಲ್ಲಿಯ ಗಣ್ಯರು ವೇದಿಕೆಯ ಮುಂದೆ ಆಸೀನರಾಗಬೇಕಾಗುತ್ತದೆ. ಇದು ಸಂವಿಧಾನ ಹಾಗೂ ಸತ್-ಸಂಪ್ರದಾಯಬದ್ಧವಾಗಿ ನಡೆದು ಬಂದಿರುವ ಸತ್ಪರಂಪರೆ. ಇದಕ್ಕೆ ತದ್ವಿರುದ್ಧವಾಗಿ ಸಂಬಂಧವಿರದ ರಾಜಕೀಯ ಪಕ್ಷದ ಮುಖಂಡರನ್ನು ಆಯಾ ವೇದಿಕೆಗಳ ಮೇಲೆ ಕೂಡಿಸಿದ ಜೀವಂತ ಉದಾಹರಣೆ ಇವೆ. ಇಂತಹ ಅನುಚಿತ ಸನ್ನಿವೇಶಕ್ಕೆ ಆಸ್ಪದ ಮಾಡಿಕೊಟ್ಟ ರಾಜ್ಯ ಸರಕಾರದ ಮುಖ್ಯ ಕಾರ್ಯದರ್ಶಿ, ರಾಜ್ಯಪಾಲರ ಕಾರ್ಯದರ್ಶಿ, ಮುಖ್ಯಮಂತ್ರಿ, ಮುಖ್ಯಮಂತ್ರಿಗಳ ಐ.ಎ.ಎಸ್. ಶ್ರೇಣಿಯ ಕಾರ್ಯದರ್ಶಿಗಳೆಲ್ಲರ ಅಜ್ಞಾನ ಹಾಗೂ ಅವಿವೇಕತನವೆಂದು ಅನಿವಾರ್ಯವಾಗಿ ಹೇಳದೆ ಗತ್ಯಂತರವಿಲ್ಲ. ಇಂತಹ ದುರ್ಘಟನೆಗಳು ಮುಂದೆ ನಡೆಯದಂತೆ ನಡೆದು ಬಂದ ಸತ್-ಸಂಪ್ರದಾಯದಂತೆ ನಡೆದುಕೊಳ್ಳುವುದು ಇವರೆಲ್ಲರ ಕರ್ತವ್ಯವಾಗಬೇಕು.

ಸರಕಾರದ ಯಾವುದೇ ಸಾರ್ವಜನಿಕ ಕಾರ್ಯಕ್ರಮ ಅಥವಾ ಸಂಭ್ರಮವಿರಲಿ ಅಲ್ಲಿ ಸ್ಥಳೀಯ ಸಂಸದರನ್ನು ಹಾಗೂ ಶಾಸಕರನ್ನು ಅವರು ಯಾವುದೇ ರಾಜಕೀಯ ಪಕ್ಷದವರು ಇರಲಿ ಅವರನ್ನು ಪಕ್ಷಭೇದ ಮರೆತು ಕಾರ್ಯಕ್ರಮದ ಅಧ್ಯಕ್ಷರನ್ನಾಗಿಯಾಗಲೀ, ಅತಿಥಿಗಳನ್ನಾಗಿಯಾಗಲೀ, ಉದ್ಘಾಟಕರನ್ನಾಗಿಯಾಗಲೀ ಅಥವಾ ವಿಶೇಷ ಆಮಂತ್ರಿತರನ್ನಾಗಿಯಾಗಲೀ, ಆಮಂತ್ರಿಸಬೇಕೆಂದು ಹಾಗೂ ಆ ಪ್ರಕಾರ ಆಮಂತ್ರಣ ಪತ್ರಿಕೆಯಲ್ಲಿ ನಮೂದಿಸಬೇಕೆಂದು ಹಾಗೂ ಆಸನ ವ್ಯವಸ್ಥೆ ವೇದಿಕೆಯ ಮೇಲೆ ಮಾಡಬೇಕೆಂದು ಸಹ ಕೇಂದ್ರ ಹಾಗೂ ರಾಜ್ಯ ಸರಕಾರಗಳ ಆದೇಶವಿದ್ದರೂ ಇದನ್ನು ಕಡೆಗಣಿಸಿ ಸ್ಥಳೀಯ ಸಂಸದ ಹಾಗೂ ಶಾಸಕರನ್ನು ಕಡೆಗಣಿಸಿದ ಹೇಯ ಕೃತ್ಯಗಳೂ ಸಾರ್ವಜನಿಕ ಸರಕಾರಿ ಕಾರ್ಯಕ್ರಮಗಳಲ್ಲಿ ಕಂಡುಬರುತ್ತಿರುವ ಸಾಕಷ್ಟು ಉದಾಹರಣೆ ಕೂಡ ಇವೆ. ಸ್ಥಳೀಯ ಶಾಸಕರನ್ನು ಬಿಟ್ಟು ಮಾಡಿದ ಕಾರ್ಯಕ್ರಮಗಳಲ್ಲಿ ಅನಾವಶ್ಯಕ ಗೊಂದಲ, ಗಲಾಟೆ, ದೊಂಬಿಯುಂಟಾಗಿ, ಲಾಟಿಚಾರ್ಜ್, ಟೀಯರ್‌ಗ್ಯಾಸ್, ಗುಂಡಿನ ಸುರಿಮಳೆಯಾಗಿ ಅನೇಕರು ಸತ್ತ ಉದಾಹರಣೆ ಹಾಗೂ ಮಾಜಿ ಪ್ರಧಾನಿ, ಮಾಜಿ ಮುಖ್ಯಮಂತ್ರಿ ದೇವೇಗೌಡರು ಶಾಸಕರಾಗಿದ್ದಾಗ ಅವರನ್ನು ಬಿಟ್ಟು ಮಾಡಿದ ಕಾರ್ಯಕ್ರಮಗಳಲ್ಲಿ ಆದ ಜೀವಂತ ದುರ್ಘಟನೆ ಇನ್ನೂ ಹಸಿಯಾಗಿ ಸರಕಾರಿ ಆದೇಶದಲ್ಲಿ ಕೂಡ ಸೇರಿದೆ. ಇಂತಹ ದುರ್ಘಟನೆಗಳು ಆಗಾಗ್ಗೆ ನಡೆಯುತ್ತಲೇ ಇದ್ದು ಕಾರ್ಯಕ್ರಮಗಳನ್ನೇರ್ಪಡಿಸುವ ಅಧಿಕಾರಿಗಳಿಗೆ ಹಾಗೂ ಭಾಗವಹಿಸುವ ಮಂತ್ರಿಗಳಿಗೆ ಇವುಗಳ ಸ್ಮರಣೆ ಅರಿವು ಅಗತ್ಯವಿದ್ದು ಇನ್ನಾದರೂ ದುರ್ಘಟನೆಗಳಿಗೆ ಆಸ್ಪದ ಕೊಡದೆ ಇರುವುದು ಅವರ ಆದ್ಯ ಕರ್ತವ್ಯ.

ಶಾಸಕರು, ಸಂಸದರು, ಮಂತ್ರಿಗಳು, ಮುಖ್ಯಮಂತ್ರಿಗಳು, ಪ್ರಧಾನಮಂತ್ರಿಗಳು, ಯಾರೇ ಇರಲಿ ಇವರೆಲ್ಲರೂ ಯಾವುದೇ ರಾಜಕೀಯ ಪಕ್ಷಕ್ಕೆ ಸೇರಿರಲಿ ಅವರೆಲ್ಲರೂ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಅವರ ಸ್ಥಾನ ನಿಮಿತ್ತ ಎಲ್ಲಾ ಜನತೆಯ ಪಕ್ಷ ಭೇದ ರಹಿತ ಪ್ರಜಾಪ್ರತಿನಿಧಿಗಳು, ಅವರ ಘನತೆ, ಗೌರವ ಅವರ ಪೂರ್ಣ ಅವಧಿಯವರೆಗೆ ಇರಬೇಕಾದದ್ದು ಸಂವಿಧಾನಬದ್ಧವಾದುದು. ಇವರೆಲ್ಲರೂ ತಮ್ಮ ಘನತೆ, ಗೌರವ, ಪ್ರಾಧಾನ್ಯತೆಯನ್ನು ಕಾಯ್ದುಕೊಳ್ಳುವುದರ ಜತೆಗೆ ರಾಜ್ಯಪಾಲ, ಉಪರಾಷ್ಟ್ರಪತಿ, ರಾಷ್ಟ್ರಪತಿ, ಲೋಕಸಭಾಧ್ಯಕ್ಷ, ರಾಜ್ಯಸಭಾಧ್ಯಕ್ಷ, ವಿಧಾನಸಭಾಧ್ಯಕ್ಷ ಹಾಗೂ ವಿಧಾನ ಪರಿಷತ್ ಸಭಾಪತಿಗಳೆಲ್ಲರ ಘನತೆ, ಗೌರವ, ಪ್ರಾಧಾನ್ಯತೆಗಳನ್ನು ಕಾಯುವುದು ಹಾಗೂ ನೋಡಿಕೊಳ್ಳುವುದು ಸಹ ಆದ್ಯ ಕರ್ತವ್ಯ. ಆದರೆ ದುರ್ದೈವದಿಂದ ಪ್ರಾಧಾನ್ಯತೆ ಶಿಷ್ಟಾಚಾರಗಳನ್ನು ಕಡೆಗಣಿಸಿ ಸಾರ್ವಜನಿಕ ಸಮಾರಂಭಗಳಲ್ಲಿ ಆಸನದ ವ್ಯವಸ್ಥೆ ಮಾಡುವುದು, ಪತ್ರಿಕೆಗಳ ಜಾಹೀರಾತುಗಳಲ್ಲಿ ರಾಷ್ಟ್ರಪತಿಗಳ ಫೋಟೋವನ್ನು ಇತರರ ಕೆಳಗಡೆ ಹಾಕುವುದು ಶಾಸಕರ ಹಾಗೂ ಇತರ ಯಾರಾರದೋ ಫೋಟೋಗಳನ್ನು ಮೇಲೆ ಹಾಕಿ ಕೆಳಗಡೆಗೆ ಮಂತ್ರಿಗಳ ಫೋಟೋ ಹಾಕುವ ಹಾಗೂ ಆಸ್ಪದ ಕೊಡುವ ಕೆಟ್ಟ ಸಂಪ್ರದಾಯ ಪ್ರಜಾಸತ್ತೆ ಹಾಗೂ ಪ್ರಜಾತಂತ್ರ ವ್ಯವಸ್ಥೆಯ ಅವಹೇಳನವೆಂದರೆ ತಪ್ಪಾಗಲಾರದು. ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೇ ಪ್ರಭುಗಳು. ಈ ಪ್ರಭುಗಳೇ ಈ ದೇಶದ ಮಾಲೀಕರು, ಇವರೆಲ್ಲರ ಪ್ರತೀಕ ಚುನಾಯಿತ ಪ್ರತಿನಿಧಿಗಳಾದ ಸಂಸದರು, ಶಾಸಕರು, ಮಂತ್ರಿಗಳು, ಮುಖ್ಯಮಂತ್ರಿಗಳು, ಪ್ರಧಾನಮಂತ್ರಿಗಳು, ಉಪರಾಷ್ಟ್ರಪತಿಗಳು, ರಾಷ್ಟ್ರಪತಿಗಳು, ಸಂಸದೀಯ ಶಾಸಕಾಂಗದ ಅಧ್ಯಕ್ಷರು, ಅವರವರ ವೈಯಕ್ತಿಕ ಜೀವನ ಹೇಗೇ ಇರಲಿ ಇವರೆಲ್ಲರೂ ಶಿಷ್ಟಾಚಾರ ಪ್ರಾಧಾನ್ಯತೆಯ ಪಟ್ಟಿಯನ್ನು ಬೀಸೋಗೆಯಲು ಹಾಗೂ ನೀತಿಸಂಹಿತೆ ಉಲ್ಲಂಘಿಸಲು ಆಸ್ಪದ ಕೊಡದೆ ತಮ್ಮ ತಮ್ಮ ಸಾರ್ವಜನಿಕ ಸ್ಥಾನಗಳ ಶ್ರೇಷ್ಠತೆ, ಪ್ರಾಧಾನ್ಯತೆಯನ್ನು ಕಾಯ್ದುಕೊಂಡು ತಮ್ಮ ಅವಧಿಯಲ್ಲಿ ಪ್ರಜಾಸತ್ತೆಗೆ ಅಪಚಾರ, ಅವಮಾನವಾಗದಂತೆ ಎಚ್ಚರ ವಹಿಸುವುದು ಅವರೆಲ್ಲರ ಆದ್ಯ ಕರ್ತವ್ಯ.

❑

ಶಾಸಕಾಂಗಕ್ಕೆ ಕಾರ್ಯಾಂಗದ ಕರ್ತವ್ಯಚ್ಯುತಿ

ಸ್ವತಂತ್ರ್ಯ ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಭಾರತ ಸಂವಿಧಾನಬದ್ಧವಾದ ಶಾಸಕಾಂಗಗಳು ಸರ್ವಶ್ರೇಷ್ಠ, ಪರಮೋಚ್ಛ ಅಂಗಗಳು, ರಾಷ್ಟ್ರಮಟ್ಟದಲ್ಲಿ ಸಂಸತ್ತು, ರಾಜ್ಯಮಟ್ಟದಲ್ಲಿ ವಿಧಾನಮಂಡಳಗಳು, ಸಂವಿಧಾನ ಘಟಕಗಳು, ಲೋಕಸಭೆ ಹಾಗೂ ವಿಧಾನಸಭೆಗಳಲ್ಲಿ ಬಹುಸಂಖ್ಯೆ ಚುನಾಯಿತ ಪ್ರತಿನಿಧಿಗಳನ್ನು ಪಡೆದ ರಾಜಕೀಯ ಪಕ್ಷಗಳು ಅವುಗಳ ಸಭಾನಾಯಕರ ನೇತೃತ್ವದಲ್ಲಿ ಸರಕಾರವನ್ನು ರಚಿಸುತ್ತದೆ. ಈ ಸರಕಾರವೇ ಸಂವಿಧಾನಬದ್ಧ ಕಾರ್ಯಾಂಗವಾಗುತ್ತದೆ. ಈ ಕಾರ್ಯಾಂಗ ಸರಕಾರದ ಯಾವತ್ತೂ ಆದಾಯ ವೆಚ್ಚ, ಆಗು-ಹೋಗು, ಆಡಳಿತ ಅಭಿವೃದ್ಧಿ, ಹಣಕಾಸು ವಿಚಾರಗಳನ್ನು ಆಗಿಂದಾಗ್ಗೆ ತನ್ನ ದೊರೆ ಶಾಸಕಾಂಗಕ್ಕೆ ತಿಳಿಸಿ ಶಾಸಕಾಂಗದಿಂದ ಒಪ್ಪಿಗೆ ಎಚ್ಚರಿಕೆ, ಆದೇಶ ನಿರ್ದೇಶನ ಶಹಬಾಸಗಿರಿ, ಛೀಮಾರಿ ಪಡೆಯಬೇಕಾಗುತ್ತದೆ. ಶಾಸಕಾಂಗ, ಕಾರ್ಯಾಂಗದ ಸವಾರಿ ಮಾಡಬೇಕಾಗುತ್ತದೆಯೇ ಹೊರತು ಕಾರ್ಯಾಂಗ ಶಾಸಕಾಂಗದ ಸವಾರಿ ಮಾಡಲು ಬರುವುದಿಲ್ಲ. ಕಾರ್ಯಾಂಗ ಶಾಸಕಾಂಗದ ಆದೇಶದ ಪ್ರಕಾರ ಮಂಜೂರಾದ ಆಯವ್ಯಯದ ವಾಸ್ತವಿಕ ಅಂಕಿ ಸಂಖ್ಯೆ ಮಾಹಿತಿಯನ್ನು ಆಗಿಂದಾಗ್ಗೆ ತಡಮಾಡದೇ ಕೊಡಬೇಕಾಗುತ್ತದೆ. ಶಾಸಕಾಂಗದ ಕಾರ್ಯಾಲಯ, ಕಾರ್ಯಾಂಗದ ಕಾರ್ಯಾಲಯದ ಮೇಲೆ ಯಾವಾಗಲೂ ತನ್ನ ಕಣ್ಣನ್ನಿಟ್ಟು ಎಲ್ಲಾ ಮಾಹಿತಿಯನ್ನು ತರಿಸಿಕೊಳ್ಳಲೇಬೇಕಾಗುತ್ತದೆ ಹಾಗೂ ಕಾರ್ಯಾಂಗ ತನ್ನ ಕಾರ್ಯಾಲಯದ ಆ ಎಲ್ಲ ಮಾಹಿತಿಗಳನ್ನು ಕಳುಹಿಸಿಕೊಡಲೇ ಬೇಕಾಗುತ್ತದೆ. ಕಾರ್ಯಾಂಗದ ಪ್ರಮುಖರಾದ ಮಂತ್ರಿಮಂಡಲದ ಸದಸ್ಯರು ತಮ್ಮ ಇಲಾಖೆಯ ಅಧಿಕಾರಿ ಸೇವಕರನ್ನು ಹದ್ದುಬಸ್ತಿನಲ್ಲಿಟ್ಟು ಅವರಿಂದ ಪ್ರಾಮಾಣಿಕ ಸೇವೆಯನ್ನು ಪಡೆಯಲೇಬೇಕು. ಮಂತ್ರಿಮಂಡಲಕ್ಕೆ ಅಧೀನರಾದ ಇಂಡಿಯನ್ ಎಡ್ಮಿನಿಸ್ಟ್ರೇಟ್ ಸರ್ವೀಸ್ (ಐ.ಎ.ಎಸ್.) ಅಧಿಕಾರಿಗಳು ಭಾರತೀಯ ನಾಗರಿಕ ಸೇವಕರೆಂಬ ಅರಿವು ಅವರಿಗಿದ್ದು ಅಪಾರ ಅನುಭವವುಳ್ಳ ಮಂತ್ರಿಗಳ ಸೂಕ್ತ ಆದೇಶದಂತೆ ಕೆಲಸ ನಿರ್ವಹಿಸಬೇಕೆ ಹೊರತು ಅನನುಭವಿ ಮಂತ್ರಿಗಳ ಸೂಕ್ತವಲ್ಲದ ಅನುಚಿತ ಆದೇಶಕ್ಕೆ ಮಣಿಯದೆ ಅವರ ಸ್ವಾರ್ಥಪರ ತಾಳಕ್ಕೆ ತಕ್ಕಂತೆ ಕುಣಿಯದೆ, ಭ್ರಷ್ಟರಾಗದೆ, ಪಕ್ಷಪಾತಿಗಳಾಗದೆ. ಸ್ವಜನ ಪಕ್ಷಪಾತಿಗಳಾಗದೆ, ಅಧಿಕಾರ ದುರುಪಯೋಗ ಮಾಡದೆ,

ದುರಾಡಳಿತ ಮಾಡದೆ, ಪ್ರಾಮಾಣಿಕರಾಗಿ ಕೆಲಸ ನಿರ್ವಹಿಸಬೇಕು. ಅನನುಭವಿ ಮಂತ್ರಿಯಾಗಿದ್ದರೆ ಅವರಿಗೆ ಯೋಗ್ಯ ಮಾರ್ಗದರ್ಶನ ಮಾಡುವ ಶಕ್ತಿಯೂ ಇವರಲ್ಲಿರಬೇಕು. ಅಂದರೆ ಮಾತ್ರ ಆಡಳಿತ ಅಧಿಕಾರ ಸೂತ್ರ ಸರಿಯಾಗಿ ಸಾಗಬಲ್ಲುದು. ಅಧಿಕಾರಿಗಳ ತಪ್ಪಿನಿಂದಲೇ ಅಥವಾ ಮಂತ್ರಿಗಳ ತಪ್ಪಿನಿಂದಲೇ ಅಥವಾ ಅವರ ಸಾಮೂಹಿಕ ಅದಕ್ಷತೆಯಿಂದಲೇ ಸರಕಾರ ತಪ್ಪು ಹೆಜ್ಜೆಯನ್ನಿಟ್ಟಾಗ ಅವರನ್ನು ಶಾಸಕಾಂಗ ಆಗಾಗ್ಗೆ ತರಾಟೆಗೆ ತೆಗೆದುಕೊಳ್ಳಲು ಮುಂದಾಗಬೇಕಾದುದು ಅನಿವಾರ್ಯ.

ಕಾರ್ಯಾಂಗ ಶಾಸಕಾಂಗಕ್ಕೆ ಅಥವಾ ಶಾಸಕರಿಗೆ ಸರಿಯಾದ ಸತ್ಯಾಂಶವುಳ್ಳ ವಾಸ್ತವಿಕ ಅಂಕಿ ಸಂಖ್ಯೆ ಮಾಹಿತಿಯನ್ನು ಆಗಿಂದಾಗ್ಗೆ ಸಕಾಲದಲ್ಲಿ ಕೊಡಲೇಬೇಕು. ಸತ್ಯಕ್ಕೆ ದೂರವಾದ, ತಳಬುಡವಿಲ್ಲದ, ಯದ್ವಾತದ್ವಾ ಅಪೂರ್ಣವಾದ, ತಾಳಮೇಳವಿಲ್ಲದ ಅಂಕಿ-ಅಂಶ, ಸಂಖ್ಯೆ ಹಾಗೂ ಮಾಹಿತಿಗಳನ್ನು ಕೊಟ್ಟ ಜೀವಂತ ಉದಾಹರಣೆ ರಾಜ್ಯದ ವಿಧಾನಮಂಡಳದ ಅಧಿಕೃತ ಕಾರ್ಯಕಲಾಪಗಳ ವರದಿಗಳ ಮುಖಾಂತರ ಕಂಡುಬರುತ್ತಲೇ ಇವೆ. ಶಾಸಕಾಂಗಕ್ಕೆ ಆಗಾಗ್ಗೆ ಸಕಾಲದಲ್ಲಿ ಕೊಡಲೇಬೇಕಾದ ಸರಕಾರದ ವರದಿ, ಮಾಹಿತಿ, ಸಂಘ-ಸಂಸ್ಥೆ ನಿಗಮ ಇಲಾಖೆಗಳ ವರದಿ ಹಾಗೂ ಚಿತ್ರಗಳು ಸಹ ಕೊಡದೆ ಹಾಗೂ ಕೊಟ್ಟರೆ ಅಪೂರ್ಣ ಹಾಗೂ ಸುಸ್ಪಷ್ಟವಲ್ಲದ ವರದಿಗಳನ್ನು ಕೊಡುವುದು ಸರಕಾರಕ್ಕೆ ಸರಿಯಲ್ಲ. ಪ್ರತಿವರ್ಷ ಮೇ, ಜೂನ್ ನಂತರ ಕೊಟ್ಟ ಅನೇಕ ಸರಕಾರದ ವರದಿಗಳು ಹಿಂದಿನ ವರ್ಷ ಮಾರ್ಚ್ 3ಕ್ಕೆ ಮಾಹಿತಿ ಅಂಕಿ ಸಂಖ್ಯೆ ಕೊಡದೆ ಹಿಂದಿನ ವರ್ಷದ ನವೆಂಬರ್ ಅಥವಾ ಡಿಸೆಂಬರ್ ಅಥವಾ ಜನವರಿ ಅಂತ್ಯಕ್ಕೆ ಇರುವ ಅಪೂರ್ಣ ವರ್ಷದ ಮಾಹಿತಿಯನ್ನು ಕೊಟ್ಟು ಶಾಸಕಾಂಗ ಹಾಗೂ ಶಾಸಕರನ್ನೂ ವಂಚಿಸುವುದು ಹಾಗೂ ಅವರನ್ನು ಅಂಧಕಾರದಲ್ಲಿ ಕೂಡ್ರಿಸುವುದು (keeping in darkness) ಇಲಾಖಾ ಮುಖ್ಯಸ್ಥರಾದ ಐ.ಎ.ಎಸ್. ಅಧಿಕಾರಿಗಳಿಗೆ ತಕ್ಕದ್ದಲ್ಲ. ಅವರು ಇನ್ನು ಮುಂದಾದರೂ ತಮ್ಮ ಹೊಣೆಯರಿತು ಆಗಿಂದಾಗ್ಗೆ ಸಕಾಲದಲ್ಲಿ ನಿಜಾಂಶವುಳ್ಳ ಮಾಹಿತಿ ಕೊಡುವುದು ಒಳ್ಳೆಯದು.

ಬಜೆಟ್ ಮಂಡಿಸುವಾಗ ಅತಿರಂಜಿತ ಅಂಕಿ-ಸಂಖ್ಯೆಗಳನ್ನು ತೋರಿಸುವುದು. ನಂತರ ತಮಗೆ ಮನಬಲ್ಲಂತೆ ಅವುಗಳನ್ನು ಕಡಿಮೆಗೊಳಿಸುವುದು. ನಂತರ ತಮಗೆ ತೋಚಿದಂತೆ ಕಡಿಮೆ ವೆಚ್ಚ ಮಾಡಿಸಿ ಶಾಸಕಾಂಗಕ್ಕೆ ತೋರಿಕೆ ಅಂಕಿ-ಸಂಖ್ಯೆಗಳನ್ನು ತೋರಿಸಿ ನಿಜಾಂಶವನ್ನು ಬಚ್ಚಿಡುವುದು ಸರಿಯಲ್ಲ. ಸರಕಾರದ ಸುತ್ತೋಲೆ, ಆಜ್ಞೆ, ಮೆಮೊರಂಡಂ, ಲಘು ಪ್ರಕಟಣೆ, ಇತ್ಯಾದಿ ಆದೇಶ ಅಧಿಕೃತ ದಾಖಲೆಗಳನ್ನು ರಾಜ್ಯದ ಎಲ್ಲಾ ಶಾಸಕರಿಗೆ ಸರಕಾರವು ಪೂರೈಸಬೇಕೆಂದಿದ್ದರೂ ಅವುಗಳನ್ನು ಶಾಸಕರಿಗೆ ಒದಗಿಸದೆ ಶಾಸಕಾಂಗ ಹಾಗೂ ಶಾಸಕರನ್ನು ವಂಚಿಸಲಾಗುತ್ತಿದೆ. ಪ್ರತಿಯೊಬ್ಬ ಶಾಸಕರು ತಮ್ಮ ತಮ್ಮ ಕ್ಷೇತ್ರದ ಅಭಿವೃದ್ಧಿ ಕಾರ್ಯಗಳಿಗೆ ನಿಗದಿತ ಮೊತ್ತ ವಾಸ್ತವಿಕವಾಗಿ ವೆಚ್ಚವಾಗುತ್ತದೆಯೋ ಇಲ್ಲವೋ ಎಂಬ ಬಗ್ಗೆ ತಮ್ಮ ಕ್ಷೇತ್ರದ ವಿವಿಧ ಅಭಿವೃದ್ಧಿ ಕಾಮಗಾರಿ ಕೆಲಸಗಳು ಸಕಾಲದಲ್ಲಿ ಅಂಗಿದಾಗ್ಗೆ

ಆಗುತ್ತದೆಯೋ ಇಲ್ಲವೋ ಎಂಬ ಬಗ್ಗೆ, ಚಾಲೂ ಇರುವ ಕಾಮಗಾರಿಗಳು ಕಳಪೆ ಕಾಮಗಾರಿಗಳಾಗದೆ ಉತ್ತಮ ಗುಣಮಟ್ಟದ ಕಾಮಗಾರಿಗಳಾಗಬೇಕೆಂಬ ಬಗ್ಗೆ, ಅಧಿಕಾರಿಗಳು ಅಭಿವೃದ್ಧಿ ಕಾಮಗಾರಿಗಳಲ್ಲಿ ಆಸಕ್ತಿ ವಹಿಸಿ ಕಾರ್ಯ ನಿರ್ವಹಿಸುತ್ತಾರೋ ಇಲ್ಲವೋ ಎಂಬ ಬಗ್ಗೆ ವೀಕ್ಷಿಸಲು, ತಾಲ್ಲೂಕು ವ ಕ್ಷೇತ್ರಾದ್ಯಂತ ಸಂಚರಿಸಲು ಪ್ರತಿ ತಿಂಗಳಲ್ಲಿ ಹತ್ತು ದಿನದ ತಾಲ್ಲೂಕಿನ ಬಿ.ಡಿ.ಓ. ಅವರು ಶಾಸಕರಿಗೆ ವಾಹನ (ಜೀಪ್) ವ್ಯವಸ್ಥೆ ಮಾಡಬೇಕು ಹಾಗೂ ಅವರೊಂದಿಗೆ ಸಂಚಾರ ಮಾಡಬೇಕೆಂದು ಸರಕಾರಿ ಆಜ್ಞೆ ಅಸ್ತಿತ್ವದಲ್ಲಿದ್ದರೂ ಈ ಅತ್ಯುತ್ತಮ ಸಾರ್ವಜನಿಕ ಹಿತದೃಷ್ಟಿಯ ವ್ಯವಸ್ಥೆಯನ್ನು ಸದುಪಯೋಗ ಮಾಡುವಲ್ಲಿ ಅಧಿಕಾರಿಗಳು ಕರ್ತವ್ಯಚ್ಯುತಿ ಗೈಯುತ್ತಿರುವುದು ಗ್ರಾಮಾಭಿವೃದ್ಧಿ ವಿವಿಧ ಕಾಮಗಾರಿಗಳು ಕುಂಠಿತವಾಗಲಿಕ್ಕೆ ಹಾಗೂ ವಿಫಲವಾಗುತ್ತಿರುವುದಕ್ಕೆ ಕಾರಣವಾಗಿರುವುದು ಸುಸ್ಪಷ್ಟವಿದೆ. ಅನೇಕ ಶಾಸಕರಿಗೆ, ಪಂಚಾಯತ್ ಪ್ರತಿನಿಧಿಗಳಿಗೆ ಸಕಾಲದಲ್ಲಿ ಸರಿಯಾದ ಮಾಹಿತಿ, ಆಯ-ವ್ಯಯದ ಅಂಕಿ-ಸಂಖ್ಯೆ, ಆಯವ್ಯಯದ ವಾಸ್ತಕವಿಕ ಚಿತ್ರ ಇತ್ಯಾದಿ ಅವಶ್ಯಕ ಮಾಹಿತಿಗಳನ್ನು ಅಧಿಕಾರಿಗಳು ಕೊಡುತ್ತಿರುವುದಿಲ್ಲ. ಅಧಿಕಾರಿಗಳಿಗೆ ಗೊತ್ತಿರುವ ಎಲ್ಲಾ ಮಾಹಿತಿ ಅಂಕಿ-ಸಂಖ್ಯೆಗಳು ಪ್ರತಿ ತಿಂಗಳ ಪ್ರಾರಂಭಕ್ಕೆ ಹಿಂದಿನ ಪ್ರತಿ ತಿಂಗಳ ಮಾಹಿತಿ ವರದಿ ಇತ್ಯಾದಿ ವಿಷಯವನ್ನು ಎಲ್ಲ ಶಾಸಕರಿಗೆ, ಪಂಚಾಯತಿ ಪ್ರತಿನಿಧಿಗಳಿಗೆ ಸಂಬಂಧಿಸಿದ ಅಧಿಕಾರಿಗಳು ಕೊಟ್ಟು ಅವರು ಅಧ್ಯಯನ ಮಾಡಿ ತಿಳಿದುಕೊಳ್ಳಲಿಕ್ಕೆ ಹಾಗೂ ಚರ್ಚಿಸಲಿಕ್ಕೆ ಸೂಕ್ತ ವ್ಯವಸ್ಥೆ ಮಾಡುವುದು ಅಗತ್ಯವಾಗಿದೆ. ಸಧ್ಯದ ಪರಿಸ್ಥಿತಿಯಲ್ಲಿ ಕಾರ್ಯಾಂಗವೇ ಶಾಸಕಾಂಗವನ್ನು ಸವಾರಿ ಮಾಡುತ್ತಿರುವುದನ್ನು ತಪ್ಪಿಸಿಕೊಂಡು, ಶಾಸಕಾಂಗ, ಶಾಸಕರು, ಪಂಚಾಯತ್ ಪ್ರತಿನಿಧಿಗಳು ಎಚ್ಚರಗೊಂಡು, ಸರಕಾರ, ಪಂಚಾಯತಿಗಳನ್ನು ಹಾಗೂ ಅಧಿಕಾರಿಗಳನ್ನು ಸವಾರಿ ಮಾಡಿ ರಾಜ್ಯದ ನಿಗದಿತ ಅಭಿವೃದ್ಧಿ ನೂರಕ್ಕೆ ನೂರರಷ್ಟು ಸಾಧಿಸಿದರೆ ಮಾತ್ರ ಸ್ವತಂತ್ರ್ಯ ಭಾರತದಲ್ಲಿಯ ಪ್ರಜಾರಾಜ್ಯ ಪಂಚಾಯತ್ ರಾಜ್ ಯಶಸ್ವಿಯಾಗಿ ರಾಜ್ಯದ ಹಾಗೂ ಪ್ರಜೆಗಳ ಸರ್ವಾಂಗೀಣ ಅಭಿವೃದ್ಧಿಯಾಗಬಲ್ಲುದು.

❑

ಜೆ.ಎಚ್. ಪಟೇಲರಿಗೆ ಒಂದು ಪತ್ರ

ಮಹಾಶಯರೇ,

ವಿಷಯ : ರಾಜ್ಯದ ಶಾಸಕರಿಗೆ ಹಾಗೂ ಜಿಲ್ಲಾ ಪಂಚಾಯತಿ ಸದಸ್ಯರಿಗೆ ಪ್ರತಿತಿಂಗಳ ಎಂ.ಎಂ.ಆರ್. ಪತ್ರಿಕೆ ಕೊಡುವುದು ಹಾಗೂ ಅಭಿವೃದ್ಧಿ ಅನುಷ್ಠಾನ ಗೊಳಿಸದ ಆಡಳಿತ ಅಧಿಕಾರಿಗಳ ಮೇಲೆ ಕಟ್ಟುನಿಟ್ಟಾದ ಶಿಸ್ತಿನ ಕ್ರಮ ತೆಗೆದುಕೊಳ್ಳುವುದು

ತಮಗೆ ಗೊತ್ತಿರುವ ಹಾಗೆ ಯೋಜನಾ ಇಲಾಖೆ ರಾಜ್ಯದ ಅಭಿವೃದ್ಧಿ ವ ಪ್ರಗತಿಗಾಗಿ ಉತ್ತಮ ಹಾಗೂ ಜನಪರವಾದ ಯೋಜನೆಗಳನ್ನು ನಿರೂಪಿಸಿ ಅವುಗಳೆಲ್ಲಾ ಅನುಷ್ಠಾನಗೊಳಿಸಲಿಕ್ಕೆ ಅನೇಕ ಮಾರ್ಗಸೂಚಿಗಳನ್ನು ಕೊಡುತ್ತಲೇ ಇದೆ. ಕೇಂದ್ರ ಹಾಗೂ ರಾಜ್ಯ ಸರಕಾರಗಳು ಸಹ ಪ್ರತಿ ವರ್ಷ ಅನೇಕ ಯೋಜನೆಗಳಿಗೆ ಆಯವ್ಯಯಗಳಲ್ಲಿ ಸಾಧ್ಯವಾದಷ್ಟು ಹಣವನ್ನು ನಿಗದಿಪಡಿಸಿ, ಸಂಪತ್ತು ವ ಶಾಸನ ಸಭೆಯಲ್ಲಿ ಮಂಜೂರಿ ಪಡೆದು ಆ ಪ್ರಕಾರ ಹಣವನ್ನು ಪ್ರತಿ ತಿಂಗಳು ಬಿಡುಗಡೆ ಮಾಡಲೇಬೇಕಾಗುತ್ತದೆ. ರಾಜ್ಯದಲ್ಲಿ ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಪ್ರಗತಿಯಾಗಲೇಬೇಕು. ಈ ಬಗ್ಗೆ ಸಹ ರಾಜ್ಯ ವಿಧಾನಮಂಡಲದ ಅಧಿವೇಶನದಲ್ಲಿ ಯಾವ್ಯಾವ ಯೋಜನೆಗಳಿಗೆ ಯಾವ್ಯಾವ ಜಿಲ್ಲೆಗೆ ಎಷ್ಟೆಷ್ಟು ಹಣ ಯೋಜನೆ ಹಾಗೂ ಯೋಜನೇತರ ಮೊತ್ತವೆಂಬುದನ್ನು ಶಾಸಕಾಂಗ ವ ಶಾಸಕರಿಗೆ ತಿಳಿಸಿ ಮಂಜೂರಿ ಪಡೆಯಲಾಗುತ್ತದೆ. ಮಂಜೂರಿ ಪಡೆದ ವ ನಿಗದಿಪಡಿಸಿದ ಹಣ ಆಗಾಗ್ಗೆ ಪ್ರತಿ ತಿಂಗಳು ವೆಚ್ಚ ಮಾಡಿ ಇಡೀ ವರ್ಷದ ಕೊನೆಗೆ ನಿಗದಿತ ಸಂಪೂರ್ಣ ಮೊತ್ತವನ್ನು ವೆಚ್ಚ ಮಾಡಿ ಉದ್ದೇಶಿತ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಬೇಕಾಗುತ್ತದೆ. ಅನುಷ್ಠಾನಗೊಳಿಸುವಲ್ಲಿ, ನಿಗದಿತ ಹಣವನ್ನು

ಕರ್ನಾಟಕ ವಿಧಾನ ಸಭಾ ಮಾಜಿ ಅಧ್ಯಕ್ಷ ಶ್ರೀ ಬಿ.ಬಿ. ಬಣಕಾರ ಬಿ.ಎ., ಎಲ್.ಎಲ್.ಬಿ., ಅಡ್ವೊಕೇಟ್ ಅವರು ಆಗಿನ ಮುಖ್ಯಮಂತ್ರಿ ಶ್ರೀ ಜೆ.ಹೆಚ್ ಪಟೇಲರಿಗೆ ದಿನಾಂಕ 13.06.1997 ರಂದು ಹಿರೇಕೆರೂರದಿಂದ ಬರೆದ ಪತ್ರ

ಸಂಪೂರ್ಣವಾಗಿ ವೆಚ್ಚಮಾಡುವಲ್ಲಿ ವೆಚ್ಚ ಮಾಡಿದ ಹಣವೆಷ್ಟು, ಯಾವ್ಯಾವ ಇಲಾಖೆಗೆ ಎಷ್ಟೆಷ್ಟು ವೆಚ್ಚ ಮಾಡಿದೆ, ವೆಚ್ಚ ಮಾಡುವಲ್ಲಿ ವೈಫಲ್ಯದ ಬಗ್ಗೆ, ಪ್ರತಿ ತಿಂಗಳು ಜಿಲ್ಲಾ ಪಂಚಾಯತಿಯ ಅಧಿಕಾರಿಗಳು ಹಾಗೂ ರಾಜ್ಯಮಟ್ಟದ ಅಧಿಕಾರಿಗಳು ರಾಜ್ಯದ ಶಾಸಕರಿಗೆ ಹಾಗೂ ಆಯಾ ಜಿಲ್ಲಾ ಪಂಚಾಯತಿ ಸದಸ್ಯರಿಗೆ ನಿರ್ದಿಷ್ಟ ನಮೂನೆಯಲ್ಲಿ ಪ್ರತಿ ತಿಂಗಳು ತಯಾರಿಸಿ ಜಿಲ್ಲೆಯಿಂದ ರಾಜ್ಯಕ್ಕೆ, ರಾಜ್ಯದಿಂದ ಕೇಂದ್ರಕ್ಕೆ ಕಳುಹಿಸುವ ಎಂ.ಎಂ.ಆರ್. ಪತ್ರಿಕೆಗಳನ್ನು ಕೊಡದೆ ಚುನಾಯಿತ ಜಿಲ್ಲಾ ಪಂಚಾಯತ್ ಸದಸ್ಯರನ್ನು ಹಾಗೂ ಶಾಸಕರನ್ನು ಅಂಧಕಾರದಲ್ಲಿಟ್ಟು ಅವರಿಗೆ ಯಾವುದೇ ನಿಜಾಂಶ ಹಾಗೂ ಪ್ರಗತಿಯ ಸಾಧನೆ-ಬಾಧನೆ ಸಿಗದಂತೆ ಮಾಡಲಾಗುತ್ತಿದೆ. ಇದು ಪ್ರಜಾಪ್ರಭುತ್ವದಲ್ಲಿ ಪ್ರಜಾಪ್ರತಿನಿಧಿಗಳಿಗೆ ಬಗೆಯುತ್ತಿರುವ ಅಪಚಾರ, ಅನುಭವವುಳ್ಳ ಪ್ರತಿನಿಧಿಗಳು ಕೇಳಿದರೆ ಮಾತ್ರ ಈ ಎಂ.ಎಂ.ಆರ್.ಗಳನ್ನು ಕೊಡುತ್ತಾರೆ. ಇಲ್ಲದಿದ್ದರೆ ಇಲ್ಲ. ಕೆಲವು ಉದ್ಧಟ ಜಿಲ್ಲಾ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು ಶಾಸಕರಿಂದ ಲೇಖಿ ಟಿಪ್ಪಣಿ ಪಡೆದು ಎಂ.ಎಂ.ಆರ್. ಕೊಟ್ಟ ಉದಾಹರಣೆ ಉಂಟು. ಸರಕಾರದ ಯಾವುದೇ ಅಧಿಕೃತ ಅಂಕಿ-ಸಂಖ್ಯೆಯು ಮಾಹಿತಿಯನ್ನು ಪಡೆಯುವುದು ಶಾಸಕರ ಹಕ್ಕು ಕೊಡುವುದು ಅಧಿಕಾರಿಗಳ ಕರ್ತವ್ಯ, ಈ ಬಗ್ಗೆ ಸರಕಾರಿ ಆಜ್ಞೆಗಳು ಕೂಡ ಸಾಕಷ್ಟು ಇವೆ.

1996-97ರಲ್ಲಿ ರಾಜ್ಯದ ಎಲ್ಲಾ 20 ಜಿಲ್ಲೆಗಳಿಗೆ ಹಾಗೂ ಆರ್.ಡಿ.ಸಿ.ಆರ್. ಇಲಾಖೆಗೆ 1272.85 ಕೋಟಿ ಯೋಜನಾ ಮೊತ್ತವನ್ನು, 1628.55 ಕೋಟಿ ಯೋಜನೇತರ ಮೊತ್ತವನ್ನು ವಿವಿಧ ಅಭಿವೃದ್ಧಿಗಾಗಿ ನಿಗದಿಗೊಳಿಸಲಾಗಿತ್ತು. ಗ್ರಾಮೀಣ ಅಭಿವೃದ್ಧಿ ಪಂಚಾಯತ್ ರಾಜ್ಯ ಇಲಾಖೆಯು 96-97ನೇ ಸಾಲಿನ ವಾರ್ಷಿಕ ಎಂ.ಎಂ.ಆರ್. ಪ್ರಕಾರ 20 ಜಿಲ್ಲೆಗಳಿಗೆ ಹಾಗೂ ಆರ್.ಡಿ.ಪಿ.ಆರ್. ಇಲಾಖೆಗೆ ವಿವಿಧ ಅಭಿವೃದ್ಧಿಗಾಗಿ 96-97ರಲ್ಲಿ ನಿಗದಿಪಡಿಸಿದ ಮೊತ್ತ 1007.95 ಕೋಟಿ, ವಿಧಾನಸಭೆಗೆ ಬಜೆಟ್ ಅಧಿವೇಶನದಲ್ಲಿ ತಿಳಿಸಿದ ಪ್ರಕಾರ ನಿಗದಿತ ಬಜೆಟ್ ಮೊತ್ತ 1272.85 ಕೋಟಿ, ನಂತರ ಸರಕಾರ ನಿಗದಿಪಡಿಸಿದ ಮೊತ್ತ 1007.95 ಕೋಟಿ ಹಣ, ಹೀಗೆ ಮೊಟಕು ವ ಕಡಿಮೆಗೊಳಿಸಿದ ಮೊತ್ತ 264.90 ಕೋಟಿ, ಗ್ರಾಮೀಣ ಅಭಿವೃದ್ಧಿಗಾಗಿ ಈ ಹಿಂದೇಟು ಏಕೆ? ತಾ. 1-4-96ಕ್ಕೆ ಹಿಂದಿನ 95-96ನೇ ವರ್ಷದಲ್ಲಿ ವೆಚ್ಚಮಾಡದೆ ಉಳಿದ ಶಿಲ್ಕು ಮೊತ್ತ 176.26 ಕೋಟಿ, ಹೀಗೆ 96-97ಕ್ಕೆ ನಿಗದಿ ಮಾಡಿದ ಲಭ್ಯ ಮೊತ್ತ ಒಟ್ಟು 1184.20 ಕೋಟಿ, ಲಭ್ಯವಿದ್ದ ಈ 1184.20 ಕೋಟಿ ಮೊತ್ತದಲ್ಲಿ 1-4-96ರಿಂದ 31-3-97ರ ಅವಧಿಯಲ್ಲಿ ಎಲ್ಲಾ 20 ಜಿ.ಪಂ. ವ ಇಲಾಖೆ ವೆಚ್ಚ ಮಾಡಿದ ಮೊತ್ತ 867.97 ಕೋಟಿ, ವೆಚ್ಚ ಮಾಡದೆ 31-3-97ಕ್ಕೆ ಉಳಿಸಿದ ಮೊತ್ತ 316.24 ಕೋಟಿ, ವೆಚ್ಚ ಮಾಡಿದ ಇಡೀ ವರ್ಷದ 867.97 ಕೋಟಿ ಮೊತ್ತದಲ್ಲಿ ವರ್ಷದ ಹನ್ನೊಂದು ತಿಂಗಳಲ್ಲಿ 631.61 ಕೋಟಿ, ಕೊನೆಯ ಮಾರ್ಚ್ ತಿಂಗಳಲ್ಲಿ 236.36 ಕೋಟಿ ಹಣ ಮೊತ್ತವನ್ನು ವೆಚ್ಚ ಮಾಡಲಾಗಿದೆ. ಇದು ರಾಜ್ಯದ ಕಥೆ.

ಧಾರವಾಡ ಜಿಲ್ಲೆ, ಇದು ನನ್ನ ಸ್ವಂತ ಜಿಲ್ಲೆ. ವಿಧಾನಸಭೆಯಲ್ಲಿ ಪ್ರಕಟಿಸಿದ ಪ್ರಕಾರ 96-97ರ ವರ್ಷಕ್ಕಾಗಿ ನಿಗದಿಪಡಿಸಿದ ಯೋಜನಾ ಮೊತ್ತ 84.33 ಕೋಟಿ ಯೋಜನಾ ಮೊತ್ತ. 126.74 ಕೋಟಿ ಹಣ ಯೋಜನೇತರ ಮೊತ್ತ ಆರ್.ಡಿ.ಪಿ. ಇಲಾಖೆಯ ಪ್ರಕಾರ ಈ ಧಾರವಾಡ ಜಿಲ್ಲೆಗೆ, 96-97ಕ್ಕೆ ನಿಗದಿಪಡಿಸಿದ ಮೊತ್ತ 62.38 ಕೋಟಿ, ಬಜೆಟ್ ಅಧಿವೇಶನದಲ್ಲಿ ಧಾರವಾಡ ಜಿಲ್ಲೆಯ ನಿಗದಿತ ಮೊತ್ತ 84.33 ಕೋಟಿ, ನಂತರ ಇಲಾಖೆ ನಿಗದಿ ಮಾಡಿದ ಮೊತ್ತ 62.38 ಕೋಟಿ, ಹೀಗೆ 21.95 ಕೋಟಿ ಹಣದ ಮೊತ್ತವನ್ನು ಕಡಿಮೆಗೊಳಿಸಿರುವುದು ಏಕೆ? ಹಿಂದಿನ ವರ್ಷ 95-96ರಲ್ಲಿ ವೆಚ್ಚವಾಗದೆ 1-4-96ಕ್ಕೆ ಶಿಲ್ಕು ಉಳಿದ ಮೊತ್ತ 14.06 ಕೋಟಿ, ಹೀಗೆ 96-97ಕ್ಕೆ ಒಟ್ಟು ನಿಗದಿತ ಮೊತ್ತ 76.43 ಕೋಟಿ, ಲಭ್ಯವಿದ್ದ ಈ 76.43 ಕೋಟಿ ಮೊತ್ತದಲ್ಲಿ 1-4-96ರಿಂದ 31-3-97ರವರೆಗಿನ ಅವಧಿಯಲ್ಲಿ ವೆಚ್ಚಮಾಡಿರುವ ಮೊತ್ತ 56.46 ಕೋಟಿ, ವೆಚ್ಚಮಾಡದೆ 31-3-97ಕ್ಕೆ ಶಿಲ್ಕು ಉಳಿಸಿದ ಮೊತ್ತ 19.98 ಕೋಟಿ ಹಣ. ಇದು ರಾಜ್ಯದ ಸರಕಾರದ ಪ್ರಕಟಣೆ. ಇದಕ್ಕೆ ವ್ಯತಿರಿಕ್ತವಾಗಿ ಧಾರವಾಡ ಜಿಲ್ಲಾ ಪಂಚಾಯತ್ ಪ್ರಕಟಣೆ ಪ್ರಕಾರ ಜಿಲ್ಲೆಗೆ ನಿಗದಿಪಡಿಸಿದ ವಾರ್ಷಿಕ ಗುರಿ ಮೊತ್ತ 84.33 ಕೋಟಿ, ಈ ಮೊತ್ತದಲ್ಲಿ 1-4-96ರಿಂದ 31-3-97ರವರೆಗೆ 27 ಇಲಾಖೆಗಳಲ್ಲಿ ವೆಚ್ಚ ಮಾಡಿದ ಮೊತ್ತ 71.65 ಕೋಟಿ. ವೆಚ್ಚ ಮಾಡದೆ 31-3-97ಕ್ಕೆ ಶಿಲ್ಕು ಉಳಿಸಿದ ಮೊತ್ತ 12.69 ಕೋಟಿ. ವೆಚ್ಚ ಮಾಡಿದ ಇಡೀ ವರ್ಷದ 71.65 ಕೋಟಿ ಮೊತ್ತದಲ್ಲಿ ವರ್ಷದ ಹನ್ನೊಂದು ತಿಂಗಳಲ್ಲಿ 50.57 ಕೋಟಿ, ಕೊನೆಯ ಮಾರ್ಚ್ ತಿಂಗಳಲ್ಲಿ 21.08 ಕೋಟಿ ಹಣ ವೆಚ್ಚ ಮಾಡಲಾಗಿದೆ. ಧಾರವಾಡ ಜಿ.ಪ. ಪ್ರಕಾರ, 95-96ರಲ್ಲಿ ವೆಚ್ಚ ಮಾಡದೆ ಉಳಿಸಿದ ಮೊತ್ತ 13-81 ಕೋಟಿ. ಮೊತ್ತ ಶಿಲ್ಕಿನ ಬಗ್ಗೆ ಯಾವುದೇ ವಿವರಣೆಯೇ ಇಲ್ಲ. ಇದು ಈ ಜಿಲ್ಲೆಯ ವ್ಯವಸ್ಥೆ. ಈ ವ್ಯತಿರಿಕ್ತತೆ ನಿಮ್ಮ ಸ್ವಂತ ಜಿಲ್ಲೆಯಿಂದ ಹಿಡಿದು ಎಲ್ಲಾ ಜಿಲ್ಲೆಗಳಲ್ಲಿಯೂ ಸಂಭವಿಸಿದೆ.

ರಾಜ್ಯದ ಹಾಗೂ ಜಿಲ್ಲೆಯ ಎಂ.ಎಂ.ಆರ್. ಪತ್ರಿಕೆಗಳನ್ನು ಕೂಲಂಕುಷವಾಗಿ ನೋಡಿದರೆ ತಾಳಮೇಳವಿಲ್ಲದ ಯದ್ವಾತದ್ವಾ ಅಂಕಿ-ಸಂಖ್ಯೆ, ಜನಪರ ಯೋಜನೆಗಳಿಗೆ ನಿಗದಿತ ಮೊತ್ತವನ್ನು ವೆಚ್ಚಮಾಡದೆ ಪ್ರಗತಿ ಕುಂಠಿತಗೊಳಿಸಿರುವುದು, ಗ್ರಾಮೀಣ ಅಭಿವೃದ್ಧಿ ಅನುಷ್ಠಾನದ ಬಗ್ಗೆ ಅನುಷ್ಠಾನ ಅಧಿಕಾರಿಗಳು ಎದ್ದುಕಾಣುವ ಕರ್ತವ್ಯಚ್ಯುತಿ ಗೈಯುತ್ತಿರುವುದು ಎದ್ದು ಕಾಣುತ್ತದೆ.

ರಾಜ್ಯದ ಬಜೆಟ್ ಮೊತ್ತದ ಆಯವ್ಯಯದ ಅಂಕಿ-ಸಂಖ್ಯೆ ವಿವರಗಳನ್ನು ಪಡೆಯುವುದು ಜನತಾ ಪ್ರತಿನಿಧಿಗಳಾದ ಶಾಸಕರ ಹಕ್ಕು ಅದನ್ನು ಪೂರೈಸುವುದು ಸರಕಾರದ ಕರ್ತವ್ಯ. ಅಂತೆಯೇ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ, ಗ್ರಾಮ ಪಂಚಾಯತಿಗಳ ಆಯವ್ಯಯದ ಅಂಕಿ-ಸಂಖ್ಯೆ ವಿವರಗಳನ್ನು ಪ್ರತಿ ತಿಂಗಳು ಪಡೆಯುವುದು ಆಯಾ ಪಂಚಾಯತಿ ಸದಸ್ಯರಾದ ಚುನಾಯಿತರ ಹಕ್ಕು ಪ್ರತಿನಿಧಿಗಳಿಂದ ಹಾಗೂ

ಅವರವರ ಕಾರ್ಯಾಲಯಗಳಿಂದ ಅವರು ಪಡೆದ ಯಾವತ್ತೂ ಸಾರ್ವಜನಿಕ ಮಾಹಿತಿಯನ್ನು ಪಡೆಯುವುದು ಆಯಾ ಪ್ರತಿನಿಧಿಗಳ ಮತದಾರ ಮಾಲೀಕರ ಹಕ್ಕು ಹಾಗೂ ಅವುಗಳನ್ನು ಪೂರೈಸುವುದು ಪ್ರತಿನಿಧಿಗಳ ಕರ್ತವ್ಯ. ಈ ಹಿನ್ನೆಲೆಯಲ್ಲಿ ಎಂ.ಎಂ.ಆರ್. ಪತ್ರಿಕೆ ಹಾಗೂ ಇತರ ಎಲ್ಲಾ ಸಾರ್ವಜನಿಕ ಹಿತಾಸಕ್ತಿಯ ಮಾಹಿತಿಯನ್ನು ಸಂಬಂಧಿಸಿದ ಶಾಸಕರಿಗೆ ಹಾಗೂ ಪಂಚಾಯತ್ ಸದಸ್ಯರಿಗೆ ಪ್ರತಿ ತಿಂಗಳು ಪೂರೈಸಲು ಹಾಗೂ ವೈಫಲ್ಯಕ್ಕೆ ಕಾರಣರಾದ ಅನುಷ್ಠಾನ ಹಾಗೂ ಆಡಳಿತ ಅಧಿಕಾರಿಗಳ ಮೇಲೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಲು ಸಂಬಂಧಿಸಿದವರಿಗೆ ಕಟ್ಟುನಿಟ್ಟಾದ ಸಾರ್ವಜನಿಕ ಹಿತಾಸಕ್ತಿಯ ಆದೇಶ ನೀಡಬೇಕಾಗಿ ಆಗ್ರಹಿಸುವೆ.

❑

ಗ್ರಾಮ ನೌಕರರ ಬಗ್ಗೆ ಸರಕಾರದ ಪಕ್ಷಪಾತ

ರಾಜ್ಯದಲ್ಲಿ ಸುಮಾರು 30 ಸಾವಿರ ಹಳ್ಳಿಗಳಲ್ಲಿ ಗ್ರಾಮ ಸೇವಾ ಸಹಕಾರಿ ಪತ್ತಿನ ಸಂಘಗಳ ನೌಕರ ಸಿಬ್ಬಂದಿ, ಗ್ರಾಮಾಂತರ ಹಾಲು ಉತ್ಪಾದಕರ ಸಹಕಾರಿ ಸಂಘಗಳ ನೌಕರ ಸಿಬ್ಬಂದಿ, ಅಂಗನವಾಡಿ ಕಾರ್ಯಕರ್ತೆ ಶಿಕ್ಷಕಿಯವರು ಹಾಗೂ ಆಯಿ-ದಾಯಿಗಳು, ಗ್ರಾಮ ಸಹಾಯಕ (ತಳವಾರ ತೋಟಿ ವಾಲಿಕಾರ ಇತ್ಯಾದಿ)ರು, ನೇಕಾರ ಮೊದಲಾದ ಸಂಘಗಳ ನೌಕರರು ಇವರೆಲ್ಲರ ಸೇವೆ ಸಾರ್ಥಕವಾದುದು. ಗ್ರಾಮ ಸಹಾಯಕರ ಸೇವೆ ಗ್ರಾಮದ ಜನತೆಗೆ, ವಿವಿಧ ಸರಕಾರಿ ಅಧಿಕಾರಿಗಳಿಗೆ ಅತೀ ಅಮೂಲ್ಯವಾದುದು. ಪತ್ತಿನ ಸಹಕಾರಿ ಸಂಘಗಳ ನೌಕರರ ಸೇವೆ ಸಾಲ ಕೊಡುವಲ್ಲಿ ಸಾಲ ವಸೂಲಿ ಮಾಡುವಲ್ಲಿ, ಗೊಬ್ಬರ, ಬೀಜ, ಕ್ರಿಮಿನಾಶಕ, ಸಕ್ಕರೆ, ಸೀಮೆಎಣ್ಣೆ, ಆಹಾರಧಾನ್ಯ, ಜನತಾ ಬಟ್ಟೆ ಇತ್ಯಾದಿ ಒಕ್ಕಲುತನ, ಗೃಹ ಉಪಯೋಗಿ ಜೀವನಾವಶ್ಯಕ ನಾಗರಿಕರ ವಸ್ತುಗಳನ್ನು ಯೋಗ್ಯ ಬೆಲೆಗೆ ವಿತರಣೆ ಮಾಡುವಲ್ಲಿ ಗಣನೀಯವಾಗಿದೆ. ಹಾಲು ಉತ್ಪಾದಕರ ಸಂಘಗಳ ನೌಕರರ ಸೇವೆ ಜಾನುವಾರುಗಳಿಗೆ ಉತ್ತಮ ಪಶು ಆಹಾರ ಒದಗಿಸುವಲ್ಲಿ, ಹಾಲು ಸಂಗ್ರಹ ಮಾಡುವಲ್ಲಿ, ಗ್ರಾಮದಲ್ಲಿ ಹಾಲು ಬೇಕಾದವರಿಗೆ ಹಾಲು ಪೂರೈಸಿ ಜಿಲ್ಲಾ ಹಾಲು ಸಂಗ್ರಹ ಉತ್ಪಾದಕರ ಮಂಡಳಿಗೆ ಹಾಲು ಸೀತಲೀಕರಣ ಘಟಕಗಳ ಮುಖಾಂತರ ಹಾಲು ಪೂರೈಕೆ ಮಾಡಿ ಹಣ ಪಡೆದು ಹಾಲು ಉತ್ಪಾದಕರಿಗೆ ಹಣ ಬಟವಾಡೆ ಮಾಡುವುದು, ಹಸು ಹಾಗೂ ಎಮ್ಮೆಗಳಿಗೆ ಕೃತಕ ಗರ್ಭಧಾರಣೆ ಮಾಡಿಸುವುದು ಇತ್ಯಾದಿ ಅನುಕೂಲಕರ ನೆರವು ನೀಡುವುದಾಗಿದೆ. ಅಂಗನವಾಡಿ ಕಾರ್ಯಕರ್ತೆ ಶಿಕ್ಷಕಿ ಹಾಗೂ ಆಯಿ-ದಾಯಿಗಳ ಸೇವೆ ಮುದ್ದು ಮಕ್ಕಳನ್ನು ಮನೆಯಿಂದ ಅಂಗನವಾಡಿಗೆ ಕರೆದುತಂದು ಅಂಗನವಾಡಿಯಲ್ಲಿ ಅವರಿಗೆ ಅಂದಚೆಂದವಾಗಿರಿಸುವುದು, ಆಟ-ನೋಟಗಳನ್ನು ಕಲಿಸಿ, ನಕ್ಕು-ನಲಿಸಿ ಉಲ್ಲಾಸವಾದ ವಾತಾವರಣವನ್ನುಂಟುಮಾಡಿ ಮುಂದಿನ ಮಹಾ ವಿದ್ಯಾವಂತ, ಬುದ್ಧಿವಂತ ನಾಗರಿಕರನ್ನಾಗಿ ತಯಾರಿಸಲು ಅಗತ್ಯವಾದ ಎಲ್ಲಾ ಪೂರ್ವಭಾವಿ ಕರ್ತವ್ಯಗಳನ್ನು ನಿರ್ವಹಿಸುವುದು ಇತ್ಯಾದಿ ವಿದ್ಯಾವಿಕಾಸಕ್ಕೆ ಅಡಿಪಾಯ ಹಾಕುವ ಮಹತ್ವದ ಕಾರ್ಯವಾಗಿರುತ್ತದೆ. ಹಳ್ಳಿಗಳಲ್ಲಿಯ ನೇಕಾರ ಸಹಕಾರ ಸಂಘ ಇತ್ಯಾದಿ ಇತರ ಸಹಕಾರ ಸಂಘಗಳ ನೌಕರರು ತಮ್ಮ ಕರ್ತವ್ಯವನ್ನು ತಾವು

ಮಾಡಿ ಜನತೆಗೆ ವಿವಿಧ ರೀತಿಯಲ್ಲಿ ನೆರವಾಗುತ್ತಿದ್ದಾರೆ. ಹೀಗೆ ಇವರೆಲ್ಲರ ಸೇವೆ ಗ್ರಾಮಗಳಲ್ಲಿ ಅತ್ಯವಶ್ಯಕ ಹಾಗೂ ಗ್ರಾಮದ ಸರ್ವತೋಮುಖ ಅಭಿವೃದ್ಧಿಗೆ ನಾಂದಿಯಾಗಿರುತ್ತದೆ. ಇವರೆಲ್ಲರ ಸೇವೆ ಗ್ರಾಮದ ಜೀವನಾಡಿ ಇದ್ದಂತೆ, ಇವರೆಲ್ಲರ ಸೇವೆ ಸರಕಾರದ 'ಡಿ' ವರ್ಗದ ನೌಕರರಿಗಿಂತ ಕಡಿಮೆ ಜವಾಬ್ದಾರಿಯದಿರದೆ ಅತೀವ ಹೆಚ್ಚಿನ ಜವಾಬ್ದಾರಿಯುಳ್ಳದ್ದು ಆಗಿರುತ್ತದೆ. ಈ ನೌಕರರ ಜೀವನದ ಮಟ್ಟ ಹಾಗೂ ಜೀವನೋಪಾಯದ ಬಗ್ಗೆ ಸ್ವಾತಂತ್ರ್ಯ ಸಿಕ್ಕು ಐವತ್ತು ವರ್ಷ ದಾಟಿ ಈ ರಾಷ್ಟ್ರ ಸುವರ್ಣ ಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸುತ್ತಿದ್ದರೂ ಕೇಂದ್ರ ಸರಕಾರವಾಗಲಿ, ರಾಜ್ಯ ಸರಕಾರವಾಗಲೀ ಗಮನಹರಿಸದೆ ಅವರನ್ನು ಸಾಮಾಜಿಕ ತುಳಿತಕ್ಕೆ ಈಡು ಮಾಡಿ ಬಡತನದ ರೇಖೆ ದಾಟದಂತೆ ಹಿಡಿದಿಟ್ಟಿರುವುದು ಹಾಗೂ ಅವರನ್ನು ಜೀತದಾಳುಗಳಂತೆ ದುಡಿಯಲಿಕ್ಕೆ ದಾರುಣ ಪರಿಸ್ಥಿತಿಯನ್ನುಂಟು ಮಾಡಿರುವುದು ಸರಕಾರಗಳ ಬೇಜವಾಬ್ದಾರಿ ಹಾಗೂ ನಿಸ್ಸೀಮ ನಿರ್ಲಕ್ಷ್ಯೆಯನ್ನು ಎತ್ತಿ ತೋರಿಸುತ್ತಿದೆ. ಈ ನೌಕರರಿಗೆ ರಾಜ್ಯ ಸರಕಾರದ 'ಡಿ' ವರ್ಗದ ನೌಕರ ಪಗಾರ ಶ್ರೇಣಿಯನ್ನಾದರೂ ಅನ್ವಯಿಸಿ ಪಗಾರ ಕೊಟ್ಟರೆ ಸರಿಹೋಗಬಹುದಾಗಿದ್ದರೂ ಸರಕಾರ ಈ ಬಗ್ಗೆ ಸೂಕ್ತಕ್ರಮವನ್ನು ತೆಗೆದುಕೊಳ್ಳದೇ ಇರುವುದು ಈ ಹಳ್ಳಿಗಳ ಜನತೆಯ ಮಕ್ಕಳ ದುರ್ಭಾಗ್ಯ. ಇವರೆಲ್ಲರೂ ತಮ್ಮ ಯೋಗ್ಯ, ಸೂಕ್ತ ಹಾಗೂ ಸಮಂಜಸವಾದ ಬೇಡಿಕೆಗಳ ಬಗ್ಗೆ ಎಷ್ಟೋ ಸತ್ಯಾಗ್ರಹಗಳನ್ನು ಮಾಡಿದರೂ ಅವುಗಳಿಗೆ ಗಮನ ಕೊಡದೆ ಸತ್ಯಾಗ್ರಹದ ಸೋಗಿನಲ್ಲಿ ನಡೆಯುವ ಅನೇಕ ದುರಾಗ್ರಹಗಳ ಒತ್ತಡಗಳಿಗೆ ಮಣಿದು ಸರಕಾರ ಅವುಗಳನ್ನು ಮನ್ನಿಸಿರುವ ಸಹಸ್ರಾರು ಉದಾಹರಣೆಗಳು ರಾಜ್ಯಾದ್ಯಂತ ಇವೆ. ಮೂರು-ನಾಲ್ಕು ಅಂತಸ್ತಿನ ನಾಲ್ಕಂಕಿ ಪಗಾರ ಪಡೆವ ಪ್ರತಿ ಗ್ರಾಮ ಪಂಚಾಯತಿ ಕೇಂದ್ರದಲ್ಲಿರಬೇಕಾದ ಕೃಷಿ-ಸಹಾಯಕ, ಲೈನ್‌ಮನ್, ಪಂಚಾಯತ್ ಕಾರ್ಯದರ್ಶಿ ಮೊದಲಾದವರು ಆಯಾ ಗ್ರಾಮದಲ್ಲಿರದೆ ಅವರ ನೆರವು, ಸಹಾಯ ಹಳ್ಳಿಗರಿಗೆ ಸಿಗದಿದ್ದರೂ ಹಳ್ಳಿಗರ ಸೇವೆ ಸಹಾಯ ನೆರವಿಗಾಗಿ ಹಗಲಿರುಳು ಹಳ್ಳಿಗಳಲ್ಲಿ ವಾಸವಾಗಿರುವ ಈ ದುರ್ದೈವಿ ಗ್ರಾಮ ನೌಕರರಿಗೆ ಸರಕಾರದ ಕನಿಷ್ಠ ಉದರ ಪೋಷಣೆ ಸಿಗದಂತೆ ಮಾಡಿರುವ ಸರಕಾರದ ನೀತಿ ನಿಯಮಬದ್ಧವಾದುದಲ್ಲ.

ಹಳ್ಳಿಗರ ನಿರಂತರ ನೆರವಿಗೆ ಸಹಾಯಕರಾಗುವ ಹಾಗೂ ಹಳ್ಳಿಗಳಲ್ಲೇ ವಾಸವಾಗಿರದ ಬಹುತೇಕ ಎ.ಬಿ.ಸಿ.ಡಿ. ದರ್ಜೆಯ ನೌಕರರಿಗೆ 97-98ರಲ್ಲಿ ವರ್ಷಕ್ಕೆ 3390.57 ಕೋಟಿ ಅಂದರೆ ಪ್ರತಿ ತಿಂಗಳಿಗೆ 282.54 ಕೋಟಿ ಹಣವನ್ನು ತಪ್ಪದೆ ವೆಚ್ಚಮಾಡಿ ಅದರ ಉನ್ನತ ಜೀವನಕ್ಕೆ ನೆರವಾಗಿರುವಾಗ ಈ ದುರ್ದೈವಿ ಹಳ್ಳಿ ನೌಕರರನ್ನು 'ಡಿ' ದರ್ಜೆಗೆ ಸೇರಿಸಿ ಅವರಿಗೆ ಕನಿಷ್ಠ ಜೀವನ ಸಾಗಿಸಲು ಅನುಕೂಲ ಮಾಡಿ ಕೊಡುವುದು ಸರಕಾರದ ಆದ್ಯಕರ್ತವ್ಯ. ಎ.ಬಿ.ಸಿ.ಡಿ. ದರ್ಜೆಯ ನೌಕರರಿಗೆ ಸರಕಾರವು ಅವರಿಗೆ ಹಣ್ಣನ್ನು ತಿನ್ನಿಸಿ ಅವರು ತಿಂದೊಗೆದ ಓಟೆ ಹಾಗೂ ಸಿಪ್ಪೆಯನ್ನು ಹಳ್ಳಿ ನೌಕರರಿಗೆ ಸೀಪಲು ಬೀಡುವುದು ಮಾನವೀಯತೆಯ ಲಕ್ಷಣವಲ್ಲವೆಂದು ಹೇಳದೆ ಗತ್ಯಂತರವಿಲ್ಲ. ಎ.ಬಿ.ಸಿ. ದರ್ಜೆ ನೌಕರರು ದೊಡ್ಡ ದೊಡ್ಡ ರಾಜಕಾರಣಿಗಳಾದ

ನಮ್ಮೆಲ್ಲರ ಸಂಬಂಧಿ ಹಾಗೂ ಸ್ನೇಹಿತರಿರಬಹುದು. 'ಡಿ' ವರ್ಗದ ನೌಕರರು ಹಣ ಹಂಚಿ ನೌಕರಿ ಪಡೆಯದ ಬಡ ಜನಸಾಮಾನ್ಯರ ಸಂಬಂಧಿ ಸ್ನೇಹಿತರಿರಬಹುದು. ಇವರೆಲ್ಲರ ಬಾಳು - ಬದುಕು ಕೂಡ ಹಸನಾಗುವುದು ಅಗತ್ಯ ಹಾಗೂ ಅನಿವಾರ್ಯ. ಅಂತೆಯೇ ಈ ದಿಸೆಯಲ್ಲಿ ಸರಕಾರ ಹಳ್ಳಿ ಚಾಕರಿಯಿಂದ ಹಿಡಿದು ದಿಲ್ಲಿಯವರೆಗೆ ಕಾರ್ಯನಿರ್ವಹಿಸಲು ಎಲ್ಲಾ ಸರಕಾರಿ, ನಿಗಮ, ಸಂಘ - ಸಂಸ್ಥೆ, ವಿವಿಧ ಸಹಕಾರ ಸಂಘ, ಗ್ರಾಮ ಪಂಚಾಯತಿ ಇತ್ಯಾದಿ ಎಲ್ಲಾ ನೌಕರರ ಜೀವನೋಪಾಯದ ಬಗ್ಗೆ ಗಮನಹರಿಸಿ ಗರಿಷ್ಠ ಪಗಾರ ಕೊಡಬೇಕಾದವರಿಗೆ ಕೊಟ್ಟು ಕನಿಷ್ಠ ಪಗಾರ ಯಾರಿಗೆ ಕೊಡಬೇಕೋ, ಅದೆಷ್ಟು ಕೊಡಬೇಕೋ ಅಷ್ಟನ್ನು ಕೊಡಲಿಕ್ಕೆ ಸೂಕ್ತ ಕ್ರಮ ತೆಗೆದುಕೊಂಡು ಎಲ್ಲ ನೌಕರರ ಬಾಳಬದುಕು ಹಸನವಾಗಿ ಅವರು ಉತ್ತಮ ರೀತಿಯಲ್ಲಿ ಎಲ್ಲರಿಗೂ ಸೇವೆ ಸಲ್ಲಿಸುವಂತಾದರೆ ಎಲ್ಲರಿಗೂ ಸಂತೋಷ, ಇಲ್ಲವಾದರೆ ಒಬ್ಬರ ಕಣ್ಣಿಗೆ ಬೆಣ್ಣೆ ಮತ್ತೊಬ್ಬರ ಕಣ್ಣಿಗೆ ಸುಣ್ಣ ಹಾಕುತ್ತ ಪಕ್ಷಪಾತ ಮಾಡಿ ಹಳ್ಳಿಗರನ್ನು ಹಾಗೂ ಹಳ್ಳಿಗರ ನಿರಂತರ ಸೇವಕರನ್ನು ಹಳ್ಳಕ್ಕೆ ದೂಡಿದಂತಾದೀತು. ಗ್ರಾಮ ಸಹಾಯಕರ ಹುದ್ದೆಯಂತೂ ಅತೀ ಪ್ರಾಮುಖ್ಯ. ಹೊಲದಿಂದ ಹೊಲಕ್ಕೆ ಲೆಕ್ಕಾಧಿಕಾರಿ ಹಾಗೂ ಇತರ ರೆವಿನ್ಯೂ ಅಧಿಕಾರಿಗಳೊಡನೆ ಅಡ್ಡಾಡಿ ಪೀಕ ಪಹಣಿ ಬರೆಯುವುದಾಗಲೀ ಅಣೆವಾರಿ ಮಾಡುವು ದಾಗಲೀ ಎಲ್ಲಾ ಇಲಾಖೆಗಳ ಅಧಿಕಾರಿಗಳಿಗೆ ವಿವಿಧ ರೀತಿಯಲ್ಲಿ ಸಹಾಯಕರಾಗುವು ದಾಗಲೀ, ಗ್ರಾಮಗಳಲ್ಲಿಯ ಜನನ ಮರಣ ಮಾಹಿತಿ ತಡೆದು ಲೆಕ್ಕಾಧಿಕಾರಿಗೆ ಕೊಡುವುದಾಗಲೀ ಸರಕಾರದ ಕಂದಾಯ 'ವ' ಇತರೆ ಬಾಕಿಯನ್ನು ವಸೂಲಿ ಮಾಡುವಲ್ಲಿ ಸಹಾಯಕನಾಗುವುದಾಗಲೀ ಇತ್ಯಾದಿ ಹೆಚ್ಚಿನ ಜವಾಬ್ದಾರಿ ಈ ಗ್ರಾಮ ಸಹಾಯಕರ ಮೇಲಿದೆ. ಸುದೈವದಿಂದ ಗ್ರಾಮಗಳಲ್ಲಿಯ ವಿವಿಧ ನೌಕರರು ನಿಸ್ಸಹಾಯಕರೂ, ಮುಗ್ಧರೂ, ಹೋರಾಟ ಶಕ್ತಿಹೀನರೂ ಆಗಿರುವ ಹಾಗೂ ಉಗ್ರ ಸತ್ಯಾಗ್ರಹ ಹೋರಾಟಕ್ಕೆ ಮುಂದಾಗದ ಮನೋವೃತ್ತಿಯ ದುರ್ಲಾಭವನ್ನು ಸರಕಾರ ಪಡೆದು ಅವರ ಬಗ್ಗೆ ಉದಾಸೀನರಾಗಿ ಅವರ ಬವಣೆ, ದುಃಖ, ದುಮ್ಮಾನಗಳನ್ನು ನಿರ್ಲಕ್ಷಸದೆ ಅವರ ಬಗ್ಗೆ ಕಾಳಜಿ ವಹಿಸುವುದು ಒಳ್ಳೆಯದು. ಇತ್ತೀಚಿಗೆ ಗ್ರಾಮಸಹಾಯಕರು, ಅಂಗನವಾಡಿ ಶಿಕ್ಷಕಿಯರು ಎಚ್ಚೆತ್ತು ತಮ್ಮ ಹಕ್ಕುಗಳನ್ನು ಹಾಗೂ ಬೇಡಿಕೆಗಳನ್ನು ಈಡೇರಿಸುವ ಬಗ್ಗೆ ಗಮನ ಸೆಳೆಯುವ ಸಲುವಾಗಿ ಸತ್ಯಾಗ್ರಹಗಳನ್ನು ಪ್ರಾರಂಭಿಸಿದ್ದು, ಅವುಗಳಿಗೆ ಗ್ರಾಮಾಂತರ ಜನರು ಬೆಂಬಲ ಕೊಟ್ಟು ಸರಕಾರದ ಕಣ್ಣನ್ನು ತೆರೆಸುವುದು ಅನಿವಾರ್ಯ ಹಾಗೂ ಅಗತ್ಯ. ಈ ಸತ್ಯಾಗ್ರಹ ಹಾಗೂ ಚಳುವಳಿ ಉಗ್ರಸ್ವರೂಪ ತಾಳುವ ಮುನ್ನ ಅವರೆಲ್ಲರ ಸೂಕ್ತ ವೇತನ ಬೇಡಿಕೆಗಳನ್ನು ಈಡೇರಿಸುವುದು ಸರಕಾರದ ಆದ್ಯ ಕರ್ತವ್ಯ.

❑

ಸರಕಾರಿ ವೆಚ್ಚ 1995-96-97ನೇ ಅವಧಿಯಲ್ಲಿ ಬಳಸದ ಹಣ 4884.29 ಕೋಟಿ

ರಾಜ್ಯ ಸರಕಾರಕ್ಕೆ ಪ್ರತಿವರ್ಷ ವಿವಿಧ ಆದಾಯ ಹಾಗೂ ವಿವಿಧ ಸಾಲ ನಿರಂತರವಾಗಿ ಹೆಚ್ಚು ಬರುತ್ತಿದ್ದರೂ ನಿಗದಿತ ವೆಚ್ಚಕ್ಕೆ ಹಣ ಸಾಲದೆ ಅನೇಕ ಅಭಿವೃದ್ಧಿ ಕಾರ್ಯಗಳು ಪ್ರತಿವರ್ಷ ನಿರೀಕ್ಷಿತ ಮಟ್ಟದಲ್ಲಿ ಜರುಗದೆ ಕುಂಠಿತಗೊಳ್ಳುತ್ತ ನಡೆದಿದೆ. ಆಡಳಿತ ಹಾಗೂ ಅಭಿವೃದ್ಧಿಯೇತರ ಕಾರ್ಯಗಳಿಗೆ ನಿಗದಿತ ಅಂದಾಜು ವೆಚ್ಚಕ್ಕಿಂತ ಹೆಚ್ಚು ವೆಚ್ಚವಾಗುತ್ತ ನಡೆದಿದೆ. ಪ್ರತಿವರ್ಷ ಆಂತರಿಕ ಹಾಗೂ ಹೊರಗಿನ ಸಾಲ ಹೆಚ್ಚುತ್ತಲೇ ಇದೆ. ಪಡೆದ ಸಾಲದ ಮೇಲೆ ಕೊಡುವ ಬಡ್ಡಿಸಹ ಪ್ರತಿವರ್ಷ ಹೆಚ್ಚುತ್ತಲೇ ಇದೆ. ನಿಗದಿತ ವೆಚ್ಚದ ಬಜೆಟ್ ಮೊತ್ತ ವೆಚ್ಚ ಮಾಡಲು ಖಜಾನೆಯಲ್ಲಿ ಹಣವಿಲ್ಲದೆ ಪ್ರತಿವರ್ಷ ಸಹಸ್ರಾರು ಕೋಟಿ ವೆಚ್ಚವಾಗದೆ ಉಳಿಕೆಯಾಗುತ್ತದೆ. 95-96 ಹಾಗೂ 96-97ರ ಈ ಎರಡು ವರ್ಷಗಳಲ್ಲಿ ಸಿ.ಎ.ಜಿ. ವರದಿ ಪ್ರಕಾರ ಸಿಬ್ಬಂದಿ ವೆಚ್ಚ, ಜಿಲ್ಲಾಡಳಿತ, ವಿಶ್ರಾಂತಿ ವೇತನ, ಭತ್ಯೆ ಇತ್ಯಾದಿ ಕೆಲವು ಶೀರ್ಷಿಕೆಗಳಲ್ಲಿ ಬಜೆಟ್ ಮೀರಿ 144.68 ಕೋಟಿ ಮೊತ್ತವನ್ನು ಹೆಚ್ಚು ವೆಚ್ಚ ಮಾಡಲಾಗಿದೆ. ಇದಕ್ಕೆ ವ್ಯತಿರಿಕ್ತವಾಗಿ ಅನೇಕ ಜನಪರ ಶೀರ್ಷಿಕೆಗಳಲ್ಲಿ 5028.97 ಕೋಟಿ ರೂ. ಮೊತ್ತವನ್ನು ವೆಚ್ಚ ಮಾಡಲಾಗಿಲ್ಲ. ಒಟ್ಟಿನ ಮೇಲೆ ಒಟ್ಟಾರೆ ನಿಗದಿತ ಮೊತ್ತದಲ್ಲಿ 4884.29 ಕೋಟಿ ಮೊತ್ತವನ್ನು ಈ ಎರಡು ವರ್ಷಗಳಲ್ಲಿ ವೆಚ್ಚ ಮಾಡದೆ ಬಿಡಲಾಗಿದೆ. ಈ ಪರಿಣಾಮವನ್ನು ಸರಕಾರಗಳು ಹಿಂದಿನಿಂದ ಅನುಸರಿಸುತ್ತ ಬಂದು ನಿಗದಿತ ಹಣ ವೆಚ್ಚ ಮಾಡದೆ ರಾಜ್ಯದ ಆರ್ಥಿಕ ಪ್ರಗತಿಗೆ ಅಡ್ಡಗಾಲಾಗಿವೆ. ಈ ತರಹದ ಆರ್ಥಿಕ ಬಿಕ್ಕಟ್ಟಿಗೆ ಸರಕಾರವನ್ನು ದೂಡಿ ವಿವಿಧ ಅಭಿವೃದ್ಧಿ ಕಾರ್ಯಗಳು ಅನುಷ್ಠಾನಗೊಳ್ಳದಿರಲು ಆರ್ಥಿಕ ಇಲಾಖೆಯ ವಿತ್ತಾಧಿಕಾರಿಗಳೇ ಮೂಲ ಕಾರಣ ಹಾಗೂ ಅವರ ಅದಕ್ಷತೆ, ಮುಂದಾಲೋಚನೆ, ದೂರಾಲೋಚನೆ ಹಾಗೂ ಕರ್ತವ್ಯಲೋಪಗಳೇ ಕಾರಣವೆಂದು ಹೇಳದೆ ಗತ್ಯಂತರವಿಲ್ಲ. ಈ ದಿಶೆಯಲ್ಲಿ ವಿತ್ತ ಮಂತ್ರಿಗಳು ಇನ್ನಾದರೂ ಅಧ್ಯಯನ ಮಾಡಿ ಹಣಕಾಸು ಪರಿಸ್ಥಿತಿ ಸುಧಾರಿಸಿ ಆಯವ್ಯಯದ ನಿಗದಿತ ಚೌಕಟ್ಟಿನಲ್ಲಿ ಆಯವ್ಯಯದ ಬಗ್ಗೆ ಹಾಗೂ ಅಭಿವೃದ್ಧಿಯ ಬಗ್ಗೆ ಆಸಕ್ತಿ ವಹಿಸುವುದು ಒಳ್ಳೆಯದು.

1995-96ರಲ್ಲಿ 1150.64 ಕೋಟಿ ಬಡ್ಡಿ ಕೊಟ್ಟಿದ್ದರೆ 96-97ರಲ್ಲಿ 1331.99 ಕೋಟಿ ಅಂದರೆ 181.35 ಕೋಟಿ ಹೆಚ್ಚು ಕೊಡಲಾಗಿದೆ. ವಿಶ್ರಾಂತಿ ವೇತನ ಭತ್ಯೆಗಾಗಿ 95-96ರಲ್ಲಿ 589.58 ಕೋಟಿ ಕೊಟ್ಟಿದ್ದರೆ, 96-97ರಲ್ಲಿ 744.71 ಕೋಟಿ ಅಂದರೆ 155.13 ಕೋಟಿ ಹೆಚ್ಚು ಕೊಡಲಾಗಿದೆ. ಕೆ.ಇ.ಬಿ.ಗೆ ಸಹಾಯಧನವೆಂದು 95-96ರಲ್ಲಿ 306.94 ಕೋಟಿ ಕೊಟ್ಟಿದ್ದು, 96-97ರಲ್ಲಿ 960.50 ಕೋಟಿ ಅಂದರೆ 653.64 ಕೋಟಿ ಹೆಚ್ಚು ಕೊಡಲಾಗಿದೆ. ಸರಕಾರ ನೌಕರ ಸಿಬ್ಬಂದಿ ವೇತನ ಭತ್ಯೆ ಇತ್ಯಾದಿಗೆ 96-97ರಲ್ಲಿ 3028.71 ಕೋಟಿ ಅಂದಾಜು, 97-98ರಲ್ಲಿ 3390.57 ಕೋಟಿ ಅಂದಾಜು ಮಾಡಿದ್ದು 98-99ಕ್ಕೆ ತಿಳಿದಿಲ್ಲ. ಈ ಬಗ್ಗೆ ಸರಕಾರ ಶೀರ್ಷಿಕೆಯನ್ನೇ ಗೊತ್ತುಪಡಿಸಿಲ್ಲ ಏಕೆ? ನಿವೃತ್ತಿ ವೇತನ ಭತ್ಯೆ ಶೀರ್ಷಿಕೆ 2071 ಪ್ರಕಾರ 96-97ರಲ್ಲಿ 716.41 ಕೋಟಿ ವೆಚ್ಚ ಮಾಡಿದ್ದು 97-98ರಲ್ಲಿ 889.26 ಕೋಟಿ, 98-99ರಲ್ಲಿ 1041.00 ಕೋಟಿ ನಿಗದಿಮಾಡಲಾಗಿದೆ. ಇದೇ ತಾತ್ವಿಕ ಆಧಾರದ ಮೇಲೆ ಜನಪರ ಅಭಿವೃದ್ಧಿ ಕಾರ್ಯಗಳಿಗೇಕೆ ವೆಚ್ಚ ಮಾಡಬಾರದು? ಸಹಕಾರ ಇಲಾಖೆಗೆ 95-96ರಲ್ಲಿ 138.82 ಕೋಟಿ ಕೊಟ್ಟಿದ್ದು 96-97ರಲ್ಲಿ ಕೇವಲ 50.34 ಕೋಟಿ ಕೊಟ್ಟಿದ್ದು ಅಂದರೆ 88.48 ಕೋಟಿ ಕಡಿಮೆ ಕೊಡಲಾಗಿದೆ. ಸಹಕಾರಿ ಕ್ಷೇತ್ರ ಅತಿ ಸಂಪತ್ ಭರಿತವಾಗಿದೆಯೆಂದು ಸರಕಾರ ಸಹಕಾರಿ ಇಲಾಖೆಗೆ 96-97ರಲ್ಲಿ ಹೆಚ್ಚು ಹಣ ಕೊಟ್ಟಿಲ್ಲವೇ ಏನು? ರಾಜ್ಯದ ಜನತೆಯ ಮೂಲ ಆಧಾರವಾಗಿರುವ ಕೃಷಿ ಹಾಗೂ ಕೃಷಿ ಆಧಾರಿತ ಚಟುವಟಿಕೆಗಳಿಗೆ 95-96ರಲ್ಲಿ 874.52 ಕೋಟಿ ಹಣ ವೆಚ್ಚಮಾಡಿದ್ದು 96-97ರಲ್ಲಿ 831.84 ಕೋಟಿ ಹಣ ವೆಚ್ಚ ಮಾಡಿದ್ದು ಅಂದರೆ 42.68 ಕೋಟಿ ಹಣ ವೆಚ್ಚ ಕಡಿಮೆ ಮಾಡಿದ್ದು, ಇದು ರೈತರು ಅವಸಾನದ ಅಂಚನ್ನು ತಲುಪಿ ನಷ್ಟಕ್ಕೆ ಗುರಿಯಾಗಿ ಈಗ ರಾಜ್ಯದಲ್ಲಿ 29 ಜನ ಸತ್ತಿದ್ದು, ಆಂಧ್ರದಲ್ಲಿ 236 ಜನ ರೈತರು ಸತ್ತ ಹಾಗೆ ಕರ್ನಾಟಕದಲ್ಲಿ ಇನ್ನೂ ಹೆಚ್ಚು ಜನರು ಸಾಯಲೆಂಬ ಉದ್ದೇಶ ಸರಕಾರಕ್ಕಿದೆಯೇ?

ಬೇರೆ ಬೇರೆ ರಾಜ್ಯಗಳಿಗೆ ಹೋಲಿಸಿದರೆ ನಮ್ಮ ರಾಜ್ಯ ನೀರಾವರಿ ಅಭಿವೃದ್ಧಿಯಲ್ಲಿ ಬಹಳ ಹಿಂದೆ ಬಿದ್ದಿದೆ. ಸಣ್ಣ ನೀರಾವರಿಯಾಗಲೀ, ಮಧ್ಯಮ ನೀರಾವರಿಯಾಗಲೀ, ಬೃಹತ್ ನೀರಾವರಿಯಾಗಲೀ ಇವ್ಯಾವುವೂ ಗಣನೀಯವಾಗಿಯಾಗಲೀ ಅಥವಾ ತೃಪ್ತಿಕರವಾಗಿಯಾಗಲೀ, ರೈತರ ಪ್ರಗತಿಗೆ ತಾರಕವಾಗಿಲ್ಲ. ಮಳೆನೀರು ವ್ಯರ್ಥವಾಗಿ ಹರಿದು ಹೋಗುತ್ತಿದ್ದರೂ ರಾಜ್ಯದಲ್ಲಿಯ 37000 ನೀರಾವರಿ ಕೆರೆಗಳ ಸಂಗ್ರಹ ಸಾಮರ್ಥ್ಯಕ್ಕೆ ತಕ್ಕಂತೆ ಹೂಳು ತೆಗೆಸಿಲ್ಲ ಹಾಗೂ ಸಾಮರ್ಥ್ಯದ ನೀರು ಸಂಗ್ರಹವಾಗಿಲ್ಲ. ಅನೇಕ ಕೆರೆಗಳ ಅಸ್ತಿತ್ವ ನಾಶವಾಗುತ್ತಿದೆ. ಏತ ನೀರಾವರಿಗಳೆಲ್ಲಾ ನೆಲಕಚ್ಚಿವೆ. ಗಂಗಾ ಯೋಜನೆಗಳು ತಡವರಿಸುತ್ತಿವೆ. ಇರಿಗೇಶನ್ ಪಂಪ್ ಕೊಳವೆ ಬಾವಿಗಳೆಲ್ಲ ರೈತರ ಪಾಲಿಗೆ ಮಾರಕವಾಗಿವೆ. ಮಧ್ಯಮ ಹಾಗೂ ಭಾರಿ ನೀರಾವರಿಗಳೆಲ್ಲ ಹೇರಳವಾದ ಹಣವೆಚ್ಚವಾಗುತ್ತಿದ್ದರೂ ನಿಗದಿತ ಹಾಗೂ ನಿರ್ದಿಷ್ಟ ಗುರಿ ಮುಟ್ಟಿಲ್ಲ. ಈ ಎಲ್ಲ ಯೋಜನೆಗಳಿಗೆ ಪ್ರತಿವರ್ಷ ಅಂದಾಜು ವೆಚ್ಚ ಮುಗಿಲು ಮುಟ್ಟುತ್ತ ಮೇಲೇರುತ್ತಿದ್ದರೂ ಅಂದಾಜಿಗಿಂತ ಶೇಕಡಾ 300, 400ರ ವರೆಗೆ ಹೆಚ್ಚು ಹಣ ವೆಚ್ಚ ಮಾಡುತ್ತಿದ್ದರೂ ಪ್ರಗತಿಯಿಲ್ಲ. ಖಜಾನೆಯಲ್ಲಿ ಹಣವಿಲ್ಲದ್ದರಿಂದ

ಪ್ರತಿವರ್ಷ ಯೋಜನೆಗಳ ವೆಚ್ಚ ಕಡಿಮೆಯಾಗುತ್ತಲೇ ಇದೆ ಹಾಗೂ ನಿಗದಿತ ನೀರಿನ ಬಳಕೆಯಾಗದೆ ನಿಗದಿತ ನೀರಾವರಿ ಕ್ಷೇತ್ರ ನೀರಾವರಿಗೆ ಒಳಪಡದೆ ಯೋಜನೆಗಳ ವೈಫಲ್ಯ ಮುಂದುವರಿದೇ ಇದೆ.

ಭಾರೀ ನೀರಾವರಿ ಯೋಜನೆಗಳಿಗೆ ಬಜೆಟ್‌ನಲ್ಲಿ ನಿಗದಿಗೊಳಿಸಿದ ಮೊತ್ತವನ್ನು ಸಂಪೂರ್ಣವಾಗಿ ಪ್ರತಿವರ್ಷ ವೆಚ್ಚ ಮಾಡುತ್ತಿರುವುದಿಲ್ಲ. ಕೃಷ್ಣಾ ಮೇಲ್ದಂಡೆ ಸಲುವಾಗಿ ಪ್ರತ್ಯೇಕ ನಿಗಮವೊಂದನ್ನು ಸ್ಥಾಪಿಸಿ ಸಾಕಷ್ಟು ಹಣವನ್ನು ಜನತೆಯಿಂದ ಪಡೆದಿದ್ದು ಹಾಗೂ ಪಡೆಯುತ್ತಿದ್ದರೂ ಕೃಷ್ಣಾ ಮೇಲ್ದಂಡೆ ಯೋಜನೆಗೆ 96-97ರಲ್ಲಿ 1249.63 ಕೋಟಿ ಮೊತ್ತವನ್ನು ನಿಗದಿಗೊಳಿಸಿದ್ದರೂ ಕೇವಲ 784.87 ಕೋಟಿ ಹಣಯನ್ನು ಮಾತ್ರ ವೆಚ್ಚ ಮಾಡಿದೆ ಹಾಗೂ 464.76 ಕೋಟಿ ಮೊತ್ತವನ್ನು ವೆಚ್ಚ ಮಾಡದೆ ಬಿಡಲಾಗಿದೆ. ಹೀಗೆ ಕೃಷ್ಣಾ ಮೇಲ್ದಂಡೆ, ಬೆಣ್ಣೆ ತೊರೆ, ವರಾಹಿ, ಮಹದಾಯಿ, ಭೀಮಾ, ತುಂಗಾ ಮೇಲ್ದಂಡೆ ಮೊದಲಾದ 16 ಬೃಹತ್ ಯೋಜನೆಗಳಿಗೆ ನಿಗದಿತ ಮೊತ್ತದಲ್ಲಿ 96-97ರಲ್ಲಿ 495.01 ಕೋಟಿ ಮೊತ್ತವನ್ನು ವೆಚ್ಚಮಾಡದೆ ಬಿಡಲಾಗಿದೆ. ಇನ್ನುಳಿದ ಘಟಪ್ರಭಾ, ಕರಂಜಾ, ಕೆ.ಆರ್.ಎಸ್. ಆಧುನೀಕರಣ, ಭದ್ರಾ, ಮಲಪ್ರಭಾ, ಶಿಂಗಟಾಲೂರ ಮೊದಲಾದ 8 ಯೋಜನೆಗಳಿಗೆ 96-97ರಲ್ಲಿ ಬಜೆಟ್ ಮಿತಿಮೀರಿ 51.84 ಕೋಟಿ ಹಣ ವೆಚ್ಚ ಮಾಡಿದ್ದರೂ ಆ ಹೊಳೆಗಳ ನೀರಿನಲ್ಲಿ ಹಣ ಹರಿದು ಹೋಗಿದೆಯೇ ಹೊರತು ನಿಗದಿತ ನೀರಾವರಿ ಕ್ಷೇತ್ರದ ಸಾಧನೆ ವ ನೀರಿನ ಬಳಕೆಯಾಗಿಲ್ಲ. ಹೀಗೆ ಒಟ್ಟು 24 ಬೃಹತ್ ನೀರಾವರಿಯ ಯೋಜನೆಗಳಿಗೆ 96-97ರಲ್ಲಿ 1684.38 ಕೋಟಿ ಹಣ ವೆಚ್ಚ ಮಾಡುವ ನಿಗದಿತ ಗುರಿಯಿದ್ದರೂ ಈ ಮೊತ್ತದಲ್ಲಿ 1241.21 ಕೋಟಿ ಹಣ ವೆಚ್ಚ ಮಾಡಿ 443.17 ಕೋಟಿ ಮೊತ್ತ ವೆಚ್ಚ ಮಾಡದೆ, ನಿಗದಿತ ನೀರಿನ ಬಳಕೆ ಮಾಡದೆ ಹಾಗೂ ನಿಗದಿತ ಕ್ಷೇತ್ರವನ್ನು ನೀರಾವರಿಗೆ ಒಳಪಡಿಸದೆ ಎಲ್ಲಾ ರೀತಿಯಿಂದಲೂ ಅಸಮರ್ಪಕ ಸಾಧನೆಯನ್ನು ಜನರು ಮೂಕಪ್ರೇಕ್ಷಕರಾಗಿ ಅವಲೋಕಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಅಧಿಕಾರಾರೂಢ ಸರಕಾರದ, ಮಂತ್ರಿಗಳ, ಶಾಸಕರ, ಸಂಸದರ ಹಾಗೂ ಅಧಿಕೃತ ರಾಜಕೀಯ ಪಕ್ಷಗಳ, ಅಧಿಕಾರಿಗಳ, ಚಿಂತನೆಗಳೇನು? ಯೋಚನೆಗಳೇನು? ಕರ್ತವ್ಯ ಗಳೇನು? ಇನ್ನಾದರೂ ಹೊಣೆಗಾರರು ತಮ್ಮ ಕರ್ತವ್ಯಗಳ ಅರಿವನ್ನು ಅರಿತು ಕಾರ್ಯಪ್ರವೃತ್ತರಾದರೆ ರಾಜ್ಯಕ್ಕೆ ಒಳ್ಳೆಯದು, 95-96ರಲ್ಲಿ 47 ಇಲಾಖೆಗಳಲ್ಲಿ 2919.11 ಕೋಟಿ ಹಣವನ್ನು 96-97ರಲ್ಲಿ 49 ಇಲಾಖೆಗಳಲ್ಲಿ 1965.18 ಕೋಟಿ ಹಣವನ್ನು ವೆಚ್ಚ ಮಾಡದೆ ಬಿಟ್ಟಿದ್ದು, ಈ ಬಗ್ಗೆ ಎಲ್ಲಾ ಇಲಾಖಾ ಮಂತ್ರಿ ಹಾಗೂ ಇಲಾಖಾ ಕಾರ್ಯದರ್ಶಿಗಳು ತಮ್ಮ ಅಧಿಕಾರ ಕರ್ತವ್ಯದ ಅರಿವನ್ನು ಅರಿತು ವ್ಯರ್ಥ ಕಾಲಹರಣ ಮಾಡದೆ ಇನ್ನು ಮುಂದಾದರೂ ತಮ್ಮ ತಮ್ಮ ಇಲಾಖೆಗಳಿಗೆ ಅವಶ್ಯಕ ಹೆಚ್ಚಿನ ಹಣ ಬಜೆಟ್‌ನಲ್ಲಿ ಸೇರಿಸಿಕೊಂಡು ನಿಗದಿತ ಸಂಪೂರ್ಣ ಅಥವಾ ಇನ್ನೂ ಹೆಚ್ಚಿನ ಹಣವನ್ನು ವೆಚ್ಚ ಮಾಡಿ ಚುನಾಯಿಸಿದ ಮುಗ್ಧ ಜನತೆಗೆ ಮಹದುಪಕಾರ ಮಾಡುವುದು ಒಳ್ಳೆಯದು. ❑

ಸಂವಿಧಾನಬದ್ಧ ಸಿ.ಎ.ಜಿ. ವರದಿ

ರಾಜ್ಯ ಸರಕಾರದ ರೆವಿನ್ಯೂ, ಬಂಡವಾಳ, ಸಾರ್ವಜನಿಕ ಸಾಲ, ಸಾಲ ಮತ್ತು ಮುಂಗಡ, ಪ್ರಭೃತ ಮತ್ತು ಪುರಸ್ಕೃತ 63 ವಿನಿಯೋಗಗಳ ಬಾಬ್ತು ವೆಚ್ಚದ ಮೊತ್ತ 1996-97ರಲ್ಲಿ ಒಟ್ಟು 15375.96 ಕೋಟಿ ಹಣ ನಿಗದಿ ಇದ್ದು, ಇದರಲ್ಲಿ 13410.78 ಕೋಟಿ ವಾಸ್ತವಿಕ ವೆಚ್ಚ ಮಾಡಿ 1965.18 ಕೋಟಿ ಮೊತ್ತವನ್ನು ವೆಚ್ಚ ಮಾಡಲಿಕ್ಕೆ ಸಾಧ್ಯವೇ ಆಗಿಲ್ಲ. ವೆಚ್ಚವೆಂದು ತೋರಿಸಿದ 13410.78 ಕೋಟಿಯಲ್ಲಿ 303.24 ಕೋಟಿಯನ್ನು ವಾಸ್ತವಿಕವಾಗಿ ವೆಚ್ಚ ಮಾಡದೆ 31-3-97ಕ್ಕೆ ಪಿ.ಡಿ. ಲೆಕ್ಕದಲ್ಲಿ ಇಡಲಾಗಿದೆ. ವೆಚ್ಚ ಮಾಡದೆ ಹಣ ಉಳಿದಿರುವದೆಂಬುದು ಖಜಾನೆಯಲ್ಲಿ ಹಣವಿಲ್ಲದಿರುವುದೇ ಕಾರಣವೆಂಬುದು ಸುಸ್ಪಷ್ಟವಾಗುತ್ತದೆ. ಇನ್ನೂ ಕೆಲವು ವಿನಿಯೋಗಗಳಿಗೆ ಬಜೆಟ್ ನಿಗದಿತ ಮೊತ್ತ 1151.22 ಕೋಟಿ ಇದ್ದರೂ 1268.11 ಕೋಟಿ ವೆಚ್ಚ ಮಾಡಿದ್ದು ಇದರಲ್ಲಿ 116.89 ಕೋಟಿ ಮೊತ್ತವನ್ನು ಹೆಚ್ಚು ವೆಚ್ಚ ಮಾಡಲಾಗಿದೆ. 1991-92ರಿಂದ 1996-97ರ ವರೆಗಿನ ಈ ಆರು ವರ್ಷಗಳ ಅವಧಿಯಲ್ಲಿ ಎರಡು ರಾಜಕೀಯ ಪಕ್ಷದ ಸರಕಾರಗಳು ಅಧಿಕಾರದಲ್ಲಿ ಬಜೆಟ್ ಮಂಡಿಸಿವೆ. ಕಾರ್ಯನಿರ್ವಹಿಸಿವೆ. ಮೂರು ರಾಜಕೀಯ ಪಕ್ಷಗಳು ಅಧಿಕೃತ ವಿರೋಧ ಪಕ್ಷವಾಗಿ ಕಾರ್ಯನಿರ್ವಹಿಸಿವೆ. ಈ ಆರು ವರ್ಷದ ಅವಧಿಯಲ್ಲಿ ಕೆಲವು ಇಲಾಖೆಗಳಲ್ಲಿ ಬಜೆಟ್ ಮಿತಿಮೀರಿ 376.96 ಕೋಟಿ ಮೊತ್ತವನ್ನು ಹೆಚ್ಚು ವೆಚ್ಚಮಾಡಿವೆ. ಇದಕ್ಕೆ ತದ್ವಿರುದ್ಧವಾಗಿ ಹಲವಾರು ಇಲಾಖೆಗಳಲ್ಲಿ ಬಜೆಟ್ ಪ್ರಕಾರ 10824.82 ಕೋಟಿ ಮೊತ್ತವನ್ನೇ ವೆಚ್ಚ ಮಾಡಿಲ್ಲ. ವೆಚ್ಚವಾಗಿದೆ ಎಂದು ತೋರಿಸಿದ ಮೊತ್ತದಲ್ಲಿ 31-3-96ಕ್ಕೆ 325.88 ಕೋಟಿ, 31-3-97ಕ್ಕೆ 303.24 ಕೋಟಿ ಮೊತ್ತವನ್ನು ಪಿ.ಡಿ. ಲೆಕ್ಕದಲ್ಲಿ ಶಿಲ್ಕು ಇಡಲಾಗಿದೆ. ಈ ಅಕ್ಷಮ್ಯ ಲೋಪ ಹೀಗೆಯೇ ಮುಂದುವರಿದು ಸರಕಾರ ನಡೆದರೆ ಸಿ.ಎ.ಜಿ. ಏಕೆ ಇರಬೇಕು? ಸರಕಾರ ಹಾಗೂ ವಿರೋಧಿ ಪಕ್ಷಗಳೇಕೆ ಇರಬೇಕು? ಈ ದಿಶೆಯಲ್ಲಿ ಎಲ್ಲರ ಚಿಂತನೆ ಅಗತ್ಯ.

ರಾಜ್ಯದ ಜನಸಾಮಾನ್ಯರಿಗೆ ಉಪಯುಕ್ತವಾಗಿರುವ ವ್ಯವಸಾಯ, ಪಶುಸಂಗೋಪನೆ, ಸಣ್ಣ ಪ್ರಮಾಣದ ಉದ್ದಿಮೆ, ಯುವಜನ ಸೇವೆ, ವಸತಿ, ಪ್ರವಾಸೋದ್ಯಮ, ನ್ಯಾಯಾಡಳಿತ, ಹಿಂದುಳಿದ ಪ್ರದೇಶಗಳ ಅಭಿವೃದ್ಧಿ, ಕಟ್ಟಡ, ಸಹಕಾರ, ಕಾರ್ಮಿಕ ಉದ್ಯೋಗ, ಪರಿಶಿಷ್ಟ ಜಾತಿ - ಪಂಗಡ, ಹಿಂದುಳಿದ ವರ್ಗ ಕಲ್ಯಾಣ, ಈ ಹನ್ನೆರಡು ವಿನಿಯೋಗದಲ್ಲಿ 94-95ರಿಂದ 96-97ರ ಈ ಮೂರು ವರ್ಷಗಳ ಅವಧಿಯಲ್ಲಿ ಬಜೆಟ್ ಪ್ರಕಾರ ನಿಗದಿಗೊಳಿಸಿದ ಮೊತ್ತವನ್ನು ಪೂರ್ತಿ ವೆಚ್ಚಮಾಡಿದೆ. 1009.50 ಕೋಟಿ ಮೊತ್ತವನ್ನು ವೆಚ್ಚಮಾಡದೆ ಈ ವರ್ಗದ ಜನತೆಗೆ ಸಿಗಬೇಕಾಗಿದ್ದ ಸೌಲಭ್ಯವನ್ನು ಸಿಗದಂತೆ ಮಾಡಲಾಗಿದೆ.

93-94ರಿಂದ 96-97ರ ಈ ನಾಲ್ಕು ವರ್ಷಗಳ ಅವಧಿಯಲ್ಲಿ ಗ್ರಾಮಾಂತರ ಜನತೆಗೆ, ನಿರುದ್ಯೋಗಿಗಳಿಗೆ, ಕಸಬುದಾರರಿಗೆ, ನಿರ್ಗತಿಕರಿಗೆ, ರೈತರಿಗೆ ಹಾಗೂ ಎಲ್ಲಾ ವರ್ಗದವರಿಗೆ ಉಪಯುಕ್ತವಾದ ವಿಶೇಷ ಯೋಜನೆಗಳಾದ ವಿಶ್ವ, ಉದ್ಯೋಗ, ಜ್ಯೋತಿ, ಉದ್ಯೋಗ ನಿಧಿ, ವಸತಿ, ಹಿಂದುಳಿದ ಪ್ರದೇಶಗಳ ಅಭಿವೃದ್ಧಿ, ಕಾಡಾ ಇವುಗಳಿಗೆ ಬಜೆಟ್‌ದಲ್ಲಿ ನಿಗದಿಪಡಿಸಿದ ಹಣದಲ್ಲಿ 422.77 ಕೋಟಿ ಹಣವನ್ನು ವೆಚ್ಚ ಮಾಡದೆ ಬಿಡಲಾಗಿದೆ. ಈ ಲೋಪ ಪ್ರತಿವರ್ಷ ಮುಂದುವರಿದಿದ್ದು ಈ ಲೋಪಕ್ಕೆ ಕೊನೆ ಎಂದು ಹೇಗೆ?

ಪಶುಸಂಗೋಪನೆ, ಮೀನುಗಾರಿಕೆ, ಭಾರೀ ಮಧ್ಯಮ ಉದ್ಯಮ, ರೇಷ್ಮೆ, ಸಣ್ಣ ಪ್ರಮಾಣದ ಉದ್ದಿಮೆ, ಯುವಜನ ಸೇವೆ, ವಸತಿ, ನಗರಾಭಿವೃದ್ಧಿ, ಸಣ್ಣ ನೀರಾವರಿ, ಭಾರೀ ನೀರಾವರಿ, ಹಿಂದುಳಿದ ಪ್ರದೇಶಗಳ ಅಭಿವೃದ್ಧಿ, ಕಟ್ಟಡ, ಸಹಕಾರ, ಕಾರ್ಮಿಕ, ಮಹಿಳೆ ಮತ್ತು ಮಕ್ಕಳ ಕಲ್ಯಾಣ, ವ್ಯವಸಾಯ, ಅರಣ್ಯ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಶಿಕ್ಷಣ, ಪ್ರವಾಸ, ನ್ಯಾಯಾಡಳಿತ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳ ಕಲ್ಯಾಣ, ಬೆಂಗಳೂರು ನಗರಾಭಿವೃದ್ಧಿ, ಗ್ರಾಮಾಂತರ ಕುಡಿಯುವ ನೀರು ಸರಬರಾಜು, ಮಲೆನಾಡು ಪ್ರದೇಶ ಅಭಿವೃದ್ಧಿ, ಗ್ರಾಮಾಂತರ ಸಣ್ಣ ಕೈಗಾರಿಕೆಗಳಿಗೆ ಯೋಜನೆ ಹಾಗೂ ಇತರೆ ಕಾರ್ಯಕ್ರಮಗಳಿಗೆ 96-97ರಲ್ಲಿ ಸಹ ಬಜೆಟ್ ಪ್ರಕಾರ ನಿಗದಿತ ಹಣದಲ್ಲಿ 1653.84 ಕೋಟಿ ಹಣವನ್ನು ವೆಚ್ಚ ಮಾಡದೆ ಬಿಡಲಾಗಿದೆ.

ಸರಕಾರವು ಹಣದ ನಿರಂತರ ಭಾರೀ ಕೊರತೆಯಲ್ಲಿದ್ದು ಬಜೆಟ್ ಪ್ರಕಾರ ಅಭಿವೃದ್ಧಿ ಕಾರ್ಯಗಳಿಗೆ ವೆಚ್ಚ ಮಾಡಲು ಖಜಾನೆಯಲ್ಲಿ ಹಣವಿಲ್ಲದಿದ್ದರೂ ಸರಕಾರಕ್ಕೆ ಸಂಬಂಧಿಸಿದ ಅನೇಕ ನಿಗಮುಗಳು, ಅನೇಕ ವಿವಿಧ ಹಂತದ ಕಮಿಶನರ್‌ಗಳು, ಡೈರೆಕ್ಟರ್‌ಗಳು, ರೆಜಿಸ್ಟ್ರಾರ್‌ಗಳು, ಲೆಕ್ಕಾಧಿಕಾರಿಗಳು, ಜಿಲ್ಲಾಧಿಕಾರಿಗಳು, ತಹಶೀಲ್ದಾರರು, ಬಿ.ಡಿ.ಓ.ಗಳು, ಟ್ರೆಜರಿಗಳಿಂದ ಕೇಂದ್ರ ಸರಕಾರದ ಪುರಸ್ಕೃತ ಯೋಜನೆಗಳ ಬಾಬ್ತು

ಹಾಗೂ ರಾಜ್ಯ ಸರಕಾರಗಳ, ಕೇಂದ್ರ ಸರಕಾರಗಳ ಯೋಜನಾ ಬಾಬ್ತು ಹಣ ತೆಗೆದು ಅದನ್ನು ಸಂಪೂರ್ಣ ವೆಚ್ಚ ಮಾಡದೆ ತಮ್ಮ ತಮ್ಮ ಪಿ.ಡಿ. ಲೆಕ್ಕದಲ್ಲಿ ತಾರೀಖು 31-3-1997ಕ್ಕೆ 240.36 ಕೋಟಿ ಇಟ್ಟಿದ್ದಾರೆ. ಇದು ಅವ್ಯಾಹತವಾಗಿ ಪ್ರತಿವರ್ಷ ನಡೆದು ಬಂದಿದ್ದು ವೆಚ್ಚ ಮಾಡದೆ ಈ ಡಿಪಾಸಿಟ್ ಇಡುತ್ತಿರುವ ಹಿನ್ನೆಲೆಯ ಗುಟ್ಟಾದರೂ ಏನು? ಈ ನೀತಿಬಾಹಿರ ಕುತ್‌ಸಂಪ್ರದಾಯಕ್ಕೆ ಸರಕಾರದಲ್ಲಿರುವ ಹೊಣೆಗಾರರು ತಡೆ ಹಾಕಲೇಬೇಕಾದುದು ಸಾರ್ವಜನಿಕ ಹಿತದೃಷ್ಟಿಯಿಂದ ಅನಿವಾರ್ಯ, ತಮ್ಮ ತಮ್ಮ ಇಲಾಖೆಯ ಬೇಡಿಕೆಗಳಿಗೆ ವಿಧಾನಮಂಡಳ ಮಂಜೂರಿ ಕೊಟ್ಟ ಮೇಲೆ ಅವರವರ ಇಲಾಖೆಯ ನಿಗದಿತ ಮೊತ್ತವನ್ನು ಸಂಪೂರ್ಣವಾಗಿ ಕಾಲಕಾಲಕ್ಕೆ ವೆಚ್ಚಮಾಡುವುದು ಹೊಣೆಗಾರ ಇಲಾಖಾ ಮಂತ್ರಿಗಳ ಹಾಗೂ ಇಲಾಖಾ ಕಾರ್ಯದರ್ಶಿಗಳ ಕರ್ತವ್ಯವಾಗ ಬೇಕು. ವರ್ಷದ ಮೊದಲ ಹನ್ನೊಂದು ತಿಂಗಳಲ್ಲಿ ವೆಚ್ಚ ಮಾಡದೆ ಕೊನೆಯ ಮಾರ್ಚ್ ತಿಂಗಳೊಂದರಲ್ಲಿಯೇ ವಾರ್ಷಿಕ ಬಜೆಟ್ ಹಣದಲ್ಲಿ ಶೇಕಡಾ 52ರಿಂದ 100ರ ವರೆಗೆ ಕೆಲವು ಇಲಾಖೆಗಳಲ್ಲಿ ವೆಚ್ಚ ಮಾಡುವ ನೀತಿ ನಿಯಮಬಾಹಿರ ವ್ಯವಹಾರ ಸರಕಾರಕ್ಕೆ ಸಮಂಜಸವಲ್ಲ. ಮಾರ್ಚ್ 31ಕ್ಕೆ ಖೋಟಾ ಬಿಲ್ಲುಗಳನ್ನು ಸೃಷ್ಟಿಸಿ ಹಣ ಎತ್ತಿ ಹಾಕಿದ ಉದಾಹರಣೆ ಸಾಕಷ್ಟು ಜೀವಂತವಿವೆಯಲ್ಲವೇ?

ಶಿಕ್ಷಣ, ಕಂದಾಯ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಗ್ರಾಮಾಭಿವೃದ್ಧಿ, ಪಂಚಾಯತ್ ರಾಜ್, ವಸತಿ ಮತ್ತು ನಗರಾಭಿವೃದ್ಧಿ, ವಾರ್ತಾ, ಯುವಜನ ಸೇವೆ, ಕಾರ್ಮಿಕ, ಸಮಾಜ ಕಲ್ಯಾಣ, ಸಹಕಾರ, ಗೃಹ, ವಾಣಿಜ್ಯ ಮತ್ತು ಉದ್ಯಮ, ಅರಣ್ಯ, ಪರಿಸರ ಇತ್ಯಾದಿ ಕೆಲವು ಇಲಾಖೆ ಅಧಿಕಾರಿಗಳು 86-87ರಿಂದ 95-96ರ ವರೆಗಿನ ಅವಧಿಯಲ್ಲಿ ಅವರವರ ಇಲಾಖೆಯ ಹಣ ವೆಚ್ಚ ಮಾಡಿರುವ ಬಗ್ಗೆ ಯುಟಿಲೈಜೇಶನ್ ಸರ್ಟಿಫಿಕೇಟುಗಳನ್ನು ಪಡೆದು ಸಾದರಪಡಿಸದೆ ಇರುವ ಮೊತ್ತ 10-10-97ಕ್ಕೆ 412.53 ಕೋಟಿ ಬಾಕಿಯಿರುತ್ತದೆ. ಲೋಕೋಪಯೋಗಿ, ನೀರಾವರಿ, ಪಂಚಾಯತ್ ರಾಜ್ ಮೊದಲಾದ ಹದಿನೆಂಟು ಇಲಾಖೆಗಳಲ್ಲಿ ವಂಚಿಸಿ ಹಣ ದುರುಪಯೋಗ ಮಾಡಿದ ಹಾಗೂ ಹಣತಿಂದು ಹಾಕಿದ ಮೊತ್ತ 30-10-97ಕ್ಕೆ 3.23 ಕೋಟಿ ಮೊತ್ತದ 196 ತನಿಖಾ ಪ್ರಕರಣಗಳು ಬಾಕಿ ಇವೆ. ಏಕೆ? ಅಧಿಕಾರಿಗಳ ಈ ಕರ್ತವ್ಯಲೋಪ ಏಕೆ?

ರಾಜ್ಯ ಸರಕಾರದ ಯಾವತ್ತೂ ಆದಾಯ ವೆಚ್ಚದ ಬಗ್ಗೆ, ಸರಕಾರದ ನಿಗಮಗಳ ಬಗ್ಗೆ ಪ್ರತಿವರ್ಷ ಭಾರತದ ಸಂವಿಧಾನಬದ್ಧ ಕಂಟ್ರೋಲರ್ ಮತ್ತು ಆಡಿಟರ್ ಜನರಲ್ (ಸಿ.ಎ.ಜಿ.)ರವರು ಸುದೀರ್ಘವಾದ ರೆವಿನ್ಯೂ, ಕಮರ್ಷಿಯಲ್ ಹಾಗೂ ಸಿವಿಲ್ ವರದಿಗಳನ್ನು ಕೊಡುತ್ತಿದ್ದು ಅವುಗಳನ್ನು ಸರಕಾರದಲ್ಲಿಯ ಎಲ್ಲಾ ಮಂತ್ರಿ ಮಹೋದಯರು ಹಾಗೂ ಇಲಾಖಾ ಕಾರ್ಯದರ್ಶಿಗಳು ಕಣ್ತೆರೆದು ನೋಡಿ ಓದಿ ತಿಳಿದು ಸೂಕ್ತ ಕ್ರಮ

ತೆಗೆದುಕೊಂಡು ಸರಕಾರದ ಆರ್ಥಿಕ ಆರೋಗ್ಯವನ್ನು ಕಾಪಾಡಿಕೊಳ್ಳುವುದು ಒಳ್ಳೆಯದು. ಇಲ್ಲವಾದರೆ ಸರಕಾರ ಆರ್ಥಿಕ ಭದ್ರತೆಯಿಲ್ಲದೆ ಖಜಾನೆ ಖಾಲಿಯಾಗಿ ಅಕ್ರಮ ವ್ಯವಹಾರಗಳು ಹೆಚ್ಚಾಗಿ ಯಾವುದೇ ಶಿಸ್ತಿನ ಕ್ರಮವಿಲ್ಲದೆ ಅಭಿವೃದ್ಧಿ ಕಾರ್ಯಗಳು ಬಂದಾಗ ಜನತೆಗೆ ಸಿಗುವ ಸೌಲಭ್ಯ ಸವಲತ್ತುಗಳು ಸಿಗದೆ ವೆಚ್ಚಕ್ಕೆ ಹಣವಿಲ್ಲದೆ ಸರಕಾರಿ ಆಡಳಿತ ಹಾಗೂ ಅಭಿವೃದ್ಧಿ ದಿವಾಳಿ ಅಂಚಿನಲ್ಲಿದೆಯೆಂದು ಜನತೆ ಭಾವಿಸಬೇಕಾಗುತ್ತದೆ.

❑

ಕಂದಾಯ ಇಲಾಖೆ - ತೊಘಲಕ್ ನೀತಿ ಸರಿಯಲ್ಲ

ಕಂದಾಯ ಇಲಾಖೆ ಹಾಗೂ ಕಂದಾಯ ಆಡಳಿತ ಬ್ರಿಟಿಷರ ಕಾಲದಿಂದ, ಬ್ರಿಟಿಷ್‌ಪೂರ್ವ ಮರಾಠಾ ಕಾಲದಿಂದ ಹಾಗೂ ಈಗಲೂ ಅತಿ ಮಹತ್ವ ಹಾಗೂ ಪ್ರಾಮುಖ್ಯತೆ ಪಡೆದಿವೆ. ಜನತೆಯಿಂದ ಆದಾಯ ಪಡೆಯುವುದರ ಜೊತೆಗೆ ಜನತೆಗೆ ಸಮರ್ಥವಾದ ಕಾನೂನು ಹಾಗೂ ನ್ಯಾಯ ಪರಿಪಾಲನೆಯನ್ನು ಒದಗಿಸಿ ಜನತೆಯ ವಿವಿಧ ಬೇಡಿಕೆಗಳನ್ನು ಈಡೇರಿಸಿಕೊಡುವಲ್ಲಿ ಕೂಡ ಸಹಾಯಕವಾಗಿವೆ. ಈಗ ರೆವಿನ್ಯೂ ಅಧಿಕಾರಿಗಳು ತಾಲ್ಲೂಕು ಉಪವಿಭಾಗ ಹಾಗೂ ಜಿಲ್ಲೆಗಳಲ್ಲಿ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟರಾಗಿ ಕಾರ್ಯ ನಿರ್ವಹಿಸುತ್ತಿದ್ದರೆ, ಬ್ರಿಟಿಷ್‌ರ ಕಾಲದಲ್ಲಿ ಮಾಮಲೇದಾರರಾಗಿ, ಅಮಲ್ದಾರರಾಗಿ, ತಹಶೀಲ್ದಾರರಾಗಿ, ಲ್ಯಾಂಡ್ ರೆವಿನ್ಯೂ ಅಧಿನಿಯಮ, ಇಂಡಿಯನ್ ಪೀನಲ್ ಕೋಡ್ ಅಧಿನಿಯಮ, ಮಾಮಲೇದಾರ ಕೋರ್ಟ್ ಅಧಿನಿಯಮ, ಕ್ರಿಮಿನಲ್ ಪ್ರೊಸೀಜರ್ ಕೋಡ್ ಅಧಿನಿಯಮ, ಈಜಮೆಂಟ್ ಅಧಿನಿಯಮ, ಟೆನನ್ಸಿ ಅಧಿನಿಯಮ ಇತ್ಯಾದಿ ಅನೇಕ ಅಧಿನಿಯಮಗಳ ಅನೇಕ ಕಲಮುಗಳ ಪ್ರಕಾರ ಅಧಿಕಾರವನ್ನು ಚಲಾಯಿಸಿ ಉತ್ತಮ ಆಡಳಿತ ನಡೆಸಿ ಜನಪ್ರಿಯವಾಗಿದ್ದ ಕಾಲವನ್ನು ಜನತೆ ನೋಡಿದೆ. ತಹಶೀಲ್ದಾರ ಹುದ್ದೆಯಲ್ಲಿ ಕೇವಲ ಮಾಟ್ರಿಕ್ ಅಥವಾ ಎಸ್.ಎಸ್.ಎಲ್.ಸಿ. ಆದವರು ಸಹ ಇಲಾಖಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಪದವೀಧರರಾಗದಿದ್ದರೂ ಉತ್ತಮ ಆಡಳಿತ ಮಾಡಿ ಡೆಪ್ಯುಟಿ ಕಲೆಕ್ಟರ್ ಆಗಿ ಉತ್ತಮ ಹೆಸರು ಗಳಿಸಿದ ಅಸಂಖ್ಯಾತ ಅಧಿಕಾರಿಗಳು ನಮ್ಮ ದೇಶದಲ್ಲಿ ಆಗಿಹೋಗಿದ್ದಾರೆ. ಐ.ಸಿ.ಎಸ್. (ಭಾರತೀಯ ನಾಗರಿಕ ಸೇವೆ) ಪರೀಕ್ಷೆ ಪಾಸಾದವರು ತಹಶೀಲ್ದಾರ್, ಅಸಿಸ್ಟೆಂಟ್ ಕಮೀಶನರ್ ವ ಕಲೆಕ್ಟರ್, ಡೆಪ್ಯುಟಿ ಕಲೆಕ್ಟರ್ ವ ಕಮೀಷನರ್, ಡಿವಿಜನಲ್ ಕಮೀಷನರ್, ಕಮೀಷನರ್ ವ ಕಾರ್ಯದರ್ಶಿ, ಮುಖ್ಯ ಕಾರ್ಯದರ್ಶಿಯಾಗಿ ಸಹಕಾರದಲ್ಲಿ ಉತ್ತಮ ಸೇವೆ ಮಾಡಿದ್ದಾರೆ. "ನಾಗರಿಕ ಸೇವೆ" ಎನ್ನುವ ಶಬ್ದ ತಮಗೆ ಸರಿಹೋದದ್ದರಿಂದ ಆಡಳಿತ ಸೇವೆ (ಐ.ಎ.ಎಸ್.) ಎಂದು ಬದಲಾಯಿಸಿ ಐ.ಸಿ.ಎಸ್.ರವರ ಸಾರ್ಥ್ಯಕ್ಕೆ ತಕ್ಕಂತೆ ಇಂದಿನ ಐ.ಎ.ಎಸ್.

ಅಧಿಕಾರಿಗಳು ಬಹುಮಟ್ಟಿಗೆ ಕಾರ್ಯ ನಿರ್ವಹಿಸದೆ ಬಹುಮಟ್ಟಿಗೆ ಇಂದಿನ ಆಡಳಿತ ಹಳ್ಳಿಯಿಂದ ದಿಲ್ಲಿಯವರೆಗೆ ಹದಗೆಟ್ಟಿದೆ. ಐ.ಸಿ.ಎಸ್.ದವರಂತೆ ಅನೇಕ ಐ.ಎ.ಎಸ್.ದವರು ನ್ಯಾಯ ನಿಷ್ಠುರಿ ಆಡಳಿತಗಾರರಾಗದೆ ದಾಕ್ಷಿಣ್ಯಪರ ಆಡಳಿತಗಾರರಾಗಿ ರಾಜಕಾರಣಿಗಳ ತಾಳಕ್ಕೆ ತಕ್ಕಂತೆ ಕುಣಿವ ಅಧಿಕಾರಿಗಳನೇಕರು ತಮ್ಮ ರಾಷ್ಟ್ರದಲ್ಲಿದ್ದಾರೆ ಹಾಗೂ ಅವರನ್ನು ದುರುಪಯೋಗಪಡಿಸಿಕೊಳ್ಳುವ ರಾಜಕಾರಣಿಗಳು ಅನೇಕರು ನಮ್ಮ ರಾಷ್ಟ್ರದಲ್ಲಿದ್ದಾರೆ.

ನಮ್ಮ ರಾಜ್ಯದಲ್ಲಿ ಗ್ರಾಮ ಸಹಾಯಕ, ಗ್ರಾಮ ಲೆಕ್ಕಾಧಿಕಾರಿ, ರೆವಿನ್ಯೂ ಇನ್ಸ್‌ಪೆಕ್ಟರ್, ಡೆಪ್ಯುಟಿ ತಹಶೀಲ್ದಾರ್ ಅಥವಾ ನಾಡ ಆಫೀಸರ್, ತಹಶೀಲ್ದಾರ್, ಅಸಿಸ್ಟೆಂಟ್ ಕಮೀಷನರ್, ಡೆಪ್ಯುಟಿ ಕಮೀಷನರ್, ಡಿವಿಜನಲ್ ಕಮೀಷನರ್, ಕಮೀಷನರ್ ವ ಕಾರ್ಯದರ್ಶಿ ಮುಖ್ಯ ಕಾರ್ಯದರ್ಶಿ ಹೀಗೆ ವಿವಿಧ ಮಟ್ಟದಲ್ಲಿ ಈ ಎಲ್ಲ ಸಿಬ್ಬಂದಿ ರಾಜ್ಯಾದ್ಯಂತ ಕಾರ್ಯ ನಿರ್ವಹಿಸುತ್ತಿದೆ. ಈ ಸಿಬ್ಬಂದಿಗೆ ಅಧಿಕವಾಗಿ ಇನ್ನೂ ಅನೇಕ ಹುದ್ದೆಗಳನ್ನು ಅನಾವಶ್ಯಕವಾಗಿ ನಿರ್ಮಿಸಲಾಗಿದ್ದು ನಿರೀಕ್ಷಿತ ಮಟ್ಟಕ್ಕೆ ತಕ್ಕಂತೆ ಸಮರ್ಪಕವಾಗಿ ಕೆಲಸ ಮಾಡದೆ ಆಡಳಿತ ಶಿಥಿಲಗೊಂಡಿರುವುದು ಅಲ್ಲಲ್ಲಿ ಕಂಡುಬರುತ್ತದೆ. ರಾಜ್ಯದಲ್ಲೇ ಸುಮಾರು 10000 ಗ್ರಾಮ ಸಹಾಯಕ, 8718 ಗ್ರಾಮಲೆಕ್ಕಾಧಿಕಾರಿ, 601 ರೆವಿನ್ಯೂ ಇನ್ಸ್‌ಪೆಕ್ಟರ್, 401 ಶಿರಸ್ತೆದಾರ, 317 ನಾಡ ಆಫೀಸ್ ಡೆಪ್ಯುಟಿ ತಹಶೀಲ್ದಾರ್, 185 ತಹಶೀಲ್ದಾರ್, 53 ಅಸಿಸ್ಟೆಂಟ್ ಕಮೀಷನರ್, 27ಕ್ಕಿಂತ ಹೆಚ್ಚು ಡೆಪ್ಯುಟಿ ಕಮೀಷನರ್, ನಾಲ್ಕಕ್ಕಿಂತ ಹೆಚ್ಚು ಡಿವಿಜನ್ ಕಮೀಷನರ್, ಸಾಕಷ್ಟು ಅಥವಾ ಹೆಚ್ಚು ಅನಾವಶ್ಯಕ ಕಮೀಷನರ್‌ಗಳ ಹುದ್ದೆ ನಮ್ಮ ರಾಜ್ಯದ ರೆವಿನ್ಯೂ ಇಲಾಖೆಯಲ್ಲಿದೆ. ಸುಮಾರು 200ಕ್ಕಿಂತ ಹೆಚ್ಚು ಐ.ಎ.ಎಸ್., ಲೆಕ್ಕವಿಲ್ಲದಷ್ಟು ಕೆ.ಎ.ಎಸ್. ಅಧಿಕಾರಿಗಳು ರಾಜ್ಯದಲ್ಲಿದ್ದಾರೆ. ರೆವಿನ್ಯೂ ಹಾಗೂ ಜಿಲ್ಲಾಡಳಿತ ಈ ಇಲಾಖೆಗಳಲ್ಲಿ ಸುಮಾರು 22, 576 ಹುದ್ದೆಗಳಿವೆ. ಈ ಎಲ್ಲಾ ಹುದ್ದೆಗಳಲ್ಲಿ ಅನಾವಶ್ಯಕ ಹುದ್ದೆಗಳನೇಕವಿದ್ದು ಪ್ರತಿವರ್ಷ ಈ ಹುದ್ದೆಗಳ ಸಂಖ್ಯೆ ಏರುತ್ತಲೇ ಇದೆ. ಜವಾಬ್ದಾರಿ ಹುದ್ದೆಯ ಅಧಿಕಾರಿ ವ ಸಿಬ್ಬಂದಿಗೆ ದೈನಂದಿನ ಕೆಲಸದ 'ಜಾಬ್‌ಚಾರ್ಟ್' ಮಾಯವಾಗಿ ಹೋಗಿವೆ. ಪಹಣಿ ದಾಖಲೆ, ವಾರ್ಸಾ ದಾಖಲೆ, ಜನನ ಮರಣ ದಾಖಲೆ ಇತ್ಯಾದಿ ದಾಖಲೆಗಳು ಗ್ರಾಮ ಲೆಕ್ಕಾಧಿಕಾರಿಗಳಿಂದ ಸಮರ್ಪಕವಾಗಿ ಸಕಾಲದಲ್ಲಿ ಆಗುತ್ತಿರುವುದಿಲ್ಲ. ನಿಗದಿತ ಸಾಜಾದಲ್ಲಿ ನಿಗದಿತ ಹಳ್ಳಿಗಳಲ್ಲಿ ಬಹುತೇಕ ತಲಾಠಿಗಳು ಇರುವುದೇ ಇಲ್ಲ. ಈ ಬಗ್ಗೆ ಯಾವುದೇ ಮೇಲಧಿಕಾರಿ ತಲೆ ಹಾಕುವುದೇ ಇಲ್ಲ. ಇತ್ತೀಚಿಗೆ ಹೆಚ್ಚೆಚ್ಚು ಜಿಲ್ಲೆಗಳ ರಚನೆಯಾಗುತ್ತಲಿವೆ. ಪ್ರತಿಯೊಂದು ತಾಲ್ಲೂಕುಗಳು ಜಿಲ್ಲಾ ಕೇಂದ್ರಗಳಿಂದ ಸುತ್ತುವರಿಯುತ್ತಲಿವೆ. ಪ್ರತಿಯೊಂದು ತಾಲ್ಲೂಕಿನ ಸಂಪರ್ಕ ಜಿಲ್ಲಾ ಕೇಂದ್ರಕ್ಕೆ ನೇರವಾಗಿದೆ. ಪ್ರತಿಯೊಂದು ಜಿಲ್ಲಾ ಕೇಂದ್ರಗಳ ಸಂಪರ್ಕ ರಾಜ್ಯದ ರಾಜಧಾನಿ ಕೇಂದ್ರ ಬೆಂಗಳೂರಿಗೆ ನೇರ ಸಂಪರ್ಕ ಹೊಂದಿವೆ. ಬ್ರಿಟಿಷರ ಕಾಲದ ಸಂಪರ್ಕದ ತೊಂದರೆ ಈಗಿಲ್ಲ. ಬ್ರಿಟಿಷರ ಕಾಲದ ಅಸಿಸ್ಟೆಂಟ್ ಕಮೀಷನರ್ ಹಾಗೂ ಡಿವಿಜನಲ್ ಕಮೀಷನರ್ ಹುದ್ದೆಗಳನ್ನು ರದ್ದುಮಾಡಿ ತಾಲ್ಲೂಕು

ತಹಶೀಲ್ದಾರ್, ಜಿಲ್ಲಾ ಡೆಪ್ಯುಟಿ ಕಮೀಷನರ್, ರಾಜ್ಯದ ಇಲಾಖಾ ಕಮೀಷನರ್ ಹೀಗೆ ನೇರವಾದ ಹುದ್ದೆಗಳನ್ನು ಮಾತ್ರ ಇಟ್ಟು ಸಾರ್ವಜನಿಕರಿಗೆ, ಕಕ್ಷಿದಾರರಿಗೆ ಹಾಗೂ ನ್ಯಾಯವಾದಿಗಳಿಗೆ ಅನುಕೂಲವಾಗುವಂತೆ ಸಾರ್ವಜನಿಕ ಹಿತದೃಷ್ಟಿಯಿಂದ ಅನುಕೂಲ ಮಾಡಿಕೊಡಬೇಕೆಂದು ಪತ್ರಿಕೆ ಹಾಗೂ ವಿಧಾನಮಂಡಲದಲ್ಲಿ ಅನೇಕ ಸಲಹೆ, ಸೂಚನೆಗಳು ಬಂದಿರುವುದನ್ನು ಸರಕಾರ ಕಣ್ತೆರೆದು ನೋಡುವುದು ಒಳ್ಳೆಯದು.

ನಮ್ಮ ರಾಜ್ಯದ ರೆವಿನ್ಯೂ ಇಲಾಖೆಯ ಇತಿಹಾಸವನ್ನು ನೋಡಿದರೆ ರೆವೆನ್ಯೂ ಇನ್ಸ್‌ಪೆಕ್ಟರ್‌ರಾಗಿ, ಸರ್ಕಲ್ ಆಫೀಸರರಾಗಿ, ಡೆಪ್ಯುಟಿ ತಹಶೀಲ್ದಾರರಾಗಿ, ಪ್ರಾಮಾಣಿಕ ವಾಗಿ, ದಕ್ಷರಾಗಿ, ಅತ್ಯುತ್ತಮ ಆಡಳಿತ ಮಾಡಿದ ಹಾಗೂ ಮಾಡುತ್ತಿರುವ ಉದಾಹರಣೆ ಸಾಕಷ್ಟು ಇವೆ. ಅಂತೆಯೇ ತಹಶೀಲ್ದಾರರಾಗಿ, ಅಸಿಸ್ಟೆಂಟ್ ಕಮೀಷನರರಾಗಿ, ಡೆಪ್ಯುಟಿ ಕಮೀಷನರ್‌ರಾಗಿ ದಕ್ಷತೆಯಿಂದ ಕೆಲಸ ಮಾಡಿದ ಉದಾಹರಣೆ ಕೂಡ ಸಾಕಷ್ಟು ಇವೆ. ಕೆ.ಎ.ಎಸ್., ಐ.ಎ.ಎಸ್. ಅಧಿಕಾರಿಗಳನ್ನು ಮೀರಿಸಿ ಅತ್ಯುತ್ತಮ ದಕ್ಷ ಆಡಳಿತ ಮಾಡಿದ ಹಾಗೂ ಮಾಡುತ್ತಿರುವ ನಾನ್ ಕೆ.ಎ.ಎಸ್. ಹಾಗೂ ನಾನ್ ಐ.ಎ.ಎಸ್. ಅಧಿಕಾರಗಳು ಸಹ ರಾಜ್ಯದಲ್ಲಿ ಸಾಕಷ್ಟು ಇದ್ದಾರೆ. ಅನೇಕ ಸಂಘ, ಸಂಸ್ಥೆ, ನಿಗಮಗಳಲ್ಲಿ ಪ್ರಮುಖ ಹುದ್ದೆಗಳಲ್ಲಿರುವ ಕೆ.ಎ.ಎಸ್., ಐ.ಎ.ಎಸ್. ಮೀರಿಸಿ ಅವುಗಳಲ್ಲಿ ಉತ್ತಮ ಆಡಳಿತ ಮಾಡಿ ಲಾಭದಾಯಕವಾಗಿ ನಡೆಯುವಂತೆ ಮಾಡಿದ ನಾನ್ ಕೇಡರ್ ಅಧಿಕಾರಿಗಳು ಅನೇಕರಿದ್ದಾರೆ. ಇದಕ್ಕೆ ತದ್ವಿರುದ್ಧವಾಗಿ ಅನೇಕ ಸಂಘ, ಸಂಸ್ಥೆ, ನಿಗಮಗಳಲ್ಲಿರುವ ಐ.ಎ.ಎಸ್., ಕೆ.ಎ.ಎಸ್. ಅಧಿಕಾರಿ, ನೌಕರರು ಮುಖ್ಯ ಆಡಳಿತಾಧಿಕಾರಿಗಳಿದ್ದರೂ ಅಸಮರ್ಪಕ ಆಡಳಿತವಾಗಿ ನೂರಾರು ಕೋಟಿ ನಷ್ಟಕ್ಕೆ ಹಾಗೂ ದಿವಾಳಿಗೆ ಕಾರಣರಾಗಿರುವ ಉದಾಹರಣೆಗಳು ಕೂಡ ನಮ್ಮ ರಾಜ್ಯದಲ್ಲಿವೆ. ಈಗಾಗಲೇ ಬಿ.ಡಿ.ಓ. ಎಕ್ಸಿಕ್ಯೂಟಿವ್ ಆಫೀಸರ್, ತಹಶೀಲ್ದಾರ್, ಹುದ್ದೆಯಲ್ಲಿ ಐ.ಎ.ಎಸ್., ಕೆ.ಎ.ಎಸ್. ಕೇಡರಲ್ಲದವರು ದಕ್ಷತೆಯಿಂದ ಅತ್ಯುತ್ತಮ ಆಡಳಿತ ಮಾಡುವ ಉದಾಹರಣೆ ಸಾಕಷ್ಟು ಇರುವಾಗ, ಕೆಲಸವಿಲ್ಲದ ತಾಲ್ಲೂಕು ಪಂಚಾಯತಿಗಳಿಗೆ ಬಿ.ಡಿ.ಓ. ಹಾಗೂ ಕಾರ್ಯ ನಿರ್ವಾಹಕ ಅಧಿಕಾರಿ ಹುದ್ದೆಗಳಿಗೆ ಅನಾವಶ್ಯಕವಾಗಿ ಕೆ.ಎ.ಎಸ್. ಅಧಿಕಾರಿ ಗಳನ್ನು ಹಾಕಿ ತಾಲ್ಲೂಕು ಪಂಚಾಯತಿ ಕಾರ್ಯ ಹಾಗೂ ಆಡಳಿತ ಹದಗೆಡುವಂತೆ ಮಾಡಿದ ಅನೇಕ ಉದಾಹರಣೆ ಇವೆ. ತಹಶೀಲ್ದಾರ ಹುದ್ದೆಗೆ ಅಸಿಸ್ಟೆಂಟ್ ಕಮೀಷನರ್ ಗ್ರೇಡ್‌ನವರನ್ನು ಹಾಕುವ ವಿಚಾರ ಸರಕಾರ ಹೊಂದಿರುವುದು ತೊಘಲಕ್ ಧೋರಣೆಯೆಂದು ಹೇಳದೆ ಗತ್ಯಂತರವಿಲ್ಲ. ದಕ್ಷ ಆಡಳಿತಕ್ಕೆ ಪದವಿ ಹಾಗೂ ಕೇಡರ್ ಪಡೆದವರು ಮಾತ್ರ ಅರ್ಹರು, ಇತರರು ಅರ್ಹರಲ್ಲವೆಂಬ ಆತುರದ ದುಡುಕು ತೀರ್ಮಾನಕ್ಕೆ ಸರಕಾರ ಬಾರದೆ ಮಿತವ್ಯಯ, ಜನರ ಅನುಕೂಲ, ದಕ್ಷತೆ, ಉತ್ತಮ ಆಡಳಿತ ಇತ್ಯಾದಿ ಒಳಿತುಗಳ ಬಗ್ಗೆ ಸರಕಾರ ಗಮನಹರಿಸುವುದಗತ್ಯ.

❑

ಅನಗತ್ಯ ಆಮದು ರೈತರಿಗೆ ಅಪಾಯಕಾರಿ

ನಮ್ಮ ರಾಷ್ಟ್ರದಲ್ಲಿ ಜಲ-ನೆಲ-ಸಂಪತ್ತು ಹೇರಳವಾಗಿದ್ದ ಕಾಲ ಒಂದಿತ್ತು. ಆ ಕಾಲ ಈಗ ಬದಲಾಗಿ ಅಂತರಜಲ ಕಡಿಮೆಯಾಗುತ್ತ ಬತ್ತಿ ಪಾತಾಳದಿಂದ ಕೆಳಕೆಳಗೆ ಹೋಗುತ್ತಲಿದೆ. ಆಕಾಶದಿಂದ ಬಂದಿಳಿದ ಮಳೆ ನೀರು ನಿರಾತಂಕವಾಗಿ ಪೂರ್ವ, ಪಶ್ಚಿಮ ಹಾಗೂ ದಕ್ಷಿಣದ ಸಮುದ್ರಗಳ ಪಾಲಾಗುತ್ತದೆ. ಹೀಗೆ ಸಮುದ್ರಗಳತ್ತ ಹೋಗುವ ನೀರನ್ನು ತಡೆದು ಅಲ್ಲಲ್ಲಿ ಬಾಂದಾರ ಡ್ಯಾಮ್‌ಗಳನ್ನು ಕಟ್ಟಿ, ಅಲ್ಲಿ ನೀರನ್ನು ಸಂಗ್ರಹ ಮಾಡಿ ನೆರೆ ರಾಜ್ಯದವರು ಅದನ್ನು ಉಪಯೋಗ ಮಾಡಿ ತಮ್ಮ ತಮ್ಮ ರಾಜ್ಯದ ರೈತರಿಗೆ ನೀರಾವರಿ ಸೌಲಭ್ಯಗಳನ್ನು ಒದಗಿಸಿಕೊಟ್ಟು ರೈತರ ಹಾಗೂ ಆಯಾ ರಾಜ್ಯದ ಆರ್ಥಿಕ ಪ್ರಗತಿಗೆ ದಾರಿ ಮಾಡಿಕೊಂಡಿದ್ದಾರೆ. ಕರ್ನಾಟಕ ರಾಜ್ಯದಲ್ಲಿಯ 6.81 ಲಕ್ಷ ಹೆಕ್ಟರ ಜಮೀನನ್ನು ನೀರಾವರಿಗೆ ಒಳಪಡಿಸಬೇಕಾದ ಸುಮಾರು 36661 ಪುರಾತನ ಕಾಲದ ಕೆರೆಗಳೆಲ್ಲಾ ಹುಗಿದು ಹೋಗಿ ಮೂಲ ಸಾಮರ್ಥ್ಯದ ನೀರನ್ನು ಸಂಗ್ರಹ ಮಾಡಿಕೊಳ್ಳದೆ ಶೇಕಡಾ 30ರಷ್ಟು ಕೆರೆಗಳು ಸಂಪೂರ್ಣವಾಗಿ ನಿರರ್ಥಕವಾಗಿ ಎಷ್ಟೂ ನೀರು ನಿಲ್ಲದೆ ಬಲಾಢ್ಯರಿಗೆ ಅಕ್ರಮ ಸಾಗುವಳಿ ಮಾಡಲಿಕ್ಕೆ ಹಾಗೂ ವಸತಿಗೆ ಅನುಕೂಲವಾಗಿದೆ. ಇನ್ನೂ ಶೇಕಡಾ 70ರಷ್ಟು ಕೆರೆಗಳು ಮೂಲ ಸಾಮರ್ಥ್ಯದಲ್ಲಿ ಕೇವಲ ಶೇಕಡಾ 25ರಷ್ಟು ನೀರನ್ನು ಮಾತ್ರ ಸಂಗ್ರಹಿಸಿ ವ್ಯವಸಾಯ ಬೆಳೆಗೆ ಅನುಕೂಲವಾಗದೆ ಹಾಗೂ ದನಕರುಗಳಿಗೆ ಕುಡಿಯುವ ನೀರು ಸಹ ಸಿಗದೆ ನಿಷ್ಪ್ರಯೋಜಕವಾಗಿವೆ. ಆದಾಗ್ಯೂ ರಾಜ್ಯದಲ್ಲಿ ಸಣ್ಣ ನೀರಾವರಿಗೆ 111.81 ಟಿ.ಎಂ.ಸಿ. ನೀರನ್ನು ಬಳಸಿಕೊಂಡು 4.77 ಲಕ್ಷ ಹೆಕ್ಟರ್ ಜಮೀನನ್ನು ನೀರಾವರಿಗೆ ಒಳಪಡಿಸಿದೆಯೆಂದು ಸರಕಾರ ಹೇಳುತ್ತಿದ್ದು ಇದು ಎಷ್ಟರ ಮಟ್ಟಿಗೆ ನಿಜವೆಂಬುದು ಸಂಶಯವಿದೆ. ರಾಜ್ಯದಿಂದ ಹೊರಹೋಗುವ ನೀರನ್ನು ತಡೆದು ಸಂಗ್ರಹ ಮಾಡಿ ಉಪಯೋಗಿಸಿಕೊಳ್ಳಲು ವಿವಿಧ ನೀರಾವರಿ ಯೋಜನೆಗಳನ್ನು ಸಹ ಕೈಕೊಳ್ಳದೆ ಕೈಕೊಂಡಿದ್ದರೆ ಅವುಗಳನ್ನು ಪೂರ್ತಿಗೊಳಿಸಿ ನೀರನ್ನು ಉಪಯೋಗಿಸಲು ಸಹ ಸ್ವಾತಂತ್ರ್ಯ ನಂತರದ ಬಹುತೇಕ ಎಲ್ಲಾ ಸರಕಾರಗಳು ವಿಫಲಗೊಂಡಿರುವ ಸುಸ್ಪಷ್ಟ ಚಿತ್ರ ಎಲ್ಲರ ಎದುರಿಗಿದೆ.

ರಾಜ್ಯದಲ್ಲಿ ಲಭ್ಯವಿದ್ದ ನೀರನ್ನು, ತೇವವನ್ನು, ಹಸಿಯನ್ನು ಹಾಗೂ ಹವಾಮಾನವನ್ನು ಉಪಯೋಗಿಸಿ ಸದ್ಬಳಕೆ ಮಾಡಿಕೊಂಡು ಕಷ್ಟಜೀವಿಗಳಾಗಿ ವಿವಿಧ ಬೆಳೆಯನ್ನು ಬೆಳೆಯುವ ರೈತ ಕೂಡ ಇಂದು ನಿರ್ಜೀವಿಯಾಗಿದ್ದಾನೆ. ಆರ್ಥಿಕ ಸಂಕಷ್ಟದಲ್ಲಿ ತೇಲಿ ಮುಳುಗುತ್ತಿದ್ದಾನೆ. ರೈತನು ಕಷ್ಟಪಟ್ಟು ಬೆಳೆದ ಜೋಳಕ್ಕಾಗಲೀ, ಮೆಕ್ಕೆಜೋಳಕ್ಕಾಗಲೀ, ಭತ್ತಕ್ಕಾಗಲೀ, ಹತ್ತಿಗಾಗಲೀ, ಕಬ್ಬಿಗಾಗಲೀ, ವಿವಿಧ ಎಣ್ಣೆಕಾಳಿಗಾಗಲೀ ಅಥವಾ ಯಾವುದೇ ಫಸಲಿಗಾಗಲೀ ಉತ್ಪಾದನಾ ವೆಚ್ಚಕ್ಕಿಂತ ನಿರೀಕ್ಷಿಸಿದ ಹೆಚ್ಚು ಆದಾಯ ಬಾರದೆ ಪರಿತಪಿಸುತ್ತ ಚಿಂತಾಕ್ರಾಂತನಾಗಿದ್ದಾನೆ. ಚಿಂತೆಯೇ ಮುಪ್ಪು ಎಂಬಂತೆ ಈ ಚಿಂತೆ, ಮುಪ್ಪು ಹಾಗೂ ನಾವು ರೈತರನ್ನು ಕಾಡುತ್ತಿದೆ. ಇದಕ್ಕೆ ಉಪಾಯವೇನು? "ಯಾವ ರಾಜ ಬಂದರೂ ರೈತನಿಗೆ ರಾಗಿ ಬೀಸುವುದು ತಪ್ಪದು" ಎಂಬಂತೆ ಯಾವುದೇ ಸರಕಾರ ಬರಲೀ ಯಾವುದೇ ಮಣ್ಣಿನ ಮಗ ಯಾವುದೇ ಅಧಿಕಾರಕ್ಕೆ ಬರಲೀ ಅವರಿಂದ ರೈತರಿಗೆ ಪ್ರಯೋಜನವಾಗದಿರುವುದು ರಾಮರಾಜ್ಯದ ನಂತರ ಯುಗಯುಗಾಂತರದಿಂದ ಯಥಾವತ್ತಾಗಿ ಸಾಗಿಬಂದಿದೆ. ಆಹಾರಧಾನ್ಯ ಬೆಳೆವ ರೈತನಿಗೆ ಸರಿಯಾದ ಮಾರ್ಗದರ್ಶನವಿಲ್ಲದೆ ಸಾಕಷ್ಟು ಆಹಾರಧಾನ್ಯ ಬೆಳೆದರೂ ಅವನು ಪ್ರತಿವರ್ಷ ಹೆಚ್ಚೆಚ್ಚು ಆಹಾರಧಾನ್ಯ ಬೆಳೆಯಲು ಪ್ರೋತ್ಸಾಹನಿಲ್ಲದೆ ಬೆಳೆದ ಆಹಾರಧಾನ್ಯಕ್ಕೆ ತಕ್ಕ ಬೆಲೆ ಇಲ್ಲದೆ ಮಾರಾಟವಾಗದೆ ಸಂಗ್ರಹವಾಗಿರುವಾಗಲೇ ಪರದೇಶಗಳಿಂದ ಅದಾವ ದುರುದ್ದೇಶ ದಿಂದಲೋ ಅಥವಾ ದುರಾಲೋಚನೆಯಿಂದಲೋ ಹೇರಳವಾದ ಆಹಾರಧಾನ್ಯವನ್ನು ಪರದೇಶದಿಂದ ಆಮದು ಮಾಡಿಕೊಂಡು ಭಾರತದೇಶದಲ್ಲಿಯ ಆಹಾರಧಾನ್ಯದ ಬೆಲೆ ಏರದಂತೆ ರೈತರಿಗೆ ಅವರ ಬೆಳೆಯಿಂದ ಲಾಭ ದೊರೆಯದಂತೆ ಸರಕಾರಗಳು ಮಾಡುತ್ತಿವೆ. ಕಬ್ಬು ಹೆಚ್ಚಾಗಿ ಬೆಳೆದು ಸಕ್ಕರೆ ಉತ್ಪಾದನೆಯಾಗಿ ಕಬ್ಬಿಗೆ ಹಾಗೂ ಸಕ್ಕರೆಗೆ ಹೆಚ್ಚಿನ ಬೆಲೆ ಸಿಕ್ಕು ಕಬ್ಬು ಬೆಳೆಗಾರರಿಗೆ ಅವರ ಸಕ್ಕರೆ ಕಾರ್ಖಾನೆಗಳಿಗೆ ಹೆಚ್ಚು ಲಾಭ ಸಿಗುವ ಹೊತ್ತಿಗೆ ಪರದೇಶಗಳಿಂದ ಸಕ್ಕರೆ ಆಮದು ಮಾಡಿಕೊಂಡು ದೇಶಿಯ ಸಕ್ಕರೆಯ ಬೆಲೆ ಕಡಿಮೆಯಾಗಿ ಕಬ್ಬು ಬೆಳೆಗಾರ ರೈತ ಹಾಗೂ ರೈತರ ಸಕ್ಕರೆ ಕಾರ್ಖಾನೆಗಳು ದಿವಾಳಿಯಾಗುವಂತೆ ಸರಕಾರಗಳು ಮಾಡುತ್ತಿವೆ. ಕುಸುಬಿ, ಶೇಂಗಾ, ಎಳ್ಳು, ಸೋಯಾಬೀನ್, ಸೂರ್ಯಕಾಂತಿ ಬೆಳೆಯನ್ನು ರೈತ ಬೆಳೆದು ರೈತರಿಂದ ಈ ಎಲ್ಲಾ ಎಣ್ಣೆಕಾಳುಗಳನ್ನು ಎಣ್ಣೆ ಮಿಲ್‌ನವರು ಖರೀದಿ ಮಾಡಿ ಎಣ್ಣೆ ತಯಾರಿಸಿ, ಮಾರಾಟ ಮಾಡಿ ರೈತರಿಗೆ ಹಾಗೂ ಎಣ್ಣೆಮಿಲ್ಲು ಗಳಿಗೆ ಲಾಭದಾಯಕವಾಗುವ ಸನ್ನಿವೇಶ ಬಂದ ಕೂಡಲೇ ಪರದೇಶಗಳಿಂದ ಹೇರಳವಾದ ಪ್ರಮಾಣದ ಎಣ್ಣೆಯನ್ನು ಹಾಗೂ ಎಣ್ಣೆಕಾಳುಗಳನ್ನು ಆಮದು ಮಾಡಿಕೊಂಡು ಭಾರತೀಯ ಎಣ್ಣೆಕಾಳು ಬೆಳೆಗಾರ ಹಾಗೂ ಅವನ ಎಣ್ಣೆಮಿಲ್ಲುಗಳು ಹಾಳಾಗುವಂತೆ ಸರಕಾರ ಮಾಡುತ್ತಿವೆ. ಹಲವಾರು ಹತ್ತು ಕುತ್ತುಗಳಿಂದ ಪಾರಾಗಿ ಹತ್ತಿ ಬೆಳೆಗಾರ ಹತ್ತಿ ಬೆಳೆದು ಆತನ ಹತ್ತಿ ಬೆಳೆಯನ್ನು ಹತ್ತಿ ವ ನೂಲಿನ ಗಿರಣಿಗಳು ಖರೀದಿ ಮಾಡಿ ಹತ್ತಿ ವ ನೂಲಿನ ಉತ್ಪಾದನಾ ವಸ್ತುಗಳನ್ನು ಯೋಗ್ಯ ಹಾಗೂ ಲಾಭದಾಯಕ ಬೆಲೆಗೆ ಮಾರಾಟ ಮಾಡುತ್ತಿರುವಾಗಲೇ ಪರದೇಶಗಳಿಂದ ಹತ್ತಿ ಉತ್ಪಾದನಾ ವಸ್ತುಗಳನ್ನು ಆಮದು

ಮಾಡಿಕೊಂಡು ಹತ್ತಿ ಬೆಳೆಗಾರ ಹಾಗೂ ಹತ್ತಿ ಗಿರಣಿಗಳು ಹಾಳಾಗುವಂತೆ ಸರಕಾರ ಮಾಡುತ್ತಿವೆ. ಹತ್ತಿ ಬೆಳೆಗಾರ ಹಾಗೂ ಹತ್ತಿ ಗಿರಣಿಗಳನ್ನು ಸತ್ಯಾನಾಶ ಮಾಡಲು ಪರಿಸರವನ್ನು ಸಾಕಷ್ಟು ಹಾಳು ಮಾಡುತ್ತ ಪರಿಸರವಾದಿಗಳು ಇಂದಿಗೆ ಮಿಲಾಫಿಯಾಗಿ ದೊಡ್ಡ ಪ್ರಮಾಣದಲ್ಲಿ ಗಿಡಮರಗಳನ್ನು ಕಡಿದು ಸಾಗಿಸಿ ದೊಡ್ಡ ಪ್ರಮಾಣದಲ್ಲಿ ದೇಶಾದ್ಯಂತ ಕಾಗದ ಗಿರಣಿ ಹಾಗೂ ಕಟ್ಟಿಗೆ ಬಟ್ಟೆ ಗಿರಣಿಗಳನ್ನು ಸ್ಥಾಪಿಸಿ ಟೆರಿಕಾಟ್, ಟೆರಿಲಿನ್ ಮೊದಲಾದ ಕಟ್ಟಿಗೆ ಬಟ್ಟೆಯನ್ನು ದೇಶಾದ್ಯಂತ ಉಪಯೋಗಿಸಲು ಹಾಗೂ ಹತ್ತಿ ಬೆಳೆಗಾರ ಕೈಮಗ್ಗ ನೇಕಾರರನ್ನು ಹಾಗೂ ಹತ್ತಿ ಗಿರಣಿಗಳನ್ನು ನಾಶಮಾಡಲು ಸರಕಾರಗಳು ಮುಂದಾಗುತ್ತಲಿವೆ.

ನಮ್ಮ ದೇಶದಲ್ಲಿ ಆಹಾರಧಾನ್ಯ, ಕಬ್ಬು, ಹತ್ತಿ, ಎಣ್ಣೆ ಕಾಳು, ಖಾರ, ಸಾಂಬಾರ ವಸ್ತು ಇತ್ಯಾದಿಗಳು ಹೇರಳವಾಗಿ ಬೆಳೆಯಲಿಕ್ಕೆ ಹೆಚ್ಚಿನ ತಕ್ಕ ಬೆಲೆ ಸಿಕ್ಕು ಉತ್ಪಾದಿತ ಹೆಚ್ಚಿನ ಉತ್ಪಾದನೆಯನ್ನು ಪರದೇಶಗಳಿಗೆ ರಫ್ತು ಮಾಡಿ ರೈತ ಬೆಳೆದ ಯಾವತ್ತೂ ವ್ಯವಸಾಯ ಉತ್ಪನ್ನಗಳಿಗೆ ಹಾಗೂ ವಿವಿಧ ಗಿರಣಿಗಳು ಸಂಸ್ಕರಣ ಮಾಡಿ ಉತ್ಪಾದಿಸಿದ ವಸ್ತುಗಳಿಗೆ ಹೆಚ್ಚಿನ ಬೆಲೆ ಸಿಕ್ಕು, ಭಾರತೀಯ ರೈತರನ್ನು ಹಾಗೂ ರೈತರ ಎಣ್ಣೆ ಗಿರಣಿ, ಉಣ್ಣೆ ಗಿರಣಿ, ಅಕ್ಕಿ ಗಿರಣಿ, ಹಿಟ್ಟಿನ ಗಿರಣಿ, ಸಕ್ಕರೆ ಗಿರಣಿ, ನೂಲಿನ ಗಿರಣಿ ಇತ್ಯಾದಿ ಗಿರಣಿಗಳೆಲ್ಲವನ್ನು ಪ್ರೋತ್ಸಾಹಿಸಿ ಉದ್ಧಾರ ಮಾಡುವುದು ರಾಜ್ಯ ಸರಕಾರಗಳೇ ಇರಲೀ, ಕೇಂದ್ರ ಸರಕಾರಗಳೇ ಇರಲಿ ಅವೆಲ್ಲವುಗಳ ಕರ್ತವ್ಯವಾಗಿರಬೇಕೇ ವಿನಃ ರೈತರನ್ನು ಹಾಗೂ ರೈತರ ವಿವಿಧ ಗಿರಣಿಗಳನ್ನು ಸತ್ಯಾನಾಶ ಮಾಡುವ ತಪ್ಪು ದೋಷಪೂರಿತ ಹಾಗೂ ದುರಾಲೋಚನೆಗಳ ಆಮದು ಧೋರಣೆಗಳಾಗಬಾರದು. ಭಾರತೀಯ ರೈತ, ರೈತರ ವಿವಿಧ ಗಿರಣಿಗಳು ಹಾಗೂ ವಿವಿಧ ಕೃಷಿಯಾಧಾರಿತ ಉದ್ಯಮಗಳು ಆರ್ಥಿಕ ಪ್ರಗತಿ ಹೊಂದಬೇಕು, ಆರ್ಥಿಕವಾಗಿ ಬೆಳೆದು ತನ್ನ ಕಾಲ ಮೇಲೆ ತಾನು ನಿಲ್ಲಬೇಕು, ಸರಕಾರಗಳಿಂದ ಆರ್ಥಿಕ ನೆರವು ಸಿಗುವಂತೆ ಆಗಬೇಕು ಅಂದರೆ ಮಾತ್ರ ರೈತ ಪ್ರಜಾರಾಜ್ಯ ಸರಕಾರಗಳು ಮಾರಕವಾಗದೆ ತಾರಕವಾಗಬಲ್ಲವು. ಈ ದಿಶೆಯಲ್ಲಿ ರಾಜ್ಯ ಹಾಗೂ ಕೇಂದ್ರ ಸರಕಾರಗಳು ರೈತರಿಗೆ ಹಿತಕಾರಿಯಾಗಬಲ್ಲ ಹಾಗೂ ಆರ್ಥಿಕ ಬಲವರ್ಧನೆಯಾಗಬಲ್ಲ ಆಮದು ಮತ್ತು ರಫ್ತು ನೀತಿ ಪದ್ಧತಿಗಳನ್ನು ಅನುಸರಿಸುವುದು ಒಳ್ಳೆಯದು. ಆಹಾರಧಾನ್ಯ, ಎಣ್ಣೆ, ಬಟ್ಟೆ, ಮೊದಲಾದುವುಗಳು ಗ್ರಾಹಕರಿಗೆ ಸಮಂಜಸವಾದ ಬೆಲೆಗೆ ಒದಗಿಸುವುದು ಕೂಡ ಸರಕಾರಗಳ ಕರ್ತವ್ಯವಾಗುವುದರಿಂದ ಈ ಎಲ್ಲ ಗ್ರಾಹಕ ವಸ್ತುಗಳಿಗೆ ಹೆಚ್ಚಿನ ಹಣವನ್ನು ಸಬ್ಸಿಡಿಯನ್ನಾಗಿ ಆಯವ್ಯಯದಲ್ಲಿ ನಿಗದಿ ಮಾಡಿ ಆ ಹಣ ಸದ್ವಿನಿಯೋಗವಾಗಿ ಕಡಿಮೆ ಬೆಲೆಗೆ ಗ್ರಾಹಕರಿಗೆ ದೊರೆಯುವಂತೆ ಮಾಡಬೇಕೆ ಹೊರತು ವಿದೇಶಿ ಆಮದು ವಸ್ತುಗಳಿಗೆ ಆಮಂತ್ರಣ ಕೊಟ್ಟು ಸ್ವದೇಶಿ ಬೆಳೆಗಾರರನ್ನು ಜೀವನ ಜಗತ್ತಿನಿಂದ ಹೊರಗಟ್ಟುವುದು ಸಾಧುವಲ್ಲ.

❑

ಸರಕಾರಿ ಉದ್ಯಮಗಳ ಉಪಯುಕ್ತತೆ

ರಾಜ್ಯ ಸರಕಾರಿ ಹೇಳಿಕೆ ಪ್ರಕಾರ ರಾಜ್ಯದಲ್ಲಿ ಸುಮಾರು 76 ಸಾರ್ವಜನಿಕ ಉದ್ದಿಮೆಗಳು ಇವೆ. ಇವುಗಳಲ್ಲಿ 96-97ರಲ್ಲಿ 40 ಸಂಸ್ಥೆಗಳು 195.86 ಕೋಟಿ ಲಾಭ ಗಳಿಸಿವೆ. 26 ಸಂಸ್ಥೆಗಳು 156.20 ಕೋಟಿ ನಷ್ಟ ಗಳಿಸಿವೆ. 2 ಸಂಸ್ಥೆ ಲಾಭವೂ ಇಲ್ಲ ನಷ್ಟವೂ ಇಲ್ಲ. 7 ಸಂಸ್ಥೆಗಳು ಸ್ಥಗಿತಗೊಂಡಿವೆ. ಒಂದು ಸಂಸ್ಥೆ ಯಾವುದೇ ಮಾಹಿತಿಯನ್ನೇ ಕಳುಹಿಸಿಲ್ಲ. 97-98ರ ಲೆಕ್ಕವಿನ್ನೂ ಲಭ್ಯವಿಲ್ಲ. ಸಿ.ಎ.ಜಿ. ವರದಿ ಪ್ರಕಾರ 96-97ರಲ್ಲಿ 76 ಉದ್ದಿಮೆಗಳಿದ್ದು ಇವುಗಳಲ್ಲಿ 39 ಸಂಸ್ಥೆಗಳು 148.57 ಕೋಟಿ ಲಾಭ ಗಳಿಸಿವೆ. 27 ಸಂಸ್ಥೆಗಳು 203.62 ಕೋಟಿ ನಷ್ಟ ಹೊಂದಿವೆ. 2 ಸಂಸ್ಥೆಗಳಲ್ಲಿ ಲಾಭವೂ ಇಲ್ಲ ನಷ್ಟವೂ ಇಲ್ಲ. 7 ಸಂಸ್ಥೆಗಳು ಸ್ಥಗಿತಗೊಂಡಿವೆ. ಒಂದು ಸಂಸ್ಥೆ ಖಾದಿ ಗ್ರಾಮೋದ್ಯೋಗ ಮಂಡಳಿ ಲೆಕ್ಕಪತ್ರ ಮಾಹಿತಿಯನ್ನೇ ಕೊಟ್ಟಿಲ್ಲ. ಒಟ್ಟಿನ ಮೇಲೆ ಎಲ್ಲಾ 76 ಸಂಸ್ಥೆಗಳ ಕ್ರೋಢೀಕೃತ ನಷ್ಟ 96-97ರಲ್ಲಿ (759.11 ಕೋಟಿ ಸಬ್ಸಿಡಿ ಪಡೆದರೂ) 55.05 ಕೋಟಿ, ಈ ಸಿ.ಎ.ಜಿ. ವರದಿಯ ತದ್ವಿರುದ್ಧವಾಗಿ 96-97ರಲ್ಲಿ 76 ಉದ್ಯಮಗಳು ಒಟ್ಟಾರೆ ಲಾಭ 39.66 ಕೋಟಿಯೆಂದು ಸರಕಾರ ಹೇಳುತ್ತ ವಾಸ್ತವಿಕ ಒಟ್ಟಾರೆ ನಷ್ಟ 55.04 ಕೋಟಿಯ ಅರಿವು ಇಲ್ಲದಿರುವುದು ನಾಚಿಕೆಗೇಡು. ರಾಜ್ಯದಲ್ಲಿಯ 76 ಸಂಸ್ಥೆಗಳ ಪೈಕಿ 96-97ಲ್ಲಿ 43 ಸಂಸ್ಥೆಗಳು ಒಟ್ಟು 1146.49 ಕೋಟಿ ಕೂಡಿಬಿದ್ದ ಹಾನಿಯಲ್ಲಿ ಬಿದ್ದು ಒದ್ದಾಡುತ್ತಲಿವೆ. ಇವುಗಳಲ್ಲಿ ಪ್ರಥಮ ರ್‍ಯಾಂಕ್ ಕೂಡಿಬಿದ್ದ ಹಾನಿ ಕೆ.ಎಸ್.ಆರ್.ಟಿ.ಸಿ. 578.85 ಕೋಟಿ, ನಂತರ ಎನ್.ಜಿ.ಇ.ಎಫ್. 152.15 ಕೋಟಿ, ಬೆಂಗಳೂರು ನೀರು ಸರಬರಾಜು ಒಳಚರಂಡಿ ಸಂಸ್ಥೆ 85.04 ಕೋಟಿ, ಆಗ್ರೋ ಇಂಡಸ್ಟ್ರೀಸ್, ಕಾರ್ಪೋರೇಷನ್ 58.50 ಕೋಟಿ, ಸೋಪ್ ಫ್ಯಾಕ್ಟರಿ 55.75 ಕೋಟಿ, ಇಂಪ್ಲಿಮೆಂಟ್ ಮತ್ತು ಮಷಿನರಿ ಸಂಸ್ಥೆ 34.20 ಕೋಟಿ, ಶಿಲ್ಕ್ ಇಂಡಸ್ಟ್ರಿ ಸಂಸ್ಥೆ 26.11 ಕೋಟಿ, ಮೈಸೂರು ಲ್ಯಾಂಪ್ಸ್ ಸಂಸ್ಥೆ 25.43 ಕೋಟಿ, ಕ್ರೋಮ್ ಟ್ಯಾನಿಂಗ್ ಸಂಸ್ಥೆ 11.32 ಕೋಟಿ, ಇವು ಪ್ರಥಮ ಒಂಬತ್ತು ರ್‍ಯಾಂಕ್ ಹೊಂದಿವೆ. ಸರಕಾರಿ ಸಾರ್ವಜನಿಕ ಉದ್ದಿಮೆಗಳ ಕೂಡಿಬಿದ್ದ ಒಟ್ಟು ಹಾನಿ ಪ್ರತಿವರ್ಷ ಏರುತ್ತಲೇ ಇವೆ. 94-95ರಲ್ಲಿ 1012.17 ಕೋಟಿ, 95-96ರಲ್ಲಿ 1025.40

ಕೋಟಿ, 96-97ರಲ್ಲಿ 1146.49 ಕೋಟಿಯಾಗಿವೆ. ರಾಜ್ಯದ ರೈತ ಕಾರ್ಮಿಕ, ಗ್ರಾಹಕ ಮೊದಲಾದ ಜನಸಾಮಾನ್ಯರಿಗೆ ವರದಾನವಾಗಬೇಕಾಗಿರುವ ಉದ್ಯಮಗಳಲ್ಲಿ ಬಹುಪಾಲು ಉದ್ಯಮಗಳು ಬಂಡವಾಳ ಹಾಗೂ ಸಾಮರ್ಥ್ಯಕ್ಕೆ ತಕ್ಕಂತೆ ಸೇವೆ ಸಲ್ಲಿಸದೆ ಹೋದರೆ ಇವುಗಳಲ್ಲಿರುವ ಐ.ಎ.ಎಸ್. ಹಾಗೂ ಕೆ.ಎ.ಎಸ್. ಅಧಿಕಾರಿಗಳ ದಕ್ಷತೆ ಹಾಗೂ ಪ್ರಾಮಾಣಿಕತೆಯನ್ನೇ ಅನಿವಾರ್ಯವಾಗಿ ಪ್ರಶ್ನಿಸಬೇಕಾಗುತ್ತದೆ. ಎಲ್ಲ 76 ಸಂಸ್ಥೆಗಳಲ್ಲಿಯ 1.64 ಲಕ್ಷ ಸಿಬ್ಬಂದಿಗೆ ವೆಚ್ಚ ಮಾಡುವ 1399.46 ಕೋಟಿ ವೇತನ ಹಾಗೂ ಕಲ್ಯಾಣ ಖರ್ಚು ನಿರರ್ಥಕವೆಂದು ಹೇಳಬೇಕಾಗುತ್ತದೆ. ಉದ್ಯಮಗಳಿಗೆ ಸಂಬಂಧಿಸಿದ ವಿವಿಧ ಸಾಲಗಾರರ ಮೊತ್ತ ಸಹ ಪ್ರತಿವರ್ಷ ಹೆಚ್ಚುತ್ತಿದ್ದು 31-3-97ಕ್ಕೆ 2560.63 ಕೋಟಿ ಇದೆ. 'ಹಾಳೂರಿಗೆ ಉಳಿದವನೇ ಗೌಡ' ಎಂಬಂತೆ ಕೆಲವು ಸ್ಥಗಿತಗೊಂಡ ಹಾಗೂ ಹೂಡಿದ ಬಂಡವಾಳವನ್ನೇ ನುಂಗಿ ದಿವಾಳಿಯಾಗಿರುವ ಸಂಸ್ಥೆಗಳಿಗೆ ಮಂತ್ರಿಗಳು, ಶಾಸಕರು, ರಾಜಕಾರಣಿಗಳು ಹಾಗೂ ಐ.ಎ.ಎಸ್. ಅಧಿಕಾರಿಗಳು ಪದಾಧಿಕಾರಿಗಳಾಗಿರುವುದು ಅವರಿಗೆ ಭೂಷಣವೇ? ಕೆ.ಇ.ಬಿ. ಈ ಸಂಸ್ಥೆ ತನ್ನ ಆದಾಯಕ್ಕಿಂತ ಹೆಚ್ಚು ವೆಚ್ಚ ಮಾಡುತ್ತಿದೆ. ಈ ಸಂಸ್ಥೆಯನ್ನು ಆದಾಯ ಹೆಚ್ಚಿಸಿಕೊಳ್ಳುವಲ್ಲಿ ಸಫಲವಾಗಿ ವೆಚ್ಚ ಕಡಿತಗೊಳಿಸುವಲ್ಲಿ ವಿಫಲವಾಗಿ ವಿದ್ಯುತ್ ಹಾಗೂ ಸೋರುವಿಕೆ ಹಾಗೂ ಕಳ್ಳತನಕ್ಕೆ ಪ್ರೋತ್ಸಾಹ ಕೊಡುತ್ತಿರುವ ಬಗ್ಗೆ ಸಾಕಷ್ಟು ಟೀಕೆಗಳು ಪತ್ರಿಕೆ ಹಾಗೂ ವಿಧಾನಮಂಡಲದ ಮುಖಾಂತರ ಕೇಳಿಬರುತ್ತಿವೆ. ಕೆ.ಇ.ಬಿ.ಯ ಭಾರೀ ನಷ್ಟವನ್ನು ಸರಿಮಾಡಿ ಲಾಭ ತೋರಿಸುವ ಸಲುವಾಗಿ 94-95ರಲ್ಲಿ 207.08 ಕೋಟಿ, 95-96ರಲ್ಲಿ 553.48 ಕೋಟಿ, 96-97ರಲ್ಲಿ 704.83 ಕೋಟಿ ಸಬ್ಸಿಡಿಯನ್ನು ರೈತರ ತಲೆಬೋಳಿಸಿ ಕೊಟ್ಟಿದ್ದು ಕೆ.ಇ.ಬಿ. ದಿವಾಳಿ ಅಂಚಿನಲ್ಲಿದೆ ಎಂಬುದನ್ನು ತೋರಗೊಡದೆ ಹೇರಳವಾದ ಸಬ್ಸಿಡಿ ಮೊತ್ತವನ್ನು ಆದಾಯದಲ್ಲಿ ಹಿಡಿದಿರುವುದರಿಂದ 96-97ರಲ್ಲಿ ಕೆ.ಇ.ಬಿ. 58.45 ಕೋಟಿ ಲಾಭವೆಂದು ತೋರಿಸಿ ಜನತೆಯ ಹಾಗೂ ಶಾಸಕಾಂಗದ ಕಣ್ಣಲ್ಲಿ ಮಣ್ಣನ್ನು ಉಗ್ಗಲಾಗಿದೆ. ಇದು ಸರಿಯಲ್ಲ. ಸರಕಾರ ಇನ್ನಾದರೂ ಕೆ.ಇ.ಬಿ. ಆಡಳಿತ ಸುಧಾರಿಸಿ ನೀರಾವರಿ ಪಂಪಸೆಟ್ ರೈತರು ಹಾಗೂ ವಿವಿಧ ಉದ್ಯಮಿಗಳು ಹಾಗೂ ಗ್ರಾಹಕರು ಹಾಳಾಗದೆ ಉದ್ಧಾರವಾಗುವಂತೆ ಸೂಕ್ತ ಕ್ರಮ ತೆಗೆದುಕೊಳ್ಳುವುದು ಒಳ್ಳೆಯದು. ಕೆ.ಎಸ್.ಆರ್.ಟಿ.ಸಿ. ಇದೊಂದು ಸಾರ್ವಜನಿಕ ಸೇವಾ ಉದ್ದೇಶಿತ ಸಂಸ್ಥೆಯಿದ್ದು ಆಗಿಂದಾಗ್ಗೆ ಪ್ರಯಾಣಿಕರ ಹಾಸೀಲನ್ನು ಹೆಚ್ಚಿಸುತ್ತ ಬಂದಿದ್ದರೂ ಪ್ರತಿವರ್ಷ ಆದಾಯಕ್ಕಿಂತ ವೆಚ್ಚವೇ ಹೆಚ್ಚುತ್ತ ಹೋಗುತ್ತಿದೆ. ಈ ಸಂಸ್ಥೆಯಿಂದ ಗ್ರಾಮಾಂತರ ಪ್ರಯಾಣಿಕರು ನಿಗದಿತ ಸಂಚಾರದಿಂದ ವಂಚಿತರಾಗಿ ಸಾಕಷ್ಟು ಪರಿತಪಿಸುತ್ತಿದ್ದಾರೆ. ನಿಗದಿಪಡಿಸಿದ ಸಂಚಾರಿ ವೇಳಾಪಟ್ಟಿ ಕಸದ ಬುಟ್ಟಿಗೆ ಹೋಗುತ್ತಿವೆ. ಕೆ.ಎಸ್.ಆರ್.ಟಿ.ಸಿ. ಇದೊಂದು ದಿವಾಳಿ ಸಂಸ್ಥೆಯಾಗಿದ್ದು ನಿಗದಿತ ನಷ್ಟದ ಹಾದಿ ಹಿಡಿದಿದ್ದು 94-95ರಲ್ಲಿ 69.55 ಕೋಟಿ, 95-96ರಲ್ಲಿ 48.00

ಕೋಟಿ, 96-97ರಲ್ಲಿ 87.99 ಕೋಟಿ ಹೀಗೆ ನಷ್ಟ ಹೆಚ್ಚುತ್ತ 96-97ರಲ್ಲಿ 46.20 ಕೋಟಿ ಸಬ್ಸಿಡಿ ಪಡೆದಿದ್ದರೂ 31-3-97ಕ್ಕೆ ಕೂಡಿಬಿದ್ದ ಹಾನಿ 578.85 ಕೋಟಿಗೆ ಏರಿದೆ. 97-98ರಲ್ಲಿಯ ಡಿವಿಜನ್‌ವಾರ್ ವ ಸಂಸ್ಥೆಯ ಹಾನಿ ವಿವರವನ್ನು ಶಾಸಕರಿಗೆ ವ ಶಾಸಕಾಂಗಕ್ಕೆ ಅವರು ಕೇಳಿದರೂ ಮಾಹಿತಿಯನ್ನು ಪೂರೈಸದಷ್ಟು ಗೋಜಿನಲ್ಲಿ ಅಧಿಕಾರಿಗಳಿದ್ದಾರೆ. ಸರಕಾರ ಸಾರ್ವಜನಿಕ ಉದ್ಯಮ ಹಾಗೂ ಸರಕಾರಿ ಇಲಾಖೆಗಳ ಆಡಳಿತ ಸುಧಾರಿಸಿ ಜನತೆಗೆ ವಿವಿಧ ಅಭಿವೃದ್ಧಿಗಳ ಅವಕಾಶ ದೊರಕಿಸಿ ಕೊಡುವಲ್ಲಿ ಯೋಚಿಸಿದರೆ ಒಳ್ಳೆಯದು. ಕೆ.ಎಸ್.ಎಫ್.ಸಿ. ಹಾಗೂ ಉಗ್ರಾಣ ನಿಗಮಗಳೆರಡೂ ಮಾತ್ರ ಲಾಭದಲ್ಲಿರುವುದು ಶ್ಲಾಘನೀಯವಾದರೂ ಇವೆರಡೂ ತಮ್ಮ ಸಾಲಗಾರ ಉದ್ದಿಮೆದಾರರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವುದು ಮಾತ್ರ ಅಗತ್ಯವಿದೆಯೆಂಬುದನ್ನು ಯಾರೂ ಮರೆಯಬಾರದು.

ರಾಜ್ಯದಲ್ಲಿಯ ಸಾರ್ವಜನಿಕ ಹಾಗೂ ಸರಕಾರಿ ಉದ್ಯಮಗಳು ಜನತೆಗೆ ವಿವಿಧ ಸೇವೆ ಸಹಾಯವನ್ನು ಸಲ್ಲಿಸಿ ಲಾಭದಾಯಕವಾಗಿ ನಡೆಯದಿದ್ದರೂ ಸೇವಾ ಮನೋಭಾವನೆಯಿಂದ ನಷ್ಟವಿಲ್ಲದೆ ನಡೆಯಲೇಬೇಕು. ಜನತೆಗೆ ಸೇವೆ ಸರಿಯಾಗಿ ಸಲ್ಲದೆ ಜನತೆಯ ಸುಲಿಗೆ ಮಾಡುತ್ತ ವ್ಯವಹಾರ ಸರಿಯಾಗಿ ನಡೆಯದೆ ದುಂದುವೆಚ್ಚ ಮಾಡುತ್ತ ಸಕಾಲದಲ್ಲಿ ಲೆಕ್ಕಪತ್ರಗಳನ್ನು ಸಾದರಪಡಿಸದೆ ಮುಂದುವರೆಯುವುದು ಭೂಷಣವಲ್ಲ. ಸಿ.ಎ.ಜಿ. ವರದಿಗಳನ್ನು ಕಡೆಗಣಿಸುವುದು ಸರಿಯಲ್ಲ. 1981-82ರಿಂದ 1996-97ರ ವರೆಗಿನ ಅವಧಿಯಲ್ಲಿ 3867 ಪ್ಯಾರಾಗ್ರಾಫ್‌ಗಳನ್ನೊಳಗೊಂಡ 687 ತನಿಖಾ ವರದಿಗಳಿಗೆ ಈ ನಿಗಮಗಳು ಉತ್ತರನ್ನೇ 1997 ಅಕ್ಟೋಬರ್‌ರ ವರೆಗೆ ಕಳುಹಿಸಿಲ್ಲವೆಂದರೆ ನಿಗಮಗಳಿಗೆ ಅಧ್ಯಕ್ಷರಾಗಿರುವ ಮಂತ್ರಿ, ಮಹಾಮಂತ್ರಿ, ಶಾಸಕ, ರಾಜಕಾರಣಿ, ಐ.ಎ.ಎಸ್. ಹಾಗೂ ಕೆ.ಎ.ಎಸ್. ಅಧಿಕಾರಿಗಳ ಸೇವೆಗೆ ಸಲ್ಲತಕ್ಕದ್ದಲ್ಲ. ಮಂತ್ರಿಗಳು, ಮಂತ್ರಿ ಸಮಾನ ಸ್ಥಾನ ಪಡೆದವರು ಈ ಉದ್ದಿಮೆಗಳಿಗೆ ಅಧ್ಯಕ್ಷರಾಗಿದ್ದಾರೆ. ಎಲ್ಲಾ ಅನುಕೂಲತೆಗಳು ಅವರಿಗೆ ಇದೆ. ಐ.ಎ.ಎಸ್. ಅಧಿಕಾರಿಗಳ ಸೇವೆಯೇ ಈ ಉದ್ಯಮಗಳಲ್ಲಿ ಇವೆ. ಕೆಲವು ಉದ್ಯಮಗಳ ಮ್ಯನೇಜಿಂಗ್ ಡೈರೆಕ್ಟರವರು ಪ್ರತಿ ತಿಂಗಳಿಗೆ 23000-00 ರೂ.ಗಿಂತ ಹೆಚ್ಚು ಪಗಾರ, ಭತ್ಯೆ, ಪ್ರತಿ ತಿಂಗಳಿಗೆ 55,000-00 ರೂ.ಗಿಂತ ಹೆಚ್ಚು ಪ್ರಯಾಣ ಭತ್ಯೆ ಪಡೆಯುವವರಿದ್ದಾರೆ. ಇದಕ್ಕೆ ಯಾರ ತಕರಾರು ಇಲ್ಲ. ಆದರೆ ಇವರೆಲ್ಲರ ಆಡಳಿತ ಮುಷ್ಠಿಯಲ್ಲಿರುವ ಈ ಎಲ್ಲ ಸಾರ್ವಜನಿಕ ಉದ್ಯಮಗಳು ನಿರೀಕ್ಷಿತ ಮಟ್ಟದಲ್ಲಿ ಕಾರ್ಯ ನಿರ್ವಹಿಸಿ ಸಾರ್ವಜನಿಕರಿಗೆ ಇವುಗಳಿಂದ ಸಿಗಬೇಕಾದ ಸೇವೆ ಶಿಲ್ಕು ಈ ಉದ್ಯಮಗಳಲ್ಲಿ ತೊಡಗಿಸಿದ ಸರಕಾರ ವ ಸಾರ್ವಜನಿಕ ಹಣ ಮುಳುಗಿ ಹೋಗದಂತೆ, ಉದ್ಯಮಗಳು ದಿವಾಳಿಯಾಗದೆ ಕಾರ್ಯ ನಿರ್ವಹಿಸುವಂತೆ ಮಾಡುವುದು ಹೊಣೆಗಾರರ ಕರ್ತವ್ಯವಾಗಿದ್ದು, ಈ ಕರ್ತವ್ಯದ ಅರಿವು ಈ ಹೊಣೆಗಾರರಿಗೆ ಇಲ್ಲವೇ ಇಲ್ಲವೆಂದು ಹೇಳದೆ ಗತ್ಯಂತರ

ವಿಲ್ಲ. ಈ ಉದ್ಯಮಗಳ ಪದಾಧಿಕಾರಿಗಳಿಗೆ ಹಾಗೂ ಅಧಿಕಾರಿಗಳಿಗೆ ವಿವಿಧ ಸೌಕರ್ಯ ಸವಲತ್ತುಗಳನ್ನು ಭಾರೀ ಪ್ರಮಾಣದಲ್ಲಿ ಕೊಡುವ ಉದ್ದೇಶ ಅವರೆಲ್ಲರೂ ಪ್ರಾಮಾಣಿಕರಾಗಿ, ದಕ್ಷರಾಗಿ, ನಿಷ್ಠೆಯಿಂದ, ಶ್ರದ್ಧೆಯಿಂದ, ನಿಶ್ಚಿಂತೆಯಿಂದ, ಉತ್ತಮ ಸೇವೆ ಮಾಡಲೆಂಬುದೇ ಇದೆಯೆಂಬುದನ್ನು ಅರಿತು ಉತ್ತಮ ಆಡಳಿತ ಮಾಡಿ ಸಂಸ್ಥೆಗಳೆಲ್ಲಾ ಉಳಿದು ಅವುಗಳ ಸಾರ್ಥಕ ಸೇವೆ ಸಿಗಬೇಕಾದ್ದು ಅಗತ್ಯವೆಂಬುದನ್ನು ಆಡಳಿತಗಾರರು ಅರಿತರೆ ಒಳ್ಳೆಯದು.

ರಾಜ್ಯದಲ್ಲಿ ಎಲ್ಲಾ ಸಾರ್ವಜನಿಕ ಉದ್ಯಮಗಳ ಉಸ್ತುವಾರಿ ವಹಿಸಲು ಹಿರಿಯ ಐ.ಎ.ಎಸ್., ಕೆ.ಎ.ಎಸ್. ಅಧಿಕಾರಿಗಳನ್ನೊಳಗೊಂಡ ಸಾರ್ವಜನಿಕ ಉದ್ಯಮಗಳ ಮೇಲ್ವಿಚಾರಣಾ ಮಂಡಳಿ ಹಾಗೂ ಕರ್ನಾಟಕ ರಾಜ್ಯ ಸಾರ್ವಜನಿಕ ಉದ್ಯಮಗಳ ಮಹೋದ್ಯಮವಿದ್ದು ಈ ಮಂಡಳಿ ಹಾಗೂ ಮಹೋದ್ಯಮಗಳು ಎಲ್ಲಾ ಉದ್ಯಮಗಳು ಸರಿಯಾಗಿ ವ್ಯವಹಾರ ಮಾಡಿ ರಾಜ್ಯದ ಸಾರ್ವಜನಿಕರಿಗೆ ಉಪಯುಕ್ತವಾಗಿ ಕಾಲಕಾಲಕ್ಕೆ ಲೆಕ್ಕಪತ್ರಗಳನ್ನು ಸಾದರಪಡಿಸುವಂತೆ ಜವಾಬ್ದಾರಿ ವಹಿಸುವುದು ಅಗತ್ಯ. ಈ ಮಹೋದ್ಯಮ 96-97ರ ತನ್ನ ಸಮೀಕ್ಷಣ ವರದಿಯನ್ನು 98-99ರ ಬಜೆಟ್ ಅಧಿವೇಶನ ಪೂರ್ವದಲ್ಲಿ ಕೊಟ್ಟು ಶಾಸಕರು ಅದನ್ನು ಓದಿ ತಿಳಿದು ಸೂಕ್ತ ಸಲಹೆ, ಸೂಚನೆ, ರಚನಾತ್ಮಕ ಟೀಕೆ, ಟಿಪ್ಪಣಿ ಕೊಡಲು ಅವಕಾಶ ಮಾಡಿಕೊಡದೆ 98-99ರ ಬಜೆಟ್ ಅಧಿವೇಶನದ ಪ್ರಾರಂಭದಲ್ಲಿಯೂ ಕೊಡದೆ ಸಿ.ಎ.ಜಿ.ಯವರು 96-97ರ ವರದಿಯನ್ನು ವಿಧಾನಮಂಡಲಕ್ಕೆ ಸಲ್ಲಿಸುವ ಮೊದಲೇ ಕೊಡುವ ಬದಲು ನಂತರ ಭಾರೀ ತಡವಾಗಿ ಕೊಡುವ ಲೋಪನ್ನೆಸಗದೆ ಶಾಸಕಾಂಗವನ್ನು ಅಂದಕಾರದಲ್ಲಿಡದೆ ಸಕಾಲದಲ್ಲಿ ಸಮೀಕ್ಷಾ ವರದಿಯನ್ನು ಶಾಸನ ಸಭೆಗೆ ಕೊಡುವುದು ತಮ್ಮ ಆದ್ಯ ಕರ್ತವ್ಯವೆಂಬುದನ್ನು ಅರಿತರೆ ಒಳ್ಳೆಯದು, ಶಾಸಕರಾದರೂ ರಾಜ್ಯದಲ್ಲಿಯ 76 ಉದ್ಯಮಗಳ ಆಡಳಿತ ವರದಿ, ಮಹೋದ್ಯಮದ ಸಮೀಕ್ಷಾ ವರದಿ ಉದ್ಯಮಗಳಿಗೆ ಸಂಬಂಧಿಸಿದ ಸಿ.ಎ.ಜಿ. ವರದಿ ಹಾಗೂ ಶಾಸಕಾಂಗದ ಸಾರ್ವಜನಿಕ - ಉದ್ಯಮಗಳ ಸಮಿತಿಯ ವರದಿ ಇವೆಲ್ಲವುಗಳನ್ನು ಓದಿ ತಿಳಿದು 13232.05 ಕೋಟಿ ಬಂಡವಾಳ ಹೊಂದಿರುವ ಎಲ್ಲಾ ಸಾರ್ವಜನಿಕ ಉದ್ದಿಮೆಗಳ 96-97ರಲ್ಲಿಯ ಒಟ್ಟಾರೆ 55.04 ಕೋಟಿ ನಷ್ಟ ಹೊಂದಿರುವ ಎಲ್ಲಾ ಉದ್ಯಮಗಳು ಬಾಳಿ ಬದುಕಿ ಸಾರ್ವಜನಿಕರಿಗೆ ಸಾರ್ಥಕವಾಗುವಂತೆ ಮಾಡುವುದು ಒಳ್ಳೆಯದು. ಇಲ್ಲವಾದರೆ ಉದ್ಯಮಗಳು ಮೇಯುವವರಿಗೆ ಹುಲ್ಲುಗಾವಲುಗಳೆಂದು ಅನಿವಾರ್ಯವಾಗಿ ಹೇಳಬೇಕಾದೀತು.

❑

ರಾಷ್ಟ್ರದ ಆಡಳಿತ ಅಭಿವೃದ್ಧಿಗೆ ಕೇಂದ್ರ-ರಾಜ್ಯ ಸರಕಾರಗಳ ಹೊಣೆ

ಭಾರತೀಯ ನಾಗರಿಕರಿಗೆ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ನ್ಯಾಯವನ್ನು ಒದಗಿಸುವುದು, ಆರಾಧನೆ, ಶ್ರದ್ಧೆ, ನಂಬಿಕೆ, ವಾಕ್ಸರಣಿ, ವಿಚಾರ, ಅಭಿಪ್ರಾಯ ಹಕ್ಕುಗಳನ್ನು ಒದಗಿಸುವುದು, ಸದವಕಾಶ ಹಾಗೂ ಸ್ಥಾನಮಾನದ ಸಮಾನತೆ ಒದಗಿಸುವುದು, ಪ್ರತಿಯೊಬ್ಬ ವ್ಯಕ್ತಿಗಳ ಗೌರವ, ಭ್ರಾತೃತ್ವ ಸುರಕ್ಷಿತಗೊಳಿಸುವುದು ಹಾಗೂ ಈ ರಾಷ್ಟ್ರದ ಏಕತೆ, ಒಗ್ಗಟ್ಟು ಹಾಗೂ ಸಮಗ್ರತೆಯನ್ನು ಕಾಪಾಡುವುದು ಕೇಂದ್ರ ಹಾಗೂ ರಾಜ್ಯ ಸರಕಾರಗಳ ಸಂವಿಧಾನಬದ್ಧವಾದ ಕರ್ತವ್ಯ. ಇವೆಲ್ಲ ಕರ್ತವ್ಯಗಳು ಅನುಷ್ಠಾನದಲ್ಲಿ ಬರಬೇಕಾದರೆ ಈ ರಾಷ್ಟ್ರದ ಹಾಗೂ ರಾಜ್ಯಗಳ ಆಡಳಿತ ಹಾಗೂ ಅಭಿವೃದ್ಧಿ ಸಮರ್ಥವಾಗಿ ನಡೆಯಲೇಬೇಕು. ಈ ಉದ್ದೇಶಕ್ಕಾಗಿಯೇ ನಮ್ಮ ರಾಷ್ಟ್ರದಲ್ಲಿಯ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಚುನಾಯಿತ ಪ್ರಜಾಪ್ರತಿನಿಧಿಗಳಿಂದ ಕೇಂದ್ರ ಸರಕಾರ ಹಾಗೂ ರಾಜ್ಯ ಸರಕಾರಗಳು ರಚನೆಯಾಗಿ ಅಸ್ತಿತ್ವದಲ್ಲಿವೆ. ಉದ್ದೇಶಗಳ ಸಾಧನೆಗಾಗಿ ಈ ರಾಷ್ಟ್ರದ ಹಾಗೂ ರಾಜ್ಯಗಳ ಆಡಳಿತ ಹಾಗೂ ಅಭಿವೃದ್ಧಿಗಾಗಿ ಈ ದೇಶದ ನಾಗರಿಕರು ಕೇಂದ್ರ ಸರಕಾರಕ್ಕೆ ಹಾಗೂ ರಾಜ್ಯ ಸರಕಾರಗಳಿಗೆ ಪ್ರತಿವರ್ಷ ವಿವಿಧ ಕರ ಕಂದಾಯ ಶುಲ್ಕ ಇತ್ಯಾದಿ ಕಪ್ಪ-ಕಾಣಿಕೆಗಳನ್ನು ಕೊಡುತ್ತಲೇ ಇದ್ದಾರೆ. ಜನತೆಯಿಂದ ಬಂದ ವಿವಿಧ ಕಂದಾಯ, ವಿವಿಧ ಮೂಲಗಳಿಂದ ಬಂದ ಸಾಲ ಮುಂಗಡಗಳ ಮೊತ್ತ ಹಾಗೂ ವಿವಿಧ ಸಾಮಾನ್ಯ, ಸಾಮಾಜಿಕ, ಆರ್ಥಿಕ ಇತ್ಯಾದಿ ಸೇವೆಗಳಿಗೆ ಹಾಗೂ ವಿವಿಧ ಸಾಲ ಮುಂಗಡಗಳಿಗೆ ಕೊಡಬೇಕಾದ ಮೊತ್ತ ಇವುಗಳನ್ನು ಪ್ರತಿವರ್ಷ ಲೋಕಸಭೆ ಹಾಗೂ ರಾಜ್ಯ ವಿಧಾನಸಭೆಗಳ ಬಜೆಟ್ ಅಧಿವೇಶನದಲ್ಲಿ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಮಂಡಿಸಿ ಮಂಜೂರಿ ಪಡೆದು ಆ ಹಣವನ್ನು ಪ್ರಜಾಶಾಹಿ ಅಧಿಕಾರಶಾಹಿಯು ಮುಖಾಂತರ ದಿಲ್ಲಿಯಿಂದ ಹಳ್ಳಿಯವರೆಗೆ ವೆಚ್ಚ ಮಾಡಬೇಕಾಗುತ್ತದೆ ಹಾಗೂ ಉತ್ತಮ ಆಡಳಿತ ಹಾಗೂ ಅಭಿವೃದ್ಧಿಯನ್ನು ರಾಷ್ಟ್ರಾದ್ಯಂತ ಸಾಧಿಸಬೇಕಾಗುತ್ತದೆ. ಆಡಳಿತವು ಭ್ರಷ್ಟಾಚಾರ ರಹಿತ, ಪಕ್ಷಪಾತ ರಹಿತ, ಸ್ವಜನ ಪಕ್ಷಪಾತ ರಹಿತ, ಅಧಿಕಾರ ದುರುಪಯೋಗ ರಹಿತ, ದುರಾಡಳಿತ ರಹಿತವಾಗಿ ಸ್ವಚ್ಛ ಹಾಗೂ ಸ್ಥಿರವಾಗಿರಬೇಕಾಗುತ್ತದೆ.

ಅಭಿವೃದ್ಧಿಯು ಕಾಗದದ ಕುದುರೆಯಾಗದೆ, ಜಲಮೃಗವಾಗದೆ, ದೋಷಪೂರಿತವಾಗದೆ ಕಳಪೆ ಗುಣಮಟ್ಟದ್ದಾಗದೆ, ಅಸಮರ್ಪಕವಾಗದೆ, ಕುಂಠಿತವಾಗದೆ, ಮಾರಕವಾಗದೆ, ಜನತೆಗೆ ತಾರಕವಾಗುವಂತೆ ಜವಾಬ್ದಾರಿ ವಹಿಸುವುದು ಈ ದೇಶ ಹಾಗೂ ರಾಜ್ಯಗಳಲ್ಲಿಯ ಪ್ರಜಾಶಾಹಿ ಪ್ರತಿನಿಧಿಗಳ ಹಾಗೂ ಅಧಿಕಾರಶಾಹಿ ನೌಕರರ ಆದ್ಯ ಕರ್ತವ್ಯವಾಗಿದ್ದು ಈ ಕರ್ತವ್ಯದಲ್ಲಿ ಅವರೆಲ್ಲರೂ ಕ್ರಿಯಾಶೀಲರಾಗುವುದು ಅತಿ ಅವಶ್ಯ ಹಾಗೂ ಅಗತ್ಯ.

ಕೇಂದ್ರ ಸರಕಾರಕ್ಕೆ ಈ ದೇಶದ ನಾಗರಿಕರು ಪ್ರತಿವರ್ಷ ಹೆಚ್ಚೆಚ್ಚು ಕರ ಕಂದಾಯವನ್ನು ಕೇಂದ್ರ ಸರಕಾರದ ಗುರಿಯಂತೆ ಕೊಡುತ್ತಲೇ ಇದ್ದಾರೆ. 1995-96ರಲ್ಲಿ 168571.26 ಕೋಟಿ 96-97ರಲ್ಲಿ 193717.57 ಕೋಟಿ ಹಣ ಕೊಟ್ಟಿದ್ದು, 97-98ರಲ್ಲಿ 223025.61 ಕೋಟಿ, 98-99ರಲ್ಲಿ 247314.97 ಕೋಟಿ ರೆವಿನ್ಯೂ ಕೊಡಲಿದ್ದಾರೆ. ಕೇಂದ್ರ ಸರಕಾರ 95-96ರಲ್ಲಿ ಬಜೆಟ್ ಮೀರಿ 7985.54 ಕೋಟಿ ಹೆಚ್ಚು ರೆವಿನ್ಯೂ ಪಡೆದಿದ್ದು 96-97ರಲ್ಲಿ 4920.55 ಕೋಟಿ, 97-98ರಲ್ಲಿ 8049.97 ಕೋಟಿ ಕಡಿಮೆ ರೆವಿನ್ಯೂ ಆದಾಯ ಪಡೆದಿದೆ. ಬಜೆಟಿಗಿಂತ ಕಡಿಮೆ ಆದಾಯ ಪಡೆದರೆ ರೆವಿನ್ಯೂ ವೆಚ್ಚಗಳಿಗೆ ಹಣ ಕಡಿಮೆಯಾಗಿ ಅಭಿವೃದ್ಧಿ ಕುಂಠಿತವಾಗುವುದು ಎಲ್ಲರಿಗೂ ತಿಳಿದ ನಿಜಾಂಶ. ಈ ರಾಷ್ಟ್ರದ ಸಾಮಾನ್ಯ ಸೇವೆ, ಸಾಮಾಜಿಕ ಸೇವೆ, ಆರ್ಥಿಕ ಸೇವೆ, ಸಹಾಯಧನ ಪಾಲುಗಳಿಗೆ ಕೇಂದ್ರ ಸರಕಾರ 95-96ರಲ್ಲಿ 198302.33 ಕೋಟಿ, 96-97ರಲ್ಲಿ 226371.67 ಕೋಟಿ ರೆವಿನ್ಯೂ ವೆಚ್ಚ ಮಾಡಲಿದೆ. 95-96ರಲ್ಲಿ ಬಜೆಟ್‌ಗಿಂತ ಹೆಚ್ಚು 214.76 ಕೋಟಿ ವೆಚ್ಚ ಮಾಡಿದ್ದರೆ 96-97ರಲ್ಲಿ 3741.45 ಕೋಟಿ ರೆವಿನ್ಯೂ ಹಣವನ್ನು ವೆಚ್ಚ ಮಾಡದೆ ಅಭಿವೃದ್ಧಿ ಕುಂಠಿಸಲಾಗಿದೆ. ಇನ್ನು 97-98, 98-99ರ ಪರಿಣಾಮ ಕಾದು ನೋಡಬೇಕಾಗಿದೆ. ರೆವಿನ್ಯೂ, ಆದಾಯ ಆಡಳಿತ ಅಭಿವೃದ್ಧಿಗೆ ಕಡಿಮೆ ಬೀಳುತ್ತಿರುವುದರಿಂದ ಕೇಂದ್ರ ಪ್ರತಿವರ್ಷ ಸಾರ್ವಜನಿಕ ಸಾಲ-ಮುಂಗಡ ಇತ್ಯಾದಿ ಬಂಡವಾಳ ಪಡೆಯುತ್ತಿದ್ದು, 95-96ರಲ್ಲಿ 189361.78 ಕೋಟಿ, 96-97ರಲ್ಲಿ 219193.58 ಕೋಟಿ ಹಣ ಪಡೆದಿದ್ದು 1997-98ರಲ್ಲಿ 411380.07 ಕೋಟಿ, 98-99ರಲ್ಲಿ 429106.64 ಕೋಟಿ ಹಣ ಪಡೆಯಲಿದೆ. ಕೇಂದ್ರ ಸರಕಾರ ಸಾಲಗಾರರಿಗೆ 96-97ರಲ್ಲಿ 59478.41 ಕೋಟಿ, 97-98ರಲ್ಲಿ 68000.00 ಕೋಟಿ, 98-99ರಲ್ಲಿ 75000.00 ಕೋಟಿ ಬಡ್ಡಿಯನ್ನು ಕೊಡುತ್ತಲಿದೆ. ಬಜೆಟ್ ಪ್ರಕಾರ ಸಾಲವನ್ನು ಪಡೆಯದೆ ಹೋದರೆ ಆರ್ಥಿಕ ಅಭಿವೃದ್ಧಿ ವ್ಯವಸ್ಥೆ ಹದಗೆಡುವುದು ಸುಸ್ಪಷ್ಟ. ಈ ದಿಶೆಯಲ್ಲಿ ಬಜೆಟ್ ನಿಗದಿತ ಬಂಡವಾಳ ಸಾಲವನ್ನು ಪಡೆಯದೆ 95-96ರಲ್ಲಿ 47647.72 ಕೋಟಿ, 96-97ರಲ್ಲಿ 27665.12 ಕೋಟಿ ಮೊತ್ತವನ್ನು ಪಡೆಯುವಲ್ಲಿ ಕೇಂದ್ರ ಸರಕಾರ ವಿಫಲವಾಗಿದ್ದು 97-98 ಹಾಗೂ 98-99ರ ಪರಿಸ್ಥಿತಿ ಕಾದು ನೋಡಬೇಕಾಗಿದೆ. ಪ್ರತಿವರ್ಷ ಪಡೆದ ಬಂಡವಾಳ ಸಾಲವನ್ನು ಬಜೆಟ್ ಪ್ರಕಾರ ವೆಚ್ಚಮಾಡದೆ ಹೋದರೆ ಅಭಿವೃದ್ಧಿ ಕಾರ್ಯಗಳು ಮೊಟಕುಗೊಳ್ಳುವುದಲ್ಲದೆ ಬಜೆಟ್ ಪ್ರಕಾರ ಸಾಲ ತೀರಿಸದೆ ಸಾಲದ ಹೊರೆ ಕೂಡ ಪ್ರತಿವರ್ಷ ಹೆಚ್ಚುತ್ತಲೇ ಹೋಗುತ್ತದೆ. ಬಜೆಟ್ ಪ್ರಕಾರ 95-96ರಲ್ಲಿ 41906-69 ಕೋಟಿ, 96-97ರಲ್ಲಿ 31351.26

ಕೋಟಿ ಹಣವನ್ನು ವೆಚ್ಚ ಮಾಡಿಲ್ಲ. ಮುಂದಿನ ವರ್ಷಗಳಲ್ಲಿ ಕಾದು ನೋಡಬೇಕು. ಕೇಂದ್ರ ಸರಕಾರವು ರೆವಿನ್ಯೂ ಕ್ಯಾಪಿಟಲ್ ಸಂಚಿತ ನಿಧಿಯನ್ನು ಬಜೆಟ್ ಪ್ರಕಾರ 95-96ರಲ್ಲಿ 29472.18 ಕೋಟಿ, 96-97ರಲ್ಲಿ 32585.67 ಕೋಟಿ ಮೊತ್ತವನ್ನು ಬಟವಾಡೆ ಮಾಡದೆ ಹೋದರೆ ಈ ದೇಶದ ಜನತೆಯ ಸಾಮಾನ್ಯ, ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಯ ಭವಿಷ್ಯವೇನು?

ನಮ್ಮ ರಾಷ್ಟ್ರದಲ್ಲಿ 26 ರಾಜ್ಯ ಸರಕಾರಗಳು ಸಹ ಸಾಲ ಪಡೆಯುವಲ್ಲಿ ಬಡ್ಡಿ ಕೊಡುವಲ್ಲಿ ರಾಜ್ಯ ಸರಕಾರಗಳ ನೌಕರ ಸಿಬ್ಬಂದಿಗೆ ವೇತನ ಭತ್ಯೆ ಇತ್ಯಾದಿ ಹೆಚ್ಚೆಚ್ಚು ಕೊಡುವಲ್ಲಿ ಆಸಕ್ತಿ ವಹಿಸಿ ದೇಶಾದ್ಯಂತ ಅಭಿವೃದ್ಧಿ ಕುಂಠಿತಗೊಳಿಸಿವೆ. ಎಲ್ಲಾ ರಾಜ್ಯಗಳ ರೆವಿನ್ಯೂ ಆದಾಯ 95-96ರಲ್ಲಿ 136803.4 ಕೋಟಿ, 96-97ರಲ್ಲಿ 157214.9 ಕೋಟಿ, 97-98ರಲ್ಲಿ 176178.2 ಕೋಟಿ - ಹೀಗೆ ಏರಿದ್ದರೂ ಈ ಉತ್ಪನ್ನ ಸಾಲದೆ ರೆವಿನ್ಯೂ ವೆಚ್ಚಕ್ಕೆ 95-96ರಲ್ಲಿ 8200.5 ಕೋಟಿ, 96-97ರಲ್ಲಿ 15855.2 ಕೋಟಿ, 97-98ರಲ್ಲಿ 15372.7 ಕೋಟಿ ಕಡಿಮೆ ಆಗಿದ್ದು, ಈ ಖೋತಾ ಭರ್ತಿ ಮಾಡಲು ಸಾಲ-ಮುಂಗಡ ಇತ್ಯಾದಿ ಬಂಡವಾಳವಾಗಿ 95-96ರಲ್ಲಿ 43630.1 ಕೋಟಿ, 96-97ರಲ್ಲಿ 47719.8 ಕೋಟಿ, 97-98ರಲ್ಲಿ 53553.2 ಕೋಟಿ ಹೆಚ್ಚು ಪಡೆದು, ಕೊಡಬೇಕಾಗಿದ್ದ ಸಾಲ ಬಂಡವಾಳವನ್ನು ಸಹ ಸಂಪೂರ್ಣ ಕೊಡದೆ 95-96ರಲ್ಲಿ 11050.3 ಕೋಟಿ, 96-97ರಲ್ಲಿ 11532.9 ಕೋಟಿ, 97-98ರಲ್ಲಿ 13943.1 ಕೋಟಿ ಮೊತ್ತವನ್ನು ಉಳಿಸಿಕೊಂಡು ಕಡಿಮೆ ಬಿದ್ದ ರೆವಿನ್ಯೂ ವೆಚ್ಚವನ್ನು ಭರ್ತಿಮಾಡಿಕೊಳ್ಳಲಾಗಿದೆ. ಇದರ ಪರಿಣಾಮವಾಗಿ 95-96ರಲ್ಲಿ 2489.8 ಕೋಟಿ ಉಳಿಕೆ, 96-97ರಲ್ಲಿ 4322.3 ಕೋಟಿ ಖೋತಾ, 97-98ರಲ್ಲಿ 1429.6 ಕೋಟಿ ಖೋತಾ ಆಗಿದೆ ಹಾಗೂ ಕೊಡಬೇಕಾದ ಸಾಲ ಬಾಕಿ ಹೆಚ್ಚುತ್ತಲೇ ಇದೆ. 95-96ರಲ್ಲಿ 21932.1 ಕೋಟಿ, 96-97ರಲ್ಲಿ 26563.1 ಕೋಟಿ, 97-98ರಲ್ಲಿ 31089.2 ಕೋಟಿ ಬಡ್ಡಿಯನ್ನು ಕೊಡಲಾಗಿದೆ. ಈ ಎಲ್ಲಾ ರಾಜ್ಯ ಸರಕಾರಗಳು ಪಡೆದ ಸೇವಾ ಹಾಗೂ ಮಾರಾಟ ಕರ 95-96ರಲ್ಲಿ 55755.2 ಕೋಟಿ, 96-97ರಲ್ಲಿ 63455.7 ಕೋಟಿ, 97-98ರಲ್ಲಿ 74146.9 ಕೋಟಿ ಕರವನ್ನು, 95-96ರಲ್ಲಿ 8516.5 ಕೋಟಿ 96-97ರಲ್ಲಿ 8766.00 ಕೋಟಿ, 97-98ರಲ್ಲಿ 9618.5 ಕೋಟಿ ಅಬಕಾರಿ ಸುಂಕವನ್ನು ಹೆಚ್ಚಾಗಿ ಪಡೆಯಲಾಗಿದೆ. ಕೇಂದ್ರ ಸರಕಾರದಿಂದ ಸಹ ರಾಜ್ಯ ಸರಕಾರಗಳು 95-96ರಲ್ಲಿ 19599.5 ಕೋಟಿ, 96-97ರಲ್ಲಿ 25417.3 ಕೋಟಿ, 97-98 ರಲ್ಲಿ 27736.00 ಕೋಟಿ ಸಾಲ ಪಡೆದಿವೆ. ಪ್ರತಿವರ್ಷ ಹೆಚ್ಚೆಚ್ಚು ಕರ ಕಂದಾಯ ಪಡೆಯುತ್ತ ಸಾಲ ಮುಂಗಡ ಪಡೆಯುತ್ತ ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚಿನ ಹಣ ವೆಚ್ಚ ಮಾಡಿ ನಿರೀಕ್ಷಿತ ಅಭಿವೃದ್ಧಿ ಸಾಧಿಸದೆ, ಅಭಿವೃದ್ಧಿಯೇತರ ಸೇವೆಗಳಿಗೆ ಹೆಚ್ಚಿನ ಹಣ ವೆಚ್ಚ ಮಾಡುತ್ತಾ, ಮಾಡಿದ ಸಾಲಕ್ಕೆ ಹೆಚ್ಚಿನ ಬಡ್ಡಿ ಕೊಡುತ್ತ, ಸಾರ್ವಜನಿಕ ಸಾಲ ಹಾಗೂ ಕೇಂದ್ರ ಸರಕಾರದ ಸಾಲವನ್ನು ತೀರಿಸದೆ ಪ್ರತಿವರ್ಷ ಸಾಲದ ಬಾಕಿಯನ್ನು ಹೆಚ್ಚಿಸುತ್ತ, ಉತ್ತಮ ಆಡಳಿತ ಹಾಗೂ ಸಾಕಷ್ಟು ಅಭಿವೃದ್ಧಿ ಮಾಡದೆ ಅನೇಕ ಅಕ್ರಮ ಹಾಗೂ ಹಗರಣಗಳಲ್ಲಿ ಅನೇಕ ರಾಜ್ಯಗಳ

ಮುಖ್ಯಮಂತ್ರಿ, ಮಂತ್ರಿ ಹಾಗೂ ಎಲ್ಲಾ ಹಂತದ ಅಧಿಕಾರಿಗಳು ಗುರುತರ ಆರೋಪ ಗಳನ್ನು ಕೇಂದ್ರ ಸರಕಾರದವರಂತೆಯೇ ಎದುರಿಸುತ್ತ ಹೋಗುವುದಾದರೆ ಈ ದೇಶದ ಹಾಗೂ ರಾಜ್ಯಗಳ ಅಭದ್ರ ಆಡಳಿತ ಹಾಗೂ ಕುಂಠಿತ ಅಭಿವೃದ್ಧಿಗೆ ಯಾರು ಯಾರನ್ನು ಹೊಣೆಗಾರರನ್ನಾಗಿ ಮಾಡಬೇಕು? ಸರಕಾರಗಳ ಆಡಳಿತ "ಯಾರದೋ ದುಡ್ಡು ಎಲ್ಲಮ್ಮನ ಜಾತ್ರೆ"ಯೆಂಬ ನಾಡುನುಡಿಯಂತಾಗಬಾರದು. ಈ ರಾಷ್ಟ್ರದಲ್ಲಿ ಸಂಘ, ಸಂಸ್ಥೆ, ನಿಗಮ, ಪಂಚಾಯತಿ, ಪರಿಷತ್ತು, ನಿಲಯ, ವಿದ್ಯಾಲಯ, ವಿಶ್ವವಿದ್ಯಾಲಯ, ಕ್ರೀಡೆ, ಮನೋ ರಂಜನೆ, ಸಮ್ಮೇಳನ, ಪ್ರಾಧಿಕಾರ, ಅಭಿವೃದ್ಧಿ ಇತ್ಯಾದಿ ಅಧಿಕೃತ ಹಾಗೂ ಅನಧಿಕೃತ ಘಟಕಗಳಿಗೆ ಹರಿದುಹೋಗುತ್ತಿರುವ ಕೇಂದ್ರ ಹಾಗೂ ಎಲ್ಲಾ ರಾಜ್ಯ ಸರಕಾರಗಳ ಹಣ ಸಂಸತ್ತು, ಶಾಸಕಾಂಗಗಳಿಂದ ಮಂಜೂರಾದದ್ದು ಕಲ್ಲಾಬಿಲ್ಲಿ ಆಗದಂತೆ ಸದ್ವಿನಿಯೋಗವಾಗಿ ಭವ್ಯಭಾರತದ ಸುಭದ್ರ ಆಡಳಿತ ಹಾಗೂ ಸಮೃದ್ಧಿ, ಅಭಿವೃದ್ಧಿಯ ಕನಸು ನನಸಾಗಬೇಕು. ಈ ದಿಶೆಯಲ್ಲಿ ಕೇಂದ್ರ ಹಾಗೂ ರಾಜ್ಯ ಸರಕಾರಗಳ ಹೊಣೆಗಾರರು ಪ್ರಯತ್ನ ಶೀಲರಾಗಬೇಕು.

❑

ಪೂರ್ಣಾವಧಿ ಸರಕಾರ, ಉತ್ತಮ ಆಡಳಿತ

ರಾಷ್ಟ್ರಾದ್ಯಂತ ಆಡಳಿತ ಹಾಗೂ ಅಭಿವೃದ್ಧಿ ಸಮರ್ಥ ಹಾಗೂ ಸ್ಥಿರವಾಗಿರಬೇಕೆಂಬ ಮಹದುದ್ದೇಶದಿಂದ ಲೋಕಸಭೆಗೆ ಐದು ವರ್ಷಕ್ಕೊಮ್ಮೆ ಚುನಾವಣೆ ನಡೆಯಬೇಕೆಂಬುದು ಸಂವಿಧಾನ ಹಾಗೂ ಅಧಿನಿಯಮಬದ್ಧವಾಗಿದೆ. ಈ ಐದು ವರ್ಷದ ಅವಧಿಗೆ ಯಾವುದೇ ರಾಜಕೀಯ ಪಕ್ಷ ಸಾರ್ವತ್ರಿಕ ಚುನಾವಣೆಯಲ್ಲಿ ನಿಚ್ಚಳ ಬಹುಮತವನ್ನು ಪಡೆದು ಲೋಕಸಭೆಯಲ್ಲಿ ಸಬಲವಾಗಿ ಅವಧಿಪೂರ್ಣ ಸರಕಾರವನ್ನು ನಡೆಸಿದರೆ ಮಾತ್ರ ರಾಜಕೀಯ ಪಕ್ಷಗಳು ತಮ್ಮ ತಮ್ಮ ಚುನಾವಣೆ ಘೋಷಣೆಯಲ್ಲಿ ಪ್ರಕಟಿಸಿದಂತೆ ಉತ್ತಮ ಆಡಳಿತ ಹಾಗೂ ಅಗತ್ಯ ಅಭಿವೃದ್ಧಿಯನ್ನು ಈ ದೇಶಕ್ಕೆ ಕೊಡಬಹುದಾಗಿದೆ. ಯಾವುದೇ ರಾಜಕೀಯ ಪಕ್ಷಕ್ಕೆ ಈ ದೇಶದ ಮತದಾರ ನಿಚ್ಚಳ ಬಹುಮತ ಕೊಡದೇ ಹೋದರೆ ವಿಭಿನ್ನ ಗೊತ್ತು-ಗುರಿಗಳನ್ನು ಹೊಂದಿದ ಪರಸ್ಪರ ವಿರೋಧ ಮಾಡಿದ ವಿವಿಧ ಪಕ್ಷಗಳ ಜೊತೆಗೆ ಯಾವುದೇ ಒಂದು ನಿಚ್ಚಳ ಬಹುಮತ ಪಡೆಯದ ಅತಿದೊಡ್ಡ ಪಕ್ಷಮೈತ್ರಿ ಮಾಡಿಕೊಂಡು ಸಮ್ಮಿಶ್ರ ಸರಕಾರವನ್ನು ರಚಿಸಿದರೆ ಆ ಸರಕಾರ ಅವಧಿಪೂರ್ಣ ಸರಕಾರವಾಗಲಿಕ್ಕೂ ಸಾಧ್ಯವಿಲ್ಲ, ಸುಭದ್ರ ಹಾಗೂ ಸಮರ್ಥ ಸರಕಾರ ಕೊಡಲಿಕ್ಕೂ ಸಾಧ್ಯವಿಲ್ಲ ಹಾಗೂ ಉತ್ತಮ ಆಡಳಿತ ಅಭಿವೃದ್ಧಿ ಸಹಿತ ಸಾಧ್ಯವಿಲ್ಲವೆಂಬುದನ್ನು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಅಲ್ಪಾವಧಿಯ ಏಳು ಸರಕಾರಗಳನ್ನು ನೋಡಿದ್ದೇವೆ. ಮೊದಲು ಮೈತ್ರಿಗೆ ಒಪ್ಪಿಗೆ ಕೊಟ್ಟು ತಮ್ಮ ಸಾರ್ಥ ಕಾರ್ಯಸಾಧನೆಗೆ ಸರಕಾರ ಅನುಚಿತ ಒಪ್ಪಿಗೆ ಹಾಗೂ ಬೆಂಬಲ ಕೊಡದೇ ಇದ್ದಾಗ ಕ್ಷುಲ್ಲಕ ಹಾಗೂ ಕುಂಟುನೆಪ ಕಾರಣಗಳಿಗಾಗಿ ಕೊಟ್ಟ ಬೆಂಬಲವನ್ನು ಹಿಂತೆಗೆದು ಸರಕಾರ ಪತನವಾಗಲಿಕ್ಕೆ ಕಾರಣವಾದ ಅನೇಕ ಸಣ್ಣಪುಟ್ಟ ಪ್ರಾಂತೀಯ ಹಾಗೂ ರಾಷ್ಟ್ರಮಟ್ಟದ ನಿಚ್ಚಳ ಬಹುಮತ ಪಡೆಯದ ರಾಜಕೀಯ ಪಕ್ಷಗಳ ಚಂಡಾಟ ಹಾಗೂ ಚಿನ್ನಾಟಗಳನ್ನು ಆಗಾಗ್ಗೆ ನೋಡುತ್ತಲೇ ಇದ್ದೇವೆ. ಈ ರಾಷ್ಟ್ರದ ರಕ್ಷಣೆ, ಹಿತ, ಆಡಳಿತ ಹಾಗೂ ಅಭಿವೃದ್ಧಿಗಿಂತ ತಮ್ಮ ತಮ್ಮ ವೈಯಕ್ತಿಕ ಹಾಗೂ ಪಕ್ಷಗಳ ಕ್ಷಣಿಕ ಸ್ವಾರ್ಥ ಹಿತಾಸಕ್ತಿಯ ಸಾಧನೆಯ ಗುರಿಯೇ ಅನೇಕ ಸಣ್ಣಪುಟ್ಟ ರಾಜಕೀಯ ಪಕ್ಷಗಳ ಕಾರ್ಯವೈಖರಿಯಾಗಿದೆ. ಮೋಸ, ವಂಚನೆ, ಕಪಟನಾಟಕ, ದುಲಾರ್ಭ, ದುರಾಶೆ, ಇತ್ಯಾದಿಗಳ ದುಷ್ಪರಿಣಾಮವಾಗಿ ಲೋಕಸಭೆಯಲ್ಲಿ ನಿಚ್ಚಳ ಬಹುಮತ ಪಡೆಯದ

ಮುರಾರ್ಜಿ ದೇಸಾಯಿ, ಚರಣಸಿಂಗ್, ಚಂದ್ರಶೇಖರ, ವಿ.ಪಿ. ಸಿಂಗ್, ವಾಜಪೇಯಿ, ದೇವೇಗೌಡ ಮತ್ತು ಗುಜ್ರಾಲ್‌ರವರ ಸರಕಾರಗಳು ಅಲ್ಪಾವಧಿಯಲ್ಲಿಯೇ ಅಧಿಕಾರಗಳನ್ನು ಕಳೆದುಕೊಂಡು ಮಧ್ಯಂತರ ಚುನಾವಣೆಗೆ ಅನಿವಾರ್ಯವಾಗಿ ಈ ರಾಷ್ಟ್ರವನ್ನು ದೂಡಿ ಸಾಕಷ್ಟು ಆರ್ಥಿಕ ಹಾನಿಗೆ ಗುರಿ ಮಾಡಲಾಗಿದೆ. ನಿಚ್ಚಳ ಬಹುಮತ ಪಡೆಯದ ರಾಜಕೀಯ ಪಕ್ಷಗಳ ಗೊತ್ತು-ಗುರಿಯಿಲ್ಲದ ದುರಂತ ನಾಟಕೀಯ ಪರಿಸ್ಥಿತಿ ನಮ್ಮ ರಾಷ್ಟ್ರದಲ್ಲಿ ಆಗಾಗ ಬರುತ್ತಿದೆ ಹಾಗೂ ಪ್ರಜಾತಂತ್ರ ವ್ಯವಸ್ಥೆಗೆ ಗಂಡಾಂತರ ಕೂಡ ಬರುತ್ತಲಿದೆ. ಈ ತರಹದ ಕಹಿ ಅನುಭವವನ್ನು ಹಾಗೂ ಮೇಲಿಂದ ಮೇಲೆ ಬರುವ ಮಧ್ಯಕಾಲಿಕ ಚುನಾವಣೆ ವೆಚ್ಚದ ಭಾರ ಜನತೆಯ ಮೇಲೆ ಬಿದ್ದು ಆಡಳಿತ ಹಾಗೂ ಅಭಿವೃದ್ಧಿ ಕುಸಿದು ಬೀಳುತ್ತಿದ್ದರೂ ಭಾರತ ಜನತೆ ಯಾವುದಾದರೂ ಒಂದು ರಾಜಕೀಯ ಪಕ್ಷಕ್ಕೆ ನಿಚ್ಚಳ ಬಹುಮತ ಗಳಿಸಿ ಕೊಡುವಲ್ಲಿ ವಿಫಲರಾಗುತ್ತಿರುವುದನ್ನು ನೋಡಿದರೆ ಗ್ರೇಟ್ ಬ್ರಿಟನ್ ಜನತೆಯಂತೆ ನಾವು ಭಾರತೀಯರು ಪ್ರಬುದ್ಧರಾಗದೆ ಇನ್ನೂ ಅಪ್ರಬುದ್ಧರಾಗಿಯೇ ಹೋಗುತ್ತಿರುವುದು ಸ್ವಾತಂತ್ರ್ಯ ನಂತರದ ದೋಷಪೂರಿತ ಶಿಕ್ಷಣದ ಕೊಡುಗೆಯೇ ಬಹುಮಟ್ಟಿಗೆ ಕಾರಣವಾಗಿರಬೇಕೆಂದೆನಿಸುತ್ತಿದೆ.

1998ರ ಮಧ್ಯಕಾಲಿಕ ಚುನಾವಣೆಯಲ್ಲಿ ಭಾರತೀಯ ಜನತಾ ಪಕ್ಷ ನಿಚ್ಚಳ ಬಹುಮತ ಪಡೆಯಲು, ಅತಿ ದೊಡ್ಡ ಪಕ್ಷವಾಗಿ ಲೋಕಸಭೆಯಲ್ಲಿ ಸ್ಥಾನ ಹೊಂದಿದ್ದರಿಂದ ಈ ಪಕ್ಷಕ್ಕೆ ಹಾಗೂ ಪಕ್ಷದ ನಾಯಕ ಪ್ರಧಾನಿ ವಾಜಪೇಯಿಯವರಿಗೆ ಮಿತ್ರ ಹಾಗೂ ಇತರೆ ಪಕ್ಷಗಳೆಲ್ಲಾ ಬೆಂಬಲ ಕೊಟ್ಟು ವಿಶ್ವಾಸ ವ್ಯಕ್ತಪಡಿಸಿದ ಪರಿಣಾಮವಾಗಿ ಈಗಾಗಲೇ ಅನೇಕ ತಿಂಗಳುಗಳ ಅವಧಿಯನ್ನು ದಾಟಿ ಮುಂದುವರೆಯುತ್ತಿದೆ ಹಾಗೂ ಈ ದೇಶಕ್ಕೆ ಸುಭದ್ರ ಹಾಗೂ ಸ್ಥಿರ ಸರಕಾರವನ್ನು ಕೊಟ್ಟು ಈ ರಾಷ್ಟ್ರದ ಸಾಮಾಜಿಕ, ಸಾಮಾನ್ಯ, ಆರ್ಥಿಕ ಇತ್ಯಾದಿ ಸರ್ವಾಂಗೀಣ ಅಭಿವೃದ್ಧಿಗೆ ಮುನ್ನಡೆಯುತ್ತಲಿದೆ. 1998-99ರಲ್ಲಿ ಹಿಂದಿನ ಸರಕಾರಗಳಿಗಿಂತ ಹೆಚ್ಚು ಹಣವನ್ನು ಆಯವ್ಯಯದಲ್ಲಿ ತೊಡಗಿಸಿ ಆ ಬಗ್ಗೆ ಸಂಸತ್ತಿನ ಮಂಜೂರಿ ಪಡೆದು ಮುಂದೆ ಸಾಗುತ್ತಿದೆ. ನಮ್ಮ ರಾಷ್ಟ್ರದಲ್ಲಿ ರಾಜಕೀಯ ಹಿನ್ನೆಲೆ ಪಡೆದ ಕಾಂಗ್ರೆಸ್ ಪಕ್ಷ ಕೂಡ ಎರಡನೇ ದೊಡ್ಡ ಪಕ್ಷವಾಗಿದ್ದು ಲೋಕಸಭೆಯಲ್ಲಿ ಅಧಿಕೃತ ವಿರೋಧ ಪಕ್ಷವಾಗಿ ಅದರ ಸಾರಥಿ ಶರದ್ ಪವಾರರು ಕಾರ್ಯ ನಿರ್ವಹಿಸುತ್ತಿರುವಾಗ ಹೊಣೆಗಾರ ಕಾಂಗ್ರೆಸ್ ಪಕ್ಷ ಹಾಗೂ ಇತರ ವಿರೋಧಿ ಪಕ್ಷಗಳು ಆಡಳಿತ ನಡೆಸುವ ಸರಕಾರಕ್ಕೆ ಉತ್ತಮ ಹಾಗೂ ರಚನಾತ್ಮಕ ಸೂಚನೆ-ಸಲಹೆ, ಟೀಕೆ-ಟಿಪ್ಪಣಿಯನ್ನು ಕೊಟ್ಟು ಪೂರ್ಣಾವಧಿಯ ಲೋಕಸಭೆ ಹಾಗೂ ಪೂರ್ಣಾವಧಿ ಸರಕಾರ, ಅವಧಿಪೂರ್ಣ ಕಾರ್ಯ ನಿರ್ವಹಿಸಲು ಅವಕಾಶ ಮಾಡಿಕೊಡುವುದು ಸಂಸದೀಯ ಸತ್ವ ಪರಂಪರೆ ಹಾಗೂ ಸತ್‌ಸಂಪ್ರದಾಯವನ್ನು ಹಾಕುವುದು ಹಿತಕರ. ಗ್ರೇಟ್ ಬ್ರಿಟನ್‌ದಲ್ಲಿಯ ಆದರ್ಶಗಳನ್ನು ಅನುಸರಿಸುವುದು ದೇಶದ ಹಿತದೃಷ್ಟಿಯಿಂದ ಒಳ್ಳೆಯದು. ಕಾಂಗ್ರೆಸ್ ಸಂಸದೀಯ ಪಕ್ಷ ಹಾಗೂ ಇತರ ರಾಜಕೀಯ ಪಕ್ಷಗಳು ಈ ದಿಶೆಯಲ್ಲಿ ಗಂಭೀರ ಆಲೋಚನೆ ಮಾಡಿ ಬಿಜೆಪಿ ಸರ್ಕಾರವನ್ನು ಪೂರ್ಣಾವಧಿಗೆ ಕಾರ್ಯ ನಿರ್ವಹಿಸಲು ಅವಕಾಶ ಮಾಡಿ

ಕೊಡುವುದು ಸಹ ಅವರ ಘನತೆಗೆ ತಕ್ಕದ್ದಾಗುವುದು, ಉಳಿದ ಮೈತ್ರಿ ಪಕ್ಷಗಳು ಸಹ ತಮ್ಮ ಸ್ವಾರ್ಥಕ್ಕಾಗಿ ಆಡಳಿತ ಸರಕಾರಕ್ಕೆ ಕಿರಿಕಿರಿ ಹಾಗೂ ಕಿರುಕುಳ ಕೊಡುವುದು ಸರಿಯಲ್ಲ.

ಈ ಹಿಂದೆ ಆಗಿಹೋದ ಯಾವುದೇ ಅಲ್ಪಾವಧಿ ಸರಕಾರಗಳು ಈ ದೇಶಕ್ಕೆ ಉತ್ತಮ ಆಡಳಿತ ಕೊಡುವಲ್ಲಿ ಹಾಗೂ ರಾಷ್ಟ್ರದ ಸರ್ವಾಂಗೀಣ ಅಭಿವೃದ್ಧಿ ಸಾಧಿಸುವಲ್ಲಿ ಹಿಂದೆ ಬಿದ್ದಿವೆ ಹಾಗೂ ಸಂಸತ್ತು ನಿಗದಿ ಮಾಡಿದ ಆಯವ್ಯಯದ ಹಣವನ್ನೇ ಸಂಪೂರ್ಣವಾಗಿ ವೆಚ್ಚವನ್ನೇ ಮಾಡಿಲ್ಲ. ಇತ್ತೀಚೆಗೆ ದೇವೇಗೌಡ ಹಾಗೂ ಗುಜ್ರಾಲ್ ಸರಕಾರದ ಉದಾಹರಣೆಯೊಂದನ್ನೇ ತೆಗೆದುಕೊಳ್ಳುವುದಾದರೆ 1996-97ರಲ್ಲಿ ಕರ, ಕರೇತರ, ಸಹಾಯಧನ ವಂತಿಗೆ ಇತ್ಯಾದಿ ರೆವಿನ್ಯೂ ಆದಾಯ ಪಡೆಯಬೇಕಾಗಿದ್ದ ಒಟ್ಟು 198638.12 ಕೋಟಿ ಮೊತ್ತದಲ್ಲಿ 193717.57 ಕೋಟಿ ವಾಸ್ತವಿಕ ಆದಾಯ ಪಡೆದು 4920.55 ಕೋಟಿ ಆದಾಯ ಪಡೆಯದೆ ಕೇಂದ್ರ ಸರಕಾರ ವಿಫಲಗೊಂಡಿದೆ. ಅಂತೆಯೇ ಬಂಡವಾಳ ಲೆಕ್ಕದಲ್ಲಿ ಪಡೆಯಬೇಕಾಗಿದ್ದ ಜಮೆ 246858.70 ಕೋಟಿಯಲ್ಲಿ 129193.58 ಕೋಟಿ ವಾಸ್ತವಿಕ ಜಮೆ ಪಡೆದು 27665.12 ಕೋಟಿ ಪಡೆಯದೆ ಕೇಂದ್ರ ಸರಕಾರ ವಿಫಲಗೊಂಡಿದೆ. ಹೀಗೆ ರೆವಿನ್ಯೂ ಬಂಡವಾಳ ಸಂಚಿತ ಜಮೆಯಲ್ಲಿ ಬಜೆಟ್ ಪ್ರಕಾರ 32585.67 ಕೋಟಿ ಪಡೆಯದೆ ಬಿಟ್ಟಿದೆ. ಸಾಮಾನ್ಯ ಸಾಮಾಜಿಕ, ಆರ್ಥಿಕ ಸೇವೆ ಹಾಗೂ ಸಹಾಯ ಧನಕ್ಕಾಗಿ 230113.02 ಕೋಟಿ ಮೊತ್ತವನ್ನು ವೆಚ್ಚ ಮಾಡಬೇಕಾಗಿದ್ದರೂ, 226371.57 ಕೋಟಿಯನ್ನು ವಾಸ್ತವಿಕ ವೆಚ್ಚ ಮಾಡಿ 3741.45 ಕೋಟಿಯ ವೆಚ್ಚ ಮಾಡಿರುವುದಿಲ್ಲ. ಬಂಡವಾಳ ವೆಚ್ಚದಲ್ಲಿ ಸಹ 31351.26 ಕೋಟಿ ವೆಚ್ಚ ಮಾಡಿರುವುದಿಲ್ಲ. ಹೀಗೆ ರೆವಿನ್ಯೂ ಮತ್ತು ಬಂಡವಾಳ ವೆಚ್ಚದಲ್ಲಿ 35092.71 ಕೋಟಿ ಮೊತ್ತವನ್ನು ವೆಚ್ಚ ಮಾಡದೆ ರಾಷ್ಟ್ರದ ವಿವಿಧ ಸಾಮಾಜಿಕ, ಸಾಮಾನ್ಯ ಹಾಗೂ ಆರ್ಥಿಕ ಅಭಿವೃದ್ಧಿ ಕಾರ್ಯಗಳನ್ನು ಕುಂಠಿತಗೊಳಿಸಲಾಗಿದೆ. 1997-98ರ ಆಯವ್ಯಯಗಳ ವಾಸ್ತವಿಕ ಅಂಕಿ-ಸಂಖ್ಯೆ ಹೊರಬಿದ್ದಿರುವುದಿಲ್ಲವಾದ್ದರಿಂದ ಇದು ಸಂಸತ್ತಿಗೆ ಕೂಡ ತಿಳಿಯದು. ಇದು ಅಲ್ಪಾವಧಿ ಸಂಯುಕ್ತರಂಗದ ಕಾರ್ಯಾಚರಣೆ, 1996-97ರ ಹಿಂದಿನ ಪೂರ್ಣಾವಧಿಯ ಕಾಂಗ್ರೆಸ್ ಸರಕಾರ 95-96ರಲ್ಲಿ ಪಡೆಯಬೇಕಾಗಿದ್ದ ಆದಾಯದಲ್ಲಿ ಬಜೆಟ್ ಮೀರಿ 7985.54 ಕೋಟಿ ಹೆಚ್ಚು ರೆವಿನ್ಯೂ ಆದಾಯ ಪಡೆದು, ವೆಚ್ಚ ಮಾಡಬೇಕಾಗಿದ್ದ ವೆಚ್ಚದಲ್ಲಿ ಬಜೆಟ್ ಮೀರಿ 2174.76 ಕೋಟಿ ಹೆಚ್ಚಿನ ರೆವಿನ್ಯೂ ಮೊತ್ತವನ್ನು ವೆಚ್ಚ ಮಾಡಲಾಗಿದೆ. ಇದು ಪೂರ್ಣಾವಧಿ ಕಾಂಗ್ರೆಸ್ ಸರಕಾರದ ಕಾರ್ಯಾಚರಣೆ.

ಸಂಯುಕ್ತ ರಂಗ ಅಲ್ಪಾವಧಿ ಸರಕಾರ ರೆವಿನ್ಯೂ ಹಾಗೂ ಬಂಡವಾಳ ಸಂಚಿತ ನಿಧಿಯಲ್ಲಿ 96-97ರಲ್ಲಿ 4.42 ಲಕ್ಷ ಕೋಟಿ ವಾಸ್ತವಿಕ ವೆಚ್ಚ ಮಾಡಿದ್ದು, 97-98ರಲ್ಲಿ 5.40 ಲಕ್ಷ ಕೋಟಿ ಅಂದಾಜು ವೆಚ್ಚ ನಿಗದಿ ಮಾಡಿದ್ದು ಸದ್ಯದ ಬಿಜೆಪಿ ಸರಕಾರ ರೆವಿನ್ಯೂ ಹಾಗೂ ಬಂಡವಾಳ ಸಂಚಿತ ನಿಧಿಯಲ್ಲಿ 98.99ರಲ್ಲಿ 7.19 ಲಕ್ಷ ಕೋಟಿ ಮೊತ್ತವನ್ನು ವಿವಿಧ ಸೇವೆಗಳಿಗಾಗಿ ವೆಚ್ಚ ಮಾಡಲು ಉದ್ದೇಶಿಸಿ ಬಜೆಟ್ ತಯಾರಿಸಿ ಸಂಸತ್

ಮಂಜೂರಿ ಫಡೆದ ಪ್ರಕಾರ ಈಗಾಗಲೇ ರಾಷ್ಟ್ರಾದ್ಯಂತ ವೆಚ್ಚ ಮಾಡಲು ಮುಂದಾಗಿದ್ದು, ಈ ಎಲ್ಲ ಮೊತ್ತವನ್ನು ಪ್ರತಿ ತಿಂಗಳು ವೆಚ್ಚ ಮಾಡಿ ರಾಷ್ಟ್ರದ ಆರ್ಥಿಕ ಪ್ರಗತಿ ಸಾಧಿಸುವಲ್ಲಿ ಪ್ರತಿಯೊಬ್ಬ ಸಂಸದರು ಹಾಗೂ ಅವರವರ ರಾಜಕೀಯ ಪಕ್ಷಗಳು ಪಕ್ಷಭೇದ ಮರೆತು ಪೂರ್ಣಾವಧಿ ಸರಕಾರಕ್ಕೆ ಅವಕಾಶ ಮಾಡಿ ಮುಂದಾಗಬೇಕೇ ಹೊರತು 'ಓಡುವವರ ಕಾಲಿಗೆ ಅಡ್ಡ ಕೋಲು ಒಗೆಯುವುದು' ಸಾಧುವಲ್ಲ. ರಾಜ್ಯ ಸರಕಾರಗಳು ಸಹ ಪ್ರತಿವರ್ಷ ಕೇಂದ್ರ ಸರಕಾರಗಳು ಕೊಡುವ ಧನಸಹಾಯವನ್ನು ವೆಚ್ಚ ಮಾಡದೆ ಪಿ.ಡಿ. ಲೆಕ್ಕದಲ್ಲಿ ಇಡದೆ ಕೊಟ್ಟ ಕೇಂದ್ರದ ಎಲ್ಲಾ ಹಣವನ್ನು ವಾಸ್ತವಿಕವಾಗಿ ವೆಚ್ಚ ಮಾಡಿ ಅಭಿವೃದ್ಧಿ ಸಾಧಿಸುವಲ್ಲಿ ಕರ್ತವ್ಯಶೀಲರಾಗಬೇಕು.

❑

ಯೋಜನಾ ಯೋಜನೇತರ ಮೊತ್ತದ ವೆಚ್ಚ ಒಂದು ಟಿಪ್ಪಣಿ

ಪ್ರತಿವರ್ಷ ಆಯವ್ಯಯದಲ್ಲಿ ಯೋಜನಾ ಕಾರ್ಯಗಳಿಗಾಗಿ ಹಾಗೂ ಯೋಜನೇತರ ಕಾರ್ಯಗಳಿಗಾಗಿ ಹಣ ವೆಚ್ಚ ಮಾಡಲು ಸರಕಾರ ಉದ್ದೇಶಿಸಿ ಆ ಪ್ರಕಾರ ಯೋಜನಾ ಮೊತ್ತವೆಷ್ಟು ಹಾಗೂ ಯೋಜನೇತರ ಮೊತ್ತವೆಷ್ಟೆಂಬುದನ್ನು ನಿಗದಿಗೊಳಿಸಲಾಗುತ್ತಿದೆ. ಈ ಮೊತ್ತವನ್ನು ಸರಕಾರವು ತನ್ನ ಇಲಾಖೆಗಳ ಮುಖಾಂತರ ಹಾಗೂ ಜಿಲ್ಲಾ ಪಂಚಾಯತಿಗಳ ಮುಖಾಂತರ ವೆಚ್ಚ ಮಾಡುತ್ತದೆ. ಯೋಜನಾ ಮೊತ್ತದಲ್ಲಿ ಬಹುಪಾಲು ಮೊತ್ತ ಅಭಿವೃದ್ಧಿ ಕಾರ್ಯಗಳಿಗೆ ಕೆಲವು ಪಾಲು ಅಭಿವೃದ್ಧಿಯೇತರ ಆಡಳಿತ ವೆಚ್ಚಕ್ಕೆ ಖರ್ಚು ಮಾಡಲಾಗುತ್ತದೆ. ಯೋಜನೇತರ ಮೊತ್ತದಲ್ಲಿ ಬಹುಪಾಲು ಅಭಿವೃದ್ಧಿಯೇತರ ಆಡಳಿತ ವೆಚ್ಚಕ್ಕೆ ಖರ್ಚಾಗಿ ಕೆಲವು ಪಾಲು ಮಾತ್ರ ಅಭಿವೃದ್ಧಿ ಕಾರ್ಯಗಳಿಗೆ ವೆಚ್ಚವಾಗುತ್ತದೆ. ಆಡಳಿತ ಹಾಗೂ ಅಭಿವೃದ್ಧಿಗಾಗಿ ಯಾವ್ಯಾವ ಕಾರ್ಯಗಳಿಗೆ ಎಷ್ಟೆಷ್ಟು ಎಂಬುದನ್ನು ಮೊದಲ ದರ್ಜೆ ಹಾಗೂ ವಿಚಾರ ವಿನಿಮಯ ಮಾಡಿ ಸರಕಾರ ಹಣವನ್ನು ನಿಗದಿಗೊಳಿಸುತ್ತದೆ. ಹೀಗೆ ನಿಗದಿಗೊಳಿಸಿದ ಹಣದಲ್ಲಿ ಆಡಳಿತ ಹಾಗೂ ಅಭಿವೃದ್ಧಿಯೇತರ ಕಾರ್ಯಗಳಿಗೆ ನಿಗದಿತ ಹಣವನ್ನೆಲ್ಲಾ ಅಥವಾ ಇನ್ನೂ ಹೆಚ್ಚಿನ ಹಣವನ್ನು ವೆಚ್ಚಮಾಡಲಾಗುತ್ತದೆ. ಆದರೆ ಅಭಿವೃದ್ಧಿ ಕಾರ್ಯಗಳಿಗೆ ಯಾವ ವರ್ಷವೂ ಸಂಪೂರ್ಣವಾಗಿ ಆಯವ್ಯಯದಲ್ಲಿ ನಿಗದಿತ ಹಣವನ್ನು ವೆಚ್ಚ ಮಾಡುವುದಿಲ್ಲ. ಈ ನಿಜಾಂಶವನ್ನು ಮಂತ್ರಿಮಹೋದಯರ್‍ಯಾರೂ ತಿಳಿದುಕೊಳ್ಳುವುದಿಲ್ಲ. ಒಂದು ವೇಳೆ ತಿಳಿದುಕೊಂಡರೆ ಅಧಿಕಾರಿಗಳ ಸಮಜಾಯಿಷಿಗೆ ತಲೆಬಾಗುತ್ತಾರೆ. ಮುಂದೆ ಹಾಗೆ ಆಗದಂತೆ ಮುಂಜಾಗ್ರತೆ ಕ್ರಮವನ್ನು ತೆಗೆದುಕೊಂಡು ಮುಂದಿನ ವರ್ಷದಲ್ಲಾದರೂ ಅಭಿವೃದ್ಧಿ ಕಾರ್ಯಗಳಿಗೆ ಯೋಜನೆ ಹಾಗೂ ಯೋಜನೇತರ ಆಯವ್ಯಯದ ಹಣದಲ್ಲಿ ಸಂಪೂರ್ಣವಾಗಿ ವೆಚ್ಚ ಮಾಡಿ ಅಭಿವೃದ್ಧಿಯನ್ನು ಸಾಧಿಸುವುದಿಲ್ಲ. ರಾಜ್ಯ ಸರಕಾರವು 95-96ರಲ್ಲಿ ಬಜೆಟ್ ಹಣವನ್ನು ಪೂರ್ಣ ವೆಚ್ಚ ಮಾಡದೆ ಯೋಜನಾ ಮೊತ್ತದಲ್ಲಿ 367.44 ಕೋಟಿ, ಯೋಜನೇತರ ಮೊತ್ತದಲ್ಲಿ 1634.54 ಕೋಟಿ ಹೀಗೆ ಒಟ್ಟು 2001.98 ಕೋಟಿ ಮೊತ್ತವನ್ನು ವೆಚ್ಚ ಮಾಡದೆ ಉಳಿಸಿದೆ. 96-97ರಲ್ಲಿ ಯೋಜನಾ ಮೊತ್ತವನ್ನು

ಸಂಪೂರ್ಣ ವೆಚ್ಚ ಮಾಡದೆ 387.46 ಕೋಟಿ ಮೊತ್ತವನ್ನು ಉಳಿಸಿ ಯೋಜನೇತರ ಮೊತ್ತದಲ್ಲಿ ಬಜೆಟ್ ಮೀರಿ 520.70 ಕೋಟಿ ಮೊತ್ತವನ್ನು ಹೆಚ್ಚು ವೆಚ್ಚ ಮಾಡಲಾಗಿದೆ. 97-98ರಲ್ಲಿ ಯೋಜನಾ ಮೊತ್ತವನ್ನು ಬಜೆಟ್ ಪ್ರಕಾರ ಸಂಪೂರ್ಣ ವೆಚ್ಚಮಾಡದೆ 219.00 ಕೋಟಿ ಮೊತ್ತವನ್ನು ವೆಚ್ಚ ಮಾಡಿರುವುದಿಲ್ಲ. ಯೋಜನೇತರ ಮೊತ್ತದಲ್ಲಿ ಸಹ ಬಜೆಟ್ ಪ್ರಕಾರ ಸಂಪೂರ್ಣ ಹಣ ವೆಚ್ಚ ಮಾಡದೆ 219.23 ಕೋಟಿ ಮೊತ್ತವನ್ನು ವೆಚ್ಚ ಮಾಡದೆ ಬಿಡಲಾಗಿದೆ. ಹೀಗೆ 95-96, 96-97, 97-98 ಈ ಮೂರು ವರ್ಷದ ಅವಧಿಯಲ್ಲಿ ಯೋಜನೆ ಹಾಗೂ ಯೋಜನೇತರ ನಿಗದಿತ ಮೊತ್ತ 40868.65 ಕೋಟಿಯಲ್ಲಿ 38561.78 ಕೋಟಿ ಮೊತ್ತವನ್ನು ವೆಚ್ಚ ಮಾಡಿ 2306.87 ಕೋಟಿ ಹಣವನ್ನು ವೆಚ್ಚ ಮಾಡದೆ ಬಿಡಲಾಗಿದೆ. ಈ ಕರ್ತವ್ಯಲೋಪಕ್ಕೆ ಹಾಗೂ ಬೇಜವಾಬ್ದಾರಿಗೆ ಯಾರು ಹೊಣೆ? ಈ ಭಾರೀ ಮೊತ್ತವನ್ನು ವೆಚ್ಚ ಮಾಡದೆ ಈ ರಾಜ್ಯದ ಕರದಾತ ನಾಗರಿಕರ ಅನೇಕ ಅಭಿವೃದ್ಧಿ ಸೇವೆಗಳಿಗೆ ಗಧಾಪ್ರಹಾರ ಮಾಡಿದ ಅಭಿವೃದ್ಧಿ ಯೋಜನೆಗಳ ಜಾರಿ ಅಧಿಕಾರಿಗಳ ಮೇಲೆ ಕರ್ತವ್ಯಲೋಪದ ಕ್ರಮವೇನು? ಪ್ರತಿವರ್ಷ ಬಜೆಟ್ ಅನ್ನು ಶಾಸಕಾಂಗದಲ್ಲಿ ಅನುಮೋದನೆ ಪಡೆಯುವ ಉದ್ದೇಶ ಜನತೆಯ ಅಭಿವೃದ್ಧಿ ಸೇವಾಕಾರ್ಯಗಳನ್ನು ಸಾಧಿಸುವ ಸಲುವಾಗಿಯೆ ಅಥವಾ ಆಡಳಿತ ಅಭಿವೃದ್ಧಿಯೇತರ ಕಾರ್ಯಗಳನ್ನು ಮಾತ್ರ ಸಾಧಿಸುವ ಸಲುವಾಗಿಯೆ ಎಂಬುದನ್ನು ಪ್ರಶ್ನಿಸಬೇಕಾಗುತ್ತದೆ. ಈ ತರಹದ ಗುರುತರವಾದ ಲೋಪವನ್ನೆಸಗುವುದು ಸರಕಾರಕ್ಕೆ ಹಾಗೂ ಸರಕಾರದಲ್ಲಿಯ ಮಂತ್ರಿಗಳು ಹಾಗೂ ಅಧಿಕಾರಿಗಳಿಗೆ ಭೂಷಣವಲ್ಲ.

ಎಲ್ಲಾ ಪಂಚಾಯತಿಗಳಿಗೆ ಅಧಿಕಾರವೇ ಇಲ್ಲವೆಂಬ ಕೂಗು ಪಂಚಾಯತಿಗಳ ಪದಾಧಿಕಾರಿಗಳಿಂದ ಬರುತ್ತಲೇ ಇವೆ. ಎಲ್ಲಾ ಪಂಚಾಯತಿಗಳಿಗೆ ಪ್ರತಿವರ್ಷ ಬಜೆಟ್ ಪ್ರಕಾರ ವಿಧಾನಮಂಡಲದಲ್ಲಿ ಮೊತ್ತವನ್ನು ಮಂಜೂರು ಮಾಡಿಸಿಕೊಂಡು ಸರಕಾರ ನಿಗದಿ ಮಾಡಿಕೊಡಬೇಕಾದ ಹಣವನ್ನು ಅದು ಯೋಜನಾ ಮೊತ್ತವೇ ಇರಲಿ ಅಥವಾ ಯೋಜನೇತರ ಮೊತ್ತವೇ ಇರಲಿ ಅದನ್ನೆಲ್ಲಾ ಪ್ರತಿ ತಿಂಗಳು ಪಡೆಯುವುದು ಹಾಗೂ ಅವನ್ನೆಲ್ಲ ಪ್ರತಿ ತಿಂಗಳು ಕ್ರಿಯಾಯೋಜನೆಗಳ ಪ್ರಕಾರ ಅಧಿಕಾರಿಗಳ ಮುಖಾಂತರ ಯೋಜನೆಗಳನ್ನು ಜಾರಿಗೊಳಿಸಿ ನಿರ್ದಿಷ್ಟ ಗುರಿಯನ್ನು ಸಂಪೂರ್ಣವಾಗಿ ಸಾಧಿಸುವ ಹಕ್ಕು, ಕರ್ತವ್ಯ ಹಾಗೂ ಅಧಿಕಾರ ಜಿಲ್ಲಾ ಪಂಚಾಯತಿಗಳ ಪದಾಧಿಕಾರಿಗಳದಲ್ಲವೇ? ಪ್ರತಿವರ್ಷ ಬಜೆಟ್ ಪ್ರಕಾರ ನಿಗದಿ ಮಾಡಿದ ಹಣವನ್ನು ಬಹುತೇಕ ಪಂಚಾಯತಿಗಳು ವೆಚ್ಚ ಮಾಡದೆ ಉಳಿಸುತ್ತಿರುವುದು, ಅನೇಕ ಅಧಿಕಾರಿಗಳು ಹಣ ವೆಚ್ಚ ಮಾಡದೆ ಪಿ.ಡಿ. ಲೆಕ್ಕದಲ್ಲಿಡುವುದು, ಅನೇಕ ಅಧಿಕಾರಿಗಳು ಮಾರ್ಚ್ 31ಕ್ಕೆ ಮಾತ್ರ ಟ್ರಜರಿಯಿಂದ ಹಣ ತೆಗೆಯುವುದು, ಅನೇಕ ಅಧಿಕಾರಿಗಳು ಮಾರ್ಚ್ ತಿಂಗಳಲ್ಲಿ ತೆಗೆದ ಹಣವನ್ನು ಜಿಲ್ಲಾ ಪಂಚಾಯತಿ ಸಭೆಗೆ ಅಥವಾ ಪದಾಧಿಕಾರಿಗಳ ಗಮನಕ್ಕೆ ತಾರದೆ ಅವರ ಆದೇಶ ನಿರ್ದೇಶನಗಳನ್ನು ಗಾಳಿಗೆ ತೂರಿ ಸಿಕ್ಕಾಪಟ್ಟೆ ಖರೀದಿಗೆ ಹೆಚ್ಚು ವೆಚ್ಚ ಮಾಡುವ ಹಾಗೂ ಕಳಪೆ ವ ಕಾಗದ ಕಾಮಗಾರಿಗಳ ಜೀವಂತ ಉದಾಹರಣೆಗಳು ಪತ್ರಿಕೆಗಳ ಮುಖಾಂತರ

ಜಿಲ್ಲಾ ಪಂಚಾಯತಿ ಸದಸ್ಯ, ಪದಾಧಿಕಾರಿಗಳ ಮುಖಾಂತರ ಮೇಲಿಂದ ಮೇಲೆ ಬರುತ್ತಲೇ ಇವೆ. ಪ್ರತಿ ತಿಂಗಳುಗಳಲ್ಲಿ ಬಜೆಟ್ ಪ್ರಕಾರ ಬರಬೇಕಾದ ಹಣ, ಬರದ ಹಣ, ವೆಚ್ಚವಾದ ಹಣ, ವೆಚ್ಚವಾಗದೆ ಉಳಿದ ಹಣ, ಪ್ರತಿ ತಿಂಗಳ ಗುರಿ ಹಾಗೂ ಸಾಧನೆ, ಮಾಡಿದ ಅಭಿವೃದ್ಧಿ ಕಾರ್ಯ, ಮಾಡಬೇಕಾದ ಅಭಿವೃದ್ಧಿ ಕಾರ್ಯ, ಕರ್ತವ್ಯಲೋಪ ಮಾಡಿದ ಅದಕ್ಷ, ಅವಿಧೇಯ ಅಧಿಕಾರಿಗಳ ಮೇಲೆ ಕಟ್ಟುನಿಟ್ಟಿನ ಶಿಸ್ತಿನ ಕ್ರಮ ಇತ್ಯಾದಿ ಎಲ್ಲವುಗಳ ಬಗ್ಗೆ ಪದಾಧಿಕಾರಿಗಳು ಹಾಗೂ ಸದಸ್ಯರು ಪ್ರತಿತಿಂಗಳು ಸಭೆ ಕರೆದು ಚರ್ಚಿಸಿ ವಿಚಾರ ವಿನಿಮಯ ಮಾಡಿದರೆ ಅದು ಅವರ ಅಧಿಕಾರ ಚಲಾವಣೆ ಹಾಗೂ ಕರ್ತವ್ಯ.

ಜಿಲ್ಲಾ ಪಂಚಾಯತಿಗಳಿಗೆ ಯೋಜನೆ ಹಾಗೂ ಯೋಜನೇತರ ಕಾರ್ಯಕ್ರಮಗಳಿಗಾಗಿ ಪ್ರತಿವರ್ಷ ಸರಕಾರ ಬಜೆಟ್ ಪ್ರಕಾರ ನಿಗದಿತ ಹಣವನ್ನು ಒದಗಿಸುತ್ತಿದ್ದರೂ ಅದು ಕಡಿಮೆ ಇರಲಿ ಅಥವಾ ಅಷ್ಟಕ್ಕಷ್ಟೆ ಇರಲಿ ಅದನ್ನೆಲ್ಲಾ ಸಂಪೂರ್ಣವಾಗಿ ವೆಚ್ಚ ಮಾಡುವ ಅಧಿಕಾರವನ್ನು ಅನೇಕ ಜಿಲ್ಲಾ ಪಂಚಾಯತಿಗಳು ಚಲಾಯಿಸದೆ ಇರುವ ಉದಾಹರಣೆ ಕೂಡ ನಿರಾತಂಕವಾಗಿ ಪ್ರತಿವರ್ಷ ಮುಂದುವರಿಯುತ್ತಲೇ ಇವೆ. 95-96ರಲ್ಲಿ ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳಿಗೆ ಒದಗಿಸಿರುವ ಯೋಜನಾ ಮೊತ್ತ ಸುಮಾರು 1100.00 ಕೋಟಿಯಲ್ಲಿ 1031.00 ಕೋಟಿ ಹಣ ವೆಚ್ಚ ಮಾಡಿ ಒಟ್ಟಾರೆ 69.00 ಕೋಟಿ ಹಣವನ್ನೇ ವೆಚ್ಚ ಮಾಡಿಲ್ಲ. ಕೆಲವು ಪಂಚಾಯತಿಗಳು ಬಜೆಟ್ ಮೀರಿ ವೆಚ್ಚ ಮಾಡಿದ್ದು ಕೆಲವು ಪಂಚಾಯತಿಗಳು ಬಜೆಟ್ ಪ್ರಕಾರ ವೆಚ್ಚ ಮಾಡದೆ ಉಳಿಸಿವೆ. ಯೋಜನೇತರ ಮೊತ್ತವನ್ನು ಕೆಲವು ಪಂಚಾಯತಿಗಳು ವೆಚ್ಚ ಮಾಡದೆ ಉಳಿಸಿದ್ದರೂ ಕೆಲವುಗಳು ಬಜೆಟ್ ಮೀರಿ ಒಟ್ಟಾರೆ 1.55 ಕೋಟಿ ಮಾತ್ರ ಹೆಚ್ಚು ವೆಚ್ಚ ಮಾಡಿವೆ. 96-97ರಲ್ಲಿ ಎಲ್ಲಾ ಜಿಲ್ಲಾ ಪಂಚಾಯತಿಗಳಿಗೆ ಒದಗಿಸಿದ 1273.00 ಕೋಟಿ ಯೋಜನಾ ಮೊತ್ತದಲ್ಲಿ 1165.00 ಕೋಟಿ ವೆಚ್ಚ ಮಾಡಿ 109.00 ಕೋಟಿ ಮೊತ್ತವನ್ನು ಉಳಿಸಿವೆ. ಅಂತೆಯೇ ಯೋಜನೇತರ ಮೊತ್ತವನ್ನು ಸಂಪೂರ್ಣ ವೆಚ್ಚ ಮಾಡದೆ 8.00 ಕೋಟಿ ಮೊತ್ತವನ್ನು ಉಳಿಸಿವೆ. 97-98ರಲ್ಲಿ ಎಲ್ಲಾ ಜಿಲ್ಲಾ ಪಂಚಾಯತಿಗಳಿಗೆ ಒದಗಿಸಿದ 1420.00 ಕೋಟಿ ಹಣದಲ್ಲಿ 1221.00 ಕೋಟಿ ಮೊತ್ತವನ್ನು ಮಾತ್ರ ವೆಚ್ಚ ಮಾಡಿ 200.00 ಕೋಟಿ ಹಣವನ್ನು ವೆಚ್ಚ ಮಾಡದೆ ಒಟ್ಟಾರೆ ಉಳಿಸಿದೆ. 20 ಜಿಲ್ಲಾ ಪಂಚಾಯತಿಗಳ ಪೈಕಿ ಬೆಂಗಳೂರು ನಗರ, ಕೋಲಾರ, ತುಮಕೂರು, ಬೀದರ್ ಈ ನಾಲ್ಕು ಜಿಲ್ಲಾ ಪಂಚಾಯತಿಗಳು ಮಾತ್ರ ಬಜೆಟ್ ಮೀರಿ ವೆಚ್ಚ ಮಾಡಿದ್ದು ಉಳಿದೆಲ್ಲಾ 16 ಜಿಲ್ಲಾ ಪಂಚಾಯತಿಗಳು ಬಜೆಟ್ ಪ್ರಕಾರ ವೆಚ್ಚ ಮಾಡದೆ ಹೇರಳವಾದ ಹಣವನ್ನು ಉಳಿಸಿದೆ. ಯೋಜನೇತರ 2021.00 ಕೋಟಿಯಲ್ಲಿ 1944.00 ಕೋಟಿ ವೆಚ್ಚ ಮಾಡಿ 78.00 ಕೋಟಿ ಹಣವನ್ನು ವೆಚ್ಚ ಮಾಡದೆ ಬಿಟ್ಟಿವೆ. ಯೋಜನೇತರ ಮೊತ್ತದಲ್ಲಿ ಚಿತ್ರದುರ್ಗ, ತುಮಕೂರು, ಚಿಕ್ಕಮಗಳೂರು, ಬೆಳಗಾವಿ, ಬಿಜಾಪೂರ ಈ ಐದು ಜಿಲ್ಲೆಗಳು ಮಾತ್ರ ಬಜೆಟ್ ಮೀರಿ ವೆಚ್ಚ ಮಾಡಿವೆ. ಹೀಗೆ 95-96, 96-97, 97-98ರ ಈ ಮೂರು

ವರ್ಷಗಳ ಅವಧಿಯಲ್ಲಿ ರಾಜ್ದ ಜಿಲ್ಲಾ ಪಂಚಾಯತಿಗಳು ಸರಕಾರ ನಿಗದಿಮಾಡಿ ಒದಗಿಸಿದ ಯೋಜನಾ ಮೊತ್ತ, ಯೋಜನೇತರ ಮೊತ್ತವನ್ನು ಸಂಪೂರ್ಣವಾಗಿ ಅಭಿವೃದ್ಧಿ ಕಾರ್ಯಗಳಿಗೆ ವೆಚ್ಚ ಮಾಡದೆ ಒಟ್ಟಾರೆ 462.00 ಕೋಟಿ ಭಾರೀ ಮೊತ್ತವನ್ನು ಉಳಿಸಿದೆ. ಈ ಕರ್ತವ್ಯಲೋಪ ಹೀಗೆಯೆ ಮುಂದುವರೆಯುತ್ತ ಬಂದಿದ್ದು ಮುಂದೆಯೂ ಹೀಗೆಯೇ ನಡೆದರೆ ಜಿಲ್ಲಾ ಪಂಚಾಯತಿ ಪದಾಧಿಕಾರಿಗಳು ಹಾಗೂ ಸದಸ್ಯರು ತಮ್ಮ ಅಧಿಕಾರ ಹಾಗೂ ಕರ್ತವ್ಯವನ್ನು ಚಲಾಯಿಸಿ ವಿಧಾನಮಂಡಲ ಹಾಗೂ ಸರಕಾರ ಒದಗಿಸಿದ, ಯೋಜನಾ ಹಾಗೂ ಯೋಜನೇತರ ಮೊತ್ತವನ್ನು ಸಂಪೂರ್ಣ ವೆಚ್ಚ ಮಾಡದೆ ಅಭಿವೃದ್ಧಿ ಕಾರ್ಯಗಳನ್ನು ಅನುಷ್ಠಾನಕ್ಕೆ ತಾರದೆ ಕುಂಠಿತಗೊಳಿಸುವುದಾದರೆ ರಾಮರಾಜ್ಯ ಕಟ್ಟುವ ಕನಸನ್ನು ಪಂಚಾಯತ್ ರಾಜ್ ಸಂಸ್ಥೆಗಳು ನನಸನ್ನಾಗಿ ಮಾಡದೆ ಹೋದರೆ ಪಂಚಾಯತಿ ಹಾಗೂ ಪಂಚಾಯತ್ ಪದಾಧಿಕಾರಿ ಹಾಗೂ ಸದಸ್ಯರು, ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಐ.ಎ.ಎಸ್. ಅಧಿಕಾರಿಗಳು, ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳಾದ ಕೆ.ಎ.ಎಸ್. ಅಧಿಕಾರಿಗಳು ಹಾಗೂ ವರ್ಷಕ್ಕೆ 1947.00 ಕೋಟಿ ವೇತನ, ಭತ್ಯೆ ಪಡೆವ 317418 ಜಿಲ್ಲಾ ಪಂಚಾಯತಿ ನೌಕರರ ಸೇವೆಯಾದರೂ ಏತಕ್ಕೆ ಇರಬೇಕು? ಈ ದಿಶೆಯಲ್ಲಿ ಎಲ್ಲರ ಚಿಂತನೆ ಅಗತ್ಯ.

❑

ಅಸಮರ್ಥ ಆರ್ಥಿಕ ಇಲಾಖೆ - ಅಂಧಕಾರದಲ್ಲಿ ಶಾಸಕಾಂಗ

ಯಾವುದೇ ಇಲಾಖೆಯ ಅಧಿಕಾರಿಗಳಿರಲಿ ಅವರೆಲ್ಲರೂ ಸಮರ್ಥರಾಗಿ, ದಕ್ಷರಾಗಿ ಕೆಲಸ ಮಾಡಲೇಬೇಕು. ಎಲ್ಲಾ ಇಲಾಖೆಗಳಲ್ಲಿ ಆರ್ಥಿಕ ಇಲಾಖೆ ಬಹಳ ಪ್ರಾಮುಖ್ಯ ಪಡೆದಿದೆ. "ಕಾಂಚಾಣಂ ಕಾರ್ಯಸಿದ್ಧಿ" ಅಂದ ಹಾಗೆ ಸರಕಾರಿ ಖಜಾನೆಗೆ ಹಣ ಹರಿದುಬಂದು ಎಲ್ಲಾ ಇಲಾಖೆಗಳಿಗೆ ಪ್ರತಿ ತಿಂಗಳು ಹಂಚಿಹೋಗಲೇಬೇಕು ಹಾಗೂ ಆಡಳಿತ ಅಭಿವೃದ್ಧಿಯಾಗಲೇಬೇಕು. ಪ್ರತಿವರ್ಷ ಸರಕಾರಿ ಆದಾಯ ಹಾಗೂ ವೆಚ್ಚ ಆರ್ಥಿಕ ವರ್ಷ ಮುಗಿದ ಒಂದೆರಡು ಅಥವಾ ಮೂರು ತಿಂಗಳಲ್ಲಿಯೇ ಆದಾಯ ವೆಚ್ಚದ ವಾಸ್ತವಿಕ ವಿವರಗಳನ್ನು ಶಾಸನ ಸಭೆಯ ಸದಸ್ಯರಿಗೆ ಮಾಹಿತಿ ಹಾಗೂ ಸೂಕ್ತ ಮಾರ್ಗದರ್ಶನ ಸಲುವಾಗಿ ಕೊಡಲೇಬೇಕು ಹಾಗೂ ಆಯವ್ಯಯದ ಅಂದಾಜಿನ ಪ್ರಕಾರ ಜಮಾ-ಖರ್ಚನ್ನು ಮಾಡಲೇಬೇಕು. ಇದು ವ್ಯವಹಾರಿಕ ಹಾಗೂ ಸಮರ್ಥನೀಯ ವಾದುದು. ಈ ದಿಶೆಯಲ್ಲಿ ಆರ್ಥಿಕ ಇಲಾಖೆಯ ಪಾತ್ರ ಮುಖ್ಯವಾದುದು. ಆದರೆ ಆರ್ಥಿಕ ಇಲಾಖೆ ಪ್ರತಿ ಯೊಂದು ಇಲಾಖೆಗಳಿಗೆ ಬಜೆಟ್ ಪ್ರಕಾರ ವೆಚ್ಚಕ್ಕಾಗಿ ಹಣ ಬಿಡುಗಡೆ ಮಾಡದೆ ಕೇವಲ ಪ್ರತಿತಿಂಗಳು ಅಭಿವೃದ್ಧಿಯೇತರ ಕಾರ್ಯಗಳಿಗಾಗಿ ಮಾತ್ರ ಹಣ ಬಿಡುಗಡೆ ಮಾಡಿ ಅಭಿವೃದ್ಧಿಯನ್ನು ಕುಂಠಿತಗೊಳಿಸಿ ಕಾಲಕಾಲಕ್ಕೆ ಅಂಕಿ-ಸಂಖ್ಯೆಗಳ ವಿವರವನ್ನು ಶಾಸಕರಿಗೆ ಕೊಡದೆ ಶಾಸಕಾಂಗವನ್ನೇ ಅಂಧಕಾರದಲ್ಲಿಟ್ಟು ಸರಕಾರದ ಆರ್ಥಿಕ ಪರಿಸ್ಥಿತಿಯ ನಿಜಾಂಶ ಹಾಗೂ ವಾಸ್ತವಿಕಾಂಶ ಗೊತ್ತುಮಾಡದಿರುವುದು ಅಧಿಕಾರಸೂತ್ರ ಹಿಡಿದಿರುವ ಐ.ಎ.ಎಸ್. ಅಧಿಕಾರಿಗಳಿಗೆ ಭೂಷಣವಲ್ಲ. ಶಾಸಕಾಂಗ ಝಾಡಿಸಿ ಕೇಳದಿದ್ದರೂ ನಿರಂತರ ಕಾರ್ಯನಿರ್ವಹಿಸುವ ಅಧಿಕಾರಿಗಳು ಮಾಹಿತಿಯನ್ನು ಕಾಲಕಾಲಕ್ಕೆ ಒದಗಿಸಿ ಅವರನ್ನು ಜಾಗ್ರತಗೊಳಿಸುವುದು ವಿತ್ತಖಾತೆಯ ಕರ್ತವ್ಯವಾಗಬೇಕು.

1997-98ನೇ ಆರ್ಥಿಕ ವರ್ಷ ಮುಗಿದು ಏಳು ತಿಂಗಳು ಗತಿಸಿದ್ದರೂ ನವೆಂಬರ್ ತಿಂಗಳಲ್ಲಿ ನಡೆದ ವಿಧಾನಮಂಡಲ ಅಧಿವೇಶನದಲ್ಲಿ 97-98ರ ವಾಸ್ತವಿಕವಾಗಿ ಗಳಿಸಿದ

ಆದಾಯ ಮಾಹಿತಿಯನ್ನು ಸದಸ್ಯರಿಗೆ ತಿಳಿಸಲು ಆರ್ಥಿಕ ಇಲಾಖೆ ವಿಫಲಗೊಂಡಿದೆ. ರಾಜ್ಯದ ರಾಜಸ್ವ ಜಮೆ 97-98ರಲ್ಲಿ ಪರಿಷ್ಕೃತ ಬಜೆಟ್‌ನಲ್ಲಿ 11417.31 ಕೋಟಿ, 98-99ರಲ್ಲಿ ಬಜೆಟ್ 12979.56 ಕೋಟಿ. ಇದು ಸರಕಾರಿ ಬಜೆಟ್ ಪ್ರಕಟಣೆ. 97-98ರಲ್ಲಿಯ ಆದಾಯ ಮಾಹಿತಿಗೆ ಉತ್ತರವಾಗಿ ಸರಕಾರ ವಾಸ್ತವಿಕ ರಾಜಸ್ವ ಆದಾಯ ಕೊಡದೆ ಪರಿಷ್ಕೃತ ಆದಾಯ 11417.31 ಕೋಟಿಯೆಂದೇ 98ರ ನವೆಂಬರ್ ತಿಂಗಳಲ್ಲಿ ಶಾಸನಸಭೆಗೆ ಹೇಳಿದ್ದು.

ಸರಕಾರದ ಆರ್ಥಿಕ ಪರಿಸ್ಥಿತಿಯ ನಿಜಾಂಶ ಯಾರಿಗೂ ಗೊತ್ತಾಗಬಾರದೆಂಬುದೇ ಹಣಕಾಸು ಇಲಾಖೆಯ ದುರುದ್ದೇಶವೆಂಬುದು ಎದ್ದು ಕಾಣುತ್ತದೆ. ಈ ಹಿಂದೆ ಪ್ರತಿ ಮೂರು ತಿಂಗಳಿಗೊಮ್ಮೆ ಆರು ತಿಂಗಳಿಗೊಮ್ಮೆ ಒಂಬತ್ತು ತಿಂಗಳಿಗೊಮ್ಮೆ ಹನ್ನೆರಡು ತಿಂಗಳಿಗೊಮ್ಮೆ ಈ ಅವಧಿ ಮುಗಿದ ತಕ್ಷಣ ಒಂದೆರಡು ತಿಂಗಳ ಒಳಗಾಗಿ ಎಲ್ಲಾ ಶಾಸಕರಿಗೆ ಆಯಾ ಅವಧಿಯ ಬಜೆಟ್, ವಾಸ್ತವಿಕ, ಶೇಕಡಾ ಆದಾಯ, ಶೇಕಡಾ ವೆಚ್ಚಗಳ ಅಂಕಿ-ಅಂಶಗಳನ್ನು ಒದಗಿಸಿ ಶಾಸಕಾಂಗ ಸರಕಾರದ ಹಣಕಾಸಿನ ಮೇಲೆ ನಿಗಾ ಇಡುವಂತೆ ಮಾಡಲಾಗುತ್ತಿತ್ತು. ಈಗ ಅದೆಲ್ಲವೂ ಕನಸು. ಏಕೆ? ಸರಕಾರದ 1997-98 ವರ್ಷದ ವಾಸ್ತವಿಕ ಆದಾಯ ವೆಚ್ಚ ಏಳು ತಿಂಗಳು ಗತಿಸಿದರೂ ಏಕೆ ತಯಾರಾಗಿಲ್ಲ? ಶಾಸಕಾಂಗಕ್ಕೆ ಏಕೆ ಕೊಡಲಿಲ್ಲ? ಇದು ಹಣಕಾಸಿನ ಇಲಾಖೆಯ ಅಧಿಕಾರಿಗಳ ತಪ್ಪಲ್ಲವೇ, ಅಸಮರ್ಥತೆಯಲ್ಲವೇ? ಹಣಕಾಸು ಮಂತ್ರಿಗಳ ಪಾತ್ರ ಇಲ್ಲೇನು? 97-98ರಲ್ಲಿ ಸರಕಾರಿ ನೌಕರರಿಗೆ ಸಂಬಳ, ಸಾರಿಗೆ ಭತ್ಯೆ, ತುಟ್ಟಿ ಭತ್ಯೆ, ನಿವೃತ್ತಿ ವೇತನ, ಇತರೆ ಭತ್ಯೆಗಳಿಗೆ ಖರ್ಚು ಮಾಡಿದ ಹಣದ ವಾಸ್ತವಿಕ ವಿವರ ಸಹ ಏಳು ತಿಂಗಳು ಮುಗಿದರೂ ಈ ಬಾಬ್ತು ಅಂದಾಜು ವೆಚ್ಚ 4353.25 ಕೋಟಿ ಎಂದು ಹೇಳಿ ವಾಸ್ತವಿಕ ವೆಚ್ಚವನ್ನು ತಿಳಿಸದೆ ಶಾಸಕಾಂಗ ಹಾಗೂ ಸಾರ್ವಜನಿಕರನ್ನು ಅಂಧಕಾರದಲ್ಲಿಡುವುದು ವಿತ್ತಖಾತೆಗೆ ಸಲ್ಲದ ಕೃತ್ಯ.

1998-99ನೇ ಆರ್ಥಿಕ ವರ್ಷದ ಮೊದಲನೆಯ ಆರು ತಿಂಗಳ ಅವಧಿ ಮುಗಿದು ನವೆಂಬರ್ ಕೊನೆಗೆ ಎರಡು ತಿಂಗಳ ಅವಧಿ ಮುಗಿಯುತ್ತ ಬಂದರೂ ಈ ಆರು ತಿಂಗಳ ವಾಸ್ತವಿಕ ವೆಚ್ಚ ಅಂದಾಜಿನಲ್ಲಿ ಎಷ್ಟೆಂಬುದನ್ನು ಶಾಸಕಾಂಗಕ್ಕೆ ತಿಳಿಸಲು ವಿತ್ತ ಇಲಾಖೆ ವಿಫಲಗೊಂಡಿದೆ ಹಾಗೂ ಕೇವಲ ಮೊದಲ ಮೂರು ತಿಂಗಳ ವಾಸ್ತವಿಕ ವೆಚ್ಚದ ಅಂಕಿ-ಸಂಖ್ಯೆಗಳನ್ನು ಮಾತ್ರ ಶಾಸಕಾಂಗಕ್ಕೆ ನವೆಂಬರ್ ತಿಂಗಳಲ್ಲಿ ತಿಳಿಸಿದೆ. ವರ್ಷದ ಏಪ್ರಿಲ್, ಮೇ, ಜೂನ್ ತಿಂಗಳುಗಳ ಮೂರು ತಿಂಗಳ ಅವಧಿಯಲ್ಲಿ ಬೇಸಿಗೆ ಇರುತ್ತಿರುವುದರಿಂದ ಅಭಿವೃದ್ಧಿ ಕಾರ್ಯ ಮಾಡಲು ಪ್ರತಿ ತಿಂಗಳು ನೂರಕ್ಕೆ ನೂರರಷ್ಟು ವೇತನ ಭತ್ಯೆ ಪಡೆವ ಅಭಿವೃದ್ಧಿ ಜಾರಿ ಅಧಿಕಾರಿ ಸಿಬ್ಬಂದಿಗೆ ಸಾಕಷ್ಟು ಅವಕಾಶವಿದ್ದರೂ ಈ ತ್ರೈಮಾಸಿಕ ಅವಧಿಯಲ್ಲಿ ವಿಧಾನಮಂಡಲ ಅನುಮೋದಿಸಿದ ಬಜೆಟ್ ಮೊತ್ತದಲ್ಲಿ

ರಾಜ್ಯದ ಸಾಮಾನ್ಯ ಸೇವೆ, ಸಾಮಾಜಿಕ ಸೇವೆ, ಆರ್ಥಿಕ ಸೇವೆ ಹಾಗೂ ಅನುದಾನ ಸೇವೆಗಳಿಗೆ ಶೇಕಡಾ 25ರಷ್ಟಂತೂ ವಿವಿಧ ಇಲಾಖೆಗಳು ವೆಚ್ಚ ಮಾಡಿ ಅಭಿವೃದ್ಧಿ ಸಾಧಿಸಲೇಬೇಕು. ಇದನ್ನು ಗಮನಿಸುವುದು ಆರ್ಥಿಕ ಇಲಾಖೆ. ಇಲ್ಲಿ ಸಹ ಆರ್ಥಿಕ ಇಲಾಖೆ ವಿಫಲವಾಗುತ್ತಿರುವುದು ಜನತೆಯ ದುರ್ದೈವ. ಸಾಮಾನ್ಯ ಸೇವೆ, ಸಾಮಾಜಿಕ ಸೇವೆ, ಆರ್ಥಿಕ ಸೇವೆ ಹಾಗೂ ಅನುದಾನ ಸೇವೆಗಳಿಗೆ 98-99ರ ಅವಧಿಯಲ್ಲಿ 13360.58 ಕೋಟಿ ಮೊತ್ತವನ್ನು ಸರಕಾರ ವೆಚ್ಚ ಮಾಡಬೇಕು. ಈ ಹಣದಲ್ಲಿ ಮೊದಲ ಮೂರು ತಿಂಗಳಲ್ಲಿ ಶೇಕಡಾ 25ರಷ್ಟು ಅಂದರೆ 3340.14 ಕೋಟಿ ವೆಚ್ಚ ಮಾಡಲೇಬೇಕಿತ್ತು. ಆದರೆ ಖರ್ಚು ಮಾಡಿರುವ ಮೊತ್ತ 1684.18 ಕೋಟಿ ಮಾತ್ರ ಅಂದರೆ ವಾಸ್ತವಿಕ ವೆಚ್ಚ ಶೇಕಡಾ 12.61 ಮಾತ್ರ. ಹೀಗೆ ಈ ಕಡಿಮೆ ವೆಚ್ಚ ಏಕೆ? ಖಜಾನೆಯಲ್ಲಿ ಹಣವಿಲ್ಲವೆ? ಈ ಮೂರು ತಿಂಗಳಲ್ಲಿ ಸಾಮಾನ್ಯ ಸೇವೆಗಳಿಗೆ ಶೇಕಡಾ 14.87, ಸಾಮಾಜಿಕ ಸೇವೆಗಳಿಗೆ ಶೇಕಡಾ 12.57, ಆರ್ಥಿಕ ಸೇವೆಗಳಿಗೆ ಶೇಕಡಾ 10.08, ಅನುದಾನ ಸೇವೆಗಳಿಗೆ ಶೇಕಡಾ 7.49ರಷ್ಟು ಹಣವನ್ನು ಮಾತ್ರ ವೆಚ್ಚ ಮಾಡಲಾಗಿದ್ದು, ಜುಲೈ, ಆಗಸ್ಟ್, ಸೆಪ್ಟೆಂಬರ್ ತಿಂಗಳಲ್ಲಿ ಮಳೆಗಾಲದ ನೆಪವೊಡ್ಡಿ ಯಾವುದೇ ಅಭಿವೃದ್ಧಿ ಸೇವೆಗಳಿಗೆ ಹಣ ವೆಚ್ಚ ಮಾಡದಿರುವುದು ಮುಂದುವರೆದಿದೆ. ಈ ಅಭಿವೃದ್ಧಿಯ ವೈಫಲ್ಯಕ್ಕೆ ವಾಸ್ತವಿಕ ಆದಾಯ ವೆಚ್ಚದ ವಿವರಗಳನ್ನು ಶಾಸಕರಿಗೆ, ತಿಳಿಸದಿರುವುದು, ಪ್ರತಿವರ್ಷ ಹಲವು ನೂರಾರು ಕೋಟಿ ರೂ. ವೆಚ್ಚ ಮಾಡದೆ ಇರುವುದು, ಆಡಳಿತ ಅಧಿಕಾರಿಗಳು ಹಾಗೂ ಹಣಕಾಸು ಇಲಾಖೆಯ ಅಧಿಕಾರಿಗಳೇ ಮುಖ್ಯರು ಹಾಗೂ ಜವಾಬ್ದಾರಿಗಳೆಂಬುದನ್ನು ಮಂತ್ರಿ ಶಾಸಕರೆಲ್ಲರೂ ಅರಿತು ಈ ಅಸಮರ್ಥ ಹಾಗೂ ಅದಕ್ಷ ಅಧಿಕಾರಿಗಳ ಮೇಲೆ ನ್ಯಾಯನಿಷ್ಠುರಿಗಳಾಗಿ ದಾಕ್ಷಿಣ್ಯಪರರಾಗದೆ ಕಟ್ಟುನಿಟ್ಟಾದ ಶಿಸ್ತಿನ ಕ್ರಮ ತೆಗೆದುಕೊಳ್ಳದೆ ಹೋದರೆ ಆಡಳಿತ ಹಾಗೂ ಅಭಿವೃದ್ಧಿ ವೈಫಲ್ಯ ನಿರಾತಂಕವಾಗಿ ಮುಂದುವರೆಯುವ ಸಂಭವವೇ ಹೆಚ್ಚಿರುವುದರಿಂದ ಶಾಸಕರಿಗೆ, ಮಂತ್ರಿಗಳಿಗೆ ಪ್ರಜಾಜನತೆ ಶಪಿಸುವಂತಾಗುವ ಪರಿಸ್ಥಿತಿಯನ್ನುಂಟು ಮಾಡುವುದು ಒಳಿತಲ್ಲ. ಇನ್ನು ಮುಂದಾದರೂ ವಾಸ್ತವಿಕ ಆದಾಯ ವೆಚ್ಚಗಳ ಬಗ್ಗೆ, ಆಡಳಿತ ಅಭಿವೃದ್ಧಿ ವೈಫಲ್ಯಗಳ ಬಗ್ಗೆ, ಅಧಿಕಾರಿಗಳ ಅದಕ್ಷತೆ ಬಗ್ಗೆ ಗಮನಹರಿಸಿ ರಾಜ್ಯದ ಸರ್ವಾಂಗೀಣ ಅಭಿವೃದ್ಧಿ ಬಗ್ಗೆ ಆಸಕ್ತಿ ವಹಿಸುವುದು ಶಾಸಕ, ಮಂತ್ರಿಗಳ ಆದ್ಯ ಕರ್ತವ್ಯವಾಗಬೇಕು.

❑

ಉದ್ದೇಶಿತ ವಿದ್ಯುತ್ ಉತ್ಪಾದನಾ ಅರಿವು ಸರಕಾರಕ್ಕೆ ಅಗತ್ಯ

ರಾಜ್ಯದ ರೈತರು, ಉದ್ಯಮಿಗಳು, ಗೃಹಬಳಕೆದಾರರು, ಸಾರ್ವಜನಿಕರು ಇತ್ಯಾದಿ ವಿದ್ಯುತ್ ಗ್ರಾಹಕರಿಗೆ ಅವಶ್ಯಕವಾಗಿ ಬೇಕಾದ ವಿದ್ಯುತ್ ಪ್ರಮಾಣವನ್ನು ಉತ್ಪಾದಿಸುವ ಹಾಗೂ ವಿತರಿಸುವ ಜವಾಬ್ದಾರಿ ಸರಕಾರಕ್ಕೆ ಇರಬೇಕು. ಗ್ರಾಹಕರಿಗೆ ಅಗತ್ಯವಾದ ಸಾಕಷ್ಟು ವಿದ್ಯುತ್ ಪೂರೈಸದೆ ಪೂರೈಸಲಾದ ವಿದ್ಯುತ್ತಿಗೆ ಸಿಕ್ಕಾಬಟ್ಟೆ ಬಿಲ್‌ಗಳನ್ನು ಮಾಡಿ ಹೆಚ್ಚು ಹೆಚ್ಚಾಗಿ ಹಣ ಸುಲಿಯುವುದನ್ನು, ವಿದ್ಯುತ್ ಸಿಕ್ಕಾಬಟ್ಟೆ ಕಳುವಾಗುತ್ತಿರುವುದನ್ನು, ಸಿಕ್ಕಾಬಟ್ಟೆ ವಿದ್ಯುತ್ ಸೋರುವದನ್ನು ಸರಕಾರ ನಿಲ್ಲಿಸಿ ಸಾಕಷ್ಟು ವಿದ್ಯುತ್ತನ್ನು ಸಕಾಲದಲ್ಲಿ ಯೋಗ್ಯ ಶುಲ್ಕಕ್ಕೆ ಗ್ರಾಹಕರಿಗೆ ಪೂರೈಸುವುದು ಸರಕಾರದ ಆದ್ಯ ಕರ್ತವ್ಯವಾಗಬೇಕು. ವಿದ್ಯುತ್ ಇಲಾಖೆ, ಕೆ.ಇ.ಬಿ., ಕೆ.ಸಿ.ಪಿ. ಹಾಗೂ ವಿದ್ಯುತ್ ಮಂತ್ರಿಗಳು ತಮ್ಮ ಹೊಣೆಯನ್ನರಿತು ಕಾರ್ಯನಿರ್ವಹಿಸಬೇಕೆಂಬ ಅರಿವನ್ನು ಅರಿತು ನಡೆದರೆ ಅವರ ಕರ್ತವ್ಯ ಹಾಗೂ ಗೌರವಕ್ಕೆ ಬೆಲೆ ಬಂದೇ ಬರುವುದು. ವಿದ್ಯುತ್ ಉತ್ಪಾದನೆಯ ಸಾಮರ್ಥ್ಯವನ್ನು ಹೆಚ್ಚಿಸಲು ಅದೆಷ್ಟು ಯೋಜನೆಗಳನ್ನು ತೆಗೆದುಕೊಳ್ಳಬೇಕಾಗಿತ್ತೋ ಅಷ್ಟೆಲ್ಲಾ ಯೋಜನೆಗಳನ್ನು ಸರಕಾರ ಕೈಗೆತ್ತಿಕೊಳ್ಳದೆ, ಕೈಗೆತ್ತಿಕೊಂಡ ಯೋಜನೆಗಳನ್ನೇ ಸರಿಯಾಗಿ ಸಮರ್ಪಕವಾಗಿ ಯಶಸ್ವಿ ಗೊಳಿಸದೇ ಇರುವುದು ಸರಿಯಲ್ಲ. ಕಳೆದ ಐದು ವರ್ಷಗಳಲ್ಲಿ ಕೇವಲ 85 ಕಿರುಜಲ ವಿದ್ಯುತ್ ಯೋಜನೆ, 42 ಗಾಳಿ ವಿದ್ಯುತ್ ಯೋಜನೆ, 12 ಸಹ ವಿದ್ಯುತ್ ಯೋಜನೆ, 2 ದೈವಿಕ ವಿದ್ಯುತ್ ಯೋಜನೆ ಇತ್ಯಾದಿಗಳನ್ನು ತೆಗೆದುಕೊಂಡಿದ್ದು, ಅವುಗಳಲ್ಲಿ ಇನ್ನೂ ಅನೇಕ ಯೋಜನೆಗಳು ಪೂರ್ಣಗೊಳ್ಳದೆ ಸಾಮರ್ಥ್ಯಕ್ಕೆ ತಕ್ಕಷ್ಟು ವಿದ್ಯುತ್ ಉತ್ಪಾದಿಸದೆ ಸಂಪೂರ್ಣ ಸಾಮರ್ಥ್ಯ ಸಾಧಿಸದೆ ಇರುವುದು ಕಂಡುಬಂದಿದೆ. 85 ಕಿರುಜಲ ವಿದ್ಯುತ್ ಯೋಜನೆಯಲ್ಲಿ ಕೇವಲ 16.42, ಗಾಳಿ ವಿದ್ಯುತ್ ಯೋಜನೆಯಲ್ಲಿ ಕೇವಲ 7,12, ಸಹ ವಿದ್ಯುತ್ ಯೋಜನೆಯಲ್ಲಿ ಕೇವಲ 2, ಹೀಗೆ ಕೆಲವೇ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ. ರಾಜ್ಯದ ವಿದ್ಯುತ್ ಕ್ಷೇತ್ರಕ್ಕೆ ಕರ್ನಾಟಕ ವಿದ್ಯುತ್ ಮಂಡಳಿ ಹಾಗೂ ಕರ್ನಾಟಕ

ಪವರ್ ಕಾರ್ಪೋರೇಷನ್ ಈ ಎರಡೂ ನಿಗಮಗಳು ವೆಚ್ಚ ಮಾಡಿರುವ ಮೊತ್ತ 93-94ರಲ್ಲಿ 651.10 ಕೋಟಿ, 94-95ರಲ್ಲಿ 715.84 ಕೋಟಿ, 95-96ರಲ್ಲಿ 774.85 ಕೋಟಿ, 96-97ರಲ್ಲಿ 870.31 ಕೋಟಿ, 97-98ರಲ್ಲಿ 1218.05 ಕೋಟಿ, ಹೀಗೆ ಇಷ್ಟೊಂದು ಹಣವನ್ನು ವೆಚ್ಚ ಮಾಡಿ ಈ ವೆಚ್ಚಕ್ಕೆ ತಕ್ಕಂತೆ ವಿದ್ಯುತ್ ಉತ್ಪಾದನೆ ಮಾಡದೆಯೇ ಹಾಗೂ ಪ್ರಗತಿಯನ್ನು ಸಾಧಿಸಲಾಗಿದೆಯೇ ಎಂಬುದನ್ನು ನೋಡಿದರೆ ಪರಿಣಾಮ ಅತೃಪ್ತಿಕರ ಹಾಗೂ ಅಸಮಾಧಾನಕರವಾಗಿದೆ.

1) ಜೋಗ ವಿದ್ಯುತ್ ಕೇಂದ್ರ 94-95ರಲ್ಲಿ 504, 95-96ರಲ್ಲಿ 315, 96-97ರಲ್ಲಿ 133, 97-98ರಲ್ಲಿ 143 ಮಿಲಿಯನ್ ಯುನಿಟ್ ವಿದ್ಯುತ್ ಉತ್ಪಾದಿಸಿದ್ದು ಈ ವರ್ಷಗಳ ಉತ್ಪಾದನಾ ಸಾಮರ್ಥ್ಯದ ಶೇಕಡಾ 50.9, 31.8, 13.4, 13.6 ಅನುಕ್ರಮವಾಗಿ ಇದೆ. 2) ನಾಗಜರಿ ವಿದ್ಯುತ್ ಕೇಂದ್ರ 94-95ರಲ್ಲಿ 3707, 95-96ರಲ್ಲಿ 3184, 96-97ರಲ್ಲಿ 1884, 97-98ರಲ್ಲಿ 2777 ಮಿಲಿಯನ್ ಯುನಿಟ್ ಉತ್ಪಾದಿಸಿದ್ದು ಈ ವರ್ಷಗಳ ಸಾಮರ್ಥ್ಯದ ಶೇಕಡಾ 51.3, 44.1, 26.1, 38.4 ಇದೆ. 3) ಶರಾವತಿ ವಿದ್ಯುತ್ ಕೇಂದ್ರ 94-95ರಲ್ಲಿ 5572, 95-96ರಲ್ಲಿ 4376, 96-97ರಲ್ಲಿ 3528, 97-98ರಲ್ಲಿ 5303 ಮಿಲಿಯನ್ ಯುನಿಟ್ ವಿದ್ಯುತ್ ಉತ್ಪಾದಿಸಿದ್ದು, ಈ ವರ್ಷಗಳ ಸಾಮರ್ಥ್ಯದ ಶೇಕಡಾ 63.2., 40.9, 38.9, 58.5 ಇದೆ. 4) ಸುಪಾ ವಿದ್ಯುತ್ ಕೇಂದ್ರ 94-95ರಲ್ಲಿ 644, 95-96ರಲ್ಲಿ 502, 96-97ರಲ್ಲಿ 251, 97-98ರಲ್ಲಿ 387 ಮಿಲಿಯನ್ ಯುನಿಟ್ ಉತ್ಪಾದಸಿದ್ದು ಈ ವರ್ಷಗಳ ಸಾಮರ್ಥ್ಯದ ಶೇಕಡಾ 73.5, 57.3, 28.7, 44.02 ಇದೆ. 5) ಲಿಂಗನಮಕ್ಕಿ ವಿದ್ಯುತ್ ಕೇಂದ್ರ 94-95ರಲ್ಲಿ 381, 95-96ರಲ್ಲಿ 203, 96-97ರಲ್ಲಿ 146, 97-98ರಲ್ಲಿ 292 ಮಿಲಿಯನ್ ಯುನಿಟ್ ವಿದ್ಯುತ್ ಉತ್ಪಾದಿಸಿದ್ದು, ಈ ವರ್ಷಗಳ ಸಾಮರ್ಥ್ಯದ ಶೇಕಡಾ 68.7, 42.1, 30.3, 60.6 ಇದೆ. 6) ವರಾಹಿ ವಿದ್ಯುತ್ ಕೇಂದ್ರ 94-95ರಲ್ಲಿ 1340, 95-96ರಲ್ಲಿ 1111, 96-97ರಲ್ಲಿ 785, 97-98ರಲ್ಲಿ 1224, ಮಿಲಿಯನ್ ಯುನಿಟ್, ಉತ್ಪಾದಿಸಿದ್ದು ಈ ವರ್ಷಗಳ ಸಾಮರ್ಥ್ಯ ಶೇಕಡಾ 66.5, 55.1, 39.0, 60.8 ಇದೆ. 94-95ರಿಂದ 97-98ರ ಅವಧಿಯಲ್ಲಿ ಮಾಣಿ ಅಣೆ ವಿದ್ಯುತ್ ಕೇಂದ್ರ, ಕಲಮಲ ಕಿರುಜಲ ವಿದ್ಯುತ್ ಕೇಂದ್ರ, ಗಾನಗಲ್ ಕಿರುಜಲ ವಿದ್ಯುತ್ ಕೇಂದ್ರ, ಮಲ್ಲೂಪೂರ ಕಿರುಜಲ ವಿದ್ಯುತ್ ಕೇಂದ್ರ, ಕಪ್ಪತಗುಡ್ಡ ಗಾಳಿ ವಿದ್ಯುತ್ ಕೇಂದ್ರ, ಈ ಐದು ಕೇಂದ್ರಗಳು ಯಾವುದೇ ಪ್ರಮಾಣದ ವಿದ್ಯುತ್ ಉತ್ಪಾದನೆಯನ್ನೇ ಮಾಡಿರುವುದಿಲ್ಲ. ಹೀಗಾದರೆ ಹೇಗೆ? ಯಲಹಂಕಾ ಮತ್ತು ರಾಯಚೂರು ವಿದ್ಯುತ್ ಕೇಂದ್ರಗಳು ಮಾತ್ರ 94-95ರಲ್ಲಿ 4061 ಮಿಲಿಯನ್ ಯುನಿಟ್ ಉತ್ಪಾದಿಸಿ ಪ್ರತಿವರ್ಷ ಹೆಚ್ಚಿಸುತ್ತ 97.98ರಲ್ಲಿ 6203 ಮಿಲಿಯನ್ ಯುನಿಟ್ ಉತ್ಪಾದಿಸಿದ್ದು, 97-98ರಲ್ಲಿ ಯಲಹಂಕಾ ಸಾಮರ್ಥ್ಯ ಶೇಕಡಾ 59.4, ರಾಯಚೂರು ಸಾಮರ್ಥ್ಯ ಶೇಕಡಾ 75.3

ಆಗಿದೆ. ಶೇಕಡಾ 75.3 ಉತ್ಪಾದನಾ ಸಾಮರ್ಥ್ಯದ ರಾಯಚೂರು ಕೇಂದ್ರವನ್ನೇ ಒಂದು ಕನಿಷ್ಠ ಅಳತೆಗೋಲನ್ನಾಗಿಟ್ಟುಗೊಂಡು ಉಳಿದೆಲ್ಲಾ ಕೇಂದ್ರಗಳ ಉತ್ಪಾದನಾ ಸಾಮರ್ಥ್ಯವನ್ನು ಬಳಸಿಕೊಳ್ಳುವಲ್ಲಿ ಸರಕಾರದ ಈ ವೈಫಲ್ಯ ಅಕ್ಷಮ್ಯ ವೈಫಲ್ಯವೆನ್ನದೆ ಗತ್ಯಂತರವಿಲ್ಲ. ಕೆ.ಇ.ಬಿ. ಹಾಗೂ ಕೆ.ಸಿ.ಪಿ. ಈ ಎರಡೂ ನಿಗಮಗಳ ಎಲ್ಲಾ ವಿದ್ಯುತ್ ಉತ್ಪಾದನಾ ಕೇಂದ್ರಗಳು ಒಟ್ಟಾರೆ 94-9ರಲ್ಲಿ 16745, 95-96ರಲ್ಲಿ 15448, 97-98ರಲ್ಲಿ 12858, 97-98ರಲ್ಲಿ ಮಾತ್ರ 17023 ಮಿಲಿಯನ್ ಯುನಿಟ್ ಉತ್ಪಾದಿಸಿದ್ದು ಈ ಎರಡೂ ನಿಗಮಗಳ, ಇಲಾಖೆಯ ಹಾಗೂ ಮಂತ್ರಿ ಮೊದಲಾದ ಸರಕಾರದ ಕಾರ್ಯ ತೃಪ್ತಿಕರವಾಗಿಲ್ಲದಿರುವುದು ಸುಸ್ಪಷ್ಟ ಚಿತ್ರ.

ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆಯನ್ನು ಸುಲಭದಲ್ಲಿ ಹೆಚ್ಚಿಸುವ ಸಲುವಾಗಿ ನೀರಾವರಿ ಕಾಲುವೆಗಳಲ್ಲಿ, ನೀರಾವರಿ ಕಾಲುವೆಗಳ ಮೂಲ ಹೆಡ್‌ವರ್ಕ್ಸ್‌ಗಳಲ್ಲಿ, ಗಿರಿಧಾಮಗಳ ಇಳಿಜಾರಿನ ನೈಸರ್ಗಿಕ ಜಲಪಾತಗಳಲ್ಲಿ, ಸುಮಾರು 225 ನಿವೇಶನಗಳನ್ನು, ಸಣ್ಣಪುಟ್ಟ ಮಿನಿ ವಿದ್ಯುತ್ ಕೇಂದ್ರಗಳನ್ನು 1984ರಲ್ಲಿಯೇ ಸರಕಾರ ಗುರುತಿಸಿತ್ತು. ಅವುಗಳಲ್ಲಿ ರಾಜ್ಯದ 9 ಪ್ರದೇಶಗಳಲ್ಲಿ ಸಮೀಕ್ಷೆಯೂ ಮುಗಿದಿತ್ತು. 225 ನಿವೇಶನಗಳ ಪೈಕಿ ಮದಗಮಾಸೂರ ಕಿರುಜಲ ವಿದ್ಯುತ್ ಯೋಜನೆಯೂ ಸೇರಿತ್ತು. ಇದೊಂದು ಉದಾಹರಣೆ. 'ಹಿರೇಕೆರೂರ ತಾಲ್ಲೂಕಿನ ಮದಗ ಮಾಸೂರ ಕೆರೆಯಲ್ಲಿ ಹೆಚ್ಚಾಗಿ ಪೋಲಾಗಿ ಹರಿಯುವ ನೀರಿನಿಂದ ವಿದ್ಯುತ್ ಅಭಿವೃದ್ಧಿಪಡಿಸುವ ಯೋಜಣೆ ಮತ್ತು ಸಾಧ್ಯತೆಯ ಅಧ್ಯಯನವು ನಡೆದಿವೆ. ವಿವರವಾದ ಯೋಜಣೆ ಕಾರ್ಯವನ್ನು ನಡೆಸಬೇಕಾಗಿದೆ. ಈ ಯೋಜನೆಯೂ ಸಾಧ್ಯವಾಗುವ ರೀತಿಯಲ್ಲಿ ತೋರುತ್ತದೆ' ಎಂದು ಸರಕಾರ ತಾ। 16-3-84ರಂದು ವಿಧಾನಸಭೆಯಲ್ಲಿ ಮಿನಿ ವಿದ್ಯುತ್ ಘಟಕಗಳ ಸ್ಥಾಪನೆ ವಿಚಾರದಲ್ಲಿ ಹೇಳಿದೆ. ಯೋಜಣೆ ಪರಿಣಾಮವಾಗಿ ಈ ಮದಗ ಮಾಸೂರ ಕಿರುಜಲ ವಿದ್ಯುತ್ ಯೋಜನೆಯ ಪ್ರತಿಷ್ಠಾಪನಾ ಸಾಮರ್ಥ್ಯ 5000 ಕೆ.ಡಬ್ಲ್ಯು. ಇದೆಯೆಂದು ಉದ್ಯಮ ಸಾಮರ್ಥ್ಯ ವಾರ್ಷಿಕವಾಗಿ 13.18 ಎಂ.ಯು. ಎಂದು, ಉತ್ಪಾದನಾ ಸಾಮರ್ಥ್ಯದ ವೆಚ್ಚ ಒಂದು ಯುನಿಟಿಗೆ 55 ಪೈಸೆಯೆಂದು, ಈ ಯೋಜನೆಯ ಅಂದಾಜು ವೆಚ್ಚ 6.05 ಕೋಟಿಯೆಂದು, ವಿದ್ಯುತ್ ಸಾಧ್ಯತೆ 5 ಎಂ.ಡಬ್ಲ್ಯು ಎಂದು, ವಿದ್ಯುತ್ ಕೇಂದ್ರ ವರ್ಷದ 118 ದಿನಗಳಲ್ಲಿ ಕಾರ್ಯ ಮಾಡುವುದೆಂದು ಇತ್ಯಾದಿಯಾಗಿ ಸರಕಾರ 18-6-85ರಂದು ಹೇಳಿದ್ದರೂ ಈ ಯೋಜನೆ ಹಾಗೂ ಇಂತಹ ಅನೇಕ ಯೋಜನೆಗಳು ನನಸಾಗದೆ ಕನಸಾಗಿ ಉಳಿದಿವೆ. ಈ ಯೋಜನೆ ಹಾಗೂ ಇನ್ನೂ ಅನೇಕ ಯೋಜನೆ ಗಳನ್ನು ಯಶಸ್ವಿಗೊಳಿಸಿ ವಿದ್ಯುತ್ ಉತ್ಪಾದನೆಯನ್ನು ಹೆಚ್ಚಿಸುವಲ್ಲಿ ಬಹುತೇಕ ಎಲ್ಲಾ ಸರಕಾರಗಳು ವಿಫಲವಾಗಿರುವುದು ವಿದ್ಯುತ್ ಉತ್ಪಾದನೆಯನ್ನು ಹೆಚ್ಚಿಸುವಲ್ಲಿ ಬಹುತೇಕ ಎಲ್ಲಾ ಸರಕಾರಗಳು ವಿಫಲವಾಗಿರುವುದು ವಿದ್ಯುತ್ ಆಕಾಂಕ್ಷೆ, ವಿವಿಧ ಗ್ರಾಹಕರ

ದುರ್ದೈವ. ಸರಕಾರ ಇನ್ನಾದರೂ ರಾಜ್ಯದಲ್ಲಿಯ ಇಂಥಹ ನೂರಾರು ಯೋಜನೆಗಳನ್ನು ಕೈಗೆತ್ತಿಕೊಂಡು ರಾಜ್ಯದಲ್ಲಿ ವಿದ್ಯುತ್ ಕೊರತೆಯನ್ನು ನೀಗಿಸಿ ನೀರಾವರಿ ಪಂಪ್‌ಸೆಟ್ ರೈತರನ್ನು, ವಿವಿಧ. ಕಾರ್ಖಾನೆಗಳನ್ನು, ಕಾರ್ಖಾನೆಗಳ ಸರಕಾರಿ, ಸಹಕಾರಿ, ಖಾಸಗಿ, ಜಂಟಿವಲಯಗಳಲ್ಲಿ ಉದ್ಯಮಗಳನ್ನು ಹಾಗೂ ಉದ್ಯಮಿಗಳನ್ನು ಬಾಳಿ ಬದುಕುವಂತೆ ಹಾಗೂ ಅವರವರ ಆರ್ಥಿಕ ಪ್ರಗತಿಯನ್ನು ಸಾಧಿಸುವಂತೆ ಜವಾಬ್ದಾರಿ ಸರಕಾರ ಕಾರ್ಯ ನಿರ್ವಹಿಸುವುದು ಅಗತ್ಯ. ನಿಗಮಗಳು ಪ್ರತಿವರ್ಷ ನೂರಾರು ಸಹಸ್ರಾರು ಕೋಟಿ ಸಹಾಯಧನ ಪಡೆದು ಆಗಿಂದಾಗ್ಗೆ ವಿದ್ಯುತ್ ಶುಲ್ಕವನ್ನು ಭಾರೀ ಪ್ರಮಾಣದಲ್ಲಿ ಏರಿಸಿ ಆದಾಯ ಹೆಚ್ಚಿಸಿಕೊಳ್ಳುತ್ತಿದ್ದರೂ ಸಮರ್ಪಕ ವಿದ್ಯುತ್ ಪೂರೈಸದಿರುವ ಬಗ್ಗೆ ಸರಕಾರ ಗಂಭೀರವಾಗಿ ಚಿಂತನೆ ಮಾಡುವುದಗತ್ಯ.

❑

ಆಯವ್ಯಯ ಚಿತ್ರ - ವಂಚಿತ ಶಾಸಕಾಂಗ

ರಾಜ್ಯದ ಆಡಳಿತ ಹಾಗೂ ಅಭಿವೃದ್ಧಿಯ ಜವಾಬ್ದಾರಿ ಶಾಸಕಾಂಗದ ಮೇಲಿದೆ. ಮಂತ್ರಿಗಳಾದವರು ಶಾಸಕಾಂಗ ಹಾಗೂ ಕಾರ್ಯಾಂಗ ಈ ಎರಡೂ ಸಂವಿಧಾನಬದ್ಧ ರಾಜ್ಯಾಂಗಗಳಿಗೆ ಹೊಣೆಗಾರರು. ಆಡಳಿತ ಹಾಗೂ ಅಭಿವೃದ್ಧಿಯ ಸಲುವಾಗಿ ಪ್ರತಿವರ್ಷ ಸಹಸ್ರಾರು ಕೋಟಿ ಆದಾಯ ಪಡೆಯಬೇಕಾಗುತ್ತದೆ ಹಾಗೂ ವೆಚ್ಚ ಮಾಡಬೇಕಾಗುತ್ತದೆ. ಪಡೆದ ವಿವಿಧ ಆದಾಯಗಳಿಂದ ಯಾವ್ಯಾವ ಇಲಾಖೆಗೆ ಎಷ್ಟೆಷ್ಟು ವೆಚ್ಚ ಮಾಡಬೇಕೆಂಬುದನ್ನು ಯಾವ್ಯಾವ ಮಂತ್ರಿ ಇಲಾಖೆಗಳಿಗೆ ಎಷ್ಟೆಷ್ಟು ಹಣ ನಿಗದಿಯೆಂಬುದನ್ನು ಸಹ ತೋರಿಸಬೇಕಾಗುತ್ತದೆ. ಮಂತ್ರಿಗಳು ತಮ್ಮ ಇಲಾಖೆಗೆ ನಿಗದಿ ಮಾಡಿದ ಹಣವನ್ನು ಪ್ರತಿ ತಿಂಗಳು ನಿಗದಿತ ಉದ್ದೇಶಗಳಿಗೆ ಅಧಿಕಾರಿಗಳ ಮುಖಾಂತರ ವೆಚ್ಚ ಮಾಡಿ ಆಡಳಿತ ಹಾಗೂ ಅಭಿವೃದ್ಧಿಯನ್ನು ಸಾಧಿಸಬೇಕಾಗುತ್ತದೆ. ಎಲ್ಲಾ ಇಲಾಖೆಗಳಿಗೆ ಹಣವನ್ನು ಪ್ರತಿ ತಿಂಗಳು ಒದಗಿಸುವುದು ಹಣಕಾಸು ಇಲಾಖೆಯ ಕರ್ತವ್ಯ. ಬೇಕಾದ ಹಣವನ್ನು ವಿವಿಧ ತೆರಿಗೆ ವಿವಿಧ ಸಾಲಗಳಿಂದ ಪಡೆಯುವುದು ಸಹ ಹಣಕಾಸು ಇಲಾಖೆಯ ಕರ್ತವ್ಯ.

ತೆರಿಗೆ, ತೆರಿಗೆಯೇತರ ಆದಾಯ, ಮಾರುಕಟ್ಟೆ ಸಾಲ, ರಿಜರ್ವ್ ಬ್ಯಾಂಕ್ ಸಾಲ, ವಿಮಾ ನಿಗಮ ಸಾಲ, ಎನ್.ಸಿ.ಡಿ.ಸಿ. ಸಾಲ, ರಿಜರ್ವ್ ಬ್ಯಾಂಕ್ ಸಾಲ ಮುಂಗಡ, ಪರಿಹಾರ ಸಾಲ, ಕೇಂದ್ರ ಸರಕಾರ ಸಾಲ ಮುಂಗಡ, ಸಾಲ ವಸೂಲಿ, ಇತರ ಬಂಡವಾಳ ಜಮೆ ಇತ್ಯಾದಿ ಮೂಲಗಳಿಂದ ಸರಕಾರಕ್ಕೆ ಆದಾಯ ಬರುತ್ತದೆ. ಬಂದ ಈ ಹಣದಲ್ಲಿ ಆರ್ಥಿಕ ಸೇವೆ, ಸಾಮಾಜಿಕ ಸೇವೆ, ಸಾಮಾನ್ಯ ಸೇವೆ, ಸಹಾಯಾನುದನ, ಅಂಶದಾನ ಇತ್ಯಾದಿ ಉದ್ದೇಶಗಳಿಗೆ ವೆಚ್ಚ ಮಾಡಬೇಕಾಗುತ್ತದೆ. ಈ ಆದಾಯ ವೆಚ್ಚದ ಬಗ್ಗೆ ಪ್ರತಿವರ್ಷ ಅಂದಾಜು ಮೊತ್ತ, ಪರಿಷ್ಕೃತ ಅಂದಾಜು ಮೊತ್ತ ಹಾಗೂ ವಾಸ್ತವಿಕ ಮೊತ್ತವನ್ನು ತಯಾರಿಸಿ ಹಣಕಾಸು ಇಲಾಖೆ ಶಾಸಕಾಂಗಕ್ಕೆ ಕೊಡಲೇಬೇಕಾಗುತ್ತದೆ. ಅಂದಾಜು ಪ್ರಕಾರ ಪ್ರತಿವರ್ಷ ನೂರಾರು ಕೋಟಿ ಮೊತ್ತದ ಆದಾಯ ಪಡೆಯದೆ ಖಜಾನೆಯಲ್ಲಿ ಹಣದ ಅಭಾವದಿಂದ ಅಂದಾಜು ಪ್ರಕಾರ ವೆಚ್ಚ ಮಾಡಬೇಕಾದ ನೂರಾರು ಕೋಟಿ ಹಣ ವೆಚ್ಚ ಮಾಡದೆ ಪ್ರತಿವರ್ಷ ವಿವಿಧ ಅಭಿವೃದ್ಧಿಯನ್ನು ಕುಂಠಿತಗೊಳಿಸುತ್ತಿರುವ ಕೆಟ್ಟ ಸಂಪ್ರದಾಯ ನಿರಾತಂಕವಾಗಿ ಮುಂದುವರೆದಿದೆ. ಬಜೆಟ್

ಪ್ರಕಾರ ಆದಾಯ ಪಡೆಯದ ಕಾರಣದಿಂದಾಗಿ ಹಣದ ಕೊರತೆಯಿಂದ 91-92ರಲ್ಲಿ 1321.91 ಕೋಟಿ, 92-93ರಲ್ಲಿ 1165.04 ಕೋಟಿ, 93-94ರಲ್ಲಿ 1223.32 ಕೋಟಿ, 94-95ರಲ್ಲಿ 2085.18 ಕೋಟಿ, 95-96ರಲ್ಲಿ 2946.90 ಕೋಟಿ, 96-97ರಲ್ಲಿ 2082.07 ಕೋಟಿ ಮೊತ್ತವನ್ನು ಅಂದಾಜು ಪ್ರಕಾರ ವೆಚ್ಚ ಮಾಡದೆ ಬಿಡಲಾಗಿದೆ. ಇದು ಸಿ.ಎ.ಜಿ. ಪ್ರಕಾರ ಉಳಿತಾಯ. ಬಜೆಟ್ ಪ್ರಕಾರ ಪ್ರತಿವರ್ಷ ಆದಾಯ ಪಡೆಯುವಲ್ಲಿ ಹಾಗೂ ವೆಚ್ಚ ಮಾಡುವಲ್ಲಿ ತಪ್ಪುತ್ತಿರುವ ಹಣಕಾಸು ಇಲಾಖೆಯ ಅಧಿಕಾರಿಗಳ ಮೇಲೆ ಕರ್ತವ್ಯ ಚ್ಯುತ ಕ್ರಮ ತೆಗೆದುಕೊಳ್ಳುವ ಎದೆಗಾರಿಕೆ ಮಂತ್ರಿಗಳಿಗೆ ಇಲ್ಲದಿರುವುದು ಪ್ರಜಾತಂತ್ರ ವ್ಯವಸ್ಥೆಯ ದುರ್ದೈವ. ಸರಕಾರಿ ಸಿಬ್ಬಂದಿಯ ಸಂಖ್ಯೆ 93-94ರಲ್ಲಿ 5.77 ಲಕ್ಷ, 94-95ರಲ್ಲಿ 6.13 ಲಕ್ಷ, 95-96ರಲ್ಲಿ 6.52 ಲಕ್ಷ, 96-97ರಲ್ಲಿ 6.72 ಲಕ್ಷ, ಹೀಗೆ ಪ್ರತಿವರ್ಷ ಏರುತ್ತಲೇ ಇದೆ. ಈ ಸಿಬ್ಬಂದಿಗೆ ವೇತನ ಭತ್ಯೆ 94-95ರಲ್ಲಿ 2210.45 ಕೋಟಿ, 95-96ರಲ್ಲಿ 2537.55 ಕೋಟಿ, 96-97ರಲ್ಲಿ 3161.75 ಕೋಟಿ. ಹೀಗೆ ಏರುತ್ತ ಹೋಗಿ 97-98ರಲ್ಲಿ ಸರಕಾರಿ ನೌಕರರಿಗೆ ಸಂಬಳ, ಸಾರಿಗೆ ಭತ್ಯೆ, ತುಟ್ಟಿ ಭತ್ಯೆ, ನಿವೃತ್ತಿ ವೇತನ, ಇತರೆ ಭತ್ಯೆಗಳಿಗೆ ಖರ್ಚು ಮಾಡಿದ ಒಟ್ಟು ಹಣ 4353.25 ಕೋಟಿ ಅಂದಾಜು ಇದ್ದು, 5ನೇ ವೇತನ ಆಯೋಗದ ಶಿಫಾರಸ್ಸಿನ ಪ್ರಕಾರ ಕೇಂದ್ರ ಸರಕಾರದ ನಿರ್ಣಯದ ಪ್ರಕಾರ ವೇತನ ಕೊಟ್ಟರೆ ಪ್ರತಿವರ್ಷ 1,400 ಕೋಟಿ ಅಧಿಕ ಹೊರೆ ಸರ್ಕಾರಕ್ಕೆ ಬರುತ್ತದೆ. ಹೀಗೆ ಪ್ರತಿವರ್ಷ ಬಜೆಟ್ ಪ್ರಕಾರ ನೂರಕ್ಕೆ ನೂರರಷ್ಟು ಮೊತ್ತವನ್ನು ಅಭಿವೃದ್ಧಿಯೇತರ ಬಾಬ್ತುಗಳಿಗೆ ವೆಚ್ಚ ಮಾಡಲೇಬೇಕಾಗಿದ್ದು ಅಭಿವೃದ್ಧಿ ಕಾರ್ಯಗಳಿಗೆ ಬಜೆಟ್ ಪ್ರಕಾರ ನೂರಕ್ಕೆ ನೂರರಷ್ಟು ವೆಚ್ಚ ಮಾಡದೆ ಸಹಸ್ರಾರು ಕೋಟಿ ಖೋತಾ ಮಾಡುತ್ತಿರುವುದು ಹಣಕಾಸು ಇಲಾಖೆಗೆ ಸರಿಯಲ್ಲ.

ಸರಕಾರದ ಆಯವ್ಯಯದ ವಿವರಗಳ ಚಿತ್ರವನ್ನು ವಿವಿಧ ಖಾತೆವಾರು ಶಾಸಕಾಂಗಕ್ಕೆ ಬಜೆಟ್ ಅಧಿವೇಶನ ಪೂರ್ವದಲ್ಲಿ ಹಣಕಾಸು ಇಲಾಖೆ ಪ್ರತಿವರ್ಷ ಕೊಡುತ್ತ ಬಂದಿರುವುದು ಅನೇಕ ವರ್ಷಗಳಿಂದ ನಡೆದುಬಂದಿರುವ ಸತ್‌ಸಂಪ್ರದಾಯ, ಉತ್ತಮ ತಿಳುವಳಿಕೆ ಹಾಗೂ ಚರ್ಚೆಗಾಗಿ ಬಹಳ ಅನುಕೂಲ. ಪ್ರತಿವರ್ಷದ ಆಯದಲ್ಲಿ ಬರುವ ರೆವಿನ್ಯೂ, ಬಂಡವಾಳ ಮತ್ತು ಸಾಲಗಳ ಹಿಂದಿನ ವರ್ಷದ ವಾಸ್ತವಿಕ, ಚಾಲು ವರ್ಷದ ಪರಿಷ್ಕೃತ ಅಂದಾಜು, ಮುಂದಿನ ವರ್ಷದ ಅಂದಾಜು ವೆಚ್ಚ ಬಾಬ್ತು 1) ಸರಕಾರಿ ವ ಜಿಲ್ಲಾ ಪಂಚಾಯತ್ ನೌಕರರ ವೇತನ ಭತ್ಯೆ, 2) ಜಿಲ್ಲಾ ಪಂಚಾಯತಿ ಯೋಜನೆಗಳ ವೆಚ್ಚ, 3) ಮಜೂರಿ, 4) ಪ್ರಯಾಣ ವೆಚ್ಚ, 5) ಕಛೇರಿ ವೆಚ್ಚ, 6) ಸಹಾಯಾನುದಾನ, 7) ಸಹಾಯಧನ, 8) ವಿದ್ಯಾರ್ಥಿ ವೇತನ, 9) ಶಿಷ್ಯ ವೇತನ, 10) ವಿಶ್ರಾಂತಿ ವೇತನ, 11) ಪಥ್ಯಾಹಾರ, 12) ಔಷಧಿ, 13) ಕಾಮಗಾರಿ, 14) ಯಂತ್ರಸಾಧನ ಸಾಮಗ್ರಿ ಖರೀದಿ, 15) ಬಾಡಿಗೆದರ ತೆರಿಗೆ, 16) ಮೋಟಾರ್ ವಾಹನ ಖರೀದಿ, 17) ವಾಹನ ನಿರ್ವಹಣೆ, 18) ಬಂಡವಾಳ ಹೂಡಿಕೆ, 19) ಸಾಲ ತೀರಿಕೆ, 20) ಸರಕು ಸರಬರಾಜು, 21) ಬಡ್ಡಿ ಡಿವಿಡೆಂಡು, 22) ಇತರ ವೆಚ್ಚ, 23) ರಾಜ್ಯವಲಯ ಯೋಜನೆ, 24) ಕೇಂದ್ರ

ಪುರಸ್ಕೃತ ಯೋಜನೆ, 25) ಕೇಂದ್ರವಲಯ ಯೋಜನೆ, 26) ಯೋಜನೇತರ ಕಾರ್ಯಕ್ರಮ ಈ ಎಲ್ಲಾ ವಿವರಗಳಿಗೆ ಎಷ್ಟೆಷ್ಟು ಹಣವೆಂಬ ವಿಶ್ಲೇಷಣೆಯನ್ನು ಸುಸ್ಪಷ್ಟವಾಗಿ ತಿಳಿಯುವಂತೆ 'ಕರ್ನಾಟಕ ಆಯವ್ಯಯದ ಸಂಕ್ಷಿಪ್ತ ಚಿತ್ರ' ('ಎ ಪಿಕ್ಚರ್ ಆಫ್ ಕರ್ನಾಟಕ ಬಜೆಟ್') ಎಂಬ ಹಸ್ತಪತ್ರಿಕೆಯನ್ನು ಶಾಸಕಾಂಗಕ್ಕೆ ಹಣಕಾಸು ಇಲಾಖೆ ಒದಗಿಸಿ ಶಾಸಕರೆಲ್ಲರೂ ರಾಜ್ಯದ ಹಣಕಾಸು ವ್ಯವಹಾರದ ಬಗ್ಗೆ ತಿಳಿದುಕೊಳ್ಳಲು ವಿಮರ್ಶೆ ಮಾಡಲು ಅವಕಾಶ ಮಾಡಿಕೊಡುವ ಮಾದರಿಯ ಸತ್‌ಸಂಪ್ರದಾಯವಿತ್ತು. ಈ ಮಾಹಿತಿಯಿಂದ ಪ್ರತಿವರ್ಷ ಅಭಿವೃದ್ಧಿಗೆ ನೀಡುವ ಮೊತ್ತವೆಷ್ಟು? ಅಭಿವೃದ್ಧಿಯೇತರಕ್ಕೆ ನೀಡುವ ಮೊತ್ತವೆಷ್ಟು? ಎಂಬುದು ನಿಖರವಾಗಿ ಶಾಸಕರಿಗೆ ಹಾಗೂ ಸಾರ್ವಜನಿಕರಿಗೆ ಗೊತ್ತಾಗುತ್ತಿತ್ತು. ಆದರೆ ಇತ್ತಿತ್ತಲಾಗಿ ಈ ಸುವ್ಯವಸ್ಥೆ ನಿಂತುಹೋಗಿ ಶಾಸಕಾಂಗ, ಪತ್ರಿಕಾಂಗ ಹಾಗೂ ಸಾರ್ವಜನಿಕರನ್ನೂ ಅಂಧಕಾರದಲ್ಲಿಟ್ಟು ಸರಕಾರದ ಹಣಕಾಸಿನ ನಿಜವಾದ ಪರಿಸ್ಥಿತಿ ಯಾರಿಗೂ ಗೊತ್ತಾಗದಂತೆ ಮಾಡುವುದು ಹಣಕಾಸು ಇಲಾಖೆಯ ಪಂಡಿತ ಅಧಿಕಾರಿಗಳಿಗೆ ಭೂಷಣವಲ್ಲ. ಈ ರಾಜ್ಯದ ಪ್ರಜೆಗಳು ಸರಕಾರದ ಮಾಲೀಕರು, ಈ ಮಾಲೀಕರ ಪ್ರತಿನಿಧಿಗಳಿಗೆ ಹಣಕಾಸಿನ ವಿವರ ವಿಶ್ಲೇಷಣೆಯ ಹಸ್ತಪತ್ರಿಕೆಯನ್ನು ಬಜೆಟ್ ಅಧಿವೇಶನಗಳಲ್ಲಿ ಒದಗಿಸದೇ ಇರುವುದರ ಗುಟ್ಟಿನ ಹಿನ್ನೆಲೆಯೇನು? ಇದಕ್ಕೆ ಹಣಕಾಸು ಮಂತ್ರಿಗಳೇ ಈಗಲಾದರೂ ತಿಳಿದು ಈ ಮಾಹಿತಿ ಒದಗಿಸುವಂತೆ ಮಾಡುವುದು ಅವರ ಹೊಣೆಗಾರಿಕೆಯ ಕರ್ತವ್ಯ. ಸರಕಾರದ ಇತ್ತೀಚಿನ 1998 ನವೆಂಬರ್ ಮಾಹಿತಿಯ ಪ್ರಕಾರ 1997-98ರಲ್ಲಿ ರಾಜ್ಯದ ಅಭಿವೃದ್ಧಿಗೆ ಖರ್ಚು ಮಾಡಲಾದ ಮೊತ್ತ ವಾಸ್ತವಿಕವಾಗಿ ಸರಕಾರಕ್ಕೆ ಗೊತ್ತಿಲ್ಲ. ಆದರೆ ಗೊತ್ತಿರುವ ಹಾಗೆ ಪರಿಷ್ಕೃತ ಅಂದಾಜಿನ ಪ್ರಕಾರ ರಾಜ್ಯ ಯೋಜನೆ ಅಡಿಯಲ್ಲಿ 4326 ಕೋಟಿ ಇದೆ. ಅಂತೆಯೇ 97-98ರಲ್ಲಿ ಸರಕಾರಿ ನೌಕರರಿಗೆ ಸಂಬಳ, ಸಾರಿಗೆ ಭತ್ಯೆ, ತುಟ್ಟಿ ಭತ್ಯೆ, ನಿವೃತ್ತಿ ವೇತನ, ಇತರೆ ಭತ್ಯೆಗಳಿಗೆ ಖರ್ಚು ಮಾಡಿದ ಮೊತ್ತ ವಾಸ್ತವಿಕವಾಗಿ ಗೊತ್ತಿಲ್ಲ. ಆದರೆ ಅಂದಾಜು ವೆಚ್ಚ 4353.25 ಕೋಟಿ. ಇಂಥಹ ಅಂಕಿ ಅಂಶಗಳು ನಿಖರವಾಗಿ ಸಕಾಲದಲ್ಲಿ ಸಿಗದೆ ಹೋದರೆ ರಾಜ್ಯದ ನಿಜವಾದ ಹಣಕಾಸು ಪರಿಸ್ಥಿತಿ ಶಾಸಕರಿಗೆ ಹಾಗೂ ರಾಜ್ಯ ಪ್ರಜಾಪ್ರಭು(?)ಗಳಿಗೆ ಸಿಗುವುದಾದರೂ ಹೇಗೆ? ಇನ್ನಾದರೂ ಹಣಕಾಸು ಇಲಾಖೆ ತನ್ನ ಜವಾಬ್ದಾರಿಯನ್ನರಿತು ನಡೆಯುವುದು ಒಳ್ಳೆಯದು. ಶಾಸಕರೂ ಸಹ ತಮ್ಮ ಹೊಣೆಯನ್ನರಿತು ಹಣಕಾಸು ಇಲಾಖೆಯನ್ನು ಹದ್ದುಬಸ್ತಿನಲ್ಲಿಟ್ಟು ಆಗಿಂದಾಗ್ಗೆ ಹಣಕಾಸಿನ ವಿವರ ವಿಶ್ಲೇಷಣೆಯನ್ನು ಪಡೆದು ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಹಣವಿಲ್ಲದೆ ಹದಗೆಟ್ಟಿರುವ ಹಣಕಾಸು ಪರಿಸ್ಥಿತಿಯನ್ನು ಸುಧಾರಿಸುವುದು ಅವರ ಆದ್ಯ ಕರ್ತವ್ಯ.

❑

ಕೇಂದ್ರ ಹಾಗೂ ರಾಜ್ಯ ಸರಕಾರಗಳ ಆರ್ಥಿಕ ಹೊಣೆ

ಭಾರತ ದೇಶದಲ್ಲಿಯ ಕೇಂದ್ರ ಸರಕಾರ ಹಾಗೂ ಎಲ್ಲಾ ರಾಜ್ಯ ಸರಕಾರಗಳು ಪ್ರತಿವರ್ಷ ಹೆಚ್ಚೆಚ್ಚು ರಾಜಸ್ವ ಆದಾಯ ಪಡೆಯುತ್ತಿದ್ದರೂ ರಾಜಸ್ವ ವೆಚ್ಚಕ್ಕಾಗಿ ಆ ಹಣ ಸಾಲದೆ ಸಹಸ್ರಾರು ಕೋಟಿ ಕಡಿಮೆ ಬೀಳುತ್ತಲಿವೆ. ಹಣದ ಕೊರತೆಯಿಂದಾಗಿ ಬಜೆಟ್ ಪ್ರಕಾರ ರಾಜಸ್ವ ವೆಚ್ಚವನ್ನು ಮಾಡದೆ ಸಹಸ್ರಾರು ಕೋಟಿ ಕಡಿಮೆ ಅಥವಾ ಉಳಿಕೆ (ಸೇವಿಂಗ್ಸ್)ಯಾಗುತ್ತದೆ. ರಾಜಸ್ವ ವೆಚ್ಚವನ್ನು ಸರಿಯಾಗಿಸಲು ಪ್ರತಿವರ್ಷ ಬಂಡವಾಳ ಲೆಕ್ಕದಲ್ಲಿ ಹೇರಳವಾದ ಜಮಾ ಪಡೆದು ಕಡಿಮೆ ಬೀಳುವ ರಾಜಸ್ವ ವೆಚ್ಚವನ್ನು ಭರಿಸಬೇಕಾಗುತ್ತದೆ. ಬಂಡವಾಳ ಲೆಕ್ಕದಲ್ಲಿ ಪಡೆದ ಹಣವನ್ನು ಸಂಪೂರ್ಣವಾಗಿ ಕೊಡಲಿಕ್ಕಾಗದೆ ಲಕ್ಷಾಂತರ ಕೋಟಿ ಬಾಕಿ ಬಂಡವಾಳ ಸಾಲ ಏರುತ್ತಲಿದೆ. ಕೇಂದ್ರ ರೆವಿನ್ಯೂ ಆದಾಯ 96-97ರಲ್ಲಿ 1.94 ಲಕ್ಷ ಕೋಟಿ, 97-98ರಲ್ಲಿ 2.24 ಲಕ್ಷ ಕೋಟಿ, 98-99ರಲ್ಲಿ 2.48 ಲಕ್ಷ ಕೋಟಿಯಾಗಿ ಪ್ರತಿವರ್ಷ ಏರುತ್ತಿದ್ದರೂ ವೇತನ, ನಿವೃತ್ತಿವೇತನ, ಭತ್ಯೆ, ಬಡ್ಡಿ ಇತ್ಯಾದಿ ವೆಚ್ಚದ ಹೆಚ್ಚಳದಿಂದ ಇತರ ರೆವಿನ್ಯೂ ವೆಚ್ಚಕ್ಕಾಗಿ ಈ ವರ್ಷಗಳಲ್ಲಿ ಅನುಕ್ರಮವಾಗಿ 32654 ಕೋಟಿ, 56681 ಕೋಟಿ, 48068 ಕೋಟಿ ರೂ. ಕೊರತೆಯಾಗಿ 96-97ರಲ್ಲಿ 2.11 ಲಕ್ಷ ಕೋಟಿ, 97-98ರಲ್ಲಿ 4.00 ಲಕ್ಷ ಕೋಟಿ, 98-99ರಲ್ಲಿ 4.13 ಲಕ್ಷ ಕೋಟಿ ರೂ. ಸಾಲ ಮಾಡಲಾಗಿದೆ.

ಕೇಂದ್ರ ಸರಕಾರದ ರೆವಿನ್ಯೂ, ಆದಾಯ ರೆವಿನ್ಯೂ, ವೆಚ್ಚಕ್ಕೆ ಸಾಲದೆ ಪ್ರತಿವರ್ಷ ಬಂಡವಾಳ ಆದಾಯದಲ್ಲಿರುವ ವೆಚ್ಚವನ್ನು ಮಾಡುತ್ತ ಬಂಡವಾಳ ಸಾಲವನ್ನು ಸಂಪೂರ್ಣವಾಗಿ ತೀರಿಸದೆ ಸಾಲವನ್ನು ಹೆಚ್ಚಿಸಿಕೊಳ್ಳುತ್ತ ಬಡ್ಡಿಯನ್ನು ಹೆಚ್ಚೆಚ್ಚು ಕೊಡುತ್ತ ಹೊರಟಿದೆ. ಪ್ರತಿವರ್ಷ ರೆವಿನ್ಯೂ, ಆದಾಯ ಸಾಲದ್ದರಿಂದ ಬಂಡವಾಳ ಲೆಕ್ಕದಿಂದ 95-96ರಲ್ಲಿ 29731.07 ಕೋಟಿ, 96-97ರಲ್ಲಿ 28069.24 ಕೋಟಿ ಮೊತ್ತವನ್ನು ವೆಚ್ಚ ಮಾಡಲಾಗಿದೆ. ಏರುತ್ತಿರುವ ರಾಷ್ಟ್ರೀಯ ಹಾಗೂ ಅಂತರ್ರಾಷ್ಟ್ರೀಯ ಸಾಲದ ಮೇಲೆ

ಕೇಂದ್ರ ಕೊಟ್ಟಿರುವ ಬಡ್ಡಿ 95-96ರಲ್ಲಿ 50031.20 ಕೋಟಿ, 96-97ರಲ್ಲಿ 59478.41 ಕೋಟಿ, 97-98ರಲ್ಲಿ 65700.00 ಕೋಟಿ, 98-99ರಲ್ಲಿ 75000.00 ಕೋಟಿ ಇದೆ. ಇದು ಹೆಚ್ಚುತ್ತಿರುವ ಭಾರೀ ಸಾಲದ ಪರಿಣಾಮ.

26 ರಾಜ್ಯಗಳ ವಾರ್ಷಿಕ ರಾಜಸ್ವ ಲೆಕ್ಕದ ಆಯ 1995-96ರಲ್ಲಿ 136803.4 ಕೋಟಿ, ವೆಚ್ಚ ವ್ಯಯ 145003.9 ಕೋಟಿ. ಇಲ್ಲಿ ಕೊರತೆಯಾದ ಹಣ 8200.5 ಕೋಟಿ, 96-97ರಲ್ಲಿ ಆದಾಯ 157214.9 ಕೋಟಿ ಇದ್ದು, ವೆಚ್ಚ 1730704 ಕೋಟಿ. ಇಲ್ಲಿ ಕೊರತೆಯಾದ ಹಣ 15855.2 ಕೋಟಿ, 97-98ರಲ್ಲಿ ಆದಾಯ 176178.2 ಕೋಟಿ ಇದ್ದು, ವೆಚ್ಚ 191550.9 ಕೋಟಿ. ಇಲ್ಲಿ ಕೊರತೆಯಾದ ಮೊತ್ತ 15372.7 ಕೋಟಿ. ಕೊರತೆಯಾಗಿದ್ದ ಹಣವನ್ನು ಬಂಡವಾಳ ಲೆಕ್ಕದಲ್ಲಿ ಪ್ರತಿವರ್ಷ ಹೆಚ್ಚಾಗಿ ಪಡೆದ ಹಣದಿಂದ ಸರಿಯಾಗಿಸಿಕೊಂಡು ರಾಜ್ಯ ಸರಕಾರಗಳು ಹೊರಟಿವೆ. ಪಡೆದ ಬಂಡವಾಳ ಆಯದಲ್ಲಿ ಸಂಪೂರ್ಣವಾಗಿ ವ್ಯಯಮಾಡದೆ 95-96ರಲ್ಲಿ 11050.3 ಕೋಟಿ, 96-97ರಲ್ಲಿ 11532.9 ಕೋಟಿ, 97-98ರಲ್ಲಿ 13943.1 ಕೋಟಿ ಮೊತ್ತವನ್ನು ಕಡಿಮೆ ಬಿದ್ದ ರಾಜಸ್ವ ಲೆಕ್ಕಕ್ಕೆ ವೆಚ್ಚ ಮಾಡಲಾಗಿದೆ. ಹೀಗೆ ರೆವಿನ್ಯೂ ಲೆಕ್ಕ ಹಾಗೂ ಬಂಡವಾಳ ಲೆಕ್ಕದ ಆಯ ಮತ್ತು ವ್ಯಯಗಳನ್ನು ನೋಡಿದರೆ ಒಟ್ಟಿನಲ್ಲಿ ಪ್ರತಿವರ್ಷ ಸಹಸ್ರಾರು ಕೋಟಿ ಮೊತ್ತ ಕೊರತೆಯಾಗಿದೆ. ದೇಶಾದ್ಯಂತ ಎಲ್ಲಾ ರಾಜ್ಯಗಳಲ್ಲಿ ಕೃಷಿ ಉತ್ಪನ್ನ ತೆರಿಗೆ, ಆಸ್ತಿ ತೆರಿಗೆ, ವೃತ್ತಿ ತೆರಿಗೆ, ಮುದ್ರಾಂಕ ಮತ್ತು ನೋಂದಣಿ ತೆರಿಗೆ, ಭೂಕಂದಾಯ, ಮಾರಾಟ ತೆರಿಗೆ, ಅಬಕಾರಿ ತೆರಿಗೆ, ವಾಹನ ತೆರಿಗೆ, ಪ್ರಯಾಣಿಕರ ಹಾಗೂ ಸರಕುಗಳ ತೆರಿಗೆ, ವಿದ್ಯುತ್ ತೆರಿಗೆ, ಕೇಂದ್ರ ಸರಕಾರದ ಆದಾಯ ಮತ್ತು ಅಬಕಾರಿ ತೆರಿಗೆಯ ಪಾಲು, ಕೇಂದ್ರ ಸರಕಾರದ ಧನಸಹಾಯ, ಬಡ್ಡಿ, ಸಾಮಾನ್ಯ ಸಾಮಾಜಿಕ ಹಾಗೂ ಆರ್ಥಿಕ ಸೇವೆಗಳ ಮೇಲಿನ ತೆರಿಗೆಯೇತರ ಆಯ ಇತ್ಯಾದಿ ರೆವಿನ್ಯೂ ಒಟ್ಟು ಆದಾಯ 95-96ರಲ್ಲಿ 136803.4 ಕೋಟಿ, 96-97ರಲ್ಲಿ 157214.9 ಕೋಟಿ, 97-98ರಲ್ಲಿ 176178.2 ಕೋಟಿ. ಈಗ ಇಷ್ಟೊಂದು ಹಣ ಎಲ್ಲಾ ರಾಜ್ಯಗಳ ಖಜಾನೆಗೆ ಹೆಚ್ಚೆಚ್ಚಾಗಿ ಹರಿದು ಮಹಾಪೂರವಾಗಿ ಬರುತ್ತಿದ್ದರೂ ಈ ಎಲ್ಲ ಹಣ ಪ್ರತಿವರ್ಷ ರೆವಿನ್ಯೂ ವೆಚ್ಚಕ್ಕೆ ಸಾಲದೆ ಪ್ರತಿವರ್ಷ ಸಹಸ್ರಾರು ಕೋಟಿ ಕಡಿಮೆ ಬೀಳುತ್ತಿರುವುದು ಅನಾವಶ್ಯಕ ವೆಚ್ಚ, ದುಂದುವೆಚ್ಚ ಪಡೆದ ಸಾಲದ ಮೇಲೆ ಬಡ್ಡಿ ಸಂದಾಯ, ನಿವೃತ್ತಿ ವೇತನ ಭತ್ಯೆ, ಸರಕಾರಿ ನೌಕರರ ವೇತನ, ಭತ್ಯೆ ಇತ್ಯಾದಿಗಳಿಗೆ ಹೆಚ್ಚೆಚ್ಚಾಗಿ ವೆಚ್ಚ ಮಾಡುತ್ತಿರುವುದು ಪ್ರಮುಖ ಕಾರಣವಾಗಿದ್ದು ಈ ವೆಚ್ಚವನ್ನು ಕಡಿಮೆಗೊಳಿಸುವಲ್ಲಿ ಎಲ್ಲಾ ರಾಜ್ಯ ಸರಕಾರಗಳು ಯಾವುದೇ ಪ್ರಯತ್ನ ಮಾಡದಿರುವುದು ಸುಸ್ಪಷ್ಟವಿದೆ. ರೆವಿನ್ಯೂ ಮತ್ತು ಬಂಡವಾಳ ಲೆಕ್ಕದಲ್ಲಿ ವೆಚ್ಚ ಮಾಡುತ್ತಿರುವ ನಿವೃತ್ತಿ ವೇತನ, ಭತ್ಯೆ ಖಾತೆಗೆ ಲೆಕ್ಕ ಶೀರ್ಷಿಕೆ ನಂಬರ್ 2071 ಅಂಕಿಯನ್ನು ಎಲ್ಲಾ ರಾಜ್ಯ ಸರಕಾರ ಹಾಗೂ ಕೇಂದ್ರ ಸರಕಾರ ಆಯವ್ಯಯ

ಪತ್ರಗಳಲ್ಲಿ ಕೊಟ್ಟು ಪ್ರತಿವರ್ಷ ವೆಚ್ಚದ ನಿಖರವಾದ ಮಾಹಿತಿ ಕೊಡುತ್ತಿರುವಾಗ ರಾಜ್ಯ ಸರಕಾರ ಹಾಗೂ ಕೇಂದ್ರ ಸರಕಾರಗಳ ನೌಕರರ ವೇತನಭತ್ಯೆ ಲೆಕ್ಕಕ್ಕೆ ಲೆಕ್ಕಶೀರ್ಷಿಕೆ ಯೊಂದನ್ನು ಕೊಡದೆ ಇರುವ ಹಾಗೂ ಸಂಸತ್ತು ಮತ್ತು ಶಾಸಕಾಂಗಗಳಿಗೆ ತಿಳಿಸದೆ ಇರುವ ವಿತ್ತ ಖಾತೆಯ ಸೂತ್ರಗಳನ್ನು ಹಿಡಿದ ಐ.ಎ.ಎಸ್. ಅಧಿಕಾರಿಗಳ ಗುಟ್ಟೇನು? ಇದನ್ನೆಲ್ಲಾ ನೋಡಿ ಸುಮ್ಮನೆ ಗಪ್-ಚುಪ್ಪಾಗಿರುವ ಈ ದೇಶದ ಸಂಸದ ಹಾಗೂ ಶಾಸಕರ ಜವಾಬ್ದಾರಿ ಹಾಗೂ ಕರ್ತವ್ಯಗಳನ್ನು ಪ್ರಶ್ನಿಸದೆ ಗತ್ಯಂತರವಿಲ್ಲ.

ಎಲ್ಲಾ ರಾಜ್ಯಗಳ ಬಂಡವಾಳ ಲೆಕ್ಕದಲ್ಲಿ ಆಂತರಿಕ ಸಾಲ, ಕೇಂದ್ರ ಸರಕಾರದಿಂದ ಸಾಲ, ಮಾರುಕಟ್ಟೆ ಸಾಲ, ಸರಣಿ ಉಳಿತಾಯ, ಪ್ರಾವಿಡೆಂಟ್ ಫಂಡ್ ಸಾಲ ಇತ್ಯಾದಿ ಸಾಲಗಳು ಪ್ರತಿವರ್ಷ ಹೆಚ್ಚುತ್ತಿದ್ದು ಸಾಲ ವಸೂಲಿ, ಮುಂಗಡ ಮತ್ತು ಹಣದ ರವಾನೆ ಪ್ರತಿವರ್ಷ ಕಡಿಮೆಯಾಗುತ್ತಿದ್ದರೂ ಒಟ್ಟಾರೆ ಹೆಚ್ಚುತ್ತಿರುವ ಬಂಡವಾಳ ಲೆಕ್ಕದ ಆಯ 95-96ರಲ್ಲಿ 43630.1 ಕೋಟಿ, 96-97ರಲ್ಲಿ 47719.8 ಕೋಟಿ, 97-98ರಲ್ಲಿ 53553.3 ಕೋಟಿ, ಹೀಗೆ ಗಗನಕ್ಕೇರುತ್ತಲೇ ಇದೆ. ರಾಜ್ಯ ಸರಕಾರಗಳು ಕೇಂದ್ರ ಸರಕಾರದಿಂದ 95-96ರಲ್ಲಿ 19599.5 ಕೋಟಿ, 96-97ರಲ್ಲಿ 25417.3 ಕೋಟಿ, 97-98ರಲ್ಲಿ 27736.0 ಕೋಟಿ ಸಾಲ ಪಡೆದಿರುವ ಕೇಂದ್ರ ಸರಕಾರಕ್ಕೆ ಈ ವರ್ಷಗಳಲ್ಲಿ ಮರುಪಾವತಿ ಮಾಡಿದ ಸಾಲ ಅನುಕ್ರಮವಾಗಿ 4798.6 ಕೋಟಿ, 6354.5 ಕೋಟಿ, 6084.3 ಕೋಟಿ ಇರುತ್ತದೆ. ಪಡೆದ ಮಾರುಕಟ್ಟೆ ಹಾಗೂ ಆಂತರಿಕ ಸಾಲದ ಮೊತ್ತ 95-96ರಲ್ಲಿ 7847.4 ಕೋಟಿ, 96-97ರಲ್ಲಿ 8847.5 ಕೋಟಿ, 97-98ರಲ್ಲಿ 11554.7 ಕೋಟಿ ಇದ್ದು ಪರತ ಕೊಟ್ಟಿರುವ ಸಾಲ ಈ ವರ್ಷಗಳಲ್ಲಿ ಅನುಕ್ರಮವಾಗಿ 1055.2 ಕೋಟಿ, 476.8 ಕೋಟಿ, 999.2 ಕೋಟಿ ಇರುತ್ತದೆ.

ಹೀಗೆ ಎಲ್ಲಾ ರಾಜ್ಯ ಸರಕಾರಗಳು ಪ್ರತಿವರ್ಷ ಹೆಚ್ಚೆಚ್ಚು ಸಾಲವನ್ನು ಪಡೆದು ಅಲ್ಪಸ್ವಲ್ಪ ಸಾಲವನ್ನು ಮಾತ್ರ ತೀರಿಸುತ್ತ ಸಾಲದ ಹೊರೆಯನ್ನು ಹೆಚ್ಚಿಸಿಕೊಳ್ಳುತ್ತ ಬಡ್ಡಿಯ ಭಾರವನ್ನು ಕೂಡ ಭರಿಸುತ್ತ ಅಭಿವೃದ್ಧಿಗೆ ಕಡಿಮೆ ಹಣ ವೆಚ್ಚ ಮಾಡಿ ಅಭಿವೃದ್ಧಿ ಕುಂಠಿಸುತ್ತ ಅಭಿವೃದ್ಧಿಯೇತರ ಆಡಳಿತಕ್ಕೆ ಹೆಚ್ಚೆಚ್ಚು ವೆಚ್ಚ ಮಾಡುತ್ತ, ಇವೆಲ್ಲವುಗಳ ಒಟ್ಟಾರೆ ಪರಿಣಾಮವಾಗಿ ಈ ದೇಶದ ರಾಜ್ಯಗಳಲ್ಲಿ ಭ್ರಷ್ಟಾಚಾರ, ಸ್ವಾರ್ಥ, ಪಕ್ಷಪಾತ, ಸ್ವಜನ ಪಕ್ಷಪಾತ, ಅಧಿಕಾರ ದುರುಪಯೋಗ, ದುರಾಡಳಿತ ಮಾಡಿ ಮುಂದೆ ಮುಂದೆ ಹೋಗುವುದಾದರೆ ಇದೂ ಸಾಲದೆ ಕಂಡ ಕಂಡ ಸಣ್ಣಪುಟ್ಟ ಪರರಾಷ್ಟ್ರಗಳಿಂದ ಸಹ "ಭಿಕ್ಷಾಂ ದೇಹಿ"ಯೆಂದು ತಿರುಕನಂತೆ ಭಿಕ್ಷೆ ಬೇಡಿ ಸಿಕ್ಕಾಪಟ್ಟೆ ಸಾಲ ಪಡೆದು ಆ ಸಾಲದ ಸದುಪಯೋಗ ಪಡೆಯದೆ ಇರುವುದಾದರೆ ಈ ಎಲ್ಲಾ ರಾಜ್ಯಗಳನ್ನೊಳಗೊಂಡ ರಾಷ್ಟ್ರದ ಮಾನ-ಮರ್ಯಾದೆ, ಘನತೆ-ಗೌರವ ಪ್ರಪಂಚದ ಎಲ್ಲಾ ರಾಷ್ಟ್ರಗಳ ಮುಂದೆ

ಏನಾದೀತೆಂಬುದನ್ನು ಹಾಗೂ "ಭಾರತೀಯರು ಇನ್ನೂ ಅಪ್ರಬುದ್ಧ ಅನನುಭವಿಗಳು, ಅವರಿಗೆ ಸ್ವಾತಂತ್ರ್ಯ ಕೊಟ್ಟು ನಾವು ಭಾರತದಿಂದ ತೊಲಗಿ ಹೋದರೆ ಇವರು ದೇಶವನ್ನು ಆಳುವರೇ?" ಎಂದು ಸಂಶಯವನ್ನು ವ್ಯಕ್ತಪಡಿಸಿ ಸ್ವಾತಂತ್ರ್ಯ ಕೊಟ್ಟು ಹೋದ ಗ್ರೇಟ್ ಬ್ರಿಟನ್ ಆಂಗ್ಲರು ಏನೆನ್ನಬಹುದೆಂಬುದನ್ನು ಈ ಎಲ್ಲಾ ರಾಜ್ಯಗಳಲ್ಲಿಯ ಜನತೆ ಸಾಲಗಾರರಾಗಿ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಸಾಲಗಾರರಾಗಿ ದಿವಾಳಿಯ ದಾರಿಯತ್ತ ಧಾವಿಸುತ್ತಲಿರುವ ಅರಿವನ್ನು ಕೇಂದ್ರ ಹಾಗೂ ಎಲ್ಲಾ ರಾಜ್ಯ ಸರಕಾರಗಳು ಅರಿತು ಕೇಂದ್ರ ಹಾಗೂ ಎಲ್ಲಾ ರಾಜ್ಯಗಳಲ್ಲಿಯ ಮಹಾಮಂತ್ರಿಗಳು, ಮಂತ್ರಿಗಳು ಶಾಸಕರು ಹೊಣೆಗಾರ ಅಧಿಕಾರಿಗಳು ನಡೆದರೆ ಸ್ವಾತಂತ್ರ್ಯ ಗಣರಾಜ್ಯಕ್ಕೆ ಭೂಷಣ.

❑

ಕೇಂದ್ರ ಸರಕಾರದ ಉದ್ದೇಶಿತ ಗುರಿ

ಕೇಂದ್ರದಲ್ಲಿ ಪ್ರಥಮ ಬಾರಿಗೆ ಬಿಜೆಪಿ ಸರಕಾರ ಅಸ್ತಿತ್ವದಲ್ಲಿ ಬಂದಿದೆ. ರಾಷ್ಟ್ರದಲ್ಲಿ ಬಿಜೆಪಿ ಸರಕಾರ ಅಟಲ್ ಬಿಹಾರಿ ವಾಜಪೇಯಿಯವರ ಪ್ರಧಾನಮಂತ್ರಿತ್ವದಲ್ಲಿ ಅಧಿಕಾರಕ್ಕೆ ಬರಬೇಕೆಂದು ಹಿರಿಯಾಶೆಯಿಂದಲೇ ಭಾರತೀಯರು ಅತಿ ಹೆಚ್ಚಿನ ಮತವನ್ನು ಬಿಜೆಪಿಗೆ ಕೊಟ್ಟು ಅತಿ ದೊಡ್ಡ ಸಂಖ್ಯೆಯಲ್ಲಿ ಸಂಸದರನ್ನು ಆರಿಸಿ ತಂದಿದ್ದಾರೆ. ಆ ಪ್ರಕಾರ ಸಂಸತ್ತಿನಲ್ಲಿ ಅತಿ ದೊಡ್ಡ ಪಕ್ಷವಾಗಿ ಮಿತ್ರ ಪಕ್ಷಗಳ ಸಹಾಯದಿಂದ ಸಮ್ಮಿಶ್ರ ಸರಕಾರ ರಚಿಸಿಕೊಂಡು ಪ್ರಧಾನಿ ವಾಜಪೇಯಿಯವರು ಅಧಿಕಾರ ಚುಕ್ಕಾಣಿಯನ್ನು ಹಿಡಿದು ಅನೇಕ ಎಡರು-ತೊಡರುಗಳನ್ನು ಎದುರಿಸುತ್ತ ಚಾಕಚಕ್ಯತೆಯಿಂದ ಕಿರುಕುಳವನ್ನು ಸಹಿಸುತ್ತಾ ಮುನ್ನಡೆದಿದ್ದಾರೆ. ಮಿತ್ರಪಕ್ಷಗಳಾಗಲೀ, ಮಿತ್ರಪಕ್ಷಗಳ ಸಚಿವರಾಗಲೀ, "ತಾಕಾಪೂರ್ತಿ ಮಾಮಾ" ಎನ್ನದೆ ತಮ್ಮ ಹೊಣೆಯನ್ನರಿತು ವಾಜಪೇಯಿಯವರ ಸರಕಾರದ ಉದ್ದೇಶಿತ ಉಚ್ಚಗುರಿಯನ್ನು ಸಾಧಿಸಲಿಕ್ಕೆ ಪ್ರಯತ್ನಿಸುವುದು ಅಗತ್ಯ. ಈ ರಾಷ್ಟ್ರದ ಜನತೆ ಅನೇಕ ವರ್ಷಗಳಿಂದ ಕಾಂಗ್ರೆಸ್ ಹಾಗೂ ಇತರ ಕಾಂಗ್ರೆಸೇತರ ಸರಕಾರಗಳ ದುರಾಡಳಿತ ದುಂದುಗಾರಿಕೆ, ಭ್ರಷ್ಟಾಚಾರ, ಪಕ್ಷಪಾತ, ಸ್ವಜನ ಪಕ್ಷಪಾತ, ಅಧಿಕಾರ ದುರುಪಯೋಗ, ಸ್ವಾರ್ಥ ಹಾಗೂ ಅಸಮರ್ಥ ಆಡಳಿತಗಳಿಗೆ ಬೇಸತ್ತು ವಾಜಪೇಯಿಯವರ ಬಿಜೆಪಿ ಸರಕಾರ ಉತ್ತಮವಾದ ಸುಭದ್ರ ಹಾಗೂ ಸಮರ್ಥ ಸರಕಾರವನ್ನು ಕೊಡಬಹುದೆಂಬ ಹಿರಿಯಾಸೆಯಿಂದ ಭಾರತೀಯ ಜನತಾಪಕ್ಷಕ್ಕೆ ಹಾಗೂ ಮಿತ್ರಪಕ್ಷಕ್ಕೆ ಮತ ಕೊಟ್ಟು ಆರಿಸಿ ತಂದು ಆಳುವ ಅಧಿಕಾರವನ್ನು ಭಾರತೀಯರು ಕೊಟ್ಟಿದ್ದಾರೆ. ರಾಜ್ಯಗಳ ವಿಧಾನಸಭೆ ಚುನಾವಣೆಗಳಲ್ಲಿ ಒಂದು ಪಕ್ಷಕ್ಕೆ ಮತ ಕೊಟ್ಟು ಅಧಿಕಾರಕ್ಕೆ ತಂದು ಮುಂದೆ ಮೂರು-ನಾಲ್ಕು ತಿಂಗಳಲ್ಲಿ ಬಂದ ಕೇಂದ್ರ ಸಂಸತ್ತಿನ ಚುನಾವಣೆಯಲ್ಲಿ ಮತ್ತೊಂದು ಪಕ್ಷಕ್ಕೆ ಮತ ಕೊಟ್ಟು ಆ ಪಕ್ಷವನ್ನು ಅಧಿಕಾರಕ್ಕೆ ತಂದ ಅಥವಾ ಲೋಕಸಭೆ ಚುನಾವಣೆಯಲ್ಲಿ ಬಂದು ಪಕ್ಷಕ್ಕೆ ಮತ ಕೊಟ್ಟು, ಅಧಿಕಾರಕ್ಕೆ ತಂದ ಕೇವಲ ಮೂರು-ನಾಲ್ಕು ತಿಂಗಳಲ್ಲೇ ರಾಜ್ಯ ವಿಧಾನಸಭೆ ಚುನಾವಣೆಯಲ್ಲಿ ಬೇರೊಂದು ಪಕ್ಷಕ್ಕೆ ಮತ ಕೊಟ್ಟು, ಅಧಿಕಾರಕ್ಕೆ ಬಂದ ಭಾರತೀಯರ ಉದಾಹರಣೆ ನಮ್ಮ ರಾಷ್ಟ್ರದಲ್ಲಿ ಸಾಕಷ್ಟು ಇವೆ. ಇಂತಹ

ಸನ್ನಿವೇಶದಲ್ಲಿ ಇತ್ತೀಚೆಗೆ ನಾಲ್ಕು ರಾಜ್ಯಗಳಲ್ಲಿ ನಡೆದ ಚುನಾವಣೆ ಫಲಿತಾಂಶಕ್ಕೂ ಅವಧಿಪೂರ್ವ ಅಥವಾ ಅವಧಿ ನಂತರದ ಲೋಕಸಭೆ ಚುನಾವಣೆ ಎಂದೇ ಬರಲಿ ಆ ಚುನಾವಣೆ ಫಲಿತಾಂಶಕ್ಕೂ ಹೋಲಿಸಲಿಕ್ಕಾಗದು, ಭಾರತೀಯರು ಐದು ವರ್ಷ ಅವಧಿಗೆ ಕಾಂಗ್ರೆಸ್ ಪಕ್ಷವಾಗಲೀ ಅಥವಾ ಬಿಜೆಪಿ ಹೊರತುಪಡಿಸಿ ಯಾವುದೇ ಕಾಂಗ್ರೆಸ್ಸೇತರ ಪಕ್ಷವಾಗಲೀ ಅಧಿಕಾರಕ್ಕೆ ಬರಲೇಬಾರದೆಂಬುದೇ ಭಾರತೀಯ ಮತದಾರರ 98ರ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ ಹಾಗೂ ಬಿಜೆಪಿ ಮಿತ್ರಪಕ್ಷಗಳಿಗೆ ಮತ ಕೊಟ್ಟು ಆರಿಸಿ ತಂದು ಅಧಿಕಾರದಲ್ಲಿ ಕೂಡ್ರಿಸಿದ್ದಾರೆ. ವಾಜಪೇಯಿಯವರು ಬಿಜೆಪಿ ಹಾಗೂ ಬಿಜೆಪಿ ಮಿತ್ರಪಕ್ಷಗಳ ನಾಯಕರಾಗಿ ಪ್ರಧಾನಮಂತ್ರಿಯಾಗಿ ಹಿಂದಿನ ಎಲ್ಲಾ ಸರಕಾರಗಳಿಗಿಂತಲೂ ಉತ್ತಮ ಸರಕಾರವನ್ನು ಭಾರತೀಯರಿಗೆ ಕೊಟ್ಟು ಉತ್ತಮ ಆಡಳಿತ ಹಾಗೂ ಅಭಿವೃದ್ಧಿ ಸಾಧಿಸುವಲ್ಲಿ ದಿಟ್ಟಹೆಜ್ಜೆಯನ್ನಿಟ್ಟಿರುವುದು ಒಂದು ಒಳ್ಳೆಯ ಶುಭಚಿಹ್ನೆ. ವಾಜಪೇಯಿ ಸರಕಾರದ ಸದುದ್ದೇಶ, ಗುರಿ, ಧೋರಣೆ ಈಡೇರಲೇಬೇಕು. ಅವರು ಹಾಕಿಕೊಂಡ ಜನಪರ ಸಾಮಾನ್ಯ, ಸಾಮಾಜಿಕ ಹಾಗೂ ಆರ್ಥಿಕ ಸೇವೆಗಳು ಸಂಪೂರ್ಣವಾಗಿ ಕಾರ್ಯಗತವಾಗಲೇಬೇಕು. ಈ ದಿಶೆಯಲ್ಲಿ ಕೇಂದ್ರ ಸರಕಾರದ ಎಲ್ಲಾ ಮಂತ್ರಿಗಳು ಹಾಗೂ ಆಡಳಿತಾಧಿಕಾರಿಗಳಾದ ಐ.ಎ.ಎಸ್. ಪಂಡಿತರು ಹಾಗೂ ರಾಜ್ಯ ಸರಕಾರಗಳು ಜವಾಬ್ದಾರಿಯಿಂದ ಕೇಂದ್ರ ಸರಕಾರದ ಆಯವ್ಯಯದಲ್ಲಿ ನಿಗದಿಪಡಿಸಿರುವ ಹಿಂದಿನ ವರ್ಷಗಳಿಗಿಂತಲೂ ಹೆಚ್ಚಾಗಿರುವ ಹಣ ಆಯಾ ಯೋಜನೆಗಳಿಗೆ ಸಂಪೂರ್ಣ ವಾಗಿ ಆಗಾಗ್ಗೆ ವೆಚ್ಚವಾಗುವಂತೆ ದಕ್ಷತೆ ವಹಿಸುವುದು ಅವರೆಲ್ಲರ ಆದ್ಯ ಕರ್ತವ್ಯ.

ಶಿಕ್ಷಣ, ಕಲೆ ಮತ್ತು ಸಂಸ್ಕೃತಿ, ವೈದ್ಯಕೀಯ ಮತ್ತು ಜನಾರೋಗ್ಯ, ಕುಟುಂಬ ಕಲ್ಯಾಣ, ಹರಿಜನ-ಗಿರಿಜನ ಹಾಗೂ ಹಿಂದುಳಿದ ವರ್ಗದ ಕಲ್ಯಾಣ, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ನೀರು ಸರಬರಾಜು, ವಸತಿ, ನಗರಾಭಿವೃದ್ಧಿ, ಸಾಮಾಜಿಕ ಭದ್ರತೆ, ನೈಸರ್ಗಿಕ ವಿಕೋಪಗಳ ಬಗ್ಗೆ ಪರಿಹಾರ, ಪೌಷ್ಟಿಕ ಆಹಾರ ಇತ್ಯಾದಿ ಸಾಮಾಜಿಕ ಸೇವೆಗಳ ಅನುಷ್ಠಾನಕ್ಕೆ 96-97ರ ಸರಕಾರ ಹಣದ ಕೊರತೆಯಿಂದಲೇ ಅಥವಾ ಅದಕ್ಷತೆಯ ಪರಿಣಾಮದಿಂದಲೇ 965.36 ಕೋಟಿ ಮೊತ್ತವನ್ನೇ ವೆಚ್ಚ ಮಾಡದೆ ದೇಶಾದ್ಯಂತ ಸಾಮಾಜಿಕ ಸೇವೆಗಳನ್ನು ಕುಂಠಿತಗೊಳಿಸಿದೆ. ಅಂತೆಯೇ ಕೃಷಿ, ಪಶುಸಂಗೋಪನೆ, ಹೈನಾಭಿವೃದ್ಧಿ, ಮೀನುಗಾರಿಕೆ, ಅರಣ್ಯ ಮತ್ತು ವನ್ಯಜೀವನ, ಸಹಕಾರ, ಗ್ರಾಮೀಣ ಅಭಿವೃದ್ಧಿ, ಗ್ರಾಮೀಣ ಉದ್ಯೋಗ, ಗ್ರಾಮೀಣ ವಿಶೇಷ ಕಾರ್ಯಕ್ರಮ, ಸಂಸದ ಕ್ಷೇತ್ರಾಭಿವೃದ್ಧಿ, ಭಾರೀ ಮಧ್ಯಮ ಹಾಗೂ ಸಣ್ಣ ನೀರಾವರಿ, ಪ್ರದೇಶಾಭಿವೃದ್ಧಿ, ವಿದ್ಯುತ್, ರಸ್ತೆ ಮತ್ತು ಸೇತುವೆ, ಸಂಪರ್ಕ ಇತ್ಯಾದಿ ಆರ್ಥಿಕ ಸೇವೆಗಳ ಅನುಷ್ಠಾನಕ್ಕೆ ಆಯವ್ಯಯ ದಲ್ಲಿ ತೆಗೆದಿಟ್ಟ ಹಣದಲ್ಲಿ ಹಣದ ಕೊರತೆಯಿಂದಲೋ ಅಥವಾ ಅಸಮರ್ಪಕ ಕಾರ್ಯಾಚರಣೆಯಿಂದಲೋ 865.94 ಕೋಟಿ ಮೊತ್ತವನ್ನು ವೆಚ್ಚಮಾಡದೆ ಆರ್ಥಿಕ

ಅಭಿವೃದ್ಧಿಯನ್ನು ಕುಂಠಿತಗೊಳಿಸಲಾಗಿದೆ. ಒಟ್ಟಿನ ಮೇಲೆ 96-97ರಲ್ಲಿ ಸಾಮಾನ್ಯ ಸೇವೆ, ಸಾಮಾಜಿಕ ಸೇವೆ, ಆರ್ಥಿಕ ಸೇವೆ ಹಾಗೂ ಅನುದಾನ ಸಹಾಯಧನ ಇತ್ಯಾದಿ ರೆವಿನ್ಯೂ ಕಾರ್ಯಕ್ರಮಗಳ ಅಭಿವೃದ್ಧಿಗೆ 3741.45 ಕೋಟಿ ಮೊತ್ತವನ್ನು ವೆಚ್ಚ ಮಾಡಲಿಕ್ಕೆ ಆಗಿನ 96-97ರ ಸರಕಾರಕ್ಕೆ ಸಾಧ್ಯವಾಗದೆ ವಿಫಲಗೊಂಡಿದೆ. 96-97ರ ಸರಕಾರ ಇನ್ನೂ ಒಂದು ಹೆಜ್ಜೆ ಹಿಂದೆ ಸರಿದು ಬಂಡವಾಳ ಅಂದಾಜು ವೆಚ್ಚದಲ್ಲಿ ಸಹಾ 31351.26 ಕೋಟಿ ವೆಚ್ಚ ಮಾಡದೆ ವಿಫಲಗೊಂಡಿದೆ. ಹೀಗೆ 96-97ರಲ್ಲಿ ಸಂಚಿತ ನಿಧಿ ವೆಚ್ಚ ಅಂದಾಜು ಮೊತ್ತ 476651.65 ಕೋಟಿಯಲ್ಲಿ 441558.94 ಕೋಟಿಯನ್ನು ಮಾತ್ರ ವೆಚ್ಚ ಮಾಡಿ 35092.71 ಕೋಟಿ ಮೊತ್ತವನ್ನು ವೆಚ್ಚ ಮಾಡದೆ ಸರಕಾರ ವಿಫಲಗೊಂಡಿದೆ.

ಪ್ರಧಾನಿ ವಾಜಪೇಯಿಯವರ ಸರಕಾರ ದೇಶಾದ್ಯಂತ ಜನತೆಯ ಸರ್ವಾಂಗೀಣ ಅಭಿವೃದ್ಧಿ ಹಾಗೂ ಪ್ರಗತಿ ಸಾಧಿಸುವ ಸದುದ್ದೇಶ ಹಾಗೂ ಮಹತ್ವಾಕಾಂಕ್ಷೆಯಿಂದ 98-99ರಲ್ಲಿ ಸಾಮಾನ್ಯ ಸೇವೆಗಳಿಗಾಗಿ 1,30,367.66 ಕೋಟಿ ಸಾಮಾಜಿಕ ಸೇವೆಗಾಗಿ 14767.59 ಕೋಟಿ, ಆರ್ಥಿಕ ಸೇವೆಗಾಗಿ 95245.40 ಕೋಟಿ ಸಹಾಯಾನುದಾನ ಹಾಗೂ ಪಾಲುಸೇವೆಗಾಗಿ 53911.59 ಕೋಟಿ ಹೀಗೆ ರೆವಿನ್ಯೂ ವೆಚ್ಚಗಳಿಗಾಗಿ ಒಟ್ಟು 2,95,38.67 ಕೋಟಿ ಮೊತ್ತವನ್ನು ವೆಚ್ಚ ಮಾಡುವ ಉಚ್ಚ ಉದ್ದೇಶ ಹೊಂದಿದೆ. ಅಂತೆಯೇ ಸಾಮಾನ್ಯ, ಸಾಮಾಜಿಕ ಹಾಗೂ ಆರ್ಥಿಕ ಸೇವೆಗಳ ಮೇಲಿನ ಬಂಡವಾಳ ವೆಚ್ಚಕ್ಕೆ 28,167.72 ಕೋಟಿ ಮೊತ್ತವನ್ನು ನಿಗದಿಪಡಿಸಲಾಗಿದೆ. ಈಗಾಗಲೇ ಚಾಲೂ ವರ್ಷದ 9 ತಿಂಗಳು ಗತಿಸಿರುವುದರಿಂದ ಈ ಮೊತ್ತದಲ್ಲಿ ಶೇಕಡಾ 75ರಷ್ಟು ಹಣ ವೆಚ್ಚವಾಗಿರಲೇ ಬೇಕು ಹಾಗೂ ಉಳಿದಿರುವ ಶೇಕಡಾ 25ರಷ್ಟು ಹಣವನ್ನಾಗಲೀ ಅಥವಾ ನೂರಕ್ಕೆ ನೂರರಷ್ಟು ಹಣವನ್ನು 31-3-99ರ ಒಳಗಾಗಿ ವೆಚ್ಚ ಮಾಡಲೇಬೇಕು ಹಾಗೂ ನಿಶ್ಚಿತ ಅಭಿವೃದ್ಧಿಯನ್ನು ಸಾಧಿಸಲೇಬೇಕು. ಈ ದಿಶೆಯಲ್ಲಿ ಕೇಂದ್ರ ಸರಕಾರದ ಮಂತ್ರಿಗಳು, ಸಂಸದರು, ರಾಜ್ಯ ಸರಕಾರಗಳು ಹಾಗೂ ಬಜೆಟ್ ಪ್ರಕಾರ ಪ್ರತಿ ತಿಂಗಳೂ ನೂರಕ್ಕೆ ನೂರರಷ್ಟು ವೇತನ ಭತ್ಯೆಯನ್ನು ತಪ್ಪದೆ ಪಡೆಯುವ ಕೇಂದ್ರ ಹಾಗೂ ರಾಜ್ಯ ಸರಕಾರಗಳ ಆಡಳಿತಾಧಿಕಾರಿಗಳು ಜವಾಬ್ದಾರಿ ವಹಿಸಿ ಕೇಂದ್ರ ಸರಕಾರದ ಉದ್ದೇಶಿತ ಉಚ್ಚಗುರಿಯನ್ನು ಸಾಧಿಸಲೇಬೇಕು ಹಾಗೂ ತಮ್ಮ ತಮ್ಮ ದಕ್ಷತೆ, ಕಾರ್ಯಶೀಲತೆ, ಸಾರ್ವಜನಿಕ ಕಾಳಜಿ, ಸಮರ್ಥತೆಯನ್ನು ತೋರಿಸಿಕೊಡಬೇಕು. ಅಂದರೆ ಮಾತ್ರ ಭಾರತೀಯ ಜನತೆ ಭಾರೀ ಆಶೆಯನ್ನಿಟ್ಟುಕೊಂಡು ವಾಜಪೇಯಿಯವರನ್ನು ಅಧಿಕಾರಕ್ಕೆ ತಂದಿರುವುದು ಸಾರ್ಥಕ ವಾಗುತ್ತದೆ. ಆಡಳಿತ ಹಾಗೂ ಅಭಿವೃದ್ಧಿ ಜಾರಿ ಮಾಡಬೇಕಾದವರು ಕೇಂದ್ರ ಹಾಗೂ ರಾಜ್ಯ ಸರಕಾರದ ಲಕ್ಷಾಂತರ ನೌಕರರು ಪ್ರತಿ ತಿಂಗಳಿಂದ ಹಿಡಿದು ಪ್ರತಿವರ್ಷದ ಕೊನೆ ಅಂದರೆ ಮಾರ್ಚ್ 31ರವರೆಗೆ ಬಜೆಟ್‌ನಲ್ಲಿ ನಿಗದಿತ ವೇತನಭತ್ಯೆಯನ್ನು ನೂರಕ್ಕೆ ನೂರರಷ್ಟು ತಪ್ಪದೇ ತೆಗೆದುಕೊಳ್ಳುತ್ತಿರುವಾಗ ಭಾರತೀಯ ನಾಗರಿಕ ಪ್ರಜೆಗಳ

ಸರ್ವಾಂಗೀಣ ಅಭಿವೃದ್ಧಿಗಾಗಿ ಬಜೆಟ್‌ನಲ್ಲಿ ನಿಗದಿತ ಮೊತ್ತವನ್ನೇಕೆ ನೂರಕ್ಕೆ ನೂರರಷ್ಟು ವೆಚ್ಚ ಮಾಡಬಾರದು? ನೂರಕ್ಕೆ ನೂರರಷ್ಟು ವೆಚ್ಚ ಮಾಡುವಂತೆ ದಕ್ಷತೆ ವಹಿಸುವ ಜವಾಬ್ದಾರಿ ಕೇಂದ್ರ ಹಾಗೂ ರಾಜ್ಯ ಸರಕಾರಗಳ ಮಂತ್ರಿಗಳು, ಸಂಸದರು ಹಾಗೂ ಶಾಸಕರೆಂಬ ಅರಿವನ್ನು ಎಲ್ಲರೂ ಅರಿತು ರಾಷ್ಟ್ರದ ಜನತೆಯ ಪ್ರೀತಿ-ವಿಶ್ವಾಸಕ್ಕೆ ಪಾತ್ರರಾಗುವುದು ಒಳ್ಳೆಯದು.

❑

ಸರಕಾರಿ ಆಯವ್ಯಯ ಪತ್ರಗಳಲ್ಲಿ ವೇತನ ಭತ್ಯೆ ಶೀರ್ಷಿಕೆ ಅವಶ್ಯ

ದೇಶಾದ್ಯಂತ ಗ್ರಾಮದಿಂದ ರಾಜ್ಯದ ರಾಜಧಾನಿ ಹಾಗೂ ರಾಷ್ಟ್ರದ ರಾಜಧಾನಿ ದಿಲ್ಲಿಯವರೆಗೆ ಪಂಚಾಯತಿಗಳು, ಸಹಕಾರ ಸಂಘಗಳು, ನೋಂದಾದ ಇತರ ಸಂಘಗಳು, ಸ್ಥಳೀಯ ಸಂಸ್ಥೆಗಳು, ಪ್ರಾಧಿಕಾರಗಳು, ನಿಗಮಗಳು, ರಾಜ್ಯ ಸರಕಾರಗಳು ಹಾಗೂ ಕೇಂದ್ರ ಸರಕಾರ ಆಡಳಿತ ನಡೆಸುತ್ತಿವೆ. ಕೇಂದ್ರ ಹಾಗೂ ರಾಜ್ಯ ಸರಕಾರಗಳನ್ನು ಬಿಟ್ಟರೆ ಉಳಿದೆಲ್ಲಾ ಸಂಘ-ಸಂಸ್ಥೆ, ನಿಗಮಗಳು ತಮ್ಮ ತಮ್ಮ ಆದಾಯ ವೆಚ್ಚಗಳ ವಿವರಗಳಲ್ಲಿ ತಮ್ಮ ಸಿಬ್ಬಂದಿಗೆ ಪ್ರತಿವರ್ಷ ಕೊಟ್ಟ ವೇತನವೆಷ್ಟು, ಭತ್ಯೆಗಳೆಷ್ಟು, ಹೆಚ್ಚಿನ ವೇಳೆ ವೇತನವೆಷ್ಟು, ಬೋನಸ್ ಎಷ್ಟು, ಪ್ರಾವಿಡೆಂಟ್ ಫಂಡ್ ಎಷ್ಟು, ಪ್ರಮಾಣ ವೆಚ್ಚವೆಷ್ಟು, ನೌಕರರ ಕಲ್ಯಾಣ ವೆಚ್ಚವೆಷ್ಟು, ರಜಾ ವೇತನವೆಷ್ಟು, ದಿನಗೂಲಿ ಎಷ್ಟು ಎಂಬ ಇತ್ಯಾದಿಗಳ ಪ್ರತ್ಯೇಕ ಖಾತೆಯನ್ನೇ ಪ್ರಾರಂಭಿಸಿ ಪ್ರತಿವರ್ಷ ಎಷ್ಟೆಷ್ಟು ಮೊತ್ತ ವೆಚ್ಚವಾಗಿದೆಯೆಂಬ ಹಾಗೂ ಮುಂದಿನ ವರ್ಷವೆಷ್ಟು ಎಂಬ ಬಗ್ಗೆ ನಿಖರವಾದ ಅಂಕಿ-ಸಂಖ್ಯೆಗಳ ವಿವರಗಳನ್ನೆಲ್ಲ ಪ್ರಕಟಿಸುವ ಸತ್‌ಪರಂಪರೆ ನಡೆದುಬಂದಿದೆ. ಈ ಎಲ್ಲ ವೆಚ್ಚ, ಆಯಾ ಸಂಸ್ಥೆಗಳ ಆದಾಯ, ವ್ಯವಹಾರ, ವಿವಿಧ ವೆಚ್ಚ, ಸಿಬ್ಬಂದಿಯ ಕಾರ್ಯ, ಗಾತ್ರ ಇತ್ಯಾದಿಗಳನ್ನು ಅವಲಂಬಿಸಿದೆ. ಪ್ರತಿವರ್ಷದ ಆಯವ್ಯಯ ಜಮಾ-ಖರ್ಚನ್ನು ಚರ್ಚಿಸಿ ಮುಂದೆ ಯಾವ ಕ್ರಮ ತೆಗೆದುಕೊಳ್ಳಬೇಕೆಂಬುದನ್ನು ಸಹ ಪ್ರತಿವರ್ಷ ಆಗಿಂದಾಗ್ಗೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಲಾಗುತ್ತದೆ. ಈ ಎಲ್ಲ ಮಾಹಿತಿ ಅವುಗಳ ವಾರ್ಷಿಕ ವರದಿಗಳನ್ನು ನೋಡಿದರೆ ತಿಳಿದುಬರುತ್ತದೆ. ಆದರೆ ನಮ್ಮ ರಾಷ್ಟ್ರದ ಕೇಂದ್ರ ಸರಕಾರವಾಗಲೀ, ರಾಜ್ಯ ಸರಕಾರಗಳಾಗಲೀ ತನ್ನ ಸಿಬ್ಬಂದಿಯ ವೇತನ ಭತ್ಯೆಗಳ ವಿವರಗಳನ್ನು ಸಂಸತ್ತು ಹಾಗೂ ಶಾಸನಸಭೆಗಳಿಗೆ ಬಜೆಟ್ ಅಧಿವೇಶನ ಕಾಲದಲ್ಲಿ ಚರ್ಚೆಗೆ ಕೊಡದೆ ಸಂಸತ್ತು ಹಾಗೂ ಶಾಸಕಾಂಗಗಳನ್ನು ಹಾಗೂ ಈ ದೇಶದ ಪ್ರಜೆಗಳನ್ನು ಅಂಧಕಾರದಲ್ಲಿಡುತ್ತಿರುವುದು ಒಂದು ಮಹಾಪರಾಧ ಹಾಗೂ ಲೋಪವೆನ್ನದೆ ಗತ್ಯಂತರವಿಲ್ಲ.

ಕೇಂದ್ರ ಸರಕಾರದ ರೆವಿನ್ಯೂ ಹಾಗೂ ಬಂಡವಾಳದ ಆದಾಯ 96-97ರಲ್ಲಿ 4.46 ಲಕ್ಷ ಕೋಟಿ ಅಂದಾಜು ಇದ್ದುದು ವಾಸ್ತವಿಕವಾಗಿ 4.13 ಲಕ್ಷ ಕೋಟಿಗೆ ಇಳಿದು 0.33 ಲಕ್ಷ ಕೋಟಿ ಕಡಿಮೆ ಆದಾಯ ಪಡೆದಿದೆ. ರೆವಿನ್ಯೂ ಹಾಗೂ ಬಂಡವಾಳ ವೆಚ್ಚ 96-97ರಲ್ಲಿ 4.77 ಲಕ್ಷ ಕೋಟಿ ಅಂದಾಜು ಇದ್ದುದು ವಾಸ್ತವಿಕವಾಗಿ 4.42 ಲಕ್ಷ ಕೋಟಿಗೆ ಇಳಿದು 0.35 ಲಕ್ಷ ಕೋಟಿ ಹಣದ ಕೊರತೆಯಿಂದ ವೆಚ್ಚವಾಗಲೇ ಇಲ್ಲ. ಮಾಡಿದ ವೆಚ್ಚದಲ್ಲಿ ಕೇಂದ್ರ ಸರಕಾರದ ನೌಕರರಿಗೆ ವೇತನ ಭತ್ಯೆ ಇತ್ಯಾದಿಯನ್ನು ನೂರಕ್ಕೆ ನೂರರಷ್ಟು ಸಂಪೂರ್ಣ ಕೊಟ್ಟು ಈ ದೇಶದ ಜನತೆಯ ಸಲುವಾಗಿ ಸಾಮಾನ್ಯ, ಸಾಮಾಜಿಕ ಹಾಗೂ ಆರ್ಥಿಕ ಯೋಜನೆಗಳಿಗೆ ಬಜೆಟ್‌ನಂತೆ ಸಂಪೂರ್ಣ ಹಣವನ್ನು ವೆಚ್ಚ ಮಾಡಿಲ್ಲ. ಏಕೆ? ವೆಚ್ಚ ಮಾಡಿದ ಹಣದಲ್ಲಿ ನೌಕರರಿಗೆ ಅವರ ವೇತನ ಭತ್ಯೆಗಾಗಿ ಆಯಾ ವರ್ಷದಲ್ಲಿ ಅಂದಾಜು ವೆಚ್ಚವೆಷ್ಟು? ವಾಸ್ತವಿಕ ವೆಚ್ಚವೆಷ್ಟು, ಎಂಬ ಬಗ್ಗೆ ಎಲ್ಲಿಯೂ ಯಾವುದೇ ಮಾಹಿತಿ ಯಾರಿಗೂ ಸಿಗಬಾರದು ಏಕೆ? ಕೇಂದ್ರದ ಬೆಟ್ಟದಲ್ಲಿ 96-97ರಲ್ಲಿ ನಿವೃತ್ತ ನೌಕರರ ವೇತನ ಭತ್ಯೆ ವೆಚ್ಚ ಬಜೆಟ್ ಪ್ರಕಾರ 4508.80 ಕೋಟಿ ಇದ್ದದ್ದು ವಾಸ್ತವಿಕವಾದ ವೆಚ್ಚ ಹೆಚ್ಚಿ 5077.35 ಕೋಟಿ ಇದೆ. ನಿವೃತ್ತಿ ನೌಕರರ ನಿವೃತ್ತಿ ವೇತನ ಭತ್ಯೆ ಇತ್ಯಾದಿಯ ವಿವರಕ್ಕಾಗಿ ಕೇಂದ್ರ ಸರಕಾರ ತನ್ನ ಆಯವ್ಯಯದಲ್ಲಿ ಪ್ರತ್ಯೇಕ 2071ನೇ ಲೆಕ್ಕಶೀರ್ಷಿಕೆಯನ್ನೇ ಕೊಟ್ಟು, ಪ್ರತಿವರ್ಷ ಅಂದಾಜು ಹಾಗೂ ವಾಸ್ತವಿಕ ವೆಚ್ಚದ ವಿವರಗಳನ್ನು ಕೊಡುತ್ತಿರುವಾಗ ಹಾಲೀ ನೌಕರರ ವೇತನ ಭತ್ಯೆ ಶೀರ್ಷಿಕೆ ಏಕಿಲ್ಲ? ನಿವೃತ್ತಿ ವೇತನ ಭತ್ಯೆ 96-97ರಲ್ಲಿ 5077.35 ಕೋಟಿ, 97-98ರಲ್ಲಿ 6882.90 ಕೋಟಿ, 98-99ರಲ್ಲಿ 7341.76 ಕೋಟಿ ಹೀಗೆ ಏರುತ್ತಲೇ ಇದ್ದು, ಇದು ಹೇಗೆ ಗೊತ್ತಾಗುವುದೋ ಹಾಗೆಯೇ ನೌಕರರ ವೇತನ ಭತ್ಯೆ ವೆಚ್ಚದ ವಿವರ ಕೂಡ ಗೊತ್ತಾಗಬೇಕೆಂಬುದನ್ನು ಸರಕಾರ ಹಾಗೂ ಸಂಸದರು ಅರಿತರೆ ಅದು ಅವರ ಕರ್ತವ್ಯ. ಕೇಂದ್ರ ಸರಕಾರ ತನ್ನ ರೆವಿನ್ಯೂ ಮತ್ತು ಕ್ಯಾಪಿಟಲ್ ವೆಚ್ಚಕ್ಕಾಗಿ 97-98ರಲ್ಲಿ 6.94 ಲಕ್ಷ ಕೋಟಿ, 98-99ರಲ್ಲಿ 7.19 ಲಕ್ಷ ಕೋಟಿ ಮೊತ್ತವನ್ನು ನಿಗದಿಮಾಡಿದ್ದು, ಈ ಮೊತ್ತದಲ್ಲಿ ನಿವೃತ್ತಿ ವೇತನ ಭತ್ಯೆಗೆ 97-98ರಲ್ಲಿ 6882.90 ಕೋಟಿ, 98-99ರಲ್ಲಿ 7341.76 ಕೋಟಿ ನಿಗದಿಮಾಡಿದ್ದು, ಅದೇ ಪ್ರಕಾರ ವೇತನ ಭತ್ಯೆಗೆ ಎಷ್ಟೆಂಬುದನ್ನು ಇನ್ನೂ ಮುಂದಾದರೂ ಲೆಕ್ಕಶೀರ್ಷಿಕೆಯನ್ನು ತಪ್ಪದೆ ಗೊತ್ತುಪಡಿಸಿ ವೇತನ ಭತ್ಯೆಯ ಮೊತ್ತವನ್ನು ನಿರ್ದಿಷ್ಟಪಡಿಸುವುದು ಸಾರ್ವಜನಿಕ ಹಿತದೃಷ್ಟಿಯಿಂದ ಒಳ್ಳೆಯದು.

ಭಾರತದಲ್ಲಿಯ ಎಲ್ಲಾ 26 ರಾಜ್ಯ ಸರಕಾರಗಳು ಪ್ರತಿವರ್ಷ ರೆವಿನ್ಯೂ ವೆಚ್ಚವನ್ನು ಹಣದ ಕೊರತೆಯ ಪರಿಣಾಮವಾಗಿ ಬಜೆಟ್ ಪ್ರಕಾರ ವೆಚ್ಚ ಮಾಡದೆ ಸಹಸ್ರಾರು ಕೋಟಿಯ ಅಭಿವೃದ್ಧಿ ಕಾರ್ಯಗಳನ್ನು ಕುಂಠಿತಗೊಳಿಸುತ್ತವೆ. 95-96ರ ರೆವಿನ್ಯೂ ವೆಚ್ಚ 1.74 ಲಕ್ಷ ಕೋಟಿಯಲ್ಲಿ 9572.2 ಕೋಟಿ, 97-98ರ ರೆವಿನ್ಯೂ ವೆಚ್ಚ 1.92 ಲಕ್ಷ ಕೋಟಿಯಲ್ಲಿ 10783.1 ಕೋಟಿ ಮೊತ್ತವನ್ನು ನಿವೃತ್ತರ ನಿವೃತ್ತಿ ವೇತನ ಭತ್ಯೆಗಾಗಿ ವೆಚ್ಚ ಮಾಡುವುದನ್ನು ಪ್ರತ್ಯೇಕ ಲೆಕ್ಕಶೀರ್ಷಿಕೆ ಪ್ರಕಾರ ತಮ್ಮ ತಮ್ಮ ಆಯವ್ಯಯ ಪತ್ರಗಳ

ಮುಖಾಂತರ ಪ್ರಕಟಿಸುತ್ತಿರುವಾಗ ಈ ಎಲ್ಲಾ ರಾಜ್ಯ ಸರಕಾರಗಳು ತನ್ನ ನೌಕರರ ವೇತನ ಭತ್ಯೆಗಳ ವೆಚ್ಚದ ಬಗ್ಗೆ ಪ್ರತ್ಯೇಕ ಲೆಕ್ಕಶೀರ್ಷಿಕೆಯನ್ನೇ ತೆರೆಯದೆ ಯಾರಿಗೂ ತಿಳಿಸದೆ ಇರುವ ದುರುದ್ದೇಶವಾದರೂ ಎಲ್ಲಾ ರಾಜ್ಯ ಸರಕಾರಗಳಿಗೇಕೆ?

ಕರ್ನಾಟಕ ರಾಜ್ಯ ಸರಕಾರದ 96-97ರ ರೆವಿನ್ಯೂ ವೆಚ್ಚ 10,201.09 ಕೋಟಿಯಲ್ಲಿ 716.41 ಕೋಟಿ, 97-98ರ ರೆವಿನ್ಯೂ ವೆಚ್ಚ 11,833.20 ಕೋಟಿಯಲ್ಲಿ 889.26 ಕೋಟಿ, 98-99ರ ರೆವಿನ್ಯೂ ವೆಚ್ಚ 13,360.58 ಕೋಟಿಯಲ್ಲಿ 1089.41 ಕೋಟಿ ಮೊತ್ತವನ್ನು ಲೆಕ್ಕಶೀರ್ಷಿಕೆ 2071ರ ಪ್ರಕಾರ ನಿವೃತ್ತರ ನಿವೃತ್ತಿ ವೇತನ ಹಾಗೂ ಭತ್ಯೆಗಳ ಸಲುವಾಗಿ ವೆಚ್ಚ ಮಾಡುವುದನ್ನು ಶಾಸನಸಭೆಗೆ ಹಾಗೂ ಸಾರ್ವಜನಿಕರಿಗೆ ರಾಜ್ಯ ಸರಕಾರ ತಿಳಿಸಿರುತ್ತದೆ. ಆದರೆ ಪ್ರತಿವರ್ಷ ರಾಜ್ಯ ಸರಕಾರದ ನೌಕರರಿಗೆ ಕೊಡುವ ವೇತನ ಭತ್ಯೆ ಅಂದಾಜು ಹಾಗೂ ವಾಸ್ತವಿಕ ಮೊತ್ತದ ಅಂಕಿ-ಸಂಖ್ಯೆ ವಿವರಗಳನ್ನು ಪ್ರತ್ಯೇಕ ಲೆಕ್ಕಶೀರ್ಷಿಕೆಯ ಪ್ರಕಾರ ಸರಕಾರವು ತಾನೇ ಏಕೆ ತಿಳಿದುಕೊಳ್ಳಲಾರದು? ಹಾಗೂ ಶಾಸಕಾಂಗ ಮತ್ತು ಸಾರ್ವಜನಿಕರಿಗೆ ಗೊತ್ತುಮಾಡಿಕೊಡಬಾರದು? 83-84ರಲ್ಲಿ ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಖ್ಯೆ 4.14 ಲಕ್ಷ ಇದ್ದದ್ದು, 93-94ರಲ್ಲಿ 5.77 ಲಕ್ಷಕ್ಕೆ ಏರಿ 96-97ರಲ್ಲಿ 6.72 ಲಕ್ಷಕ್ಕೆ ಅತಿಯಾಗಿ ಏರುತ್ತಿದ್ದು ಇನ್ನೂ ಏರುತ್ತಲೇ ಇದೆ. 95-96ರಲ್ಲಿ ಕರ್ನಾಟಕ ರಾಜ್ಯದ ಸರಕಾರಿ ನಿವೃತ್ತರ ಸಂಖ್ಯೆ 2.94 ಲಕ್ಷ ಇದ್ದದ್ದು 98-99ರಲ್ಲಿ 3.41 ಲಕ್ಷಕ್ಕೆ ಏರಿದೆ. ಹಳೇ ನಿವೃತ್ತಿ ವೇತನದಂತೆ 98-99ರಲ್ಲಿ ಬಜೆಟ್ ಶೀರ್ಷಿಕೆ 2071ರ ಪ್ರಕಾರ 1041-00 ಕೋಟಿ ಕೊಡಬೇಕಾಗುತ್ತದೆ. ಹೊಸ ನಿವೃತ್ತಿ ವೇತನ ಪ್ರಕಾರ ಇದು ಇನ್ನೂ ಹೆಚ್ಚಾಗುತ್ತದೆ. 97-98, 98-99ರಲ್ಲಿ ನೌಕರರಿಗೆ ಹಳೇ ಹಾಗೂ ಹೊಸ ವೇತನದಂತೆ ಎಷ್ಟು ವೇತನ ಭತ್ಯೆ ಎಂಬುದು ಬಜೆಟ್‌ನಲ್ಲಿ ಈ ಬಗ್ಗೆ ಶೀರ್ಷಿಕೆಯೇ ಇಲ್ಲದ್ದರಿಂದ ಈ ಮೊತ್ತ ಎಷ್ಟೆಂಬುದು ಹಣಕಾಸು ಮಂತ್ರಿಗಾಗಲೀ, ನೌಕರರಿಗಾಗಲೀ, ಶಾಸಕರಿಗಾಗಲೀ ತಿಳಿಯಲಿಕ್ಕೆ ಸಾಧ್ಯವೇ ಇಲ್ಲ. ಸರಕಾರಿ ಪ್ರಕಟಣೆಯ ಪ್ರಕಾರ ಈ ವರ್ಷ ಹೊಸ ವೇತನ 5,500=00 ಕೋಟಿ ಏರುವುದರಿಂದ, 98-99ರ ರೆವಿನ್ಯೂ ಆದಾಯ 12979.56 ಕೋಟಿಯಲ್ಲಿ ಶೇಕಡಾ 42.38 ಅಥವಾ ಹೆಚ್ಚು ಆಗುತ್ತದೆ. ರೆವಿನ್ಯೂ ಆದಾಯ ಸಂಪೂರ್ಣವಾಗಿ ಬಂದರೆ ಮಾತ್ರ. ಅದು ಬರಲಿಕ್ಕೆ ಸಾಧ್ಯವೇ ಇಲ್ಲ. 3.41 ಲಕ್ಷ ನಿವೃತ್ತರ ನಿವೃತ್ತಿ ವೇತನ ಭತ್ಯೆಗಳ ವೆಚ್ಚಕ್ಕಾಗಿ ಬಜೆಟ್‌ನಲ್ಲಿ ಪ್ರತ್ಯೇಕ 2071 ಶೀರ್ಷಿಕೆ ಇರುವಾಗ 6.72 ಲಕ್ಷ ನೌಕರರ ವೇತನ ಭತ್ಯೆಗಳ ವೆಚ್ಚದ ಸಲುವಾಗಿಯೇ ಪ್ರತ್ಯೇಕ ಲೆಕ್ಕಶೀರ್ಷಿಕೆಯನ್ನು ಪ್ರಾರಂಭಿಸಿ ವಾರ್ಷಿಕ ಬಜೆಟ್‌ನಲ್ಲಿ ಅಂದಾಜು, ಪರಿಷ್ಕೃತ ಅಂದಾಜು ಹಾಗೂ ವಾಸ್ತವಿಕ ವೆಚ್ಚದ ವಿವರಗಳು ಇರುವುದು ಅತಿಮುಖ್ಯ. ಕೇಂದ್ರ ಹಾಗೂ ಎಲ್ಲಾ ರಾಜ್ಯ ಸರಕಾರಗಳ ಹೊಣೆಗಾರ ಮಂತ್ರಿ ಹಾಗೂ ವಿತ್ತ ಮಂತ್ರಿಗಳು, ಸಂಸದರು, ಶಾಸಕರು ಹಾಗೂ ಪಂಡಿತರಾದ ಹಣಕಾಸು ಇಲಾಖೆಗಳ ಐ.ಎ.ಎಸ್. ಅಧಿಕಾರಿಗಳು ಈ ರಾಷ್ಟ್ರದ ಹಾಗೂ ರಾಜ್ಯಗಳ ಹದಗೆಟ್ಟ ಹಣಕಾಸು ಪರಿಸ್ಥಿತಿಯ ಅರಿವು ಮಾಡಿಕೊಂಡು ಈ ರಾಷ್ಟ್ರದ ಹಾಗೂ ರಾಜ್ಯಗಳ ರೆವಿನ್ಯೂ ಆದಾಯದಲ್ಲಿ ಆಡಳಿತಕ್ಕೆ

ಎಷ್ಟು ಹಣ, ಅಭಿವೃದ್ಧಿಗೆ ಎಷ್ಟು ಹಣವೆಂಬ ಖಚಿತ ವಾಸ್ತವಿಕ ಅಂಶಗಳನ್ನು ತಿಳಿದುಕೊಂಡು ನೌಕರರಿಗೆ ಹಾಗೂ ಸಾರ್ವಜನಿಕರಿಗೆ ಗೊತ್ತುಮಾಡಿಕೊಟ್ಟು ಮುನ್ನಡೆಯುವುದು ಅಗತ್ಯ. ಅನೇಕ ಪರರಾಷ್ಟ್ರ ಸರಕಾರಗಳು ತಮ್ಮ ತಮ್ಮ ವಾರ್ಷಿಕ ಆಯವ್ಯಯ ಪತ್ರಗಳಲ್ಲಿ ತಮ್ಮ ಸರಕಾರಿ ನೌಕರರಿಗೆ ವೆಚ್ಚ ಮಾಡುವ ವೇತನ ಭತ್ಯೆಯ ಮೊತ್ತಗಳ ವಿವರಗಳನ್ನು ತಿಳಿಸುತ್ತವೆ ಎಂಬುದನ್ನು ನಮ್ಮ ರಾಷ್ಟ್ರದ ಎಲ್ಲಾ ಸರಕಾರಗಳು ಅರಿತರೆ ಒಳ್ಳೆಯದು.

❑

ಕೇಂದ್ರದ ಆದಾಯ - ಒಂದು ಚಿತ್ರ

ಭಾರತ ದೇಶದ ಜನತೆಯ ಮೂಲವೃತ್ತಿ ಕೃಷಿ, ಕೃಷಿ ಉದ್ಯಮ ನೆಲಕಚ್ಚಿದೆ. ಕೃಷಿಕ ಸಾಲಗಾರನಾಗಿದ್ದಾನೆ, ಕೃಷಿ ಬೆಳೆಯ ಉತ್ಪಾದನಾ ವೆಚ್ಚ ಅತಿ ಹೆಚ್ಚಿದೆ. ಕೇಂದ್ರ ಅಥವಾ ರಾಜ್ಯ ಸರಕಾರಗಳ ಸವಲತ್ತು, ಸಬ್ಸಿಡಿಗಳು ರೈತನಿಗಿಲ್ಲವಾದ್ದರಿಂದ ರೈತ ಉತ್ಪಾದಿಸಿದ ಉತ್ಪಾದನೆಗೆ ಹೆಚ್ಚಿನ ಬೆಲೆ ಮಾರುಕಟ್ಟೆಗಳಲ್ಲಿ ಏರಿ ರೈತನಿಗೆ ಲಾಭವಾಗುವ ಅಥವಾ ನಷ್ಟವಾಗದಿರುವ ಸಂದರ್ಭ ಬಂದಾಗ ಈ ರಾಷ್ಟ್ರದ ಕೇಂದ್ರದ ಐ.ಎ.ಎಸ್. ಅಧಿಕಾರಿಗಳು ಮಂತ್ರಿಗಳನ್ನು ಹಾಗೂ ಆಮದು ದಲ್ಲಾಳಿಗಳನ್ನು ಮಿಲಾಫಿ ಮಾಡಿಕೊಂಡು ಪರರಾಷ್ಟ್ರದಿಂದ ಸಕ್ಕರೆ, ಗೋಧಿ, ರೇಷ್ಮೆ, ಎಣ್ಣೆಕಾಳು, ಎಣ್ಣೆ, ಬಟ್ಟೆ ಇತ್ಯಾದಿ ವಸ್ತುಗಳನ್ನು ಆಮದು ಮಾಡಿಕೊಂಡು ಈ ದೇಶದಲ್ಲಿ ಉತ್ಪಾದನೆಯಾದ ವಸ್ತುಗಳಿಗೆ ಬೆಲೆ ಕಡಿಮೆಯಾಗುವಂತೆ ಹಾಗೂ ಹೇರಳ ಸಂಗ್ರಹ ಉಳಿದು ಆಮದು ವಸ್ತುಗಳು ಹೆಚ್ಚಿನ ಪ್ರಮಾಣದಲ್ಲಿ ಕಡಿಮೆ ಬೆಲೆಗೆ ಮಾರಾಟವಾಗುವಂತೆ ಮಾಡಿ ಈ ರಾಷ್ಟ್ರದ ರೈತ ಹಾಗೂ ರೈತನ ಉತ್ಪಾದನೆ ಸರ್ವನಾಶವಾಗುವಂತೆ ಮಾಡಲಾಗುತ್ತಿದೆ. ಪರದೇಶಗಳಲ್ಲಿಯ ರೈತರಿಗೆ ಅಲ್ಲಲ್ಲಿಯ ಸರಕಾರಗಳು ತಮ್ಮ ಆಯವ್ಯಯದಲ್ಲಿ ಸಾಕಷ್ಟು ಹಣವನ್ನು ವಿವಿಧ ರೀತಿಯಲ್ಲಿ ಸಹಾಯ ಸಬ್ಸಿಡಿ ಕೊಡುತ್ತಿರುವುದರಿಂದ ಅಲ್ಲಿಯ ಒಕ್ಕಲುತನ ಉತ್ಪಾದನೆ ನಮ್ಮ ರಾಷ್ಟ್ರದ ಒಕ್ಕಲುತನ ಉತ್ಪಾದನೆಗಿಂತ ಭಾರೀ ಕಡಿಮೆ ವ ಸೋಡಿ ಬೆಲೆಗೆ ಸಿಗುವಂತಾಗುತ್ತದೆ. ಪರದೇಶದ ರೈತರ ಉತ್ಪಾದನೆಗೆ ಭಾರತದಲ್ಲಿ ಭಾರೀ ಲಾಭದಾಯಕ ಬೆಲೆ ಸಿಕ್ಕು, ಪರದೇಶದ ರೈತರು ಉದ್ಧಾರರಾಗುತ್ತಾರೆ ಹಾಗೂ ನಮ್ಮ ದೇಶದ ರೈತ ಹಾಗೂ ರೈತನ ಉತ್ಪಾದನೆ ಸರ್ವನಾಶವಾಗುತ್ತಿರೆ. ಸಣ್ಣ ರಾಷ್ಟ್ರಗಳಾದ ಪಾಕಿಸ್ತಾನದಿಂದ ಸಕ್ಕರೆ, ಆಸ್ಟ್ರೇಲಿಯಾದಿಂದ ಗೋಧಿ, ಇನ್ನೂ ಕೆಲವು ರಾಷ್ಟ್ರಗಳಿಂದ ಎಣ್ಣೆ, ಎಣ್ಣೆಕಾಳು ಹಾಗೂ ರೇಷ್ಮೆಯನ್ನು ಆಮದು ಮಾಡಿಕೊಳ್ಳುತ್ತಿರುವುದು ಹಾಗೂ ನಮ್ಮ ದೇಶದ ಉತ್ಪಾದಕರನ್ನು ಹಾಳುಮಾಡುತ್ತಿರುವ ಈ ದೇಶದ ಸರಕಾರವನ್ನು ನಡೆಸುವ ಹೊಣೆಗಾರರಿಗೆ ಭೂಷಣವಲ್ಲ.

ಕೇಂದ್ರ ಸರಕಾರದ ಕರ ಹಾಗೂ ಕರೇತರ ಒಟ್ಟು ರೆವಿನ್ಯೂ ಆದಾಯ 2.48 ಲಕ್ಷ ಕೋಟಿ ಇದೆ. ಈ ಮೊತ್ತದಲ್ಲಿ 75000 ಕೋಟಿ ಬಡ್ಡಿಗಾಗಿ, 35897 ಕೋಟಿ ರಾಷ್ಟ್ರ

ರಕ್ಷಣೆಗಾಗಿ, 32108 ಕೋಟಿ ರೈಲ್ವೆಗಾಗಿ, 53912 ಕೋಟಿ ಎಲ್ಲಾ ರಾಜ್ಯಗಳಿಗೆ ಸಹಾಯಧನವಾಗಿ, 20384 ಕೋಟಿ ಅಂಚೆ ಮತ್ತು ತಂತಿ ಸಂಪರ್ಕಗಳಿಗಾಗಿ, 10923 ಕೋಟಿ ನಿವೃತ್ತ ನೌಕರರ ನಿವೃತ್ತಿ ವೇತನ ಭತ್ಯೆಗಾಗಿ - ಹೀಗೆ ಆರು ಪ್ರಮುಖ ಇಲಾಖೆಗಳಿಗೆ ಒಟ್ಟು 2.26 ಲಕ್ಷ ಕೋಟಿ ಹಣವನ್ನು ಈ ವರ್ಷ ವೆಚ್ಚ ಮಾಡಲಾಗುತ್ತದೆ. ಕೇಂದ್ರ ಸರಕಾರದ ಹಾಲಿ ನೌಕರರಿಗೆ ಬಜೆಟ್ ಮೊತ್ತದಲ್ಲಿ ಎಷ್ಟು ಎಂಬುದು ಯಾರಿಗೂ ಗೊತ್ತಾಗದು. ಈ ದೇಶದಾದ್ಯಂತ ನೆಲಕಚ್ಚಿರುವ ಗ್ರಾಮಾಂತರ ರೈತ, ರೈತ ಕಾರ್ಮಿಕ ಇತ್ಯಾದಿ ದುರ್ದೈವಿಗಳಿಗೆ ಕೃಷಿ ಮತ್ತು ಸಂಬಂಧಪಟ್ಟ ಚಟುವಟಿಕೆಗಳಿಗೆ 15704 ಕೋಟಿ, ಗ್ರಾಮೀಣ ಅಭಿವೃದ್ಧಿಗೆ 5374 ಕೋಟಿ, ವಿಶೇಷ ಪ್ರದೇಶ ಅಭಿವೃದ್ಧಿಗೆ 860 ಕೋಟಿ, ನೀರಾವರಿ ಮತ್ತು ಪ್ರವಾಹ ನಿಯಂತ್ರಣಕ್ಕೆ 280 ಕೋಟಿ, ವಿದ್ಯುತ್‌ಗೆ 2710 ಕೋಟಿ, ಉದ್ಯಮ ಮತ್ತು ಖನಿಜಕ್ಕಾಗಿ, 8799 ಕೋಟಿ, ಶಿಕ್ಷಣಕ್ಕಾಗಿ 4407 ಕೋಟಿ, ವೈದ್ಯಕೀಯ ಜನಾರೋಗ್ಯ ಕುಟುಂಬ ಕಲ್ಯಾಣಕ್ಕಾಗಿ 2000 ಕೋಟಿ, ಎಸ್.ಸಿ., ಎಸ್.ಟಿ. ಹಿಂದುಳಿದ ವರ್ಗ ಕಲ್ಯಾಣಕ್ಕಾಗಿ 280 ಕೋಟಿ, ಸಾಮಾಜಿಕ ಭದ್ರತೆ ಮತ್ತು ಕಲ್ಯಾಣಕ್ಕಾಗಿ 1766 ಕೋಟಿ, ನೈಸರ್ಗಿಕ ವಿಪತ್ತುಗಳ ಪರಿಹಾರಕ್ಕಾಗಿ 75 ಕೋಟಿ, ವಸತಿಗಾಗಿ 1849 ಕೋಟಿ, ನೀರು ಪೂರೈಕೆ ಮತ್ತು ನೈರ್ಮಲ್ಯಕ್ಕಾಗಿ 606 ಕೋಟಿ, ಹೀಗೆ ಅತಿ ಕಡಿಮೆ ಹಣ ಕೊಟ್ಟು ಗ್ರಾಮಾಂತರ ಜನತೆಯ ಸರ್ವಾಂಗೀಣ ಪ್ರಗತಿ ವ ಕಲ್ಯಾಣ ಮಾಡಿಸುತ್ತೇವೆಂದರೆ ಅದು ಹೇಗೆ ಸಾಧ್ಯ? ಕೇಂದ್ರ ಸರಕಾರದ ಒಟ್ಟು ರೆವಿನ್ಯೂ ಆದಾಯ 2.48 ಲಕ್ಷ ಕೋಟಿಯಲ್ಲಿ ಮೇಲೆ ಹೇಳಿದ ಹಾಗೆ ವೆಚ್ಚವಾಗುತ್ತಿದ್ದರೂ ಆಯವ್ಯಯ ಪತ್ರದಲ್ಲಿ ಈ ಮೊತ್ತದಲ್ಲಿ ಕೇಂದ್ರ ಸರಕಾರದ ನೌಕರರಿಗೆ ವೇತನ ಹಾಗೂ ಇತರೆ ವಿವಿಧ ಭತ್ಯೆಗಳಿಗೆ ಮಾಡುವ ವೆಚ್ಚ ಎಷ್ಟೆಂಬುದು ಎಲ್ಲಿಯೂ ಸಿಗುವುದಿಲ್ಲ ಏಕೆ? ಅನಗತ್ಯ ಆಮದು ಪ್ರೋತ್ಸಾಹಿಸದೆ ಭಾರತದ ರೈತ ಹಾಗೂ ರೈತನ ಬೆಳೆಯನ್ನು ಸರಕಾರ ಪ್ರೋತ್ಸಾಹಿಸಬೇಕು. ದುಂದುವೆಚ್ಚ ಮಾಡುತ್ತ 4.13 ಲಕ್ಷ ಕೋಟಿ ಸಾರ್ವಜನಿಕ ಸಾಲ ಮಾಡುತ್ತ, 75 ಸಾವಿರ ಕೋಟಿ ಬಡ್ಡಿ ಕೊಡುತ್ತ ಹೋಗುವುದು ಸರಿಯಲ್ಲ. ರೇಲ್ವೆ, ಅಂಚೆ, ತಂತಿ, ಸಂಪರ್ಕ ಇಲಾಖೆಗಳಿಂದ ಯಾವುದೇ ಲಾಭ ಪಡೆಯದೆ ಹೋಗುವುದು ಸರಿಯಲ್ಲ. ಭಾರತ ಮಾತೆಯ ಗಡಿರಕ್ಷಣೆ ಮಾಡದೆ 78114 ಚವರಸ್ ಕಿಲೋಮೀಟರ್ ಕ್ಷೇತ್ರವನ್ನು ಪಾಕಿಸ್ತಾನ ಆಕ್ರಮಣ ಮಾಡಿಕೊಂಡಿದ್ದರೂ, 5180 ಚ.ಕಿ.ಮೀ. ಕ್ಷೇತ್ರವನ್ನು ಪಾಕಿಸ್ತಾನ ಚೀನಾದೇಶಕ್ಕೆ ದಾನ ಮಾಡಿದ್ದರೂ, 37555 ಚ.ಕಿ.ಮೀ. ಕ್ಷೇತ್ರವನ್ನು ಚೀನಾದೇಶ ಪಾಕ್-ಚೀನಾ ಆಕ್ರಮಿತ ಮಾಡಿಕೊಂಡಿದ್ದರೂ ಯಾವುದೇ ಕ್ರಮ ತೆಗೆದುಕೊಳ್ಳದೆ ರಕ್ಷಣೆಗಾಗಿ 32000 ಕೋಟಿ ವೆಚ್ಚ ಮಾಡುವುದು ಎಷ್ಟರ ಮಟ್ಟಿಗೆ ಸಮಂಜಸವೆಂಬುದನ್ನು ಹೊಣೆ ಹೊತ್ತವರೇ ಹೇಳಬೇಕು.

ಕೇಂದ್ರದ ಆಯವ್ಯಯ ಪತ್ರದಲ್ಲಿ 95-96, 96-97, 98-99 ರಲ್ಲಿ ರೇಲ್ವೆ ಇಲಾಖೆಯ ಶೀರ್ಷಿಕೆಯಲ್ಲಿ ವಾಸ್ತವಿಕ ಜಮಾದಷ್ಟೆ ವಾಸ್ತವಿಕ ಬಟವಾಡೆ ಮೊತ್ತ ಇದ್ದು, ಇದು ಒಂದೇ ಇರಲಿಕ್ಕೆ ಹೇಗೆ ಸಾಧ್ಯ? ರೇಲ್ವೆ ಇಲಾಖೆಯಿಂದ ವಾಸ್ತವಿಕ ಅಂಕಿ-ಸಂಖ್ಯೆ ಪಡೆಯದೆ ಜಮಾದಷ್ಟೇ ಮೊತ್ತ ಬಟವಾಡೆ ಆಗಿದೆ. ಈ ರೇಲ್ವೆ ಇಲಾಖೆ

ಲಾಭದಲ್ಲಿದೆಯೇ ಅಥವಾ ನಷ್ಟದಲ್ಲಿದೆಯೇ ಎಂಬುದು ಸಂಸತ್ತಿಗೆ, ಸಂಸದರಿಗೆ ಹಾಗೂ ಸಾರ್ವಜನಿಕರಿಗೆ ಹೇಗೆ ಗೊತ್ತಾಗಬೇಕು? ಅಂತೆಯೇ ತಂತಿ ಸಂಪರ್ಕ ಇಲಾಖೆಯ ಬಾಬ್ತು 95-96 ರಿಂದ 98-99ರ ವರೆಗೆ ಜಮೆಯಾದಷ್ಟೆ ಮೊತ್ತವನ್ನು ಬಟವಾಡೆ ಮೊತ್ತವನ್ನಾಗಿ ಕೇಂದ್ರದ ಆಯವ್ಯಯ ಪತ್ರದಲ್ಲಿ ತೋರಿಸಲಾಗಿದೆ ಇದು ಕೂಡ ಹೇಗೆ ಸರಿ?

ಕೇಂದ್ರ ಸರಕಾರಗಳೆಲ್ಲಾ ರೆವಿನ್ಯೂ ಆದಾಯದಲ್ಲಿ ಮಿತವ್ಯಯ ಮಾಡದೆ ದುಂದುವೆಚ್ಚ ಮಾಡುತ್ತ ನಾಗರಿಕ ಸವಲತ್ತುಗಳನ್ನು ಸಾಕಷ್ಟು ಒದಗಿಸಿದ ರೈತರ ಹಾಗೂ ಜನಸಾಮಾನ್ಯರ ಆರ್ಥಿಕ ಪರಿಸ್ಥಿತಿ ಸುಧಾರಿಸುವಲ್ಲಿ ಹಾಗೂ ಅವರಿಗಾಗಿ ಸಾಕಷ್ಟು ಹಣ ವೆಚ್ಚ ಮಾಡದೆ ಸರಕಾರಗಳೆಲ್ಲ ಸಣ್ಣಪುಟ್ಟದರಿಂದ ಆಂತರಿಕ ಹಾಗೂ ಅಂತರ್‍ರಾಷ್ಟ್ರೀಯ ಸಾಲ ಮಾಡುತ್ತ ಆ ಸಾರ್ವಜನಿಕ ಸಾಲ 95-96ರಲ್ಲಿ 1.80 ಲಕ್ಷ ಕೋಟಿ, 96-97ರಲ್ಲಿ 2.10 ಲಕ್ಷ ಕೋಟಿ, 97-98ರಲ್ಲಿ 4.00 ಲಕ್ಷ ಕೋಟಿ, 98-99ರಲ್ಲಿ 4.13 ಲಕ್ಷ ಕೋಟಿ. ಹೀಗೆ ಏರಿಸುತ್ತ ಹೋದರೆ ಪರದೇಶದವರ ಕಣ್ಣಲ್ಲೇ ನಮ್ಮ ದೇಶ ಏನಾಗಿ ಕಾಣುತ್ತದೆ? ಹಿಂದಿನ ಸರಕಾರಗಳೆಲ್ಲ ಈ ದೇಶದ ಹಣಕಾಸು ಹಾಗೂ ಅಭಿವೃದ್ಧಿ ಪರಿಸ್ಥಿತಿಯನ್ನು ಹಾಗೂ ಈ ದೇಶದ ವ್ಯವಸಾಯಗಾರ, ಉದ್ಯಮಿ, ಜನಸಾಮಾನ್ಯರ ಆರ್ಥಿಕ ಹಾಗೂ ಅಭಿವೃದ್ಧಿ ಪರಿಸ್ಥಿತಿಯನ್ನು ಹದಗೆಡಿಸಿ ದುಃಸ್ಥಿತಿಗೆ ದೂಡಿ ಅಧಿಕಾರವನ್ನು ಕಳೆದುಕೊಂಡಿವೆ. ಈ ದೇಶದ ಸಾರ್ವಭೌಮ ಜನತೆ ಹಿಂದಿನ ಸರಕಾರಗಳ ಕೈಯಿಂದ ಅಧಿಕಾರ ಕಸಿದುಕೊಂಡು ಈಗಿನ ಕೇಂದ್ರ ಸರಕಾರದ ಕೈಯಲ್ಲಿ ಹಿರಿಯಾಸೆಯಿಂದ ಕೊಟ್ಟಿದೆ. ಜನತೆಯ ಆಶೋತ್ತರಗಳನ್ನು ಅರಿತು ಈಗಿನ ಕೇಂದ್ರ ಸರಕಾರ ತನ್ನ ಜವಾಬ್ದಾರಿ ಹೊಣೆಗಾರಿಕೆಯ ಅರಿವನ್ನು ಗಮನದಲ್ಲಿಟ್ಟುಕೊಂಡು ಜನತೆ ಕೊಟ್ಟಿರುವ ಅಧಿಕಾರದ ಸದುಪಯೋಗ ಮಾಡಿಕೊಂಡು ಈ ದೇಶಕ್ಕೆ ಸುಭದ್ರ, ಸಮರ್ಥ ಹಾಗೂ ಪರಿಣಾಮಕಾರಿ ಸರಕಾರವಾಗಿ ನಡೆಯುವಲ್ಲಿ ಹಾಗೂ ಜನತೆಯ ಪ್ರೀತಿ-ವಿಶ್ವಾಸ ಗಳಿಸುವ ಬಗ್ಗೆ ಎಚ್ಚರ ವಹಿಸುವುದಗತ್ಯ. ಹೆಚ್ಚುತ್ತಿರುವ ಸಾಲ, ಬಡ್ಡಿ, ವೇತನ, ನಿವೃತ್ತಿ ವೇತನ, ಭತ್ಯೆ, ರಕ್ಷಣಾ ವೆಚ್ಚಗಳನ್ನು ಕಡಿಮೆ ಮಾಡಬೇಕು. ರೇಲ್ವೆ, ಅಂಚೆ, ತಂತಿ, ಸಂರ್ಪಕ ಇಲಾಖೆಗಳು ಲಾಭದಾಯಕವಾಗುವಂತೆ ಮಾಡಬೇಕು. ಕೃಷಿ ಉತ್ಪಾದನೆಗಳಿಗೆ ಹೆಚ್ಚಿನ ಸಹಾಯ ಸಬ್ಸಿಡಿ ಸವಲತ್ತುಗಳನ್ನು ನೀಡಿ ಉತ್ಪಾದನೆ ಹೆಚ್ಚುವಂತೆ ಮಾಡಬೇಕು. ಕುಂಟು ನೆಪ ಮಾಡಿ ಪರದೇಶಗಳಿಂದ ಕೃಷಿ ಉತ್ಪಾದನೆಗಳನ್ನು ಅನಗತ್ಯವಾಗಿ ಆಮದು ಮಾಡಿಕೊಂಡು ಆಮದು ದಲ್ಲಾಳಿಗಳಿಗೆ ಲಾಭ ಮಾಡಿಕೊಡುವುದನ್ನು ಬಿಟ್ಟು ಬಿಡಬೇಕು. ಭಾರತದ ಕೃಷಿ ಉತ್ಪಾದನೆಗೆ ಉತ್ತಮ ಬೆಲೆ ಬಂದು ರೈತರಿಗೆ ಲಾಭದಾಯಕವಾಗವ ಸಮಯ ಸಂದರ್ಭದಲ್ಲಿ ಗ್ರಾಹಕರಿಗೆ ಅದರಲ್ಲೂ ದಿಲ್ಲಿ, ಮುಂಬಯಿ, ಕಲಕತ್ತಾ, ಬೆಂಗಳೂರು ಮೊದಲಾದ ನಗರಗಳಲ್ಲಿಯ ಗ್ರಾಹಕರಿಗೆ ಕಡಿಮೆ ಬೆಲೆಯಲ್ಲಿ ಗ್ರಾಹಕ ವಸ್ತುಗಳು ಸಿಗಬೇಕಾದಲ್ಲಿ ಆಮದು ವಸ್ತುಗಳಿಗೆ ಮಾರು ಹೋಗದೆ ಕೇಂದ್ರ ಸರಕಾರ ಹೆಚ್ಚಿನ ಸಬ್ಸಿಡಿ ಕೊಟ್ಟು ಅವರಿಗೆ ನಾಗರಿಕ ಸರಬರಾಜು ವಸ್ತುಗಳನ್ನು ಕಡಿಮೆ ಬೆಲೆಗೆ ಸಿಗುವಂತೆ ಮಾಡಬೇಕು. ಒಟ್ಟಿನ ಮೇಲೆ ಈ ದೇಶದಲ್ಲಿಯ

ಕೃಷಿಕ, ಕೃಷಿ ಉತ್ಪನ್ನ, ಗ್ರಾಹಕರೆಲ್ಲರನ್ನೂ ರಕ್ಷಿಸುವುದು ಸರಕಾರದ ಕರ್ತವ್ಯ. ರಾಷ್ಟ್ರದಲ್ಲಿಯ ಕೃಷಿ ಇಲಾಖೆ ಕೃಷಿಕರಿಗೆ ಮಾರಕವಾಗಿರುವುದನ್ನು ತಪ್ಪಿಸುವುದಗತ್ಯ. ವಿಶಾಲವಾದ ಭಾರತದೇಶ ಸಣ್ಣ ದೇಶ ಪಾಕಿಸ್ತಾನದಿಂದ ಸಕ್ಕರೆ ಆಮದು ಮಾಡಿಕೊಳ್ಳುವ ಪರಿಸ್ಥಿತಿಯನ್ನು ನೋಡಿದರೆ ಕೃಷಿ ಇಲಾಖೆಗೆ ನಾಚಿಕೆ ಬರಬೇಕು. ಪ್ರಪಂಚದಲ್ಲಿಯ ಪರರಾಷ್ಟ್ರಗಳ ದೃಷ್ಟಿಯಲ್ಲಿ ನಮ್ಮ ದೇಶವೇನಾಗಿದೆ ಎಂಬುದನ್ನು ಭಾರತದ ಹೊಣೆಗಾರರೆಲ್ಲರೂ ಸ್ವಲ್ಪವಾದರೂ ಚಿಂತಿಸಿ ದೂರಾಲೋಚನೆ ಮಾಡಿ ಭಾರತದ ಭವಿಷ್ಯದ ಬಗ್ಗೆ ಕಾಳಜಿ ವಹಿಸುವುದಗತ್ಯ.

❑

ಬಡವರ ಬಗ್ಗೆ ಕೇಂದ್ರದ ಕಾಳಜಿ

"ಯಾವ ರಾಜ ಬಂದರೂ ರಾಗಿ ಬೀಸುವುದು ತಪ್ಪದು" ಎಂಬ ಗ್ರಾಮೀಣ ಗಾದೆ ಪುರಾತನ ಕಾಲದಿಂದ ಇದೆ. ನಮ್ಮ ರಾಷ್ಟ್ರದಲ್ಲಿ ಪ್ರಜಾರಾಜ್ಯ ವ್ಯವಸ್ಥೆ ಬಂದು ಅರ್ಧ ಶತಮಾನ ಮುಗಿಯಲಿಕ್ಕೆ ಬಂದಿದೆ. ಹಿಂದಿನ ಪಾಳೆಗಾರ ರಾಜರು ಹೋಗಿ ಪ್ರಜಾರಾಜರು ನಮ್ಮ ದೇಶವನ್ನು ಆಳುತ್ತಿದ್ದಾರೆ. ಪ್ರಜಾರಾಜರ ಪ್ರತಿನಿಧಿ-ರಾಜರೇ ಇಂದಿನ ಮಂತ್ರಿ, ಮಹಾಮಂತ್ರಿ, ಶಾಸಕ, ಸಂಸದರು, ಪ್ರಜಾತಂತ್ರ ವ್ಯವಸ್ಥೆಯಲ್ಲಾದರೂ ರಾಗಿ ಬೀಸುವ ಬಡತನ ಹೋಗಿ ಸುಖಿಯಾಗಿರುವ ಸಿರಿವಂತಿಕೆ ಬಂದು ಹಿಂದಿನ ಗಾದೆ ಮಾತು ಈಗ ಹುಸಿಯಾಗಬಹುದಾಗಿತ್ತು. ಆದರೆ ಅದು ಹುಸಿಯಾಗಿಲ್ಲ. ಅದು ಜನತೆಯ ದುರ್ದೈವ. ಹಿಂದಿನ ರಾಜ ಮಹಾರಾಜರು ಜನತೆಯ ಮೇಲೆ ದಂಡೆತ್ತಿ ಹೋಗಿ ಸುಲಿಗೆ ಮಾಡಿ ಕೊಳ್ಳೆ ಹೊಡೆದು ಹಣ ಸಂಪಾದಿಸುತ್ತಿದ್ದಾಗ ಜನತೆಯ ಜೀವನ ಗಂಡಾಂತರ ದಲ್ಲಿದ್ದು ಬಡತನದ ಬೇಗೆಯಲ್ಲಿ ಬೆಂಡಾಗಿದ್ದರು. ಈಗಿನ ಪರಿಸ್ಥಿತಿ ಬದಲಾಗಿದೆ. ಪ್ರಜಾರಾಜರೇ ಇಂದು ರಾಜ್ಯಮಟ್ಟದಲ್ಲಿ ಹಾಗೂ ರಾಷ್ಟ್ರಮಟ್ಟದಲ್ಲಿ ಸರಕಾರ ನಡೆಸುತ್ತ ರಾಜ್ಯ ಹಾಗೂ ರಾಷ್ಟ್ರ ಸರಕಾರಗಳು ಹೇರಳವಾದ ತೆರಿಗೆ ಹಾಗೂ ತೆರಿಗೆಯೇತರ ಕರವನ್ನು ಜನತೆಯಿಂದ ವಸೂಲಿ ಮಾಡುತ್ತಿದ್ದು ಅದು ಸಾಲದೆ ಹೇರಳವಾದ ವಿವಿಧ ಮೂಲದ ರಾಷ್ಟ್ರೀಯ ಹಾಗೂ ಅಂತರ್ರಾಷ್ಟ್ರೀಯ ಸಾಲವನ್ನು ಪಡೆಯುತ್ತಿದ್ದರೂ ಈ ಎಲ್ಲ ಸಂಚಿತ ನಿಧಿ ಮೊತ್ತ ಆಡಳಿತ ಅಭಿವೃದ್ದಿಗೆ ಸಾಲದೆ ರಾಜ್ಯ ಹಾಗೂ ಕೇಂದ್ರ ಸರಕಾರ ಗಳು ಸಾಲ ತೀರಿಸಲಿಕ್ಕಾಗದೆ ಪ್ರತಿವರ್ಷ ಸಾಲದ ಮೊತ್ತ ಹೆಚ್ಚುತ್ತ ಕೊಡುತ್ತಿರುವ ಬಡ್ಡಿ ಹೆಚ್ಚುತ್ತ ಸರಕಾರಗಳು ಆರ್ಥಿಕ ಸಂಕಷ್ಟದಲ್ಲಿ ಸಿಲುಕಿವೆ. ಅಭಿವೃದ್ದಿಗೆ ಹಣವಿಲ್ಲದೆ ಅಂದಾಜು ಆದಾಯ ಕಡಿಮೆಯಾಗಿ ಅಂದಾಜು ವೆಚ್ಚ ಕಡಿಮೆಯಾಗಿ ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ದಿಯ ಸೇವೆಗಳು ಕುಂಠಿತಗೊಳ್ಳುತ್ತ ಹೊರಟಿವೆ. ಸರಕಾರಗಳ ಆದಾಯ ಆಡಳಿತ ಹಾಗೂ ಅಭಿವೃದ್ಧಿಯೇತರ ಕಾರ್ಯಗಳಿಗೆ ಮಾತ್ರ ವೆಚ್ಚವಾಗುತ್ತ ಅಭಿವೃದ್ಧಿ ಕಾರ್ಯಗಳಿಗೆ ಹಣವೇ ಇಲ್ಲದಾಗುತ್ತಿದೆ. ಈ ಬಗ್ಗೆ ಬಹುತೇಕ ರಾಜಕಾರಣಿಗಳು ಹೊಣೆಗಾರ ಸ್ಥಾನದಲ್ಲಿರುವವರು ಚಿಂತಿಸದೆ ದೂರಾಲೋಚನೆ ಮಾಡದೆ ನಿಶ್ಚಿಂತೆಯಿಂದ ಆಡಳಿತ ಮಾಡುತ್ತಿರುವುದು ಪ್ರಜಾತಂತ್ರ ವ್ಯವಸ್ಥೆಯ ವಿಪರ್ಯಾಸ.

ಕೇಂದ್ರ ಸರಕಾರ ಪ್ರತಿವರ್ಷ ಹಣಕಾಸು ಖೋತಾ ಎದುರಿಸುತ್ತ ಜನಸಾಮಾನ್ಯರ ಸರ್ವಾಂಗೀಣ, ಸಾಮಾಜಿಕ ಹಾಗೂ ಆರ್ಥಿಕ ಕಾರ್ಯಕ್ರಮಗಳನ್ನು ವಿಫಲಗೊಳಿಸುತ್ತ ಸರಕಾರಿ ನೌಕರರ ವೇತನ ಭತ್ಯೆಯನ್ನು ಸಿಕ್ಕಾಬಟ್ಟೆ ಏರಿಸುತ್ತ "ನೌಕರರ ಕಣ್ಣಿಗೆ ಬೆಣ್ಣೆ, ಪ್ರಜೆಗಳ ಕಣ್ಣಿಗೆ ಸುಣ್ಣ" ಸವರಿಸುತ್ತ ಹೋಗುವುದು ಸಾಧುವಲ್ಲ. ಸರಕಾರಿ ನೌಕರರು ಸಾಕಷ್ಟು ವೇತನ ಭತ್ಯೆ ಪಡೆಯುತ್ತ ಸುಖವಾಗಿರುವಾಗ ದೇಶದಲ್ಲಿಯ ಕೋಟ್ಯಾಂತರ ನಿರುದ್ಯೋಗಿಗಳು ಹಳೆಯ ವೇತನ ಭತ್ಯೆಯ ಶೇಕಡಾ 75ರಷ್ಟು ಪಡೆದು ನೌಕರಿ ಮಾಡಲಿಕ್ಕೆ ತಯಾರಿರುವಾಗ ಕೇಂದ್ರ ಸರಕಾರ ಭಾರೀ ಹಣದ ಕೊರತೆಯನ್ನು ಎದುರಿಸುತ್ತಿರುವಾಗ ಸುಮಾರು 15 ಸಾವಿರ ಕೋಟಿಯ ವೇತನ ಭತ್ಯೆಯನ್ನು 5ನೇ ವೇತನ ಸಮಿತಿಯ ಶಿಫಾರಸ್ಸಿನ ಪ್ರಕಾರ ಏರಿಸುವ ಹಾಗೂ ನಿವೃತ್ತಿ ವಯೋಮಿತಿಯನ್ನು ಏರಿಸುವ ಅವಶ್ಯಕತೆಯಾದರೂ ಏನು ಇತ್ತು? ರೈತರು, ಬಡವರು ಹಣಕಾಸಿನ ಬಿಕ್ಕಟ್ಟಿನಲ್ಲಿದ್ದು ಸಾಲದಲ್ಲಿ ಮುಳುಗಿ ಸಾಲ ತೀರಿಸುವ ಹಾಗೂ ಬಡ್ಡಿ ತೆತ್ತುವ ಸಾಮರ್ಥ್ಯವನ್ನೇ ಕಳೆದುಕೊಂಡು ಬಡತನದಲ್ಲಿ ಒದ್ದಾಡುತ್ತಿರುವಾಗ ಒಕ್ಕಲುತನ ಉದ್ದಿಮೆಯೇ ಸರ್ವನಾಶವಾಗುತ್ತಿರುವಾಗ ಬಡತನ ರೇಖೆಯ ಕೆಳಗಿನವರು ಹಾಗೂ ಬಡತನ ರೇಖೆಯ ಮೇಲಿನವರು ಇತ್ಯಾದಿ ಬಡವರಿಗೆ ಅವರ ಜೀವನಾವಶ್ಯಕ ನಿತ್ಯ ಉಪಯೋಗಿ ಅಕ್ಕಿ, ಗೋಧಿ, ಸಕ್ಕರೆಯ ಪಡಿತರ ಹಾಗೂ ರಸಗೊಬ್ಬರ ಬೆಲೆಯೇರಿಸುತ್ತ ಸುಮಾರು 11 ಸಾವಿರ ಕೋಟಿ ಉಳಿತಾಯ ಮಾಡುವ ಅವಶ್ಯಕತೆಯಾದರೂ ಏನಿತ್ತು? ಗೊಬ್ಬರ, ಕ್ರಿಮಿನಾಶಕ, ಬೀಜಗಳನ್ನು ಕೊಳ್ಳುವ ಆರ್ಥಿಕ ಸಾಮರ್ಥ್ಯವನ್ನೇ ಕಳೆದುಕೊಂಡಿರುವ ರೈತ ಖರೀದಿ ಮಾಡುವ ಯೂರಿಯಾ ಗೊಬ್ಬರಕ್ಕೆ ಸಹ ಬೆಲೆ ಏರಿಸುವ ಗರ್ಜಾದರೂ ಏನಿತ್ತು? ನೌಕರರ ವೇತನ ಭತ್ಯೆ ಏರಿಸಲಿಕ್ಕೆ ಹಾಗೂ ಬಡಜನತೆಯ ಜೀವನಾವಶ್ಯಕ ವಸ್ತುಗಳ ಬೆಲೆ ಏರಿಸಲಿಕ್ಕೆ ಮುಂದಾಗಿರುವ ಸರಕಾರ ಇನ್ನಾದರೂ ಸ್ವಲ್ಪ ಚಿಂತನೆ ಯೋಜನೆ ಮಾಡಿದರೆ ಒಳ್ಳೆಯದು.

ಕೇಂದ್ರ ಸರಕಾರದ ಬಜೆಟ್ ಅಂದಾಜು ಪ್ರಕಾರ ಸಂಚಿತ ನಿಧಿಯನ್ನು ಸಂಪೂರ್ಣ ಪಡೆಯದೆ 95-96ರಲ್ಲಿ 29472.18 ಕೋಟಿ, 96-97ರಲ್ಲಿ 32585-67 ಕೋಟಿ. ಹೇರಳವಾದ ಮೊತ್ತವನ್ನು ಕಡಿಮೆ ಪಡೆದು ಆದಾಯದಲ್ಲಿ ಹಣಕಾಸು ಖೋತಾ ಮಾಡಿದ್ದೇಕೆ? ಈ ಖೋತಾಕ್ಕೆ ಜವಾಬ್ದಾರಿಗಳಾದ ಅಧಿಕಾರಶಾಹಿ ಮೇಲೆ ಕ್ರಮ ತೆಗೆದುಕೊಳ್ಳದೆ ಅವರಿಗೆ ವೇತನ ಭತ್ಯೆ ಹೆಚ್ಚಿಸಿ ನಿವೃತ್ತಿ ವಯೋಮಿತಿ ಹೆಚ್ಚಿಸಿದ್ದು ಅವರಿಗೆ ಕೊಟ್ಟ ಶಹಬಾಸಗಿರಿಯೇ? ಅಂತೆಯೇ ಬಜೆಟ್ ಅಂದಾಜು ಪ್ರಕಾರ ಸಂಚಿತ ನಿಧಿಯನ್ನು ಸಂಪೂರ್ಣ ಬಟವಾಡೆ ಮಾಡದೆ 95-96ರಲ್ಲಿ 39632.93 ಕೋಟಿ, 96-97ರಲ್ಲಿ 35092.71 ಕೋಟಿ ಹೇರಳವಾದ ಮೊತ್ತವನ್ನು ವೆಚ್ಚ ಮಾಡದೆ ಬಿಟ್ಟಿರುವುದು ಕೂಡ ಸಮಂಜಸವೇ? ಇದಕ್ಕೆ ನೌಕರರಶಾಹಿ ಮನೋಭಾವ ಕಾರಣವಲ್ಲವೇ? ಈ ಕರ್ತವ್ಯಲೋಪ ದೋಷವೆಸಗಿದವರ ಮೇಲೆ ಸರಕಾರ ಕ್ರಮ ತೆಗೆದುಕೊಳ್ಳುವುದು ಅತ್ಯಗತ್ಯವಲ್ಲವೇ?

ವ್ಯವಸಾಯ, ಪಶುಸಂಗೋಪನೆ, ಮೀನುಗಾರಿಕೆ, ಅರಣ್ಯ, ಕೃಷಿ ಹಾಗೂ ಆರ್ಥಿಕ ಘಟಕ, ಸಹಕಾರ, ಗ್ರಾಮೀಣ ಅಭಿವೃದ್ಧಿ, ವಿಶೇಷ ಕಾರ್ಯಕ್ರಮ, ಗ್ರಾಮೀಣ ಉದ್ಯೋಗ ಭರವಸೆ, ಇತರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ, ಭೂಸುಧಾರಣೆ, ವಿಶೇಷ ಪ್ರದೇಶ ಅಭಿವೃದ್ಧಿ, ಚಿಕ್ಕ ನೀರಾವರಿ, ಕಾಡಾ, ಪ್ರವಾಹ ನಿಯಂತ್ರಣ, ಸಂಪ್ರದಾಯವಲ್ಲದ ಇಂಧನ ಮೂಲ, ಜೀವಿಪರಿಸ್ಥಿತಿ ಮತ್ತು ಪರಿಸರ, ಸಾಮಾನ್ಯ ಆರ್ಥಿಕ ಸೇವೆ ಇತ್ಯಾದಿ ಸುಮಾರು 18 ವಲಯಗಳಿಗಾಗಿ 97-98ರಲ್ಲಿಯ ಆಯವ್ಯಯದಲ್ಲಿ ಅಂದಾಜುಪಡಿಸಿದ 16891.02 ಕೋಟಿ ಮೊತ್ತವನ್ನು 97-98ರ ಪರಿಷ್ಕೃತ ಅಂದಾಜಿನಲ್ಲಿ 14579.63 ಕೋಟಿ ಕಡಿತಗೊಳಿಸಿ ಅಂದರೆ 2311.39 ಕೋಟಿ ಮೊತ್ತವನ್ನು ಖೋತಾಗೊಳಿಸಿದ್ದೇಕೆ? ಇವೇ ವಲಯಗಳಿಗೆ 97-98 ಬಜೆಟ್‌ನಲ್ಲಿ 16891.02 ಕೋಟಿಯಿಂದ ಪರಿಷ್ಕೃತ ಬಜೆಟ್‌ನಲ್ಲಿ 14579.63 ಕೋಟಿಗೆ ಇಳಿಸಿ ಖೋತಾ ಮಾಡಿ 98-99ರಲ್ಲಿ ಬಜೆಟ್‌ನಲ್ಲಿ 15849.39 ಕೋಟಿ ನಿಗದಿಗೊಳಿಸಿದ್ದು ಸರಿಯೇ? ಬಜೆಟ್‌ನಲ್ಲಿ ವೆಚ್ಚ ಇರುವುದು ಕೇವಲ ಲಕ್ಷಾಂತರ ನೌಕರರ ವೇತನ ಭತ್ಯೆಗಾಗಿಯೇ ವಿನಃ ಕೋಟ್ಯಂತರ ಭಾರತೀಯರಿಗಲ್ಲವೆಂದು ಹೇಳದೆ ಗತ್ಯಂತರವಿಲ್ಲ. ಈ ಎಲ್ಲ ಕೈಚಳಕ ಕೈವಾಡ ಹಾಗೂ ಕುಚೋದ್ಯಗಳ ಹಿಂದೆ ಅನೇಕ ದಶಕಗಳಿಂದ ಗೂಡುಗಟ್ಟಿಕೊಂಡಿರುವ ಹಣಕಾಸು ಇಲಾಖೆಯ ಅಧಿಕಾರಿಗಳೇ ಕಾರಣವೆಂದು ಅನಿವಾರ್ಯವಾಗಿ ಹೇಳಬೇಕಾಗಿದೆ. ಈ ಹಿನ್ನೆಲೆಯಲ್ಲಿ ಕೇಂದ್ರ ಸರಕಾರ, ಸರಕಾರದಲ್ಲಿಯ ಮಂತ್ರಿಗಳು, ಸಂಸದರು ಎಚ್ಚೆತ್ತು ಅಧಿಕಾರಿಗಳ ಅನಿಸಿಕೆ ಹಾಗೂ ಟಿಪ್ಪಣಿಗಳನ್ನು ಅಧ್ಯಯನ ಮಾಡಿ, ಆಲೋಚನೆ ಮಾಡಿ ಪ್ರಜಾಕೋಟಿಗೆ ಅಪಕಾರಿ ಹಾಗೂ ಕಹಿಯಾಗದಂತೆ ಮುಂಜಾಗ್ರತೆ ವಹಿಸಿ ಮುನ್ನಡೆದು ಮುಂದಿನ ಬಜೆಟ್ ಭಾರತದ ಬಡಜನತೆಯ ಭಾಗ್ಯಜ್ಯೋತಿಯಾಗುವಂತೆ ಗಮನ ಹರಿಸಿದರೆ ಕೇಂದ್ರ ಸರಕಾರಕ್ಕೆ ಜನತಾ-ಜನಾರ್ಧನ ಕೃತಜ್ಞ.

❑

ಅಭಿವೃದ್ಧಿ ಆರ್ಥಿಕ ಕಾರ್ಯಕ್ರಮಗಳ ಕುಂಠಿತ

ಪಂಚಾಯತಿಗಳ ಮುಖಾಂತರ ಅನೇಕ ಅಭಿವೃದ್ಧಿ ಹಾಗೂ ಆರ್ಥಿಕ ಕಾರ್ಯಗಳನ್ನು ಸರಕಾರದ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಅನುಷ್ಠಾನಗೊಳಿಸಿ ಹಣವನ್ನು ವೆಚ್ಚಮಾಡಿ ಸಾಧಿಸಬೇಕಾಗುತ್ತದೆ. ಈ ಇಲಾಖೆಗೆ ಇಬ್ಬರು ಮಂತ್ರಿಗಳಿದ್ದಾರೆ. ಜಿಲ್ಲಾ ಪಂಚಾಯತಿ ವ್ಯಾಪ್ತಿಯಲ್ಲಿಯ ಶಿಕ್ಷಣ ಇಲಾಖೆ ಶಿಕ್ಷಕ ವ ಶಿಕ್ಷಕೇತರ ಸಿಬ್ಬಂದಿಯನ್ನು ಹೊರತುಪಡಿಸಿ ಜಿಲ್ಲಾ ಪಂಚಾಯತಿ ವ್ಯಾಪ್ತಿಯಲ್ಲಿ 1.47 ಲಕ್ಷ ಜನ ಸಿಬ್ಬಂದಿ ವ ಅಧಿಕಾರಿಗಳಿದ್ದಾರೆ. ಇವರೆಲ್ಲಾ ಪ್ರತಿವರ್ಷ ಜಿಲ್ಲಾ ಪಂಚಾಯತಿಗಳಿಗೆ ಬಜೆಟ್ ಪ್ರಕಾರ ನಿಗದಿ ಮಾಡಿದ ನೂರಾರು ಕೋಟಿ ಹಣವನ್ನು ವೆಚ್ಚ ಮಾಡದೆ ಅಭಿವೃದ್ಧಿಯನ್ನು ಕುಂಠಿತಗೊಳಿಸುತ್ತ ಗ್ರಾಮೀಣ ಜನತೆಗೆ ಸಿಗುವ ಸೌಲಭ್ಯ, ಸವಲತ್ತು ಇತ್ಯಾದಿ ಆರ್ಥಿಕ ಸಹಾಯ ಸಿಗದಂತೆ ಮಾಡುತ್ತಲೇ ಬಂದಿದ್ದಾರೆ. ಪ್ರದೇಶ ಅಭಿವೃದ್ಧಿ ಕಾರ್ಯಕ್ರಮಗಳಾದ (1) ಜವಾಹರ ರೋಜಗಾರ್ ಯೋಜನೆ, (2) ದಶಲಕ್ಷಬಾವಿ ಯೋಜನೆ, (3) ಇಂದಿರಾ ಆವಾಜ್ ಯೋಜನೆ, (4) ಉದ್ಯೋಗ ಭರವಸೆ ಯೋಜನೆ, (5) ಕ್ಷಾಮಪೀಡಿತ ಪ್ರದೇಶ ಅಭಿವೃದ್ಧಿ ಯೋಜನೆ, (6) ಪಶ್ಚಿಮಘಟ್ಟ ಅಭಿವೃದ್ಧಿ ಯೋಜನೆ. ಈ ಆರು ಪ್ರಮುಖ ಯೋಜನೆಗಳಿಗೆ ಬಿಡುಗಡೆ ಮಾಡಿದ ಹಣದಲ್ಲಿ 97-98ರ ಅಂತ್ಯಕ್ಕೆ 27 ಜಿಲ್ಲಾ ಪಂಚಾಯತಿಗಳು 131.33 ಕೋಟಿ ಹಣವನ್ನು ವೆಚ್ಚ ಮಾಡದೆ 31-3-98ಕ್ಕೆ ಶಿಲ್ಕು ಉಳಿಸಿದ್ದಾರೆ. ಅಂತೆಯೇ ವಿಶೇಷ ಆರ್ಥಿಕ ಕಾರ್ಯಕ್ರಮ ಯೋಜನೆಗಳಾದ - (1) ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ, (2) ಟ್ರಾಯಶೆಮ್ ಯೋಜನೆ, (3) ಟೂಲ್‌ಕಿಟ್ ಯೋಜನೆ, (4) ಡ್ವಾಕ್ರಾ ಯೋಜನೆ, (5) ಆರ್.ಜಿ.ಎಲ್.ಐ.ಎಸ್. ಯೋಜನೆ, (6) ಸ್ವಾವಲಂಬನೆ ಯೋಜನೆ. ಈ ಆರು ಪ್ರಮುಖ್ಯ ಯೋಜನೆಗಳಿಗೆ ಸಹ ಬಿಡುಗಡೆ ಮಾಡಿದ ಹಣದಲ್ಲಿ 97-98ರ ಅಂತ್ಯಕ್ಕೆ 26.37 ಕೋಟಿ ಹಣವನ್ನು ವೆಚ್ಚ ಮಾಡದೆ 31-3-98 ಶಿಲ್ಕು ಉಳಿಸಿದ್ದಾರೆ. ಹೀಗೆ ಈ ಹನ್ನೆರಡು ಪ್ರತ್ಯೇಕ ಯೋಜನೆಗಳಿಗೆ ಕೊಟ್ಟ ಪೂರಾ ಹಣವನ್ನು ವೆಚ್ಚ ಮಾಡದೆ ಒಟ್ಟಾರೆ 157.69 ಕೋಟಿ ಭಾರೀ ಮೊತ್ತವನ್ನು 31-3-98ಕ್ಕೆ ಶಿಲ್ಕು ಉಳಿಸಿ ಗ್ರಾಮೀಣ ಜನತೆಗೆ ಸಿಗಬೇಕಾಗಿದ್ದ ಸೌಲಭ್ಯ ಸಿಗದಂತೆ ಮಾಡಿ ಗ್ರಾಮೀಣ ಅಭಿವೃದ್ಧಿಯನ್ನು ಕುಂಠಿತಗೊಳಿಸ

ಲಾಗಿದೆ. ಈ ಕರ್ತವ್ಯಚ್ಯುತಿ ಹೊಣೆಗೇಡಿತನಕ್ಕೆ ಅಧಿಕಾರಿಗಳು ಕಾರಣರೇ? ಅಥವಾ ಇಬ್ಬರು ಮಂತ್ರಿಗಳು ಕಾರಣರೇ? ರಾಜ್ಯದ ಸಂಸದರು ಹಾಗೂ ಶಾಸಕರು ತಮ್ಮ ಹೊಣೆ ಅರಿತು ಕೆಲಸ ಮಾಡಿಸಿದರೆ ಒಳ್ಳೆಯದು.

1998-99ರಲ್ಲಿ ಕೇಂದ್ರ ಸರಕಾರದಿಂದ ಬಿಡುಗಡೆಯಾಗಿರುವ ಮೊತ್ತ 31-12-98ಕ್ಕೆ 207.07 ಕೋಟಿ, ರಾಜ್ಯ ಸರಕಾರದಿಂದ ಬಿಡುಗಡೆಯಾಗಿರುವ ಮೊತ್ತ 57.65 ಕೋಟಿ. 97-98ರಲ್ಲಿ ವೆಚ್ಚ ಮಾಡದೆ 1-4-98ಕ್ಕೆ ಉಳಿದ ಶಿಲ್ಕು ಹಣ 157.69 ಕೋಟಿ, 98-99ರಲ್ಲಿ 31-12-98ಕ್ಕೆ ವೆಚ್ಚ ಮಾಡಲು ಲಭ್ಯವಿರುವ ಒಟ್ಟು ಮತ್ತ 464.36 ಕೋಟಿ, 1-4-98ರಿಂದ 31-12-98ರ ಒಂಬತ್ತು ತಿಂಗಳ ಅವಧಿಯಲ್ಲಿ ಮೇಲ್ಕಂಡ ಯೋಜನೆಗಳಿಗೆ ಸಾಧನಾವೆಚ್ಚ 285.50 ಕೋಟಿ, ಅಂದರೆ ಶೇಕಡಾ 64 ಮಾತ್ರ 97-98ನೇ ಸಾಲಿನ ಬಾಬ್ತು ವೆಚ್ಚ ಮಾಡದೆ ಉಳಿದ 157.69 ಕೋಟಿ ಹಣವನ್ನು 98-99ರ ಮೊದಲ ಆರು ತಿಂಗಳು ಅಥವಾ ಒಂಬತ್ತು ತಿಂಗಳ ಒಳಗಾಗಿಯೇ ವೆಚ್ಚ ಮಾಡಬೇಕಾಗಿತ್ತು. ಆದರೆ ಮಾಡಿಲ್ಲ ಏಕೆ? 98-99ರ ಟಾರ್ಗೆಟ್ ಮೊತ್ತ 333.00 ಕೋಟಿ. ಇದರಲ್ಲಿ ಒಂಬತ್ತು ತಿಂಗಳ ಅವಧಿಯಲ್ಲಿ ವೆಚ್ಚ ಮಾಡಬೇಕಾಗಿದ್ದು 249.75 ಕೋಟಿ ಹಾಗೂ ಹಿಂದಿನ ವರ್ಷ ವೆಚ್ಚ ಮಾಡದೇ ಉಳಿದ ಹಣ 157.69 ಕೋಟಿ. ಹೀಗೆ 407.44 ಕೋಟಿ ಮೊತ್ತವನ್ನು 31-12-98ರ ಒಳಗಾಗಿ ವೆಚ್ಚ ಮಾಡಿ ಪ್ರಗತಿ ಸಾಧಿಸಲೇಬೇಕಿತ್ತು. ಆದರೆ ಕೇವಲ 285.50 ಕೋಟಿ ಮೊತ್ತವನ್ನು ಮಾತ್ರ ವೆಚ್ಚ ಮಾಡಿ ಪ್ರಗತಿಯನ್ನು ಕುಂಠಿತಗೊಳಿಸಲಾಗಿದೆ. ವೆಚ್ಚ ಮಾಡಬೇಕಾಗಿದ್ದ ಹಣದಲ್ಲಿ 121.94 ಕೋಟಿ ಮೊತ್ತವನ್ನೇ ವೆಚ್ಚ ಮಾಡಿಲ್ಲ ಏಕೆ? ಈ ಅವಧಿಯಲ್ಲಿ ಕೇಂದ್ರ ಸರಕಾರ ಬಿಡುಗಡೆ ಮಾಡಿದ 207.09 ಕೋಟಿ ಮೊತ್ತವನ್ನು ಸಂಪೂರ್ಣವಾಗಿ ವೆಚ್ಚ ಮಾಡದೆ ಇರುವುದು ಹಾಗೂ ರಾಜ್ಯ ಸರಕಾರ ಬಿಡುಗಡೆ ಮಾಡಿದೆ ಎಂದು ಹೇಳುವ 57.65 ಕೋಟಿ ಹಣದಲ್ಲಿ ಎಷ್ಟನ್ನೂ ವೆಚ್ಚ ಮಾಡದೆ ಇರುವುದು ಸುಸ್ಪಷ್ಟ. ಪ್ರತಿವರ್ಷ, ಪ್ರತಿ ಆರು ತಿಂಗಳು ಹಾಗೂ ಪ್ರತಿ ಮೂರು ತಿಂಗಳ ಅವಧಿಯಲ್ಲಿ ಕೇಂದ್ರದ ಹಣ ಹಾಗೂ ರಾಜ್ಯದ ಹಣವನ್ನು ಅಧಿಕಾರಿಗಳು ನಿಗದಿತ ಗುರಿ ಪ್ರಕಾರ ವೆಚ್ಚ ಮಾಡದೆ ಉಳಿಸುತ್ತ ನಿಗದಿತ ಪ್ರಗತಿ ಸಾಧಿಸದೆ ಹೋಗುವುದಾದರೆ ಸಂಸದ, ಶಾಸಕ ಹಾಗೂ ಮಂತ್ರಿಗಳ ಕೆಲಸವಾದರೂ ಏನು? ಅವರ ಆಡಳಿತ ಹಿಡಿತ ಅಧಿಕಾರಿಗಳ ಮೇಲೆ ಇರುವುದಾದರೂ ಏನು?

ಈ ಹನ್ನೆರಡು ಯೋಜನೆಗಳನ್ನು ನಿಗದಿಯಾದಂತೆ ಕಾರ್ಯಗತ ಮಾಡದೆ ರಾಜ್ಯಾದ್ಯಂತ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತರು, ಭೂರಹಿತ ಮಹಿಳೆಯರು, ರೈತರು, ನಿರುದ್ಯೋಗಿಗಳು, ವಸತಿಹೀನರು, ಚುಲಾ ಪ್ರಯೋಜನದಾರರು, ಕಕ್ಕಸ ಪ್ರಯೋಜನದಾರರು, ಕ್ಷಾಮಪೀಡಿತರು, ಪಶ್ಚಿಮಘಟ್ಟ ಪ್ರಯೋಜನದಾರರು, ಸಾಲ ಸಬ್ಸಿಡಿ ಪ್ರಯೋಜನದಾರರು, ಡ್ವಾಕ್ರಾ ಪ್ರಯೋಜನದಾರರು, ಟೂಲ್‌ಕಿಟ್ ಪ್ರಯೋಜನ ದಾರರು, ಇತರ ಬಡವರು ಇತ್ಯಾದಿ ಪ್ರಯೋಜನ ಪಡೆವ ಗ್ರಾಮೀಣ ಜನತೆಯನ್ನು

ಸಂಕಷ್ಟಕ್ಕೆ ಈಡುಮಾಡಿ ವಿವಿಧ ಈ ಎಲ್ಲ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕುಂಠಿತಗೊಳಿಸಿ ಕರ್ತವ್ಯಚ್ಯುತರಾಗುತ್ತಿರುವ ಸರಕಾರ, ಮಂತ್ರಿ ಹಾಗೂ ಅಧಿಕಾರಿಗಳು ತಲೆತಗ್ಗಿಸಬೇಕು. ಅವ್ಯಾಹತವಾಗಿ, ನಿರಾತಂಕವಾಗಿ ಈ ಹಾಗೂ ಇನ್ನಿತರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳಿಗೆ ನಿಗದಿತ ಹಣವನ್ನು ಸಂಪೂರ್ಣವಾಗಿ ವೆಚ್ಚ ಮಾಡದೆ ನೂರಾರು ಕೋಟಿ ಹಣವನ್ನು ಪ್ರತಿವರ್ಷ ಉಳಿಸುತ್ತ ಜನತೆಗೆ ಅಪಕಾರ, ಅಪಚಾರ, ಅನ್ಯಾಯ ಮಾಡುತ್ತ ಅವರಿಗೆ ಸಿಗುವ ಸವಲತ್ತುಗಳನ್ನು ಸಿಗದಂತೆ ಮಾಡುತ್ತ ಹೋಗುವುದು ಯಾವ ಸರಕಾರಕ್ಕೂ ಭೂಷಣವಲ್ಲ.

ಇನ್ನಾದರೂ ಮಂತ್ರಿ, ಮಹಾಮಂತ್ರಿ, ಸಂಸದರು, ಶಾಸಕರು ತಮ್ಮ ಕರ್ತವ್ಯದ ಅರಿವನ್ನು ಅರಿತು ಬಜೆಟ್ ಪ್ರಕಾರ ನಿಗದಿಗೊಳಿಸಿದ ಜನಪರ ಕಾರ್ಯಕ್ರಮಗಳು ಹಾಗೂ ಅವುಗಳಿಗೆ ನಿಗದಿಗೊಳಿಸಿದ ಹಣವನ್ನು ಕಣ್ತೆರೆದು ನೋಡಿ ಪಂಚಾಯತ್‌ರಾಜ್ ಸಂಸ್ಥೆಗಳು ಹಾಗೂ ಅವುಗಳ ಅಧಿಕಾರಿಗಳು ನಿಗದಿತ ಹಣವನ್ನು ಕಾಲಕಾಲಕ್ಕೆ ಇಡೀ ವರ್ಷದಲ್ಲಿ ಸಂಪೂರ್ಣವಾಗಿ ವೆಚ್ಚ ಮಾಡುವಂತೆ ಹಾಗೂ ಸರಕಾರಿ ಇಲಾಖೆಗಳ ಅಧಿಕಾರಿಗಳು ಸಹ ತಮ್ಮ ತಮ್ಮ ಇಲಾಖಾ ಕಾರ್ಯಕ್ರಮಗಳು ಅನುಷ್ಠಾನಗೊಳ್ಳುವಂತೆ ಹಾಗೂ ಅವುಗಳಿಗೆ ನಿಗದಿತ ಹಣ ಸಂಪೂರ್ಣವಾಗಿ ವೆಚ್ಚವಾಗುವಂತೆ ನೋಡುವುದು ಒಳ್ಳೆಯದು. ಪ್ರತಿವರ್ಷ ಪಂಚಾಯತ್‌ರಾಜ್ ಸಂಸ್ಥೆಗಳು ನೂರಾರು ಕೋಟಿ, ಸರಕಾರಿ ಇಲಾಖೆಗಳು ಸಹಸ್ರಾರು ಕೋಟಿ ವೆಚ್ಚ ಮಾಡದೆ ಇರುವ ಅಧಿಕೃತ ಸತ್ಯಾಂಶ ಇಲಾಖಾ ವರದಿ ಹಾಗೂ ಸಿ.ಎ.ಜಿ. ವರದಿಗಳಿಂದ ಅಧಿಕೃತವಾಗಿ ಕಂಡುಬರುತ್ತಿದ್ದು, ಮಂತ್ರಿಗಳು, ಸಂಸದರು ಹಾಗೂ ಶಾಸಕರು ತಪ್ಪದೆ ಓದಿ ತಿಳಿದು ಜನತೆಯ ಸರ್ವಾಂಗೀಣ ಗುರಿ ಹಾಗೂ ಪ್ರಗತಿ ಸಾಧಿಸಬೇಕೇ ಹೊರತು ಅಸಮಂಜಸ ಹಾಗೂ ಅನಗತ್ಯವಾಗಿ ಕಾಸು ವೆಚ್ಚ ಹಾಗೂ ಕಾಲ ಕಳೆಯುವ, ಆಡಂಬರ ಹಾಗೂ ವೈಭವೋಪೇತ ಕಾರ್ಯಕ್ರಮಗಳಲ್ಲಿಯೇ ಹೆಚ್ಚಿನ ಆಸಕ್ತಿ ವಹಿಸಿ ಜನತೆಗೆ ಮಾರಕವಾಗದೆ ತಾರಕವಾಗಿ ಮುನ್ನಡೆಯುವುದು ಎಲ್ಲರಿಗೂ ಹಿತಕರ.

❑

(ಈ ಲೇಖನದಲ್ಲಿಯ ಅಂಕಿ-ಸಂಖ್ಯೆ ಅಂಶಗಳನ್ನೆಲ್ಲಾ ಅಧಿಕೃತ ಮೂಲದಿಂದ ಆಯ್ದುಕೊಳ್ಳಲಾಗಿದೆ).

ಅರಣ್ಯ ಸಂಪತ್ತು ಮತ್ತು ಆದಾಯ

ಬ್ರಿಟಿಷ್ ಪೂರ್ವ ಹಾಗೂ ನಂತರದ ಎಲ್ಲಾ ಸರಕಾರಗಳ ಆದಾಯು ಸಂಪನ್ಮೂಲ ಖಾತೆಗಳಲ್ಲಿ ಅರಣ್ಯ ಇಲಾಖೆ ಮಹತ್ವಪೂರ್ಣವಾದದ್ದು. ಅರಣ್ಯ ಇಲಾಖೆಗಳು ನಿಸರ್ಗದತ್ತ ಮರಗಳಾದ ಗಂಧ, ನೇರಲ, ಬೇವು, ಹೊಂಗೆ, ನೀಲಗಿರಿ, ಆಲ, ಅರಳಿ, ಹುಣಸೆ, ಮಾವು, ಹಲಸು, ಬಿದಿರು, ಬೀಟೆ, ಹೊನ್ನೆ, ತೇಗ, ಸಂಪಿಗೆ ಇತ್ಯಾದಿ ಇನ್ನೂ ಅನೇಕ ತರಹದ ಹಣ್ಣು, ಎಣ್ಣೆ, ಹೂವು, ನಾಟಾ ಇತ್ಯಾದಿ ಫಲದಾಯಕವಾದ ಗಿಡಮರಗಳನ್ನು ಬೆಳೆಸಲು ಹಾಗೂ ಅವುಗಳ ಫಸಲನ್ನು ಪ್ರತಿವರ್ಷ ಹರಾಜು ಮಾಡುತ್ತಾ, ಗೃಹೋಪಯೋಗಿ ನಾಟಾ ಹಾಗೂ ಉರುವಲಿಗೆ ಸಹ ಮರಗಳನ್ನು ಹರಾಜು ಮಾಡುತ್ತಾ ಸಾರ್ವಜನಿಕರಿಗೆ ಉಪಯುಕ್ತವಾಗಿ ಸರಕಾರಗಳಿಗೆ ರೆವಿನ್ಯೂ ಆದಾಯವನ್ನು ಸಾಕಷ್ಟು ಒದಗಿಸುತ್ತಾ ಈ ಅರಣ್ಯ ಇಲಾಖೆ ಬಹುದೂರ ನಡೆದುಬಂದಿವೆ. ರಾಜ್ಯ ಹಾಗೂ ರಾಷ್ಟ್ರದಲ್ಲಿಯ ವಿವಿಧ ರಸ್ತೆ ಹಾಗೂ ರಾಜಮಾರ್ಗಗಳ ಎರಡೂ ಬದಿಗೆ ಗಿಡಮರಗಳನ್ನು ಬೆಳೆಸುತ್ತಾ ಹಾದಿಹೋಕರಿಗೆ ನೆರಳು, ಚಾಟುಗಳಿಗೆ ಉಪಯುಕ್ತವಾಗುವಂತೆ ಹಾಗೂ ಆಯಾ ಸರಕಾರಗಳಿಗೆ ಆದಾಯ ಮೂಲವಾಗುವಂತೆ ಹಿಂದಿನಿಂದ ಎಲ್ಲಾ ಸರಕಾರಗಳು ನೋಡಿಕೊಂಡಿವೆ. ರಾಜ್ಯದ ಹಾಗೂ ರಾಷ್ಟ್ರದ ಹೆದ್ದಾರಿ ಹಾಗೂ ಇತರ ರಸ್ತೆಗಳ ಎರಡೂ ಬದಿಗೆ ಬ್ರಿಟಿಷ್ ಸರಕಾರ ಅಥವಾ ಅದರ ಹಿಂದಿನ ಪಾಳೇಗಾರರ ಸರಕಾರ ಬೆಳೆಸಿಕೊಂಡು ಬಂದಿದ್ದ ಹಾಗೂ ಫಸಲನ್ನೂ ಹರಾಜು ಮಾಡಿ ಉತ್ಪನ್ನ ಮೂಲವಾದ ಸಾಲು ಮರಗಳ ಸಂಖ್ಯೆ ಕಡಿಮೆಯಾಗುತ್ತಲೇ ಇದೆ ಹಾಗೂ ಇದು ಸರ್ವನಾಶದ ಹಾದಿಯನ್ನು ಹಿಡಿದು ಹೊರಟಿರುವುದು ದುರ್ದೈವ. ಹಿಂದಿನ ಸರಕಾರಗಳು ಬೆಳೆಯಿಸಿ, ಉಳಿಸಿ ನಿರ್ವಹಣೆ ಮಾಡಿ ಹೇರಳವಾದ ಉತ್ಪನ್ನ ಪಡೆಯುತ್ತಿದ್ದ ಅರಣ್ಯಗಳು ಅವಸಾನದತ್ತ ಸಾಗುತ್ತಿವೆ. ಅರಣ್ಯದ ಸಲುವಾಗಿ ಸಾಕಷ್ಟು ವೆಚ್ಚ ಮಾಡಿ ಅತೀ ಹೆಚ್ಚಿನ ಉತ್ಪನ್ನ ಪಡೆಯಬೇಕಾದ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಅರಣ್ಯ ಆದಾಯ ಪಡೆಯುವಲ್ಲಿ ಸಂಪೂರ್ಣವಾಗಿ ವೈಫಲ್ಯದ ಹಾದಿ ಹಿಡಿದಿವೆ. ಕೇಂದ್ರ ಸರಕಾರ 96-97ರಲ್ಲಿ 96.87 ಕೋಟಿ ವೆಚ್ಚ ಮಾಡಿ 32.78 ಕೋಟಿ ಆದಾಯ ಪಡೆದಿದೆ.

97-98ರಲ್ಲಿ 113.36 ಕೋಟಿ ವೆಚ್ಚ ಮಾಡಿ 25.00 ಕೋಟಿ ಆದಾಯ ಪಡೆಯಲಿದೆ. 98-99ರಲ್ಲಿ 144.58 ಕೋಟಿ ವೆಚ್ಚ ಮಾಡಿ 25.00 ಕೋಟಿ ಆದಾಯ ಪಡೆಯಲಿದೆ. ಅಂತೆಯೇ ರಾಜ್ಯ ಸರಕಾರ 96-97ರಲ್ಲಿ 167.12 ಕೋಟಿ ವೆಚ್ಚ ಮಾಡಿ 113.36 ಕೋಟಿ ಆದಾಯ ಪಡೆದಿವೆ. 97-98ರಲ್ಲಿ 183.25 ಕೋಟಿ ವೆಚ್ಚ ಮಾಡಿ 125.0 ಕೋಟಿ ಆದಾಯ ಪಡೆಯಲಿದೆ. 98-99ರಲ್ಲಿ 260.13 ಕೋಟಿ ವೆಚ್ಚ ಮಾಡಿ 131.25 ಕೋಟಿ ಆದಾಯ ಪಡೆಯಲಿದೆ. ಇದು ಕೇಂದ್ರ ಹಾಗೂ ರಾಜ್ಯ ಸರಕಾರಗಳ ವೆಚ್ಚ, ಆದಾಯದ ಕಾರ್ಯವೈಖರಿ. ರಾಜ್ಯ ಸರಕಾರ ಹಾಗೂ ರಾಜ್ಯದ ಎಲ್ಲಾ ಪಂಚಾಯತಿ ವ್ಯಾಪ್ತಿಯಲ್ಲಿ 98-99ರಲ್ಲಿ ಯೋಜನಾ ಹಾಗೂ ಯೋಜನೇತರ 16071 ಜನ ಅರಣ್ಯ ಸಿಬ್ಬಂದಿ ಇದೆ. ಹಿಂದಿನ ಸರಕಾರಗಳು ಬೆಳೆಯಿಸಿಕೊಂಡು ಬಂದಿದ್ದ ಸಾಲು ಮರ ಹಾಗೂ ಅರಣ್ಯಗಳಲ್ಲಿಯ ಮರಗಳನ್ನು ಉಳಿಸಿಕೊಂಡು ಮತ್ತೆ ಮತ್ತೆ ಹೆಚ್ಚು ಹೆಚ್ಚಾಗಿ ಗಿಡಮರಗಳನ್ನು ಬೆಳೆಸಿ ಅರಣ್ಯ ಸಂಪತ್ತನ್ನು ಹೆಚ್ಚಿಸಿಕೊಳ್ಳುವಲ್ಲಿ ಹಾಗೂ ಸರಕಾರಕ್ಕೆ ಹೆಚ್ಚಿನ ಆದಾಯ ಪಡೆಯುವಲ್ಲಿ ವಿಫಲವಾಗಿ ಅರಣ್ಯ ಗಿಡಮರ ಹಾಗೂ ಸಾಲು ಮರಗಳ ಸರ್ವನಾಶಕ್ಕೆ ಸರಕಾರ ಕಾರಣವಾಗುವುದು ಸರಿಯಲ್ಲ.

ರಾಜ್ಯದ 1.2 ಲಕ್ಷ ಚ.ಕಿ.ಮೀ. ಕ್ಷೇತ್ರದಲ್ಲಿ 38.29 ಲಕ್ಷ ಹೆಕ್ಟರ್ ಅರಣ್ಯ ಪ್ರದೇಶವಿದೆ. ಇದರಲ್ಲಿ 28 ಸಾವಿರ ಹೆಕ್ಟರ್ ಅರಣ್ಯ ಪ್ರದೇಶವನ್ನು ನಾಶಮಾಡಿ ಆಕ್ರಮಣಕಾರರು ಒತ್ತುವರಿ ಮಾಡಿಕೊಂಡಿದ್ದಾರೆ. ಅರಣ್ಯ ಕಡಿದು ಒತ್ತುವರಿ ಮಾಡಿಕೊಳ್ಳುವಾಗ ಅರಣ್ಯ ಇಲಾಖೆ ಮಾಡುತ್ತಿದ್ದುದು ಏನು? ರಾಜ್ಯದಲ್ಲಿ ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ, ಜಿಲ್ಲಾ ಮುಖ್ಯರಸ್ತೆ, ಟಿ.ಡಿ. ರಸ್ತೆ, ಗ್ರಾಮ ರಸ್ತೆ, ನೀರಾವರಿ ರಸ್ತೆ, ಹೀಗೆ ವಿವಿಧ ರಸ್ತೆಗಳ ಉದ್ದ ಸುಮಾರು 1.15 ಲಕ್ಷ ಕಿ.ಮೀ.ಗಿಂತ ಹೆಚ್ಚಿದೆ. ಈ ಎಲ್ಲ ರಸ್ತೆಗಳಲ್ಲಿ ಹಿಂದಿದ್ದ ಗಿಡಮರಗಳು ಈಗ ಎಲ್ಲಾ ಇವೆಯೇ? ಇಲ್ಲದಿದ್ದ ರಸ್ತೆಗಳಲ್ಲಿ ಹೊಸದಾಗಿ ಸ್ವಾತಂತ್ರ್ಯ ನಂತರ ಹೆಚ್ಚಿದ ಗಿಡಮರಗಳು ಈಗ ಎಲ್ಲಾ ಇವೆಯೇ? ಪ್ರತಿವರ್ಷ ಕಾಗದದಲ್ಲಿ ಹಚ್ಚಲಾಗಿದೆ ಎಂದು ಹೇಳುವ ಗಿಡಮರಗಳೆಲ್ಲಾ ಆ ಸಂಖ್ಯೆಯ ಪ್ರಕಾರ ಹಚ್ಚಲಾಗಿದೆಯೇ? ಹಚ್ಚಿದ್ದರೆ ಬೆಳೆದಿದ್ದಾವೆಯೇ? ರಾಜ್ಯದ ಎಲ್ಲಾ ರಸ್ತೆಗಳ ಎರಡೂ ಬದಿಗೆ ಹಚ್ಚಿದ ಗಿಡ ಬಹುತೇಕ ಎಲ್ಲಾ ಕಾಣುತ್ತವೆಯೇ? ರಾಜ್ಯ ಸರಕಾರದ ಹಾಗೂ ಕೇಂದ್ರ ಸರಕಾರದ ಹಣ ಹಾಗೂ ವಿದೇಶಿ ನೆರವಿನ ಹಣವನ್ನು ಪ್ರತಿವರ್ಷ ಪಡೆದು ರಾಜ್ಯ ವಲಯ, ಕೇಂದ್ರ ವಲಯ, ಜಿಲ್ಲಾ ವಲಯಗಳಲ್ಲಿ ಸಾಮಾಜಿಕ ಅರಣ್ಯ, ನಗರ ಪ್ರದೇಶ ಹಸಿರುಕರಣ, ಕ್ಷೀಣಿತ ಅರಣ್ಯ, ರಸ್ತೆ ಬದಿ ಗಿಡ, ಉರುವಲು ಮತ್ತು ಮೇವು, ಪವಿತ್ರವನ, ಶಾಲಾವನ, ಭೂಸಾರ ಸಂರಕ್ಷಣೆ, ಕಿರು ಅರಣ್ಯ, ಬಂಜರು ಭೂಮಿ, ವಿಶೇಷ ಘಟಕ, ಗಿರಿಜನ, ನದಿಕಣಿವೆ, ಪಶ್ಚಿಮಘಟ್ಟ, ಜೆ.ಆರ್.ವೈ. ಉದ್ಯೋಗ ಭರವಸೆ ಇತ್ಯಾದಿ ಅರಣ್ಯ ಯೋಜನೆಯಲ್ಲಿ 96-97ಠ ಸಾಲಿಗೆ 1.25 ಲಕ್ಷ

ಎಕರೆ ಪ್ರದೇಶದಲ್ಲಿ ಅರಣ್ಯ ಬೆಳೆಸಿ 73.65 ಕೋಟಿ ವೆಚ್ಚ, 97-98ರಲ್ಲಿ 0.75 ಲಕ್ಷ ಎಕರೆಯಲ್ಲಿ ಅರಣ್ಯ ಬೆಳೆಸಿ 93.23 ಕೋಟಿ ವೆಚ್ಚ ಮಾಡಲಾಗಿದೆ. ಇದು ಎಷ್ಟರ ಮಟ್ಟಿಗೆ ಯಶಸ್ವಿಯಾಗಿದೆ ಎಂಬುದು ಅಲ್ಲಲ್ಲಿಯ ಪವಿತ್ರವನ, ಶಾಲಾವನ ಇತ್ಯಾದಿಗಳನ್ನು ಪ್ರತ್ಯಕ್ಷ ನೋಡಿದರೆ ನಿಜಾಂಶ ತಿಳಿಯುತ್ತದೆ. ಅರಣ್ಯ ಇಲಾಖೆಯವರಿಂದ ರೈತರು ತಮ್ಮ ತಮ್ಮ ಹೊಲಗದ್ದೆಗಳಲ್ಲಿ ಗಿಡಮರಗಳನ್ನು ಬೆಳೆಯಿಸಿ ಅಭಿವೃದ್ಧಿ ಹೊಂದಲು ವಿವಿಧ ಸುಮಾರು ಹದಿನಾಲ್ಕು ಜಾತಿಯ 16.37 ಕೋಟಿ ಸಸಿಗಳನ್ನು 1993-94ರಿಂದ 97-98ರ ವರೆಗಿನ ಅವಧಿಯಲ್ಲಿ ಕೊಡಲಾಗಿದೆಯೆಂದು ಸರಕಾರಿ ದಾಖಲೆ ಹೇಳುತ್ತಿದ್ದು, ರೈತರು ತೆಗೆದುಕೊಂಡು ಹೋದ ಈ ಎಲ್ಲ ಸಸಿಗಳನ್ನು ಹಚ್ಚಲಾಗಿದೆಯೇ, ಬದುಕಿಸಲಾಗಿದೆಯೇ ಹಾಗೂ ಬೆಳೆಸಲಾಗಿದೆಯೇ ಎಂಬುದನ್ನು ಸರಕಾರ ಖಚಿತ ಮಾಡಿಕೊಂಡು ಪ್ರತಿವರ್ಷ ಕೊಡುವ ಸಸಿಯ ಸದುಪಯೋಗ ಮಾಡಿಕೊಂಡು ಅವಶ್ಯವಾಗಿರುವ ಈ ಯೋಜನೆ ಯಶಸ್ವಿಯಾದರೆ ಎಲ್ಲರಿಗೂ ಒಳ್ಳೆಯದು.

ರೈತರ ವ್ಯವಸಾಯ, ಉರುವಲು, ಗೃಹೋಪಯೋಗಿ, ಭೂಮಿ ತಂಪಾಗಿರಿಸುವ, ನೆರಳನ್ನು ನೀಡುವ, ಇತ್ಯಾದಿ ಅಭಿವೃದ್ಧಿ ದೃಷ್ಟಿಯಿಂದ ಸರಕಾರಕ್ಕೆ ಪ್ರತಿವರ್ಷ ವೆಚ್ಚಕ್ಕಿಂತಲೂ ಹೆಚ್ಚು ಹೆಚ್ಚಾಗಿ ಆದಾಯ ಪಡೆವ ಸದುದ್ದೇಶದಿಂದ ಅರಣ್ಯ ಕಾಯ್ದುಕೊಳ್ಳುವ ಹಾಗೂ ಬೆಳೆಸುವುದು ಅತ್ಯವಶ್ಯವಿರುವುದರಿಂದ ಅರಣ್ಯ ಸಂರಕ್ಷಣೆ ಹಾಗೂ ಅರಣ್ಯವರ್ಧನೆಯನ್ನು ಸರಕಾರ ಮಾಡಲೇಬೇಕು. ಅರಣ್ಯ ಸಂಪತ್ತು ಸರಕಾರದ ಆದಾಯ ಸಂಪತ್ತು, ಸಾರ್ವಜನಿಕರಿಗೆ ಉಪಯುಕ್ತವಾದ ಸೊತ್ತು. ಇದನ್ನು ಕಾಪಾಡುವುದು ಸರಕಾರದ ಕರ್ತವ್ಯ. ಗಂಧದ ಗಿಡ ಸರ್ವನಾಶವಾಗುತ್ತಿವೆ. ಗಂಧದ ಎಣ್ಣೆ ಸಿಗದಂತಾಗಿದೆ. ಗಂಧದ ಎಣ್ಣೆ ಕಾರ್ಖಾನೆಗಳು ಅವಸಾನಗೊಳ್ಳುತ್ತಿವೆ. ಅರಣ್ಯವೇ ವರ್ಷ ವರ್ಷ ನಾಶವಾಗುತ್ತಿದೆ. ಹತ್ತಿ ಬೆಳೆಗಾರರನ್ನು ಹಾಗೂ ಹತ್ತಿ ಗಿರಣಿಗಳನ್ನು ನಾಶಮಾಡಿ ಹತ್ತಿ ಬೆಳೆಗಾರರಿಗೆ ಹತ್ತಿ ಬಟ್ಟೆ ಉಪಯೋಗಿಸುವವರಿಗೆ ಹಾಗೂ ಹತ್ತಿ ಗಿರಣಿಗಳಿಗೆ ಅರಣ್ಯ ಇಲಾಖೆ ಮಾರಕವಾಗಿ ಕಟ್ಟಿಗೆ ಬಟ್ಟೆಯ ಪಾಲಿ ಫೈಬರ್ ಗಿರಣಿಗಳಿಗೆ ತಾರಕವಾಗಿ ಅರಣ್ಯ ನಾಶ ಮಾಡುವುದು ಸರಿಯಲ್ಲ. ಪಾಲಿ ಫೈಬರ್ ಗಿರಣಿಗಳು ತಮ್ಮ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚು ಹೆಚ್ಚಾಗಿ ಉಪಯೋಗಿಸಿ ಹೆಚ್ಚಿನ ಪ್ರಮಾಣದಲ್ಲಿ ಸರಕಾರಿ ಇಲಾಖೆ ಹಾಗೂ ಖಾಸಗಿಯವರಿಂದ ಎಲ್ಲಾ ತರಹದ ಗಿಡಮರಗಳನ್ನು ಖರೀದಿಸಿ ಅರಣ್ಯ ನಾಶಕ್ಕೆ ಕಾರಣರಾಗುತ್ತಿರುವ ಬಗ್ಗೆ ಸರಕಾರ ಕಣ್ಣು ತೆರೆದು ನೋಡಿದರೆ ಒಳ್ಳೆಯದು. ಭದ್ರಾವತಿಯ ಮೈಸೂರು ಪೇಪರ್ ಮಿಲ್ಲಿಗೆ ಬೇಕಾದ ಗಿಡಮರ ಬೆಳೆಯಲು ಹಾಗೂ ಕಡಿದುಕೊಳ್ಳಲು ಸುಮಾರು 32 ಸಾವಿರ ಎಕರೆ ಜಮೀನು ಕೊಡಲಾಗಿದ್ದು ಈ ಜಮೀನಿನ ಸದುಪಯೋಗದ ಬಗ್ಗೆ ಇರುವ ಟೀಕೆಗಳನ್ನು ಸಹ ಸರಕಾರ ಗಮನಿಸುವುದು ಒಳ್ಳೆಯದು. ಈ ಮಿಲ್ಲು 94-95ರಲ್ಲಿ ಯಾವುದೇ ಲಾಭ ಗಳಿಸದೇ 95-96ರಲ್ಲಿ 25.20 ಕೋಟಿ ಲಾಭ ಗಳಿಸಿ

96-97ರಲ್ಲಿ ಕೇವಲ 1.99 ಕೋಟಿ ಲಾಭ ಗಳಿಸಿ ತನ್ನ ವ್ಯವಹಾರವನ್ನು ಸುವ್ಯವಸ್ಥೆಯಾಗಿ ಮಾಡಿಲ್ಲ. ತಾನು ಪಡೆದ ಅರಣ್ಯ ಪ್ರದೇಶದ ಉತ್ಪತ್ತಿಯನ್ನು ಸಮರ್ಥ ರೀತಿಯಲ್ಲಿ ಬಳಸಿಕೊಳ್ಳುವುದಾದರೆ ಒಳ್ಳೆಯದು. ಬೃಹದಾಕಾರವಾಗಿರುವ ಅರಣ್ಯ ಇಲಾಖೆ ರೈತರಿಗೆ ಕಿರುಕುಳ, ತೊಂದರೆ ಕೊಡುವ ಬದಲು, ಅರಣ್ಯದ ಅರಣ್ಯ ಸಂಪತ್ತನ್ನು ಹೆಚ್ಚಿಸಿ ರೈತರಿಗೆ ಹಾಗೂ ಕಸುಬುದಾರರಿಗೆ ಅವಶ್ಯವಾದ ಉರುವಲು ಬೇಸಾಯ ಸಲಕರಣೆ ನಾಟಾಗಳನ್ನು ಯೋಗ್ಯ ಬೆಲೆಗೆ ಪೂರೈಸಿ ಅರಣ್ಯ ಉತ್ಪತ್ತಿಯನ್ನು ಹೆಚ್ಚಿಸಿ ಸರಕಾರಕ್ಕೆ ಪ್ರತಿವರ್ಷ ಹೆಚ್ಚಿನ ಆದಾಯ ಬರುವಂತೆ ಮಾಡುವುದು ಎಲ್ಲರ ಹಿತದೃಷ್ಟಿಯಿಂದ ಒಳ್ಳೆಯದು.

❑

ಬಹುಮುಖ ಆದರ್ಶ ಶಿಲ್ಪಿ : ಕೆ. ಹೆಚ್. ಪಾಟೀಲ್‌ಜೀ

"ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ । ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೆಯುಗೇ ।।" ಅಂದರೆ "ಸಾಧು ಸಜ್ಜನರ ರಕ್ಷಣೆಗಾಗಿ, ದುಷ್ಟರ ವಿನಾಶಕ್ಕಾಗಿಯೂ ಮತ್ತು ಒಳಿತು ಮಾಡುವ ಧರ್ಮ ಸ್ಥಾಪನೆಗಾಗಿಯೂ ಆಗಿಂದಾಗ್ಗೆ ಅವತರಿಸುತ್ತೇನೆ" ಎಂದು ಶ್ರೀಕೃಷ್ಣ ಅಂದು ಹೇಳಿದ್ದಾನೆ. ಇಂದಿನ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಪಕ್ಷಪಾತ, ಸ್ವಜನ ಪಕ್ಷಪಾತ, ಭ್ರಷ್ಟಾಚಾರ, ಅಧಿಕಾರ ದುರುಪಯೋಗ, ದುರಾಡಳಿತ, ಸ್ವಾರ್ಥ ಹೆಚ್ಚಾಗಿ ಆಡಳಿತ ಅಭಿವೃದ್ಧಿ ಹದಗೆಟ್ಟಿರುವಾಗ್ಗೆ ಈ ಎಲ್ಲಾ ಹದಗೆಟ್ಟ ಅಧರ್ಮ ಪರಿಸ್ಥಿತಿಯನ್ನು ನಿವಾರಣೆ ಮಾಡಲು ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಹಾಗೂ ಪತ್ರಿಕಾಂಗಗಳಲ್ಲಿ ಅನೇಕ ಸತ್ಪುರುಷರು ಮೂಡಿಬಂದಿರುವ ಹಾಗೂ ಪವಾಡಸದೃಶ ಮಹತ್ಕಾರ್ಯಗಳನ್ನು ಮಾಡಿದ ಹಾಗೂ ಮಾಡುತ್ತಿರುವ ಜೀವಂತ ಉದಾಹರಣೆಗಳು ಇತಿಹಾಸ ಪುಟಗಳಲ್ಲಿ ಸೇರುತ್ತಲೇ ಇವೆ.

"ಏತೇಸತ್ಪುರುಷಾಃ ಪರಾರ್ಥಘಟಿಕಾಃ ಸ್ವಾರ್ಥಂ ಪರಿತ್ಯಜ್ಯಯೇ" ಅಂದರೆ "ಸ್ವಾರ್ಥವನ್ನು ತೊರೆದು ಪರೋಪಕಾರದಲ್ಲಿ ನಿರತರಾದವರು ಸತ್ಪುರುಷರು" ಎಂಬಂತೆ ಎಲ್ಲಾ ಸಾರ್ವಜನಿಕ ಹಾಗೂ ಪ್ರಜಾತಂತ್ರ ವಲಯದಲ್ಲಿ ದೇಶಾದ್ಯಂತ ಅನೇಕ ಮಹಾ ಪವಾಡಪುರುಷರಿದ್ದಾರೆ. "ದೇಶ ಸೇವೆಯೇ ಈಶ ಸೇವೆ", "ಸರ್ವೇಜನಾಃ ಸುಖಿನೋಭವಂತು" ಎಂದು ಸಾರ್ವಜನಿಕ ಜೀವನರಂಗದಲ್ಲಿ "ಇವನಾರವ, ಇವನಾರವ, ಇವನಾರವರೆನ್ನದಿರಿ", "ಇವ ನಮ್ಮವ, ಇವ ನಮ್ಮವ, ಇವ ನಮ್ಮವನೆನ್ನಿರಿ", "ನ್ಯಾಯ ನಿಷ್ಠುರಿ ದಾಕ್ಷಿಣ್ಯಪರ ನಾವಲ್ಲ" ಎಂದು ಬಸವಣ್ಣನವರು ಹೇಳಿದಂತೆ ಜಾತ್ಯಾತೀತರಾಗಿ ಆದರ್ಶ ಆಡಳಿತ ಮಾಡಿದ ಮಹಾಪುರುಷರೂ ನಮ್ಮ ದೇಶದಲ್ಲಿದ್ದಾರೆ. "ಹೊತ್ತಾರೆ ಎದ್ದು ಹೊತ್ತು ಹೋಗದ ಮುನ್ನ ಸ್ಮರಿಸು ಈಶ್ವರನ" ಅಂದ ಹಾಗೆ ಅನೇಕ ಮಹಾಪುರುಷರು ತಮ್ಮ ತಮ್ಮ ಇಷ್ಟ ಈಶ್ವರನನ್ನು ಸ್ಮರಿಸಿ ಪೂಜಿಸಿ ಸಾರ್ವಜನಿಕ ಸೇವಾನಿರತರಾದ ಅನೇಕ ಮಹಾಪುರುಷರು ನಮ್ಮಲ್ಲಿದ್ದಾರೆ. ಇಂತಹ ಅನೇಕ ಸತ್ಪುರುಷ, ಮಹಾಪುರುಷ,

ಪವಾಡಪುರುಷರಲ್ಲಿ ಕೆ.ಹೆಚ್. ಪಾಟೀಲರು ಒಬ್ಬರು. ತಿರುಪತಿ ವೆಂಕಟೇಶ್ವರನ, ಪರಮ ಶಿವಭಕ್ತರಾಗಿ ರಾಗದ್ವೇಷವಿಲ್ಲದೆ ಶಿವನ ಕೃಪೆಯಿಂದ ಸಾರ್ವಜನಿಕ ಕ್ಷೇತ್ರದಲ್ಲಿ ಸಾಮಾನ್ಯ, ಸಾಮಾಜಿಕ ಹಾಗೂ ಆರ್ಥಿಕ ಸೇವೆಗಳನ್ನು ಜನತೆಗೆ ಮುಟ್ಟಿಸುವಲ್ಲಿ ಮುಂದಾದರು. ಶಿಕ್ಷಣ, ಸಹಕಾರ, ಹೈನಾಭಿವೃದ್ಧಿ, ಪಂಚಾಯತ್, ಗ್ರಾಮೀಣ ಅಭಿವೃದ್ಧಿ, ನಗರಾಭಿವೃದ್ಧಿ, ಕುಡಿಯುವ ನೀರು, ಕೃಷಿ, ಅರಣ್ಯ, ಆರೋಗ್ಯ, ಪಶುಸಂಗೋಪನೆ, ವ್ಯಾಪಾರೋದ್ಯಮ, ಪತ್ರಿಕೋದ್ಯಮ ಇತ್ಯಾದಿ ಕ್ಷೇತ್ರಗಳಲ್ಲಿ ಅವರು ಮಾಡಿರುವ ಸೇವೆ ಅಪಾರ. ಹತ್ತಿ ಬೆಳೆಗಾರ, ಕಬ್ಬು ಬೆಳೆಗಾರ, ಎಣ್ಣೆಕಾಳು ಬೆಳೆಗಾರ, ಆಹಾರ ಧಾನ್ಯ ಬೆಳೆಗಾರ ಇತ್ಯಾದಿ ಎಲ್ಲಾ ಬೆಳೆಗಾರರ ಆರ್ಥಿಕ ಅಭಿವೃದ್ಧಿಗಾಗಿ ಅಹೋರಾತ್ರಿ ಶ್ರಮಿಸಿದರು. ಅವರು ಅವರ ಸ್ನೇಹಿತರ ಸಹಕಾರದೊಂದಿಗೆ ಕಟ್ಟಿಕೊಂಡಿರುವ ನೂಲಿನ ಗಿರಣಿ, ಸಕ್ಕರೆ ಗಿರಣಿ, ಅಕ್ಕಿ ಗಿರಣಿ, ಎಣ್ಣೆ ಗಿರಣಿ, ಉಣ್ಣೆ ಗಿರಣಿ, ದಾಲ್ ಮಿಲ್ಲು, ಪಶು ಆಹಾರ ಗಿರಣಿ, ಧಾರವಾಡ ಜಿಲ್ಲೆಯನ್ನೊಳಗೊಂಡು ರಾಜ್ಯಾದ್ಯಂತ ಅಸಂಖ್ಯಾತಗೊಂಡವು. ಎಲ್ಲಾ ವರ್ಗದ ಜನರಿಗೆ ಅವರೊಬ್ಬ ಆಪತ್‌ಬಂಧುಗಳೇ ಆಗಿದ್ದರು. ಕಲ್ಯಾಣ ಮಂಟಪ, ಕಲಾಮಂದಿರ, ಆಸ್ಪತ್ರೆ, ಶಾಲೆ, ಕಾಲೇಜು ಕಟ್ಟಡ, ಪ್ರಸಾದ ನಿಲಯ, ವಸತಿ ನಿಲಯ, ಶಿವಾಲಯ, ದೇವಾಲಯು, ದರ್ಗಾ, ಮಸೀದಿ, ಬಸ್ತಿ, ಚರ್ಚುಗಳ ನಿರ್ಮಾಣಕ್ಕೆ ನಾಂದಿ ಹಾಕಿಕೊಟ್ಟವರು ಅವರು. ಅವರು ಕಟ್ಟಿ ನಡೆಸಿ ಬಿಟ್ಟು ಹೋದ ಸಂಘ ಸಂಸ್ಥೆಗಳನೇಕ. ಕೆ.ಹೆಚ್.ರಂತಹವರೇ ಆಗಿರಿ ನೀವೆಂದು ಕೈ ಬೀಸಿ ಕರೆಯುತ್ತವೆ. ಪತ್ರಿಕೋದ್ಯಮ, ಪಂಚಾಯತ್, ಸಹಕಾರ, ಗ್ರಾಮಾಭಿವೃದ್ಧಿ, ಶಿಕ್ಷಣ, ಕೃಷಿ ಇತ್ಯಾದಿ ಕ್ಷೇತ್ರದಲ್ಲಿ ಗ್ರಾಮ, ತಾಲ್ಲೂಕು, ಜಿಲ್ಲೆ, ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಪದಾಧಿಕಾರಿಯಾಗಿ, ಶಾಸಕರಾಗಿ, ಮಂತ್ರಿಯಾಗಿ ಅವರು ಮಾಡಿದ ಆದರ್ಶ ಹಾಗೂ ಸಾರ್ಥಕ ಸೇವೆ ಸಾಗರದಷ್ಟು. ಜನತೆಗೆ ಮಾಡಿದ ಉಪಕಾರ ಅಪಾರ. ಅವರ ಸಾಮಾಜಿಕ ಕೊಡುಗೆ ಅಂತ್ಯವೇ ಇಲ್ಲದ್ದು. ಅವರ ಸಾರ್ವಜನಿಕ ಶ್ರಮ ಅವಿಶ್ರಾಂತವಾದುದು. ಅವರ ನಡೆ-ನುಡಿ ತಡೆರಹಿತವಾದದ್ದು. ಅವರೊಬ್ಬ ಆದರ್ಶ, ಛಲದಂಕಮಲ್ಲರು, ಶ್ರಮಜೀವಿ, ಉಕ್ಕಿನ ಮನುಷ್ಯ, ದಿಟ್ಟ ಹೋರಾಟಗಾರ, ಸ್ವಾತಂತ್ರ್ಯಯೋಧ, ಅಪ್ರತಿಮ ಪವಾಡಪುರುಷ.

ಅವರೊಬ್ಬ ಜಾತ್ಯಾತೀತ ರಾಜಕಾರಣಿ, ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಎಲ್ಲರಿಗೂ ಮಾರ್ಗದರ್ಶನ ಮಾಡಿ ನೀಡಿ ಸಾರ್ವಜನಿಕ ಮಹತ್ಕಾರ್ಯಗಳನ್ನು ಸಾಧಿಸುತ್ತಿದ್ದ ಮಹಾಸಾರ್ಥಕ ಸಾಧಕರು. ಸಂಘಟನಾ ಚತುರರೂ ಆಗಿದ್ದರು. 1970-71ರಲ್ಲಿ ಕರ್ನಾಟಕ ರಾಜ್ಯ ಇಂದಿರಾ ಕಾಂಗ್ರೆಸ್ ಘಟಕದ ಪ್ರಧಾನರಲ್ಲೊಬ್ಬರಾಗಿ ಕಾಂಗ್ರೆಸ್ ಪಕ್ಷವನ್ನು ಬೆಳೆಸಿ ಆ ಕಾಂಗ್ರೆಸ್‌ನಲ್ಲಿ ಹಾಗೂ ಕಾಂಗ್ರೆಸ್ ಸರಕಾರದಲ್ಲಿ ಯಾವುದೇ ಜಾತೀಯವಾದಿಗಳಾಗದೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ಮುಸ್ಲಿಮ್, ಕ್ರಿಶ್ಚಿಯನ್ ಮೊದಲಾದ ಎಲ್ಲ ವರ್ಗದವರಿಗೂ ಸ್ಥಾನ ಸಿಗುವಲ್ಲಿ ಮುಂದಾಳತ್ವ ವಹಿಸಿದರು. 1970-71ರಲ್ಲಿ ಲೋಕಸಭೆ ಚುನಾವಣೆಯಲ್ಲಿ ಎಲ್ಲ ವರ್ಗದವರಿಗೆ ಸ್ಥಾನ ಸಿಗುವಂತೆ ಮಾಡಿದರು. ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಅಸ್ತಿತ್ವದಲ್ಲಿ ಬಂದು ದೇವರಾಜ ಅರಸು ಮುಖ್ಯಮಂತ್ರಿ ಆಗುವಂತೆ

ಶ್ರಮಿಸಿದರು. ಧಾರವಾಡ ಜಿಲ್ಲೆಯ ಕಾಂಗ್ರೆಸ್ ಅಧ್ಯಕ್ಷರಾಗಿ ಸಮರ್ಥ ರೀತಿಯಲ್ಲಿ ಪಕ್ಷವನ್ನು ಸಂಘಟಿಸಿ ಲೋಕಸಭೆಗೆ ಸರೋಜಿನಿ ಮಹಿಷಿ ಹಾಗೂ ಮೊಹಸೀನ್‌ರವರನ್ನು ಗೆಲ್ಲಿಸಿ ಅವರಿಗೆ ಉಚ್ಚಸ್ಥಾನಗಳನ್ನು ಕೊಡಿಸಿ ರಾಜ್ಯ ವಿಧಾನಸಭೆಗೆ 18ರಲ್ಲಿ 17 ಜನರನ್ನು ಕಾಂಗ್ರೆಸ್‌ನಿಂದ ಗೆಲ್ಲಿಸಿದ ಶ್ರೇಯಸ್ಸು ಅವರಿಗೆ. ಜಿಲ್ಲೆಯಲ್ಲಿ 7 ಜನ ಲಿಂಗಾಯತರು, ಬ್ರಾಹ್ಮಣ, ಕುರುಬ, ಶೈವ, ಮುಸ್ಲಿಮ್, ರೆಡ್ಡಿ ಶೈವ, ತಲಾ ಇಬ್ಬರು, ತೆಲುಗ ಶೈವ, ಹರಿಜನ್ ಶೈವ ತಲಾ ಒಬ್ಬರು ಹೀಗೆ 17 ಜನ ಚುನಾಯಿತರಾಗಿ ತಾವು (ಕೆ.ಹೆಚ್.) ಪ್ರಭಾವೀ ಮಂತ್ರಿಯಾಗಿ ಡಿ.ಕೆ. ನಾಯಕರ ಹಾಗೂ ಬಿ.ಜಿ. ಬಣಕಾರ ಅವರು ಮಂತ್ರಿಗಳಾಗಲು ನಾಂದಿ ಹಾಕಿದರು. ಅವರ ಕಾಲದಲ್ಲಿ ಧಾರವಾಡ ಜಿಲ್ಲೆಯಲ್ಲಿ ಹುಲಕೋಟಿ, ರಾಣಿಬೆನ್ನೂರ, ನವಲಗುಂದ, ಲಕ್ಷ್ಮೇಶ್ವರ ಮೊದಲಾದ ಸ್ಥಳಗಳಲ್ಲಿ ನೂಲಿನ ಗಿರಣಿ, ಹಾವೇರಿಯಲ್ಲಿ ಸಕ್ಕರೆ ಕಾರ್ಖಾನೆ, ರಾಣಿಬೆನ್ನೂರಿನಲ್ಲಿ ಉಣ್ಣೆ ಗಿರಣಿ, ಧಾರವಾಡದಲ್ಲಿ ಹಾಲಿನ ಪುಡಿ ಕಾರ್ಖಾನೆ ಹಾಗೂ ಕಲಾಮಂದಿರ ಇತ್ಯಾದಿಗಳ ಸ್ಥಾಪನೆಗೆ ನಾಂದಿ ಹಾಕಿದರು. ಧಾರವಾಡದಲ್ಲಿ ಕೃಷಿ ವಿಶ್ವವಿದ್ಯಾಲಯಗಳಾಗುವಲ್ಲಿ ಕೂಡ ಕೆ.ಹೆಚ್.ರವರ ಪಾತ್ರ ಬಹುಮುಖ್ಯವಾಗಿದೆ. 1972-77ರ ಅವಧಿಯಲ್ಲಿ ಜಿಲ್ಲೆಯ ಎಲ್ಲಾ 18 ಶಾಸಕರ ಸಹಕಾರ ಪಡೆದು ಎಲ್ಲರ ಧುರೀಣರಾಗಿ ಡಿ.ಕೆ. ನಾಯಕರ ಹಾಗೂ ಬಿ.ಜಿ. ಬಣಕಾರ ಮಂತ್ರಿಗಳೊಡನೆ ನಿಕಟವಾಗಿದ್ದು ಧಾರವಾಡ (ಧಾರವಾಡ-ಹಾವೇರಿ-ಗದಗ) ಜಿಲ್ಲೆಗೆ ಅವರು ಮಾಡಿದ ಮಹದುಪಕಾರ ಅಷ್ಟಿಷ್ಟಲ್ಲ. ಅದರಲ್ಲೂ ವಿಶೇಷವಾಗಿ ಗದಗ ತಾಲ್ಲೂಕು ಹಾಗೂ ಹುಲಕೋಟಿ ಗ್ರಾಮಕ್ಕೆ ಮಾಡಿಟ್ಟ ಹಾಗೂ ಕಟ್ಟಿಟ್ಟ ಬುತ್ತಿಯಂತಹ ಸಂಘ-ಸಂಸ್ಥೆಗಳ ಪ್ರತಿಫಲ ಸರ್ವರಿಗೂ ಯಾವುದೇ ಭೇದ-ಭಾವಗಳಿಲ್ಲದೆ ದೊರಕುತ್ತಿರುವುದು ಅವರ ಶ್ರಮದ ಪುಣ್ಯದ ಫಲವೆಂದರೆ ಅತಿಶಯೋಕ್ತಿಯಲ್ಲ. ಕೆ.ಹೆಚ್.ರವರು ಎಲ್ಲಾ ಕ್ಷೇತ್ರ, ಎಲ್ಲಾ ವಲಯ, ಎಲ್ಲಾ ವರ್ಗ, ಎಲ್ಲಾ ಹಂತದಲ್ಲಿ ಎಲ್ಲಾ ಕೃತಿಗಳಿಗೂ ಆದರ್ಶ ಅಗ್ರಗಣ್ಯರು. ಅವರ ಗರಡಿಯಲ್ಲಿ ತಯಾರಾದ ಅವರ ಅನುಯಾಯಿಗಳು ಈ ಹಳ್ಳಿಯಿಂದ ದೂರದೆತ್ತರದ ದಿಲ್ಲಿಯವರೆಗೂ ಹರಡಿದ್ದಾರೆ. ಅವರು ಅಪಾರವಾದ ಆದರ್ಶ ಹಾಗೂ ಮಾನವೀಯ ಮೌಲ್ಯಗಳ, ಎಂದೂ ಸವೆಯದ ರಾಶಿಯನ್ನೇ ಬಿಟ್ಟು ನಮ್ಮನ್ನಗಲಿದ್ದಾರೆ. ಅವರು ಕಟ್ಟಿದ ಸಂಘ-ಸಂಸ್ಥೆಗಳನ್ನೆಲ್ಲಾ ಯಶಸ್ವಿಯಾಗಿ ನಡೆಸಿ ಅವುಗಳ ಪ್ರತಿಪಲ ಸರ್ವರಿಗೂ ಸದಾಕಾಲ ನಿರಂತರ ದೊರೆಯುವಂತೆ ಮಾಡುವುದು ಅವರ ಅನುಯಾಯಿಗಳಾದ ನಮ್ಮ-ನಿಮ್ಮೆಲ್ಲರ ಆದ್ಯ ಕರ್ತವ್ಯವಾಗಬೇಕು. ಅವರೊಬ್ಬ ಆದರ್ಶ ಸಮಾಜ ಸೇವಕ, ಆದರ್ಶ ಹಿತಚಿಂತಕ, ಆದರ್ಶ ಆಡಳಿತಗಾರ, ಆದರ್ಶ ಅಸಾಧಾರಣ ಅನುಭವಿ, ಸಂಘ-ಸಂಸ್ಥೆಗಳ ಆದರ್ಶ ಶಿಲ್ಪಿ, ಆದರ್ಶ ಶಾಸಕ, ಆದರ್ಶ ಮಂತ್ರಿ, ಆದರ್ಶ ರಾಜಕಾರಣಿ, ಅವರ ಆದರ್ಶಗಳನ್ನೆಲ್ಲಾ ಅನುಸರಿಸಿ ಸಮಾಜಸೇವೆ ಮಾಡಿದರೆ ಪ್ರಗತಿಶೀಲ ರಾಜ್ಯ ಹಾಗೂ ರಾಷ್ಟ್ರ ಕಟ್ಟುವಲ್ಲಿ ಸಹಾಯಕಾರಿಯಾಗಬಲ್ಲುದು. ಇಂತಹ ಒಬ್ಬ ಮಹಾ ರಾಜಕೀಯ ಮುತ್ಸದ್ದಿ, ಅಗ್ರಗಣ್ಯ ಅನುಕರಣೀಯ ನಾಯಕರ ಶುಭ ಜಯಂತಿ ದಿನದಂದು ಚಿರಸ್ಮರಣೀಯ

ಪುತ್ಥಳಿಯನ್ನು ಅವರ ಅಚ್ಚುಮೆಚ್ಚಿನ ಕಾರ್ಯಕ್ಷೇತ್ರವಾದ ಈ ಸಹಕಾರಿ ಸುಕ್ಷೇತ್ರದಲ್ಲಿ ಅನುಷ್ಠಾನಗೊಳಿಸುತ್ತಿರುವುದು ಅಭಿನಂದನೀಯ. ಇಂಥ ನೇರ ನುಡಿ-ನಡೆಯ ಆದರ್ಶ ವರಪುತ್ರನನ್ನು ನೀಡಿದ ಹುಲಿಕೋಟಿ ಗ್ರಾಮ, ಗದಗ ತಾಲ್ಲೂಕು ಹಾಗೂ ಧಾರವಾಡ ಜಿಲ್ಲೆಯ ಕೊಡುಗೆ ಅಭಿನಂದನೀಯವಾದದ್ದು. ಕೆ.ಹೆಚ್.ರವರ ಪುತ್ಥಳಿ ನೋಡಿ ನಲಿದು ಅವರಂತಹ ಆದರ್ಶ ಪುರುಷರು ನಾವಾಗಬೇಕೆಂಬ ಉತ್ಕಟೇಚ್ಛೆ ಎಲ್ಲಾ ಹಂತದ, ಎಲ್ಲಾ ವರ್ಗದ, ಎಲ್ಲಾ ಸಾರ್ವಜನಿಕ ಕಾರ್ಯಕರ್ತರಿಗೆ ಉಂಟಾಗಿ ಸಾರ್ವಜನಿಕ, ಪ್ರಗತಿಗೆ ಮುಂದಾಗುವುದು ಒಳ್ಳೆಯದು. ಕೆ.ಹೆಚ್. ಪಾಟೀಲ್‌ರವರ ಒಬ್ಬ ಕಿರಿಯ ಸಹೋದರನಂತಾಗಿ ಅವರೊಡನೆ ರಾಜಕೀಯ ಹಾಗೂ ಸಾರ್ವಜನಿಕ ಕ್ಷೇತ್ರಗಳಲ್ಲಿ ದುಡಿವ ಅವಕಾಶ ನನಗೆ ದೊರೆತದ್ದು ಹಾಗೂ ಈ ಸಮಾರಂಭದಲ್ಲಿ ಪಾಲ್ಗೊಳ್ಳುವ ಅವಕಾಶ ಸಹ ನನಗೆ ದೊರೆತದ್ದು ಒಂದು ಭಾಗ್ಯ. ಕಾರ್ಯಕ್ರಮಗಳ ರೂವಾರಿಗಳೆಲ್ಲರಿಗೂ ನನ್ನ ಆತ್ಮೀಯ ಅಭಿನಂದನೆಗಳು.

❑

ಹೆಚ್ಚುತ್ತಿರುವ ತೆರಿಗೆ

ಹಸುಗು - ಮಕ್ಕಳಿಂದ ಹಿಡಿದು ಮುದುಕರ ವರೆಗಿನ ಎಲ್ಲಾ ಮಾನವರಿಗೂ ಹಾಲನ್ನು ಕೊಡುವ ಮುಗ್ಧ ಹಸುವಿನ ಮೈಯಲ್ಲಿಯ ಉಣ್ಣೆ, ಹಸುವಿನ ರಕ್ತವನ್ನು ಹೀರುತ್ತಲೇ ಇರುತ್ತದೆ. ಈ ದೇಶಕ್ಕಾಗಿ ದುಡಿಯಲು ಶ್ರಮಿಸುತ್ತಿರುವ ಜನತೆಯಿಂದ ವಿವಿಧ ತೆರಿಗೆ ಸುಂಕವನ್ನು ವಸೂಲು ಮಾಡಿದ ಹಣದಲ್ಲಿ ನೆಪಮಾತ್ರ ಶೇಕಡಾ 25ರಷ್ಟು ಹಣವನ್ನು ಜನತೆಯ ಅಭಿವೃದ್ಧಿಗೆ ವೆಚ್ಚ ಮಾಡಿ ಶೇಕಡಾ 75ರಷ್ಟು ಹಣವನ್ನು ಆಡಳಿತಗಾರರಾದ ಸ್ವಾತಂತ್ರಪೂರ್ವ ಪಾಳೇಯಗಾರರು, ಪರಕೀಯರು ಹಾಗೂ ಸ್ವಾತಂತ್ರ್ಯಾನಂತರದ ರಾಜಕೀಯ ಸರಕಾರಗಳು ತಮಗೆ ಹಾಗೂ ತಮ್ಮ ನೌಕರ ಸಿಬ್ಬಂದಿಗೆ ವೆಚ್ಚ ಮಾಡುತ್ತ ಬಂದಿವೆ. ಯಾವುದೇ ಸರಕಾರ ಈ ದೇಶದ ಜನತೆಯ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಕಿಂಚಿತ್ ಕಾಳಜಿ ಮಾಡದೆ ಆಡಳಿತಗಾರ ಸರಕಾರದಲ್ಲಿಯ ಮಂತ್ರಿ ಮಹೋದಯರು ಹಾಗೂ ಆ ಸರಕಾರಗಳಲ್ಲಿಯ ನೌಕರರ ಆರ್ಥಿಕ ಪರಿಸ್ಥಿತಿಯನ್ನು ಮಾತ್ರ ಸುಧಾರಿಸುವಲ್ಲಿ ಆಸಕ್ತಿ ವಹಿಸುತ್ತಿರುವುದು ಈ ದೇಶದ ಜನತೆಯ ದುರ್ದೈವ. ಯಾವುದೇ ಸರಕಾರ ಇರಲಿ ಅಥವಾ ಬರಲಿ ಆ ಸರಕಾರ ಜನತೆಯಿಂದ ಪ್ರತಿವರ್ಷ ತಪ್ಪದೆ ಹೆಚ್ಚು ಹೆಚ್ಚಾಗಿ ವಿವಿಧ ತೆರಿಗೆಯನ್ನು ವಸೂಲು ಮಾಡಿ ಹೀಗೆ ವಸೂಲು ಮಾಡಿದ ಹಣದಲ್ಲಿ ಆಡಳಿತಗಾರರ ಆರ್ಥಿಕ ಅಭಿವೃದ್ಧಿಗೆ ಮಾತ್ರ ಅತಿ ಹೆಚ್ಚು ಹಣ ವೆಚ್ಚ ಮಾಡಿ ಪ್ರಜೆಗಳ ಆರ್ಥಿಕ ಅಭಿವೃದ್ಧಿಗೆ ಅತಿ ಕಡಿಮೆ ಹಣ ವೆಚ್ಚ ಮಾಡಿ ಆಡಳಿತಗಾರರ ಜೀವನ ಒಂದು ಕಡೆ ಸುಖವಾಗಿದ್ದರೆ ಮತ್ತೊಂದು ಕಡೆ ಪ್ರಜೆಗಳ ಜೀವನ ಕಷ್ಟದಲ್ಲಿದ್ದು ಅಭಿವೃದ್ಧಿ ವಂಚಿತರಾಗಿ ವಿವಿಧ ಸಾಲದ ಶೂಲಕ್ಕೆ ಸಿಕ್ಕಿಬಿದ್ದು ನರಳುತ್ತಿದ್ದಾರೆ. ಆಡಳಿಗಾರರು ಜನತೆಯ ಹಿತ ಸಾಧಿಸದೆ ಕಟುಕರಂತೆ ವರ್ತಿಸುತ್ತಿರುವುದು ನಡೆದು ಬಂದಿರುವ ದುರ್ಗಮ ದಾರಿ. ದೇಶದಲ್ಲಿ ಆಡಳಿತಗಾರರ ಸುಖಜೀವನ ಹಾಗೂ ಪ್ರಜೆಗಳ ಕಷ್ಟಜೀವನ ಇವೆರಡರ ನಡುವಿನ ಆಳ ಹಾಗೂ ಅಂತರ ದಿನೇದಿನೇ ಹೆಚ್ಚಾಗುತ್ತಲೇ ಇದೆ. ಇದೆಲ್ಲಕ್ಕೂ ಉಪಾಯವೇನು? ನಿವಾರಣೆ ಹೇಗೆ?

ಪ್ರತಿವರ್ಷ ಹೆಚ್ಚುತ್ತಿರುವ ತೆರಿಗೆ ಆದಾಯದ ಬಹುಪಾಲು ಪ್ರತಿವರ್ಷ ಅತಿಯಾಗಿ ಹೆಚ್ಚುತ್ತಿದ್ದು ಸರಕಾರವನ್ನು ನಡೆಸುತ್ತಿರುವ ಮಂತ್ರಿಗಳ ಹಾಗೂ ಅವರೆಲ್ಲರ ಇಲಾಖೆಗಳ ಲಕ್ಷಾಂತರ ಸಿಬ್ಬಂದಿ ವೆಚ್ಚಕ್ಕೆ ಹೆಚ್ಚಾಗಿ ವೆಚ್ಚವಾಗಿ ಕೋಟ್ಯಂತರ ಪ್ರಜೆಗಳ ಅಭಿವೃದ್ಧಿಗೆ ಅತಿ ಕಡಿಮೆ ವೆಚ್ಚವಾಗುತ್ತಿದೆ. ಬಜೆಟ್‌ನಲ್ಲಿ ಕಾಣಿಸಿದ ಹೆಚ್ಚುತ್ತಿರುವ ತೆರಿಗೆ ವಸೂಲಾಗಿ ಅದರಲ್ಲಿ ಪ್ರತಿವರ್ಷ ವೇತನ ಭತ್ಯೆಗೆ ಬಜೆಟ್ ನಿಗದಿತ ಮೊತ್ತಕ್ಕಿಂತ ಅತಿಹೆಚ್ಚು ವೆಚ್ಚವಾಗುತ್ತಿರುವುದು ಒಂದು ಕಡೆಯಾದರೆ ಮತ್ತೊಂದು ಕಡೆ ಕೋಟ್ಯಂತರ ಪ್ರಜೆಗಳ ಆರ್ಥಿಕ ಅಭಿವೃದ್ಧಿಗೆ ಬಜೆಟ್ ನಿಗದಿತ ಮೊತ್ತಕ್ಕಿಂತ ಅತಿ ಕಡಿಮೆ ವೆಚ್ಚವಾಗುತ್ತಿದೆ. ಹೆಚ್ಚುತ್ತಿರುವ ತೆರಿಗೆಯಲ್ಲಿ ಬಜೆಟ್ ನಿಗದಿತ ಮೊತ್ತದಲ್ಲಿ ಕೆಲವೊಂದು ವರ್ಗದಿಂದ ನಿರ್ದಾಕ್ಷಿಣ್ಯವಾಗಿ ವಸೂಲು ಮಾಡುವುದು, ಸರಕಾರಕ್ಕೆ ಬೇಕಾದ ವರ್ಗದಿಂದ ದಾಕ್ಷಿಣ್ಯಪರವಾಗಿ ವಸೂಲು ಮಾಡದೆ ಅವರಿಗೆ ಅನುಕೂಲ ಮಾಡಿಕೊಟ್ಟು ಸಹಸ್ರಾರು ಕೋಟಿ ಹಣವನ್ನು ವಸೂಲು ಮಾಡದೆ ಸರಕಾರಿ ಖಜಾನೆಗೆ ಹಣದ ಖೋತಾ ಉಂಟಾಗಿ ಇದರ ದುಷ್ಪರಿಣಾಮ ಸರಕಾರದ ಆಡಳಿತಗಾರರ ವೇತನ ಅನುಕೂಲ ವೆಚ್ಚಕ್ಕೆ ಯಾವುದೇ ರೀತಿಯಲ್ಲಿ ವ್ಯತ್ಯಯ ಉಂಟಾಗದೆ ಪ್ರಜಾಪ್ರಭುಗಳ ಅಭಿವೃದ್ಧಿ ವೆಚ್ಚಕ್ಕೆ ಭಾರೀ ಪ್ರಮಾಣದಲ್ಲಿ ಕಡಿಮೆ ಆಗುತ್ತಿರುವುದು ಯಥಾಪ್ರಕಾರ ನಡೆದು ಬಂದಿದೆ. ಇದು ನಿಲ್ಲಲೇಬೇಕು.

ವರಮಾನ, ವ್ಯವಸಾಯ, ಭೂಕಂದಾಯ, ಮುದ್ರಾಂಕ ಮತ್ತು ನೋಂದಣಿ, ಸಂಪತ್, ಸ್ಥಿರಆಸ್ತಿ, ಅಬಕಾರಿ, ಮಾರಾಟ, ವಾಹನ, ವಿದ್ಯುಚ್ಛಕ್ತಿ, ಸರಕು ಮತ್ತು ಪ್ರಯಾಣಿಕ, ಇತ್ಯಾದಿ ತೆರಿಗೆಗಳು ಪ್ರತಿವರ್ಷ ಹೆಚ್ಚಾಗುತ್ತ 94-95ರಲ್ಲಿ 4711.15 ಕೋಟಿ, 95-96ರಲ್ಲಿ 5874.86 ಕೋಟಿ, 96-97ರಲ್ಲಿ 6490.31 ಕೋಟಿ, 97-98ರಲ್ಲಿ 7539.17 ಕೋಟಿ, 98-99ರಲ್ಲಿ 8054.11 ಕೋಟಿ, 99-2000ರಲ್ಲಿ 9603.57 ಕೋಟಿ, ಹೀಗೆ ಏರುತ್ತಲೇ ಇದ್ದು ಈ ತರದ ತೆರಿಗೆ ಅಭಿವೃದ್ಧಿ ಕಾರ್ಯಗಳಿಗೆ ಉಪಯುಕ್ತವಾಗದೆ ಹೆಚ್ಚುತ್ತಿರುವ ವೇತನ ಭತ್ಯೆಗೆ ಮಾತ್ರ ಉಪಯುಕ್ತವಾಗುತ್ತಿದೆ. ಬಜೆಟ್ ಪ್ರಕಾರ ಅಧಿಕಾರಿಶಾಹಿ ಸಂಪೂರ್ಣ ಅಥವಾ ಹೆಚ್ಚು ವೇತನ ಭತ್ಯೆ ಪಡೆಯುತಿದ್ದರೂ ಬಜೆಟ್ ಪ್ರಕಾರ ಆದಾಯ ಪಡೆಯದೆ ಬಜೆಟ್ ಪ್ರಕಾರ ಅಭಿವೃದ್ಧಿ ಕಾರ್ಯಗಳಿಗೆ ಹಣ ವೆಚ್ಚ ಮಾಡುತ್ತಿರುವುದಿಲ್ಲ. ತೆರಿಗೆ, ತೆರಿಗೆಯೇತರ ಹಾಗೂ ಕೇಂದ್ರದ ತೆರಿಗೆ ಪಾಲು ಹಾಗೂ ಸಹಾಯಾನುದಾನ ಮೊತ್ತವನ್ನು ನಿಗದಿತ ಬಜೆಟ್ ಪ್ರಕಾರ 94-95ರಲ್ಲಿ 1199-97 ಕೋಟಿ, 95-96ರಲ್ಲಿ 430.68 ಕೋಟಿ, 96-97ರಲ್ಲಿ 880.80 ಕೋಟಿ, 97-98ರಲ್ಲಿ 1153.06 ಕೋಟಿ, 98-99ರಲ್ಲಿ 811.25 ಕೋಟಿ ಆದಾಯ ಪಡೆಯದೆ ಜನತೆಯ ಅಭಿವೃದ್ಧಿಗೆ ಹಣವಿಲ್ಲದೆ ವಂಚಿಸಲಾಗಿದೆ. ಹೀಗೆ 94-95ರಿಂದ 97-98ರ ವರೆಗಿನ ನಾಲ್ಕು ವರ್ಷದ ಅವಧಿಯಲ್ಲಿ ಸುಮಾರು 3634.59 ಕೋಟಿ ಹಣವನ್ನು ಪಡೆಯದೆ ಅಭಿವೃದ್ಧಿಗೆ ಖಜಾನೆಯಲ್ಲಿ ಹಣ ಇಲ್ಲದಂತೆ ಸರಕಾರ ಮಾಡಿದೆ. ಅಂತೆಯೇ ರೆವಿನ್ಯೂ ವೆಚ್ಚವನ್ನು ಬಜೆಟ್ ಪ್ರಕಾರ ಮಾಡದೆ 94-95ರಿಂದ 97-98ರ ವರೆಗಿನ ನಾಲ್ಕು ವರ್ಷದ ಅವಧಿಯಲ್ಲಿ ಸುಮಾರು 2926.64 ಕೋಟಿ ವೆಚ್ಚ ಮಾಡದೆ ಅಭಿವೃದ್ಧಿ ಕುಂಠಿತ

ಗೊಳಿಸಲಾಗಿದೆ. ಹೀಗೆ ಬಜೆಟ್ ಪ್ರಕಾರ ಪ್ರತಿವರ್ಷ ರೆವಿನ್ಯೂ ಆದಾಯ ಹೆಚ್ಚಿಸಿದರೂ ಮತ್ತು ವಾಸ್ತವಿಕವಾಗಿ ಪ್ರತಿವರ್ಷ ರೆವಿನ್ಯೂ ಆದಾಯ ಹೆಚ್ಚು ಬಂದರೂ ಬಜೆಟ್ ಪ್ರಕಾರ ಸಹಸ್ರಾರು ಕೋಟಿ ಹಣ ಆದಾಯವನ್ನು ಪಡೆಯುವಲ್ಲಿ ಸರಕಾರ ವಿಫಲಗೊಂಡಿದೆ. ಅಂತೆಯೇ ಬಜೆಟ್ ಪ್ರಕಾರ ನಿಗದಿತ ಯೋಜನೆಗಳಿಗೆ ನಿಗದಿತ ರೆವಿನ್ಯೂ ಮೊತ್ತವನ್ನು ವೆಚ್ಚ ಮಾಡಲಿಕ್ಕೆ ಹಣವೇ ಇಲ್ಲದೆ ಸರಕಾರಿ ಖಜಾನೆ ಖಾಲಿಯಾದ ಕಾರಣ ಸಹಸ್ರಾರು ಕೋಟಿ ಹಣವನ್ನು ಅಭಿವೃದ್ದಿಗೆ ವೆಚ್ಚ ಮಾಡಲು ಸರಕಾರ ವಿಫಲಗೊಂಡಿದೆ. ಈ ಒಂದು ಮಾರಕ ಹಾಗೂ ಬಾಧಕ ಪರಂಪರೆ ಹೀಗೆಯೇ ಮುಂದುವರೆದರೆ ತೆರಿಗೆದಾರ ಪ್ರತಿವರ್ಷ ಹೆಚ್ಚು ಹೆಚ್ಚಾಗಿ ತೆತ್ತುವ ರೆವಿನ್ಯೂ ತೆರಿಗೆ ಅಧಿಕಾರಿಶಾಹಿಗೆ ಮಾತ್ರ ವೆಚ್ಚವಾಗಿ ಜನಸಾಮಾನ್ಯರ ಅಭಿವೃದ್ಧಿಗೆ ವೆಚ್ಚವಾಗದೆ ಹೋದರೆ ಸರಕಾರ ಜನಸಾಮಾನ್ಯ ಕರದಾತರ ರಕ್ತ ಹೀರುವ ಉಣ್ಣಿಯೆಂದು ಹೇಳದೆ ಗತ್ಯಂತರವಿಲ್ಲ. ಆಡಳಿತ ಅನುಭವ, ಜನಪರ ಚಿಂತನೆ, ಮುಂದಾಲೋಚನೆ, ದೂರಾಲೋಚನೆಗಳೇ ಇಲ್ಲದೆ ಹಾಗೂ ಜನಸಾಮಾನ್ಯರಿಗೆ ತಾರಕವಾಗದೆ ಮಾರಕವಾಗಿರುವ ಸರಕಾರವೆಂದು ಹೊಣೆಗಾರ ನಾಗರಿಕರು ಹೇಳದೆ ಗತ್ಯಂತರವಿಲ್ಲ. ಇನ್ನಾದರೂ ಕಾಲ ಮಿಂಚಿಲ್ಲ. ರಾಜ್ಯದ ಆಡಳಿತ ಅಭಿವೃದ್ಧಿಯ ಹೊಣೆಗಾರಿಕೆಯನ್ನು ಹೊತ್ತಿರುವ ಮುಖ್ಯಮಂತ್ರಿಗಳು ಬೇಜವಾಬ್ದಾರಿ, ಅದಕ್ಷ ಹಾಗೂ ಅನನುಭವಿ ಮಂತ್ರಿಗಳನ್ನು ಕೈಬಿಟ್ಟು ಅಪಾರ ಅನುಭವಶಾಲಿಗಳನ್ನು ಹಾಗೂ ಜವಾಬ್ದಾರಿ ಮಂತ್ರಿಗಳನ್ನು ನೇಮಿಸಿಕೊಂಡು ರಾಜ್ಯದ ಆದಾಯ ಹಾಗೂ ವೆಚ್ಚವನ್ನು ಬಜೆಟ್ ಪ್ರಕಾರ ಪಡೆದು ವೆಚ್ಚ ಮಾಡಿ ಎಲ್ಲ ವರ್ಗದ ಹಿತವನ್ನು ಕಾಪಾಡುವಂತೆ ಮಾಡುವುದು ರಾಜ್ಯದ ಜನತೆಯ ಹಾಗೂ ಸರಕಾರದ ಹಿತದೃಷ್ಟಿಯಿಂದ ಒಳ್ಳೆಯದು.

❑

ಬಜೆಟ್ : ಸರಕಾರದ ಆರ್ಥಿಕ ದಿವಾಳಿ

1994-95ರ ಬಜೆಟ್ ಅನ್ನು ಕಾಂಗ್ರೆಸ್ ಸರಕಾರ ಮಂಡಿಸಿದ್ದರೂ, 94-95ರ ಕೊನೆಯಲ್ಲಿಯೇ ಸರಕಾರ ಆಡಳಿತ ವಹಿಸಿಕೊಂಡು 31-3-95ಕ್ಕೆ ಆದಾಯ ಹಾಗೂ ವೆಚ್ಚ ಮಾಡಿದೆ. 94-95ರಿಂದ 97-98ರ ನಾಲ್ಕು ವರ್ಷದ ಅವಧಿಯಲ್ಲಿ ಈ ಸರಕಾರ ನಿಗದಿತ ಬಜೆಟ್ ಪ್ರಕಾರ 3664.59 ಕೋಟಿ ಮೊತ್ತದ ಆದಾಯ ಪಡೆಯುವಲ್ಲಿ ವಿಫಲವಾಗಿ ಕೇವಲ 35747.44 ಕೋಟಿ ತೆರಿಗೆ, ತೆರಿಗೆ ರಹಿತ ಆದಾಯ ಹಾಗೂ ಕೇಂದ್ರ ಸರಕಾರಿ ಸಹಾಯ ಹಾಗೂ ಪಾಲಿನ ಒಟ್ಟು ಆದಾಯ ಪಡೆದಿದೆ. ಈ ನಾಲ್ಕು ವರ್ಷಗಳ ಅವಧಿಯಲ್ಲಿ ಸಾಮಾನ್ಯ ಸೇವೆ, ಸಾಮಾಜಿಕ ಸೇವೆ, ಆರ್ಥಿಕ ಸೇವೆ ಹಾಗೂ ಸಹಾಯ ಧನಕ್ಕೆ ವೆಚ್ಚ ಮಾಡಬೇಕಾಗಿದ್ದ ಬಜೆಟ್ ಹಣದಲ್ಲಿ 2926.64 ಕೋಟಿ ಮೊತ್ತವನ್ನು ವೆಚ್ಚ ಮಾಡದೆ ಕೇವಲ 36837.02 ಕೋಟಿ ಹಣವನ್ನು ಮಾತ್ರ ವೆಚ್ಚ ಮಾಡಿ ನಿಗದಿತ ಅಭಿವೃದ್ಧಿ ಸಾಧಿಸುವಲ್ಲಿ ವಿಫಲಾಗಿದೆ. 98-99ರಲ್ಲಿ ಬಜೆಟ್ ಪ್ರಕಾರ 12979.56 ಕೋಟಿ ಆದಾಯ ಪಡೆಯಬೇಕಾಗಿದ್ದರೂ ಈಗ ಮಂಡಿಸಿದ ಬಜೆಟ್‌ನಲ್ಲಿ ಪರಿಷ್ಕೃತ ಅಂದಾಜು ಪ್ರಕಾರ ರೆವಿನ್ಯೂ ಆದಾಯವನ್ನು 12168.31 ಕೋಟಿಗೆ ಇಳಿಸಿ ಸುಮಾರು 811.25 ಕೋಟಿ ಮೊತ್ತದ ಆದಾಯ ಪಡೆಯಲು ಸರಕಾರ ವಿಫಲವಾಗಿದೆ ಹಾಗೂ ವಿಫಲವಾಗುತ್ತಿದೆ. 99-2000 ವರ್ಷಕ್ಕೆ 13991.78 ಕೋಟಿ ಆದಾಯ ಪಡೆಯುವ ಬಜೆಟ್ ಅಂದಾಜು ಇದ್ದು ಈ ವರ್ಷದಲ್ಲಿ ಸಹ ನಿರೀಕ್ಷಿತ ಆದಾ ಪಡೆಯಲು ಸರಕಾರಕ್ಕೆ ಸಾಧ್ಯವೇ ಇಲ್ಲ. ಹಾಗೆಯೇ 98-99-2000ನೇ ವರ್ಷಗಳಲ್ಲಿ ಸಹ ಬಜೆಟ್ ಪ್ರಕಾರ ರೆವಿನ್ಯೂ ವೆಚ್ಚ ಮಾಡುವ ಸಾಧ್ಯತೆ ಇಲ್ಲ. ಇದು ಹಿಂದಿನ ನಾಲ್ಕು ವರ್ಷಗಳ ವಾಸ್ತವಿಕ ಅಂಕಿ-ಅಂಶಗಳನ್ನು ನೋಡಿದರೆ ಆದಾಯ ಹಾಗೂ ವೆಚ್ಚ ಎರಡರಲ್ಲಿ ಸಹಸ್ರಾರು ಕೋಟಿ ಆದಾಯ ಪಡೆಯದೆ ಹಾಗೂ ವೆಚ್ಚ ಮಾಡದೆ ಇರುವುದು ಸುಸ್ಪಷ್ಟವಿದೆ.

ಸರಕಾರ ಕೊಟ್ಟ ಬಡ್ಡಿ 96-97ರಲ್ಲಿ 1208.07 ಕೋಟಿ, 97-98ರಲ್ಲಿ 1393.81 ಕೋಟಿ ಮೊತ್ತವಿದ್ದು, 98-99ರಲ್ಲಿ 1693.96 ಕೋಟಿಗೆ, 99-2000ದಲ್ಲಿ 2106.17 ಕೋಟಿಗೆ ಏರಲಿದೆ. ಕೇಂದ್ರ ಸರಕಾರದ ಸಾಲ, ಮುಕ್ತ ಮಾರುಕಟ್ಟೆ ಸಾಲ, ಇತರೆ ಸಾಲ, ಪ್ರಾವಿಡೆಂಟ್ ಫಂಡ್, ಠೇವಣಿ ಇತ್ಯಾದಿ ಒಟ್ಟು ಸರಕಾರದ ಯೆಬಿಲಿಟಿ 96-97ರಲ್ಲಿ

14043.04 ಕೋಟಿ, 97-98ರಲ್ಲಿ 15697.49 ಕೋಟಿ, 98-99ರಲ್ಲಿ 18550.49 ಕೋಟಿ, 99-2000ದಲ್ಲಿ 21748.58 ಕೋಟಿಗೆ ಏರಲಿದೆ.

ನಿವೃತ್ತ ನೌಕರರ ವೆಚ್ಚದ ವೇತನ ಭತ್ಯೆ 97-98ರಲ್ಲಿ 809.08 ಕೋಟಿ ವಾಸ್ತವ ವೆಚ್ಚವಾಗಿದ್ದು 99-2000ಕ್ಕೆ 1263.28 ಕೋಟಿಗೆ ಏರುತ್ತಾ ಸುಮಾರು 454.20 ಕೋಟಿ ಹೆಚ್ಚಾಗಲಿದೆ.

ಸರಕಾರದ ಒಟ್ಟು ರೆವಿನ್ಯೂ ಆದಾಯದಲ್ಲಿ ಶೇಕಡ 70ರಷ್ಟು ನೌಕರರ ವೇತನ ಭತ್ಯೆ ಹಾಗೂ ನಿವೃತ್ತ ನೌಕರರ ನಿವೃತ್ತಿ ವೇತನ ಭತ್ಯೆಗಳಿಗೆ ವೆಚ್ಚವಾಗುತ್ತಿದ್ದು ಇದನ್ನು ಸರಕಾರ ನಿಖರವಾಗಿ ಹೇಳದೆ ಅದನ್ನು ಗುಪ್ತವಾಗಿಡುವಲ್ಲಿ ಸರಕಾರ ಯಶಸ್ವಿಯಾಗಿದೆ. ಈ ವರ್ಷದ ಬಜೆಟ್ ಸಹ ಪ್ರತಿವರ್ಷದಂತೆ ಜನತೆಯಿಂದ ಪ್ರತಿವರ್ಷ ಹೆಚ್ಚು ಹೆಚ್ಚಾಗಿ ರೆವಿನ್ಯೂ ಆದಾಯ ಪಡೆದು ಜನತೆಗೆ ಆಶೆ ತೋರಿಸಿ ಅಭಿವೃದ್ಧಿ ಕಾರ್ಯಗಳನ್ನು ಕುಂಠಿತಗೊಳಿಸಿ ವಿಫಲಗೊಳ್ಳುತ್ತಿರುವುದು ಜನತೆಯ ದುರ್ದೈವ.

ಸರಕಾರ ಪ್ರತಿವರ್ಷ ಹೆಚ್ಚೆಚ್ಚು ಪಡೆದ ರೆವಿನ್ಯೂ ಆದಾಯ 94-95ರಲ್ಲಿ 6968.40 ಕೋಟಿ, 95-96ರಲ್ಲಿ 8543.45 ಕೋಟಿ, 96-97ರಲ್ಲಿ 9622.19 ಕೋಟಿ, 97-98ರಲ್ಲಿ 10613.40 ಕೋಟಿ ವಾಸ್ತವಿಕ ಇದ್ದು ಇದು 98-99ರಲ್ಲಿ 12168.31 ಕೋಟಿ, 99-2000ದಲ್ಲಿ 13991.78 ಕೋಟಿಗೆ ಏರಲಿದೆ. ಏರುತ್ತಿರುವ ಈ ಆದಾಯ ನೌಕರ ಸಿಬ್ಬಂದಿ ಸಲಹಲು ಮಾತ್ರ ಉಪಯೋಗವಾಗುತ್ತಿದ್ದು ಜನತೆಯ ಪ್ರಗತಿಗಾಗಿ ಅಲ್ಲವೆಂಬುದು ಕಳೆದ ನಾಲ್ಕು ವರ್ಷಗಳ ವೆಚ್ಚ ಮಾಡದ ಹಣದ ಮೊತ್ತವನ್ನು ನೋಡಿದರೆ ಸುಸ್ಪಷ್ಟ. ನಾಲ್ಕು ವರ್ಷದ ಹಣಕಾಸು ಇಲಾಖೆಯ ಕಾರ್ಯವೈಖರಿ ನೋಡಿದರೆ ರಾಜ್ಯದ ಜನತೆಯ ಅಭಿವೃದ್ಧಿ ಪ್ರಗತಿ ಮಾಡುವಲ್ಲಿ ಸಂಪೂರ್ಣ ವಿಫಲಗೊಂಡಿರುವುದು ಹಾಗೂ ರಾಜ್ಯದ ಹಣಕಾಸು ಪರಿಸ್ಥಿತಿ ಹದಗೆಟ್ಟಿರುವುದು ಹಾಗೂ ದಿವಾಳಿ ಅಂಚಿನಲ್ಲಿರುವುದು ಸುಸ್ಪಷ್ಟವಾಗಿದೆ.

❑

ಉದ್ಯೋಗಪತಿ : ಉಪನಾಳ ಗೂಳಪ್ಪನವರು

ಜನಸಾಮಾನ್ಯರ ಮಧ್ಯೆ ಬೆಳೆದು, ಬಾಳಿ ಬದುಕಿ, ಬಹುಜನಪ್ರಿಯರಾಗಿದ್ದರು ಉಪನಾಳರು. ಅವರು ಕಷ್ಟಜೀವಿ, ಶ್ರಮಜೀವಿಗಳಾಗಿ ಮೇಲಕ್ಕೇರಿ ಸುಖಜೀವಿ ಗಳಾಗಿದ್ದರು. ಜನರ ಪ್ರೀತಿಗೆ ಪಾತ್ರರಾಗಿ ಎಲ್ಲರ ವಿಶ್ವಾಸ ಗಳಿಸಿದ್ದರು. ಅವರೊಬ್ಬ ದಾಸೋಹ ಜೀವಿಗಳಾಗಿದ್ದರು. ಅವರ ಆಧಿತ್ಯ, ನಯನುಡಿ, ನೋಟಗಳಲ್ಲಿ ಎಲ್ಲರನ್ನು ಆಕರ್ಷಿಸುತ್ತಿದ್ದರು. ಅವರದು ಆಕರ್ಷಣೀಯ ವ್ಯಕ್ತಿತ್ವ. ಅವರೊಬ್ಬ ಸಂಘಟನಾ ಚತುರರು. ಅನೇಕ ಸಹಕಾರ ಸಂಘಗಳನ್ನು ರೈತರ ಆರ್ಥಿಕ ಅಭಿವೃದ್ಧಿಗಾಗಿ ರಚಿಸಿದರು, ಬೆಳೆಸಿದರು ಹಾಗೂ ಬೆಳೆದು ನಿಲ್ಲುವಂತೆ ಮಾಡಿದರು. ಸರಕಾರ ಯಾವುದೇ ಇರಲಿ ಯಾರದೇ ಇರಲಿ, ಆ ಸರಕಾರದಲ್ಲಿ ತಮ್ಮ ವಾದ ಬೇಡಿಕೆಯನ್ನು ಸಲ್ಲಿಸಿ ಸರಕಾರದಿಂದ ಸಿಗಬೇಕಾದ ಸವಲತ್ತುಗಳನ್ನೆಲ್ಲ ಪಡೆದು ಆ ಸವಲತ್ತು ಸದುಪಯೋಗವಾಗಲಿಕ್ಕೆ ಬಹುವಾಗಿ ಶ್ರಮಿಸಿದರು. ಗ್ರಾಮ ವ್ಯವಸಾಯ ಸಹಕಾರಿ ಪತ್ತಿನ ಸಂಘ ಗ್ರಾಮೀಣ ಕೃಷಿ ಅಭಿವೃದ್ಧಿ ಬ್ಯಾಂಕು ವ ವ್ಯವಸಾಯೋತ್ಪನ್ನ ಸಹಕಾರಿ ಮಾರಾಟ ಸಂಘ, ಜಿಲ್ಲಾ ಸಹಕಾರಿ ಕೇಂದ್ರ ಬ್ಯಾಂಕು, ರೈತರ ಗೋವಿನ ಜೋಳ ಸಂಸ್ಕರಣಾ ಸಹಕಾರಿ ಸಂಘ, ಇತ್ಯಾದಿ ಇನ್ನೂ ಅನೇಕ ಸಹಕಾರಿ ಸಂಘಗಳನ್ನು ರಚಿಸುವಲ್ಲಿ ಹಾಗೂ ಅವುಗಳ ಉಪಯೋಗ ರೈತರಿಗೆ ಸಿಗುವಲ್ಲಿ ಹಾಗೂ ಸವಲತ್ತುಗಳನ್ನು ಒದಗಿಸಿಕೊಡುವಲ್ಲಿ ಅಗ್ರಪಾತ್ರ ವಹಿಸಿದ್ದರು. ಸಹಕಾರಿ ಕ್ಷೇತ್ರದಲ್ಲಿ ಹತ್ತಿ ಬೆಳೆದ ಹತ್ತಿ ಬೆಳೆಗಾರರ ಹಿತದೃಷ್ಟಿಯಿಂದ ನೂಲು ಪಡೆಯುವ ನೇಕಾರರ ಹಿತದೃಷ್ಟಿಯಿಂದ ಶ್ರೀ ಸೋಮೇಶ್ವರ ರೈತರ ಸಹಕಾರಿ ನೂಲಿನ ಗಿರಣಿಯನ್ನು ಸ್ಥಾಪಿಸಿ ಸಂಸ್ಥಾಪಕರಾಗಿ ಸಂಸ್ಥಾಪಕ ಅಧ್ಯಕ್ಷರಾಗಿ ಆ ಗಿರಣಿಯನ್ನು ಬೆಳೆಸಿದ್ದಾರೆ. ಅವರು ಬೆಳೆಸಿದ ಈ ಗಿರಣಿಯನ್ನು ಅವರ ಸ್ನೇಹಿತ ಸಹಕಾರಿ ಬಂಧುಗಳು ಯಾವುದೇ ರೀತಿಯ ಸಂಕಷ್ಟದಲ್ಲಿರದಂತೆ ಬಾಳಿ ಬದುಕಿ ಬಹುಜನ ರೈತರಿಗೆ, ನೇಕಾರರಿಗೆ ಅದು ಕಾಮಧೇನು ಕಲ್ಪವೃಕ್ಷವಾಗುವಂತೆ ನಡೆಸಿಕೊಂಡು ಹೋಗುವುದು ಅತ್ಯಗತ್ಯ. ಅವರಿಗೆ ಚಿರಶಾಂತಿಯನ್ನು ತೋರಿ ಅವರು ಕಟ್ಟಿ ಬೆಳೆಸಿದ ಎಲ್ಲಾ ಸಂಸ್ಥೆಗಳು ಸರಿಯಾಗಿ ನಡೆದು ಎಲ್ಲರಿಗೂ ಉಪಯುಕ್ತವಾಗಿ ಉತ್ತಮ ರೀತಿಯ ವ್ಯವಹಾರ ಮಾಡುವಂತೆ ಮಾಡಿಸುವುದು ಎಲ್ಲ

ಅನುಯಾಯಿಗಳ ಕರ್ತವ್ಯ. ಹಾವೇರಿ ಸಂಗೂರ ಸಹಕಾರಿ ಸಕ್ಕರೆ ಕಾರ್ಖಾನೆಯ ಡೈರೆಕ್ಟರರಾಗಿ ಕಬ್ಬು ಬೆಳೆಗಾರರ ಹಿತರಕ್ಷಣೆ ಮಾಡುವಲ್ಲಿ ಸಹ ದಿ। ಗೂಳಪ್ಪನವರು ಸಾಕಷ್ಟು ಶ್ರಮಿಸಿದ್ದಾರೆ. ರಾಜ್ಯದ ಕರ್ನಾಟಕ ಸಹಕಾರಿ ನೂಲಿನ ಗಿರಣಿಗಳ ಮಹಾಮಂಡಲದ ಉಪಾಧ್ಯಕ್ಷರಾಗಿ ರಾಜ್ಯದಲ್ಲಿನ ಎಲ್ಲಾ ನೂಲಿನ ಗಿರಣಿಗಳನ್ನು ಸುವ್ಯವಸ್ಥಿತ ವ್ಯವಹಾರ, ಆಡಳಿತ ಹಾಗೂ ಹತ್ತಿ ಬೆಳೆಗಾರರ, ನೇಕಾರರ ಅಭ್ಯುದಯ ಹಾಗೂ ಅಭಿವೃದ್ಧಿಗಾಗಿ ಸಹ ಸಾಕಷ್ಟು ಶ್ರಮಿಸಿದ್ದಾರೆ. ಲಕ್ಷ್ಮೇಶ್ವರ ನಗರ ಸಭೆ ನಗರದ ಯಾವತ್ತೂ ನಾಗರಿಕರ ಅನುಕೂಲತೆ ಸವಲತ್ತು ಹಾಗೂ ನಗರದ ಅಭಿವೃದ್ಧಿಗಾಗಿ ನಗರಸಭೆಯ ಕೂಡ ಉತ್ತಮ ಸ್ನೇಹವನ್ನಿಟ್ಟುಕೊಂಡು ಶ್ರಮಿಸಿದ್ದಾರೆ. ಕೃಷಿ ಮಾರುಕಟ್ಟೆಯಲ್ಲಿ ರೈತರ ಶೋಷಣೆಯಾಗದಂತೆ ತೂಕದಲ್ಲಿ ಯಾವುದೇ ಮೋಸ ವಂಚನೆಯಾಗದಂತೆ ಪ್ರಾಮಾಣಿಕ ಬೆಲೆ ಸಿಗುವಂತೆ ಶ್ರಮಿಸಿದ್ದಾರೆ. ಅಂತೂ ಸಹಕಾರ ಕ್ಷೇತ್ರದಲ್ಲಿ ವಿವಿಧ ಹಂತದಲ್ಲಿ ವಿವಿಧ ಉದ್ದೇಶಗಳ ಸಹಕಾರ ಸಂಘಗಳಲ್ಲಿ ಸೇವೆಗೈದು ಸಹಕಾರ ಸಂಘಗಳ ಪ್ರತಿಫಲ ಜನಸಾಮಾನ್ಯರಿಗೆ ಸಿಗುವಲ್ಲಿ ವಿಶ್ವಪ್ರಯತ್ನ ಮಾಡಿದ್ದಾರೆ. ಸಹಕಾರ ಕ್ಷೇತ್ರದಲ್ಲಿ ಇವರೊಬ್ಬ ವಿಶೇಷ ಆದರ್ಶ ಸಹಕಾರಿಗಳಾಗಿದ್ದರು.

ಬಹುಜನ ಬಂಧುಗಳಾದ ಗೂಳಪ್ಪನವರು ಜನಾನುರಾಗಿಗಳಾಗಿ ಕರ್ನಾಟಕ ವಿಧಾನಸಭೆಗೆ ಶಿರಹಟ್ಟಿ ಮತಕ್ಷೇತ್ರದಿಂದ ಚುನಾಯಿತ ಪ್ರಜಾಪ್ರತಿನಿಧಿಯಾಗಿ ಸರಕಾರದಿಂದ ಸಿಗಬೇಕಾದ ಸವಲತ್ತುಗಳು ಸಹಾಯಗಳು ಸರ್ವರಿಗೂ ಹಾಗೂ ಸರ್ವಕ್ಷೇತ್ರಕ್ಕೂ ಒದಗಿಸಿಕೊಡುವಲ್ಲಿ ಬಹಳಷ್ಟು ಶ್ರಮಿಸಿದ್ದಾರೆ. ಶಾಸಕರಿದ್ದಾಗ ಕರ್ನಾಟಕ ವೇರ್‌ಹೌಸಿಂಗ್ ಕಾರ್ಪೊರೇಷನ್ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುವ ಅವಕಾಶ ಕೂಡ ಅವರಿಗೆ ಒದಗಿಬಂದಿತ್ತು. ಅಲ್ಲಿ ಸಹ ಅವರು ಅಧ್ಯಕ್ಷರಾಗಿ ಜನತೆ ಮರೆಯಲಾಗದ ಮಹತ್ಕಾರ್ಯಗಳನ್ನು ಮಾಡಿದರು. ಶಾಸಕರಾಗಿ ಕ್ಷೇತ್ರದ ವಸತಿ ಸಮಸ್ಯೆ, ಸಾರಿಗೆ, ರಸ್ತೆ ಸಮಸ್ಯೆ, ಕುಡಿಯುವ ನೀರಿನ ಸಮಸ್ಯೆ, ನೀರಾವರಿ ಸಮಸ್ಯೆ, ನಾಗರಿಕ ಸರಬರಾಜು ಸಮಸ್ಯೆ, ಆರೋಗ್ಯ ಸಮಸ್ಯೆ, ಶಾಲಾಕಟ್ಟಡ ಸಮಸ್ಯೆ, ಸಹಕಾರ ಪಂಚಾಯತ್‌ರಾಜ್ ಅಭಿವೃದ್ಧಿ ಸಮಸ್ಯೆ ಇತ್ಯಾದಿ ಇನ್ನೂ ಅನೇಕ ಸಾರ್ವಜನಿಕ ಅಭಿವೃದ್ಧಿ ಸಮಸ್ಯೆಗಳನ್ನು ಪರಿಹರಿಸಿ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿ ಸಾಧಿಸುವಲ್ಲಿ ಶಕ್ತಿಮೀರಿ ಕಾರ್ಯನಿರ್ವಹಿಸಿ ದ್ದಾರೆ. ಅವರೊಬ್ಬ ಶಿವಭಕ್ತರಾಗಿ ಈಶ್ವರನಲ್ಲಿ ಶ್ರದ್ಧೆ, ಭಕ್ತಿ, ನಿಷ್ಠೆಯನ್ನು ಹೊಂದಿದ್ದರು. ಅವರೊಬ್ಬ ಪ್ರಜಾಭಕ್ತರಾಗಿ ಪ್ರಜೆಗಳಲ್ಲಿ ನಂಬಿಕೆ, ವಿಶ್ವಾಸ, ಸ್ನೇಹ, ಅಭಿಮಾನ ಹಿತರಕ್ಷಣೆಯನ್ನು ಹೊಂದಿದ್ದರು. ಅವರೊಬ್ಬ ಸ್ವಾಮಿಭಕ್ತರಾಗಿ ಸ್ವಾಮಿಗಳಲ್ಲಿ ಅಲ್ಲದೆ ಅವರ ಅಚಲವಾದ ಅಪಾರ ಭಕ್ತಿ, ನಿಷ್ಠೆಯನ್ನು ಹೊಂದಿದ್ದರು. ಇಂತಹ ಸಾಮಾನ್ಯ ಸಾಮಾಜಿಕ, ರಾಜಕೀಯ, ಧಾರ್ಮಿಕ ವ್ಯಕ್ತಿ-ಶಕ್ತಿ 68ರ ಪ್ರಾಯದ ಮೊದಲೇ ನಮ್ಮನ್ನಗಲಿ ಹೋಗಬಾರದಾಗಿತ್ತು. ಅದು ದೈವೇಚ್ಛೆ. ವಿಧಿಲಿಖಿತವನ್ನು ಯಾರೂ ಮೀರಲಿಕ್ಕೆ

ಆಗುವುದಿಲ್ಲ. ಅವರ ಪರಿವಾರದವರು, ಸ್ನೇಹಿತರು, ಅಭಿಮಾನಿಗಳು, ಅಪಾರ ಬಂಧುಗಳು, ಅವರು ಬಿಟ್ಟು ಹೋಗಿರುವ ಅನೇಕ ಆದರ್ಶಗಳನ್ನು ಎತ್ತಿಹಿಡಿದು ಅವರು ಕಟ್ಟಿದ ಎಲ್ಲಾ ಸಂಘ-ಸಂಸ್ಥೆ-ಘಟಕಗಳು ಉತ್ತಮ ರೀತಿಯಿಂದ ಕಾರ್ಯನಿರ್ವಹಿಸುವಂತೆ ಹಾಗೂ ವ್ಯವಹಾರ ಮಾಡುವತೆ, ಜನತೆಗೆ ಅವುಗಳ ಸಾರ್ಥಕ ಸೇವೆ ಸಿಗುವಂತೆ ಮಾಡಿದರೆ ಒಳ್ಳೆಯದು. ಅವರಿಗೆ ಚಿರ ಹಾಗೂ ಸ್ಥಿರ ಶಾಂತಿಯನ್ನು ಕೊಡುವಲ್ಲಿ ಎಲ್ಲರ ಪಾತ್ರ ಪ್ರಮುಖವಾಬೇಕು.

❑

ವೆಚ್ಚವಾಗದ ಬಜೆಟ್ ಮೊತ್ತ

ರಾಜ್ಯದ ಜನಸಂಖ್ಯೆ 1991ರಲ್ಲಿ 4.50 ಕೋಟಿ. ಇದರಲ್ಲಿ 0.74 ಕೋಟಿ ಪರಿಶಿಷ್ಟ ಜಾತಿಯುವರು, 0.20 ಕೋಟಿ ಪರಿಶಿಷ್ಟ ಪಂಗಡದವರು, ಒಟ್ಟು ಜನಸಂಖ್ಯೆಯಲ್ಲಿ ಗ್ರಾಮೀಣ ಜನಸಂಖ್ಯೆ 3.11 ಕೋಟಿ. ನಗರ ಜನಸಂಖ್ಯೆ 1.40 ಕೋಟಿ. ಈ ಎಲ್ಲಾ ಜನಸಂಖ್ಯೆ ಶರವೇಗದಲ್ಲಿ ಏರುತ್ತ ಬಂದಿದೆ. ಈ ಎಲ್ಲ ಜನತೆಗೆ ರೈತರ, ಕೂಲಿಗಾರರ, ಹಾಲು ಉತ್ಪಾದಕರ, ಮೀನುಗಾರರ, ಕೃಷಿ ಕಾರ್ಮಿಕರ ಅವರಲ್ಲೂ ಗ್ರಾಮೀಣ ಶ್ರಮಜೀವಿಗಳ ಸೇವೆ ಅಪಾರ ಹಾಗೂ ಅವರ ಕೊಡುಗೆಗೆ ಕೊನೆಯೇ ಇಲ್ಲ. ಎಲ್ಲಾ ತರಹದ ಗ್ರಾಮೀಣ ಜನತೆಯ ಹಾಗೂ ಗ್ರಾಮೀಣ ಪ್ರದೇಶದ ಸರ್ವಾಂಗೀಣ ಅಭಿವೃದ್ಧಿ ಸಾಧಿಸಿ ಅವರ ಆರ್ಥಿಕ ಪರಿಸ್ಥಿತಿಯನ್ನು ಹಾಗೂ ಗ್ರಾಮೀಣ ಅಭಿವೃದ್ಧಿಯನ್ನು ಸಾಧಿಸುವ ಸಲುವಾಗಿ ರಾಜ್ಯ ಸರಕಾರ ಆರ್ಥಿಕ ಸೇವೆಗಳನ್ನು ಸಾಧಿಸಲು ಅನೇಕ ಕಾರ್ಯಕ್ರಮಗಳನ್ನು ಆಯವ್ಯಯದಲ್ಲಿ ಹಾಕಿಕೊಂಡು ಆ ಬಗ್ಗೆ ಪ್ರತಿವರ್ಷ ಬಜೆಟ್ ಅಧಿವೇಶನದಲ್ಲಿ ವಿಧಾನ ಮಂಡಲದ ಒಳಗೆ ಹಾಗೂ ಹೊರಗೆ ಭಾರೀ ಕಾರ್ಯಕ್ರಮಗಳನ್ನು ಸಾಧಿಸುವುದಾಗಿ ಹಾಗೂ ಭಾರೀ ಹಣವನ್ನು ವೆಚ್ಚ ಮಾಡುವುದಾಗಿ ಶಾಸಕರಿಗೆ ಹಾಗೂ ರಾಜ್ಯದ ಜನತೆಗೆ ನಂಬಿಸಿ ಹಾಗೆ ಮಾಡದೆ ಜನತೆಯನ್ನು ವಂಚಿಸಿ, ಘಸಾಯಿಸಿ, ಮೋಸ ಮಾಡಿ ನಿಗದಿತ ಆರ್ಥಿಕ ಅಭಿವೃದ್ಧಿ ಕಾರ್ಯಗಳನ್ನು ಮಾಡದೆ ನಿಗದಿತ ಹಣವನ್ನು ವೆಚ್ಚ ಮಾಡದೆ ಬಂದಿರುವ ಹಾಗೂ ಬರುತ್ತಿರುವುದು ಸರಕಾರದ ಹೊಣೆಗೇಡಿ, ಬೇಜವಾಬ್ದಾರಿ, ಜನವಿರೋಧಿ ಕರ್ತವ್ಯಚ್ಯುತಿ ನಡುವಳಿಕೆ ಅಕ್ಷಮ್ಯ ಅಪರಾಧ ಹಾಗೂ ಖಂಡನೀಯ. ಸರಕಾರ ಹಾಗೂ ಸರಕಾರದಲ್ಲಿಯ ಸಂಬಂಧಿಸಿದ ಮಂತ್ರಿಗಳ ಹಿಂಡಿಗೆ ನಾಚಿಕೆ ಬರಬೇಕು. ವಿಧಾನ ಮಂಡಲದ ಒಳಗೆ ಹಾಗೂ ಹೊರಗೆ ಅತಿರಂಜಿತ ಅಭಿವೃದ್ಧಿ ಪೌರುಷ ಮಾಡಿ ಹೇಳುವದೊಂದಾದರೆ, ಮಾಡುವ ಮಾರಕ ಮತ್ತೊಂದು.

ಜನತೆಯ ಆರ್ಥಿಕ ಸೇವೆಗಳಾದ ಸಸ್ಯಸಂಗೋಪನೆ, ಭೂಸಾರ ಮತ್ತು ಜಲಸಂರಕ್ಷಣೆ, ಪಶುಸಂಗೋಪನೆ, ಹೈನಾಭಿವೃದ್ಧಿ, ಮೀನುಗಾರಿಕೆ, ಅರಣ್ಯ ಮತ್ತು ವನ್ಯಜೀವನ, ಆಹಾರ ದಾಸ್ತಾನು ಮತ್ತು ಉಗ್ರಾಣ, ಕೃಷಿ ಸಂಶೋಧನೆ ಮತ್ತು ಶಿಕ್ಷಣ, ಸಹಕಾರ, ಇತರ ಅಭಿವೃದ್ಧಿ, ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳು ಹೀಗೆ ಈ ಎಲ್ಲಾ 14 ಶೀರ್ಷಿಕೆಯ ಯೋಜನೆಗಳಿಗೆ 94-95ರಲ್ಲಿ ಬಜೆಟ್ ಹಣ 1333.30 ಕೋಟಿ, ಪರಿಷ್ಕೃತ ಬಜೆಟ್ ಹಣ 1203.33 ಕೋಟಿ, ವಾಸ್ತವಿಕವಾಗಿ ವೆಚ್ಚ ಮಾಡಿದ ಹಣ 1941.69 ಕೋಟಿ, ವೆಚ್ಚ ಮಾಡದೆ ಉಳಿಸಿದ ಹಣ 291.61 ಕೋಟಿ. 95-96ರಲ್ಲಿ ಬಜೆಟ್ ಹಣ 1614.96 ಕೋಟಿ, ಪರಿಷ್ಕೃತ ಬಜೆಟ್ ಹಣ 1494.67 ಕೋಟಿ, ವಾಸ್ತವಿಕವಾಗಿ ವೆಚ್ಚ ಮಾಡಿದ ಹಣ 1205.70 ಕೋಟಿ. ವೆಚ್ಚವಾಗದ ಹಣ 410.17 ಕೋಟಿ. 96-97ರಲ್ಲಿ ಬಜೆಟ್ ಹಣ 1670.35 ಕೋಟಿ. ಪ.ಬ.. ಹಣ 1442.16 ಕೋಟಿ, ವಾಸ್ತವಿಕ ವೆಚ್ಚ 1195.19 ಕೋಟಿ. ವೆಚ್ಚವಾಗದ ಹಣ 475.16 ಕೋಟಿ. 97-98ರಲ್ಲಿ ಬಜೆಟ್ ಹಣ 1620.70 ಕೋಟಿ, ಪ.ಬ. ಹಣ 1514.15 ಕೋಟಿ, ವಾಸ್ತವಿಕ ವೆಚ್ಚ 1164.36 ಕೋಟಿ, ವೆಚ್ಚವಾಗದ ಹಣ 456.34 ಕೋಟಿ, 98-99ರಲ್ಲಿ ಬಜೆಟ್ ಹಣ 1703.04 ಕೋಟಿ, ಪರಿಷ್ಕೃತ ಬಜೆಟ್ ಹಣ 1607.50 ಕೋಟಿ, ವೆಚ್ಚ ಮಾಡದೆ ಉಳಿಸಬೇಕಾದ ಅಂದಾಜು ಹಣ 95.55 ಕೋಟಿ ಮಾಡಿದ್ದು, ವಾಸ್ತವಿಕ ವೆಚ್ಚ ಹಾಗೂ ವೆಚ್ಚವಾಗದೆ ಉಳಿಯಬಹುದಾದ ಹಣ ಮುಂದಿನ ಬಜೆಟ್ ಅಧಿವೇಶನದಲ್ಲಿ ಗೊತ್ತಾಗಬೇಕು. ಅಂತೆಯೇ 99-2000ದಲ್ಲಿ ಬಜೆಟ್ ಹಣ 1941.66 ಕೋಟಿ ನಿಗದಿಯಾಗಿದ್ದು ಇದು ಜೊಳ್ಳು ಆಶ್ವಾಸನೆಯಾಗಿದ್ದು ವಾಸ್ತವಿಕ ಅಂಶ ಗೊತ್ತಾಗಲು ಇನ್ನೆರಡು ವರ್ಷ ಬೇಕು. ಹೀಗೆ ಬಜೆಟ್ ಕಾಲಕ್ಕೆ ಅಂದಾಜು ವೆಚ್ಚವನ್ನು ಹೆಚ್ಚಿಗೆ ತೋರಿಸಿ ಜನತೆಗೆ ಆಶೆ ತೋರಿಸಿ, ನಂಬಿಸಿ, ನಂತರ ಪರಿಷ್ಕೃತ ಬಜೆಟ್‌ನಲ್ಲಿ ಭಾರೀ ಹಣ ಕಡಿಮೆ ಮಾಡಿ ನಂತರ ಭಾರೀ ಹಣವನ್ನು ವೆಚ್ಚ ಮಾಡದೆ ಉಳಿಸಿ, ಮುಗ್ಧ ಜನತೆಯನ್ನು ವಂಚಿಸುವ ಹಾಗೂ ವಂಚಿತರನ್ನಾಗಿ ಮಾಡುವ ಮೋಸಗಾರಿಕೆ ಯಥಾಪ್ರಕಾರ ನಿರಂತರವಾಗಿ ನಡೆದುಬಂದಿದೆ. 94-95, 95-96, 96-97, 97-98, ಈ ನಾಲ್ಕು ವರ್ಷಗಳಲ್ಲಿ ಬಜೆಟ್ ಹಣದಲ್ಲಿ ಒಟ್ಟಾರೆ 1633.37 ಕೋಟಿ ಹಣವನ್ನು ವೆಚ್ಚ ಮಾಡದೆ ಉಳಿಸಿರುವುದು ಹಾಗೂ ಪ್ರಗತಿ ಕುಂಠಿತಗೊಳಿಸಿರುವುದು ಸರಕಾರದಲ್ಲಿಯ ಮೇಲ್ಕಂಡ ಎಲ್ಲಾ 14 ಇಲಾಖೆಗಳ ಮಂತ್ರಿಗಳಿಗೆ ನಾಚಿಕೆ ಬರಬೇಕು. ಇಂತಹ ಸಂಬಂಧಿಸಿದ ಅಯೋಗ್ಯ, ಮಾರಕ, ಅಸಮರ್ಥ ಮಂತ್ರಿಗಳನ್ನು ರಾಜ್ಯದ ಹೊಣೆಗಾರ ಮುಖ್ಯಮಂತ್ರಿಗಳು ದಾಕ್ಷಿಣ್ಯಪರರಾಗದೆ ನ್ಯಾಯನಿಷ್ಠುರಿಗಳಾಗಿ ಈ ರಾಜ್ಯದ ಜನತೆಯ ಹಿತದೃಷ್ಟಿಯಿಂದ ಕಿತ್ತುಹಾಕುವುದು ಒಳ್ಳೆಯದು. ಈ ಕರ್ತವ್ಯಚ್ಯುತಿ ಈ ಹದಿನಾಲ್ಕು ಶೀರ್ಷಿಕೆಯ ಇಲಾಖೆಗಳಲ್ಲಿ ಹೆಚ್ಚಾಗಿದ್ದು ಈ ಇಲಾಖೆಗಳ ಹಿಂದು ಮಂತ್ರಿಗಳ ಜೊತೆಗೆ

ಈ ಹದಿನಾಲ್ಕು ಇಲಾಖೆಗಳಲ್ಲಿ ಪ್ರತಿವರ್ಷ ತಪ್ಪದೆ ನೂರಕ್ಕೆ ನೂರರಷ್ಟು ಅಥವಾ ಹೆಚ್ಚು ನಿಗದಿತ ವೇತನ ಭತ್ಯೆ ಪಡೆದ ನೌಕರರು ಸರಕಾರದಲ್ಲಿ 28996 ಹಾಗೂ ಜಿಲ್ಲಾ ಪಂಚಾಯತಿಗಳಲ್ಲಿ 40928 ಹೀಗೆ ಒಟ್ಟು 69924 ನೌಕರ ಸಿಬ್ಬಂದಿ ಇದೆ. ಇವರೆಲ್ಲರ ಕೆಲಸ ಕರ್ತವ್ಯದ ನಾಲ್ಕು ವರ್ಷದ ಸಾಧನೆ ನಿಗದಿತ ಮೊತ್ತದಲ್ಲಿ 1633.37 ಕೋಟಿ ರೆವಿನ್ಯೂ ಆರ್ಥಿಕ ಅಭಿವೃದ್ಧಿ ಕಾರ್ಯಗಳನ್ನು ಕುಂಠಿತಗೊಳಿಸಿ ಜನತೆಯನ್ನು ವಂಚಿತರನ್ನಾಗಿ ಮಾಡುವುದೇ ಆಗಿದ್ದು, ಇವರಿಗೆ ಯಾವ ಪ್ರಶಸ್ತಿ ಅಥವಾ ಯಾವ ಶಿಕ್ಷೆ? ಯಾರು ಕೊಡಬೇಕು? ಈ ಕರ್ತವ್ಯಚ್ಯುತಿ ಕೇವಲ 14 ಇಲಾಖೆ ಹಾಗೂ ಇವುಗಳಿಗೆ ಸಂಬಂಧಿಸಿದ ಮಂತ್ರಿಗಳಾದರೆ ಸರಕಾರದ ಇನ್ನುಳಿದ ಅನೇಕ ಇಲಾಖೆಗಳಿಗೆ ನಿಗದಿಪಡಿಸಿದ ಬಜೆಟ್ ಮೊತ್ತದಲ್ಲಿ ರೆವಿನ್ಯೂ ಮೊತ್ತವನ್ನು ಸಂಪೂರ್ಣವಾಗಿ ವೆಚ್ಚ ಮಾಡದೆ 94-95ರಲ್ಲಿ 683.91 ಕಟಿ, 95-96ರಲ್ಲಿ 612.46 ಕೋಟಿ, 96-97ರಲ್ಲಿ 555.02 ಕೋಟಿ, 97-98ರಲ್ಲಿ 1075.25 ಕೋಟಿ ಹೀಗೆ ಈ ನಾಲ್ಕು ವರ್ಷಗಳಲ್ಲಿ ಬಜೆಟ್ ಪ್ರಕಾರ ನಿಗದಿತ ಮೊತ್ತವನ್ನು ಸಂಪೂರ್ಣವಾಗಿ ವೆಚ್ಚ ಮಾಡದೆ 2926.62 ಕೋಟಿ ಹಣವನ್ನು ಉಳಿಸಿ ರಾಜ್ಯದ ಅಭಿವೃದ್ಧಿಯನ್ನು ಕುಂಠಿತಗೊಳಿಸಿರುವುದು ಹಾಗೂ ಕುಂಠಿತಗೊಳಿಸುತ್ತಿರುವುದು ಇದು ಯಾವ ನಮೂನೆಯ ಸಾಧನೆ? ಹೀಗೆ ಜನತೆಗೆ ಘಸಾಯಿಸಿ, ಮೋಸ ಮಾಡುವುದಾದರೆ ಮಂತ್ರಿಗಳ ಹಿಂಡಾದರೂ ಏಕೆ ಬೇಕು. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಈ ತರಹದ ಅವ್ಯವಸ್ಥೆಯಾದರೆ ದುರ್ಬಲರಾದ ಮುಗ್ಧ ಜನತೆ ಮೂಕರಾಗಿ ಇರಬೇಕೇ? ದುರ್ಬಲ ಮುಗ್ಧ ಜನತೆಯ ಪ್ರತಿಭಟನಾರಹಿತ ಶಕ್ತಿಯ ದುರುಪಯೋಗವನ್ನು ಸರಕಾರ, ಸರಕಾರದಲ್ಲಿಯ ಮಂತ್ರಿಗಳು ಹಾಗೂ ಪ್ರಭಾವಶಾಲಿ ಅಧಿಕಾರಿಶಾಹಿ ಮಾಡಿಕೊಳ್ಳಬೇಕೇ? ಈ ದಿಶೆಯಲ್ಲಿ ರಾಜ್ಯದ ಆಡಳಿತದ ಹೊಣೆ ಹೊತ್ತ ರಾಜ್ಯಪಾಲರು ಹಾಗೂ ಮುಖ್ಯಮಂತ್ರಿಗಳು ಗಮನಹರಿಸಿ ಸರಕಾರ ತನ್ನ ಕರ್ತವ್ಯಗಳನ್ನು ಸಮರ್ಥ ರೀತಿಯಲ್ಲಿ ಕಾರ್ಯಗತ ಮಾಡಲು ಹಾಗೂ ಆ ಬಗ್ಗೆ ನಿಗದಿತ ಹಣವನ್ನು ನೂರಕ್ಕೆ ನೂರರಷ್ಟು ವೆಚ್ಚ ಮಾಡಿ ಉತ್ತಮ ಹಾಗೂ ಸಮರ್ಥ ಆಡಳಿತ ಮಾಡುವಲ್ಲಿ ಕರ್ತವ್ಯಶೀಲರಾಗುವುದು ಒಳ್ಳೆಯದು. ಇಲ್ಲವಾದರೆ, ಪ್ರತಿವರ್ಷ ವಿಧಾನಮಂಡಲದಲ್ಲಿ ಜಂಟಿ ಅಧಿವೇಶನದಲ್ಲಿ ಮಾಡುವ ರಾಜ್ಯಪಾಲರ ಭಾಷಣ ಹಾಗೂ ಸರಕಾರ ವಿಧಾನಮಂಡಲಕ್ಕೆ ನೀಡುವ ಬಜೆಟ್ ನೀರಸ, ನಿರುಪಯೋಗಿ ಎಂದು ಹೇಳುವುದು ಹೊಣೆಗಾರ ನಾಗರಿಕರಿಗೆ ಅನಿವಾರ್ಯವಾದೀತು.

(ಈ ಲೇಖನದಲ್ಲಿಯ ಅಂಕಿ-ಸಂಖ್ಯೆ ಅಂಶ ಸರಕಾರದ ಅಧಿಕೃತ ಬಜೆಟ್ ಮೂಲದವು).

❑

ಸಾಲದ ಸುಳಿಯಲ್ಲಿ ಸರಕಾರ

ಈ ರಾಷ್ಟ್ರದಲ್ಲಿಯ ಯಾವುದೇ ಜವಾಬ್ದಾರಿ ವ್ಯಕ್ತಿಯಾಗಲೀ, ಸಂಘ, ಸಂಸ್ಥೆ, ನಿಗಮವಾಗಲೀ ಅವರೆಲ್ಲರೂ ತಮ್ಮ ಸ್ವಂತ ಆದಾಯ ಪಡೆದು ತಮಗೆ ಅಗತ್ಯವಿರುವ ಅಭಿವೃದ್ಧಿ ಕಾರ್ಯಗಳನ್ನು ಆ ಆದಾಯದ ವ್ಯಾಪ್ತಿಯಲ್ಲಿ ಮಾಡಿ ಆ ಬಗ್ಗೆ ತಕ್ಕಷ್ಟು ಹಣ ವಿನಿಯೋಗ ಮಾಡಿ ಉಳಿದ ಹಣವನ್ನು ಠೇವಣಿಗಳಲ್ಲಿ ತೊಡಗಿಸಿಯಾಗಲೀ ಅಥವಾ ತಮ್ಮ ಆಸ್ತಿಯನ್ನು ಬೆಳೆಸುವುದಕ್ಕಾಗಲೀ ವಿನಿಯೋಗಿಸಿ ಪ್ರತಿವರ್ಷ ತಮ್ಮ ತಮ್ಮ ಉದ್ಯಮವನ್ನು ಉನ್ನತಿಗೊಳಿಸುತ್ತಾ ಉತ್ತಮ ಆರ್ಥಿಕ ಪರಿಸ್ಥಿತಿಯುಳ್ಳವರಾಗುತ್ತಾರೆ. ವಿಶೇಷ ಸಂದರ್ಭದಲ್ಲಿ ಸಾಲ ಪಡೆದು ತಮ್ಮ ಉದ್ಯಮಕ್ಕೆ ಅದನ್ನು ಬಳಸಿಕೊಂಡು ಉದ್ಯಮವನ್ನು ಬೆಳೆಸಿ ಲಾಭದಾಯಕವನ್ನಾಗಿ ಮಾಡಿಕೊಂಡು ಪಡೆದ ಸಾಲಕ್ಕೆ ಕೆಲವರ್ಷ ಬಡ್ಡಿ ಕೊಟ್ಟು ಆದಷ್ಟು ಬೇಗ ಅವಧಿಯೊಳಗಾಗಿ ಸಂಪೂರ್ಣ ಸಾಲವನ್ನು ತೀರಿಸಿ ಉತ್ತಮ ಸಂಪತ್ಭರಿತ ಉದ್ಯಮಿಗಳಾಗಿ ಮುಂದುವರಿಯುತ್ತಾರೆ ಹಾಗೂ ತಮ್ಮ ಉದ್ಯಮದಿಂದ ಬಂದ ಹೆಚ್ಚಿನ ಹಣವನ್ನು ಠೇವಣಿಯನ್ನಾಗಿಟ್ಟು ಬ್ಯಾಂಕುಗಳಿಂದ ಬಡ್ಡಿ ಪಡೆಯುತ್ತಾರೆ. ಇದು ದುಡಿಮೆವಂತ ಉದ್ಯಮಶೀಲರ ಜೀವನ ಶೈಲಿ. ಇದಕ್ಕೆ ತದ್ವಿರುದ್ಧವಾಗಿ ಬೇಜವಾಬ್ದಾರಿ ವ್ಯಕ್ತಿಗಳು, ಸಂಘ, ಸಂಸ್ಥೆ, ನಿಗಮಗಳು ತಮಗಿದ್ದ ಉದ್ಯಮವನ್ನು ಸರಿಯಾಗಿ ನಡೆಸದೆ ಯಾವುದೇ ಉತ್ಪನ್ನ ಪಡೆಯದೆ ಆದಾಯ ಪಡೆಯದೆ ದರಿದ್ರರಾಗಿ ಒಳ್ಳೇ ವ್ಯವಹಾರ ಮಾಡದೆ ಸಿಕ್ಕಸಿಕ್ಕಲ್ಲಿ ಸಾಲ ಮಾಡಿ ಅದನ್ನು ಸದುಪಯೋಗ ಮಾಡದೆ ದುಂದುವೆಚ್ಚ ಮಾಡುತ್ತ ಆರ್ಥಿಕವಾಗಿ ದಿವಾಳಿಯಾಗಿ ಕಂಡಕಂಡವರಲ್ಲಿ ಪಡೆದ ಸಾಲ ತೀರಿಸದೆ ಬಡ್ಡಿ ಕೊಡದೆ ಸಾಲಗಾರರಾಗಿ ಇದ್ದ ಆಸ್ತಿಯನ್ನೆಲ್ಲಾ ಹಾಳು ಮಾಡುತ್ತ ದಿವಾಳಿಖೋರರಾದ ಉದಾಹರಣೆ ನಮ್ಮ ರಾಷ್ಟ್ರದಲ್ಲಿ ಸಾಕಷ್ಟು ಇವೆ. ಇಂತಹ ಪಂಕ್ತಿಯಲ್ಲಿ ನಮ್ಮ ಕರ್ನಾಟಕ ಸರಕಾರ ಹೊರಟಿ ರುವುದು ದುರ್ದೈವ.

ರಾಜ್ಯ ಸರಕಾರದ ತೆರಿಗೆ, ತೆರಿಗೆಯೇತರ ಆದಾಯ ಮತ್ತು ಕೇಂದ್ರ ಸರಕಾರದ ಸಹಾಯನುದಾನ ಹಾಗೂ ಅಂಶಾನುದಾನ ಹೆಚ್ಚುತ್ತಲೇ ಇದ್ದು, ಈ ಎಲ್ಲಾ ರೆವಿನ್ಯೂ ಆದಾಯ ಪ್ರತಿವರ್ಷ 97-98ರಲ್ಲಿ 10613.40 ಕೋಟಿ, 98-99ರಲ್ಲಿ 12979.56 ಕೋಟಿ, 99-2000ದಲ್ಲಿ 13991.78 ಕೋಟಿಗೆ ಏರಲಿದೆ. ಬಂದಂತ ಆದಾಯದಲ್ಲಿ ಸಾಮಾನ್ಯ

ಸೇವೆ, ಸಾಮಾಜಿಕ ಸೇವೆ, ಆರ್ಥಿಕ ಸೇವೆ ಹಾಗೂ ಸಂಘ - ಸಂಸ್ಥೆಗಳಿಗೆ ಸಹಾಯಾನುದಾನ ವೆಚ್ಚಗಳನ್ನು ಮಾಡಿ ರಾಜ್ಯದ ಸರ್ವಾಂಗೀಣ ಪ್ರಗತಿ ಸಾಧಿಸುವುದು ಸರಕಾರದ ಕರ್ತವ್ಯ. ಈ ಕರ್ತವ್ಯದಲ್ಲಿ ಸರಕಾರ ಸಂಪೂರ್ಣವಾಗಿ ವಿಫಲಗೊಂಡಿದೆ. ವಿವಿಧ ಸೇವೆಯ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಪ್ರತಿವರ್ಷ ಕಡಿಮೆ ಹಣವನ್ನು ರೆವಿನ್ಯೂ ಆದಾಯದಲ್ಲಿ ವೆಚ್ಚ ಮಾಡುತ್ತ ಹಣದ ಅಭಾವದಿಂದ ಕೇವಲ 10890.21 ಕೋಟಿ ಮೊತ್ತವನ್ನು 97-98ರಲ್ಲಿ ವೆಚ್ಚ ಮಾಡಿ, ವೆಚ್ಚ ಮಾಡಬೇಕಾಗಿದ್ದ 1075.25 ಕೋಟಿ ಹಣವನ್ನೇ ವೆಚ್ಚ ಮಾಡದೆ ಅಭಿವೃದ್ಧಿಯನ್ನ ಕುಂಠಿತಗೊಳಿಸಲಾಗಿದೆ. ಸುಮಾರು 6000.00 ಕೋಟಿ ಹಣವನ್ನು ಸರಕಾರಿ ನೌಕರ ವೇತನ ಭತ್ಯೆಗೆ ಕೊಡಬೇಕಾಗುತ್ತದೆಯೆಂದು ಸರಕಾರ ಅಧಿಕೃತವಾಗಿ ಹೇಳಿದ್ದರೂ ಈ ಮೊತ್ತ ವಾಸ್ತವಿಕವಾಗಿ 7000.00 ಕೋಟಿ ಮೀರಿ ಏರುತ್ತದೆ. ನೌಕರರ ವಿಶ್ರಾಂತಿ ವೇತನದ 97-98ರಲ್ಲಿ 809.08 ಕೋಟಿಗೆ ಏರಿದ್ದು 99-2000ದಲ್ಲಿ 1263.28 ಕೋಟಿಗೆ ಅಧಿಕೃತವಾಗಿ ವಿತ್ತ ನಿರೂಪಣೆ ಪ್ರಕಾರ ಏರಿರುವಾಗ ವೇತನ ಕೂಡ ಆ ಪ್ರಕಾರ ಏರಲೇಬೇಕು. ದುರ್ದೈವದಿಂದ ನೌಕರರ ವೇತನ ಮೊತ್ತ ವಿತ್ತ ನಿರೂಪಣೆಯಲ್ಲಿ ಸರಕಾರ ಎಲ್ಲಿಯೂ ಎಷ್ಟೆಂಬುದನ್ನು ತಿಳಿಸುತ್ತಿಲ್ಲ ಏಕೆ? 97-98ರಲ್ಲಿ ವಾಸ್ತವಿಕ ರೆವಿನ್ಯೂ ವೆಚ್ಚ 10890.21 ಕೋಟಿ. ಇದರಲ್ಲಿ ಬಡ್ಡಿಗೆ 1393.81 ಕೋಟಿ, ಶಿಕ್ಷಣಕ್ಕೆ 2057.96 ಕೋಟಿ, ಆರಕ್ಷಕರಿಗೆ 455.79 ಕೋಟಿ, ವಿದ್ಯುಚ್ಛಕ್ತಿಗೆ 602.20 ಕೋಟಿ, ಸಹಾಯಧನಕ್ಕೆ 274.82 ಕೋಟಿ, ನೌಕರರ ವೇತನ, ನಿವೃತ್ತಿ ವೇತನ ಭತ್ಯೆಗೆ 4353.25 ಕೋಟಿ. ಹೀಗೆ ವಾಸ್ತವಿಕವಾಗಿ 9137.86 ಕೋಟಿ ವೆಚ್ಚವಾಗಿದ್ದು ಇನ್ನುಳಿದ ಕೇವಲ 1752.35 ಕೋಟಿ ಮೊತ್ತ ರಾಜ್ಯದ ಎಲ್ಲಾ ಅಭಿವೃದ್ಧಿಗಾಗಿ ವೆಚ್ಚವಾಗಿದೆ. ಈ ರೆವಿನ್ಯೂ ವೆಚ್ಚದ ಅಭಿವೃದ್ಧಿ ಸಾಕೇ? ಈ ವರ್ಷ 99-2000ದಲ್ಲಿ ರೆವಿನ್ಯೂ ಆದಾಯ 13991.78 ಕೋಟಿ ಅಂದಾಜು ಇದೆ. ರೆವಿನ್ಯೂ ವೆಚ್ಚ 15390.98 ಅಂದಾಜು ಇದೆ. ಈ ಅಂದಾಜು ವೆಚ್ಚದಲ್ಲಿ ಬಜೆಟ್ ಭಾಷಣದ ಪ್ರಕಾರ ವೇತನ ವಿಶ್ರಾಂತಿ ವೇತನಕ್ಕೆ 6000.00 ಕೋಟಿ, ವಿತ್ತ ನಿರೂಪಣೆ ಪ್ರಕಾರ ಶಿಕ್ಷಣಕ್ಕೆ 2892.08 ಕೋಟಿ, ಬಡ್ಡಿ ಸಂದಾಯಕ್ಕೆ 2106.16 ಕೋಟಿ, ಆರಕ್ಷರಿಗೆ 682.8 ಕೋಟಿ, ಸಹಾಯಧನಕ್ಕೆ 452.27 ಕೋಟಿ, ವಿದ್ಯುಚ್ಛಕ್ತಿಗೆ 445.38 ಕೋಟಿ ಹೀಗೆ ಒಟ್ಟು 12578.74 ಕೋಟಿ ಮೊತ್ತವನ್ನು ವೆಚ್ಚಮಾಡಿದರೆ ಅಂದಾಜು 12,991.78 ಕೋಟಿಯಲ್ಲಿ ಉಳಿಯುವುದು ಕೇವಲ 1413.08 ಕೋಟಿ. ಅದು ಕೂಡ ಅಂದಾಜು. ಆದಾಯ ಪೂರ್ಣ ವಸೂಲಾದರೆ ಮಾತ್ರ. 1997-98ರಲ್ಲಿ ಬಜೆಟ್ ಆದಾಯದಲ್ಲಿ 1153.06 ಕೋಟಿ ವಸೂಲು ಆಗಿಲ್ಲ. ಅಂತೆಯೇ ಬಜೆಟ್ ವೆಚ್ಚದಲ್ಲಿ 1075.25 ಕೋಟಿ ವೆಚ್ಚವಾಗಿಲ್ಲ. ಇದು ಸರಕಾರದ ಎದ್ದುಕಾಣುವ ವಾಸ್ತವಿಕ ಅಸಮರ್ಥತೆ, ಅದಕ್ಷತೆ, ಕರ್ತವ್ಯಚ್ಯುತಿ ಹಾಗೂ ವೈಫಲ್ಯ. ಇದು ಸರಕಾರ ನಡೆಸುವ ರೀತಿಯೇ?

ರೆವಿನ್ಯೂ ವೆಚ್ಚಕ್ಕೆ ಪೂರಕ ಹಾಗೂ ಅಧಿಕವಾಗಿ ಸಾಮಾನ್ಯ, ಸಾಮಾಜಿಕ ಹಾಗೂ ಆರ್ಥಿಕ ಸೇವೆಗಳಿಗೆ ಬಂಡವಾಳ ವೆಚ್ಚವನ್ನು ಸಾಕಷ್ಟು ವೆಚ್ಚ ಮಾಡಿ ಪ್ರಗತಿ

ಸಾಧಿಸಬೇಕಾದದ್ದು ಸರಕಾರದ ಕರ್ತವ್ಯ. ಆದರೆ, ಸಾಕಷ್ಟು ಹಣವನ್ನು ವೆಚ್ಚ ಮಾಡದೆ ಅಭಿವೃದ್ಧಿ ಕುಂಠಿತಗೊಳಿಸಲಾಗುತ್ತಿದೆ. ಈ ಎಲ್ಲ ಸೇವೆಗಳ ಬಂಡವಾಳ ವೆಚ್ಚಕ್ಕೆ 97-98ರಲ್ಲಿ ಕೇವಲ 1209.96 ಕೋಟಿ, 98-99ರಲ್ಲಿ 1541.19 ಕೋಟಿ, 99-2000ದಲ್ಲಿ 1774.57 ಕೋಟಿ ವೆಚ್ಚ ಮಾಡಲಾಗುತ್ತಿದೆ. ಇಷ್ಟೇ ಹಣ ಸಾಕೇ? ವಿವಿಧ ಸಾಮಾನ್ಯ, ಸಾಮಾಜಿಕ ಹಾಗೂ ಆರ್ಥಿಕ ಸೇವೆಗಳ ಪ್ರಗತಿಗಾಗಿ ಪ್ರತಿವರ್ಷ ವಿವಿಧ ಇಲಾಖೆಗಳಿಗೆ ಸಾಲ ಮತ್ತು ಮುಂಗಡ ಮೊತ್ತವನ್ನು ಸರಕಾರ ಕೊಡಬೇಕಾಗುತ್ತಿದ್ದು, ಸಾಕಷ್ಟು ಸಾಲ ಮುಂಗಡ ಕೊಡುವಲ್ಲಿ ಹಾಗೂ ಕೊಟ್ಟ ಸಾಲ ಮುಂಗಡವನ್ನು ವಸೂಲು ಮಾಡುವಲ್ಲಿ ಸಹ ಸರಕಾರ ಹಿಂದೆಬಿದ್ದು ಅಭಿವೃದ್ಧಿ ಕುಂಠಿತಗೊಳಿಸಿದೆ. ರಾಜ್ಯವು ಆಂತರಿಕ ಸಾಲ, ಕೇಂದ್ರದ ಸಾಲ ಮತ್ತು ಮುಂಗಡವನ್ನು ಪಡೆಯುತ್ತಿದ್ದು ಪ್ರತಿವರ್ಷ ಮರುಪಾವತಿ ಮಾಡದೆ ಬಾಕಿ ಉಳಿಸಿಕೊಳ್ಳುತ್ತಲಿದೆ. 99-2000ದಲ್ಲಿ 4602.44 ಕೋಟಿ ಪಡೆಯಲಿದೆ.

ಆಂತರಿಕ ಸಾಲ ಹಾಗೂ ಕೇಂದ್ರ ಸರಕಾರದ ಸಾಲದ ಮುಂಗಡವಲ್ಲದೆ ರಾಜ್ಯಾದ್ಯಂತ ವಿವಿಧ ಮೂಲಗಳಿಂದ ಸಾಲ, ಠೇವಣಿ, ನಿಧಿ, ವಿವಿಧ ಫಂಡ್ ಇತ್ಯಾದಿಯಿಂದ 97-98ರಲ್ಲಿ 29806.20 ಕೋಟಿ, 98-99ರಲ್ಲಿ 15446.07 ಕೋಟಿ ಸಾಲ ಪಡೆಯಲಾಗಿದ್ದು, 99-2000ದಲ್ಲಿ 15847.20 ಕೋಟಿ ಸಾಲ ಪಡೆಯಲಿದೆ. ಮರುಪಾವತಿಯಾಗದ ಬಾಕಿ ಸಾಲ ಹೆಚ್ಚುತ್ತಲೇ ಇದೆ. ಮಾಡಿದ ಸಾಲದ ಮೇಲೆ 97-98ರಲ್ಲಿ 1398.81 ಕೋಟಿ, 98-99ರಲ್ಲಿ 1893.96 ಕೋಟಿ, 99-2000ದಲ್ಲಿ 2106.16 ಕೋಟಿ ಬಡ್ಡಿಯನ್ನು ಸರಕಾರ ಕೊಡಲಿದೆ ವ ಕೊಟ್ಟಿದೆ. ಕೊಡಬೇಕಾದ ಕೇಂದ್ರ ಸರಕಾರದ ಸಾಲ ಹಾಗೂ ಇನ್ನಿತರ ಎಲ್ಲಾ ಸಾಲಗಳು ಪ್ರತಿವರ್ಷ ಹೆಚ್ಚುತ್ತಿದ್ದು ರಾಜ್ಯದ ವಿತ್ತ ನಿರೂಪಣೆ ಪ್ರಕಾರ ಒಟ್ಟಾರೆ ದಾಯಿತ್ವ ಸಾಲ 97-98ರ ಅಂತ್ಯಕ್ಕೆ 15697.49 ಕೋಟಿ ಇದ್ದುದು 99-2000 ಅಂತ್ಯಕ್ಕೆ 21748.58 ಕೋಟಿಗೆ ಏರಲಿದೆ.

ಸರಕಾರದ ಎಲ್ಲಾ ಇಲಾಖೆ ಹಾಗೂ ಜಿಲ್ಲಾ ಪರಿಷತ್ತುಗಳಲ್ಲಿ ವಿವಿಧ ಅಭಿವೃದ್ಧಿ ಕಾರ್ಯಗಳು ಹಣದ ಕೊರತೆಯಿಂದ ಕುಂಠಿತಗೊಂಡಿದೆ. ಹಣದ ದುಂದುವೆಚ್ಚ ಹೆಚ್ಚಾಗುತ್ತಿದೆ. ಫೆಬ್ರುವರಿ ಕೊನೆಯವರೆಗೆ ಹಣವಿಲ್ಲದೆ ವೆಚ್ಚವಾಗದೆ ಇದ್ದು ಮಾರ್ಚ್ ತಿಂಗಳ ಕೊನೆಗೆ ಕಾಗದದಲ್ಲಿ ಖರ್ಚು ಹಾಕಿ ವೆಚ್ಚವಾಗಿದೆಯೆಂದು ತೋರಿಸಿ ವಾಸ್ತವಿಕವಾಗಿ ಹಣ ಬಿಡುಗಡೆಯಾಗದೆ ಹಾಗೂ ವೆಚ್ಚವಾಗದಿರುವ ದೃಷ್ಟಾಂತಗಳು ಸಿ.ಎ.ಜಿ. ವರದಿ ಹಾಗೂ ಸರಕಾರದ ಹೇಳಿಕೆಗಳನ್ನು ಗಮನಿಸಿದರೆ ಸುಸ್ಪಷ್ಟವಾಗುತ್ತದೆ. 1998-99ನೇ ಸಾಲಿನಲ್ಲಿ ರಾಜ್ಯವಲಯದಲ್ಲಿ ಸರಕಾರದವರು ದವಾಖಾನೆಗಳಿಗೆ ಔಷಧ ಪೂರೈಸಲು ಆಯವ್ಯಯದಲ್ಲಿ ನಿಗದಿಪಡಿಸಲಾದ ಮೊತ್ತ 28.86 ಕೋಟಿಯಲ್ಲಿ ಬಿಡುಗಡೆಯಾದ ಮೊತ್ತ 26.98 ಕೋಟಿ ಇದ್ದು ತಾ। 28-2-99ರ ಅಂತ್ಯಕ್ಕೆ ಖರ್ಚಾದ ಹಣ ಕೇವಲ 4.79 ಕೋಟಿ. ಇದು ಸರಕಾರದ ಅಧಿಕೃತ ಹೇಳಿಕೆ. ಅನೇಕ ಯೋಜನೆಗಳಿಗೆ ನಿಗದಿಯಾದ ಹಣ ಸಂಪೂರ್ಣ ಬಿಡುಗಡೆಯಾಗುವುದಿಲ್ಲ, ಖರ್ಚಾಗುವುದಿಲ್ಲ. ಹೀಗಾದರೆ ಹೇಗೆ?

ರಾಜ್ಯಾದ್ಯಂತ ಬಹುತೇಕ ಸರಕಾರಿ ಆಸ್ಪತ್ರೆಗಳಲ್ಲಿ ಮಾರ್ಚ್ ಮುಗಿಯುತ್ತ ಬಂದರೂ ಔಷಧವೇ ಇಲ್ಲ. ರೋಗಿಗಳ ಪಾಡಂತೂ ಹೇಳತೀರದು. ಅನೇಕ ಪ್ರಯೋಜನದಾರರಿಗೆ ಧನಸಹಾಯವೇ ಇಲ್ಲ. ಈ ಎಲ್ಲಾ ಹಿನ್ನೆಲೆಯಲ್ಲಿ ರಾಜ್ಯ ಸರಕಾರದ ಮಂತ್ರಿಗಳು ತಮ್ಮ ಮೇಲಿನ ಹೊಣೆ ಅರಿತು ತಮ್ಮ ತಮ್ಮ ಇಲಾಖೆಗೆ ಒದಗಿಸಿದ ಬಜೆಟ್ ಹಣ ಕಾಲಕಾಲಕ್ಕೆ ವೆಚ್ಚವಾಗಿ ಅದರ ಪ್ರತಿಫಲ ಜನತೆಗೆ ಸಿಗುತ್ತದೆಯೋ ಅಥವಾ ಇಲ್ಲವೆಂಬ ಬಗ್ಗೆ ಗಮನಹರಿಸಿ ತಮ್ಮ ಕಾರ್ಯದಲ್ಲಿ ಕರ್ತವ್ಯಶೀಲರಾದರೆ ಆರ್ಥಿಕ ದಿವಾಳಿಯನ್ನು ದೂರ ಸರಿಸಿ ಜನತೆಯ ಹಾಗೂ ರಾಜ್ಯದ ಪ್ರಗತಿ ಸಾಧಿಸಿದರೆ, 51 ಏಕೆ ಇನ್ನೂ ಹೆಚ್ಚು ಮಂತ್ರಿಗಳಾದರೂ ಅದು ಸಾರ್ಥಕ ಇಲ್ಲವಾದರೆ ಎಲ್ಲವೂ ಮಾರಕ ಹಾಗೂ ನಿರರ್ಥಕ, ಸರಕಾರ ಹಾಗೂ ಸರಕಾರದ ಆಯವ್ಯಯ ರಾಜ್ಯ ಹಾಗೂ ರಾಜ್ಯದ ,ಜನತೆಯ ಸರ್ವಾಂಗೀಣ ಪ್ರಗತಿಯೇ ಹೊರತು ಮತ್ತಾರ ಪ್ರಗತಿಗೆ ಮಾತ್ರವಲ್ಲವೆಂಬುದನ್ನು ಮಂತ್ರಿಗಳು, ಶಾಸಕರು ಹಾಗೂ ಅಧಿಕಾರಿಗಳು ತಿಳಿದುಕೊಂಡು ಕಾರ್ಯಶೀಲರಾಗುವುದು ಒಳ್ಳೆಯದು.

❑

ಸರಕಾರದ ಸಾಧನೆ : ಒಂದು ಚಿತ್ರ

ಸಾಮೂಹಿಕ ಸೇವೆಗಳಾದ ಶಿಕ್ಷಣ, ವೈದ್ಯಕೀಯ, ಜನಾರೋಗ್ಯ, ಕುಟುಂಬ ಕಲ್ಯಾಣ, ನೀರು ಪೂರೈಕೆ ಮತ್ತು ನೈರ್ಮಲ್ಯ, ಗೃಹ ನಿರ್ಮಾಣ, ನಗರಾಭಿವೃದ್ಧಿ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಗಿರಿಜನ, ಹಿಂದುಳಿದ ವರ್ಗಗಳ ಕಲ್ಯಾಣ, ಕಾರ್ಮಿಕ, ಉದ್ಯೋಗ, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಪೌಷ್ಟಿಕ ಆಹಾರ, ನೈಸರ್ಗಿಕ ವಿಕೋಪಗಳ ಬಗ್ಗೆ ಪರಿಹಾರ ಇತ್ಯಾದಿ ಸೇವೆಗಳು ರಾಜ್ಯದ ಜನತೆಯ ಸರ್ವತೋಮುಖ ಪ್ರಗತಿಗೆ ಅಗತ್ಯವಾಗಿವೆ. ಅಂತೆಯೇ ಆರ್ಥಿಕ ಸೇವೆಗಳಾದ ಕೃಷಿಗೆ ಸಂಬಂಧಪಟ್ಟ ಸಸ್ಯಸಂಗೋಪನೆ, ಭೂಸಾರ, ಜಲಸಂರಕ್ಷಣೆ, ಪಶುಸಂಗೋಪನೆ, ಸಹಕಾರ, ಪಂಚಾಯತ್‌ರಾಜ್, ಹೈನಾಭಿವೃದ್ಧಿ, ಮೀನುಗಾರಿಕೆ, ಅರಣ್ಯ ಮತ್ತು ವನ್ಯಜೀವನ, ಆಹಾರ ದಾಸ್ತಾನು ಮತ್ತ ಉಗ್ರಾಣ, ಕೃಷಿ ಸಂಶೋಧನೆ ಮತ್ತು ಶಿಕ್ಷಣ, ಇತರ ಕೃಷಿ ಕಾರ್ಯಕ್ರಮ, ಗ್ರಾಮಾಂತರ ಅಭಿವೃದ್ಧಿ, ವಿಶೇಷ ಕಾರ್ಯಕ್ರಮ, ಗ್ರಾಮೀಣ ಉದ್ಯೋಗ, ಭೂಸುಧಾರಣೆ, ಗುಡ್ಡಗಾಡು ಪ್ರದೇಶ, ಭಾರೀ ಮಧ್ಯಮ ಹಾಗೂ ಸಣ್ಣ ನೀರಾವರಿ, ಪ್ರದೇಶಾಭಿವೃದ್ಧಿ, ಪ್ರವಾಹ ನಿಯಂತ್ರಣ ಮತ್ತು ಚರಂಡಿ ವ್ಯವಸ್ಥೆ, ವಿದ್ಯುಚ್ಛಕ್ತಿ, ಇಂಧನ ಮೂಲಗಳು, ಗ್ರಾಮೋದ್ಯಮ, ಸಣ್ಣ ಉದ್ಯಮ, ರೇವು ಮತ್ತು ದೀಪಸ್ಥಂಭಗಳು, ನಾಗರಿಕ-ವಿಮಾನಯಾನ, ರಸ್ತೆ ಮತ್ತು ಸೇತುವೆ, ರಸ್ತೆ ಸಾರಿಗೆ, ಒಳನಾಡು ಜಲ ಸಾರಿಗೆ, ವಿಜ್ಞಾನ, ಸಂಶೋಧನೆ, ಜೀವಿ-ಪರಿಸ್ಥಿತಿ-ಶಾಸ್ತ್ರ, ಪರಿಸರ, ಪ್ರವಾಸೋದ್ಯಮ, ನಿತ್ಯೋಪಯೋಗಿ ಸಾಮಗ್ರಿಗಳ ಸರಬರಾಜು, ಇತ್ಯಾದಿ ಸೇವೆಗಳು ಸಹ ರಾಜ್ಯದ ಜನತೆಯ ಸರ್ವತೋಮುಖ ಆರ್ಥಿಕ ಪ್ರಗತಿಗೆ ಅಗತ್ಯವಾಗಿವೆ. ಈ ಎಲ್ಲ ಅಗತ್ಯತೆಗಳನ್ನು ಪ್ರಜಾಸಮೂಹಕ್ಕೆ ಒದಗಿಸಿಕೊಟ್ಟು ಜನತೆಯ ಜೀವನ ಸುಖದಾಯಕವಾಗಲು ರಾಜ್ಯ ಹಾಗೂ ಕೇಂದ್ರ ಸರಕಾರಗಳು ಕಂಕಣಬದ್ಧರಾಗಬೇಕಾಗುತ್ತದೆ. ಈ ಅಗತ್ಯತೆಗಳನ್ನು ಪೂರೈಸುವ ಸಲುವಾಗಿಯೇ ಕೇಂದ್ರ ಹಾಗೂ ರಾಜ್ಯ ಸರಕಾರಗಳಿಗೆ ಈ ದೇಶದ ನಾಗರಿಕರು ವಿವಿಧ ರೀತಿಯ .ಕರ ಕಂದಾಯ ತೆರಿಗೆಗಳನ್ನು ಪ್ರತಿವರ್ಷ ತಪ್ಪದೆ ಸಲ್ಲಿಸುತ್ತಾರೆ ಅಥವಾ ಸರಕಾರಗಳು ವಸೂಲು ಮಾಡುತ್ತವೆ. ಹೀಗೆ ವಸೂಲು ಮಾಡಿದ ಅಥವಾ ಪಡೆದ ರೆವಿನ್ಯೂ ಆದಾಯವನ್ನು ಸಾಮಾನ್ಯ, ಸಾಮಾಜಿಕ ಹಾಗೂ ಆರ್ಥಿಕ ಸೇವೆಗಳಿಗೆ ಖರ್ಚು ಮಾಡಬೇಕಾಗುತ್ತದೆ. ಹಾಗೂ ನಿಗದಿತ ಸೇವೆಗಳ ಗುರಿಯನ್ನು ಸಾಧಿಸಬೇಕಾಗು

ತ್ತದೆ. ಈ ಉದ್ದೇಶಕ್ಕಾಗಿಯೇ ಕೇಂದ್ರ ಹಾಗೂ ರಾಜ್ಯ ಸರಕಾರಗಳ ಜನಪ್ರತಿನಿಧಿ ಮಂತ್ರಿಗಳು ಹಾಗೂ ನಾಗರಿಕ ಸೇವಕರು ರಾಜ್ಯಾದ್ಯಂತ ಹಾಗೂ ದೇಶಾದ್ಯಂತ ಅಸಂಖ್ಯಾತರಿದ್ದಾರೆ. ಇವರೆಲ್ಲರೂ ನಿರ್ದಿಷ್ಟವಾದ ಹಾಗೂ ಅಗತ್ಯವಾದ ಸಾಮಾಜಿಕ ಹಾಗೂ ಆರ್ಥಿಕ ಸೇವಾಭಿವೃದ್ಧಿಯನ್ನು ಅನುಷ್ಠಾನಗೊಳಿಸಲು ಪ್ರತಿವರ್ಷ ವಿಫಲವಾಗಿ ಕರ್ತವ್ಯಚ್ಯುತರಾಗುತ್ತಿರುವರು ನಮ್ಮ ರಾಜ್ಯದ ಹಾಗೂ ರಾಷ್ಟ್ರದ ದುರ್ದೈವ. ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ತಮ್ಮ ಹೊಣೆಯನ್ನರಿಯದೆ ಬೇಜವಾಬ್ದಾರಿಗಳಾಗಿ ಕಾರ್ಯಶೀಲರಾಗದೆ ಹೋಗುತ್ತಿರುವುದರಿಂದ ನಿರೀಕ್ಷಿತ ಅಭಿವೃದ್ಧಿ ಗುರಿಯನ್ನು ಸಾಧಿಸಲಿಕ್ಕೆ ಸಾಧ್ಯವಾಗಿಲ್ಲ.

ಪ್ರಸ್ತುತ ರಾಜ್ಯ ಸರಕಾರ 94-95ರ ಕೊನೆಯ ಭಾಗದಲ್ಲಿ ಅಧಿಕಾರಕ್ಕೆ ಬಂದು ಆಡಳಿತ ಹಾಗೂ ಅಭಿವೃದ್ಧಿಯ ಅಧಿಕಾರ ನಡೆಸುತ್ತ ಇಲ್ಲಿಯವರೆಗೆ 5 ಆಯವ್ಯಯ ಪತ್ರಗಳನ್ನು ವಿಧಾನಮಂಡಲದಲ್ಲಿ ಮಂಡಿಸಿದೆ ಹಾಗೂ 94-95ರಿಂದ 99-2000ರವರೆಗೆ ಐದು ವಾರ್ಷಿಕ ಅಂದಾಜು ಬಜೆಟ್, ಐದು ವಾರ್ಷಿಕ ಪರಿಷ್ಕೃತ ಅಂದಾಜು ಬಜೆಟ್, ನಾಲ್ಕು ವಾರ್ಷಿಕ ವಾಸ್ತವಿಕ ಬಜೆಟ್ ಮಂಡನೆ ಮಾಡಿದೆ. ರಾಜ್ಯ ಸರಕಾರದ ಮೂಲ ಉದ್ದೇಶ ರಾಜ್ಯದ ಆಡಳಿತ ಹಾಗೂ ಅಭಿವೃದ್ಧಿ ಪ್ರಗತಿಯ ಸಾಧನೆ, ಅಭಿವೃದ್ಧಿಯ ಪ್ರಗತಿಯನ್ನು ಸಾಧಿಸುವ ಸಲುವಾಗಿಯೇ ಸಾಮಾನ್ಯ, ಸಾಮಾಜಿಕ ಹಾಗೂ ಆರ್ಥಿಕ ಸೇವೆಗಳಿಗಾಗಿ ಸರಕಾರ ಪಡೆದ ಆದಾಯ, ಸಾಲ-ಮುಂಗಡಗಳ ಹಣದಿಂದ ಪ್ರತಿವರ್ಷ ಪ್ರಗತಿ ಸಾಧಿಸಬೇಕಾಗುತ್ತದೆ. 94-95ರಿಂದ 98-99ರ ಅವಧಿಯ 5 ವರ್ಷಗಳ ಅಂದಾಜು ವೆಚ್ಚ, ಪರಿಷ್ಕೃತ ವೆಚ್ಚ, ವಾಸ್ತವಿಕ ವೆಚ್ಚ ಹಾಗೂ ಸಾಧಿಸಿದ ಪ್ರಗತಿಯನ್ನು ನೋಡಿದರೆ ಕರ್ತವ್ಯಚ್ಯುತಿ, ಅದಕ್ಷತೆ, ಅಸಮರ್ಥತೆ, ನಿರಾಸೆ, ಕುಂಠಿತ ಹಾಗೂ ಶೋಚನೀಯ ಸುಸ್ಪಷ್ಟ. ರಾಜ್ಯದ ಆಡಳಿತ, ಅಭಿವೃದ್ಧಿಗಳೆಲ್ಲ ಸಾಮಾನ್ಯ, ಸಾಮಾಜಿಕ ಹಾಗೂ ಆರ್ಥಿಕ ಹೀಗೆ ಮೂರು ಸೇವೆಗಳಲ್ಲಿ ಬರುತ್ತದೆ. ಈ ಸೇವೆಗಳಿಗಾಗಿ ರೆವಿನ್ಯೂ ಹಾಗೂ ಬಂಡವಾಳ ವೆಚ್ಚವನ್ನು ಮಾಡಬೇಕಾಗುತ್ತದೆ. ಈ ಐದು ವರ್ಷಗಳಲ್ಲಿ ಬಜೆಟ್ ಅಂದಾಜಿನ ಪ್ರಕಾರ ಸರಕಾರ ಈ ಎಲ್ಲ ಸೇವೆಗಳಿಗೆ ನಿಗದಿ ಮಾಡಿದ ಮೊತ್ತವನ್ನು ವೆಚ್ಚ ಮಾಡದೆ ಪ್ರಗತಿಯನ್ನು ಕುಂಠಿತಗೊಳಿಸಿದೆ. ಬಜೆಟ್ ಪ್ರಕಾರ ಈ ಐದು ವರ್ಷಗಳ ಅವಧಿಯಲ್ಲಿ ರೆವಿನ್ಯೂ ಹಾಗೂ ಬಂಡವಾಳ ನಿಗದಿತ 59341.19 ಕೋಟಿ ಮೊತ್ತದಲ್ಲಿ 2658.93 ಕೋಟಿ ಮೊತ್ತವನ್ನು ವೆಚ್ಚ ಮಾಡಿರುವುದಿಲ್ಲ. ಇದರ ಪರಿಣಾಮವಾಗಿ ಅಭಿವೃದ್ಧಿಯ ಪ್ರಗತಿ ಕುಂಠಿತವಾಗಿದೆ. ರೆವಿನ್ಯೂ ಹಾಗೂ ಬಂಡವಾಳ ವೆಚ್ಚದ ಜೊತೆಗೆ ವಿವಿಧ ಸೇವೆಗಳ ಸಾಧನೆಗಾಗಿ ಸುಮಾರು 36ಕ್ಕೂ ಹೆಚ್ಚು ಶೀರ್ಷಿಕೆಯ ಇಲಾಖೆಗಳಿಗೆ ಸಾಲ ಹಾಗೂ ಮುಂಗಡ ಹಣವನ್ನು ಪ್ರತಿವರ್ಷ ಕೊಡಬೇಕಾಗುತ್ತದೆ. ಕೊಟ್ಟ ಸಾಲ ಮತ್ತು ಮುಂಗಡಗಳನ್ನು ಪರತ ಪಡೆಯಬೇಕಾಗುತ್ತದೆ. ಕೊಟ್ಟ ಸಾಲ ಹಾಗೂ ಮುಂಗಡ ಹಣ ಅಭಿವೃದ್ಧಿಯ ಪ್ರಗತಿಗೆ ಸದುಪಯೋಗವಾಗಬೇಕೆಂಬುದನ್ನು ಸರಕಾರ ನೋಡಬೇಕಾಗುತ್ತದೆ. ಕೊಟ್ಟ ಸದರೀ ಸಾಲ-ಮುಂಗಡ ಸದುಪಯೋಗವಾಗುತ್ತಿದ್ದರೆ ಪ್ರಯೋಜನ ಹಾಗೂ ಪ್ರಗತಿ

ದೊರೆಯುತ್ತಿದ್ದರೆ ವಸೂಲು ಮಾಡದೆ ಬಡ್ಡಿ ಹಾಗೂ ಡಿವಿಡೆಂಡನ್ನು ಪಡೆಯಬೇಕಾಗುತ್ತದೆ. ಈ ಐದು ವರ್ಷಗಳ ಅವಧಿಯಲ್ಲಿ ಸಾಮಾನ್ಯ, ಸಾಮಾಜಿಕ ಹಾಗೂ ಆರ್ಥಿಕ ಸೇವೆಗಳಿಗೆ ಇಲಾಖೆಗಳಿಗೆ ಬಜೆಟ್ ಪ್ರಕಾರ ಕೊಡಬೇಕಾಗಿದ್ದ ಸಾಲ ಮತ್ತು ಮುಂಗಡ ಮೊತ್ತದಲ್ಲಿ 134.36 ಕೋಟಿ ಹಣವನ್ನು ಸರಕಾರ ಕೊಟ್ಟಿರುವುದಿಲ್ಲ. ಇದು ಅಭಿವೃದ್ಧಿ ಹಾಗೂ ಪ್ರಗತಿಗೆ ಮಾರಕ ಹಾಗೂ ಭಾದಕ. ಇದಕ್ಕೆ ವ್ಯತಿರಿಕ್ತವಾಗಿ ಈ ಎಲ್ಲ ಇಲಾಖೆಗಳಿಂದ ಪರತ ಪಡೆಯಬೇಕಾಗಿದ್ದ ಸಾಲ ಮುಂಗಡ ಮೊತ್ತದಲ್ಲಿ ನಿಗದಿತ ಬಜೆಟ್ ಮೀರಿ 178.16 ಕೋಟಿ ಹಣವನ್ನು ಜಬರದಸ್ತ ಮಾಡಿ ಪರತ ಪಡೆಯಲಾಗಿದೆ. ಹಾಗಾದರೆ ಈ ಇಲಾಖೆಗಳು ಉಳಿಯಬೇಕೋ ಅಥವಾ ಹಾಳಾಗಬೇಕೋ? ಈ ಐದು ವರ್ಷದ ಅವಧಿಯಲ್ಲಿ ಸಂಚಿತ ನಿಧಿಯಲ್ಲಿ ಬಜೆಟ್ ಪ್ರಕಾರ ನಿಗದಿತ ಮೊತ್ತದಲ್ಲಿ 5785.00 ಕೋಟಿ ಮೊತ್ತವನ್ನು ಬಟವಾಡೆ ಮಾಡದೆ ರಾಜ್ಯದ ವಿವಿಧ ಸೇವೆಗಳ ಸರ್ವಾಂಗೀಣ ಪ್ರಗತಿಯನ್ನು ಸರಕಾರ ವಿಫಲಗೊಳಿಸಿದೆ.

ಕೇಂದ್ರದ ಸಾಲ, ಮುಂಗಡ ಹಾಗೂ ಸಾರ್ವಜನಿಕ ಲೆಕ್ಕದ ಸಾಲ ಪಡೆಯುವಲ್ಲಿ ಮಾತ್ರ ಸರಕಾರ ಅದ್ಭುತ ಪ್ರಗತಿ ಸಾಧಿಸಿದೆಯೆಂದು ಹೇಳಬೇಕಾಗಿದೆ. ಈ ಐದು ವರ್ಷದ ಅವಧಿಯಲ್ಲಿ ಕೇಂದ್ರ ಸರಕಾರದಿಂದ ಪಡೆದ ಸಾಲ ವ ಮುಂಗಡ ಹಾಗೂ ಸಾರ್ವಜನಿಕ ಲೆಕ್ಕದಿಂದ ಪಡೆದ ವಿವಿಧ ಸಾಲದ ಒಟ್ಟು ಮೊತ್ತ 122020.56 ಕೋಟಿಯಾಗಿದ್ದು, ಈ ಅವಧಿಯಲ್ಲಿ ಅವರವರಿಗೆ ಪರತ ಮಾಡಿದ್ದ ಸಾಲ ವ ಮುಂಗಡ 112485.55 ಕೋಟಿ ಇರುತ್ತದೆ. ಹೀಗೆ ರಾಜ್ಯ ಸರಕಾರವು ಪರತ ಕೊಡದೇ ಉಳಿಸಿಕೊಂಡ ಮೊತ್ತ ಈ ಐದು ವರ್ಷದ ಅವಧಿಯಲ್ಲಿ 9535.02 ಕೋಟಿ ಇರುತ್ತದೆ. ಕೇಂದ್ರ ಸರಕಾರದ ಸಾಲ, ಮುಕ್ತ ಮಾರುಕಟ್ಟೆ ಸಾಲ, ವಿವಿಧ ಫಂಡು, ವಿವಿಧ ಠೇವಣಿ ಇತ್ಯಾದಿ ರಾಜ್ಯ ಸರಕಾರದ ಸಾಲ ವ ಯೆಬಿಲಿಟಿ 98-99ರಲ್ಲಿ 18550.49 ಕೋಟಿಗೆ ಏರಿದ್ದು 99-2000 ವರ್ಷದ ಅಂತ್ಯಕ್ಕೆ 21748.58 ಕೋಟಿ ಏರಲಿದೆ. ಸರಕಾರದ ಈ ಐದು ವರ್ಷದ ಅವಧಿಯಲ್ಲಿ 6214.81 ಕೋಟಿ ಬಡ್ಡಿ ಕೊಟ್ಟಿದ್ದು, 99-2000 ಈ ಹಾಲಿ ವರ್ಷದಲ್ಲಿ ಹಿಂದಿನ ಎಲ್ಲಾ ವರ್ಷಕ್ಕಿಂತ ಹೆಚ್ಚು 2106.16 ಕೋಟಿ ಬಡ್ಡಿ ಕೊಡಲಿದೆ. ರಾಜ್ಯದಲ್ಲಿ ನಿವೃತ್ತ ಸರಕಾರಿ ನೌಕರರ ಸಂಖ್ಯೆ ಸುಮಾರು 3.00 ಲಕ್ಷ ಇದೆ. ಇವರೆಲ್ಲರಿಗೆ ಈ ಐದು ವರ್ಷದ ಅವಧಿಯಲ್ಲಿ ಬಜೆಟ್ ನಿಗದಿತ ನಿವೃತ್ತಿ ವೇತನ ವೆಚ್ಚದ ಮೊತ್ತ 3641.80 ಕೋಟಿ. ವಾಸ್ತವಿಕ ವೆಚ್ಚದ ಮೊತ್ತ 3656.59 ಕೋಟಿ ಅಂದರೆ ಬಜೆಟ್ ಮೀರಿ ಕೊಟ್ಟಿರುವ ಮೊತ್ತ 14.80 ಕೋಟಿ ಕೊಟ್ಟದ್ದಕ್ಕೆ ಸಂತೋಷ, ರಾಜ್ಯದ ಜನಸಂಖ್ಯೆ ಈಗ 5 ಕೋಟಿ ಮೀರಿದೆ. ಈ ಐದು ಕೋಟಿ ಪ್ರಜಾಪ್ರಭುಗಳ ಸಲುವಾಗಿ ಸಾಮಾನ್ಯ, ಸಾಮಾಜಿಕ ಹಾಗೂ ಆರ್ಥಿಕ ಸೇವೆಗಳಿಗೆ ವೆಚ್ಚ ಮಾಡಬೇಕಾಗಿದ್ದ ಈ ಐದು ವರ್ಷದ ಅವಧಿಯಲ್ಲಿಯ ನಿಗದಿತ ರೆವಿನ್ಯೂ ಹಾಗೂ ಬಂಡವಾಳ ಬಜೆಟ್ ಮೊತ್ತದಲ್ಲಿ 2658.93 ಕೋಟಿ ಮೊತ್ತವನ್ನು ವೆಚ್ಚ ಮಾಡಿಲ್ಲ ಹಾಗೂ ಪ್ರಗತಿ ಸಾಧಿಸಿಲ್ಲ. ವಾರ್ಷಿಕ ವಿತ್ತ ನಿರೂಪಣೆಯಲ್ಲಾಗಲೀ ಅಥವಾ ಎಲ್ಲೇ ಆಗಲೀ ಸರಕಾರಿ ನೌಕರರ ವೇತನ ಭತ್ಯೆಯ ಬಗ್ಗೆ ಬಜೆಟ್ ಇಲ್ಲವೇ ಇಲ್ಲ. ಇದರ

ನಿಗೂಢ ಯಾರಿಗೂ ಗೊತ್ತಾಗದು. ಹೀಗೆ ಪ್ರಜಾ ಸರಕಾರದ ಈ ಐದು ವರ್ಷಗಳ ಅವಧಿಯಲ್ಲಿ ನಿಗದಿತ ಹಣ ವೆಚ್ಚ ಮಾಡದೆ ರಾಜ್ಯದ ಸರ್ವತೋಮುಖ ಅಭಿವೃದ್ಧಿ ಕುಂಠಿತಗೊಳಿಸಿ, ಸಾಲದ ಹೊರೆಯನ್ನು ಹೆಚ್ಚಿಸುತ್ತ ಸಾರ್ವಜನಿಕರಿಗೆ ಮಾರಕವಾದ ಐದು ಬಜೆಟ್‌ಗಳು ಪ್ರಗತಿಗೆ ಗಂಡಾಂತರಕಾರಿಯಾಗಿವೆ. ಈಗಿನ ಸರಕಾರ ಕನಿಷ್ಠ ಚಾಲೂ ವರ್ಷ ತನ್ನ ಅಧಿಕಾರ ಮುಕ್ತಾಯವಾಗುವ ಮುನ್ನ ಹಿಂದಿನ ಐದು ವರ್ಷಗಳ ಲೋಪ - ದೋಷ ಕರ್ತವ್ಯಚ್ಯುತಿಗಳನ್ನು ಅರಿತುಕೊಂಡು ಬಜೆಟ್ ಪ್ರಕಾರ ಸಾಮಾನ್ಯ ಸಾಮಾಜಿಕ ಹಾಗೂ ಆರ್ಥಿಕ ಸೇವೆಗಳಿಗೆ ಬಜೆಟ್ ನಿಗದಿತ ಹಣವನ್ನು ಸಂಪೂಣವಾಗಿ ವೆಚ್ಚ ಮಾಡಲಿಕ್ಕೆ ಪ್ರಯತ್ನಿಸದರೆ ಒಳ್ಳೆಯದು. ಇಲ್ಲವಾದರೆ ಅದು ಈ ರಾಜ್ಯದ 5 ಕೋಟಿ ಜನರ ದುರ್ದೈವ.

❑

1994-99ರಲ್ಲಿ ಪಡೆಯದ ಕೇಂದ್ರದ ಹಣ - 2,686.49 ಕೋಟಿ

ಕೇಂದ್ರ ಸರಕಾರ ಪ್ರತಿವರ್ಷ ರಾಜ್ಯ ಸರಕಾರಗಳಿಗೆ ವಿಕೋಪ ಪರಿಹಾರನಿಧಿಗೆ ಸಹಾಯಧನ, ಪೊಲೀಸ್, ಆಡಳಿತ ಸೇವೆ, ಸಾಮಾನ್ಯ ಶಿಕ್ಷಣ, ಗ್ರಾಮೋದ್ಯಮ ಇತ್ಯಾದಿ ಯೋಜನೇತರ ಅನುದಾನವನ್ನು; ಸಮೂಹ ಅನುದಾನ, ನಗರಾಭಿವೃದ್ಧಿ, ಇತರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ ಇತ್ಯಾದಿ ರಾಜ್ಯ ಯೋಜನಾ ಕಾರ್ಯಕ್ರಮಗಳಿಗೆ ಅನುದಾನವನ್ನು; ಸಾಮಾನ್ಯ ಶಿಕ್ಷಣ, ಪರಿಶಿಷ್ಟ ಜಾತಿ-ಪಂಗಡ, ಇತರ ಹಿಂದುಳಿದ ವರ್ಗ, ಸಸ್ಯ ಸಂಗೋಪನೆ, ಗ್ರಾಮೀಣಾಭಿವೃದ್ಧಿ ಇತ್ಯಾದಿ ಕೇಂದ್ರ ಯೋಜನಾ ಕಾರ್ಯಕ್ರಮಗಳಿಗೆ ಅನುದಾನವನ್ನು; ಸಾಮಾನ್ಯ ಶಿಕ್ಷಣ, ನ್ಯಾಯಪರಿಪಾಲನೆ, ಕುಟುಂಬ ಕಲ್ಯಾಣ, ನೀರು ಪೂರೈಕೆ ಮತ್ತು ನೈರ್ಮಲ್ಯ, ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ, ಸಸ್ಯ ಸಂಗೋಪನೆ, ಸಹಕಾರ, ರಸ್ತೆ ಮತ್ತು ಸೇತುವೆ, ಭೂಸಾರ ಮತ್ತು ಜಲಸಂರಕ್ಷಣೆ, ಮೀನುಗಾರಿಕೆ, ಗ್ರಾಮೋದ್ಯೋಗ ಇತ್ಯಾದಿ ಕೇಂದ್ರ ಪುರಸ್ಕೃತ ಯೋಜನಾ ಕಾರ್ಯಕ್ರಮಗಳಿಗೆ ಅನುದಾನವನ್ನು; ಕೇಂದ್ರ ಮೂಲಭೂತ ಉತ್ಪಾದನಾ ಶುಲ್ಕದಲ್ಲಿ ರಾಜ್ಯದ ಪಾಲನ್ನು, ಮಾರಾಟ ತೆರಿಗೆಯ ಬದಲು ಹೆಚ್ಚಿನ ಉತ್ಪಾದನಾ ಶುಲ್ಕವನ್ನು ಹೀಗೆ ಲೆಕ್ಕ ಶೀರ್ಷಿಕೆ 1601 ಹಾಗೂ 1603 ಇವುಗಳ ಪ್ರಕಾರ ಕೊಡುತ್ತದೆ. ಈ ಎಲ್ಲಾ ಕಾರ್ಯಕ್ರಮಗಳನ್ನು ರಾಜ್ಯ ಸರಕಾರ ತಪ್ಪದೆ ಅನುಷ್ಠಾನಗೊಳಿಸುವುದು ಕರ್ತವ್ಯ. ಈ ಕರ್ತವ್ಯವನ್ನು ನಿರ್ವಹಿಸಲು ವರ್ಷ ಪ್ರಾರಂಭದ ಮೊದಲೇ ಯಾವ್ಯಾವ ಯೋಜನೆಗಳಿಗೆ ಎಷ್ಟೆಷ್ಟು ಹಣವನ್ನು ಕೇಂದ್ರ ಸರಕಾರದಿಂದ ಪಡೆಯಬೇಕೆಂಬ ಬಗ್ಗೆ ರಾಜ್ಯ ಸರಕಾರ ಬಜೆಟ್ ಅಂದಾಜು ತಯಾರಿಸಿ ವಿಧಾನಸಭೆ ಹಾಗೂ ವಿಧಾನ ಪರಿಷತ್ತಿನಿಂದ ಮಂಜೂರಿ ಪಡೆಯಬೇಕಾಗುತ್ತದೆ. ಮಂಜೂರಿ ಪಡೆದ ನಂತರ ಪ್ರತಿವರ್ಷದ ಪ್ರಾರಂಭದಿಂದ ಕೊನೆಯವರೆಗೆ ಈ ಅಂದಾಜು ಮೊತ್ತವನ್ನು ರಾಜ್ಯ ಹಣಕಾಸು ಇಲಾಖೆ, ಹಣಕಾಸು ಮಂತ್ರಿ, ಕೇಂದ್ರ ಸರ್ಕಾರವನ್ನು ಸಂಪರ್ಕಿಸಿ ಗೊತ್ತಪಡಿಸಿದ ಅಂದಾಜು ಮೊತ್ತವನ್ನು ಆಗಾಗ್ಗೆ ಪಡೆದು ನಿಗದಿತ ಕಾರ್ಯಕ್ರಮಗಳಿಗೆ ವೆಚ್ಚ ಮಾಡಿ ಪ್ರಗತಿಯನ್ನು ಸಾಧಿಸಬೇಕಾಗುತ್ತದೆ. ಕೈಕಟ್ಟಿಕೊಂಡು ಕುಳಿತು ಕೇಂದ್ರ ಸರಕಾರವನ್ನು ಕೇಂದ್ರ ಸರಕಾರದ ಹಣಕಾಸು

ಇಲಾಖೆ ವ ಹಣಕಾಸು ಮಂತ್ರಿಗಳನ್ನು ಸಂಪರ್ಕಿಸಿ ಅವರ ಮನವೊಲಿಸಿ ಕೇಂದ್ರ ಸರಕಾರದಿಂದ ಬರಬೇಕಾದ ಅಂದಾಜು ಹಣ ಪಡೆಯದೆ ಹೋದರೆ ರಾಜ್ಯದ ಅಭಿವೃದ್ಧಿ ಕಾರ್ಯಕ್ರಮಗಳು ಕುಂಠಿತಗೊಳ್ಳುತ್ತವೆ. ಜಮ್ಮು-ಕಾಶ್ಮೀರ ಹಾಗೂ ಕೆಲವು ರಾಜ್ಯಗಳು ಕೇಂದ್ರ ಸರಕಾರದೊಡನೆ ಉತ್ತಮ ಬಾಂಧವ್ಯವನ್ನಿಟ್ಟುಕೊಂಡು ಅದರ ಮನವೊಲಿಸಿ ಬಜೆಟ್ ಅಂದಾಜಿಗಿಂತ ಹೆಚ್ಚೆಚ್ಚು ಹಣವನ್ನು ಪಡೆದ ಹಾಗೂ ಅವರವರ ರಾಜ್ಯದ ಅಭಿವೃದ್ಧಿಯನ್ನು ಹೆಚ್ಚಿನ ಪ್ರಮಾಣದಲ್ಲಿ ಸಾಧಿಸಿದ ಉದಾಹರಣೆ ಕೂಡ ಇವೆ. ಅನೇಕ ರಾಜ್ಯ ಸರಕಾರಗಳು ಕೇಂದ್ರ ಸರಕಾರ ಬಿಡುಗಡೆ ಮಾಡಿದ ಹಣವನ್ನು ಆಯಾ ಉದ್ದೇಶಿತ ಯೋಜನೆಗಳಿಗೆ ಸಕಾಲದಲ್ಲಿ ಆಗಾಗ್ಗೆ ಸಂಪೂರ್ಣ ವೆಚ್ಚ ಮಾಡಿ ಪ್ರಗತಿ ಸಾಧಿಸಿ ಹಾಗೂ ತೋರಿಸಿ, ಹಣ ಉಪಯೋಗಿಸಿದ ಬಗ್ಗೆ ಯುಟಿಲೈಸೇಷನ್ ಸರ್ಟಿಫಿಕೇಟ್ ಹಾಜರುಪಡಿಸಿ ಮತ್ತೆ ಹೆಚ್ಚಿನ ಹಣವನ್ನು ಕೇಂದ್ರದಿಂದ ಪಡೆದ ಉದಾಹರಣೆಯೂ ಈ ರಾಷ್ಟ್ರದಲ್ಲಿ ಸಾಕಷ್ಟು ಇವೆ. ಇದಕ್ಕೆ ವ್ಯತಿರಿಕ್ತವಾಗಿ ಕೇಂದ್ರ ಸರಕಾರ ಬಿಡುಗಡೆ ಮಾಡಿದ ಹಣವನ್ನು ಆಯಾ ನಿಗದಿತ ಯೋಜನೆಗಳಿಗೆ ವೆಚ್ಚ ಮಾಡದೆ ಬೇರೆ ಉದ್ದೇಶಕ್ಕೆ ವೆಚ್ಚ ಮಾಡಿದ ಅಥವಾ ಏತಕ್ಕೂ ವೆಚ್ಚ ಮಾಡದ ಸಂದರ್ಭದಲ್ಲಿ ಕೇಂದ್ರ ಸರಕಾರ ಹಣ ಬಿಡುಗಡೆಯನ್ನು ತಡೆಹಿಡಿದ ಉದಾಹರಣೆಯೂ ಕೂಡ ಇದೆ. ಅಂತೆಯೇ ಬಿಡುಗಡೆ ಮಾಡಿದ ಹಣವನ್ನು ವೆಚ್ಚ ಮಾಡದೆ ವರ್ಷದ ಅಂತ್ಯಕ್ಕೆ ಶಿಲ್ಕು ಉಳಿಸಿದ ರಾಜ್ಯ ಸರಕಾರಗಳ ಉದಾಹರಣೆ ಕೂಡ ಇದೆ. ನಮ್ಮ ರಾಷ್ಟ್ರದಲ್ಲಿ ಚುರುಕಾಗಿ ಕೆಲಸ ಮಾಡುವ ಹಾಗೂ ದರಿದ್ರರಾಗಿ ಕೆಲಸ ಮಾಡದ ರಾಜ್ಯ ಸರಕಾರಗಳು ಕೂಡ ಸಾಕಷ್ಟು ಇದೆ. ಬಜೆಟ್ ಅಂದಾಜು ಪ್ರಕಾರ ರಾಜ್ಯ ಸರಕಾರಗಳು ಕೇಂದ್ರದಿಂದ ಹಣ ಪಡೆಯದೆ ಹೋದರೆ ರಾಜ್ಯದ ಹಣಕಾಸು ಪರಿಸ್ಥಿತಿ ಹದಗೆಟ್ಟು ಹಣವಿಲ್ಲದೆ ಎಲ್ಲಾ ತರಹದ ಯೋಜನೆ ಹಾಗೂ ಯೋಜನೇತರ ಅಭಿವೃದ್ಧಿ ಕಾರ್ಯಕ್ರಮಗಳು ವೈಫಲ್ಯಗೊಂಡು ಜನತೆಗೆ ಸಿಗಬೇಕಾದ ಸೌಲಭ್ಯಗಳು ಸಿಗದಂತಾಗುತ್ತವೆ ಹಾಗೂ ಸರಕಾರಗಳು ಅಸಮರ್ಥ ಹಾಗೂ ಜನವಿರೋಧ್‌ಯಾಗಿ ಪರಿಣಮಿಸುತ್ತವೆ. ರಾಷ್ಟ್ರದಲ್ಲಿ ಇಂತಹ ಅಸಮರ್ಥರಾಗಿ ವೈಫಲ್ಯಗೊಂಡು ಕೇಂದ್ರ ಸರಕಾರದಿಂದ ಬಜೆಟ್ ಅಂದಾಜು ಪ್ರಕಾರ ಹಣ ಪಡೆಯದ ರಾಜ್ಯ ಸರಕಾರಗಳ ಸಾಲಿನಲ್ಲಿ ನಮ್ಮ ರಾಜ್ಯ ಸರಕಾರ ಮುಂದುವರೆಯುತ್ತಿರುವುದು ಈ ರಾಜ್ಯದ ಜನತೆಯ ದುರ್ದೈವ.

ಕೇಂದ್ರ ಸರಕಾರದಿಂದ ನಮ್ಮ ರಾಜ್ಯ ಸರಕಾರ ಶೀರ್ಷಿಕೆ 1601 ಹಾಗೂ 1603 ಪ್ರಕಾರ 94-95ರಲ್ಲಿ ಪಡೆಯಬೇಕಾಗಿದ್ದ ಅಂದಾಜು ಮೊತ್ತ 1814.17 ಕೋಟಿ, ಪಡೆದ ಮೊತ್ತ 1409.58 ಕೋಟಿ, ಪಡೆಯದ ಮೊತ್ತ 404.59 ಕೋಟಿ. 95-96ರಲ್ಲಿ ಪಡೆಯಬೇಕಾಗಿದ್ದ ಅಂದಾಜು ಮೊತ್ತ 2121.80 ಕೋಟಿ, ಪಡೆದ ಮೊತ್ತ 1463.18 ಕೋಟಿ, ಪಡೆಯದ ಮೊತ್ತ 658.63 ಕೋಟಿ. 96-97ರಲ್ಲಿ ಪಡೆಯಬೇಕಾಗಿದ್ದ ಅಂದಾಜು ಮೊತ್ತ 2400.06 ಕೋಟಿ, ಪಡೆದ ಮೊತ್ತ 1789.57 ಕೋಟಿ, ಪಡೆಯದ ಮೊತ್ತ 610.49 ಕೋಟಿ, 97-98ರಲ್ಲಿ ಪಡೆಯಬೇಕಾಗಿದ್ದ ಅಂದಾಜು ಮೊತ್ತ 2617.94 ಕೋಟಿ,

ಪಡೆದ ಮೊತ್ತ 1809.83 ಕೋಟಿ, ಪಡೆಯದ ಮೊತ್ತ 808.12 ಕೋಟಿ. 98-99ರಲ್ಲಿ ಪಡೆಯಬೇಕಾದ ಅಂದಾಜು ಮೊತ್ತ 2910.54 ಕೋಟಿ, ಪಡೆದ ಮೊತ್ತ 2705.87 ಕೋಟಿ, ಪಡೆಯದ ಮೊತ್ತ 204.68 ಕೋಟಿ. ಹೀಗೆ 94-95ರಿಂದ 98-99ರ ವರೆಗೆ ಬಜೆಟ್ ಅಂದಾಜು ಪ್ರಕಾರ ಕೇಂದ್ರದ ಹಣದಲ್ಲಿ 2686.49 ಕೋಟಿ ಭಾರೀ ಹಣವನ್ನು ಪಡೆಯುವಲ್ಲಿ ರಾಜ್ಯ ಸರಕಾರದ ಹಣಕಾಸು ಇಲಾಖೆ ವಿಫಲಗೊಂಡಿರುವುದು ಸರಕಾರಿ ಅಧಿಕೃತ ಅಂಕಿ - ಸಂಖ್ಯೆ ಅಂಶಗಳಿಂದ ಸುಸ್ಪಷ್ಟಗೊಂಡಿದೆ. ಹೀಗೆ ರಾಜ್ಯ ಸರಕಾರವು ಬಜೆಟ್ ಅಂದಾಜು ಪ್ರಕಾರ ಕೇಂದ್ರದಿಂದ ಪಡೆಯದ ಹಣವಲ್ಲದೆ ತೆರಿಗೆ ಅಂದಾಜು ಆದಾಯದಲ್ಲಿ ಪಡೆಯದ ಹಣ, ತೆರಿಗೆಯೇತರ ಅಂದಾಜು ಆದಾಯದಲ್ಲಿ ಪಡೆಯದ ಒಟ್ಟು ರೆವಿನ್ಯೂ ಹಣ 94-95ರಲ್ಲಿ 1199.97 ಕೋಟಿ, 95-96ರಲ್ಲಿ 336.52 ಕೋಟಿ, 96-97ರಲ್ಲಿ 880.88 ಕೋಟಿ, 97-98ರಲ್ಲಿ 1153.06 ಕೋಟಿ, 98-99ರಲ್ಲಿ 811.25 ಕೋಟಿ. ಹೀಗೆ 94-95ರಿಂದ 98-99ರ ವರೆಗಿನ ಈ ಐದು ವರ್ಷದ ಅವಧಿಯಲ್ಲಿ ಒಟ್ಟು 4381.68 ಕೋಟಿ ರೆವಿನ್ಯೂ ಆದಾಯ ಪಡೆಯದೆ ಖಜಾನೆಯಲ್ಲಿ ನಿರ್ದಿಷ್ಟ ಅಂದಾಜು ಆದಾಯ ಮೊತ್ತವನ್ನು ಕಡಿಮೆ ಮಾಡಿರುವುದು ಹಾಗೂ ವಿವಿಧ ಅಭಿವೃದ್ಧಿ ವೆಚ್ಚಕ್ಕೆ ಹಣವಿಲ್ಲದೆ ಸಾಲ - ಮುಂಗಡ ಪಡೆದರೂ ಅದೂ ಸಾಲದೆ ರೆವಿನ್ಯೂ ವೆಚ್ಚದ ಅಂದಾಜಿನಲ್ಲಿ 94-95ರಿಂದ 98-99ರ ಐದು ವರ್ಷ ಅವಧಿಯಲ್ಲಿ 2825.09 ಕೋಟಿ ಮೊತ್ತವನ್ನು ವೆಚ್ಚ ಮಾಡದೆ ವಿವಿಧ ಅಭಿವೃದ್ಧಿ ಕುಂಠಿತಗೊಳಿಸಿರುವುದು ಇದು ಸರಕಾರದ ಸಾಧನೆಯೇ? ಅಥವಾ ವೈಫಲ್ಯದ ಅತಿರೇಕವೇ? ಹೀಗೆ ಈ ಆರ್ಥಿಕ ದುರಂತದ ದಾರಿಯಲ್ಲಿ ನಡೆದುಬಂದಿರುವ ಸರಕಾರದ ಚಿಂತಾಜನಕ ಪರಿಸ್ಥಿತಿಗೆ ಹಾಗೂ ಜನತೆಯ ಅಭಿವೃದ್ಧಿಯ ವಂಚನೆಗೆ ಯಾರು ಕಾರಣ ಏಕೆ ಕಾರಣವೆಂಬುದನ್ನು ಶಾಸಕರು, ಮಂತ್ರಿಗಳು, ಜಿಲ್ಲಾ ಉಸ್ತುವಾರಿ ಮಂತ್ರಿಗಳು, ಹಣಕಾಸು ಮಂತ್ರಿಗಳು ಅರಿತುಕೊಂಡು ಹೀಗಾದರೆ ಮುಂದೆ ಹೇಗೆಂಬುದನ್ನು ಚಿಂತಿಸಿದರೆ ಒಳ್ಳೆಯದು.

❑

ಆರಕ್ಷಕ ಇಲಾಖೆ : ಸರಕಾರದ ಗದಾ ಪ್ರಹಾರ

ರಾಷ್ಟ್ರವನ್ನು ಪರಕೀಯರ ಅಥವಾ ವಿದೇಶಿಯರ ಆಕ್ರಮಣ ಹಾಗೂ ದಾಳಿಯಿಂದ ರಕ್ಷಣಾ ಪಡೆಗಳು ರಕ್ಷಿಸುತ್ತವೆ. ಈ ಬಗ್ಗೆ ಆಗತ್ಯವಾದ ಅವಶ್ಯವಾದ, ಹಣವನ್ನು ಕೇಂದ್ರ ಸರಕಾರ ವೆಚ್ಚ ಮಾಡುತ್ತವೆ. ಇದು ಅನಿವಾರ್ಯ ಹಾಗೂ ಅತ್ಯಾವಶ್ಯ. ರಾಷ್ಟ್ರದೊಳಗಿನ ನಾಗರಿಕರನ್ನು ಅವರ ಮಾನ-ಮರ್ಯಾದೆ ಆಸ್ತಿಯನ್ನು ರಾಷ್ಟ್ರದಲ್ಲಿಯ ಕೇಂದ್ರ ಹಾಗೂ ರಾಜ್ಯ ಸರಕಾರಗಳು ರಕ್ಷಿಸಬೇಕಾಗುತ್ತದೆ. ಶೋಷಣೆ, ಅತ್ಯಾಚಾರ, ಅನಾಚಾರ, ಅನ್ಯಾಯ, ಕಳುವು, ದರೋಡೆ, ಕೊಲೆ, ಸುಲಿಗೆ ಇತ್ಯಾದಿ ದೌರ್ಜನ್ಯಗಳಿಗೆ ತುತ್ತಾದ ನಾಗರಿಕರು ಆರಕ್ಷಕರನ್ನು ಕಂಡು ಫಿರ್ಯಾದಿ ಕೊಟ್ಟಾಗ ತಕ್ಷಣ ಆರಕ್ಷಕರು ತಡಮಾಡದೆ ಗುನ್ಹೆಯನ್ನು ನೋಂದಾಯಿಸಿಕೊಂಡು ಅಪರಾಧಿಗಳ ಪತ್ತೆಗೆ ಹಾಗೂ ತನಿಖೆಗೆ ಮುಂದಾಗಬೇಕಾಗುತ್ತದೆ. ತನಿಖೆ ನಂತರ ಆರೋಪಿಗಳನ್ನು ದಸ್ತಗೀರ್ ಮಾಡಿ ಸಾಕ್ಷಿ ಪುರಾವೆ ಯಾದಿಯೊಂದಿಗೆ ಅವರನ್ನು ನ್ಯಾಯಾಲಯಗಳಿಗೆ ಕಳುಹಿಸಿಕೊಡಬೇಕಾಗುತ್ತದೆ. ಶಾಂತಿ ಪಾಲನೆ ಹಾಗೂ ಕಾನೂನು ವ್ಯವಸ್ಥೆ ಮಾಡುವಲ್ಲಿ, ನಡೆಸಿಕೊಂಡು ಹೋಗುವಲ್ಲಿ ಹಾಗೂ ನಾಗರಿಕರು ನೆಮ್ಮದಿ ಜೀವನ ಪಡೆಸುವಲ್ಲಿ ಆರಕ್ಷಕರ ಪಾತ್ರ ಅಪಾರವಾಗಿದೆ. ಕಾನೂನಿನ ಮುಂದೆ ಎಲ್ಲರೂ ಸರಿಸಮಾನರು ಎಂಬುದನ್ನು ಆರಕ್ಷಕರು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಭ್ರಷ್ಟ ರಾಜಕಾರಣಿಗಳ ಹಾಗೂ ಭ್ರಷ್ಟ ಧರ್ಮಕಾರಣಿಗಳ ಅನುಚಿತ ಒತ್ತಾಯ ವ ಹಸ್ತಕ್ಷೇಪಕ್ಕೆ ಮಣಿಯದೆ ಅಪರಾಧಗಳನ್ನು ನಿರಪರಾಧಿಗಳನ್ನಾಗಿ ಮಾಡುವುದಾಗಲೀ, ನಿರಪರಾಧಿಗಳನ್ನು ಅಪರಾಧಿಗಳನ್ನಾಗಿ ಮಾಡುವುದಾಗಲೀ, ಕೇಸುಗಳು ಕೋರ್ಟಿನಲ್ಲಿ ಚವಕಸಿಯಲ್ಲಿದ್ದಾಗ್ಗೆ ಮೂಲ ಸಾಕ್ಷ್ಯಾಧಾರಗಳನ್ನು ಕೋರ್ಟಿಗೆ ಒದಗಿಸದೆ ಅಪರಾಧಿಗಳು ನಿರಪರಾಧಿಗಳಾಗಿ ಪಾರಾಗಲು ಕರ್ತವ್ಯಚ್ಯುತಿ ಮಾಡುವುದಾಗಲೀ, ಸುಳ್ಳು ಸಾಕ್ಷಿಗಳನ್ನು ಸೃಷ್ಟಿಸಿ, ಸತ್ಯವೆಂಬಂತೆ ಕೋರ್ಟಿಗೆ ಒದಗಿಸಿ ನಿರಪರಾಧಿಗಳು ಅಪರಾಧಿಗಳಾಗಿ ಶಿಕ್ಷೆ, ದಂಡಕ್ಕೆ ಬಲಿಯಾಗುವಂತೆ ಮಾಡುವುದಾಗಲೀ, ಇಂತಹ ಅಚಾತುರ್ಯಗಳು ಆಗಾಗ ಪತ್ರಿಕೆಗಳಲ್ಲಿ ವರದಿಯಾಗುತ್ತಿರುವಂತೆ ಮಾಡುವುದು ಈ ರಾಷ್ಟ್ರದಲ್ಲಿಯ ಯಾವುದೇ ಆರಕ್ಷಕರಿಗೆ ಭೂಷಣವಲ್ಲ. ಸುದೈವದಿಂದ ಇಂತಹ ಘಟನೆಗಳು ಅತಿ ಅಪರೂಪ, ದೇಶಾದ್ಯಂತ ವಿವಿಧ ಆರಕ್ಷಕರು

ತಮ್ಮ ಕರ್ತವ್ಯವನ್ನು ಬಹುಮಟ್ಟಿಗೆ ಉತ್ತಮವಾಗಿ ದಕ್ಷತೆಯಿಂದ ಮಾಡುವರೆಂದೇ, ಅದರ ಪರಿಣಾಮವಾಗಿ ಅನೇಕ ಧರ್ಮಕಾರಣಿಗಳು ಹಾಗೂ ಅನೇಕ ರಾಜಕಾರಣಿಗಳಾದ ಶಾಸಕರು, ಸಂಸದರು, ಮಂತ್ರಿಗಳು, ಮುಖ್ಯಮಂತ್ರಿಗಳು, ಪ್ರಧಾನಮಂತ್ರಿಗಳು, ನ್ಯಾಯಾಧೀಶರಾದವರು ಹಾಗೂ ಅಧಿಕಾರಿಗಳು ನ್ಯಾಯಾಲಯ ಕಟ್ಟೆಗಳನ್ನು ಹತ್ತಿದ್ದಾರೆ ಹಾಗೂ ಹತ್ತುತ್ತಲಿದ್ದಾರೆ. ರಾಜ್ಯದಲ್ಲಿ ದುಷ್ಟರಿಗೆ ಶಿಕ್ಷೆ ಹಾಗೂ ಶಿಷ್ಟರಿಗೆ ರಕ್ಷಣೆ ಸಿಕ್ಕು ರಾಜ್ಯಾದ್ಯಂತ ಶಾಂತಿ-ಶಿಸ್ತು-ನೆಮ್ಮದಿಯುಂಟಾಗಿ ರಾಜ್ಯದ ಅಭಿವೃದ್ಧಿ ಆಡಳಿತ ಸುಗಮವಾಗಿ ಸಿಗಬೇಕಾದರೆ ಹಾಗೂ ಸಾಗಬೇಕಾದರೆ ರಾಜ್ಯದ ಆರಕ್ಷಕ ಇಲಾಖೆ ರಾಜ್ಯದ ಜನತೆಯ ರಕ್ಷಾಕವಚವಾಗಿ ಕಾರ್ಯನಿರ್ವಹಿಸಬೇಕಾಗುತ್ತದೆ. ಸ್ವಾರ್ಥ, ಪಕ್ಷಪಾತ, ಸ್ವಜನ ಪಕ್ಷಪಾತ, ಭ್ರಷ್ಟಾಚಾರ, ಅಧಿಕಾರ ದುರುಪಯೋಗ, ದುರಾಡಳಿತ ತೊಲಗಬೇಕಾದರೆ ಆರಕ್ಷಕರು ಬಿಡೆ, ಮುರವತ್ತು, ವಶೀಲಿ, ರಾಗದ್ವೇಷ, ಭಯ-ಭೀತಿಯಿಲ್ಲದೆ ನ್ಯಾಯಾಂಗದಂತೆ ಕಾರ್ಯನಿರ್ವಹಿಸಬೇಕಾಗುತ್ತದೆ. ಪ್ರಸ್ತುತ ಪರಿಸ್ಥಿತಿಯಲ್ಲಿ ನಾಗರಿಕರ ಹಾಗೂ ರಾಜ್ಯದ ಅಭಿವೃದ್ಧಿ ಆಡಳಿತದ ಹಿತದೃಷ್ಟಿಯಿಂದ ಅದು ಅತಿ ಅವಶ್ಯವಿದೆ. ನ್ಯಾಯಾಂಗದಲ್ಲಿ ನೇಮಕ ಹಾಗೂ ವರ್ಗಾವಣೆಯಲ್ಲಿ ಯಾರದೂ ಹಸ್ತಕ್ಷೇಪವಿಲ್ಲ. ಅಂತೆಯೇ ನ್ಯಾಯಾಂಗ ಎಲ್ಲರ ಪ್ರೀತಿಗೆ ಪಾತ್ರರಾಗಿ ಮೆಚ್ಚುಗೆ ಪಡೆದಿದೆ. ಅಂತೆಯೇ ಆರಕ್ಷಕ ಇಲಾಖೆಯಲ್ಲಿ ಯಾವುದೇ ನೇಮಕ, ವರ್ಗಾವಣೆಗೂ ಕೂಡ ಯಾವುದೇ ರಾಜಕಾರಣಿ ವ ಧರ್ಮಕಾರಣಿಗಳ ಹಸ್ತಕ್ಷೇಪವಿರಬಾರದು. ದುರ್ದೈವದಿಂದ ರಾಜಕಾರಣಿಗಳ ಹಾಗೂ ಧರ್ಮಕಾರಣಿಗಳ ಹಸ್ತಕ್ಷೇಪದಿಂದ ಅವರಿಗೆ ಬೇಕಾದ ಅಧಿಕಾರಿಗಳನ್ನು ಬೇಕಾದಾಗ ಬೇಕಾದಲ್ಲಿಗೆ ಹಾಕಿಸಿಕೊಳ್ಳುವುದು ಹಾಗೂ ಅವರ ತಾಳಕ್ಕೆ ತಕ್ಕಂತೆ ಆ ಅಧಿಕಾರ ತನ್ನ ಆತ್ಮಸಾಕ್ಷಿಗೆ ವಿರುದ್ಧವಾಗಿ ಕೆಲಸ ಮಾಡುವುದು, ತಾಳಕ್ಕೆ ತಕ್ಕಂತೆ ಕುಣಿಯದ, ಬೇಡವಾದ ಅಧಿಕಾರಿಗಳನ್ನು ಸಿಕ್ಕ ಸಿಕ್ಕ ಕಡೆಗೆ ಕಳುಹಿಸಿ ವರ್ಗಾವಣೆ ನೀತಿ ನಿಯಮ ಮಾರ್ಗಸೂಚಿಗಳನ್ನು ಗಾಳಿಗೆ ತೂರುವುದು ನಡೆದೇ ಇದೆ. ಇದು ನಿಲ್ಲಲೇಬೇಕು. ಈ ದಿಶೆಯಲ್ಲಿ ರಾಜ್ಯಮಟ್ಟದ ಉಚ್ಚ ಅಧಿಕಾರಿಗಳು, ಸರ್ಕಾರ, ನ್ಯಾಯಾಂಗದ ಅಧಿಕಾರಿಗಳಂತೆ ನಡೆದುಕೊಂಡರೆ ಒಳ್ಳೆಯದು.

ಆರಕ್ಷಕರ ಕರ್ತವ್ಯ ಉತ್ತಮ ರೀತಿ ಹಾಗೂ ಸಮರ್ಥ ರೀತಿಯಲ್ಲಿ ರಾಜ್ಯಕ್ಕೆ ದೊರೆಯಬೇಕು. ಅವರು ರಾಜ್ಯದ ರಕ್ಷಕರು. ಈ ರಕ್ಷಣಾಪಡೆ ಪ್ರಾಮಾಣಿಕವಾಗಿ, ರಾಗದ್ವೇಷ, ಭಯ-ಭೀತಿ ಇಲ್ಲದೆ ನೆಮ್ಮದಿಯಿಂದ ಕೆಲಸ ಮಾಡಬೇಕಾದರೆ ಸರಕಾರ ಅವರಿಗೆ ಅವಶ್ಯವಿರುವ ಎಲ್ಲಾ ವಿಧದ ಸವಲತ್ತು, ಸೌಲಭ್ಯ, ಸಲಕರಣೆಗಳನ್ನು ಒದಗಿಸಲೇಬೇಕು. ಬೇರೆ ಬೇರೆ ಇಲಾಖೆಗಳಲ್ಲಿ ಅನವಶ್ಯಕವಾದ ಹೊಸ ಹೊಸ ಹುದ್ದೆಗಳನ್ನು ನಿರ್ಮಿಸಿ ಸಿಕ್ಕಾಪಟ್ಟೆ ಸಿಬ್ಬಂದಿಯನ್ನು ಹೆಚ್ಚಿಸುತ್ತಿರುವಾಗ ಪೊಲೀಸ್ ಇಲಾಖೆಗೆ

ಅಂತಹ ಸವಲತ್ತು ಕೊಡದಿದ್ದರೂ ಅವಶ್ಯಕವಾದ ಅಗತ್ಯವಾದ ಅನುಕೂಲತೆ ಹಾಗೂ ಆರ್ಥಿಕ ಸವಲತ್ತು ಒದಗಿಸುವುದು ಸರಕಾರದ ಆದ್ಯ ಕರ್ತವ್ಯವಾಗಬೇಕು. ಪೊಲೀಸ್ ಠಾಣೆಗಳ ಹೆಚ್ಚಳ, ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿಯ ಹೆಚ್ಚಳ, ತರಬೇತಿ, ಪೀಠೋಪಕರಣ, ಮೋಟಾರ್ ವಾಹನ ಖರೀದಿ, ದುರಸ್ತಿ, ನಿರ್ವಹಣೆ, ಸಂಶೋಧನೆ, ಅಪರಾಧಿಗಳ ತನಿಖಾ ವಿಭಾಗ ಮತ್ತು ಜಾಗರೂಕತೆ, ಜಾಗ್ರತದಳ, ವಿಶೇಷ ಘಟಕ, ರಿಜರ್ವ್ ಪೊಲೀಸ್, ಸಶಸ್ತ್ರ ರಿಜರ್ವ್ ಪೊಲೀಸ್, ರಹಸ್ಯ ಸೇವೆ, ಸಂಚಾರ ಮತ್ತು ರಸ್ತೆ ಸುರಕ್ಷತೆ, ಸಂಚಾರ ಸುಧಾರಣೆ, ವಾಹನ ಸಂಚಾರ ಸುಧಾರಣೆ, ಜಿಲ್ಲಾ ಪೊಲೀಸ್ ಪಡೆ, ಗಂಧದ ಮರ ಕಳ್ಳ ಸಾಗಾಣಿಕೆ ತಡೆಗಟ್ಟುವುದು, ರೇಲ್ವೆ ಪೊಲೀಸ್ ಸಿಬ್ಬಂದಿ, ಪೊಲೀಸ್ ಕಛೇರಿಗಳ ಕಟ್ಟಡ, ವಸತಿಗೃಹ ರಚನೆ, ಹಳ್ಳಿಗಳಿಗೆ ಬೀಟ್ ಹವಾಲ್ದಾರರ ಪ್ರಯೋಜನ, ಸಾಮಗ್ರಿ ಸರಬರಾಜು, ದೊಂಬಿಗಳಲ್ಲಿ ಬಲಿ ಅಥವಾ ತುತ್ತಾದವರಿಗೆ ಸಹಾಯ, ಪೋಲಿಸ್ ಪಡೆ ಆಧುನೀಕರಣ, ಪೊಲೀಸ್ ಠಾಣೆಗಳಲ್ಲಿ ನೀರಿನ ವ್ಯವಸ್ಥೆ ಇತ್ಯಾದಿ ಇನ್ನೂ ಅನೇಕ ಉದ್ದೇಶಗಳಿಗೆ ಪ್ರತಿವರ್ಷ ಸರಕಾರ ಹೆಚ್ಚಿನ ಹಣವನ್ನು ಬಜೆಟ್‌ನಲ್ಲಿ ಒದಗಿಸಿ ಅದನ್ನೆಲ್ಲಾ ವೆಚ್ಚ ಮಾಡಿ ಪೊಲೀಸ್ ಇಲಾಖೆಗೆ ಹೆಚ್ಚಿನ ಸವಲತ್ತು ಸಹಾಯ ಮಾಡಿ ಆರಕ್ಷಕರು ಸುರಕ್ಷಿತವಾಗಿ ಪರಿಣಾಮಕಾರಿಯಾಗಿ ರಾಜ್ಯದ ಜನತೆಗೆ ಸೇವೆ ಮಾಡುವ ಅವಕಾಶ ಮಾಡಿಕೊಡಬೇಕು. ಆದರೆ ಹಾಗೆ ಆಗುತ್ತಿಲ್ಲ, ಅದು ಜನತೆಯ ಹಾಗೂ ಆರಕ್ಷಕರ ದುರ್ದೈವ.

1994-95ರಿಂದ 1998-99ರ ಐದು ವರ್ಷಗಳ ಅವಧಿಯಲ್ಲಿ ಬಜೆಟ್‌ದಲ್ಲಿ ಆರಕ್ಷಕ ಇಲಾಖೆಗೆ ನಿಗದಿ ಮಾಡಿದ ರೆವಿನ್ಯೂ ವೆಚ್ಚದ ಹಣವನ್ನು ಯಾವುದೇ ವರ್ಷದಲ್ಲಿ ಸಂಪೂರ್ಣ ವೆಚ್ಚ ಮಾಡದೆ ಎಲ್ಲಾ ಈ ಐದು ವರ್ಷಗಳ ಅವಧಿಯಲ್ಲಿ ಒಟ್ಟಾರೆ 200.42 ಕೋಟಿ ಹಣವನ್ನು ವೆಚ್ಚ ಮಾಡದೆ ಉಳಿಸಲಾಗಿದೆ. ಈ ಅಂಕಿ-ಸಂಖ್ಯೆ ಅಂಶ ರಾಜ್ಯ ಸರಕಾರದ ಅಧಿಕೃತ ವಾರ್ಷಿಕ ವಿತ್ತ ನಿರೂಪಣೆ ಪ್ರಕಾರ ಸುಸ್ಪಷ್ಟವಿದೆ. ಸಿ.ಎ.ಜಿ. ವರದಿ ಪ್ರಕಾರ 94-95, 95-96, 96-97, ಈ ಮೂರು ವರ್ಷದ ಅವಧಿಯಲ್ಲಿ ಪೊಲೀಸ್ ಸೇವೆಯಲ್ಲಿ 156.18 ಕೋಟಿ ಮೊತ್ತವನ್ನು ವೆಚ್ಚ ಮಾಡದೆ ಉಳಿಸಲಾಗಿದೆ. ಈ ಮೂರು ವರ್ಷದ ಅವಧಿಯಲ್ಲಿ ವಾರ್ಷಿಕ ವಿತ್ತ ನಿರೂಪಣೆ ಪ್ರಕಾರ 142.17 ಕೋಟಿ ಮೊತ್ತವನ್ನು ವೆಚ್ಚ ಮಾಡದೆ ಉಳಿಸಲಾಗಿದೆ. ಹೀಗೆ ಸಿ.ಎ.ಜಿ. ಪ್ರಕಾರ ಹಾಗೂ ವಿತ್ತ ನಿರೂಪಣೆ ಪ್ರಕಾರ ಆರಕ್ಷಕ ಇಲಾಖೆಗೆ ನಿಗದಿ ಮಾಡಿದ ಬಜೆಟ್ ಅಂದಾಜು ಹಣವನ್ನು ಸಂಪೂರ್ಣ ವೆಚ್ಚ ಮಾಡದೆ 200 ಕೋಟಿಗಿಂತಲೂ ಹೆಚ್ಚು ಹಣ ಉಳಿಸಿ ಪೊಲೀಸ್ ಇಲಾಖೆಯನ್ನು ನಿಷ್ಕ್ರಿಯ, ನಿಸ್ತೇಜಗೊಳಿಸುವುದು ಹಾಗೂ ರಾಜ್ಯಾದ್ಯಂತ ಅರಾಜಕತೆ, ಅನಾಗರಿಕತೆಗೆ ಹೆದ್ದಾರಿ ನಿರ್ಮಿಸುವುದು ಸರಕಾರಕ್ಕೆ ಭೂಷಣವಲ್ಲ. ನಾಡಗಳ್ಳ ದಂತಚೋರನೆಂಬ ವೀರಪ್ಪನನ್ನು ಹಿಡಿಯಲು ವಿಫಲ ಹಾಗೂ ತೋರಗಾಣಿಕೆ ಯತ್ನವನ್ನು ಮಾಡುತ್ತ

ನಿರಪರಾಧಿ ಪೊಲೀಸ್ ಹಾಗೂ ಅರಣ್ಯ ಅಧಿಕಾರಿಗಳನ್ನು ಬಲಿ ಕೊಡುವುದನ್ನು ಹಾಗೂ ಹೇರಳವಾದ ಹಣವನ್ನು ವ್ಯರ್ಥ ವೆಚ್ಚ ಮಾಡುವ ಬದಲು ರಾಜ್ಯದಲ್ಲಿ ರಾರಾಜಿಸುತ್ತಿರುವ ನಾಡಗಳ್ಳರು, ಸರಕಾರಿ ಕಳ್ಳರು, ಅರಣ್ಯ ಕಳ್ಳರು, ನೆಲಗಳ್ಳರು, ವಿದ್ಯುತ್ ಕಳ್ಳರು, ಜಲಗಳ್ಳರು, ಸಮಾಜಗಳ್ಳರು, ಡೊನೇಶನ್ ಕಳ್ಳರು, ಸಕ್ರೆ ಕಳ್ಳರು, ಜವಳಿ ಕಳ್ಳರು, ಭ್ರಷ್ಟ ಅಧಿಕಾರಿ ಮೊದಲಾದ ಭ್ರಷ್ಟ ರಾಜಕಾರಣಿ, ಭ್ರಷ್ಟ ಧರ್ಮಕಾರಣಿ, ಭ್ರಷ್ಟ ಅಧಿಕಾರಗಳನ್ನು ಬಲಿಯಿಕ್ಕಿ ಯಾವುದೇ ಮುಲಾಜಿಲ್ಲದೆ ಶಿಕ್ಷೆಗೆ ಗುರಿಮಾಡಿ ಅವರಲ್ಲಿರುವ ಹಣವನ್ನು ಹಾಗೂ ಹೇರಳ ಆಸ್ತಿಯನ್ನು ಸರಕಾರಕ್ಕೆ ಮುಟ್ಟುಗೋಲು ಮಾಡಿಕೊಳ್ಳಲು ಪೊಲೀಸ್' ಇಲಾಖೆಯನ್ನು ಸಮರ್ಥ ರೀತಿಯಲ್ಲಿ ಬಳಸಿಕೊಂಡು ಬಜೆಟ್ ಪ್ರಕಾರ ಪೊಲೀಸ್ ಸೇವೆಗೆ ಸಂಪೂರ್ಣ ವೆಚ್ಚ ಮಾಡಿ ಪೊಲೀಸ್ ಸೇವೆಯ ಸಾರ್ಥಕತೆಯನ್ನು ಸರಕಾರ ಸದುಪಯೋಗ ಮಾಡಿಕೊಳ್ಳುವುದು ಒಳ್ಳೆಯದು.

❑

ಸರಕಾರದ ಸತತ ವೈಫಲ್ಯ : ಐದು ವರ್ಷದ ಸಾಧನೆ ಏನು?

ರಾಜ್ಯ ವಿಧಾನಮಂಡಲದಲ್ಲಿ ಅನುಮತಿ ದೊರೆತ ಪ್ರಕಾರ ಆಯವ್ಯಯ (ಬಜೆಟ್) ಪ್ರಕಾರ ಪ್ರತಿವರ್ಷ ನಿಗದಿತ ಆಯವ್ಯಯ ಆದಾಯ ಪಡೆಯುವುದು ಹಾಗೂ ನಿಗದಿತ ವ್ಯಯ ಬಟವಾಡೆ ಮಾಡುವುದು ಸರಕಾರದ ಕರ್ತವ್ಯ. ಆದಾಯ ಪಡೆಯುವುದಕ್ಕಾಗಿ ಹಾಗೂ ವೆಚ್ಚ ಮಾಡುವುದಕ್ಕಾಗಿಯೆ ರಾಜ್ಯ ಸರಕಾರಕ್ಕೆ ಸಾಕಷ್ಟು ಸಿಬ್ಬಂದಿ ಇದೆ. ಈ ಸಿಬ್ಬಂದಿಗೆ ರೆವಿನ್ಯೂ ಆದಾಯದಲ್ಲಿ ಶೇಕಡಾ 60ಕ್ಕಿಂತ ಹೆಚ್ಚು ಮೊತ್ತವನ್ನು ವೇತನ, ಭತ್ಯೆಯ ರೂಪದಲ್ಲಿ ಕೊಡಲಾಗುತ್ತಿದೆ. ಅಲ್ಲದೆ ನಿವೃತ್ತ ಸಿಬ್ಬಂದಿಗೆ ಸಹ ಈ ರೆವಿನ್ಯೂ ಆದಾಯದಲ್ಲಿ ಸಹಸ್ರಾರು ಕೋಟಿ ಮೊತ್ತವನ್ನು ನಿವೃತ್ತಿ ವೇತನ ಭತ್ಯೆಯನ್ನು ಕೊಡಲಾಗುತ್ತದೆ. ಅಂದ ಮೇಲೆ ಸರಕಾರ ನಿಗದಿತ ಆದಾಯವನ್ನು ಪಡೆಯಲೇಬೇಕು ಹಾಗೂ ನಿಗದಿತ ಮೊತ್ತವನ್ನು ನಿಗದಿತ ಸಾಮಾನ್ಯ, ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿ ಯೋಜನೆಗಳಿಗೆ ಸಂಪೂರ್ಣವಾಗಿ ಬಟವಾಡೆ ವ ವೆಚ್ಚ ಮಾಡಲೇಬೇಕು. ಇದು ಸರಕಾರದ ಹಾಗೂ ಸರಕಾರದಲ್ಲಿಯ ಹೊಣೆಗಾರ ಮಂತ್ರಿಗಳ ಹಾಗೂ ಹೊಣೆಗಾರ ಅಧಿಕಾರಿಗಳ ಕಟ್ಟುನಿಟ್ಟಿನ ಕರ್ತವ್ಯ. ಇದಕ್ಕೆ ತಪ್ಪಿದರೆ ಸರಕಾರ ಹಾಗೂ ಸರಕಾರದಲ್ಲಿಯ ಮಂತ್ರಿಗಳು ಹಾಗೂ ಅಧಿಕಾರಿಗಳು ಅಸಮರ್ಥ, ಅಯೋಗ್ಯ, ಕರ್ತವ್ಯಚ್ಯುತಿ ಹಾಗೂ ಜನವಿರೋಧಿಗಳೆಂದು ಅನಿವಾರ್ಯವಾಗಿ ಈ ರಾಜ್ಯದ ಹೊಣೆಗಾರ ನಾಗರಿಕರು ಹೇಳಲೇಬೇಕಾಗುತ್ತದೆ. ಆಯವ್ಯಯದ ಪ್ರಕಾರ ಕೆಲವು ಶೀರ್ಷಿಕೆಗಳಲ್ಲಿ ಬಜೆಟ್ ನಿಗದಿ ಮೀರಿ ಹೆಚ್ಚು ಆದಾಯ ಪಡೆವ ಉದಾಹರಣೆ ಇದ್ದರೂ, ಒಟ್ಟಾರೆ ನಿಗದಿತ ರೆವಿನ್ಯೂ ಆದಾಯ ಪಡೆಯುವಲ್ಲಿ ಸರಕಾರದ ಸತತ ವೈಫಲ್ಯ ಸುಸ್ಪಷ್ಟವಾಗಿರುವುದು ಅಧಿಕೃತ ಅಂಕಿ - ಸಂಖ್ಯೆಗಳಿಂದ ತಿಳಿದು ಬಂದಿದೆ. ಆಯವ್ಯಯ ಪ್ರಕಾರ ಕೆಲವು ಶೀರ್ಷಿಕೆಗಳಲ್ಲಿ ಬಜೆಟ್ ನಿಗದಿ ಮೀರಿ ಹೆಚ್ಚು ವೆಚ್ಚ ಮಾಡುವ ಉದಾಹರಣೆ ಇದ್ದರೂ ಒಟ್ಟಾರೆ ನಿಗದಿತ ರೆವಿನ್ಯೂ ವೆಚ್ಚ ಮಾಡುವಲ್ಲಿ ಸರಕಾರದ ಸತತ ವೈಫಲ್ಯ ಸುಸ್ಪಷ್ಟವಾಗಿರುವುದು ಸಹ ಅಧಿಕೃತ ಅಂಕಿ - ಸಂಖ್ಯೆಗಳಿಂದ ತಿಳಿದು ಬಂದಿದೆ.

ಸರಕಾರ ಅಧಿಕೃತ ವಾರ್ಷಿಕ ವಿತ್ತ ನಿರೂಪಣೆಗಳ ಪ್ರಕಾರ 94-95ರಲ್ಲಿ ರೆವಿನ್ಯೂ ಆದಾಯ ಬಜೆಟ್ ನಿಗದಿ 8168.37 ಕೋಟಿ, ವಾಸ್ತವಿಕ ಆದಾಯ 6968.40 ಕೋಟಿ ಪಡೆಯದ ಆದಾಯ 1199.97 ಕೋಟಿ, 95-96ರಲ್ಲಿ ರೆವಿನ್ಯೂ ಆದಾಯ ಬಜೆಟ್ ನಿಗದಿ 8879.97 ಕೋಟಿ, ವಾಸ್ತವಿಕ ಆದಾಯ 8543.45 ಕೋಟಿ, ಕಡಿಮೆಯಾದ ಆದಾಯ 336.52 ಕೋಟಿ, 96-97ರಲ್ಲಿ ರೆವಿನ್ಯೂ ಆದಾಯ ಬಜೆಟ್ ನಿಗದಿ 10503.07 ಕೋಟಿ, ವಾಸ್ತವಿಕ ಆದಾಯ 9622.19 ಕೋಟಿ, ಕಡಿಮೆಯಾದ ಆದಾಯ 880.88 ಕೋಟಿ, 97-98ರಲ್ಲಿ ರೆವಿನ್ಯೂ ಆದಾಯ ಬಜೆಟ್ ನಿಗದಿ 11766.46 ಕೋಟಿ, ವಾಸ್ತವಿಕ ಆದಾಯ 10613.40 ಕೋಟಿ, ಕಡಿಮೆಯಾದ ಆದಾಯ 1153.06 ಕೋಟಿ. 98-99ರಲ್ಲಿ ರೆವಿನ್ಯೂ ಆದಾಯ ಬಜೆಟ್ ನಿಗದಿ 12979.56 ಕೋಟಿ, ವಾಸ್ತವಿಕ ಆದಾಯ 12168.31 ಕೋಟಿ, ಕಡಿಮೆಯಾದ ಆದಾಯ 811.25 ಕೋಟಿ. ಹೀಗೆ ರೆವಿನ್ಯೂ ಆದಾಯ ಪ್ರತಿವರ್ಷ ಹೆಚ್ಚಿನ ಪ್ರಮಾಣದಲ್ಲಿ ಹೆಚ್ಚುತ್ತಿದ್ದರೂ, ಆಯವ್ಯಯ ಪತ್ರದ ಪ್ರಕಾರ ನಿಗದಿತ ರೆವಿನ್ಯೂ ಆದಾಯ ಪಡೆಯುವಲ್ಲಿ ಸರಕಾರ ಸತತ ವಿಫಲಗೊಂಡಿರುವುದು ಈ ಐದು ವರ್ಷದ ಅವಧಿಯಲ್ಲಿ ಒಟ್ಟಾರೆ 4381.68 ಕೋಟಿ ಆದಾಯ ಪಡೆಯದೆ ಇರುವುದು ಸರಕಾರದ ಅದಕ್ಷತೆಯ ಸುಸ್ಪಷ್ಟ ಸಂಕೇತ. ಹೀಗೆ ಹಣದ ಅಭಾವವಿರುವಾಗ ಸರಕಾರದಿಂದ ನಿಗದಿತ ಅಭಿವೃದ್ಧಿಗೆ ನಿಗದಿತ ಹಣವೆಲ್ಲಿಂದ ಬರಬೇಕು?

ಸರಕಾರದ ಅಧಿಕೃತ ವಾರ್ಷಿಕ ವಿತ್ತ ನಿರೂಪಣೆಗಳ ಪ್ರಕಾರ 94-95ರಲ್ಲಿ ರೆವಿನ್ಯೂ ವೆಚ್ಚ ಬಜೆಟ್ ನಿಗದಿ 7448.43 ಕೋಟಿ, ವಾಸ್ತವಿಕ ವೆಚ್ಚ 7264.53 ಕೋಟಿ, ವೆಚ್ಚ ಮಾಡದ ಮೊತ್ತ 683.91 ಕೋಟಿ, 95-96ರಲ್ಲಿ ವೆಚ್ಚ ಮಾಡದ ಮೊತ್ತ 612.45 ಕೋಟಿ, 96-97ರಲ್ಲಿ ರೆವಿನ್ಯೂ ವೆಚ್ಚ ಬಜೆಟ್ ನಿಗದಿ ವೆಚ್ಚ 10638.98 ಕೋಟಿ, ವಾಸ್ತವಿಕ ವೆಚ್ಚ 10201.09 ಕೋಟಿ, ವೆಚ್ಚ ಮಾಡದ ಮೊತ್ತ 437.89 ಕೋಟಿ, 97-98ರಲ್ಲಿ ರೆವಿನ್ಯೂ ವೆಚ್ಚ ಬಜೆಟ್ ನಿಗದಿ 11965.46 ಕೋಟಿ, ವಾಸ್ತವಿಕ ವೆಚ್ಚ 10890.21 ಕೋಟಿ, ವೆಚ್ಚ ಮಾಡದ ಮೊತ್ತ 1075.25 ಕೋಟಿ, 98-99ರಲ್ಲಿ ರೆವಿನ್ಯೂ ವೆಚ್ಚ ಬಜೆಟ್ ನಿಗದಿ 13360.58 ಕೋಟಿ, ವಾಸ್ತವಿಕ ವೆಚ್ಚ 1358.91 ಕೋಟಿ, ಬಜೆಟ್ ಮೀರಿ ವೆಚ್ಚ ಮಾಡಿದ ಮೊತ್ತ 204.34 ಕೋಟಿ. ಹೀಗೆ ಪ್ರತಿವರ್ಷ ಆಡಳಿತ ವೆಚ್ಚ ಗಣನೀಯವಾಗಿ ಹೆಚ್ಚುತ್ತಿದ್ದರೂ ನಾಲ್ಕು ವರ್ಷಗಳ ಅವಧಿಯಲ್ಲಿ ಸತತವಾಗಿ ನಿಗದಿತ ರೆವಿನ್ಯೂ ವೆಚ್ಚ ಮಾಡುವಲ್ಲಿ ವಿಫಲವಾಗಿ 98-99ರಲ್ಲಿ ಮಾತ್ರ ಬಜೆಟ್ ಮೀರಿ 204.34 ಕೋಟಿ ವೆಚ್ಚ ಮಾಡಿದ್ದು ಒಟ್ಟಾರೆ ಈ 5 ವರ್ಷಗಳ ಅವಧಿಯಲ್ಲಿ ಬಜೆಟ್ ಪ್ರಕಾರ ವೆಚ್ಚ ಮಾಡದೆ ಇರುವ ಮೊತ್ತ 2605.16 ಕೋಟಿ. ಇದು ಕೂಡ ಸರಕಾರದ ಅದಕ್ಷತೆಯ ಕುರುಹು. 94-95ರಿಂದ 98-99ರವರೆಗಿನ ಈ ಐದು ವರ್ಷಗಳ ಅವಧಿಯಲ್ಲಿ ಬಜೆಟ್

ಪ್ರಕಾರ ಪ್ರತಿವರ್ಷ ನಿಗದಿತ ಸಂಚಿತ ನಿಧಿ ವ್ಯಯದ ಬಟವಾಡೆ ಮಾಡದೆ ಈ ಅವಧಿಯಲ್ಲಿ ಒಟ್ಟಾರೆ 5785.00 ಕೋಟಿ ವ್ಯಯದ ಬಟವಾಡೆ ಮಾಡದೆ ಸರಕಾರ ವಿಫಲಗೊಂಡಿದೆ.

ಸಾರ್ವಜನಿಕ ಲೆಕ್ಕದ ಸಾಲವನ್ನು ಪ್ರತಿವರ್ಷ ಸತತವಾಗಿ ಹೆಚ್ಚು ಹೆಚ್ಚಾಗಿ ಪಡೆಯುವುದು ಹಾಗೂ ಹೆಚ್ಚು ಹೆಚ್ಚಾಗಿ ಪರತ ಮಾಡುವಲ್ಲಿ ಮಾತ್ರ ಸರಕಾರದ ಸಾಧನೆ 94-95ರಿಂದ 98-99ರ ವರೆಗೆ ಅಧಿಕವಾಗಿದೆ. ಈ ಐದು ವರ್ಷಗಳ ಅವಧಿಯಲ್ಲಿ ಬಜೆಟ್ ಆಯ ಮೀರಿ 46835.32 ಕೋಟಿ ಸಾರ್ವಜನಿಕ ಲೆಕ್ಕ (ಪಬ್ಲಿಕ್ ಅಕೌಂಟ್) ಸಾಲ ಪಡೆದಿದ್ದು 47207.80 ಕೋಟಿ ಪಬ್ಲಿಕ್ ಅಕೌಂಟ್ ಸಾಲವನ್ನು ಇದೇ ಅವಧಿಯಲ್ಲಿ ಪರತ ಮಾಡಿ ಕೊಡತಕ್ಕ ಸಾಲದ ಬಾಕಿ ಸಾಕಷ್ಟು ಇಟ್ಟುಕೊಂಡು ಈ ಸಾಲದ ಹಣವನ್ನು ಸಹ ಅಭಿವೃದ್ಧಿಗೆ ಸಿಗದಂತೆ ಮಾಡಲಾಗಿದೆ. ಇದೆಲ್ಲ ಸರಕಾರ ನಡೆಸುವ ಆಡಳಿತ ಅಭಿವೃದ್ಧಿಯ ವಿಚಿತ್ರ ವೈಖರಿ.

ರಾಜ್ಯ ಸರಕಾರ ರೆವಿನ್ಯೂ, ಬಂಡವಾಳ, ಸಾರ್ವಜನಿಕ ಸಾಲ, ಸಾಲ ಮತ್ತು ಮುಂಗಡಗಳ ಬಾಬ್ತು ಒಟ್ಟಾರೆ ವೆಚ್ಚವನ್ನು ಮಾಡುವಲ್ಲಿ ಕೆಲವು ಕಡೆ ಬಜೆಟ್ ಮೀರಿ ಹೆಚ್ಚು ವೆಚ್ಚ, ಕೆಲವು ಕಡೆ ಬಜೆಟ್‌ಗಿಂತ ಕಡಿಮೆ ವೆಚ್ಚ ಮಾಡಿ ಒಟ್ಟಾರೆ ವೆಚ್ಚದಲ್ಲಿ ಬಜೆಟ್ ನಿಗದಿಗಿಂತ ಕಡಿಮೆ ಹಣವನ್ನು ವೆಚ್ಚ ಮಾಡಿ ಭಾರೀ ಮೊತ್ತವನ್ನು ವೆಚ್ಚ ಮಾಡದೆ ಉಳಿಸಿರುವುದು ಸಿ.ಎ.ಜಿ. ಅಧಿಕೃತ ವರದಿಯಿಂದ ಕಂಡುಬಂದಿದೆ. ಒಟ್ಟಾರೆ ವೆಚ್ಚ ಮಾಡದೆ ಉಳಿಸಿದ ಈ ಮೊತ್ತ 94-95ರಲ್ಲಿ 2076.83 ಕೋಟಿ, 95-96ರಲ್ಲಿ 2919 ಕೋಟಿ, 96-97ರಲ್ಲಿ 1965.18 ಕೋಟಿ, 97-98ರಲ್ಲಿ 3152.07 ಕೋಟಿ, ಹೀಗೆ ಈ ನಾಲ್ಕು ವರ್ಷಗಳ ಒಟ್ಟು ಅವಧಿಯಲ್ಲಿ 10113.19 ಕೋಟಿ, ಒಟ್ಟಾರೆ ನಿವ್ವಳ ಮೊತ್ತವನ್ನು ವೆಚ್ಚ ಮಾಡದೆ ಉಳಿಸಲಾಗಿದೆ. ಈ ಅವಧಿಯಲ್ಲಿ ಬಜೆಟ್ ಮೀರಿ 252.95 ಕೋಟಿ ಮೊತ್ತವನ್ನು ಹೆಚ್ಚು ವೆಚ್ಚ ಮಾಡಿದ್ದು ನಿಗದಿತ ಬಜೆಟ್ ಹಣವನ್ನು ಸಂಪೂರ್ಣ ವೆಚ್ಚ ಮಾಡದೆ, ಒಟ್ಟಾರೆ 10366.14 ಕೋಟಿ ಹಣವನ್ನು ಉಳಿಸಲಾಗಿದೆ. ಕೆಲವು ವಲಯಗಳಲ್ಲಿ ಬಜೆಟ್ ಮೀರಿ ನೂರಾರು ಕೋಟಿ ಹೆಚ್ಚು ವೆಚ್ಚ ಮಾಡುವ ನೀತಿ ಇರುವಾಗ ಉಳಿದೆಲ್ಲಾ ವಲಯಗಳಲ್ಲಿ ಬಜೆಟ್ ಪ್ರಕಾರ ನಿಗದಿತ ಹಣವನ್ನು ವೆಚ್ಚ ಮಾಡದೆ ಸಹಸ್ರಾರು ಕೋಟಿ ಮೊತ್ತವನ್ನು ಉಳಿಸುವ ಹಾಗೂ ಅಭಿವೃದ್ಧಿ ಕುಂಠಿತಗೊಳಿಸುವ ಅನೀತಿ ಸರಕಾರಕ್ಕೆ ಏಕೆ? ಈ ನೀತಿ ಅನೀತಿ ಸಂಪ್ರದಾಯಕ್ಕೆ ಎಲ್ಲಾ ಇಲಾಖೆಯ ಮಂತ್ರಿಗಳನ್ನು ಹಾಗೂ ಅಧಿಕಾರಿಗಳನ್ನೇ ಜವಾಬ್ದಾರರನ್ನಾಗಿ ಮಾಡದೆ ಹಾಗೂ ಅದಕ್ಷತೆಗೆ ಹಾಗೂ ಕರ್ತವ್ಯಚ್ಯುತಿಗೆ ಗುರಿಪಡಿಸದೆ ಹಾಗೂ ಅವರೆಲ್ಲರಿಗೂ ತಕ್ಕ ಶಿಕ್ಷೆ ಕೊಡದೆ ಹೋದರೆ ಪ್ರಜಾತಂತ್ರದ ವ್ಯವಸ್ಥೆ ಅವಸಾನಗೊಳ್ಳುವುದರಲ್ಲಿ ಸಂದೇಹವಿಲ್ಲ.

ಖರ್ಚು ಬಿದ್ದ ಹಣದಲ್ಲಿ ರಾಜ್ಯದ ಎಲ್ಲ ಜಿಲ್ಲಾ ಪಂಚಾಯತಿಗಳಿಗೆ ಸರಕಾರ ನಿಗದಿಪಡಿಸಿದ ಯೋಜನಾ ಮತ್ತು ಯೋಜನೇತರ ಮೊತ್ತದಲ್ಲಿ 95-96ರಲ್ಲಿ 67.89

ಕೋಟಿ, 96-97ರಲ್ಲಿ 116.42 ಕೋಟಿ, 97-98ರಲ್ಲಿ 277.40 ಕೋಟಿ, ಹೀಗೆ ಈ ಮೂರು ವರ್ಷಗಳ ಅವಧಿಯಲ್ಲಿ ಜಿಲ್ಲಾ ಪಂಚಾಯತಿಗಳು ಒಟ್ಟು 461.49 ಕೋಟಿ ಹಣವನ್ನೇ ವೆಚ್ಚ ಮಾಡದೆ ಉಳಿಸಿವೆ. ಹೀಗಾದರೆ ಜಿಲ್ಲಾ ಪಂಚಾಯತಿ ಸದಸ್ಯರಾದ ಚುನಾಯಿತ ಸದಸ್ಯರು, ಶಾಸಕರು, ಸಂಸದರು, ಮಂತ್ರಿಗಳು, ಉಸ್ತುವಾರಿ ಜಿಲ್ಲಾ ಮಂತ್ರಿಗಳು ಇರುವುದಾದರೂ ಏತಕ್ಕೆ? ಜಿಲ್ಲಾ ಪಂಚಾಯತಿಗಳಿಗೆ ವಿವಿಧ ಅಭಿವೃದ್ಧಿಗಾಗಿ ವಿವಿಧ ಸುಮಾರು 36 ಶೀರ್ಷಿಕೆಗಳಿದ್ದು ಈ ಶೀರ್ಷಿಕೆಗಳು ಸರಕಾರಿ ಇಲಾಖೆಗಳಿಗೂ ಸಂಬಂಧಿಸಿದ್ದು ವಾರ್ಷಿಕ ವಿತ್ತ ನಿರೂಪಣೆಯ ಅಧಿಕೃತ ಮಾಹಿತಿಯಂತೆ ಈ 36 ಶೀರ್ಷಿಕೆಗಳಿಗೆ 96-97ರಲ್ಲಿ ಬಜೆಟ್ ಪ್ರಕಾರ ನಿಗದಿಪಡಿಸಿದ ಮೊತ್ತ 5438.41 ಕೋಟಿ. ಇದರಲ್ಲಿ ವಾಸ್ತವಿಕವಾಗಿ ವೆಚ್ಚ ಮಾಡಿದ ಮೊತ್ತ 4828.33 ಕೋಟಿ, ವೆಚ್ಚ ಮಾಡದೆ ಉಳಿಸಿರುವ ಮೊತ್ತ 610.08 ಕೋಟಿ. ಈ ಕರ್ತವ್ಯಚ್ಯುತಿ ಹಾಗೂ ಅಭಿವೃದ್ಧಿ ಅವಸಾನ ಪ್ರತಿವರ್ಷ ಸರಕಾರ ಹಾಗೂ ಪಂಚಾಯತಿಗಳಿಂದ ತಪ್ಪದೆ ಮುಂದುವರಿಸಿದ್ದು ಇದು ಹೀಗೆಯೇ ಮುಂದುವರೆದರೆ ಪ್ರಜಾತಂತ್ರ ವ್ಯವಸ್ಥೆಯ ಹಾಗೂ ಚುನಾಯಿತ ಎಲ್ಲಾ ಹಂತದ ಪ್ರತಿನಿಧಿಗಳ ಪ್ರಯೋಜನವಾದರೂ ಜನತೆಗೆ ದೊರೆಯುವುದು ಹೇಗೆ? ಈ ದಿಶೆಯಲ್ಲಿ ಮುಂದೇನು ಎಂಬ ಬಗ್ಗೆ ಹೊಣೆಗಾರ ಪ್ರಜ್ಞಾವಂತ ನಾಗರಿಕರ ಚಿಂತನೆ ಅತ್ಯಾವಶ್ಯ. ಇಲ್ಲವಾದರೆ ಸ್ವತಂತ್ರ ಭಾರತದಲ್ಲಿಯ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಎಲ್ಲಾ ಹಂತದ ಚುನಾಯಿತ ಪ್ರಜಾ ಪ್ರತಿನಿಧಿಗಳ ಕರ್ತವ್ಯವಾದರೂ ಏನು?

❑

ಜೀತದಾಳುಗಳಿಗೆ ಸಿಗದ-ಸೌಲಭ್ಯ

ಕರ್ನಾಟಕ ರಾಜ್ಯದ ನಾಲ್ಕು ಕಂದಾಯ ವಿಭಾಗದ ಎಲ್ಲಾ ಜಿಲ್ಲೆಗಳಲ್ಲಿ ಜೀತದಾಳು ಅಥವಾ ಖಾಯಂ ಆಳುಗಳಾಗಿ ಒಬ್ಬ ಮತ್ತೊಬ್ಬನ ಮನೆಯಲ್ಲಿ ಆಜೀವ ಪರ್ಯಂತ ಅಥವಾ ಬಹುಕಾಲ ವಿಧೇಯನಾಗಿ ದುಡಿಯುತ್ತ ಬಂದ ಪರಂಪರೆ ನಿರಂತರವಾಗಿ ನಡೆದುಬಂದಿದೆ. ಮನೆಯೊಡೆಯರು ತಮ್ಮ ತಮ್ಮ ಮನೆ-ಆಳು ಅಥವಾ ಆಳು-ಮಕ್ಕಳ ನಿರಂತರ ಉಪಜೀವನಕ್ಕೆ ಕಾಳು-ಕಡ್ಡಿ, ಬಟ್ಟೆ-ಬರೆ, ಹಣಕಾಸು ಇತ್ಯಾದಿಗಳನ್ನೆಲ್ಲಾ ಕೊಡುತ್ತ ಮದುವೆ, ಮುಂಜಿ, ಅಂತ್ಯಕ್ರಿಯೆ ಮೊದಲಾದ ಎಲ್ಲಾ ಕ್ರಿಯೆಗಳಿಗೂ ಸಹಾಯ ಮಾಡುತ್ತ ಬಂದ ಉದಾಹರಣೆ ಕೂಡ ರಾಜ್ಯಾದ್ಯಂತ ಸಾಕಷ್ಟು ಕಂಡುಬಂದಿವೆ. ಇದಕ್ಕೆ ಹೆಚ್ಚುವರಿಯಾಗಿ ಯಾವುದೇ ಬಡವನಿಗೆ ಹಣದ ಕೊರತೆ ಉಪಜೀವನಕ್ಕೆ ಉಂಟಾದಾಗ ಕೆಲವೊಂದು ಹಣವನ್ನು ಸಾಲವಾಗಿ ಒಡೆಯನಿಂದ ಪಡೆದು ಆ ಹಣ ತೀರಿಸುವವರೆಗೂ ಒಡೆಯನಿಂದ ಊಟ, ವಸತಿ ಇತ್ಯಾದಿ ಜೀವನೋಪಾಯದ ಸಹಾಯ ಪಡೆಯುತ್ತ ಹೆಂಡಿರು, ಮಕ್ಕಳಾದಿಯಾಗಿ ಆಜೀವ ಪರ್ಯಂತ ದುಡಿದ ಉದಾಹರಣೆಯುಂಟು. ಬಡವ ತಾನು ತನ್ನ ಗುಡಿಸಲಿನಲ್ಲಿಯೇ ಹೆಂಡಿರು-ಮಕ್ಕಳೊಡನೆ ವಾಸವಾಗಿ ಕೂಲಿ ಕುಂಬಳಿ ಮಾಡುತ್ತ ಜೀವನೋಪಾಯಕ್ಕೆ ಹಣ ಕಡಿಮೆ ಬಿದ್ದಾಗ ಮುಂಗಡ ಸಾಲ ಪಡೆದು, ಪಡೆದ ಆ ಸಾಲಕ್ಕಾಗಿ ದುಡಿಯುತ್ತ ಮತ್ತೆ ಮುಂಗಡ ಸಾಲ ಪಡೆದು ಮತ್ತೆ ಮತ್ತೆ ದುಡಿಯುತ್ತಾ ಆಜೀವ ಪರ್ಯಂತ ಒಡೆಯನ ಮನೆ ಅಥವಾ ಸಾಹುಕಾರನ ಮನೆಯಲ್ಲಿ ಜೀತದಾಳಾಗಿ ದುಡಿಯುತ್ತ ಗುಲಾಮನಂತೆ ಕನಿಷ್ಠ ಜೀವನ ಸಾಗಿಸುತ್ತ ಬಂದ ಉದಾಹರಣೆ ಕೂಡ ಇವೆ. ವಂಶಪಾರಂಪರ್ಯವಾಗಿ ಈ ಜೀತದಾಳು ಪದ್ಧತಿ ಅಲ್ಲಲ್ಲಿ ಅಸ್ತಿತ್ವದಲ್ಲಿದ್ದುದೂ ಇದೆ. ಕೊಟ್ಟ ಸಾಲ ಸಹಾಯ, ಅಡ್ವಾನ್ಸ್ ಪಡೆದ ಸಂಬಳ ಹಿಂದಿರುಗಿಸದೆ ಕೆಲಸಕ್ಕಾಗಿ ತಪ್ಪಿಸಿಕೊಂಡು ಆಳುಗಳನ್ನು ಒಡೆಯರು ಹಿಂಸಿಸಿದ ಉದಾಹರಣೆ ಕೂಡ ಅಲ್ಲಲ್ಲಿ ಕಂಡುಬಂದುದು ಉಂಟು. ಒಟ್ಟಿನ ಮೇಲೆ ಖಾಯಂ-ಆಳು, ನಿರಂತರ-ಆಳು, ಜೀತದಾಳು ಅಥವಾ ಆಳು ಮಕ್ಕಳುಗಳ ಜೀವನ-ಪರಿ ಕಷ್ಟದಾಯಕವಾಗಿ ಕಂಡು ಅವರ ಸ್ವಾತಂತ್ರ್ಯದ ಹಕ್ಕು ಹರಣವಾಗಿ ಸಮಾಜದಲ್ಲಿ ಅಂತಹವರ ಜೀವನ ಕೀಳುಜೀವನವಾಗಿ ಕಂಡು, ಅನೇಕ ಮಾನವ ಹಕ್ಕುಗಳಿಂದ ವಂಚಿತರಾದ ದಾರುಣ

ಪರಿಸ್ಥಿತಿಯನ್ನು ಕಂಡು ಈ ಎಲ್ಲಾ ಇತ್ಯಾದಿ ಪರಿಸ್ಥಿತಿಯ ಹಿನ್ನೆಲೆಯನ್ನು ಅರಿತು ಹಾಗೂ ಗಮನಿಸಿ ಜೀತದಾಳುಗಳನ್ನು ಸ್ವತಂತ್ರ ನಾಗರಿಕರನ್ನಾಗಿ ತಲೆಯೆತ್ತಿ ಸಮಾಜದಲ್ಲಿ ಅಡ್ಡಾಡುವಂತೆ ಜೀತದಾಳು ಪದ್ಧತಿ ಅಥವಾ ಸಂಕೋಲೆಗಳಿಂದ ಮುಕ್ತಗೊಳಿಸಲು ಹಾಗೂ ಅವರಿಗೆ ವಿವಿಧ ಸಹಾಯ, ಸವಲತ್ತು, ಸಲಕರಣೆ, ವಸತಿ, ನಿವೇಶನ ಇತ್ಯಾದಿಗಳನ್ನು ಒದಗಿಸಿಕೊಡಲು ಸರಕಾರ ಒಂದು ಉತ್ತಮ ಪರೋಪಕಾರಿ ಯೋಜನೆಯನ್ನು ಹಾಕಿಕೊಂಡು ಕರ್ನಾಟಕ ರಾಜ್ಯಾದ್ಯಂತ ಜೀತದಾಳು ಪದ್ಧತಿ ನಿರ್ಮೂಲನೆ ಹಾಗೂ ಪುನರ್ವಸತಿ ನಿರ್ಮಾಣದ ಮಹಾಕಾರ್ಯವನ್ನು ರಾಜ್ಯ ಸರಕಾರ ಹಾಕಿಕೊಂಡು ನಿರ್ಗತಿಕ ಬಡವರಿಗೆ ಈ ಆಶಾಕಿರಣ ಯೋಜನೆಯನ್ನು ಜಾರಿ ಮಾಡಿ ಅದನ್ನು ಅನುಷ್ಠಾನ ಗೊಳಿಸಲು ಸತತ ಹಾಗೂ ಶತಪ್ರಯತ್ನ ಮಾಡಿದೆ. ದುರ್ದೈವದಿಂದ ಈವೊಂದು ಅತ್ಯುತ್ತಮ ಯೋಜನೆಯನ್ನು ಸಂಪೂರ್ಣವಾಗಿ ಯಶಸ್ಸುಗೊಳಿಸುವಲ್ಲಿ ಪ್ರತಿಯೊಂದು ಜಿಲ್ಲೆಯಲ್ಲಿ ಪರಿಣಾಮಕಾರಿಯಾಗಿ ಜೀತದಾಳುಗಳನ್ನು ಗುರುತಿಸುವಲ್ಲಿ ಹಾಗೂ ಅವರಿಗೆ ನಿವೇಶನ, ವಸತಿ, ಧನಸಹಾಯ, ಭೂದಾನ, ವ್ಯವಸಾಯ ಸಾಮಗ್ರಿ ಒದಗಿಸಿಕೊಡಲು ಅಧಿಕಾರಶಾಹಿ ವಿಫಲವಾಗಿರುವುದು ಹಾಗೂ ಈ ವಿಫಲತೆಯನ್ನು ಹೋಗಲಾಡಿಸುವಲ್ಲಿ ಸರಕಾರ ವಿಫಲವಾಗಿರುವುದು, ತಾರತಮ್ಯವಾಗಿರುವುದು ಸಾಧುವಲ್ಲ.

ರಾಜ್ಯದಲ್ಲಿ ಇತ್ತೀಚಿನವರೆಗೆ ಮೊದಲಿನ ಧಾರವಾಡ ಬಿಟ್ಟು 19 ಜಿಲ್ಲೆಗಳಲ್ಲಿ ಕನಿಷ್ಠ 8ರಿಂದ ಗರಿಷ್ಠ 22,644ರ ವರೆಗೆ ಒಟ್ಟು 61708 ಜೀತದಾಳುಗಳು ಗುರುತಿಸಲ್ಪಟ್ಟು ಅವುಗಳಲ್ಲಿ ಕನಿಷ್ಠ 5ರಿಂದ ಗರಿಷ್ಠ 20,710ರ ವರೆಗೆ ಒಟ್ಟು 55,394 ಜೀತದಾಳುಗಳು ಗಳಿಗೆ ಪುನರ್ವಸತಿಗೊಳಿಸಿದ್ದು, 6315 ಜೀತದಾಳುಗಳು ಪತ್ತೆಯಾಗದೆ ಇರುವುದು ಕಂಡು ಬಂದಿದೆ. ಕೆಲವು ಜಿಲ್ಲೆಗಳಲ್ಲಿ ಹಾಗೂ ಕೆಲವು ತಾಲ್ಲೂಕುಗಳಲ್ಲಿ ಸಹಸ್ರಾರು ಜೀತದಾಳುಗಳು ಕಂದಾಯ ಅಧಿಕಾರಿಗಳಿಗೆ ಸಹಾಯ ಕೋರಿ ಅರ್ಜಿ ಸಲ್ಲಿಸಿದ್ದರೂ ಅವೆಲ್ಲ ಅರ್ಜಿಗಳು ಕಸದ ಬುಟ್ಟಿಗೆ ಹೋಗಿವೆ. ರಾಜಕೀಯ ಮುಖಂಡರನೇಕರು ಅಧಿಕಾರಿಗಳಿಗೆ ಕೋರಿದ್ದರೂ ಅದು ಅರಣ್ಯರೋಧನವಾಗಿದೆ. ಇದಕ್ಕೆ ಉದಾಹರಣೆ ಮೊದಲಿನ ಧಾರವಾಡ ಜಿಲ್ಲೆ. ಸರಕಾರಿ ಮಾಹಿತಿಯ ಪ್ರಕಾರ ಈ ಜಿಲ್ಲೆಯಲ್ಲಿ ಗುರುತಿಸಿ ಬಿಡುಗಡೆ ಮಾಡಿದ ಜೀತದಾಳುಗಳ ಸಂಖ್ಯೆ ಏನೂ ಇಲ್ಲ. ಪುನರ್ವಸತಿಗೊಳಿಸಿದ ಜೀತದಾಳುಗಳ ಸಂಖ್ಯೆ ಏನೂ ಇಲ್ಲ. ಮೈಸೂರು ಜಿಲ್ಲೆಯಲ್ಲಿ 22644, ಶಿವಮೊಗ್ಗ ಜಿಲ್ಲೆ ಯಲ್ಲಿ 8851, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 6132, ಮಂಡ್ಯ ಜಿಲ್ಲೆಯಲ್ಲಿ 5318, ಹಾಸನದಲ್ಲಿ 4910, ಬೆಂಗಳೂರು ನಗರ ಜಿಲ್ಲೆಯಲ್ಲಿ 2802, ಚಿಕ್ಕಮಗಳೂರು ಜಿಲ್ಲೆಯಲ್ಲಿ 2758, ಕೋಲಾರ ಜಿಲ್ಲೆಯಲ್ಲಿ 2957, ತುಮಕೂರು ಜಿಲ್ಲೆಯಲ್ಲಿ 2048 - ಹೀಗೆ 19 ಜಿಲ್ಲೆಗಳಲ್ಲಿ ಒಟ್ಟು 61709 ಜನರನ್ನು ಗುರುತಿಸಿ ಬಿಡುಗಡೆ ಮಾಡಿದ ಜೀತದಾಳುಗಳ ಸಂಖ್ಯೆ ಇರುವಾಗ 35.03 ಲಕ್ಷ ಜನಸಂಖ್ಯೆಯಿರುವ ಧಾರವಾಡ ದೊಡ್ಡ ಜಿಲ್ಲೆಯಲ್ಲಿ ಒಂದೂ ಜೀತದಾಳುವಿಲ್ಲದ ವಿವರ ಸರಕಾರದಲ್ಲಿ ಹೇಗೆ ಇದೆ? ಧಾರವಾಡ ಜಿಲ್ಲೆಯಲ್ಲಿ ಬಡ ಜೀತದಾಳುಗಳು ಕೊಟ್ಟ ಅರ್ಜಿಗಳನ್ನು ಕಸದಬುಟ್ಟಿಗೆ ಹಾಕಿರುವುದು ಯಾರಿಗೂ

ಭೂಷಣವಲ್ಲ. ದಕ್ಷಿಣ ಕರ್ನಾಟಕದ ಅಧಿಕಾರಿಗಳು ಬಡವರಿಗೆ ತಿಳುವಳಿಕೆ ಕೊಟ್ಟು ಅವರಿಂದ ಅರ್ಜಿಗಳನ್ನು ಸ್ವೀಕರಿಸಿ ಚಿವಕಸಿ ಮಾಡಿ ಜೀತದಾಳುಗಳಿಗೆ ಸಹಾಯ, ಸವಲತ್ತು ಕೊಟ್ಟಿರುವುದು ಪ್ರಶಂಸನೀಯ. ಆದರೆ ಉತ್ತರ ಕರ್ನಾಟಕ ಅಧಿಕಾರಿಗಳು ಬಡವರಿಗೆ ಸರಿಯಾದ ಮಾಹಿತಿ ಕೊಟ್ಟು ಸಾಕಷ್ಟು ಅರ್ಜಿಗಳನ್ನು ಸ್ವೀಕರಿಸದಿರುವುದು ಹಾಗೂ ಮಂಜೂರು ಮಾಡದಿರುವುದು ಹಾಗೂ ಸಹಾಯ ಮಾಡದೆ ಸವಲತ್ತುಗಳು ಸಿಗದಂತೆ ಮಾಡಿರುವುದು ಖಂಡನೀಯ. ಬೆಂಗಳೂರು ವಿಭಾಗದ ಜನಸಂಖ್ಯೆ 1.51 ಕೋಟಿ ಇದ್ದು, ಇಲ್ಲಿ 23840 ಜೀತದಾಳುಗಳನ್ನು ಗುರುತಿಸಿ 21268 ಜನರಿಗೆ ಪುನರ್ವಸತಿಗೊಳಿಸಲಾಗಿದೆ. ಮೈಸೂರು ವಿಭಾಗದ ಜನಸಂಖ್ಯೆ 1.06 ಕೋಟಿ ಇದ್ದು ಇಲ್ಲಿ 36068 ಜೀತದಾಳುಗಳನ್ನು ಗುರುತಿಸಿ 32786 ಜನರಿಗೆ ಪುನರ್ವಸತಿಗೊಳಿಸಲಾಗಿದೆ. ಬೆಳಗಾವಿ ವಿಭಾಗದ ಜನಸಂಖ್ಯೆ 1.12 ಕೋಟಿ ಇದ್ದು ಇಲ್ಲಿ ಕೇವಲ 815 ಜೀತದಾಳುಗಳನ್ನು ಗುರುತಿಸಿ 625 ಜನರಿಗೆ ಪುನರ್ವಸತಿಗೊಳಿಸಲಾಗಿದೆ. ಗುಲಬರ್ಗಾ ವಿಭಾಗದ ಜನಸಂಖ್ಯೆ 80.38 ಲಕ್ಷ, ಇದ್ದು ಇಲ್ಲಿ ಸಹ ಕೇವಲ 786 ಜೀತದಾಳುಗಳನ್ನು ಗುರುತಿಸಿ 733 ಜನರಿಗೆ ಪುನರ್ವಸತಿಗೊಳಿಸಲಾಗಿದೆ. ಹೀಗೆ ಉತ್ತರ ಕರ್ನಾಟಕದ ಅಧಿಕಾರಶಾಹಿ ಸಮರ್ಪಕ ಕೆಲಸ ಮಾಡದೆ ಉತ್ತರ ಕರ್ನಾಟಕದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜೀತದಾಳುಗಳನ್ನು ಗುರುತಿಸದೆ ಅವರಿಗೆ ಸಿಗುವ ಸವಲತ್ತುಗಳನ್ನು ಸಿಗದಂತೆ ಮಾಡಲಾಗಿದೆ. ಅವರ ಬಡತನದ ಬಾಳು ಬರಡಾಗಿಯೇ ಸಾಗಿದೆ. ಈ ವೈಫಲ್ಯ, ನಿರ್ದಯ, ನಿರ್ಲಕ್ಷ್ಯ, ತಾರತಮ್ಯಕ್ಕೆ ಯಾರು ಜವಾಬ್ದಾರರು? ಈಗಲಾದರೂ ತಡವಾದರೂ ಅಡ್ಡಿಯಿಲ್ಲ. ಅರ್ಜಿಕೊಟ್ಟು ಪತ್ತೆಯಾಗದೆ ಇರುವ 6315 ಜೀತದಾಳುಗಳನ್ನು ಪತ್ತೆಹಚ್ಚಿ ಉತ್ತರ ಕರ್ನಾಟಕದಲ್ಲಿಯೇ ಆಗಲೀ ದಕ್ಷಿಣ ಕರ್ನಾಟಕದಲ್ಲಿಯೇ ಆಗಲೀ ಅವರೆಲ್ಲರಿಗೆ ಹಾಗೂ ಇನ್ನುಳಿದವರನ್ನು ಗುರುತಿಸಿ ಸೌಕರ್ಯ ಕಲ್ಪಿಸಿಕೊಡುವುದು ಒಳ್ಳೆಯದು.

❑

ಪ್ರಜಾ ಸರಕಾರ : ಸ್ಥಿರತೆಯಿಂದ ಅಸ್ಥಿರತೆಯತ್ತ

ನಮ್ಮ ರಾಷ್ಟ್ರಕ್ಕೆ ಸಂವಿಧಾನಬದ್ಧವಾದ ಪ್ರಜಾತಂತ್ರ ವ್ಯವಸ್ಥೆ ಜಾರಿಗೆ ಬಂದ ಮೇಲೆ 1952ರಲ್ಲಿ ನಡೆದ ಪ್ರಪ್ರಥಮ ಲೋಕಸಭೆಯ ಸಾರ್ವತ್ರಿಕ ಚುನಾವಣೆಯಲ್ಲಿ ನಮ್ಮ ರಾಷ್ಟ್ರದ ಮತದಾರರು 489 ಜನರನ್ನು ಚುನಾಯಿಸಿದಾಗ ಈ ಮೊದಲನೇ ಚುನಾಯಿತ ಲೋಕಸಭೆಯಲ್ಲಿ ಕೇವಲ ನಾಲ್ಕು ಪಕ್ಷದವರು ಹಾಗೂ ಸ್ವತಂತ್ರರು ಸೇರಿ ಒಟ್ಟು 123 ಜನ ವಿರೋಧಿ ಪಕ್ಷದಲ್ಲಿ ಹಾಗೂ ಆಡಳಿತ ಕಾಂಗ್ರೆಸ್ ಪಕ್ಷದಲ್ಲಿ 366 ಜನರು ಇರಲಾಗಿ ಅತಿ ದೊಡ್ಡ ಕಾಂಗ್ರೆಸ್ ಪಕ್ಷ 5 ವರ್ಷದ ಅವಧಿಯಲ್ಲಿ ಸುಭದ್ರ ಹಾಗೂ ಸ್ಥಿರ ಸರಕಾರವನ್ನು ಈ ದೇಶಕ್ಕೆ ಕೊಟ್ಟಿದೆ. ಅಂತೆಯೇ 1957ರ ಮಹಾಚುನಾವಣೆಯಲ್ಲಿ 494 ಚುನಾಯಿತ ಸದಸ್ಯರಲ್ಲಿ ಅತಿ ಹೆಚ್ಚು 365 ಸದಸ್ಯರನ್ನು ಕಾಂಗ್ರೆಸ್ ಪಡೆದು ಎರಡನೇ 5 ವರ್ಷದ ಅವಧಿಗೆ ಸುಭದ್ರ ಹಾಗೂ ಸ್ಥಿರ ಸರಕಾರವನ್ನು ರಾಷ್ಟ್ರಕ್ಕೆ ಕಾಂಗ್ರೆಸ್ ಕೊಟ್ಟಿದೆ. ಅಂತೆಯೇ 1962ರ 3ನೇ ಮಹಾಚುನಾವಣೆಯಲ್ಲಿ 494 ಚುನಾಯಿತ ಸದಸ್ಯರಲ್ಲಿ ಅತಿ ಹೆಚ್ಚು 364 ಸದಸ್ಯರನ್ನು ಕಾಂಗ್ರೆಸ್ ಪಡೆದು ಮೂರನೇ ಬಾರಿ 5 ವರ್ಷದ ಪೂರ್ಣಾವಧಿಗೆ ಸುಭದ್ರ ಹಾಗೂ ಸ್ಥಿರ ಸರಕಾರವನ್ನು ಕಾಂಗ್ರೆಸ್ ಕೊಟ್ಟಿದೆ. ಅಂತೆಯೇ 1967ರಲ್ಲಿ 4ನೇ ಮಹಾಚುನಾವಣೆಯಲ್ಲಿ 520 ಚುನಾಯಿತ ಸದಸ್ಯರಲ್ಲಿ ಕಾಂಗ್ರೆಸ್ಸು 283 ಸದಸ್ಯರನ್ನು ಪಡೆದು 4ನೇ ಬಾರಿಗೆ ಈ ರಾಷ್ಟ್ರಕ್ಕೆ ಸುಭದ್ರ ಹಾಗೂ ಸ್ಥಿರ ಸರಕಾರವನ್ನು ಕೊಟ್ಟಿದೆ. ಅಂತೆಯೇ 1971ರಲ್ಲಿ 5ನೇ ಮಹಾಚುನಾವಣೆಯಲ್ಲಿ ಚುನಾಯಿತ 518ರಲ್ಲಿ 360 ಸದಸ್ಯರನ್ನು ಪಡೆದು 5ನೇ ಬಾರಿಗೆ ಸುಭದ್ರ ಹಾಗೂ ಸ್ಥಿರ ಸರಕಾರವನ್ನು ಕಾಂಗ್ರೆಸ್ ಕೊಡುವ ಬದಲು ಅಸ್ಥಿರ ಸರಕಾರವಾಗಿ ಆಡಳಿತ ಅಭಿವೃದ್ಧಿ ಸರಿಯಾಗಿ ಮಾಡದೆ ಕಾಂಗ್ರೆಸ್ಸಿನ ದುರಾಡಳಿತದ ಪರಿಣಾಮವಾಗಿ 1977ರಲ್ಲಿ 6ನೇ ಮಹಾಚುನಾವಣೆಯಲ್ಲಿ ಚುನಾಯಿತ 542 ಸದಸ್ಯರಲ್ಲಿ ಕಾಂಗ್ರೆಸ್ಸು ಹೀನಾಯಮಾನವಾಗಿ ಕೇವಲ 153 ಸ್ಥಾನ ಪಡೆದು, ಜನತಾಪಕ್ಷ 306 ಸ್ಥಾನಗಳನ್ನು ಪಡೆದು ಕಾಂಗ್ರೆಸ್ ಪಕ್ಷ ಮೊದಲ ಬಾರಿಗೆ 25 ವರ್ಷಗಳ ನಂತರ ಅಧಿಕಾರ ಕಳೆದುಕೊಂಡು ಜನತಾ ಪಕ್ಷಕ್ಕೆ ಸರಕಾರ ರಚಿಸಲು ದಾರಿ ಮಾಡಿಕೊಟ್ಟಿತು. ಈ ಜನತಾ ಪಕ್ಷಕ್ಕೆ ಮೊದಲ ಬಾರಿಗೆ ಈ ರಾಷ್ಟ್ರದ ಆಡಳಿತ

ಅಧಿಕಾರ ಚುಕ್ಕಾಣಿ ಹಿಡಿಯುವ ಅವಕಾಶ ಸಿಕ್ಕು ಅಪಾರ ಅನುಭವಿ ಅಸಾಧಾರಣ ರಾಜಕೀಯ ಹಿನ್ನೆಲೆಯ ಪಕ್ಷ ಆಡಳಿತಗಾರನಾದ ಮುರಾರ್ಜಿ ದೇಸಾಯಿಯವರು ಈ ರಾಷ್ಟ್ರದ ಮೊಟ್ಟ ಮೊದಲನೆಯ ಕಾಂಗ್ರೆಸ್ಸೇತರ ಪ್ರಧಾನಮಂತ್ರಿಯಾಗಿದ್ದರೂ, ಜನತಾ ಪಕ್ಷದ ಅಂತರಿಕ ಕಚ್ಚಾಟದ ಕಾರಣದಿಂದ ಎರಡೇ ವರ್ಷದ ಅವಧಿಯಲ್ಲಿ 1979ರಲ್ಲಿ ಮುರಾರ್ಜಿ ಸರಕಾರ ಉರುಳಿ ಬಿತ್ತು. ಅನುಚಿತ ಅಧಿಕಾರದಾಸೆಯಿಂದ ಜನತಾ ಪಕ್ಷದ ಚರಣಸಿಂಗರು ಪ್ರಧಾನಮಂತ್ರಿಯಾಗಿ ಅಧಿಕಾರ ವಹಿಸಿಕೊಂಡು ಅವರು ಸಹ ಕೆಲವೇ ತಿಂಗಳುಗಳಲ್ಲಿ ಅಧಿಕಾರ ತ್ಯಾಗ ಮಾಡಬೇಕಾಯಿತು. ಇಲ್ಲಿಂದ ಪ್ರಜಾರಾಜ್ಯದ ದುರಂತ ಪ್ರಾರಂಭವಾಯಿತು. ಹೀಗೆ ಜನತಾ ಪಕ್ಷದ ಕಚ್ಚಾಟ, ಮದ-ಮತ್ಸರ ಹಾಗೂ ಕಾಂಗ್ರೆಸ್ಸಿನ ಕೈವಾಡದಿಂದ 1977ರಿಂದ 1980ರ ಅವಧಿಯಲ್ಲಿ, ಅವಧಿಪೂರ್ವದಲ್ಲಿಯೇ 5 ವರ್ಷಗಳ ಅಧಿಕಾರವನ್ನು ಪೂರೈಸದೆ ಜನತಾ ಸರಕಾರ ಪತನಗೊಂಡಿತು. ಸಿಕ್ಕ ಅವಕಾಶವನ್ನು ಜನತಾ ಪಕ್ಷ ಕಳೆದುಕೊಂಡಿದ್ದು ಈ ದೇಶದ ದುರ್ದೈವ. ಈ ಅಸಮರ್ಥತೆಯ ಕಾರಣದಿಂದಾಗಿ 1980ರಲ್ಲಿ ಮತ್ತೆ ಹೊಸ ಚುನಾವಣೆ ಲೋಕಸಭೆಗೆ ನಡೆದು ಈ 7ನೇ ಚುನಾವಣೆಯಲ್ಲಿ ಕಾಂಗ್ರೆಸ್ಸಿಗರಿಗೆ ಬುದ್ಧಿ ಬಂದಿರಬಹುದೆಂದು ಜನತಾ ಪಕ್ಷದವರು ಕಚ್ಚಾಡುವವರು, ಅಸಮರ್ಥರು, ಆಡಳಿತ ಮಾಡಿ ಈ ದೇಶಕ್ಕೆ ಸ್ಥಿರ ಸರಕಾರ ಕೊಡಲು ವಿಫಲರಾದವರೆಂದು ಚುನಾಯಿತ 524ರಲ್ಲಿ 351 ಕಾಂಗ್ರೆಸ್ಸಿಗರನ್ನು 41 ಜನತಾದವರನ್ನು ಈ ರಾಷ್ಟ್ರದ ಜನತೆ ಚುನಾಯಿಸಿ ಕಾಂಗ್ರೆಸಿಗರಿಗೆ ಆಡಳಿತ ಅಧಿಕಾರ ಕೊಟ್ಟಿತು. ಕಾಂಗ್ರೆಸ್ ಆಡಳಿತದ ವಿರುದ್ಧ ಜನತಾ ಪಕ್ಷ ಪ್ರಬಲ ವಿರೋಧಪಕ್ಷವಾಗಿ ಕಾರ್ಯ ನಿರ್ವಹಿಸದೇ ಇದ್ದುದರಿಂದ 1984ರಲ್ಲಿ ನಡೆದ 8ನೇ ಮಹಾಚುನಾವಣೆಯಲ್ಲೂ ಸಹ ಚುನಾಯಿತ 508ರಲ್ಲಿ 399 ಸ್ಥಾನವನ್ನು ಕಾಂಗ್ರೆಸ್ ಪಡೆದು ಉಳಿದ ಕೆಲವೇ ಸ್ಥಾನಗಳನ್ನು ಕಾಂಗ್ರೆಸ್ ವಿರೋಧಿಗಳಿಗೆ ಈ ರಾಷ್ಟ್ರದ ಜನತೆ ಕೊಟ್ಟಿದೆ. 1984ರಿಂದ 89ರ ವರೆಗಿನ ಅವಧಿಯಲ್ಲಿ ಕೂಡ ಕಾಂಗ್ರೆಸ್ ಸರಕಾರ ಸಮರ್ಥವಾಗಿ ಆಡಳಿತ ಮಾಡದ್ದರಿಂದ 1989ರಲ್ಲಿ ನಡೆದ 9ನೇ ಚುನಾವಣೆಯಲ್ಲಿ ಅತಂತ್ರ ಲೋಕಸಭೆಯಾಗಿ ವಿ.ಪಿ. ಸಿಂಗ್‌ರವರಾಗಲೀ, ಚಂದ್ರಶೇಖರರವರಾಗಲೀ ಉತ್ತಮ ಸರ್ಕಾರವನ್ನು ಈ ರಾಷ್ಟ್ರಕ್ಕೆ ಕೊಡುವಲ್ಲಿ ವಿಫಲರಾಗಿ ಅಧಿಕಾರ ಕಳೆದುಕೊಂಡು 1991ರಲ್ಲಿ ನಡೆದ 10ನೇ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬಂದು ಪಿ.ವಿ. ನರಸಿಂಹರಾವ್‌ರ 5 ವರ್ಷದ ಅವಧಿಯಲ್ಲಿ ಸಾಕಷ್ಟು ಸ್ವಾರ್ಥ, ಪಕ್ಷಪಾತ, ಸ್ವಜನ ಪಕ್ಷಪಾತ, ಅಧಿಕಾರ ದುರುಪಯೋಗ, ದುರಾಡಳಿತ ಭ್ರಷ್ಟಾಚಾರಗಳ ಪರಮಾವಧಿಯಾಗಿ ಅವರು ಕೂಡ ಅಧಿಕಾರ ಕಳೆದುಕೊಂಡು 1996ರ 11ನೇ ಚುನಾವಣೆಯಲ್ಲಿ ಯಾವುದೇ ಪಕ್ಷ ನಿಚ್ಚಳ ಬಹುಮತ ಪಡೆಯದೆ 96ರಿಂದ 98ರ ಅವಧಿಯಲ್ಲಿ 3 ಜನ ಕಾಂಗ್ರೆಸ್ಸೇತರರ ಸರ್ಕಾರವಾಗಿ ಎಲ್ಲವೂ ಅತಂತ್ರವಾಗಿ ಅಧಿಕಾರ ಕಳೆದುಕೊಂಡು 1998ರಲ್ಲಿ ಮತ್ತೆ 12ನೇ ಚುನಾವಣೆಯಾಗಿ ಭಾರತೀಯ ಜನತಾ ಪಕ್ಷ ಅತಿ ದೊಡ್ಡ ಪಕ್ಷವಾಗಿ ವಾಜಪೇಯಿ ಯವರು ಪ್ರಧಾನಮಂತ್ರಿಯಾಗಿ ಕಾಂಗ್ರೆಸ್ಸಿನ ಶರದ್ ಪವಾರರು ಅಧಿಕೃತ ವಿರೋಧಪಕ್ಷದ

ನಾಯಕರಾಗಿ ಕೆಲಸ ಮಾಡುತ್ತಿರುವಾಗ ಅವರಿಗೆ ಪೂರ್ಣಾವಧಿ 5 ವರ್ಷ ಕಾರ್ಯ ನಿರ್ವಹಿಸಲು ಅನುಚಿತ ಹಾಗೂ ಕ್ಷುಲ್ಲಕ ಕಾರಣಗಳಿಗಾಗಿ ಅವಕಾಶ ಕೊಡದಿದ್ದುದು ಸದಸ್ಯರ ಅಪಚಾರ. ಸುಮಾರು 22 ಪಕ್ಷಗಳಲ್ಲಿ 269 ಸದಸ್ಯರು ವಾಜಪೇಯಿ ಸರ್ಕಾರವನ್ನು ಬೆಂಬಲಿಸಿ ಸುಮಾರು 24 ಪಕ್ಷಗಳ 270 ಸದಸ್ಯರು ವಿರೋಧಿಸಿ ಕುತಂತ್ರ ಹಾಗೂ "ಸವತಿರಂಡೆಯಾಗಲಿ" ಎಂಬ ಹೇಯ ಉದ್ದೇಶದಿಂದ ವಾಜಪೇಯಿ ಸರ್ಕಾರವನ್ನು ವಾಮಮಾರ್ಗದಿಂದ ಕೆಡವಿ ಈಗ 13ನೇ ಚುನಾವಣೆ ಮತ್ತೆ ಬಂದಿತು.

ಹೀಗೆ ಪ್ರಜಾತಂತ್ರ ವ್ಯವಸ್ಥೆ ಅವ್ಯವಸ್ಥೆಗೊಂಡಿದೆ. ಈಗ ಮತ್ತೆ ಹೊಸ ಮಧ್ಯಕಾಲಿಕ ಚುನಾವಣೆ ಎಂದಿದ್ದು, ಈ ಚುನಾವಣೆಯಲ್ಲಿ ಸಹ ಲೆಕ್ಕವಿಲ್ಲದಷ್ಟು ಪಕ್ಷಗಳು ವ್ಯಕ್ತಿಗಳು ತಮ್ಮ ಸ್ವಾರ್ಥಕ್ಕಾಗಿ ಚುನಾಯಿತರಾಗಿ ಬಿಜೆಪಿ ಹಾಗೂ ಕಾಂಗ್ರೆಸ್ ಈ ಎರಡು ಪಕ್ಷಗಳಿಗೆ ಕಾಲ್ತೊಡಕನ್ನುಂಟುಮಾಡಿ ಈ ಎರಡೂ ಪಕ್ಷಗಳು ಒಂದು ಆಡಳಿತ ಅಧಿಕಾರರೂಢವಾಗಿ, ಮತ್ತೊಂದು ವಿರೋಧಿ ಅಧಿಕಾರರೂಢವಾಗಿ ಸ್ಥಿರವಾಗಿ ಕಾರ್ಯ ಮಾಡಲು ಬಿಡದಂತ ಪರಿಸ್ಥಿತಿಯನ್ನುಂಟುಮಾಡುವ ಸಂಭವವೇ ಹೆಚ್ಚು ಇರುವುದರಿಂದ ಈ ಎರಡೂ ಪಕ್ಷಗಳು ದೂರಾಲೋಚನೆ ಮಾಡಿ ಮೋಸದ ಮೈತ್ರಿಗೆ ಮಾರುಹೋಗದೆ ಹೆದರಿಕೆ, ಬೆದರಿಕೆ, ಕಿರುಕುಳಗಳಿಗೆ ಸೊಪ್ಪು ಹಾಕದೆ ಚುನಾವಣೆಯನ್ನು ಎದುರಿಸಿ ಜಯಶೀಲರಾಗಿ ಮುಂದಿನ ಸಂಪೂರ್ಣ 5 ವರ್ಷದ ಅವಧಿಗೆ ಒಂದು ಪಕ್ಷ ಆಡಳಿತ ಅಧಿಕಾರ ವಹಿಸಿ, ಮತ್ತೊಂದು ವಿರೋಧಿ ಪಕ್ಷ ಅಧಿಕಾರ ವಹಿಸಿ ಈ ರಾಷ್ಟ್ರಕ್ಕೆ ಸುಭದ್ರ ಹಾಗೂ ಸ್ಥಿರ ಸರಕಾರ ಕೊಟ್ಟು ಪ್ರಜಾತಂತ್ರ ವ್ಯವಸ್ಥೆ ಅವ್ಯವಸ್ಥೆಯಾಗದಂತೆ ಮುಂಜಾಗ್ರತೆ ವಹಿಸಿ ಪರರಾಷ್ಟ್ರದ ಕಣ್ಣಲ್ಲಿ ಭಾರತೀಯರು ಭಾರತ ದೇಶವನ್ನಾಳಲಿಕ್ಕೆ ಅಸಮರ್ಥರೆಂಬ ಅಭಿಪ್ರಾಯ ಬಾರದಂತೆ ಭಾರತ ದೇಶಕ್ಕೆ ಒಳ್ಳೇ ಹೆಸರು ತರುವುದು ಒಳ್ಳೆಯದು.

❑

ತಾರತಮ್ಯರಹಿತ ಆಡಳಿತ ಅಭಿವೃದ್ಧಿ

ವಿಧಾನಸಭೆಯ ಸದಸ್ಯರು ಯಾವ ಜಾತಿಯವರೇ ಇರಲಿ, ಯಾವ ವರ್ಗದವರೇ ಇರಲಿ ಅಥವಾ ಯಾವ ರಾಜಕೀಯ ಪಕ್ಷದವರೇ ಇರಲಿ ಅವರೆಲ್ಲರಿಗೂ ಅವರವರ ಕ್ಷೇತ್ರದಲ್ಲಿ ಎಲ್ಲಾ ಜಾತಿ, ವರ್ಗ, ಪಂಗಡದವರಿಂದ ಮತ ಪಡೆದು ಜಾತ್ಯಾತೀತ ರಾಗಿಯೇ ಆರಿಸಿ ಬಂದಿರುತ್ತಾರೆ. ಒಂದೇ ಕೋಮು, ಒಂದೇ ವರ್ಗ, ಒಂದೇ ಪಕ್ಷದವರೇ ಅಲ್ಲದೆ ರಕ್ತಸಂಬಂಧಿಗಳೇ ಒಬ್ಬರ ವಿರುದ್ಧ ಮತ್ತೊಬ್ಬರು ಪರಸ್ಪರ ವಿರೋಧಿಗಳಾಗಿ ಚುನಾವಣೆಯಲ್ಲಿ ಸ್ಪರ್ಧಿಸಿ ಒಬ್ಬ ಸೋತದ್ದೂ ಉಂಟು, ಮತ್ತೊಬ್ಬ ಆರಿಸಿ ಬಂದಿದ್ದೂ ಉಂಟು. ಚುನಾಯಿತರಾದವರು ಬಹುತೇಕರು ಜಾತೀವಾದಿಗಳಾಗದೆ ಜಾತ್ಯಾತೀರರಾಗಿ ತಮ್ಮ ತಮ್ಮ ಕ್ಷೇತ್ರದಲ್ಲಿ ಅಥವಾ ಜಿಲ್ಲೆಯಲ್ಲಿ ನಿಷ್ಪಕ್ಷಪಾತಿಗಳಾಗಿ ಸಾರ್ವಜನಿಕ ಸೇವೆ ಮಾಡಿದ ಉದಾಹರಣೆಗಳೂ ಉಂಟು. ಮತ ಕೊಟ್ಟವರು ನಮ್ಮವರೇ ಮತ ಕೊಡದವರೂ ನಮ್ಮವರೆ ಎಂಬ ಉದಾತ್ತ ಭಾವನೆಯಿಂದ ಕೆಲಸ ಮಾಡಿದವರು ಹಾಗೂ ಮಾಡುತ್ತಿರುವವರು ಬೇಕಾದಷ್ಟು ಜನ ಇದ್ದಾರೆ. ಆದರೆ ಕೆಲವು ಸಮಾಜಘಾತುಕ ಜಾತೀಯವಾದಿ ರಾಜಕಾರಣಿಗಳು ಹಾಗೂ ಧರ್ಮಕಾರಣಿಗಳು ಜಾತ್ಯಾತೀತರಾಗಿ ಕೆಲಸ ಮಾಡುವ ಶಾಸಕರಲ್ಲಿ ಜಾತೀಯ ವಿಷಬೀಜ ಬಿತ್ತಿ ಅವರನ್ನು ಜಾತೀಯವಾದಿಗಳನ್ನಾಗಿ ಪರಿವರ್ತಿಸಿ ಅವರ ಬಗ್ಗೆ ಅವರಿಗೆ ಮತ ಕೊಟ್ಟು ಎಲ್ಲಾ ಜಾತಿ, ಪಂಗಡದವರು ವಿಷಕಾರುವ ಹಾಗೆ ಮಾಡಿದ್ದು ಹಾಗೂ ಮಾಡುತ್ತಿರುವವರೂ ಉಂಟು. ಇಂತಹ ವಿಷಬೀಜದ ಪರಿಣಾಮವಾಗದಂತೆ ಹಾಗೂ ಜಾತೀಯ ಪಾಶಕ್ಕೆ ಬಲಿಯಾಗದಂತೆ ಜಾತ್ಯಾತೀತರಾಗಿ ಜಾತೀಯುತೆಯಿಂದ ದೂರವಿರುವರು ಪ್ರಜಾಪ್ರತಿನಿಧಿಗಳಿಗೆ ಒಳ್ಳೆಯದು. ಕರ್ನಾಟಕ ರಾಜ್ಯದಲ್ಲಿ 28 ಲೋಕಸಭಾ ಕ್ಷೇತ್ರಗಳು ಹಾಗೂ 124 ವಿಧಾನಸಭಾ ಕ್ಷೇತ್ರಗಳು 27 ಜಿಲ್ಲೆಗಳಲ್ಲಿ ಹರಡಿವೆ. ಕ್ಷೇತ್ರ ಹಾಗೂ ಆಯಾ ಜಿಲ್ಲೆಗಳಲ್ಲಿ ಸಾಮಾನ್ಯ, ಸಾಮಾಜಿಕ ಹಾಗೂ ಆರ್ಥಿಕ ಸೇವೆಯನ್ನು ರಾಗದ್ವೇಷವಿಲ್ಲದೆ, ಭಯಭೀತಿಯಿಲ್ಲದೆ, ಎಲ್ಲಾ ಶಾಸಕರು ಹಾಗೂ ಮಂತ್ರಿಗಳು ಪವಾಡ ಪುರುಷರಾಗಿ ಕೆಲಸ ಮಾಡಬೇಕಾಗುತ್ತದೆ. ಅದು ಅವರೆಲ್ಲರ ಕರ್ತವ್ಯ. ಶಾಸಕರು, ಮಂತ್ರಿಗಳು ಯಾವ

ಪಕ್ಷದವರೇ ಇದ್ದರೂ ಅವರವರ ತಾಲ್ಲೂಕು, ಜಿಲ್ಲೆಗಳಲ್ಲಿ ಹಾಗೂ ರಾಜ್ಯದಲ್ಲಿ ಸರ್ವಾಂಗೀಣ ಆಡಳಿತ ಅಭಿವೃದ್ಧಿಗಾಗಿ ಪ್ರಾಮಾಣಿಕ ಪ್ರಯತ್ನ ಮಾಡಬೇಕಾಗುತ್ತದೆ. ಅಂತೆಯೇ ಪ್ರತಿಯೊಂದು ಜಿಲ್ಲೆಗಳಿಗೆ ಆಯಾ ಜಿಲ್ಲೆಯ ಮಂತ್ರಿಯೊಬ್ಬರಿಗೆ ಜಿಲ್ಲೆಯ ಯಾವತ್ತೂ ಎಲ್ಲಾ ಆಡಳಿತ ಅಭಿವೃದ್ಧಿಯ ಜವಾಬ್ದಾರಿ ಕೊಟ್ಟು ಅವರನ್ನು ಜಿಲ್ಲಾ ಉಸ್ತುವಾರಿ ಮಂತ್ರಿಗಳನ್ನಾಗಿ ಹಿಂದಿನಿಂದ ಎಲ್ಲಾ ಸರಕಾರಗಳು ಮಾಡುತ್ತಲೇ ಬಂದಿವೆ. ಇದೊಂದು ಸತ್ಸಂಪ್ರದಾಯ ಸದುದ್ದೇಶದಿಂದ ಕೂಡಿದ್ದು ಇದೆ. ರಾಜ್ಯದಲ್ಲಿ ಈ ರಾಜ್ಯದ ಜನತೆ ಹಿಂದಿನ ಐದು ವರ್ಷದ ಜನತಾದಳ ಸರಕಾರದ ದುರಾಡಳಿತ ಹಾಗೂ ದುರಾಭಿವೃದ್ಧಿಗೆ ಬೇಸತ್ತು ದುರಾಡಳಿತ ಮಾಡಿದ ಜನತಾದಳದೊಂದಿಗೆ ಅಸಮಂಜಸ ಹಾಗೂ ಅನಾಗರಿಕ ಮೈತ್ರಿ ಮಾಡಿಕೊಂಡ ಬಿಜೆಪಿ ಬಗ್ಗೆ ಜಿಗುಪ್ಸೆಗೊಂಡು ಜನತಾ ದಳಕ್ಕೆ ಸರಕಾರ ರಚಿಸುವ ಅಥವಾ ವಿರೋಧ ಪಕ್ಷವಾಗಿ ಕೆಲಸ ಮಾಡುವ ಅಧಿಕಾರ ವ ಅವಕಾಶವನ್ನು ಕೊಡದೆ ಕಾಂಗ್ರೆಸ್ ಪಕ್ಷಕ್ಕೆ ಸರಕಾರ ರಚಿಸುವ ಅಧಿಕಾರ ಹಾಗೂ ಅವಕಾಶವನ್ನು ಕೊಟ್ಟು ಬಿಜೆಪಿ ಪಕ್ಷಕ್ಕೆ ವಿರೋಧಪಕ್ಷವಾಗಿ ಕೆಲಸ ಮಾಡುವ ಅಧಿಕಾರ ವ ಅವಕಾಶವನ್ನು ಸಹಾನುಭೂತಿಯಿಂದ ಕೊಟ್ಟಿದ್ದಾರೆ. ಈ ಅಧಿಕಾರ ವ ಅವಕಾಶದ ಪ್ರಯೋಜನವನ್ನು ಕಾಂಗ್ರೆಸ್ ಹಾಗೂ ಬಿಜೆಪಿ ಪಕ್ಷಗಳು ಸದುಪಯೋಗ ಮಾಡಿಕೊಂಡು ಮುಂದಿನ ಐದು ವರ್ಷಗಳ ನಂತರದ ತಮ್ಮ ಭವಿಷ್ಯದ ಬಗ್ಗೆ ಸ್ಪರ್ಧಾಪೂರಕವಾಗಿ ಈಗಿನಿಂದಲೇ ಚಿಂತಿಸಿ ಮುನ್ನುಗ್ಗುವುದು ಒಳ್ಳೆಯದು.

ಈ ರಾಜ್ಯದ ಜನತೆ ಕಾಂಗ್ರೆಸ್ಸಿನ ಕೈಗೆ ಜಯಮಾಲೆ ಹಾಕಿದ್ದಾರೆ. ಕಾಂಗ್ರೆಸ್ ಶಾಸಕರೆಲ್ಲ ಸೇರಿ ಶ್ರೀ ಎಸ್.ಎಂ. ಕೃಷ್ಣರವರಿಗೆ ಮುಖ್ಯಮಂತ್ರಿಯ ಜವಾಬ್ದಾರಿ ಹೊರಿಸಿದ್ದಾರೆ. ಮುಖ್ಯಮಂತ್ರಿಯವರು ಇಡೀ ರಾಜ್ಯದ 27 ಜಿಲ್ಲೆಗಳು ತನ್ನವೇಯೆಂದು ತಿಳಿದು ಎಲ್ಲಾ ಜಿಲ್ಲೆಗಳ ಆಡಳಿತ ಅಭಿವೃದ್ಧಿಯತ್ತ ಗಮನಹರಿಸಬೇಕಾದುದು ಅವರ ಕರ್ತವ್ಯ. ಇಡೀ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಕಾಂಗ್ರೆಸ್ಸನ್ನು ಸೇರಿ ಎಲ್ಲಾ ಪಕ್ಷಗಳಿಗೆ ರಾಜ್ಯದ ಜನತೆ ಮತ ಕೊಟ್ಟಿದ್ದಾರೆ. ಹೀಗಿರುವಾಗ ಎಲ್ಲಾ ಜಿಲ್ಲೆಗಳಲ್ಲಿ ಎಲ್ಲೆಲ್ಲಿ ಕಾಂಗ್ರೆಸ್ ಎಂ.ಎಲ್.ಎ.ಗಳಿದ್ದಾರೆ. ಆ ಎಲ್ಲಾ 27 ಜಿಲ್ಲೆಗಳಿಗೆ ಕನಿಷ್ಠ ಒಬ್ಬರಂತೆ ಒಬ್ಬ ಮಂತ್ರಿ, ಎಲ್ಲಿ ಯಾವ ಜಿಲ್ಲೆಯಲ್ಲಿ ಒಬ್ಬರೂ ಎಂ.ಎಲ್.ಎ.ಗಳೇ ಇಲ್ಲ. ಅಲ್ಲಿ ಒಬ್ಬ ಎಂ.ಎಲ್.ಸಿ.ಯನ್ನಾಗಲೀ ಅಥವಾ ಎಲ್ಲಿ ಯಾವ ಜಿಲ್ಲೆಯಲ್ಲಿ ಎಂ.ಎಲ್.ಎ. ಅಥವಾ ಎಂ.ಎಲ್.ಸಿ.ಯೇ ಇಲ್ಲ. ಅಂತಹ ಜಿಲ್ಲೆಯಲ್ಲಿ ಪಕ್ಕದ ಜಿಲ್ಲೆಯಲ್ಲಿಯ ಮಂತ್ರಿಯನ್ನು ಉಸ್ತುವಾರಿ ಮಂತ್ರಿಯನ್ನಾಗಿ ನೇಮಿಸುವ ಜವಾಬ್ದಾರಿಯನ್ನು ಮುಖ್ಯಮಂತ್ರಿಯವರು ಹೊರಬೇಕಾಗಿತ್ತು. ದುರ್ದೈವದಿಂದ ಮುಖ್ಯಮಂತ್ರಿಗಳು ಇಲ್ಲಿ ತಮ್ಮ ಕರ್ತವ್ಯವನ್ನು ನಿರ್ವಹಿಸುವಲ್ಲಿ ತಪ್ಪಿ ಕೆಲವು ಜಿಲ್ಲೆಗಳನ್ನು ಪರದೇಶಿಗಳನ್ನಾಗಿ ಮಾಡಿ ಆಯಾ ಜಿಲ್ಲೆಗಳ ಎಲ್ಲಾ ಜನತೆಗೆ ಅನ್ಯಾಯ ಮಾಡಿರುವುದು ಸುಸ್ಪಷ್ಟವಾಗಿದ್ದು, ಇದು ಸರಿಯಲ್ಲ.

ಉದಾಹರಣೆಗೆ ಹಾವೇರಿ ಜಿಲ್ಲೆಯ ಆರು ಕ್ಷೇತ್ರಗಳ ಪೈಕಿ ಮೂರು ಕ್ಷೇತ್ರಗಳಲ್ಲಿ ಕಾಂಗ್ರೆಸ್ಸಿಗರು ಆರಿಸಿಬಂದಿದ್ದಾರೆ. ಅವರಲ್ಲಿ ಯಾರೊಬ್ಬರನ್ನೂ ಮಂತ್ರಿಗಳನ್ನಾಗಿ ಮಾಡದೇ ಇರುವುದು ಪಕ್ಷಪಾತವಲ್ಲವೇ? ಜಿಲ್ಲೆಯ ಜನತೆಗೆ ಮಾಡಿರುವ ಅಪಚಾರ ಹಾಗೂ ಅಪಕಾರವಲ್ಲವೇ? ಕೊಡಗು ಜಿಲ್ಲೆಯ ಜನಸಂಖ್ಯೆ 4.88 ಲಕ್ಷ ಮೂವರು ಮಂತ್ರಿಗಳು, ಗುಲಬರ್ಗಾ ಜಿಲ್ಲೆ ಜನಸಂಖ್ಯೆ 25.83 ಲಕ್ಷ ಆರು ಮಂತ್ರಿಗಳು, ಬಾಗಲಕೋಟೆ ಜಿಲ್ಲೆ ಜನಸಂಖ್ಯೆ 13.95 ಲಕ್ಷ ಮೂವರು ಮಂತ್ರಿಗಳು, ಮೈಸೂರು ಜಿಲ್ಲೆ ಜನಸಂಖ್ಯೆ 22.82 ಲಕ್ಷ ನಾಲ್ವರು ಮಂತ್ರಿಗಳು, ಚಿಕ್ಕಮಗಳೂರು ಜಿಲ್ಲೆ ಜನಸಂಖ್ಯೆ 10.08 ಲಕ್ಷ ಮೂವರು ಮಂತ್ರಿಗಳು ಇದ್ದು, ಇದಕ್ಕೆ ತದ್ವಿರುದ್ಧವಾಗಿ 8.84 ಲಕ್ಷ ಜನಸಂಖ್ಯೆಯ ಚಾಮರಾಜನಗರ ಜಿಲ್ಲೆಗೆ ಒಬ್ಬ ಮಂತ್ರಿಯೂ ಇಲ್ಲ. 10.01 ಲಕ್ಷ ಜನಸಂಖ್ಯೆಯ ಉಡುಪಿ ಜಿಲ್ಲೆಗೆ ಒಬ್ಬರೂ ಮಂತ್ರಿ ಇಲ್ಲ. 12.56 ಲಕ್ಷ ಜನಸಂಖ್ಯೆಯ ಬೀದರ್ ಜಿಲ್ಲೆಗೆ ಒಬ್ಬರೂ ಮಂತ್ರಿ ಇಲ್ಲ. 12.70 ಜನಸಂಖ್ಯೆಯ ಹಾವೇರಿ ಜಿಲ್ಲೆಗೆ ಒಬ್ಬರೂ ಮಂತ್ರಿಯರು ಇಲ್ಲ. 13.52 ಲಕ್ಷ ಜನಸಂಖ್ಯೆಯ ರಾಯಚೂರು ಜಿಲ್ಲೆಗೆ ಒಬ್ಬರೂ ಮಂತ್ರಿ ಇಲ್ಲ. 15.34 ಲಕ್ಷ ಜನಸಂಖ್ಯೆಯ ಬಿಜಾಪೂರ ಜಿಲ್ಲೆಗೆ ಒಬ್ಬ ಮಂತ್ರಿಯೂ ಇಲ್ಲ. ಈ ರೀತಿಯ ಪಕ್ಷಪಾತ ವ ನಿರ್ಲಕ್ಷ್ಯ ಬಹುತೇಕ ಈ ಹಿಂದೆ ಯಾವ ಸರಕಾರಗಳಲ್ಲಿಯೂ ಆಗಿಲ್ಲ. ಎಸ್.ಎಂ. ಕೃಷ್ಣರವರ ಮಂತ್ರಿಮಂಡಲ ರಚನೆಯಲ್ಲಿ ಆಗಿರುವ ಪ್ರಮಾದ ಹೇಳತೀರದಷ್ಟು ಆಗಿದೆ. ನಿರೀಕ್ಷಣೆಗೆ ಮೀರಿ ಲೋಪದೋಷ, ತಪ್ಪು, ಅಲಕ್ಷ, ನಿರ್ಲಕ್ಷ್ಯ, ಜಾತೀಯತೆ, ಅನುಚಿತ ಒತ್ತಡಕ್ಕೆ ಮಣಿದ, ಪ್ರಜಾತಂತ್ರ ವಿರೋಧಿ, ಜನವಿರೋಧಿ, ಉತ್ತರ ಕರ್ನಾಟಕಕ್ಕೆ ವಿಶೇಷ ಅನ್ಯಾಯವಾಗಿರುವುದು ಸುಸ್ಪಷ್ಟ. ಆಡಳಿತ ಅನುಭವ, ವಿದ್ಯಾರ್ಹತೆ, ಸಾರ್ವಜನಿಕ ಸೇವಾವಧಿಗಳನ್ನೆಲ್ಲಾ ಗಾಳಿಗೆ ತೂರಲಾಗಿದೆ. ಕ್ಯಾಬಿನೆಟ್ ದರ್ಜೆಯಲ್ಲಿರಬೇಕಾದವರನ್ನು ರಾಜ್ಯ ಮಂತ್ರಿಗಳನ್ನಾಗಿ ಮಾಡಲಾಗಿದೆ. ರಾಜ್ಯ ಮಂತ್ರಿಗಳಾಗಬಹುದಾದ ಅಥವಾ ರಾಜ್ಯ ಮಂತ್ರಿಗಳೇ ಆಗಲಾಗದವರನ್ನು ಕ್ಯಾಬಿನೆಟ್ ದರ್ಜೆಯಲ್ಲಿ ಏರಿಸಲಾಗಿದೆ. ಮಂತ್ರಿಗಳ ಯಾದಿಯಲ್ಲಿ ಹಿರಿಯರನ್ನು ಕಿರಿಯರ ಕೆಳಗೆ, ಕಿರಿಯರನ್ನು ಹಿರಿಯರ ಮೇಲೆ ಕುಂಟುನೆಪ ಮುಂದೆ ಮಾಡಿ ಸೇರಿಸಿ ಅನೇಕರಿಗೆ ಮುಜುಗರವನ್ನುಂಟುಮಾಡಲಾಗಿದೆ. ಕನಿಷ್ಠ ಜಿಲ್ಲೆಗೊಬ್ಬ ಹಿರಿಯ ಎಂ.ಎಲ್.ಎ.ಯವರನ್ನು ಮಂತ್ರಿಯನ್ನಾಗಿ ಮಾಡಿ ದೊಡ್ಡ ಜಿಲ್ಲೆಗಳಿಗೆ ಬೇಕಾದರೆ ಇನ್ನೊಬ್ಬ ಮಂತ್ರಿ ಸ್ಥಾನಕ್ಕೆ ಎಂ.ಎಲ್.ಎ. ಅಥವಾ ಎಂ.ಎಲ್.ಸಿ.ಗಳ ಪೈಕಿ ಬೇಕಾಗದವರನ್ನು ಮಾಡಬಹುದಾಗಿತ್ತು. ಹಾಗೂ ಯಾವುದೇ ಉಗ್ರಟೀಕೆಗೆ ಸಾರ್ವಜನಿಕರಿಂದ ಬಾರದಂತೆ ಮುಂಜಾಗ್ರತೆ ವಹಿಸಬೇಕಾಗಿತ್ತು. ಅನೇಕ ಶಾಸಕರಿಗೆ ಹಾಗೂ ಅವರ ಕ್ಷೇತ್ರದ ಯಾವತ್ತೂ ಪ್ರಜೆಗಳಿಗೆ ನಿರಾಶೆಯನ್ನುಂಟು ಮಾಡದೆ ಅವರ ಸಾರ್ವಜನಿಕ ಸೇವೆಗೆ ಭಂಗ ಬಾರದಂತೆ ಮಾಡಬಹುದಾಗಿತ್ತು. ಭಾರೀ ಅಪಾರ ಅನುಭವವುಳ್ಳ ಮುಖ್ಯಮಂತ್ರಿಗಳಿಗೆ ಅದಾವ ಕಾಣದ ಕೈಗಳ ಕೈವಾಡ ಈ

ಅಚಾತುರ್ಯವನ್ನು ಮಾಡಲಿಕ್ಕೆ ಕಾರಣವಾಯಿತೋ ಅಂತೂ ಇಂತೂ ಈ ರಾಜ್ಯಕ್ಕೆ ಎಲ್ಲರೂ ಮೆಚ್ಚುವಂತಹ ಇಲ್ಲವೆ ಸಮಂಜಸವಾದ ಸೂತ್ರಕ್ಕೆ ಅನುಗುಣವಾಗಿ ಮಂತ್ರಿಮಂಡಲ ರಚನೆಯಾಗದಿರುವುದು ಈ ರಾಜ್ಯದ ಎಲ್ಲಾ ಜಿಲ್ಲೆಗಳ ಪ್ರಜಾಪ್ರಭುಗಳ ದುರ್ದೈವ. ಈಗಲಾದರೂ ಮುಖ್ಯಮಂತ್ರಿಗಳು ಸತ್‌ಸಂಪ್ರದಾಯ ಹಾಗೂ ನ್ಯೂನತೆಗಳನ್ನು ಗಣನೆಗೆ ತೆಗೆದುಕೊಂಡು ಮುನ್ನಡೆಯುವುದು ಒಳ್ಳೆಯದು. ಎಲ್ಲಾ ಸಮಾಜಗಳ ಜಾತ್ಯಾತೀತ ಧೋರಣೆಗೊಳಪಟ್ಟು ಸತತವಾಗಿ ಚುನಾಯಿತರಾಗಿ ಮಂತ್ರಿಗಳಾಗಿ ವಿಧಾನಸಭೆಯಲ್ಲಿ ಸಮರ್ಥ ವಿಪಕ್ಷ ನಾಯಕನಾಗಿ ಮುಖ್ಯಮಂತ್ರಿಯಾಗುವ ಎಲ್ಲಾ ಅರ್ಹತೆಗಳಿದ್ದರೂ ಶ್ರೀ ಖರ್ಗೆಯುವರನ್ನು ಮುಖ್ಯಮಂತ್ರಿ ಅವಕಾಶದಿಂದ ವಂಚಿಸಿದ್ದರೂ ಅವರನ್ನು ಸಂಪ್ರದಾಯುದಂತೆ ಉಪಮುಖ್ಯಮಂತ್ರಿಯನ್ನಾಗಿ ಮಾಡದೆ ಕುತಂತ್ರ ಕಾಂಗ್ರೆಸ್ ನಾಯುಕರಿಗೂ ಹಾಗೂ ಪ್ರಬಲಕೋಮಿನವರಿಗೂ ಈ ರಾಜ್ಯದ ಹಿತದೃಷ್ಟಿಯಿಂದ ಸಾಧುವಾದುದಲ್ಲ. ಇದೊಂದು ರಾಜಕೀಯ ಕಪಟ ನಾಟಕವೆನ್ನದೆ ಗತ್ಯಂತರವಿಲ್ಲ. ಎಲ್ಲಾ ಹಂತದ ಆಡಳಿತ ಅಭಿವೃದ್ಧಿಯ ಕಾರ್ಯಾಚರಣೆಯಲ್ಲಿ ರಾಜ್ಯಾದ್ಯಂತ ಸ್ವಾರ್ಥ, ಪಕ್ಷಪಾತ, ಸ್ವಜನ ಪಕ್ಷಪಾತ, ಜಾತೀಯತೆ, ಅಧಿಕಾರ ದುರುಪಯೋಗ, ದುರಾಡಳಿತ, ಭ್ರಷ್ಟಾಚಾರ, ಆರ್ಥಿಕ ದಿವಾಳಿ ತುಂಬಿ ತುಳುಕುತ್ತಿದ್ದು, ಇದಕ್ಕೆ ನೂತನ ಮುಖ್ಯಮಂತ್ರಿಗಳು ಮಂಗಳ ಹಾಡಿ ಕೊನೆಗೊಳಿಸಿ ದಾಕ್ಷಿಣ್ಯಪರರಾಗದೆ ನ್ಯಾಯನಿಷ್ಠುರಿಗಳಾಗಿ ರಾಮರಾಜ್ಯ ಮಾದರಿಯ ಆದರ್ಶ ರಾಜ್ಯವನ್ನಾಗಿ ಈ ರಾಜ್ಯವನ್ನು ಪರಿವರ್ತಿಸಿದರೆ ಅವರಿಗೆ ಜನತಾ-ಜನಾರ್ಧನ ಚಿರಋಣಿ.

❑

ರಾಜ್ಯದ ಸಮರ್ಪಕ ಆಡಳಿತ ಅಭಿವೃದ್ಧಿ

ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಹಾಗೂ ಬಿಜೆಪಿ ಅಧಿಕೃತ ವಿರೋಧಪಕ್ಷ ಅಸ್ತಿತ್ವದಲ್ಲಿ ಬಂದಿವೆ. ಗುಲಾಮಗಿರಿಯಿಂದ ಬಿಡುಗಡೆಯಾಗಿ ಸ್ವಾತಂತ್ರ್ಯ ಪಡೆದು ಜನತಂತ್ರ ವ್ಯವಸ್ಥೆ ಜಾರಿಗೆ ಬಂದಿರುವ ಇಪ್ಪತ್ತನೆಯ ಶತಮಾನವನ್ನು ದಾಟಿ ಇಪ್ಪತ್ತೊಂದನೆಯ ಶತಮಾನಕ್ಕೆ ರಾಷ್ಟ್ರ ಹಾಗೂ ರಾಜ್ಯದ ಜನತೆ ಕಾಲಿಡುತ್ತಿದ್ದು, ಈ ಹೊಸ ಶತಮಾನಲ್ಲಾದರೂ ಸರಕಾರ ಹಾಗೂ ಪ್ರಜಾಪ್ರತಿನಿಧಿಗಳು ತಾರತಮ್ಯ, ಸ್ವಾರ್ಥ, ಪಕ್ಷಪಾತ, ಸ್ವಜನ ಪಕ್ಷಪಾತ, ಭ್ರಷ್ಟಾಚಾರ, ಅಧಿಕಾರ ದುರುಪಯೋಗ, ದುರಾಡಳಿತಗಳಿಗೆ ಆಸ್ಪದ ಕೊಡದೆ ಉತ್ತಮ ಆಡಳಿತ ಹಾಗೂ ಅಭಿವೃದ್ಧಿಯನ್ನು ರಾಜ್ಯಾದ್ಯಂತ ಸಾಧಿಸುವುದು ಸರ್ವರಿಗೂ ಒಳ್ಳೆಯದು.

1. ಗ್ರಾಮ ಪಂಚಾಯತಿಗಳು : ರಾಜ್ಯದಲ್ಲಿ ಗ್ರಾಮ ಪಂಚಾಯತ್‌ರಾಜ್ ವ್ಯವಸ್ಥೆ ಅನೇಕ ದಶಕಗಳಿಂದ ಇದೆ. ಗ್ರಾಮಾಂತರ ಪ್ರದೇಶದಲ್ಲಿ ಗ್ರಾಮ ಪಂಚಾಯತಿಗಳು ಗ್ರಾಮೀಣ ಸರ್ವಾಂಗೀಣ ಅಭಿವೃದ್ಧಿಯ ಸಂಕೇತ. ಗ್ರಾಮ ಪಂಚಾಯತಿಗಳ ಕಾರ್ಯ ಯಶಸ್ವಿಯಾದರೆ ರಾಮರಾಜ್ಯ-ಗ್ರಾಮರಾಜ್ಯ-ಗ್ರಾಮ ಸರಕಾರದ ಕನಸು ನನಸಾಗಬಲ್ಲುದು. 1993ರ ಪಂಚಾಯತಿ ಅಧಿನಿಯಮದ ಪ್ರಕಾರ ಕನಿಷ್ಠ 2,500 ಜನಸಂಖ್ಯೆಗೆ ಒಂದರಂತೆ ರಾಜ್ಯದಲ್ಲಿ ಸುಮಾರು 5,692 ಗ್ರಾಮ ಪಂಚಾಯತಿಗಳಿದ್ದು ಈ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಸುಮಾರು 81000 ಸದಸ್ಯರಿದ್ದಾರೆ. ಇವರೆಲ್ಲರೂ ಚುನಾಯಿತ ಪ್ರತಿನಿಧಿಗಳು, ಈ ಪ್ರತಿನಿಧಿಗಳು 400 ಜನಸಂಖ್ಯೆಗೆ ಒಬ್ಬರಂತೆ ಇದ್ದಾರೆ. ಈ ಪಂಚಾಯತಿಗಳಿಗೆ ಹಿಂದಿನ ಸರಕಾರ ಅದೆಷ್ಟು ಹಣವನ್ನು ನಿಗದಿಗೊಳಿಸಬೇಕಾಗಿತ್ತೋ ಅಷ್ಟೊಂದು ಹಣವನ್ನು ನಿಗದಿ ಮಾಡಿ ಆ ಪ್ರಕಾರ ಅಭಿವೃದ್ಧಿ ವೆಚ್ಚ ಮಾಡಲಿಲ್ಲ. ಈ ಪಂಚಾಯತಿಗಳನ್ನು ಸದೃಢಪಡಿಸುವ ಬದಲು ಇತ್ತೀಚಿಗೆ 1,000 ಜನಸಂಖ್ಯೆಗೆ ಒಬ್ಬ ಪ್ರತಿನಿಧಿ ಸಂಖ್ಯೆ ಗೊತ್ತುಪಡಿಸಿ ಕನಿಷ್ಠ ಜನಸಂಖ್ಯೆ 6000ಕ್ಕೆ ಒಂದರಂತೆ ದೊಡ್ಡ ಪಂಚಾಯತಿ ಗಳನ್ನು ಮಾಡಿ ಅಧಿಕಾರ ವಿಕೇಂದ್ರೀಕರಣದ ಬದಲು ಅಧಿಕಾರ ಕೇಂದ್ರೀಕರಣ ಮಾಡಿ ಜನರಿಗೆ ಅನುಕೂಲವಾಗುವ ಬದಲು ಅನಾನುಕೂಲ ಮಾಡಿದ್ದು ಜನರಿಗೆ ತೊಂದರೆ

ಯಾಗುವುದು ಕಂಡುಬಂದಿದೆ. ದಕ್ಷಿಣ ಕರ್ನಾಟಕದ ಭೌಗೋಳಿಕ ವಿಸ್ತೀರ್ಣ 93,170 ಚ.ಕಿ.ಮೀ. ಇದ್ದು, ಇಲ್ಲಿ 3181 ಗ್ರಾಮ ಪಂಚಾಯತಿಗಳಿವೆ ಉತ್ತರ ಕರ್ನಾಟಕದ ಭೌಗೋಳಿಕ ವಿಸ್ತೀರ್ಣ 98,621 ಚ.ಕಿ.ಮೀ. ಇದ್ದು, ಇಲ್ಲಿ 2,511 ಗ್ರಾಮ ಪಂಚಾಯತಿ ಗಳಿವೆ. ಭೌಗೋಳಿಕ ವಿಸ್ತೀರ್ಣಕ್ಕೆ ಅನುಗುಣವಾಗಿ ಉತ್ತರ ಕರ್ನಾಟಕದವರಿಗೆ ಇನ್ನೂ ಕನಿಷ್ಠ 670ಕ್ಕಿಂತ ಹೆಚ್ಚು ಗ್ರಾಮ ಪಂಚಾಯತಿಗಳನ್ನು 1993ನೇ ಕಾಯ್ದೆ ಪ್ರಕಾರ ಜನರ ಅನುಕೂಲತೆಗಾಗಿ ರಚನೆಯಾಗಬೇಕು. ಹಿಂದಿನ ಸರಕಾರ ಈ ಕಾಯ್ದೆ ತಿದ್ದುಪಡಿ ಮಾಡಿ ದೊಡ್ಡ ಮಂಡಲ ಪಂಚಾಯತಿಗಳನ್ನು ಮಾಡುತ್ತಿರುವುದನ್ನು ರದ್ದುಮಾಡಿ 1993ನೇ ಕಾಯ್ದೆ ಪ್ರಕಾರ ಹೆಚ್ಚಿನ ಪಂಚಾಯತಿಗಳನ್ನು ರಚಿಸಲು ಹೊಸ ಸರಕಾರ ಸೂಕ್ತ ಕ್ರಮ ತೆಗೆದುಕೊಂಡು ಗ್ರಾಮಾಂತರ ಜನರಿಗೆ ಅನುಕೂಲ ಮಾಡಿಕೊಡಬೇಕು. ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಮ ಪಂಚಾಯತ್ ಸದಸ್ಯರಾಗುವ ಅವಕಾಶವನ್ನು ಮೊಟಕುಗೊಳಿಸ ಬಾರದು. ಈ ದಿಶೆಯಲ್ಲಿ ಈ ಧೋರಣೆಯನ್ನು ಹೊಸ ಸರಕಾರ ಮೊದಲಿನಂತೆ ಮುಂದುವರಿಸಬೇಕು. ಈಗಾಗಲೇ ಸರಕಾರದ ಪ್ರಸ್ತುತ ಧೋರಣೆಯ ಪ್ರಕಾರ ಪ್ರತಿಯೊಂದು ಗ್ರಾಮ ಪಂಚಾಯತ್ ಕ್ಷೇತ್ರದಲ್ಲಿ ಕನಿಷ್ಠ ಒಂದೊಂದು ಗ್ರಾಮ ವ್ಯವಸಾಯ ಪತ್ತಿನ ಸಹಕಾರ ಸಂಘಗಳಿದ್ದು ಪ್ರತೀ ಪಂಚಾಯತ್ ಕ್ಷೇತ್ರಗಳಲ್ಲಿ ಬೆಳೆ ಸಾಲ, ಅಲ್ಪಾವಧಿ ಸಾಲ, ಮಧ್ಯಮಾವಧಿ ಸಾಲ, ದೀರ್ಘಾವಧಿ ಸಾಲ ಕೊಡುತ್ತಿದ್ದು ಹಾಗೂ ವಸೂಲು ಮಾಡುತ್ತಿದ್ದು ರೈತರಿಗೆ ಬೇಕಾದ ಜನತಾ ಬಟ್ಟೆ, ಆಹಾರಧಾನ್ಯ, ಸೀಮೆಎಣ್ಣೆ, ಬೀಜ, ಕ್ರಿಮಿನಾಶಕ, ಗೊಬ್ಬರ ಇತ್ಯಾದಿ ರೈತೋಪಯೋಗಿ ಜಿನಸುಗಳನ್ನು ವಿತರಿದ್ದು ಮತ್ತೆ ಮಂಡಲ ಪಂಚಾಯತಿ ರಚಿಸಿದರೆ ಸುತ್ತಿ ಮತ್ತು ಸಣ್ಣ ಸಂಘಗಳನ್ನು ಕೂಡಿಸಿ ದೊಡ್ಡ ಸಂಘಗಳನ್ನು ಮಾಡಬಹುದಾದ್ದರಿಂದ 2,500 ಜನಸಂಖ್ಯೆಗೊಂದರಂತೆ ಪಂಚಾಯತಿಗಳನ್ನು ಹಾಗೂ 400 ಜನಸಂಖ್ಯೆಗೆ ಒಬ್ಬ ಪಂಚಾಯತಿ ಪ್ರತಿನಿಧಿಯಂತೆ ಇರುವುದನ್ನು ಯಾವ ಕಾರಣಕ್ಕೂ ಬದಲಿಸಬಾರದು.

2. ನೀರಾವರಿ ಕೆರೆಗಳು : ರಾಜ್ಯದಲ್ಲಿ 36,661 ನೀರಾವರಿ ಕೆರೆಗಳಿದ್ದು ಇವುಗಳಿಂದ 6,80,421 ಹೆಕ್ಟೇರ್ ಜಮೀನಿಗೆ ನೀರಾವರಿ ಆಗಬೇಕಾಗಿದ್ದು ಈ ಕೆರೆಗಳೆಲ್ಲ ಹೂತು ಹೋಗಿರುವುದರಿಂದ ಅರ್ಧದಷ್ಟು ಜಮೀನಿಗೆ ನೀರು ಸಹ ಪೂರೈಕೆಯಾಗದೆ ಅಷ್ಟೂ ಕೆರೆಗಳು ಹೂಳು ತುಂಬಿ ನೀರು ನಿಲ್ಲದೆ ಕೆರೆಗಳಿಗೆ ಬರಬಹುದಾದ ಮಳೆ ನೀರೆಲ್ಲಾ ಹಳ್ಳ-ಹೊಳೆಗಳ ಮುಖಾಂತರ ಸಮುದ್ರಕ್ಕೆ ಹೋಗುತ್ತದೆ. ಕೆರೆಗಳಲ್ಲಿ ನೀರು ತುಂಬಿ ರೈತರಿಗೆ ಉಪಯೋಗವಾಗಬೇಕಾಗಿದ್ದು ಹೂಳು ತುಂಬಿದ ಕೆರೆಗಳಲ್ಲೆಲ್ಲಾ ಹೂಳನ್ನು ತೆಗೆಸಲು ಸರಕಾರ ಉತ್ತರ ಕರ್ನಾಟಕ ಹಾಗೂ ದಕ್ಷಿಣ ಕರ್ನಾಟಕದಲ್ಲಿನ ಕೆರೆಗಳನ್ನು ಕಾಮಗಾರಿ ಮಾಡಿಸಬೇಕು. ಈ ಕೆರೆಗಳ ಕಾಮಗಾರಿಗೆ ಬಜೆಟ್‌ನಲ್ಲಿ ಹೆಚ್ಚಿನ ಹಣವನ್ನು ನಿಗದಿಪಡಿಸಿ ಸಂಪೂರ್ಣವಾಗಿ ವೆಚ್ಚ ಮಾಡಬೇಕು.

3. ಭಾರೀ ಮತ್ತು ಮಧ್ಯಮ ನೀರಾವರಿ : ಕೃಷ್ಣಾ ಕೊಳದಲ್ಲಿ 28 ಭಾರೀ ಮತ್ತು ಮಧ್ಯಮ ನೀರಾವರಿ ಯೋಜನೆಗಳಿದ್ದು ಇವೆಲ್ಲವುಗಳಿಂದ 18,48,866 ಹೆಕ್ಟೇರ್ ಜಮೀನು ನೀರಾವರಿ ಸಾಮರ್ಥ್ಯವಿದ್ದು ಇದರಲ್ಲಿ 31.3.99ಕ್ಕೆ ಕೇವಲ 9,28,703 ಹೆಕ್ಟೇರ್ ನೀರಾವರಿಯಾಗಿದ್ದು ಇನ್ನು 9,20,163 ಹೆಕ್ಟೇರ್ ನೀರಾವರಿಯಾಗಬೇಕಾಗಿದೆ. ಇಷ್ಟೊಂದು ದೀರ್ಘ ಅವಧಿಯಲ್ಲಿ ಕೇವಲ ಶೇಕಡಾ 50.2 ನೀರಾವರಿಯಾಗಿರುವುದು. ಗೋದಾವರಿ ಕೊಳದ ಕೇವಲ 3 ಯೋಜನೆಗಳಿಂದ 42.413 ಹೆಕ್ಟೇರ್ ನೀರಾವರಿಯಾಗಬೇಕಾಗಿದ್ದು ಇದರಲ್ಲಿ 31.3.99ಕ್ಕೆ 18,819 ಅಂದರೆ ಶೇಕಡಾ 44.37 ನೀರಾವರಿಯಾಗಿರುವುದು. ಇತರ ಕೊಳದ 2 ಯೋಜನೆಗಳಾದ ಮಹದಾಯಿ ತಿರುವಿನಿಂದ ಮಲಪ್ರಭಾ ಯೋಜನೆಗೆ ನೀರು ಪಡೆಯಬೇಕಾಗಿದ್ದು 31.3.99ರ ವರೆಗೆ ಯಾವ ನೀರೂ ಇಲ್ಲ ಹಾಗೂ ಕ್ರಮವೂ ಇಲ್ಲ. ಇನ್ನುಳಿದ ವರಾಹಿ ಯೋಜನೆಯಿಂದ 15,702 ಹೆಕ್ಟೇರ್ ನೀರಾವರಿಯಾಗಬೇಕಾಗಿದ್ದು ಇದರಲ್ಲಿ 31.3.99ಕ್ಕೆ ಎಷ್ಟೂ ನೀರಾವರಿಯಾಗಿಲ್ಲ, ಹಣ ಮಾತ್ರ 19.21 ಕೋಟಿ ವೆಚ್ಚವಾಗಿದೆ. ಕಾವೇರಿ ಕೊಳದ ಕೇವಲ 16 ಯೋಜನೆಗಳಿಂದ 5,26,597 ಹೆಕ್ಟೇರ್ ನೀರಾವರಿಯಾಗಬೇಕಾಗಿದ್ದು, ಇದರಲ್ಲಿ 31.3.99ರ ವರೆಗೆ 2,93,094 ಹೆಕ್ಟೇರ್ ಅಂದರೆ ಶೇಕಡಾ 55.28ರಷ್ಟು ನೀರಾವರಿಯಾಗಿದೆ. ಹೀಗೆ ಕೃಷ್ಣಾ, ಗೋದಾವರಿ ಹಾಗೂ ಇತರ ಕೊಳದ ನಿಗದಿತ ಜಮೀನನ್ನು ನೀರಾವರಿಗೆ ಒಳಪಡಿಸುವಲ್ಲಿ ಹಿಂದಿನ ಸರಕಾರ ತಾರತಮ್ಯ ಪಕ್ಷಪಾತ ಮಾಡಿದ್ದು, ಈ ಯೋಜನೆಗಳನ್ನು ಮುಂದಿನ 5 ವರ್ಷಗಳಲ್ಲಾದರೂ ನೀರಾವರಿ ಪೂರ್ತಿಗೊಳಿಸಲು ಹಾಗೂ ಸಾಕಷ್ಟು ಹಣ ನಿಗದಿ ಮಾಡಿ ವೆಚ್ಚ ಮಾಡಲು ಈ ಸರ್ಕಾರ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು.

4. ಕೃಷ್ಣಾ ಕೊಳದ ಯೋಜನೆ : (1) ಬೆಣ್ಣೆತೊರೆ (2) ಭದ್ರಾ (3) ಭೀಮಾ ಲಿಫ್ಟ್ (4) ದೂದ್‌ಗಂಗಾ (5) ಘಟಪ್ರಭಾ-3 (6) ಹಿಪ್ಪರಗಿ (7) ಮಲಪ್ರಭಾ (8) ತುಂಗಭದ್ರಾ ಎಡದಂಡೆ (9) ತುಂಗಭದ್ರಾ ಬಲದಂಡೆ (10) ಕೃಷ್ಣಾ ಮೇಲ್ದಂಡೆ-1 (11) ಕೃಷ್ಣಾ ಮೇಲ್ದಂಡೆ-2 (12) ತುಂಗಾ ಮೇಲ್ದಂಡೆ (13) ಅಮರ್ಜಾ (14) ಬನಾಪುರ ಲಿಫ್ಟ್ (15) ರಾಣಿಕೆರೆ (16) ಗಂಧೋರಿ ನಾಲಾ (17) ಹಿರೇಹಳ್ಳ (18) ಹೊಡಿರಾಯನಹಳ್ಳ (19) ಮುಲ್ಲಾಮರಿ ಕೆಳದಂಡೆ (20) ಮಸ್ಕಿನಾಲಾ (21) ಇಟಗಿ ಸಾಸಲವಾಡ (22) ಮಲ್ಲಾಮರಿ ಮೇಲ್ದಂಡೆ (23) ಕೆ.ಆರ್.ಎಸ್. ನವೀಕರಣ (24) ಭೀಮಾಹರಿ (25) ಕಾಗ್ನಾ (26) ಮಾರ್ಕಾಂಡೇಯ (27) ರಾಮಥಲ್ ಲಿಫ್ಟ್ (28) ಸಿಂಗಟಾಲೂರು (29) ಮಹದಾಯಿ (30) ಹರಿನಾಲಾ, ಈ ಯೋಜನೆಗಳಿಂದ 500.94 ಟಿ.ಎಂ.ಸಿ. ನೀರನ್ನು ಉಪಯೋಗಿಸಬೇಕಾಗಿದ್ದು, ಈ ನೀರಿನಲ್ಲಿ 31.3.94ಕ್ಕೆ ಕೇವಲ 271.64 ಟಿ.ಎಂ.ಸಿ. ನೀರನ್ನು ಬಳಸಿ ಅಂದಿಗೆ ನೀರಿನ ಬಾಕಿ 419.38 ಟಿ.ಎಂ.ಸಿ. ಇದ್ದು ಇದರಲ್ಲಿ 31.1.99ಕ್ಕೆ 230.46 ಟಿ.ಎಂ.ಸಿ. ಬಳಸಲಾಗಿದೆ. 1.2.99ರಿಂದ ಇವುಗಳ 23 ಯೋಜನೆಗಳಿಗೆ

208.65 ಟಿ.ಎಂ.ಸಿ. ನೀರನ್ನು 31.5.2000 ಅವಧಿಯೊಳಗಾಗಿ ಮುಗಿಸಬೇಕಾಗಿದ್ದು ಇದು ಸಾಧ್ಯವೇ ಇಲ್ಲ. ಅಂತೆಯೇ ಮುಗಿಯದ ಈ ಯೋಜನೆಗಳಿಂದ 31.5.2000ಕ್ಕೆ 9,20,163 ಹೆಕ್ಟೇರ್ ಜಮೀನಿಗೆ ನೀರನ್ನು ಒದಗಿಸಬೇಕಾಗಿದ್ದು ಇದೂ ಕೂಡ ಸಾಧ್ಯವೇ ಇಲ್ಲ. ಈ ಯೋಜನೆಗಳ ಪೈಕಿ 14 ಯೋಜನೆಗಳ ನೀರಿನ ಬಳಕೆ ಎಷ್ಟೂ ಆಗಿಲ್ಲ ಹಾಗೂ ನೀರಾವರಿ ಕೂಡ ಇನ್ನು ಎಷ್ಟು ಆಗಿಲ್ಲ. ಈ ಎಲ್ಲಾ ಯೋಜನೆಗಳ ಇತ್ತೀಚಿನ ಅಂದಾಜು ವೆಚ್ಚ 14,413.20 ಕೋಟಿ ಇದ್ದು, ಇದರಲ್ಲಿ 31.3.99ಕ್ಕೆ 6,435.94 ಕೋಟಿ ವೆಚ್ಚವಾಗಿದ್ದು ಈ ಎಲ್ಲಾ ಯೋಜನೆಗಳನ್ನು ಮುಗಿಸಲು ಇನ್ನು 7,976.26 ಕೋಟಿ ಹಣ ಬೇಕಾಗಿದೆ. ಕಾರಣ ಮುಂದಿನ ಐದು ವರ್ಷಗಳಲ್ಲಾದರೂ ಈ ಎಲ್ಲಾ ನೀರಾವರಿ ಯೋಜನೆಗಳನ್ನು ಪೂರ್ತಿಗೊಳಿಸಲು ಕ್ರಮ ತೆಗೆದುಕೊಳ್ಳಬೇಕು.

ಯೋಜನೆಗಳ ಕಾರ್ಯಾಚರಣೆ ಹಾಗೂ ಪೂರ್ತಿಗೊಳಿಸುವಲ್ಲಿ ಹಿಂದಿನ ಸರಕಾರ ವಿಫಲವಾಗಿ ಕಾಮಗಾರಿಯನ್ನು ಮುಂದೂಡಿರುವ ಪರಿಣಾಮವಾಗಿ ಜನತೆಗೆ ಯೋಜನೆಗಳ ಸಫಲತೆ ಸಿಗದೆ ಹಣ ಪೋಲಾಗಿರುವುದನ್ನು ಹೊಸ ಸರ್ಕಾರ ಗಮನದಲ್ಲಿಟ್ಟುಕೊಂಡು ಸೂಕ್ತ ಕ್ರಮ ತೆಗೆದುಕೊಳ್ಳಬೇಕು.

5. ಹೊಸಜಿಲ್ಲೆ, ತಾಲ್ಲೂಕು ಹಾಗೂ ಹೋಬಳಿಗಳ ರಚನೆ : ದಕ್ಷಿಣ ಕರ್ನಾಟಕದಲ್ಲಿ 93,170 ಚದರ ಕಿ.ಮೀ. ಹಾಗೂ 90.94 ಲಕ್ಷ ಹೆಕ್ಟೇರ್ ಭೌಗೋಳಿಕ ವಿಸ್ತಾರವಿದ್ದು ಇಲ್ಲಿ 15 ಜಿಲ್ಲೆ, 95 ತಾಲ್ಲೂಕು ಹಾಗೂ 433 ಹೋಬಳಿಗಳಿದ್ದು, ಉತ್ತರ ಕರ್ನಾಟಕದಲ್ಲಿ 98,621 ಚ.ಕಿ.ಮೀ. ಹಾಗೂ 99.56 ಲಕ್ಷ ಹೆಕ್ಟೇರ್ ಭೌಗೋಳಿಕ ವಿಸ್ತಾರವಿದ್ದು, ಇಲ್ಲಿ 12 ಜಿಲ್ಲೆ, 80 ತಾಲ್ಲೂಕು, 312 ಹೋಬಳಿಗಳಿದ್ದು ಇಲ್ಲಿಯ ಜನರಿಗೆ ಆಡಳಿತ ಅನಾನುಕೂಲತೆ ಹೆಚ್ಚಾಗಿದ್ದು ದಕ್ಷಿಣ ಕರ್ನಾಟಕದ ವಾಸ್ತವಿಕ ಮಾದರಿಗೆ ಅನುಗುಣವಾಗಿ ಉತ್ತರ ಕರ್ನಾಟಕದಲ್ಲಿ ಹೆಚ್ಚಾಗಿ 5 ಜಿಲ್ಲೆ, 20 ತಾಲ್ಲೂಕು, 112 ಹೋಬಳಿಗಳನ್ನು ಹೊಸದಾಗಿ ರಚಿಸಿ ತಾರತಮ್ಯವನ್ನು ಹೋಗಲಾಡಿಸಬೇಕು.

6. ರಸ್ತೆಮಾರ್ಗ : ದಕ್ಷಿಣ ಕರ್ನಾಟಕದಲ್ಲಿ 83,185 ಕಿ.ಮೀ. ಉದ್ದದ ಒಟ್ಟು ರಸ್ತೆ ಮಾರ್ಗ ಹಾಗೂ 55204 ಕಿ.ಮೀ. ಉದ್ದದ ಪಕ್ಕಾ ರಸ್ತೆ ಇದ್ದು, ಉತ್ತರ ಕರ್ನಾಟಕದಲ್ಲಿ 56,335 ಕಿ.ಮೀ. ಉದ್ದದ ಒಟ್ಟು ರಸ್ತೆ ಮಾರ್ಗ ಹಾಗೂ 40,304 ಕಿ.ಮೀ. ಉದ್ದದ ಪಕ್ಕಾ ರಸ್ತೆ ಮಾರ್ಗವಿದ್ದು, ಉತ್ತರ ಕರ್ನಾಟಕದಲ್ಲಿಯ ಜನತೆಗೆ ಸಂಚಾರಿ ಮಾರ್ಗ ವ್ಯವಸ್ಥೆ ದಕ್ಷಿಣ ಕರ್ನಾಟಕಕ್ಕೆ ಹೋಲಿಸಿ ನೋಡಿದರೆ ಉತ್ತರ ಕರ್ನಾಟಕ ನಿರ್ಲಕ್ಷಿಸಲ್ಪಟ್ಟಿದ್ದು ದಕ್ಷಿಣ ಕರ್ನಾಟಕದ ಸುವ್ಯವಸ್ಥೆಗೆ ಅನುಗುಣವಾಗಿ ಉತ್ತರ ಕರ್ನಾಟಕದಲ್ಲಿ ಭೌಗೋಳಿಕ ವಿಸ್ತಾರಕ್ಕನುಗುಣವಾಗಿ ಹೆಚ್ಚಿನ ರಸ್ತೆ ಹಾಗೂ ಪಕ್ಕಾ ರಸ್ತೆಗಳನ್ನು ನಿರ್ಮಿಸಬೇಕು.

7. ರೈಲ್ವೇ ಮಾರ್ಗ ಹಾಗೂ ನಿಲ್ದಾಣ : ದಕ್ಷಿಣ ಕರ್ನಾಟಕದಲ್ಲಿ 1,679

ಕಿ.ಮೀ. ರೈಲ್ವೆ ಮಾರ್ಗವಿದ್ದು 222 ರೈಲ್ವೆ ನಿಲ್ದಾಣಗಳಿವೆ. ಉತ್ತರ ಕರ್ನಾಟಕದಲ್ಲಿ 1,513 ಕಿ.ಮೀ. ರೈಲ್ವೆ ಮಾರ್ಗವಿದ್ದು 168 ರೈಲ್ವೆ ನಿಲ್ದಾಣಗಳಿವೆ. ದಕ್ಷಿಣ ಕರ್ನಾಟಕಕ್ಕೆ ಅನುಗುಣವಾಗಿ ಉತ್ತರ ಕರ್ನಾಟಕದಲ್ಲಿ ಹೆಚ್ಚಿನ ರೈಲ್ವೆ ಮಾರ್ಗ ಹಾಗೂ ಹೆಚ್ಚು ನಿಲ್ದಾಣಗಳನ್ನು ನಿರ್ಮಿಸಬೇಕು.

8. ಅಂಚೆ ಕಛೇರಿ, ದೂರವಾಣಿ ಕೇಂದ್ರ, ದೂರವಾಣಿಗಳು : ದಕ್ಷಿಣ ಕರ್ನಾಟಕದಲ್ಲಿ 5,344 ಅಂಚೆ ಕಛೇರಿಗಳು, 1198 ದೂರವಾಣಿ ಕೇಂದ್ರಗಳು ಮತ್ತು 9,44,034 ದೂರವಾಣಿಗಳಿದ್ದು, ಉತ್ತರ ಕರ್ನಾಟಕದಲ್ಲಿ 4,494 ಅಂಚೆ ಕಛೇರಿಗಳು, 973 ದೂರವಾಣಿ ಕೇಂದ್ರಗಳು ಹಾಗೂ 3,03, 693 ದೂರವಾಣಿಗಳಿದ್ದು ಉತ್ತರ ಕರ್ನಾಟಕ ಜನತೆಯ ಮನವಿ ಮೇರೆಗೆ ಹೆಚ್ಚಿನ ಸೌಲಭ್ಯ ಒದಗಿಸುವುದು ಅಗತ್ಯವಾಗಿದೆ.

9. ಪ್ರಾಥಮಿಕ ಶಿಕ್ಷಣ : ಪ್ರಾಥಮಿಕ ಶಿಕ್ಷಣ ಅತೀ ಮಹತ್ವ ಹಾಗೂ ಮಹದುಪಯೋಗವಾದದ್ದು. ದಕ್ಷಿಣ ಕರ್ನಾಟಕದ ಜನಸಂಖ್ಯೆ 257.04 ಲಕ್ಷವಿದೆ. ಉತ್ತರ ಕರ್ನಾಟಕದ ಜನಸಂಖ್ಯೆ 197.73 ಲಕ್ಷವಿದೆ. ದಕ್ಷಿಣ ಕರ್ನಾಟಕದಲ್ಲಿ 45.45 ಲಕ್ಷ ವಿದ್ಯಾರ್ಥಿಗಳಿಗೆ 26,842 ಪ್ರಾಥಮಿಕ ಶಾಲೆಗಳಿವೆ. ಅಂದರೆ ಸರಾಸರಿ 168 ವಿದ್ಯಾರ್ಥಿಗಳಿಗೊಂದರಂತೆ ಶಾಲೆ ಇದೆ. ಉತ್ತರ ಕರ್ನಾಟಕದಲ್ಲಿ 16,403 ಶಾಲೆಗಳಿದ್ದು ಅವುಗಳಲ್ಲಿ 36,80,907 ವಿದ್ಯಾರ್ಥಿಗಳಿದ್ದಾರೆ. ಅಂದರೆ ಸರಾಸರಿ 226 ವಿದ್ಯಾರ್ಥಿಗಳಿಗೊಂದರಂತೆ ಶಾಲೆಗಳಿವೆ. ಹೀಗೆ ತಾರತಮ್ಯವಿದ್ದು ಉತ್ತರ ಕರ್ನಾಟಕದಲ್ಲಿ ಇನ್ನೂ ಹೆಚ್ಚಿನ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸುವುದು ಅಗತ್ಯವಿದೆ.

10. ಮಾಧ್ಯಮಿಕ ಶಾಲೆ ಹಾಗೂ ಪದವಿಪೂರ್ವ ಕಾಲೇಜು : ದಕ್ಷಿಣ ಕರ್ನಾಟಕದಲ್ಲಿ 5,111 ಮಾಧ್ಯಮಿಕ ಶಾಲೆಗಳು ಮತ್ತು 1,237 ಪದವಿಪೂರ್ವ ಕಾಲೇಜುಗಳಿದ್ದು, ಉತ್ತರ ಕರ್ನಾಟಕದಲ್ಲಿ 3,057 ಮಾಧ್ಯಮಿಕ ಶಾಲೆಗಳು ಹಾಗೂ 763 ಪದವಿಪೂರ್ವ ಕಾಲೇಜುಗಳಿದ್ದು, ಇಲ್ಲಿ ಸಹ ದಕ್ಷಿಣ ಕರ್ನಾಟಕವೇ ಮುಂದಿದ್ದು, ಉತ್ತರ ಕರ್ನಾಟಕ ನಿರ್ಲಕ್ಷಿಸಲ್ಪಟ್ಟಿದ್ದು ಇನ್ನೂ ಹೆಚ್ಚು ಮಾಧ್ಯಮಿಕ ಹಾಗೂ ಪದವಿಪೂರ್ವ ಕಾಲೇಜುಗಳನ್ನು ಉತ್ತರ ಕರ್ನಾಟಕ್ಕೆ ಕೊಡುವ ಅವಶ್ಯವಿದೆ.

11. ಕಾಲೇಜುಗಳು : ದಕ್ಷಿಣ ಕರ್ನಾಟಕದಲ್ಲಿ ಸರಕಾರಿ ಕಾಲೇಜುಗಳ ಸಂಖ್ಯೆ 106 ಇದ್ದು, ಉತ್ತರ ಕರ್ನಾಟಕದಲ್ಲಿ ಕೇವಲ 43 ಇದೆ. ವಿವಿಧ ಕಾಲೇಜುಗಳ ಸಂಖ್ಯೆಗಳನ್ನು ನೋಡಿದರೆ ಉತ್ತರ ಕರ್ನಾಟಕಕ್ಕಿಂತ ದಕ್ಷಿಣ ಕರ್ನಾಟಕದಲ್ಲಿಯೇ ಹೆಚ್ಚು ಇದ್ದು ತಾರತಮ್ಯವಿರುವುದರಿಂದ ಉತ್ತರ ಕರ್ನಾಟಕಕ್ಕೆ ಅಲ್ಲಿಯ ಬೇಡಿಕೆಗಳಿಗನುಗುಣವಾಗಿ ಹೆಚ್ಚಿನ ಕಾಲೇಜುಗಳನ್ನು ಕೊಡಬೇಕು.

12. ವಿಶ್ವವಿದ್ಯಾಲಯಗಳು : ದಕ್ಷಿಣ ಕರ್ನಾಟಕದಲ್ಲಿ 7, ಉತ್ತರ ಕರ್ನಾಟಕದಲ್ಲಿ

5 ವಿಶ್ವವಿದ್ಯಾಲಯಗಳು ಇದ್ದು, ಇಲ್ಲಿ ಕೂಡ ತಾರತಮ್ಯ ಇದ್ದು, ಬೇಡಿಕೆಗಳಿಗನುಗುಣವಾಗಿ ಉತ್ತರ ಕರ್ನಾಟಕಕ್ಕೆ ಇನ್ನೂ ಹೆಚ್ಚಿನ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಬೇಕು ಹಾಗೂ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ವಿಸ್ತರಣಾ ಕಾರ್ಯಕ್ರಮಗಳನ್ನು ಪ್ರಾರಂಭಿಸಬೇಕು.

13. ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಘಟಕಗಳು : ದಕ್ಷಿಣ ಕರ್ನಾಟಕದಲ್ಲಿ 1,430 ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಘಟಕಗಳು ಇದ್ದು, ಇವುಗಳಲ್ಲಿ ರೋಗಿಗಳ ಸಲುವಾಗಿ 10,323 ಹಾಸಿಗೆಗಳಿದ್ದು, ದಕ್ಷಿಣ ಕರ್ನಾಟಕಕ್ಕಿಂತ ಹೆಚ್ಚು ಭೌಗೋಳಿಕ ವಿಸ್ತಾರವುಳ್ಳ ಉತ್ತರ ಕರ್ನಾಟಕದ ಜನತೆಗೆ ಸಮೀಪ ಹಾಗೂ ಸಕಾಲದಲ್ಲಿ ಉಪಚಾರ ಅವಶ್ಯವಾಗಬೇಕಾಗಿದ್ದರೂ ಉತ್ತರ ಕರ್ನಾಟಕದಲ್ಲಿ 838 ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಘಟಕಗಳಿದ್ದು ಅವುಗಳಲ್ಲಿ ಕೇವಲ 5,939 ಹಾಸಿಗೆಗಳಿದ್ದು, ಔಷಧ ಉಪಚಾರ ಹಾಗೂ ವಾಹನಗಳ ಸೌಲಭ್ಯ ಸರಿಯಾಗಿರದಿದ್ದರಿಂದ ಉತ್ತರ ಕರ್ನಾಟಕದಲ್ಲಿ ಇನ್ನೂ ಹೆಚ್ಚಿನ ಆರೋಗ್ಯ ಕೇಂದ್ರ ಹಾಗೂ ಘಟಕಗಳನ್ನು ಪ್ರಾರಂಭಿಸಬೇಕು.

14. ನಬಾರ್ಡ್ ರಸ್ತೆ, ಸೇತುವೆ : 96-97, 97-98, 98-99 ಈ ಮೂರು ವರ್ಷದ ಅವಧಿಯಲ್ಲಿ ನಬಾರ್ಡ್ ಸಾಲ ಸಹಾಯ ಮೊತ್ತದಲ್ಲಿ ದಕ್ಷಿಣ ಕರ್ನಾಟಕದಲ್ಲಿ ಉದ್ದೇಶಿತ 239.58 ಕೋಟಿ ಮೊತ್ತದ 636 ಕಾಮಗಾರಿಗಳಲ್ಲಿ ಕೇವಲ 85.80 ಕೋಟಿ ಹಣ ವೆಚ್ಚ ಮಾಡಿ ಕಾಮಗಾರಿಗಳು ಅಪೂರ್ಣವಾಗಿವೆ. ಉತ್ತರ ಕರ್ನಾಟಕದ ವಿಸ್ತಾರ ಹೆಚ್ಚಿಗೆ ಇದ್ದರೂ ಉದ್ದೇಶಿತ 166.50 ಕೋಟಿ ವೆಚ್ಚದ 287 ಕಾಮಗಾರಿಗಳಿಗೆ ಕೇವಲ 61.94 ಕೋಟಿ ಹಣ ವೆಚ್ಚ ಮಾಡಿದ್ದು ಈ ತರಹದ ವೈಫಲ್ಯ ಹಾಗೂ ತಾರತಮ್ಯ ಅಕ್ಷಮ್ಯವಾಗಿದ್ದು ಇನ್ನು ಮುಂದೆ ಹಾಗೆ ಮಾಡದೆ ಎರಡೂ ಕರ್ನಾಟಕದ ಭಾಗವನ್ನು ಒಂದೇ ದೃಷ್ಟಿಯಿಂದ ಭೌಗೋಳಿಕ ವಿಸ್ತಾರಕ್ಕನುಗುಣವಾಗಿ ಎಲ್ಲಾ ಕಾಮಗಾರಿಗಳನ್ನು ಕೈಗೊಳ್ಳಬೇಕು.

15. ಜಿಲ್ಲಾ ಪಂಚಾಯತಿಗಳಿಗೆ ಹಣ : 1995-96ರಿಂದ 99-2000ರ ವರೆಗಿನ 5 ವರ್ಷಗಳ ಅವಧಿಯಲ್ಲಿ ದಕ್ಷಿಣ ಕರ್ನಾಟಕಕ್ಕೆ 9587.46 ಕೋಟಿ, ಉತ್ತರ ಕರ್ನಾಟಕಕ್ಕೆ 6982.76 ಕೋಟಿ ಯೋಜನೆ ಹಾಗೂ ಯೋಜನೇತರ ಮೊತ್ತವನ್ನು ಸರಕಾರ ನಿಗದಿ ಮಾಡಿ ತಾರತಮ್ಯ ಮಾಡಿದೆ. ಈ ಅವಧಿಯಲ್ಲಿ 2604.70 ಕೋಟಿ ಮೊತ್ತವನ್ನು ಉತ್ತರ ಕರ್ನಾಟಕಕ್ಕೆ ಕಡಿತಗೊಳಿಸಲಾಗಿದೆ. ಎಲ್ಲಾ ಜಿಲ್ಲಾ ಪಂಚಾಯತಿಗಳಿಗೆ ನಿಗದಿಗೊಳಿಸಿದ ಹಣದಲ್ಲಿ 95-96, 96-97, 97-98ರಲ್ಲಿ 461.50 ಕೋಟಿ ಮೊತ್ತವನ್ನು ವೆಚ್ಚ ಮಾಡದೆ ಉಳಿಸಿ ಅಭಿವೃದ್ಧಿ ಕುಂಠಿತಗೊಳಿಸಲಾಗಿದೆ. 99-2000ದ ಸಾಲಿನಲ್ಲಿ ಎಲ್ಲಾ ಜಿಲ್ಲಾ ಪಂಚಾಯತಿಗಳಿಗೆ 4,075.31 ಕೋಟಿ ಯೋಜನಾ ಮತ್ತು ಯೋಜನೇತರ ಮೊತ್ತವನ್ನು ನಿಗದಿಗೊಳಿಸಲಾಗಿದ್ದು ಈ ಮೊತ್ತದಲ್ಲಿ ಪಂಚಾಯತಿಗಳ 3.43 ಲಕ್ಷ ಸಿಬ್ಬಂದಿಗೆ 2616.83 ಕೋಟಿ ವೇತನ ಭತ್ಯೆಯನ್ನು ನಿಗದಿಗೊಳಿಸಿದ್ದು ಈ ಮೊತ್ತವನ್ನು ಕೊಟ್ಟು ಉಳಿಯುವ ಕೇವಲ 1,458.38 ಕೋಟಿ ಹಣದಲ್ಲಿ

27 ಜಿಲ್ಲೆಯ ಅಭಿವೃದ್ಧಿ ಹೇಗಾಗಬೇಕು? ಈ ಹಿನ್ನೆಲೆಯಲ್ಲಿ ರಾಜ್ಯ ಸರಕಾರ ಎಲ್ಲಾ ಜಿಲ್ಲಾ ಪಂಚಾಯತಿಗಳಿಗೆ ವೇತನ ಭತ್ಯೆಯ ಮೊತ್ತದ ಜೊತೆಗೆ ಸಾಕಷ್ಟು ಹೆಚ್ಚಿನ ಹಣವನ್ನು ಕೊಟ್ಟು ಗ್ರಾಮೀಣ ಅಭಿವೃದ್ಧಿ, ಪಂಚಾಯತ್‌ರಾಜ್ ಸಂಸ್ಥೆಗಳು ಪರಿಣಾಮಕಾರಿಯಾಗಿ ಅಭಿವೃದ್ಧಿ ಕಾರ್ಯ ಮಾಡಲು ಅನುಕೂಲ ಮಾಡಿಕೊಡುವುದು ಅವಶ್ಯವಾಗಿದೆ. ಈ ದಿಶೆಯಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು.

16. ಗಡಿ ಪ್ರದೇಶಾಭಿವೃದ್ಧಿ : 91ರಿಂದ 96 ಅವಧಿಯ 5 ವರ್ಷದ ಅವಧಿಯಲ್ಲಿ ದಕ್ಷಿಣ ಕರ್ನಾಟಕದ ಗಡಿ ಜಿಲ್ಲೆಗಳಿಗೆ 33.43 ಕೋಟಿ, ಉತ್ತರ ಕರ್ನಾಟಕ ಗಡಿ ಜಿಲ್ಲೆಗಳಿಗೆ 25.93 ಕೋಟಿ ಕೊಟ್ಟಿದ್ದು ತಾರತಮ್ಯವಾಗಿದೆ. ಈ ತಾರತಮ್ಯ ಮುಂದುವರಿಸದೆ ಸರಿಸಮನಾದ ಹೆಚ್ಚಿನ ಮೊತ್ತವನ್ನು ಎರಡೂ ಭಾಗದ ಜಿಲ್ಲೆಗಳಿಗೆ ಕೊಟ್ಟು ಗಡಿ ಪ್ರದೇಶದ ಅಭಿವೃದ್ಧಿಯನ್ನು ಸಾಧಿಸಬೇಕು.

17. ಹತ್ತಿ ವ ಹತ್ತಿ ಗಿರಣಿ : ದಕ್ಷಿಣ ಕರ್ನಾಟಕದಲ್ಲಿ 1.24 ಲಕ್ಷ ಹೆಕ್ಟೇರ್ ಹತ್ತಿ ಬೆಳೆಯುವ ಕ್ಷೇತ್ರವಿದ್ದು 97,085 ವಿದ್ಯುತ್ ವ ಕೈಮಗ್ಗಗಳಿದ್ದು 33 ಹತ್ತಿ ವ ಜವಳಿ ಗಿರಣಿಗಳಿವೆ. ಉತ್ತರ ಕರ್ನಾಟಕದಲ್ಲಿ 5.56 ಲಕ್ಷ ಹೆಕ್ಟೇರ್ ಹತ್ತಿ ಬೆಳೆವ ಕ್ಷೇತ್ರವಿದ್ದು, ನೇಕಾರರ ಸಂಖ್ಯೆ 52,701 ಇದ್ದು 25 ಜವಳಿ ಗಿರಣಿಗಳಿವೆ. 85,236 ವಿದ್ಯುತ್ ವ ಕೈಮಗ್ಗಗಳಿವೆ. ರಾಜ್ಯಾದ್ಯಂತ ಜವಳಿ ಗಿರಣಿ, ನೇಕಾರರು ಹಾಗೂ ಮಗ್ಗಗಳು ಸರ್ವನಾಶದತ್ತ ಸಾಗಿದ್ದು ರಾಜ್ಯಾದ್ಯಂತ ಹತ್ತಿ ಉದ್ಯಮಕ್ಕೆ ಅದರಲ್ಲೂ ವಿಶೇಷವಾಗಿ ಉತ್ತರ ಕರ್ನಾಟಕಕ್ಕೆ ಹೆಚ್ಚಿನ ದರವನ್ನು ಸರ್ಕಾರ ಕೊಡಿಸುವುದು ಅವಶ್ಯ.

18. ಕಬ್ಬಿನ ಕ್ಷೇತ್ರ ಹಾಗೂ ಸಕ್ಕರೆ ಕಾರ್ಖಾನೆ : ದಕ್ಷಿಣ ಕರ್ನಾಟಕದಲ್ಲಿ 1,03,792 ಹೆಕ್ಟೇರ್ ಕಬ್ಬು ಬೆಳೆಯುವವರ ಕ್ಷೇತ್ರವಿದ್ದು 12 ಸಕ್ಕರೆ ಕಾರ್ಖಾನೆಗಳಿವೆ. ಉತ್ತರ ಕರ್ನಾಟಕದಲ್ಲಿ 2,19,570 ಹೆಕ್ಟೇರ್ ಕಬ್ಬಿನ ಕ್ಷೇತ್ರವಿದ್ದು 15 ಸಕ್ಕರೆ ಕಾರ್ಖಾನೆಗಳಿವೆ. ಬಹುತೇಕ ಸಕ್ಕರೆ ಕಾರ್ಖಾನೆಗಳು ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಕಬ್ಬು ಅರೆಯುವುದಿಲ್ಲ. ಸಮರ್ಪಕವಾಗಿ ಕೆಲಸ ಮಾಡದೆ ಕಬ್ಬು ಬೆಳೆಗಾರರಿಗೆ ಸಕಾಲದಲ್ಲಿ ಹಣ ಕೊಡದೆ ಹಾನಿಗೊಳಗಾಗಿದೆ. ಉತ್ತರ ಕರ್ನಾಟಕದಲ್ಲಿರುವ ಸಕ್ಕರೆ ಕಾರ್ಖಾನೆಗಳು ಸರಿಯಾಗಿ ಸಮರ್ಪಕವಾಗಿ ಕಾರ್ಯನಿರ್ವಹಿಸುವಂತೆ ಮಾಡಿ ಅಲ್ಲಿ ಇನ್ನೂ ಹೆಚ್ಚಿನ ಸಕ್ಕರೆ ಕಾರ್ಖಾನೆಗಳನ್ನು ಪ್ರಾರಂಭಿಸಿ ಸಮರ್ಪಕ ಸೇವೆ ಮಾಡುವಂತೆ ಮಾಡಬೇಕು.

19. ಕೈಬಿಟ್ಟ ನೀರಾವರಿ ಯೋಜನೆ : ತುಂಗಾ ಮೇಲ್ದಂಡೆ ವ ಮಾಲತಿ ಮೇಲ್ದಂಡೆ ಯೋಜನೆ, ಮಾಗುಂಡೆ ಮೇಲ್ದಂಡೆ ಯೋಜನೆಗಳನ್ನೊಳಗೊಂಡ ಭದ್ರಾ ಮೇಲ್ದಂಡೆ, ದಂಡಾವತಿ ಯೋಜನೆ, ಮದಗ, ಮಾನೂರ ಯೋಜನೆಗಳು ಬಚಾವತ್ ಅವಾರ್ಡ್ ಪ್ರಕಾರ ನೀರನ್ನು ನಿಗದಿಪಡಿಸಿದ್ದರೂ ಈ ಯೋಜನೆಗಳನ್ನು ಹಿಂದಿನ ಸರ್ಕಾರ ಕೈಬಿಟ್ಟಿದ್ದು ಅವುಗಳನ್ನು ಕೈಗೆತ್ತಿಕೊಳ್ಳಬೇಕು.

20. ಉತ್ತರ ಕರ್ನಾಟಕದಲ್ಲಿ ಆದಷ್ಟು ಬೇಗ **ಹೈಕೋರ್ಟ್ ಪೀಠ** ಹಾಗೂ ನೈಋತ್ಯ **ರೈಲ್ವೆ ವಲಯ**ಗಳನ್ನು ಪ್ರಾರಂಭಿಸಬೇಕು.

21. ಹುಬ್ಬಳ್ಳಿ-ಕಾರವಾರ ರೈಲ್ವೇ ಮಾರ್ಗವನ್ನು ಆದಷ್ಟು ಬೇಗ ಪ್ರಾರಂಭಿಸಬೇಕು.

22. ಕಾರವಾರ ಬಂದರವನ್ನು ಅಭಿವೃದ್ಧಿಗೊಳಿಸಬೇಕು.

23. ಉತ್ತರ ಕರ್ನಾಟಕದಲ್ಲಿಯ **ಐತಿಹಾಸಿಕ ಸ್ಮಾರಕ**ಗಳನ್ನು ವ ಕೇಂದ್ರಗಳನ್ನು ವ ದೇವಾಲಯಗಳನ್ನು ಪುನರುಜ್ಜೀವನಗೊಳಿಸಬೇಕಲ್ಲದೆ ಹೊಸಪೇಟೆ, ಹಂಪಿ, ಐಹೊಳೆ, ಪಟ್ಟದಕಲ್ಲು, ಬಾದಾಮಿ, ಬಸವನ ಬಾಗೇವಾಡಿ ಹಾಗೂ ಇತರ ಸ್ಥಳಗಳ ಅಭಿವೃದ್ಧಿ ಗೊಳಿಸಬೇಕು.

24. ದಕ್ಷಿಣ ಕರ್ನಾಟಕದಲ್ಲಿ 24 ಕೆಎಎಸ್ **ವಿದ್ಯುತ್ ಕೇಂದ್ರ**ಗಳಿದ್ದು, ಉತ್ತರ ಕರ್ನಾಟಕದಲ್ಲಿ 17 ಮಾತ್ರ ಇದ್ದು, ಉತ್ತರ ಕರ್ನಾಟಕದಲ್ಲಿ ಇನ್ನೂ ಹೆಚ್ಚಿನ ವಿದ್ಯುತ್ ಕೇಂದ್ರಗಳನ್ನು ಸ್ಥಾಪಿಸಿ, ಉತ್ತರ ಕರ್ನಾಟಕದ ಕೃಷಿ, ವ್ಯಾಪಾರ, ಉದ್ಯೋಗ, ಉದ್ಯಮಿ ಗಳಿಗೆ ವಿದ್ಯುತ್ ಕೊರತೆ ಉಂಟಾಗದಂತೆ ನೋಡಿಕೊಳ್ಳಬೇಕು.

25. ಹೈನು ಉದ್ಯಮ : ದಕ್ಷಿಣ ಕರ್ನಾಟಕದಲ್ಲಿ 5,331 ಹಾಲು ಉತ್ಪಾದಕರ ಸಹಕಾರ ಸಂಘಗಳಿದ್ದು ಇದು ರೈತರ ಉದ್ಧಾರಕ್ಕೆ ಬಹಳ ಅನುಕೂಲ. ಉತ್ತರ ಕರ್ನಾಟಕದಲ್ಲಿ ಕೇವಲ 2,252 ಸಂಘಗಳಿದ್ದು ರೈತರ ಆರ್ಥಿಕ ಅಭಿವೃದ್ಧಿಗಾಗಿ ಉತ್ತರ ಕರ್ನಾಟಕದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಂಘಗಳನ್ನು ರಚಿಸಬೇಕು.

26. ಪೋಲಿಸ್ ಠಾಣೆ - ದಳಪತಿ : ದಕ್ಷಿಣ ಕರ್ನಾಟಕದಲ್ಲಿ 563 ಪೊಲೀಸ್ ಠಾಣೆಗಳು, 10623 ಗ್ರಾಮರಕ್ಷಕ ದಳಪತಿಗಳಿದ್ದು ಉತ್ತರ ಕರ್ನಾಟಕದಲ್ಲಿ 412 ಪೊಲೀಸ್ ಠಾಣೆಗಳು, 7,087 ಗ್ರಾಮರಕ್ಷಕ ದಳಪತಿಗಳಿದ್ದು ಉತ್ತರ ಕರ್ನಾಟಕಕ್ಕೆ ಹೆಚ್ಚಿನ ಪೊಲೀಸ್ ಠಾಣೆಗಳನ್ನು ಹಾಗೂ ಗ್ರಾಮರಕ್ಷಕ ದಳಗಳನ್ನು ರಚಿಸಬೇಕು.

27. ಅಗ್ನಿಶಾಮಕದಳ ರಚನೆ : ದಕ್ಷಿಣ ಕರ್ನಾಟಕದಲ್ಲಿ 55 ಅಗ್ನಿಶಾಮಕ ದಳಗಳಿದ್ದು, ಉತ್ತರ ಕರ್ನಾಟಕದಲ್ಲಿ 36 ಅಗ್ನಿಶಾಮಕ ದಳಗಳಿವೆ. ಉತ್ತರ ಕರ್ನಾಟಕ್ಕೆ ಇನ್ನೂ ಹೆಚ್ಚಿನ ದಳಗಳನ್ನು ಪ್ರಾರಂಭ ಮಾಡಿ ಪ್ರತಿಯೊಂದು ತಾಲ್ಲೂಕಿಗೂ ಕನಿಷ್ಠ ಒಂದು ಅಗ್ನಿಶಾಮಕ ದಳವನ್ನು ಪ್ರಾರಂಭಿಸಬೇಕು.

28. ರಸ್ತೆ, ಸೇತುವೆ ವೆಚ್ಚ : ರಸ್ತೆ, ಸೇತುವೆ, ಕಟ್ಟಡಗಳಿಗೆ ದಕ್ಷಿಣ ಕರ್ನಾಟಕದಲ್ಲಿ 95-96ರಲ್ಲಿ 100.74 ಕೋಟಿ, 96-97ರಲ್ಲಿ 128.92 ಕೋಟಿ ಹಣ ವೆಚ್ಚ, ಉತ್ತರ ಕರ್ನಾಟಕದಲ್ಲಿ 95-96ರಲ್ಲಿ 73.45 ಕೋಟಿ, 96-97ರಲ್ಲಿ 99.93 ಕೋಟಿ ಹಣ

ವೆಚ್ಚ ಮಾಡಿದ್ದು ತಾರತಮ್ಯವಾಗಿದ್ದು ಈ ತಾರತಮ್ಯವನ್ನು ಹೋಗಲಾಡಿಸಿ ದಕ್ಷಿಣ ಹಾಗೂ ಉತ್ತರ ಕರ್ನಾಟಕ ಭಾಗಗಳೆರಡನ್ನೂ ಒಂದೇ ದೃಷ್ಟಿಯಿಂದ ನೋಡಿ ಅಭಿವೃದ್ಧಿಗೊಳಿಸಬೇಕು.

29. ನೀರಾವರಿ ಪಂಪ್‌ಸೆಟ್‌ಗಳು : ದಕ್ಷಿಣ ಕರ್ನಾಟಕದಲ್ಲಿ 6,26,295 ಐ.ಪಿ. ಸೆಟ್ಟುಗಳಿದ್ದು, ಉತ್ತರ ಕರ್ನಾಟಕದಲ್ಲಿ 4,55,855 ಐ.ಪಿ. ಸೆಟ್ಟುಗಳಿಗೆ ಉತ್ತರ ಕರ್ನಾಟಕ ರೈತರಿಗೆ ಬೇಕಾಗಿರುವ ಇನ್ನೂ ಹೆಚ್ಚಿನ ಸೆಟ್‌ಗಳನ್ನು ಮಂಜೂರು ಮಾಡಿ ತಾರತಮ್ಯ ನೀಗಿಸಬೇಕು.

30. ಹೊಸ ಜಿಲ್ಲೆಗಳಿಗೆ ಅನುಕೂಲತೆ : ಹೊಸ 7 ಜಿಲ್ಲೆಗಳಿಗೆ, ಜಿಲ್ಲೆಯ ಜನತೆಗೆ ಅನುಕೂಲವಾಗುವಂತೆ ಪ್ರತಿ ಜಿಲ್ಲೆಗಳ ಜಿಲ್ಲಾ ಮತ್ತು ಸತ್ರ ನ್ಯಾಯಾಲಯಗಳನ್ನು, ಕೇಂದ್ರ ಜಿಲ್ಲಾ ಸಹಕಾರ ಬ್ಯಾಂಕುಗಳನ್ನು, ಮಾರಾಟ ಸಹಕಾರ ಸಂಘಗಳನ್ನು ಇತರೆ ಎಲ್ಲಾ ಜಿಲ್ಲಾ ಸಂಸ್ಥೆಗಳನ್ನು ರಚಿಸಬೇಕು.

31. ಎಣ್ಣೆ ಗಿರಣಿಗಳ ಸ್ಥಾಪನೆ : ರಾಜ್ಯದಲ್ಲಿ ಸಾಕಷ್ಟು ಕುಸುಬೆ, ಶೇಂಗಾ, ಸೂರ್ಯಕಾಂತಿ, ಪಾಮೊಲಿನ್ ಎಣ್ಣೆ ಮಿಲ್ಲುಗಳನ್ನು ಪ್ರಾರಂಭಿಸಿ ರಾಜ್ಯದ ಜನತೆಗೆ ಉತ್ತಮ ಖಾದ್ಯ ತೈಲ ಸಿಗುವಂತೆ ಮಾಡಬೇಕು. ರೈತರಿಗೆ ಅನುಕೂಲ ಮಾಡಿಕೊಡಬೇಕು.

32. ರಫ್ತು ಬೇಕು - ಆಮದು ಬೇಡ : ಸಕ್ಕರೆ, ಆಹಾರಧಾನ್ಯ, ಎಣ್ಣೆ, ನೂಲುವ ಬಟ್ಟೆ, ರೇಷ್ಮೆ ರಾಜ್ಯದಿಂದ ರಫ್ತಾಗುವಂತೆ ಮಾಡಿ ರೈತರಿಗೆ ಅನುಕೂಲ ವ ತಾರಕವಾಗುವಂತೆ ಮಾಡಬೇಕೇ ಹೊರತು ಯಾವುದೇ ಮಾಲನ್ನು ಆಮದು ಮಾಡಿಕೊಂಡು ರೈತರಿಗೆ ಮಾರಕವಾಗಬಾರದು.

33. ಅಕ್ಷಾಯ್ ಬೇಡ : ರಾಜ್ಯದಲ್ಲಿ ಯಾವುದೇ ಸಂದರ್ಭದಲ್ಲಿಯೂ ಅಕ್ಷಾಯ್ ಪ್ರಾರಂಭಿಸಬಾರದು.

34. ಪಶುವೈದ್ಯ ಸಂಸ್ಥೆಗಳು : ರಾಜ್ಯದ ದಕ್ಷಿಣ ಕರ್ನಾಟಕದಲ್ಲಿ 2,105, ಉತ್ತರ ಕರ್ನಾಟಕದಲ್ಲಿ 1,533 ಪಶುವೈದ್ಯ ಶಾಲೆ ವ ಸಂಸ್ಥೆಗಳಿದ್ದು, ತಾರತಮ್ಯವಾಗಿದ್ದು ಉತ್ತರ ಕರ್ನಾಟಕಕ್ಕೆ ಇನ್ನೂ ಹೆಚ್ಚಿನ ಸಂಸ್ಥೆಗಳನ್ನು ಸ್ಥಾಪಿಸಿ ರಾಜ್ಯಾದ್ಯಂತ ಪಶು ಸಂಪತ್ತನ್ನು ಹಾಗೂ ಹೈನಾಭಿವೃದ್ಧಿಯನ್ನು ಮಾಡಬೇಕು.

35. ಶೀತಲೀಕರಣ ಕೇಂದ್ರ : ಬೆಂಗಳೂರು ವಿಭಾಗದಲ್ಲಿ 3,224 ಮೆಟ್ರಿಕ್ ಟನ್ ಸಂಗ್ರಹಿಸಲು 145, ಉತ್ತರ ಕರ್ನಾಟಕದಲ್ಲಿ 2,011 ಮೆಟ್ರಿಕ್ ಟನ್ ಸಂಗ್ರಹಿಸಲು 80 ಶೀತಲೀಕರಣ ಕೇಂದ್ರಗಳಿದ್ದು ಹಣ್ಣು, ಕಾಯಿ, ತರಕಾರಿ ಇತ್ಯಾದಿ ಮಾಲನ್ನು ಸಂಗ್ರಹಿಸುವ ಅವಶ್ಯಕತೆಯಿದ್ದು, ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ತಾರತಮ್ಯವಿಲ್ಲದೆ ಹೆಚ್ಚಿನ ಸಂಖ್ಯೆಯಲ್ಲಿ ಶೀತಲೀಕರಣ ಕೇಂದ್ರಗಳನ್ನು ಸ್ಥಾಪಿಸಬೇಕು.

36. ಕಾರ್ಖಾನೆಗಳು : ಬಟ್ಟೆ, ರಾಸಾಯನಿಕ, ಇಂಜಿನಿಯರಿಂಗ್ ಇತ್ಯಾದಿ ಕಾರ್ಖಾನೆಗಳು ದಕ್ಷಿಣ ಕರ್ನಾಟಕದಲ್ಲಿ 6,716, ಉತ್ತರ ಕರ್ನಾಟಕದಲ್ಲಿ 2,455 ಇದ್ದು ತಾರತಮ್ಯವಾಗಿದ್ದು ಉತ್ತರ ಕರ್ನಾಟಕಕ್ಕೆ ಇನ್ನೂ ಹೆಚ್ಚಿನ ಈ ಕಾರ್ಖಾನೆಗಳನ್ನು ಸ್ಥಾಪಿಸ ಬೇಕು.

37. ಕೈಗಾರಿಕಾ ಪ್ರದೇಶ ಹಾಗೂ ಶೆಡ್ಡುಗಳು : ದಕ್ಷಿಣ ಕರ್ನಾಟಕದಲ್ಲಿ 80 ಕೈಗಾರಿಕಾ ಪ್ರದೇಶ ಹಾಗೂ 3,987 ಶೆಡ್ಡುಗಳು, ಉತ್ತರ ಕರ್ನಾಟಕದಲ್ಲಿ 62 ಕೈಗಾರಿಗಾ ಪ್ರದೇಶ ಹಾಗೂ 1,514 ಶೆಡ್ಡುಗಳಿದ್ದು ತಾರತಮ್ಯವಾಗಿದ್ದು ಉತ್ತರ ಕರ್ನಾಟಕ ಭಾಗಕ್ಕೆ ಇನ್ನೂ ಹೆಚ್ಚಿನ ಪ್ರದೇಶ ಹಾಗೂ ಶೆಡ್ಡುಗಳನ್ನು ಒದಗಿಸಬೇಕು.

38. ಸಹಕಾರಿ ಸಂಘಗಳ ಸಮಾಪನ : ಸಹಕಾರಿ ಕ್ಷೇತ್ರ ಅವಸಾನದತ್ತ ಸಾಗಿದ್ದು ದಕ್ಷಿಣ ಕರ್ನಾಟಕದಲ್ಲಿ 1,574, ಉತ್ತರ ಕರ್ನಾಟಕದಲ್ಲಿ 1,811 ಕ್ರೆಡಿಟ್ ಹಾಗೂ ನಾನ್ ಕ್ರೆಡಿಟ್ ಸಹಕಾರ ಸಂಘಗಳು, 31.3.97ಕ್ಕೆ ಸಮಾನಗೊಂಡಿರುವ ಈ ಸಮಾಪನ ಸಂಖ್ಯೆ ಉತ್ತರ ಕರ್ನಾಟಕದಲ್ಲಿ ಹೆಚ್ಚಾಗುತ್ತಿದ್ದು ರಾಜ್ಯದ ಯಾವುದೇ ಭಾಗದಲ್ಲಿ ಸಹಕಾರಿ ಸಂಘಗಳು ಸಮಾಪನವಾಗದಂತೆ ನೋಡಕೊಳ್ಳಬೇಕು.

39. ಸಾಕ್ಷರತೆ : ಸಾಕ್ಷರತೆ ಪ್ರಮಾಣ ಬೆಂಗಳೂರು ವಿಭಾಗದಲ್ಲಿ ಶೇಕಡಾ 61.2, ಮೈಸೂರು ವಿಭಾಗದಲ್ಲಿ ಶೇಕಡಾ 58.6, ಬೆಳಗಾವಿ ವಿಭಾಗದಲ್ಲಿ ಶೇಕಡಾ 56.9, ಗುಲ್ಬರ್ಗಾ ವಿಭಾಗದಲ್ಲಿ 40.4 ಇದ್ದು ಈ ತಾರತಮ್ಯ ಹೋಗಲಾಡಿಸಲು ಬೆಳಗಾವಿ ಹಾಗೂ ಗುಲ್ಬರ್ಗಾ ವಿಭಾಗದಲ್ಲಿ ಸೂಕ್ತ ಏರ್ಪಾಡು ಮಾಡಬೇಕಲ್ಲದೆ ಇಡೀ ರಾಜ್ಯದಲ್ಲಿ ಸಾಕಷ್ಟು ಸಾಕ್ಷರತೆ ಪ್ರಮಾಣ ಗರಿಷ್ಠ ಮಿತಿ ಮುಟ್ಟುವಂತೆ ಮಾಡಬೇಕು.

40. ಕುಟುಂಬ ಕಲ್ಯಾಣ ಕೇಂದ್ರ ಹಾಗೂ ಉಪಕೇಂದ್ರ : ಕುಟುಂಬ ಕಲ್ಯಾಣ ಕೇಂದ್ರ ಹಾಗೂ ಉಪಕೇಂದ್ರಗಳ ಸಂಖ್ಯೆ ದಕ್ಷಿಣ ಕರ್ನಾಟಕದಲ್ಲಿ 5,048, ಉತ್ತರ ಕರ್ನಾಟಕದಲ್ಲಿ 3,554 ಇದ್ದು, ಇಲ್ಲಿ ಸಹ ಹಿಂದುಳಿದ ಪ್ರದೇಶವಾದ ಉತ್ತರ ಕರ್ನಾಟಕದಲ್ಲಿ ಇನ್ನೂ ಹೆಚ್ಚಿನ ಸಂಖ್ಯೆಯ ಕೇಂದ್ರಗಳನ್ನು ರಚಿಸಬೇಕು.

41. ಕೊಳವೆ ಬಾವಿ : ಕೊರೆದ ಕೊಳವೆ ಬಾವಿಗಳ ಸಂಖ್ಯೆ ಬೆಂಗಳೂರು ವಿಭಾಗದಲ್ಲಿ 52,008, ಮೈಸೂರು ವಿಭಾಗದಲ್ಲಿ 47,097, ಬೆಳಗಾವಿ ವಿಭಾಗದಲ್ಲಿ 31,662, ಗುಲ್ಬರ್ಗಾ ವಿಭಾಗದಲ್ಲಿ 27,274 ಇದ್ದು ಇಲ್ಲಿ ತಾರತಮ್ಯವಾಗಿದೆ. ಇದನ್ನು ಸರಿಪಡಿಸಿ ತಾರತಮ್ಯ ತೊಲಗಿಸಬೇಕು.

42. ಕೊಳವೆ ನೀರು ಸರಬರಾಜು : ಕೊಳವೆ ನೀರು ಸರಬರಾಜು ಯೋಜನೆಗಳು ಬೆಂಗಳೂರು ವಿಭಾಗದಲ್ಲಿ 3,059, ಮೈಸೂರು ವಿಭಾಗದಲ್ಲಿ 3,375, ಬೆಳಗಾವಿ ವಿಭಾಗದಲ್ಲಿ 3,311, ಗುಲ್ಬರ್ಗಾ ವಿಭಾಗದಲ್ಲಿ 1,987 ಇದ್ದು, ಇಲ್ಲಿ ಗುಲ್ಬರ್ಗಾ ವಿಭಾಗಕ್ಕೆ ಹಾಗೂ ಬೆಳಗಾವಿ ವಿಭಾಗಕ್ಕೆ ಪಕ್ಷಪಾತವಾಗಿದ್ದು ಇದನ್ನು ಸರಿಪಡಿಸಬೇಕು.

43. ಚಿಕ್ಕನೀರು ಸರಬರಾಜು : ಚಿಕ್ಕ ನೀರು ಸರಬರಾಜು ಯೋಜನೆಯಲ್ಲಿ ಬೆಂಗಳೂರು ವಿಭಾಗದಲ್ಲಿ 4,606, ಮೈಸೂರು ವಿಭಾಗದಲ್ಲಿ 3,136, ಬೆಳಗಾವಿ ವಿಭಾಗದಲ್ಲಿ 2,775, ಗುಲ್ಬರ್ಗಾ ವಿಭಾಗದಲ್ಲಿ 2,334 ಇದ್ದು ಇಲ್ಲಿಯೂ ಕಂಡುಬರುವ ತಾರತಮ್ಯವನ್ನು ಸರಿಪಡಿಸಬೇಕು.

44. ಅಂಗನವಾಡಿ ಕೇಂದ್ರ : ಅಂಗನವಾಡಿ ಕೇಂದ್ರಗಳ ಸಂಖ್ಯೆ ಬೆಂಗಳೂರು ವಿಭಾಗದಲ್ಲಿ 11,433, ಮೈಸೂರು ವಿಭಾಗದಲ್ಲಿ 10,740, ಬೆಳಗಾವಿ ವಿಭಾಗದಲ್ಲಿ 10,385, ಗುಲ್ಬರ್ಗಾ ವಿಭಾಗದಲ್ಲಿ 7,174 ಇದ್ದು, ಈ ಅಂಗನವಾಡಿಗಳನ್ನು ಅಭಿವೃದ್ಧಿಗೊಳಿಸಿ ಅಲಕ್ಷಿಸಿರುವ ಭಾಗಕ್ಕೆ ಹೆಚ್ಚಿನ ಅಂಗನವಾಡಿ ಕೇಂದ್ರಗಳನ್ನು ಪ್ರಾರಂಭಿಸಿ, ಅಂಗನವಾಡಿಯ ಶಿಕ್ಷಕಿಯರನ್ನು ಪ್ರಾಥಮಿಕ ಶಾಲಾ ಶಿಕ್ಷಕಿಯರ ಹುದ್ದೆಗೆ ಸೇರಿಸಿ ಅವರಿಗೆ ಹಾಗೂ ಆಯಿಗಳಿಗೆ ಸಮಂಜಸವಾದ ವೇತನ ಭತ್ಯೆಯನ್ನು ಕೊಡಬೇಕು.

45. ಸಣ್ಣ ಕೈಗಾರಿಕಾ ಘಟಕ : ರಾಜ್ಯದಲ್ಲಿ ಸಣ್ಣ ಕೈಗಾರಿಕಾ ಘಟಕಗಳ ಹಾಗೂ ಉದ್ಯೋಗಿಗಳ ಸಂಖ್ಯೆ ಬೆಂಗಳೂರು ವಿಭಾಗದಲ್ಲಿ 90,022 ಹಾಗೂ 6,17,980, ಮೈಸೂರು ವಿಭಾಗದಲ್ಲಿ 50,694 ಹಾಗೂ 2,02,100, ಬೆಳಗಾವಿ ವಿಭಾಗದಲ್ಲಿ 52,341 ಹಾಗೂ 2,93,970, ಗುಲ್ಬರ್ಗಾ ವಿಭಾಗದಲ್ಲಿ 30,254 ಹಾಗೂ 1,53,834 ಇದ್ದು, ಇಲ್ಲಿ ಸಹ ತಾರತಮ್ಯವಾಗಿದ್ದು ಈ ತಾರತಮ್ಯ ಹೋಗಲಾಡಿಸಿ ಎಲ್ಲಾ ಭಾಗದಲ್ಲಿ ಅನೇಕ ಘಟಕಗಳು ಅವಸಾನದ ಅಂಚಿನಲ್ಲಿದ್ದು ಅವುಗಳನ್ನು ಚೇತನಗೊಳಿಸಬೇಕು ಹಾಗೂ ಉದ್ಯೋಗಿಗಳ ಆರ್ಥಿಕ ಪರಿಸ್ಥಿತಿ ಸುಧಾರಿಸುವಂತೆ ನೋಡಿಕೊಳ್ಳಬೇಕು.

46. ಮಹಿಳಾ ಮತ್ತು ಯುವಕ ಮಂಡಳಗಳು : ಬೆಂಗಳೂರು ವಿಭಾಗದಲ್ಲಿ 613 ಮಹಿಳಾ ಮಂಡಳ, 6122 ಯುವಕ ಮಂಡಳ, ಮೈಸೂರು ವಿಭಾಗದಲ್ಲಿ 803 ಮಹಿಳಾ ಮಂಡಳ ಹಾಗೂ 5,143 ಯುವಕ ಮಂಡಳ, ಬೆಳಗಾವಿ ವಿಭಾಗದಲ್ಲಿ 670 ಮಹಿಳಾ ಮಂಡಳ ಹಾಗೂ 7,967 ಯುವಕ ಮಂಡಳ, ಗುಲ್ಬರ್ಗಾ ವಿಭಾಗದಲ್ಲಿ 607 ಮಹಿಳಾ ಮಂಡಳ ಹಾಗೂ 3,754 ಯುವಕ ಮಂಡಳಗಳು ಇದ್ದು, ಪ್ರತಿಯೊಂದು ಗ್ರಾಮದಲ್ಲಿ ಯುವಕ ಹಾಗೂ ಯುವತಿಯರ ಮಂಡಳಗಳಾಗಬೇಕು ಹಾಗೂ ಅವುಗಳಿಗೆ ಎಲ್ಲಾ ರೀತಿಯ ಸಹಾಯ ಮಾಡಿ ಸರಕಾರ ಅವುಗಳನ್ನು ಸಬಲ ಹಾಗೂ ಪ್ರಯೋಜನ ಕಾರಿಯನ್ನಾಗಿ ಮಾಡಬೇಕು. ಇಡೀ ರಾಜ್ಯದಲ್ಲಿ ಕೇವಲ 2,693 ಯುವತಿಯರ ಮಂಡಲವಿರುವುದು ಇಡೀ ರಾಜ್ಯದ ಎಲ್ಲಾ ವಿಭಾಗಗಳಲ್ಲಿ ಹೆಚ್ಚಿನ ಯುವತಿಯರ ಮಂಡಲ ಸ್ಥಾಪಿಸಬೇಕು.

47. ರಾಜ್ಯ ಸಾರಿಗೆ ಬಸ್ಸುಗಳು : ರಾಜ್ಯದಲ್ಲಿಯ ರಾಜ್ಯ ಸಾರಿಗೆ ನಿಗಮವು ಸುಮಾರು 600 ಕೋಟಿಗಿಂತ ಹೆಚ್ಚು ನಷ್ಟದಲ್ಲಿ ಇದ್ದರೂ, ರಾಜ್ಯದ ಎಲ್ಲಾ ಡಿಪೋಗಳಲ್ಲಿ ಸಿಬ್ಬಂದಿಯ ಗೈರು ಹಾಜರಿ, ಬಿಡಿ ಭಾಗಗಳ ಕೊರತೆ, ಕಳಪೆ ಬಿಡಿಭಾಗಗಳು, ಉಪಕರಣಗಳ ಕೊರತೆ, ವೇಳೆಗೆ ಸರಿಯಾಗಿ ಬಸ್ಸುಗಳನ್ನು ಬಿಡದಿರುವುದು, ಮೇಲಿಂದ

ಮೇಲೆ ಶೆಡ್ಯೂಲ್‌ಗಳನ್ನು ರದ್ದು ಮಾಡುವುದು, ಹೊರಟ ಬಸ್ಸುಗಳು ತಲುಪಬೇಕಾಗಿದ್ದ ನಿಗದಿತ ಸ್ಥಳಗಳನ್ನು ತಲುಪದೆ ನಡುಮಧ್ಯದಿಂದಲೇ ಹಿಂತಿರುಗುವುದು, ಪ್ರಯಾಣಿಕರ ಸಂಖ್ಯೆಗನುಗುಣವಾಗಿ ಹೆಚ್ಚಿನ ಬಸ್ಸುಗಳನ್ನು ಒದಗಿಸದಿರುವುದು ಇತ್ಯಾದಿ ಲೋಪದೋಷಗಳ ಪರಿಣಾಮವಾಗಿ ರಾಜ್ಯದ ಜನತೆಗೆ ಸುಖಕರವಾದ ಹಾಗೂ ಸಮಂಜಸವಾದ ಸಂಚಾರ ಸಿಗದೆ ಅತೀವ ತೊಂದರೆಯಾಗಿದ್ದು ಇನ್ನೂ ಹೆಚ್ಚಿನ ಡಿಪೋಗಳನ್ನು ತೆರೆದು ಹೆಚ್ಚಿನ ಬಸ್ಸುಗಳನ್ನು ಒದಗಿಸಿ ಆಡಳಿತ ಸುಧಾರಣೆ ಮಾಡುವುದು ಅಗತ್ಯವಿದ್ದು ಈ ದಿಶೆಯಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು.

48. ತಾರತಮ್ಯ : ಹಿಂದಿನ ರಾಜ್ಯ ಸರ್ಕಾರವು ಮೊದಲನೆಯದಾಗಿ ಕರ್ನಾಟಕದ 27 ಜಿಲ್ಲೆಯ ಅಭಿವೃದ್ಧಿಯನ್ನು ನಿಗದಿತ ಹಣ ವೆಚ್ಚ ಮಾಡದೆ ಕುಂಠಿತಗೊಳಿಸಿದೆ. ಎರಡನೆಯದಾಗಿ ದಕ್ಷಿಣ ಕರ್ನಾಟಕಕ್ಕೆ ಹೋಲಿಸಿದರೆ ಉತ್ತರ ಕರ್ನಾಟಕದ ಅಭಿವೃದ್ಧಿಯನ್ನು ಹೆಚ್ಚಾಗಿ ಕುಂಠಿತಗೊಳಿಸಿದೆಯಲ್ಲದೆ ತಾರತಮ್ಯವಾಗಿದೆ. ಮೂರನೆಯದಾಗಿ ಹೈದರಾಬಾದ್ - ಕರ್ನಾಟಕವನ್ನಂತೂ ಅತಿ ಹೆಚ್ಚು ಕಡೆಗಣಿಸಿದೆ. ಈ ಎಲ್ಲಾ ಅಂಶಗಳನ್ನು ಸರ್ಕಾರದ ಅಧಿಕೃತ ಮಾಹಿತಿಗಳನ್ನು ಅವಲೋಕಿಸಿದರೆ ಸ್ಪಷ್ಟವಾಗುತ್ತದೆ. ಇದನ್ನು ಹೊಸ ಸರ್ಕಾರ ಸರಿಪಡಿಸಬೇಕು.

49. ಸರ್ವಾಂಗೀಣ-ಕುಂಠಿತ-ಅಭಿವೃದ್ಧಿ : ರಸ್ತೆ, ಆಸ್ಪತ್ರೆ, ಕುಡಿಯುವ ನೀರು, ಕೃಷಿ ಮತ್ತು ಕೃಷಿಗೆ ಸಂಬಂಧಪಟ್ಟ ಚಟುವಟಿಕೆ, ತೋಟಗಾರಿಕೆ, ಸಹಕಾರ, ಸಣ್ಣ ಮತ್ತು ಬೃಹತ್ ಕೈಗಾರಿಕೆ, ಅರಣ್ಯ, ಸಂಚಾರ, ವಿದ್ಯುತ್ ಪೂರೈಕೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ವಸತಿ ಸೌಕರ್ಯ, ಗ್ರಾಮಾಭಿವೃದ್ಧಿ, ನಗರಾಭಿವೃದ್ಧಿ, ಸಣ್ಣ ನೀರಾವರಿ, ಬೃಹತ್ ಹಾಗೂ ಮಧ್ಯಮ ನೀರಾವರಿ, ನ್ಯಾಯ ಪರಿಪಾಲನೆ, ಆರಕ್ಷಕ ವ್ಯವಸ್ಥೆ, ಹಿಂದುಳಿದ ಪ್ರದೇಶಗಳ ಅಭಿವೃದ್ಧಿ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಅಭಿವೃದ್ಧಿ, ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಅಭಿವೃದ್ಧಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಮಲೆನಾಡು ಅಭಿವೃದ್ಧಿ, ಬಯಲು ಸೀಮೆ ಅಭಿವೃದ್ಧಿ, ಗಡಿನಾಡು ಅಭಿವೃದ್ಧಿ, ಪಶ್ಚಿಮಘಟ್ಟ ಅಭಿವೃದ್ಧಿ, ಪ್ರಾಥಮಿಕ-ಮಾಧ್ಯಮಿಕ-ಕಾಲೇಜು-ವಿಶ್ವವಿದ್ಯಾನಿಲಯ ಶಿಕ್ಷಣ, ಮೀನುಗಾರಿಕೆ, ರೇಷ್ಮೆ, ಎಣ್ಣೆಕಾಳು, ಸಾಮಾಜಿಕ ಭದ್ರತೆ, ತಾಂತ್ರಿಕ ಹಾಗೂ ಆರೋಗ್ಯ ಶಿಕ್ಷಣ, ವಿವಿಧ ಉದ್ಯಮ, ನಿರುದ್ಯೋಗ ಸಮಸ್ಯೆ ಇತ್ಯಾದಿ ಸಾಮಾನ್ಯ, ಸಾಮಾಜಿಕ ಹಾಗೂ ಆರ್ಥಿಕ ಸೇವೆಗಳ ಸದುಪಯೋಗ ಹಾಗೂ ಅಭಿವೃದ್ಧಿ, ಪ್ರಗತಿ ಹಾಗೂ ಕಲ್ಯಾಣಗೊಳಿಸುವಲ್ಲಿ ಹಿಂದಿನ ಸರ್ಕಾರ ವಿಫಲವಾಗಿ ವಿತ್ತ ನಿರೂಪಣೆ ಪ್ರಕಾರ 1994-95ರಿಂದ 98-99ರ 5 ವರ್ಷಗಳ ಅವಧಿಯಲ್ಲಿ ರೆವಿನ್ಯೂ ವೆಚ್ಚದಲ್ಲಿ 2,605.16 ಕೋಟಿ ಹಣ ವೆಚ್ಚ ಮಾಡಿಲ್ಲ. ಬಂಡವಾಳ ವೆಚ್ಚದಲ್ಲಿ 53.77 ಕೋಟಿ ವೆಚ್ಚ ಮಾಡಿಲ್ಲ. ಸಂಚಿತ ನಿಧಿಯಲ್ಲಿ 5,785 ಕೋಟಿ ವೆಚ್ಚ ಮಾಡಿಲ್ಲ. ಸಿ.ಎ.ಜಿ. ವರದಿಗಳ ಪ್ರಕಾರ ರೆವಿನ್ಯೂ, ಬಂಡವಾಳ,

ಸಾರ್ವಜನಿಕ ಸಾಲ, ಸಾಲ ಮತ್ತು ಮುಂಗಡ, ವೆಚ್ಚವನ್ನು ಬಜೆಟ್ ನಿಗದಿ ಪ್ರಕಾರ ಸಂಪೂರ್ಣ ವೆಚ್ಚ ವ ಬಟವಾಡೆ ಮಾಡದೆ 94-95ರಿಂದ 97-98ರ 4 ವರ್ಷದ ಅವಧಿಯಲ್ಲಿ 10,113.19 ಕೋಟಿ ಹಣವನ್ನು ವೆಚ್ಚ ಮಾಡಿಲ್ಲ.

ರಾಜ್ಯದ ಜಿಲ್ಲಾ ಪಂಚಾಯತಿಗಳಿಗೆ ನಿಗದಿಪಡಿಸಿದ ಯೋಜನೆ ಹಾಗೂ ಯೋಜನೇತರ ಮೊತ್ತದಲ್ಲಿ 95-96, 96-97, 97-98 ಕೇವಲ ಈ 3 ವರ್ಷದ ಅವಧಿಯಲ್ಲಿ 461.49 ಕೋಟಿ ಮೊತ್ತವನ್ನು ವೆಚ್ಚ ಮಾಡಿಲ್ಲ. ಸರಕಾರಿ ಇಲಾಖೆಗಳಿಗೆ ಸಂಬಂಧಿಸಿದ ಶೀರ್ಷಿಕೆ ವ ವಲಯಗಳಾದ ಗ್ರಾಮಾಭಿವೃದ್ಧಿಯಲ್ಲಿ 1,176.38 ಕೋಟಿ, ಭಾರೀ ಮತ್ತು ಮಧ್ಯಮ ನೀರಾವರಿಯಲ್ಲಿ 963.28 ಕೋಟಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣದಲ್ಲಿ 562.22 ಕೋಟಿ, ಬೆಂಗಳೂರು ನಗರಾಭಿವೃದ್ಧಿ 376.80 ಕೋಟಿ, ವಿದ್ಯುತ್ ಯೋಜನೆಯಲ್ಲಿ 395.63 ಕೋಟಿ, ವಸತಿ ಯೋಜನೆಯಲ್ಲಿ 311.15 ಕೋಟಿ, ಕೃಷಿ ಇಲಾಖೆಯಲ್ಲಿ 201.23 ಕೋಟಿ, ಸಣ್ಣ ಉದ್ಯಮದಲ್ಲಿ 276.05 ಕೋಟಿ, ನಗರಾಭಿವೃದ್ಧಿ 264.17 ಕೋಟಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಕಲ್ಯಾಣದಲ್ಲಿ 244.97 ಕೋಟಿ, ಹಿಂದುಳಿದ ಪ್ರದೇಶಾಭಿವೃದ್ಧಿಯಲ್ಲಿ 291.14 ಕೋಟಿ, ಕಟ್ಟಡ ಯೋಜನೆಯಲ್ಲಿ 261.74 ಕೋಟಿ, ಶಿಕ್ಷಣ ಇಲಾಖೆಯಲ್ಲಿ 208.05 ಕೋಟಿ, ಗ್ರಾಮಾಂತರ ನೀರು ಪೂರೈಕೆಯಲ್ಲಿ 197.14 ಕೋಟಿ ಇತ್ಯಾದಿ. ಹೀಗೆ 38 ಇಲಾಖೆಗಳಲ್ಲಿ 7,172.79 ಕೋಟಿ ಮೊತ್ತವನ್ನು 93-94ರಿಂದ 97-98ರ ವರೆಗೆ ವೆಚ್ಚ ಮಾಡದಿರುವುದು ಸಿ.ಎ.ಜಿ. ವರದಿಯಿಂದ ಕಂಡುಬಂದಿದೆ.

ಸರಕಾರಿ ಇಲಾಖೆ ಹಾಗೂ ಜಿಲ್ಲಾ ಪಂಚಾಯತಿಗಳಿಗೆ ಸಂಬಂಧಿಸಿದ ಶೀರ್ಷಿಕೆ ವ ವಲಯಗಳಾದ 2,210ನೇ ವೈದ್ಯಕೀಯ ಜನಾರೋಗ್ಯದಲ್ಲಿ 119.87 ಕೋಟಿ, 2215ನೇ ಕುಡಿಯುವ ನೀರು ಪೂರೈಕೆಯಲ್ಲಿ 84.23 ಕೋಟಿ, 2235ನೇ ಸಾಮಾಜಿಕ ಭದ್ರತೆ ಮಹಿಳೆಯರ ಕಲ್ಯಾಣದಲ್ಲಿ 22.79 ಕೋಟಿ, 2851ನೇ ಗ್ರಾಮೋದ್ಯೋಗದಲ್ಲಿ 56.07 ಕೋಟಿ, 4702ನೇ ಸಣ್ಣ ನೀರಾವರಿಯಲ್ಲಿ 15.50 ಕೋಟಿ, 2515ನೇ ಇತರ ಗ್ರಾಮೀಣಗಳಲ್ಲಿ 34.01 ಕೋಟಿ, 2225ನೇ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳ ಕಲ್ಯಾಣದಲ್ಲಿ 13.40 ಕೋಟಿ, 2202ನೇ ಶಿಕ್ಷಣದಲ್ಲಿ 59.11 ಕೋಟಿ. ಹೀಗೆ 36ರ ಪೈಕಿ 26 ಶೀರ್ಷಿಕೆ ವ ವಲಯ ಇಲಾಖೆಯಲ್ಲಿ ಒಟ್ಟು 574.73 ಕೋಟಿ ಹಣ ಮೊತ್ತವನ್ನು 96-97ರ ಒಂದೇ ವರ್ಷದಲ್ಲಿ ಬಜೆಟ್ ಪ್ರಕಾರ ವೆಚ್ಚ ಮಾಡದೆ ಇರುವುದು ಸರಕಾರದ ಅಧಿಕೃತ ವಿತ್ತ ನಿರೂಪಣೆ ಪ್ರಕಾರ ಖಚಿತವಿದೆ. ಹೀಗೆ ಬಜೆಟ್ ಪ್ರಕಾರ ಮಂಜೂರು ಹಣದಲ್ಲಿಯೇ ಇಡೀ ರಾಜ್ಯದಲ್ಲಿ ದಕ್ಷಿಣ ಕರ್ನಾಟಕದ ಜನತೆಗಷ್ಟೇ ಅಲ್ಲದೆ ಉತ್ತರ ಕರ್ನಾಟಕದ ಜನತೆಗೆ ಸಾಮೂಹಿಕವಾಗಿ ಅಭಿವೃದ್ಧಿಯನ್ನು ಕುಂಠಿತಗೊಳಿಸಲಾಗಿದೆ.

ಈ ಹಿನ್ನೆಲೆಯಲ್ಲಿ ರಾಜ್ಯದ ಅಭಿವೃದ್ಧಿ ಹಿತದೃಷ್ಟಿಯಿಂದ ಸಾಮಾನ್ಯ, ಸಾಮಾಜಿಕ ಹಾಗೂ ಆರ್ಥಿಕ ಸೇವೆಗಳಿಗೆ ಆಯವ್ಯಯದಲ್ಲಿ ಹೆಚ್ಚು ಹಣವನ್ನು ನಿಗದಿ ಮಾಡಿ, ನಿಗದಿ ಮಾಡಿದ ಸಂಪೂರ್ಣ ಹಣವನ್ನು ವೆಚ್ಚ ಮಾಡಿ ಹೊಸ ಸರಕಾರ ಪ್ರಗತಿ ಸಾಧಿಸಬೇಕು. ಅಭಿವೃದ್ಧಿ ಸಾಧನೆಯಲ್ಲಿ ರಾಜ್ಯಾದ್ಯಂತ ಎಲ್ಲಾ ಜಿಲ್ಲೆಗಳಿಗೆ ಹಣ ನಿಗದಿ ಮಾಡುವಲ್ಲಿ ಹಾಗೂ ನಿಗದಿ ಮಾಡಿದ ಹಣವನ್ನು ಸಂಪೂರ್ಣ ಖರ್ಚು ಮಾಡದೆ ಇರುವ ಅಧಿಕಾರಿಗಳ ಮೇಲೆ ಉಗ್ರಕ್ರಮವನ್ನು ತೆಗೆದುಕೊಳ್ಳಬೇಕು ಹಾಗೂ ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ರಾಜ್ಯದ ಯಾವುದೇ ಜಿಲ್ಲೆಗಳಿಗೆ ವ ತಾಲ್ಲೂಕುಗಳಿಗೆ ಪಕ್ಷಪಾತ ಸ್ವಜನ ಪಕ್ಷಪಾತವನ್ನು ಯಾವುದೇ ಸರಕಾರ ಮಾಡಬಾರದು. ರಾಜ್ಯದ ಮಂತ್ರಿಗಳು ಹಾಗೂ ಅಧಿಕಾರಿಗಳು ಸ್ವಾರ್ಥಿಗಳಾಗದೆ, ಪಕ್ಷಪಾತಿಗಳಾಗದೆ, ಭಾಗ ಹಾಗೂ ಭಾಷೆಯ ಭೇದವಿಲ್ಲದೆ, ಅಧಿಕಾರ ದುರುಪಯೋಗ ಮಾಡದೆ, ದುರಾಡಳಿತ ಮಾಡದೆ, ಭ್ರಷ್ಟರಾಗದೆ ಉತ್ತಮ ಆಡಳಿತ ಹಾಗೂ ಅಭಿವೃದ್ಧಿ ಮಾಡುವಲ್ಲಿ ಮುಂದಾಗಬೇಕು. ವಿರೋಧ ಪಕ್ಷದ ನಾಯಕರಾದಿಯಾಗಿ ಎಲ್ಲಾ ವಿರೋಧ ಪಕ್ಷದ ಶಾಸಕರು ರಾಜ್ಯದ ಕಾವಲುಗಾರರಾಗಿ ಆಡಳಿತ ಸರಕಾರದ ಮೇಲೆ ನಿಗಾ ಇಟ್ಟು ವೈಫಲ್ಯಗಳನ್ನು ಬಯಲಿಗೆಳೆದು ಲೋಪದೋಷಗಳನ್ನು ಎತ್ತಿ ತೋರಿಸಿ, ರಾಜ್ಯ ಸರಕಾರದ ಮೇಲೆ ನಿಗಾ ಇಡುವುದು ರಾಜ್ಯದ ಹಿತದೃಷ್ಟಿಯಿಂದ ಅತ್ಯಗತ್ಯ ಹಾಗೂ ಪ್ರಜಾತಂತ್ರ ವ್ಯವಸ್ಥೆಗೆ ಸಹಾಯಕಾರಿ.

50. ತಾರತಮ್ಯ ಹಾಗೂ ನಿರ್ಲಕ್ಷ್ಯ : ಉತ್ತರ ಕರ್ನಾಟಕದಲ್ಲಿ ಅಲ್ಲಲ್ಲಿಯ ಗಣ್ಯರ ಹಾಗೂ ಸಂಘ-ಸಂಸ್ಥೆಗಳ ಅಭಿಪ್ರಾಯಗಳನ್ನು ಹಾಗೂ ಸರಕಾರದ ಯಾವತ್ತೂ ಅಧಿಕೃತ ಸಾಹಿತ್ಯವನ್ನು ಹಾಗೂ ಅಂಕಿ-ಸಂಖ್ಯೆ ಅಂಶಗಳನ್ನು ಗಮನಿಸಿದಾಗ ಒಟ್ಟಿನ ಮೇಲೆ ಇಡೀ ಕರ್ನಾಟಕದ ಸರ್ವಾಂಗೀಣ ಅಭಿವೃದ್ಧಿಗೆ ಬಜೆಟ್‌ನಲ್ಲಿ ಅತಿ ಕಡಿಮೆ ಹಣವನ್ನು ನಿಗದಿಗೊಳಿಸುವುದು ಹಾಗೂ ನಿಗದಿಗೊಳಿಸಿದ ಕಡಿಮೆ ಹಣವನ್ನೇ ಸಂಪೂರ್ಣವಾಗಿ ವೆಚ್ಚ ಮಾಡದೆ ಇರುವುದು ಸಾರ್ವಜನಿಕರ ಬೇಡಿಕೆಗಳಿಗೆ ಗಮನ ಕೊಡದೇ ಇರುವುದು, ಉತ್ತರ ಕರ್ನಾಟಕದ ಬಗ್ಗೆ ಹೆಚ್ಚಿನ ನಿರ್ಲಕ್ಷ್ಯ ಹಾಗೂ ತಾರತಮ್ಯ ಮಾಡಿರುವುದು, ಕರ್ನಾಟಕದಲ್ಲೇ ಹೈದರಾಬಾದ್ ಕರ್ನಾಟಕವನ್ನು ಅತಿ ಹೆಚ್ಚು ನಿರ್ಲಕ್ಷಿಸಿರುವುದು ಹಾಗೂ ಹೆಚ್ಚಿನ ತಾರತಮ್ಯ ಮಾಡಿರುವುದು, ಅದರಲ್ಲಿಯೂ ವಿಶೇಷವಾಗಿ ಪ್ರದೇಶಾಭಿವೃದ್ಧಿಯ ವಿವಿಧ ಮಂಡಳಿಗಳಿಗೆ ಸಾಕಷ್ಟು ಹಣ ಕೊಡದೇ ಇರುವುದು, ಕೊಟ್ಟ ಹಣವನ್ನೇ ವೆಚ್ಚ ಮಾಡದಿರುವುದು ಹಿಂದಿನ ಸರಕಾರದ ನಿಸ್ಸೀಮ ನಿರ್ಲಕ್ಷ್ಯವೆಂಬುದು ಖಾತ್ರಿಯಾಗಿದ್ದು, ಹಿಂದಿನ ಸರಕಾರದ ಈ ಕರ್ತವ್ಯಚ್ಯುತಿ ಖಂಡನೀಯ ಹಾಗೂ ಆಕ್ಷೇಪಾರ್ಹವಾಗಿದ್ದು ಇನ್ನು ಮುಂದಾದರೂ ಈಗ ಅಧಿಕಾರಕ್ಕೆ ಬಂದಿರುವ ಹೊಸ ಸರಕಾರವು ಹೊಣೆಗಾರ ಸರಕಾರವಾಗಿ ರಾಜ್ಯದಲ್ಲಿಯ ಎಲ್ಲಾ ಹಳ್ಳಿಗಳು, ಹೋಬಳಿಗಳು, ತಾಲ್ಲೂಕುಗಳು, ಜಿಲ್ಲೆಗಳು ಹಾಗೂ ವಿಭಾಗಗಳು ಒಂದೇ ಎಂಬ ಭಾವನೆಯಿಂದ, ಎಲ್ಲರೂ ಒಂದೇ ಎಂಬ

ಭಾವನೆಯಿಂದ "ಸರ್ವೇ ಜನಾಃ ಸುಖಿನೋ ಭವಂತು" ಎಂಬ ಸಂಕಲ್ಪದಿಂದ ಸರಕಾರ, ಮಂತ್ರಿಗಳು, ಆಡಳಿತಾರೂಢ ರಾಜಕೀಯ ಪಕ್ಷ ಹಾಗೂ ಅಧಿಕೃತ ರಾಜಕೀಯ ಪಕ್ಷದವರು ಸರಕಾರವನ್ನು ಸರಿಯಾಗಿ ಸರಿದಾರಿಯಲ್ಲಿ ಸಾಗುವಂತೆ ಮಾಡುವುದು ಅತೀ ಅಗತ್ಯವಾಗಿದೆ.

51. ಗ್ರಂಥಾಲಯಗಳು : ರಾಜ್ಯ ಹಾಗೂ ರಾಷ್ಟ್ರದಲ್ಲಿಯ ಆಗು-ಹೋಗುಗಳನ್ನು ತಿಳಿದುಕೊಳ್ಳಲು ಪ್ರತಿಯೊಂದು ಗ್ರಾಮದಲ್ಲಿ ಅಥವಾ ಗ್ರಾಮ ಪಂಚಾಯತಿ ಕೇಂದ್ರಗಳಲ್ಲಿ ಗ್ರಂಥಾಲಯಗಳ ಅವಶ್ಯಕತೆ ಹೆಚ್ಚಿದೆ. ಬೆಂಗಳೂರು ವಿಭಾಗದಲ್ಲಿ 10,968 ಹಳ್ಳಿಗಳು, 1,648 ಗ್ರಾಮ ಪಂಚಾಯತಿಗಳು ಇದ್ದರೂ ಇಲ್ಲಿ 175 ಗ್ರಂಥಾಲಯಗಳಿವೆ. ಮೈಸೂರು ವಿಭಾಗದಲ್ಲಿ 7,310 ಹಳ್ಳಿಗಳು, 1,533 ಗ್ರಾಮ ಪಂಚಾಯತಿಗಳಿದ್ದರೂ ಇಲ್ಲಿ 101 ಗ್ರಂಥಾಲಯಗಳಿವೆ. ಬೆಳಗಾವಿ ವಿಭಾಗದಲ್ಲಿ 4,993 ಹಳ್ಳಿಗಳು 1,508 ಗ್ರಾಮ ಪಂಚಾಯತಿಗಳಿದ್ದರೂ ಇಲ್ಲಿ 157 ಗ್ರಂಥಾಲಯಗಳಿವೆ. ಗುಲ್ಬರ್ಗಾ ವಿಭಾಗದಲ್ಲಿ 3,795 ಹಳ್ಳಿಗಳು, 1,003 ಗ್ರಾಮ ಪಂಚಾಯತಿಗಳಿದ್ದು ಇಲ್ಲಿ ಕೇವಲ 68 ಗ್ರಂಥಾಲಯಗಳಿವೆ. ಗ್ರಾಮಾಂತರ ಜನರನ್ನು ಪ್ರಪಂಚದ, ರಾಷ್ಟ್ರದ, ರಾಜ್ಯದ, ಜಿಲ್ಲೆಯ ಹಾಗೂ ತಾಲ್ಲೂಕುಗಳ ಸುದ್ದಿ ಸಮಾಚಾರಗಳ ಮಾಧ್ಯಮಗಳಿಂದ ಅಂಧಕಾರದಲ್ಲಿಡುವುದು ಯಾವ ಸರಕಾರಕ್ಕೂ ಭೂಷಣವಲ್ಲ. ರಾಜ್ಯದ ಪ್ರತಿಯೊಬ್ಬರೂ ಅವರು ಗ್ರಾಮವಾಸಿಗಳೇ ಇರಲಿ, ನಗರವಾಸಿಗಳೇ ಇರಲಿ ಇವರೆಲ್ಲರೂ ಸರಕಾರದ ಕರದಾತರಿರುವುದರಿಂದ ಅವರಿಗೆ ಜ್ಞಾನೋದಯ ಮಾಡುವುದು ಸರಕಾರದ ಕರ್ತವ್ಯ. ಈ ಹಿನ್ನೆಲೆಯಲ್ಲಿ ಗ್ರಂಥಾಲಯಗಳು ಸಂಚಾರಿ ವಿಶ್ವವಿದ್ಯಾಲಯಗಳಾಗಿರುವುದರಿಂದ ರಾಜ್ಯದ ಪ್ರತಿಯೊಂದು ಗ್ರಾಮಗಳಲ್ಲಿ ಕನಿಷ್ಠ ಒಂದು ಗ್ರಂಥಾಲಯವನ್ನು ಪ್ರಾರಂಭಿಸಿ ಆ ಗ್ರಂಥಾಲಯಗಳನ್ನು ಪ್ರಾಥಮಿಕ ಶಾಲೆಗಳ ಉಸ್ತುವಾರಿ ಹಾಗೂ ಆವಾರಗಳಲ್ಲಿಟ್ಟು ಅವುಗಳಿಗೆ ಸರಕಾರದವರು ಕನಿಷ್ಠ ಒಂದು ಹೆಚ್ಚಿನ ಪ್ರಸಾರವುಳ್ಳ ದಿನಪತ್ರಿಕೆ ಹಾಗೂ ವಾರಪತ್ರಿಕೆಯನ್ನು ಹಾಗೂ ಸರಕಾರದಿಂದ ಪ್ರಕಟವಾಗುವ ಪತ್ರಿಕೆಗಳನ್ನು ಒದಗಿಸಿ ಗ್ರಾಮಾಂತರ ಪ್ರದೇಶಗಳಲ್ಲಿ ಅವುಗಳನ್ನು ಓದಿ ಸುದ್ದಿ ಸಮಾಚಾರ ತಿಳಿದುಕೊಳ್ಳುವುದಕ್ಕೆ ಹಾಗೂ ಅವರ ಸಮಸ್ಯೆಗಳನ್ನು ಪತ್ರಿಕೆಗಳ ಮುಖಾಂತರ ಸರಕಾರಕ್ಕೆ ಅಧಿಕಾರಿಗಳಿಗೆ ತಿಳಿಯುವಂತೆ ಮಾಡಲು ಹೊಸ ಸರಕಾರ ಸೂಕ್ತ ಕ್ರಮ ತೆಗೆದುಕೊಳ್ಳಬೇಕು.

52. ನಿರ್ಮಲ ಯೋಜನೆ : ಗ್ರಾಮಾಂತರ ಪ್ರದೇಶದಲ್ಲಿ ಸಾಮಾಜಿಕ ಸುಧಾರಣೆಯ ಕ್ರಮವಾಗಿದ್ದು 31.5.97ರವರೆಗೆ ಬೆಂಗಳೂರು ವಿಭಾಗದಲ್ಲಿ ಬೇಡಿಕೆ ಗುರಿ 1,50,600, ಸಾಧನೆ 87,730, ಆರ್ಥಿಕ ಗುರಿ 22.65 ಕೋಟಿ, ಸಾಧನೆ 13.47 ಕೋಟಿಯಾಗಿದೆ. ಗುಲ್ಬರ್ಗಾ ವಿಭಾಗದಲ್ಲಿ ಬೇಡಿಕೆ ಗುರಿ 1,03,100, ಸಾಧನೆ 50,781, ಆರ್ಥಿಕ ಗುರಿ 15.20 ಕೋಟಿ, ಸಾಧನೆ 7.61 ಕೋಟಿಯಾಗಿದೆ. ಮೈಸೂರು ವಿಭಾಗದಲ್ಲಿ

ಬೇಡಿಕೆ ಗುರಿ 1,52,000, ಸಾಧನೆ 1,01,879, ಆರ್ಥಿಕ ಗುರಿ 22.42 ಕೋಟಿ, ಸಾಧನೆ 15.54 ಕೋಟಿಯಾಗಿದೆ. ಬೆಳಗಾವಿ ವಿಭಾಗದಲ್ಲಿ ಬೇಡಿಕೆ ಗುರಿ 1,48,400, ಸಾಧನೆ 71,692, ಆರ್ಥಿಕ ಗುರಿ 21.84 ಕೋಟಿ, ಸಾಧನೆ 9.40 ಕೋಟಿಯಾಗಿದೆ. ಹೀಗೆ ಅಲಕ್ಷ್ಯ ಕರ್ತವ್ಯಚ್ಯುತಿ ನಿರ್ಲಕ್ಷ್ಯವಾಗಿದ್ದು ಮುಂದೆ ಹೀಗಾಗದಂತೆ ಎಚ್ಚರಿಕೆ ಅಗತ್ಯ.

53. ಆರಾಧನಾ ಯೋಜನೆ : ಈ ಯೋಜನೆ ರಾಜ್ಯಾದ್ಯಂತ ಜನತೆಯ ಭಕ್ತಿ - ಭಾವನೆ, ಶ್ರದ್ಧೆ, ಮನಸ್ಸಿನ ನೆಮ್ಮದಿಯ ವಿಳಾಸಕ್ಕೆ ಸಹಾಯಕಾರಿಯಾಗಿದ್ದು 1991-92ರಿಂದ 96-97ರವರೆಗೆ **ಆರು ವರ್ಷಗಳ** ಅವಧಿಯಲ್ಲಿ ಬೆಂಗಳೂರು ವಿಭಾಗದಲ್ಲಿ ಬಿಡುಗಡೆ ಯಾದ ಹಣ 11.12 ಕೋಟಿ, ವೆಚ್ಚ 4.28 ಕೋಟಿ, ಮೈಸೂರು ವಿಭಾಗದಲ್ಲಿ ಬಿಡುಗಡೆ ಆದ ಹಣ 8.43 ಕೋಟಿ, ವೆಚ್ಚ 4.91 ಕೋಟಿ. ಬೆಳಗಾವಿ ವಿಭಾಗದಲ್ಲಿ ಬಿಡುಗಡೆ ಆದ ಹಣ 8.72 ಕೋಟಿ, ವೆಚ್ಚ 4.80 ಕೋಟಿ, ಗುಲ್ಬರ್ಗಾ ವಿಭಾಗದಲ್ಲಿ ಬಿಡುಗಡೆ ಆದ ಹಣ 5.87 ಕೋಟಿ, ವೆಚ್ಚ 3.59 ಕೋಟಿ ಹೀಗೆ ದೇವರು-ದೇವತೆಗಳ ಶಿವ-ಪಾರ್ವತಿ ನಿಲಯಗಳನ್ನು ಕಟ್ಟಿಸುವಲ್ಲಿ ಸಹ ಹಿಂದಿನ ಸರಕಾರ ನಿರ್ಲಕ್ಷ್ಯ ಮಾಡಿದ್ದು ಸರಿಯಲ್ಲ. ಆರಾಧನಾ ಯೋಜನೆಯಲ್ಲಿ ಹೊಸ ಸರಕಾರ ಇನ್ನೂ ಹೆಚ್ಚಿನ ಹಣವನ್ನು ನಿಗದಿ ಮಾಡಿ, ಬಿಡುಗಡೆ ಮಾಡಿ, ಬಿಡುಗಡೆ ಮಾಡಿದ ಹಣ ವ್ಯರ್ಥವಾಗದಂತೆ ಹಾಗೂ ಸಂಪೂರ್ಣ ಖರ್ಚಾಗಿ ಆರಾಧನಾ ಯೋಜನೆ ಸರ್ವರಿಗೂ ಕಲ್ಯಾಣಕಾರಿಯಾಗುವಂತೆ ನೋಡಿ ಕೊಳ್ಳಬೇಕು.

54. ನಿವೇಶನ ಹಾಗೂ ವಸತಿ ರಹಿತರು : ರಾಜ್ಯಾದ್ಯಂತ ಜನತೆಗೆ ನಿವೇಶನಗಳ ಹಾಗೂ ವಸತಿಗಳ ಸಮಸ್ಯೆ ವಿಪರೀತವಾಗಿ ಅವರು ಪಡುತ್ತಿರುವ ಕಷ್ಟ ಅವರ್ಣನೀಯ. 1996-99ರ ಅವಧಿಯಲ್ಲಿ ಬೆಂಗಳೂರು ವಿಭಾಗದಲ್ಲಿ ನಿವೇಶನ ರಹಿತರ ಸಂಖ್ಯೆ 70,830 ಇವರಲ್ಲಿ ನಿವೇಶನ ಪಡೆದವರ ಸಂಖ್ಯೆ 14,393. ಮನೆರಹಿತರ ಸಂಖ್ಯೆ 48,211, ಮನೆ ಪಡೆದವರ ಸಂಖ್ಯೆ 5,236. ಮೈಸೂರು ವಿಭಾಗದಲ್ಲಿ ನಿವೇಶನ ರಹಿತರ ಸಂಖ್ಯೆ 2,62,118, ನಿವೇಶನ ಪಡೆದವರ ಸಂಖ್ಯೆ 1,49,296, ಮನೆರಹಿತರ ಸಂಖ್ಯೆ 2,23,459, ಮನೆಗಳನ್ನು ಪಡೆದವರ ಸಂಖ್ಯೆ 40,919. ಬೆಳಗಾವಿ ವಿಭಾಗದಲ್ಲಿ ನಿವೇಶನರಹಿತರ ಸಂಖ್ಯೆ 11,93,451, ನಿವೇಶನ ಪಡೆದವರ ಸಂಖ್ಯೆ 60,946. ಮನೆರಹಿತರ ಸಂಖ್ಯೆ 1,24,154, ಮನೆ ಪಡೆದವರ ಸಂಖ್ಯೆ 34,548. ಗುಲ್ಬರ್ಗಾ ವಿಭಾಗದಲ್ಲಿ ನಿವೇಶನರಹಿತರ ಸಂಖ್ಯೆ 2,10,470, ನಿವೇಶನ ಪಡೆದವರ ಸಂಖ್ಯೆ 56,591, ಮನೆರಹಿತರ ಸಂಖ್ಯೆ 1,55,858, ಮನೆಗಳನ್ನು ಪಡೆದವರ ಸಂಖ್ಯೆ 27,608. ಹೀಗೆ ಈ ಯೋಜನೆ ಆಮೆ ವೇಗದಲ್ಲಿ ನಡೆದಿದ್ದು ಗುಲ್ಬರ್ಗಾ ವಿಭಾಗದಲ್ಲಿ ಶೋಚನೀಯವಾಗಿದೆ. ಇದಕ್ಕೆಲ್ಲ ಹಿಂದಿನ ಜಿಲ್ಲಾ ಉಸ್ತುವಾರಿ ಮಂತ್ರಿಗಳು, ವಸತಿ ಮಂತ್ರಿಗಳು ಸಂಬಂಧಿಸಿದವರ ಬೇಜವಾಬ್ದಾರಿ, ಅದಕ್ಷತೆ, ಅಸಮರ್ಥತೆಯ ಪರಿಣಾಮವಾಗಿ

ರಾಜ್ಯಾದ್ಯಂತ ನಿವೇಶನ ರಹಿತರು, ಮನೆ ರಹಿತರು ಪರದಾಡುವಂತಾಗಿದೆ. ಅದರ ಶಾಪ ಹಿಂದಿನ ಸರಕಾರಕ್ಕೆ ತಟ್ಟಿದೆ. ಈ ದಿಶೆಯಲ್ಲಿ ಹೊಸ ಸರಕಾರ ಹಾಗೂ ರಾಜಕೀಯ ಪಕ್ಷಗಳ ಧುರೀಣರು ಎಚ್ಚೆತ್ತು ನಿವೇಶನ ಹಂಚಿಕೆ ಹಾಗೂ ಮನೆಗಳ ವಿತರಣೆಯ ಕಾರ್ಯವನ್ನು ಮುಂಬರುವ ಅವಧಿಯಲ್ಲಿ ಚಾಚೂ ತಪ್ಪದೆ ಪೂರ್ತಿಗೊಳಿಸಬೇಕು.

55. ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯ ಸಾಧುವಲ್ಲ : ಉತ್ತರ ಕರ್ನಾಟಕವನ್ನು ದಕ್ಷಿಣ ಕರ್ನಾಟಕಕ್ಕೆ ಹೋಲಿಸಿದರೆ ಉತ್ತರ ಕರ್ನಾಟಕದಲ್ಲಿ ಅದರಲ್ಲೂ ವಿಶೇಷವಾಗಿ ಹೈದರಾಬಾದ್-ಕರ್ನಾಟಕದಲ್ಲಿ ನಿಗದಿತ ಹಣ ಕಡಿಮೆ. ನಿಗದಿತ ಕಡಿಮೆ ಹಣವನ್ನು ಸಂಪೂರ್ಣವಾಗಿ ವೆಚ್ಚ ಮಾಡಿಲ್ಲ. ಭೌತಿಕ ಗುರಿಯ ಸಾಧನೆ ಶೋಚನೀಯ ವಾಗಿದೆ. ಸಾಧನೆ ಸಮರ್ಪಕವಿಲ್ಲ, ತಾರತಮ್ಯವಾಗಿರುವುದು ಸುಸ್ಪಷ್ಟ. ಈ ಕಾರಣ ದಿಂದಲೇ ಮನನೊಂದು ಅಲ್ಲಲ್ಲಿ ಕೆಲವರು ಪ್ರತ್ಯೇಕ ಉತ್ತರ ಕರ್ನಾಟಕದ ರಚನೆಗೆ ಕೇಳುತ್ತಿದ್ದಾರೆ. ಉತ್ತರ ಕರ್ನಾಟಕದ ಅಭಿವೃದ್ಧಿಯನ್ನು ಅಲಕ್ಷ್ಯ ಮಾಡದೆ ತಾರತಮ್ಯ ಮಾಡದೆ ಹೆಚ್ಚಿನ ಹಣ ನೀಡಿ ಅಭಿವೃದ್ಧಿಗೊಳಿಸದರೆ ಹಾಗೂ ಉತ್ತರ ಕರ್ನಾಟಕದವರ ಸಮಂಜಸವಾದ ಬೇಡಿಕೆಗಳತ್ತ ಸರಕಾರ ಗಮನ ಕೊಟ್ಟು ಈಡೇರಿಸಿಕೊಟ್ಟರೆ ಯಾರೂ ಪ್ರತ್ಯೇಕ ರಾಜ್ಯಕ್ಕೆ ಒತ್ತಾಯಿಸಲಾರರು. ಈ ದಿಶೆಯಲ್ಲಿ, ಈಗಿನ ಅಖಂಡ ಕರ್ನಾಟಕವನ್ನು ವಿಂಗಡಿಸಿ ಪ್ರತ್ಯೇಕ ಉತ್ತರ ಕರ್ನಾಟಕ ರಚಿಸುವ ಅವಶ್ಯಕತೆಯಿರುವುದಿಲ್ಲ. ಈ ಹಿನ್ನೆಲೆ ಯಲ್ಲಿ ಹೊಸ ಸರಕಾರ, ಮಂತ್ರಿಗಳು, ಶಾಸಕರು, ಸಂಸದರು, ಅಧಿಕಾರಿಗಳು ಹಾಗೂ ರಾಜಕೀಯ ಪಕ್ಷಗಳ ನಾಯಕರು ಕಾರ್ಯಶೀಲರಾಗಿ ಕಾರ್ಯಪ್ರವೃತ್ತರಾಗುವುದು ಒಳ್ಳೆಯದು.

56. ಆಮದು-ರಫ್ತು ನೀತಿ : ರಾಜ್ಯದ ಜನತೆ ಆರ್ಥಿಕವಾಗಿ ಸಬಲರಾಗುವುದು ಅಗತ್ಯವಿರುವುದರಿಂದ ಹತ್ತಿ, ಕಬ್ಬು, ರೇಷ್ಮೆ, ಆಹಾರಧಾನ್ಯ, ಎಣ್ಣೆಕಾಳು, ಹಣ್ಣು-ಹಂಪಲು, ಮೆಣಸಿನಕಾಯಿ ಬೆಳೆಗಾರರಿಗೆ ಪ್ರೋತ್ಸಾಹ ನೀಡಿ ಉತ್ಪಾದನೆ ಹೆಚ್ಚಿಸಿ ಉತ್ಪಾದನೆಗಳನ್ನು ರಫ್ತುಮಾಡಿ ಬೆಳೆಗಾರರಿಗೆ ಹಾಗೂ ಸರಕಾರಕ್ಕೆ ಆದಾಯ ಬರುವಂತೆ ಮಾಡಬೇಕೇ ಹೊರತು ಪರದೇಶದಿಂದ ಸಕ್ಕರೆ, ರೇಷ್ಮೆ, ಆಹಾರಧಾನ್ಯ, ಎಣ್ಣೆ, ಬಟ್ಟೆ ಇತ್ಯಾದಿಗಳನ್ನು ಆಮದು ಮಾಡಿಕೊಂಡು ರೈತರಿಗೆ ಅನ್ಯಾಯ ಮಾಡುವುದನ್ನು ಹೊಸ ಸರ್ಕಾರ ಕೈಬಿಡಬೇಕು.

57. ಡೊನೇಶನ್ ರದ್ದಾಗಬೇಕು : ರಾಜ್ಯದಲ್ಲಿ ಎಲ್ಲಾ ವಿಭಾಗಗಳಲ್ಲಿ ಖಾಸಗಿ ವಿದ್ಯಾಸಂಸ್ಥೆಗಳಲ್ಲಿ ಡೊನೇಶನ್ ಹಾವಳಿ ಹೆಚ್ಚಾಗಿದ್ದು ಕಂಡುಬಂದಿದ್ದು ಜನಸಾಮಾನ್ಯರಿಗೆ ಹೇಳಲಾರದ ತೊಂದರೆಯಾಗಿದೆ. ಈ ದಿಶೆಯಲ್ಲಿ ಹೊಸ ಸರಕಾರ ಎಲ್ಲಾ ಹಂತದ ಡೊನೇಶನ್ ಪದ್ಧತಿಗೆ ಕಡಿವಾಣ ಹಾಕುವುದು ಅವಶ್ಯವಿದೆ.

58. ಅನುದಾನ ರಹಿತ ಸಂಸ್ಥೆ - ಅನುದಾನ ಸಹಿತವಾಗಬೇಕು : ರಾಜ್ಯಾದ್ಯಂತ ಎಲ್ಲಾ ವಿಭಾಗಗಳಲ್ಲಿ ಹಿಂದಿನ ಸರಕಾರವು ಅನುದಾನ-ರಹಿತ ಸಂಸ್ಥೆಗಳನ್ನು ಮಂಜೂರು ಮಾಡಿದ್ದು, ಈ ಸಂಸ್ಥೆಗಳಲ್ಲಿ ನೌಕರಿ ಮಾಡುವ ಸಿಬ್ಬಂದಿಗೆ ವೇತನ ಭತ್ಯೆ ಇಲ್ಲದೆ ಆರ್ಥಿಕ ಸಂಕಷ್ಟಕ್ಕೆ ಈಡಾಗಿದ್ದಾರೆ. ಇದರ ದುಷ್ಪರಿಣಾಮವಾಗಿ ಶಿಕ್ಷಣದ ಮಟ್ಟ ಅಧೋಗತಿಗೆ ಇಳಿದಿದೆ. ಶಿಕ್ಷಣದ ಸುಧಾರಣೆ ಹಾಗೂ ನೌಕರರ ಹಿತದೃಷ್ಟಿಯಿಂದ ಅನುದಾನ ರಹಿತ ಸಂಸ್ಥೆಗಳನ್ನೆಲ್ಲಾ - ಅನುದಾನ ಸಹಿತವೆಂದು ಹೊಸ ಸರಕಾರ ತೀರ್ಮಾನಿಸಿ ಅನುದಾನವನ್ನು ನೀಡಬೇಕು.

59. ಬೇಡಿಕೆಗಳನ್ನು ಈಡೇರಿಸುವುದು : ಪ್ರಜಾತಂತ್ರ ವ್ಯವಸ್ಥೆಯಲ್ಲಿ ಸಾರ್ವಜನಿಕರು ಸಾರ್ವಜನಿಕ ಹಿತಾಸಕ್ತಿಯ ವಿವಿಧ ವಿಚಾರಗಳನ್ನು ಸರಕಾರಕ್ಕೆ ವ ಅಧಿಕಾರಿಗಳಿಗೆ ನೇರವಾಗಿ ಇಲ್ಲವೆ ಪತ್ರಿಕೆಗಳ ಮುಖಾಂತರ ವ್ಯಕ್ತಪಡಿಸುತ್ತಾರೆ. ವಿವಿಧ ಪತ್ರಿಕೆಗಳು ಸಹ ತಮ್ಮ ಸಂಪಾದಕೀಯ ಹಾಗೂ ಸಾರ್ವಜನಿಕರ ಲೇಖನಗಳ ಮುಖಾಂತರ ಸರಕಾರಗಳ ಗಮನ ಸೆಳೆಯುತ್ತಾರೆ. ಈ ದಿಸೆಯಲ್ಲಿ ಸರಕಾರವು ಅವೆಲ್ಲವುಗಳನ್ನು ಪರಾಮರ್ಶಿಸಿ ಗಣನೆಗೆ ತೆಗೆದುಕೊಂಡು ಸೂಕ್ತ ಹಾಗೂ ಅಗತ್ಯವಾದ ಕ್ರಮವನ್ನು ಸಕಾಲದಲ್ಲಿ ತೆಗೆದುಕೊಂಡು ಜನಾಭಿಪ್ರಾಯ ಹಾಗೂ ಬೇಡಿಕೆಗಳಿಗೆ ಒತ್ತು ಕೊಡುವುದು ಒಳ್ಳೆಯದು.

60. ಅತಿವೃಷ್ಟಿ ಹಾನಿ : ದಿನಾಂಕ 6.11.98ರ ಸರಕಾರದ ಹೇಳಿಕೆ ಪ್ರಕಾರ ಇಡೀ ರಾಜ್ಯದಲ್ಲಿ 706.90 ಕೋಟಿಯಷ್ಟು ಅತಿವೃಷ್ಟಿ ಹಾನಿಯಾಗಿದ್ದು ಕೇವಲ 67.01 ಕೋಟಿ ಹಾನಿಯನ್ನು ಬಿಡುಗಡೆ ಮಾಡಲಾಗಿದೆ. ಬೆಂಗಳೂರು ವಿಭಾಗದಲ್ಲಿ ಆದ ಹಾನಿ 173.03 ಕೋಟಿ, ಕೊಟ್ಟ ಹಣ 7.17 ಕೋಟಿ. ಮೈಸೂರು ವಿಭಾಗದಲ್ಲಿ ಆದ ಹಾನಿ 132.86 ಕೋಟಿ, ಕೊಟ್ಟ ಹಣ 10.32 ಕೋಟಿ. ಬೆಳಗಾವಿ ವಿಭಾಗದಲ್ಲಿ ಆದ ಹಾನಿ 146.10 ಕೋಟಿ, ಕೊಟ್ಟ ಹಣ 12.47 ಕೋಟಿ. ಗುಲ್ಬರ್ಗಾ ವಿಭಾಗದಲ್ಲಿ ಆದ ಹಾನಿ 345.11 ಕೋಟಿ, ಕೊಟ್ಟ ಹಣ 26.06 ಕೋಟಿ. ಹೀಗಾದರೆ ತೊಂದರೆಗೊಳಗಾದವರು ಹೇಗೆ ಬದುಕಬೇಕು? ಹಾನಿಗೀಡಾದವರಿಗೆ ಸಾಕಷ್ಟು ಸಮಂಜಸವಾದ ಮೊತ್ತವನ್ನು ಸರಕಾರದವರು ಕೊಡಲೇಬೇಕು. ಈ ದಿಶೆಯಲ್ಲಿ ಸೂಕ್ತ ಕ್ರಮ ಇನ್ನು ಮುಂದೆ ಸಹ ಅಗತ್ಯ.

61. ಸಹಕಾರಿ ಸಾಲ : ರಾಜ್ಯದ ರೈತರಿಗೆ ಸಾಕಷ್ಟು ಸಾಲ ಸಿಗುತ್ತಿಲ್ಲ. ಸಾಲ ಬೇಕಾದವರನ್ನು ಹೊಸದಾಗಿ ಪತ್ತಿನ ಸಹಕಾರಿ ಸಂಘಗಳ ಸದಸ್ಯರನ್ನಾಗಿ ಮಾಡಿಕೊಳ್ಳುತ್ತಿಲ್ಲ. ಕೇವಲ ಮತಗಳಿಗಾಗಿ ಸದಸ್ಯರನ್ನು ಮಾಡಿಕೊಳ್ಳದೆ ಸಾಲ ಬೇಕಾದವರನ್ನೆಲ್ಲಾ ಸದಸ್ಯರನ್ನಾಗಿ ಮಾಡಿಕೊಂಡು ಅವರಿಗೆ ಸಾಲ ಕೊಡುವಂತಾಗಬೇಕು. 1997-98ರಲ್ಲಿ ಬೆಂಗಳೂರು ವಿಭಾಗದಲ್ಲಿ 448.90 ಕೋಟಿ, ಮೈಸೂರು ವಿಭಾಗದಲ್ಲಿ 243.34 ಕೋಟಿ, ಬೆಳಗಾವಿ ವಿಭಾಗದಲ್ಲಿ 383.04 ಕೋಟಿ, ಗುಲ್ಬರ್ಗಾ ವಿಭಾಗದಲ್ಲಿ ಕೇವಲ 96.86 ಕೋಟಿ ಮೊತ್ತದ

ಅಲ್ಪಾವಧಿ, ಮಧ್ಯಮಾವಧಿ ಹಾಗೂ ದೀರ್ಘಾವಧಿ ಸಾಲ ಕೊಟ್ಟಿದ್ದು ಇದು ಸಮರ್ಪಕವಾಗಿರದೆ ಎಲ್ಲಾ ಭಾಗಗಳಲ್ಲಿ ಹೆಚ್ಚಿನ ಸಾಲವನ್ನು ಕಡಿಮೆ ಬಡ್ಡಿದರದ ಮೇಲೆ ಕೊಟ್ಟು ರೈತನ ಒಕ್ಕಲುತನವನ್ನು ಸುಧಾರಿಸಬೇಕು.

62. **ಸಾಮಾಜಿಕ ಪಿಡುಗು** : ಎಲ್ಲಾ ಹಂತದಲ್ಲಿ ಗ್ರಾಮದಿಂದ ಹಿಡಿದು ಹೋಬಳಿ, ತಾಲ್ಲೂಕು, ವಿಭಾಗ, ಜಿಲ್ಲೆ ಹಾಗೂ ರಾಜ್ಯಮಟ್ಟದಲ್ಲಿ ಭ್ರಷ್ಟಾಚಾರ, ಪಕ್ಷಪಾತ, ಸ್ವಜನ ಪಕ್ಷಪಾತ, ಅಧಿಕಾರ ದುರುಪಯೋಗ, ದುರಾಡಳಿತ, ಸ್ವಾರ್ಥ, ನಿರುದ್ಯೋಗ, ಬಡತನ, ಆಡಳಿತ-ಕುಸಿತ, ಅಭಿವೃದ್ಧಿ-ಕುಂಠಿತವಾಗಿದ್ದು ಜನಜೀವನ ತೊಂದರೆದಾಯಕವಾಗಿದ್ದು, ಈ ಸಾಮಾಜಿಕ ಪಿಡುಗುಗಳನ್ನು ತೊಲಗಿಸುವುದು ಅಗತ್ಯವಾಗಿರುವುದರಿಂದ ನೂತನ ಸರಕಾರ ಹಾಗೂ ಅಧಿಕೃತ ರಾಜಕೀಯ ಪಕ್ಷಗಳು ಸೂಕ್ತ ಕ್ರಮ ತೆಗೆದುಕೊಳ್ಳಬೇಕು.

63. ದಕ್ಷಿಣ ಹಾಗೂ ಉತ್ತರ ಕರ್ನಾಟಕದಲ್ಲಿ ಪ್ರತ್ಯೇಕ ಲೋಕಸೇವಾ ಆಯೋಗ, ಪ್ರತ್ಯೇಕ ಎಸ್.ಎಸ್.ಎಲ್.ಸಿ. ಬೋರ್ಡ್ ರಚನೆಯಾಗಬೇಕು ಇಲ್ಲವೇ ಇವುಗಳಿಂದ ರಾಜ್ಯದ ಯಾವುದೇ ಜಿಲ್ಲೆಗೆ ಅನ್ಯಾಯ, ಅನಾನುಕೂಲ, ತಾರತಮ್ಯವಾಗದಂತೆ ನೋಡಿಕೊಳ್ಳಬೇಕು.

64. **ವಿಮಾನಯಾನ** : ರಾಜ್ಯದ ನಾಲ್ಕೂ ವಿಭಾಗೀಯ ಕೇಂದ್ರ ಸ್ಥಳದಿಂದ - ಕೇಂದ್ರ ಸ್ಥಳಕ್ಕೆ ವಿಮಾನಯಾನದ ಅನುಕೂಲತೆ ದೊರೆಯಬೇಕು.

65. **ಸಂಚಾರ ಸುವ್ಯವಸ್ಥೆ** : ರಾಜ್ಯದ ಜನತೆಯ ಹಿತದೃಷ್ಟಿಯಿಂದ ಹೆಚ್ಚಿನ ಸಾರಿಗೆ ಬಸ್ಸುಗಳನ್ನು, ಹೆಚ್ಚಿನ ರೈಲುಗಾಡಿಗಳನ್ನು, ಹೆಚ್ಚಿನ ವಿಮಾನಗಳನ್ನು ಓಡಾಡಿಸಿ ಸಾರಿಗೆ ಸಂಚಾರವನ್ನು ಸಮರ್ಪಕವಾಗುವಂತೆ ನೋಡಿಕೊಳ್ಳಬೇಕು. ಸಾರ್ವಜನಿಕರ ಬೇಡಿಕೆಗನುಗುಣವಾಗಿ ಹೊಸ ರೈಲ್ವೆ ಮಾರ್ಗ, ಹೊಸ ಬಸ್‌ಮಾರ್ಗ ಹೆಚ್ಚಿನ ರೈಲ್‌ಗಾಡಿ, ಹೆಚ್ಚಿನ ಬಸ್ಸು, ಹೆಚ್ಚಿನ ವಿಮಾನ ಅವಕಾಶಗಳನ್ನು ಪ್ರಾರಂಭಿಸಬೇಕು.

66. **ಗಿರಣಿಗಳ ಉದ್ಧಾರ** : ರಾಜ್ಯದ ಎಲ್ಲಾ ಭಾಗಗಳಲ್ಲಿ, ಹತ್ತಿ ಗಿರಣಿ, ಕಬ್ಬಿನ ಗಿರಣಿ, ಎಣ್ಣೆ ಗಿರಣಿ, ಉಣ್ಣೆ ಗಿರಣಿ, ಸಿಮೆಂಟ್ ಗಿರಣಿ, ಅಕ್ಕಿ ಗಿರಣಿ, ನೂಲಿನ ಗಿರಣಿ ಇತ್ಯಾದಿ ಗಿರಣಿಗಳೆಲ್ಲಾ ಅವಸಾನದ ಅಂಚಿನಲ್ಲಿದ್ದು, ಅವೆಲ್ಲವುಗಳ ಸೇವೆ ಉತ್ಪಾದಕರಿಗೆ ಹಾಗೂ ಗ್ರಾಹಕರಿಗೆ ಸರಿಯಾಗಿ ಸಿಗುವಂತಾಗಬೇಕು.

67. **ಸಾರ್ವಜನಿಕ ಉದ್ಯಮಗಳು** : ಸಾರ್ವಜನಿಕರಿಗೆ ಬಹಳ ಉಪಯುಕ್ತವಾಗಿರುವ ಅನೇಕ ಸರಕಾರಿ ಸಾರ್ವಜನಿಕ ಉದ್ಯಮಗಳು ಸಮರ್ಪಕ ವ್ಯವಹಾರ ಮಾಡದೆ ಭಾರೀ ನಷ್ಟದಲ್ಲಿದ್ದು ಅವಸಾನದ ಅಂಚಿನಲ್ಲಿದೆ. ಅನಾವಶ್ಯಕವಾಗಿ ಹೆಚ್ಚಿನ ಸಂಖ್ಯೆಯಲ್ಲಿ

ಹೊಸ ಹೊಸ ನಿಗಮಗಳನ್ನು ರಚಿಸುವುದನ್ನು ಬಿಟ್ಟು ಇದ್ದ ನಿಗಮಗಳು ಸಮರ್ಪಕವಾಗಿ ಲಾಭದಾಯಕವಾಗಿ ಕಾರ್ಯ ನಿರ್ವಹಿಸುವಂತೆ ನಿಗಾ ವಹಿಸಬೇಕು.

68. ಪಂಚಾಯತಿಗಳ ಕಾರ್ಯ : ರಾಜ್ಯದಲ್ಲಿಯ ಗ್ರಾಮ ಪಂಚಾಯತ್, ತಾಲ್ಲೂಕು ಪಂಚಾಯತ್, ಜಿಲ್ಲಾ ಪಂಚಾಯತಿಗಳು ಸಮರ್ಪಕವಾಗಿ ಕೆಲಸ ನಿರ್ವಹಿಸುತ್ತಿಲ್ಲ. ಅವುಗಳಿಗೆ ಆರ್ಥಿಕ ಸಂಪನ್ಮೂಲ ಕಡಿಮೆ ಇದ್ದು, ಇದ್ದ ಸಂಪನ್ಮೂಲದ ಹಣವನ್ನೇ ಪೂರ್ತಿಯಾಗಿ ವೆಚ್ಚ ಮಾಡುತ್ತಿಲ್ಲ. ಎಲ್ಲಾ ಹಂತದ ಪಂಚಾಯತಿಗಳಲ್ಲಿ ಅಕ್ರಮ, ದುಂದುವೆಚ್ಚ, ಅನಾವಶ್ಯಕ ಖರೀದಿ, ಕೆಲಸ ಮಾಡದಿದ್ದರೂ ಮಾಡಲಾಗಿದೆಯೆಂದು ಹಣ ವೆಚ್ಚ ಮಾಡುತ್ತಿದ್ದು, ಇದೆಲ್ಲವೂ ನಿಂತು ಎಲ್ಲಾ ಪಂಚಾಯತಿಗಳು ಸರ್ಮಕವಾಗಿ ಕೆಲಸ ಮಾಡುವಂತೆ ಹೊಸ ಸರಕಾರ ಕ್ರಮ ತೆಗೆದುಕೊಳ್ಳಬೇಕು.

69. ಒಮ್ಮತ ಸಾರ್ವಜನಿಕ ಸೇವೆ : ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೇ ಪ್ರಭುಗಳು. ಅವರ ಸರ್ವಾಂಗೀಣ ಅಭಿವೃದ್ಧಿ, ರಕ್ಷಣೆ, ಪೋಷಣೆ ಹಾಗೂ ಆರ್ಥಿಕ ಅಭಿವೃದ್ಧಿಗೊಳಿಸಿ ಉತ್ತಮ ಪ್ರಾಮಾಣಿಕ ಆಡಳಿತ ಕೊಟ್ಟು ಪ್ರಜಾತಂತ್ರ ವ್ಯವಸ್ಥೆಯನ್ನು ಸುವ್ಯವಸ್ಥೆಗೊಳಿಸುವುದೇ ಪ್ರಜಾಪ್ರತಿನಿಧಿಗಳ ಪ್ರಜಾ ಸರಕಾರದ ಮೂಲ ಉದ್ದೇಶ. ಈ ಉದ್ದೇಶ ಸಾಧಿಸುವಲ್ಲಿ ಪ್ರತಿಯೊಬ್ಬ ಜನತಾ ಪ್ರತಿನಿಧಿಗಳು, ಗ್ರಾಮ ಪಂಚಾಯತಿ ಸದಸ್ಯರೇ ಇರಲಿ, ತಾಲ್ಲೂಕು ಪಂಚಾಯತಿ ಸದಸ್ಯರೇ ಇರಲಿ, ಜಿಲ್ಲಾ ಪಂಚಾಯತ್ ಸದಸ್ಯರೇ ಇರಲಿ, ಪುರಸಭೆ-ನಗರಸಭೆ-ನಗರಪಾಲಿಕೆ ಸದಸ್ಯರೇ ಇರಲಿ, ವಿಧಾನಸಭಾ ಸದಸ್ಯರೇ ಇರಲಿ, ವಿಧಾನಪರಿಷತ್ ಸದಸ್ಯರೇ ಇರಲಿ, ಲೋಕಸಭಾ-ರಾಜ್ಯಸಭಾ ಸದಸ್ಯರೇ ಇರಲಿ, ಶಾಸಕಾಂಗ ಕಾರ್ಯಾಂಗದ ಅಗ್ರಗಣ್ಯರೇ ಇರಲಿ, ಅವರೆಲ್ಲರೂ ಪ್ರಾಮಾಣಿಕರಾಗಿ, ಸ್ವಾರ್ಥಿಗಳಾಗದೆ, ಪಕ್ಷಪಾತಿಗಳಾಗದೆ, ಸ್ವಜನ ಪಕ್ಷಪಾತಿಗಳಾಗದೆ, ಅಧಿಕಾರ ದುರುಪಯೋಗ ಮಾಡದೆ, ದುರಾಡಳಿತ ಮಾಡದೆ, ಭ್ರಷ್ಟರಾಗದೆ, ರಾಗ-ದ್ವೇಷವಿಲ್ಲದೆ, ಯಾವುದೇ ಭಾಷೆ ಜಾತಿ, ಪ್ರದೇಶ ಭೇದ ಭಾವವಿಲ್ಲದೆ ತಮ್ಮ ತಮ್ಮ ಸಾರ್ವಜನಿಕ ಸೇವೆ ಮಾಡಿದರೆ ಅದು ಸಾರ್ಥಕ. ಈ ದಿಶೆಯಲ್ಲಿ ಎಲ್ಲರೂ ಗಮನಹರಿಸಿ ಕಾರ್ಯಪ್ರವೃತ್ತರಾದರೆ ರಾಜ್ಯದ ಜನತೆ ಅವರಿಗೆ ಕೃತಜ್ಞ.

❑

ರಾಜ್ಯ ಆಡಳಿತ-ಅಭಿವೃದ್ಧಿ ಮತ್ತು ಮುಖ್ಯಮಂತ್ರಿಗಳ ಪಾತ್ರ

ಬ್ರಿಟಿಷ್ ಆಳ್ವಿಕೆಪೂರ್ವ ಪಾಳೇಗಾರರ ಹಾಗೂ ಸ್ವಾತಂತ್ರಪೂರ್ವ ಸಂಸ್ಥಾನಿಕರ ಹಾಗೂ ವಸಾಹತುದಾರರ ಆಳ್ವಿಕೆ ಮಾಯವಾಗಿ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕು ಅಳಿದುಳಿದ ರಾಜ, ಮಹಾರಾಜ, ನವಾಬ, ನಿಜಾಮರಾದಿಯಾಗಿ ಭಾರತ ಒಕ್ಕೂಟದಲ್ಲಿ ವಿಲೀನರಾಗಿ ಭಾರತ ದೇಶಾದ್ಯಂತ ಪ್ರಜಾಸತ್ತೆ ಜಾರಿಗೆ ಬಂದು ಸಂವಿಧಾನಬದ್ಧ ಪ್ರಜಾರಾಜ್ಯ ಕೇಂದ್ರದಲ್ಲಿ ಹಾಗೂ ರಾಜ್ಯಗಳಲ್ಲಿ 1952ರಿಂದ ಅಸ್ತಿತ್ವದಲ್ಲಿ ಬಂದಿದೆ. ಈ ರಾಷ್ಟ್ರದ ಪ್ರಜೆಗಳೇ ಈಗ ರಾಷ್ಟ್ರದ ದೊರೆಗಳು, ರಾಜರು ಹಾಗೂ ಸಾಮ್ರಾಟ ಚಕ್ರವರ್ತಿಗಳು. ಈ ಪ್ರಜಾರಾಜಾಧಿರಾಜರ ಚುನಾಯಿತ ಪ್ರತಿನಿಧಿಗಳೇ ಪ್ರಧಾನ ಮಂತ್ರಿಯ ಮುಖಾಂತರ ಕೇಂದ್ರ ಸರಕಾರವನ್ನು ಹಾಗೂ ಮುಖ್ಯಮಂತ್ರಿಯ ಮುಖಾಂತರ ರಾಜ್ಯ ಸರಕಾರಗಳನ್ನು ನಡೆಸುತ್ತಿದ್ದಾರೆ. ಸರಕಾರಗಳ ಮುಖ್ಯ ಉದ್ದೇಶ ರಾಷ್ಟ್ರಾದ್ಯಂತ ಹಾಗೂ ರಾಜ್ಯಾದ್ಯಂತ ಉತ್ತಮ ಆಡಳಿತ ಹಾಗೂ ಸರ್ವಾಂಗೀಣ ಅಭಿವೃದ್ಧಿಯನ್ನು ಸಾಧಿಸುವುದಿರುತ್ತದೆ. ಈ ಆಡಳಿತ ಹಾಗೂ ಅಭಿವೃದ್ಧಿಯ ಸಲುವಾಗಿ ಸಾಕಷ್ಟು ಹಣ ಕೇಂದ್ರ ಹಾಗೂ ರಾಜ್ಯ ಸರಕಾರಗಳಿಗೆ ಅಗತ್ಯವಾಗಿದ್ದು ಈ ಹಣವನ್ನು ಯಾವ್ಯಾವ ಮೂಲಗಳಿಂದ ಎಷ್ಟೆಷ್ಟು ಪಡೆಯಬೇಕು ಹಾಗೂ ಯಾವ್ಯಾವ ಉದ್ದೇಶಗಳಿಗೆ ಎಷ್ಟೆಷ್ಟು ವೆಚ್ಚ ಮಾಡಬೇಕೆಂಬುದನ್ನು ಸರಕಾರಗಳು ಗೊತ್ತುಪಡಿಸಿ ಈ ಆಯವ್ಯಯವನ್ನು ಕೇಂದ್ರ ಸರಕಾರ ಸಂಸತ್ತಿನಲ್ಲಿ, ರಾಜ್ಯ ಸರಕಾರ ವಿಧಾನ ಮಂಡಲದಲ್ಲಿ ಪ್ರತಿವರ್ಷ ಮಂಡಿಸಬೇಕಾಗುತ್ತದೆ. ಲೋಕಸಭೆ ಲೋಕಸಭಾಧ್ಯಕ್ಷರ ಅಧ್ಯಕ್ಷತೆಯಲ್ಲಿ, ರಾಜ್ಯಸಭೆ ರಾಜ್ಯ ಸಭಾಧ್ಯಕ್ಷರ ಅಧ್ಯಕ್ಷತೆಯಲ್ಲಿ ಸೇರಿ ಬಜೆಟ್ ಅಧಿವೇಶನದಲ್ಲಿ ಶೀರ್ಷಿಕೆವಾರು ಸುದೀರ್ಘವಾಗಿ ಚರ್ಚಿಸಿ ಆಯವ್ಯಯಕ್ಕೆ ಮಂಜೂರಿ ಕೊಡಬೇಕಾಗುತ್ತದೆ. ಕೇಂದ್ರ ಹಾಗೂ ರಾಜ್ಯ ಸರಕಾರಗಳು ಅಂಗೀಕಾರ ಪಡೆದ ಆಯವ್ಯಯದ ಪ್ರಕಾರ ಹಣವನ್ನು ಶೇಖರಣೆ ಮಾಡಿ ವೆಚ್ಚ ಮಾಡಬೇಕಾಗುತ್ತದೆ. ಇದೆಲ್ಲದರ ಹೊಣೆ ರಾಷ್ಟ್ರಮಟ್ಟದಲ್ಲಿ ಕೇಂದ್ರ ಸರಕಾರದ ಪ್ರಧಾನಿ

ಮಂತ್ರಿಗಳದ್ದಾಗಿದ್ದರೆ, ರಾಜ್ಯಮಟ್ಟದಲ್ಲಿ ರಾಜ್ಯ ಸರಕಾರದ ಮುಖ್ಯಮಂತ್ರಿಗಳದಾಗಿರುತ್ತದೆ. ಕೇಂದ್ರ ಹಾಗೂ ರಾಜ್ಯ ಸರಕಾರಗಳು ತೆರಿಗೆ ರಾಜಸ್ವ, ತೆರಿಗೆರಹಿತ ರಾಜಸ್ವ, ಸಹಾಯಾನುದಾನ ಮತ್ತು ಅಂಶದಾನಗಳು, ಸಾರ್ವಜನಿಕ ಋಣ, ಸಾಲ ಮತ್ತು ಮುಂಗಡಗಳು, ಕಾಂಟೆಂಜನ್ಸಿ ಫಂಡ್, ಸಾರ್ವಜನಿಕ ಲೆಕ್ಕ ಪ್ರಾರಂಭದ ಶಿಲ್ಕು ಹೀಗೆ ಒಟ್ಟಾರೆ ಆಯವನ್ನು ಪಡೆದು ಪಡೆದ ಈ ಆಯವನ್ನು ಸಾಮಾನ್ಯ ಸೇವೆ, ಸಾಮಾಜಿಕ ಸೇವೆ, ಆರ್ಥಿಕ ಸೇವೆ, ಸಹಾಯಾನುದಾನಗಳು ಮತ್ತು ಅಂಶದಾನಗಳು, ಸಾಮಾನ್ಯ, ಸಾಮಾಜಿಕ ಹಾಗೂ ಆರ್ಥಿಕ ಸೇವೆಗಳ ಬಂಡವಾಳ ವೆಚ್ಚ, ಸಾರ್ವಜನಿಕ ಋಣ, ಸಾಲ ಮತ್ತು ಮುಂಗಡ, ಕಾಂಟೆಂಜನ್ಸಿ ಫಂಡ್ ಹಾಗೂ ಸಾರ್ವಜನಿಕ ಲೆಕ್ಕದ ಕೊನೆಯ ಶಿಲ್ಕು ಸೇರಿ ವ್ಯಯ ಮಾಡಬೇಕಾಗುತ್ತದೆ. ಕೇಂದ್ರ ಸರಕಾರ ಈ ಸಾರಿ 2000-2001ರ ಚಾಲೂ ವರ್ಷದಲ್ಲಿ ಮೇಲೆ ಹೇಳಿದ ಎಲ್ಲಾ ಮೂಲಗಳಿಂದ ಆರಂಭದ ಶಿಲ್ಕು ಸೇರಿ 9,50,496.54 ಕೋಟಿ ಮೊತ್ತದ ಆಯವನ್ನು ಶೇಖರಿಸಿ ಉದ್ದೇಶಿತ ಮೇಲೆ ಹೇಳಿದ ಎಲ್ಲಾ ಚಟುವಟಿಕೆಗಳಿಗೆ ಕೊನೆಯ ಶಿಲ್ಕು ಸೇರಿ ಅಷ್ಟೇ 9,50,496.54 ಕೋಟಿ ಮೊತ್ತದ ವ್ಯಯವನ್ನು ಮಾಡಬೇಕಾಗುತ್ತದೆ. ಕೇಂದ್ರ ಸರಕಾರ 98-99ರಲ್ಲಿ ವಾಸ್ತವಿಕವಾಗಿ 8,15,275.58 ಕೋಟಿ ಆಯವ್ಯಯ ಮಾಡಿರುತ್ತದೆ. ಇದೆಲ್ಲಾ ಆಯವ್ಯಯದ ಹೊಣೆ ಪ್ರಧಾನ ಮಂತ್ರಿ ಹಾಗೂ ಆರ್ಥಿಕ ಮಂತ್ರಿಗಳದಿರುತ್ತದೆ.

ನಮ್ಮ ರಾಜ್ಯ ಸರಕಾರ ಈ ಸಾರಿ 2000-2001ರ ಚಾಲೂ ವರ್ಷದಲ್ಲಿ ಮೇಲೆ ಹೇಳಿದ ಎಲ್ಲಾ ಮೂಲಗಳಿಂದ ಆರಂಭದ ಶಿಲ್ಕು ಸೇರಿ 35,678.92 ಕೋಟಿ ಮೊತ್ತದ ಆಯವನ್ನು ಶೇಖರಿಸಿ ಉದ್ದೇಶಿತ ಮೇಲೆ ಹೇಳಿದ ಎಲ್ಲಾ ಚಟುವಟಿಕೆಗಳಿಗೆ ಕೊನೆಯ ಖೋತಾ ಶಿಲ್ಕು 650.70 ಕೋಟಿ ಸೇರಿ ಅಷ್ಟೇ 35,678.92 ಕೋಟಿ ಮೊತ್ತದ ವ್ಯಯವನ್ನು ಮಾಡಬೇಕಾಗುತ್ತದೆ. ರಾಜ್ಯದ ಇದೆಲ್ಲಾ ಆಯವ್ಯಯದ ಹೊಣೆ ರಾಜ್ಯದ ಆರ್ಥಿಕ ಮಂತ್ರಿಗಳೂ ಆಗಿರುವ ಮುಖ್ಯಮಂತ್ರಿಗಳದಿರುತ್ತದೆ. ರಾಜ್ಯದ ರೆವಿನ್ಯೂ ಆದಾಯುವನ್ನು ಸಾವಾನ್ಯ ಸೇವೆ, ಸಾವಾಜಿಕ ಸೇವೆ, ಆರ್ಥಿಕ ಸೇವೆ, ಸಹಾಯಾನುದಾನಗಳು ಮತ್ತು ಅಂಶದಾನಗಳಿಗಾಗಿ ನಿಗದಿತ ಬಜೆಟ್ ಪ್ರಕಾರ ವೆಚ್ಚ ಮಾಡಬೇಕಾಗುತ್ತದೆ. ವಿಧಾನ ಮಂಡಲದಿಂದ ಅಂಗೀಕಾರವಾದ ಪ್ರಕಾರ ರೆವಿನ್ಯೂ ವ್ಯಯ ಮೊತ್ತವನ್ನು ವೆಚ್ಚ ಮಾಡದೆ ಉದ್ದೇಶಿತ ಸೇವೆಗಳ ಅಭಿವೃದ್ಧಿ ಸಾಧಿಸದೆ ಹೋದರೆ ರಾಜ್ಯದ ಜನತೆಗೆ ಉಪಕಾರ ಮಾಡದೆ ಅಪಕಾರ, ಅನ್ಯಾಯ ಮಾಡಿ ಸೌಲಭ್ಯ, ಸೌಕರ್ಯ, ಸಹಾಯಗಳ ಅಪಹರಣ ಮಾಡಿದಂತಾಗುವುದಿಲ್ಲವೇ? ವೆಚ್ಚ ಮಾಡಬೇಕಾಗಿದ್ದ ರೆವಿನ್ಯೂ ಹಣದಲ್ಲಿ 97-98ರಲ್ಲಿ 1153.26 ಕೋಟಿ, 98-99ರಲ್ಲಿ 1749.12 ಕೋಟಿ, 99-2000ದಲ್ಲಿ 887.78 (ತಾತ್ಕಾಲಿಕ) ಕೋಟಿ ಆಯ ಪಡೆಯದೆ, ವಾಸ್ತವಿಕವಾಗಿ ವೆಚ್ಚ ಮಾಡದೆ ಬಿಟ್ಟದ್ದೇಕೆ? ಅಂತೆಯೇ ರೆವಿನ್ಯೂ ಸೇವೆಗಳಾದ ಸಾಮಾನ್ಯ, ಸಾಮಾಜಿಕ,

ಆರ್ಥಿಕ, ಸಹಾಯಾನುದಾನ ಮತ್ತು ಅಂಶದಾನ, ಬಂಡವಾಳ ಸೇವೆಗಳಾದ ಸಾಮಾನ್ಯ, ಸಾಮಾಜಿಕ, ಆರ್ಥಿಕಸೇವೆಗಳಿಗೆ, ಸಾರ್ವಜನಿಕ ಋಣಗಳಿಗೆ, ಸಾಲ ಮತ್ತು ಮುಂಗಡಗಳಿಗೆ ಹೀಗೆ ಈ ಎಲ್ಲವುಗಳಿಗೆ ವೆಚ್ಚ ಮಾಡಬೇಕಾಗಿದ್ದ ಒಟ್ಟಾರೆ ಸಂಚಿತ ನಿಧಿ ಹಣದಲ್ಲಿ 97-98ರಲ್ಲಿ 1701.35 ಕೋಟಿ, 98-99ರಲ್ಲಿ 2121.02 ಕೋಟಿ, 99-2000ದಲ್ಲಿ 2287.31 (ತಾತ್ಕಾಲಿಕ) ಕೋಟಿ ಮೊತ್ತವನ್ನು ವಾಸ್ತವಿಕವಾಗಿ ವೆಚ್ಚ ಮಾಡದೆ ಬಿಟ್ಟಿದ್ದೇಕೆ? ಈ ಎಲ್ಲ ಗಂಭೀರವಾದ ಕರ್ತವ್ಯಲೋಪಕ್ಕೆ ಹಿಂದಿನ ಸರಕಾರ ಹಾಗೂ 99-2000ದಲ್ಲಿಯೇ ಅರ್ಧ ವರ್ಷ ಮುಗಿದ ಮೇಲೆ ಅಧಿಕಾರಕ್ಕೆ ಬಂದಿರುವ ಈಗಿನ ಮುಖ್ಯಮಂತ್ರಿಗಳನ್ನೊಳಗೊಂಡ 43 ಜನ ಮಂತ್ರಿಗಳ ಸರಕಾರ ಹೊಣೆಗಾರರಲ್ಲವೇ? ಬಜೆಟ್ ಪ್ರಕಾರ ಸಂಪೂರ್ಣ ಹಣ ವೆಚ್ಚ ಮಾಡದೆ ಬಿಡುವಲ್ಲಿ ಬಹುತೇಕ ಮಂತ್ರಿಗಳು ಪೈಪೋಟಿ ನಡೆಸುತ್ತಿರುವುದು ರಾಜ್ಯದ ಜನತೆಯ ದುರ್ದೈವ. ಸಹಕಾರ ಇಲಾಖೆಗಾಗಿಯೇ ಒಬ್ಬ ಮಂತ್ರಿ, ರಾಜ್ಯದಲ್ಲಿ ಸುಮಾರು 27 ಸಾವಿರಕ್ಕೂ ಹೆಚ್ಚು ಸಹಕಾರ ಸಂಘಗಳಿವೆ. 4385 ಜನ ಸರಕಾರಿ-ಸಹಕಾರಿ ಸಿಬ್ಬಂದಿ ಅಧಿಕಾರಿಗಳಿದ್ದಾರೆ. ಸಹಕಾರಿ ಇಲಾಖೆ, ರೆವಿನ್ಯೂ ಹಾಗೂ ಬಂಡವಾಳ ವೆಚ್ಚಕ್ಕಾಗಿ 98-99ರಲ್ಲಿ ಅಂದಾಜು 54.20 ಕೋಟಿ, ಪರಿಷ್ಕೃತ 52.25 ಕೋಟಿ, ವಾಸ್ತವಿಕ 42.44 ಕೋಟಿ ವ್ಯಯ ತೋರಿಸಲಾಗಿದೆ. 99-2000ದಲ್ಲಿ ವೆಚ್ಚಕ್ಕಾಗಿ ಅಂದಾಜು 58.96 ಕೋಟಿ, ಪರಿಷ್ಕೃತ 49.75 ಕೋಟಿ ತೋರಿಸಲಾಗಿದೆ. 2000-2001ರಲ್ಲಿ ವೆಚ್ಚಕ್ಕಾಗಿ ಕೇವಲ 51.93 ಕೋಟಿ ಮಾತ್ರ ಅಂದಾಜು ತೋರಿಸಲಾಗಿದೆ. ಈ ಮೊತ್ತದಲ್ಲಿ ಆಡಳಿತಕ್ಕಾಗಿ ಶೇಕಡಾ 70, ಅಭಿವೃದ್ಧಿಗಾಗಿ ಶೇಕಡಾ 30, ರಾಜ್ಯಾದ್ಯಂತ ಬಹುತೇಕ ಸಹಕಾರಿ ಸಂಸ್ಥೆಗಳು ಅವಸಾನದ ಅಂಚಿನಲ್ಲಿವೆ. ಈ ಇಲಾಖೆಯ ವೈಖರಿ ಈ ಒಂದು ಉದಾಹರಣೆ ಮಾತ್ರ, ಇಂತಹ ಇನ್ನೂ ಅನೇಕ ಇಲಾಖೆಗಳಿವೆ. ಬಜೆಟ್‌ನಲ್ಲಿ ತೋರಿಸಿದ ಅಂದಾಜು ಮೊತ್ತವನ್ನು ಸಂಪೂರ್ಣವಾಗಿ ವೆಚ್ಚ ಮಾಡಿ ನಿಗದಿತ ಅಭಿವೃದ್ಧಿ ಸಾಧಿಸುವಲ್ಲಿ ಸರಕಾರದ ವೈಫಲ್ಯವೇಕೆ? ಮುಖ್ಯಮಂತ್ರಿಗಳ ಹಾಗೂ ಇನ್ನುಳಿದ ಮಂತ್ರಿಗಳ ಜವಾಬ್ದಾರಿಯೇನು? ಈ ಎಲ್ಲ ಕರ್ತವ್ಯಲೋಪ ಅನೇಕ ರಾಜ್ಯಗಳಲ್ಲಿದ್ದು, ಹೀಗೆಯೇ ಮುಂದುವರೆದರೆ ಪ್ರಜಾತಂತ್ರ ವ್ಯವಸ್ಥೆಯ ಉಪಯೋಗ ವಾದರೂ ಏನು? ಸರಕಾರಗಳನ್ನು ಸರಿಯಾಗಿ ನಡೆಸದೆ ತನ್ನ ಅಮೂಲ್ಯವಾದ ವೇಳೆಯನ್ನು ಸದುಪಯೋಗಪಡಿಸಿಕೊಳ್ಳದೆ ಹೋದರೆ ರಾಜ್ಯಗಳ ಆಡಳಿತ ಅಭಿವೃದ್ಧಿ ರಾಜ್ಯಗಳ ಜನತೆಗೆ ಮಾರಕವಾದೀತೆಂಬುದನ್ನು ಹೇಳುವುದು ಅನಿವಾರ್ಯ. ಮುಖ್ಯಮಂತ್ರಿಗಳಾದವರು ತಮ್ಮ ಮಂತ್ರಿ ಮಂಡಳದಲ್ಲಿಯ ಎಲ್ಲಾ ಮಂತ್ರಿಗಳನ್ನು ಹದ್ದುಬಸ್ತಿನಲ್ಲಿಟ್ಟು ಅವರವರ ಇಲಾಖೆಗೆ ನಿಗದಿಪಡಿಸಿದ ಹಣವೆಲ್ಲವನ್ನು ಪ್ರಾಮಾಣಿಕವಾಗಿ ವೆಚ್ಚ ಮಾಡಿ ಅವರವರ ಇಲಾಖೆಯ ಉದ್ದೇಶಿತ ಕಾರ್ಯಚಟುವಟಿಕೆಗಳನ್ನು ಸಂಪೂರ್ಣವಾಗಿ ಕಾರ್ಯಗತ ಮಾಡುವಂತೆ ಎಚ್ಚರಿಸುವುದಗತ್ಯ. ಅಸಮರ್ಥ, ಅದಕ್ಷರನ್ನು ನ್ಯಾಯನಿಷ್ಠುರಿಗಳಾಗಿ ಯಾವುದೇ ರಾಜಕಾರಣ

ಹಾಗೂ ಧರ್ಮಕಾರಣಿಗಳ ಮುಲಾಜಿಗೆ ಒಳಗಾಗದೆ ದಾಕ್ಷಿಣ್ಯಪರರಾಗದೆ ಕೈಬಿಡುವುದು ರಾಜ್ಯಗಳ ಹಿತದೃಷ್ಟಿಯಿಂದ ಒಳ್ಳೆಯದು. ಅಂತೆಯೇ ದಕ್ಷ ಹಾಗೂ ಸಮರ್ಥ ಮಂತ್ರಿಗಳನ್ನು ಯಾವುದೇ ರಾಜಕಾರಣಿ ಹಾಗೂ ಧರ್ಮಕಾರಣಿಗಳ ಅನುಚಿತ ಒತ್ತಾಯಕ್ಕೆ ಮಣಿದು ಕೈಬಿಡುವುದು ಸಹ ಒಳ್ಳೆಯದಲ್ಲ. ಕಾರ್ಯಾಂಗದ ಅಧಿಪತಿ ಅಗ್ರಗಣ್ಯರಾದ ಈ ರಾಷ್ಟ್ರದ ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳು ಅಧಿಕಾರಿಶಾಹಿಯನ್ನು ಹದ್ದುಬಸ್ತಿನಲ್ಲಿಟ್ಟುಕೊಂಡು ಸರಿಯಾಗಿ ಸವಾರಿ ಮಾಡಿ ದಕ್ಷ ಹಾಗೂ ಸಮರ್ಥರನ್ನು ಪ್ರೋತ್ಸಾಹಿಸುತ್ತ ಅದಕ್ಷ ಹಾಗೂ ಅಸಮರ್ಥರನ್ನು ಶಿಕ್ಷಿಸುತ್ತ ತಮ್ಮ ಅಮೂಲ್ಯವಾದ ವೇಳೆಯನ್ನು ಆಡಳಿತ ಹಾಗೂ ಅಭಿವೃದ್ಧಿಯನ್ನು ಸುಗಮಗೊಳಿಸಲು ಉಪಯೋಗಿಸುತ್ತ ದಾಸ್ಯ-ಪ್ರವೃತ್ತಿಗೆ ಒಲವು ತೋರಿಸದೆ, ಧೀರ ಹಾಗೂ ಸ್ವಾಭಿಮಾನವುಳ್ಳವರಾಗಿ ಕಾರ್ಯಪ್ರವೃತ್ತರಾದರೆ ಮಾತ್ರ ಪ್ರಜಾರಾಜ್ಯ ಹಾಗೂ ಪ್ರಜಾತಂತ್ರ ವ್ಯವಸ್ಥೆಯ ಹಾಗೂ ಅತ್ಯುನ್ನತ ಕಾರ್ಯಾಂಗ ಹುದ್ದೆಯ ಮುಖ್ಯಮಂತ್ರಿಗಳ ಸ್ಥಾನಕ್ಕೆ ಎಲ್ಲಿಲ್ಲದ ಗೌರವ, ಭೂಷಣ ಹಾಗೂ ತಾರಕಮೆರುಗು. ಶಾಸಕರೂ ಈ ಹಿನ್ನೆಲೆಯಲ್ಲಿ ಯೋಚಿಸುವುದು ಅಗತ್ಯ.

❑

ಸಾರ್ವಜನಿಕ ಉದ್ದಿಮೆಗಳ ವ್ಯವಹಾರ

ಕರ್ನಾಟಕ ರಾಜ್ಯದಲ್ಲಿ ಸುಮಾರು 78 ಸಾರ್ವಜನಿಕ ಸರಕಾರಿ ಉದ್ದಿಮೆಗಳಿವೆ. ಇವೆಲ್ಲಾ ಕೃಷಿ ಹಾಗೂ ಕೃಷಿ ಚಟುವಟಿಕೆಗಳಿಗೆ, ಉದ್ಯಮಗಳಿಗೆ, ಇಂಜಿನಿಯರಿಂಗ್‌ಗೆ, ಇಲೆಕ್ಟ್ರಾನಿಕ್‌ಗೆ, ಜವಳಿ ಉದ್ಯಮಕ್ಕೆ, ಕೈಮಗ್ಗ ಹಾಗೂ ಕುಶಲ ಕೈಗಾರಿಕೆಗೆ, ಅರಣ್ಯಕ್ಕೆ, ಗಣಿಕೈಗಾರಿಕೆಗೆ, ಕಾಮಗಾರಿಗೆ, ಪ್ರದೇಶ ಅಭಿವೃದ್ಧಿಗೆ, ಆರ್ಥಿಕವಾಗಿ ಹಿಂದುಳಿದವರ ಅಭಿವೃದ್ಧಿ, ಸಾರ್ವಜನಿಕ ವಿತರಣೆಗೆ, ಸಕ್ಕರೆಗೆ, ಪ್ರವಾಸಿ ಅಭಿವೃದ್ಧಿಗೆ, ರಸಾಯನಿಕಕ್ಕೆ, ವಿದ್ಯುಚ್ಛಕ್ತಿಗೆ, ಹಣಕಾಸು ವ್ಯವಹಾರಕ್ಕೆ, ರಸ್ತೆ ಸಾರಿಗೆಗೆ ಹಾಗೂ ಇತರ ವಿಷಯಗಳಿಗೆ ಸಂಬಂಧಿಸಿದ ಉದ್ದಿಮೆಗಳಿವೆ. ದಿನಾಂಕ 2-5-2000ಕ್ಕಿರುವ ಸರಕಾರದ ಅಧಿಕೃತ ಮಾಹಿತಿ ಪ್ರಕಾರ ಈ ಉದ್ದಿಮೆಗಳಲ್ಲಿ ಹೂಡಿರುವ ಒಟ್ಟು ಬಂಡವಾಳ 31-3-98ಕ್ಕೆ 16124.32 ಕೋಟಿ. ಈ ಉದ್ದಿಮೆಗಳಿಂದ 1997-98ರಲ್ಲಿ1.98 ಕೋಟಿ ಡಿವಿಡೆಂಡ್ ಮಾತ್ರ ಕೊಡಲಾಗಿದೆ. ಇವೆಲ್ಲ ಉದ್ದಿಮೆಗಳ ಕೂಡಿಬಿದ್ದ ಅಧಿಕೃತ ಹಾನಿ 31-3-98ಕ್ಕೆ 993.05 ಕೋಟಿಗೆ ಏರಿದೆ. ಈ ಉದ್ದಿಮೆಗಳಲ್ಲಿ ಸರಕಾರಿ ಕಂಪನಿಗಳಿವೆ. ಅಧಿನಿಯಮಬದ್ಧ ನಿಗಮಗಳಿಗೆ, ಇಲಾಖೆಗಳ ಉಸ್ತುವಾರಿ ವಾಣಿಜ್ಯ ಉದ್ಯಮಗಳಿವೆ. ಇವುಗಳಲ್ಲಿ ಕೆಲವು ವ್ಯವಹಾರ ಮಾಡುತ್ತಿವೆ, ಕೆಲವು ವ್ಯವಹಾರ ಬಂದ್ ಮಾಡಿವೆ, ಇನ್ನೂ ಕೆಲವು ಸಮಾಪ್ತಿ ಸಮಾಧಿಯತ್ತ ಸಾಗಿವೆ. ಇವುಗಳಲ್ಲಿ ರಾಜ್ಯ ಸರಕಾರ ತೊಡಗಿಸಿರುವ ಮೊತ್ತ ಇಕ್ವಿಟಿ ಹಣ 3492.96 ಕೋಟಿ, ದೀರ್ಘಾವಧಿಸಾಲ 10908.70 ಕೋಟಿ, ಶೇರ್ ಅರ್ಜಿ ಹಣ 679.37 ಕೋಟಿ, ಹೀಗೆ ಒಟ್ಟು 15081.03 ಕೋಟಿ ಇದೆ. 98-99ರಲ್ಲಿ 37 ಉದ್ದಿಮೆ ಗಳು ಒಟ್ಟು 187.10 ಕೋಟಿ ಲಾಭ ಗಳಿಸಿದ್ದು, ಇನ್ನುಳಿದ 35 ನಷ್ಟದಲ್ಲಿರುವ ಉದ್ದಿಮೆ ಗಳಲ್ಲಿ 22 ಉದ್ದಿಮೆಗಳು 423.09 ಕೋಟಿ ಕೂಡಿಬಿದ್ದ ನಷ್ಟದಲ್ಲಿವೆ. ನಷ್ಟದಲ್ಲಿರುವ ಎರಡು ಅಧಿನಿಯಮಬದ್ಧ ಉದ್ದಿಮೆಗಳು 554.51 ಕೋಟಿ ನಷ್ಟವನ್ನು ಹೊಂದಿವೆ. ಅನೇಕ ಉದ್ದಿಮೆಗಳು ಸಕಾಲದಲ್ಲಿ ವಾರ್ಷಿಕ ವರದಿಗಳನ್ನು ತಯಾರಿಸದೆ ನಿಜವಾದ ವ್ಯವಹಾರ ಸಾರ್ವಜನಿಕರಿಗೆ, ಸರಕಾರಕ್ಕೆ ತಿಳಿಯದಂತೆ ಮಾಡುತ್ತಿವೆ. ಈ ಎಲ್ಲಾ ಉದ್ದಿಮೆಗಳು ಪ್ರತಿವರ್ಷ ಸಕಾಲದಲ್ಲಿ ಜಮಾ-ಖರ್ಚು, ವ್ಯಾಪಾರಿ ಪತ್ರಿಕೆಗಳನ್ನು ಸಿ.ಎ.ಜಿ.ಯವರಿಗೆ

ಸಲ್ಲಿಸದೆ ಇರುವುದು ಕಂಡುಬಂದಿದ್ದು, ಈ ಎಲ್ಲ ಉದ್ದಿಮೆಗಳ ಆರ್ಥಿಕ ಪರಿಸ್ಥಿತಿಯ ನಿಜಾಂಶವನ್ನು ತಿಳಿಸಲಿಕ್ಕೆ, ಪ್ರಕಟಿಸಲಿಕ್ಕೆ ಸಾಧ್ಯವಾಗುತ್ತಿಲ್ಲ. ಕೆ.ಎಸ್.ಆರ್.ಟಿ.ಸಿ. ತನ್ನ 98-99ರ ಮಾಹಿತಿಯನ್ನು ಸಿ.ಎ.ಜಿ.ಗೆ ಕಳುಹಿಸದೆ 97-98ರ ಮಾಹಿತಿಯನ್ನು ಮಾತ್ರ ಕಳುಹಿಸಿದೆ. ಬೆಂಗಳೂರಿನ ಬಿ.ಎಂ. ಸಾರಿಗೆ ನಿಗಮ ಹಾಗೂ ವಾಯುವ್ಯ ಕರ್ನಾಟಕ ಸಾರಿಗೆ ನಿಗಮಗಳು 97-98ರಲ್ಲಿ ಅಸ್ತಿತ್ವಕ್ಕೆ ಬಂದಿದ್ದರೂ 97-98 ಹಾಗೂ 98-99ರ ಮಾಹಿತಿಯನ್ನು ಸಿ.ಎ.ಜಿ.ಗೆ ಒದಗಿಸದಿರುವುದು ಕಂಡುಬಂದಿದೆ. 98-99ರ ಸಿ.ಎ.ಜಿ. ವರದಿ ತಯಾರಿಸಲು ಸುಮಾರು 5 ಉದ್ದಿಮೆಗಳು 96-97ರ ಲೆಕ್ಕವನ್ನು ಮಾತ್ರ, ಸುಮಾರು 27 ಉದ್ದಿಮೆಗಳು 97-98ರ ಲೆಕ್ಕವನ್ನು ಮಾತ್ರ ಕೊಟ್ಟಿದ್ದು, 98-99ರವರೆಗೆ ಲೆಕ್ಕ ಕೊಡಲು ವಿಫಲವಾಗಿದ್ದು, ಸುಮಾರು 38 ಉದ್ದಿಮೆಗಳು ಮಾತ್ರ ತಮ್ಮ 98-99ರ ಲೆಕ್ಕವನ್ನು ಸಿ.ಎ.ಜಿ.ಗೆ ಒದಗಿಸಿವೆ. ಹೀಗಾದರೆ ಎಲ್ಲಾ ಉದ್ದಿಮೆಗಳ ಲೆಕ್ಕ ಹಾಗೂ ಆರ್ಥಿಕ ಪರಿಸ್ಥಿತಿಗಳ ನಿಜಾಂಶ ಹಾಗೂ ವಾಸ್ತವಿಕ ಅಂಶ ಗೊತ್ತಾಗುವುದು ಹೇಗೆ? ಅದೆಷ್ಟೋ ಉದ್ದಿಮೆಗಳು ತಮ್ಮ ತಮ್ಮ ವಾರ್ಷಿಕ ವರದಿಗಳು ನಿಯಮಬದ್ಧವಾಗಿ ನಿರ್ದಿಷ್ಟಪಡಿಸಿರುವ ಅವಧಿಯಲ್ಲಿ ಪ್ರಕಟಿಸದೆ ಇರುವುದು ಸರಕಾರಕ್ಕೆ ವಿಧಾನ ಮಂಡಳಕ್ಕೆ, ಸಿ.ಎ.ಜಿ.ಯವರಿಗೆ, ಸಾರ್ವಜನಿಕ ಉದ್ದಿಮೆಗಳ ಬ್ಯುರೋಕ್ಕೆ ಕಳುಹಿಸದಿರುವುದು ತಮ್ಮ ಅಸಮರ್ಪಕ ವ್ಯವಹಾರ ಯಾರಿಗೂ ತಕ್ಷಣ ಗೊತ್ತಾಗಬಾರದೆಂಬುವ ದುರುದ್ದೇಶವೆಂದು ಹೇಳದೆ ಗತ್ಯಂತರವಿಲ್ಲ. ಅನೇಕ ಉದ್ದಿಮೆಗಳಿಗೆ ಐ.ಎ.ಎಸ್., ಕೆ.ಎ.ಎಸ್. ಅಧಿಕಾರಿಗಳು, ಮಂತ್ರಿಗಳು, ಶಾಸಕರು ಹಾಗೂ ಅಧಿಕಾರಾರೂಢ ಆಡಳಿತ ಪಕ್ಷದ ರಾಜಕೀಯ ಮುಖಂಡರು, ಪದಾಧಿಕಾರಿಗಳಿದ್ದರೂ ಬಹುತೇಕ ಇವರೆಲ್ಲರ ಕಾರ್ಯವೈಖರಿ ಈ ಉದ್ದಿಮೆಗಳು ತೃಪ್ತಿಕರವಾಗಿ ಕಾರ್ಯ ಮಾಡದಿರುವುದಕ್ಕೆ ಅನಾವಶ್ಯಕ ನೇಮಕ ಮಾಡಿರುವುದಕ್ಕೆ, ಸ್ಥಗಿತಗೊಳ್ಳುವುದಕ್ಕೆ, ನಿಷ್ಕ್ರಿಯಗೊಂಡಿರುವುದಕ್ಕೆ, ಹಾನಿಯಾಗಿರುವುದಕ್ಕೆ, ದಿವಾಳಿಯಾಗಿ ರುವುದಕ್ಕೆ, ಸಾರ್ವಜನಿಕ ಸರಕಾರಿ ಹಣ ಲೂಟಿಯಾಗಿರುವುದಕ್ಕೆ ಕಾರಣವಾಗಿರುವುದು ಸರಕಾರದ ಉತ್ತರ, ಸಿ.ಎ.ಜಿ. ವರದಿಗಳು ಪುಷ್ಟಿಗೊಳಿಸುತ್ತಿವೆ.

ಕೆಲವು ಉದ್ದಿಮೆಗಳಿಗೆ 95-96ರಲ್ಲಿ 55.16 ಕೋಟಿ, 96-97ರಲ್ಲಿ 25.71 ಕೋಟಿ, 97-98ರಲ್ಲಿ 35.42 ಕೋಟಿ, 98-99ರಲ್ಲಿ 928.93 ಕೋಟಿ ಸಬ್ಸಿಡಿ ಕೊಟ್ಟಿದ್ದರೂ ಅವುಗಳ ವ್ಯವಹಾರ ತೃಪ್ತಿಕರವಲ್ಲದ್ದು ದುರ್ದೈವ. ಕೆಲವು ಉದ್ದಿಮೆಗಳಿಗೆ ಹೇರಳವಾದ ಸಬ್ಸಿಡಿ ಕೊಟ್ಟರೂ ಕೆ.ಇ.ಬಿ., ಕೆ.ಎಸ್.ಆರ್.ಬಿ.ಸಿ. ಮೊದಲಾದ ಉದ್ದಿಮೆಗಳು ಭಾರಿ, ನಷ್ಟ ದಲ್ಲಿದ್ದರೂ ಸಬ್ಸಿಡಿ ಲೆಕ್ಕಕ್ಕೆ ಹಿಡಿದು ಅವು ಲಾಭದಲ್ಲಿವೆಯೆಂದು ಸರಕಾರ ಹೇಳಿರುವುದು ವಿಪರ್ಯಾಸ. ರಾಜ್ಯದ ಹಿರಿಯ ಐ.ಎ.ಎಸ್. ಅಧಿಕಾರಿಗಳು ಸಾರ್ವಜನಿಕ ಉದ್ದಿಮೆ ಗಳ ಬ್ಯುರೋದ ಅಧಿಪತಿಗಳಾಗಿದ್ದರೂ ಈ ಬ್ಯುರೋ ಸಮರ್ಪಕವಾಗಿ ಕೆಲಸ ಮಾಡದೆ ಉದ್ದಿಮೆಗಳ ಮೇಲೆ ಹಿಡಿತವೇ ಇಲ್ಲವೆಂಬುದು, ಈ ಬ್ಯುರೋ ಸಹಿತ ಸಕಾಲದಲ್ಲಿ ತನ್ನ

ವರದಿಯನ್ನು ಸರಕಾರಕ್ಕೆ, ವಿಧಾನಮಂಡಳಕ್ಕೆ ಸಲ್ಲಿಸದಿರುವುದು ಸುಸ್ಪಷ್ಟವಾಗಿದೆ. ಸಾರ್ವಜನಿಕರಿಗೆ ಭಾರೀ ಉಪಯುಕ್ತವಾಗಬೇಕಾದ ಮೂರು ಸಾರಿಗೆ ಸಂಸ್ಥೆಗಳು ಸಾರ್ವಜನಿಕರಿಗೆ ಸರಕಾರಕ್ಕೆ ಮಾರಕವಾಗಿ, ಸಮರ್ಪಕವಾಗಿ ಕೆಲಸ ಮಾಡದೆ 98-99ರಲ್ಲಿ 51.12 ಕೋಟಿ ಸಬ್ಸಿಡಿ ಪಡೆದಿದ್ದರೂ 31-1-2000ಕ್ಕೆ 670.52 ಕೋಟಿ ನಷ್ಟ ಹೊಂದಿರುವುದು ಸರಕಾರದ ಅಧಿಕೃತ ಹೇಳಿಕೆ ಹಾಗೂ ಸಿ.ಎ.ಜಿ. ವರದಿಯಿಂದ ಸುಸ್ಪಷ್ಟವಾಗಿದೆ. 99-2000ದಲ್ಲಿ ಏನಾಗಿದೆಯೆಂಬುದು ಈ ಹಾಗೂ ಎಲ್ಲಾ ಉದ್ದಿಮೆಗಳ ಹಣೆಬರಹ ಯಾರಿಗೂ ಗೊತ್ತಾಗದು. ಅದನ್ನು ಗೊತ್ತುಮಾಡಲಿಕ್ಕೆ ಸರಕಾರ ಸಹ ಮುಂದಾಗದಿರುವುದು ಸರಿಯಲ್ಲ. ಆಗಿಂದಾಗ್ಗೆ ಪ್ರಯಾಣಿಕರ ಹಾಸಲು ಏರಿಸುತ್ತಿದ್ದರೂ ಸಿ.ಎ.ಜಿ. ವರದಿ ಹೇಳಿದ ಪ್ರಕಾರ ಸಾರಿಗೆ ಸಂಸ್ಥೆಗಳ ದುರಾಡಳಿತ ದೂರವಾಗಲು ಸಾಧ್ಯವೇ ಆಗದ ಪರಿಸ್ಥಿತಿ ಮುಂದುವರೆದಿದೆ. ಸ್ಪೇರ್‌ಪಾರ್ಟ್ಸ್ ಕೊರತೆ ಹಾಗೂ ದುರಾಡಳಿತದ ಪರಿಣಾಮವಾಗಿ 93-94ರಿಂದ 96-97ರ ಅವಧಿಯಲ್ಲಿ 2,68,060 ವಾಹನಗಳು ನಷ್ಟವಾಗಿ ಸಾರಿಗೆ ಸಂಸ್ಥೆಗೆ ಹೇರಳವಾದ ಕೋಟ್ಯಂತರ ನಷ್ಟವಾಗಿರುವುದು ಕಂಡುಬಂದಿದೆ. ಸಾರಿಗೆ ಸಂಸ್ಥೆಯ ಖರೀದಿಯಲ್ಲಿ ಸಹ ಹೆಚ್ಚಿನ ಬೆಲೆ ಕೊಡುವುದು, ಕಡಿಮೆ ಟೆಂಡರ್ ಬಿಟ್ಟು ಹೆಚ್ಚಿನ ಟೆಂಡರಿಗೆ ಕೊಡುವುದು, ಅನಾವಶ್ಯಕ ವಸ್ತುಗಳ ಖರೀದಿ, ಕಳಪೆಮಟ್ಟದ ವಸ್ತುಗಳ ಖರೀದಿ, ಖರೀದಿ ಸೂತ್ರಗಳನ್ನು ಗಾಳಿಗೆ ತೂರುವುದು, ಸಾರಿಗೆ ಸಂಸ್ಥೆಯ ಮೇಲಧಿಕಾರಿಗಳ ದುರಾಡಳಿತ ಬಗ್ಗೆ ಸಿ.ಎ.ಜಿ. ವರದಿ ಸುಸ್ಪಷ್ಟಪಡಿಸುತ್ತಿದ್ದರೂ ರಾಜ್ಯ ಸರಕಾರದ ಆಡಳಿತ ಯಂತ್ರ ವಿಫಲಗೊಳ್ಳುತ್ತಿರುವುದು ಸಂಬಂಧಿಸಿದ ಮಂತ್ರಿಗಳಿಗೆ ಭೂಷಣವಲ್ಲ. ಆಗಿಂದಾಗ್ಗೆ ಪ್ರಯಾಣ ಶುಲ್ಕ ಹೆಚ್ಚಿಸುತ್ತಿದ್ದರೂ 94-95ರಿಂದ 96-97ರವರೆಗಿನ ಮೂರು ವರ್ಷದ ಸಂಚಾರಿ ಆದಾಯ 2300.00 ಕೋಟಿ ಪಡೆದಿದ್ದರೂ ಈ ಅವಧಿಯ ಸಂಚಾರಿ ವೆಚ್ಚ 2570.00 ಕೋಟಿಯಾಗಿದ್ದು ಈ ಅವಧಿಯ ಸಂಚಾರಿ ನಷ್ಟ 270.00 ಕೋಟಿಯಾಗಿದೆ. ಈ ಸಾರಿಗೆ ಸಂಸ್ಥೆಗಳ ಪ್ರತಿಯೊಂದು ಬಸ್ಸಿನ ಪ್ರತಿದಿನದ ಓಡಾಟ ಸರಾಸರಿ 300 ಕೆ.ಎಂ. ಮಾತ್ರ ಇದ್ದು, ಇದು ನಾಚಿಕೆಗೇಡು. ಸಂಚಾರಿ ಹಾಗೂ ಸಂಚಾರೇತರ ಆದಾಯ ಹೆಚ್ಚಿಸುವಲ್ಲಿ, ದುರಾಡಳಿತ, ಅನಾವಶ್ಯಕ ವೆಚ್ಚ ಕಡಿಮೆ ಮಾಡುವಲ್ಲಿ, ಬಂದಾಗಿರುವ ಕ್ಯಾಂಟೀನುಗಳನ್ನು ಪ್ರಾರಂಭಿಸುವಲ್ಲಿ, ಬಸ್ ನಿಲ್ದಾಣಗಳನ್ನು ಸುವ್ಯವಸ್ಥಿತವಾಗಿ ಇಡುವಲ್ಲಿ, ಪ್ರಯಾಣಿಕರಿಗೆ ಸುಗಮ ಸಂಚಾರ ವ್ಯವಸ್ಥೆ ಮಾಡುವಲ್ಲಿ, ಮೂರೂ ಸಂಚಾರಿ ಸಾರಿಗೆ ನಿಗಮಗಳು ವಿಫಲವಾಗಿರುವುದು ಸುಸ್ಪಷ್ಟವಾಗಿದೆ. ಸಿ.ಎ.ಜಿ. ವರದಿ ಪ್ರಕಾರ ಕೆ.ಎಸ್.ಆರ್.ಟಿ.ಸಿ.ಯ ಕೂಡಿಬಿದ್ದ ಹಾನಿ 94-95 ಅಂತ್ಯಕ್ಕೆ 437.09 ಕೋಟಿ, 95-96 ಅಂತ್ಯಕ್ಕೆ 484.80 ಕೋಟಿ, 96-97 ಅಂತ್ಯಕ್ಕೆ 578.85 ಕೋಟಿ ಯಾಗಿದ್ದು, ಇತ್ತೀಚಿನ ಸರಕಾರದ ಅಧಿಕೃತ ಹೇಳಿಕೆಯ ಪ್ರಕಾರ ಕೆ.ಎಸ್.ಆರ್.ಟಿ.ಸಿ., ಬೆಂಗಳೂರು ಮೆಟ್ರೊ ಪೊಲಿಟನ್ ಸಾರಿಗೆ ಸಂಸ್ಥೆ, ವಾಯುವ್ಯ ಕರ್ನಾಟಕ ಸಾರಿಗೆ

ಸಂಸ್ಥೆ, ಈ ಮೂರು ಸಂಸ್ಥೆಗಳು ಹೊಂದಿದ ನಿವ್ವಳ ನಷ್ಟ 97-98ರಲ್ಲಿ 62.37 ಕೋಟಿ, 98-99ರಲ್ಲಿ 11.76 ಕೋಟಿ, 99-2000ದಲ್ಲಿ ಜನವರಿ 31ರವರೆಗೆ 17.54 ಕೋಟಿಯಾಗಿದೆ. ಹೀಗೆ ಈ ಮೂರು ಸಾರಿಗೆ ಸಂಸ್ಥೆಗಳು ಸರಕಾರದ ಸಬ್ಸಿಡಿ ಪಡೆದರೂ 670.52 ಕೋಟಿ ನಷ್ಟದಲ್ಲಿ ಮುಳುಗಿರುವಾಗ, ಸಮರ್ಪಕ ಕೆಲಸ ಮಾಡದಿರುವಾಗ ಇದಕ್ಕೊಬ್ಬ ಮಂತ್ರಿಯ ಹಾಗೂ ಸರಕಾರದ ಪ್ರಯೋಜನವಾದರೂ ಏನು? ಇನ್ನಾದರೂ ಸಾರ್ವಜನಿಕ ಹಾಗೂ ಪ್ರಜಾ ಸರಕಾರದ ಹಿತದೃಷ್ಟಿಯಿಂದ ಚುರುಕಾಗಿ ಹೊರಟಿರುವ ಸರಕಾರ ಎಚ್ಚೆತ್ತು ಹದಗೆಟ್ಟ ಪರಿಸ್ಥಿತಿ ಸುಧಾರಿಸುವುದು ಒಳ್ಳೆಯದು. ಇಲ್ಲವಾದರೆ ಈ ಸಂಸ್ಥೆಗಳನ್ನು ಖಾಸಗಿಯವರಿಗೆ ಮಾರಾಟ ಮಾಡುವುದು ಅಥವಾ ನೌಕರರ ಸಂಘಕ್ಕೆ ವಹಿಸಿಕೊಡುವುದು ಒಳ್ಳೆಯದು.

❑

ಸರಕಾರಿ ವಾರ್ಷಿಕೋತ್ಸವ : ಪ್ರಜಾತಂತ್ರ ವ್ಯವಸ್ಥೆಯ ವಿಜಯೋತ್ಸವ

ವಾರ್ಷಿಕ ವಿಜಯೋತ್ಸವಗಳು ಪುರಾತನ ಕಾಲದಿಂದ ಪ್ರಜಾತಂತ್ರ ವ್ಯವಸ್ಥೆಯ ಪ್ರಾರಂಭದವರೆಗೆ ಈ ದೇಶದಲ್ಲಿಯ ಪಾಳೇಗಾರ, ಅರಸು, ರಾಜಾಧಿರಾಜ, ಚಕ್ರವರ್ತಿಗಳು ತಮ್ಮ ಆಡಳಿತದಲ್ಲಿ ಸಾಧಿಸಿದ ವಿಜಯ ಹಾಗೂ ಸಾಧನೆಗಳನ್ನು ಜನತೆಗೆ ತೋರಿಸಿಕೊಡಲು ಹಮ್ಮಿಕೊಂಡ ಉತ್ಸವಗಳಾಗಿದ್ದವು. ಭಾರತದಲ್ಲಿಯ ಬಹುತೇಕ ಪಾಳೇಗಾರರು ದಸರಾ ಹಾಗೂ ವಿಜಯದಶಮಿ ದಿನಗಳಂದೇ ಅತಿ ವಿಜೃಂಭಣೆಯಿಂದ ಹಬ್ಬಗಳನ್ನು ಆಚರಿಸುತ್ತ ಬಂದರು. ಪಾಳೇಗಾರರು ಪರಸ್ಪರ ಯುದ್ಧ ದಾಳಿಗಳಲ್ಲಿ ಖಡ್ಗ, ಕತ್ತಿ, ಕಠಾರಿ, ಕೋವಿ, ಬಿಲ್ಲು, ಭಾಣಗಳನ್ನೇ ಉಪಯೋಗಿಸಿ ಒಬ್ಬರನ್ನೊಬ್ಬರು ಕೊಂದು, ಒಂದು ಸೇನೆ ಮತ್ತೊಂದು ಸೇನೆಯನ್ನು ಸರ್ವನಾಶ ಮಾಡಿ ಕುದುರೆ, ಒಂಟೆ, ಆನೆಗಳನ್ನು ವೈರಿಗಳ ಮೇಲೆ ಓಡಿಸಿ, ತುಳಿಸಿ, ನಾಶಮಾಡಿ ವೈರಿಗಳನ್ನು ಸೆರೆ ಹಿಡಿದು ಒಬ್ಬ ಪಾಳೇಗಾರ ಮತ್ತೊಬ್ಬ ಪಾಳೇಗಾರನ ಶಿರಚ್ಛೇದ ಮಾಡಿ ಯುದ್ಧದಲ್ಲಿ ಗೆದ್ದ ಪ್ರತೀಕವಾಗಿ ವಿಜಯೋತ್ಸವವನ್ನು ಅತಿ ವಿಜೃಂಭಣೆಯಿಂದ ಆಚರಿಸುತ್ತ ಬಂದ ಅಂದಿನ ಸಂಪ್ರದಾಯ. ಈ ಸಂಪ್ರದಾಯ ಯುದ್ಧದಲ್ಲಿ ಉಪಯೋಗಿಸಿದ ಯಾವತ್ತೂ ಖಡ್ಗ, ಆಯುಧಗಳ ಪೂಜೆ, ಆನೆ, ಒಂಟೆ, ಕುದುರೆಗಳ ಮೇಲೆ ವಿಜಯಿಗಳಾದ ಪಾಳೇಗಾರರ ಮೆರವಣಿಗೆ, ಉರುವಣಿಗೆಗಳನ್ನು ಮಾಡುತ್ತ ಜನರಿಗೆ ತೋರ್ಪಡಿಸುತ್ತ ಜನತೆಯು ಬಾಗಿ ಬಗ್ಗಿ ಭಯಭಕ್ತಿಯಿಂದ ವಿಧೇಯತೆಯನ್ನು ಸೂಚಿಸುವ ಸಂಪ್ರದಾಯವೂ ಆದಾಗಿತ್ತು. ಭಾರತೀಯರಾದ ನಮ್ಮಲ್ಲಿ ಆ ಮೂಢ ಸಂಪ್ರದಾಯವನ್ನು ಬಿಡದೆ ಆ ಮಾರಕ ಆಯುಧಗಳ ಪೂಜೆಯೇ ಹೊರತು ಸ್ವತಂತ್ರ ಭಾರತದ ಪ್ರಜಾತಂತ್ರ ವ್ಯವಸ್ಥೆಯ ಪ್ರಜಾರಾಜ್ಯದ ಉದಯೋತ್ಸವ ಹಾಗೂ ವಿಜಯೋತ್ಸವವಲ್ಲ.

ಪಾಳೇಗಾರ ಹಾಗೂ ಪರಕೀಯರ ರಾಜ್ಯಾಡಳಿತ ನಾಶವಾಗಿ ಪ್ರಜಾ ಸರಕಾರಗಳು 1952ರಿಂದ ಅಸ್ತಿತ್ವದಲ್ಲಿ ಬಂದು ಶಾಸಕರು, ಸಂಸದರು ರಾಜ್ಯ ಸರಕಾರಗಳನ್ನು ಹಾಗೂ ಕೇಂದ್ರ ಸರಕಾರವನ್ನು ನಡೆಸುತ್ತಿದ್ದಾರೆ. ರಾಜ್ಯ ಸರಕಾರ ಪ್ರತಿವರ್ಷ ರಾಜ್ಯದ ಆಡಳಿತ

ಅಭಿವೃದ್ಧಿಗೆ ಅವಶ್ಯಕವಾದ ಹಣವನ್ನು ಪ್ರಜೆಗಳಿಂದ ಶೇಖರಣೆ ಮಾಡಿ ಆಡಳಿತ ಅಭಿವೃದ್ಧಿಗೆ ಅವಶ್ಯಕವಾದ ಹಣವನ್ನು ವೆಚ್ಚ ಮಾಡಲು ಆಯವ್ಯಯವನ್ನು ತಯಾರಿಸಿ ವಿಧಾನ ಮಂಡಳದ ಅಂಗೀಕಾರ ಪಡೆದು ಆ ಪ್ರಕಾರ ನಿಗದಿತ ಹಣವನ್ನು ಪಡೆದು ನಿಗದಿತ ಆರ್ಥಿಕ ಗುರಿ ಹಾಗೂ ಭೌತಿಕ ಗುರಿಯನ್ನು ಸಾಧಿಸಲೇಬೇಕಾಗಿದ್ದು, ಆ ಪ್ರಕಾರ ಸಾಧಿಸಿದ ಪ್ರಗತಿಯ ಬಗ್ಗೆ ವಿಜಯೋತ್ಸವವನ್ನು ಪ್ರತಿವರ್ಷ ಸರಕಾರದ ಅವಧಿ ಐದು ವರ್ಷಗಳವರೆಗೆ ನಿಗದಿತ ದಿನದಂದು ಅತಿ ವಿಜೃಂಭಣೆ ಸಂಭ್ರಮದಿಂದ ಆಚರಿಸಬೇಕಾಗುತ್ತದೆ. ಅಂದು ಸಾಧನಾಪ್ರಗತಿಯ ಬಗ್ಗೆ ಅಂಕಿ-ಸಂಖ್ಯೆಗಳೊಂದಿಗೆ ಹೆಮ್ಮೆಯಿಂದ ತಾಲ್ಲೂಕು ಮಟ್ಟದಲ್ಲಿ ಶಾಸಕರು, ಜಿಲ್ಲಾಮಟ್ಟದಲ್ಲಿ ಜಿಲ್ಲಾ ಉಸ್ತುವಾರಿ ಮಂತ್ರಿಗಳು ಹಾಗೂ ರಾಜ್ಯಮಟ್ಟದಲ್ಲಿ ಮಂತ್ರಿಗಳು ಹಾಗೂ ಮುಖ್ಯಮಂತ್ರಿಗಳು ಸವಿವರ ವರದಿ ಕೊಡಬೇಕಾದ್ದು ಒಳ್ಳೆಯದು. ಆದರೆ ದುರ್ದೈವದಿಂದ ಶಾಸಕರು, ಮಂತ್ರಿಗಳು ಇದನ್ನೆಲ್ಲಾ ಮರೆತು ಪ್ರಜಾಪ್ರಭುಗಳಿಗೆ ತಾವು ಮಾಡಿದ ಮಹತ್ಕಾರ್ಯಗಳ ಹಾಗೂ ಮಹತ್‌ಸಾಧನೆಗಳ ವಿವರಗಳನ್ನು ಕೊಡದೆ ತಮ್ಮ ಅಧಿಕಾರ ಸದುಪಯೋಗದ ವಾರ್ಷಿಕ ದಿನಾಚರಣೆ ಅಥವಾ ವಾರ್ಷಿಕ ವಿಜಯೋತ್ಸವವನ್ನು ಅತಿ ವಿಜೃಂಭಣೆಯಿಂದ ನೆರವೇರಿಸದೆ ನಿಷ್ಕ್ರಿಯವಾಗಿ ಜನತೆಯನ್ನು ಅಂಧಕಾರದಲ್ಲಿಟ್ಟು ಪಾಳೇಗಾರರ ಕ್ರೌರ್ಯ- ಸಾಂಪ್ರದಾಯಕ ಆಯುಧ ಪೂಜಾ ಸಂಭ್ರಮದಲ್ಲಿ ತೊಡಗುವುದು ದಾಸ್ಯ ಪ್ರವೃತ್ತಿಯ ಸಂಕೇತವೇ ಹೊರತು ಬೇರೆಯೇನಲ್ಲ. ರಾಜ್ಯದ ಪ್ರಜಾಪ್ರಭುಗಳ ಪರವಾಗಿ ಬಜೆಟ್‌ನಲ್ಲಿ ಅಂಗೀಕಾರವಾದ ಆಯದ ಮೊತ್ತವೆಷ್ಟು, ಅದರಲ್ಲಿ ಪಡೆದ ಆಯವೆಷ್ಟು, ವೆಚ್ಚಕ್ಕೆ ನಿಗದಿಗೊಳಿಸಿದ ಮೊತ್ತವೆಷ್ಟು, ಅದರಲ್ಲಿ ವೆಚ್ಚ ಮಾಡಿದ ಮೊತ್ತವೆಷ್ಟು, ಗ್ರಾಮ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಹಾಗೂ ರಾಜ್ಯ ಮಟ್ಟದಲ್ಲಿ ನಿಗದಿ ಮಾಡಿದ ಅಭಿವೃದ್ಧಿ ಕಾಮಗಾರಿ, ಜನಪರ ಯೋಜನೆಗಳೇನು, ಅವುಗಳಿಗಾಗಿ ವೆಚ್ಚ ಮಾಡಿದ ಹಣವೆಷ್ಟು, ಆರ್ಥಿಕ-ಭೌತಿಕ ಸಾಧನೆ ಎಷ್ಟು, ಮುಂದಿನ ವರ್ಷ ಕೈಗೊಳ್ಳಬೇಕಾದ ಆರ್ಥಿಕ-ಭೌತಿಕ ಗುರಿಗಳೇನೆಂಬ ಬಗ್ಗೆ ಹಾಗೂ ಅವುಗಳ ಯಶಸ್ವಿ ಕಾರ್ಯಾಚರಣೆ ಬಗ್ಗೆ ಚರ್ಚೆ ಇತ್ಯಾದಿ ಕಾರ್ಯಕ್ರಮಗಳ ಕೂಡ ವಿಜಯೋತ್ಸವವನ್ನು ಮನೋರಂಜನಾ ಸಾಂಸ್ಕೃತಿಕ ಚಟುವಟಿಕೆಗಳೊಂದಿಗೆ ಜನತೆಯನ್ನು ಸಂತೋಷ ಸಂತುಷ್ಟಗೊಳಿಸುವುದು ಒಳ್ಳೆಯದು. ನಮ್ಮ ರಾಷ್ಟ್ರದಲ್ಲಿ ಉತ್ತಮ ಕಾರ್ಯಸಾಧನೆ ಮಾಡಿ ಜನರ ಪ್ರೀತಿ-ವಿಶ್ವಾಸಗಳಿಗೆ ಪಾತ್ರರಾಗಿ "ಜನತಾ ಸೇವೆಯೇ ಜನಾರ್ಧನ ಸೇವೆ, ದೇಶ ಸೇವೆಯೇ ಈಶಸೇವೆ, ಸರ್ವೇಜನಾಃ ಸುಖಿನೋಭವಂತು" ಎಂದು ಸಾರ್ವಜನಿಕ ಹಿತಾಸಕ್ತಿಯನ್ನು ಮಹದುದ್ದೇಶವನ್ನಾಗಿಟ್ಟುಕೊಂಡು ಅದ್ಭುತ ಸೇವೆ ಮಾಡಿದ ಹಾಗೂ ಜಾತೀಯತೆ, ಸ್ವಾರ್ಥ, ಪಕ್ಷಪಾತ, ಸ್ವಜನ ಪಕ್ಷಪಾತ, ಅಧಿಕಾರ ದುರುಪಯೋಗ, ದುರಾಡಳಿತ, ಭ್ರಷ್ಟಾಚಾರ ಇತ್ಯಾದಿ ರೋಗಪೀಡಿತರಾಗದೆ, ಜನಪ್ರಿಯ ಶಾಸಕರು, ಸಂಸದರು, ಮಂತ್ರಿಗಳು, ಮುಖ್ಯಮಂತ್ರಿ

ಗಳು, ಸರಕಾರ ಬೇಕಾದಷ್ಟು ಆಗಿಹೋಗಿ ಅಮರರೂ ಆಗಿದ್ದಾರೆ. ಜೀವಂತವಾಗಿಯೂ ಇದ್ದಾರೆ. ಅಂತಹ ಆದರ್ಶ ಪ್ರತಿನಿಧಿಗಳ ಹಾಗೂ ಸರಕಾರಗಳ ಅನುಕರಣೆ ಹಾಗೂ ಪ್ರಜಾ ಸರಕಾರದ ವಾರ್ಷಿಕ ವಿಜಯೋತ್ಸವ ಆಚರಣೆ ಅಗತ್ಯವಿದೆ.

ನಮ್ಮ ರಾಜ್ಯದಲ್ಲಿ ಈಗಿನ ಸರಕಾರ, ವಿರೋಧ ಪಕ್ಷಗಳು ಹಾಗೂ ಶಾಸಕರು ಚುನಾಯಿತರಾಗಿ ಅಧಿಕಾರಕ್ಕೆ ಬಂದು ತಮ್ಮ ಐದು ವರ್ಷದ ಅವಧಿಯ ಮೊದಲನೇ ವರ್ಷದ ವಾರ್ಷಿಕೋತ್ಸವ ವಿಜಯೋತ್ಸವವನ್ನು ಅಕ್ಟೋಬರ್ ತಿಂಗಳಲ್ಲಿ ಅತಿ ವಿಜೃಂಭಣೆಯಿಂದ ಸಂಭ್ರಮ ಸಡಗರದಿಂದ ಆಚರಿಸಿ ಒಂದು ವರ್ಷ ಅವಧಿಯಲ್ಲಿ ತಮ್ಮ ತಮ್ಮ ಕ್ಷೇತ್ರದಲ್ಲಿ ಅಂಗೀಕಾರವಾದ ಬಜೆಟ್ ಹಣದಲ್ಲಿ ಸಾಧಿಸಿದ ಆರ್ಥಿಕ ಹಾಗೂ ಭೌತಿಕ ಪ್ರಗತಿಯ ಸಾಧನಾಚಿತ್ರವನ್ನು ವ್ಯಕ್ತಗೊಳಿಸಿ ಪ್ರಜೆಗಳನ್ನು ಸಂತೋಷಗೊಳಿಸುವುದು ಒಳ್ಳೆಯದು. ಅಕ್ಟೋಬರ್‌ನಲ್ಲಿ ಆಚರಿಸುವ ವಾರ್ಷಿಕೋತ್ಸವದಲ್ಲಿ 99.2000 ವರ್ಷದ ಆರ್ಥಿಕ-ಭೌತಿಕ ಸಾಧನೆಗಳನ್ನು ಸಾಧಕ-ಬಾಧಕಗಳೊಂದಿಗೆ ಹೇಳಿ 2000-2001ನೇ ಸಾಲಿನ ಆರ್ಥಿಕ ಹಾಗೂ ಭೌತಿಕ ಗುರಿಯನ್ನು ಬಜೆಟ್ ಪ್ರಕಾರ ಸಾಧಿಸುವ ಬಗ್ಗೆ ಭಗೀರಥ ಪ್ರಯತ್ನ ಮಾಡುವುದಾಗಿ ಆಶ್ವಾಸನೆ ಕೊಟ್ಟು 2000-2001ನೇ ವರ್ಷದಲ್ಲಿ ಸರಕಾರ ಸಿಬ್ಬಂದಿಗೆ ನೂರಕ್ಕೆ ನೂರರಷ್ಟು ಬಜೆಟ್ ಪ್ರಕಾರ ವೆಚ್ಚ ಮಾಡುವ ಹಾಗೆ ಪ್ರಜೆಗಳಿಗೆ ನೂರಕ್ಕೆ ನೂರರಷ್ಟು ಆರ್ಥಿಕ ಹಾಗೂ ಭೌತಿಕ ಗುರಿ ಸಾಧಿಸುವುದಾಗಿ ಭರವಸೆ ಕೊಟ್ಟು ಈಗಿಂದೀಗಲೇ ಆ ಬಗ್ಗೆ ಶಾಸಕರು, ಮಂತ್ರಿಗಳು ಹಾಗೂ ಸರಕಾರ ಪ್ರಯತ್ನಿಸಬೇಕು. ಹಿಂದಿನ ವರ್ಷಗಳ ಅಧಿಕೃತ ದಾಖಲೆಗಳನ್ನು ನೋಡಿದರೆ ಯಾವ ವರ್ಷಗಳಲ್ಲೂ ಯಾವ ಸರಕಾರಗಳೂ ನಿಗದಿತ ಆರ್ಥಿಕ ಹಾಗೂ ಭೌತಿಕ ಗುರಿಗಳನ್ನು ಸಾಧಿಸುವಲ್ಲಿ ವಿಫಲವಾಗಿವೆ. ಎಲ್ಲಾ ಸರಕಾರಗಳ ಯಶಸ್ವಿ ಸಾಧನೆಯೆಂದರೆ ಬಜೆಟ್ ನಿಗದಿ ಅಥವಾ ನಿಗದಿಗಿಂತ ಹೆಚ್ಚು ವೇತನ ಭತ್ಯೆ ನಿವೃತ್ತಿ ವೇತನ ಭತ್ಯೆ ಗುರಿ ಮೀರಿ ವೆಚ್ಚ ಮಾಡುವಲ್ಲಿ ಮಾತ್ರ. ಈಗಿನ ಸರಕಾರ ಶ್ರೀ ಕೃಷ್ಣರವರ ಮುಖ್ಯಮಂತ್ರಿತ್ವದಲ್ಲಿ 99-2000ರ ಸಾಲಿನ ಉತ್ತರಾರ್ಧದಲ್ಲಿ ಅಧಿಕಾರಕ್ಕೆ ಬಂದಿದ್ದರೂ ವರ್ಷದ ಕೊನೆಯೊಳಗಾಗಿ ನಿಗದಿತ ಅಭಿವೃದ್ಧಿಯ ಆರ್ಥಿಕ ಹಾಗೂ ಭೌತಿಕ ಗುರಿಯನ್ನು ಸಾಧಿಸುವಲ್ಲಿ ವಿಫಲಗೊಂಡಿರುವುದು ಮಂತ್ರಿಗಳಲ್ಲಿ ಕೆಲ ಮಂತ್ರಿಗಳ ಅಸಮರ್ಥತೆ ಹಾಗೂ ಅನುಷ್ಠಾನ ಅಧಿಕಾರಿಗಳನ್ನು ಸಮರ್ಥವಾಗಿ ಸವಾರಿ ಮಾಡುವಲ್ಲಿ ಕಂಡುಬಂದ ವೈಫಲ್ಯತೆಯೇ ಕಾರಣವಾಗಿದೆ. ಆರ್ಥಿಕ ಗುರಿಸಾಧನೆಯ ವೈಫಲ್ಯದ ದುಷ್ಪರಿಣಾಮವೇ ಭೌತಿಕ ಸಾಧನೆಯ ವೈಫಲ್ಯದ ಜೀವಂತ ಚಿತ್ರ. 99-2000ದಲ್ಲಿ ಸರಕಾರದ ಒಟ್ಟಾರೆ ಆಯದಲ್ಲಿ 2451.84 ಕೋಟಿ ಪಡೆದಿಲ್ಲ. ಸಾರ್ವಜನಿಕ ಲೆಕ್ಕದಲ್ಲಿ 204.29 ಕೋಟಿ ಪಡೆದಿಲ್ಲ. ಸಂಚಿತ ನಿಧಿಯಲ್ಲಿ 2247.55 ಕೋಟಿ ಪಡೆದಿಲ್ಲ. ರಾಜಸ್ವದಲ್ಲಿ 887.79 ಕೋಟಿ ಪಡೆದಿಲ್ಲ. ಇದರ ದುಷ್ಪರಿಣಾಮ ಖಾಲಿ ಖಜಾನೆ ತುಂಬದೆ ಇದ್ದುದು. ಇದಕ್ಕೆ ವ್ಯತಿರಿಕ್ತವಾಗಿ ಸಾಮಾನ್ಯ ಸೇವೆ, ಸಾಮಾಜಿಕ

ಸೇವೆ, ಆರ್ಥಿಕ ಸೇವೆ ಹಾಗೂ ಸಹಾಯಾನುದಾನ ಮತ್ತು ಅಂಶದಾನಗಳಿಗೆ ಬಜೆಟ್ ಪ್ರಕಾರ 713.78 ಕೋಟಿ ವೆಚ್ಚ ಮಾಡಿಲ್ಲ. ಮೂರು ಸೇವೆಗಳ ಬಂಡವಾಳದಲ್ಲಿ 386.08 ಕೋಟಿ ವೆಚ್ಚ ಮಾಡಿಲ್ಲ. ಒಟ್ಟು ಸಂಚಿತ ನಿಧಿಯಲ್ಲಿ 2287.32 ಕೋಟಿ ವೆಚ್ಚ ಮಾಡಿಲ್ಲ. ಸಾರ್ವಜನಿಕ ಲೆಕ್ಕದಲ್ಲಿ 3.31 ಕೋಟಿ ಹೆಚ್ಚು ಬಟವಾಡೆ ಮಾಡಲಾಗಿದೆ. ನಿಗದಿತ ಒಟ್ಟಾರೆ ವೆಚ್ಚದಲ್ಲಿ 2284.00 ಕೋಟಿ ಬಟವಾಡೆ ಮಾಡಿಲ್ಲದಿರುವುದು ಕಂಡುಬಂದಿದೆ. ವಿಶ್ರಾಂತಿ ವೇತನ ಇತ್ಯಾದಿಗೆ ಬಜೆಟ್ ಮೀರಿ 163.17 ಕೋಟಿ ವೆಚ್ಚ ಮಾಡಲಾಗಿದೆ. ಲೋಕೋಪಯೋಗಿ ಇತ್ಯಾದಿಯನ್ನೊಳಗೊಂಡ ಸಾಮಾನ್ಯ ಸೇವೆಗಳಿಗೆ ನಿಗದಿತ ಮೊತ್ತದಲ್ಲಿ 190.32 ಕೋಟಿ ವೆಚ್ಚ ಮಾಡಿಲ್ಲ. ಸಾಮಾಜಿಕ ಸೇವೆಗಳಿಗೆ 218.78 ಕೋಟಿ ವೆಚ್ಚ ಮಾಡಿಲ್ಲ. ವ್ಯವಸಾಯ ಸಹಕಾರ, ಪಶುಸಂಗೋಪನೆ, ಹೈನಾಭಿವೃದ್ಧಿ, ಮೀನುಗಾರಿಕೆ, ಗ್ರಾಮೀಣ ಅಭಿವೃದ್ಧಿ, ನೀರಾವರಿ, ಗ್ರಾಮೋದ್ಯೋಗಗಳನ್ನೊಳಗೊಂಡ ಆರ್ಥಿಕ ಸೇವೆಗಳಿಗೆ 270.69 ಕೋಟಿ ವೆಚ್ಚ ಮಾಡಿಲ್ಲ. ಇದೆಲ್ಲ ಪರಿಷ್ಕೃತ ವೆಚ್ಚವಿದ್ದು, ವಾಸ್ತವಿಕ ವೆಚ್ಚ ಮುಂದಿನ ಬಜೆಟ್ ನಂತರ ಸಿಗುವುದು. ಇಂದಿರಾ ಆವಾಜ್, ಉದ್ಯೋಗ ಭರವಸೆ, ಬರಗಾಲ ಪೀಡಿತ, ಮರುಭೂಮಿ ಅಭಿವೃದ್ಧಿ, ಪಶ್ಚಿಮಘಟ್ಟ, ಚುಲ್ಲಾ, ಬಾಯಿಗ್ಯಾಸ, ಬೋರ್‌ವೆಲ್ ವಾಟರ್ ಸಪ್ಲೈ, ನಿರ್ಮಲ ಗ್ರಾಮ ಇತ್ಯಾದಿ ಯೋಜನೆಗಳಲ್ಲಿ ಈ (99-2000) ವರ್ಷದಲ್ಲಿ ನಿಗದಿತ ಆರ್ಥಿಕ ಹಾಗೂ ಭೌತಿಕ ಗುರಿ ಸಾಧಿಸಿಲ್ಲ, ಏಕೆ? ಸರಕಾರಿ ಇಲಾಖೆ ಹಾಗೂ ಜಿಲ್ಲಾ ಪಂಚಾಯತಿಗಳಿಗೆ ಸಂಬಂಧಿಸಿದ ಸುಮಾರು 20 ಶೀರ್ಷಿಕೆ ಲೆಕ್ಕದಲ್ಲಿ ಸುಮಾರು 400.00 ಕೋಟಿ ಮೊತ್ತವನ್ನು ವೆಚ್ಚ ಮಾಡಿಲ್ಲ. ಸರಕಾರದ ಏಪ್ರಿಲ್ ತಿಂಗಳ ಹೇಳಿಕೆ ಪ್ರಕಾರ 99-2000ದಲ್ಲಿ ಅಭಿವೃದ್ಧಿಗೆ ತೆಗೆದಿಟ್ಟ ಹಣ 11439.59 ಕೋಟಿ, ವೆಚ್ಚದ ಮೊತ್ತ ಪರಿಷ್ಕೃತ ಅಷ್ಟೇ ಎಂದು ಹೇಳಿದೆ. 99-2000ದಲ್ಲಿ ಮೀನುಗಾರಿಕೆಗೆ ಆಯವ್ಯಯದಲ್ಲಿ 40.00 ಕೋಟಿ ಇದ್ದರೂ 20.42 ಕೋಟಿ ಬಿಡುಗಡೆಯಾಗಿ ವಾಸ್ತವಿಕ ವೆಚ್ಚ ಸರಕಾರಕ್ಕೆಯೇ ಗೊತ್ತಿಲ್ಲ. 99-2000ದಲ್ಲಿ ಕೇಂದ್ರ ಸರಕಾರ ರಾಜ್ಯ ಸರಕಾರಕ್ಕೆ 754.06 ಕೋಟಿ ಸಾಲ 1698.71 ಕೋಟಿ ಅನುದಾನ ಹೀಗೆ ಒಟ್ಟು 2452.77 ಕೋಟಿ ಬಿಡುಗಡೆಯಾಗಿದ್ದು ಬಿಡುಗಡೆ ಮಾಡಿದ ಹಣದಲ್ಲಿ ವಾಸ್ತವಿಕ ಎಷ್ಟು ಹಣ ವೆಚ್ಚ ಮಾಡಲಾಗಿದೆ ಎಂಬ ಪೂರ್ಣ ವಿವರ ಇಲಾಖಾವಾರು ತಿಳಿಸಿರೆಂದು ಶಾಸಕರು ಸರಕಾರಕ್ಕೆ ಕೇಳಿದರೆ ಸರಕಾರ ತನ್ನ 25-4-2000ರ ಹೇಳಿಕೆಯಲ್ಲಿ ವೆಚ್ಚದ ಬಗ್ಗೆ ಸರಕಾರದ ಸಮರ್ಪಕ ಉತ್ತರವಿಲ್ಲ. ಒಟ್ಟಿನ ಮೇಲೆ 99-2000ದಲ್ಲಿ ನಿಗದಿತ ಆರ್ಥಿಕ ಹಾಗೂ ಭೌತಿಕ ಗುರಿ ಸಾಧಿಸುವಲ್ಲಿ ಸರಕಾರ ತಪ್ಪಿದೆ. 2000-2001ರಲ್ಲಾದರೂ ನೂರಕ್ಕೆ ನೂರರಷ್ಟು ನಿಗದಿತ ಆರ್ಥಿಕ ಹಾಗೂ ಭೌತಿಕ ಗುರಿ ಸಾಧಿಸಿ 2001ರ ಅಕ್ಟೋಬರ್‌ನಲ್ಲಿ ಎರಡನೇ ವಾರ್ಷಿಕ ವಿಜಯೋತ್ಸವಕ್ಕೆ ಸರಕಾರ ಅಣಿಯಾಗುವುದು ಒಳ್ಳೆಯದು.

❑

ಎಣ್ಣೆಕಾಳು-ಎಣ್ಣೆ ಗಿರಣಿ ಭವಿಷ್ಯ - ತೂಗುಯ್ಯಾಲೆ

ಅಧಿಕೃತ ಮಾಹಿತಿಯ ಮೇರೆಗೆ ರಾಜ್ಯದಲ್ಲಿ ಶೇಂಗಾ ಬೆಳೆ 98-99ರಲ್ಲಿ 12.30 ಲಕ್ಷ ಹೆಕ್ಟೇರ್‌ನಲ್ಲಿ, 99-2000 ದಲ್ಲಿ 10.98 ಲಕ್ಷ ಹೆಕ್ಟೇರ್ ಕ್ಷೇತ್ರದಲ್ಲಿ ಬೆಳೆಯಲಾಗಿದೆ. ಒಟ್ಟು ಎಣ್ಣೆ ಬೀಜ 98-99 ರಲ್ಲಿ 34.31 ಹೆಕ್ಟೇರ್‌ನಲ್ಲಿ, 99-2000 ದಲ್ಲಿ 22.40 ಹೆಕ್ಟೇರ್ ಕ್ಷೇತ್ರದಲ್ಲಿ ಬೆಳೆಯಲಾಗಿದೆ.

ಎಲ್ಲ ಎಣ್ಣೆ ಕಾಳು ಹಾಗೂ ಎಣ್ಣೆಕಾಳು ಬೆಳೆಗಾರರಿಗೆ ತಾರಕವಾದ ಎಣ್ಣೆ-ಗಿರಣಿಗಳೆಲ್ಲಾ ರಾಜ್ಯಾದ್ಯಂತ ಹಾಳಾಗಿ ಹೋಗುತ್ತಿದೆ, ಏಕೆ? ಇದನ್ನು ಗಮನಕ್ಕೆ ತೆಗೆದುಕೊಳ್ಳುವುದು ಸರಕಾರದ ಹಾಗೂ ಸರಕಾರದಲ್ಲಿಯ ಮಂತ್ರಿಗಳ ಹೊಣೆಗಾರಿಕೆ ಯಲ್ಲವೆ? ಈ ಬೆಳೆಗಾರರು ಹಾಗೂ ಎಣ್ಣೆ ಮಿಲ್ಲುಗಳು ಹಾಳಾಗಿ ಎಣ್ಣೆ ಉತ್ಪಾದನೆ ಕಡಿಮೆಯಾಗಿರುವುದರಿಂದ ಪರದೇಶಿ ಪಾಮ್-ಎಣ್ಣೆ ಹಾಗೂ ಇತರ ಎಣ್ಣೆಗಳೂ ಆಮದು ಆಗಿ ಜನತೆಗೆ ಪರಿಶುದ್ಧವಾದ ಉಣ್ಣುವ ಎಣ್ಣೆ ಸಿಗದಂತಾಗಿದೆ. ಕೋಟ್ಯಂತರ ಹಣ ಹಾಳು ಮಾಡಿ ಪಾಮ್-ಬೆಳೆ ಪಾಮ್-ಬೆಳೆಗಾರ ಹಾಗೂ ಪಾಮ್-ಎಣ್ಣೆ ಗಿರಣಿಗಳನ್ನು ಹಾಳು ಮಾಡಲಾಗಿದೆ. ಇದಕ್ಕೆಲ್ಲ ಕಾರಣ ನಿಷ್ಕ್ರಿಯ ಸರಕಾರವೇ ಕಾರಣವೆಂದು ಹೇಳದೆ ಗತ್ಯಂತರವಿಲ್ಲ. ಸರಕಾರದ ಕೆಲಸ ಎಲ್ಲರನ್ನೂ ಎಲ್ಲವನ್ನೂ ಸುಧಾರಿಸುವುದೇ ಹೊರತು ಎಣ್ಣೆ ಮಿಲ್ಲುಗಳನ್ನು ನಾಶಮಾಡುವುದು ಅಲ್ಲವೆನ್ನುವವರನ್ನು ಅರಿತು ಮುಂದಾದರೂ ಕೆಟ್ಟಿರುವ ಪರಿಸ್ಥಿತಿಯನ್ನು ಸುಧಾರಿಸುವುದು ಒಳ್ಳೆಯದು. ಎಣ್ಣೆಕಾಳು ಬೆಳೆಗಾರರೂ ಸಾಲಗಾರರಾಗಿದ್ದಾರೆ. ಎಣ್ಣೆ ಗಿರಣಿಗಳೂ ಖಾಸಗಿ ಕ್ಷೇತ್ರದಲ್ಲಿ, ಜಂಟಿಕ್ಷೇತ್ರದಲ್ಲಿ, ಸಾರ್ವಜನಿಕ ವಲಯದಲ್ಲಿ ಹಾಗೂ ಸಹಕಾರಿ ವಲಯದಲ್ಲಿ ಎಲ್ಲೆಲ್ಲಿಯೂ ಎಲ್ಲರೂ ಸಾಲಗಾರರಾಗಿ ನೆಲಕಚ್ಚಿದ್ದಾರೆ. ಅನೇಕರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅನೇಕರು ಆತ್ಮಹತ್ಯೆಯ ಹಾದಿಯಲ್ಲಿದ್ದಾರೆ. ರಾಷ್ಟ್ರೀಕೃತ ಬ್ಯಾಂಕುಗಳು, ಶೆಡ್ಯೂಲ್ ಬ್ಯಾಂಕುಗಳು, ಸಹಕಾರಿ ಬ್ಯಾಂಕುಗಳು, ರಾಜ್ಯ ಹಣಕಾಸು ಸಂಸ್ಥೆ ಇತ್ಯಾದಿಯವರು ಕೊಟ್ಟ ಸಾಲ ತಿರುಗಿ

ಬಾರದಂತೆ ಅಸಲು ಬಡ್ಡಿ ಕಟ್ಟದಂತಾಗಿ ರೈತರು, ವಿವಿಧ ಬ್ಯಾಂಕು, ವಿವಿಧ ಹಣಕಾಸು ಸಂಸ್ಥೆ, ಸಹಕಾರಿ ಬ್ಯಾಂಕ್, ಎಣ್ಣೆ ಮಿಲ್ಲುಗಳು ಎಲ್ಲವೂ ದಿವಾಳಿಯಾಗುತ್ತಿರುವಾಗ ಸರಕಾರ ಕಣ್ಣುಮುಚ್ಚಿ ಮೆಜಾ ಮಾಡುತ್ತ ಹೋಗುವುದಾದರೆ ಪ್ರಜಾತಂತ್ರ ವ್ಯವಸ್ಥೆಯಾದರೂ ಯಾರಿಗೆ ಏತಕ್ಕೆ ಬೇಕು.

ಇತ್ತೀಚಿನ ಅಧಿಕೃತ ಮಾಹಿತಿ ಪ್ರಕಾರ ರಾಜ್ಯದಲ್ಲಿ 31-3-2000ಕ್ಕೆ ಒಟ್ಟು 28708ಕ್ಕಿಂತ ಹೆಚ್ಚು ಸಹಕಾರ ಸಂಘಗಳಿವೆ. ಇವುಗಳ ಒಟ್ಟು ಸದಸ್ಯರ ಸಂಖ್ಯೆ 1.52 ಕೋಟಿ ಮೀರಿದೆ. ಈ ಸಂಘಗಳಲ್ಲಿ ಹೂಡಿರುವ ಬಂಡವಾಳ 1026.82 ಕೋಟಿ. ಸರಕಾರದ ಶೇರು ಬಂಡವಾಳ 410.75 ಕೋಟಿ. ರಾಜ್ಯದಲ್ಲಿ ಜಂಟಿ, ಖಾಸಗಿ, ಸರ್ಕಾರಿ ವಲಯದಲ್ಲಿ ಅದೆಷ್ಟು ಎಣ್ಣೆ ಗಿರಣಿಗಳಿವೆಯೆಂಬ ಮಾಹಿತಿ ಸರಕಾರಕ್ಕೆಯೇ ಇಲ್ಲ. ಸುದೈವವೋ ದುರ್ದೈವವೋ ಸಹಕಾರಿ ವಲಯದಲ್ಲಿ ಮಾತ್ರ 7 ಎಣ್ಣೆ ಗಿರಣಿಗಳಿವೆಯೆಂಬುದು ಸರಕಾರಕ್ಕೆ ಗೊತ್ತಿದೆ. ಈ ಎಲ್ಲಾ ಎಣ್ಣೆ ಗಿರಣಿಗಳು ಯಾವುವು ತಮ್ಮ ಕಾರ್ಯ ವ್ಯವಹಾರ ಉತ್ಪಾದನಾ ಸಾಮರ್ಥ್ಯಕ್ಕೆ ತಕ್ಕಂತೆ ಕೆಲಸ ನಿರ್ವಹಿಸುತ್ತಿಲ್ಲ. ಸಾಮರ್ಥ್ಯಕ್ಕೆ ತಕ್ಕಂತೆ ಎಣ್ಣೆ ಉತ್ಪಾದಿಸಲು ರೈತರಿಂದ ಎಣ್ಣೆಕಾಳುಗಳನ್ನು ಖರೀದಿಸಿ ಎಣ್ಣೆಕಾಳು ಬೆಳೆಗಾರರ ಬವಣೆಗೆ ಬರುತ್ತಿರಲಿಲ್ಲ. ರಾಜ್ಯದಲ್ಲಿ ಎಣ್ಣೆಕಾಳು ಲಭ್ಯವಿಲ್ಲ.

ಹೊರರಾಜ್ಯದಿಂದಾದರೂ ತರಿಸಿ ವ್ಯವಹಾರ ಮಾಡಬಹುದಾಗಿತ್ತು. ಆದರೆ ಮಾಡಿಲ್ಲ, ಮಾಡುತ್ತಿರುವುದಿಲ್ಲ. ರಾಜ್ಯದ ಎಣ್ಣೆ ಮಿಲ್ಲುಗಳಲ್ಲಿ ಹತ್ತಿಬೀಜ ಸಂಸ್ಕರಣ, ಸೂರ್ಯಕಾಂತಿ ಬೀಜ ಸಂಸ್ಕರಣ, ಶೇಂಗಾ ಬೀಜ ಸಂಸ್ಕರಣ, ಶೇಂಗಾ ಹಿಂಡಿ ಸಂಸ್ಕರಣ, ಸೋಯಾಬಿನ್ ಸಂಸ್ಕರಣ ಮಾಡಿ ಎಣ್ಣೆ ತಯಾರಿಸುವ, ಶುದ್ಧೀಕರಿಸಿ ಸಾಲ್ವೆಂಟ್ ಎಣ್ಣೆ ತಯಾರಿಸುವ ವಿವಿಧ ಘಟಕಗಳನ್ನು ಹೊಂದಿದ 7 ಮಿಲ್ಲುಗಳಿವೆ. ಒಂದನೆಯದು ಒಕ್ಕಲುತನ ಹುಟ್ಟುವಳಿ ಸಂಸ್ಕರಣ ಸಂಕೇಶ್ವರ. ಇದು 15 ವರ್ಷಗಳಿಂದ ಸ್ಥಗಿತಗೊಂಡಿದೆಯೆಂದು ಸರಕಾರ ಹೇಳುತ್ತಿದ್ದರೂ 99-2000ದಲ್ಲಿ ಗಳಿಸಿದ ಲಾಭ 0.49 ಲಕ್ಷ. 31-3-2000ಕ್ಕೆ ಕೂಡಿಬಿದ್ದ ಹಾನಿ 0.53 ಲಕ್ಷ. ಎರಡನೆಯದು ಮಲಪ್ರಭಾ ಸಹಕಾರಿ ಎಣ್ಣೆ ಗಿರಣಿ ನರಗುಂದ. ಈ ಮಿಲ್ಲು ಕೂಡ ಸಾಮರ್ಥ್ಯಕ್ಕೆ ತಕ್ಕಂತೆ ಉತ್ಪಾದನೆ ಮಾಡದೆ ಎಣ್ಣೆಕಾಳು ಬೆಳೆಗಾರರಿಗೆ ತಾರಕವಾಗದೆ 99-2000ದಲ್ಲಿ 4.89 ಕೋಟಿ ನಿವ್ವಳ ನಷ್ಟ ಹೊಂದಿ 31-3-2000ಕ್ಕೆ 29.16 ಕೋಟಿ ಕೂಡಿಬಿದ್ದ ಹಾನಿಯಲ್ಲಿ ಬಿದ್ದು ಒದ್ದಾಡುತ್ತಿದೆ. ಮೂರನೆಯದು ರೈತರ ಸಹಕಾರ ಎಣ್ಣೆ ಗಿರಣಿ ಬಿಂಕದ ಕಟ್ಟೆ, ತಾ। ಗದಗ. ಇದು ಕೂಡ ಸಾಕಷ್ಟು ಸಮರ್ಪಕ ವ್ಯವಹಾರ ಮಾಡದೆ 99-2000ದಲ್ಲಿ 93.00 ಲಕ್ಷ ನಿವ್ವಳ ಹಾನಿ ಹೊಂದಿ 31-3-2000ಕ್ಕೆ 2.38 ಕೋಟಿ ಕೂಡಿಬಿದ್ದ ಹಾನಿಯಲ್ಲಿದೆ. ನಾಲ್ಕನೆಯದು ಗದಗ ಸಹಕಾರಿ ಎಣ್ಣೆ ಗಿರಣಿ, ಗದಗ. ಇದು ಕೂಡ ಸಮರ್ಪಕ ಕಾರ್ಯ

ವ್ಯವಹಾರ ಮಾಡದೆ 99-2000 ದಲ್ಲಿ 1.15 ಲಕ್ಷ ಹಾನಿ ಹೊಂದಿ 31-3-2000ಕ್ಕೆ 8.36 ಕೋಟಿ ಕೂಡಿಬಿದ್ದ ಹಾನಿಯಲ್ಲಿದ್ದು ಸಮಾಧಿ ಸಮಾಪ್ತಿಯ ಹಾದಿಯಲ್ಲಿದೆ. ಐದನೆಯದು ಪ್ರಾಥಮಿಕ ಎಣ್ಣೆಬೀಜ ಬೆಳೆಗಾರರ ಸಹಕಾರ ಸಂಘಗಳ ಒಕ್ಕೂಟ, ರಾಯಚೂರು. ಇದು ಕೂಡ ಸರಿಯಾಗಿ ವ್ಯವಹಾರ ಮಾಡದೆ 99-2000ದಲ್ಲಿ 4.07 ಕೋಟಿ ನಿವ್ವಳ ನಷ್ಟ ಹೊಂದಿದ್ದು 31-3-2000ಕ್ಕೆ 11.68 ಕೋಟಿ ಕೂಡಿಬಿದ್ದ ಹಾನಿ ಹೊಂದಿದೆ. ಆರನೆಯದು ಪ್ರಾಥಮಿಕ ಎಣ್ಣೆಬೀಜ ಬೆಳೆಗಾರರ ಸಂಘಗಳ ಒಕ್ಕೂಟ, ಹೊಸಪೇಟೆ. ಇದು ಕೂಡ ಸಮರ್ಪಕ ವ್ಯವಹಾರ ಮಾಡದೆ 99-2000ದಲ್ಲಿ 12.60 ಲಕ್ಷ ನಿವ್ವಳ ಹಾನಿ ಹೊಂದಿ 31-3-2000ಕ್ಕೆ 24.79 ಕೋಟಿ ಕೂಡಿಬಿದ್ದ ಹಾನಿಯಲ್ಲಿದೆ. ಏಳನೆಯದು ಕರ್ನಾಟಕ ಸಹಕಾರಿ ಎಣ್ಣೆಬೀಜ ಬೆಳೆಗಾರರ ಮಹಾಮಂಡಳ ಬೆಂಗಳೂರು, ಎಣ್ಣೆ ಸಂಕೀರ್ಣ, ದಾವಣಗೆರೆ. ಇದು ಕೂಡ ಸಾಮರ್ಥ್ಯಕ್ಕೆ ತಕ್ಕಂತೆ ಎಣ್ಣೆಬೀಜ ಸಂಸ್ಕರಣೆ ಮಾಡದೆ ಸರಿಯಾಗಿ ಸಮರ್ಪಕ ವ್ಯವಹಾರ ಮಾಡದೆ 99-2000 ದಲ್ಲಿ 1.19 ಕೋಟಿ ನಿವ್ವಳ ಹಾನಿ ಹೊಂದಿ 31-3-2000ಕ್ಕೆ 9.41 ಕೋಟಿ ಕೂಡಿಬಿದ್ದ ಹಾನಿ ಹೊಂದಿದೆ. ಹೀಗೆ ಈ ಎಲ್ಲಾ ಏಳು ಎಣ್ಣೆ ಗಿರಣಿಗಳ ಅಸಮರ್ಪಕ ವ್ಯವಹಾರದಿಂದಾಗಿ ಸರಕಾರ ಹಾಗೂ ಸರಕಾರಿ ಅಧಿಕಾರಿಗಳ ಸೂಕ್ತ ಮಾರ್ಗದರ್ಶನ, ಧನಸಹಾಯ, ಆಡಳಿತ ಹಿಡಿತ, ಸಕಾಲಿಕ ಇನ್ಸ್‌ಪೆಕ್ಷನ್ ಇತ್ಯಾದಿ ಸಹಾಯ ಕ್ರಮವಿರದೆ ನಿಷ್ಕ್ರಿಯರಾಗಿರುವುದರಿಂದ ಈ ಮಿಲ್ಲುಗಳು ಸಹ ನಿಷ್ಕ್ರಿಯವಗಿ ಈ ಎಲ್ಲಾ ಏಳೂ ಮಿಲ್ಲುಗಳ ಕೂಡಿಬಿದ್ದ ಹಾನಿ 31-3-2000ಕ್ಕೆ 85.66 ಕೋಟಿಯಾಗಿದ್ದು, ಇಲ್ಲಿ ಸಾರ್ವಜನಿಕರ, ಶೇರುದಾರರ, ಸರಕಾರ ಹಾಗೂ ಬ್ಯಾಂಕುಗಳ ಹಣ ಸುರಕ್ಷಿತವಾಗಿಲ್ಲದಿರುವುದು ಸುಸ್ಪಷ್ಟ. ಈ ಎಲ್ಲಾ ಎಣ್ಣೆ ಸಂಘಗಳಲ್ಲದೆ ಕರ್ನಾಟಕ ರಾಜ್ಯ ಸಹಕಾರ ಎಣ್ಣೆಬೀಜ ಮಹಾಮಂಡಳ, ಬೆಂಗಳೂರು ಅಂತಾ ಒಂದಿದೆ. ಅದು ಕೂಡ 99-2000ದಲ್ಲಿ 1.08 ಕೋಟಿ ಹಾನಿ ಹೊಂದಿ 31-3-2000ಕ್ಕೆ 9.30 ಕೋಟಿ ಕೂಡಿಬಿದ್ದ ಹಾನಿಯಲ್ಲಿದೆ. ರಾಜ್ಯದ ಗ್ರಾಹಕರಿಗೆ ಉತ್ತಮವಾದ ಕುಸುಬೆ, ಸೂರ್ಯಕಾಂತಿ, ಶೇಂಗಾ ಇತ್ಯಾದಿ ಎಣ್ಣೆ ಊಟಕ್ಕೆ ಬೇಕೇಬೇಕು. ಎಣ್ಣೆಕಾಳು ಬೆಳಗಾರರಿಗೆ ಸಾಕಷ್ಟು ಸವಲತ್ತುಗಳು ದೊರಕಿ ಅವನು ಉತ್ತಮ ತಳಿಯ ಎಣ್ಣೆಕಾಳುಗಳನ್ನು ಉತ್ಪಾದಿಸಲೇಬೇಕು. ಬೆಳೆಗಾರ ಉತ್ಪಾದಿಸಿದ ಎಣ್ಣೆಕಾಳುಗಳನ್ನು ಖರೀದಿಸಿ ಎಣ್ಣೆ ಉತ್ಪತ್ತಿ ಮಾಡಲು ಸಹಕಾರಿ ಎಣ್ಣೆ ಗಿರಣಿಗಳು ಬೇಕೇಬೇಕು. ಎಲ್ಲಾ ಎಣ್ಣೆ ಗಿರಣಿಗಳು ತಮ್ಮ ಉತ್ಪಾದನಾ ಸಾಮರ್ಥ್ಯಕ್ಕೆ ತಕ್ಕಂತ ಉತ್ಪಾದನೆಯನ್ನು ಮಾಡಲೇಬೇಕು. ಗ್ರಾಹಕ, ಬೆಳೆಗಾರ, ಸಹಕಾರ ಸಂಘ - ಇವೆಲ್ಲವೂ ಉದ್ಧಾರವಾಗಿ ಸಮರ್ಪಕ ಕೆಲಸ ಮಾಡುವಂತೆ ದಕ್ಷತೆ ವಹಿಸುವುದು ಸರಕಾರದ ಹಾಗೂ ಅಧಿಕಾರಿಗಳ ಕರ್ತವ್ಯ. ಈ ಕರ್ತವ್ಯ ವೈಫಲ್ಯಗಳ ದುಷ್ಪರಿಣಾಮವೇ ಇಂದಿನ ಎಣ್ಣೆ ಹಾಗೂ ಎಣ್ಣೆಕಾಳುಗಳು ಪರದೇಶದಿಂದ ಆಮದು ಹೆಚ್ಚಾಗಿ ಬೆಳೆಗಾರ ಹಾಗೂ ಎಣ್ಣೆ ಮಿಲ್ಲುಗಳನ್ನು ದುರಂತಕ್ಕೆ ದೂಡಿದೆ. ಈ ದಿಶೆಯಲ್ಲಿ

ಸೂಕ್ತ ಕ್ರಮಗಳನ್ನು ತೆಗೆದುಕೊಂಡು ಎಲ್ಲರನ್ನು ಕಾಪಾಡುವುದು ಸರಕಾರದ ಪ್ರಥಮ ಕರ್ತವ್ಯ. ಭಾರತದಂತಹ ದೊಡ್ಡ ರಾಷ್ಟ್ರದಲ್ಲಿಯ ಈ ರಾಜ್ಯದ ರಾಜ್ಯ ಸರಕಾರ ಹೇರಳವಾದ ಎಣ್ಣೆಕಾಳು ಬೆಳೆವ ಕ್ಷೇತ್ರವಿದ್ದರೂ ಈ ಕ್ಷೇತ್ರದ ಹಾಗೂ ಎಣ್ಣೆ ಬೆಳೆಗಾರರ ಭವಿಷ್ಯದ ಬಗ್ಗೆ ಕಿಂಚಿತ್ತು ಚಿಂತೆ ಮಾಡದೆ ಸಾಕಷ್ಟು ಉತ್ಪಾದನಾ ಸಾಮರ್ಥ್ಯವಿರುವ ಎಣ್ಣೆ ಮಿಲ್ಲುಗಳ ಭವಿಷ್ಯದ ಬಗ್ಗೆ ಯಾವ ಚಿಂತನೆಯನ್ನು ಮಾಡದೆ ಇವೆಲ್ಲ ಅವಸಾನದತ್ತ ಸಾಗುತ್ತಿರುವುದನ್ನು ನೋಡಿದರೆ ಸರಕಾರದ ಸಹಕಾರಿ ಯಂತ್ರ ತುಕ್ಕುಹಿಡಿಯುತ್ತಿದೆಯೆಂದು ಹೇಳಬೇಕಾಗಿದೆ. ಸರಕಾರವು ನಷ್ಟದಲ್ಲಿರುವ ಬಿಂಕದಕಟ್ಟೆ ಎಣ್ಣೆ ಗಿರಣಿಗೆ 1.04 ಕೋಟಿ, ಗದಗ ಎಣ್ಣೆ ಗಿರಣಿಗೆ 1.79 ಕೋಟಿ, ನರಗುಂದ ಎಣ್ಣೆ ಗಿರಣಿಗೆ 22.26 ಕೋಟಿ, ಆರ್ಥಿಕ ನೆರವನ್ನು 31-3-2000ಕ್ಕೆ ಕೊಟ್ಟಿದ್ದು ಸರಿ ಕಂಡರೂ ಇಂತಹ ನೆರವನ್ನು ರಾಜ್ಯದಲ್ಲಿ ದಿವಾಳಿಯಾಗುತ್ತಿರುವ ಇನ್ನಿತರ ಎಲ್ಲಾ ಸಂಘಗಳಿಗೂ ಕೊಟ್ಟರೆ ಸರಕಾರ ಪಕ್ಷಪಾತಿ ಯಾಗದು. ಸಹಕಾರಿ ಚಳುವಳಿ ದಾರಿ ತಪ್ಪುತ್ತಿದ್ದು ಅದನ್ನು ಸರಿದಾರಿಗೆ ತಂದು ಸಹಕಾರ ಸರ್ವರಿಗೂ ಅಭಿವೃದ್ಧಿ ಸಾಧನವಾಗುವಂತೆ ಮಾಡುವಲ್ಲಿ ಎಲ್ಲರ ಚಿಂತನೆ ಹಾಗೂ ಕ್ರಿಯಾಶೀಲತೆ ಅವಶ್ಯ.

❑

ಒಂದು ವರ್ಷ ಸರಕಾರಿ ಸಾಧನೆ-ಬಾಧನೆ

ರಾಜ್ಯ ಸರಕಾರಗಳ ಕೆಲಸ ಪ್ರತಿವರ್ಷ ರಾಜ್ಯದ ಆಯವ್ಯಯದ ಅಂದಾಜು ಪಟ್ಟಿಯನ್ನು ತಯಾರಿಸಿ ವಿಧಾನ ಸಭೆ ಹಾಗೂ ವಿಧಾನ ಪರಿಷತ್ತುಗಳಲ್ಲಿ ಮಂಡಿಸಿ ಚರ್ಚಿಸಿದ ನಂತರ ಅಂಗೀಕಾರ ಪಡೆದು ಪ್ರತಿವರ್ಷದ ಏಪ್ರಿಲ್ ಒಂದರಿಂದ ಮುಂದಿನ ಮಾರ್ಚ್ 31ರ ವರೆಗಿನ ಒಂದು ಆರ್ಥಿಕ ವರ್ಷದ ಅವಧಿಯಲ್ಲಿ ನಿಗದಿತ ಬಜೆಟ್ ಪ್ರಕಾರ ವಿವಿಧ ಮೂಲಗಳಿಂದ ಆದಾಯ ಪಡೆದು ವಿವಿಧ ಮೂಲಗಳಿಗೆ ಆದಾಯದ ಹಣವನ್ನು ಬಟವಾಡೆ ವ ವೆಚ್ಚ ಮಾಡಬೇಕಾಗುತ್ತದೆ ಹಾಗೂ ನಿಗದಿತ ಆರ್ಥಿಕ ಹಾಗೂ ನಿಗದಿತ ಅಭಿವೃದ್ಧಿಯ ಆರ್ಥಿಕ ಹಾಗೂ ಭೌತಿಕ ಗುರಿಯನ್ನು ಸಾಧಿಸಲೇಬೇಕಾಗುತ್ತದೆ. ಇದು ಎಲ್ಲಾ ಯಾವುದೇ ಸರಕಾರದ ಮೂಲ ಹಾಗೂ ಕಡ್ಡಾಯದ ಗುರಿಯಾಗಿರುತ್ತದೆ. ರಾಜ್ಯ ಸರಕಾರಗಳು ಅಧಿಕಾರ ವಹಿಸಿಕೊಂಡ ಮೇಲೆ ಮುಂದಿನ ವರ್ಷದ ಆರ್ಥಿಕ ಹಾಗೂ ಭೌತಿಕ ಗುರಿಯನ್ನು ಸಾಧಿಸುವ ಬಗ್ಗೆ ವಿಧಾನ ಮಂಡಳಕ್ಕೆ ಆಶ್ವಾಸನೆ ಕೊಟ್ಟು ಅಂಗೀಕಾರ ಪಡೆದು ಕಾರ್ಯನಿರತವಾಗಬೇಕಾಗುತ್ತದೆ. ರಾಜ್ಯದ ಲಕ್ಷಾಂತರ ಸರಕಾರಿ ಹಾಗೂ ಸರಕಾರಿ ಇತರ ಯಂತ್ರಗಳ ಸರಕಾರೇತರ ಸಿಬ್ಬಂದಿಗೆ ಪ್ರತಿ ತಿಂಗಳು ಪ್ರತಿ ವರ್ಷ ನೂರಕ್ಕೆ ನೂರರಷ್ಟು ಅಂಗೀಕೃತ ಬಜೆಟ್‌ದಲ್ಲಿಯ ಆಯದಿಂದ ವೇತನ, ವಿಶ್ರಾಂತಿವೇತನ ಭತ್ಯೆ ಇತ್ಯಾದಿ ತಪ್ಪದೇ ಕೊಟ್ಟು ರಾಜ್ಯದ ನಾಲ್ಕು ಕೋಟಿ ಜನತೆಯ ಸರ್ವಾಂಗೀಣ ಅಭಿವೃದ್ಧಿಗೆ ಅವಶ್ಯಕವಾದ ನಿಗದಿತ ನಿರ್ದಿಷ್ಟ ಆಯವನ್ನು ಪಡೆಯದೆ ಹಣದ ಕೊರತೆಯಿಂದಾಗಿ ನಿಗದಿತ ಅಭಿವೃದ್ಧಿ ಕಾರ್ಯಗಳಿಗೆ ನಿಗದಿತ ಹಣವನ್ನು ವೆಚ್ಚ ಮಾಡಲು ಹಣವಿಲ್ಲದೆ ಸಹಸ್ರಾರು ಕೋಟಿ ವೆಚ್ಚ ಮಾಡದೆ ನಿಗದಿತ ಆರ್ಥಿಕ ಹಾಗೂ ಭೌತಿಕ ಗುರಿ ಸಾಧಿಸದೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಪ್ರಜೆಗಳಿಗೆ ಪ್ರಜಾಪ್ರತಿನಿಧಿಗಳ ಸರಕಾರ ವಂಚಿಸುತ್ತಾ ಪ್ರತಿವರ್ಷ ಬಂದಿರುವುದು ಜನತೆಯ ದುರ್ದೈವ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಮುಖ್ಯಮಂತ್ರಿಗಳಾದವರು ನಿಗದಿತ ಆಯ ಆದಾಯವನ್ನು ಪಡೆಯುವಲ್ಲಿ ವಿಫಲರಾಗಿ ನಿಗದಿತ ವ್ಯಯ ವೆಚ್ಚವನ್ನು ಮಾಡುವಲ್ಲಿ ಸಹ ವಿಫಲರಾಗಿ ನಿಗದಿತ ಆರ್ಥಿಕ ಹಾಗೂ ಭೌತಿಕ ಗುರಿ ಸಾಧಿಸುವಲ್ಲಿ ವಿಫಲರಾದ ಅದಕ್ಷ, ಅಸಮರ್ಥ, ಮಂತ್ರಿಗಳೇ ಇರಲಿ,

ಅಧಿಕಾರಿಗಳೇ ಇರಲಿ ಅವರನ್ನು ನಿರ್ದಾಕ್ಷಿಣ್ಯವಾಗಿ ನ್ಯಾಯನಿಷ್ಠುರಿಗಳಾಗಿ ದಾಕ್ಷಿಣ್ಯಪರರಾಗದೆ ಯಾವುದೇ ರಾಜಕಾರಣ ಹಾಗೂ ಧರ್ಮಕಾರಣಗಳ ಅನುಚಿತ ಪ್ರಭಾವಕ್ಕೆ ಮಣಿಯದೆ ಪದತ್ಯಾಗಗೊಳಿಸಿದರೆ ಮಾತ್ರ ಪ್ರತಿವರ್ಷ ನಿಗದಿತ ಅಭಿವೃದ್ಧಿ ಸಾಧಿಸಲು ಸಾಧ್ಯ.

ನಮ್ಮ ರಾಜ್ಯ ಸರಕಾರ 1999 ಅಕ್ಟೋಬರ್ ತಿಂಗಳಲ್ಲಿ ಅಧಿಕಾರಕ್ಕೆ ಬಂದು 99-2000ನೇ ಸಾಲಿನ ಕೊನೆಯ ಆರು ತಿಂಗಳ ಅವಧಿಯನ್ನು ಹಾಗೂ 2000-2001ನೇ ವರ್ಷದ ಮೊದಲ ಆರು ತಿಂಗಳ ಅವಧಿಯನ್ನು ಸೆಪ್ಟೆಂಬರ್ ತಿಂಗಳ ಅಂತ್ಯಕ್ಕೆ ಮುಗಿಸಿ ಒಟ್ಟಾರೆ 12 ತಿಂಗಳ ಅವಧಿಯ ಅಧಿಕಾರವನ್ನು 99 ಅಕ್ಟೋಬರ್‌ನಿಂದ 2000 ಸೆಪ್ಟೆಂಬರ್‌ರವರೆಗೆ ಮುಕ್ತಾಯಗೊಳಿಸಿ ಅಕ್ಟೋಬರ್ ಒಂದರಿಂದ ಎರಡನೆಯ ಆರ್ಥಿಕ ವರ್ಷಕ್ಕೆ ಕಾಲಿರಿಸಿದೆ. 1999-2000ನೇ ಸಾಲಿನ ಉತ್ತರಾರ್ಧ ಆರು ತಿಂಗಳು 20000-2001ನೇ ಸಾಲಿನ ಪೂರ್ವಾರ್ಧ ಆರು ತಿಂಗಳು ಹೀಗೆ ಈ ಮೊದಲನೇ ಒಂದು ವರ್ಷದಲ್ಲಿ ಶ್ರೀ ಕೃಷ್ಣರವರ ಸರಕಾರ ಸಾಧಿಸಿದ ಸಾಧನೆ-ಬಾಧನೆಯ ಬಗ್ಗೆ ಮೊದಲನೆಯ ವಾರ್ಷಿಕೋತ್ಸವವನ್ನು ಅಕ್ಟೋಬರ್ ತಿಂಗಳಲ್ಲಿ ಆಚರಿಸುವುದು ಅತಿಯೋಗ್ಯ ಹಾಗೂ ಯಥೋಚಿತವಾದುದು. ಹಿಂದಿನ ಶ್ರೀ ದೇವೇಗೌಡ ಹಾಗೂ ಶ್ರೀ ಜೆ.ಹೆಚ್. ಪಟೇಲರ ಜನತಾ ಸರಕಾರ ತಮ್ಮ ಅವಧಿಯಲ್ಲಿ ಸಮರ್ಪಕವಾದ ಅಧಿಕಾರ ಚಲಾಯಿಸದೆ ನಿಗದಿತ ಆರ್ಥಿಕ ಹಾಗೂ ಭೌತಿಕ ಗುರಿ ಸಾಧಿಸದೆ ಹೋಗಿದ್ದರಿಂದ ಹಾಗೂ ವಿಶೇಷವಾಗಿ 99-2000ನೇ ಸಾಲಿನ ಮೊದಲನೇ ಆರು ತಿಂಗಳ ಅವಧಿಯಲ್ಲಿ ಅಂದರೆ 99 ಏಪ್ರಿಲ್‌ನಿಂದ 99 ಸೆಪ್ಟೆಂಬರ್ ವರೆಗೆ ಸಮರ್ಥ ಹಾಗೂ ಸುಭದ್ರ ಆಡಳಿತ ಅಭಿವೃದ್ಧಿಯ ವೈಫಲ್ಯದ ಪರಿಣಾಮವಾಗಿ ಅವರ ಸರಕಾರವನ್ನು ರಾಜ್ಯದ ಜನತೆ ತಿರಸ್ಕರಿಸಿ ಉತ್ತಮ ಆಡಳಿತ ಅಭಿವೃದ್ಧಿಯ ಆಶೆಯನ್ನು ಹೊಂದಿ ಶ್ರೀ ಕೃಷ್ಣರವರ ಕಾಂಗ್ರೆಸ್ ಸರಕಾರವನ್ನು, ಶ್ರೀ ಜಗದೀಶ್ ಶೆಟ್ಟರವರ ಬಿಜೆಪಿ ವಿರೋಧ ಪಕ್ಷವನ್ನು, ಅಧಿಕಾರಕ್ಕೆ ಮುಂದಿನ 5 ವರ್ಷದ ಅವಧಿಗೆ ತಂದಿದ್ದಾರೆ. ಜನತೆಯ ಈ ಆಶೆಗೆ ಭಂಗ ಬಾರದಂತೆ ಉತ್ತಮ ಆಡಳಿತ ಹಾಗೂ ಅಭಿವೃದ್ಧಿಯನ್ನು ಒದಗಿಸುವುದು ಶ್ರೀ ಕೃಷ್ಣರವರ ಸರಕಾರದ ಕರ್ತವ್ಯ. ಈ ಕರ್ತವ್ಯವನ್ನು ಸೆಪ್ಟೆಂಬರ್ ಅಂತ್ಯಕ್ಕೆ ಮುಗಿದ ಹನ್ನೆರಡು ತಿಂಗಳ ಅವಧಿಯಲ್ಲಿ ಸಾಧಿಸಿದೆಯೇ ಎಂಬುದನ್ನು ರಾಜ್ಯದ ಜನತೆ ವಿಚಾರ ವಿನಿಮಯ ಮಾಡುವುದು ಈಗ ಅಗತ್ಯ.

99-2000ನೇ ವರ್ಷದ ಮೊದಲು ಆರು ತಿಂಗಳಲ್ಲಿ ಜನತಾ ಸರಕಾರ ನಿಗದಿತ ಆಯುವ್ಯಯ ಅನುಷ್ಠಾನ ಮಾಡಿ ಆರ್ಥಿಕ ಭೌತಿಕ ಗುರಿಯನ್ನು ಸಾಧಿಸುವಲ್ಲಿ ವಿಫಲವಾಗಿತ್ತು. ಅಕ್ಟೋಬರ್ ತಿಂಗಳಲ್ಲಿ ಅಧಿಕಾರಕ್ಕೆ ಬಂದು 2002ನೇ ಮಾರ್ಚ್ ತಿಂಗಳ ಕೊನೆಯವರೆಗೂ ಆರು ತಿಂಗಳಲ್ಲಿ ಆಡಳಿತ ಮಾಡಿದ ಕಾಂಗ್ರೆಸ್ ಸರಕಾರ ಆ ವರ್ಷದ

ನಿಗದಿತ ಆರ್ಥಿಕ ಭೌತಿಕ ಗುರಿಯನ್ನು ಸಾದಿಸಿದೆಯೇ? ಇಲ್ಲ, ಏಕೆ? 99-2000 ದಲ್ಲಿ ಬಜೆಟ್ ಪ್ರಕಾರ ನಿಗದಿತ ತೆರಿಗೆ ರಾಜಸ್ವ ಆದಾಯ ಗುರಿ 9603.57 ಕೋಟಿ. ಇದರಲ್ಲಿ 626.35 ಕೋಟಿ ಆದಾಯ ಪಡೆದಿಲ್ಲ. 2001-2001 ರಲ್ಲಿ ವಾರ್ಷಿಕ ರಾಜಸ್ವ ಆದಾಯ 10204.18 ಕೋಟಿ ಪಡೆಯಬೇಕು. ಇದರಲ್ಲಿ ಅರ್ಧ 5102.09 ಕೋಟಿ ಆದಾಯ ಸೆಪ್ಟೆಂಬರ್ ಕೊನೆಗೆ ಪಡೆದಿದೆಯೇ? 99-2000 ದಲ್ಲಿ ನಿಗದಿತ ತೆರಿಗೆ ರಹಿತ ರಾಜಸ್ವ ಆದಾಯ ಗುರಿ 1444.47 ಕೋಟಿ ಇದರಲ್ಲಿ 112.24 ಕೋಟಿ ಆದಾಯ ಪಡೆದಿಲ್ಲ. 2000-2001ರಲ್ಲಿ ವಾರ್ಷಿಕ ತೆರಿಗೆ ರಹಿತ ರಾಜಸ್ವ ಗುರಿ 1601.38 ಕೋಟಿ, ಇದರಲ್ಲಿ ಅರ್ಧ 800.19 ಕೋಟಿ ಆದಾಯ ಸೆಪ್ಟೆಂಬರ್ ಕೊನೆಗೆ ಪಡೆದಿದೆಯೇ? 99-2000ದಲ್ಲಿ ನಿಗದಿತ ಸಹಾಯನುದಾನ ಮತ್ತು ಅಂಶಾನುದಾನ ಆದಾಯ ಗುರಿ 2943.76 ಕೋಟಿ, ಇದರಲ್ಲಿ 149.21 ಕೋಟಿ ಆಯ ಪಡೆದಿಲ್ಲ. 2000-2001ರಲ್ಲಿ ಈ ಆಯದ ಗುರಿ 3407.11 ಕೋಟಿ, ಇದರಲ್ಲಿ ಅರ್ಧ 1703.56 ಕೋಟಿ ಆದಾಯ ಸೆಪ್ಟೆಂಬರ್ ಕೊನೆಗೆ ಪಡೆದಿದೆಯೇ? 99-2000 ವರ್ಷದಲ್ಲಿ ಒಟ್ಟಾರೆ ರೆವಿನ್ಯೂ ಆದಾಯ ನಿಗದಿತ 13991-78 ಕೋಟಿ, ಇದರಲ್ಲಿ 887.79 ಕೋಟಿ ಪಡೆದಿಲ್ಲ. 2000-2001ರಲ್ಲಿ ನಿಗದಿತ ಒಟ್ಟಾರೆ ರೆವಿನ್ಯೂ ಆದಾಯ 15212.66 ಕೋಟಿ, ಇದರಲ್ಲಿ ಅರ್ಧ 7606.33 ಕೋಟಿ ಸೆಪ್ಟೆಂಬರ್ ಕೊನೆಗೆ ಪಡೆದಿದೆಯೇ? ಸಾಮಾನ್ಯ ಸೇವೆ, ಸಾಮಾಜಿಕ ಸೇವೆ, ಆರ್ಥಿಕ ಸೇವೆ, ಸಹಾಯಾನುದಾನ ಮತ್ತು ಅಂಶಾನುದಾನಗಳಿಗೆ 1999-2000 ದಲ್ಲಿ ನಿಗದಿತ ಮೊತ್ತ 15390.98 ಕೋಟಿ ವೆಚ್ಚ ಮಾಡಬೇಕಾಗಿತ್ತು. ಇದರಲ್ಲಿ 713.78 ಕೋಟಿ ವೆಚ್ಚ ಮಾಡಿಲ್ಲ. 2000-2001ರಲ್ಲಿ 17154.94 ಕೋಟಿ ವೆಚ್ಚ ಮಾಡಬೇಕಾಗಿದ್ದು ಇದರಲ್ಲಿ ಅಲ್ಲಿ ಅರ್ಧ 8577.47 ಕೋಟಿಯನ್ನು ಸೆಪ್ಟೆಂಬರ್ ಕೊನೆಗೆ ವೆಚ್ಚ ಮಾಡಲಾಗಿದೆಯೇ?

ತೆರಿಗೆ ರಾಜಸ್ವ, ತೆರಿಗೆ ರಹಿತ ರಾಜಸ್ವ, ಸಹಾಯಾನುದಾನ ಮತ್ತು ಅಂಶಾನುದಾನ, ಸಾರ್ವಜನಿಕ ಋಣ ಸಾಲ ಮತ್ತು ಮುಂಗಡ, ಸಾರ್ವಜನಿಕ ಲೆಕ್ಕ ಇತ್ಯಾದಿ ಮೂಲ ಗಳಿಂದ 99-2000ರಲ್ಲಿ 35588.84 ಕೋಟಿ ಒಟ್ಟು ಆದಾಯ ಆಯ ಪಡೆಯಬೇಕಿದ್ದು, ಇದರಲ್ಲಿ 2451.84 ಕೋಟಿ ಪಡೆದಿಲ್ಲ. 2000-2001ದಲ್ಲಿ ನಿಗದಿತ ಈ ಒಟ್ಟಾರೆ ಆದಾಯ 35933.33 ಕೋಟಿ. ಇದರಲ್ಲಿ ಅರ್ಧ 17966.66 ಕಟಿ ಆದಾಯವನ್ನು ಸೆಪ್ಟೆಂಬರ್ ಕೊನೆಗೆ ಪಡೆದಿದೆಯೇ? 99-2000ದಲ್ಲಿ ರಾಜಸ್ವ ಲೆಕ್ಕ ವೆಚ್ಚ, ರಾಜಸ್ವ ಹೊರಗಿನ ಬಂಡವಾಳ ವೆಚ್ಚ, ಸಾರ್ವಜನಿಕ ಋಣ, ಸಾಲ ಮತ್ತು ಮುಂಗಡ, ಸಾರ್ವಜನಿಕ ಲೆಕ್ಕ ಇತ್ಯಾದಿ ಬಟವಾಡೆ ಮಾಡಬೇಕಾಗಿದ್ದ ವೆಚ್ಚ 34660.12 ಕೋಟಿ ಇದ್ದು ಇದರಲ್ಲಿ 2284.01 ಕೋಟಿ ಮೊತ್ತವನ್ನು ವೆಚ್ಚ ಮಾಡಿಲ್ಲ. 2000-2001ರಲ್ಲಿ ಈ ಮೂಲಗಳಿಗೆ ಮಾಡಬೇಕಾದ ನಿಗದಿತ ಬಟವಾಡೆ 36329.62 ಕೋಟಿ ಇದರಲ್ಲಿ ಅರ್ಧ 18164.81 ಕೋಟಿ ಸೆಪ್ಟೆಂಬರ್ ಕೊನೆಗೆ ವೆಚ್ಚವಾಗಿದೆಯೇ? ಪ್ರತಿ ತಿಂಗಳ ಕೊನೆಗೆ ಪ್ರತಿ

ಮೂರು ತಿಂಗಳ ಕೊನೆಗೆ ಸರಕಾರ ಪಡೆದ ಆದಾಯ ಹಾಗೂ ಸರಕಾರ ಮಾಡಿದ ವೆಚ್ಚಗಳ ತಾತ್ಕಾಲಿಕ ಅಂಕಿ-ಸಂಖ್ಯೆಗಳ ವಿವರಗಳನ್ನು ಪಡೆಯಲಿಕ್ಕೆ ಸರಕಾರಕ್ಕೆ ಹಣಕಾಸು ಇತ್ಯಾದಿ ಇಲಾಖೆಗಳ ಸಾಕಷ್ಟು ಸಿಬ್ಬಂದಿ ಸಾಧನಗಳಿವೆ. ಅಂತೆಯೇ 2000-2001ನೇ ಸಾಲಿನ ಸೆಪ್ಟೆಂಬರ್ ತಿಂಗಳ ಕೊನೆಗೆ ಇರುವ ಆರು ತಿಂಗಳ ಅವಧಿಯಲ್ಲಿ ಸರಕಾರ ಪಡೆದ ಆಯ ಹಾಗೂ ಮಾಡಿದ ಬಟವಾಡೆಯ ಮೊತ್ತ ಅಂಕಿ-ಸಂಖ್ಯೆ ವಿವರವನ್ನು ಸುಲಭವಾಗಿ ಸರಕಾರ ಪಡೆಯಬಹುದಾಗಿದ್ದು ಈ ಅಂಕಿ-ಸಂಖ್ಯೆಯನ್ನು ಹಾಗೂ ಹಿಂದಿನ ಆರು ತಿಂಗಳ ಅವಧಿಯ ಅಂಕಿ-ಸಂಖ್ಯೆಯನ್ನು ಹೀಗೆ ಒಂದು ವರ್ಷದ ಪ್ರಸ್ತುತ ಸರಕಾರದ ಆಯವ್ಯಯ ಅಂಕಿ-ಸಂಖ್ಯೆಯನ್ನು ಪಡೆದು ಪ್ರಕಟಿಸಿ ಒಂದು ವರ್ಷದ ಅವಧಿಯಲ್ಲಿ ಸಾಧಿಸಿದ ಆರ್ಥಿಕ ಹಾಗೂ ಭೌತಿಕ ಸಾಧನೆಯನ್ನು ಸರಕಾರ ಸಾರ್ವಜನಿಕರಿಗೆ ತಿಳಿಸುವುದು ಪ್ರಜೆಗಳಿಗೆ ಅರ್ಪಿಸುವ ಆಡಳಿತ ಅಭಿವೃದ್ಧಿ ಕಾಣಿಕೆಯಾಗ ಬಲ್ಲದು. ನಿಗದಿತ ಆರ್ಥಿಕ-ಭೌತಿಕ ಗುರಿಯನ್ನು ಸಾಧಿಸಿದ ಮಂತ್ರಿಗಳಿಗೆ ಶ್ರೀರಕ್ಷೆ ಪುರಸ್ಕಾರ ಹಾಗೂ ಸಾಧಿಸದ ಮಂತ್ರಿಗಳಿಗೆ ಶ್ರೀಶಿಕ್ಷೆ ತಿರಸ್ಕಾರ ಕೊಡುವುದು ಕೂಡ ಈ ವಾರ್ಷಿಕೋತ್ಸವದ ಅವಿಭಾಜ್ಯ ಅಂಗವಾಗಿರೇಕು. ಈ ದಿಶೆಯಲ್ಲಿ ಮುಖ್ಯಮಂತ್ರಿ ಶ್ರೀ ಕೃಷ್ಣರವರ ಪಾತ್ರವನ್ನು ರಾಜ್ಯ ಜನತೆ ಕಾದುನೋಡಬೇಕಾಗಿದೆ.

❑

ಸಾರಿಗೆ ಸುಧಾರಣೆ ಸ್ವಾಗತಾರ್ಹ
ಖಾಸಗೀಕರಣ ಖಂಡನೀಯ

ರಾಜ್ಯಾದ್ಯಂತ ಸ್ವಾವಲಂಬನೆ ಕಡಿಮೆಯಾಗುತ್ತ ಪರಾವಲಂಬನೆ ಹೆಚ್ಚಾಗುತ್ತಾ ಅನಿವಾರ್ಯವಾಗಿ ನಡೆದಿದೆ. ಪ್ರತಿನಿತ್ಯ ಪ್ರಜೆಗಳು ಕೊಡುವುದಕ್ಕಾಗಲೀ, ಕೊಳ್ಳುವುದಕ್ಕಾಗಲೀ, ಕಳುಹಿಸುವುದಕ್ಕಾಗಲೀ, ಕರೆದು ತರುವುದಕ್ಕಾಗಲೀ, ಹೀಗೆ ವಿವಿಧ ಉದ್ದೇಶಗಳಿಗಾಗಿ ಒಂದು ಊರಿನಿಂದ ಮತ್ತೊಂದು ಊರಿಗೆ ಹೋಗಲೇಬೇಕಾಗುತ್ತದೆ ಹಾಗೂ ಬರಲೇಬೇಕಾಗುತ್ತದೆ. ಈ ಪ್ರಯಾಣಿಕರೆಲ್ಲರಿಗೆ ಬಸ್ಸುಗಳ ಸಂಚಾರ ಇದೊಂದು ಪ್ರಮುಖ ಸಂಚಾರಿ ಸಾಧನವಾಗಿದೆ. ಸಾರ್ವಜನಿಕರಿಗೆ ಪ್ರಯಾಣಕ್ಕಾಗಿ ಸಕಾಲಿಕವಾದ ಸಾಕಷ್ಟು ಅನುಕೂಲಕರವಾದ ತೊಂದರೆದಾಯಕವಲ್ಲದ ಸಾರಿಗೆ ಸೌಲಭ್ಯ ಅತ್ಯಗತ್ಯವಾಗಿದೆ. ಈ ದಿಸೆಯಲ್ಲಿ ಈ ಸಾರಿಗೆ ಸಂಚಾರ ಸೌಲಭ್ಯವನ್ನು ಪ್ರಯಾಣಿಕರಿಗೆ ಒದಗಿಸುವುದು ರಾಜ್ಯ ಸರ್ಕಾರದ ಕರ್ತವ್ಯವೇ ಆಗಿದೆ. ಈ ಅಗತ್ಯತೆಯ ಅನುಷ್ಠಾನಕ್ಕಾಗಿಯೇ ರಾಜ್ಯ ಸರ್ಕಾರ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವನ್ನು ಅಧಿನಿಯಮಬದ್ಧವಾಗಿ ರಚಿಸಿ ಅನೇಕ ದಶಕಗಳು ಸಂದಿವೆ. ಮೊದಮೊದಲು ಅತ್ಯುತ್ತಮ ಸಾರಿಗೆ ವ್ಯವಸ್ಥೆಯನ್ನು ಸಾರ್ವಜನಿಕರಿಗೆ ಒದಗಿಸಿಕೊಟ್ಟು ಹಲವಾರು ಅನುಕೂಲತೆಗಳನ್ನು ಮಾಡಿ ಬಹುಜನರ ಪ್ರೀತಿ-ವಿಶ್ವಾಸಕ್ಕೆ ಪಾತ್ರವಾಗಿ ಉತ್ತಮ ಆಡಳಿತ ಮಾಡುತ್ತ ಲಾಭ ಗಳಿಸುತ್ತ ಬಂದಿತ್ತಾದರೂ ಇತ್ತೀಚೆಗೆ ಎಲ್ಲವೂ ಹದಗೆಟ್ಟು ಸಾರ್ವಜನಿಕರ, ಶಾಸಕರ, ಸಿ.ಎ.ಜಿ.ಯವರ ವೃತ್ತಪತ್ರಿಕೆಗಳ ಹಾಗೂ ಸಿಬ್ಬಂದಿ ನಾಯಕರ ಉಗ್ರ ಟೀಕೆಗೆ ಗುರಿಯಾಗಿದೆ. ಆಡಳಿತದಲ್ಲಿ ಸ್ವಾರ್ಥ, ಭ್ರಷ್ಟಾಚಾರ, ಪಕ್ಷಪಾತ, ಸ್ವಜನ-ಪಕ್ಷಪಾತ, ತಾರತಮ್ಯ, ಅಧಿಕಾರ ದುರುಪಯೋಗ, ದುರಾಡಳಿತ, ಅದಕ್ಷತೆ, ಅಸಮರ್ಥತೆ, ಕಳವೆ ಖರೀದಿ, ದುಂದುವೆಚ್ಚ, ಲೋಪ ಕಂಡುಬರುತ್ತಿವೆ. ಸಾರ್ವಜನಿಕರ, ಸಿಬ್ಬಂದಿಯ, ಶಾಸಕರ, ಸಿ.ಎ.ಜಿ.ಯವರ, ವೃತ್ತಪತ್ರಿಕೆಗಳ ಸೂಕ್ತವಾದ ಸಲಹೆ-ಸೂಚನೆಗಳನ್ನು ಆಡಳಿತ ಯಂತ್ರವು ಗಾಳಿಗೆ ತೂರಿ ಸಮರ್ಪಕ, ಸಮರ್ಥ ಕಾರ್ಯ ನಿರ್ವಹಿಸುವಲ್ಲಿ ಆಡಳಿತ

ವಿಫಲಗೊಂಡಿದೆ. ಸಾಕಷ್ಟು ಹೆಚ್ಚಿನ ಬಸ್ಸುಗಳನ್ನು ಒದಗಿಸದಿರುವುದು, ಸಾಕಷ್ಟು ಉತ್ತಮ ದರ್ಜೆಯ ಕಳಪೆಯಲ್ಲದ ಬಿಡಿಭಾಗಗಳನ್ನು ಒದಗಿಸದೇ ಇರುವುದು, ಪ್ರತಿಯೊಂದು ಬಸ್ಸಿನಲ್ಲಿ ಪ್ರಥಮ ಚಿಕಿತ್ಸೆ ಪೆಟ್ಟಿಗೆ, ತಾಡಪಲ್, ಜಾಕ್, ಸ್ಟೆಪ್ನಿ ಇತ್ಯಾದಿ ಅವಶ್ಯಕ ಉಪಕರಣಗಳನ್ನು ಒದಗಿಸದೇ ಇರುವುದು, ಪ್ರತಿದಿನವೂ ನಿಗದಿತ ಸಮಯಕ್ಕೆ ಸರಿಯಾಗಿ ಬಸ್ಸುಗಳನ್ನು ಬಿಡದೆ ಇರುವುದು, ಆಗಿಂದಾಗ್ಗೆ ನಿಗದಿತ ಶೆಡ್ಯೂಲ್‌ಗಳನ್ನು ರದ್ದು ಮಾಡುವುದು, ಹೊರಟ ಬಸ್ಸುಗಳು ತಲುಪಬೇಕಾದ ಸ್ಥಳಕ್ಕೆ ಹೋಗದೇ ನಡುಮಧ್ಯೆಯೇ ತಿರುಗಿ ಬರುವುದು, ಏಕಾಏಕಿ ನಿಗದಿತ ರೂಟ್ ಬಿಟ್ಟು ತಮಗೆ ಬೇಕಾದ ಮಾರ್ಗದಲ್ಲಿ ಬಸ್ಸು ಬಿಡುವುದು, ಇವೆಲ್ಲವುಗಳ ದುಷ್ಪರಿಣಾಮವಾಗಿ ಪ್ರಯಾಣಿಕರಿಗೆ ಅನಾನುಕೂಲ, ತೊಂದರೆ, ತಾಪತ್ರಯಗಳು ಹಾಗೂ ಸರಕಾರಕ್ಕೆ ಸಂಚಾರಿ ಆದಾಯ ನಷ್ಟ ಹೆಚ್ಚುತ್ತಾ ನಡೆದಿವೆ. ಕರ್ನಾಟಕ ರಾಜ್ಯದ ವ್ಯಾಪ್ತಿಗೆ ಹೊಂದಿದ ಏಕಮೇವ ನಿಗಮವನ್ನು ಅನಾವಶ್ಯಕವಾಗಿ ವಿಂಗಡಿಸಿ ಹೊಸದಾಗಿ ಬೆಂಗಳೂರು ನಗರ, ವಾಯುವ್ಯ ಕರ್ನಾಟಕ ಹಾಗೂ ಈಶಾನ್ಯ ಕರ್ನಾಟಕ ನಿಗಮಗಳನ್ನು ರಚಿಸಿ ಹೆಚ್ಚೆಚ್ಚು ದೊಡ್ಡ ವೇತನದ ಅಧಿಕಾರಿಗಳನ್ನು ನೇಮಿಸಿ ಆಡಳಿತ ಸುಧಾರಿಸದೆ ಹದಗೆಡಿಸಲಾಗಿದೆ. ಅನೇಕ ನಿಲ್ದಾಣಗಳಲ್ಲಿ ಅಗತ್ಯ ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸುವಲ್ಲಿ ಸಹ ಆಡಳಿತ ವಿಫಲವಾಗಿದೆ. ಸಾಕಷ್ಟು ಮೇಸ್ತ್ರಿ, ಮೆಕ್ಯಾನಿಕ್, ನಿರ್ವಾಹಕ, ಚಾಲಕ ಇತ್ಯಾದಿ ಅವಶ್ಯಕ ಸಿಬ್ಬಂದಿ ವರ್ಗವನ್ನು ನೇಮಿಸದೆ, ಬಹುತೇಕ ಎಲ್ಲಾ ಡಿಪೋಗಳಲ್ಲಿ ಬಸ್ಸುಗಳ ದುರಸ್ತಿಗೆ ತೊಂದರೆಯಾಗಿ ದಿನವಹಿ ಬಸ್ಸು ಸಂಚಾರಕ್ಕೆ ತಡೆಯಾಗುತ್ತಿರುವುದು ನಡೆದೇ ಇದೆ. ಪ್ರಾಮಾಣಿಕ ಕರ್ತವ್ಯನಿಷ್ಠೆ, ಸಿಬ್ಬಂದಿಗೆ ಪ್ರೋತ್ಸಾಹ ಸಿಗದೆ ಅಪ್ರಾಮಾಣಿಕ ಕರ್ತವ್ಯಗೇಡಿಗೆ ಮಾತ್ರ ಪ್ರೋತ್ಸಾಹ ಸಿಗುವುದು ನಡೆದೇ ಇದೆ. ಜನರ ಅನುಕೂಲತೆಗಾಗಿ ಕ್ಯಾಂಟೀನುಗಳನ್ನು ಪ್ರಾರಂಭಿಸದೆ ಅವುಗಳನ್ನು ಬಂದ್ ಇಟ್ಟಿರುವ ಉದಾಹರಣೆ ಕೂಡ ಅಲ್ಲಲ್ಲಿ ಇವೆ. ಇದರಿಂದ ಯಾರಿಗೆ ಅನಾನುಕೂಲ? ಸಾರಿಗೆ ನಿಗಮಕ್ಕೆ ವಿವಿಧ ರೀತಿಯಿಂದ ಆಡಳಿತ ಅಧಿಕಾರಿಗಳ ಕರ್ತವ್ಯಲೋಪ, ಹೈಗೈ ಹಾಗೂ ತಪ್ಪಿನಿಂದ ಕೋಟ್ಯಾಂತರ ನಷ್ಟವಾಗಿರುವುದು ಸಿ.ಎ.ಜಿ. ವರದಿಯಿಂದ ಸುಸ್ಪಷ್ಟಗೊಂಡಿವೆ.

31-3-97ಕ್ಕೆ ರಾಜ್ಯ ನಿಗಮದ ಕೂಡಿಬಿದ್ದ ಹಾನಿ 578.85 ಕೋಟಿಗೆ ಏರಿದ್ದು, 97-98ರಲ್ಲಿ 54.56 ಕೋಟಿ, 98-99ರಲ್ಲಿ 15.95 ಕೋಟಿ ಹಾನಿಯಾಗಿದ್ದು, 31-3-99ಕ್ಕೆ 649.35 ಕೋಟಿಗೆ ಏರಿದೆ. ಬಿ.ಎಂ.ಟಿ.ಯ ಕೂಡಿಬಿದ್ದ ಹಾನಿ 31-3-99ಕ್ಕೆ 76.54 ಕೋಟಿ ಇದೆ. ವಾಯುವ್ಯ ಕರ್ನಾಟಕ ಸಾರಿಗೆ ಸಂಸ್ಥೆಯ ಕೂಡಿಬಿದ್ದ ಹಾನಿ 140.11 ಕೋಟಿ ಎಂದು ಬಿ.ಪಿ.ಇ. ಹೇಳುತ್ತದೆ. 99-2000 ದಲ್ಲಿ ಕೆ.ಎಸ್.ಆರ್.ಟಿ.ಸಿ. 18.80 ಕೋಟಿ, ಬಿ.ಎಂ.ಟಿ.ಸಿ. 11.67 ಕೋಟಿ, ವಾಯುವ್ಯ ಟಿ.ಸಿ. 22.89 ಕೋಟಿ. ಹೀಗೆ ಈ ಮೂರು ಸೇರಿ 99-2000ದಲ್ಲಿ 53.36 ಕೋಟಿ ನಷ್ಟ ಹೊಂದಿದೆ. 1-4-2000 ರಿಂದ

31-8-2000ದ ಅವಧಿಯಲ್ಲಿ ಮೂರೂ ಸೇರಿ 10.07 ಕೋಟಿ ನಷ್ಟ ಹೊಂದಿವೆ. 96-97, 97-98, 98-99ರ ಈ ಮೂರು ವರ್ಷದ ಅವಧಿಯಲ್ಲಿ ಸರಕಾರ 108.47 ಕೋಟಿ ಮೊತ್ತದ ಸಬ್ಸಿಡಿಯನ್ನು ಕೊಟ್ಟಿದ್ದರೂ ಈ ನಷ್ಟ ಸಂಭವಿಸಿದೆ.

"ಖಾಸಗಿ ಪ್ರವರ್ತಕರು ಹಾಗೂ ಮ್ಯಾಕ್ಸಿಕ್ಯಾಬ್‌ಗಳ ಕಾನೂನುಬಾಹಿರ ಕಾರ್ಯಾಚರಣೆ" ಇತ್ಯಾದಿ ಕಾರಣಗಳಿಂದ ಸಾರಿಗೆ ಸಂಸ್ಥೆಗೆ ನಷ್ಟವಾಗುತ್ತಿದೆಯೆಂದು ಸರಕಾರ ಇತ್ತೀಚಿಗೆ ಹೇಳಿರುವುದು ಸರಕಾರಿ ಯಂತ್ರದ ವೈಫಲ್ಯತೆಯು ಸುಸ್ಪಷ್ಟ. ಕಾನೂನುಬಾಹಿರ ಕಾರ್ಯಾಚರಣೆ ತಡೆಗಟ್ಟುವ ಸಾಮರ್ಥ್ಯ ಸರಕಾರಕ್ಕೆ ಏಕಿಲ್ಲ? ಕಾನೂನುಬಾಹಿರ ಕಾರ್ಯಾಚರಣೆಯಿಂದ ಯಾರಿಗೆ ಎಷ್ಟೆಷ್ಟು ಮಾಮೂಲಿ ಎಂಬುದು ಸರಕಾರಕ್ಕೆ ಗೊತ್ತಿಲ್ಲವೇ?

ಸರಕಾರಿ ಆಡಳಿತ ಯಂತ್ರಗಳ ವೈಫಲ್ಯಗಳ ಪರಿಣಾಮವಾಗಿ ನಿಗಮದ ಕಾರ್ಯ ವೈಖರಿ ಪ್ರಯಾಣಿಕರಿಗೆ ಪೂರಕವಾಗಿ ನಷ್ಟ ಹೆಚ್ಚುತ್ತಿದ್ದರೂ ಅದನ್ನು ಸುಧಾರಿಸದೆ ರಾಜ್ಯಾದ್ಯಂತ ಸಂಪೂರ್ಣವಾಗಿ ಸಾರಿಗೆ ರಾಷ್ಟ್ರೀಕರಣ ಮಾಡದೇ ದುರುದ್ದೇಶಪೂರಿತ ದೂರಾಲೋಚನೆಯಿಂದ ಬಸ್ ಖಾಸಗೀಕರಣ ಮಾಡುವ ಉದ್ದೇಶವನ್ನೇನಾದರೂ ಸರಕಾರ ಹೊಂದಿದ್ದರೆ ಅದನ್ನು ಸರಕಾರ ಸಾರ್ವಜನಿಕ ಹಿತದೃಷ್ಟಿಯಿಂದ ಬಿಡುವುದು ಒಳ್ಳೆಯದು. ಹಾಗೇನಾದರೂ ಖಾಸಗೀಕರಣಕ್ಕೆ ಕೈ ಹಾಕಿದರೆ ಅದಕ್ಕೆ ಸಾರ್ವಜನಿಕರು ಹಾಗೂ ರಾಜ್ಯ ರಸ್ತೆ ಸಾರಿಗೆ ಮಜ್ದೂರ್ ಸಂಘ ಒಕ್ಕೂಟ ರಾಜ್ಯಾದ್ಯಂತ ತೀವ್ರ ಆಂದೋಲನ ಪ್ರಾರಂಭಿಸುವುದು ಅವಶ್ಯಕ, ಅತ್ಯಗತ್ಯ ಹಾಗೂ ಅನಿವಾರ್ಯ. ಸಾರ್ವಜನಿಕ ವಲಯದಲ್ಲಿ ಸಾರಿಗೆ ನಿಗಮದ ಪಾತ್ರ ಹಾಗೂ ಶ್ರಮಜೀವಿ ಸಿಬ್ಬಂದಿಯ ಪಾತ್ರ ಅಮೋಘವಾಗಿದೆ, ಅನಿವಾರ್ಯವಾಗಿದೆ, ಸಾರ್ವಜನಿಕರಿಗೆ ಉತ್ತಮ ಸಂಚಾರಿ ಸೌಲಭ್ಯ ಒದಗಿಸುವುದೇ ಆಗಿದೆ. ಸಂಸ್ಥೆ ದಿನದಿಂದ ದಿನಕ್ಕೆ, ವರ್ಷದಿಂದ ವರ್ಷ ಬೆಳೆಯುತ್ತಲೇ ಬಂದಿದೆ. ರಾಜ್ಯಾದ್ಯಂತ 29393 ಹಳ್ಳಿಗಳ ಪೈಕಿ ರಾಷ್ಟ್ರೀಕೃತ ವಲಯದ 14594, ರಾಷ್ಟ್ರೀಕೃತ ವಲಯವಲ್ಲದ 6929 ಹಳ್ಳಿಗಳಿಗೆ ಬಸ್ ಸಾರಿಗೆ ಸೌಲಭ್ಯಗಳನ್ನು ಕಲ್ಪಿಸಿ ಪ್ರಯಾಣಿಕರಿಗೆ ತಾರಕವಾಗಬೇಕಾಗಿರುವ ಈ ಸಂಸ್ಥೆಗೆ ಮಾರಕವಾಗಿರುವ ಲೋಪದೋಷ, ತಪ್ಪು, ತಡೆಗಳನ್ನು ಹಾಗೂ ಹದಗೆಟ್ಟ ಆಡಳಿತ ಯಂತ್ರವನ್ನು ಸರಿಪಡಿಸಬೇಕೇ ಹೊರತು ಸರ್ಕಾರ ಖಾಸಗೀಕರಣದ ಮಾತೆತ್ತುವುದು ಸಾಧುವಲ್ಲ. ಕರ್ನಾಟಕ ರಸ್ತೆ ಸಾರಿಗೆ ಮಜ್ದೂರ್ ಸಂಘ ಒಕ್ಕೂಟ ಹಾಗೂ ಅದರ ಪದಾಧಿಕಾರಿಗಳು ಆಗಿಂದಾಗ್ಗೆ ಅನೇಕ ಉತ್ತಮ ಸಲಹೆ, ಸೂಚನೆ, ಮಾರ್ಗದರ್ಶನಗಳನ್ನು ಸಾರಿಗೆ ಸಂಸ್ಥೆಯ ಅಧಿಕಾರಿಗಳಿಗೆ, ಸರಕಾರಕ್ಕೆ ನೀಡುತ್ತಲೇ ಇರುವುದು ಶ್ಲಾಘನೀಯ. ಈ ಒಕ್ಕೂಟದ ಮಹದುದ್ದೇಶ ಸಾರ್ವಜನಿಕರ, ಪ್ರಯಾಣಿಕರ, ಸಾರಿಗೆ ಸಂಸ್ಥೆಯ, ಸರಕಾರದ ಹಾಗೂ ಮಜ್ದೂರರ

ಹಿತರಕ್ಷಣೆ ಹಾಗೂ ಸಾರಿಗೆ ಸಂಸ್ಥೆಯ ಸೇವಾ ಸುಧಾರಣೆಯೇ ಮೂಲ ಗುರಿಯೆಂಬುದನ್ನು ಸರಕಾರ ಗಮನಿಸಿ ಬಸ್ ಖಾಸಗೀಕರಣದ ಯೋಜನೆ ಏನಾದರೂ ಇದ್ದರೆ ಅದನ್ನು ಕೈಬಿಟ್ಟು ಸಾರಿಗೆ ಸಂಸ್ಥೆಯ ಆಡಳಿತ ಸುಧಾರಣೆ ಹಾಗೂ ಕೆಟ್ಟಿರುವ ಸರಕಾರಿ ಯಂತ್ರದ ದುರಸ್ತಿ ಹಾಗೂ ಯಶಸ್ವಿ ಕಾರ್ಯಾಚರಣೆಯಲ್ಲಿ ತೊಡಗುವುದು ಆದ್ಯ ಕರ್ತವ್ಯವಾಗಬೇಕು. ಡಿಪೋ ಮ್ಯಾನೇಜರ್, ಡಿವಿಜನ್ ಕಂಟ್ರೋಲರ್, ರೀಜನಲ್ ಕಂಟ್ರೋಲರ್, ರಾಜ್ಯಮಟ್ಟದ ಅಧಿಕಾರಿಗಳು ಹಾಗೂ ಸಂಬಂಧಿಸಿದ ಮಂತ್ರಿಗಳು ಆಡಳಿತ ಜವಾಬ್ದಾರರಾಗಿದ್ದು ಆಡಳಿತ ವೈಫಲ್ಯ ಹಾಗೂ ಕರ್ತವ್ಯಚ್ಯುತಿಗೆ ಕಾರಣರಾದವರು ಯಾರೇ ಇರಲಿ ಅವರನ್ನು ರಾಜ್ಯದ ಆಡಳಿತ ಹೊಣೆ ಹೊತ್ತ ಮುಖ್ಯಮಂತ್ರಿಗಳು ದಾಕ್ಷಿಣ್ಯಪರರಾಗದೆ ನ್ಯಾಯನಿಷ್ಠುರಿಗಳಾಗಿ ಶಿಕ್ಷಿಸುವ ಕಟ್ಟುನಿಟ್ಟಿನ ದಿಟ್ಟ ಕ್ರಮವನ್ನು ತೆಗೆದುಕೊಂಡರೆ ಮಾತ್ರ ಲಾಭದಾಯಕ ಹಾಗೂ ಅನುಕೂಲಕರವಾದ ಸಾರಿಗೆ ಸುಧಾರಣೆ ಸಾಧ್ಯವೆಂಬುದನ್ನು ರಾಜ್ಯದ ಶಾಸಕಾಂಗ ಹಾಗೂ ಕಾರ್ಯಾಂಗ ಚಿಂತನ ಮಂಥನ ಮಾಡಿದರೆ ಮಾತ್ರ ದಿವಾಳಿಯಾಗಿ ಸಮಾಪನ ದಾರಿಯಲ್ಲಿರುವ ನಿಗಮ ಉಳಿದು ಸಿಬ್ಬಂದಿ ಬೀದಿ ಪಾಲಾಗದೆ ಸುಗಮ ಸಂಚಾರ ಪರಿಸ್ಥಿತಿ ಉಂಟಾಗಬಹುದಾಗಿದೆ. ಈ ದಿಶೆಯಲ್ಲಿ ಎಲ್ಲರ ಯೋಚನೆ ಯಥೋಚಿತ ಹಾಗೂ ಸಕಾಲಿಕ.

❑

ಸರಕಾರ-ಸಚಿವರ ಕರ್ತವ್ಯ ನಿಷ್ಠೆ : ರಾಜ್ಯಕ್ಕೆ ಹಿತಕಾರಿ

ರಾಜ್ಯದ ವಿಧಾನಸಭೆಯ ಚುನಾವಣೆಯಲ್ಲಿ ಬಹುಮತ ಪಡೆದ ರಾಜಕೀಯ ಪಕ್ಷದ ನಾಯಕರು ಮುಖ್ಯಮಂತ್ರಿಯಾಗಿ ತಮ್ಮ ಮಂತ್ರಿಮಂಡಲವನ್ನು ರಚಿಸಿಕೊಂಡು ಮುಂದಿನ ಐದು ವರ್ಷದ ಅವಧಿಗೆ ಸರ್ಕಾರವನ್ನು ನಡೆಸುತ್ತಾರೆ. ಬಹುಮತ ಪಡೆಯದ ರಾಜಕೀಯ ಪಕ್ಷಗಳಲ್ಲಿ ಅತಿದೊಡ್ಡ ಪಕ್ಷದ ನಾಯಕರು ಅಧಿಕೃತ ವಿರೋಧ ಪಕ್ಷದ ನಾಯಕರಾಗಿ ಕಾರ್ಯ ನಿರ್ವಹಿಸುತ್ತಾರೆ. ಇನ್ನುಳಿದ ಸಣ್ಣಪುಟ್ಟ ರಾಜಕೀಯ ಪಕ್ಷಗಳ ನಾಯಕರು ಗುಂಪು ನಾಯಕರಾಗಿ ಕಾರ್ಯ ನಿರ್ವಹಿಸುತ್ತಾರೆ. ಯಾವುದೇ ಸರಕಾರವನ್ನು ಹದ್ದುಬಸ್ತಿನಲ್ಲಿಡುವುದು ವಿರೋಧಿಗಳ ಕರ್ತವ್ಯ. ಸರಕಾರ ವಿಧಾನಸಭೆಯಲ್ಲಿ ಮಂಡಿಸಿದ ಆಯವ್ಯಯವು ಅಂಗೀಕಾರವಾದ ಪ್ರಕಾರ ಅಂದಾಜು ಆದಾಯವನ್ನು ಪಡೆಯುವುದು ಹಾಗೂ ಅಂದಾಜು ಹಣವನ್ನು ಬಟವಾಡೆ ಮಾಡುವುದು ಹಾಗೂ ಆಯವ್ಯಯದಲ್ಲಿ ಗೊತ್ತುಪಡಿಸಿದ ಪ್ರಕಾರ ಆರ್ಥಿಕ ಹಾಗೂ ಬೇಡಿಕೆ ಗುರಿಯನ್ನು ನೀಗಿಸುವುದು ಪ್ರತಿಯೊಂದು ಸರಕಾರಗಳ ಹಾಗೂ ಆ ಸರಕಾರಗಳ ಮುಖ್ಯಮಂತ್ರಿ ಹಾಗೂ ಮಂತ್ರಿಗಳ ಕಟ್ಟುನಿಟ್ಟಾದ ಕರ್ತವ್ಯ. ಈ ಕರ್ತವ್ಯ ನಿರ್ವಹಿಸುವಲ್ಲಿ ಸರಕಾರ ಹಾಗೂ ಸಚಿವರು ಯಶಸ್ವಿಯಾಗಲೇಬೇಕು ಅಂದರೆ ಮಾತ್ರ ರಾಜ್ಯದಲ್ಲಿ ನಿರೀಕ್ಷಿತ ಹಾಗೂ ಅಪೇಕ್ಷಿತ ಆಡಳಿತ ಹಾಗೂ ಅಭಿವೃದ್ಧಿ ಸಾಧಿಸಲಿಕ್ಕೆ ಸಾಧ್ಯವಿದೆ. ಸರಕಾರ ಹಾಗೂ ಸಚಿವರು ನಿಗದಿತ ಆರ್ಥಿಕ ಹಾಗೂ ಭೌತಿಕ ಗುರಿ ಸಾಧಿಸಲು ವಿಫಲಗೊಂಡು ಕರ್ತವ್ಯಚ್ಯುತಿ ಗೈದರೆ ರಾಜ್ಯದ ಆಡಳಿತ ಹಾಗೂ ಅಭಿವೃದ್ಧಿ ಕುಂಠಿತಗೊಳ್ಳುತ್ತದೆ ಹಾಗೂ ವಿಫಲಗೊಳ್ಳುತ್ತದೆ. ಪ್ರತಿಯೊಬ್ಬ ಮಂತ್ರಿಗೆ ಅವರಿಗೆ ವಹಿಸಿಕೊಟ್ಟ ಇಲಾಖೆಗೆ ಡಿಮ್ಯಾಂಡ್ ಪ್ರಕಾರ ಗ್ರ್ಯಾಂಟನ್ನು ವಿಧಾನಸಭೆ ಮಂಜೂರು ಮಾಡಿದ ಪ್ರಕಾರ ಆಯಾ ಮಂತ್ರಿಗಳು ತಮ್ಮ ತಮ್ಮ ಕರ್ತವ್ಯ ಕಾರ್ಯದಲ್ಲಿ ತಲ್ಲೀನರಾಗಿ ನಿಗದಿತ ಉದ್ದೇಶಗಳಿಗೆ ನಿಗದಿತ ಹಣ ವೆಚ್ಚ ಮಾಡಿ ನಿಗದಿತ ಗುರಿ ಸಾಧಿಸಿದರೆ ಮಾತ್ರ ಆ ಮಂತ್ರಿ ಕರ್ತವ್ಯ ನಿಷ್ಠರೆಂದೆನ್ನಬೇಕಾಗುತ್ತದೆ. ಈ ದಿಸೆಯಲ್ಲಿ ಎಲ್ಲಾ ಮಂತ್ರಿಗಳ ಮೇಲೆ

ಮುಖ್ಯಮಂತ್ರಿಗಳು ನಿಗಾ ಇಟ್ಟು, ಅವರು ಸಮರ್ಥರಾಗಿ ಕೆಲಸ ಮಾಡುವಂತೆ ನೋಡಿಕೊಳ್ಳುವುದೂ ಮುಖ್ಯಮಂತ್ರಿಗಳ ಜವಾಬ್ದಾರಿ. ವಿಧಾನಸಭೆಯಲ್ಲಿಯ ಅಧಿಕೃತ ಹಾಗೂ ಇತರ ವಿರೋಧ ಪಕ್ಷಗಳು ಹಾಗೂ ಇತರ ಸದಸ್ಯರು ಕೂಡಾ ಮಂಜೂರಾದ ಆಯವ್ಯಯದ ಪ್ರಕಾರ ಸರಕಾರ ಹಾಗೂ ಮಂತ್ರಿಗಳು ಆರ್ಥಿಕ ಹಾಗೂ ಭೌತಿಕ ಗುರಿ ಸಾಧಿಸುತ್ತಾರೋ ಇಲ್ಲವೋ ಎಂಬ ಬಗ್ಗೆ ಗಂಭೀರ ಚಿಂತನೆ ಮಾಡಲೇಬೇಕಾಗುತ್ತದೆ ಹಾಗೂ ಸರಕಾರದ ಸಚಿವರನ್ನು ಚುರುಕುಗೊಳಿಸಬೇಕಾಗುತ್ತದೆ. ಇದಕ್ಕೆ ತಪ್ಪಿದರೆ ವಿರೋಧ ಪಕ್ಷ ಸದಸ್ಯರು ಕೂಡ ಸರ್ಕಾರದ ವೈಫಲ್ಯದಲ್ಲಿ ಪಾಲುಗಾರರಾಗಿ ಪ್ರಜಾತಂತ್ರ ವ್ಯವಸ್ಥೆಗೆ ಎಲ್ಲರೂ ಕಂಟಕಪ್ರಾಯವಾಗಬೇಕಾಗುತ್ತದೆ. ರಾಜ್ಯ ಸರ್ಕಾರದ ಹಿಂದಿನ ವರ್ಷಗಳ ಅಧಿಕೃತ ಅಂಕಿ-ಸಂಖ್ಯೆಗಳನ್ನು ಅಧ್ಯಯನ ಮಾಡಿ ನೋಡಿದರೆ ಬಹುತೇಕ ಎಲ್ಲಾ ಸರಕಾರಗಳು ಹಾಗೂ ಸರ್ಕಾರದಲ್ಲಿಯ ಬಹುತೇಕ ಮಂತ್ರಿಗಳು ತಮ್ಮ ಕರ್ತವ್ಯವನ್ನು ಕ್ರಿಯಾಶೀಲರಾಗಿ ಮಾಡದೆ ತಮ್ಮ ಅಮೂಲ್ಯ ವೇಳೆ ಹರಣ ಮಾಡಿ ಬಜೆಟ್ ನಿಗದಿತ ಹಣವನ್ನು ಸಂಪೂರ್ಣವಾಗಿ ವೆಚ್ಚ ಮಾಡದೆ ಉಳಿಸಿ ಆರ್ಥಿಕ ಹಾಗೂ ಭೌತಿಕ ಗುರಿ ಸಾಧಿಸುವಲ್ಲಿ ವಿಫಲಗೊಂಡಿದ್ದು ಅಸಮರ್ಥರಾಗಿರುವುದು ಹಾಗೂ ಅವರ ಮೇಲೆ ಮುಖ್ಯಮಂತ್ರಿಗಳಾರೂ ಎಚ್ಚರಿಕೆ ಅಥವಾ ವಜಾ ಕ್ರಮ ತೆಗೆದುಕೊಂಡಿರುವ ಉದಾಹರಣೆಗಳೇ ನಮ್ಮ ರಾಜ್ಯದಲ್ಲಿಲ್ಲ ಅಥವಾ ಯಾವುದೇ ವಿರೋಧ ಪಕ್ಷ ಅಸಮರ್ಥ ಹಾಗೂ ಅದಕ್ಷ ಸರಕಾರದ ಮಂತ್ರಿಗಳ ಮೇಲೆ ಹರಿಹಾಯ್ದ ಉದಾಹರಣೆ ಕೂಡ ಇಲ್ಲ. ಅಧಿಕಾರಾರೂಢ ಸರಕಾರ ಹಾಗೂ ವಿರೋಧಿ ಪಕ್ಷಗಳ ವೈಫಲ್ಯದ ದುಷ್ಪರಿಣಾಮವಾಗಿ ರಾಜ್ಯದ ಜನತೆಗೆ ನಿಗದಿತ ಬಜೆಟ್ ಪ್ರಕಾರ ಸಿಗಬೇಕಾದ ಸೌಲಭ್ಯಗಳು, ಅನುಕೂಲತೆಗಳು, ಸೌಕರ್ಯಗಳು ಹಾಗೂ ಅಭಿವೃದ್ಧಿ ಕಲ್ಯಾಣ ಕಾರ್ಯಗಳು ಸಿಗದೆ ವಂಚಿತರಾಗುತ್ತಿರುವುದು ಸತತವಾಗಿ ಮುಂದುವರಿದೇ ಇದೆ. ಮಂತ್ರಿಗಳು ಹಾಗೂ ಸರಕಾರ ಬಜೆಟ್‌ನ ಅಂದಾಜು ಆರ್ಥಿಕ ಹಾಗೂ ಭೌತಿಕ ಗುರಿಯನ್ನು ಪ್ರಚಾರ ಮಾಡಿ ಹೇಳುತ್ತಾರೆಯೇ ವಿನಃ ಬಜೆಟ್ ಪ್ರಕಾರ ಹಿಂದಿನ ವರ್ಷಗಳಲ್ಲಿ ಅದೆಷ್ಟು ಹಣದ ಆರ್ಥಿಕ ಹಾಗೂ ಭೌತಿಕ ಗುರಿ ಸಾಧಿಸಲಾಯಿತು ಹಾಗೂ ಈ ಗುರಿಗೆ ಅದೆಷ್ಟು ಹಣ ವೆಚ್ಚ ಮಾಡಲಿಲ್ಲ, ಅದೆಷ್ಟು ಭೌತಿಕ ಗುರಿ ಸಾಧಿಸಲಿಲ್ಲ, ಈ ವೈಫಲ್ಯಕ್ಕೆ ಯಾರು ಹೊಣೆ? ಆ ಹೊಣೆಗೇಡಿಗಳ ಮೇಲೆ ಏಕೆ ಕ್ರಮ ತೆಗೆದುಕೊಳ್ಳಲಿಲ್ಲ, ಮುಂದೆ ಹೇಗೆ ವೈಫಲ್ಯವಾಗದಂತೆ ಏನು ಕ್ರಮ ತೆಗೆದುಕೊಳ್ಳಲಾಗುವುದೆಂಬ ಬಗ್ಗೆ ಯಾರೂ ಏನನ್ನು ಹೇಳದ ಮಾರಕ ಸಂಪ್ರದಾಯ ಸತತ ನಡೆದುಬಂದು ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗೆ ಭಾಧೀ ಪೆಟ್ಟು ಬಿದ್ದಿರುವುದು ಸುಸ್ಪಷ್ಟವಿದೆ. 94-95ರಿಂದ 98-99ರ ವರೆಗೆ ಕಂದಾಯ ಹಾಗೂ ಬಂಡವಾಳ ಪುರಸ್ಕೃತ, ಸಾರ್ವಜನಿಕ ಋಣ ಪುರಸ್ಕೃತ, ಸಾಲ ಮುಂಗಡ ಪುರಸ್ಕೃತ, ನಿಗದಿತ ಬಜೆಟ್ ಮೊತ್ತದಲ್ಲಿ ಅನೇಕ ಇಲಾಖೆಗಳಲ್ಲಿ 288-95 ಕೋಟಿ ಮೊತ್ತವನ್ನು ಹೆಚ್ಚು ವೆಚ್ಚ

ಮಾಡಿದ್ದರೂ ಅನೇಕ ಇಲಾಖೆಗಳಲ್ಲಿ 14326.14 ಕೋಟಿ ವೆಚ್ಚ ಮಾಡದೆ ಉಳಿಸಿ ಒಟ್ಟಾರೆ 14037.19 ಕೋಟಿ ನಿವ್ವಳ ಮೊತ್ತವನ್ನು ವೆಚ್ಚ ಮಾಡದೆ ಉಳಿಸಿರುವುದನ್ನು ನೋಡಿದರೆ ಬಜೆಟ್ ಕಾಗದದ ಕುದುರೆಯಾಗಿದೆ. ಪಶುಸಂಗೋಪನೆ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆ, ಅರಣ್ಯ, ಸಾರಿಗೆ, ಪೊಲೀಸ್, ಸೈನಿಕ ಕಲ್ಯಾಣ, ವೈದ್ಯಕೀಯ ಶಿಕ್ಷಣ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ವಸತಿ, ಬೆಂಗಳೂರು ಅಭಿವೃದ್ಧಿ, ಸಣ್ಣ ನೀರಾವರಿ, ಭಾರೀ ನೀರಾವರಿ, ನ್ಯಾಯಾಡಳಿತ, ಹಿಂದುಳಿದ ಪ್ರದೇಶ ಅಭಿವೃದ್ಧಿ, ಕಟ್ಟಡ, ಸಹಕಾರ, ಗ್ರಾಮೀಣಾಭಿವೃದ್ಧಿ, ಕಾರ್ಮಿಕ, ಪರಿಶಿಷ್ಟ ಜಾತಿ-ಪಂಗಡ ಕಲ್ಯಾಣ, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಮಲೆನಾಡು ಅಭಿವೃದ್ಧಿ ಇತ್ಯಾದಿ ಇನ್ನೂ ಅನೇಕ ಜನಪರ ಯೋಜನೆಗಳ ಅನುಷ್ಠಾನವನ್ನು ಕುಂಠಿತಗೊಳಿಸಲಾಗುತ್ತಿರುವುದು ಜನತೆಯ ದುರ್ದೈವ. 96-97, 97-98, 98-99ರಲ್ಲಿ ಗ್ರಾಮೀಣ ಅಭಿವೃದ್ಧಿ ಯೋಜನೆಗಳಿಗೆ ಸತತವಾಗಿ ವೆಚ್ಚ ಮಾಡಬೇಕಾದ ರೆವಿನ್ಯೂ ಪುರಸ್ಕೃತ 969.67 ಕೋಟಿಯನ್ನು ವೆಚ್ಚ ಮಾಡದೆ ಉಳಿಸಿದ್ದು, ಹೀಗಾದರೆ ಗ್ರಾಮೀಣ ಅಭಿವೃದ್ಧಿಯ ಭವಿಷ್ಯವಾದರೂ ಏನು? 285.55 ಕೋಟಿ ಬಂಡವಾಳ ಪುರಸ್ಕೃತ ವೆಚ್ಚವನ್ನು ಭಾರಿ ಮತ್ತು ನೀರಾವರಿ (ಮಧ್ಯಮ)ಗೆ ವೆಚ್ಚ ಮಾಡದೆ ಉಳಿಸಿದ್ದು ನೀರಾವರಿಯ ಸಾಧನೆಯಾದರೂ ಹೇಗೆ ಸಾಗಬೇಕು? 96-97, 97-98, 98-99ರಲ್ಲಿ ಕೂಡ ಸತತವಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣಕ್ಕಾಗಿ ನಿಗದಿತ ಹಣದಲ್ಲಿ 462.10 ಕೋಟಿ ವೆಚ್ಚ ಮಾಡದೆ ಉಳಿಸಿದರೆ ರಾಜ್ಯದಲ್ಲಿ ಜನತೆಯ ಆರೋಗ್ಯ ಕಾಪಾಡುವುದೆಂತು? ಮಹಿಳೆ ಮತ್ತು ಮಕ್ಕಳ ಕಲ್ಯಾಣ ಸಾಧನೆಗಾಗಿ ತೆಗೆದಿಟ್ಟ ಹಣದಲ್ಲಿ 96-97, 97-98, 98-99ರ ಅವಧಿಯಲ್ಲಿ 124.45 ಕೋಟಿ ರೆವಿನ್ಯೂ ಪುರಸ್ಕೃತ ವೆಚ್ಚವನ್ನು ವೆಚ್ಚ ಮಾಡದೆ ಉಳಿಸಲಾಗಿದೆ ಇದು ಸಮಂಜಸವೇ? 99-2000 ರಲ್ಲಿ ರಾಜ್ಯ ವಲಯ, ಜಿಲ್ಲಾ ವಲಯ, ಕೇಂದ್ರ ವಲಯ, ಮಹಿಳಾ ಮತ್ತು ಮಕ್ಕಳ ವಲಯದ ವಿವಿಧ ಮಹಿಳಾ ಮತ್ತು ಮಕ್ಕಳ ಪರ 32 ಯೋಜನೆಗಳಿಗೆ ಒದಗಿಸಿದ 551.04 ಕೋಟಿಯಲ್ಲಿ 491.45 ಕೋಟಿ ವೆಚ್ಚ ಮಾಡಿ 59.59 ಕೋಟಿ ಹಣವನ್ನು ವೆಚ್ಚ ಮಾಡದೆ ಉಳಿಸಲಾಗಿದೆ. ಪ್ರತಿ ತಿಂಗಳು ನೂರಕ್ಕೆ ನೂರರಷ್ಟು ನಿಗದಿತ ವೇತನ ಭತ್ಯೆ ತಪ್ಪದೆ ಪಡೆಯುತ್ತಿರುವ ಅಧಿಕಾರಿಗಳಿಗೆ ಹಾಗೂ ವಿವಿಧ ಹಂತದ ಪ್ರಜಾಪ್ರತಿನಿಧಿಗಳಿಗೆ ರಾಜ್ಯದ ಜನತೆಯ ಕಲ್ಯಾಣ ವ ಸರ್ವತೋಮುಖ ಅಭಿವೃದ್ಧಿಗೆ ನಿಗದಿತ ಹಣವನ್ನು ನೂರಕ್ಕೆ ನೂರರಷ್ಟು ಸಂಪೂರ್ಣವಾಗಿ ವೆಚ್ಚ ಮಾಡಿ, ಆರ್ಥಿಕ ಹಾಗೂ ಭೌತಿಕ ಅಭಿವೃದ್ಧಿಯನ್ನು ಸಾಧಿಸದೆ ಇರುವುದನ್ನು ನೋಡಿದರೆ ಪ್ರಜಾಪ್ರತಿನಿಧಿಗಳಿಗೆ ಹಾಗೂ ಸರ್ಕಾರಕ್ಕೆ ಹೊಣೆಗಾರಿಕೆಯ ಅರಿವೇ ಇಲ್ಲವೆಂಬಂತೆ ತೋರುತ್ತದೆ. ಅಧಿಕಾರಿ ಪ್ರಜಾಪ್ರತಿನಿಧಿ ಹಾಗೂ ಮಂತ್ರಿಗಳಲ್ಲಿ ಅನೇಕರು ಸಮರ್ಥರು ಹಾಗೂ ಜನಪರ ಕಾಳಜಿಯುಳ್ಳವರು ಇದ್ದಾರೆ. ಅಂತೆಯೇ ಅಸಮರ್ಥರು ಹಾಗೂ ಜನಪರ ಕಾಳಜಿಯಿಲ್ಲದವರೂ ಇದ್ದಾರೆ. ಮುಂದಿನ

ವರ್ಷದ ಭವಿಷ್ಯವನ್ನು ಮಾತ್ರ ಹೇಳದೆ ಹಿಂದಿನ ವರ್ಷಗಳಲ್ಲಿ ಭವಿಷ್ಯದ ವೈಫಲ್ಯದ ಬಗ್ಗೆ ಚಿಂತಿಸಿ, ಯೋಚಿಸಿ ಮುಂದೆ ಹೀಗಾದಂತೆ ಜವಾಬ್ದಾರಿ ವಹಿಸುವುದು ಎಲ್ಲರ ಕರ್ತವ್ಯವಾಗಬೇಕು. ಮುಖ್ಯಮಂತ್ರಿಗಳು ಕೂಡ ದಕ್ಷ ಮಂತ್ರಿಗಳು ಹಾಗೂ ಅಧಿಕಾರಿಯ ಬಗ್ಗೆ ಪ್ರಶಂಸನೆ ಮಾಡಿ ಅದಕ್ಷ ಹಾಗೂ ಅಸಮರ್ಥ ಅಧಿಕಾರಿ ಹಾಗೂ ಮಂತ್ರಿಗಳನ್ನು ಮನೆಗಪ್ಪಣೆ ಕೊಡಿಸುವ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡರೆ ಅಂಗೀಕೃತ ಹಾಗೂ ಘೋಷಿತ ಆಯವ್ಯಯ ಗುರಿ ಸಾಧನೆ ಬಗ್ಗೆ ಸರಕಾರ ಗಂಭೀರವಾಗಿ ಚಿಂತಿಸಿದರೆ ಪ್ರಜಾರಾಜ್ಯ ಆಡಳಿತ ಸುಧಾರಣೆಯಾದೀತು. ಇಲ್ಲವಾದರೆ ಪ್ರಜಾರಾಜ್ಯ ಆಡಳಿತ ಪಾಳೆಗಾರಿಕೆ ರಾಜ್ಯವಾಗಿ ಜನತೆ ಶೋಷಣೆಗೆ ಒಳಗಾಗಿ ವಿವಿಧ ಸೌಲಭ್ಯ ಹಾಗೂ ಸೌಕರ್ಯಗಳಿಂದ ವಂಚಿತರಾದಾರು.

❑

ಚೆನ್ನೈ ರಾಜ್ಯಪಾಲ-ಮುಖ್ಯಮಂತ್ರಿ - ಕಾರ್ಯವೈಖರಿ

"ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರು. ಇಲ್ಲಿ ಸಲ್ಲದವರು ಅಲ್ಲಿ ಎಲ್ಲೆಲ್ಲಿಯೂ ಸಲ್ಲರಯ್ಯಾ ಕೂಡಲಸಂಗಮೇಶ್ವರಾ." ಈ ನುಡಿಮುತ್ತು ಜಗಜ್ಯೋತಿ ಮಹಾಮಂತ್ರಿ ಬಸವೇಶ್ವರ - ಬಸವಣ್ಣನವರಿಂದ ಹನ್ನೆರಡನೆಯ ಶತಮಾನದಲ್ಲಿಯೇ ಮೂಡಿ ಬಂದ ಮಹಾವಾಣಿ. ಈ ವಾಣಿ ಇಂದಿಗೂ ಅನೇಕ ಸಂದರ್ಭ, ಅನೇಕ ಹಂತ, ಅನೇಕ ಪರಿಸ್ಥಿತಿಗಳಲ್ಲಿ ಕಂಡುಬರುತ್ತಿದೆ. ಈ ದಿವ್ಯವಾಣಿಯ ಅರಿವು ಅನೇಕ ಸಂವಿಧಾನಬದ್ಧ ಅಗ್ರಗಣ್ಯರಿಗೆ ಅರಿಯದಿರುವುದು ಹಾಗೂ ತಿಳಿಯದಿರುವುದು ಪ್ರಜಾತಂತ್ರ ವ್ಯವಸ್ಥೆಯ ಹಾಗೂ ಜನತೆಯ ದುರ್ದೈವ. ಗ್ರಾಮ ಮಟ್ಟದಲ್ಲಿ, ಗ್ರಾಮ ಪಂಚಾಯತಿ-ಗ್ರಾಮ ಸಹಕಾರ ಸಂಘಗಳಲ್ಲಿ ಉತ್ತಮ ಸೇವೆ ಸಲ್ಲಿಸಿ, ಗ್ರಾಮದವರೆಲ್ಲರಿಗೂ ಗ್ರಾಮದಲ್ಲಿ ಸಲ್ಲಲ್ಪಟ್ಟು ಅನೇಕರು ತಾಲ್ಲೂಕು ಮಟ್ಟ, ಜಿಲ್ಲಾ ಮಟ್ಟ, ರಾಜ್ಯ ಮಟ್ಟ ಹಾಗೂ ರಾಷ್ಟ್ರ ಮಟ್ಟದಲ್ಲಿ ಅನೇಕ ಸಂಘ-ಸಂಸ್ಥೆಗಳಲ್ಲಿ ಉತ್ತಮ ಸಾಮಾಜಿಕ ಸೇವೆ ಮಾಡಿ ಶಾಸಕರು, ಸಂಸದರು, ಮಂತ್ರಿಗಳು, ಮುಖ್ಯಮಂತ್ರಿಗಳು, ವಿಧಾನಸಭಾಧ್ಯಕ್ಷರು, ರಾಜ್ಯಪಾಲರು, ಉಪರಾಷ್ಟ್ರಪತಿಗಳು ಹಾಗೂ ರಾಷ್ಟ್ರಪತಿಗಳಾಗಿ ಸರ್ವೇಸಲ್ಲಿತ ಕಾರ್ಯನಿರ್ವಹಿಸಿ ಹಳ್ಳಿಗಳಲ್ಲಿ ಸಲ್ಲುವರು, ತಾಲ್ಲೂಕು, ಜಿಲ್ಲೆ, ರಾಜ್ಯದ ರಾಜಧಾನಿ, ರಾಷ್ಟ್ರದ ರಾಜಧಾನಿಗಳಲ್ಲಿ ಅಲ್ಲಿಯೂ ಸಲ್ಲಿದ್ದಾರೆ. ಇಂತಹ ಆದರ್ಶ ಪುರುಷರು ಈ ರಾಷ್ಟ್ರಾದ್ಯಂತ ಹುಟ್ಟಿ-ಬೆಳೆದು, ಬಾಳಿ-ಬದುಕಿ ಹೋಗಿದ್ದಾರೆ ಹಾಗೂ ಇನ್ನೂ ಜೀವಂತ ಬೆಳಗುತ್ತ ಜ್ಯೋತಿಗಳಾಗಿದ್ದಾರೆ. ಆದರೆ ಇದಕ್ಕೆ ಅಪವಾದವಿಲ್ಲವೆಂದಲ್ಲ. ರಾಷ್ಟ್ರಪತಿ, ಉಪರಾಷ್ಟ್ರಪತಿ, ಮುಖ್ಯ ನ್ಯಾಯಾಧೀಶ, ಪ್ರಧಾನಮಂತ್ರಿ, ರಾಜ್ಯಪಾಲ, ಮುಖ್ಯಮಂತ್ರಿ, ನ್ಯಾಯಾಧೀಶ, ಮಂತ್ರಿಗಳು, ಸಂಸದರು, ಶಾಸಕರು ಇತ್ಯಾದಿ ಸಂಸದೀಯ ಅಗ್ರಗಣ್ಯರು ತಾವು ಅಧಿಕಾರಕ್ಕೆ ಬರುವಾಗ ಭಾರತೀಯರ ಆರಾಧ್ಯದೈವ "ಈಶ್ವರ-ಅಲ್ಲಾ-ಗಾಡ್-ನಾಥ" ಇವರ ಹೆಸರಿನಲ್ಲಿ ಭಾರತೀಯರಾದ ಹಿಂದೂ-ಮುಸ್ಲಿಮ್-ಕ್ರಿಶ್ಚಿಯನ್-ಜೈನರೆಲ್ಲರೂ

ಪ್ರಮಾಣವಚನ ಸ್ವೀಕರಿಸಿ ಸಂವಿಧಾನಬದ್ಧರಾಗಿ ಕಾರ್ಯನಿರ್ವಹಿಸುತ್ತಾರೆ. ಇದಕ್ಕೆ ಅಪವಾದವಾಗಿ ಕೆಲವರು ಸಂವಿಧಾನವನ್ನು ಉಲ್ಲಂಘಿಸಿ ಯಾವ್ಯಾವರೋ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸುತ್ತಿದ್ದು ತಮ್ಮ ತಮ್ಮ ಪ್ರೇಯಸಿಯರ ಹೆಸರಿನಲ್ಲಿ ಕೂಡ ಪ್ರಮಾಣವಚನ ಮಾಡುವುದೊಂದು ಉಳಿದಿದೆ, ಅದು ದುರ್ದೈವ. ಈ ದೇಶದಲ್ಲಿ ಅಧಿನಿಯಮಬದ್ಧವಾಗಿ ಸದಸ್ಯನಾಗಿ ಚುನಾಯಿತನಾದವ ಮಾತ್ರ ಯಾವುದೇ ಅಧಿನಿಯಮಬದ್ಧ ಸಂಘ-ಸಂಸ್ಥೆಗಳ ಅಧ್ಯಕ್ಷನಾಗಬಹುದೇ ಹೊರತು ಸದಸ್ಯನಾಗಿ ಚುನಾಯಿತನಾಗದವ ಅಧ್ಯಕ್ಷನಾಗಲಾರ. ಆದರೆ ಅನೇಕ ಪ್ರಜಾತಂತ್ರ ವಿರೋಧಿ ಸರಕಾರಗಳು ತಮ್ಮ ರಾಜಕೀಯ ಪಕ್ಷದ ವ್ಯಕ್ತಿ ಸದಸ್ಯತ್ವದ ಚುನಾವಣೆಯಲ್ಲಿ ಸೋತರೆ ಅವನನ್ನೇ ಸದಸ್ಯ ಸ್ಥಾನಕ್ಕೆ ನಾಮಕರಣ ಮಾಡಿ ಸೋತವನನ್ನೇ ಅಧ್ಯಕ್ಷನನ್ನಾಗಿ ಮಾಡಿದ ಜೀವಂತ ಉದಾಹರಣೆ ನಮ್ಮ ರಾಷ್ಟ್ರದಲ್ಲಿ ಸಾಕಷ್ಟು ಇವೆ. ಇದು ಪ್ರಜಾತಂತ್ರ ವ್ಯವಸ್ಥೆಯ ಅವಹೇಳನ ಹಾಗೂ ಸ್ವಾತಂತ್ರ್ಯದ ದುರುಪಯೋಗ ಹಾಗೂ ಅಧಿಕಾರದ ದುರುಪಯೋಗ. ಇದಕ್ಕೆ ಉಪಾಯವೇ ಇಲ್ಲವೆ? ಸದಸ್ಯತ್ವಕ್ಕೆ ಅನರ್ಹರಾದವರು, ಸದಸ್ಯತ್ವ ಚುನಾವಣೆಗೆ ನಿಂತು ಸೋತವರು ಕಾನೂನುಬದ್ಧ ಸಂಘ-ಸಂಸ್ಥೆಗಳಿಗೆ ಸರಕಾರದಿಂದ ನಾಮಕರಣ ಸದಸ್ಯರಾಗಿ ಅಧ್ಯಕ್ಷರಾಗಬೇಕೇ? ಇದೆಲ್ಲಿಯ ನ್ಯಾಯ? ವಿಧಾನಸಭೆಗಳಿಗೆ, ಸಂಸತ್ತಿಗೆ ಸದಸ್ಯರಾಗಲು ಉಮೇದುವಾರನಾಗಿ ನಿಂತು ಸೋತು ಮತ್ತೆ ಚುನಾವಣೆಯಲ್ಲಿ ಸ್ಪರ್ಧಿಸಿ ಗೆದ್ದು ಅಧಿಕಾರ ಗದ್ದುಗೆಯನ್ನು ಏರಿದ ಉದಾಹರಣೆಗಳು ನಮ್ಮ ದೇಶದಲ್ಲಿವೆ. 1952ರಲ್ಲಿ ಮುಂಬಯಿ ರಾಜ್ಯದ ಮುಖ್ಯಮಂತ್ರಿಯಾಗಬೇಕೆಂಬ ಕಾಂಗ್ರೆಸ್ಸಿಗರ ಹಾಗೂ ಮುರಾರ್ಜಿ ದೇಸಾಯಿಯವರ ಉತ್ಕಟೇಚ್ಛೆಯಾಗಿತ್ತು. ಕಾಂಗ್ರೆಸ್ ಪಕ್ಷ ಭಾರೀ ಬಹುಮತದಿಂದ ಮುಂಬಯಿ ವಿಧಾನಸಭೆಗೆ ಆರಿಸಿಬಂತು. ಆದರೆ ದುರ್ದೈವವಶಾತ್ ಮುರಾರ್ಜಿ ದೇಸಾಯಿಯವರು ಆ ಚುನಾವಣೆಯಲ್ಲಿ ಸೋತರು. ಕಾನೂನು ಹಾಗೂ ಸಂವಿಧಾನಕ್ಕನುಗುಣವಾಗಿ ಸೋತವರು ಮತ್ತೆ ಚುನಾವಣೆಯಲ್ಲಿ ಸ್ಪರ್ಧಿಸಲಿಕ್ಕೆ ಯಾವ ಕಾಲಕ್ಕೂ ಅನರ್ಹರಲ್ಲ ಹಾಗೂ ಆರಿಸಿಬಂದರೆ ರಾಜ್ಯದ ಮುಖ್ಯಮಂತ್ರಿ ಅಥವಾ ಸದಸ್ಯರಾಗಲೂ ಯಾವ ಕಾಲಕ್ಕೂ ಅನರ್ಹರಲ್ಲ. ಸಂವಿಧಾನಕ್ಕನುಗುಣವಾಗಿ ಯಾವುದೇ ವ್ಯಕ್ತಿ, ಯಾವುದೇ ಸರಕಾರದಲ್ಲಿ ಮುಖ್ಯಮಂತ್ರಿಯಾದರೆ ಆತನು ಮುಖ್ಯಮಂತ್ರಿ ಅಥವಾ ಮಂತ್ರಿಯಾದ ಆರು ತಿಂಗಳೊಳಗಾಗಿ ಆಯಾ ಸಂಸತ್ತಿಗೆ ಅಥವಾ ವಿಧಾನಸಭೆಗೆ ಸದಸ್ಯನಾಗಿ ಚುನಾಯಿತನಾಗಬೇಕು ಇದು ಸಂವಿಧಾನಬದ್ಧ ಸಂಪ್ರದಾಯ, ಅಂತೆಯೇ ಮೊರಾರ್ಜಿ ದೇಸಾಯಿಯವರು ಸೋತರೂ ಶಾಸಕಾಂಗ ಪಕ್ಷ ಅವರನ್ನು ಮುಖ್ಯಮಂತ್ರಿಯಾಗಲು ಸಭಾನಾಯಕರನ್ನಾಗಿ ಚುನಾಯಿಸಿದ ಮೇರೆಗೆ ಮೊರಾರ್ಜಿಯವರು ಮುಖ್ಯಮಂತ್ರಿಯಾಗಿ ರಾಜ್ಯಪಾಲರಿಂದ ಪ್ರಮಾಣವಚನ ಸ್ವೀಕಾರ ಮಾಡಿದರು ಹಾಗೂ ರಾಜ್ಯದ ಮುಖ್ಯಮಂತ್ರಿಯಾದರು ಹಾಗೂ ಆರು ತಿಂಗಳೊಳಗಾಗಿ ಮುಂಬಯಿ

ವಿಧಾನಸಭೆಗೆ ಸದಸ್ಯರಾಗಿ ಆರಿಸಿಯೂ ಬಂದರು. ಇದು ಸಂವಿಧಾನಬದ್ಧ. ಆದರೆ ಯಾವುದೇ ಒಬ್ಬ ವಿಧಾನಸಭೆ ಸದಸ್ಯನಾಗಲು ಅನರ್ಹನಾಗಿ ಆತನ ಉಮೇದುವಾರಿಕೆಯ ಅರ್ಜಿ ಚುನಾವಣೆ ಅಧಿಕಾರಿಯಿಂದ ಸಂವಿಧಾನ ಹಾಗೂ ಕಾನೂನುಬದ್ಧವಾಗಿ ತಿರಸ್ಕೃತವಾದರೆ ಅವನು ಚುನಾವಣೆಗೆ ನಿಲ್ಲಲಾರ ಹಾಗೂ ಆ ಅನರ್ಹತೆ ರದ್ದಾಗುವವರೆಗೆ ಅವನು ಮತ್ತೆ ಮತ್ತೆ ಚುನಾವಣೆಗೆ ನಿಲ್ಲಲೂ ಅನರ್ಹ ಹಾಗೂ ಮಂತ್ರಿ, ಮುಖ್ಯಮಂತ್ರಿಯಾಗಲೂ ಬರಲಾರದು. ಕುಮಾರಿ ಜಯಲಲಿತಾರವರು ಅವರ ಉಮೇದುವಾರಿಕೆ ಅರ್ಜಿ ತಿರಸ್ಕರಿಸದಿದ್ದರೆ ಹಾಗೂ ಅವರು ಅನರ್ಹರಾಗದಿದ್ದರೆ ಅವರು ಚುನಾವಣೆಗೆ ನಿಲ್ಲದಿದ್ದರೂ ವಿಧಾನಸಭೆಯಲ್ಲಿ ಬಹುಮತ ಪಡೆದ ಅವರ ಶಾಸಕಾಂಗ ಪಕ್ಷ, ಅವರನ್ನು ಸಭಾನಾಯಕರನ್ನಾಗಿ ಅಥವಾ ಮುಖ್ಯಮಂತ್ರಿಯನ್ನಾಗಿ ಚುನಾಯಿಸಿದ್ದರೆ ರಾಜ್ಯಪಾಲರು ಅವರಿಗೆ ಮುಖ್ಯಮಂತ್ರಿಯಾಗಲು ಆಹ್ವಾನಕೊಟ್ಟು ಪ್ರಮಾಣ ವಚನ ಬೋಧಿಸಬಹುದಾಗಿತ್ತು. ಆದರೆ ಜಯಲಲಿತಾರವರು ವಿಧಾನಸಭೆ ಸದಸ್ಯರಾಗಲು ಚುನಾವಣೆಗೆ ನಿಲ್ಲಲು ಉಮೇದುವಾರಿಕೆಯನ್ನು ಸಲ್ಲಿಸಿ ಆ ನಾಮಪತ್ರ ಚುನಾವಣಾಧಿಕಾರಿಗಳಿಂದ ಚುನಾವಣೆಗೆ ನಿಲ್ಲಲು ಅನರ್ಹರೆಂದು ಸಂವಿಧಾನ ಹಾಗೂ ಕಾನೂನುಬದ್ಧ ತೀರ್ಪನ್ನು ಕೊಟ್ಟ ಮೇಲೆ ಆ ತೀರ್ಪು ರದ್ದಾಗುವವರೆಗೆ ಅವರು ಸದಸ್ಯರಾಗಲು ಬರಲಾರದು. ಅನರ್ಹತೆಯನ್ನು ರದ್ದು ಮಾಡುವ ಪ್ರಾಧಿಕಾರ, ಕೋರ್ಟ್ ಯಾವುದೇ ಇರಲಿ, ಅದು ತರಾತುರಿಯಿಂದ ಮಾಡದೆ ತನಗೆ ಅವಶ್ಯವಿರುವ ಅವಧಿಯನ್ನು ತೀರ್ಮಾನ ಕೊಡಲು ತೆಗೆದುಕೊಳ್ಳಬೇಕಾಗುತ್ತದೆ. ರಾಜ್ಯಪಾಲರು ಹಾಗೂ ಜಯಲಲಿತಾರವರು ತರಾತುರಿ ಮಾಡಿದ್ದು ಅದು ನ್ಯಾಯಸಮ್ಮತವಾಗುವುದಿಲ್ಲ. ಜಯಲಲಿತಾರವರು ತಮ್ಮ ಅರ್ಹತೆ, ಅನರ್ಹತೆ ಪ್ರಶ್ನೆ ತೀರ್ಮಾನವಾಗುವವರೆಗೆ ತಡೆದು ಒಂದು ವೇಳೆ ಅನರ್ಹತೆ ರದ್ದಾದರೆ ಆ ಕೂಡಲೇ ಮುಖ್ಯಮಂತ್ರಿಯಾಗಲು ಅವಕಾಶ ಮಾಡಿಕೊಳ್ಳಬಹುದಾಗಿತ್ತು. ಅಲ್ಲಿಯವರೆಗೆ ಯಾರನ್ನಾದರೂ ಮುಖ್ಯಮಂತ್ರಿಯನ್ನಾಗಿ ಪಟ್ಟಕ್ಕೆ ಕೂಡ್ರಿಸಿ ಸದಸ್ಯತ್ವದ ಅರ್ಹತೆ ಪಡೆದ ಕೂಡಲೇ ಸದಸ್ಯರಾಗಿರದಿದ್ದರೂ ಶಾಸಕಾಂಗದ ನಾಯಕರಾಗಿ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿ ಆ ನಂತರ ಆರು ತಿಂಗಳ ಒಳಗಾಗಿ ಚುನಾವಣೆಯಲ್ಲಿ ಗೆದ್ದು ಅಧಿಕಾರದಲ್ಲಿ ಮುಂದುವರೆಯಬಹುದಾಗಿತ್ತು. ಈ ಎಲ್ಲ ಹಿನ್ನೆಲೆಯಲ್ಲಿ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗದ ಅಧಿಪತಿಗಳಿಂದ ಹೆಚ್ಚಿನ ವಿಶೇಷ ಜ್ಞಾನ ಹಾಗೂ ಪ್ರತ್ಯಕ್ಷ ಅನುಭವವಿರಬೇಕಾದ ರಾಜ್ಯದ ಸಂವಿಧಾನಬದ್ಧ ಅಧಿಪತಿ ರಾಜ್ಯಪಾಲರು ದುಡುಕದೆ, ಜಯಲಲಿತಾರವರಿಗೆ ಮಾರ್ಗದರ್ಶನ ಮಾಡದೆ, ಏಕಾಏಕಿ ಆಹ್ವಾನಿಸಿ ಪ್ರಮಾಣವಚನ ಬೋಧಿಸಿ ಒಬ್ಬ ಅನರ್ಹರನ್ನು ರಾಜ್ಯದ ಕಾರ್ಯಾಂಗದ ಮುಖ್ಯಸ್ಥನನ್ನಾಗಿ ಮಾಡಿ ರಾಜ್ಯದಲ್ಲಿ ಆಡಳಿತಯಂತ್ರ ವಿಫಲವಾಗಿ ಅನಾಗರಿಕತೆ, ಅರಾಜಕತೆ, ಅಶಾಂತಿ, ಕಾನೂನುಗಳ ಉಲ್ಲಂಘನೆ, ಸಂವಿಧಾನ ಉಲ್ಲಂಘನೆ, ಅಧಿಕಾರ

ದುರುಪಯೋಗ, ದುರಾಡಳಿತ, ಪಕ್ಷಪಾತ, ಸ್ವಜನ ಪಕ್ಷಪಾತ, ಸ್ವಾರ್ಥ ಇತ್ಯಾದಿ ಅಕ್ರಮಗಳು ಏನು ಆಗಬಾರದಾಗಿತ್ತೋ ಆ ಎಲ್ಲವೂ ಆಗಿ ಸಂವಿಧಾನ ಕಲಂ 356ನೇ ಬ್ರಹ್ಮಾಸ್ತ್ರ ಪ್ರಯೋಗಕ್ಕೆ ವಾತಾವರಣವಾಗಿರುವುದು ನಮ್ಮ ರಾಷ್ಟ್ರದಲ್ಲಿಯ ಅಪ್ರಬುದ್ಧ ಪ್ರಜಾತಂತ್ರದ ಅಸ್ತಿತ್ವದ ಹಾಗೂ ಅಸಮರ್ಥರ ಕೈಯಲ್ಲಿಯ ಆಡಳಿತ ಯಂತ್ರಗಳ ವೈಫಲ್ಯದ ಜೀವಂತ ಕುರುಹುಗಳು. ಇವೆಲ್ಲವುಗಳ ದುಷ್ಪರಿಣಾಮುವಾಗಿ ರಾಜ್ಯಪಾಲರ ನಿರ್ಗಮನವಾಗಿರುವುದು ದುರಂತ. ಈ ಬಗ್ಗೆ ಎಲ್ಲರ ಚಿಂತನೆ ಅಗತ್ಯ. ❑

ಪ್ರಜಾತಂತ್ರ ವ್ಯವಸ್ಥೆಯಲ್ಲಿ ಡಿ.ಕೆ. ನಾಯಕರ ಕೊಡುಗೆ

ಪುರಾತನ ಕಾಲದ ಪಾಳೇಗಾರರು ಹಾಗೂ ಸರ್ವಾಧಿಕಾರಿಗಳ ಆಡಳಿತ ದೂರ ಸರಿದಿದೆ. ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದೆ. ಪ್ರಜಾತಂತ್ರ ವ್ಯವಸ್ಥೆಯ ಗಣರಾಜ್ಯ ಅಸ್ತಿತ್ವದಲ್ಲಿ ಬಂದಿದೆ. ಪ್ರಜೆಗಳೇ ಈ ದೇಶದ ಪ್ರಭುಗಳು. ಈ ಪ್ರಭುಗಳೇ ತಮ್ಮ ಪ್ರಜಾಪ್ರತಿನಿಧಿ ನಾಯಕರ ಮುಖಾಂತರ ಸಂವಿಧಾನ ಪದ್ಧತಿಗಳಿಗನುಗುಣವಾಗಿ ಪಂಚಾಯತ್ ರಾಜ್ ಸಂಸ್ಥೆ, ವಿಧಾನ ಸಭೆ ಹಾಗೂ ಲೋಕ ಸಭೆಗಳ ಮುಖಾಂತರ ಹಳ್ಳಿಯಿಂದ ದಿಲ್ಲಿಯವರೆಗೆ ಗ್ರಾಮ, ತಾಲ್ಲೂಕು, ಜಿಲ್ಲೆ, ರಾಜ್ಯ ಹಾಗೂ ಕೇಂದ್ರ ಸರಕಾರಗಳನ್ನು ಆತ್ಮಗೌರವ, ಆತ್ಮಾಭಿಮಾನ ಹಾಗೂ ಸ್ವಾಭಿಮಾನದಿಂದ ನಡೆಸುತ್ತಿದ್ದಾರೆ. ಇದಕ್ಕೆ ಅಪವಾದಗಳು ಅಲ್ಲಲ್ಲಿ ಚುನಾಯಿತ ಪ್ರತಿನಿಧಿ ನಾಯಕರಿಂದ ಕಂಡುಬರುತ್ತಿವೆ ಹಾಗೂ ಪ್ರಜಾತಂತ್ರ ವ್ಯವಸ್ಥೆಗೆ ಅಪಚಾರ ಬಗೆಯಲಾಗುತ್ತಿದೆ. ಅದು ಬೇರೆ ವಿಷಯ. ಆದಾಗ್ಯೂ ಇದಕ್ಕೆ ಇಂಬುಕೊಡದಂತೆ ಪ್ರಜಾಪ್ರತಿನಿಧಿಗಳಾದವರು ಘನತೆ, ಗೌರವ, ಸ್ವಾಭಾಮಾನ, ಆತ್ಮಗೌರವ, ನಿಸ್ವಾರ್ಥ, ಪ್ರಾಮಾಣಿಕ, ದಕ್ಷತೆ ನಿಷ್ಪಕ್ಷಪಾತ, ಕ್ರಿಯಾಶೀಲ ಇತ್ಯಾದಿ ಪ್ರಜಾತಂತ್ರ ಮಾನವೀಯ ಮೌಲ್ಯಗಳನ್ನು ಹೊಂದಿ ತಮ್ಮ ತಮ್ಮ ಚುನಾಯಿತ ಅವಧಿಯಲ್ಲಿ ಮೌಲ್ಯಗಳನ್ನು ಸಂಪಾದಿಸಿಕೊಂಡು ಜನ ಪ್ರತಿನಿಧಿಯ ನಾಯಕರಾಗಿ, ಶಾಸಕರಾಗಿ, ಮಂತ್ರಿಗಳಾಗಿ, ಸಂಸದರಾಗಿ ಸಾರ್ವಜನಿಕ ಸೇವೆ ಮಾಡಿದ ಹಾಗೂ ಅಧಿಕಾರ ಚಲಾಯಿಸಿದವರಲ್ಲಿ ಆದರ್ಶ ಪುರುಷ ಡಿ.ಕೆ. ನಾಯಕರೆಂದು ಹೇಳಲಿಕ್ಕೆ ನನಗೆ ತುಂಬಾ ಅಭಿಮಾನ ಹಾಗೂ ಹೆಮ್ಮೆ ಎನಿಸುತ್ತದೆ.

ತಾ। 7-7-1927ರಂದು ಜನಿಸಿದ ಶ್ರೀ ಡಿ.ಕೆ. ನಾಯಕರು ಧಾರವಾಡದಲ್ಲಿ ನನ್ನ ಸ್ನೇಹಿತರು. ಬೆಳಗಾವಿ ಆರ್.ಎಲ್.ಎಸ್.ಲಾ ಕಾಲೇಜಿನಲ್ಲಿ ನನ್ನ ಸಹಪಾಟಿ. ಮುಂದೆ ನ್ಯಾಯವಾದಿಗಳಾಗಿ ಇಬ್ಬರೂ ಸ್ನೇಹಿತರು. ಶಾಸಕರಾಗಿ ಸಹಪಾಟಿಗಳು, ಮಂತ್ರಿಗಳಾಗಿ ಸಹ ನನ್ನ ಸಹಪಾಟಿಗಳು. ಮುಂದೆ ಅವರು ಸಂಸದನಾಗಿ ನಾನು ವಿಧಾನಸಭಾಧ್ಯಕ್ಷನಾಗಿ ಇಬ್ಬರೂ ಅನೇಕ ಸಂದರ್ಭದಲ್ಲಿ ರಾಜ್ಯದಲ್ಲಿ ಹಾಗೂ ದೆಹಲಿಯಲ್ಲಿ ಪರಸ್ಪರ ಚರ್ಚಿಸುವ

ಹಾಗೂ ಪಾಲ್ಗೊಳ್ಳುವ ಅನೇಕ ಸಂದರ್ಭಗಳು ಬಂದು ಒದಗಿದ್ದವು. ಡಿ.ಕೆ. ನಾಯಕರು ವಿದ್ಯಾರ್ಥಿಗಳಾಗಿದ್ದಾಗಲೇ ಅವರೊಬ್ಬ ಸ್ನೇಹಜೀವಿಗಳು, ಕರ್ತವ್ಯಶೀಲರು, ಸ್ನೇಹಿತರ ಯಾವತ್ತೂ ಸುಖದುಃಖಗಳಲ್ಲಿ ಪಾಲುದಾರರು, ಆದರ್ಶ ಯಶಸ್ವಿ ವಿದ್ಯಾರ್ಥಿ. ಅಂತೆಯೇ ನ್ಯಾಯವಾದಿಗಳಾಗಿ ಒಬ್ಬ ಶ್ರೇಷ್ಠನಾಗಿದ್ದರೂ ಧಾರವಾಡ ಜಿಲ್ಲಾದ್ಯಂತ ಕೆಳ ಕೋರ್ಟುಗಳಿಂದ ಅವರ ಸ್ನೇಹಿತರು ಜಿಲ್ಲಾ ಕೋರ್ಟುಗಳಿಗೆ ಕಳುಹಿಸಿ ಅಪೀಲುಗಳನ್ನು ಹಾಗೂ ಸೆಷನ್ಸ್ ಕೇಸುಗಳನ್ನು ಪ್ರಾಮಾಣಿಕ ಪ್ರಯತ್ನಶೀಲರಾಗಿ ಸರಿಯಾಗಿ ಅಧ್ಯಯನ, ಅಭ್ಯಾಸಮಾಡಿ ದಿಟ್ಟತನದಿಂದ ವಾದ ಮಾಡಿ ಕೇಸುಗಳನ್ನು ನಡೆಸಿ ಜಯಶೀಲರಾಗಿ ಪಕ್ಷಗಾರರ ಹಾಗೂ ಸ್ನೇಹಿತರ ಪ್ರೀತಿಗೆ ಪಾತ್ರರಾಗಿದ್ದ ಹೆಸರಾಂತ ನ್ಯಾಯವಾದಿಗಳೂ ಹೌದು. ಬಡವನೇ ಇರಲಿ, ಮಧ್ಯಮನೇ ಬರಲಿ ಅಥವಾ ಶ್ರೀಮಂತನೇ ಬರಲಿ ಅವರೆಲ್ಲರ ಕೇಸುಗಳನ್ನು ಅವರು ಕೊಟ್ಟಷ್ಟು ಫೀಜು ಪಡೆದು ಅವರೆಲ್ಲರ ಪ್ರೀತಿ-ವಿಶ್ವಾಸ ಗಳಿಸಿದ ನಾಯಕ ನ್ಯಾಯವಾದಿ.

ನ್ಯಾಯವಾದಿ ಉದ್ಯಮವನ್ನು ಯಶಸ್ವಿಯಾಗಿ ನಡೆಸುತ್ತ ಸಾರ್ವಜನಿಕ ಕ್ಷೇತ್ರದಲ್ಲಿ ಧಾರವಾಡ ಜಿಲ್ಲಾ ಪ್ರಾಥಮಿಕ ಶಿಕ್ಷಕರ ಸಂಘದ ಅಧ್ಯಕ್ಷರಾಗಿ, ರಾಜ್ಯ ಪ್ರಾಥಮಿಕ ಶಿಕ್ಷಕರ ಸಂಘದ ಪದಾಧಿಕಾರಿಯಾಗಿ, ಶಿಕ್ಷಕರಿಗೆ ಒಬ್ಬ ಸ್ನೇಹಿತನಾಗಿ, ಮಾರ್ಗದರ್ಶಿಯಾಗಿ, ಉತ್ತಮ ಶಿಕ್ಷಣವನ್ನು ಮಕ್ಕಳಿಗೆ ಒದಗಿಸಲು ಹಾಗೂ ಶಿಕ್ಷಣ ಪದ್ಧತಿಯ ಸುಧಾರಣೆಗೆ ಸಾಕಷ್ಟು ಶ್ರಮಿಸಿದ್ದಾರೆ. ಧಾರವಾಡ ಜಿಲ್ಲಾ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ವರ್ಧನೆಗಾಗಿ ಅವರ ವಿದ್ಯಾಭ್ಯಾಸಕ್ಕೆ ತಕ್ಕ ಅನುಕೂಲತೆಗಾಗಿ ಜಿಲ್ಲಾ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಹಾಸ್ಟೆಲ್ ಪದಾಧಿಕಾರಿಯಾಗಿ ಉತ್ತಮ ಪರಿಸರವನ್ನುಂಟುಮಾಡಿದ, ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ಶ್ರಮವಹಿಸಿದ ಧೀಮಂತ ನಾಯಕ, ಕಾಂಗ್ರೆಸ್ ಪಕ್ಷದ ಒಬ್ಬ ನಿಷ್ಠಾವಂತ ಕಾರ್ಯಕರ್ತನಾಗಿ, ನಾಯಕನಾಗಿ, ಇಂದಿರಾಗಾಂಧಿಯವರ ಅಭಿಮಾನಿಯಾಗಿ, ಧಾರವಾಡ ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷ ಕಟ್ಟಿ ಬೆಳೆಸುವಲ್ಲಿ ಆಗಿನ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಕೆ.ಹೆಚ್. ಪಾಟೀಲ್, ಉಪಾಧ್ಯಕ್ಷ ಬಿ.ಜಿ. ಬಣಕಾರ ಹಾಗೂ ಇತರ ಧುರೀಣರೊಂದಿಗೆ ಸಾಕಷ್ಟು ಸಹಕರಿಸಿ ದುಡಿದು ಕಟ್ಟಾ ಕಾಂಗ್ರೆಸ್ ಕಾರ್ಯಕರ್ತ ಹಾಗೂ ನಾಯಕ 1978ರಲ್ಲಿ ಜರುಗಿದ ಲೋಕಸಭಾ ಚುನಾವಣೆಯಲ್ಲಿ ಧಾರವಾಡ ಉತ್ತರ ಕ್ಷೇತ್ರದಲ್ಲಿ ಶ್ರೀಮತಿ ಮಹಿಷಿಯವರು, ದಕ್ಷಿಣದಲ್ಲಿ ಮೊಹಸಿನರವರು ಜಯಶೀಲರಾಗಲು ಧಾರವಾಡ ಜಿಲ್ಲಾ ಕಾಂಗ್ರೆಸ್ ಸಮಿತಿಯಲ್ಲಿ ಡಿ.ಕೆ. ನಾಯಕರ ಪಾತ್ರವು ಪ್ರಮುಖವಾಗಿತ್ತು. 1972ರಲ್ಲಿ ಜರುಗಿದ ಕರ್ನಾಟಕ ವಿಧಾನಸಭೆಯ ಚುನಾವಣೆಯಲ್ಲಿ 216 ಒಟ್ಟು ಶಾಸಕರಲ್ಲಿ 165 ಜನ ಇಂದಿರಾ ಕಾಂಗ್ರೆಸಿಗರು ಗೆದ್ದು ಬಂದು ಕರ್ನಾಟಕ ಸಂಸದೀಯ ಇತಿಹಾಸದಲ್ಲಿಯ ಗರಿಷ್ಠ ದಾಖಲೆಯಾಯಿತು.

ಆ 1972ರ ವಿಧಾನಸಭೆ ಚುನಾವಣೆಯಲ್ಲಿ ಧಾರವಾಡ ಜಿಲ್ಲೆಯಿಂದ ಚುನಾಯಿಸಬೇಕಾಗಿದ್ದ 18 ಸ್ಥಳಗಳಲ್ಲಿ 17 ಕ್ಷೇತ್ರ ಸ್ಥಳಗಳಲ್ಲಿ ಕಾಂಗ್ರೆಸ್ ವಿಜಯ ಗಳಿಸಿ

ಹಿಂದೆ ಮುಂದೆ ಎಂದೂ ಕಾಂಗ್ರೆಸ್ ಗಳಿಸದ ಗರಿಷ್ಠ ಯಶಸ್ಸು ದೊರಕಿದೆ. ಈ ಹದಿನೇಳು ಸ್ಥಳಗಳಿಗೆ ಸರ್ವಶ್ರೀ ಡಿ.ಕೆ. ನಾಯಕರ, ಕೆ.ಹೆಚ್. ಪಾಟೀಲ್, ಬಿ.ಜಿ. ಬಣಕಾರ, ಶ್ರೀಮತಿ ಸುಮತಿ ಮಡಿಮನೆ, ವಿ.ಜಿ. ಸನದಿ, ಗೋಪಿನಾಥ ಸಾಂಡ್ರಾ, ಬಿ.ಸಿ. ಪಾಟೀಲ ಕಲಘಟಗಿ, ಎ.ಆರ್. ರಂಗನಗೌಡರ, ಎಂ. ಎಂ. ನದಾಫ್, ಪಿ.ಸಿ. ಶೆಟ್ಟರ್, ಕೆ.ಬಿ. ಕೋಳಿವಾಡ, ಕೆ.ಎಫ್. ಪಾಟೀಲ್, ಎಫ್.ಎನ್. ತಾವರೆ, ವ್ಹಿ.ವಿ. ವಾಯಿ, ಕೆ.ಹೆಚ್. ಕುರುಡಗಿ, ಎ.ವ್ಹಿ. ಪಾಟೀಲ್ ರೋಣ, ವಾಯ್.ವ್ಹಿ. ಜೋಗಣ್ಣನವರ ಹೀಗೆ ಎಲ್ಲರೂ ಕಾಂಗ್ರೆಸಿಗರೇ ಚುನಾಯಿತರಾಗಿ ರಾಜ್ಯದ ಕಾಂಗ್ರೆಸ್ ನಾಯಕ ಡಿ. ದೇವರಾಜ ಅರಸರು ಮುಖ್ಯಮಂತ್ರಿಗಳಾಗಲು ಸುಸ್ಪಷ್ಟ ಹಾಗೂ ಸುವರ್ಣ ಅವಕಾಶವನ್ನು ಧಾರವಾಡ ಜಿಲ್ಲಾ ಕಾಂಗ್ರೆಸ್ ಕೊಟ್ಟಿತು. ಆ ಚುನಾವಣೆಯಲ್ಲಿ ನವಲಗುಂದದಲ್ಲಿ ಮಾತ್ರ ಸಂಸ್ಥಾ ಕಾಂಗ್ರೆಸ್ಸಿನ ಏಕಮೇವ ಎಂ.ಕೆ. ಕುಲಕರ್ಣಿಯವರು ಚುನಾಯಿತರಾಗಿದ್ದರು.

ಧಾರವಾಡ ಜಿಲ್ಲೆಯ ಇಂದಿರಾ ಕಾಂಗ್ರೆಸ್ ಜಯಭೇರಿಯನ್ನು ಕಂಡು ದೇವರಾಜ ಅರಸರು ಮೊದಲನೆಯ ಕಂತಿನಲ್ಲಿಯೇ ಕೆ.ಹೆಚ್. ಪಾಟೀಲರನ್ನು ಕೃಷಿ ಹಾಗೂ ಅರಣ್ಯ ಮಂತ್ರಿಗಳನ್ನಾಗಿ, ಡಿ.ಕೆ. ನಾಯಕರನ್ನು ಕಾನೂನು ಸಂಸದೀಯ ಹಾಗೂ ನಗರಾಡಳಿತ ಮಂತ್ರಿಗಳನ್ನಾಗಿ, ನಂತರ ಬಿ.ಜಿ. ಬಣಕಾರರನ್ನು ಪಶುಸಂಗೋಪನಾ ಹಾಗೂ ಹೈನಾಭಿವೃದ್ಧಿ ಮಂತ್ರಿಗಳನ್ನಾಗಿ ತಮ್ಮ ಮಂತ್ರಿಮಂಡಲದಲ್ಲಿ ಸೇರಿಸಿಕೊಂಡು ಧಾರವಾಡ ಜಿಲ್ಲೆ ಹಾಗೂ ರಾಜ್ಯಕ್ಕೆ ಧಾರವಾಡ ಕಾಂಗ್ರೆಸಿಗರ ಸೇವೆ ಸಿಗುವಂತೆ ಮಾಡಿದರು. ಡಿ.ಕೆ. ನಾಯಕರು ಹೆಸರಾಂತ ಜಾಣ ವಕೀಲರು, ಅವರ ಅಗಾಧವಾದ ಕಾನೂನು ಜ್ಞಾನ ಹಾಗೂ ಪಾಂಡಿತ್ಯದ ಅನುಭವವನ್ನು ಗಣನೆಗೆ ತೆಗೆದುಕೊಂಡು ಹಾಗೂ ನಾಯಕರು ಧಾರವಾಡ ನಗರವಾಸಿಯೇ ಆಗಿದ್ದು, ನಗರಗಳ ಸಮಸ್ಯೆಯ ಅರಿವು ಹಾಗೂ ಅನುಭವ ಸಾಕಷ್ಟು ಇದ್ದುದರಿಂದ ಅವರನ್ನು ಕಾನೂನು ಸಂಸದೀಯ ಹಾಗೂ ನಗರಾಡಳಿತ ಮಂತ್ರಿಗಳನ್ನಾಗಿ ಅವರ ಅದ್ಭುತ ಅಗಾಧ ಅನುಭವವನ್ನು ದೇವರಾಜ ಅರಸರು ತಮ್ಮ ಆರು ವರ್ಷಗಳ ಸುದೀರ್ಘ ಅವಧಿಯಲ್ಲಿ ಅವರ ಉಪಯೋಗ ಸಾರ್ಥಕವಾಗಿ ಪಡೆದುಕೊಂಡರು. ಅಂತೆಯೇ ಧಾರವಾಡ ಜಿಲ್ಲೆ ಹಾಗೂ ಇಡೀ ರಾಜ್ಯ ನಾಯಕರ ಸೇವೆಯನ್ನು ಪಡೆದುಕೊಂಡಿತು. ನಾಯಕರು ಕಾನೂನು ಮಂತ್ರಿಗಳಾಗಿ ರಾಜ್ಯದ ಕಾನೂನು ವ್ಯವಸ್ಥೆಯಲ್ಲಿ ಸಾಕಷ್ಟು ಸುಧಾರಣೆ ಸಾಧಿಸಿದರಲ್ಲದೆ ರಾಜ್ಯದ 175 ತಾಲ್ಲೂಕುಗಳಲ್ಲಿ ಪ್ರತಿ ತಾಲ್ಲೂಕಿಗೆ ಒಂದು ಮುನ್ಸಿಫ್ ಮ್ಯಾಜಿಸ್ಟ್ರೇಟ್ ಕೋರ್ಟ್ ರಚಿಸಿ ಜನತೆಗೆ ಸಕಾಲ ಹಾಗೂ ಸಮೀಪದಲ್ಲಿ ನ್ಯಾಯ ದೊರಕುವ ಬಗ್ಗೆ ಉತ್ತಮ ಧೋರಣೆಯನ್ನು ಕೈಗೊಂಡಿದ್ದರ ಪರಿಣಾಮ ಪ್ರತಿ ತಾಲ್ಲೂಕಿಗೆ ಕೋರ್ಟ್‌ಗಳ ಸ್ಥಾಪನೆಗೆ ಅವಕಾಶವಾಯಿತು. ಸಂಸದೀಯ ಮಂತ್ರಿಗಳಾಗಿ ಆರು ವರ್ಷಗಳ ಅವಧಿಯಲ್ಲಿ ಜರುಗಿದ ಹನ್ನೊಂದು ಅಧಿವೇಶನಗಳಲ್ಲಿ ತಾ। 24-3-1972ರಿಂದ 21-7-1997ರವರೆಗೆ ಒಟ್ಟು 426 ದಿನಗಳಂದು 2045 ತಾಸು 20 ಮಿನಿಟು ವಿಧಾನಸಭೆ ಅಧಿವೇಶನ ನಡೆದು ಕರ್ನಾಟಕ ಸಂಸದೀಯ ಇತಿಹಾಸದಲ್ಲಿಯೇ

ಇದೊಂದು ಗರಿಷ್ಠ ದಾಖಲೆಗೆ ನಾಯಕರು ಸದವಕಾಶ ಮಾಡಿ ಪ್ರಜಾತಂತ್ರ ವ್ಯವಸ್ಥೆಗೆ ಮೆರುಗನ್ನು ತಂದುಕೊಟ್ಟರು. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಮಸೂದೆ, ಮೈಸೂರು ರಾಜ್ಯ ಕೃಷಿ ವಿಶ್ವವಿದ್ಯಾಲಯ ಮಸೂದೆ, ಕರ್ನಾಟಕ ಮುನ್ಸಿಪಲ್ ಕಾರ್ಪೊರೇಷನ್ ಮಸೂದೆ, ಮೈಸೂರು ಲೋಕಾಯುಕ್ತ, ಉಪಲೋಕಾಯುಕ್ತ ಮಸೂದೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮಸೂದೆ, ಕರ್ನಾಟಕ ಅಭಿವೃದ್ಧಿ ಮಂಡಳಿ ಮಸೂದೆ, ಕರ್ನಾಟಕ ನೀರು ಸರಬರಾಜು ಕೊಳಚೆ ನಿರ್ಮೂಲನ ಮಸೂದೆ, ಸವದತ್ತಿ ರೇಣುಕಾ ಎಲ್ಲಮ್ಮ ದೇವಸ್ಥಾನ ಆಡಳಿತ ಮಸೂದೆ ಹೀಗೆ ಇನ್ನೂ ಅನೇಕ ಹೊಸ ಕಾಯ್ದೆ ಮಾಡಲು ಹಾಗೂ ಅನೇಕ ಕಾಯ್ದೆಗಳ ಕ್ರಾಂತಿಕಾರಕ ತಿದ್ದುಪಡಿ ಮಾಡಲು ಅನೇಕ ಮಸೂದೆ ಹಾಗೂ ತಿದ್ದುಪಡಿ ಮಸೂದೆಗಳನ್ನು ತಯಾರಿಸಿ, ವಿಧಾನಸಭೆಯಲ್ಲಿ ಮಂಡಿಸಿ ಒಬ್ಬ ಅನುಭವಿ ಕ್ರಾಂತಿಕಾರಿ ಸುಧಾರಕ ಮಂತ್ರಿಯೆಂಬ ಪ್ರಖ್ಯಾತಿಯನ್ನು ಡಿ.ಕೆ. ನಾಯಕರು ಪಡೆದರು. ಅಂತೆಯೇ ನಗರಾಡಳಿತ ಮಂತ್ರಿಯಾಗಿ ಎಲ್ಲಾ ನಗರ ಸುಧಾರಣೆಗೆ ಸಹಿತ ಕ್ರಾಂತಿಕಾರಿ ಕ್ರಮಗಳನ್ನು ತೆಗೆದುಕೊಂಡರು. ಧಾರವಾಡ, ಹುಬ್ಬಳ್ಳಿ ನಗರ ಸುಧಾರಣೆಗೆ ಸಹ ಇವರ ಶ್ರಮ ಅವರ್ಣನೀಯ. ಧಾರವಾಡದಲ್ಲಿ ಅಂದು ಡಿ.ಕೆ. ನಾಯಕರ ಕಲಾಮಂದಿರ ಅಥವಾ ಕಲಾಭವನವೆಂದು ಪ್ರತೀತಿ ಪಡೆದ ಆ ಕಲಾಭವನದ ರೂವಾರಿ ಅಥವಾ ಶಿಲ್ಪಿ ಡಿ.ಕೆ. ನಾಯಕರು, ಹುಬ್ಬಳ್ಳಿಯಲ್ಲಿ ಬೆಂಗಳೂರು ಮಾದರಿಯ ಲಾಲ್‌ಭಾಗ್ ಗಾಜಿನ ಮನೆ ಅಸ್ತಿತ್ವದಲ್ಲಿ ಬರಲಿಕ್ಕೆ ಡಿ.ಕೆ. ನಾಯಕರೇ ಮೂಲ ಕಾರಣ. ಇಂತಹ ಇನ್ನೂ ಬೇಕಾದಷ್ಟು ಕೃತಿ, ಕಟ್ಟಡ ಭವನಗಳ ಕೃತಿ ಡಿ.ಕೆ. ನಾಯಕರದು. ಆದರೆ "ಪಬ್ಲಿಕ್ ಮೆಮರಿ ಈಜ್ ಶಾರ್ಟ್" ಅಂದ ಹಾಗೆ ಊರು ಉಪಕಾರವರಿಯದು ಹಾಗೂ ಹೆಣ ಶೃಂಗಾರ ಅರಿಯದು ಅಂದ ಹಾಗೆ ಸರಕಾರಗಳು ಹಾಗೂ ಸಮಾಜ ಅವರ ಸೇವೆಯನ್ನು ಮರೆತಿದೆ ಹಾಗೂ ಮರೆಯಲಾಗುತ್ತಿದೆ. ಜಿಲ್ಲೆಯ ಹುಲಕೋಟಿಯಲ್ಲಿ ನೂಲಿನ ಸಹಕಾರಿ ಗಿರಣಿಯಾಗಲಿಕ್ಕೆ, ಧಾರವಾಡದಲ್ಲಿ ಹಾಲಿನಪುಡಿ ಕಾರ್ಖಾನೆಯಾಗಲಿಕ್ಕೆ, ಹಾವೇರಿಯಲ್ಲಿ ಸಹಕಾರಿ ಸಕ್ಕರೆ ಕಾರ್ಖಾನೆಯಾಗಲಿಕ್ಕೆ ಹಾಗೂ ಇನ್ನೂ ಅನೇಕ ಉದ್ದಿಮೆಗಳು ಪ್ರಾರಂಭವಾಗಲಿಕ್ಕೆ ಮಂತ್ರಿಗಳಾಗಿದ್ದು ಕೆ.ಎಚ್. ಪಾಟೀಲ್, ಬಿ.ಜಿ. ಬಣಕಾರ ಹಾಗೂ ಧಾರವಾಡ ಜಿಲ್ಲೆಯ ಎಲ್ಲಾ ಶಾಸಕರೊಂದಿಗೆ ಸ್ನೇಹಜೀವಿಯಾಗಿದ್ದ ಡಿ.ಕೆ. ನಾಯಕರ ಅವರ ಸಂಬಂಧ, ಸಹಕಾರ, ಸಹಾಯ ಇತ್ಯಾದಿಗಳ ಕ್ರೋಢೀಕೃತ ಪ್ರಯತ್ನದ ಕೊಡುಗೆ ಅಪಾರ ಹಾಗೂ ಅವರ್ಣನೀಯ. ಧಾರವಾಡ ಉತ್ತರ ಕ್ಷೇತ್ರದಿಂದ ಸಂಸದರಾಗಿ ಮಾಡಿದ ಸೇವೆ ಕೂಡ ಅಪಾರ. ಅವರ ಕ್ಷೇತ್ರದಲ್ಲಿ ಆಡಳಿತ ಹಾಗೂ ಅಭಿವೃದ್ಧಿಯ ಬಗ್ಗೆ ಶಕ್ತಿಮೀರಿ ಕಾರ್ಯಶೀಲರಾಗಿ ಕಾರ್ಯ ಮಾಡಿದ್ದಾರೆ. ಸಂಸದರಾಗಿ ಅನೇಕ ಸಂಸದೀಯ ಸಮಿತಿ, ಕೃಷಿ ಸಂಸದರ ಸಮಿತಿಗಳ ಪದಾಧಿಕಾರಿಗಳಾಗಿ ಭಾರತ ದೇಶ ಹಾಗೂ ವಿಶ್ವ ಪರ್ಯಟನ ಮಾಡಿ ಒಬ್ಬ ಮಾದರಿಯ ಶ್ರೇಷ್ಠ ಸಂಸದೀಯ ಪಟುಗಳಾಗಿ ಧಾರವಾಡ ಜಿಲ್ಲೆ ಅವರು ಹುಟ್ಟಿ, ಬೆಳೆದು, ಬಾಳಿ, ಬದುಕಿದ ಜಿಲ್ಲೆಗೆ ಒಬ್ಬ ವರಪುತ್ರನಾಗಿ ಕಂಗೊಳಿಸಿದ್ದಾರೆ. ಬಸವಣ್ಣನವರ ಮೌಲ್ಯಗಳಲ್ಲಿ ಇವನಾರವ ಇವನಾರವ ಇವನಾರವ

ಎಂದೆನ್ನದೆ ಈತ ನಮ್ಮವ ಈತ ನಮ್ಮವ ಈತ ನಮ್ಮವ ಎಂದೆಂಬಂತೆ ದಾಕ್ಷಿಣ್ಯಪರನಾಗಲ್ಲ ಎಂಬಂತೆ ಆಡಳಿತದಲ್ಲಿ ಒಬ್ಬ ದಿಟ್ಟಮಂತ್ರಿಯಾಗಿ, ದುಷ್ಟ ಶಿಕ್ಷಂ ಶಿಷ್ಟ ರಕ್ಷಂವೆಂಬುದಾಗಿ ಆಡಳಿತ ನಡೆಸಿದ್ದಾರೆ. ಶಾಸಕರಾಗಿ, ಮಂತ್ರಿಯಾಗಿ, ಸಂಸದರಾಗಿ ಪ್ರಜಾತಂತ್ರ ವ್ಯವಸ್ಥೆಗೆ ಒಳ್ಳೆ ಹೆಸರನ್ನು ತಂದುಕೊಟ್ಟು ಸಂಸದೀಯ ಮೌಲ್ಯಗಳನ್ನು ಎತ್ತಿಹಿಡಿದಿದ್ದಾರೆ. ಅವರು ನಮ್ಮನ್ನಗಲಿ ದೈಹಿಕವಾಗಿ ಹೋಗಿದ್ದರೂ ಅವರು ಬಿಟ್ಟುಹೋಗಿರುವ ಜೀವಂತ ಮೌಲ್ಯಗಳು ನಮ್ಮೆದುರಿಗೆ ಇವೆ. ಇಂತಹ ಒಬ್ಬ ಅಪರೂಪದ ಪ್ರಜಾಪ್ರತಿನಿಧಿಯನ್ನು ಪಡೆದ ಕೋಳಿವಾಡ ಗ್ರಾಮ, ಧಾರವಾಡ ಜಿಲ್ಲೆ, ಕರ್ನಾಟಕ ರಾಜ್ಯ ಹಾಗೂ ಭಾರತದೇಶ ಸುದೈವಿಯೆಂದು ಹೇಳಲೇಬೇಕು. ಡಿ.ಕೆ. ನಾಯಕರ ಆದರ್ಶಗಳನ್ನು ಪ್ರತಿಯೊಬ್ಬ ಸಮಾಜ ಸೇವಕ, ನ್ಯಾಯವಾದಿ, ಶಾಸಕ, ಮಂತ್ರಿ, ಸಂಸದ ಇತ್ಯಾದಿ ವಿವಿಧ ಪ್ರಜಾಪ್ರತಿನಿಧಿಗಳು ಅನುಸರಿಸಿ ನುಡಿದರೆ ಹಾಗೂ ನಡೆದರೆ ಪ್ರಜಾತಂತ್ರ ವ್ಯವಸ್ಥೆಗೆ ಅದೊಂದು ಮರೆಯಲಾಗದ ಮೆರಗು.

❑

"ಸರ್ಕಾರದ ಕೆಲಸ ದೇವರ ಕೆಲಸ"

ದೇವರೆಂದರೆ ಭಾರತೀಯರ ಆರಾಧ್ಯದೈವ ಈಶ್ವರ-ಅಲ್ಲಾ-ಗಾಡ್-ನಾಥ. ಈಶ್ವರನಲ್ಲಿ ಸೃಷ್ಟಿಕರ್ತ ಬ್ರಹ್ಮನ ಶಕ್ತಿ ಇದೆ, ರಕ್ಷಕ ವಿಷ್ಣು ಶಕ್ತಿಯಿದೆ, ದುಷ್ಟ ಶಿಕ್ಷಕ, ಶಿಷ್ಟ ರಕ್ಷಕ, ಮರ್ಧನ ಶಕ್ತಿಯೂ ಇದೆ. ರಾಜ್ಯದ ಜನತೆಗೆ ಅನುಕೂಲಕರವಾದ ಉತ್ತಮ ಆಡಳಿತ ಹಾಗೂ ಅಭಿವೃದ್ಧಿ ಯೋಜನೆಗಳನ್ನು ರೂಪಗೊಳಿಸಿ ಅಥವಾ ಸೃಷ್ಟಿಸಿ ಅವುಗಳನ್ನು ಕಾರ್ಯರೂಪದಲ್ಲಿ ತರಬೇಕು, ರಾಜ್ಯದ ಜನತೆಯ ಮಾನ-ಮರ್ಯಾದೆ, ಘನತೆ-ಗೌರವ, ಆಸ್ತಿ ಇತ್ಯಾದಿ ಹಕ್ಕುಗಳನ್ನು ರಕ್ಷಿಸಬೇಕು. ದುಷ್ಟರನ್ನು ಸದೆಬಡಿದು ಶಿಕ್ಷಿಸಿ ಶಿಷ್ಟರನ್ನು ರಕ್ಷಿಸಿ ರಾಜ್ಯಾದ್ಯಂತ ಪ್ರಗತಿಪರ ಆಡಳಿತ ಹಾಗೂ ಅಭಿವೃದ್ಧಿ ಹಾಗೂ ಕಾನೂನು ಸುವ್ಯವಸ್ಥೆ ಸಾಧಿಸಿ ದೇವರಂತೆ ಕಾರ್ಯನಿರ್ವಹಿಸಬೇಕೆಂಬುದೇ ಸರ್ಕಾರದ ಕೆಲಸವೆಂದು ಸಾರಿ ಹೇಳಲು ರಾಜ್ಯದ ಆಗುಹೋಗು, ಭವಿಷ್ಯ ಹಸನಗೊಳ್ಳಲು ವಿಧಿ-ವಿಧಾನಗಳನ್ನು ರೂಢಿಸುವ ಕರ್ನಾಟಕ ವಿಧಾನಸೌಧದ ಮಹಾಶಿಲ್ಪಿ ಕೆ. ಹನುಮಂತಯ್ಯನವರು ವಿಧಾನ ಸೌಧದ ಮಹಾದ್ವಾರದ ಮೇಲೆ "ಸರ್ಕಾರದ ಕೆಲಸ ದೇವರ ಕೆಲಸ" ವೆಂದು ಕೆತ್ತಿಸಿ ಅದರ ಮೇಲೆ ತ್ರಿವರ್ಣ ರಾಷ್ಟ್ರಧ್ವಜ ಹಾರಾಡುವಂತೆ ಮಾಡಿದರು. ದುರ್ದೈವದಿಂದ ಇಂದು ಸರ್ಕಾರದ ಕೆಲಸ ದೇವರ ಕೆಲಸವಾಗದೆ ದೆವ್ವ (ರಾಕ್ಷಸ)ನ ಕೆಲಸವಾಗುತ್ತ ಹೊರಟಿದೆ. ಹಾಗಾಗದಂತೆ ನೋಡಿಕೊಳ್ಳುವುದು ಸರ್ಕಾರದ ಕೆಲಸವಾಗಲೇಬೇಕು.

ವಿಧಾನಸೌಧದಲ್ಲಿಯ ವಿಧಾನಸಭೆ ಹಾಗೂ ವಿಧಾನಪರಿಷತ್ತುಗಳನ್ನೊಳಗೊಂಡ ವಿಧಾನಮಂಡಲ ಈ ರಾಜ್ಯದ ಜನತೆಯು ಸರ್ವಾಂಗೀಣ ಸರ್ವತೋಮುಖ ಅಭಿವೃದ್ಧಿಗಾಗಿ ಹಾಗೂ ಉತ್ತಮ ಆಡಳಿತ ಒದಗಿಸುವ ಸಲುವಾಗಿ ಸರ್ಕಾರದ ಬೇಡಿಕೆಗಳಂತೆ ಬಜೆಟ್ ಅಧಿವೇಶನದಲ್ಲಿ ಆಯವ್ಯಯ ಅಂದಾಜನ್ನು ಅಂಗೀಕಾರ ಮಾಡಿ ಹಣ ಶೇಖರಣೆ ಮಾಡಲು ಹಾಗೂ ಬಟವಾಡೆ ಮಾಡಲು ಸರ್ಕಾರಕ್ಕೆ ಅಧಿಕಾರ ಕೊಡುತ್ತದೆ. ಕೊಟ್ಟ ಈ ಅಧಿಕಾರದ ಸದುಪಯೋಗ ಹಾಗೂ ಪರಿಣಾಮಕಾರಿ

ಉಪಯೋಗವಾಗಿದೆಯೇ ಎಂದು ಆಯವ್ಯಯಗಳ ಪುಟಗಳನ್ನು ತಿರುವಿಹಾಕಿ ನೋಡಿದರೆ ಉತ್ತರ ನಕಾರಾತ್ಮಕವಾಗಿರುವುದು ಸುಸ್ಪಷ್ಟ. ಅಂಗೀಕೃತ ಆಯವ್ಯಯದ ಪ್ರಕಾರ ನಿಗದಿತ ಆಯ ಪಡೆಯದೆ ಇರುವುದು ನಿಗದಿತ ವ್ಯಯ (ಬಟವಾಡೆ) ಮಾಡದೆ, ನಿಗದಿತ ಆರ್ಥಿಕ ಹಾಗೂ ಭೌತಿಕ ಗುರಿ ಸಾಧಿಸುವಲ್ಲಿ ಬಹುತೇಕ ಎಲ್ಲಾ ಮಂತ್ರಿಗಳು ವಿಫಲರಾಗುತ್ತಿರುವುದು ಸಿ.ಎ.ಜಿ. ವರದಿಗಳಿಂದ ಹಾಗೂ ಶಾಸಕರ ಸಲಹೆ-ಸೂಚನೆ, ಟೀಕೆ-ಟಿಪ್ಪಣಿ ಹಾಗೂ ಪತ್ರಿಕಾ ವರದಿಗಳಿಂದ ಕಂಡುಬರುತ್ತಲೇ ಇದೆ. ಆಡಳಿತ ಹಾಗೂ ಅಭಿವೃದ್ಧಿ ಅನುಷ್ಠಾನಕ್ಕೆ ಸಂಪೂರ್ಣ ಹೊಣೆಗಾರರಾಗಿರುವ ಅಧಿಕಾರಶಾಹಿ ನೌಕರರ ಮೇಲೆ ಶಾಸಕಾಂಗದ ಹಿಡಿದ ತಪ್ಪುತ್ತಲಿದೆ. ತಪ್ಪಿತಸ್ಥ ಕರ್ತವ್ಯಲೋಪವೆಸಗಿದ ಅಸಮರ್ಥ ಅಧಿಕಾರಿಗಳಿಗೆ ಯಾವ ಶಿಕ್ಷೆಯೂ ಇಲ್ಲ. ದಕ್ಷ ಪ್ರಾಮಾಣಿಕ ಕರ್ತವ್ಯನಿಷ್ಠ ಅಧಿಕಾರಿಗಳಿಗೆ ಪ್ರೋತ್ಸಾಹ ರಕ್ಷಣೆಯೂ ಇಲ್ಲದಾಗಿರುವುದು ಕಂಡುಬರುತ್ತದೆ. ಸರ್ಕಾರಿ ಖಜಾನೆಗೆ ಬರಬೇಕಾದ ನಿಗದಿತ ಆದಾಯ ಬಹುತೇಕ ಯಾವ ವರ್ಷಗಳಲ್ಲಿಯೂ ಬರುತ್ತಿಲ್ಲ. ನಿಗದಿತ ಅಭಿವೃದ್ಧಿ ಆಡಳಿತಕ್ಕಾಗಿ ವೆಚ್ಚ ಮಾಡಬೇಕಾದ ನಿಗದಿತ ವ್ಯಯ-ಬಟವಾಡೆ ಯಾವ ವರ್ಷವೂ ಆಗುತ್ತಿರುವುದಿಲ್ಲ. ಸರ್ಕಾರದ ಹೆಚ್ಚಿನ ಸಾಲ ಪ್ರತಿವರ್ಷವಾಗುತ್ತಲೇ ಇದೆ. ಇದೆಲ್ಲವೂ ಸಿ.ಎ.ಜಿ. ವರದಿಗಳಿಂದ ಸುಸ್ಪಷ್ಟವಾಗುತ್ತಿದೆ. ಸಿ.ಎ.ಜಿ. ವರದಿ ಹಾಗೂ ಶಾಸಕರ ಸಲಹೆ-ಸೂಚನೆಗಳೆಲ್ಲವೂ ಅರಣ್ಯರೋದನವಾಗುತ್ತಿರುವುದು ವಿಪರ್ಯಾಸ, ಮಂತ್ರಿಗಳು ತಮ್ಮ ತಮ್ಮ ಖಾತೆಯ ಆಡಳಿತ ಅಭಿವೃದ್ಧಿಗಾಗಿ ವಿಧಾನ ಮಂಡಲದಿಂದ ಅಂಗೀಕಾರ ಪಡೆದಂತೆ ಪ್ರಾಮಾಣಿಕ ಪ್ರಯತ್ನ ಮಾಡಿ ಕಾಲಹರಣ ಮಾಡದೆ ನಿಗದಿತ ಆಡಳಿತ ಅಭಿವೃದ್ಧಿಯ ಗುರಿ ಸಾಧಿಸುವಲ್ಲಿ ವಿಫಲವಾಗುತ್ತಿರುವುದು ಮಾರಕ ಸಂಪ್ರದಾಯ ಯಥಾವತ್ತಾಗಿ ಸಾಗಿಬರುತ್ತಿದೆ.

ಎಸ್.ಎಂ. ಕೃಷ್ಣರವರು ದಿ। 11-10-1999ರಂದು ಮುಖ್ಯಮಂತ್ರಿಯಾಗಿ ಅಧಿಕಾರವನ್ನು ವಹಿಸಿಕೊಂಡು ಅಸಂಖ್ಯ ಮಂತ್ರಿಗಳನ್ನೊಳಗೊಂಡ ಮಂತ್ರಿಮಂಡಲವನ್ನು ರಚಿಸಿಕೊಂಡು ಚುರುಕಾಗಿ ಅಧಿಕಾರ ಚಲಾವಣೆ ಮಾಡುತ್ತಿದ್ದಾರೆ. 1999-2000 ಸಾಲಿನ ಆಡಳಿತ ಮಾಡಿದ್ದು ಈ ವರ್ಷದ ಕಾರ್ಯಾಚರಣೆಯ ಸಿ.ಎ.ಜಿ. ವರದಿ ಪ್ರಕಟವಾಗಿದೆ. ಹಿಂದಿನ ಎಲ್ಲಾ ವರ್ಷಗಳಂತೆ ಈ ವರ್ಷ ಕೂಡ ಬಹುತೇಕ ಮಂತ್ರಿಗಳ ನಿಗದಿತ ಅಭಿವೃದ್ಧಿ ಕುಂಠಿತಗೊಳಿಸುವಲ್ಲಿ ಯಶಸ್ವಿಯಾಗಿ ವಿಫಲಗೊಂಡಿದ್ದಾರೆ. ನಿಗದಿತ ಆದಾಯವನ್ನು ಪಡೆದಿಲ್ಲ. ನಿಗದಿತ ವೆಚ್ಚವನ್ನೂ ಸಂಪೂರ್ಣ ವೆಚ್ಚ ಮಾಡದೆ 4448.72 ಕೋಟಿ ಬಳಸದೆ ಕೆಲವು ಬೇಡಿಕೆಗಳಲ್ಲಿ ಮಾತ್ರ ಬಜೆಟ್ ಮೀರಿ 334.46 ಕೋಟಿ ಮೊತ್ತವನ್ನು ಹೆಚ್ಚು ವೆಚ್ಚ ಮಾಡಿದ್ದಾರೆ. ಹೆಚ್ಚು ವೆಚ್ಚ ಮಾಡಿದ್ದು ಪ್ರಶಂಸನೀಯ. ಹೆಚ್ಚು ಹಣ ಬಳಸದಿರುವುದು ಖಂಡನೀಯ. ಉದಾಹರಣೆಯಾಗಿ ಕೃಷಿ 49.30 ಕೋಟಿ, ಭಾರೀ

ಉದ್ದಿಮೆ 35.00 ಕೋಟಿ, ಸಣ್ಣ ಉದ್ದಿಮೆ 23.27 ಕೋಟಿ, ರೇಷ್ಮೆ 15.36 ಕೋಟಿ, ಸಕ್ಕರೆ 13.46 ಕೋಟಿ, ಅರಣ್ಯ 52.47 ಕೋಟಿ, ಸಾರಿಗೆ 34.62 ಕೋಟಿ, ವೈದ್ಯಕೀಯ ಶಿಕ್ಷಣ 22.88 ಕೋಟಿ, ಆರೋಗ್ಯ ಕುಟುಂಬ ಕಲ್ಯಾಣ 142.05 ಕೋಟಿ, ವಸತಿ 64.94 ಕೋಟಿ, ಬೆಂಗಳೂರು ಅಭಿವೃದ್ಧಿ 119.33 ಕೋಟಿ, ನೀರಾವರಿ 1131.48 ಕೋಟಿ, ನ್ಯಾಯಪರಿಪಾಲನೆ 18.11 ಕೋಟಿ, ರಸ್ತೆ-ಸೇತುವೆ 41.40 ಕೋಟಿ, ಹಿಂದುಳಿದ ಪ್ರದೇಶ 36.09 ಕೋಟಿ, ಗ್ರಾಮೀಣಾಭಿವೃದ್ಧಿ 330.54 ಕೋಟಿ, ಕಾರ್ಮಿಕ 68.44 ಕೋಟಿ, ಪರಿಶಿಷ್ಟ ಜಾತಿ-ಪಂಗಡ 76.18 ಕೋಟಿ, ಮಹಿಳೆ ಮಕ್ಕಳು 34.99 ಕೋಟಿ, ಮಲೆನಾಡು ಅಭಿವೃದ್ಧಿ 23.55 ಕೋಟಿ. ಹೀಗೆ ಇನ್ನೂ ಅನೇಕ ಬೇಡಿಕೆ ಕಾರ್ಯಕ್ರಮಗಳಿಗೆ ಒಟ್ಟಾರೆ ರೆವಿನ್ಯೂ ಬಂಡವಾಳ ವೆಚ್ಚದ ಮೊತ್ತ 4448.73 ಕೋಟಿ, ಭಾರೀ ಮೊತ್ತವನ್ನು ಬಳಸದೆ ಉಳಿಸಲಾಗಿದೆ. ಕೆಲವು ಬೇಡಿಕೆಗಳಿಗೆ 334.47 ಕೋಟಿ ಮೊತ್ತವನ್ನು ಬಜೆಟ್ ಮೀರಿ ವೆಚ್ಚ ಮಾಡಿದ್ದಾರೆ. ಅಧಿಕೃತ ಮಾಹಿತಿ ಪ್ರಕಾರ 2000-2001ರಲ್ಲಿ ನಿಗದಿತ ವೆಚ್ಚ ಮಾಡದೆ ಹೈದರಾಬಾದ್ ಅಭಿವೃದ್ಧಿ ಮಂಡಳಿ 43.18 ಕೋಟಿ, ಮಲೆನಾಡು ಅಭಿವೃದ್ಧಿ ಮಂಡಳಿ 3.90 ಕೋಟಿ, ಬಯಲುಸೀಮೆ ಅಭಿವೃದ್ಧಿ 1.97 ಕೋಟಿ, ಗ್ರಾಮೀಣ ಅಭಿವೃದ್ಧಿ 127.63 ಕೋಟಿ ಮೊತ್ತವನ್ನು ಬಳಸದೆ ಉಳಿಸಲಾಗಿದೆ. 2000-2001ರಲ್ಲಿ ನಿಗದಿತ ಗುರಿಯಲ್ಲಿ 61797 ಗ್ರಾಮೀಣ ಆಶ್ರಯ ಮನೆಗಳನ್ನು 8599 ನಗರ ಆಶ್ರಯ ಮನೆಗಳನ್ನು 11484 ಅಂಬೇಡ್ಕರ್ ಮನೆಗಳನ್ನು ಸಾಧಿಸುವಲ್ಲಿ ಸರ್ಕಾರ ಹಿಂದೆ ಬಿದ್ದಿರುವುದು ಸರಿಯಲ್ಲ. ಸಾಧಿಸಬೇಕಾಗಿದ್ದ ಒಟ್ಟಾರೆ 171942 ಮನೆಗಳ ಪೈಕಿ 80062 ಮನೆಗಳನ್ನು, ಮಾತ್ರ ಸಾಧಿಸಿ ಕಟ್ಟಿ 91880 ಮನೆಗಳನ್ನು ಕಟ್ಟಿಸಿಕೊಡುವಲ್ಲಿ 2000-2001ರಲ್ಲಿ ಮಂತ್ರಿಗಳು ವಿಫಲರಾಗಿದ್ದಾರೆ.

ರಾಜ್ಯದ ಆದಾಯ ಸಂಪನ್ಮೂಲ ಪ್ರತಿವರ್ಷ ಹೆಚ್ಚುತ್ತಿದ್ದರೂ ನಿಗದಿತ ಆದಾಯ ಬಾರದೆ ರಾಜ್ಯ ಸರ್ಕಾರ ಆಂತರಿಕ ಸಾಲ ಹಾಗೂ ಕೇಂದ್ರ ಸರ್ಕಾರದ ಮೂಲಕ ವಿದೇಶಿ ಸಾಲ ಪಡೆಯುವುದು ಹಾಗೂ ತೀರಿಸುವುದು ಅನಿವಾರ್ಯವಾಗಿದ್ದು, ಸಾಲ ತೀರಿಸುವ ಶಕ್ತಿ ಸರ್ಕಾರಕ್ಕೆ ಬಾರದೆ ಪ್ರತಿವರ್ಷ ಸಾಲ ಹೆಚ್ಚುತ್ತಲೇ ಇದೆ. 98-99ರಲ್ಲಿ 2737.36 ಕೋಟಿ, 99-2000 ದಲ್ಲಿ 3633.30 ಕೋಟಿ, 2000-2001ರಲ್ಲಿ 3926.15 ಕೋಟಿ ಸಾಲ ಪಡೆದಿದ್ದು ದಿನಾಂಕ 31-3-2001ಕ್ಕೆ ರಾಜ್ಯ ಸರ್ಕಾರ ಪಡೆದಿರುವ ಒಟ್ಟು ಸಾಲ 18090.53 ಕೋಟಿ ಇರುತ್ತದೆ. 2000-2001ರಲ್ಲಿ ಕೊಡಲು ನಿಗದಿಮಾಡಿದ್ದ ಆಂತರಿಕ ಸಾಲ ಮುಂಗಡ ಇತ್ಯಾದಿ 1843.86 ಕೋಟಿ ಮೊತ್ತ ಕೊಡದೆ ಕೇವಲ 570.53 ಕೋಟಿ ಕೊಟ್ಟು ಹಣವಿಲ್ಲದ್ದಕ್ಕೆ 1273.33 ಕೋಟಿ ಮೊತ್ತವನ್ನು ಬಟವಾಡೆ ಮಾಡಲಿಕ್ಕೆ ಸಾಧ್ಯವಾಗಿಲ್ಲ. ಕರ್ತವ್ಯಲೋಪ, ದೋಷ, ಹಿನ್ನಡೆ ಇದೆಲ್ಲಾ ಮುಂದುವರೆದರೆ ರಾಜ್ಯದ

ಅಭಿವೃದ್ಧಿ, ಶಾಂತಿ-ಸುವ್ಯವಸ್ಥೆ ಹಾಗೂ ಆಡಳಿತದ ಭವಿಷ್ಯವೇನು? ಈ ಹಿನ್ನೆಲೆಯಲ್ಲಿ ರಾಜ್ಯ ಮುಖ್ಯಮಂತ್ರಿಗಳು, ಮಂತ್ರಿಗಳು, ಇಲಾಖಾ ಅಧಿಕಾರಿಗಳ ಮೇಲೆ ಕಣ್ಣಿಟ್ಟು ಹದಗೆಟ್ಟ ಪರಿಸ್ಥಿತಿಯನ್ನು ರಾಜ್ಯದ ಹಿತದೃಷ್ಟಿಯಿಂದ ಸುಧಾರಿಸುವುದು ಒಳ್ಳೆಯದು ಹಾಗೂ ಸರ್ಕಾರದ ಕೆಲಸ ದೇವರ ಕೆಲಸವಾಗುವಂತೆ ನೋಡಿಕೊಳ್ಳುವುದು ಕೂಡಾ ಒಳ್ಳೆಯದು.

❑

ಕೇಂದ್ರದ ಆಯ-ವ್ಯಯ - ದೇಶಾಭಿವೃದ್ಧಿಗೆ ತಾರಕವಾಗಲಿ

ಬೃಹತ್ ಭಾರತದ ಜನಸಂಖ್ಯೆ 100 ಕೋಟಿ ಮೀರಿ ಸಾಗುತ್ತಿದೆ. ಈ ನೂರು ಕೋಟಿ ಸಂಖ್ಯೆ ದಾಟಿದ ಭಾರತೀಯರು ಅವರವರ ರಾಜ್ಯ ಸರಕಾರಕ್ಕೆ ತೆರಿಗೆ, ತೆರಿಗೆಯೇತರ ರಾಜಸ್ವ ಇತ್ಯಾದಿ ವಂತಿಗೆಯನ್ನು ಪ್ರತಿವರ್ಷ ಆಯವ್ಯಯ ಖಜಾನೆಗೆ ವೆಚ್ಚ ಮಾಡಲು ಕೊಡುವಂತೆ ಈ ಭಾರತ ದೇಶದ ಆಡಳಿತ ಹಾಗೂ ಅಭಿವೃದ್ಧಿಗೋಸ್ಕರವಾಗಿ ಪ್ರತಿವರ್ಷ ಲಕ್ಷಾಂತರ ಕೋಟಿ ಹಣವನ್ನು ಕೇಂದ್ರದ ಸಂಚಿತ-ನಿಧಿ-ಸಾಗರಕ್ಕೆ ಹರಿಸಿ ಕಳುಹಿಸುತ್ತಾರೆ. ಇದು ಕೂಡ ಪ್ರತಿವರ್ಷ ಹೆಚ್ಚುತ್ತಲೇ ಇದೆ. ಕೇಂದ್ರ ಸರಕಾರದ ಈ ಹಣ ಸಂಚಿತ-ನಿಧಿ-ಸಾಗರ ದಿಲ್ಲಿಯಿಂದ ಭಾರತ ದೇಶದ ಮೂಲೆ ಮೂಲೆಯಲ್ಲಿಯ ಎಲ್ಲಾ ಹಳ್ಳಿಗಳಿಗೂ ಹರಿದು ಬರುತ್ತಿದೆ. ಈ ನಿಧಿಯು ನೇರವಾಗಿ ವಿವಿಧ ಇಲಾಖೆಗಳ ಮುಖಾಂತರವಲ್ಲದೆ ರಾಜ್ಯ ಸರ್ಕಾರಗಳಿಗೆ, ಜಿಲ್ಲಾ (ಪಂಚಾಯತಿ) ಸರಕಾರಕ್ಕೆ, ತಾಲ್ಲೂಕು-ಗ್ರಾಮ (ಪಂಚಾಯತಿ) ಸರಕಾರಕ್ಕೆ ಕೂಡ ಬರುತ್ತಿದೆ. ಈ ಹಣದ ಹರಿವನ್ನು ರಾಜ್ಯಗಳ ಸರಕಾರಗಳು ವಿವಿಧ ಹಂತದ ಪ್ರಜಾಪ್ರತಿನಿಧಿಗಳು ಹಳ್ಳಿಯಿಂದ ದಿಲ್ಲಿಯವರೆಗಿನವರು ತಮಗೆ ಹರಿದು ಬರಬೇಕಾದ ಪಾಲು ಎಷ್ಟು, ಅದನ್ನು ಹೇಗೆ ಹರಿಸಿಕೊಳ್ಳಬೇಕು ಹಾಗೂ ಹರಿದ ಹಣವನ್ನು ಹೇಗೆ ಉಪಯುಕ್ತವಾಗಬೇಕೆಂಬುದನ್ನು ಅರಿತು ಕಾರ್ಯಪ್ರವೃತ್ತರಾದರೆ ಈ ದೇಶದ ಪ್ರಜೆ ಸರಕಾರಗಳಿಗೆ ಕರ-ಕಂದಾಯ ಸಲ್ಲಿಸಿದ್ದುದೂ ಸಾರ್ಥಕವಾಗಬಲ್ಲುದು. ಇಲ್ಲವಾದರೆ ರಾಜ್ಯ ಸರಕಾರಗಳ ಆರ್ಥಿಕ ಹಾಗೂ ಭೌತಿಕ ಗುರಿ ಪ್ರತಿವರ್ಷ ನಿರೀಕ್ಷಿತ ಹಾಗೂ ಅಪೇಕ್ಷಿತ ಗುರಿಯಂತೆ ಸಾಧಿಸದೆ ಪ್ರಗತಿ ಕುಂಠಿತವಾಗುವಂತೆ ಕೇಂದ್ರ ಸರ್ಕಾರದ ಆರ್ಥಿಕ ಹಾಗೂ ಭೌತಿಕ ಗುರಿಯೂ ಕೂಡ ನಿಗದಿತವಾದಂತೆ ಸಾಧನೆಯಾಗದೆ ಕೇಂದ್ರದ ಯೋಜನೆಗಳು ಕೂಡ ವಿಫಲವಾಗುವ ಸಾಧ್ಯತೆ ಇದೆ. ಈ ದಿಶೆಯಲ್ಲಿ ಕೇಂದ್ರ ಸರಕಾರ, ರಾಜ್ಯ ಸರಕಾರ, ವಿವಿಧ ಹಂತದ ಪ್ರಜಾಪ್ರತಿನಿಧಿಗಳೆಲ್ಲರೂ ಎಲ್ಲಾ ಹಂತದ ಅಧಿಕಾರಿಗಳನ್ನು ಸಮರ್ಥವಾಗಿ ಸವಾರಿ ಮಾಡಿ ಉತ್ತಮ ಆಡಳಿತ - ಅಭಿವೃದ್ಧಿ ಸಾಧಿಸುವುದು ಅಗತ್ಯ ಹಾಗೂ ಅನಿವಾರ್ಯ.

ಕೇಂದ್ರ ಸರಕಾರದ ಸಂಚಿತ-ನಿಧಿ-ಸಾಗರಕ್ಕೆ ತೆರಿಗೆ, ತೆರಿಗೆ ರಹಿತ ರಾಜಸ್ವ ಮೂಲದಿಂದ 2.93 ಲಕ್ಷ ಕೋಟಿ, ಸಾರ್ವಜನಿಕ ಋಣ (ಸಾಲ) ಸಾಲ ಮತ್ತು ಮುಂಗಡ ವಸೂಲಿ ಹಾಗೂ ಇತರ ಬಂಡವಾಳ ಮೂಲಗಳಿಂದ 4.04 ಲಕ್ಷ ಕೋಟಿ ಹೀಗೆ ಒಟ್ಟು 6.97 ಲಕ್ಷ ಕೋಟಿ ಮೊತ್ತ 2001-2002ರಲ್ಲಿ ಸಂದಾಯವಾಗುತ್ತದೆ. ಹೀಗೆ ಸಂದಾಯವಾದ ನಿಧಿಯಲ್ಲಿಂದ ಕೇಂದ್ರ ಸರಕಾರ ಸಾಮಾನ್ಯ ಸೇವೆಗಳಿಗೆ 1.93 ಲಕ್ಷ, ಕೋಟಿ, ಸಾಮಾಜಿಕ ಸೇವೆಗಳಿಗೆ 0.20 ಲಕ್ಷ ಕೋಟಿ, ಆರ್ಥಿಕ ಸೇವೆಗಳಿಗೆ 1.12 ಲಕ್ಷ ಕೋಟಿ, ರಾಜ್ಯ ಸರಕಾರಗಳಿಗೆ ಸಹಾಯಧನ ಸಹಾಯಾನುದಾನವಾಗಿ 0.45 ಲಕ್ಷ ಕೋಟಿ, ಹೀಗೆ ಒಟ್ಟು 3.72 ಲಕ್ಷ ಕೋಟಿ ರಾಜಸ್ವ ಹಣವನ್ನು, ಸಾಮಾನ್ಯ ಸೇವೆಗಳ ಬಂಡವಾಳ ವೆಚ್ಚಕ್ಕೆ 0.22 ಲಕ್ಷ ಕೋಟಿ, ಸಾಮಾಜಿಕ ಸೇವೆಗಳ ಬಂಡವಾಳ ವೆಚ್ಚಕ್ಕೆ 953 ಕೋಟಿ, ಆರ್ಥಿಕ ಸೇವೆಗಳ ಬಂಡವಾಳ ವೆಚ್ಚಕ್ಕೆ 0.18 ಲಕ್ಷ ಕೋಟಿ, ಸಾರ್ವಜನಿಕ ಋಣ ಸಾಲಕ್ಕೆ 2.85 ಲಕ್ಷ, ಕೋಟಿ, ಸಾಮಾಜಿಕ ಹಾಗೂ ಆರ್ಥಿಕ ಸೇವೆಗಳಿಗೆ ಸಾಲ-ಮುಂಗಡ ಇತ್ಯಾದಿ ಇತರ ಸಾಲಕ್ಕೆ 0.26 ಲಕ್ಷ ಕೋಟಿ ಹೀಗೆ ಒಟ್ಟು 3.52 ಲಕ್ಷ ಬಂಡವಾಳ ವೆಚ್ಚ ಸೇರಿ ಸಂಚಿತ ನಿಧಿ ಭಂಡಾರದಿಂದ ಒಟ್ಟು 7.24 ಲಕ್ಷ ಕೋಟಿ 2001-2002ರಲ್ಲಿ ಕೇಂದ್ರ ಸರ್ಕಾರ ಬಟವಾಡೆ ಮಾಡಲಿದೆ. ಈ ವೆಚ್ಚದ ಹಣದಲ್ಲಿ ಕೇಂದ್ರ ಸರ್ಕಾರ ಕೊಡಬೇಕಾದ ಸಾಲದ ಮೇಲಿನ ಬಡ್ಡಿ 1.14 ಲಕ್ಷ ಕೋಟಿ, ರಾಜ್ಯ ಸರಕಾರಗಳಿಗೆ ಪಾಲು ಸಹಾಯಧನ 0.43 ಲಕ್ಷ ಕೋಟಿ, ಕೇಂದ್ರ ಸರಕಾರದ ಆಂತರಿಕ ಸಾಲ 2.76 ಲಕ್ಷ ಕೋಟಿ, ಕೇಂದ್ರದ ಬಾಹ್ಯ ಸಾಲ 96 ಸಾವಿರ ಕೋಟಿ, ರಾಜ್ಯ ಸರಕಾರಗಳಿಗೆ ಸಾಲ ಮುಂಗಡ 22 ಸಾವಿರ ಕೋಟಿ, ಪೆನ್ಷನ್ ಇತ್ಯಾದಿ 20 ಸಾವಿರ ಕೋಟಿ ಸೇರಿದ್ದು ಕೇಂದ್ರ ಸರಕಾರದ ನೌಕರರಿಗೆ ಕೊಡುವ ವೇತನ ಭತ್ಯೆ ಇತರ ಭತ್ಯೆ ಇತ್ಯಾದಿ ಏನೂ ಎಲ್ಲಿಯೂ ಸಿಗಲಾರದು ಹಾಗೂ ಈ ಬಗ್ಗೆ ಲೆಕ್ಕ ಶೀರ್ಷಿಕೆಯೂ ಇಲ್ಲ. 99-2000ದಲ್ಲಿ ಗ್ರಾಮೀಣಾಭಿವೃದ್ಧಿಗೆ 5124 ಕೋಟಿ, ವಾಯುವ್ಯ ಪ್ರದೇಶ ವಿಶೇಷ ಅಭಿವೃದ್ಧಿಗೆ 65.28 ಕೋಟಿ, ಸಂಸದರ ಪ್ರದೇಶ ಅಭಿವೃದ್ಧಿಗೆ 1390.24 ಕೋಟಿ ವಾಸ್ತವಿಕವಾಗಿ ವೆಚ್ಚ ಮಾಡಿದ್ದು ಈ ವೆಚ್ಚ 2001-2002ರಲ್ಲಿ ಗ್ರಾಮೀಣಾಭಿವೃದ್ಧಿಗೆ 4379.44 ಕೋಟಿ. ವಾಯುವ್ಯ ಪ್ರದೇಶ ಅಭಿವೃದ್ಧಿಗೆ 2022.66 ಕೋಟಿ, ಸಂಸದರ ಪ್ರದೇಶ ಅಭಿವೃದ್ಧಿಗೆ 4080 ಕೋಟಿಗೆ ಏರುತ್ತಲಿದೆ. ಈ ಮೂರು ಅಭಿವೃದ್ಧಿಯ ವೆಚ್ಚ 99-2000 ದಲ್ಲಿ 6579.27 ಕೋಟಿ ಇದ್ದುದು 2001-2002ಕ್ಕೆ 10482.10 ಕೋಟಿಗೆ ಏರಿದ್ದು ವಿಶೇಷವಾಗಿ ಹಿಂದಿಗಿಂತ ಈ ವೆಚ್ಚದ ಅಂದಾಜು ಹೆಚ್ಚಿದ್ದರೂ ಗ್ರಾಮೀಣಾಭಿವೃದ್ಧಿ ಶೀರ್ಷಿಕೆಗೆ ಕಡಿಮೆಯಾಗಿದ್ದು ಸಂಸದರೆಲ್ಲರೂ ತಮಗೆ ಕೊಡಮಾಡಿದ 4080.00 ಕೋಟಿ ಹಣವನ್ನು ತಾರತಮ್ಯ ಪಕ್ಷಪಾತ ಮಾಡದೆ ಭಾರತ ದೇಶಾದ್ಯಂತ ಗ್ರಾಮೀಣಾಭಿವೃದ್ಧಿಗೆ ಒತ್ತು ಕೊಟ್ಟು ಸಂಪೂರ್ಣ ಹಣ ವೆಚ್ಚ ಮಾಡಿದರೆ ಅವರಿಗೆ ಈ ದೇಶದ ಗ್ರಾಮೀಣ ಜನತೆ ಚಿರಋಣಿಯಾಗಬಲ್ಲುದು.

2001-2002ರಲ್ಲಿ ಎಂದಿನಂತೆ ಕೇಂದ್ರ ಸರಕಾರ ಸಾರ್ವಜನಿಕ ಲೆಕ್ಕದಿಂದ 1.90 ಲಕ್ಷ ಕೋಟಿ ಹಣ ಪಡೆದು 1.63 ಲಕ್ಷ ಕೋಟಿ ಬಟವಾಡೆ ಮಾಡಲಿದೆ. ಹೀಗೆ ಕೇಂದ್ರ ಸರ್ಕಾರ ಸಂಚಿತ ನಿಧಿ ಫಂಡ್, ಸಾರ್ವಜನಿಕ ವೆಚ್ಚ ಮೂಲಗಳಿಂದ ತನ್ನ ಖಜಾನೆಗೆ 8.87 ಲಕ್ಷ ಕೋಟಿ ಪಡೆದು, ಅಷ್ಟೇ 8.87 ಲಕ್ಷ ಕೋಟಿ ಬಟವಾಡೆ ಮಾಡಲಿದೆ ಹಾಗೂ ಈ ದೇಶದ ಆಡಳಿತ ಅಭಿವೃದ್ಧಿ ಸುವ್ಯವಸ್ಥಿತವಾಗಿ ಸಾಧಿಸುವ ಗುರಿ ಹೊಂದಿದೆ. ಅದು ಸಾರ್ಥಕವಾಗಬೇಕೆಂಬುದೆ ನಮ್ಮೆಲ್ಲ ಭಾರತೀಯರ ಅಶಾಭಿಲಾಸೆ.

ಕೇಂದ್ರ ಸರಕಾರ 2001-2002ರಲ್ಲಿ ಅನೇಕ ಸಮಾಜ ಸುಧಾರಕ ಅಭಿವೃದ್ಧಿ ಯೋಜನೆಗಳನ್ನು ಹಾಕಿಕೊಂಡಿದ್ದು, ಅವುಗಳಲ್ಲಿ ಉದ್ಯೋಗ ಖಾತ್ರಿ ಭರವಸೆ ಯೋಜನೆಗೆ 1600 ಕೋಟಿ, ಸ್ವರ್ಣ ಜಯಂತಿ, ಗ್ರಾಮ ಸ್ವರೋಜ್‌ಗಾರ್ ಯೋಜನೆಗೆ 500 ಕೋಟಿ, ಗ್ರಾಮೀಣ ವಸತಿ ಯೋಜನೆಗೆ 1527 ಕೋಟಿ, ರಾಷ್ಟ್ರೀಯ ಸಾಮಾಜಿಕ ಸಹಾಯತಾ ಕಾರ್ಯಕ್ರಮಗಳಿಗೆ 835 ಕೋಟಿ, ಅನ್ನಪೂರ್ಣ ಯೋಜನೆಗೆ 300 ಕೋಟಿ, ತ್ವರಿತ ನೀರು ಸರಬರಾಜು ಯೋಜನೆಗೆ 2010 ಕೋಟಿ, ಗ್ರಾಮೀಣ ಸ್ವಚ್ಛತಾ ಯೋಜನೆಗೆ 150 ಕೋಟಿ, ಭೂ-ಸಂಸಾಧನ ಯೋಜನೆಗೆ 900 ಕೋಟಿ, ಬರಗಾಲ ಪೀಡಿತ ಪ್ರದೇಶ ಯೋಜನೆಗೆ 210 ಕೋಟಿ, ಮರುಭೂಮಿ ಅಭಿವೃದ್ಧಿ ಯೋಜನೆಗೆ 160 ಕೋಟಿ, ಬೆಳೆ ವಿಮಾ ಯೋಜನೆಗೆ 300 ಕೋಟಿ, ತೋಟಗಾರಿಕೆ ಸಹಕಾರಕ್ಕೆ 135 ಕೋಟಿ, ಪ್ರಾಥಮಿಕ ಶಿಕ್ಷಣ ಹಾಗೂ ಸಾಕ್ಷರತಾ ವಯಸ್ಕರ ಶಿಕ್ಷಣ, ಕಪ್ಪು ಹಲಗೆ ತರಬೇತಿ ಇತ್ಯಾದಿ ಯೋಜನೆಗೆ 4000 ಕೋಟಿ, ಮಾಹಿತಿ ತಂತ್ರಜ್ಞಾನ ಯೋಜನೆಗೆ 425 ಕೋಟಿ, ಮಲೇರಿಯಾ, ಕುಷ್ಠರೋಗ, ಏಡ್ಸ್, ಕ್ಷಯರೋಗ, ಅಂಧತೆರೋಗ ನಿವಾರಣಾ ಇತ್ಯಾದಿ ಆರೋಗ್ಯ ಕುಟುಂಬ ಕಲ್ಯಾಣಕ್ಕೆ 5763 ಕೋಟಿ, ರಾಷ್ಟ್ರೀಯ ಹೆದ್ದಾರಿ ಅಂತರರಾಜ್ಯ ರಸ್ತೆ ರಚನಾ ಯೋಜನೆಗೆ 6078 ಕೋಟಿ, ಪೆಟ್ರೋಲಿಯಂ ಹಾಗೂ ಪ್ರಾಕೃತಿಕ ಗ್ಯಾಸ್ ಯೋಜನೆಗೆ 16936 ಕೋಟಿ, ವಿದ್ಯುತ್ತೀಕರಣ ಯೋಜನೆಗೆ 12375 ಕೋಟಿ, ಹೊಸ ರೇಲ್ವೆ ಮಾರ್ಗ, ರೇಲ್ವೆ ಮಾರ್ಗ ಸುಧಾರಣೆ ಇತ್ಯಾದಿ ಯೋಜನೆಗೆ 10040 ಕೋಟಿ, ಟೆಲಿಕಮ್ಯುನಿಕೇಷನ್ ಯೋಜನೆಗೆ 18174 ಕೋಟಿ, ಸಣ್ಣ ಪ್ರಮಾಣದ ಉದ್ಯಮದಲ್ಲಿ ಪ್ರಧಾನಮಂತ್ರಿ ರೋಜ್‌ಗಾರ್ ಯೋಜನೆಗೆ 194 ಕೋಟಿ, ಗ್ರಾಮೀಣ ಉದ್ಯೋಗ ಯೋಜನೆಗೆ 120 ಕೋಟಿ, ಸಣ್ಣ ಕೈಗಾರಿಕೆ ಯೋಜನೆಗೆ 60 ಕೋಟಿ, ಸಮಾಜ ಕಲ್ಯಾಣ ವಿಶೇಷ ಘಟಕದಲ್ಲಿ 468 ಲಕ್ಷ ಪರಿಶಿಷ್ಟ ಕುಟುಂಬಗಳ ಅಭಿವೃದ್ಧಿಗೆ ಹಾಗೂ 16 ಲಕ್ಷ ಪರಿಶಿಷ್ಟರಿಗೆ ಸ್ಕಾಲರ್‌ಶಿಪ್ ಕೊಡುವ ಯೋಜನೆಗಳಿಗೆ 563 ಕೋಟಿ. ಹೀಗೆ ಇನ್ನು ಅನೇಕ ಜನಪರ, ಗ್ರಾಮೀಣಪರ, ಪರಿಶಿಷ್ಟಪರ, ಸಾರ್ವಜನಿಕಪರ ಕಲ್ಯಾಣ ಯೋಜನೆಗಳನ್ನು 2001-2002ರಲ್ಲಿ ಕೇಂದ್ರ ಸರಕಾರ ರೂಪಿಸಿದ್ದು ಇವೆಲ್ಲಾ ಯೋಜನೆಗಳು ಯಶಸ್ವಿಯಾಗಿ ಆರ್ಥಿಕ ಹಾಗೂ ಭೌತಿಕ ಗುರಿ ಸಾಧಿಸಬೇಕಾದಲ್ಲಿ ಹಾಗೂ ಈ ಎಲ್ಲಾ

ಯೋಜನೆಗಳ ಸಮರ್ಪಕ ಯಶಸ್ವಿಗಾಗಿ ಆಯಾ ರಾಜ್ಯಗಳ ಪಾಲಿನ ಹಣ ಕಾಲಕಾಲಕ್ಕೆ ಪಡೆದು ಅದನ್ನು ಸಂಪೂರ್ಣ ವೆಚ್ಚ ಮಾಡಿ ಯೋಜನೆಗಳ ಸಫಲತೆಗಾಗಿ ರಾಜ್ಯ ಸರಕಾರಗಳು, ಸರಕಾರದಲ್ಲಿಯ ಮಂತ್ರಿ, ಅಧಿಕಾರಿಗಳು, ಚುನಾಯಿತ ಪ್ರತಿನಿಧಿಗಳು ಆಸಕ್ತಿಯಿಂದ ಕಾರ್ಯನಿರ್ವಹಿಸಿದರೆ ಮಾತ್ರ ಈ ಯೋಜನೆಗಳ ವಾಸ್ತವಿಕ ಪ್ರತಿಫಲ ಸಿಗಬಲ್ಲುದು. ಈ ದಿಸೆಯಲ್ಲಿ ಕೇಂದ್ರ ಹಣ ಪಡೆದು ರಾಜ್ಯ ಸರ್ಕಾರದ ಪಾಲನ್ನು ಹಾಕಿ ಯೋಜನೆಗಳನ್ನು ಯಶಸ್ವಿಗೊಳಿಸಿದರೆ ರಾಜ್ಯ ಸರಕಾರಕ್ಕೆ ಪ್ರಜೆಗಳು ಚಿರಋಣಿ.

❑

ಸರಕಾರಿ ಆಡಳಿತ :
ರಾಜಕೀಯ ಪಕ್ಷದ ಆಡಳಿತವಾಗಬಾರದು

ರಾಷ್ಟ್ರದ ಒಂದು ನೂರು ಕೋಟಿಗೂ ಮಿಕ್ಕಿದ ಹಾಗೂ ರಾಜ್ಯದ ಐದು ಕೋಟಿಗೂ ಮೀರಿದ ಜನತೆ ಪ್ರತಿವರ್ಷ ತಪ್ಪದೆ ತೆರಿಗೆ ಕರ, ತೆರಿಗೆಯೇತರ, ಇತರ ಕರ ಇತ್ಯಾದಿ ಕರವನ್ನು ಆಯಾ ಸರಕಾರಗಳಿಗೆ ಕೊಡುತ್ತಲೇ ಇದ್ದಾರೆ. ಈ ಆದಾಯದೊಂದಿಗೆ ಸಾಲ ಸಹಾಯಧನ ಇತ್ಯಾದಿ ಮೊತ್ತವನ್ನು ಸರಕಾರಗಳು ಪಡೆದು ಈ ಎಲ್ಲ ಹಣವನ್ನು ಜನತೆಯ ಸಾಮಾನ್ಯ, ಸಾಮಾಜಿಕ, ಆರ್ಥಿಕ ಸೇವಾ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಹಾಗೂ ಆಡಳಿತಕ್ಕೆ ವೆಚ್ಚ ಮಾಡುತ್ತಲೇ ಇವೆ. ಕೇಂದ್ರ ಸರ್ಕಾರ ಎಂ.ಪಿ. ಫಂಡ್ ಮುಖಾಂತರ, ರಾಜ್ಯ ಸರಕಾರಗಳು ಶಾಸಕರ ಫಂಡ್ ಮುಖಾಂತರವೂ ಸಹ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಹಣವನ್ನು ವೆಚ್ಚ ಮಾಡುತ್ತಲೇ ಇವೆ. ಈ ಎಲ್ಲ ಹಣ ಸಾರ್ವಜನಿಕರ ಸರ್ವಾಂಗೀಣ ಅಭಿವೃದ್ಧಿಗೆ ಯಾವುದೇ ಭೇದಭಾವ, ಪಕ್ಷಪಾತ, ಸ್ವಜನ ಪಕ್ಷಪಾತವಿಲ್ಲದೆ ವೆಚ್ಚವಾಗಬೇಕಾಗುತ್ತದೆ. ಈ ಎಲ್ಲ ಹಣದ ವೆಚ್ಚದ ಸದುಪಯೋಗ, ಸದ್ವಿನಿಯೋಗ ಜನತಾ ಪ್ರತಿನಿಧಿಗಳಾದ ವಿವಿಧ ಮಂತ್ರಿ, ಅಧ್ಯಕ್ಷ ಉಪಾಧ್ಯಕ್ಷರನ್ನೊಳಗೊಂಡ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ, ಜಿಲ್ಲಾ ಪಂಚಾಯತಿ, ಪಟ್ಟಣ ಪಂಚಾಯತಿ, ಪುರಸಭೆ, ನಗರಸಭೆ, ನಗರಪಾಲಿಕೆ, ವಿವಿಧ ಸಂಘ-ಸಂಸ್ಥೆ, ವಿಧಾನ ಸಭೆ, ವಿಧಾನ ಪರಿಷತ್ತು, ಲೋಕಸಭೆ ಹಾಗೂ ರಾಜ್ಯಸಭೆಗಳ ಸದಸ್ಯರ ವಿವೇಚನೆ ಹಾಗೂ ಜವಾಬ್ದಾರಿಯನ್ನು ಅವಲಂಬಿಸಿರುತ್ತದೆ. ಈ ಎಲ್ಲ ಪ್ರಜಾ ಪ್ರತಿನಿಧಿ ಘಟಕಗಳಲ್ಲಿ ಆಡಳಿತ ರಾಜಕೀಯ ಪಕ್ಷ, ವಿರೋಧ ರಾಜಕೀಯ ಪಕ್ಷ, ಇನ್ನಿತರ ರಾಜಕೀಯ ಪಕ್ಷ ಹಾಗೂ ಪಕ್ಷೇತರ ಗುಂಪುಗಳ ನಾಯಕರು ಇರುತ್ತಾರೆ. ಸರಕಾರ ಹಾಗೂ ಪ್ರಜಾ ಪ್ರತಿನಿಧಿಗಳು ಯಾವುದೇ ರಾಜಕೀಯ ಪಕ್ಷದವರು ಇರಲಿ ಅಥವಾ ಪಕ್ಷೇತರರೇ ಇರಲಿ ಅವರು ಪಕ್ಷಪಾತಿಗಳಾಗದೆ ನಿಷ್ಪಕ್ಷಪಾತಿಗಳಾಗಿ ಸರ್ವರ ಹಾಗೂ ಸರ್ವ ಭಾಗಗಳ ಪ್ರಗತಿಗಾಗಿ, ಸರ್ವ ಯೋಜನೆಗಳ ಯಶಸ್ಸಿಗಾಗಿ ಖಜಾನೆಯ ಹಣವನ್ನು ನಿಗದಿ ಮಾಡಿ, ಬಿಡುಗಡೆ ಮಾಡಿ ಆ ಹಣವನ್ನೆಲ್ಲಾ ಸಂಪೂರ್ಣವಾಗಿ ವೆಚ್ಚ ಮಾಡಬೇಕಾಗುತ್ತದೆ.

ಜಾತಿವಾದಿಗಳಾಗದೆ ಜಾತ್ಯಾತೀತರಾಗಿ ಸರ್ವಧರ್ಮಗಳ ಹಾಗೂ ಸರ್ವಧರ್ಮಗಳ ವಿವಿಧ ಪಂಗಡಗಳ ಜನತೆಗೆ ಭೇದಭಾವವಿಲ್ಲದೆ ಅವರೆಲ್ಲರ ಅಭಿವೃದ್ಧಿಗಾಗಿ ವೆಚ್ಚ ಮಾಡಬೇಕಾಗುತ್ತದೆ. ಸ್ವಾರ್ಥಿಗಳಾಗದೆ ನಿಸ್ವಾರ್ಥಿಗಳಾಗಿ ಸರ್ವರ ಹಿತವನ್ನು ಕಾಪಾಡಬೇಕಾಗುತ್ತದೆ. ತಮ್ಮ ತಮ್ಮ ಆಡಳಿತ ನಿರ್ವಹಣೆಯಲ್ಲಿ ಅಧಿಕಾರ ದುರುಪಯೋಗ ಮಾಡದೆ ಸರ್ವರಿಗೂ ಸದುಪಯೋಗ ಮಾಡಿಕೊಡಬೇಕಾಗುತ್ತದೆ. ಆಡಳಿತ ನಿರ್ವಹಣೆಯಲ್ಲಿ ದುರಾಡಳಿತವಾಗದಂತೆ ಉತ್ತಮ ಹಾಗೂ ಸರ್ವಸಮ್ಮತವಾದ ಆಡಳಿತ ಮಾಡಬೇಕಾಗುತ್ತದೆ. ಆಡಳಿತ ಹಾಗೂ ಅಭಿವೃದ್ಧಿ ಕಾರ್ಯದಲ್ಲಿ ಭ್ರಷ್ಟರಾಗದೆ ಪ್ರಾಮಾಣಿಕವಾಗಿ ಕೆಲಸ ಮಾಡಬೇಕಾಗುತ್ತದೆ. ಬಡತನ ಹಾಗೂ ನಿರುದ್ಯೋಗ ನಿವಾರಣೆಗಾಗಿ ಅತ್ಯಗತ್ಯವಾದ ಕ್ರಮ ಹಾಗೂ ಯೋಜನೆಗಳನ್ನು ಹಾಕಿಕೊಳ್ಳಬೇಕಾಗುತ್ತದೆ. ಇಂತಹ ಉತ್ತಮ, ಉದಾತ್ತ, ಸುಭದ್ರ ಹಾಗೂ ಸರ್ವ ಸಮ್ಮತವಾದ ಆಡಳಿತ ಹಾಗೂ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡು ಸರ್ವರ ಮನ್ನಣೆ, ಪ್ರೀತಿ, ವಿಶ್ವಾಸ, ಅಭಿಮಾನ, ಹೊಗಳಿಕೆಗಳಿಗೆ ಪಾತ್ರರಾಗಿ ಸರ್ವಶ್ರೇಷ್ಠ ಪ್ರಜಾ ರಾಜಕಾರಣಿಗಳಾಗಿ ಮೆರೆದು ಉನ್ನತ ಮಟ್ಟಕ್ಕೇರಿದ ಪ್ರಜಾ ಪ್ರತಿನಿಧಿ ಹಾಗೂ ಪ್ರಜಾ ಪ್ರತಿನಿಧಿ ಸರಕಾರಗಳು ನಮ್ಮ ರಾಷ್ಟ್ರದಲ್ಲಿ ಸಾಕಷ್ಟು ಇದ್ದು ಭಾರತೀಯ ಇತಿಹಾಸದ ಪುಟಗಳಲ್ಲಿ ಸೇರಿವೆ. ಇದೆಲ್ಲಕ್ಕೂ ವ್ಯತಿರಿಕ್ತವಾಗಿ ಸರಕಾರ ಹಾಗೂ ಸರಕಾರಿ ಹಣವೆಂದರೆ ಕೇವಲ ರಾಜಕೀಯ ಪಕ್ಷದ ಸರಕಾರ ಹಾಗೂ ಕೇವಲ ರಾಜಕೀಯ ಪಕ್ಷದ ಪ್ರಜಾ ಪ್ರತಿನಿಧಿಯರದೆಂದು ಗ್ರಹಿಸಿಕೊಂಡು ಅನೇಕ ಸರಕಾರಗಳು ಹಾಗೂ ಪ್ರಜಾ ಪ್ರತಿನಿಧಿಗಳು ತಾವು ಈ ರಾಷ್ಟ್ರದ ಹಾಗೂ ರಾಜ್ಯಗಳ ಸರ್ವ ಪ್ರಜೆಗಳ ಪಕ್ಷ-ರಹಿತರೆಂಬುದನ್ನು ಮರೆತು, ಸರಕಾರಿ ಹಣ ಸರ್ವ ಪ್ರಜೆಗಳು ಕೊಟ್ಟ ಹಣವೆಂಬುದನ್ನು ಮರೆತು, ಚುನಾವಣೆ ಮುಗಿದು ಚುನಾಯಿತರಾದ ಮೇಲೆ ತಾವು ಮತ ಕೊಟ್ಟವರಿಗೂ ಹಾಗೂ ಮತ ಕೊಡದವರಿಗೂ ಎಲ್ಲರಿಗೂ ಸರಕಾರ ಹಾಗೂ ಪ್ರಜಾ ಪ್ರತಿನಿಧಿಗಳೆಂಬುದನ್ನು ಮರೆತು, ಮತ ಕೊಟ್ಟು ಗೆಲ್ಲಿಸಿದವರಿಗೆ ಹಾಗೂ ಗೆಲ್ಲಿಸಿದ ರಾಜಕೀಯ ಪಕ್ಷಕ್ಕೆ ಮಾತ್ರ ಸರಕಾರ ಹಾಗೂ ಪ್ರಜಾ ಪ್ರತಿನಿಧಿಗಳು ಎಂದು ಪಕ್ಷಪಾತ, ಸ್ವಜನ ಪಕ್ಷಪಾತ ಹಾಗೂ ಸ್ವಾರ್ಥಿಗಳಾಗಿ ಅಧಿಕಾರಾರೂಢ ರಾಜಕೀಯ ಪಕ್ಷದ ವಿರೋಧಿಗಳಿಗೆ ಹಾಗೂ ಪ್ರಜೆಗಳಿಗೆ ಅನ್ಯಾಯ ಮಾಡುತ್ತ ಸರಕಾರದಿಂದ ಸಿಗಬೇಕಾಗಿರುವ ಸಕಲ ಸವಲತ್ತನ್ನು ವಿರೋಧಿಗಳಿಗೆ ಸಿಗದಂತೆ ಮಾಡುತ್ತಿರುವ ಸನ್ನಿವೇಶಗಳು ಪ್ರಜಾವ್ಯವಸ್ಥೆಗೆ ಅಪಾಯಕಾರಿಯಾಗಿವೆ. ಅನೇಕ ಕಡೆ ಅಧಿಕಾರದಲ್ಲಿರುವ ಕೆಲವು ಮಂತ್ರಿಗಳು ತಾವು ತಮ್ಮನ್ನು ಚುನಾಯಿಸಿದ ಜನರಿಗೆ, ತಮ್ಮನ್ನು ಚುನಾಯಿಸಿದ ಭಾಗಕ್ಕೆ ಮಾತ್ರ ಮಂತ್ರಿಗಳೆಂಬ ಸಂಕುಚಿತ ಮನೋಭಾವನೆಯಿಂದ ಕೆಲವು ಭೌಗೋಳಿಕ ಪ್ರದೇಶಗಳನ್ನು ಕಡೆಗಣಿಸಿ, ಅಭಿವೃದ್ಧಿ ಹಾಗೂ ಆಡಳಿತದಲ್ಲಿ ಪಕ್ಷಪಾತಿಗಳಾಗಿ ತರತಾಮ್ಯ ಮಾಡಿದ ಉದಾಹರಣೆಗಳುಂಟು. ಅನೇಕ ಪ್ರಜಾಪ್ರತಿನಿಧಿಗಳು ತಮ್ಮನ್ನು ಚುನಾಯಿಸಿದ ಜನತೆ ಹಾಗೂ ಕ್ಷೇತ್ರಕ್ಕೆ

ಮಾತ್ರ ತಾವೆಂದು ಮತ ಕೊಡದವರಿಗೆ ಯಾವುದೇ ಸರಕಾರಿ ಸವಲತ್ತು ಸಿಗದಂತೆ ಹಾರೊಡೆದ ಉದಾಹರಣೆಗಳು ಉಂಟು. ಇತ್ತೀಚೆಗೆ ನಡೆದ ಒಂದು ಜೀವಂತ ಉದಾಹರಣೆ ಹೀಗಿದೆ ಹೈದರಾಬಾದ್ ಕರ್ನಾಟಕದ ಔರಾದ ತಾಲ್ಲೂಕು ಪಂಚಾಯತಿ ಇದೆ. ಈ ಪಂಚಾಯತಿಗೆ ಸಂಪೂರ್ಣ ಗ್ರಾಮೀಣ ರೋಜ್‌ಗಾರ್ ಯೋಜನೆ ಅಡಿಯಲ್ಲಿ 77.00 ಲಕ್ಷ ಹಣ ಕೇಂದ್ರ ಬಜೆಟ್ ನಿಗದಿಗೊಳಿಸಲಾಗಿದೆಯೆಂದು ಹೇಳಲಾಗಿದೆ. ಈ ಎಲ್ಲ ಹಾಗೂ ಇದಕ್ಕೆ ಸಂಬಂಧಿಸಿದ ಹಣ ಹಾಗೂ ಅಭಿವೃದ್ಧಿ ಕಾರ್ಯಗಳನ್ನು ತಾಲ್ಲೂಕಿನ ಚುನಾಯಿತ ಎಲ್ಲಾ ಪ್ರತಿನಿಧಿಗಳ ಕ್ಷೇತ್ರಗಳಿಗೆ ಪಕ್ಷಭೇದ ಮರೆತು ಹಂಚಬೇಕಾದ್ದು ಧರ್ಮ, ಹಾಗೆ ಆಗಿದೆಯೇ? ಇಲ್ಲ. ಪಂಚಾಯತಿಯ 20 ಚುನಾಯಿತ ಸದಸ್ಯರಲ್ಲಿ 14 ಜನ ಆಡಳಿತ ಕಾಂಗ್ರೆಸ್ಸಿಗರು ಹಾಗೂ 6 ಜನ ವಿರೋಧಿ ಪಕ್ಷದ ಬಿ.ಜೆ.ಪಿ.ಯವರಿದ್ದಾರೆ. ಈ ಯೋಜನೆಯ ಹಣವನ್ನು ಆಡಳಿತ ಪಕ್ಷದ 14 ಸದಸ್ಯರ 14 ಕ್ಷೇತ್ರಗಳಿಗೆ ಮಾತ್ರ ನಿಗದಿಗೊಳಿಸಿ, 6 ಜನ ವಿರೋಧಿ ಸದಸ್ಯರ ಕ್ಷೇತ್ರಗಳಿಗೆ ಯಾವುದೇ ಎಷ್ಟೇ ಹಣವನ್ನು ನಿಗದಿಗೊಳಿಸದೆ, ನಿಷ್ಪಕ್ಷಪಾತವಾಗಿ ತಾಲ್ಲೂಕಿನ ಎಲ್ಲ ಕ್ಷೇತ್ರಗಳಿಗೆ ಸಮನಾಗಿ ಹಂಚಿರಿಯೆಂಬ ಶಾಸಕರ ಸಲಹೆಗೂ ಕೂಡ ಲಕ್ಷ್ಯ ಕೊಡದೆ ಕೇವಲ ಆಡಳಿತ ಪಕ್ಷ ಕಾಂಗ್ರೆಸ್ ಸದಸ್ಯರ 14 ಕ್ಷೇತ್ರಗಳಿಗೆ ಮಾತ್ರ ಹಣ ನಿಗದಿ ಮಾಡಿ ಬಹುಮತದಿಂದ ತಾ। 18-12-2001ರಂದು ನಿರ್ಣಯ ಮಾಡಿರುವುದು ಇಂತಹ ತೀರ್ಮಾನ ಜನ ವಿರೋಧಿ ಹಾಗೂ ಪ್ರಜಾತಂತ್ರ ವ್ಯವಸ್ಥೆಗೆ ಮಾರಕವಾದದ್ದಲ್ಲವೇ? ಇಂತಹ ಮಾರಕ ಠರಾವುಗಳಿಗೆ ಅಧಿಕಾರಿಗಳು ಹಾಗೂ ಸರಕಾರ ಕುಮ್ಮಕ್ಕು ಕೊಡುವುದು ಪ್ರಜಾದ್ರೋಹಿಯಲ್ಲವೇ? ಇಂತಹ ಸಮಾಜಘಾತಕ ಪ್ರಜಾತಂತ್ರ ವಿರೋಧಿ ಕುಕೃತ್ಯಗಳಿಗೆ ಸರಕಾರಗಳು ಬೆಂಬಲಿಸುವುದಾದರೆ ನಮ್ಮ ರಾಷ್ಟ್ರದಲ್ಲಿ ಪ್ರಜಾತಂತ್ರ ವ್ಯವಸ್ಥೆಯ ಬದಲು ಪಾಳೆಗಾರಿಕೆ ಸರಕಾರಗಳನ್ನೇಕೆ ಪ್ರಜೆಗಳು ಬಯಸಬಾರದು? ರಾಜ್ಯಾದ್ಯಂತ ಇಂತಹ ಉದಾಹರಣೆ ಸಾಕಷ್ಟು ಇವೆ. ಜಾತೀಯತೆ, ಸ್ವಾರ್ಥ, ಪಕ್ಷಪಾತ, ಸ್ವಜನ ಪಕ್ಷಪಾತ, ಭ್ರಷ್ಟಾಚಾರ, ಅಧಿಕಾರ ದುರುಪಯೋಗ, ದುರಾಡಳಿತಗಳ ಸಮಾಜಘಾತುಕ ಪ್ರಜಾತಂತ್ರ ವಿರೋಧಿ ದುರ್ಘಟನೆಗಳು ಅವ್ಯಾಹತ ವಾಗಿ ನಡೆಯುತ್ತಿವೆ. ಈ ದುರ್ಘಟನೆಗಳು ಮರುಕಳಿಸದಂತೆ ಅವುಗಳನ್ನು ಅಂತ್ಯಗೊಳಿಸುವುದು ಹಾಗೂ 'ಸರ್ವೇ ಜನಾಃ ಸುಖಿನೋ ಭವಂತು' ಎಂಬಂತೆ ಆಡಳಿತ ಅಭಿವೃದ್ಧಿ ಮಾಡುವುದು ರಾಜ್ಯದ ಆಡಳಿತ ಕಾಂಗ್ರೆಸ್ ಪಕ್ಷದ ಸರಕಾರ ಹಾಗೂ ಈ ಸರಕಾರದ ಚಾಣಾಕ್ಷ ಮುಖ್ಯಮಂತ್ರಿಗಳ ಆದ್ಯ ಕರ್ತವ್ಯವೆಂದು, ಹದಗೆಟ್ಟ ಪರಿಸ್ಥಿತಿಯನ್ನು ಸುಧಾರಿಸುವುದು ಹೊಣೆಯರಿತವರ ಕರ್ತವ್ಯವಾಗುವುದು ಒಳ್ಳೆಯದು, ಇಲ್ಲವಾದರೆ ಇದು ಕುರುಡು ಮುದುಕಿಯ ಮನೆಯಂತಹ ಸರಕಾರವಾದೀತು.

❑

ದಿವಾಳಿಯ ದಿಕ್ಕಿನತ್ತ ನಾದಾರಿ ಸರಕಾರ

ಕರ್ನಾಟಕ ರಾಜ್ಯದ ಪ್ರಜಾತಂತ್ರ ವ್ಯವಸ್ಥೆಯ ಇತಿಹಾಸದಲ್ಲಿ ಇಲ್ಲಿಯವರೆಗೆ ಎಸ್.ಎಂ. ಕೃಷ್ಣರಷ್ಟು ಸುದೀರ್ಘ, ಅನುಭವಶಾಲಿ, ಅಸಾಧಾರಣ ವ್ಯಕ್ತಿತ್ವ ಹೊಂದಿದ ಮುಖ್ಯಮಂತ್ರಿ ಈ ತನಕ ಯಾರೂ ಆಗಿಲ್ಲ. ಭಾರತ ದೇಶದ ಪ್ರಧಾನಮಂತ್ರಿ ಆಸ್ಥಾನ ಪೀಠಕ್ಕೆ ಏರುವ ಸಾಮರ್ಥ್ಯವನ್ನು ಪಡೆದಿರುವ ವ್ಯಕ್ತಿಯೆಂದರೆ ಅತಿಶಯೋಕ್ತಿ ಆಗಲಾರದು. ದೀಪದ ಕೆಳಕೆ ಕತ್ತಲು ಎಂಬಂತೆ ಕೃಷ್ಣರವರಿಗೂ ಕೂಡ ಕೆಲವು ಗುಣಮುಖವಾಗ ಬಹುದಾದ ಲೋಪಗಳು ಇದ್ದು ಅವುಗಳನ್ನು ಪರಿಹರಿಸಿಕೊಂಡರೆ ರಾಜ್ಯದ ಹಾಗೂ ರಾಷ್ಟ್ರದ ಹಾಗೂ ಅವರ ಹಿತದೃಷ್ಟಿಯಿಂದ ಒಳ್ಳೆಯದು. ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಒಬ್ಬರಿಗಿಂತ ಹೆಚ್ಚು ಮಂತ್ರಿಗಳಿದ್ದಾರೆ. ಕೆಲವು ಜಿಲ್ಲೆಗಳಲ್ಲಿ ಒಬ್ಬರಾದರೂ ಮಂತ್ರಿಗಳಿರುವುದಿಲ್ಲ. ಅನುಭವಿಗಳಾದರೂ ಅವರನ್ನು ಮಂತ್ರಿಗಳನ್ನಾಗಿ ಮಾಡಿಲ್ಲ. ಅನಾವಶ್ಯಕ ಹಾಗೂ ಅಸಮರ್ಥ ಮಂತ್ರಿಗಳು ಕೆಲವರಿದ್ದಾರೆ. ಏಕೆ? ಕೆಲವು ಮಂತ್ರಿಗಳು ಸರಕಾರದ ಧ್ಯೇಯ-ಧೋರಣೆ-ಗುರಿ ಸಾಧಿಸುವಲ್ಲಿ ವಿಫಲರಾಗಿದ್ದಾರೆ. ಅವರೆಲ್ಲರ ವೈಫಲ್ಯಕ್ಕೆ ಮುಖ್ಯಮಂತ್ರಿಗಳು ಅಪರೋಕ್ಷ ಕಾರಣವಲ್ಲವೆ? ಇದ್ದ ಅಧಮ, ಅಸಮರ್ಥ ಮಂತ್ರಿಗಳನ್ನು ಕೈಬಿಡುವುದು, ಇಲ್ಲವೆ ತೆಗೆದುಹಾಕುವುದು ಹಾಗೂ ಉತ್ತಮ ದಕ್ಷ ಶಾಸಕರನ್ನು ಹೊಸದಾಗಿ ಮಂತ್ರಿಗಳನ್ನು ಮಾಡುವುದು ಇದೊಂದು ಸತ್‌ಸಂಪ್ರದಾಯವನ್ನು ಈ ಹಿಂದಿನ ಅನೇಕ ಮುಖ್ಯಮಂತ್ರಿಗಳು ಅನುಸರಿಸುತ್ತ ಬಂದಿದ್ದು ಇವರೇಕೆ ಉದಾಸೀನರಾಗಿದ್ದಾರೆ? 2001-2002 ಹಾಗೂ ಹಿಂದಿನ ಎರಡು ಬಜೆಟ್‌ಗಳ ಬಗ್ಗೆ ಕೃಷ್ಣರವರ ಭಾಷಣ ಕೇಳಿ ಪುಸ್ತಕವನ್ನು ಓದಿದರೆ ಭಾರೀ ಆಶಾದಾಯಕವೆಂಬಂತೆ ತೋರುತ್ತದೆ. ಆದರೆ ಪರಿಣಾಮ ಮಾತ್ರ ನಿರಾಶಾದಾಯಕ ಹಾಗೂ ಗುರಿ ಸಾಧಿಸುವಲ್ಲಿ ವೈಫಲ್ಯ ಕಂಡುಬಂದಿದೆ. ರಾಜ್ಯದಲ್ಲಿ ಆಡಳಿತ ಬಹಳಷ್ಟು ಸೂಕ್ಷ್ಮವಾಗಿ ನೋಡಿದರೆ ಹದಗೆಟ್ಟಿದೆ. ಸ್ವಾರ್ಥ, ಜಾತೀಯತೆ, ಪಕ್ಷಪಾತ, ಸ್ವಜನ ಪಕ್ಷಪಾತ, ಭ್ರಷ್ಟಾಚಾರ, ಅವ್ಯವಹಾರ, ಅಧಿಕಾರ ದುರುಪಯೋಗ, ದುರಾಡಳಿತ, ಬಡತನ, ನಿರುದ್ಯೋಗ, ಜನಸಂಖ್ಯೆ ವಿಪರೀತವಾಗಿ ಬೆಳೆಯುತ್ತಿದೆ. ಈ ಎಲ್ಲ ಸಮಾಜಘಾತುಕ ರೋಗಗಳ

ನಿವಾರಣೆ ಇಲ್ಲದಾಗಿದೆ. ಕಾಡುಗಳ್ಳನೆಂಬ ವೀರಪ್ಪನನ್ನು ಮೀರಿಸುವ ನಾಡಗಳ್ಳ ಸಮಾಜಘಾತುಕರು ಬೇಕಾದಷ್ಟು ಸಂಖ್ಯೆಯಲ್ಲಿದ್ದಾರೆ. ವೀರಪ್ಪನನ್ನು ಹಿಡಿಯುವಲ್ಲಿ ನಿಷ್ಫಲ ಯತ್ನ ಮಾಡುವುದಕ್ಕಿಂತ ಅವನನ್ನು ಮೀರಿಸಿರುವ ನಾಡಗಳ್ಳರನ್ನು ಬಲಿಯಿಕ್ಕುವಲ್ಲಿ ವಿಫಲರಾಗಿರುವುದು ಏಕೆ? ಪರಿಣಾಮಕಾರಿ ಲೋಕಾಯುಕ್ತರ ಕಾರ್ಯವಿಧಾನಕ್ಕೆ ಪ್ರೋತ್ಸಾಹಿಸಿದ ನಿಷ್ಕ್ರಿಯತೆ ಏಕೆ? ಅದಕ್ಷ, ಅಸಮರ್ಥ, ಕರ್ತವ್ಯಲೋಪ, ಸಮಾಜಘಾತುಕ ಸಾರ್ವಜನಿಕ-ನೌಕರರನ್ನೇ ಶಿಕ್ಷಿಸದೆ ಬಿಡಲಾಗುತ್ತಿರುವುದು ಏಕೆ? ಸರಕಾರದ ಗುರಿಯನ್ನು ಬಜೆಟ್ ಪ್ರಕಾರ ಸಾಧಿಸದಿರುವ ಅಧಿಕಾರಿ ಹಾಗೂ ಮಂತ್ರಿಗಳನ್ನು ಶಿಕ್ಷಿಸದಿರುವುದೇಕೆ?

ಪ್ರತಿವರ್ಷ ಬಜೆಟ್ ಪ್ರಕಾರ ಭಾರೀ ಸಾಧಿಸುವೆವೆಂಬ ಬಾಯಿಮಾತಿನ ಗುರಿ ತಪ್ಪುತ್ತಿರುವುದೇಕೆ? ಪ್ರತಿವರ್ಷ ಸರಕಾರಿ ಆದಾಯ ಹೆಚ್ಚುತ್ತಲಿದ್ದರೂ ಆದಾಯಕ್ಕೆ ಅನುಗುಣವಾಗಿ ರೆವಿನ್ಯೂ ವೆಚ್ಚ ಮಾಡದೆ ನಿಗದಿತ ಗುರಿ ಸಾಧಿಸದೆ ಸಾಗುತ್ತಿರುವುದೇಕೆ? ಪ್ರತಿವರ್ಷ ಸರಕಾರದ ಸಾಲ ಹೆಚ್ಚುತ್ತಲಿದ್ದು ಕೊಡತಕ್ಕ ಬಡ್ಡಿಯೂ ಹೆಚ್ಚುತ್ತಲಿದೆ. ಪ್ರತಿವರ್ಷ ವೆಚ್ಚ ಮಾಡುತ್ತಲಿರುವ ರೆವಿನ್ಯೂ ವೆಚ್ಚದ ಸಾಮಾನ್ಯ, ಸಾಮಾಜಿಕ ಹಾಗೂ ಆರ್ಥಿಕ ಸೇವೆಗಳ ಮತ್ತು ಸಹಾಯಧನ ಹಾಗೂ ಅನುದಾನಗಳ ಕೊರತೆ ಏಕೆ? ತೆರಿಗೆ ಆದಾಯ 99-2000ದಲ್ಲಿ 8628.04 ಕೋಟಿ, 2000-20001ರಲ್ಲಿ 11616.51 ಕೋಟಿ, 2001-2002ರಲ್ಲಿ 12636.35 ಕೋಟಿಯಾಗಿದ್ದು, 2002-2003ರಲ್ಲಿ 14812.05 ಕೋಟಿಗೆ ಏರಲಿದೆ. ಒಟ್ಟು ರಾಜಸ್ವ ಆದಾಯ 99-2000ದಲ್ಲಿ 12906.45 ಕೋಟಿ, 2000-2001ರಲ್ಲಿ 14822.72 ಕೋಟಿ, 2001-2002ರಲ್ಲಿ 15926.29 ಕೋಟಿಯಾಗಿದ್ದು, 2002-2003ರಲ್ಲಿ 18794.45 ಕೋಟಿಯಾಗಲಿದೆ. ರೆವನ್ಯೂ ವೆಚ್ಚಕ್ಕೆ ರೆವಿನ್ಯೂ ಆದಾಯ ಸಾಲದೆ ಪ್ರತಿವರ್ಷ ಪಬ್ಲಿಕ್-ಡೆಟ್ ಹಾಗೂ ಪಬ್ಲಿಕ್-ಅಕೌಂಟ್ ಸಾಲದ ಮೂಲಗಳಿಂದ ಹೆಚ್ಚೆಚ್ಚು ಸಾಲ ಪಡೆಯುತ್ತ ಆ ಮೊತ್ತದಲ್ಲಿಯೇ ಅಲ್ಪಸ್ವಲ್ಪ ಮೊತ್ತವನ್ನು ರೆವಿನ್ಯೂ ವೆಚ್ಚದ ಮೂಲಗಳಿಗೆ ರೆವಿನ್ಯೂ ಹಾಗೂ ಬಂಡವಾಳ ಲೆಕ್ಕದಲ್ಲಿ ವೆಚ್ಚ ಮಾಡಿ ಭಾರಿ ಮೊತ್ತದ ಸಾಲದ ಮೂಲಗಳಿಗೆ ಬಟವಾಡೆ ಮಾಡದೆ ಪ್ರತಿವರ್ಷ ರಾಜ್ಯ ಸರ್ಕಾರದ ಮೂಲಗಳ ಸಾಲ ಹೆಚ್ಚುತ್ತಲೇ ಇದೆ. ರಾಜ್ಯ ಸರಕಾರದ ಸಾಲ ವ ಲಾಯಬಿಲಿಟಿ 2000-01ರಲ್ಲಿ 27076.91 ಕೋಟಿ, 2001-2002ರಲ್ಲಿ 32100.46 ಕೋಟಿ ಇದ್ದುದು 2002-2003ಕ್ಕೆ 37874.27 ಕೋಟಿಗೆ ಏರಲಿದೆ. ರಾಜ್ಯದ ಒಟ್ಟು ಸಾಲ 38200 ಕೋಟಿಯೆಂದು ಮುಖ್ಯಮಂತ್ರಿಗಳೇ 28-3-2002ರಂದು ವಿಧಾನಸಭೆಯಲ್ಲಿ ಹೇಳಿದ್ದಾರೆ.

ಸರಕಾರದ ಬಡ್ಡಿ 2000-2001ರಲ್ಲಿ 2387.55 ಕೋಟಿ, 2001-2002ರಲ್ಲಿ 2838.49 ಕೋಟಿಯಾಗಿದ್ದು 2002-2003ರಲ್ಲಿ 3291.20 ಕೋಟಿಯಾಗಲಿದೆ. ಆಶಾದಾಯಕ ಭಾರಿ ಭಾರಿ ಭಾಷಣ ಮಾಡಿ ಜನತೆಯಲ್ಲಿ ಆಶೆ-ಆಕಾಂಕ್ಷೆ ಚಿಗುರಿಸಿ, ರೆವಿನ್ಯೂ ಸೇವೆ ಅಭಿವೃದ್ಧಿ

ಕಾರ್ಯಕ್ರಮಗಳಿಗೆ 2000-2001ರ ಬಜೆಟ್‌ನಲ್ಲಿ 17154.94 ಕೋಟಿ ವೆಚ್ಚ ಮಾಡುವುದಾಗಿ ಹೇಳಿ, ಹೇಳಿದಂತೆ ನಡೆಯದೆ ಪರಿಷ್ಕೃತ ಬಜೆಟ್‌ನಲ್ಲಿ 17086.86 ಕೋಟಿಗೆ ಇಳಿಸಿ ವಾಸ್ತವಿಕವಾಗಿ 16684.95 ಕೋಟಿ ಮಾತ್ರ ವೆಚ್ಚ ಮಾಡಿರುವುದೇಕೆ? ಈ ವೆಚ್ಚದ ಮೊತ್ತದಲ್ಲಿ ಪ್ರತಿವರ್ಷ ವೇತನ ಭತ್ಯೆ, ಇತರ ಭತ್ಯೆ ಹಾಗೂ ಆಡಳಿತ ವೆಚ್ಚಕ್ಕೆ ಹೆಚ್ಚೆಚ್ಚು ಮೊತ್ತ ವೆಚ್ಚವಾಗುತ್ತಿರುವುದಿಲ್ಲವೇ? 2001-2002ರಲ್ಲಿ 19952.19 ಕೋಟಿ ವೆಚ್ಚ ಮಾಡುವದಾಗಿ ಹೇಳಿ ಪರಿಷ್ಕೃತ ಬಜೆಟ್‌ನಲ್ಲಿ 18932.46ಕ್ಕೆ ಇಳಿಸಿ ಮತ್ತು 2002-2003 ಬಜೆಟ್‌ನಲ್ಲಿ 21403.64 ಕೋಟಿ ಮೊತ್ತವನ್ನು ರೆವಿನ್ಯೂ ಸೇವೆಗಳಿಗೆ ವೆಚ್ಚ ಮಾಡುತ್ತೇವೆಂದು ಹೇಳಿರುವುದನ್ನು ಅದ್ಹೇಗೆ ನಂಬಬೇಕು? ಗ್ರಾಮಾಂತರ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಇತರ ಹಿಂದುಳಿದ ವರ್ಗ, ಪಶುಸಂಗೋಪನೆ, ಭೂಸಾರ ಜಲಸಂರಕ್ಷಣಾ, ಹೈನಾಭಿವೃದ್ಧಿ, ಮೀನುಗಾರಿಕೆ, ಅರಣ್ಯ ಮತ್ತು ವನ್ಯಜೀವನ, ಆಹಾರ ದಾಸ್ತಾನು, ಉಗ್ರಾಣ, ಕೃಷಿ, ಸಂಶೋಧನ ಮತ್ತು ಶಿಕ್ಷಣ, ಸಹಕಾರ, ಗ್ರಾಮೀಣ ಅಭಿವೃದ್ಧಿ, ವಿಶೇಷ ಕಾರ್ಯಕ್ರಮ, ಗ್ರಾಮೀಣ ಉದ್ಯೋಗ, ಭೂಸುಧಾರಣೆ, ಇತರ ಗ್ರಾಮೀಣ ಅಭಿವೃದ್ಧಿ ಇತ್ಯಾದಿ ಕಲ್ಯಾಣ ಕಾರ್ಯಕ್ರಮಗಳ ಬಗ್ಗೆ ಸರಕಾರದ ತಾತ್ಸಾರ ಸರಿಯಲ್ಲ. ಅನೇಕ ಯೋಜನೆಗಳಿಗೆ ಬಜೆಟ್ ಮೀರಿ ವೆಚ್ಚ ಮಾಡುತ್ತಿದ್ದರೂ ಈ ಗ್ರಾಮೀಣ ಜನತೆಗೆ ದ್ರೋಹ ಬಗೆದು ನುಡಿದಂತೆ ನಡೆಯದಿರುವುದು ಸಾಧುವಲ್ಲ. ಈ ಕಾರ್ಯಕ್ರಮಗಳಿಗೆ 2000-2001ರಲ್ಲಿ 2464.80 ಕೋಟಿ ಬಜೆಟ್ ತೋರಿಸಿ ಪರಿಷ್ಕೃತ ಬಜೆಟ್‌ನಲ್ಲಿ 1408.42 ಕೋಟಿ ತೋರಿಸಿ ವಾಸ್ತವಿಕವಾಗಿ 2100.30 ಕೋಟಿ ಮಾತ್ರ ವೆಚ್ಚ ಮಾಡಿದ್ದೇಕೆ? 2001-2002ರಲ್ಲಿ 2440.50 ಕೋಟಿ ತೋರಿಸಿ ಪರಿಷ್ಕೃತ ಬಜೆಟ್‌ನಲ್ಲಿ 2089.97 ಕೋಟಿ ವೆಚ್ಚವೇಕೆ? 2002-2003ರಲ್ಲಿ 2432.61 ಕೋಟಿ ಮೊತ್ತಕ್ಕೆ ಇಳಿಸಿರುವುದು ಇದೆಲ್ಲಿಯ ನ್ಯಾಯಾಭಿವೃದ್ಧಿ?

ಪ್ರತಿ ವರ್ಷ ಜನರಿಂದ ಹೆಚ್ಚೆಚ್ಚು ಕರಕಂದಾಯ ವಸೂಲಿ ಮಾಡಿ ಜನರಿಗೆ ಕಡಿಮೆ ವೆಚ್ಚ ಮಾಡಿ ಜನತೆಯನ್ನು ವಂಚಿಸುವುದೇಕೆ? ಎಂದಿನ ವೈಫಲ್ಯದಂತೆ 2000-2001ರಲ್ಲಿ 3573.62 ಕೋಟಿ ಮೊತ್ತವನ್ನು ವೆಚ್ಚ ಮಾಡದೆ ಉಳಿಸಿ 114.46 ಕೋಟಿ ಮೊತ್ತವನ್ನು ಬಜೆಟ್ ಮೀರಿ ಕೆಲವು ಶೀರ್ಷಿಕೆಗಳಲ್ಲಿ ಹೆಚ್ಚು ವೆಚ್ಚ ಮಾಡಲಾಗಿದೆ, ಇದು ಸಿ.ಎ.ಜಿ. ವರದಿ.

ರೈತ, ಉದ್ಯಮಿ ಇತ್ಯಾದಿ ಗ್ರಾಹಕರಿಗೆ ಸಮರ್ಪಕ ವಿದ್ಯುತ್ ಪೂರೈಸದೆ ಅವರನ್ನು ಸರ್ವನಾಶಕ್ಕೆ ಈಡು ಮಾಡಿ ವಿದ್ಯುತ್ ಕಳ್ಳತನ ಹೆಚ್ಚಿಸುತ್ತ ನೂರಾರು ಕೋಟಿ ಬಾಕಿಯ ಅಸಂಖ್ಯಾತ ಬಾಕಿದಾರರಿಂದ ವಿದ್ಯುತ್ ಬಾಕಿ ವಸೂಲಿ ಮಾಡದೆ ಕೋಟ್ಯಾಂತರ ನಷ್ಟದಲ್ಲಿರುವ ಕೆ.ಪಿ.ಟಿ.ಸಿ.ಎಲ್.ಗೆ 2000-2001ರಲ್ಲಿ 883.38 ಕೋಟಿ, ಪರಿಷ್ಕೃತ ಬಜೆಟ್‌ದಲ್ಲಿ 886.28 ಕೋಟಿ ನಿಗದಿ ಮಾಡಿ ವಾಸ್ತವಿಕವಾಗಿ ಬಜೆಟ್ ಮೀರಿ 920.20

ಕೋಟಿ ಕೊಟ್ಟಿದ್ದೇಕೆ? 2001-2002ರಲ್ಲಿ ಬಜೆಟ್‌ನಲ್ಲಿ ಭಾರೀ ಮೊತ್ತ 2341.32 ಕೋಟಿ ತೋರಿಸಿ ಪರಿಷ್ಕೃತ ಬಜೆಟ್‌ನಲ್ಲಿ ಸಹ ಅಷ್ಟೇ ಮೊತ್ತ ತೋರಿಸಿ, 2002-2003ರಲ್ಲಿ 2458.56 ಕೋಟಿ ಮೊತ್ತವನ್ನು ಬಜೆಟ್‌ನಲ್ಲಿ ತೋರಿಸಿದ್ದು ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿಗೇಕೆ ಹೆಚ್ಚಿಲ್ಲ? ರೈತರನ್ನೊಳಗೊಂಡ ರಾಜ್ಯದ ಪ್ರಜೆಗಳಿಗೆ ಉಪಯುಕ್ತವಾಗಿರುವ ಸಾಮಾನ್ಯ, ಸಾಮಾಜಿಕ, ಆರ್ಥಿಕ ಸೇವೆಗಳಿಗೆ ಬಂಡವಾಳ ವೆಚ್ಚ 2001-2002ರಲ್ಲಿ ಬಜೆಟ್‌ನಲ್ಲಿ ಕೇವಲ 2179.05 ಕೋಟಿ ವೆಚ್ಚ ಮಾಡುವುದಾಗಿ ಹೇಳಿದ್ದರೂ ಪರಿಷ್ಕೃತ ಬಜೆಟ್ ಪ್ರಕಾರ 1776.20 ಕೋಟಿ ವೆಚ್ಚ ಮಾಡಲು ನಿರ್ಧರಿಸಿದ್ದು, 2002-2003ರಲ್ಲಿ 3029,01 ಕೋಟಿ ವೆಚ್ಚ ಮಾಡುವುದಾಗಿ ಹೇಳಿದ್ದು, ಇದು ನಂಬಲು ಸಾಧ್ಯವಾಗಿದೆ. 2001-2002ರಲ್ಲಿ ರೆವಿನ್ಯೂ ವೆಚ್ಚದಲ್ಲಿ 1019.73 ಕೋಟಿ ಮೊತ್ತವನ್ನು ವೆಚ್ಚ ಮಾಡದೆ ಅಭಿವೃದ್ಧಿ ಕುಂಠಿತವಾಗಿದೆ. ರೈತ ಹಾಗೂ ಉದ್ಯಮಿಗಳನೇಕರು ಈಗಾಗಲೇ ದಿವಾಳಿಯಾಗಿ ಆತ್ಮಹತ್ಯೆಯ ದಾರಿ ಹಿಡಿದಿದ್ದು ಸರಕಾರ ಕೂಡ ದಿವಾಳಿಯ ದಾರಿ ಹಿಡಿಯಬೇಕೆ? ರಾಜ್ಯ ಸರ್ಕಾರವು ಪಂಚಾಯತ್ ರಾಜ್ ಸಂಸ್ಥೆ, ವಿದ್ಯಾಸಂಸ್ಥೆ ಹಾಗೂ ವಿಶ್ವವಿದ್ಯಾಲಯ, ಸಹಕಾರ ಸಂಘಗಳು ಹಾಗೂ ಇತರ ಸಂಸ್ಥೆಗಳಿಗೆ 99-2000ದಲ್ಲಿ 5846.59 ಕೋಟಿ, 2000-2001ರಲ್ಲಿ 6451.09 ಕೋಟಿ ಸಹಾಯಧನ ಕೊಟ್ಟಿದ್ದು, ಪ್ರತಿವರ್ಷ ಈ ಮೊತ್ತ ಹೆಚ್ಚುತ್ತಲೇ ಇದ್ದು ಈ ಹಣ ಎಷ್ಟರ ಮಟ್ಟಿಗೆ ಉಪಯೋಗ ದುರುಪಯೋಗಾಗುತ್ತಿದೆ ಎಂಬುದು ದಿನಪತ್ರಿಕೆ, ವಾರಪತ್ರಿಕೆಗಳ ಮುಖಾಂತರ ಗೊತ್ತಾಗುತ್ತಲೇ ಇದೆ. ಸರಕಾರ ನುಡಿದಂತೆ ನಡೆಯಬೇಕು, ಮಾಡಬೇಕು. ಮಾಡುವುದನ್ನಷ್ಟೇ ಹೇಳದೆ, ಮಾಡಿದ್ದನ್ನು ಸಹ ಸಾಫಲ್ಯ, ವೈಫಲ್ಯಗಳೊಂದಿಗೆ ದಿಟ್ಟತನದಿಂದ ಹೇಳುವುದು ಸಾರ್ವಜನಿಕ ದೃಷ್ಟಿಯಿಂದ ಒಳ್ಳೆಯದು. ದಿನವಹಿ ಪತ್ರಿಕೆಗಳಲ್ಲಿ ಮೂಡಿಬರುತ್ತಿರುವ ಸಮಾಜಘಾತುಕ ರೋಗಗಳ ನಿವಾರಣೆಗಾಗಿ ಹಾಗೂ ಸಮಾಜಘಾತುಕ ಸಾರ್ವಜನಿಕ-ನೌಕರರ ದಮನಕ್ಕಾಗಿ ಆಯಾ ಇಲಾಖೆಗಳ ಮಂತ್ರಿಗಳು ಹಾಗೂ ಮುಖ್ಯಮಂತ್ರಿಗಳು ಶ್ರಮಿಸಿದರೆ ಒಳ್ಳೆಯದು. ಇಲ್ಲದೆ ಹೋದರೆ ಪ್ರಜಾತಂತ್ರ ವ್ಯವಸ್ಥೆಗೆ ಅಪಾಯ. ಈ ವರ್ಷದ ಬಜೆಟ್ ಬೇವಿನ ಹಣ್ಣಿಗೆ ಬೆಲ್ಲದ ಲೇಪನವಾದೀತು. ಸರ್ವೇಜನ ವಿರೋಧಿ ಬಜೆಟ್ ಆದೀತು. ಮಂತ್ರಕ್ಕಿಂತ ಉಗುಳೇ ಹೆಚ್ಚು ಆದಂತಾದೀತು. ಈ ಎಲ್ಲ ದಿಶೆಯಲ್ಲಿ ಮುಖ್ಯಮಂತ್ರಿ ಎಲ್ಲಾ ಇಲಾಖೆಗಳ ಮಂತ್ರಿ ಹಾಗೂ ಅಧಿಕಾರಿಗಳನ್ನು ಹದ್ದುಬಸ್ತಿನಲ್ಲಿಟ್ಟು ಅವರವರ ಕಾರ್ಯ ಯಶಸ್ವಿಗೊಳಿಸುವಂತೆ ಮಾಡಿದರೆ ಅವರಿಗೆ ಮೆರುಗು. ಒಟ್ಟಿನ ಮೇಲೆ 2002-2003ರಲ್ಲಿ ಬಜೆಟ್ ಮೇಲ್ನೋಟಕ್ಕೆ ಅತ್ತೀಹಣ್ಣಿನಂತೆ ಚಂದ ಕಂಡರೂ ಒಳಗೆ ಕೀಟಕಗಳೂ ಕಂಡುಬರುತ್ತಿವೆ. ಕೆಲವಂತೂ ಅತೀ ಬಹಳ ಸ್ವಾಗತಾರ್ಹವಾಗಿವೆ. ಆದರೆ ಅವೆಲ್ಲ ಜಾರಿ ಬರಬೇಕಲ್ಲ?

❑

ನ್ಯಾಯಾಂಗ

ನ್ಯಾಯ ಪಂಚಾಯತಿಗಳ ಪುನರುತ್ಥಾನ

1964ರ ಮೈಸೂರ ಪಂಚಾಯತ ರಾಜ್ಯ ಮಸೂದೆಯಲ್ಲಿ ನ್ಯಾಯ ಪಂಚಾಯತಿಗಳಿಗೆ ಸ್ಥಾನಮಾನ ಕೊಟ್ಟಿರುವ ವಿಷಯದ ಬಗ್ಗೆ ಅನೇಕರು ತಪ್ಪು ತಿಳುವಳಿಕೆ ಮಾಡಿಕೊಂಡು ಈ ಬಗ್ಗೆ ನ್ಯಾಯ ಪಂಚಾಯತಿಗಳು ಯೋಗ್ಯರೀತಿಯಲ್ಲಿ ನಡೆಯಬಲ್ಲವೋ ಅಥವಾ ವಿರಸಕ್ಕೆ ಆಸ್ಪದ ಕೊಡುವವೋವೆಂಬ ಬಗ್ಗೆ ಸಂಶಯುವನ್ನು ವ್ಯಕ್ತಮಾಡಿದ್ದಾರೆ.

ನ್ಯಾಯ ಪಂಚಾಯತಿಗಳ ಕಾನೂನುಬದ್ಧವಾದ ರಚನೆ ಯಾವುದೇ ರೀತಿಯಿಂದ ಅವ್ಯವಹಾರಿಕ ಹಾಗೂ ಪ್ರತಿಕೂಲವಾಗದೆ ಗ್ರಾಮಾಂತರ ಜೀವನಕ್ಕೆ ಶಾಂತಿ ಸುವ್ಯವಸ್ಥೆಯನ್ನೊದಗಿಸಿ ದುಷ್ಟರನ್ನು ಶಿಕ್ಷಿಸಿ, ಶಿಷ್ಟರನ್ನು ರಕ್ಷಿಸುವ ನ್ಯಾಯಾಲಯ ದೇವಾಲಯಗಳಾಗುವವೆಂಬ ಅಭಿಪ್ರಾಯವನ್ನು ಮೈಸೂರು ಪಂಚಾಯತಿ ರಾಜ್ಯ ಪರಿಷತ್ತು ಒಮ್ಮತ್ರದ ಅಭಿಪ್ರಾಯ ನೀಡಿದೆ. ಅಲ್ಲದೆ ಅಖಿಲ ಭಾರತ ಪಂಚಾಯತ ಪರಿಷತ್ತು ಕೂಡಿ ಈ ಮಾತಿಗೆ ಪುಷ್ಟಿಕೊಟ್ಟಿದೆ.

ಈ ಪರಿಷತ್ತುಗಳಲ್ಲಿ ಹಳ್ಳಿಯಿಂದ ದಿಲ್ಲಿಯವರೆಗೆ ಅನೇಕ ಹಂತಗಳ ಕಾರ್ಯಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವ ಅರಿತವರೂ, ನುರಿತವರೂ, ವಿದ್ಯಾವಂತರೂ, ವಯೋವೃದ್ಧರೂ, ತರುಣರೂ, ಬುದ್ಧಿವಂತರೂ, ಅನುಭವಿಗಳೂ ಮತ್ತು ಮಂತ್ರಿಗಳು ಆದವರೇ ಹೊಣೆಗಾರರಾಗಿರುವುದರಿಂದ ಈ ನ್ಯಾಯ ಪಂಚಾಯತಿಯ ರಚನೆಯ ಬಗ್ಗೆ ಯಾವುದೇ ವಿವಾದಾಸ್ಪದವಿಲ್ಲದೆ ವಿಧಾನ ಸಭೆ ಹಾಗೂ ವಿಧಾನ ಪರಿಷತ್ತಿನ ಸದಸ್ಯರು ಒಪ್ಪಿಕೊಳ್ಳಲೇಬೇಕು. ಅಂತೆಯೇ ಗ್ರಾಮ, ತಾಲೂಕು ಹಾಗೂ ಜಿಲ್ಲಾಮಟ್ಟದ ಪಂಚಾಯತ್ ಸಂಸ್ಥೆಗಳ ರಚನೆಯ ಬಗ್ಗೆಯೂ ಅವರು ಒಪ್ಪಬೇಕು. ಇಲ್ಲವಾದರೆ ತಮ್ಮ ತಮ್ಮ ಮತದಾರ ಸಂಘಕ್ಕೆ ಅನ್ಯಾಯ ಮಾಡಿದಂತಾದೀತು.

ಗ್ರಾಮಾಂತರ ಪ್ರದೇಶದಲ್ಲಿಯ ಪಂಚಾಯತಿಗಳಲ್ಲಿ ನ್ಯಾಯ ಪಂಚಾಯತಿಗಳನ್ನು ರಚಿಸಿದರೆ ಅವುಗಳಿಂದ ಯೋಗ್ಯವಾದ ನ್ಯಾಯದಾನ ಸಿಗಲಾರದೆಂಬುದು ಯಾರೂ ಒಪ್ಪದ ಮಾತು. ಈಗಿನ ಕಾನೂನುಬದ್ಧವಾದ ನ್ಯಾಯಾಲಯಗಳಲ್ಲಿ ಫೌಜದಾರಿ ಹಾಗೂ

ದಿವಾಣಿ ವ್ಯಾಜ್ಯಗಳು ನಡೆದು ಅಂತಿಮ ಘಟ್ಟವನ್ನು ಮುಟ್ಟುತ್ತಿರುವಾಗ ಸಹಿತ ಅಂತಹ ಅನೇಕ ವ್ಯಾಜ್ಯಗಳನ್ನು ಗ್ರಾಮಗಳಲ್ಲಿ ಎರಡೂ ಬಣದವರನ್ನು ಕರೆಯಿಸಿ ಸಾರಾಸಾರ ವಿಚಾರಿಸಿ ಸೂಕ್ತ ನ್ಯಾಯಾದಾನ ಮಾಡಿ ರಾಜಿ ಮಾಡುವ ಸಂಪ್ರದಾಯವನ್ನೂ ಗ್ರಾಮಗಳಲ್ಲಿ ಈಗಲೂ ಅವ್ಯಾಹತವಾಗಿ ನಡೆದುಬಂದುದಾಗಿದೆ.

ನ್ಯಾಯ ಪಂಚಾಯತಿಯ ರಚನೆ ಮೈಸೂರ ಪಂಚಾಯತ ರಾಜ್ಯ ಕಾನೂನದಲ್ಲಿಯೇ ಹೊಸದಾಗಿ ಸೇರ್ಪಡೆಯಾದದ್ದಲ್ಲ, ಭಾರತದ ಅನೇಕ ರಾಜ್ಯಗಳಲ್ಲಿ ಪಂಚಾಯತ ಕಾನೂನು ಜಾರಿಯಲ್ಲಿ ಬಂದಾಗಿನಿಂದಲೇ ಸ್ಥಾನ ಪಡೆದುದಾಗಿದೆ. ಅನೇಕ ರಾಜ್ಯಗಳಲ್ಲಿ ಗ್ರಾಮ ಕೋರ್ಟಗಳನ್ನು ಶಾಸನದನ್ವಯ ರಚಿಸಿ ಗ್ರಾಮವಾಸಿಗಳನ್ನೇ ನ್ಯಾಯಾಧೀಶರನ್ನಾಗಿ ನಿಯಮಿಸಿ ನ್ಯಾಯಾಲಯದ ಅಧಿಕಾರವನ್ನು ನಡೆಯಿಸುವ ಹಕ್ಕನ್ನು ದಯಪಾಲಿಸುತ್ತಾ ಬಂದುದಾಗಿದೆ.

ಇತ್ತೀಚೆಗೆ ಕಾನೂನು ಪ್ರಕಾರ ಈ ಪಂಚಾಯತಿ ಕೋರ್ಟುಗಳನ್ನು ರಚಿಸಿದ್ದರೂ ಸಹಿತ ಈ ಕೋರ್ಟುಗಳು, ಜಗತ್ತು ಹುಟ್ಟಿದಾಗಿನಿಂದಲೂ ಗ್ರಾಮಾಂತರ ಪ್ರದೇಶದಲ್ಲಿ ತಂಟೆಗಳು ಉದ್ಭವಿಸಿದಾಗ ಆ ತಂಟೆಗಳನ್ನು ಬಗೆಹರಿಸಿ ಯೋಗ್ಯ ನ್ಯಾಯದಾನ ಮಾಡಿ ಗ್ರಾಮಾಂತರ ಪ್ರದೇಶದಲ್ಲಿ ಜನಸಾಮಾನ್ಯರಲ್ಲಿ ಶಾಂತಿಸೌಹಾರ್ದತೆಗಳನ್ನು ಒಡಮೂಡಿಸಿ ಪ್ರಶಾಂತ ವಾತಾವರಣವನ್ನುಂಟುಮಾಡುತ್ತ ಬಂದ ಸತ್‌ಸಂಪ್ರದಾಯ ನ್ಯಾಯಾಲಯ - ದೇವಾಲಯಗಳಾಗಿವೆ. ಈ ಸತ್‌ಸಂಪ್ರದಾಯದ ಪಂಚರ ನ್ಯಾಯಲಯದ ಅಡಿಗಲ್ಲಿನ ಮೇಲೆಯೇ ಹೊಸ ಮಾದರಿಯ ನ್ಯಾಯ ಪಂಚಾಯತಿಗಳನ್ನು ರಚಿಸಲಾಗುತ್ತಿದೆ.

ಹಿಂದಿನ ಕಾಲದಲ್ಲಿ ಈಗಿನಂತೆ ಪೊಲೀಸ ಅಧಿಕಾರಿಗಳಿರಲಿಲ್ಲ. ಅಲ್ಲದೆ ಮುನ್ಸಿಪಲ್ ಮ್ಯಾಜಿಸ್ಟ್ರೇಟ್ ಕೋರ್ಟನಿಂದ ಸುಪ್ರೀಮ ಕೋರ್ಟನವರೆಗೂ ಯಾವ ಕೋರ್ಟುಗಳೂ ಇರಲಿಲ್ಲ. ಕಚೇರಿಗಳೂ ಇರಲಿಲ್ಲ. ಆಗಿದ್ದುದು ಪ್ರತಿ ಗ್ರಾಮದಲ್ಲಿಯ ದೇವಾಲಯ ಮಾತ್ರ. ಈ ದೇವಾಲಯವೇ ಆಗಿನ ನ್ಯಾಯಾಲಯ. ಈ ದೇವಾಲಯದಲ್ಲಿ ವಿಚಾರಿಸಿ ನ್ಯಾಯದಾನ ಮಾಡುತ್ತಿದ್ದವರು ಈಗಿನಂತೆ ಮುನ್ಸಿಫ್ ಮ್ಯಾಜಿಸ್ಟ್ರೇಟರಾದ ಪದವೀಧರರಲ್ಲ. ಅವಿದ್ಯಾವಂತ ಅನುಭವಿಗಳಾದ ಬಣಕಾರ, ಮಠಸ್ಥ, ಗೌಡ, ಶೆಟ್ಟಿ ಮೇಟಿಗಳೆಂಬ ಐದು ಜನ ಸಮಾಜದ ಹಿರಿಯರು - ಬುದ್ಧಿವಂತರು, ದೈವದವರು, ಇವರಿಗೆ ಬೇರೆ ಬೇರೆ ಹೆಸರಿನಿಂದ ಕರೆಯುವದೂ ಉಂಟು. ಅನೇಕ ತರಹದ ಜಾತಿಯ ಬಣಗಳಿಂದ ಕೂಡಿದ ಅಂದಿನ ಗ್ರಾಮಗಳ ಒಡೆತನವುಳ್ಳವನಾದ ಬಣಕಾರ ಅಥವಾ ಒಡಿಯರನು ಗ್ರಾಮದ ಹಿರಿಯನು. ಅವನಿಗೆ ಸಹಾಯಕರಾಗಿ ಹಾಗೂ ಸಲಹೆಗಾರರಾಗಿದ್ದ ಇತರ ಬುದ್ಧಿವಂತರು ಇವರೆಲ್ಲರಿಗೂ ಗ್ರಾಮದ ತಂದೆ ತಾಯಿಗಳೆಂದು ಆಗಿನ ಗ್ರಾಮಾಂತರ ಜನತೆ ತಿಳಿದುಕೊಂಡಿತ್ತು.

ಈ ತರಹದ ಭಾವನೆ ಇನ್ನೂ ಅನೇಕ ಗ್ರಾಮಗಳಲ್ಲಿ ನಡೆದು ಬಂದ ಸಾಂಪ್ರದಾಯ ವಿನ್ನೂ ಇದೆ. ಈ ಹೆಸರಿನಲ್ಲಿ ಹಿರಿಯರು ಇಂದಿಗೂ ಸಹ ಅನೇಕ ಗ್ರಾಮಗಳಲ್ಲಿ ಪುರಾತನ ಕಾಲದಿಂದ ನಡೆದು ಬಂದ ನ್ಯಾಯದಾನ ಪದ್ಧತಿಯನ್ನು ಅವ್ಯಾಹತವಾಗಿ ಮುಂದುವರಿಸಿಕೊಂಡು ಬಂದಿದ್ದಾರೆ. ಇವರಿಗೆ ಅಧೀನನಾಗಿ ಸುದ್ದಿ ಸಮಾಚಾರ ಮೊದಲಾದ ವಿಷಯ ಸಾಮಗ್ರಿಯುಳ್ಳ ಭಂಡಾರಿ ಅಥವಾ ಓಲೆಕಾರ ಇದ್ದುದು ಕೂಡ ಸಂಪ್ರದಾಯವಾಗಿದೆ. ಯಾವುದೇ ವ್ಯಕ್ತಿಗೆ ಅನಾಹುತ ಅನ್ಯಾಯ ಒದಗಿದಾಗ ಆ ಬಗ್ಗೆ ಗ್ರಾಮದ ಹಿರಿಯ ಬಣಕಾರನಿಗೆ ದೂರನ್ನು ಕೊಟ್ಟಾಗ ಅವನು ಭಂಡಾರಿಯ ಸಹಾಯದಿಂದ ಇನ್ನುಳಿದ ಪಂಚರನ್ನು ದೇವಾಲಯಕ್ಕೆ ಕರೆಯಿಸಿಕೊಂಡು ಅವರ ಸಮ್ಮುಖದಲ್ಲಿ ದೂರು ಕೊಟ್ಟವನನ್ನು ಹಾಗು ಅರೋಪಕ್ಕೆ ಒಳಗಾದವರೆಲ್ಲರನ್ನೂ ಕರೆಯಿಸಿ ದೇವಾಲಯದಲ್ಲಿಯ ನಗಾರಿಯನ್ನು ಬಾರಿಸಿ ಗ್ರಾಮದ ಇತರ ಪ್ರಮುಖರಾದ ಪ್ರತಿಮನೆಯ ಯಜಮಾನರನ್ನು ಬರಮಾಡಿಕೊಂಡು ಅವರೆಲ್ಲರ ಸಮಕ್ಷಮ ನ್ಯಾಯ ವಿಚಾರಣೆ ಮಾಡಿ ನ್ಯಾಯದಾನ ಮಾಡುತ್ತಿದ್ದರು.

ಇಂತಹ ವಿಚಾರಣೆಯಲ್ಲಿ ಆರೋಪ ಪ್ರತ್ಯಾರೋಪ ಮಾಡುವ ಪ್ರತಿಯೊಬ್ಬರನ್ನೂ ಅಲ್ಲಿಯ ದೇವರಸಾಕ್ಷಿಯಾಗಿ, ಅಲ್ಲಿಯ ದೈವ ಜ್ಯೋತಿಯ ಸಾಕ್ಷಿಯಾಗಿ ಆಣೆ ಮಾಡಿ ದೇವರ ಘಂಟೆಯನ್ನು ಬಾರಿಸಿ ಸತ್ಯವನ್ನು ಮರೆಮಾಚದೆ ನುಡಿಯಿಸುತ್ತಿದ್ದರು. ದೇವಸ್ಥಾನಕ್ಕೆ ಬರುವ ಪ್ರತಿಯೊಬ್ಬರೂ ಸ್ನಾನ ಮಾಡಿ ಮಡಿಉಡಿಯಿಂದ ಬರುತ್ತಿದ್ದರು. ದೇವಾಲಯ ದಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಬಾಯಿಯಿಂದ ಹೊರಬರುತ್ತಿದ್ದ ಶಬ್ದ ಸತ್ಯದ ಹೊನಲೇ ಹೊರತು ಸುಳ್ಳಿನ ಕಂತೆಯಲ್ಲ. ತಪ್ಪು ಮಾಡಿದ ಅನೇಕರು ತಮ್ಮ ತಮ್ಮ ತಪ್ಪುಗಳನ್ನು ಸ್ವಯಂಸ್ಫೂರ್ತಿಯಿಂದ ಒಪ್ಪಿಕೊಂಡು ಆ ತಪ್ಪನ್ನು ಕ್ಷಮಿಸಲು ದೇವಾಲಯದಲ್ಲಿ ದೀರ್ಘ ದಂಡ ನಮಸ್ಕಾರ ಹಾಕುವ ಪರಂಪರೆಯೂ ಇತ್ತು - ಕೆಲವೊಂದು ಅಪರಾಧಗಳನ್ನು ಹಿರಿಯರು ಕ್ಷಮಿಸಿ ಅಂತಹ ತಪ್ಪುಗಳನ್ನು ಮುಂದೆ ಮಾಡದಂತೆ ಇರಲು ದೇವರ ಆಣೆಯಾಗಿ ಗಂಟೆ ಹೊಡೆದು ದೈವಕ್ಕೆ ನಮಸ್ಕರಿಸಲು ತಪ್ಪಿತಸ್ಥನಿಗೆ ತಿಳಿಸುವ ರೂಢಿಯೂ ಇತ್ತು. ಅಲ್ಲದೆ ಕೆಲವೊಂದು ವಿಶಿಷ್ಟವಾದ ಅಪರಾಧ ಮಾಡಿದ. ತಪ್ಪಿತಸ್ಥರಿಗೆ ದೇವಾಲಯದ ಮುಂದೆ ಕುಡಿಯುವ ನೀರಿನ ಹೊಂಡದ ದಾರಿಯ ಮೇಲೆ ಜನರಿಗೆ ಕಾಣುವಂತೆ ಒಂಟಿಗಾಲಿನಿಂದಾಗಲೀ ಅಥವಾ ತಲೆಯ ಮೇಲೆ ಕಲ್ಲನ್ನು ಹೊತ್ತು ಕೊಂಡಾಗಲೀ ದಿನವಿಡೀ ನಿಲ್ಲುವಂತೆ ಆಜ್ಞಾಪಿಸುತ್ತಿದ್ದರು. ಆ ಪ್ರಕಾರ ಆ ಆಜ್ಞೆಗೆ ತಲೆಬಾಗಿ ತಪ್ಪಿತಸ್ಥ ಆ ಶಿಕ್ಷೆ ಅನುಭವಿಸುತ್ತಿದ್ದ. ಅಂತವನಿಗಾದ ಈ ಪ್ರಾಯಶ್ಚಿತ್ತವನ್ನು ಕಂಣಾರೆ ಕಂಡ ಗ್ರಾಮವಾಸಿಗಳೆಲ್ಲರೂ ಅದನ್ನು ಜ್ಞಾಪಿಸಿಕೊಂಡು, “ಅಂತಹ ತಪ್ಪನ್ನು ನಾವು ಮಾಡಬಾರದು, ನಾವು ಮಾಡಿದರೆ ನಮಗೂ ಆ ಬುತ್ತಿ ಕಟ್ಟಿಟ್ಟದ್ದೇ” ಎಂದು ತಿಳಿದುಕೊಂಡು ಯೋಗ್ಯ ರೀತಿಯಲ್ಲಿ ವರ್ತಿಸುತ್ತಿದ್ದರು.

ಅನೈತಿಕ ಅಪರಾಧ ಮಾಡಿದ ಹೆಣ್ಣು ಗಂಡುಗಳನ್ನು ಕೆಲಕಾಲ ಜಾತಿಯಿಂದ ಹೊರಗೆ ಇಟ್ಟು ಅವರ ಕೂಡ ಯಾರೂ ಯಾವ ಬಳಕೆಯನ್ನು ಮಾಡದೆ ಇರುವ ಹಾಗೆ ಗ್ರಾಮದಲ್ಲಿ ಓಲೆಕಾರನ ಮುಖಾಂತರ ಡಂಗುರ ಬಾರಿಸಿ ಬಹಿಷ್ಕಾರ ಹಾಕುತ್ತ ಬಂದುದೂ ಉಂಟು. ಅಣ್ಣ ತಮ್ಮ ಹಾಗೂ ತಂದೆ ಮಕ್ಕಳಲ್ಲಿ ತಂಟೆ ಬಂದಾಗ ಅವುಗಳನ್ನು ಸರಿಪಡಿಸಿ ಪ್ರೇಮದಿಂದ ಪರಸ್ಪರ ಸಹಕಾರದಿಂದ ಹೋಗಲು ಉಪದೇಶ ಕೊಡುತ್ತಿದ್ದುದ್ದೂ ಉಂಟು. ಅಲ್ಲದೆ ತಪ್ಪಿತಸ್ಥರಿಗೆ ಅನೇಕ ಸಾರೆ ಧನ, ಧಾನ್ಯ, ದೂಪ (ಎಣ್ಣೆ)ದ ರೂಪದಲ್ಲಿ ದಂಡ ಹಾಕಿ ಅಂತಹ ಧನ - ಧಾನ್ಯಗಳನ್ನು ಸಾರ್ವಜನಿಕ ಹಾಗೂ ದೇವಸ್ಥಾನದ ರಚನೆ ಹಾಗೂ ಪಾಲನೆಗಳಿಗೆ ಉಪಯೋಗಿಸುತ್ತ ಬಂದುದೂ ಉಂಟು. ಅಲ್ಲದೆ ಎಣ್ಣೆಯನ್ನು ದೇವಸ್ಥಾನದ ನಂದಾದೀವಿಗೆಗೆ ಉಪಯೋಗಿಸುತ್ತ ಬಂದುದೂ ಉಂಟು.

ತಪ್ಪಿದಸ್ಥರೂ ಯಾವುದೇ ರೀತಿಯಿಂದಲೂ ನುಸುಳಿ ಹೋಗುವ ಯಾವುದೇ ಪ್ರಸಂಗವಿರಲಿಲ್ಲ. ಸಮಾಜದ ಕಟ್ಟುನಿಟ್ಟಿನ ನಿರ್ಣಯಕ್ಕೆ ತಲೆಬಾಗದೆ ಹೋಗುವ ತಪ್ಪಿತಸ್ಥನಿಗೆ ಈಗಿನಂತೆ ಜೈಲುಗಳಿರಲಿಲ್ಲ. ಅವರಿಗೆ ಇದ್ದ ಆಗಿನ ಅಸ್ತ್ರ "ಬಹಿಷ್ಕಾರ" ವೆಂಬ ಬ್ರಹ್ಮಾಸ್ತ್ರ ಒಂದೇ. ಒಂದು ಅಂತಹ ಬಹಿಷ್ಕೃತ ವ್ಯಕ್ತಿ ಸಮಾಜದ ನಿರ್ಣಯಕ್ಕೆ ಒಳಗಾಗದೇ ಇರುವವರಿಗೆ ಅವನ ಕೂಡ ಗ್ರಾಮದಲ್ಲಿಯ ಇತರರಾದರೂ ಬಳಕೆ ಮಾಡುವಂತಿಲ್ಲ; ಮದುವೆ, ಮುಂಜಿ ಮೊದಲಾದ ಸಂತೋಷ ಕಾರ್ಯಗಳಲ್ಲಾಗಲಿ ಅಥವಾ ಮನೆಯಲ್ಲಿ ಯಾವುದೇ ಶವದ ಅಂತ್ಯಕ್ರಿಯೆಗಾಗಲೀ ಯಾರೂ ಹೋಗುವ ಹಾಗೆಯೇ ಇರಲಿಲ್ಲ.

ಅನೇಕ ಸಾರೆ ಕುಡಿಯುವ ನೀರಿನ ಹೊಂಡದಿಂದ ನೀರನ್ನು ಒಯ್ಯಲು ಸಹ ಅವನಿಗೆ ಮನ್ನಾಯವಿತ್ತು. ಅಂದ ಮೇಲೆ ಸಮಾಜದ ಇಂತಹ ಬ್ರಹ್ಮಾಸ್ತ್ರಕ್ಕೆ ಯಾವ ಅಪರಾಧಿ ತಲೆಬಾಗಿ ನಡೆಯಲಿಕ್ಕಿಲ್ಲ. ಅಂತೆಯೆ ಚಿಕ್ಕ ಅಪರಾಧವೇ ಇರಲಿ, ಮಹಾ ಅಪರಾಧವೇ ಇರಲಿ ಅದರಿಂದ ಪಾರಾಗುವ ಸಂಭವವೇ ಇರಲಿಲ್ಲ. ಈಗಿನ ಕಾಲದಲ್ಲಿ ಕೆಲವೊಂದು ಅಪರಾಧ ಮಾಡಿದರೂ ಸಹ ಅಂತಹ ಅಪರಾಧಿ ಪಂಚಾಯತದಿಂದ ಪಾರ್ಲಿಮೆಂಟ್ ಸದಸ್ಯನೂ ಆಗಬಹುದು. ಆದರೆ ಅಂದಿನ ಸಮಾಜದಲ್ಲಿ ಆನೆ ಕದ್ದ ಅಪರಾಧಿಯ ಮಾನವೂ ಅಷ್ಟೇ ಅಡಿಕೆ ಕದ್ದ ಅಪರಾಧಿಯ ಮಾನವೂ ಅಷ್ಟೇ ಸಮಾನವಾಗಿತ್ತು.

ಅಂತೆಯೇ ಆಗಿನ ಕಾಲದಲ್ಲಿ ಹಿರಿಯರ ಒಂದು ಕಟ್ಟುನಿಟ್ಟಿಗೆ ಅಂಜಿ ಅನೈತಿಕ ಹಾಗೂ ಇತರರ ಕ್ಷುಲ್ಲಕ ಮಹಾಪರಾಧಗಳು ಆಗುತ್ತಿದ್ದುದು ಅತಿ ವಿರಳವಾಗಿತ್ತು. ಆಗಿನ ಸಮಾಜದ ಹಿರಿಯರಾದರೂ ಲಂಚ ತಿಂದು ಪಂಚಾಯತಿ ಅವರಲ್ಲಿ ಹೇಳುತ್ತಿರಲಿಲ್ಲ.

ಅವರಲ್ಲಿ ಭ್ರಷ್ಟಾಚಾರ, ಅಪ್ರಾಮಾಣಿಕತೆ, ಭಿಡೆ, ಮುರವತ್ತು ಅಂಜಿಕೆ, ಪಕ್ಷಪಾತತನ ಮೊದಲಾದ ಯಾವ ಅನಿಷ್ಟಗಳೂ ಅವರಲ್ಲಿರಲಿಲ್ಲ; ಅಂತೆಯೇ ಹೇಳಿದ ವಾಕ್ಯ ವೇದವಾಕ್ಯವಾಗಿತ್ತು; ದೈವವಾಕ್ಯವಾಗಿತ್ತು.

ಈ ದೈವದವರ ಹೇಳಿಕೆಯೇ ಅಂತಿಮ ತೀರ್ಮಾನವಾಗಿತ್ತು. ಈ ಐವರ ಏತೋರ್ಪಿಗೆಯೇ ಪ್ರತಿಯೊಬ್ಬ ವ್ಯಕ್ತಿಯೂ ಮನ್ನಣೆ ಕೊಟ್ಟು ತಲೆಬಾಗಿಸಿ ನಡೆಯುತ್ತಿದ್ದ. ತೀರ್ಪನ್ನು ಮನ್ನಿಸದ ವ್ಯಕ್ತಿಗಳೇ ಇರಲಿಲ್ಲವೆಂದರೆ ತಪ್ಪಾಗದು. ಅಂತೆಯೇ ಆಗಿನ ಕಾಲದ ಗ್ರಾಮಾಂತರ ಜೀವನ ಸುಖ - ಸಂಪನ್ಮೂಲವುಳ್ಳ ಶಾಂತಿ ನೆಮ್ಮದಿಯದಾಗಿತ್ತು. ಗ್ರಾಮದಲ್ಲಿ ಯಾವುದೇ ವಿವಾಹ, ಮುಂಜಿ, ವೀಳ್ಯೆ ನಿಶ್ಚಯ ಮೊದಲಾದ ಕಾರ್ಯ - ಕಾರಣಗಳು ಅಲ್ಲದೆ ದೇವೋತ್ಸವಗಳು ಈ ದೈವದವರ ಹಿರಿತನದಲ್ಲಿಯೇ ಅಪ್ಪಣೆ ಪಡೆದು ಸಾಂಗವಾಗುತ್ತಿದ್ದವು, ಗ್ರಾಮದ ಅಭಿವೃದ್ಧಿ ಕಾರ್ಯಗಳು ಸಹ ಪಂಚರ ಆದೇಶದಂತೆ ಸಾರ್ವಜನಿಕರ ಶ್ರಮದಾನ ರೂಪದಲ್ಲಿ ಸಾಂಗವಾಗುತ್ತಿದ್ದವು. ಇವರಿಗೆ ಪರಗ್ರಾಮ ಗಳಲ್ಲಿಯೂ ಸಹ ಗ್ರಾಮದಲ್ಲಿ ಇದ್ದಂತೆ ಘನತೆ ಗೌರವವಿತ್ತು. ಹಾಗೂ ವಿಶಿಷ್ಟವಾದ ಹಕ್ಕು ಸ್ಥಾನಮಾನಗಳಿದ್ದವು.

ಈ ಐವರ ದೈವದ ನ್ಯಾಯಾಲಯಕ್ಕೆ "*Court of Equality, Justice, & Consece*" ಅಂದರೆ ತಪ್ಪಾಗಲಾರದು. ಈ ಸಂಪ್ರದಾಯವುಳ್ಳ ನ್ಯಾಯದಾನ ಪದ್ಧತಿಯೇ ಮುಂದೆ ಇತಿಹಾಸಕಾರರಿಗೆ "*Sources of law*" ಆಗಿ ಪರಿಣಮಿಸಿದೆ. ಇಂತಹ ನ್ಯಾಯಾಲಯಗಳ ಬಗ್ಗೆ ಪ್ರಶ್ನಿಸಿ ಚಕಾರ ಶಬ್ದವನ್ನೆತ್ತುವ ಯಾವ ವ್ಯಕ್ತಿಗಳೂ ಆಗ್ಗೆ ಇರಲಿಲ್ಲ.

ಕಾಲಗಳು ಉರುಳಿದಂತೆ ಆಧುನಿಕ ವಿದ್ಯೆ ಹಾಗು ಅಕ್ಷರಜ್ಞಾನ ಗ್ರಾಮವಾಸಿಗಳಲ್ಲಿ ಬೆಳೆದು ಬಂದಂತೆ ತಿರುಗಾಡಿ ದಾರಿತಪ್ಪಿದ ದೀಡು ಪಂಡಿತರು ದೈವದ ಕಟ್ಟುನಿಟ್ಟಿಗೆ ಒಳಗಾಗದೇ ಹೋದಾಗ ಭದ್ರಕೋಟೆಯಾಗಿದ್ದ ಈ ದೈವದ ನ್ಯಾಯ ಪಂಚಾಯತಕ್ಕೆ ಬಿರುಕು ಉಂಟಾಗಿ ಕುಸಿಯಲಾರಂಭಿಸಿತು. ಭಾರತದಲ್ಲಿ ಪಾಶ್ಚಿಮಾತ್ಯರು ಪ್ರವೇಶ ಮಾಡಿ ತಮ್ಮದೇ ಆದ ಒಂದು ಆಡಳಿತೆಯ ಪ್ರಭುತ್ವ ಸ್ಥಾಪಿಸಿ ಮನಬಲ್ಲಂತೆ ಆಡಳಿತ ನಡಿಸ ಲಾರಂಭಿಸಿದ ಮೇಲಂತೂ ಈ ದೈವ ಪಂಚಾಯತಿಗಳು ಕುಸಿದವಷ್ಟೇ ಏಕೆ ನಿರ್ನಾಮ ವಾಗಲಾರಂಭಿಸಿದವು.

ಗ್ರಾಮದಲ್ಲಿಯ ಅನೇಕ ದಾರಿತಪ್ಪಿದ ಅವ್ಯವಹಾರಿಕರು ನ್ಯಾಯ ನಿರ್ಣಯ ಕೊಟ್ಟು ತಪ್ಪಿತಸ್ಥರನ್ನು ಶಿಕ್ಷಿಸುವ ಈ ಹಿರಿಯರನ್ನೇ ಅವರ ಈ ಮಹಾ ಕಾರ್ಯವನ್ನು ಪ್ರಶ್ನಿಸಿ ಅವರನ್ನು ಹಾಗೂ ಅವರು ಇಡುತ್ತಿದ್ದ ದೇವಾಲಯದ ಟಿಪ್ಪಣಿ - ಲೆಕ್ಕದ ಪುಸ್ತಕಗಳನ್ನೇ ಆಧುನಿಕ ನ್ಯಾಯಾಲಯಗಳಿಗೆ ಎಳೆದು ಅವರಿಗೆಯೇ ಶಿಕ್ಷೆ ಮಾಡಿಸುವ ಬಗ್ಗೆ ಅನೇಕ

ಮೊಕದ್ದಮೆಗಳನ್ನು ಹೂಡುವ ಒಂದು ಅನಿಷ್ಠ ಸ್ಥಿತಿ ಒದಗಿದಾಗ ಅನೇಕ ಹಿರಿಯರು ತಾವು ಪರಂಪರಾಗತವಾಗಿ ವಹಿಸುತ್ತಿದ್ದಗ ಊರ ಹಿರಿತನಕ್ಕೆ ಶರಣು ಹೊಡೆಯುವ ಪ್ರಸಂಗ ತಲೆದೋರಿ, "ಊರಉಸಾಬರಿಗೆ ಮುಲ್ಲಾ ಸೊರಗಿ"ದಂತೆ "ನಮಗೇಕೆ ಈ ಊರ ಉಸಾಬರಿ" ಎಂದು ಹಿರಿಯರು ಅನ್ನಬೇಕಾಗಿ ಬಂದಂಥ ಕಾಲ ಬಂದು ಗ್ರಾಮಗಳಲ್ಲಿಯ ಪುರಾತನ ಕಾಲದ ನ್ಯಾಯ ಪಂಚಾಯತಿಗಳ ನ್ಯಾಯದಾನ ನಂದಾದೀವಿಗೆ ನಂದಿ ಹೋಗಿ ಗ್ರಾಮಗಳಲ್ಲಿ ಅಂಧಕಾರ ಉಂಟಾಗಿ ಕಳವು ದರೋಡೆ, ಕೊಲೆ, ಸುಲಿಗೆ, ಹೊಡೆದಾಟ ಮೊದಲಾದ ಅನೇಕಾನೇಕ ಅನೈತಿಕ ಅಪರಾಧಗಳ ಸಂಖ್ಯೆ ಹಾಗು ಪೊಲೀಸ ದಳದ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತ ನಡೆದಿದೆ. ಆದರೆ ಆಧುನಿಕ ನ್ಯಾಯಾಲಯಗಳಲ್ಲಿ ನಿಜವಾಗಿಯೂ ಹೇಳುವುದಾದರೆ ನಿಜವಾದ ನ್ಯಾಯ ಸಿಗುವುದೇ ಕಠಿಣವಾಗಿದೆ. ಅದಕ್ಕೆ ಕಾರಣ ಕೃತಕ ಸಾಕ್ಷಿ ಪುರಾವೆಗಳ ಪ್ರತ್ಯಕ್ಷತೆಯ ಆಧಾರದ ಮೇಲೆ ನ್ಯಾಯ ನಿರ್ಣಯ ಕೊಡುವ ಪದ್ಧತಿಯೇ ಕಾರಣ.

ಈಗಿನ ಕಾಲದಲ್ಲಿ ಪ್ರತಿ ಗ್ರಾಮದಲ್ಲೂ ಇಬ್ಬಣಗಳಾಗಿವೆ. ಇಬ್ಬಣಗಳಿಲ್ಲದ ಗ್ರಾಮಗಳೇ ಕಡಿಮೆ. ಇಬ್ಬಣಗಳಿಂದ ಮೇಲೆ ತನ್ನ ತನ್ನ ಬಣದವರನ್ನು ಬೆಂಬಲಿಸಲು ಯಾವುದೇ ವ್ಯಕ್ತಿ ಯಾವ ಮಟ್ಟಕ್ಕೂ ಆಣೆ ಮಾಡಿ ಖರೆಯೆಂದು ಸುಳ್ಳು ಹೇಳಲು ಹಿಂದು ಮುಂದು ನೋಡುವುದಿಲ್ಲ. ಅದು ಅವರ ತಪ್ಪಲ್ಲ. ಅಲ್ಲಲ್ಲಿಯ ಅನಿಷ್ಠ ವಾತಾವರಣಗಳು ಹಾಗು ರಾಜಕೀಯ ಪಕ್ಷ ಪಂಗಡಗಳು ಅವರನ್ನು ಹಾಗೆ ಮಾಡಿಸಲು ಮುಂದಾಗುತ್ತವೆ. ಆಧುನಿಕ ಗಾದೆ ಮಾತೊಂದನ್ನು ಹೇಳುವದಾದರೆ "ಸತ್ತವನನ್ನು ಹೊರಲು ನಾಲ್ಕು ಜನ, ಇದ್ದವನನ್ನು ಹೊರಲು ಮೂರು ಜನ" "ಅಂದರೆ ಒಬ್ಬ ನಿರಪರಾಧಿಯನ್ನು ಜೇಲಿಗೆ ಕಳಿಸಬೇಕಾದರೆ ಒಬ್ಬ ಫಿರ್ಯಾದಿ ಇಬ್ಬರು ಸಾಕ್ಷಿ ಹೇಳುವವರಾದರೆ ಸಾಕು ಎಂಬುದು ಎಲ್ಲರಿಗೂ ತಿಳಿದ ಮಾತಾಗಿದೆ."

ಈಗಿನ ಕಾಲದಲ್ಲಿ ಅನೇಕ ನಿಜವಾದ ಅಪರಾಧಗಳು ಪತ್ತೆಯಾಗದೆ ಹೋಗುತ್ತವೆ. ಅನೇಕ ಕಟ್ಟುಕತೆಯಾದ ಕೃತಕ ಅಪರಾಧಗಳು ಮೇಲೆ ಬಂದು ಬೆಳಕನ್ನು ಕಾಣುತ್ತವೆ. ನಿಜವಾದ ಅಪರಾಧಿಗಳು ನಿರಪರಾಧಿಗಳಾಗುತ್ತಾರೆ. ನಿರಪರಾಧಿಗಳು ಅಪರಾಧಿಗಳಾಗು ತ್ತಾರೆ. ಕಷ್ಟಕ್ಕೀಡಾಗುತ್ತಾರೆ. ಸ್ವಂತದ ವಸ್ತು ಕಳವಿನ ವಸ್ತು ಆಗುತ್ತದೆ. ಕಳುವಿನ ವಸ್ತು ಸ್ವಂತದ ವಸ್ತು ಆಗುತ್ತದೆ.

ಇದಕ್ಕೆ ಮೇಲಾಗಿ ಅನೇಕ ವರ್ಷಗಳ ಕಾಲ ಸತ್ಯದ ಒರೆಗಲ್ಲು ಸಿಗಬಹುದೋ ಏನೋ ಎಂಬ ಆಶೆಯ ಜಲಗುದುರೆ ಬೆನ್ನಟ್ಟಿ ಹಳ್ಳಿಯಿಂದ ದಿಲ್ಲಿಯವರೆಗೂ ದಿವಾಣಿ ಹಾಗೂ ಫೌಜದಾರಿ ಪ್ರಕರಣಗಳಲ್ಲಿ ಓಡುತ್ತಿರುವ ಇಕ್ಕೆಲವರನ್ನು ನಾವು ಕಾಣುತ್ತೇವೆ. ದಿಲ್ಲಿಯನ್ನು ಮುಟ್ಟಿ ಮರಳಿ ಬಂದಾಗ -

"ಗೆದ್ದವನು ಸೋಲುತ್ತಾನೆ. ಸೋತವನು ಸಾಯುತ್ತಾನೆ" ಇದು ಈಗಿನ ಆಧುನಿಕ ಪ್ರಜಾಪ್ರಭುತ್ವದಲ್ಲಿ ಕಣ್ಣಾರೆ ಕಂಡು ಮರಮರನೆ ಮರುಗಿ ನಿಟ್ಟುಸಿರು ಬಿಟ್ಟು ನಿರೀಕ್ಷೆಯ ನ್ಯಾಯದಾನಾರ್ಚನೆ.

ಈ ಆಧುನಿಕ ಕಷ್ಟ ಕಾರ್ಪಣ್ಯಗಳನ್ನು ಕಂಡೋ ಏನೋ ಅನುಭವಿಗಳು ಪುರಾತನ ಕಾಲದ ಈ ದೈವ ಅಥವಾ ನ್ಯಾಯ ಪಂಚಾಯತಿಗಳ ಪುನರುದ್ಧಾರ ಮಾಡಿ ಅವುಗಳಿಗೆ ಶಾಸನದ ರಕ್ಷಣೆ ಕೊಟ್ಟು ಅವುಗಳಿಂದ ಗ್ರಾಮಾಂತರ ಪ್ರದೇಶದಲ್ಲಿ ಸಣ್ಣ ಪುಟ್ಟ ದಿವಾಣಿ, ಫೌಜದಾರ ಹಾಗು ಇತರ ಪ್ರಕರಣಗಳನ್ನು ಅಲ್ಪವೆಚ್ಚದಲ್ಲಿ ಅಥವಾ ವೆಚ್ಚವಿಲ್ಲದೆ ತಮ್ಮನ್ನು ತಾವೇ ಪರೀಕ್ಷಿಸಿಕೊಂಡು ತಕ್ಕ ಚಿಕಿತ್ಸೆ ಮಾಡಿಕೊಳ್ಳಲಿ, ಬಗೆಹರಿಸಿಕೊಳ್ಳಿ ಅನ್ಯಥಾ ಪಡುವ ಕಷ್ಟವನ್ನು ಹಾಗು ಹಣದ ಸೂರೆಯನ್ನು ತೊರೆಯಲಿ. ಗ್ರಾಮ ನಿವಾಸಿಗಳು ಎಂಬ ಹಿರಿಯಾಸೆಯಿಂದ ಈಗಿನ 1964ರ ಪಂಚಾಯತಿ ರಾಜಮಸೂದೆಯಲ್ಲಿ ನ್ಯಾಯ ಪಂಚಾಯತಿಗಳನ್ನು ರಚಿಸಲು ಅವಕಾಶಮಾಡಿದ್ದಾರೆ.

ಈ ನ್ಯಾಯ ಪಂಚಾಯತಿಗಳನ್ನು ನಡೆಸಲು ಗ್ರಾಮವಾಸಿಗಳು ಅರ್ಹರಿದ್ದಾರೆಯೇ? ಅಷ್ಟು ಸಾಮರ್ಥ್ಯ ಅವರಲ್ಲಿದೆಯೇ? ಎಂಬ ಶಂಕೆಯನ್ನು ಕೆಲವರು ಎತ್ತುತ್ತಿದ್ದಾರೆ. ಈ ಶಂಕೆಯನ್ನು ಎತ್ತುವವರು ಹದಿನೇಳು ವರ್ಷ ತುಂಬಿದ ಈ ಸ್ವತಂತ್ರ ಭಾರತದಲ್ಲಿ ನಮ್ಮನ್ನು ನಾವು ಆಳಲು ಅರ್ಹರಿದ್ದೇವೆಯೇ ಎಂದು ಕೇಳಿದಂತಾಗುತ್ತದೆ.

ನಾವು ನಮ್ಮ ಸ್ವತಂತ್ರ ಭಾರತದಲ್ಲಿ ಎಲ್ಲಿಯವರೆಗೆ ನಮ್ಮನ್ನು ನಾವು ಪರೀಕ್ಷಿಸಿ ನಮ್ಮ ಚಿಕಿತ್ಸೆಯನ್ನು ನಾವು ಮಾಡಿಕೊಳ್ಳಲಾರೆವೋ ಅಲ್ಲಿಗೆ ಅರಾಜಕತೆ ಅನಾಗರಿಕತೆ ಬಂದೀತು.

ಕಾರಣ ಪ್ರತಿಯೊಬ್ಬ ಗ್ರಾಮವಾಸಿಗಳೂ ತಮ್ಮನ್ನು ತಾವು ಪರೀಕ್ಷಿಸಿ ನ್ಯಾಯದಾನ ಮಾಡಲು ಮುಂದಾಗಬೇಕು. ಸ್ವತಂತ್ರ ಭಾರತದಲ್ಲಿ ಪ್ರಜಾಪ್ರಭುತ್ವವನ್ನು ಯಶಸ್ವಿಗೊಳಿಸಬೇಕು. ಗ್ರಾಮಾಂತರ ಪ್ರದೇಶದ ಅಕ್ಷರಿ - ಅನಕ್ಷರಿಗಳೆಲ್ಲರೂ ಅರ್ಹರಿದ್ದಾರೆ.

ಅವರನ್ನು ತಪ್ಪು ತಿಳಿದುಕೊಳ್ಳದೆ ಅಧಿಕಾರಕೊಟ್ಟು ಅವರ ಕಾರ್ಯದ ನಿರ್ವಹಣೆಯಲ್ಲಿ ಹಸ್ತಕ್ಷೇಪ ಮಾಡದೆ ನಿರ್ಭಯವುಳ್ಳ ನ್ಯಾಯದಾನಿಗಳನ್ನಾಗಿ ಮಾಡಲೇಬೇಕು. ಅಲ್ಲದೆ ಪುರಾತನ ಕಾಲದ ನ್ಯಾಯ ಪಂಚಾಯತಿಗಳನ್ನು ಪುನರುತ್ಥಾನ ಮಾಡುವ ಬಗ್ಗೆ ಪ್ರತಿ ಭಾರತೀಯನೂ ಏಕೈಕ ಮನಸ್ಸಿನಿಂದ ಪ್ರಯತ್ನಪಡಲೇಬೇಕು. ಅಂದರೆ ಮಾತ್ರ ಗಳಿಸಿದ ಸ್ವಾತಂತ್ರ್ಯ ಉಳಿದೀತು. ಇಲ್ಲವಾದರೆ ಅನಾಗರಿಕತೆ, ಅರಾಜಕತೆ ಬಂದೀತು. ನಮ್ಮನ್ನು ನಾವು ಪರೀಕ್ಷಿಸುವ ಹಾಗೂ ಆಳುವ ಕಾಲ ಕರಾಳವಾದೀತು.

❑

ಸಹಕಾರಿ ಆರ್ಬಿಟ್ರೇಟರವರ ಸ್ಥಾನಗಳು

ಸಹಕಾರ ಚಳವಳಿ. ಈ ಚಳವಳಿಯನ್ನು ಯಶಸ್ವಿಯನ್ನಾಗಿ ನಡೆಸಿಕೊಂಡು ಹೋಗುವಲ್ಲಿ ಲೋಪ - ದೋಷ, ತಪ್ಪು, ಅಕ್ರಮ, ಅನ್ಯಾಯ, ಅಪರಾಧಗಳು ಸಂಭವಿಸಿದಾಗ ಇಂತಹ ತಕರಾರುಗಳು ನ್ಯಾಯಾಂಗದ ದಿವಾಣಿ ಕೋರ್ಟುಗಳಿಗೆ ಹೋದರೆ ಜನತೆಗೆ ಅಲ್ಪಖರ್ಚಿನಲ್ಲಿ, ಸಕಾಲದಲ್ಲಿ ಸಮೀಪದಲ್ಲಿ, ಅಲ್ಪಾವಧಿಯಲ್ಲಿ ನ್ಯಾಯ ದೊರಕದೆಂದು ದೇಶದಲ್ಲಿಯ ಪಾರ್ಲಿಮೆಂಟ್ ಹಾಗೂ ವಿಧಾನ ಮಂಡಲಗಳು ಅಲ್ಲಲ್ಲಿಯ ಸಹಕಾರೀ ಕಾಯಿದೆಯಲ್ಲಿ "ಆರ್ಬಿಟ್ರೇಟರ್" ಅಥವಾ "ರಿಜಿಸ್ಟ್ರಾರ್ಸ್ ನಾಮಿನಿ" ಎಂಬ ಹುದ್ದೆಗಳನ್ನು ನಿರ್ಮಿಸಿದ್ದಾರೆ.

ಈ ನಿರ್ಮಾಣಕ್ಕೆ ಅನುಗುಣವಾಗಿ ದೇಶಾದ್ಯಂತ ಅನೇಕ ಮಹನೀಯರನ್ನು ಈ ಹುದ್ದೆಗೆ ಅಲ್ಲಲ್ಲಿಯ ಸರಕಾರಗಳು ನಿಯಮಿಸಿವೆ.

ಈ ಹುದ್ದೆಗಳಿಗೆ ನೇಮಕ ಮಾಡುವ ವಿಧಾನ ವಯೋಮಿತಿ, ವಿದ್ಯಾರ್ಹತೆ, ಅನುಭವ, ಸಂಖ್ಯೆಗಳನ್ನು ನೋಡಿದರೆ ಅಥವಾ ವಿಮರ್ಶೆ ಮಾಡಿದರೆ ಬಹುಜನರ ನೇಮಕ ಸರ್ಕಾರದಲ್ಲಿ ಸ್ವಾಮಿತ್ವವನ್ನು ಪಡೆದ ರಾಜಕೀಯ ಧುರೀಣರ ಸ್ವಜನ ಪೋಷಣೆಗಾಗಿ ಮಾತ್ರ ನಿರ್ಮಿತವಾಗಿರಬಹುದೇನೋ ಎಂಬಂತೆ ಭಾಸವಾಗುವುದೇ ಹೊರತು ಸಹಕಾರ ಚಳವಳಿಯ ಸುಸೂತ್ರ ಯಶಸ್ಸಿಗಾಗಿ ಹಾಗೂ ಸಹಕಾರ ಚಳವಳಿ ಯಲ್ಲಿಂದು ನೊಂದ ಹಾಗೂ ಬೆಂದ ಸಹಕಾರಿಗಳ ಹಾಗೂ ಸಹಕಾರ ಸಂಘಗಳ ರಕ್ಷಣೆಗಾಗಿ ಅಥವಾ ಮಾರ್ಗದರ್ಶನಕ್ಕಾಗಿ ಅಲ್ಲವೆಂದು ಸಹಕಾರಿ ಚಳವಳಿಯ ವೀಕ್ಷಕರಿಂದು ವಿಷಾದದಿಂದ ಅನಿವಾರ್ಯವಾಗಿ ಹೇಳಬೇಕಾಗಿದೆ.

ಸ್ವಜರನ್ನು ನಿಯಮಿಸಿದರೂ ಅಡ್ಡಿ ಇಲ್ಲ. ಇಂತಹ ನೇಮಕಗಳು ನ್ಯಾಯ ಬದ್ಧವಾದ, ಸುಸಂಬದ್ಧ ನಿಯಮಗಳನ್ವಯ ಆಗುತ್ತಿದ್ದರೆ ಅವುಗಳನ್ನು ಯಾರೊಬ್ಬರೂ ಸ್ವಾಗತಿಸಬಹುದಿತ್ತು ಅಥವಾ ಇಂತಹ ಪ್ರತಿಯೊಬ್ಬ ಆರ್ಬಿಟ್ರೇಟರವರಿಂದ ನ್ಯಾಯ

ವಾದರೂ ಸಕಾಲದಲ್ಲಿ ಅಲ್ಪ ಖರ್ಚಿನಿಂದ, ಸಮೀಪದಲ್ಲಿ ಶೀಘ್ರವಾಗಿ ದೊರೆತಿದ್ದರೂ ಕೂಡಾ ಪ್ರತಿಯೊಬ್ಬರೂ ಸ್ವಾಗತಿಸಬಹುದಾಗಿತ್ತು.

ಆದರೆ ಬಹುಪಾಲು ಹುದ್ದೆಗಳು ಸಾರ್ವಜನಿಕರ ಟೀಕೆಗೆ ಗುರಿಯಾಗಿ ಈ ಹುದ್ದೆಯಲ್ಲಿಯ ಅನೇಕ ಉತ್ತಮ ಆರ್ಬಿಟ್ರೇಟರವರೂ ಕೂಡ ವಿನಾಕಾರಣ, ಅನಿವಾರ್ಯವಾಗಿ ಕೆಟ್ಟ ಹೆಸರಿಗೆ ಹಾಗೂ ಟೀಕೆಗೆ ಗುರಿಯಾಗಬೇಕಾಗಿದೆ.

ಹಲವು ಅವಾಸ್ತವ, ಅವ್ಯವಸ್ಥಿತ ಹಾಗೂ ಅಸಮಂಜಸವಾದ ಅನೇಕ ಪದ್ಧತಿಗಳ ಪರಿಣಾಮವಾಗಿ ಸಹಕಾರಿ ಕ್ಷೇತ್ರದಲ್ಲಿ ತಕರಾರು ಪ್ರಕರಣಗಳು ಯೋಗ್ಯರೀತಿಯಲ್ಲಿ ಬಹುಮಟ್ಟಿಗೆ ನಿಖಾಲೆಯಾಗದೆ, ನೊಂದವರಿಗೆ ನ್ಯಾಯ ಸಿಗದೆ, ತೊಂದರೆಗೆ ಗುರಿಯಾಗುತ್ತಿರುವವರು ಹಾಗೂ ಅನೇಕ ಆರ್ಬಿಟ್ರೇಟರುಗಳ ನಿರ್ಣಯ ಅಪೆಲೆಟ್ ಕೋರ್ಟ್ ಅಥವಾ ಹೈಕೋರ್ಟ್‌ಗಳಲ್ಲಿ ಉಗ್ರವಾದ ಟೀಕೆಗೆ ವಶವಾಗುತ್ತಿರುವುದು ಕಂಡು ಬರುತ್ತಿದೆಯಲ್ಲದೆ, ಇಂತಹ ತಾರತಮ್ಯ ಹಾಗೂ ಲೋಪದೋಷಗಳಿಂದ ಪೂರಿತವಾದ ವಿಧಿ - ವಿಧಾನಗಳಿಂದ ಆಗುತ್ತಿರುವ ಆರ್ಬಿಟ್ರೇಟರರ ನೇಮಕ ಹಾಗೂ ನಿರ್ಣಯಗಳಿಂದ ಬಹುಮಟ್ಟಿಗೆ ಸಹಕಾರ ಕ್ಷೇತ್ರಗಳಲ್ಲಿ ಅಕ್ರಮಗಳಿಗೆ ಆಸ್ಪದ ಕೊಟ್ಟು, ಬಹುಜನ ಸತ್ಯಸಂಧರಿಗೆ ಸಹಕಾರ ಕ್ಷೇತ್ರದಿಂದ ನಿರ್ಗಮನಗೊಳ್ಳಲು ನೀತಿಪಾಠ ಕಲಿಸಿ, ಅನೇಕ ಪಟ್ಟಭದ್ರ ಹಿತಾಸಕ್ತಿಗಳಿಗೆ ತಮ್ಮ ಅಧಿಕಾರ ಸೂತ್ರಗಳನ್ನು ಗಟ್ಟಿಮುಟ್ಟಾಗಿ ಹಿಡಿದುಕೊಳ್ಳಲು ಮಾತ್ರ ಆಸ್ಪದವಾಗುತ್ತಿರುವುದು ಬಹುಮಟ್ಟಿಗೆ ಕಂಡು ಬರುತ್ತಿದೆ.

ಇಂತಹ ಲೋಪ ದೋಷಪೂರಿತ ಆರ್ಬಿಟ್ರೇಟರವರ ನೇಮಕ ಹಾಗು ಅವರ ಕಾರ್ಯದ ವಿಧಿ - ವಿಧಾನಗಳನ್ನು ಕಟ್ಟುನಿಟ್ಟಾದ ವಿಧಿ - ವಿಧಾನಗಳ ಚೌಕಟ್ಟಿನಲ್ಲಿ ಅಲ್ಲಲ್ಲಿಯ ಸರ್ಕಾರಗಳು ತರಲೇಬೇಕು.

ಅಂದರೆ ಮಾತ್ರ ದೋಷಪೂರಿತ ಹಾಗೂ ಅಕ್ರಮ ಅಪರಾಧಗಳ ಅನಿಷ್ಟಗಳಿಂದ ಸಹಕಾರ ಕ್ಷೇತ್ರ ದೂರ ಸರಿದು, ಸರಿಯಾದ ಮಾರ್ಗದಲ್ಲಿ ಹೋದೀತು. ಇದಕ್ಕೆ ತಪ್ಪಿದರೆ ಸಹಕಾರ ಸುಕ್ಷೇತ್ರವಾಗುವ ಬದಲು ಒಂದು ಕುಕ್ಷೇತ್ರವಾದೀತು.

❑

ಸಂಶಯಾತೀತ ಹಾಗೂ ನಿರ್ಭೀತ ನ್ಯಾಯಾಂಗ ಅತ್ಯವಶ್ಯ

ಪ್ರಜಾಪ್ರಭುತ್ವದಲ್ಲಿ ವಿಧಾನಾಂಗ ಕಾರ್‍ಯಾಂಗ ಹಾಗೂ ನ್ಯಾಯಾಂಗ ಈ ಮೂರು ಮೂಲ ಘಟಕಗಳಾಗಿದ್ದರೂ ಕೂಡ ನ್ಯಾಯಾಂಗವು ಹೆಚ್ಚಿನ ಮಾನ್ಯತೆಯನ್ನು ಪಡೆದಿರುತ್ತದೆ.

ಯಾವುದೇ ಪ್ರಜೆಯಾಗಲೀ ಸಂಘ - ಸಂಸ್ಥೆಯಾಗಲೀ ಅಥವಾ ಯಾವುದೇ ಸರ್ಕಾರವಾಗಲೀ ವಿಧಾನವನ್ನು ಧಿಕ್ಕರಿಸಿ, ಕಾರ್‍ಯಾಂಗವನ್ನು ಕತ್ತರಿಸಿ, ಯಾವುದೇ ಪ್ರಜೆಗೆ ಅವನ ಮಾನ, ಆಸ್ತಿಹಕ್ಕು ಹಾಗೂ ಅಧಿಕಾರಕ್ಕೆ ತಿಲಾಂಜಲಿಯನ್ನಿತ್ತು ಆಕ್ರಮಿಸಿ ಹದ್ದು - ಮೀರಿ ವರ್ತಿಸಿದಾಗ ಅಂಥ ಅನ್ಯಾಯಕ್ಕೆ ಬಲಿಯಾದ ಪರಿತಪ್ತ ಹಾಗೂ ಶೋಕತಪ್ತನಾದ ಕಕ್ಷಿಯು ನ್ಯಾಯ ಯಾಚನೆಗಾಗಿ ನ್ಯಾಯಾಂಗವನ್ನು ಮೊರೆಹೋಗಬೇಕಾಗುತ್ತದೆ ಹಾಗೂ ಅವಶ್ಯಕವಾದ ನ್ಯಾಯದಾನವನ್ನು ನ್ಯಾಯಾಂಗದಿಂದ ಪಡೆಯಲೇಬೇಕಾಗುತ್ತದೆ. ನ್ಯಾಯಾಂಗವು ದೇಶದ ಜನತೆಗೆ ಸಮಂಜಸವಾದ ನ್ಯಾಯವನ್ನು ಸಕಾಲದಲ್ಲಿ ಸಮರ್ಪಕವಾಗಿ ಕೊಡದೇ ಹೋದರೆ ಪ್ರಜಾಪ್ರಭುತ್ವದಲ್ಲಿ ವಿಶ್ವಾಸವುಳ್ಳ ಜನತೆ ನ್ಯಾಯಾಂಗಕ್ಕೆ ಶರಣು ಹೊಡೆದು ಕಾಡಿನಲ್ಲಿ ಶಕ್ತಿಯೇ ಶಸ್ತ್ರ (ಮೈಟ್ ಇಜ ರೈಟ್ ಇನ್ ಜಂಗಲ್) ಎಂಬ ತತ್ವವನ್ನಾಧರಿಸಿ ದೇಶದಲ್ಲಿಯ ಅಶಾಂತಿ ಹಾಗೂ ಅರಾಜಕತೆಗಳ ಅನಿಷ್ಠ ಪರಿಣಾಮವನ್ನು ಬೆನ್ನಟ್ಟಿ ನಡೆವ ಪ್ರಸಂಗಗಳು ಅಲ್ಲಲ್ಲಿ ದೇಶದಾದ್ಯಂತ ಕಂಡು ಬರುತ್ತವೆ. ಇಂತಹ ದಾರುಣ ಪ್ರಸಂಗಗಳು ಬಾರದಂತೆ ಹಾಗೂ ನ್ಯಾಯಾಂಗದ ಬಗ್ಗೆ ಜಿಗುಪ್ಸೆ ಹಾಗೂ ಅವಿಶ್ವಾಸ ಜನತೆಯಿಂದ ಬಾರದಂತೆ ನೋಡಿಕೊಳ್ಳುವುದು ದೇಶದಲ್ಲಿಯ ಪ್ರತಿಯೊಬ್ಬ ವಿಧಾನ ಕರ್ತೃ ಹಾಗೂ ಕಾರ್ಯಾಂಗದ ಅಧಿಕಾರಿಗಳ ಕರ್ತವ್ಯವಾಗಿವೆ. ಅಂತೆಯೇ ದೇಶದಲ್ಲಿಯ ನ್ಯಾಯಾಂಗದ ವಿವಿಧ ನ್ಯಾಯಾಧೀಶರು ನಿರ್ಭೀತರಾಗಿ, ನಿಷ್ಪಕ್ಷಪಾತವಾದ ನ್ಯಾಯದಾನವನ್ನು ಯಾವುದೇ ಸಂಶಯಕ್ಕೆ ಆಸ್ಪದಕೊಡದಂತೆ ಮಾಡಲೇಬೇಕು. ಉದರ ಸಂತೃಪ್ತಿಗಾಗಿ ಬೇಡನು ಪಕ್ಷಿಯುನ್ನು ಕೊಂದುತಿನ್ನಲು

ಬೆನ್ನಟ್ಟಿದಾಗ ಆ ಪಕ್ಷಿ ಶಿಬಿ ಚಕ್ರವರ್ತಿಯನ್ನು ರಕ್ಷಣೆಗಾಗಿ ಮೊರೆಹೊಕ್ಕಾಗ ಈ ಬೇಡನಿಗೆ "ಮೊರೆ ಹೊಕ್ಕ ಪಕ್ಷಿಯ ನೀವನಲ್ಲೆಂದು" ಶಿಬಿ ಚಕ್ರವರ್ತಿಯು ಹೇಳಿದ ತತ್ವದಂತೆ ನಮ್ಮ ನ್ಯಾಯಾಂಗದ ತತ್ವವಾಗಲೇ ಬೇಕು, ಅಂದರೆ ಮಾತ್ರ ನಮ್ಮ ದೇಶದ ನ್ಯಾಯಾಂಗದ ನ್ಯಾಯಾಲಯಗಳು ದೇವಾಲಯಗಳಾದಾವವೇ ಹೊರತು ನೋವಾಲಯಗಳಾಗಲಾರವು.

ನ್ಯಾಯಾಂಗವನ್ನು ನಡೆಸಿಕೊಂಡು ಹೋಗುವಲ್ಲಿ ತಕ್ಕ ಏರ್ಪಾಡನ್ನು ವ ವೆಚ್ಚವನ್ನು ಮಾಡುವ ಕರ್ತವ್ಯದ ಹೊಣೆ ಸರಕಾರದ ಮೇಲಿದ್ದರೂ ಕೂಡ ನ್ಯಾಯಾಂಗದ ಕಾರ್‍ಯಾಚರಣೆಗೆ ಚ್ಯುತಿಬಾರದಂತೆ ಹಾಗೂ ಶೀಲಕ್ಕೆ ಭಂಗಬಾರದಂತೆ ನೋಡಿಕೊಳ್ಳುವದು ನ್ಯಾಯಾಂಗದಲ್ಲಿಯ ಪ್ರತಿಯೊಬ್ಬ ನ್ಯಾಯಮೂರ್ತಿಗಳ ಅಥವಾ ನ್ಯಾಯಾಧೀಶರ ದಾನದೇಹಿಯಾಗಿದೆ. ದೇವರು ದೇವಾಲಯ ನಿರ್ಮಿಸಿದ ಜಕ್ಕಣನನ್ನು, ತನ್ನನ್ನೇ (ದೇವರನ್ನೇ) ನಿರ್ಮಿಸಿದ ಶಿಲ್ಪಿಯನ್ನು ವರ ಪಡೆಯಲು ಬಂದ ಆಗಂತುಕನನ್ನು ಭೇದ - ಭಾವವಿಲ್ಲದೇ ಏಕಭಾವನೆಯಿಂದ ನೋಡುವನೇ ವಿನಹ ಯಾವುದೇ ಪಕ್ಷಪಾತ ಮಾಡಲಾರ. ಅಂತೆಯೇ ನ್ಯಾಯಾಂಗದ ನ್ಯಾಯದೂತರು ತಮ್ಮ ನ್ಯಾಯಾಲಯಗಳನ್ನು ನಿರ್ಮಿಸಿದ ಸರಕಾರ ಅಥವಾ ಸರಕಾರದ ಕರ್ತೃಗಳನ್ನು ನ್ಯಾಯದೂತರನ್ನು ನಿಯಮಿಸಿದ ಸರಕಾರ ಅಥವಾ ಸರಕಾರದಲ್ಲಿ ಕರ್ತೃಗಳನ್ನು ಹಾಗೂ ನ್ಯಾಯಯಾಚನೆಗಾಗಿ ಬಂದ ಯಾವುದೇ ಬಡಹೀನ ವ್ಯಕ್ತಿ ತಮ್ಮೆದುರಿಗೆ ನಿಂತಾಗ ಯಾವುದೇ ನಿರ್ಭಯ, ನಿರ್ಭೀತಿಯಿಲ್ಲದೇ ನಿರ್ಮಲವಾದ ನ್ಯಾಯದಾನವನ್ನು ಮಾಡಲೇಬೇಕು. ಅಂದರೆ ಮಾತ್ರ ನ್ಯಾಯಾಂಗದ ಹಾಗೂ ನ್ಯಾಯದೂತರ ಗೌರವಕ್ಕೆ ಯಾವುದೇ ತರಹ ಕಳಂಕ ಯಾರಿಂದಲೂ ಬರಲಾರದು. ಸರಕಾರ ಅಥವಾ ಸರಕಾರದಲ್ಲಿಯ ಹೊಣೆಗಾರರು ಕೂಡ ಸರಕಾರ ಘೋಷಿತ ನ್ಯಾಯಾಲಯಗಳ ನ್ಯಾಯದೂತರು ನ್ಯಾಯಾಂಗವನ್ನು ಮಾಡಿದಾಗ ಸರಕಾರಕ್ಕೆ ಬೇಡವಾದ ಸರಕಾರದ ಹೊಣೆಗಾರಿಕೆ ಪ್ರತಿಕೂಲವಾದಾಗ್ಗೆ ನ್ಯಾಯಾಂಗದ ಬಗ್ಗೆ ಪ್ರತಿಕಾರ ಮನೋಭಾವನೆಯ ಹೊರತಾಗಿ ನ್ಯಾಯಾಂಗದ ತೀರ್ಪಿಗೆ ಗೌರವ ಮನ್ನಣೆ ಕೊಡಲೇಬೇಕು. ಅಂದರೆ ಮಾತ್ರ ಅಂಥ ಸರಕಾರಕ್ಕೆ ಜನತೆ ಮಾನ್ಯತೆ ಕೊಟ್ಟೀತೇ ವಿನಹ ಇದಕ್ಕೆ ತಪ್ಪಿದರೆ ಜನತೆ ಅಥವಾ ಸರಕಾರ ಹಾಗೂ ಹೊಣೆಗಾರರ ವಿರುದ್ಧ ಅಸಹಕಾರವನ್ನು ಮಾಡುತ್ತ ಹೋಗುವದನ್ನು ಕಾಣಬೇಕಾದೀತು.

ಜಕ್ಕಣನು ನಿರ್ಮಿಸಿದ ಪ್ರಶಾಂತವಾದ ದೇವಾಲಯದಲ್ಲಿ ಶಿಲ್ಪಿಯು ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಿ ಸರ್ವಜ್ಞ ದೇವರ ದರ್ಶನಾಶೀರ್ವಾದಕ್ಕಾಗಿ ತಕ್ಕ ಏರ್ಪಾಡು ಮಾಡುತ್ತಾನೆ. ಅದು ಜಕ್ಕಣ್ಣನ ಹಾಗೂ ಶಿಲ್ಪಿಯ ಕರ್ತವ್ಯವೇ ಆಗಿರುತ್ತದೆ. ಅಂತೆಯೇ ಸರಕಾರಗಳ ನ್ಯಾಯಾಂಗದ ಶ್ರೇಷ್ಠತೆಗಾಗಿ ವಾದವಿಶೇಷತೆಗಾಗಿ ಉಚ್ಚಮಟ್ಟದ ಘಟನೆಯನ್ನು ಅವಿರತವಾಗಿ ನಡೆಸಿಕೊಂಡು ಹೋಗಬೇಕಾಗಿದ್ದಲ್ಲಿ ದೇಶದಾದ್ಯಂತ ವಿಶಾಲವಾದ ಸಾಕಷ್ಟು

ನ್ಯಾಯಾಲಯಗಳನ್ನು ನಿರ್ಮಾಣ ಮಾಡಲೇಬೇಕು. ಹಾಗೂ ನ್ಯಾಯಾಲಯಗಳಿಗೆ ತಕ್ಕ ಸಾಕಷ್ಟು ಸಿಬ್ಬಂದಿ ಫರ್ನಿಚರ್, ಸ್ಟೇಶನರಿ ಇತ್ಯಾದಿ ಸಾಹಿತ್ಯ ಸಲಕರಣೆಗಳನ್ನು ಒದಗಿಸಬೇಕು. ಅಲ್ಲದೆ ನ್ಯಾಯಾಲಯಗಳಿಗೆ ಬೇಕಾದ ಸಾಕಷ್ಟು ನ್ಯಾಯಾಧೀಶರನ್ನು ನೇಮಕ ಮಾಡಲು ಸರಕಾರ ನೇಮಕ ಮಾಡಿದ ನ್ಯಾಯಾಧೀಶನಿಗೆ ತಕ್ಕ ಹಾಗೂ ಅವಶ್ಯಕವಾದ ವಸತಿ, ವಾಹನ, ಸಂಬಳ ಇತ್ಯಾದಿ ಅನುಕೂಲತೆಗಳನ್ನು ಮಾಡಲೇಬೇಕು. ಹಾಗೂ ಪರಿಪೂರ್ಣವಾದ ಕಾಯ್ದೆ ಪುಸ್ತಕ ಭಂಡಾರಗಳನ್ನು ಒದಗಿಸಲೇಬೇಕು, ಅಲ್ಲದೆ ನ್ಯಾಯಮೂರ್ತಿಗಳ ನೇಮಕದಲ್ಲಿ ಯಾವುದೇ ರಾಜಕೀಯ ಕೈವಾಡವಿರಲೇಕೂಡದು ಹಾಗೂ ನ್ಯಾಯಾಧೀಶರ ನೇಮಕ ಮತ್ತು ವರ್ಗಾವಣೆಗಳಲ್ಲಿ ಕೂಡ ಸರಕಾರದ ಯಾವುದೇ ಕೈವಾಡ ಕೂಡ ಇರಲೇಕೂಡದು ಅಂದರೆ ಮಾತ್ರ ನ್ಯಾಯಾಂಗ ತನ್ನ ಮೈ ಸರಿಬಿಟ್ಟು ಕಾರ್ಯ ಮಾಡಬಲ್ಲದು. ಇದಕ್ಕೆ ತಪ್ಪಿದರೆ ನ್ಯಾಯಾಂಗ ಅಂಗಹೀನ ಹಾಗೂ ಅಂಗ ಊನನಂತಾಗಿ ನ್ಯಾಯಾಚರಣೆ ಕುಂಠಿತವಾಗಿ ನ್ಯಾಯಾಲಯ ಗಳಲ್ಲಿ ಜನತೆ ಅಲ್ಲಿಂದ ಇಲ್ಲಿಗೆ ಇಲ್ಲಿಂದ ಅಲ್ಲಿಗೆ ಓಡಾಡಿ ಹೇರಳ ಹಣ ಖರ್ಚು ಮಾಡುವ ದಾರುಣ ಪ್ರಸಂಗ ಹಾಗು ಈಗಾಗಲೇ ದೇಶದಲ್ಲಿ ನ್ಯಾಯಾಲಯಗಳಲ್ಲಿ ಬೆಳೆಯುತ್ತಿರುವ ಪ್ರಕರಣ ಸಂಖ್ಯೆ ಇನ್ನೂ ಹೆಚ್ಚುತ್ತ ಹೋಗಿ ಜನತೆಗೆ ಅಲ್ಪ ಖರ್ಚಿನಲ್ಲಿ ಜಾಗ್ರತವಾಗಿ ನ್ಯಾಯಸಿಗದೇ "ಗೆದ್ದವನು ಸೋತ. ಸೋತವನು ಸತ್ತ" ಎಂಬಂತಾಗಿ ನ್ಯಾಯಾಂಗದ ಬಗ್ಗೆ ಸಾರ್ವಜನಿಕರಲ್ಲಿ ಜಿಗುಪ್ಸೆ ಉಂಟಾದೀತು.

ನ್ಯಾಯಾಲಯದ ಉಚ್ಚ ಪರಂಪರೆಯನ್ನು ಕಾಯ್ದುಕೊಂಡು ಹೋಗುವ ಹೊಣೆಯೂ ಕೂಡ ದೇಶದ ನ್ಯಾಯವಾದಿಗಳ ಕೈಯಲ್ಲಿರುತ್ತದೆ. ಕಕ್ಷಿಗಾರರ ನೋವನ್ನು ಅರಿತು ಅವರಿಗೆ ಬಂದ ಕುತ್ತನ್ನು ಕಂಡು ತಕ್ಕ ಪರಿಹಾರವನ್ನು ಹುಡುಕಿ ಅವರಿಗೆ ಭಾರೀ ಶುಲ್ಕವನ್ನು ಹೇರದೆ ಅವರನ್ನು ಸಂಕಟದಿಂದ ಪಾರುಮಾಡುವಲ್ಲಿ ಹಾಗೂ ಅವರಿಗೆ ಸೂಕ್ತ ನ್ಯಾಯವನ್ನು ಶೀಘ್ರವಾಗಿ ದೊರಕಿಸಿ ಕೊಡುವಲ್ಲಿ ಪ್ರಯತ್ನಿಸಲೇಬೇಕು. ಅಂದರೆ ಮಾತ್ರ ಬಸವಳಿದು ಬಂದ ಕಕ್ಷಿಗಾರ ಕುಲವು ನ್ಯಾಯವಾದಿಗಳನ್ನು ಅಭಿವಂದಿಸಿ ಹೊಗಳದೆ ಇರಲಾರದು. ಉತ್ತಮ ಹಾಗೂ ದಕ್ಷ ನ್ಯಾಯವಾದಿಗಳೇ ನ್ಯಾಯಾಂಗದ ನ್ಯಾಯಾಧೀಶ ಹಾಗೂ ನ್ಯಾಯಮೂರ್ತಿಗಳಾಗಿ ನೇಮಕವಾಗುತ್ತಿರುವುದರಿಂದ ಅವರು ಪೀಠಗಳ ನಿಷ್ಪಕ್ಷಪಾತವಾದ ಹಾಗೂ ಶೀಘ್ರವಾದ ನ್ಯಾಯದಾನಗಳ ಶ್ರೇಷ್ಠತೆಯನ್ನು ಹೆಚ್ಚಿಸಿ, ನ್ಯಾಯಾಂಗದ ಘನತೆ ಗೌರವಗಳನ್ನು ದೇಶದಾದ್ಯಂತ ಹೆಚ್ಚಿಸಿ ಬೆಳೆದು ಬೆಳಗಿಸುವಲ್ಲಿ ಕಾರ್ಯತತ್ಪರರಾಗಿ ಪ್ರಜಾಪ್ರಭುತ್ವದಲ್ಲಿಯ ಪ್ರತಿಯೊಬ್ಬ ಜನಸಾಮಾನ್ಯರಿಂದ ನ್ಯಾಯಾಂಗದ ಬಗ್ಗೆ ಪೂಜ್ಯ ಭಾವನೆ ಉಂಟಾಗುವಂತೆ ವರ್ತಿಸಿ ಕಾರ್ಯನಿರ್ವಹಿಸಬೇಕು. ಅಂದರೆ ಮಾತ್ರ ನಮ್ಮ ದೇಶದ ನ್ಯಾಯಾಂಗ ಪ್ರಜಾಪ್ರಭುತ್ವದ ಒಂದು ಅವಿಚ್ಛಿನ್ನ ಅಂಗವಾಗಿ ಬೆಳೆಯಬೇಕು. ❑

ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಪ್ರಶ್ನಿಸುವದು ನ್ಯಾಯಾಂಗಕ್ಕೆ ಗಂಡಾಂತರ

ಯಾವುದೇ ಒಬ್ಬ ಅಧಿಕಾರಿ ತನಗೆ ಅಥವಾ ಇತರ ಯಾವೊಬ್ಬ ವ್ಯಕ್ತಿಗೆ ಯಾವುದೇ ಲಾಭ ಅಥವಾ ಅನುಕೂಲ ದೊರಕಿಸಿಕೊಳ್ಳಲು ಅಥವಾ ಇತರ ಯಾವೊಬ್ಬ ವ್ಯಕ್ತಿಗೆ ಅನುಚಿತವಾದ ಹಾನಿ ಅಥವಾ ತೊಂದರೆಯನ್ನುಂಟುಮಾಡಲು, ತನ್ನ ಅಧಿಕಾರ ಸ್ಥಾನವನ್ನು ದುರುಪಯೋಗಪಡಿಸಿಕೊಂಡಂತ ಅಥವಾ ಆಡಳಿತ ಪ್ರಕಾರ್ಯಗಳನ್ನು ಜಾರಿಮಾಡುವಲ್ಲಿ ಅಸಮಂಜಸವಾಗಿದ್ದರೆ ಹಾಗೂ ನ್ಯಾಯಪೂರ್ಣವಾಗಿಲ್ಲದಿದ್ದರೆ ಅನುಚಿತ ತಾರತಮ್ಯತೋರಿದ್ದರೆ ಆಡಳಿತ ವಿಧಾನ ಅಥವಾ ಪದ್ಧತಿ ಅನುಚಿತ ವಿಳಂಬದಿಂದ ಕೂಡಿದ್ದರೆ ಅಂಥ ಅಧಿಕಾರಿಯ ಮೇಲೆ ಲೋಕಾಯುಕ್ತ ಕಾನೂನಿನ ಪ್ರಕಾರ ಕ್ರಮತೆಗೆದುಕೊಳ್ಳಬಹುದಾಗಿದೆ. ಇಂಥಹ ಅಪರಾಧ ಮಾಡಿದ ಹಾಗೂ ಮಾಡುತ್ತಿರುವ ಬೇಜವ್ದಾರಿ ಅಧಿಕಾರಿಗಳು ಐ.ಎ.ಎಸ್. ವರ್ಗದ ಹಂತದವರೆಗೆ ಎಲ್ಲಾ ಹಂತಗಳಲ್ಲಿ ಇದ್ದಾರೆ. ತಮಗೆ ಬೇಕಾದ ವ್ಯಕ್ತಿ ಇದ್ದರೆ ಅವನು ಅಸಮರ್ಥನೇ ಇರಲಿ, ಅವನ ಮೇಲೆ ಗುರುತರ ಅಪವಾದಗಳೇ ಇರಲಿ, ಅಂಥವನಿಗೆ ಪ್ರಾಮಾಣಿಕ, ದಕ್ಷ ಹಾಗೂ ಕರ್ತವ್ಯ ನಿಷ್ಟ. ಅಧಿಕಾರಿಗಳನ್ನು ಕಡೆಗಣಿಸಿ, ಮೇಲಿನ ಹುದ್ದೆಗಳಿಗೆ ಬಡತಿ ಕೊಟ್ಟಿರುವ ಉದಾಹರಣೆಗಳು ರಾಜ್ಯದಲ್ಲಿ ಬೇಕಾದಷ್ಟು ಇವೆ. ತಮಗೆ ಬೇಕಾದ ವ್ಯಕ್ತಿಗೆ ಅನುಚಿತವಾಗಿ ಭಡ್ತಿ ಕೊಡಬೇಕಾಗಿದ್ದರೆ ಅಂತಹ ಸನ್ನಿವೇಶಗಳಲ್ಲಿ ಅಂಥ ಹುದ್ದೆಗಳನ್ನು ಅನಾವಶ್ಯಕವಾಗಿ ನಿರ್ಮಾಣಮಾಡಿ ಅಂಥ ಸ್ಥಾನಗಳಿಗೆ ಭಡ್ತಿ ಕೊಟ್ಟು ನೇಮಿಸಿದ ಉದಾಹರಣೆಗಳೂ ಇವೆ. ತಮಗೆ ಬೇಕಾದ ವ್ಯಕ್ತಿ ಇಲ್ಲವೆ ಬೇಡವಾದ ವ್ಯಕ್ತಿಯಿದ್ದರೆ, ಬಡ್ತಿಯ ಸ್ಥಾನಗಳಿದ್ದರೂ ಕುಂಟುನೇಪಮಾಡಿ ಅರ್ಹ ವ್ಯಕ್ತಿಗಳನ್ನು ಮೇಲ್ದರ್ಜೆಗೆ ಏರಿಸಿದ ಉದಾಹರಣೆಗಳೂ ಇವೆ. ಭ್ರಷ್ಟ ರಾಜಕಾರಣಿಗಳ ಕೃಪೆ ಪಡೆಯುವ ಸಲುವಾಗಿ ಅವರ ತಾಳಕ್ಕೆ ತಕ್ಕಂತೆ ನೀತಿ ನಿಯಮಗಳನ್ನು ಗಾಳಿಗೆ ತೂರಿ ಯೋಗ್ಯರಿಗೆ ಯೋಗ್ಯಸ್ಥಾನ ಕೊಡದೇ, ಅಯೋಗ್ಯರಿಗೆ ಯೋಗ್ಯಸ್ಥಾನಗಳನ್ನು ಕಲ್ಪಿಸಿರುವ ಹಾಗೂ ಕೊಟ್ಟಿರುವುದೂ ಉಂಟು. ಇಂಥಹ ಅಕ್ರಮ,

ಅನ್ಯಾಯ ಕಂಡು ಬಂದಾಗ ಅಂಥ ಆಕ್ರಮ, ಅನ್ಯಾಯಕ್ಕೆ ಆಸ್ಪದಕೊಟ್ಟ ಅಧಿಕಾರಿಯ ಮೇಲೆ ಸರಕಾರ ಯಾವುದೇ ಕ್ರಮ ತೆಗೆದುಕೊಳ್ಳದ ಉದಾಹರಣೆ ಸಹ ಇದೆ,. ಲೋಕಾಯುಕ್ತ, ತನಿಖಾ ಸಮಿತಿ ಹಾಗೂ ನ್ಯಾಯಾಲಯ ತೀರ್ಪು ಹಾಗೂ ತೀರ್ಮಾನ ಗಳನ್ನು ಲೆಕ್ಕಿಸದೇ ಧಿಕ್ಕರಿಸಿ ದಿಮಾಕುಮಾಡಿ ತಪ್ಪಿತಸ್ಥ ಅಧಿಕಾರಿಗಳಿಗೆ ಶಿಕ್ಷೆಯ ಬದಲು ಶ್ರೇಷ್ಠತೆಯನ್ನು, ಪ್ರಾಮಾಣಿಕ ಅಧಿಕಾರಿಗಳಿಗೆ ಶ್ರೇಷ್ಠತೆಯ ಬದಲು ಶಿಕ್ಷೆಯನ್ನು ಕೊಡಮಾಡಿರುವ ದೃಷ್ಟಾಂತಗಳೂ ನಮ್ಮ ದೇಶದಲ್ಲಿವೆ.

ಹಿರಿಯ ಎಂಜನೀಯರ್ ಟಿ.ಆರ್. ಧನಂಜಯ ಅವರಿಗೆ ಮುಖ್ಯ ಎಂಜನೀಯರ ಹುದ್ದೆ ಸೃಷ್ಟಿಸಿ, ಬಡ್ತಿ ನೀಡುವ ಮೂಲಕ ನೇಮಕ ಮಾಡಲು ಸುಪ್ರೀಮ್‌ಕೋರ್ಟ್ ಆಜ್ಞೆ ಮಾಡಿದ್ದರೂ ಆ ಆಜ್ಞೆಯನ್ನು ಜಾರಿಗೆ ಕೊಡುವಲ್ಲಿ ಶ್ರೀ ವಾಸುದೇವನ್‌ರವರು ಉದ್ದೇಶಪೂರ್ವಕವಾಗಿ ಅವಿಧೇಯತೆಯನ್ನು ತೋರಿಸಿ ಸರ್ವೋಚ್ಚ ನ್ಯಾಯಾಲಯದ ಆದೇಶವನ್ನು ಧಿಕ್ಕರಿಸುವುದರಿಂದ ಕ್ಷಮಾಯಾಚನೆಯ ಮಾತನ್ನು ತಿರಸ್ಕರಿಸಿ ಕಾರಾಗೃಹ ಶಿಕ್ಷೆಯನ್ನು ಕಾಯಂಗೊಳಿಸಿದ ಸರ್ವೋಚ್ಚ ನ್ಯಾಯಾಲಯದ ಅಂತಿಮ ತೀರ್ಮಾನ ಕ್ರಮ ಸೂಕ್ತ ಹಾಗೂ ಸರ್ವಶ್ರೇಷ್ಠವಾಗಿದ್ದು ಇದನ್ನು ರಾಜ್ಯ ಸರಕಾರ ಮನ್ನಿಸದೆ ಕಡೆ ಗಣಿಸಿದೆ. ಇದು ಸರಿಯಲ್ಲ. ಈ ತಪ್ಪಿತಸ್ಥ ಅಧಿಕಾರಿಯನ್ನು ವಜಾ ಮಾಡಿ ರಾಜ್ಯ ಸರಕಾರ ತನ್ನ ಪ್ರಾಮಾಣಿಕತೆಯನ್ನು ನ್ಯಾಯನಿಷ್ಠುರಿಯಾಗಿ ದಾಕ್ಷಿಣ್ಯಕ್ಕೊಳಗಾಗದೆ ತೋರಿಸಿಕೊಡುವದು ಕರ್ತವ್ಯ. ಇದನ್ನು ಬಿಟ್ಟು ಇಂಥ ಒಬ್ಬ ಕರ್ತವ್ಯ - ನಿಷ್ಟನಲ್ಲದ ಅಪರಾಧಿ ಅಧಿಕಾರಿಯನ್ನು ಅವನು ಅಪ್ರಾಮಾಣಿಕನಿದ್ದರೂ ಪ್ರಾಮಾಣಿಕನೆಂದು ವರ್ಣಿಸಿ ಅವನನ್ನು ರಕ್ಷಿಸಲು ವಿಧಾನ ಸಭೆಯಲ್ಲಿ ಚರ್ಚಿಸುವುದಾಗಲೀ ರಾಷ್ಟ್ರಪತಿಯವರಲ್ಲಿ ಮೊರೆಹೋಗುವುದಾಗಲೀ ಸರಕಾರಕ್ಕೆ ಸಲ್ಲದು.

ನಮ್ಮ ರಾಜ್ಯದಲ್ಲಿ ಸಹಸ್ರಾರು ನಿರಪರಾಧಿಗಳನ್ನು ಅಟ್ರಾಸಿಟಿ ಕಾನೂನಿನನ್ವಯ ಬಂಧಿಸಿ ಜಾಮೀನಿಗೆ ಸಹ ಅವಕಾಶಕೊಡದಂತೆ ಅವರು ಜೇಲಿನಲ್ಲಿ ಕೊಳೆಯುವಂತೆ ಮಾಡುವುದು ಹಾಗೂ ಅವರು ಆರೋಪವನ್ನು ಎದುರಿಸುತ್ತ ಹಲವಾರು ವರ್ಷ ಜಿಲ್ಲಾ ಕೋರ್ಟಿಗೆ ಎಡತಾಕುತ್ತ ತಮ್ಮ ದುಡಿಮೆಗೆ ಎರವಾಗವುದು, ಹಣ ವೆಚ್ಚ ಮಾಡುವದು, ಮಾನಸಿಕವಾಗಿ ಬಳಲುತ್ತಿರುವ ಸಹಸ್ರಾರು ಪ್ರಕರಣಗಳು ರಾಜ್ಯಾದ್ಯಂತ ಇದ್ದರೂ ಸರಕಾರ ಈ ನಿರಪರಾಧಿ ಪ್ರಾಮಾಣಿಕ ಗ್ರಾಮಾಂತರ ಜನತೆಯ ಬಗ್ಗೆ ಕಾಳಜಿ ವಹಿಸದಿರುವುದು ಒಂದು ಕಡೆಯಾದರೆ ಮತ್ತೊಂದು ಕಡೆ, ತಪ್ಪಿತಸ್ಥ ಅಧಿಕಾರಿಗಳನ್ನು ಕಂಡು ಹಿಡಿಯದೇ ಇರುವುದು, ಕಂಡು ಹಿಡಿದರೆ ಅವರನ್ನು ತನಿಖೆಗೆ ಒಳಪಡಿಸದೆ ಇರುವುದು, ಒಳಪಡಿಸಿ ದರೆ, ದಿನಮೇಕಮಾಡಿ ಅವರ ನಿವೃತ್ತಿಗೆ ಅವಕಾಶಕೊಡುವುದು, ತಪ್ಪಿತಸ್ಥನೆಂದಾದರೆ ಅವರಿಗೆ ಕ್ಷಮೆ ತೋರುವ ಹಾಗೂ ನ್ಯಾಯಾಲಯ, ನ್ಯಾಯಾಧಿಕಾರಣ ಹಾಗೂ

ಲೋಕಾಯುಕ್ತ ತೀರ್ಮಾನಗಳನ್ನು ಜಾರಿಗೊಳಿಸದೆ ತಪ್ಪಿತಸ್ಥರಿಗೆ ಅನುಚಿತ ರಕ್ಷಣೆಯನ್ನು ಸರಕಾರ ಕೊಡುವದು ನಡೆದೇ ಇದೆ. ಇದು ನಿಲ್ಲಬೇಕು. ಇದು ಸರಕಾರದ ಕೆಲಸವಲ್ಲ. ಸರಕಾರದ ಕೆಲಸ "ದುಷ್ಟ ಶಿಕ್ಷಂ, ಶಿಷ್ಟ ರಕ್ಷಣಂ" ಆಗಬೇಕು. ಅದನ್ನು ಬಿಟ್ಟು ನ್ಯಾಯಾಲಯಗಳ ಅಂತಿಮ ತೀರ್ಪನ್ನು ಧಿಕ್ಕರಿಸುವುದು ಸರಕಾರ ಕೂಡ ಕೋರ್ಟ್ ನಿಂದನೆ ಮಾಡಿದಂತಾಗುವುದು ಸುಸ್ಪಷ್ಟವಾಗುತ್ತದೆ. ಇದು ಸಮರ್ಥನೀಯವಲ್ಲ.

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳ ಪ್ರಕಾರ "ನ್ಯಾಯಾಲಯದ ವಿಚಾರಣೆಯಲ್ಲಿರುವ ಯಾವುದೇ ವಿಷಯಕ್ಕೆ ಸಂಬಂಧಿಸಿದ ವಿಷಯವನ್ನಾಗಲೀ ಅಥವಾ ನ್ಯಾಯಾಲಯದವರ ನ್ಯಾಯನಿರ್ಣಯಕ್ಕೆ ಒಳಪಟ್ಟಿರುವ ಯಾವ ವಿಷಯವನ್ನಾಗಲೀ ಅದನ್ನು ವಿಧಾನಸಭೆಯಲ್ಲಿ ಚರ್ಚಿಸಲಾಗದು ಹಾಗೂ ನಿರ್ಣಯದ ಮೂಲಕ ಏನನ್ನೂ ಅಂಗೀಕರಿಸಲು ಸಹ ಬರಲಾರದು. ಹೀಗಿರುವಾಗ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಎತ್ತಿ ಹಿಡಿಯುವದು ಶಾಸಕಾಂಗ, ನ್ಯಾಯಾಂಗ, ಕಾರ್ಯಾಂಗ ಹಾಗೂ ಪತ್ರಿಕಾಂಗದ ಹಿರಿಮೆಯಾಗುವುದು. ಸರ್ವೋಚ್ಚ ನ್ಯಾಯಾಲಯದ ಅಂತಿಮ ತೀರ್ಮಾನವನ್ನು ಪ್ರಶ್ನಿಸುವುದು ಈ ಆದೇಶದ ಸಂವಿಧಾನ ಬದ್ಧವಾದ ನ್ಯಾಯಾಂಗದ ಅಸ್ತಿತ್ವಕ್ಕೆ ಗಂಡಾಂತರ ಒಡ್ಡಿದಂತಾಗುತ್ತದೆ. ಹಾಗೂ ಈ ದೇಶದಲ್ಲಿಯ ಅಪಾರಾಧಿಗಳಿಗೆ ಪ್ರೋತ್ಸಾಹ ಹಾಗೂ ರಕ್ಷಣೆ ಕೊಟ್ಟು ನಿರಾಪರಾಧಿಗಳಿಗೆ ಕಿರುಕುಳ ಹಾಗೂ ಶಿಕ್ಷೆಯನ್ನು ಕೊಟ್ಟು ಸರಕಾರದ ಕೆಲಸ ದೇವರ ಕೆಲಸವಾಗುವುದರ ಬದಲು ದೆವ್ವದ ಕೆಲಸವಾದೀತು. ಸರಕಾರವು ಅಪರಾಧಿಗಳನ್ನು ನಿರಪರಾಧಿಗಳೆಂದು, ನಿರಾಪರಾಧಿಗಳು ಅಪರಾಧಿಯೆಂದು ಹೇಳುತ್ತ ಸಮರ್ಥಿಸುವದಾದರೆ ನಮ್ಮ ದೇಶದಲ್ಲಿ ನ್ಯಾಯಾಲಯಗಳಾಗಲೀ ಸರ್ವೋಚ್ಚ ನ್ಯಾಯಾಲಯವಾಗಲೀ ಈ ನ್ಯಾಯಾಂಗ ಇರಬೇಕಾದುದಾದರೂ ಏತಕ್ಕೆ? ಶಾಸಕಾಂಗ, ನ್ಯಾಯಾಂಗ, ಕಾರ್ಯಾಂಗ ಹಾಗೂ ಪತ್ರಿಕಾಂಗ ಈ ದೇಶದ ಸುವ್ಯವಸ್ಥಿತ ಆಡಳಿತ ಹಾಗೂ ಪ್ರಜಾಸತ್ತಾತ್ಮಕ ವ್ಯವಸ್ಥೆ ಬಗ್ಗೆ ಚಿಂತಿಸಿದರೇ ಈ ದೇಶಕ್ಕೆ ಹಿತಕರ."

❑

ನ್ಯಾಯಾಂಗಕ್ಕೆ ಸರಕಾರದ ಸಮದೃಷ್ಟಿ ಅಗತ್ಯ

ಪ್ರಜಾಪ್ರಭುತ್ವದಲ್ಲಿ ಶಾಂತಿ, ಸುವ್ಯವಸ್ಥೆ ಸಮರಸ, ಏಕತೆ, ಸೌಹಾರ್ದತೆ, ಸಮಗ್ರತೆ ಇತ್ಯಾದಿ ಮಾನವೀಯ ಮೌಲ್ಯಗಳನ್ನು ಕಾಪಾಡಿಕೊಂಡು ಜನಜೀವನ ಸಮಾಧಾನ, ನೆಮ್ಮದಿಯಿಂದಿರಲು ರಾಜ್ಯದಲ್ಲಿ ನ್ಯಾಯ ಪರಿಪಾಲನೆ ಅತ್ಯವಶ್ಯ, ಈ ನ್ಯಾಯ ಪರಿಪಾಲನೆಯನ್ನು ಪ್ರಜಾಪ್ರಭುತ್ವದ ಸಂಸದೀಯ ಅಂಗವಾದ ನ್ಯಾಯಾಂಗ ಮಾಡಬೇಕಾಗುತ್ತದೆ. ಈ ದಿಶೆಯಲ್ಲಿ ಶಾಸಕಾಂಗ ಹಾಗೂ ಕಾರ್ಯಾಂಗ (ಸರಕಾರ) ನ್ಯಾಯಾಂಗಕ್ಕೆ ತನ್ನ ಮಹತ್ಕಾರ್ಯವನ್ನು ಸಾಧಿಸಲು ಕಾನೂನುಗಳನ್ನು ಮಾಡುವುದೇ ಆಗಲೀ, ಕಾನೂನುಗಳನ್ನು ಕಾರ್ಯಗತ ಮಾಡುವುದೇ ಆಗಲೀ, ನ್ಯಾಯ ಪರಿಪಾಲನೆ ಮಾಡುವುದೇ ಆಗಲೀ, ಈ ಬಗ್ಗೆ ಅಗತ್ಯವಾದ ಏರ್ಪಾಡನ್ನು ಮಾಡಬೇಕಾಗುತ್ತದೆ ಹಾಗೂ ನ್ಯಾಯಾಂಗ ನಿರ್ಭೀತಿ, ನಿರ್ಭಿಡೆ, ನಿರ್ಭಯದಿಂದ ನಿಷ್ಪಕ್ಷಪಾತವಾಗಿ ಕಾರ್ಯ ನಿರ್ವಹಿಸುವಂತೆ ನೋಡಿಕೊಳ್ಳಬೇಕಾಗುತ್ತದೆ.

ಜನಜೀವನ ಬರುಬರುತ್ತ ಕಲುಷಿತಗೊಳ್ಳುತ್ತಿದೆ, ಶಾಂತಿ ಕದಡುತ್ತಿದೆ, ವೈಷಮ್ಯ ಹೆಚ್ಚುತ್ತಿದೆ, ಭ್ರಷ್ಟಾಚಾರ, ಪಕ್ಷಪಾತ, ಸ್ವಜನ ಪಕ್ಷಪಾತ, ದುರಾಡಳಿತ ದಿನದಿಂದ ದಿನಕ್ಕೆ ಬ್ರಹದಾಕಾರವಾಗುತ್ತಿದೆ. ಒಂದು ಕಡೆ ಬಡತನ ಮತ್ತೊಂದು ಕಡೆ ಶ್ರೀಮಂತಿಕೆ ಹೆಚ್ಚುತ್ತಿದೆ. ನಿರುದ್ಯೋಗ ಹೆಚ್ಚುತ್ತಿದೆ. ಕಳವು, ದರೋಡೆ, ಕೊಲೆ, ಸುಲಿಗೆ, ದೌರ್ಜನ್ಯಗಳು ಹೆಚ್ಚುತ್ತಿವೆ. 'ಏಕತೆ ಸಮಗ್ರತೆಗಳು ದೂರ ಸರಿಯುತ್ತಿವೆ. ರಾಜಕೀಯ ಪಕ್ಷಗಳ ಅನುಚಿತ ಪ್ರಭಾವದಿಂದ ಸಮಾಜದಲ್ಲಿ ಪಕ್ಷ ಪಂಗಡಗಳಾಗುತ್ತಿವೆ. ಸವರ್ಣೀಯರು ಹಾಗೂ ದಲಿತರ ನಡುವೆ ಅಂತರ ಹೆಚ್ಚಾಗುತ್ತಿದೆ. ಇವೆಲ್ಲವುಗಳ ದುಷ್ಪರಿಣಾಮವಾಗಿ ಸಾಮಾಜವಿಂದು ತತ್ತರಿಸುತ್ತಿದೆ,. ನ್ಯಾಯ ಸಿಗದೆ ವಂಚಿತವಾಗುತ್ತಿದೆ. ಸಮಾಜ ಒಡೆದು ಛಿತ್ರಛಿದ್ರವಾಗುತ್ತಿದೆ. ಈ ದಿಶೆಯಲ್ಲಿ ರಾಜಕೀಯ ಧುರೀಣರಾಗಲೀ, ಧಾರ್ಮಿಕ ಧುರೀಣರಾಗಲೀ ಕಿಂಚಿತ್ತು ಚಿಂತೆ ಮಾಡದೆ, ಸಮಾಜದ ಏಕತೆಗಾಗಿ ಪ್ರಾಮಾಣಿಕ ಪ್ರಯತ್ನ ಮಾಡದೆ, ಸಮಾಜದಲ್ಲಿ ಒಡಕುಂಟು ಮಾಡುತ್ತಿರುವುದು ಜನತೆಯ ದುರ್ದೈವ, ಈ ಸನ್ನಿವೇಶದಲ್ಲಿ ನ್ಯಾಯಕ್ಕಾಗಿ ನ್ಯಾಯಾಲಯಗಳ ಮೊರೆ ಹೋಗುವವರ ಸಂಖ್ಯೆ ದಿನದಿಂದ ದಿನಕ್ಕೆ ಅನಿವಾರ್ಯವಾಗಿ ಅಗತ್ಯವಾಗಿ ಹೆಚ್ಚಾಗುತ್ತಲೇ ಇದೆ. ಸರಕಾರದ

ಕಾರ್ಯ ವೈಖರಿ, ಸರಕಾರದ ತೀರ್ಮಾನದ ವಿರುದ್ಧ ಕೂಡ ನ್ಯಾಯಾಲಯಗಳಿಗೆ ಮೊರೆ ಹೋಗಲಾಗುತ್ತಿದೆ.'

ನ್ಯಾಯಾಂಗ ತನ್ನ ತೀರ್ಪುಗಳನ್ನು ನೀಡುವಲ್ಲಿ ನಿಷ್ಪಕ್ಷಪಾತಿಯಾಗಿ ಶಾಸಕಾಂಗ ಹಾಗೂ ಕಾರ್ಯಾಂಗದ ಭಿಡೆ ಮುದುವತ್ತು ಗಳಿಗೊಳಗಾಗದೆ "ನ್ಯಾಯಾಲಯವೇ ದೇವಾಲಯ" ವೆಂಬಂತೆ ಪ್ರಾಮಾಣಿಕವಾದ ತೀರ್ಪುಗಳನ್ನು ನೀಡಬೇಕಾಗುತ್ತದೆ. ತೀರ್ಪು ನೀಡುವಲ್ಲಿ ದೀರ್ಘ ಕಾಲ ತಗೆದುಕೊಳ್ಳದೆ ಸಕಾಲದಲ್ಲಿ ಶೀಘ್ರವಾಗಿ ಕಾರ್ಯ ನಿರ್ವಹಿಸಬೇಕಾಗುತ್ತದೆ. "ಡೇನಿಯಲ್ ಹ್ಯಾಲ್ಲ ಕಲ್ ಟು ಜಜ್ಜಮೆಂಟ್" ಎಂದಾಗ ಬೇಕಾಗುತ್ತದೆಯೇ ಹೊರತು "ಜಸ್ಟೀಸ್ ಡಿಲೇಡ್ ಜಸ್ಟೀಸ್ ಡಿನಾಯಡ್" ಎಂದಾಗ ಬಾರದು. ನಮ್ಮ ರಾಷ್ಟ್ರದಲ್ಲಿ ಸರಕಾರಗಳು ಬದಲಾಗಬಹುದು. ಒಂದೊಂದು ಸರಕಾರದ ಧೋರಣೆ ಒಂದೊಂದು ರೀತಿಯಾಗಬಹುದು. ಆದರೆ ನ್ಯಾಯಾಂಗ ಬದಲಾಗದು. ಅದು ತನ್ನದೆ ಆದ ನ್ಯಾಯಾಂಗದ ಮೌಲ್ಯಗಳನ್ನಾಧರಿಸಿ ಕಾರ್ಯ ನಿರ್ವಹಿಸುತ್ತದೆ. ಯಾವುದೇ ಸರಕಾರವಿರಲಿ ಆ ಸರಕಾರ ನ್ಯಾಯಾಂಗಕ್ಕೆ, ಸಮರ್ಥ ರೀತಿಯಲ್ಲಿ ತ್ವರಿತವಾದ ರೀತಿಯಲ್ಲಿ ಕಾರ್ಯನಿರ್ವಹಿಸಲು ಸಾಕಷ್ಟು ಅನುದಾನವನ್ನು ಪ್ರತಿವರ್ಷ ಕೊಡಲೇಬೇಕು. ಆದರೆ ಕೊಡುತ್ತಿಲ್ಲ. ನಮ್ಮ ರಾಜ್ಯದ ಬಗ್ಗೆ ಹೇಳುವುದಾದರೆ 1990-91 ರಿಂದ 93-94ರ ಈ ನಾಲ್ಕು ವರ್ಷಗಳ ಅವಧಿಯಲ್ಲಿ ನ್ಯಾಯಾ ಪರಿಪಾಲನೆಗೆ ನಿಗದಿಗೊಳಿಸಿದ ಮೊತ್ತವನ್ನು ಸಂಪೂರ್ಣವಾಗಿ ವೆಚ್ಚ ಮಾಡದೆ 15.90 ಕೋಟಿ ಮೊತ್ತವನ್ನು ವೆಚ್ಚಮಾಡದೆ ಉಳಿಸಲಾಗಿದೆ. ರಾಜ್ಯದಲ್ಲಿ ಎಲ್ಲಾ ಅಧೀನ ನ್ಯಾಯಾಲಯಗಳ ಸಿವಿಲ್ ಮತ್ತು ಕ್ರಿಮಿನಲ್ ಕೇಸುಗಳ ದಾಖಲೆ ಸಂಖ್ಯೆ 1993ರಲ್ಲಿ 6,97,341 ಆಗಿದ್ದರೆ, 1994ರಲ್ಲಿ 7,55,641 ಕ್ಕೆ ಏರಿದೆ. 31-12-93ಕ್ಕೆ 10,91,113 ಕೇಸುಗಳು ಬಾಕಿ ಇದ್ದರೆ 31-12-94ಕ್ಕೆ ಈ ಬಾಕಿ ಸಂಖ್ಯೆ 11,75,883ಕ್ಕೆ ಏರಿದೆ. 1993ರಲ್ಲಿ 8,11,861 ಕೇಸುಗಳು ಇತ್ಯರ್ಥವಾಗಿದ್ದು, 1994ರಲ್ಲಿ 6,70,951 ಕೇಸುಗಳು ಇತ್ಯರ್ಥವಾಗಿದ್ದು ನ್ಯಾಯಾಂಗದ ಸೂಕ್ತವಾದ ಸಾಧನೆಯನ್ನು ಎತ್ತಿತೋರಿಸುತ್ತದೆ. ತಾಲ್ಲೂಕ ಮಟ್ಟದ ಮುನ್ಸೀಫ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಿಂದ ಹಿಡಿದು ಉಚ್ಚನ್ಯಾಯಾಲಯದವರೆಗಿನ ಎಲ್ಲಾ ವಿವಿಧ ನ್ಯಾಯಾಲಯಗಳ ಬಾಕಿ ಇರುವ ವಿವಿಧ ಕೇಸುಗಳ ಸಂಖ್ಯೆ ತಾರೀಖು 1-1-95ಕ್ಕೆ ಸುಮಾರು 13,32,398, ಇರುತ್ತದೆ. 30-6-96ಕ್ಕೆ 5 ವರ್ಷಗಳಿಂದ ಇತ್ಯರ್ಥವಾಗದೆ ಬಾಕಿಯಾಗಿರುವ ಕ್ರಿಮಿನಲ್ ಕೇಸುಗಳ ಸಂಖ್ಯೆ 17,414 ಇದೆ. ರಾಜ್ಯದ ಎಲ್ಲಾ ತಾಲ್ಲೂಕುಗಳಿಗೆ ಒಂದೊಂದು ಮುನ್ಸೀಫ್ ಮಾಜಿಸ್ಟ್ರೇಟ್ ಕೊಡುವ ಸರಕಾರಿ ಧೋರಣೆಯಂತೆ ಇನ್ನುಳಿದ ಕೇವಲ 7 ಅಥವಾ 8 ತಾಲ್ಲೂಕುಗಳಿಗೆ, ಈ ಕೋರ್ಟುಗಳನ್ನು ಆದಷ್ಟು ಶೀಘ್ರವಾಗಿ ಸರಕಾರ ಕೊಡುವುದು ಲೇಸು. ಈಗಿರುವ ಎಲ್ಲಾ ಹಂತದ ನ್ಯಾಯಾಧೀಶರ ಸಂಖ್ಯೆಯನ್ನು ಹೆಚ್ಚಿಸುವುದು ಅತ್ಯವಶ್ಯವಿದೆ. ಖಾಲಿಯಿದ್ದ ಹುದ್ದೆಗಳನ್ನು ತುಂಬುವುದು ಅವಶ್ಯವಿದೆ. ರಾಜ್ಯದ ಎಲ್ಲಾ ಹಂತದ ನ್ಯಾಯವಾದಿಗಳ ಸಂಘಗಳಿಗೆ ತಾಲ್ಲೂಕು ಮಟ್ಟದಲ್ಲಿ ತಲಾ 4,500-00 ರೂಪಾಯಿ ರೆವೆನ್ಯೂ ಡಿವಿಜಲ್

ಸಂಘಕ್ಕೆ 25,000-00 ಹೀಗೆ ಬೇರೆ ಬೇರೆ ಹಂತದ ಸಂಘಗಳಿಗೆ ಬೇರೆ ಬೇರೆ ಮೊತ್ತವನ್ನು ಪ್ರತಿವರ್ಷ ಅನುದಾನವಾಗಿ ಕೊಡಬೇಕೆಂದು 1993ರಲ್ಲಿಯೇ ಸರಕಾರ ತೀರ್ಮಾನ ತೆಗೆದುಕೊಂಡು ಆಜ್ಞೆ ಹೊರಡಿಸಿದ್ದರೂ ಈ ಅನುದನದ ಅನುಷ್ಠಾನವಾಗಿಲ್ಲ. ಈಗಲಾದರೂ ಸರಕಾರ ಈ ಅನುದನವನ್ನು ಅನುಷ್ಠಾನ ಮಾಡಲೇಬೇಕು. ಎಷ್ಟೋ ಕೋರ್ಟುಗಳಿಗೆ ಉತ್ತಮವಾದ ಅವಶ್ಯಕವಾದ ಫರ್ನೀಚರಗಳಿಲ್ಲ, ಸುಸಜ್ಜಿತವಾದ ಗ್ರಂಥಾಲಯಗಳಿಲ್ಲ ಸ್ವಂತ ಕಟ್ಟಡಗಳಿಲ್ಲ. ಅನೇಕ ನ್ಯಾಯಾಧೀಶರುಗಳಿಗೆ ವಾಸಕ್ಕಾಗಿ ಸರಕಾರಿ ಕಟ್ಟಡಗಳಿಲ್ಲ, ನ್ಯಾಯಾಧೀಶರಿಗೆ, ವಕೀಲರಿಗೆ, ಕಕ್ಷಿದಾರರಿಗೆ ವಿವಿಧ ಸವಲತ್ತನ್ನು ಒದಗಿಸುವುದು ಸರಕಾರದ ಕರ್ತವ್ಯ. ಬಾಕಿ ಕೇಸುಗಳನ್ನು ಇತ್ಯರ್ಥಗೊಳಿಸಲು ಗುತ್ತಿಗೆ ಆಧಾರದ ಮೇಲೆ ನ್ಯಾಯಾಧೀಶರನ್ನು ನೇಮಿಸಿಕೊಂಡು ಮುಕ್ತಾಯಗೊಳಿಸಬೇಕೇ ಹೊರತು ಬಾಕಿ ಇರುವ ಕೇಸುಗಳ ಸಂಖ್ಯೆ ಇಳಿಸಲು ಕೇಸುಗಳನ್ನು ಪರತ ತೆಗೆದುಕೊಳ್ಳುವ ಧೋರಣೆ ಸರಕಾರಕ್ಕೆ ಭೂಷಣವಲ್ಲ. ಬೇರೆ ಬೇರೆ ಇಲಾಖೆಗಳಲ್ಲಿ ಅವಶ್ಯವಿಲ್ಲದಿದ್ದರೂ ಹೆಚ್ಚಿನ ಹುದ್ದೆಗಳನ್ನು ಅನಾವಶ್ಯಕವಾಗಿ ನಿರ್ಮಿಸಿ ಹಾಗೂ ಅನಾವಶ್ಯಕವಾಗಿ ಬಡ್ತಿ ಕೊಡುತ್ತ ಸಿಬ್ಬಂದಿ ಸಂಖ್ಯೆಯನ್ನು ಸರಕಾರ ವರ್ಷದಿಂದ ವರ್ಷಕ್ಕೆ ಹೆಚ್ಚಿಸುತ್ತಿರುವಾಗ ನ್ಯಾಯಾಂಗ ಇಲಾಖೆಯಲ್ಲಿ ಸಾಕಷ್ಟು ಕೇಸುಗಳು ಬಾಕಿ ಇರುವಾಗ ಹಾಗೂ ಪ್ರತಿವರ್ಷ ಕೇಸುಗಳ ದಾಖಲೆ ಹೆಚ್ಚುತ್ತಿರುವಾಗ ಈ ಇಲಾಖೆಯಲ್ಲಿ ಹೆಚ್ಚೆಚ್ಚು ಅಗತ್ಯ ಹಾಗೂ ಅವಶ್ಯಕವಾದ ಹುದ್ದೆಗಳನ್ನು ನಿರ್ಮಿಸಿ ಹೆಚ್ಚೆಚ್ಚು ಬಡ್ತಿಯನು ಕೊಟ್ಟು ನೊಂದವರಿಗೆ ನಿಗದಿತ ವೇಳೆಯಲ್ಲಿ ನ್ಯಾಯ ಸಿಗುವಂತೆ ಮಾಡುವುದು ಹಾಗೂ ನ್ಯಾಯಾಂಗಕ್ಕೆ ಹೆಚಿಚ್ಚು ಅನುದನ ನಿಗದಿಪಡಿಸಿ ಸಂಪೂರ್ಣವಾಗಿ ವೆಚ್ಚ ಮಾಡುವುದು ಸರಕಾರದ ಆದ್ಯಕರ್ತವ್ಯ. ರಾಜ್ಯಾದ್ಯಂತ ಎಲ್ಲಾ ಹಂತದಲ್ಲಿ ಉಚಿತ ಕಾನೂನು ನೆರವು ಸಮಿತಿಗಳಿಗೆ ಸಹ ಸಮಂಜಸವಾದ ನೆರವನ್ನು ಕೊಟ್ಟು ಅವುಗಳ ಉದ್ದೇಶ ಬಹಳ ಸಹಾಯಕಾರಿ ಇರುವದರಿಂದ ಅವುಗಳು ಪರಿಣಾಮಕಾರಿ ಹೊಂದಿದ ಉದ್ದೇಶವನ್ನು ಅನುಷ್ಠಾನ ಮಾಡಿ ಸೌಹಾರ್ದತೆಯನ್ನು ಸಮಾಜದಲ್ಲಿ ಉಂಟುಮಾಡಲು ಸರಕಾರ ಮುತುವರ್ಜಿ ವಹಿಸುವುದು ಕೂಡ ಅಗತ್ಯವಿದೆ. ಯಾವ ರೀತಿಯಿಂದಲೂ ನ್ಯಾಯಾಂಗವನ್ನು ಹಾಗೂ ನ್ಯಾಯಾಂಗದ ನಿರ್ಣಯಗಳನ್ನು ನಿರ್ಲಕ್ಷಿಸುವುದು ಸರಕಾರಕ್ಕೆ ಭೂಷಣವಲ್ಲ, ನ್ಯಾಯಾಂಗ ನಿರ್ಲಿಪ್ತವಾಗಿ ಸರಕಾರದ ಯಾವುದೇ ಅನುಚಿತ ಹಸ್ತಕ್ಷೇಪದಿಂದ ದೂರವಿದ್ದು ನಿರ್ಭೀತಿಯಿಂದ ನ್ಯಾಯ ನಿರ್ಣಯ ಕೊಡುವಲ್ಲಿ ಸರಕಾರ ಆಸ್ಪದ ಮಾಡಿಕೊಡಬೇಕೇ ಹೊರತು ಯಾವುದೇ ಸಂಶಯಕ್ಕೆ ಎಡೆಮಾಡಕೂಡದು, ಈ ದಿಶೆಯಲ್ಲಿ ಸರಕಾರ ಎಚ್ಚರಿಕೆ ವಹಿಸುವುದು ಕೂಡ ಅತ್ಯಗತ್ಯ.

❑

ನ್ಯಾಯಾಲಯವೇ ದೇವಾಲಯ

ಪುರಾತರ ಕಾಲದಲ್ಲಿ ದೇವಾಲಯವೇ ನ್ಯಾಯಾಲಯಗಳೆಂದು ಜನತೆಯ ಭಾವನೆಗಳಾಗಿತ್ತು. ಭಾರತ ದೇಶದಲ್ಲಿಯ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರಾಗಿದ್ದ ಹಿಂದುಗಳೆಲ್ಲರೂ ತಮಗೆ ಅನ್ಯಾಯವಾದಾಗ ನ್ಯಾಯಕ್ಕಾಗಿ ಹಾಗೂ ತಮ್ಮ ಒಳಿತಿಗಾಗಿ ದೇವಾಲಯಗಳಿಗೆ ಮೊರೆ ಹೋಗುತ್ತಿದ್ದರು. ದೇವಾಲಯಗಳಲ್ಲಿ ದೇವರ ಸಾನಿಧ್ಯ ಅಥವಾ ಸನ್ನಿಧಾನದಲ್ಲಿ ಪಂಚಶ್ರೇಷ್ಠರಿಂದ ನ್ಯಾಯ - ಅನ್ಯಾಯಗಳನ್ನು ಇತ್ಯರ್ಥಗೊಳಿಸಿ ದೇವಾಲಯದ ದೇವರಲ್ಲಿ ತಪ್ಪು ಮಾಡಿದವರು ಇನ್ನೊಮ್ಮೆ ಆ ತಪ್ಪನ್ನು ಮಾಡುವದಿಲ್ಲವೆಂದು ವಾಕ್ ಪ್ರಮಾಣ ಮಾಡಿ ಗಂಟೆಯನ್ನು ಹೊಡೆಯುವ ಸತ್ ಸಂಪ್ರದಾಯವಿತ್ತು. ಈ ಸಂಪ್ರದಾಯ ಇಂದಿಗೂ ಅನೇಕ ಕಡೆ ನಡೆಯುತ್ತಲಿದೆ. ಪಂಚ ಮಹಾಪುರುಷರು ಸಹ ನ್ಯಾಯ, ನೀತಿ, ನಿಷ್ಠೆ, ಸತ್ಯ, ಆಚಾರ, ಅನುಕಂಪ, ದಯೆ ಇತ್ಯಾದಿ ಧಾರ್ಮಿಕ ಮೌಲ್ಯಗಳ ಚೌಕಟ್ಟಿನಲ್ಲಿಯೇ ತಮ್ಮ ತೀರ್ಪುಗಳನ್ನು ದೇವರ ಸಮಕ್ಷಮ ಕೊಡುತ್ತಲೇ ಇದ್ದರೂ ತಪ್ಪಿತಸ್ಥ ದೇವರ ಹೆಸರಿನಲ್ಲಿ ಪ್ರಮಾಣ ಮಾಡಿ ಮುಂದೆ ಆ ತಪ್ಪನ್ನು ಮಾಡುವುದಿಲ್ಲವೆಂದು ಗಂಟೆ ಹೊಡೆದು ಹೋಗಿ ಮತ್ತೆ ಅದೇ ತಪ್ಪನ್ನು ಮಾಡಿದರೆ ಅಂಥಹ ವ್ಯಕ್ತಿಗಳು ಅವರೆಷ್ಟೇ ದೊಡ್ಡವರಿರಲಿ ಅವರು ಮುಂದಿನ ಜನ್ಮದಲ್ಲಿ, ನರಿ, ನಾಯಿ, ಹಂದಿ, ಕೋಳಿಗಳಾಗಿ ಹುಟ್ಟಿ ಕೀಳು ಜೀವನ ಮಾಡಲು ದೇವರು ಅವರಿಗೆ ಶಾಪ ಕೊಡುತ್ತಾನೆಂಬ ಹಾಗೂ ಹಂದಿ, ಕೋಳಿಗಳನ್ನು ಹೊಯ್ದು ತಿನ್ನುತ್ತಾರೆಂಬ ಭಾವನೆ ಅಂದೂ ಇತ್ತು, ಈಗಲೂ ಕೂಡ ಆ ಭಾವನೆ ಇದೆ. ಈಗಲೂ ಕೂಡ ಭ್ರಷ್ಟಾಚಾರ, ಪಕ್ಷಪಾತ, ಸ್ವಜನ ಪಕ್ಷಪಾತ, ಅಧಿಕಾರ ದುರುಪಯೋಗ, ದುರಾಡಳಿತ ಪಂಚಾಪರಾಧ ಮಾಡಿದ ಯಾವುದೇ ಮಹಾನ್ ರಾಜಕೀಯ ಮುಖಂಡನೇ ಇರಲಿ ಧಾರ್ಮಿಕ ಮುಖಂಡನೇ ಇರಲೀ ಅವರೆಲ್ಲರೂ ನ್ಯಾಯಾಲಯದ ಶಿಕ್ಷೆಗೆ ಗುರಿಪಡಲಿ ಬಿಡಲಿ, ಅವರೆಲ್ಲಾ ಅವರು ಮಾಡಿದ ಸಾರ್ವಜನಿಕ ಅಪರಾಧಕ್ಕಾಗಲೀ ಅಥವಾ ಧಾರ್ಮಿಕ ಮೌಲ್ಯಗಳನ್ನು ಉಲ್ಲಂಘಿಸಿದ ಅಪರಾಧಕ್ಕಾಗಲೀ ಆ ಅಪರಾಧಿಗಳು ತಾವು ಮಡಿದ ನಂತರ ಮಹಾ ಮಾನವನಾಗಿ ಮತ್ತೆ ಜನಿಸದೆ ನಾಯಿ, ನರಿ, ಹಂದಿ, ಕೋಳಿಗಳಾಗಿ ಹುಟ್ಟಬಂದು ಬಾಳುತ್ತ ಮಾನವ ಸಮಾಜ ಹಾಗೂ ಜನತೆಗೆ ಎಸಗಿದ

ಪಾಪದ ಫಲವಾಗಿ ಶಿಕ್ಷೆ ಅನುಭವಿಸುವ ಜೀವಂತ ಉದಾಹರಣೆಗಳನ್ನು ಕಾಣಬಹುದಾಗಿದೆ. ಈ ಜ್ವಲಂತ ನಿದರ್ಶನವನ್ನು ಪ್ರಜಾರಾಜರಾದ ರಾಜಕೀಯ ದುರೀಣರಾದ ನಾವೆಲ್ಲ ಅರಿತು ಪಂಚಾಪರಾಧಗಳನ್ನು ಎಸಗದೆ ಧರ್ಮ ಶೀಲರಾಗಿ ಮುನ್ನಡೆಯುವದು ಅಗತ್ಯ, ಅನಿವಾರ್ಯ. ನಮ್ಮ ರಾಷ್ಟ್ರದಲ್ಲಿರುವ ಮತಾಂತರಿಗಳಾದ ಮುಸ್ಲಿಮರೇ ಇರಲಿ, ಕ್ರಿಶ್ಚಿಯನರೇ ಇರಲಿ, ಬೌದ್ಧರೇ ಇರಲಿ, ಅವರೆಲ್ಲರೂ ಹಿಂದುಗಳ ರಕ್ತ ಸಂಬಂಧಿಗಳೇ ಇರುವರೆಂಬುದನ್ನು ಈಗಲೂ ಗ್ರಾಮಾಂತರ ಪ್ರದೇಶದಲ್ಲಿ ಹಿಂದು - ಮುಸ್ಲಿಂ - ಕ್ರಿಶ್ಚಿಯನ್‌ರೆಲ್ಲರೂ ಅವರವರ ಧಾರ್ಮಿಕ ಹಾಗೂ ದೇವರ ಕಾರ್ಯಗಳಲ್ಲಿ ಎಲ್ಲರೂ ಭಾಗವಹಿಸಿ ಭ್ರಾತೃಭಾವನೆಯಿಂದ ಶಾಂತ ಜೀವನವನ್ನು ನಡೆಸುತ್ತಿರುವ ಹಾಗೂ ನಡೆದು ಬಂದಿರುವ ಸತ್‌ಸಂಪ್ರದಾಯಗಳನ್ನು ಅರಿತು ಅವುಗಳಿಗೆ ತಿಲಾಂಜಲಿ ಅಥವಾ ಹುಳಿ ಹಿಂಡಿ ಕಹಿ ವಾತಾವರಣವನ್ನುಂಟುಮಾಡುವ ಹೇಯ ಕಾರ್ಯವನ್ನು ಯಾವುದೇ, ರಾಜಕೀಯ ಹಾಗೂ ಧಾರ್ಮಿಕ ಮುಖಂಡರು ಮಾಡುವುದು ಸರಿಯಲ್ಲ. 'ನಾಮ ಹಲವು ದೇವನೊಬ್ಬನೆ' ಎಂಬುದನ್ನು ಎಲ್ಲಾ ಭಾರತೀಯರು ಅರಿತು ತಮ್ಮ ತಮ್ಮ ದೇವರು ಹಾಗೂ ದೇವಾಲಯಗಳಲ್ಲಿ ಭಯ, ಭಕ್ತಿ, ಶ್ರದ್ಧೆ, ನಿಷ್ಠೆಗಳಿಂದ ನಡೆಯುವದಗತ್ಯ.

ಗ್ರೇಟ್ ಬ್ರಿಟನ್‌ದಲ್ಲಿಯ ಬ್ರಿಟೀಶರು ಕೂಡಿ ದೇವರಲ್ಲಿ ಭಯ ಭಕ್ತಿ ನಿಷ್ಠೆಯಿಂದ ನಡೆದುಕೊಳ್ಳುತ್ತ "ಗಾಡ್ ಈಸ್ ಗ್ರೇಟ್" ಎಂದೆನ್ನುತ್ತ ಸಾಕಷ್ಟು ದೇವಾಲಯಗಳನ್ನು ರಚಿಸುತ್ತ ದೇವರ ಆರಾಧನೆಯನ್ನು ಮಾಡುತ್ತಲೇ ಇದ್ದಾರೆ. ಅನೇಕ ಭಿನ್ನಾಭಿಪ್ರಾಯ ಹಾಗೂ ನ್ಯಾಯ - ಅನ್ಯಾಯಗಳನ್ನು ದೇವಾಲಯಗಳಲ್ಲಿ ಬಗೆಹರಿಸಿಕೊಳ್ಳುತ್ತಿರುವುದಲ್ಲದೆ ನ್ಯಾಯ ಪರಿಪಾಲನೆಗಾಗಿ, ಹಕ್ಕುಗಳ ಸಾಧನೆಗಾಗಿ ದುಷ್ಟರ ಶಿಕ್ಷೆಗಾಗಿ, ಶಿಷ್ಟರ ರಕ್ಷಣೆಗಾಗಿ ಬ್ರಿಟನ್ ದೇಶಾದ್ಯಂತ ನ್ಯಾಯಾಲಗಳ ಸ್ಥಾಪನೆಗಳಾಗಿ ಅಲ್ಲಿ ನ್ಯಾಯಾಧೀಶರಿಂದ ವಿಚಾರಣೆ ನಂತರ ತೀರ್ಮಾನಗಳು ಶತಮಾನಗಳಿಂದ ಹೊರಬರುತ್ತಿರುವ ಉದಾಹರಣೆಗಳನ್ನು ಕಂಡಿದ್ದೇವೆ ಹಾಗೂ ಕೇಳಿದ್ದೇವೆ, ಅದೇ ಸಂಪ್ರದಾಯದಂತೆ ಬ್ರಿಟಿಷ ಸರಕಾರ ಭಾರತದಲ್ಲಿ ವ್ಹಿಲೇಜ್ ಮುನ್ಸಿಫರಿಂದ ಹಿಡಿದು ತಾಲ್ಲೂಕು, ಜಿಲ್ಲಾ, ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ವಿವಿಧ ನ್ಯಾಯಾಲಯಗಳನ್ನು ಸ್ಥಾಪಿಸಿ ರಾಷ್ಟ್ರ, ನ್ಯಾಯಾಲಯದ ಮೇಲೆ ಪ್ರಿವಿಕೌನ್ಸಿಲ್ ನ್ಯಾಯಾಲಯವನ್ನು ಲಂಡನ್‌ನಲ್ಲಿ ಸ್ಥಾಪಿಸಿ ಭಾರತ ದೇಶಕ್ಕೆ ನ್ಯಾಯವನ್ನೊದಗಿಸಿಕೊಡುವಲ್ಲಿ ಬ್ರಿಟಿಷ್ ಸರಕಾರವು ಒಳ್ಳೇ ಸಂಪ್ರದಾಯವನ್ನು ಹಾಕಿ ಸ್ವಾತಂತ್ರ್ಯ ನಂತರ ಪ್ರಿವಿಕೌನ್ಸಿಲ್ ತನ್ನ ವ್ಯಾಪ್ತಿನ್ನು ಕಳೆದುಕೊಂಡು ಈಗ ದೇಶಾದ್ಯಂತ ತಾಲ್ಲೂಕು, ಜಿಲ್ಲಾ, ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ವಿವಿಧ ಹಂತದ ನ್ಯಾಯಾಲಯಗಳು ಸ್ಥಾಪಿತವಾಗಿ, ನ್ಯಾಯಾಲಯವೇ ದೇವಾಲಯ''ಗಳಾಗಿ ದೇಶದ ಜನತೆಗೆ ನ್ಯಾಯವನ್ನು ಪ್ರಾಮಾಣಿಕವಾಗಿ ಪಂಚಾಪರಾಧದವರಿಗೆ ಹಾಗೂ ಇತರ ಅಪರಾಧ ಮಾಡಿದವರಿಗೆ ತಕ್ಕ ಶಿಕ್ಷೆ ಕೊಟ್ಟು, ಮೊರೆ ಹೋದವರಗೆ ನ್ಯಾಯವನ್ನೊದಗಿಸಿ ಕೊಟ್ಟು "ದುಷ್ಟ ಶಿಕ್ಷಂ ಶಿಷ್ಟ ರಕ್ಷಂ" ಎಂಬಂತೆ ಕಾರ್ಯನಿರ್ವಹಿಸುತ್ತಿರುವದು ಭಾರತೀಯರ ಸುದೈವ. ನಮ್ಮ ರಾಷ್ಟ್ರದಲ್ಲಿಯ ಶಾಸಕಾಂಗ,

ನ್ಯಾಯಾಂಗ, ಕಾರ್ಯಾಂಗ ಹಾಗೂ ಪತ್ರಿಕಾಂಗ ಈ ಎಲ್ಲಾ ಅಂಗಗಳು ದುಷ್ಟ ಶಿಕ್ಷಂ ಶಿಷ್ಟ ರಕ್ಷಂ ತತ್ವಗಳನ್ನು ಅನುಷ್ಠಾನಗೊಳಿಸಬೇಕೇ ಹೊರತು "ದುಷ್ಟ ರಕ್ಷಂ ಶಿಷ್ಟ ಶಿಕ್ಷಂ" ಗಳತ್ತ ಹೊರಳಿನೋಡಬಾರದು. ಆದರೆ ಕಾರ್ಯಾಂಗ ಹಾದಿ ತಪ್ಪಿತ್ತಿರುವುದು ಅಲ್ಲಲ್ಲಿ ಕಂಡು ಬರುತ್ತಿದೆ. ಶಾಸಕಾಂಗವಾಗಲೀ ಕಾರ್ಯಾಂಗವಾಗಲೀ ನ್ಯಾಯಾಂಗದಲ್ಲಿ ಮೂಗು ತೂರಿಸುವುದಾಗಲೀ, ಹಣಿಕಿ ಹಾಕುವುದಾಗಲೀ ಮಾಡಿ ಅನುಚಿತ ಹಸ್ತಕ್ಷೇಪ ಮಾಡಲಿಕ್ಕೆ ಹವಣಿಸುವುದು ಗಂಡಾಂತರಕಾರಿ. ಸರಕಾರ ಮಾಡಿದ ತಪ್ಪುಗಳನ್ನೇ ಗಣನೆಗೆ ತೆಗೆದುಕೊಂಡು ಸಾರ್ವಜನಿಕ ಹಿತಾಸಕ್ತಿಯ ಅರ್ಜಿಗಳಿಗೆ ನ್ಯಾಯಾಲಯಗಳು ಪ್ರೋತ್ಸಾಹ ಕೊಡುತ್ತಿರುವುದು ಶುಭ ಚಿನ್ಹೆಯಾಗಿದೆ. ಸರಕಾರದ ಕೆಲಸ ದೇವರ ಕೆಲಸವಾಗದೆ ದೈತ್ಯ ರಾಕ್ಷಸನ ಕರ್ಮವಾದಾಗ ನ್ಯಾಯಾಲಯಗಳ ಪ್ರವೇಶ ಅನಿವಾರ್ಯ. ಕಾರ್ಯಾಂಗದ ಅಧಿಕಾರಿಗಳ ವರ್ಗಾವಣೆಯಲ್ಲಿ ನೀತಿ ನಿಯಮಗಳನ್ನು ಗಾಳಿಗೆ ತೂರಿ ರಾಜಕಾರಣಿ ಹಾಗೂ ಧರ್ಮಕಾರಣಿಗಳ ಇಷ್ಟದಂತೆ ತಮಗೆ ಬೇಕಾದವರನ್ನು ತಮಗೆ ಬೇಕಾದಲ್ಲಿಗೆ ಹಾಕಿಸಿಕೊಂಡು ಪಂಚಾಪರಾಧವನ್ನು ಮಾಡುವುದು, ತಮಗೆ ಬೇಡಾದವರನ್ನು ಹಾಗೂ ತಮಗೆ ಕಪ್ಪ ಕಾಣಿಕೆ ಕೊಡದೆ ಬಹುಪಾಲು ನೌಕರರನ್ನು ಅವರ ವರ್ಗಾವಣೆ ಮಾಗಣಿಗೆ ಬೆಲೆ ಕೊಡದೆ ಅವರಿಗೆ ಅನುಕೂಲವಲ್ಲದ ಸ್ಥಳಗಳಿಗೆ ಕಳಿಸಿ ಅವರಿಗೆ ಹಾಗೂ ಅವರ ಕುಟುಂಬಗಳಿಗೆ ಮಾನಸಿಕ ಹಿಂಸೆ ಕೊಡುತ್ತಿರುವುದು, ತಮಗೆ ಬೇಕಾದ ನೌಕರರನ್ನು ತಮ್ಮ ತಾಳಕ್ಕೆ ತಕ್ಕಂತೆ ಕುಣಿದು ಮಾಡಬಾರದು ಮಾಡಿ ಲೋಕಾಯುಕ್ತ ಕಾನೂನದಲ್ಲಿ ಕಂಡು ಬರುವ ಆಪಾದನೆ ದುರಾಡಳಿತಗಳನ್ನೆಸಗುವುದು "ಬೆಕ್ಕು ಕಣ್ಣು ಮುಚ್ಚಿ ಹಾಲು ಕುಡಿದಂತೆ" ಯಾರೂ ನೋಡುವುದಿಲ್ಲವೆಂಬುವಂತೆ ಸಾಗುವುದು ಕಾರ್ಯಾಂಗದಲ್ಲಿ ಯಥಾ ಪ್ರಕಾರ ನಿರಾತಂಕವಾಗಿ ಸಾಗಿಬರುವ ಉದಾಹರಣೆ ಪತ್ರಿಕಾಂಗ, ನ್ಯಾಯಾಂಗ ಹಾಗೂ ಶಾಸಕಾಂಗಗಳ ಮುಖಾಂತರ ಮೂಡಿಬರುತ್ತಲೇ ಇವೆ. ನೇಮಕಾತಿ, ಮುಂಬಡತಿ, ವರ್ಗಾವರ್ಗಿಯಲ್ಲಿ ಕಾರ್ಯಾಂಗ ಮನಬಲ್ಲಂತೆ ನಡೆದುಕೊಳ್ಳುತ್ತಿದ್ದು, ತಮಗೆ ಬೇಕಾದ ಅಧಿಕಾರಿಗಳ ಮುಖಾಂತರ ಮಾಡಬಾರದ ಕೆಲಸಗಳೆಲ್ಲವನ್ನು ಸರಕಾರ ಮಾಡಿಸುತ್ತಿದೆ. ತಮಗೆ ಬೇಕಾದ ಅಕ್ರಮ ಕೆಲಸವನ್ನು ಯಾವುದೇ ಅಧಿಕಾರಿ ಮಾಡದೇ ಹೋದರೆ ಅವನ ವರ್ಗಾವರ್ಗಿ, ಮುಂಬಡ್ತಿಗಳಲ್ಲಿ ಕೈ ಹಾಕಿ ಅವನಿಗೆ ಕಿರುಕುಳ ಕೊಡುತ್ತಿರುವುದು ಸಹ ನಡದೇ ಇದೆ. ಕಾರ್ಯಾಂಗದಿಂದ ನ್ಯಾಯ ಸಿಗದೆ ಇದ್ದಾಗ ಶೋಷಣೆಗೆ ಒಳಗಾದವರು ಹಾಗೂ ಅವರ ಪರವಾದವರು ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ನ್ಯಾಯಾಲಯಗಳಿಗೆ ನ್ಯಾಯದ ಸಲುವಾಗಿ ಅರ್ಪಿಸುವುದಾಗಲೀ ಅವುಗಳನ್ನು ನ್ಯಾಯಾಲಯಗಳು ಇತ್ಯರ್ಥ ಪಡಿಸುವುದಾಗಲೀ ಶುಭ ಸೂಚನೆಯಾಗುತ್ತಿರುವುದು ಭಾರತೀಯರ ಸುದೈವ.

ಸದ್ಯ ನ್ಯಾಯಾಂಗದ ನೇಮಕಾತಿ, ಮುಂಬಡತಿ, ವರ್ಗಾವರ್ಗಿಗಳಲ್ಲಿ ನ್ಯಾಯಾಂಗದ ಜವಾಬ್ದಾರಿ, ಹೊಣೆಗಾರಿಕೆಯೇ ಇರುವುದರಿಂದ ಕಾರ್ಯಾಂಗದ ಹಸ್ತಕ್ಷೇಪವಿಲ್ಲದಿರುವ ಈ

ದೇಶದ ನಾಗರಿಕರ ಹಾಗೂ ನ್ಯಾಯಾಂಗದ ಸುದೈವ. ಆದಾಗ್ಯೂ ಕೆಲವು ಸಂದರ್ಭದಲ್ಲಿ ಸರಕಾರಗಳ ಅಭಿಪ್ರಾಯ ಹಾಗೂ ಸಿಫಾರಸುಗಳನ್ನು ನ್ಯಾಯಾಧೀಶರನ್ನು ನೇಮಿಸುವಲ್ಲಿ, ವರ್ಗಮಾಡುವಲ್ಲಿ ಕೇಳುವುದು ಸಹ ಸಾಧುವಲ್ಲ ಹಾಗೂ ಸಾರ್ವಜನಿಕ ನ್ಯಾಯಾಂಗದ ಹಿತದೃಷ್ಟಿಯಿಂದ ಸಹ ಹಿತಕಾರಕವಲ್ಲ. ನ್ಯಾಯಾಂಗದಲ್ಲಿ ಸರಕಾರಕ್ಕೆ ಯಾವುದೇ ಕೈ ಹಾಕುವ ಅಧಿಕಾರವಿರದೆ ಕಾನೂನುಗಳನ್ನು ಸೃಷ್ಟಿಸಿ, ಅನುಷ್ಠಾನಕ್ಕಾಗಿ ನ್ಯಾಯಾಂಗದ ಇತ್ಯರ್ಥಕ್ಕೆ ಬಿಡುವುದು ಮಾತ್ರ ಒಳ್ಳೆಯದು. ಒಂದು ವೇಳೆ ನ್ಯಾಯಾಂಗದಲ್ಲಿಯ ನೇಮಕಾತಿ, ಮುಂಬಡತಿ, ಹಿಂಬಡತಿ, ತನಿಖೆ, ವಜಾ ವರ್ಗಾವರ್ಗಿಗಳಲ್ಲಿ ಕಾರ್ಯಾಂಗವು ಅನುಚಿತವಾಗಿ ಕೈ ಹಾಕಲು ಪ್ರಯತ್ನ ಮಾಡಿ ಈ ಬಗ್ಗೆ ಯಾವುದೇ ಕಾನೂನು ಸರಕಾರದ ತೀರ್ಮಾನಗಳ ಅನುಗ್ರಹ ಪಡೆದು ಹಸ್ತಕ್ಷೇಪ ಮಾಡಿದರೆ ಅದು ಅಕ್ಷಮ್ಯ ಅಪರಾಧವಾಗುವುದಲ್ಲದೆ ನ್ಯಾಯಾಂಗದ ಪಾವಿತ್ರ್ಯತೆ ಹಿರಿಮೆ ಹಾಳಾಗಿ ನ್ಯಾಯಾಂಗದಲ್ಲಿ ರಾಜಕಾರಣಗಳಲ್ಲಿ ಅಂಧೇರಿ ಕಾರಬಾರ ನಡೆದು ಹಾವಳಿ ಹೆಚ್ಚಾಗಿ ನ್ಯಾಯಾಲಯವೇ ಗಂಡಾಂತರಕ್ಕೆ ಈಡಾಗಿ ನ್ಯಾಯದ ಆಕಾಂಕ್ಷಿಗಳಿಗೆ ನ್ಯಾಯ ಸಿಗದೆ "ಕಾನನದಲ್ಲಿ ಕಣಗಿ ಪೆಟ್ಟು ಮೇಲಾದಂತಾಗಿ" ಪ್ರಜಾತಂತ್ರ ವ್ಯವಸ್ಥೆಗೆಯೇ ಮಹಾ ಕಂಟಕವಾದೀತೆಂಬುದನ್ನು ಕಾರ್ಯಾಂಗ ಹಾಗೂ ಶಾಸಕಾಂಗ ಮುಂದಾಲೋಚನೆ ಹಾಗೂ ದೂರಾಲೋಚನೆ ಮಾಡುವದು ಅಗತ್ಯ. ರಾಜಕಾರಣಿಗಳು ತಮ್ಮ ಕ್ಷಣಿಕ ಅಧಿಕಾರಾವಧಿ ಯಲ್ಲಿ ತಮ್ಮ ಕ್ಷುಲ್ಲಕ ಕಾರ್ಯಸಾಧನೆಗಾಗಿ ಕಾರ್ಯಾಂಗದಲ್ಲಿ ಕೈಹಾಕುವ ಹಾಗೆ ನ್ಯಾಯಾಂಗದಲ್ಲಿ ಕೈಹಕುವ ದುರಾಲೋಚನೆ ಬಿಟ್ಟು ಅಸ್ತವ್ಯಸ್ತವಾಗಿ ಹದಗೆಟ್ಟಿರುವ ಕಾರ್ಯಾಂಗವನ್ನು ಈ ರಾಷ್ಟ್ರದ ಸುವ್ಯವಸ್ಥಿತ ಆಡಳಿತಕ್ಕಾಗಿ ಹಾಗೂ ಸರ್ವಾಂಗೀಣ ಪ್ರಗತಿಗಾಗಿ ಅಣಿಗೊಳಿಸುವುದು ಒಳ್ಳೆಯದು. ಪರರಾಷ್ಟ್ರಗಳಲ್ಲಿರುವಂತೆ ನಮ್ಮ ರಾಷ್ಟ್ರದ ನ್ಯಾಯಾಂಗ ಕೂಡ ಒಳ್ಳೆಯ ಹೆಸರು ಗಳಿಸಿದ್ದು ಅಲ್ಲಲ್ಲಿ ಕಂಡು ಬರುವ ಹಾಗೂ ಸಿಕ್ಕಿಹಾಕಿಕೊಂಡು ತಪ್ಪಿತಸ್ಥ ನ್ಯಾಯಾಂಗದ ಅಧಿಕಾರಿಗಳನ್ನು "ದಾಕ್ಷಿಣ್ಯ ಪರರಾಗದೆ ನ್ಯಾಯ ನಿಷ್ಠುರಿ" ಗಳಾಗಿ ಶಿಕ್ಷಿಸಿ ಮನೆಗೆ ಕಳುಹಿಸುವ ಸತ್‌ಸಂಪ್ರದಾಯವನ್ನು ಉಳಿಸಿ, ಬೆಳೆಸಿಕೊಂಡು ಭಾರತದ ನ್ಯಾಯಾಂಗದ ಬಗ್ಗೆ ಇರುವ ದೇಶಿಯ ಹಾಗೂ ವಿದೇಶಿಯ ಗೌರವ - ಭಯ - ಭಕ್ತಿ - ನಿಷ್ಠೆ. ಅಭಿಮಾನ ಒಳ್ಳೆ ಅಭಿಪ್ರಾಯಗಳನ್ನು ಪ್ರಜ್ವಲಿಸಿ ಕೊಳ್ಳುವುದು ಹಾಗೂ ಮುಂದೆ ಸಾಗುವದು ಒಳ್ಳೆಯದು.

❑

ಸತ್ಯಾಗ್ರಹ ಬಿಟ್ಟು ಸಮಿತಿಯನ್ನು ಒಪ್ಪಿಸುವದವಶ್ಯ

ಹುಬ್ಬಳ್ಳಿಯಲ್ಲಿ ಹೈಕೋರ್ಟ್ ಬೆಂಚ್ ರಚಿಸಬೇಕಾದ ಸ್ಥಳದ ಬಗ್ಗೆ ಯಾವುದೇ ಸಮಸ್ಯೆ ಇಲ್ಲ. ಈಗಾಗಲೆ ವಿವಾದ ಮುಗಿದು ಹೋಗಿದೆ. ಈ ಬಗ್ಗೆ ಮುಖ್ಯಮಂತ್ರಿಗಳು ತಮ್ಮ ಒಪ್ಪಿಗೆ ಕೊಟ್ಟಿದ್ದಾರೆಂದು ಕೇಂದ್ರದ ಕಾನೂನು ಮಂತ್ರಿಗಳು 1993 ಮಾರ್ಚ್ ಹನ್ನೊಂದರಂದು ಸಂಸತ್ತಿನಲ್ಲಿ ಹೇಳಿದ್ದಾರೆ. ರಾಜ್ಯ ಪುನರ್ವಿಂಗಡನೆ ಅಧಿನಿಯಮದ ಕಲಂ 51(2)ರ ಪ್ರಕಾರ ರಾಜ್ಯದ ಮುಖ್ಯ ನ್ಯಾಯಾಧೀಶರ ಅಭಿಪ್ರಾಯ ಹೈಕೋರ್ಟ್ ಬೆಂಚ್ ಸ್ಥಾಪಿಸುವ ಬಗ್ಗೆ ಅತ್ಯಗತ್ಯವಿದೆ ಎಂದೂ ಸಹ ಕೇಂದ್ರ ಸರಕಾರ ಹೇಳಿದೆ. ಈ ದಿಶೆಯಲ್ಲಿ ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಾಧೀಶರು ಐದು ನ್ಯಾಯಾಧೀಶರ ಸಮಿತಿಯೊಂದನ್ನು ಈಗಾಗಲೇ ನೇಮಿಸಿದ್ದು ಈ ಪಂಚ ನ್ಯಾಯಾಧೀಶರ ಅಭಿಪ್ರಾಯ ಬಂದ ನಂತರ ಅದನ್ನು ಅವಲೋಕಿಸಿ ಕೇಂದ್ರಕ್ಕೆ ಶಿಫಾರಸ್ಸು ವರದಿಯನ್ನು ಮುಖ್ಯ ನ್ಯಾಯಾಧೀಶರು ಕಳುಹಿಸಬೇಕಾಗುತ್ತದೆ. ಆದ್ದರಿಂದ ಹುಬ್ಬಳ್ಳಿ, ಧಾರವಾಡ ವಕೀಲರು ಈ ಸಮಿತಿಗೆ ಕೋರ್ಟ್ ಸ್ಥಾಪಿಸಲು ಬೇಕಾದ ಸೂಕ್ತ ಕಟ್ಟಡಗಳನ್ನು ಹಾಗೂ ನ್ಯಾಯಾಧೀಶರಿಗೆ ಮತ್ತು ಕೋರ್ಟು ಸಿಬ್ಬಂದಿಗೆ ಬೇಕಾದ ಸೂಕ್ತ ನಿವಾಸಗಳನ್ನು ತೋರಿಸಿ ಆ ಕಟ್ಟಡ ಮಾಲೀಕರಿಂದ ಬಾಡಿಗೆ - ತರೀಕ ಕೊಡಲು ಒಪ್ಪಿಗೆ ಪಡೆಯಬೇಕು. ಇಲ್ಲವೆ ಸರಕಾರಿ ಅಥವಾ ಯಾವುದೇ ಸರಕಾರಿ - ಸಾರ್ವಜನಿಕ ನಿಗಮ ಅಥವಾ ನಗರಪಾಲಿಕೆ ಕಟ್ಟಡಗಳಿದ್ದರೂ ಅವುಗಳನ್ನು ಕೋರ್ಟು ಹಾಗೂ ನ್ಯಾಯಾಧೀಶರ ಮತ್ತು ಸಿಬ್ಬಂದಿಯ ಸಲುವಾಗಿ ಬಿಟ್ಟುಕೊಡಲು ಒಪ್ಪಿಗೆ ಪಡೆಯಬೇಕು. ಇಲ್ಲವೆ ಯಾವುದೇ ಸೂಕ್ತವಾದ ರಾಷ್ಟ್ರೀಯ ಹೆದ್ದಾರಿಗೆ ಸಮೀಪವಿರುವ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಹಾಗೂ ಇಲ್ಲಿ ಅವಶ್ಯವಿರುವ ಕಟ್ಟಡಗಳನ್ನು ಕಟ್ಟಿಸಲು ಸರಕಾರಕ್ಕೆ ಸೂಕ್ತ ಸಲಹೆ ಕೊಡಬೇಕು. ಹುಬ್ಬಳ್ಳಿಯಲ್ಲಿ ಹೈಕೋರ್ಟು ಬೆಂಚ್ ಸ್ಥಾಪಿಸಲು ಈಗಾಗಲೇ ವಿಧಾನಸಭೆ ಹಾಗೂ ವಿಧಾನ ಪರಿಷತ್ತಿನಲ್ಲಿ ಸರ್ವಾನುಮತದಿಂದ ನಿರ್ಣಯವಾಗಿರುವಾಗ ಈ ನಿರ್ಣಯಕ್ಕೆ

ಅನುಗುಣವಾಗಿ ಮುಖ್ಯಮಂತ್ರಿಗಳು ಸಹ ಈ ಬಗ್ಗೆ ಶಿಫಾರಸ್ಸು ಮಾಡಿರುವಾಗ ಕೇಂದ್ರ ಸರಕಾರ ಸಹ ಸೂಕ್ತ ಕ್ರಮ ತೆಗೆದುಕೊಂಡಿರುವಾಗ ಈಗ ಇರುವದು ಪಂಚ ನ್ಯಾಯಾಧೀಶರ ಸಮಿತಿಯ ವರದಿ ಮಾತ್ರ ಅವಶ್ಯ. ಆ ಸಮಿತಿಯ ಮುಂದೆ ಕಟ್ಟಡಗಳ ಲಭ್ಯತೆ, ಇಲ್ಲವಾದರೆ ಸೂಕ್ತ ಜಮೀನನ್ನು ನೋಡಿ ಅದನ್ನು ಸ್ವಾಧೀನಪಡಿಸಿ ಕೊಳ್ಳಲು ವಿನಂತಿಸುವುದೊಂದೇ ಮಾರ್ಗ. ಈ ದಿಶೆಯಲ್ಲಿ ಹಾಗೂ ಈ ಹಿನ್ನೆಲೆಯಲ್ಲಿ ಬೆಳಗಾವ, ಬಿಜಾಪೂರ ಹಾಗೂ ಕಲಬುರ್ಗಿಯ ನ್ಯಾಯವಾದಿಗಳು ಅಲ್ಲಲ್ಲಿ ಬೆಂಚ್ ಸ್ಥಾಪಿಸುವ ವಿಚಾರದ ಹೋರಾಟವನ್ನು ಬಿಡುವದು ಒಳ್ಳೆಯದು. ಹುಬ್ಬಳ್ಳಿ ಧಾರವಾಡ ನ್ಯಾಯವಾದಿಗಳು ಸಹ ತಮ್ಮ ಸತ್ಯಾಗ್ರಹ ಹೋರಾಟವನ್ನು ಬಿಟ್ಟು ಪಂಚ ನ್ಯಾಯಾಧೀಶರ ಸಮಿತಿಯ ಮುಂದೆ ಕಟ್ಟಗಳ ಲಭ್ಯತೆ ಹಾಗೂ ಕಟ್ಟಡ ಮಾಲೀಕರ ಒಪ್ಪಿಗೆ ಬಗ್ಗೆ ಅಥವಾ ಸೂಕ್ತ ಜಮೀನು ಸ್ವಾಧೀನದ ಬಗ್ಗೆ ತಮ್ಮ ಬೇಡಿಕೆಯನ್ನು ಸಲ್ಲಿಸಿ ಕಟ್ಟಡಗಳು ಸೂಕ್ತವಾಗಿರುವ ಬಗ್ಗೆ ಅಥವಾ ಸ್ವಾಧೀನಪಡಿಸಿಕೊಳ್ಳಬೇಕಾದ ಜಮೀನು ಸಹ ಸೂಕ್ತವಾಗಿರುವ ಬಗ್ಗೆ ಪಂಚ ನ್ಯಾಯಾಧೀಶರ ಸಮಿತಿಗೆ ಸ್ಥಳ ಪರಿಶೀಲನೆ ಮಾಡಿಸುವುದು ಯೋಗ್ಯ ಹಾಗೂ ಸೂಕ್ತ. ಕಟ್ಟಡಗಳ ಲಭ್ಯತೆ ಇಲ್ಲವೆ ಸೂಕ್ತ ಜಮೀನು ಸ್ವಾಧೀನದ ಬಗ್ಗೆ ಪಂಚ ಸಮಿತಿಯು ವರದಿಯನ್ನು ನೋಡಿ ಸೂಕ್ತವಾದ ವರದಿಯನ್ನು ಮುಖ್ಯ ನ್ಯಾಯಾಧೀಶರು ಕೇಂದ್ರಕ್ಕೆ ಕಳುಹಿಸಬೇಕಾಗುತ್ತದೆ. ನಂತರ ಕೇಂದ್ರ ಸರ್ಕಾರವು ಹುಬ್ಬಳ್ಳಿಯಲ್ಲಿ ಬೆಂಚ್ ಸ್ಥಾಪನೆಗೆ ಸೂಕ್ತ ನಿರ್ಧಾರ ತೆಗೆದುಕೊಳ್ಳಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಸೂಕ್ತ ಕಟ್ಟಡಗಳನ್ನು ಹುಡುಕಿ ಅವುಗಳನ್ನು ಒದಗಿಸಿ ಕೊಡುವುದು ಹಾಗೂ ಸಮಿತಿಗೆ ಖಾತ್ರಿ ಮಾಡಿಕೊಡುವದು ಹುಬ್ಬಳ್ಳಿ, ಧಾರವಾಡ ವಕೀಲರ, ಕಾರ್ಪೊರೇಟರರ, ನಾಗರೀಕರ, ಶಾಸಕರ ಹಾಗೂ ಸಂಸದರ ಅಗತ್ಯ ಕರ್ತವ್ಯ.

❑

ನ್ಯಾಯವಾದಿಗಳ ಕೊಡುಗೆ

ಜನತೆಯ ಶೋಷಣೆ, ಸಂಕಷ್ಟ ನಿವಾರಣೆಗಾಗಿ, ಹಕ್ಕುಗಳ ಪ್ರತಿಪಾದನೆ ರಕ್ಷಣೆಗಾಗಿ, ಮಾನ, ಮರ್ಯಾದೆ, ಘನತೆ, ಗೌರವ, ಚರಾಸ್ತಿ - ಸ್ಥಿರಾಸ್ತಿ ರಕ್ಷಣೆಗಾಗಿ ನ್ಯಾಯವಾದಿಗಳು ಈ ದೇಶದಲ್ಲಿ ಹೋರಾಟ ಮಾಡಿ ನ್ಯಾಯಾಲಯಗಳಲ್ಲಿ ನ್ಯಾಯವನ್ನು ದೊರಕಿಸಿಕೊಡುವಲ್ಲಿ, ದುಷ್ಟರನ್ನು ಶಿಕ್ಷಿಸುವಲ್ಲಿ, ಶಿಷ್ಟರನ್ನು ರಕ್ಷಿಸುವಲ್ಲಿ ವಹಿಸಿದ ಹಾಗೂ ವಹಿಸುತ್ತಿರುವ ಪಾತ್ರ ಚಿರಸ್ಮರಣೀಯ ಕೊಡುಗೆ ಅಪಾರ. ವ್ಯವಸಾಯ ಉದ್ಯಮ, ವಾಣಿಜ್ಯ ಉದ್ಯಮ, ಕೈಗಾರಿಕೋದ್ಯಮ ಇತ್ಯಾದಿ ಉದ್ಯಮಗಳಲ್ಲಿ ನ್ಯಾಯವಾದಿಗಳನೇಕರು ತಮ್ಮನ್ನು ತಾವು ತೊಡಗಿಸಿಕೊಂಡು ಅವುಗಳನ್ನು ಯಶಸ್ವಿಯಾಗಿಸಿ ಮತ್ತೊಬ್ಬರಿಗೆ ಆದರ್ಶ ಉದ್ಯಮಿಗಳಾಗಿ ಉದ್ಯಮ ಕ್ಷೇತ್ರದಲ್ಲಿಯೂ ಕ್ರಿಯಾಶೀಲರಾಗಿ ಉದ್ಯೋಗ ಪತಿಗಳಾಗಿದ್ದಾರೆ. ಗ್ರಾಮ ಹಾಗೂ ನಗರ ಮಟ್ಟದಲ್ಲಿ ತಮ್ಮ ನ್ಯಾಯವಾದಿ ಉದ್ಯೋಗದೊಂದಿಗೆ ತಮಗಿಷ್ಟವಾದ ಉದ್ಯಮದೊಂದಿಗೆ ಗ್ರಾಮ ಪಂಚಾಯತಿಗಳ ಸದಸ್ಯ ಅಧ್ಯಕ್ಷರಾಗಿ, ಪುರ - ನಗರ - ಸಭೆ ನಗರ ಪಾಲಿಕೆಗಳ ಸದಸ್ಯ ಅಧ್ಯಕ್ಷರಾಗಿ, ತಾಲ್ಲೂಕ ಮಟ್ಟ ಹಾಗೂ ಜಿಲ್ಲಾ ಮಟ್ಟದ ಪಂಚಾಯತಿಗದಳಲ್ಲಿ ಸದಸ್ಯ ಅಧ್ಯಕ್ಷರುಗಳಾಗಿ, ಇತರ ಸಂಘ ಸಂಸ್ಥೆ ನಿಗಮಗಳ ಸದಸ್ಯ ಅಧ್ಯಕ್ಷರಾಗಿ ಸಾಮಾನ್ಯ, ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿ ಕಾರ್ಯಗಳನ್ನು ಅನುಷ್ಠಾನಗೊಳಿಸುತ್ತ ಗ್ರಾಮಮಟ್ಟದಿಂದ ರಾಜ್ಯಮಟ್ಟದವರೆಗೆ ಸಾಮಾಜಿಕ ಸೇವೆಗಳನ್ನು ಸಲ್ಲಿಸುತ್ತಿರುವ ಆದರ್ಶ ನ್ಯಾಯವಾದಿಗಳೂ ನಮ್ಮ ರಾಷ್ಟ್ರದಲ್ಲಿ ಅನೇಕರಿದ್ದಾರೆ. ಯಾವುದೇ ಉದ್ಯೋಗ, ಉದ್ಯಮ, ಚಟುವಟಿಕೆ, ರಾಜಕೀಯದಿಂದ ದೂರವಿದ್ದು ನ್ಯಾಯವಾದಿ ಉದ್ಯೋಗದಲ್ಲಿಯೇ ಪರಿಣತ ಪಾರಂಗತರಾಗಿ, ಹಿಡಿದ ಪ್ರಕರಣವನ್ನು ಹಾಗೂ ಕಾನೂನುಗಳೆಲ್ಲವನ್ನು ಅಧ್ಯಯನ ಮಾಡಿ, ಬಸವಳಿದು ಬಂದು ಬೆನ್ನುಬಿದ್ದ ಕಕ್ಷಿದಾರರನ್ನು ಸಂತೈಸಿಸಿ ಅವರ ಪ್ರಕರಣಗಳನ್ನು ಪ್ರಾಮಾಣಿಕವಾಗಿ ಶಕ್ತಿ ಮೀರಿ ನ್ಯಾಯಾಲಯುಗಳಲ್ಲಿ ನಡೆಯಿಸಿ ಯುಶಸ್ಸು ಸಾಧಿಸಿ ಸೂಕ್ತ ನ್ಯಾಯುವನ್ನು ದೊರಕಿಸಿಕೊಡುತ್ತಿರುವ ನ್ಯಾಯವಾದಿಗಳೂ ನಮ್ಮ ದೇಶದಲ್ಲಿದ್ದಾರೆ. ಕೈಯಲ್ಲಿ ಕಾಸಿಲ್ಲದೆ, ಶೋಷಣೆಗೆ ಸಿಕ್ಕಿಬಿದ್ದು ಸಹಾಯ ಕೋರಿ ಬಂದ ಬಡವ ದೀನದಲಿತರಿಗೆ ಆಶ್ರಯಕೊಟ್ಟು

ಅವರಿಗೆ ಸೂಕ್ತ ನ್ಯಾಯ ಪರಿಹಾರವದನ್ನೊಗಿಸಿಕೊಟ್ಟು ಬಡವರ - ಬಂಧು ದೀನ, ದಲಿತರ - ಬಂಧುಗಳಾಗಿದ್ದಾರೆ ಅನೇಕ ನ್ಯಾಯವಾದಿಗಳು ಉತ್ತಮ ರೀತಿಯಲ್ಲಿ ಯಶಸ್ವಿಯಾಗಿ ಪ್ರತಿಭಾವಂತರಾಗಿ ನ್ಯಾಯವಾದಿ ಉದ್ಯೋಗವನ್ನು ಸಮರ್ಥವಾಗಿ ಸಾರ್ಥಕ ಮಾಡಿಕೊಂಡು ತಾಲ್ಲೂಕ, ಉಪವಿಭಾಗ, ಜಿಲ್ಲೆ, ವಿಭಾಗ, ರಾಜ್ಯ ಹಾಗೂ ರಾಷ್ಟ್ರಮಟ್ಟದ ವಿವಿಧ ನ್ಯಾಯಾಲಯಗಳಲ್ಲಿ ಹೆಸರುಗಳಿಸಿ ನ್ಯಾಯಾಧೀಶರಾಗಿ, ನ್ಯಾಯವಾದಿಗಳಾಗಿ ಅಮೋಘ ಹಾಗೂ ಅದ್ಭುತ ಸೇವೆಯನ್ನು ಸಲ್ಲಿಸಿದ ಹಾಗೂ ಸಲ್ಲಿಸುತ್ತಿರುವ ಜೀವಂತ ಉದಾಹರಣೆಗಳೂ ನಮ್ಮ ದೇಶಾದ್ಯಂತ ಇವೆ.

ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಹಾಗೂ ಪತ್ರಿಕಾಂಗಗಳಲ್ಲಿಯಂತೂ ಈ ರಾಷ್ಟ್ರದಲ್ಲಿಯ ನ್ಯಾಯವಾದಿಗಳು ಸಲ್ಲಿಸಿದ ಹಾಗೂ ಸಲ್ಲಿಸುತ್ತಿರುವ ಸೇವೆಗೆ ಅಂತ್ಯವೇ ಇಲ್ಲ. ಈ ನಾಲ್ಕು ಅಂಗಗಳಲ್ಲಿಯ ಅವರ ಸೇವೆ ಈ ರಾಷ್ಟ್ರದ ಘನತೆ - ಗೌರವ ಹಾಗೂ ಪ್ರಜಾಸತ್ತೆಯ, ಪ್ರಜಾತಂತ್ರ ವ್ಯವಸ್ಥೆಯ ಸುವ್ಯವಸ್ಥೆಯ ಅವಶ್ಯಕತೆಗೆ ಅಗತ್ಯವಾಗಿರುವುದು ವಾಸ್ತವಿಕ ಸತ್ಯಾಂಶ. ಇದಕ್ಕೆ ಅಲ್ಲೊಂದು ಇಲ್ಲೊಂದು ಅಪವಾದ ವಿರಬಹುದಷ್ಟೆ. ಅನೇಕ ನ್ಯಾಯವಾದಿಗಳು ಹಾಗೂ ಕಾನೂನು ಪದವೀಧರರು ಶಾಸಕರಾಗಿ, ಸಂಸದರಾಗಿ, ಮಂತ್ರಿಗಳಾಗಿ, ರಾಜ್ಯ ವಿಧಾನಸಭೆಯ ಉಪಾಧ್ಯಕ್ಷ, ಅಧ್ಯಕ್ಷರಾಗಿ, ಲೋಕಸಭೆಯ ಉಪಾಧ್ಯಕ್ಷ, ಅಧ್ಯಕ್ಷರಾಗಿ, ವಿಧಾನ ಪರಿಷತ್ತಿನ ಉಪಸಭಾಪತಿ, ಸಭಾಪತಿಗಳಾಗಿ, ರಾಜ್ಯ ಸಭೆಯ ಉಪಸಭಾಪತಿ, ಸಭಾಪತಿಗಳಾಗಿ, ಶಾಸಕಾಂಗದ ಇತಿಹಾಸದಲ್ಲಿ ಚಿರಸ್ಮರಣೀಯ ಸೇವೆಯನ್ನು ಸಲ್ಲಿಸಿದ್ದಾರೆ ಹಾಗೂ ಸಲ್ಲಿಸುತ್ತಿದ್ದಾರೆ. ಅನೇಕ ನ್ಯಾಯವಾದಿಗಳು ಹಾಗೂ ಕಾನೂನು ಪದವೀಧರರು ಐ.ಎ.ಎಸ್. ಪದವಿ ಪಡೆದು ತಾಲ್ಲೂಕು ಮಟ್ಟದ, ಉಪವಿಭಾಗ ಮಟ್ಟದ, ಜಿಲ್ಲಾ ಮಟ್ಟದ, ವಿಭಾಗ ಮಟ್ಟದ, ರಾಜ್ಯ ಮಟ್ಟದ - ರಾಷ್ಟ್ರ ಮಟ್ಟದ ರೆವಿನ್ಯೂ ಅಧಿಕಾರಿಗಳಾಗಿ ಸರಕಾರದ ಕಾರ್ಯದರ್ಶಿಗಳಾಗಿ ಮುಖ್ಯ ಕಾರ್ಯದರ್ಶಿಗಳಾಗಿ ಕಾರ್ಯಾಂಗದ ಸೇವೆ ಮಾಡಿದ್ದಾರೆ. ಅನೇಕರು ಶಾಸಕರಾಗಿ, ಮಂತ್ರಿಗಳಾಗಿ, ಮುಖ್ಯಮಂತ್ರಿಗಳಾಗಿ, ಕೇಂದ್ರ ಮಂತ್ರಿಗಳಾಗಿ, ಪ್ರಧಾನ ಮಂತ್ರಿಗಳಾಗಿ ಕಾರ್ಯಾಂಗದಲ್ಲಿ ಅಮೋಘ ಸೇವೆ ಸಲ್ಲಿಸಿದವರು ಹಾಗೂ ಸಲ್ಲಿಸುತ್ತಿರುವವರೂ ಇದ್ದಾರೆ. ಅನೇಕರು ಅನೇಕ ಹಂತದಲ್ಲಿ ನ್ಯಾಯಾಧೀಶರಾಗಿ ಕಾರ್ಯ ನಿರ್ವಹಿಸಿ ನ್ಯಾಯಾಂಗ ಇಲಾಖೆಯ ಕಾರ್ಯದರ್ಶಿಗಳಾಗಿ, ಹೈಕೋರ್ಟು ಸುಪ್ರೀಂ ಕೋರ್ಟುಗಳಲ್ಲಿ ನ್ಯಾಯಾಧೀಶರಾಗಿ, ಸೇವೆ ಸಲ್ಲಿಸಿದವರೂ ಇದ್ದಾರೆ. ಹೈಕೋರ್ಟು ಮುಖ್ಯನ್ಯಾಯಾಧೀಶರಾಗಿ, ಸುಪ್ರೀಂ ಕೋರ್ಟು ಶ್ರೇಷ್ಠ ನ್ಯಾಯಧೀಶರಾಗಿ ನ್ಯಾಯಾಂಗದ ಅಧಿನಾಯಕ ಶ್ರೇಷ್ಠರೂ ನಮ್ಮ ದೇಶದಲ್ಲಿದ್ದಾರೆ. ಶಾಸಕಾಂಗ ಕಾರ್ಯಾಂಗ ಹಾಗೂ ನ್ಯಾಯಾಂಗದ ಕಾರ್ಯದರ್ಶಿ ಹಾಗೂ ಮುಖ್ಯ ಕಾರ್ಯದರ್ಶಿಗಳಾದವರೂ ಸಾಕಷ್ಟು ನ್ಯಾಯವಾದಿ ಹಾಗೂ ಕಾನೂನು ಪದವೀಧರರು

ಇದ್ದಾರೆ. ಶಾಸಕಾಂಗದಲ್ಲಿ ಸಭಾಧ್ಯಕ್ಷರಾಗಿ, ಕಾರ್ಯಾಂಗದಲ್ಲಿ ಮುಖ್ಯಮಂತ್ರಿಯಾಗಿ, ನ್ಯಾಯಾಂಗದಲ್ಲಿ ಮುಖ್ಯನ್ಯಾಯಾಧೀಶರಾಗಿ, ರಾಜ್ಯಪಾಲರಾಗಿ, ಉಪರಾಷ್ಟ್ರಪತಿಗಳಾಗಿ, ರಾಷ್ಟ್ರಪತಿಗಳಾಗಿ ಹಳ್ಳಿಗಳಿಂದ ದಿಲ್ಲಿಯವರೆಗೆ ದೇಶ ಸೇವೆ, ರಾಷ್ಟ್ರಸೇವೆಯನ್ನು ಅಮೋಘವಾಗಿ ಸಲ್ಲಿಸಿದ ನ್ಯಾಯವಾದಿಗಳೂ ನಮ್ಮ ರಾಷ್ಟ್ರದಲ್ಲಿದ್ದಾರೆ.

ಲೇಖಕರಾಗಿ, ಪತ್ರಿಕಾ ವರದಿಗಾರರಾಗಿ, ವಿಶೇಷ ವರದಿಗಾರರಾಗಿ, ಸಂಪಾದಕ ಮಂಡಳಿಯ ಸದಸ್ಯರಾಗಿ, ಉಪಸಂಪಾದಕ, ಸಂಪಾದಕ, ಪ್ರಧಾನ ಸಂಪಾದಕ, ವ್ಯವಸ್ಥಾಪಕ ಸಂಪಾದಕ, ಮಾಲೀಕ ಸಂಪಾದಕರಾಗಿ, ವಿವಿಧ ವಾರ್ಷಿಕ, ವಿಶೇಷ ಮಾಸಿಕ, ಪಾಕ್ಷಿಕ, ವಾರ ಹಾಗೂ ದಿನಪತ್ರಿಕೆಗಳಲ್ಲಿ ಸೇವೆ ಸಲ್ಲಿಸುತ್ತ ಸಾರ್ವಜನಿಕರು ಹಾಗೂ ಕೇಂದ್ರ ವ ರಾಜ್ಯಸರಕಾರಗಳ ನಡುವೆ ಸೇತುವೆ ವ ಕೊಂಡಿಗಳಾಗಿ ಈ ರಾಷ್ಟ್ರದ ಒಳಿತು - ಕೆಡಕು, ಸಾಧಕ - ಬಾಧಕ, ತಾರಕ - ಮಾರಕ, ಬೇಕು - ಬೇಡಗಳ ಬಗ್ಗೆ ಸರಕಾರದ ಹಾಗೂ ಸಾರ್ವಜನಿಕರ ಗಮನ ಸೆಳೆದು ಈ ರಾಷ್ಟ್ರದ ಆಡಳಿತ ಹಾಗೂ ಅಭಿವೃದ್ಧಿಯ ಬಗ್ಗೆ ಬೆಳಕನ್ನು ಚೆಲ್ಲುವ ಸಂಪಾದಕೀಯದ ಮುಖಾಂತರ ಎಲ್ಲರಿಗೂ ತಿಳಿಹೇಳುವ ನ್ಯಾಯವಾದಿ ಹಾಗೂ ಕಾನೂನು ಪದವೀಧರ, ಸಾರ್ವಜನಿಕ ಸೇವಾ ಧುರೀಣರ ಸೇವೆ ಕೂಡ ನಮ್ಮ ರಾಷ್ಟ್ರದಲ್ಲಿ ಸ್ತುತ್ಯವಾಗಿದೆ. ನಮ್ಮ ರಾಷ್ಟ್ರದಲ್ಲಿ ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗದಲ್ಲಿ ಅಲ್ಲಲ್ಲಿ ಪರಿಹಾರಕ್ಕಾಗಿ ಸುಧಾರಣೆಗಾಗಿ ರಚನಾತ್ಮಕ ಟೀಕೆ - ಟಿಪ್ಪಣಿ - ಸಲಹೆ - ಸೂಚನೆಗಳನ್ನು ನೀಡಿ ಸುವ್ಯವಸ್ಥಿತ ಆಡಳಿತ ಹಾಗೂ ಸುವ್ಯವಸ್ಥಿತ ಸಾಮಾನ್ಯ, ಸಾಮಾಜಿಕ ಹಾಗೂ ಆರ್ಥಿಕ ಪ್ರಗತಿಗಾಗಿ ನ್ಯಾಯವಾದಿಗಳು ಪತ್ರಿಕಾಂಗದ ಮುಖಾಂತರ ಸಲ್ಲಿಸುತ್ತಿರುವ ಸೇವೆ ಸ್ವಾಗತಾರ್ಹವಾಗಿದೆ.

ವಿದೇಶಗಳೊಂದಿಗೆ ನಮ್ಮ ರಾಷ್ಟ್ರದ ನ್ಯಾಯಾಂಗದ ಕಾರ್ಯವನ್ನು ಹೋಲಿಸಿ ನೋಡಿದರೆ ನಮ್ಮ ನ್ಯಾಯಾಂಗದ ಕಾರ್ಯ ಅತ್ಯುನ್ನತ ಹಾಗೂ ಅಮೋಘಮಟ್ಟದ್ದಾಗಿ ಈ ರಾಷ್ಟ್ರದ ಸಾರ್ವಜನಿಕರ ಪ್ರಶಂಸೆಗೆ ಪಾತ್ರವಾಗಿರುತ್ತದೆ. ನ್ಯಾಯಾಂಗ ಕ್ಷೇತ್ರದಲ್ಲಿರುವ ಪ್ರಾಮಾಣಿಕ ನ್ಯಾಯಾಧೀಶರಲ್ಲಿರುವ ಸ್ವಾರ್ಥ ರಹಿತ, ಪಕ್ಷಪಾತ ರಹಿತ, ಭ್ರಷ್ಟಾಚಾರ ರಹಿತ, ಅಧಿಕಾರ ದುರುಪಯೋಗ ರಹಿತ, ದುರಾಡಳಿ ರಹಿತ, ನ್ಯಾಯಾಂಗ ಕಾರ್ಯಾಚರಣೆ ಉನ್ನತಮಟ್ಟದ ಮಾದರಿಯಾಗಿರುವುದು ಹೆಮ್ಮೆಯ ವಿಷಯವಾಗಿದೆ. ನ್ಯಾಯಾಂಗದಲ್ಲಿ ಎಲ್ಲಾದರೂ ಅಕಸ್ಮಾತ ಲೋಪ ಕಂಡರೆ ತಕ್ಷಣ ಅದರ ನಿವಾರಣೆ ಮಾಡಿ ನ್ಯಾಯಾಂಗಕ್ಕೆ ಕಪ್ಪು ಚುಕ್ಕಿ ಬಾರದಂತೆ ಮಾಡುತ್ತಿರುವ ನ್ಯಾಯಾಂಗ ಆಡಳಿತವಿರುವುದು ಭಾರತೀಯರ ಸುದೈವ. ಇದಕ್ಕೆ ತದ್ವಿರುದ್ಧವಾಗಿ ನಮ್ಮ ರಾಷ್ಟ್ರದಲ್ಲಿಯ ರಾಜ್ಯ ಕಾರ್ಯಾಂಗ ಹಾಗೂ ರಾಷ್ಟ್ರ - ಕಾರ್ಯಾಂಗಗಳ ಆಡಳಿತ ಹಾಗೂ ಅಭಿವೃದ್ಧಿಯ ಕಾರ್ಯವೈಖರಿ ಉಗ್ರಟೀಕೆಗೆ ತುತ್ತಾಗಿ ಸ್ವಾರ್ಥ, ಪಕ್ಷಪಾತ, ಭ್ರಷ್ಟಾಚಾರ, ಅಧಿಕಾರ

ದುರುಪಯೋಗ, ದುರಾಡಳಿತ, ಅಧ್ಯಕ್ಷತೆ ಇತ್ಯಾದಿ ಮಾರಕಗಳು ನಮ್ಮ ರಾಷ್ಟ್ರದ ಜನತೆಯನ್ನು ಪೀಡಿಸುತ್ತ ನಿರುದ್ಯೋಗ, ಬಡತನ, ಅಪರಾಧ, ಹಣಕಾಸು ಕೊರತೆಗಳಿಗೆ ಹೆದ್ದಾರಿಯನ್ನು ನಿರ್ಮಿಸುತ್ತಿರುವುದು ಪ್ರಜಾತಂತ್ರ ವ್ಯವಸ್ಥೆಗೆ ಗಂಡಾಂತರಕಾರಿಯಾಗಿದೆ. ಈ ಹಿನ್ನೆಲೆಯಲ್ಲಿ ನ್ಯಾಯವಾದಿಗಳು ಹಾಗೂ ನ್ಯಾಯವಾದಿಗಳ ಸಂಘಗಳು ತಾವು ಯಾವ ಹಂತದಲ್ಲೇ ಇರಲಿ ಅವರೆಲ್ಲರೂ ಸಕ್ರಿಯವಾಗಿ ಎಲ್ಲಾ ಕ್ಷೇತ್ರಗಳಲ್ಲಿ ಇನ್ನಷ್ಟು ಪಾಲ್ಗೊಂಡು ಈ ದೇಶದ ಹಾಗು ರಾಜ್ಯದ ಬಡ ಹಾಗೂ ಅರ್ಹ ಜನತೆಗೆ ಉಚಿತ ಕಾನೂನು ನೆರವನ್ನು ಪರಿಣಾಮಕಾರಿಯಾಗಿ ಒದಗಿಸಿಕೊಡುತ್ತ, ನೋಟರಿ ಪಬ್ಲಿಕ್ ಸೇವೆ ಮಾಡುತ್ತ ಜಗಳಗಂಟರ ಜಗಳಗಳನ್ನು ಬಗೆಹರಿಸಿ ರಾಜಿ ಮಾಡಿಸುತ್ತ ಸಹಕಾರ, ಸಾಮರಸ್ಯ, ಏಕತೆ, ಸಮಗ್ರತೆ, ಭ್ರಾತೃತ್ವ, ಮಿತ್ರತ್ವವನ್ನು ಒಡಮೂಡಿಸುತ್ತ, ಬಡವ - ಶ್ರೀಮಂತ, ಸವರ್ಣೀಯ - ದಲಿತ, ಅಕ್ಷರಿ - ನಿರಕ್ಷರಿ ಇತ್ಯಾದಿಗಳ ನಡುಮಧ್ಯದ ಅಂತರ ಹಾಗೂ ಆಳಗಳಿಗೆ ಮುಟ್ಟುಗೋಲು ಹಾಕುತ್ತ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಹಾಗೂ ಪತ್ರಿಕಾಂಗ ಇತ್ಯಾದಿ ಸಾರ್ವಜನಿಕ ರಂಗಗಳಲ್ಲಿ ತಮ್ಮ ಅಮೋಘ ಹಾಗೂ ಅಮೂಲ್ಯವಾದ ಪಾತ್ರವಹಿಸುತ್ತ ಈ ರಾಷ್ಟ್ರದ ಉತ್ತಮ ಆಡಳಿತ ಹಾಗೂ ಪ್ರಗತಿಪರ ಅಭಿವೃದ್ಧಿಗಳಿಗೆ ಕೊಡುಗೆಯಾಗಿ ಸಾಗುವುದು ಸಾರ್ವಜನಿಕ ಹಿತದೃಷ್ಟಿಯಿಂದ ಅಗತ್ಯ.

❑

ನ್ಯಾಯಪರಿಪಾಲನೆ

ರಾಷ್ಟ್ರದಲ್ಲಿ ಸಂವಿಧಾನಬದ್ಧವಾದ ನ್ಯಾಯಾಂಗ ಸರ್ವಸಮ್ಮತವಾಗಿ ಸತ್ಯ, ನ್ಯಾಯ, ನೀತಿಬದ್ಧವಾಗಿ ಕಾರ್ಯ ನಿರ್ವಹಿಸುತ್ತಿರುವುದು ಭಾರತೀಯರ ಸುದೈವ. ನ್ಯಾಯಾಂಗವು ನಿರ್ಭೀತಿ, ನಿರ್ಭೀಡೆ, ಆಡಳಿತ ಹಸ್ತಕ್ಷೇಪ, ಅನಾನುಕೂಲ, ಆತಂಕವಿಲ್ಲದೆ ಅಭಾದಿತವಾಗಿ ನಿರಾತಂಕವಾಗಿ ಕಾರ್ಯಾಚಣೆ ಮಾಡಲು ಕೇಂದ್ರ ಹಾಗೂ ರಾಜ್ಯ ಸರಕಾರಗಳು ಮುಂದಾಗಬೇಕು. "ದುಷ್ಟ ಶಿಷ್ಟಂ ಶಿಷ್ಟ ರಕ್ಷಂ" ಇದು ದೇವರ ಕಾರ್ಯ ಅಂದು ಆಗಿದ್ದರೆ, ಈಗ ಅದು ನ್ಯಾಯಾಲಯದಲ್ಲಿಯ ನ್ಯಾಯಾಧೀಶರ ಸತ್ಕಾರ್ಯವಾಗಿದೆ. ಅನ್ಯಾಯದ ಶೂಲದಲ್ಲಿ ಸಿಕ್ಕದ ನ್ಯಾಯಕ್ಕಾಗಿ ನ್ಯಾಯಾಧೀಶರ ಮೊರೆಹೊಕ್ಕು ಹಕ್ಕುಗಳನ್ನು ಪಡೆಯುತ್ತಾನೆ. ಹಕ್ಕುಗಳ ಹರಣಕ್ಕೆ ಒಳಗಾದವ ನ್ಯಾಯಾಧೀಶರ ಮೊರೆ ಹೊಕ್ಕು ಹಕ್ಕುಗಳನ್ನು ಪಡೆಯುತ್ತಾನೆ. ಭಾರತ ದೇಶದಲ್ಲಿಯ ಯಾವುದೇ ವ್ಯಕ್ತಿ ಇರಲಿ ಸಂಘ, ಸಂಸ್ಥೆ, ನಿಗಮ, ಪ್ರಾಧಿಕಾರವಿರಲಿ ಅಥವಾ ಯಾವುದೇ ರಾಜ್ಯದ, ಕೇಂದ್ರ ಸರಕಾರವಿರಲಿ, ಸಂವಿಧಾನ ಅಥವಾ ಯಾವುದೇ ಅಧಿನಿಯಮಗಳನ್ನು ಉಲ್ಲಂಘಿಸಿ ತಪ್ಪು ಮಾಡಿದಾಗ ವಿಳಂಬವಿಲ್ಲದೆ ಅದನ್ನು ಎತ್ತಿತೋರಿ ತಪ್ಪಿಗೆ ತಕ್ಕ ಶಿಕ್ಷೆ ಅಥವಾ ಪರಿಹಾರವನ್ನು ಈ ದೇಶದಲ್ಲಿಯ ನ್ಯಾಯಾಲಯದ ನ್ಯಾಯಾಧೀಶರ ಪೀಠಗಳು ನೀಡುತ್ತಿರುವುದು ಪ್ರಶಂಸನೀಯವಾಗಿದೆ. ಇದಕ್ಕೆ ಮೂಲಕಾರಣ ನ್ಯಾಯಾಂಗದಲ್ಲಿ ನ್ಯಾಯಾಧೀಶರ ನೇಮಕ ಹಾಗೂ ವರ್ಗಾವಣೆಗಳಲ್ಲಿ ಅನುಚಿತ ಹಸ್ತಕ್ಷೇಪವಿಲ್ಲ ದಿರುವುದೆಂದು ಹೇಳಬೇಕಾಗಿದೆ. ಆದರೂ ಸರಕಾರಗಳು ಅಲ್ಲಲ್ಲಿ ವಾಮಮಾರ್ಗದಲ್ಲಿ ಹಸ್ತಕ್ಷೇಪ ವಿಫಲ ಪ್ರಯತ್ನ ಮಾಡುತ್ತಿರುವ ಉದಾಹರಣೆಗಳು ಪತ್ರಿಕಾಂಗಗಳ ಮೂಲಕ ಆಗಾಗ ಬೆಳಕಿಗೆ ಬರುತ್ತಲಿವೆ. ಆದಾಗ್ಯೂ ಈ ದೇಶದಲ್ಲಿಯ ಅನೇಕ ಧರ್ಮಕಾರಣಗಳು, ಪ್ರಜಾಪ್ರತಿನಿಧಿಗಳು ಅದರಲ್ಲೂ ವಿಶೇಷವಾಗಿ ಅನೇಕ ಮಂತ್ರಿಗಳು, ಮುಖ್ಯಮಂತ್ರಿಗಳು, ಪ್ರಧಾನ ಮಂತ್ರಿಗಳು ನ್ಯಾಯಾಲಯದ ಕಟಕಟೆಯಲ್ಲಿ ಜನಸಾಮಾನ್ಯರಂತೆ ಸ್ವಾರ್ಥ, ಪಕ್ಷಪಾತ, ಸ್ವಜನ ಪಕ್ಷಪಾತ, ಭ್ರಷ್ಟಾಚಾರ, ಅಧಿಕಾರ ದುರುಪಯೋಗ, ದುರಾಡಳಿತ ಇತ್ಯಾದಿ ಆರೋಪಗಳನ್ನು ಎದುರಿಸುತ್ತಿರುವುದು ನ್ಯಾಯಾಲಯದ ಮುಂದೆ ಎಲ್ಲರೂ

ಒಂದೇ ಎಂಬ ಸಿದ್ಧಾಂತ ಎದ್ದು ಕಾಣುತ್ತಿರುವುದು ಪ್ರಶಂಸನೀಯವಾಗಿದೆ. ಪ್ರಕರಣಗಳು ನ್ಯಾಯಾಲಯಕ್ಕೆ ಸಲ್ಲಿಸಲ್ಪಡುವ ಮೊದಲು ತನಿಖೆ ಹಂತದಲ್ಲಿ ತನಿಖಾಧಿಕಾರಿಗಳನ್ನು ಬದಲು ಮಾಡುವುದಾಗಲೀ, ದಿನಮೇಕ ಮಾಡಿ ವಿಳಂಬ ಮಾಡುವುದಾಗಲೀ, ಸರಿಯಾದ ಸಾಕ್ಷಿ - ಪುರಾವೆಗಳನ್ನು ಒದಗಿಸದೆ ಇರುವುದಾಗಲೀ ಅನೇಕ ಲೋಪ ದೋಷಗಳನ್ನೊಳಗೊಂಡು ಪ್ರಕರಣ ನಿಷ್ಫಲ - ವಿಫಲಗೊಳ್ಳುವಂತೆ ಅವುಗಳನ್ನು ನ್ಯಾಯಾಲಯುಗಳಿಗೆ ಅಲ್ಲದ ಮನಸ್ಸಿನಿಂದ ಕಳುಹಿಸಿ ಕೊಡುವುದಾಗಲೀ ಈ ರಾಷ್ಟ್ರದಲ್ಲಿಯ ಯಾವುದೇ ಸರಕಾರಗಳಿಗೆ ಭೂಷಣವಲ್ಲ. ಪರರಾಷ್ಟ್ರದಲ್ಲಿ ಅಪರಾಧವೆಸಗಿದ ರಾಷ್ಟ್ರಾಧ್ಯಕ್ಷರು, ಪ್ರಧಾನಮಂತ್ರಿ, ಮುಖ್ಯಮಂತ್ರಿಗಳನ್ನೊಳಗೊಂಡು ಅನೇಕರು ಅಲ್ಲಲ್ಲಿಯ ನ್ಯಾಯಾಲಯಗಳ ತೀರ್ಮಾನದ ಪ್ರಕಾರ ತಪ್ಪಿತಸ್ಥರಾಗಿ ಜೇಲು ಶಿಕ್ಷೆ ಹಾಗೂ ಭಾರೀ ದಂಡ ಅನುಭವಿಸಿದ ದೃಷ್ಟಾಂತಗಳನ್ನು ಪತ್ರಿಕಾಂಗಗಳ ಮುಖಾಂತರ ನೋಡುತ್ತಿದ್ದೇವೆ. ಪರರಾಷ್ಟ್ರದಲ್ಲಿಯ ಸರಕಾರಗಳು ಅಪರಾಧಿಗಳು ಅವರೆಷ್ಟೇ ದೊಡ್ಡವರಿರಲಿ ಅವರ ಅಪರಾಧವನ್ನು ಸಾಬೀತುಮಾಡಲು ಅದೆಷ್ಟು ಆಸಕ್ತಿ, ಪರಿಶ್ರಮ, ಪ್ರಯತ್ನಗಳನ್ನು ವಹಿಸುವುವೋ ಅಷ್ಟೇ ಅದಕ್ಕೂ ಹೆಚ್ಚು ಕಾರ್ಯಶೀಲರಾಗಿ ನಮ್ಮ ದೇಶದ ಸರಕಾರಗಳು ದುಷ್ಟ ರಾಜಕಾರಣಿ ಹಾಗೂ ದುಷ್ಟ ಧರ್ಮಕಾರಣಿಗಳನ್ನು ಬಗ್ಗು ಬಡಿದರೆ ಈ ರಾಷ್ಟ್ರದ ಸತ್‌ಪ್ರಜೆ ಹಾಗೂ ಪ್ರಜಾತಂತ್ರ ವ್ಯವಸ್ಥೆ ಸುದೈವಿ.

ಕರ್ನಾಟಕ ರಾಜ್ಯದಲ್ಲಿ ನ್ಯಾಯಾಂಗ ನಡೆದು ಬಂದಿರುವ ದಾರಿ ಹಾಗೂ ಹೊಂದಿರುವ ವ್ಯವಸ್ಥೆ ಶ್ರೇಷ್ಠ ಮಾದರೀಯವಾಗಿದೆ. ಇದಕ್ಕೆ ಸರಕಾರದ ಕೊಡುಗೆ, ನ್ಯಾಯಾಧೀಶರ ಸದ್‌ವರ್ತನೆ, ನ್ಯಾಯವಾದಿಗಳ ಸಹಕಾರ ಇವೆಲ್ಲವುಗಳ ಒಂದು ಗೂಡಿಕೆಯ ಮೂಲವೇ ಕಾರಣವೆಂದು ಹೇಳಿದರೆ ತಪ್ಪಾಗಲಾರದು. ಮುನ್ಸೀಫ್ ಮಾಜಿಸ್ಟ್ರೇಟರಿಂದ ಹಿಡಿದು ರಾಜ್ಯದ ಮುಖ್ಯನ್ಯಾಯಾಧೀಶರವರೆಗೆ ಎಲ್ಲ ಹಂತದ ನ್ಯಾಯಾಧೀಶರು ಯಾವುದೇ ತರಹದ ರಾಗ ದ್ವೇಷ ಭಯ, ಭೀತಿ, ಸೋಂಕು ಇಲ್ಲದೆ ನ್ಯಾಯದಾನ ಮಾಡುತ್ತಿರುವುದು ಈ ರಾಜ್ಯದ ಜನತೆಯ ಸುದೈವ. ರಾಜ್ಯದಲ್ಲಿ ಪ್ರತಿಯೊಂದು ತಾಲೂಕಿಗೊಂದು ಕೋರ್ಟು ಬೇಕು. ಕೋರ್ಟು ಕಟ್ಟಬೇಕು, ನ್ಯಾಯಾಧೀಶರ ಹಾಗೂ ಸಿಬ್ಬಂದಿಗಳ ವಸತಿ ಸೌಕರ್ಯಬೇಕು. ಕೋರ್ಟುಗಳಲ್ಲಿ ಸುಸಜ್ಜಿತವಾದ ಗ್ರಂಥಾಲಯ ಬೇಕು. ಉಚಿತ ಕಾನೂನು ನೆರವು ಸಮಿತಿಗಳು ಬೇಕು ಹಾಗೂ ಅವು ಸಮರ್ಥ ರೀತಿಯಲ್ಲಿ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಬೇಕು. ನ್ಯಾಯಾಲಯುಗಳಲ್ಲಿ ನ್ಯಾಯಾಧೀಶರ ಹಾಗೂ ಇತರೆ ಸಿಬ್ಬಂದಿ ಜಾಗ ಖಾಲಿ ಇರಬಾರದು. ತ್ವರಿತ ರೀತಿಯಲ್ಲಿ ಸಕಾಲದಲ್ಲಿ ವಿಳಂಬವಿಲ್ಲದೆ ಎಲ್ಲಾ ಹಂತದ ನ್ಯಾಯಾಲಯುಗಳಲ್ಲಿ ನ್ಯಾಯ ದೊರೆಯಬೇಕು, ನ್ಯಾಯಾಲಯುಗಳಲ್ಲಿ ಸಾಕಷ್ಟು ಪಿಠೋಪಕರಣ ಹಾಗೂ ಸಾಧನ ಸಾಮಗ್ರಿ ಸಲಕರಣೆಗಳು ಬೇಕು. ಉಚಿತ ಕಾನೂನು

ಸಲಹೆ ಸಹಾಯ ಬೇಕು ಅಲ್ಲಲ್ಲಿ ಹೊಸ ಕೋರ್ಟುಗಳ ಸ್ಥಾಪನೆಯಾಗಬೇಕು. ರಾಜ್ಯದ ಎಲ್ಲಾ ಹಂತದ ನ್ಯಾಯಾಲಯಗಳ ನ್ಯಾಯಾಡಳಿತದ ವಿವಿಧ ವೆಚ್ಚಕ್ಕಾಗಿ ಹಣಬೇಕು, ಕೋರ್ಟುಗಳಿಗೆ ಸರಕಾರಿ ಪರ ಬಂದ ಸಾಕ್ಷಿದಾರರಿಗೆ ಸಮಂಜಸವಾದ ಪ್ರಯಾಣ ಭತ್ಯೆ, ದಿನಭತ್ಯೆ ಕೊಡಬೇಕು. ವಿವಿಧ ಹಂತದ ಹೆಚ್ಚುವರಿ ನ್ಯಾಯಾಲಯಗಳು ಬೇಕು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ವರ್ಗಗಳ ಮೇಲಿನ ದೌರ್ಜನ್ಯ ಮತ್ತು ಅಪರಾಧಗಳ ವಿಚಾರಣೆಗಳ ವಿಶೇಷ ನ್ಯಾಯಾಲಯಗಳು ದೂರದಲ್ಲಿರದೆ ಸಮೀಪದಲ್ಲಿದ್ದು ತ್ವರಿತವಾಗಿ ನ್ಯಾಯ ನಿರ್ಣಯವಾಗಬೇಕು. 1987ರ ಕೇಂದ್ರದ ಕಾನೂನು ಸೇವಾ ಪ್ರಾಧಿಕಾರ ಅಧಿನಿಯಮದನ್ವಯ ರಾಜ್ಯದಲ್ಲಿ 1996ರ ಕರ್ನಾಟಕ ಕಾನೂನು ಸೇವಾ ಪ್ರಾಧಿಕಾರ ನಿಯಮಾವಳಿ ಪ್ರಕಾರ ರಾಜ್ಯಮಟ್ಟದಲ್ಲಿ ರಾಜ್ಯ ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ತಾಲ್ಲೂಕು ಮಟ್ಟದಲ್ಲಿ ತಾಲೂಕು ಸೇವಾ ಸಮಿತಿ ಇವುಗಳ ರಚನೆಯಾಗಿ ರಾಜ್ಯದ ಎಲ್ಲಾ ಹಂತದ ಅರ್ಹರಾದ ಹಾಗೂ ದುರ್ಬಲ ವರ್ಗದ ಬಡಜನತೆಗೆ ಉಚಿತ ಕಾನೂನು ಸೇವೆಯನ್ನು ಒದಗಿಸುವ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕು. ರಾಜ್ಯದಲ್ಲಿ ಹೊಸದಾಗಿ ರಚಿತವಾದ ಏಳು ಜಿಲ್ಲೆಗಳು ಅಸ್ತಿತ್ವದಲ್ಲಿ ಒಂದು ಎರಡು ವರ್ಷ ಸಮೀಪಿಸುತ್ತಿದ್ದರೂ ಈ ಹೊಸ ಜಿಲ್ಲೆಯ ಜನತೆ ಹಾಗೂ ನ್ಯಾಯವಾದಿಗಳು ಅನುಕೂಲತೆಗಳಿಂದ ವಂಚಿತರಾಗಿ ಬಹುದೂರದ ಮೊದಲಿನ ಜಿಲ್ಲಾ ನ್ಯಾಯಾಲಯಗಳಿಗೆ ಎಡತಾಕುತ್ತಿದ್ದರೂ ಇದುವರೆಗೆ ಹೊಸ ಜಿಲ್ಲೆಗಳಲ್ಲಿ ಹೊಸ ಜಿಲ್ಲಾ ನ್ಯಾಯಾಲಯಗಳ ರಚನೆಯ ಸುಳಿವೇ ಇಲ್ಲ. ಈ ಎಲ್ಲಾ ಹಿನ್ನೆಲೆಯಲ್ಲಿ ರಾಜ್ಯ ಸರಕಾರ ಆಸಕ್ತಿ ವಹಿಸಿ ಸಮಸ್ಯೆ ಬಗೆಹರಿಸಿ ನ್ಯಾಯವು ಸುಲಭ ಹಾಗೂ ಸರಳ ರೀತಿಯಲ್ಲಿ ತ್ವರಿತವಾಗಿ ಸಮರ್ಥ ರೀತಿಯಲ್ಲಿ ರಾಜ್ಯದ ಜನತೆಗೆ ಸಿಗುವಂತೆ ಮಾಡುವುದು ಆದ್ಯ ಕರ್ತವ್ಯವೆಂಬುದನ್ನು ಅರಿಯಬೇಕು. ಆದರೆ ಆಗುತ್ತಿರುವುದೇನು?

ರಾಜ್ಯದ ನ್ಯಾಯಪರಿಪಾಲನೆಗಾಗಿ ರಾಜ್ಯ ಸರಕಾರ ಸಾಕಷ್ಟು ಹಣವನ್ನು ಆಯವ್ಯಯದಲ್ಲಿ ನಿಗದಿಮಾಡದೆ ಕಡಿಮೆ ಹಣವನ್ನೇ ನಿಗದಿಮಾಡಿ ಅದನ್ನು ಸಹ ಸಂಪೂರ್ಣ ವೆಚ್ಚ ಮಾಡದೆ ಇರುವುದು ನ್ಯಾಯಾಂಗದತ್ತ ಸರಕಾರದ ನಿರಾಸಕ್ತಿ ಸರಿಯಲ್ಲ. ಸರಕಾರದ ಅಧಿಕೃತ ವಾರ್ಷಿಕ ವಿತ್ತ ನಿರೂಪಣೆ ಪ್ರಕಾರ 94-95 ರಿಂದ 98-99ರ ಐದು ವರ್ಷಗಳ ಅವಧಿಯಲ್ಲಿ ರಾಜ್ಯದ ನ್ಯಾಯಪರಿಪಾಲನೆಗಾಗಿ ಬಜೆಟ್‌ದಲ್ಲಿ ರೆವಿನ್ಯೂ ವೆಚ್ಚಕ್ಕೆ ನಿಗದಿ ಮಾಡಿದ ಅಂದಾಜು ವೆಚ್ಚ ಕೇವಲ 425.47 ಕೋಟಿ, ಇದರಲ್ಲಿ ವೆಚ್ಚ ಮಾಡಿರುವ ಮೊತ್ತ 372.43 ಕೋಟಿ, ವೆಚ್ಚ ಮಾಡದೆ ಉಳಿಸಿರುವ ಮೊತ್ತ 53.04 ಕೋಟಿ. ಇದು ನ್ಯಾಯಾಂಗದ ಬಗ್ಗೆ ನಿರ್ಲಕ್ಷ್ಯವಲ್ಲವೇ? ಅದೇ ವಿತ್ತ ನಿರೂಪಣೆ ಪ್ರಕಾರ ಸಂಚಿತ ನಿಧಿಯ ಮೇಲಣ ಪ್ರಭಾತ ವೆಚ್ಚ ಬಜೆಟ್ ನಿಗದಿತ ಅಂದಾಜು ಮೀರಿ 94-95

ರಿಂದ 97-98 ವರೆಗಿನ ನಾಲ್ಕು ವರ್ಷದ ಅವಧಿಯಲ್ಲಿ 1.54 ಕೋಟಿ ಹೆಚ್ಚು ವೆಚ್ಚ ಮಾಡಿರುವಾಗ ಇದೆ ಶೀರ್ಷಿಕೆಯಲ್ಲಿ 98-99 ರಲ್ಲಿ 81.00 ಲಕ್ಷ ಮೊತ್ತವನ್ನು ಅಂದಾಜಿಗಿಂತ ಕಡಿಮೆ ವೆಚ್ಚಮಾಡಲು ಸರಕಾರ ಮುಂದಾಗಿರುವದನ್ನು ನೋಡಿದರೆ ನ್ಯಾಯಪರಿಪಾಲನೆ ಬಗ್ಗೆ ಸರಕಾರದ ನಿಷ್ಕಾಳಜಿ ಎದ್ದು ಕಾಣುತ್ತದೆ. ನ್ಯಾಯಾಡಳಿತಕ್ಕೆ ದಿವಾಳಿ ಹಾಗೂ ಸತ್ರ ನ್ಯಾಯಾಲಯಗಳಿಗೆ, ವಿಶೇಷ ಕೋರ್ಟುಗಳಿಗೆ, ಕಾನೂನು ಸಲಹೆಗಳಿಗೆ ಖಾಲಿ ಹುದ್ದೆಗಳನ್ನು ತುಂಬಲಿಕ್ಕೆ, ಸಾಮಾಜಿಕ ಭದ್ರತೆ ಹಾಗೂ ಕಲ್ಯಾಣಕ್ಕಾಗಿ, ಹೈಕೋರ್ಟು ಸೂಚನೆ ಪ್ರಕಾರ ಹೊಸ ಕೋರ್ಟು ಸ್ಥಾಪಿಸುವ ಸಲುವಾಗಿ, ಕಾನೂನು ನೆರವು ಹಾಗೂ ಸಲಹೆ ಇತ್ಯಾದಿಗಳಿಗೆ ಸಿ.ಎ.ಜಿ. ವರದಿ ಪ್ರಕಾರ 94-95, 95-96 ಹಾಗೂ 96-97ರ ಈ ಮೂರು ವರ್ಷಗಳ ಅವಧಿಯಲ್ಲಿ ಬಜೆಟ್ ನಿಗದಿ ಅಂದಾಜಿನ ಪ್ರಕಾರ ಸಂಪೂರ್ಣ ಹಣ ವೆಚ್ಚಮಾಡದೆ 26.55 ಕೋಟಿ ಹಣವನ್ನು ರಾಜ್ಯ ಸರಕಾರ ವೆಚ್ಚ ಮಾಡದೆ ರಾಜ್ಯದಲ್ಲಿ ನ್ಯಾಯಪರಿಪಾಲನೆಗೆ ಹಾಗೂ ರಾಜ್ಯದ ಜನತೆಗೆ ಅನ್ಯಾಯ ಮಾಡಿರುವುದು ಪ್ರಜಾ ಸರಕಾರಕ್ಕೆ ಭೂಷಣವಲ್ಲ. ರಾಜ್ಯದಲ್ಲಿ ನ್ಯಾಯಾಲಯದ ಕಟ್ಟಡ ನಿರ್ಮಾಣಕ್ಕಾಗಿ ಲೋಕೋಪಯೋಗಿ, ಕಾಮಗಾರಿಗಳ ಮೇಲಣ ಬಂಡವಾಳ ವೆಚ್ಚ ಶೀರ್ಷಿಕೆ 4,059ರಲ್ಲಿ ಬಜೆಟ್ ಪ್ರಕಾರ ಹಣವನ್ನು ನಿಗದಿ ಮಾಡಲಾಗುತ್ತಿದೆ. ಈ ಶೀರ್ಷಿಕೆಯಲ್ಲಿ 94-95 ರಿಂದ 98-99ರ ಐದು ವರ್ಷಗಳ ಅವಧಿಯಲ್ಲಿ 97-98ರಲ್ಲಿ ಮಾತ್ರ ಬಜೆಟ್ ಅಂದಾಜು ಮೀರಿ 3.37 ಕೋಟಿ ಹೆಚ್ಚು ವೆಚ್ಚ ಮಾಡಿದ್ದರೂ ಐದು ವರ್ಷಗಳ ಅವಧಿಯಲ್ಲಿ ಬಜೆಟ್ ಪ್ರಕಾರ ವೆಚ್ಚ ಮಾಡದೆ ಉಳಿಸಿದ ಒಟ್ಟಾರೆ ಮೊತ್ತ 21.81 ಕೋಟಿ, ಒಂದೊಂದು ವರ್ಷದಲ್ಲಿ ಹಾಗೂ ಕೆಲವು ಶೀರ್ಷಿಕೆಗಳಲ್ಲಿ ಬಜೆಟ್ ಮೀರಿ ಹೆಚ್ಚು ವೆಚ್ಚ ಮಾಡುವ ಸಂಪ್ರದಾಯ ಸರಕಾರದಲ್ಲಿರುವಾಗ ನ್ಯಾಯಪರಿಪಾಲನೆ ಇಲಾಖೆಯಲ್ಲಾಗಲೀ ಅಥವಾ ಬೇರೆ ಜನಪರ ಕಲ್ಯಾಣ ಇಲಾಖೆಗಳಲ್ಲಾಗಲೀ ಪ್ರತಿ ವರ್ಷ ಬಜೆಟ್ ಪ್ರಕಾರ ಸಹಸ್ರಾರು ಕೋಟಿ ಹಣವನ್ನು ವೆಚ್ಚ ಮಾಡದೆ ಮುಂದುವರಿದರೆ ವಿವಿಧ ಅಭಿವೃದ್ಧಿ ಕಲ್ಯಾಣ ಪ್ರಗತಿಗೆ ಸರಕಾರದ ನಿಷ್ಕ್ರಿಯೆ ಪ್ರಜಾ ಸಮೂಹಕ್ಕೆ ಮಾಡುವ ಅಪಚಾರ ಅಪಕಾರವಾದೀತು. ಈ ದಿಶೆಯಲ್ಲಿ ಸರಕಾರ ತನ್ನ ಕರ್ತವ್ಯ ಚ್ಯುತಿಯ ಅರಿವನ್ನು ಅರಿತು ಮುನ್ನಡೆದು ಪ್ರಗತಿ ಸಾಧಿಸುವಲ್ಲಿ ಮುಂದಾಗುವುದು ಒಳ್ಳೆಯದು ಹಾಗೂ ಸರಕಾರಕ್ಕೆ ಭೂಷಣ.

❑

ನ್ಯಾಯವಾದಿಗಳ ಕೊಡುಗೆ : ರಾಷ್ಟ್ರದ ಪ್ರಗತಿಗೆ ಅಪಾರ

ಭಾರತದ ಸ್ವಾತಂತ್ರ್ಯಕ್ಕಾಗಿ, ಭಾರತದಲ್ಲಿ ಪ್ರಜಾತಂತ್ರ ವ್ಯವಸ್ಥೆಯ ಯಶಸ್ವಿಗಾಗಿ ಹಾಗೂ ಭಾರತದ ಸಂವಿಧಾನ ನಿರ್ಮಾಣಕ್ಕಾಗಿ ಈ ರಾಷ್ಟ್ರದಲ್ಲಿಯ ಮಹಾತ್ಮಾ ಗಾಂಧೀಜಿ, ಮೋತಿಲಾಲ್ ನೆಹರು, ಡಾ. ಅಂಬೇಡ್ಕರರು ಮೊದಲಾದ ಇನ್ನೂ ಅನೇಕ ಬ್ಯಾರಿಸ್ಟರ್ ವ ನ್ಯಾಯವಾದಿಗಳ ಕೊಡುಗೆ ಅಪಾರ, ಅವರ್ಣನೀಯ. ಅಂತೆಯೇ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಹಾಗೂ ಪತ್ರಿಕಾಂಗಗಳಲ್ಲಿ ಕೂಡ ಗ್ರಾಮ, ತಾಲ್ಲೂಕು, ಜಿಲ್ಲಾ, ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಕೂಡ ನ್ಯಾಯವಾದಿಗಳ ಸೇವೆ ಅಪಾರವಾಗಿದೆ. ಸಾರ್ವಜನಿಕರ ಮಾನ - ಮರ್ಯಾದೆ, ಗೌರವ, ಹಕ್ಕು ರಕ್ಷಣೆಯಲ್ಲಿ ಹಾಗೂ ನೆರವನ್ನು ನೀಡುವಲ್ಲಿ ಸಹ ನ್ಯಾಯವಾದಿಗಳ ಸೇವೆ ಪರಿಣಾಮಕಾರಿಯಾಗಿದೆ. ತಾಲ್ಲೂಕು, ಜಿಲ್ಲೆ, ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ನ್ಯಾಯವಾದಿಗಳ ಸಂಘಟನೆ ಹಾಗೂ ಸಂಘಟಗಳ ಅಸ್ತಿತ್ವ ಕೂಡ ಇಂದಿನ ಪ್ರಜಾತಂತ್ರ ವ್ಯವಸ್ಥೆಯ ಸುವ್ಯವಸ್ಥೆಗೆ ಸಹಕಾರಿ ಹಾಗೂ ಸಹಕಾರಿಯಾಗಿದೆ. ಗ್ರಾಮ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ, ರಾಜ್ಯ ಮಟ್ಟದಲ್ಲಿ ಹಾಗೂ ರಾಷ್ಟ್ರ ಮಟ್ಟದಲ್ಲಿ ನ್ಯಾಯವಾದಿಗಳು ವಿವಿಧ ಸಂಘ - ಸಂಸ್ಥೆ, ಸ್ಥಳೀಯ ಸಂಸ್ಥೆ, ಪಂಚಾಯತಿ, ವಿಧಾನ ಸಭೆ, ವಿಧಾನ ಪರಿಷತ್ತು, ಲೋಕಸಭೆ ರಾಜ್ಯ ಸಭೆಗಳಲ್ಲಿ ಜನತೆಯ ಪ್ರತಿನಿಧಿ ಹಾಗೂ ಮಂತ್ರಿಗಳಾಗಿ, ಮುಖ್ಯಮಂತ್ರಿ, ಪ್ರಧಾನ ಮಂತ್ರಿಗಳಾಗಿ, ರಾಜ್ಯಪಾಲ, ಸಭಾಪತಿ, ಸಭಾಧ್ಯಕ್ಷರಾಗಿ, ಉಪ - ರಾಷ್ಟ್ರಪತಿ, ರಾಷ್ಟ್ರಪತಿಗಳಾಗಿ ಸೇವೆ ಸಲ್ಲಿಸುತ್ತಿರುವುದು; ಕಿರಿಯ ವಿಭಾಗ ಹಾಗೂ ಹಿರಿಯ ವಿಭಾಗಗಳ ನ್ಯಾಯಾಧೀಶರಾಗಿ, ದಂಡಾಧಿಕಾರಿಗಳಾಗಿ ಸತ್ರ ಹಾಗೂ ಜಿಲ್ಲಾ ನ್ಯಾಯಾಧೀಶರಾಗಿ, ಹೈಕೋರ್ಟು ಮತ್ತು ಸುಪ್ರೀಂಕೋರ್ಟ್ ನ್ಯಾಯಾಧೀಶರಾಗಿ ಸೇವೆ ಸಲ್ಲಿಸುತ್ತಿರುವುದು ಹಾಗೂ ಪ್ರಜಾಪ್ರಭುತ್ವದಲ್ಲಿಯ ಉತ್ತಮ ಹಾಗೂ ಆದರ್ಶ ಆಡಳಿತ ಅಭಿವೃದ್ಧಿಗಾಗಿ ಶ್ರಮಿಸುತ್ತಿರುವುದು ನಮ್ಮೀ ದೇಶದ ಸುದೈವವೇ ಆಗಿದೆ. ಈ ಎಲ್ಲ ಕೊಡುಗೆಗಳಿಗೆ ಅಲ್ಲಲ್ಲಿಯ ನ್ಯಾಯವಾದಿಗಳ ಸಂಘ ಹಾಗೂ ಸಂಘಟನೆ ಪೂರಕ ಹಾಗೂ ತಾರಕವಾಗಿವೆ.

ಸಾರ್ವಜನಿಕ ವಿವಿಧ ಸೇವೆಯೊಂದಿಗೆ ನ್ಯಾಯ ನೆರವು ಕೋರಿ ಬಂದ ಜನತೆಗೆ ಕಾನೂನು ನೆರವನ್ನು ನೀಡಿ ಅವರನ್ನು ಕಷ್ಟದಿಂದ ದೂರ ಮಾಡಿ ಅವರನ್ನು ಸಂತೈಸುವುದು ಹಾಗೂ ಅವರ ಹಕ್ಕುಗಳನ್ನು ರಕ್ಷಿಸುವುದು, ಮಹತ್ ಜವಾಬ್ದಾರಿ ಸಹ ನ್ಯಾಯವಾದಿಗಳ ಕೈಯಲ್ಲಿರುವುದರಿಂದ ನ್ಯಾಯವಾದಿಗಳ ಪ್ರಾಮಾಣಿಕ ನಿಷ್ಠಾವಂತ ಸೇವೆ ಇಂದಿನ ಪ್ರಸ್ತುತ ಪರಿಸ್ಥಿತಿಯಲ್ಲಿ ಅಗತ್ಯವಾಗಿದೆ. ನಮಗೆ ದೊರೆತ ಸ್ವಾತಂತ್ರ್ಯ ಹಾಗೂ ಪ್ರಜಾತಂತ್ರ ವ್ಯವಸ್ಥೆ ಇಂದು ಅವ್ಯವಸ್ಥಿತವಾಗಿ ರಾಷ್ಟ್ರದಲ್ಲಿ ಸ್ವಾರ್ಥ, ಪಕ್ಷಪಾತ, ಸ್ವಜನಪಕ್ಷಪಾತ, ಅಧಿಕಾರ ದುರುಪಯೋಗ, ದುರಾಡಳಿತ ಹಾಗೂ ಭ್ರಷ್ಟಾಚಾರಗಳು ಹೆಚ್ಚಾಗಿ ಅವುಗಳ ದುಷ್ಪರಿಣಾಮವಾಗಿ ಗಂಡಾಂತರದಲ್ಲಿದೆ. ಈ ಗಂಡಾಂತರದಿಂದ ಸ್ವಾತಂತ್ರ್ಯ ಹಾಗೂ ಪ್ರಜಾತಂತ್ರ ವ್ಯವಸ್ಥೆಯ ನಮ್ಮೀ ರಾಷ್ಟ್ರವನ್ನು ಪಾರು ಮಾಡುವುದು, ಸ್ವಾತಂತ್ರ್ಯ ಹಾಗೂ ಪ್ರಜಾತಂತ್ರ ವ್ಯವಸ್ಥೆಯ ಉಳಿವಿಗಾಗಿ ಹೋರಾಟ ಮಾಡಿದ ನ್ಯಾಯವಾದಿಗಳ ವರ್ಗದ ಜವಾಬ್ದಾರಿ ಅಗತ್ಯವಿರುವುದರಿಂದ ಈ ದಿಶೆಯಲ್ಲಿ ನ್ಯಾಯವಾದಿಗಳ ಚಿಂತನೆ ಹೋರಾಟ ಅಗತ್ಯ ಹಾಗೂ ಅವಶ್ಯ. ರಾಜ್ಯ ಹಾಗೂ ಕೇಂದ್ರ ಸರಕಾರಗಳು ಈ ದೇಶದ ನ್ಯಾಯಾಂಗ, ನ್ಯಾಯಾಂಗದಲ್ಲಿ ನ್ಯಾಯಾಧೀಶರು ಹಾಗೂ ನ್ಯಾಯುವಾದಿಗಳು ನಿರ್ಭೀತಿಯಿಂದ ಅನುಚಿತ ಹಸ್ತಕ್ಷೇಪವಿಲ್ಲದೆ ಕಾರ್ಯನಿರ್ವಹಿಸಲು ಅಗತ್ಯವಾಗಿ ಬೇಕಾದ ಸಹಾಯ, ಸವಲತ್ತು, ನೆರವು, ಧನಸಹಾಯ ನೀಡಿ ಜನತೆಗೆ ನ್ಯಾಯವು ಸರಳವಾಗಿ, ತ್ವರಿತವಾಗಿ, ಸಮೀಪದಲ್ಲಿ, ಸಕಾಲದಲ್ಲಿ ಉಚಿತವಾಗಿ ಸಿಗುವಂತೆ ಸುವ್ಯವಸ್ಥೆಯನ್ನು ಕಲ್ಪಿಸಲೇಬೇಕು. ಯಾವುದೇ ಸಂದರ್ಭದಲ್ಲಿಯೂ ಕೂಡ ನ್ಯಾಯ ಪರಿಪಾಲನೆಗೆ ಸಿಗಬೇಕಾದ ಸವಲತ್ತುಗಳ ತಡೆ ಇರಬಾರದು. 1987ರ ಕೇಂದ್ರ ಕಾನೂನು ಸೇವಾ ಪ್ರಾಧಿಕಾರ ಅಧಿನಿಯಮ, 1996ರ ಕರ್ನಾಟಕ ಕಾನೂನು ಸೇವಾ ಪ್ರಾಧಿಕಾರ ನಿಯಮಾವಳಿ ಪ್ರಕಾರ ರಾಜ್ಯ ಕಾನೂನು ಸೇವಾ ಸಮಿತಿ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಹಾಗೂ ತಾಲ್ಲೂಕು ಸೇವಾ ಸಮಿತಿಗಳ ಕಾರ್ಯ ಚುರುಕಾಗಿ ಎಲ್ಲಾ ಹಂತದ ಅರ್ಹರಾದ ಹಾಗೂ ದುರ್ಬಲ ವರ್ಗದ ಜನತೆಗೆ ಉಚಿತ ಕಾನೂನು ಸೇವೆ ದೊರಕುವಂತೆ ಹಾಗೂ ರಾಜ್ಯದಲ್ಲಿಯ ಎಲ್ಲಾ ಹಂತದ ಉಚಿತ ಕಾನೂನು ಸಮಿತಿಗಳು ಪರಿಣಾಮಕಾರಿಯಾಗಿ ಕಾರ್ಯ ಮಾಡುವಂತೆ ಸರಕಾರ ಸೂಕ್ತ ಕ್ರಮ ತೆಗೆದುಕೊಳ್ಳುವುದು ಒಳ್ಳೆಯದು.

ಅಧಿಕೃತ ಮಾಹಿತಿಯ ಪ್ರಕಾರ ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ 87,703, ಜಿಲ್ಲಾ ಮತ್ತು ಸತ್ರ ನ್ಯಾಯಾಲಯಗಳಲ್ಲಿ 1,59,767, ಹಿರಿಯ ಸಿವಿಲ್ ಜಡ್ಜ್ ಕೋರ್ಟುಗಳಲ್ಲಿ 3,82,736, ಕಿರಿಯ ಸಿವಿಲ್ ಜಡ್ಜ್ ಕೋರ್ಟುಗಳಲ್ಲಿ 6,47,983 ಹೀಗೆ ಒಟ್ಟು 12,78,189 ಮೊಕದ್ದಮೆಗಳು 31.3.99ಕ್ಕೆ ಬಾಕಿ ಇರುವುದಾಗಿ ತಿಳಿದಿದೆ. ಜಿಲ್ಲಾ ಸೆಷನ್ ಕೋರ್ಟುಗಳಲ್ಲಿ 14,569 ಸೆಷನ್ ಕೇಸುಗಳು ಬಾಕಿ ಇವೆ. ಅನೇಕ

ಕೋರ್ಟುಗಳಲ್ಲಿ ಅನೇಕ ಹುದ್ದೆಗಳು ಖಾಲಿ ಇರುವುದಾಗಿ ತಿಳಿದಿದೆ. ರಾಜ್ಯದಲ್ಲಿ 86 ಜಿಲ್ಲಾ ನ್ಯಾಯಾಲಯ, 133 ಹಿರಿಯ ಸಿವಿಲ್ ನ್ಯಾಯಾಲಯ, 305 ಕಿರಿಯ ಸಿವಿಲ್ ನ್ಯಾಯಾಲಯ ಹೀಗೆ ಅನೇಕ ನ್ಯಾಯಾಲಯಗಳಿದ್ದು ಸಾಧ್ಯವಾದಷ್ಟು ಅವುಗಳ ವಿಕೇಂದ್ರೀಕರಣವಾಗಿ ಹೊಸ 7 ಜಿಲ್ಲೆಗಳಿಗೂ ಯಾವುದೇ ಕುಂಟು ನೆಪ ಮಾಡದೆ ಶೀಘ್ರದಲ್ಲಿ ಹೊಸ ಜಿಲ್ಲಾ ನ್ಯಾಯಾಲಯಗಳು ಸ್ಥಾಪಿತವಾಗಿ ಜನತೆಗೆ ಅನುಕೂಲ ವಾಗುವಂತೆ ಸರಕಾರ ವ್ಯವಸ್ಥೆ ಮಾಡಬೇಕು. ವಿವಿಧ ನ್ಯಾಯಾಲಯಗಳ ಹಾಗೂ ನ್ಯಾಯವಾದಿಗಳ ಸಂಘಗಳಿಗೆ ಅಗತ್ಯವಾಗಿ ಬೇಕಾದ ಮೂಲಭೂತ ಸೌಕರ್ಯ, ಸೌಲಭ್ಯಗಳನ್ನು ಸರಕಾರ ಒದಗಿಸಿ ನ್ಯಾಯಾಂಗದ ಕಾರ್ಯ ನಿರ್ವಹಣೆಗೆ ಯಾವುದೇ ಅನಾನುಕೂಲ, ತೊಂದರೆ, ಅಡಚಣೆಯಾಗದಂತೆ ನೋಡುವುದು ಸರಕಾರಕ್ಕೆ ಒಳ್ಳೆಯದು. ನಮ್ಮ ರಾಜ್ಯದಲ್ಲಿ ನ್ಯಾಯಾಂಗ ಅತ್ಯುತ್ತಮವಾಗಿ, ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸು ತ್ತಿರುವುದು ರಾಜ್ಯದ ಜನತೆಯ ಸುದೈವ. ನ್ಯಾಯಪರಿಪಾಲನೆಗೆ ಬಜೆಟ್‌ದಲ್ಲಿ ಅವಶ್ಯಕ ಹಾಗೂ ಹೆಚ್ಚಿನ ಮೊತ್ತವನ್ನು ಸರಕಾರ ಒದಗಿಸಬೇಕು. ಒದಗಿಸಿದ ಮೊತ್ತವನ್ನು ಸಂಪೂರ್ಣವಾಗಿ ವೆಚ್ಚ ಮಾಡಲೇಬೇಕು. ಸರಕಾರದ ವಿತ್ತ ನಿರೂಪಣೆ ಪ್ರಕಾರ 1994-95 ರಿಂದ 98-99ರ 5 ವರ್ಷಗಳ ಅವಧಿಯಲ್ಲಿ ನ್ಯಾಯ ಪರಿಪಾಲನೆಗಾಗಿ ಬಜೆಟ್‌ದಲ್ಲಿ ಒದಗಿಸಿದ ಹಣವನ್ನು ಸಂಪೂರ್ಣ ವೆಚ್ಚ ಮಾಡದೆ 53.04 ಕೋಟಿ ಮೊತ್ತವನ್ನು ಉಳಿಸಲಾಗಿದೆ. ಸಿ.ಎ.ಜಿ. ವರದಿ ಪ್ರಕಾರ ರೆವಿನ್ಯೂ ವೆಚ್ಚದಲ್ಲಿ 94-95 ರಿಂದ 97-98ರ 4 ವರ್ಷಗಳ ಅವಧಿಯಲ್ಲಿ 35.71 ಕೋಟಿ ಮೊತ್ತವನ್ನು ವೆಚ್ಚ ಮಾಡದೇ ಇರುವುದು ಸರಿಯಲ್ಲ. ಅನೇಕ ಇಲಾಖೆಗಳಲ್ಲಿ ಬಜೆಟ್‌ದಲ್ಲಿ ನಿಗದಿತ ಮೊತ್ತಕ್ಕೆ ಹೆಚ್ಚು ವೆಚ್ಚ ಮಾಡುತ್ತಿರುವಾಗ ನ್ಯಾಯ ಪರಿಪಾಲನೆ ಇಲಾಖೆಯಲ್ಲಿ ದೊಡ್ಡ ಮೊತ್ತವನ್ನು ಬಜೆಟ್ ಪ್ರಕಾರ ವೆಚ್ಚ ಮಾಡದೇ ನ್ಯಾಯಾಲಯದಲ್ಲಿಯ ಅಗತ್ಯವಾದ ಮೂಲಭೂತ ಸೌಕರ್ಯಗಳನ್ನು ಒದಗಿಸದೇ ಇರುವುದು ಸರಿಯಲ್ಲ. ಅನೇಕ ಇಲಾಖೆಗಳಲ್ಲಿ ಅನಗತ್ಯ ನೇಮಕ ಮಾಡುತ್ತಿರುವಾಗ ನ್ಯಾಯಾಂಗದಲ್ಲಿ ತಾಲ್ಲೂಕು, ವಿಭಾಗ, ಜಿಲ್ಲಾ ಹಾಗೂ ರಾಜ್ಯಮಟ್ಟದ ಕೋರ್ಟುಗಳಲ್ಲಿ ಅಗತ್ಯವಾದ ನ್ಯಾಯಾಧೀಶರ ಹುದ್ದೆಗಳನ್ನು ನಿರ್ಮಾಣ ಮಾಡಿ ನೇಮಕ ಮಾಡುವುದು, ಅಗತ್ಯವಾದ ಕೋರ್ಟು ಕಟ್ಟಡ, ನ್ಯಾಯಾಧೀಶರ ಹಾಗೂ ಸಿಬ್ಬಂದಿಗಳ ವಸತಿನಿಲಯ ನಿರ್ಮಾಣ, ಕೋರ್ಟುಗಳಲ್ಲಿ ಅಗತ್ಯವಾದ ಪೀಠೋಪಕರಣ ಸಲಕರಣೆ, ಉಚಿತ ಕಾನೂನು ನೆರವು ಘಟಕಗಳಿಗೆ ಅಗತ್ಯವಾದ ಸೌಲಭ್ಯ ಹಾಗೂ ಈ ಎಲ್ಲಾ ಕಾರ್ಯಾಚರಣೆಗಳಿಗೆ ಸರ್ಕಾರ ಒತ್ತು ನೀಡಿ ಸೂಕ್ತ ಕ್ರಮ ತೆಗೆದುಕೊಳ್ಳುವುದು ಸರಕಾರಕ್ಕೆ ಭೂಷಣ.

❑

ತ್ವರಿತ ನ್ಯಾಯಾಲಯಗಳ ರಚನೆ

ಭಾರತ ದೇಶದಲ್ಲಿ ಸದ್ಯಕ್ಕೆ ತಾಲೂಕು ಮಟ್ಟ, ವಿಭಾಗ ಮಟ್ಟ, ಜಿಲ್ಲಾ ಮಟ್ಟ, ರಾಜ್ಯ ಮಟ್ಟ, ರಾಷ್ಟ್ರ ಮಟ್ಟದ ನ್ಯಾಯಾಂಗ ಕ್ಷೇತ್ರದಲ್ಲಿ ವಿವಿಧ ನ್ಯಾಯಾಲಯಗಳು ನೊಂದ ನಾಗರೀಕರಿಗೆ ನ್ಯಾಯವನ್ನು ಒದಗಿಸಿಕೊಡುತ್ತವೆ. ಕಾರ್ಯಾಂಗದ ಅಧಿಕಾರಿಗಳಂತೆ ಯಾವುದೇ ರಾಜಕೀಯ ಹಾಗೂ ಧಾರ್ಮಿಕ ಧುರೀಣರ ಹಸ್ತಕ್ಷೇಪಕ್ಕೆ ಮಣಿಯದೆ, ತಲೆಬಾಗದೆ, ತಾಳಕ್ಕೆ ತಕ್ಕಂತೆ ಕುಣಿಯದೆ, ದಾಕ್ಷಿಣ್ಯಪರರಾಗದೆ, ನ್ಯಾಯನಿಷ್ಠರಿಗಳಾಗಿ ಯಾರ ಬಿಡೆ ಮುದುವತ್ತಿಗೆಗೆ ಮಣಿಯದೆ ಸ್ವತಂತ್ರವಾಗಿ ಎಲ್ಲಾ ಹಂತದ ನ್ಯಾಯಾಧೀಶರು ಪ್ರಾಮಾಣಿಕವಾಗಿ ನ್ಯಾಯ ನಿರ್ಣಯಗಳನ್ನು ನೀಡುತ್ತಿದ್ದಾರೆ. ಇದಕ್ಕೆ ಕಾರಣ ನ್ಯಾಯಾಧೀಶರ ನೇಮಕಾತಿ ವರ್ಗಾವಣೆಗಳು ನ್ಯಾಯಾಂಗದ ಸಂಪೂರ್ಣ ಹತೋಟಿಯಲ್ಲಿರುವುದೇ ಮೂಲ ಕಾರಣ. ನ್ಯಾಯಮೂರ್ತಿಗಳ ನೇಮಾಣಿಕ ಬಡತಿ ಹಾಗೂ ವರ್ಗಾವರ್ಗಿ ಕಾರ್ಯಾಂಗದ ಕೈಯಲ್ಲೇನಾದರೂ ಇದ್ದಿದ್ದರೆ ನ್ಯಾಯಾಂಗ ಉಗ್ರಟೀಕೆಗೆ ಗುರಿಯಾಗಿ ದೇಶದಲ್ಲಿ ಅಲ್ಲೋಲಕಲ್ಲೋಲವೇ ಆಗುತ್ತಿತ್ತು. ಸುದೈವದಿಂದ ಹಾಗಾಗಿಲ್ಲ. ರಾಷ್ಟ್ರದಲ್ಲಿಯು ಸಂವಿಧಾನಬದ್ಧ ನ್ಯಾಯಾಂಗ, ಕಾರ್ಯಾಂಗದಿಂದ ಬೇರೆಯಾಗಿದ್ದು ಯಾರ ಹಂಗೂ ಇಲ್ಲದಿರುವುದು ಹಾಗೂ ಸ್ವತಂತ್ರವಾಗಿ ನ್ಯಾಯ ನೀಡುತ್ತಿರುವುದು ಈ ದೇಶದ ನ್ಯಾಯಾಂಗ ಈ ರಾಷ್ಟ್ರದಲ್ಲಿಯೇ ಏಕೆ ಪರರಾಷ್ಟ್ರಗಳಿಂದ ಕೂಡ ಪ್ರಶಂಸಿಸಲಾಗುತ್ತಿದೆ. ಅದು ಭಾರತೀಯರ ಸುದೈವ. ಕೆಲವು ರಾಜ್ಯಗಳಲ್ಲಿ ರಾಜ್ಯ ಹಾಗೂ ರಾಷ್ಟ್ರ ಮಟ್ಟದ ನ್ಯಾಯಾಧೀಶರ ನೇಮಕಗಳ ಬಗ್ಗೆ ರಾಜ್ಯ ಸರ್ಕಾರ ಕಾರ್ಯಾಂಗದ ಶಿಫಾರಸ್ಸುಗಳಾಗುತ್ತಿದ್ದು ಈ ಅನೇಕ ಶಿಫಾರಸ್ಸುಗಳು ಕೂಡ ಪ್ರಾಮಾಣಿಕವಾಗಿರದೆ ಉಗ್ರಟೀಕೆಗೆ ಗುರಿಯಾಗಿದ್ದು ರಾಜ್ಯ ಸರ್ಕಾರ ವ ಕೇಂದ್ರ ಸರ್ಕಾರಗಳ ಶಿಫಾರಸ್ಸು ಸಲಹೆ - ಸೂಚನೆ ಇಲ್ಲದೇ ರಾಜ್ಯ ಹೈಕೋರ್ಟ್ ಹಾಗೂ ಸುಪ್ರೀಂ ಕೋರ್ಟುಗಳ ಮುಖ್ಯ ನ್ಯಾಯಧೀಶ ಅಥವಾ ನ್ಯಾಯಾಧೀಶರ ಮಂಡಳಿಯ ಶಿಫಾರಸ್ಸು ಮಾತ್ರ ಇರುವುದು ನ್ಯಾಯಾಂಗ ಪಾವಿತ್ರ್ಯತೆ ದೃಷ್ಟಿಯಿಂದ ಒಳ್ಳೆಯದು. ಈ ದಿಶೆಯಲ್ಲಿ ಚಿಂತನೆ ಅಗತ್ಯ.

ರಾಷ್ಟ್ರದಲ್ಲಿ ಜನಸಂಖ್ಯೆ ಬೆಳೆಯುತ್ತ ಹೋದಂತೆ ಸಮಸ್ಯೆಗಳ ಸರಮಾಲೆಗಳ ಸಂಖ್ಯೆ ಹೆಚ್ಚಾಗಿ ಬೆಳೆದು ನ್ಯಾಯಾಂಗದ ವಿವಿಧ ಕೋರ್ಟುಗಳಲ್ಲಿ ಎಲ್ಲಾ ತರಹದ ಕೇಸುಗಳ ಸಂಖ್ಯೆ ಹೆಚ್ಚುತ್ತಲೇ ಇದೆ. ವಿವಿಧ ನ್ಯಾಯಾಧೀಶರು ಕಾಲಹರಣ ಮಾಡದೆ ತೃಪ್ತಿಕರವಾಗಿ ಕಾರ್ಯ ನಿರ್ವಹಿಸುತ್ತ ಪ್ರಾಮಾಣಿಕವಾಗಿ ಕೇಸುಗಳನ್ನು ಇತ್ಯರ್ಥಗೊಳಿಸಿದರೂ ಕೇಸುಗಳ ಸಂಖ್ಯೆ ಬೆಳೆಯುತ್ತಲೇ ಇದೆ ಹಾಗೂ ಬಾಕಿ ಕೇಸುಗಳ ಸಂಖ್ಯೆ ಹೆಚ್ಚುತ್ತಲೇ ಇದ್ದು ಸಕಾಲದಲ್ಲಿ ತ್ವರಿತವಾಗಿ ನ್ಯಾಯನಿರ್ಣಯ ಹೊರಬರುವುದು ವಿಳಂಬವಾಗುತ್ತಿರುವುದು ಕಂಡು ಬರುತ್ತದೆ. ಅದೆಷ್ಟೋ ನಾಗರೀಕರಿಗೆ ಕಾನೂನು ಅರಿವು ಹಾಗೂ ನೆರವು ಇಲ್ಲದೆ ಬಳಲುತ್ತಿರುವವರ ಸಂಖ್ಯೆ ಕೂಡ ದೇಶಾದ್ಯಂತ ಇದೆ. ಈ ಕಾರಣದಿಂದಲೇ ಕೇಂದ್ರ ಸರ್ಕಾರ ರಾಷ್ಟ್ರೀಯ ಕಾನೂನು ಸೇವಾ ಪ್ರಾಧಿಕಾರ, ಸುಪ್ರೀಂ ಕೋರ್ಟು ಕಾನೂನು ಸೇವಾ ಸಮಿತಿ, ರಾಜ್ಯ ಕಾನೂನು ಸೇವಾ ಪ್ರಾಧಿಕಾರ, ಹೈಕೋರ್ಟು ಕಾನೂನು ಸೇವಾ ಸಮಿತಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ತಾಲೂಕು ಕಾನೂನು ಸೇವಾ ಸಮಿತಿ ಹೀಗೆ ವಿವಿಧ ಹಂತದ ಈ ಘಟಕಗಳ ರಚನೆಗೆ ಅವಕಾಶ ಮಾಡಿಕೊಟ್ಟಿದೆ. ಆ ಬಗ್ಗೆ ರಾಷ್ಟ್ರೀಯ ಕಾನೂನು ಸಹಾಯ ನಿಧಿ, ರಾಜ್ಯ ಕಾನೂನು ಸಹಾಯ ನಿಧಿ, ಜಿಲ್ಲಾ ಕಾನೂನು ಸಹಾಯ ನಿಧಿಗಳನ್ನು ಸ್ಥಾಪಿಸಿ, ಲೋಕ ಅದಾಲತ್‌ಗಳನ್ನು ಸಂಘಟಿಸಿ, ಕೇಸುಗಳ ರಾಜಿ ಮಾಡಿ ಹಾಗೂ ನಿರ್ಣಯಗಳನ್ನು ನೀಡಿ ಇತ್ಯರ್ಥಗೊಳಿಸಲು ಕಾನೂನು ಅರಿವು ಮತ್ತು ನೆರವು ಶಿಬಿರಗಳನ್ನು ಏರ್ಪಡಿಸಲು ಹಾಗೂ ಈ ಶಿಬಿರಗಳಲ್ಲಿ ಉಚಿತ ಕಾನೂನು ನೆರವು, ಸರ್ಕಾರದ ವಿವಿಧ ಯೋಜನೆಗಳು, ಅಪರಾಧಗಳ ತಡೆಯಲ್ಲಿ ಪ್ರಜೆಗಳ ಪಾತ್ರ, ಗ್ರಾಹಕರ ಹಕ್ಕುಗಳು, ಭೂ ದಾಖಲೆಗಳು, ಜನನ ಮರಣ ದಾಖಲೆಗಳು, ವರದಕ್ಷಿಣೆ ಮತ್ತು ಕಾನೂನು ಇತ್ಯಾದಿ ಅನೇಕ ವಿಷಯಗಳನ್ನು ಚರ್ಚಿಸಲು ಸದಾವಕಾಶ ಹಾಗೂ ಸುಯೋಗವನ್ನು ಒದಗಿಸಲಾಗಿದೆ. ಕರ್ನಾಟಕ ರಾಜ್ಯದಲ್ಲಿ ತಡವಾದರೂ ಅಡ್ಡಿಯಿಲ್ಲ, ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರ ರೂಲ್ಸ್‌ಗಳನ್ನು 1996ರಲ್ಲಿ ಜಾರಿ ತಂದಿದ್ದು, ಇತ್ತಿತ್ತಲಾಗಿ ಎಲ್ಲಾ ಹಂತದಲ್ಲಿ ಕಾನೂನು ಸೇವಾ ಪ್ರಾಧಿಕಾರ ಹಾಗೂ ಸಮಿತಿಗಳು ರಚಿತವಾಗಿದ್ದು ಇವುಗಳಲ್ಲಿ ಕೆಲ ಜಿಲ್ಲೆಗಳಲ್ಲಿ ಪ್ರಾಧಿಕಾರಗಳು ಉತ್ತಮ ಕಾರ್ಯಾಚರಣೆ ಪ್ರಾರಂಭಿಸಿರುವುದು ಪ್ರಶಂಸನೀಯವಾಗಿದ್ದು, ಎಲ್ಲಾ ಜಿಲ್ಲೆಗಳಲ್ಲಿ ಎಲ್ಲಾ ತಾಲೂಕಗಳಲ್ಲಿ ಹಾಗೂ ರಾಜ್ಯ ಮಟ್ಟದಲ್ಲಿ ಈ ಪ್ರಾಧಿಕಾರ ಹಾಗೂ ಸಮಿತಿಗಳು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುವಂತೆ ಜಾಗ್ರತ ವಹಿಸುವುದು ರಾಜ್ಯ ಸರ್ಕಾರದ ಅದರಲ್ಲೂ ವಿಶೇಷವಾಗಿ ರಾಜ್ಯ ಕಾನೂನು ಇಲಾಖೆಯ ಹಾಗೂ ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಕರ್ತವ್ಯವಾಗಿದ್ದು, ಈ ದಿಶೆಯಲ್ಲಿ ಸರ್ಕಾರ ಮುಂದಾಗುವದು ಅಗತ್ಯ ಹಾಗೂ ಅವಶ್ಯ. ಈ ಎಲ್ಲಾ ಪ್ರಾಧಿಕಾರಗಳು ಹಾಗೂ ಸಮಿತಿಗಳು ಪರಿಣಾಮಕಾರಿಯಾಗಿ ತಮ್ಮ ತಮ್ಮ ಕರ್ತವ್ಯಗಳನ್ನು ಅನುಷ್ಠಾನಗೊಳಿಸಿದರೆ

ಕಾನೂನು ನೆರವು, ಅರಿವು ಹಾಗೂ ನ್ಯಾಯ ನಿರ್ಣಯವನ್ನು ತ್ವರಿತ ರೀತಿಯಲ್ಲಿ ಒದಗಿಸಿ ಕೊಟ್ಟರೆ ಈ ಎಲ್ಲ ಘಟಕಗಳ ಅಸ್ತಿತ್ವ ರಾಜ್ಯದ ಜನತೆಗೆ ತಾರಕವಾಗಬಲ್ಲವು. ಅಂತೆಯೇ ರಾಜ್ಯ ಸರ್ಕಾರದ ಮಂತ್ರಿಗಳು ಹಾಗೂ ಸರ್ಕಾರಿ ಕಾರ್ಯದರ್ಶಿಗಳು ತಮ್ಮ ಇಲಾಖೆಗೆ ಸಂಬಂಧಿಸಿದ ಕಾನೂನುಗಳ ಅರಿವು ಹಾಗೂ ಅನುಷ್ಠಾನದ ಬಗ್ಗೆ ತಿಳಿದು ಹದಗೆಟ್ಟ ಹಾಗೂ ಜಂಗುಹಿಡಿದ ಹಾಗೂ ನಿಷ್ಕ್ರಿಯ ಕಾನೂನುಗಳನ್ನು ಸಕ್ರಿಯಗೊಳಿಸುವುದು ಒಳ್ಳೆಯದು.

ದೇಶಾದ್ಯಂತ ಎಲ್ಲಾ ರಾಜ್ಯಗಳಲ್ಲಿ ಎಲ್ಲಾ ಹಂತದ ನ್ಯಾಯಾಧೀಶರ ಕೊರತೆ ಹಾಗೂ ಕಡಿಮೆಯಿಂದಾಗಿ ಎಲ್ಲಾ ಕೋರ್ಟುಗಳಲ್ಲಿ ಇತ್ಯರ್ಥವಾಗದೆ ಬಾಕಿ ಉಳಿದಿರುವ ಕೇಸುಗಳ ಸಂಖ್ಯೆ ಅತೀ ಹೆಚ್ಚಾಗಿದ್ದು ತ್ವರಿತವಾಗಿ ಸುಲಭವಾಗಿ ಸಕಾಲದಲ್ಲಿ ಅಪೇಕ್ಷಿತರಿಗೆ ನ್ಯಾಯ ದೊರಕದೆ ತೊಂದರೆಯಾಗುತ್ತಿದೆ. ಈ ತೊಂದರೆಯ ನಿವಾರಣೆಗಾಗಿ ಹನ್ನೊಂದನೆಯ ಹಣಕಾಸು ಆಯೋಗದ ಸಿಫಾರಸ್ಸಿನಂತೆ ದೇಶಾದ್ಯಂತ ಸುಮಾರು 1,700 ಕ್ಕಿಂತ ಹೆಚ್ಚು ತ್ವರಿತ ನ್ಯಾಯಾಲಯಗಳನ್ನು ರಚಿಸಿ 31-3-2005ರ ಒಳಗಾಗಿ ನ್ಯಾಯ ನಿರ್ಣಯ ಕೊಡಲು ಕ್ರಮ ತೆಗೆದುಕೊಂಡು ಸುಮಾರು 503.00 ಕೋಟಿ ವೆಚ್ಚ ಮಾಡಲು ತೀರ್ಮಾನಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲು ರಾಜ್ಯ ಸರ್ಕಾರಗಳಿಗೆ ಕೇಂದ್ರ ಸರ್ಕಾರ ಸೂಚಿಸಿದೆ. ಈ ರಾಷ್ಟ್ರದ ಎಲ್ಲಾ ರಾಜ್ಯಗಳ ಪೈಕಿ ಅತೀ ಹೆಚ್ಚು ಕೇಸುಗಳು ಹಾಕಿ ಇರುವ ಜಿಲ್ಲಾ ಹಾಗೂ ಇತರೆ ಅಧೀನ ನ್ಯಾಯಾಲಯಗಳ ಕೇಸುಗಳು ಉತ್ತರ ಪ್ರದೇಶ ರಾಜ್ಯದಲ್ಲಿ 32,44,351, ಪಶ್ಚಿಮ ಬಂಗಾಲದಲ್ಲಿ 13,05,855, ಕರ್ನಾಟಕ ರಾಜ್ಯದಲ್ಲಿ 12,54,655 ಇವೆ. ನಮ್ಮ ರಾಜ್ಯದ ಕೆಳ ನ್ಯಾಯಾಲಯಗಳ ಬಗೆಹರಿಯಬೇಕಾದ ಖಟ್ಲೆಗಳ ಸಂಖ್ಯೆ 15,66,425 ಇದ್ದು, ಸುಮಾರು 30,010 ಸೆಷನ್ಸ್ ಕೇಸುಗಳು ಬಾಕಿ ಇದ್ದು, ಇವುಗಳ ಪೈಕಿ 6,239 ಕೇಸುಗಳು 3 ವರ್ಷಗಳ ಅವಧಿಗಿಂತ ಹೆಚ್ಚಿನ ಅವಧಿಯವು ಇವೆಯೆಂದು ತಿಳಿದಿದೆ. ಈ ಕಾರಣದಿಂದಲೇ ಶೀಘ್ರ ನಿರ್ಣಯಕ್ಕಾಗಿ ದೇಶಾದ್ಯಂತ 1,734 ಶೀಘ್ರ ವಿಲೇವಾರಿ ನ್ಯಾಯಾಲಯ ರಚನೆಗೆ ಕೇಂದ್ರ ಸರ್ಕಾರ ಉದ್ದೇಶಿಸಿದ್ದರೂ ಈ ಉದ್ದೇಶವನ್ನು ತ್ವರಿತವಾಗಿ ಅನುಷ್ಠಾನಗೊಳಿಸಲು ಈ ರಾಷ್ಟ್ರದ ರಾಜ್ಯ ಸರ್ಕಾರಗಳು ಮಂದಗತಿಯಲ್ಲಿ ಸಾಗಿರುವುದು ರಾಜ್ಯ ಸರ್ಕಾರಗಳಿಗೆ ಭೂಷಣವಲ್ಲ. ಈ ಶೀಘ್ರ ನ್ಯಾಯಾಲಯಗಳ ರಚನಾ ಯೋಜನೆಯಲ್ಲಿ ನಮ್ಮ ರಾಜ್ಯದಲ್ಲಿ ಕರ್ನಾಟಕ ಸರ್ಕಾರ ಕೇವಲ 40 ನ್ಯಾಯಾಲಯಗಳನ್ನು ರಚಿಸುವುದಾಗಿ ಹೇಳಿದ್ದು, ರಚನೆಯಲ್ಲಿ ತಡವರಿಸದೆ ಆದಷ್ಟು ಬೇಗ 2001 ರ ಜೂನ್‌ದಿಂದಲೇ ಪ್ರಾರಂಭಿಸಿ ನ್ಯಾಯ ಪ್ರಯೋಜನದಾರರಿಗೆ ನ್ಯಾಯ ದೊರಕಿಸಿ ಅವರನ್ನು ನ್ಯಾಯ ವಿಳಂಬದಿಂದ ಮುಕ್ತ ಮಾಡುವುದು ಒಳ್ಳೆಯದು. ಸರ್ಕಾರದ ಬೇರೆ ಬೇರೆ ಇಲಾಖೆಗಳಲ್ಲಿ ಬೆಳಗಾಗುವುದ ರಲ್ಲಿಯೇ ಅಗತ್ಯವಿಲ್ಲದ ಘಟಕ ಹಾಗೂ ಹುದ್ದೆಗಳ ನಿರ್ಮಾಣ ಮಾಡಿ ಸಿಕ್ಕಾಪಟ್ಟೆ

ನೇಮಕ ಮಾಡಿ ಮೇಲ್ದರ್ಜೆಗೆ ಏರಿಸಿ ಹಣದ ಹೊಳೆ ಹರಿಸುವ ಸರ್ಕಾರ ನ್ಯಾಯಾಂಗಕ್ಕೇಕೆ ಮಲತಾಯಿ ಧೋರಣೆ? ರಾಜ್ಯ ಸರ್ಕಾರದ ಪ್ರಕಾರ 6-11-2000ಕ್ಕೆ ಕರ್ನಾಟಕ ಹೈಕೋರ್ಟಿನಲ್ಲಿ 85,575 ಮೊಕದ್ದಮೆಗಳು, ಅಧೀನ ನ್ಯಾಯಾಲಯಗಳಲ್ಲಿ 10,79,702 ಮೊಕದ್ದಮೆಗಳು ಬಾಕಿ ಇದ್ದು ಇವೆಲ್ಲವುಗಳ ತ್ವರಿತ ಇತ್ಯರ್ಥಕ್ಕಾಗಿ ರಾಜ್ಯ ಸರ್ಕಾರ ಚಿಂತಿಸಿದರೆ ಒಳ್ಳೆಯದು. ಬ್ರಿಟಿಷ್ ಆಡಳಿತದಲ್ಲಿಯೇ ವಿಲೇಜ ಮುನ್ಸಿಫ್ ಆಕ್ಟ್ ಪ್ರಕಾರ ಗ್ರಾಮಾಂತರ ಪ್ರದೇಶದಲ್ಲಿ ಸಣ್ಣಪುಟ್ಟ ನ್ಯಾಯಗಳನ್ನು ಬಗೆಹರಿಸಲು ವಿಲೇಜ್ ಮುನ್ಸೀಫರನ್ನು ನೇಮಿಸಿದ ಉದಾಹರಣೆ ಇರುವಾಗ ಕರ್ನಾಟಕ ಪಂಚಾಯತ ರಾಜ್ ಅಧಿನಿಯಮ 1993ರ ಕುರಿತು ಪಿ.ಆರ್. ನಾಯಕರ ಸಮಿತಿ ಗ್ರಾಮಾಂತರ ಪ್ರದೇಶದಲ್ಲಿ ನ್ಯಾಯ ಪಂಚಾಯತಿಗಳನ್ನು ರಚಿಸಲು ಶಿಫಾರಸ್ಸು ಮಾಡಿರುವಾಗ ಗ್ರಾಮ ಪಂಚಾಯತಿ ಮಟ್ಟದಲ್ಲಿ ಸಣ್ಣಪುಟ್ಟ ಸಿವಿಲ್ ಮತ್ತು ಕ್ರಿಮಿನಲ್ ಕೇಸುಗಳನ್ನು ಇತ್ಯರ್ಥಪಡಿಸಲು ನ್ಯಾಯ ಪಂಚಾಯತಗಳನ್ನು ರಚಿಸಿ ತಾಲೂಕ ಮಟ್ಟದ ಸಿವಿಲ್ ಜಡ್ಜ್ ಮತ್ತು ಜುಡಿಷಿಯಲ್ ಮ್ಯಾಜಿಸ್ಟ್ರೇಟ್ ಕೋರ್ಟಿನ ಭಾರವನ್ನು ಕಡಿಮೆ ಮಾಡುವುಲ್ಲಿ ಸರ್ಕಾರ ಮುಂದಾಗಬೇಕೇ ಹೊರತು ಕಾಲಹರಣ ಹಾಗೂ ಕಾಲವಿಳಂಬ ಮಾಡಿ ಅಧಿಕಾರ ವಿಕೇಂದ್ರೀಕರಣಕ್ಕೆ ಅಡ್ಡಗಾಲು ಹಾಕದೆ ಗ್ರಾಮ ಮಟ್ಟದ ಸಣ್ಣಪುಟ್ಟ ಕೇಸುಗಳ ಪ್ರಯೋಜನದಾರರಿಗೆ ಕಾನೂನು ಅರಿವು, ನೆರವು ಹಾಗೂ ತ್ವರಿತ ಇತ್ಯರ್ಥ ಗೊಳಿಸುವುದು ರಾಜ್ಯ ಸರ್ಕಾರಕ್ಕೆ ಭೂಷಣ.

❑

ಗ್ರಾಮಾಂತರ ನ್ಯಾಯ ಪಂಚಾಯತಿಗಳ ರಚನೆ

ಐದು ಜನ ಪಂಚರನ್ನೊಳಗೊಂಡ ನ್ಯಾಯ ಪಂಚಾಯತಿಗಳು ಪುರಾತನ ಕಾಲದಿಂದ ಪ್ರತಿಯೊಂದು ಗ್ರಾಮಗಳಲ್ಲಿ ಅಸ್ತಿತ್ವದಲ್ಲಿದ್ದು ಪಗಾರ ಭತ್ಯೆ ಯಾವುದೇ ಆಶೆ ಆಮಿಷವಿಲ್ಲದೆ ಗ್ರಾಮದಲ್ಲಿಯ ಸಣ್ಣಪುಟ್ಟ ಜಗಳ, ವಾದ - ವಿವಾದ ವ್ಯಾಜ್ಯ - ಮನವಿಗಳನ್ನು ಗಣನೆಗೆ ತೆಗೆದುಕೊಂಡು ಎಲ್ಲರಿಗೂ ನ್ಯಾಯ ಒದಗಿಸಿಕೊಟ್ಟು ಗ್ರಾಮಗಳ ಜನಜೀವನ ಶಾಂತಿ, ಸೌಖ್ಯ, ಸೌಹಾರ್ದ, ಭಾವೈಕ್ಯ, ಭ್ರಾತೃತ್ವ, ನೆಮ್ಮದಿಯಿಂದ ಇರಲು ಕಾರಣವಾಗಿದ್ದವು. ಅಂತೆಯೇ "ಪಂಚರಿಗೆ ಪಗಾರವಿಲ್ಲ ಕತ್ತೆಗೆ ಲಗಾಮ ಇಲ್ಲ" ವೆಂಬ ನಾಡನುಡಿ ರೂಢಿಯಲ್ಲಿದೆ. ಇದನ್ನೆಲ್ಲ ಮನಗಂಡು ಬ್ರಿಟಿಷ್ ಸರಕಾರ ಈ ರಾಷ್ಟ್ರದ ಹಾಗೂ ರಾಜ್ಯಗಳ ಆಡಳಿತ ವಹಿಸಿಕೊಂಡ ಮೇಲೆ ಆಯಾ ರಾಜ್ಯಗಳಲ್ಲಿ ಗ್ರಾಮಾಂತರ ಸಣ್ಣ ಪುಟ್ಟ ವ್ಯಾಜ್ಯಗಳನ್ನು ಬಗೆಹರಿಸಲು 1888ರ ಮದ್ರಾಸ್ ವಿಲೆಜ್ ಕೋರ್ಟು ಆ್ಯಕ್ಟ್ ಪ್ರಕಾರ ಪಂಚಾಯತ ಕೋರ್ಟು ಪ್ರೆಸಿಡೆಂಟ, ಇಲ್ಲ ವಿಲೆಜ್ ಕೋರ್ಟು ಮುನ್ಸಿಫ್, ಬಾಂಬೇ ವಿಲೆಜ್ ಮುನ್ಸಿಫ್ ಆ್ಯಕ್ಟ ಪ್ರಕಾರ ವಿಲೆಜ್ ಮುನ್ಸಿಫ್, 1933ರ ಬಾಂಬೇ ವಿಲೆಜ್ ಪಂಚಾಯತಿ ಆ್ಯಕ್ಟ ಪ್ರಕಾರ 1940ರ ವಿಲೆಜ್ ಬೆಂಚ್ ರೂಲ್ಸುಗಳ ಅನ್ವಯ ವಿಲೆಜ ಬೆಂಚ್ ಚೇರಮನ್ 1913ರ ಮೈಸೂರ ವಿಲೇಜ್ ಕೋರ್ಟ ಆ್ಯಕ್ಟ ಪ್ರಕಾರ ವಿಲೆಜ್ ಮುನ್ಸೀಫ್ ವ ಬೆಂಚ್‌ಗಳನ್ನು ರಚಿಸಿ ಆಯಾ ರಾಜ್ಯಗಳಲ್ಲಿ ಅಸ್ತಿತ್ವದಲ್ಲಿ ತರಲಾಗಿದೆ. ಅಸ್ತಿತ್ವದಲ್ಲಿ ಹಾಗೂ ಇನ್ನಿತರ ಅಧಿನಿಯಮಗಳನ್ನೆಲ್ಲಾ ಗಣನೆಗೆ ತೆಗೆದುಕೊಂಡು ಗ್ರಾಮಮಟ್ಟದಲ್ಲಿ ಸಣ್ಣ ಪುಟ್ಟ ದಿವಾಣಿ ಹಾಗೂ ಪೌಜದಾರೀ ಪ್ರಕರಣಗಳನ್ನು ಬಗೆಹರಿಸಲು ನ್ಯಾಯ ಪಂಚಾಯತಿ ಅವಶ್ಯವಾಗಿದೆ ಎಂಬುದನ್ನು ಮನಗಂಡು ಪಂಚಾಯತಿ ರಾಜ್ಯ ಗ್ರಾಮೀಣ ಅಭಿವೃದ್ಧಿಯ ಮಂತ್ರಿ ನಜೀರಸಾಬ್, ರಾಮಕೃಷ್ಣ ಹೆಗ್ಡೆಯವರ ಸರಕಾರ ಹಾಗೂ ಏಳನೇ ವಿಧಾನಸಭೆ 1983ರ ಕರ್ನಾಟಕ ಜಿಲ್ಲಾ ಪರಿಷತ್, ತಾಲ್ಲೂಕು ಪಂಚಾಯತ್ ಸಮಿತಿ, ಮಂಡಲ ಪಂಚಾಯತ್ ಮತ್ತು ನ್ಯಾಯ ಪಂಚಾಯತ್ ಮಸೂದೆಯನ್ನು ವಿಧಾನ ಮಂಡಳದಲ್ಲಿ ಮಂಡಿಸಿ ಅದರ ಮೇಲೆ ಜನತಾದಳ ಶಾಸಕಾಂಗ ಪಕ್ಷದಲ್ಲಿ ಹಾಗೂ ವಿಧಾನ ಮಂಡಳದಲ್ಲಿ ಸಾಕಷ್ಟು ಚರ್ಚೆಯಾಗಿ

ಅಂತಿವಾಗಿ ಈ ಮಸೂದೆ ಪಾಸಾಗಿ ಅಧಿನಿಯಮವಾಗಿ ಹೊರಬಂತು. ಈ ಅಧಿನಿಯಮದ ಪ್ರಕಾರ ನ್ಯಾಯ ಪಂಚಾಯಿತಿ ರಚನೆ, ನ್ಯಾಯ ಪಂಚಾಯಿ ಸದಸ್ಯರ ಅರ್ಹತೆ, ಅನರ್ಹತೆ, ಕಾರ್ಯ, ಅವಧಿ, ಸದಸ್ಯರ ಪ್ರಮಾಣ, ವಚನ ಸ್ವೀಕಾರ, ಮುಖ್ಯ ನ್ಯಾಯ ವಿಚಾರಕ ಹಾಗೂ ಅವರ ಕರ್ತವ್ಯ, ನ್ಯಾಯ ಪಂಚಾಯತ ಕಾರ್ಯದರ್ಶಿ, ನ್ಯಾಯ ಪಂಚಾಯತಿಗಳ ದಿವಾಣಿ ಹಾಗೂ ಫೌಜದಾರಿ ವ್ಯಾಪ್ತಿ, ಕರ್ತವ್ಯ ನಡೆಸಬಹುದಾದ ದಾವೆಗಳು, ದಾವೇ ನಡೆಸುವ ಬಗ್ಗೆ, ಡಿಕ್ರಿ ಮಾಡುವ ಬಗ್ಗೆ, ಕಿತ್ತು ಹಾಕುವ ಬಗ್ಗೆ, ಇಲ್ಲವೆ ವಾದಿ ಪ್ರತಿವಾದಿಯರನ್ನು ರಾಜೀ ಮಾಡಿಸುವ ಬಗ್ಗೆ ಇಂಡಿಯನ್ ಪಿನಲ್ ಕೋಡದಲ್ಲಿಯ ಕಲಂ ನಂ. 160, 172, 174, 175, 178, 179, 180, 277, 278, 283, 289, 290, 323, 334, 352, 358, 379, 411, 428, 506 (1), 510 ಇವುಗಳನ್ವಯ ಮಾಡಿದ ಆರೋಪಗಳ ತನಿಖೆ ಇತ್ಯರ್ಥ, ಇಲ್ಲವೆ ರಾಜೀ ಮಾಡುವ ಬಗ್ಗೆ ಅಲ್ಲದೆ ಪೊಲೀಸ ಆ್ಯಕ್ಟ ಕ್ಯಾಟಲ್ ಟ್ರೆಸ್ ಪಾಲೆ ಆ್ಯಕ್ಟ, ಪಶುಗಳ ಹಿಂಸೆ ತಡೆ ಆ್ಯಕ್ಟ, ಕರ್ನಾಟಕ ಪ್ರಾಥಮಿಕ ಶಿಕ್ಷಣ ಕಡ್ಡಾಯ ಆ್ಯಕ್ಟ , ಇವುಗಳಲ್ಲಿಯ ಕೆಲವು ಕಲಮುಗಳ ಉಲ್ಲಂಘನೆ ಆರೋಪ, ಸದಸ್ಯರನ್ನು ಕಿತ್ತು ಹಾಕುವ ಬಗ್ಗೆ, ನ್ಯಾಯ ಪಂಚಾಯತಿಯನ್ನೇ ವಿಸರ್ಜಿಸುವ ಬಗ್ಗೆ, ನ್ಯಾಯ ಪಂಚಾಯತ ಸದಸ್ಯರ ಕಾರ್ಯನಿರ್ವಹಣೆಯಲ್ಲಿ ಅವರಿಗೆ 1850 ರ ನ್ಯಾಯಾಂಗ ಅಧಿಕಾರಿಗಳಿಗೆ ರಕ್ಷಣೆ ಕೊಡುವ ಕಾಯ್ದೆ ಅನ್ವಯಿಸುವ ಬಗ್ಗೆ ಇತ್ಯಾದಿ ಅನೇಕ ಅಧಿಕಾರ ಕರ್ತವ್ಯಗಳನ್ನು ಗೊತ್ತು ಪಡಿಸಿ ಇವೆಲ್ಲವನ್ನು 211 ರಿಂದ 267ನೇ ಕಲಮಿನ ವರೆಗೆ ಸವಿಸ್ತಾರವಾಗಿ ವಿವರಿಸಲಾಗಿದೆ. ಈ ಎಲ್ಲ 57 ಕಲಮಗಳ ಈ ನ್ಯಾಯ ಪಂಚಾಯತಿ ಹಾಗೂ ಮುಖ್ಯ ನ್ಯಾಯ ವಿಚಾರಕರ ಕಾರ್ಯ ನಿರ್ವಹಣೆ ಮಿನಿ - ಸಿವಿಲ್ - ಜಡ್ಜ್ ಮತ್ತು ಜುಡಿಷಿಯಲ್ - ಮ್ಯಾಜಿಸ್ಟ್ರೇಟ ಕೋರ್ಟ ಹಾಗಡಿ ಸಿವಿಲ್ - ಜಡ್ಜ್ ಮ್ಯಾಜಿಸ್ಟ್ರೇಟರ ದಂತಾಗುತ್ತದೆ. ಈ ನ್ಯಾಯ ಪಂಚಾಯತಿಗಳನ್ನು ಸರಕಾರಗಳು ಅನುಷ್ಠಾನದಲ್ಲಿ ಇಷ್ಟರಲ್ಲೇ ತಂದಿದ್ದರೆ ತಾಲೂಕು ಮಟ್ಟದ ಮುನ್ಸಿಫ್ ಮ್ಯಾಜಿಸ್ಟ್ರೇಟರ ಕೋರ್ಟುಗಳಲ್ಲಿಯ ಬಾಕಿ ಇರುವ ಅಸಂಖ್ಯಾತ ಪ್ರಕರಣಗಳು ಎಂದೋ ಕಿಡಿಮೆಯಾಗಬಹುದಾಗಿತ್ತು. ಆದರೆ ಸರಕಾರಗಳು ಮನಸ್ಸು ಮಾಡಬೇಕಲ್ಲವೇ? ಅಧಿಕಾರ ವಿಕೇಂದ್ರಿಕರಣದ ಮಾತು ಹೇಳುತ್ತ ಈ ನ್ಯಾಯ ಪಂಚಾಯತಿಗಳನ್ನು ಅಸ್ತಿತ್ವದಲ್ಲಿ ತಂದು ತ್ವರಿತ ನ್ಯಾಯವು ಜನತೆಗೆ ಸಿಗದಂತೆ ಮಾಡುವಲ್ಲಿ ಸರಕಾರದ ಮೀನ ಮೇಷ ಸಾಧುವಲ್ಲ.

ಪರಿಸ್ಥಿತಿಯನ್ನು ಎದುರಿಸಲು ತೊಂದರೆಯಾದಾಗ್ಗೆ "ಬೀಸುವ ದೊಣ್ಣೆ ತಪ್ಪಿದರೆ ಸಾವಿರ ವರ್ಷ ಆಯುಷ್ಯ"ವೆಂಬಂತೆ ಸರಕಾರಗಳು ಅನೇಕ ಸಮಿತಿಗಳನ್ನು ರಚಿಸಿ ಹೇರಳ ಹಣ ಖರ್ಚು ಮಾಡಿ ಆ ವರದಿ ಬಂದ ಮೇಲೆ ಬಹುತೇಕ ವರದಿಗಳನ್ನು ಸೀತಾಗಾರದಲ್ಲಿಡುವ ಸರ್ಕಾರದ ಹವ್ಯಾಸ ನಿರಾತಂಕವಾಗಿ ಸಾಗಿದೆ. ಬಹುತೇಕ ಮಹತ್ವದ

ವರದಿಗಳು ಅನುಷ್ಠಾನವಾಗದೆ ಉಳಿದಿವೆ. ಅಂತಹುಗಳಲ್ಲಿ ಸರಕಾರದ ಮಾಜೀ ಮುಖ್ಯ ಕಾರ್ಯದರ್ಶಿ ಹಾಗೂ ದಕ್ಷ, ಅಪಾರ ಅನುಭವಿ ಐ.ಎ.ಎಸ್. ಅಧಿಕಾರಿಯಾಗಿದ್ದ ಪಿ.ಆರ್. ನಾಯಕರ ಅಧ್ಯಕ್ಷತೆಯಲ್ಲಿ ತಜ್ಞರ ಸಮಿತಿಯೊಂದನ್ನು ನೇಮಿಸಿ 1993ರ ಕರ್ನಾಟಕ ಪಂಚಾಯತ ರಾಜ್ಯ ಅಧಿನಿಯಮದ ಬಗ್ಗೆ ವರದಿ ಮಾಡಲು 25-8-1995ರಂದು ರಾಜ್ಯ ಸರಕಾರ ಆಜ್ಞೆ ಹೊರಡಿಸಿದ ಮೇರೆಗೆ ಈ ತಜ್ಞರ ಸಮಿತಿ ಸಾಕಷ್ಟು ಅಧ್ಯಯನ, ಅಭ್ಯಾಸ ಮಾಡಿ ಅನೇಕ ಸಿಫಾರಸ್ಸುಗಳನ್ನೊಳಗೊಂಡ ವರದಿಯನ್ನು ನ್ಯಾಯ ಪಂಚಾಯತಿಗಳಿಗೆ ಸಂಬಂಧಿಸಿದ ವಿಷಯವನ್ನು ಸಮಿತಿ ಸರಕಾರಕ್ಕೆ ಕಳುಹಿಸಲಾಗಿದೆ. ಅವಶ್ಯಕವಾದ ಜ್ಯುಡೀಷಿಯಲ್ ಮತ್ತು ಪೊಲೀಸ ಅಧಿಕಾರಿಗಳನ್ನು ಸಣ್ಣ ಪುಟ್ಟ ದಿವಾಣಿ ಹಾಗೂ ಫೌಜದಾರಿ ಸ್ವರೂಪದ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ಪಂಚಾಯತಿಗಳಿಗೆ ಅಧಿಕಾರ ಕೊಡಬಹುದೇ ಎಂಬ ವಿಷಯವಾಗಿದ್ದು ಈ ಬಗ್ಗೆ ಪಿ.ಆರ್. ನಾಯಕರ ಸಮಿತಿಯು "1983ನೇ ಕಾಯ್ದೆಯಲ್ಲಿ ನ್ಯಾಯ ಪಂಚಾಯತಿಗಳಿಗೆ ಸಂಬಂಧಿಸಿದ ವಿಚಾರಗಳನ್ನು 1993ರ ಕಾಯ್ದೆಯಲ್ಲಿ ಸೇರಿಸಲು ವ ಅಳವಡಿಸಲು ಕೆಲವು ಬದಲಾವಣೆಗಳೊಂದಿಗೆ ಈ ಸಮಿತಿ ಒತ್ತಾಯ ಪೂರ್ವಕ ಸಿಫಾರಸ್ಸು ಮಾಡುತ್ತದೆ" ಎಂಬ ವರದಿಯನ್ನು ಸರಕಾರಕ್ಕೆ ಸಮಿತಿ ಸಲ್ಲಿಸಿದೆ. ನ್ಯಾಯ ಪಂಚಾಯತಿಗಳ ರಚನೆ ಬಗ್ಗೆ ಹಾಗೂ ಇನ್ನೂ ಅನೇಕ ಮಹತ್ವದ ವಿಷಯಗಳ ಬಗ್ಗೆ ಸಮಿತಿ ಸಿಫಾರಸ್ಸುಗಳನ್ನು ಮಾಡಿದ್ದರೂ ಅವೆಲ್ಲವುಗಳನ್ನು ಸರಕಾರ ಗಣನೆಗೆ ತೆಗೆದುಕೊಳ್ಳದಿರುವುದು ಸರಕಾರದ ನಿಸ್ಸೀಮ ನಿರ್ಲಕ್ಷ್ಯತನವನ್ನು ಎತ್ತಿತೋರಿಸುತ್ತದೆ. ಗ್ರಾಮಾಂತರ ಪ್ರದೇಶದಲ್ಲಿ ಗ್ರಾಮ ಪಂಚಾಯತಿ ಕ್ಷೇತ್ರದಲ್ಲಿ ನ್ಯಾಯ ಪಂಚಾಯಿಗಳ ರಚನೆ ಹಾಗೂ ಕಾರ್ಯಾಚರಣೆ ಅಗತ್ಯ ಹಾಗೂ ಅವಶ್ಯವೆಂಬ ಅರಿವನ್ನು ಸರಕಾರ ಅರಿತು 1993ರ ಕಾಯ್ದೆಯಲ್ಲಿ 1983ರ ಕಾಯ್ದೆಯಲ್ಲಿಯ ನ್ಯಾಯ ಪಂಚಾಯತಿಗಳ ರಚನಾ ಉಲ್ಲೇಖಗಳನ್ನು ಸೇರಿಸಲು ತಕ್ಕ ತಿದ್ದುಪಡಿಯನ್ನು ತಂದು ಹಿಂದಿನಿಂದ ನಡೆದು ಬಂದ ಹಾಗೂ ಹಿಂದಿನ ಕಾಯ್ದೆಗಳಲ್ಲಿ ನಮೂದ ಇರುವ ನ್ಯಾಯ ಪಂಚಾಯತಿಗಳನ್ನು ಅನುಷ್ಠಾನಗೊಳಿಸಲು ವಿಧಾನ ಮಂಡಲದಲ್ಲಿ ತಿದ್ದುಪಡಿ ಕಾಯ್ದೆ ಮಂಜೂರ ಮಾಡಿಸಿಕೊಂಡು ರಾಜ್ಯಾದ್ಯಂತ ನ್ಯಾಯ ಪಂಚಾಯಿತಿಗಳನ್ನು ರಚಿಸಿ ತ್ವರಿತವಾದ ನ್ಯಾಯವನ್ನು ಗ್ರಾಮೀಣ ಜನರಿಗೆ ಒದಗಿಸಿಕೊಟ್ಟು ಅಧಿಕಾರ ವಿಕೇಂದ್ರೀಕರಣಕ್ಕೆ ಮಹತ್ವ ಕೊಟ್ಟು ಅದರ ಪ್ರಯೋಜನ ಪರಿಣಾಮಕಾರಿ ಯಾಗುವಂತೆ ಸರಕಾರ ಸೂಕ್ತ ಕ್ರಮ ತೆಗೆದುಕೊಳ್ಳುವುದು ಒಳ್ಳೆಯದು.

❑

ಲೋಕಾಯುಕ್ತ ಕಾಯ್ದೆ : ಸೂಕ್ತ ತಿದ್ದುಪಡಿ ಅವಶ್ಯ

ಕರ್ನಾಟಕ ರಾಜ್ಯದಲ್ಲಿ ಅನೇಕ ಸಾರ್ವಜನಿಕ ನೌಕರರು ಕೈಗೊಂಡ ಆಡಳಿತಾತ್ಮಕ ನಿರ್ಧಾರ, ಶಿಫಾರಸ್ಸು ಅಥವಾ ನಿರ್ಣಯಗಳ ಕ್ರಮಗಳು ಹಾಗೂ ಈ ಕ್ರಮಗಳನ್ನು ಕೈಗೊಳ್ಳಲು ಉದ್ದೇಶ ಪೂರ್ವಕವಾಗಿ ತಪ್ಪುವುದು ಹಾಗೂ ಲೋಪ ಮಾಡುವುದು ನಡೆದೇ ಇದೆ. ಇದರ ದುಷ್ಪರಿಣಾಮವಾಗಿ ಅನೇಕ ಆಗಬಾರದಾದ ತೊಂದರೆ ಮಾನಸಿಕ ಹಿಂಸೆ ಸಾರ್ವಜನಿಕರಿಗೆ ಆಗುತ್ತಲೇ ಇದೆ. ಅನೇಕ ಸಾರ್ವಜನಿಕ ನೌಕರರು ತಮಗೆ ಅಥವಾ ಯಾವೊಬ್ಬ ವ್ಯಕ್ತಿಗೆ ಯಾವುದೇ ಲಾಭ ಅಥವಾ ಅನುಕೂಲತೆಯನ್ನು ದೊರಕಿಸಿಕೊಳ್ಳಲು ಅಥವಾ ಇತರ ಯಾವೊಬ್ಬ ವ್ಯಕ್ತಿಗೆ ಅನುಚಿತ ಹಾನಿ ಅಥವಾ ತೊಂದರೆಯನ್ನು ಕೊಟ್ಟು ತನ್ನ ಅಧಿಕಾರ ಸ್ಥಾನವನ್ನು ಸಾರ್ವಜನಿಕ ನೌಕರನಾಗಿ ದುರುಪಯೋಗಪಡಿಸಿಕೊಂಡ ಅಪಾದನೆಯನ್ನು ಕೂಡ ಹೊಂದಿದ್ದಾರೆ. ಅನೇಕ ಸಾರ್ವಜನಿಕ ನೌಕರರು ತಮ್ಮ ಪ್ರಕಾರ್ಯವನ್ನು ನಿರ್ವಹಿಸುವುದಲ್ಲಿ ವೈಯಕ್ತಿಕ ಹಿತಾಸಕ್ತಿಯಿಂದ ಅಥವಾ ಅನುಚಿತ ಮತ್ತು ಭ್ರಷ್ಟ ಪ್ರೇರಣೆಗಳಿಂದ ಪ್ರಚೋದನೆಗೊಳಗಾದ ಅಪಾದನೆಗಳನ್ನೂ ಹೊಂದಿದ್ದಾರೆ. ಅನೇಕ ಸಾರ್ವಜನಿಕ ನೌಕರರು ತಮ್ಮ ಸ್ಥಾನದಲ್ಲಿ ಭ್ರಷ್ಟಾಚಾರ, ಪಕ್ಷಪಾತ, ಸ್ವಜನ ಪಕ್ಷಪಾತ ಅಥವಾ ನೀತಿ - ನಿಷ್ಠೆಯ ಲೋಪದಿಂದ ದೋಷಿಗಳೂ ಆದ ಅಪಾದನೆ ಹೊಂದಿದ್ದಾರೆ. ಅನೇಕರು ತಾವು ಯಾವ ವರ್ಗಕ್ಕೆ ಸೇರಿರುವರೋ ಆ ವರ್ಗದ ಸಾರ್ವಜನಿಕ ನೌಕರರು ಅನುಸರಿಸಲೇಬೇಕಾದ ನಿಷ್ಠೆಯ ಮತ್ತು ನಡತೆಗಳ ಸೂತ್ರ ಪ್ರಮಾಣಗಳಿಗನುಸಾರವಾಗಿ ಕಾರ್ಯನಿರ್ವಹಿಸಲು ತಪ್ಪಿದ ಅಪಾದನೆಗಳನ್ನೂ ಹೊಂದಿದ್ದಾರೆ. ಅನೇಕ ಸಾರ್ವಜನಿಕ ನೌಕರರು ತಾವು ತೆಗೆದುಕೊಂಡ ಕ್ರಮ ಅಥವಾ ಕ್ರಮಕ್ಕೆ ಸಂಬಂಧಿಸಿದ ಆಡಳಿತ ವಿಧಾನ ಅಥವಾ ಅಂಥ ಕ್ರಮವನ್ನು ನಿಯಂತ್ರಿಸುವ ಪದ್ಧತಿ ಅಸಮಂಜಸವಾಗಿದ್ದು, ನ್ಯಾಯಪೂರ್ಣವಾಗದೆ, ದಬ್ಬಾಳಿಕೆಯಿಂದ ಕೂಡಿ ಅನುಚಿತ ತಾರತಮ್ಯವಾಗಿದ್ದು ದುರಾಡಳಿತದ ಪರಮಾವಧಿಯಾಗಿದ್ದುದೂ ಇದೆ. ಅನೇಕ ಸಾರ್ವಜನಿಕ ನೌಕರರು ತಾವು

ಕ್ರಮವನ್ನು ತೆಗೆದುಕೊಳ್ಳುವಲ್ಲಿ ಉದ್ದೇಶ ಪೂರ್ವಕ ನಿರ್ಲಕ್ಷ್ಯ ಅಥವಾ ಅನುಚಿತ ವಿಳಂಬ ಮಾಡಿ ಕ್ರಮವನ್ನು ನಿಯಂತ್ರಿಸುವ ಆಡಳಿತ ವಿಧಾನ ಅಥವಾ ಪದ್ಧತಿ ಅನುಚಿತ ವಿಳಂಬದಿಂದ ಕೂಡಿದ್ದು ಇದ್ದು ಈ ದುರಾಡಳಿತಕ್ಕೆ ಅನೇಕ ಸಾರ್ವಜನಿಕರು ಬಲಿಯಾದವರೂ ಇದ್ದಾರೆ. ಈ ಎಲ್ಲಾ ಅಪಾದನೆಗೊಳಗಾದವರ ದುರಾಡಳಿತ, ದುಷ್ಪರಿಣಾಮವಾಗಿ ಅನ್ಯಾಯ, ಅನುಚಿತ ತೊಂದರೆಗೊಳಗಾದ ಪಾಪಿ ಪರದೇಶಿ ಸಾರ್ವಜನಿಕರ ನೌಕರರು ರಾಜ್ಯಾದ್ಯಂತ ಹಳ್ಳಿಯಿಂದ ರಾಜ್ಯದ ರಾಜಧಾನಿ ಬೆಂಗಳೂರು ವರೆಗೆ ಇದ್ದಾರೆ. ಅವರೆಲ್ಲರ ಗೋಳನ್ನು ವಿವಿಧ ಸರಕಾರಗಳಾದ ಪಂಚಾಯತಿ ಸರಕಾರ, ಪುರಸಭೆ ಸರಕಾರ, ನಗರಸಭೆ ಸರಕಾರ, ನಗರಪಾಲಿಕೆ ಸರಕಾರ, ರಾಜ್ಯ ಸರಕಾರಗಳಲ್ಲಿರುವ ಹಾಗೂ ಅಧಿನಿಯಮಬದ್ಧ ಸಂಘ - ಸಂಸ್ಥೆಗಳ ಕೆಲವು ಸಾರ್ವಜನಿಕ ನೌಕರರೂ ಕೇಳದ ಪರಿಸ್ಥಿತಿಯುಂಟಾಗಿ ರಾಜ್ಯಾದ್ಯಂತ ಜಾತೀಯತೆ, ಸ್ವಾರ್ಥ, ಪಕ್ಷಪಾತ, ಸ್ವಜನ ಪಕ್ಷಪಾತ, ಅವ್ಯವಹಾರ, ಬ್ರಷ್ಟಾಚಾರ, ಅಧಿಕಾರ ದುರುಪಯೋಗ ದುರಾಡಳಿತ ವೆಂಬ ಸಮಾಜಘಾತಕ ಪೀಡೆಗಳು ಹೆಚ್ಚಾಗಿ ಈ ಪೀಡಾ - ಪೀಡಿತ ಶೋಷಿತರು ಪರಿತಪಿಸುತ್ತಿದ್ದಾರೆ. ಈ ಸಮಾಜಘಾತಕ ಪೀಡೆಗಳಿಂದ ಪೀಡಿತರಾದ ಹಾಗೂ ಪೀಡಿತ ರಾಗಬಹುದಾದ ಜನತೆಯ ರಕ್ಷಣೆಯ ಹಿತದೃಷ್ಟಿಯಿಂದ ಹಾಗೂ ಈ ಸಮಾಜ ಘಾತಕ ಪೀಡೆಗಳ ರೋಗ ನಿವಾರಣೆಗಾಗಿ ರಾಜ್ಯದಲ್ಲಿ ರಾಮರಾಜ್ಯ ಆಡಳಿತ ಹಾಗೂ ಅಭಿವೃದ್ಧಿಗೊಳಿಸುವ ಮಹದುದ್ದೇಶದಿಂದ ಆಗಿನ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ, ಬೊಮ್ಮಾಯಿ, ದೇವೇಗೌಡ, ಜೆ.ಹೆಚ್. ಪಟೇಲ್, ರಾಚಯ್ಯ ಮೊದಲಾದವರ ಸರ್ಕಾರ ಕರ್ನಾಟಕ ಲೋಕಾಯುಕ್ತ ಅಧಿನಿಯಮ 1984 ಇದನ್ನು ವಿಧಾನ ಸಭೆ ವಿಧಾನ ಪರಿಷತ್ತಿನಲ್ಲಿ ಮಂಡಿಸಿ ಸುದೀರ್ಘವಾದ ಚರ್ಚೆ ನಡೆದು ಪಾಸಾಗಿ 1985ರಲ್ಲಿ ರಾಷ್ಟ್ರಪತಿಯವರ ಅನುಮತಿ ಪಡೆದು ದಿನಾಂಕ 15.01.1986 ರಂದು ಜಾರಿಗೆ ಬಂದು ಈಗ ಹದಿನಾರು ವರ್ಷಗಳ ಕಾಲ ದಾಟಿದೆ. ಅಪೇಕ್ಷಿತ ಗುರಿ ಸಮರ್ಪಕವಾಗಿ ಸಾಧಿಸಿದೆಯೇ ಎಂದು ಪ್ರಶ್ನಿಸಿದರೆ ಉತ್ತರ ನಿರಾಶಾದಾಯಕ. ಏಕೆ? ಇದಕ್ಕೆ ಯಾರು ಜವಾಬ್ದಾರಿ? ಸರಕಾರವೇ ಅಲ್ಲವೆ? ಹೌದು, ಮುಂದೇನು?

ಲೋಕಾಯುಕ್ತ ಸ್ಥಾನಕ್ಕೆ ಸರಕಾರದ ಯಾವುದೇ ಕೃಪಾಪೋಷಿತ ಅಧಿಕಾರಿ ಇರಬಾರದೆಂದು ನಿರೀಕ್ಷಿತ ಪರಮೋಚ್ಚ ನ್ಯಾಯ ದೊರಕಲೆಂದೇ ಸುಪ್ರೀಮಲ್ ಕೋರ್ಟ್ ನ್ಯಾಯಾಧೀಶ ಸ್ಥಾನಹೊಂದಿದ ಅಥವಾ ಯಾವುದೇ ಹೈಕೋರ್ಟ್ ಮುಖ್ಯ ನ್ಯಾಯಾಧೀಶ ಸ್ಥಾನ ಹೊಂದಿದ ನ್ಯಾಯಾಧೀಶರೊಬ್ಬರನ್ನು ಕರ್ನಾಟಕ ಹೈ ಕೋರ್ಟ್ ಮುಖ್ಯ ನ್ಯಾಯಾಧೀಶರ, ರಾಜ್ಯ ವಿಧಾನ ಸಭಾಧ್ಯಕ್ಷರ, ರಾಜ್ಯ ವಿಧಾನ ಸಭಾಪತಿಗಳ, ವಿಧಾನ ಸಭೆಯ ವಿರೋಧಪಕ್ಷದ ನಾಯಕರ, ವಿಧಾನ ಪರಿಷತ್ತಿನ ವಿರೋಧ ನಾಯಕ

ಇವರೆಲ್ಲರ ಅಭಿಪ್ರಾಯ ಪಡೆದು ರಾಜ್ಯ ಮುಖ್ಯಮಂತ್ರಿಗಳು ಸೂಚಿಸಿದ ಮೇರೆಗೆ ರಾಜ್ಯದ ಲೋಕಾಯುಕ್ತರನ್ನು ನೇಮಿಸಬೇಕೆಂದು ಕಾನೂನು ಹೇಳಿದ ಪ್ರಕಾರ ಲೋಕಾಯುಕ್ತ ನೇಮಕ ರಾಜ್ಯಪಾಲರಿಂದ ಆಗುತ್ತದೆ. ಆ ಪ್ರಕಾರ ಈಗಿನ ಲೋಕಾಯುಕ್ತರು ಕಾರ್ಯನಿರ್ವಹಿಸುತ್ತಿದ್ದಾರೆ. ಈಗಿನ ಲೋಕಾಯುಕ್ತರು ರಾಜ್ಯಾದ್ಯಂತ ಸಂಚರಿಸಿ ವಿವಿಧ ಘಟಕಗಳಿಗೆ ಸಂದರ್ಶನಕೊಟ್ಟು ಅಲ್ಲಿ ಕಂಡು ಬಂದ ಲೋಪದೋಷ ಕುಂದುಕೊರತೆ ಜನತೆಯ ಶೋಷಣೆ ಅಕ್ರಮ ವ್ಯವಹಾರ ಇತ್ಯಾದಿ ಸಮಾಜಘಾತಕ ಪೀಡೆಗಳನ್ನು ಬೆಳಕಿಗೆ ತಂದಿದ್ದಾರೆ. ಲೋಕಾಯುಕ್ತರ ಅಧಿಕಾರ ವೃದ್ಧಿಗೊಳಿಸಿ ಅವರಿಗೆ ಹೆಚ್ಚಿನ ಹಾಗೂ ಅವಶ್ಯಕ ಸೂತ್ರಗಳನ್ನು ಒದಗಿಸಿ, ಸಮಾಜಘಾತುಕ ಪೀಡೆಗಳ ನಿವಾರಣೆಗೆ ಅನುಕೂಲವಾಗುವಂತೆ ಲೋಕಾಯುಕ್ತ ಕಾಯ್ದಿಗೆ ಅವಶ್ಯಕ ತಿದ್ದುಪಡಿಯನ್ನು ಸರಕಾರ ತರುವುದು ಸಾರ್ವಜನಿಕ ಸಂರಕ್ಷಣೆಯ ಹಿತದೃಷ್ಟಿಯಿಂದ ಒಳ್ಳೆಯದು. ಎಲ್ಲಾ ಮಂತ್ರಿಗಳು ತಮ್ಮ ತಮ್ಮ ಇಲಾಖೆಗಳ ಕರ್ತವ್ಯ ನಿರ್ವಹಿಸುವಲ್ಲಿ ದಕ್ಷತೆ ವಹಿಸಿ ಸೂಕ್ತ ಕ್ರಮಗಳನ್ನು ಸಕಾಲದಲ್ಲಿ ಆಗಾಗ್ಗೆ ತೆಗೆದುಕೊಂಡಿದ್ದರೆ ಪರಿಸ್ಥಿತಿ ಸುಧಾರಿಸಿ ಸಮಾಜಘಾತುಕ ಪೀಡೆಗಳ ನಿವಾರಣೆ ಎಂದೋ ಆಗಬಹುದಾಗಿತ್ತು. ಆದರೆ ದುರ್ದೈವ. ಬಡವರ ಶೋಷಣೆ, ಹಿಂದುಳಿದವರ ಶೋಷಣೆ, ಜನಸಾಮಾನ್ಯರ ಶೋಷಣೆ, ಸಾರ್ವಜನಿಕರ ಶೋಷಣೆ ರಾಜ್ಯಾದ್ಯಂತ ಸರಕಾರದ ನಿರ್ಲಕ್ಷ್ಯದ ಪರಿಣಾಮವಾಗಿ ಅಲ್ಲಲ್ಲಿ ನಿರಾತಂಕವಾಗಿ ಸಾಗಿದೆ. ಲೋಕಾಯುಕ್ತ ಕಾಯ್ದೆ ಹಾಗೂ ನಿಯಮಗಳ ಉಲ್ಲಂಘನೆ ನಡದೇ ಇದೆ. ಲೋಕಾಯುಕ್ತ ಕಾಯ್ದೆ ಹಾಗೂ ನಿಯಮಗಳಲ್ಲಿ ಎತ್ತಿ ತೋರಿಸಲಾದ ಅಪಾದನೆ ದೂರು ದುರಾಡಳಿತಗಳ ಹಾವಳಿ ಹೆಚ್ಚುತ್ತಲೇ ಇದ್ದು ಈ ಅಪರಾಧಗಳಿಗೆ ಯಾವುದೇ ಉಗ್ರಶಿಕ್ಷೆಯಿಲ್ಲದೆ ಅಪರಾಧಿಗಳು ಸುಲಭವಾಗಿ ಪಾರಾಗುತ್ತಿದ್ದಾರೆ. ಈ ದಿಶೆಯಲ್ಲಿ ಲೋಕಾಯುಕ್ತ ಕಾಯ್ದೆಗೆ ಸೂಕ್ತ ತಿದ್ದುಪಡಿಯನ್ನು ಹಾಗು ಲೋಕಾಯುಕ್ತರಿಗೆ ಪರಿಣಾಮಕಾರಿಯಾದ ಅಧಿಕಾರಗಳನ್ನು ನೀಡುವ ಬಗ್ಗೆ ಸೂಕ್ತ ಸೇರ್ಪಡೆಯ ತಿದ್ದುಪಡಿ ತಂದು ರಾಜ್ಯದ ಆಡಳಿತ ಸುಧಾರಣೆಯ ಬಗ್ಗೆ ಸರಕಾರದಲ್ಲಿಯ ಮುಖ್ಯಮಂತ್ರಿಗಳು ಶೋಷಿತರ ಹಾಗೂ ರಾಜ್ಯದ ಸುಸೂತ್ರ ಆಡಳಿತ ಹಿತದೃಷ್ಟಿಯಿಂದ ಅವಶ್ಯಕ ಕ್ರಮ ತೆಗೆದುಕೊಳ್ಳುವುದು ಒಳ್ಳೆಯದು. ಕೆಲವು ಮಂತ್ರಿಗಳು ತಮ್ಮ ಇಲಾಖೆಯ ಲೋಪದೋಷ, ಶೋಷಣೆ, ಕುಂದುಗಳನ್ನು ಸುಧಾರಿಸದೆ ಗಬ್ಬೆದ್ದ ವಾತಾವರಣವನ್ನು ಶುದ್ಧಗೊಳಿಸದೆ, ತಪ್ಪಿತಸ್ಥರನ್ನು ಶಿಕ್ಷಿಸದೆ ಲೋಕಾಯುಕ್ತರ ಸಾರ್ವಜನಿಕ ಹಿತಾಸಕ್ತಿಯ ಕಾರ್ಯ ಚಟುವಟಿಕೆಗಳನ್ನು ದೂಷಿಸುವುದು ಸುತರಾಂ ಸಹಿಸದ ವಿಚಾರ.

ಲೋಕಾಯುಕ್ತ ಕಾಯ್ದೆ ನಿರರ್ಥಕ ಅಧಿನಿಯಮವಾಗಬಾರದು. ಸಾಮಾಜಿಕ ಸಮಾಜಘಾತಕ ಪೀಡಾ - ಕ್ಯಾನ್ಸರ್ ರೋಗವನ್ನು ನಿವಾರಿಸಬಲ್ಲ ಶಸ್ತ್ರಕ್ರಿಯೆ ಹಾಗೂ ದಿವ್ಯ ಔಷಧ ಸಂಜೀವಿನಿಯು ಈ ಲೋಕಾಯುಕ್ತ ಕಾಯ್ದೆಯಾಗಬೇಕು. ರಾಷ್ಟ್ರದಲ್ಲಿಯೇ

ಈ ರಾಜ್ಯವನ್ನು ಮೇಲಂತಸ್ತಿಗೆ ಒಯ್ಯುವ ಹಾಗೂ ಆದರ್ಶ ಆಡಳಿತ ರಾಜ
ಮಾಡಲು ಹೊರಟಿರುವ ಅರಿತ - ನುರಿತ - ಅನುಭವಿ ಮುಖ್ಯಮಂತ್ರಿ
ಯಾವದೇ ರೀತಿಯ ತಿದ್ದುಪಡಿಯನ್ನು ಲೋಕಾಯುಕ್ತ ಕಾಯ್ದೆಗೆ ತಂದು
ಪರಿಸ್ಥಿತಿಯನ್ನು ಸುಧಾರಿಸುತ್ತಾರೋ ಇಲ್ಲವೆಂಬುದನ್ನು ರಾಜ್ಯದ ಜನತೆ
ನೋಡಬೇಕಾಗಿದೆ.



'ಸಮಗ್ರನೋಟ' ಎಂಬ ಹೆಸರಿನ ಈ ಪುಸ್ತಕದ ಆಶಯವು ಶಾಸಕಾಂಗ, ನ್ಯಾಯಾಂಗ, ಕಾರ್ಯಾಂಗ, ಆಡಳಿತಾಂಗ ಎಂಬ ಚತುರ್ಮುಖ ನೆಲೆಗಳಲ್ಲಿ ಅಡಕಗೊಂಡಿದೆ. ಆಡಳಿತಾಂಗ, ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳ ಕ್ರಿಯಾ ಕಲಾಪಗಳನ್ನು ಅದು ಸಾಗಬೇಕಾದ ದಾರಿಗಳನ್ನು ಕುರಿತು ಆಳವಾಗಿ ಚಿಂತಿಸುತ್ತದೆ. ಈ ಬಗೆಯ ಪುಸ್ತಕ ಕನ್ನಡದಲ್ಲಿ ಅಪರೂಪ. ಈ ಕೃತಿಯು ಕರ್ನಾಟಕ ಅಭಿವೃದ್ಧಿ ಹಿತಚಿಂತನೆ ಮತ್ತು ಅಭಿವೃದ್ಧಿ ಮೀಮಾಂಸೆಯ ಗತಿತರ್ಕವನ್ನು ಸೂಕ್ಷ್ಮವಾಗಿ ಕನ್ನಡಿ ಹಿಡಿಯುತ್ತದೆ. ನಾಡು ಮುಂದುವರೆದು ಏಳ್ಗೆ ಹೊಂದಬೇಕಾದರೆ ಈ ಬಗೆಯ ಬರೆಹಗಳನ್ನು ಎಲ್ಲ ಬಗೆಯ ಜನರು ಓದಬೇಕಾದದ್ದು ಅಗತ್ಯ. ನಮ್ಮ ಜನದ ಕಣ್ಣಿಗೆ ಇದು ಬೀಳಲಿ. ನಾಡು ಅಭಿವೃದ್ಧಿ ಹೊಂದಲೆಂಬ ಸದಾಶಯ ಹಿರಿಯರಾದ ಶ್ರೀ ಬಿ.ಜಿ. ಬಣಕಾರ ಅವರ ಪ್ರಾಧಾನೋದ್ದೇಶವಾಗಿದೆ.

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್
ಅಧ್ಯಕ್ಷರು

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು - 560 018

ISBN 181-7713-151-6

ಬೆಲೆ ರೂ. 200/-